ಶ್ರೀ

ಶ್ರೀ ಲಕ್ಷ್ಮೀಹಯವದನ ಪರಬ್ರಹ್ಮಣೇ ನಮಃ

ಅಸ್ಮದ್ಗುರು ಪರಂಪರಾಯೈ ನಮಃ

ಶ್ರೀಮನ್ನಿಗಮಾಂತ ಮಹಾದೇಶಿಕರವರು ಅನುಗ್ರಹಿಸಿದ

ಶ್ರೀಮದ್ರಹಸ್ಯತ್ರಯಸಾರಃ

(ಮೊದಲನೆಯ ಭಾಗ)

ಸರಗೂರು ಮಾಡಭೂಷಣಂ ಕೃಷ್ಣಮಾಚಾರ್ಯರಿಂದ

ರಚಿತವಾದ "ಸಾರಚಂದ್ರಿಕಾ" ವ್ಯಾಖ್ಯಾನ ಸಮೇತ

ಪ್ರಕಾಶಕರು :

ಶ್ರೀ ವೈಷ್ಣವ ಸಭಾ (ರಿ)

ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ

3ನೇ ಮುಖ್ಯರಸ್ತೆ, ಪ್ರಕಾಶನಗರ

ಬೆಂಗಳೂರು – 560 021

ಪ್ರಮೋದೂತಸಂ, ಮೇಷ ಮಾಸ

ಶುಕ್ಲ, ಅರಿಹಾ–29–4–1990

ಬೆಲೆ : ರೂ. 40–00


[ಅಂಚೆ ವೆಚ್ಚ ಬೇರೆ]

This Book is Published with the Financial Assistance of Tirumala Tirupati Devastanams under their Scheme "Aid to Publish religious books"

ಶ್ರೀ

ಶ್ರೀ ಲಕ್ಷ್ಮೀಹಯವದನ ಪರಬ್ರಹ್ಮಣೇ ನಮಃ

ಅಸ್ಮದ್ಗುರು ಪರಂಪರಾಯೈ ನಮಃ



ಶ್ರೀಮನ್ನಿಗಮಾಂತ ಮಹಾದೇಶಿಕರವರು ಅನುಗ್ರಹಿಸಿದ

ಶ್ರೀಮದ್ರಹಸ್ಯತ್ರಯಸಾರಃ

(ಮೊದಲನೆಯ ಭಾಗ)

ಸರಗೂರು ಮಾಡಭೂಷಣಂ ಕೃಷ್ಣಮಾಚಾರ್ಯರಿಂದ

ರಚಿತವಾದ **"ಸಾರಚಂದ್ರಿಕಾ"** ವ್ಯಾಖ್ಯಾನ ಸಮೇತ

ಪ್ರಕಾಶಕರು :

ಶ್ರೀ ವೈಷ್ಣವ ಸಭಾ (ರಿ)

ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ

3ನೇ ಮುಖ್ಯರಸ್ತೆ, ಪ್ರಕಾಶನಗರ

ಬೆಂಗಳೂರು – 560 021

ಪ್ರಮೋದೂತಸಂ, ಮೇಷ ಮಾಸ — **ಬೆಲೆ : ರೂ. 40-00**

ಶುಕ್ಲ, ಆರಿದ್ರಾ-29-4-1990 — [ಅಂಚೆ ವೆಚ್ಚ ಬೇರೆ]

ಶ್ರೀಮತೇ ಲಕ್ಷ್ಮೀನೃಸಿಂಹ ಪರಬ್ರಹ್ಮಣೇ ನಮಃ

ಅಸ್ಮದ್ಗುರು ಪರಂಪರಾಯೈ ನಮಃ

ಶ್ರೀ ವೈಷ್ಣವಸಭಾ (ರಿ)

ಪ್ರಕಾಶನಗರ, 3ನೇ ಮುಖ್ಯ ರಸ್ತೆ, ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ

ಬೆಂಗಳೂರು-560 021

ಆಸ್ತಿಕ ಮಹಾಶಯರಲ್ಲಿ ವಿನಂತಿ.

ಈ ಸಭೆಯು ಸ್ಥಾಪಿತವಾಗಿ ಇಲ್ಲಿಗೆ ಇಪ್ಪತ್ತು ವರ್ಷಗಳಾಗಿವೆ ಸಭೆಯವರು ಬೆಂಗಳೂರು ಪ್ರಕಾಶನಗರದಲ್ಲಿ ಲಕ್ಷ್ಮೀನೃಸಿಂಹ ಸ್ವಾಮಿಯವರ ದೇವಸ್ಥಾನವನ್ನು ನಿರ್ಮಿಸಿ, ಪೂಜಾವಗೈರೆಗಳನ್ನು ನಡೆಸಿ ಬರುತ್ತಿರುವುದೂ ಹಾಗೆಯೇ ವೈದಿಕಾಶ್ರಮವನ್ನು ನಿರ್ಮಿಸಿ ಆಸ್ತಿಕ ಜನರಿಗೆ ಶುಭ ಮತ್ತು ವೈದಿಕ ಕಾರ್ಯಗಳನ್ನು ನಡೆಸಲು ಸಹ ಕರಿಸುತ್ತಿರುವುದೂ ಸರ್ವವೇದ್ಯ. ಸಭೆಯ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕೃತ, ವೇದ ಪ್ರಬಂಧಗಳನ್ನು ಹೇಳಿ ಕೊಡುತ್ತಿದ್ದೇವೆ ಅಂತೆಯೇ ಆಸ್ತಿಕ ಜನರ ಉಪಯೋಗಕ್ಕಾಗಿ, ಪೂರ್ವಾಪರ ಪ್ರಯೋಗಗಳನ್ನೂ, ಶ್ರೀ ವೈಷ್ಣವ ದಿನಚರಿ ಮತ್ತು ಶ್ರಾದ್ಧ ಪ್ರಯೋಗಗಳನ್ನೂ ಅಚ್ಚು ಹಾಕಿಸಿ ಪ್ರಚುರ ಪಡಿಸಿದ್ದೇವೆ ಇದಕ್ಕೆ ಹಲವಾರು ಧರ್ಮ ಸಂಸ್ಥೆಗಳ ದ್ರವ್ಯ ಸಹಾಯವು ನೆರವಾಗಿದೆ.

ಮೇಲೂ, ಶ್ರೀಮದ್ರಾಮಾಯಣ, ಭಗವದ್ಗೀತೆ, ತಿರುಪ್ಪಾವೈ, ಶ್ರೀ ಭಾಷ್ಯಾದಿ, ಸದ್ಗ್ರಂಥಗಳ ವಿಷಯವಾದ, ಉಪನ್ಯಾಸಗಳನ್ನೂ, ಕಾಲಕ್ಷೇಪಾದಿಗಳನ್ನೂ ಸಭೆಯು ನಡೆಸಿಬರುತ್ತದೆ. ಅನೇಕ ಆಸ್ತಿಕರು ಮುಂದೆ ಬಂದು ಇವುಗಳಲ್ಲಿ ಭಾಗವಹಿಸುತ್ತಿದ್ದಾರೆ

ಪ್ರಕೃತ ಆಸ್ತಿಕರನೇಕರ ಪ್ರೇರಣೆಯ ಮೇರೆ, ಶ್ರೀ ವೈಷ್ಣವರಿಗೆ ಪರಮೋಪಾದೇಯವಾದ ಶ್ರೀ ಮದ್ರಹಸ ತ್ರಯ ಸಾರವೆಂಬ ಗ್ರಂಥರತ್ನವನ್ನು ಸವ್ಯಾಖ್ಯಾನ ಕನ್ನಡದಲ್ಲಿ ಅಚ್ಚಿಟ್ಟು ಪ್ರಕಾಶ ಪಡಿಸಲು ಸಂತೋಷಿಸುತ್ತೇವೆ ಪ್ರತಿಯೊಬ್ಬ ಶ್ರೀ ವೈಷ್ಣವರೂ ಮುಂದೆ ಒಂದು ಶ್ರೀಮನ್ನಿಗಮಾಂತ ಮಹಾದೇಶಿಕ ಪ್ರಣೀತವಾದ ಈ ಗ್ರಂಥ ರತ್ನ ವನ್ನು ಕೊಂಡು ಕೊಂಡು ಸದಾಚಾರ್ಯರಲ್ಲಿ ಕಾಲಕ್ಷೇಪ ಮಾಡಿ ಆತ್ಮೋಜ್ಜೀವನವನ್ನು ಪಡೆದರೆ ನಮ್ಮ ಪ್ರಯತ್ನವು ಸಫಲವಾಗುತ್ತದೆ. ವರ್ಣಾಶ್ರಮ ವ್ಯತ್ಯಾಸವಿಲ್ಲದೆ ಸರ್ವರೂ ಅಧಿಕರಿಸಿ ಜ್ಞಾನಸಂಪಾದನೆ ಮಾಡಿಕೊಂಡು ಭಗವ ತ್ಪಾದಾರವಿಂದಗಳಲ್ಲಿ ಶರಣಾಗತಿ ಮಾಡಿ ಇದೇ ಜನ್ಮದಲ್ಲಿ ಮುಕ್ತಿ ಪಡೆಯಲು ಸಹಕರಿಸುವ ಪರಮೋಪಾದೇಯ ಗ್ರಂಥ ರತ್ನವಿದು

ಈ ಗ್ರಂಥರತ್ನಕ್ಕೆ ಸುಂದರವಾದ ವ್ಯಾಖ್ಯಾನವನ್ನು ಬರೆದು ಇದನ್ನು ಅಚ್ಚಿಟ್ಟು ಸಹಕರಿಸಿದ ಸರಗೂರು ಮಾಡ ಭೂಷಣಂ ಕೃಷ್ಣಮಾಚಾರ್ಯರವರಿಗೆ ಸಭೆಯು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಇದಕ್ಕೆ ದ್ರವ್ಯ ಸಹಾಯ ನೀಡಿದ ಮತ್ತು ಗ್ರಂಥ ವಿಷಯವಾಗಿ ಶುಭಾಶಯಗಳನ್ನು ನೀಡಿರುವ ಮಠಾಧಿಪತಿಗಳಿಗೂ, ಮಹನೀಯರುಗಳಿಗೂ ನಮ್ಮ ಹೃತ್ಪೂರ್ವಕ ವಂದನೆಗಳು

ಈ ಗ್ರಂಥವನ್ನು ಅಚ್ಚಿಟ್ಟು ಪ್ರಕಾಶ ಪಡಿಸಲು ಇದುವರೆಗೆ ದ್ರವ್ಯ ಸಹಾಯ ಮಾಡಿ ಉಪಕರಿಸಿದ ಮಹನೀಯರುಗಳು ಮತ್ತು ಸಂಸ್ಥೆಗಳು

		ರೂ. ಪೈ.
1	ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠಾಧೀಶರಾಗಿ ಈಗ ವಿರಾಜಿಸಿತ್ತಿರುವ ಶ್ರೀ. ಉಭ. ವೇ. ಪರಮಹಂಸ ಶ್ರೀ ಮದಭಿನವರಾಮಾನುಜ ಬ್ರಹ್ಮತಂತ್ರ ಪರಕಾಲ ಮಹಾಸ್ವಾಮಿಗಳು	25 000 00
2	ಸನಾತನ ಧರ್ಮಸಭಾ ಸರಗೂರು, ಮೈಸೂರು ಡಿಸ್ಟ್ರಿಕ್ಟ್	12 000.00
3	ಶ್ರೀ ತಿರುಮಲ ತಿರುಪತಿ ದೇವಸ್ಥಾನದ ಅಧಿಕಾರಿಗಳು	10 000 00
4.	ಶ್ರೀ ವೈಷ್ಣವ ಸಭಾ, ಪ್ರಕಾಶನಗರ, ಬೆಂಗಳೂರು-21	10.000.00
		57.000 00

ಈ ಶ್ರೀಕೋಶವನ್ನು ಪೂರ್ಣವಾಗಿ ಮುದ್ರಿಸಲು ರೂ 1,10,000.00ಗಳು ಬೇಕಾಗುತ್ತವೆ ಶ್ರೀ ಮನ್ನಿಗಮಾಂತ ಮಹಾದೇಶಿಕರವರು ಅನುಗ್ರಹಿಸಿರುವ, ಇತರ ಸಂಪ್ರದಾಯ ಗ್ರಂಥಗಳನ್ನೂ ಅಚ್ಚಿಡಲು ಸಭೆಯು ತೀರ್ಮಾನಿಸಿದ. ದಾನಿಗಳು ಮತ್ತು ಧರ್ಮ ಸಂಸ್ಥೆಗಳು ಮುಂದೆ ಬಂದು ದ್ರವ್ಯ ಸಹಾಯ ಮಾಡಿ ಸಹಕರಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ

ಪ್ರೀಯತಾಂ ಭಗವಾನ್ ವಾಸುದೇವಃ

ಕಾರ್ಯಕಾರಿ ಸಮಿತಿ
ಶ್ರೀ ವೈಷ್ಣವ ಸಭಾ (ರಿ)

ಪ್ರಕಾಶನಗರ, ಲಕ್ಷ್ಮೀನರಸಿಂಹ
ಸ್ವಾಮಿ ದೇವಸ್ಥಾನ, ಬೆಂಗಳೂರು - 21
29-4-1990


श्री लक्ष्मीहयवदनमूर्तिः
ज्ञानानंद मयं देवं निर्मलस्फटिकाकृतिं ।
आधारं सर्वविद्यानां हयग्रीवमुपास्महे ॥

ಜ್ಞಾನಾಧಿಷ್ಠಾನ ದೇವತೆ



ಯೋನಿತ್ಯಮಚ್ಯುತಪದಾಂಬುಜಯುಗ್ಮರುಕ್ಮ ವ್ಯಾಮೋಹತಸ್ತದಿತರಾಣಿ ತೃಣಾಯಮೇನೇ !
ಅಸ್ಮದ್ಗುರೋರ್ಭಗವತೋಽಸ್ಯದಯೈಕಸಿಂಧೋಃ ರಾಮಾನುಜಸ್ಯಚರಣೌ ಶರಣಂಪ್ರಪದ್ಯೇ ॥
ವಿಶಿಷ್ಟಾದ್ವೈತದರ್ಶನಸ್ಥಾಪಕಾಚಾರ್ಯಾಃ



ಶ್ರೀಮಾನ್‌ವೇಂಕಟನಾಥಾರ್ಯ: ಕವಿತಾರ್ಕಿಕ ಕೇಸರೀ ।

ವೇದಾಂತಾಚಾರ್ಯವರ್ಯೋಮೇ ಸನ್ನಿಧತ್ತಾಂಸದಾಹೃದಿ ॥

ರಹ್ಯತ್ರಯಸಾರ ಗ್ರಂಥಕರ್ತಾ



ಈ ಗ್ರಂಥವನ್ನು ಅಚ್ಚಿಡಲು ದ್ರವ್ಯಸಹಾಯಮಾಡಿ ಆಶೀರ್ವದಿಸಿದ ಶ್ರೀ ಉಭ ವೇ ಪರಮಹಂಸ
ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರಪರಕಾಲ ಮಹಾದೇಶಿಕರು.



ದೇಶಿಕದರ್ಶನ ವಿಜಯಧ್ವಜ ಶ್ರೀ ಉಭ ವೇ. ಸುಂದರ ಸೌಮ್ಯನಾರಾಯಣಾರ್ಯಮಹಾದೇಶಿಕಾಃ

ಶ್ರೀ ಸುಂದರ್ಯಾಭಿಧಸೂರಿವರ್ಯಾದವಾಪ್ತಸಾರಾರ್ಥಮಗಾಧಬೋಧಮ್ ।
ಗುಣಾಕರಂ ಸುಂದರಸೌಮ್ಯನಾರಾಯಣಾಭಿಧಾನಂ ಗುರುಮಾಶ್ರಯಾಮ . ॥

ಯತ್ಪದಾಂಬೋರುಹಧ್ಯಾನ ವಿಧ್ವಸ್ತಾಽಶೇಷಕಲ್ಮಷಃ ।
ವಸ್ತುತಾಮುಪಯಾತೋಽಹಂ ಸೌಮ್ಯನಾರಾಯಣಂಭಜೇ ॥

ವಿಷಯ ಸೂಚನೆ

ವಿಷಯ ಸೂಚನೆ

ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ, ಮೈಸೂರು

ಶ್ರೀ ಲಕ್ಷ್ಮೀಹಯವದನ ಲಕ್ಷ್ಮೀನಾರಾಯಣಾಭ್ಯಾಂ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈನಮಃ

★

ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ, ಪರಮಹಂಸ ಪರಿವ್ರಾಜಕಾಚಾರ್ಯ ಸರ್ವತಂತ್ರ ಸ್ವತಂತ್ರೋಭಯವೇದಾಂತಾಚಾರ್ಯ ಶ್ರೀಮತ್ಕವಿಕಥಕ ಕಂಠೀರವ ಚರಣನಳಿನಯುಗಳ ವಿನ್ಯಸ್ತ ಸಮಸ್ತಾತ್ಮಭರ ಶ್ರೀ ಭಗವದ್ರಾಮಾನುಜ ಸಿದ್ಧಾಂತ ನಿರ್ಧಾರಣ ಸಾರ್ವಭೌಮ ಶ್ರೀ ಲಕ್ಷ್ಮೀಹಯಗ್ರೀವ ದಿವ್ಯ ಪಾದುಕಾ ಸೇವಕ **ಶ್ರೀ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಸ್ವಾಮಿಭಿರನುಗೃಹೀತಾ.**

ಪ್ರಸ್ತಾವನಾ

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ರಹಸ್ಯ ಗ್ರಂಥಗಳು ಉನ್ನತವಾದ ಸ್ಥಾನವನ್ನು ಗಳಿಸಿವೆ. ಇವುಗಳು ಉಪದೇಶಪರಂಪರೆಯಲ್ಲಿ ಬಂದ ರಹಸ್ಯತ್ರಯಗಳು ಎಂದು ಹೊಗಳಲ್ಪಡುವ, ಅಷ್ಟಾಕ್ಷರ, ದ್ವಯ ಮತ್ತು ಚರಮಶ್ಲೋಕಗಳಲ್ಲಿ ಅಡಗಿರುವ ಗೂಢಾರ್ಥಗಳನ್ನು ಎತ್ತಿ ತೋರಿಸುತ್ತವೆ. ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ವಿಸ್ತಾರವಾಗಿ ಪೂರ್ವಪಕ್ಷ ಸಿದ್ಧಾಂತ ರೂಪವಾಗಿ ನಿರೂಪಿಸಿರುವ ತತ್ವಹಿತ ಪುರುಷಾರ್ಥಗಳಿಗೂ ಈ ರಹಸ್ಯ ಗ್ರಂಥಗಳಲ್ಲಿ ನಿರೂಪಿಸಿರುವ ಅರ್ಥವಿಶೇಷಗಳಿಗೂ ಯಾವ ವ್ಯತ್ಯಾಸವೂ ಇಲ್ಲ "ಇವ್ವರ್ಥಂಗಳೆಲ್ಲಾಂ ಸತ್ಸಂಪ್ರದಾಯತ್ತೋಡೇ ಶ್ರೀ ಭಾಷ್ಯಂ ಚಿರಕಾಲಂ ಪರಿಚಯಂಪಣ್ಣಿನ ಮಹಾನ್ಗಳುಕ್ಕು ನಿಲವಾಹುಮ್" ಎಂದು ಶ್ರೀಮನ್ನಿಗಮಾಂತ ಮಹಾದೇಶಿಕರು, ರಹಸ್ಯತ್ರಯಸಾರದಲ್ಲಿ ನಿರೂಪಿತವಾದ ಅರ್ಥಗಳು ಬೇರೆಯೋ, ಇವು ಭಾಷ್ಯಸ್ಥವಲ್ಲವೇ ಎಂಬ ಸಂಶಯವನ್ನು ನಿರಾಕರಿಸಿ ಎರಡೂ ಒಂದೇ, ಶ್ರೀ ಭಾಷ್ಯವನ್ನು ಚಿರಕಾಲ ಪರಿಚಯ ಮಾಡಿದ ಮಹಾಪುರುಷರಿಗೇನೆ ಈ ಅರ್ಥಗಳು ಸ್ಫುಟವಾಗಿ ತಿಳಿಯುತ್ತವೆ, ಎಂದು ನಿಗಮಿಸಿರುತ್ತಾರೆ ನಮಗೆ ಸಂಪ್ರದಾಯವು ಭಗವಾನ್, ಮಹಾಲಕ್ಷ್ಮೀ, ವಿಷ್ವಕ್ಸೇನರು, ವ್ಯಾಸರು, ಬೋಧಾಯನರು, ನಮ್ಮಾಳ್ವಾರ್, ನಾಥಮುನಿಗಳು, ಉಯ್ಯಕ್ಕೊಂಡಾರ್, ಮಣಕ್ಕಾಲ್ ನಂಬಿ, ಆಳವಂದಾರ್, ಪೆರಿಯನಂಬಿ, ಶ್ರೀ ಭಾಷ್ಯಕಾರರೆಂದು ಪ್ರಸಿದ್ಧರಾದ ಭಗವದ್ರಾಮಾನುಜರು ಅವರ ಶಿಷ್ಯ ಪ್ರಶಿಷ್ಯರುಗಳು, ಶ್ರೀಮನ್ನಿಗಮಾಂತ ಮಹಾದೇಶಿಕರು, ಅವರ ಶಿಷ್ಯ ಪ್ರಶಿಷ್ಯರುಗಳು, ಹೀಗೆ ಅನುಸ್ಯೂತವಾಗಿ ಬಂದಿದೆ. ಇದೇ ಗುರು ಪರಂಪರೆ ಎನಿಸಿಕೊಳ್ಳುತ್ತದೆ ಸಂಪ್ರದಾಯ ಪರಿಶುದ್ಧಿಯಲ್ಲಿ ಶ್ರೀ ಮನ್ನಿಗಮಾಂತ ಮಹಾದೇಶಿಕರು "ವ್ಯಾಸಬೋಧಾಯನಾದಿಹಳಾಲೇ ಯಥಾಧಿಕಾರಮ್ ಪ್ರವರ್ತಿತಮಾನ ವೇದಾಂತ ಸಂಪ್ರದಾಯತ್ತಿರ್ಕು, ಇಂದ ಕಲಿಯುಗತ್ತಿಲೇ, ಬ್ರಹ್ಮನಂದ್ಯಾದಿಹಳುಕ್ಕು ಪ್ಪಿನ್ಬು ನಮ್ಮಾಳ್ವಾರ್ ಪ್ರವರ್ತಕರಾನಾರ್" ಎಂದು ಅನುಗ್ರಹಿಸಿರುವ ಪ್ರಕಾರ, ವ್ಯಾಸಬೋಧಾಯನಾದಿಗಳು ಬ್ರಹ್ಮಸೂತ್ರ, ವೃತ್ತಿಗ್ರಂಥಗಳನ್ನು ಅನುಗ್ರಹಿಸಿದರು ಬ್ರಹ್ಮನಂದಿಗಳು ವಾಕ್ಯ ಗ್ರಂಥವನ್ನು ಅನುಗ್ರಹಿಸಿದರು. ಇವು ಗಳು, ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಮೂಲಗ್ರಂಥಗಳೆಂದು ನಿರ್ವಿವಾದವಾಗಿ ಹೇಳಬಹುದು. ಈ ಗ್ರಂಥಗಳ ಸಾರವನ್ನು ನಮ್ಮಾಳ್ವಾರವರು ವಿಷ್ವಕ್ಸೇನರಿಂದ

ಉಪದೇಶ ಹೊಂದಿದರು. ಇವರು ಶ್ರೀಮನ್ನಾಥ ಮುನಿಗಳಿಗೆ ಯೋಗದಶೆಯಲ್ಲಿ ಸಾಕ್ಷಾತ್ಕರಿಸಿ, ವೇದಾಂತೋಪ ದೇಶವನ್ನೂ, ತಿರುವಾಯ್‌ಮೊೞಿ ಮೊದಲಾದ ದಿವ್ಯ ಪ್ರಬಂಧಗಳನ್ನೂ ಉಪದೇಶಿಸಿದರು ಹೀಗೆ ಸತ್ಸಂಪ್ರದಾಯಾ ಗತವಾದ ಸಮೀಚೀನ ಶಾಸ್ತ್ರಾರ್ಥಗಳೇ ಗುರುಪರಂಪರಾ ಮೂಲಕ ನಮಗೆ ಉಪಲಬ್ಧಗಳಾಗಿವೆ.

ಎಲ್ಲಾ ಉಪನಿಷತ್ತುಗಳೂ ಭಗವಂತನ ಸ್ವರೂಪ ಸ್ವಭಾವಗಳನ್ನೂ (ತತ್ವ) ಭಕ್ತಿಪ್ರಪತ್ತಿರೂಪ ಉಪಾಯ ಸ್ವರೂಪಗಳನ್ನೂ (ಹಿತ), ಪ್ರಕೃತಿಮಂಡಲಕ್ಕೆ ಮೇಲಾದ ಪರಮಪದದಲ್ಲಿ ಭಗವಂತನ ಸಾಯುಜ್ಯವನ್ನು ಪಡೆದು ಅವನ ಗುಣಾನುಭವ ಪರಿವಾಹವಾದ ಕೈಂಕರ್ಯಗಳನ್ನು ಮಾಡುವುದೆಂಬ ಪರಮಪುರುಷಾರ್ಥವನ್ನೂ ಉಪದೇಶಿಸುತ್ತವೆ. ಈ ಉಪನಿಷತ್ತುಗಳನ್ನು ವಿಷಯ ವಾಕ್ಯಗಳನ್ನಾಗಿಟ್ಟುಕೊಂಡು ವೇದವ್ಯಾಸರು ಬ್ರಹ್ಮ ಸೂತ್ರಗಳನ್ನು ರಚಿಸಿದರು ಈ ಉಪನಿಷತ್ತುಗಳ ಅರ್ಥಗಳನ್ನು ಉಪಬೃಂಹಣಗಳೆಂದು ಕರೆಯಲ್ಪಡುವ ಇತಿಹಾಸಪುರಾಣಗಳಿಂದ ತಿಳಿಯಬೇಕು.

"ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪ ಬೃಹ್ಮಯೇತ್ ।

ಬಿಭೇತ್ಯಲ್ಪಶುತಾದ್ವೇದೋ ಮಾಮಯಂ ಪ್ರತರಿಷ್ಯತಿ ॥"

ಎಂದು ವೇದಗಳು ಅಲ್ಪಜ್ಞಾನಿಗಳು ಅಪಾರ್ಥಗಳನ್ನು ಮಾಡುತ್ತಾರೆಂದು ಹೆದರುತ್ತವೆ ಆದ್ದರಿಂದ ಮಹರ್ಷಿ ಪ್ರಣೀತಗಳಾದ ಇತಿಹಾಸ ಪುರಾಣಗಳಿಂದ ವೇದಾರ್ಥಗಳ ವಿಶದೀಕರಣವನ್ನು ಮಾಡಬೇಕು.

ಈ ಉಪಬೃಂಹಣಗಳಲ್ಲಿ ಆಳ್ವಾರುಗಳ ದಿವ್ಯಪ್ರಬಂಧಗಳು ಅತ್ಯುನ್ನತ ಸ್ಥಾನವನ್ನು ಪಡೆದಿವೆ. "ಯತ್ತತ್ ಕೃತ್ಯಂ ಮುನೀನಾಂ ಶ್ರುತಿಗಣ ವಿಹಿತೈಃ ಸೇತಿಹಾಸೈಃ ಪುರಾಣೈಃತತ್ರಾ ಸೌಸತ್ವಸೀಮ್ನಃ ಶಠ ಮಥನಮುನೇಃ ಸಂಹಿತಾ ಸಾರ್ವಭೌಮೀ" ಎಂದು ದ್ರಮಿಡೋಪನಿಷತ್ತಾತ್ಪರ್ಯರತ್ನಾವಳಿಯಲ್ಲಿ ಶ್ರೀಮನ್ನಿಗ ಮಾಂತ ಮಹಾದೇಶಿಕರು, ಶಠಮಥನ ಮುನಿಗಳ – ಅಂದರೆ ನಮ್ಮಾಳ್ವಾರವರ – ದ್ರಮಿಡವೇದ, ದ್ರಾಮಿಡಸಂಹಿತೆ, ಇತ್ಯಾದಿಯಾಗಿ ವ್ಯವಹರಿಸಲ್ಪಡುವ ಪ್ರಬಂಧಗಳನ್ನು ಉಪಬೃಂಹಣಗಳಲ್ಲಿ ಶ್ರೇಷ್ಠತಮವೆಂದು ಅನುಗ್ರಹಿಸಿರುತ್ತಾರೆ ಶ್ರೀಮನ್ನಾಥ ಮುನಿಪ್ರಭೃತಿಗಳೂ ಈ ದಿವ್ಯಪ್ರಬಂಧಗಳನ್ನು ಬಹಳವಾಗಿ ಆದರಿಸಿರುತ್ತಾರೆ ಆದ್ದರಿಂದಲೇ ವಿಶಿಷ್ಟಾದ್ವೈತ ಸಿದ್ಧಾಂತವು ಉಭಯ ವೇದ ಪರಿಕರ್ಮಿತವಾಗಿ, ಅಪ್ರಕಂಪ್ಯ ಸಿದ್ಧಾಂತ. ವೇದ ಶಾಸ್ತ್ರ ಮೂಲವಾದ ಸಂಪ್ರದಾಯಾಗತವಾದ ಸಿದ್ಧಾಂತವೂ ಇದೇ.

ಪ್ರಕೃತ **ಶ್ರೀಮನ್ನಿಗಮಾಂತ ಮಹಾದೇಶಿಕ ಪ್ರಣೀತವಾದ ಶ್ರೀಮದ್ರಹಸ್ಯತ್ರಯಸಾರ** ಗ್ರಂಥವು ಶ್ರೀ ಭಾಷ್ಯಾದಿ ಸಕಲವೇದಾಂತ ಗ್ರಂಥಗಳ ಸಾರವು ರಹಸ್ಯ ಮಂತ್ರಗಳಲ್ಲಿ ಅಷ್ಟಾಕ್ಷರವು ಪ್ರಧಾನ "ಸರ್ವಮಷ್ಟಾಕ್ಷರಾಂತಸ್ಥಂ" ಎಂದು ಅಷ್ಟಾಕ್ಷರವು ಸಕಲ ವೇದಾಂತಾರ್ಥ ಗರ್ಭಿತವು ಇದರ ವ್ಯಾಖ್ಯಾನವೇ ಇತರ ರಹಸ್ಯ ಮಂತ್ರಗಳು. ಶ್ರೀಮದ್ರಹಸ್ಯತ್ರಯಸಾರ ಗ್ರಂಥವು 32 ಅಧಿಕಾರಗಳಿಂದ ಕೂಡಿ, ಅರ್ಥಾನು ಶಾಸನ ಭಾಗ, ಸ್ಥಿರೀಕರಣ ಭಾಗ, ಪದವಾಕ್ಯಯೋಜನಾ ಭಾಗ ಮತ್ತು ಸಂಪ್ರದಾಯ ಪ್ರಕ್ರಿಯಾಭಾಗವೆಂದು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಮೊದಲನೆಯದಾದ ಅರ್ಥಾನುಶಾಸನ ಭಾಗದಲ್ಲಿ ಚೇತನ, ಅಚೇತನ, ಈಶ್ವರನೆಂಬ ತತ್ವತ್ರಯಗಳ ಸ್ವರೂಪ, ಚೇತನಾಚೇತನಗಳು ಈಶ್ವರನಿಗೆ ಶರೀರ, ಅವುಗಳಿಗೂ ಈಶ್ವರನಿಗೂ ಇರುವ ಶರೀರಾತ್ಮಭಾವ ಸಂಬಂಧ, ಭಕ್ತಿ, ಪ್ರಪತ್ತಿಗಳ ಸ್ವರೂಪ, ಪುರುಷಾರ್ಥಸ್ವರೂಪ, ಎಂಬೀ ವಿಷಯ ಗಳನ್ನು ಕೂಲಂಕಷವಾಗಿ ವಿಚಾರಿಸಿ ಸಂಪ್ರದಾಯಾರ್ಥಗಳನ್ನು ಪ್ರಮಾಣೋಪಪತ್ತಿಗಳ ಮೂಲಕ ಆಚಾರ್ಯರು ನಿರೂಪಿಸಿರುತ್ತಾರೆ ಸ್ಥಿರೀಕರಣ ಭಾಗದಲ್ಲಿ ಸಿದ್ಧೋಪಾಯ, ಸಾಧ್ಯೋಪಾಯಗಳ ಶೋಧನೆ, ಮತ್ತು ಉಪಾಯ ಪ್ರಭಾವಗಳನ್ನು ಆಕ್ಷೇಪ ಸಮಾಧಾನ ಪೂರ್ವಕ ನಿರೂಪಣೆಮಾಡಿರುತ್ತಾರೆ.

ಪದವಾಕ್ಯ ಯೋಜನಾಭಾಗದಲ್ಲಿ ರಹಸ್ಯ ಮಂತ್ರಗಳಾದ ಅಷ್ಟಾಕ್ಷರ, ದ್ವಯ ಮತ್ತು ಚರಮಶ್ಲೋಕಗಳ ಪದಗಳಲ್ಲಿಯೂ ಅಧ್ಯಾಹೃತ ಕ್ರಿಯಾ ಪದಗಳಿಂದ ಉಂಟಾದ ವಾಕ್ಯಗಳಲ್ಲಿಯೂ ಮೇಲೆ ಹೇಳಿದ ಅರ್ಥಗಳು

ಹೇಗೆ ನಿರೂಪಿತವಾಗಿವೆ ಎಂಬುದನ್ನು ವಿಚಾರಿಸಿ, ಪರಮ ರಹಸ್ಯವಾದ ಲಕ್ಷ್ಮೀವಿಶಿಷ್ಟ ನಾರಾಯಣನೆಂಬ ಪರ ತತ್ವದ ಉಪಾಯೋಪೇಯಾತ್ಮಕವಾದ ಸ್ವರೂಪವನ್ನೂ, ಶರಣಾಗತಿ ಸ್ವರೂಪವನ್ನೂ, ಗೀತಾಚರಮ ಶ್ಲೋಕದ ಅರ್ಥವನ್ನೂ ವಿಸ್ತಾರವಾಗಿ ನಿರೂಪಿಸಿರುತ್ತಾರೆ ಇವುಗಳಲ್ಲಿ **ಸರ್ವಧರ್ಮಾನ್ ಪರಿತ್ಯಜ್ಯ** ಎಂದಾರಂಭಿಸುವ ಗೀತಾ ಚರಮಶ್ಲೋಕದ ಅಂತ್ಯದಲ್ಲಿರುವ **ಮಾಶುಚಃ** – ಎಂಬ ಶಬ್ದಗಳಿಗೆ ಅರ್ಥವನ್ನು ಪೂರ್ವಾಚಾರ್ಯರು ತಮ್ಮ ಅಂತಿಮ ದಶೆಯಲ್ಲಿ ಸಚ್ಛಿಷ್ಯರಿಗೆ ಉಪದೇಶಿಸುತ್ತಿದ್ದರೆಂದು ಹೇಳಿ, ಆ ಪರಮರಹಸ್ಯಾರ್ಥಗಳು ಎಲ್ಲಿ ನಷ್ಟವಾಗಿ ಹೋಗುತ್ತವೆಯೋ ಎಂದು ಹೆದರಿ ಪರಮಕೃಪೆಯಿಂದ ಅವುಗಳನ್ನು ನಮಗಾಗಿ ಆಚಾರ್ಯವರ್ಯರು ಗ್ರಂಥಸ್ಥವಾಗಿ ಉಪದೇಶಿಸಿರುತ್ತಾರೆ ಇದು ಪರಮೋಪಾದೇಯ ನಾಲ್ಕನೆಯದಾದ ಸಂಪ್ರದಾಯ ಪ್ರಕ್ರಿಯಾ ಭಾಗದಲ್ಲಿ ಆಚಾರ್ಯ ಮತ್ತು ಶಿಷ್ಯರ ಕೃತ್ಯಗಳನ್ನು ನಿರೂಪಿಸಿ, ಪರಮರಹಸ್ಯಗಳಾದ ಈ ಅರ್ಥಗಳನ್ನು ಸಚ್ಛಿಷ್ಯರಿಗೆ ಉಪದೇಶಿಸುವುದಲ್ಲದೆ, ಅಯೋಗ್ಯರಿಗೆ ಉಪದೇಶಿಸ ಕೂಡದೆಂದು ನಿಗಮಿಸಿರುತ್ತಾರೆ. ಹೀಗೆ ಈ ರಹಸ್ಯ ಗ್ರಂಥವು ಅತ್ಯಂತ ಉಪಾದೇಯ ಮತ್ತು ಶ್ರೇಷ್ಠತಮವಾದದ್ದು

ಪ್ರಸ್ಥಾನತ್ರಯ

ವೇದಗಳು (ಉಪನಿಷತ್ತುಗಳು), ಬ್ರಹ್ಮಸೂತ್ರ, ಭಗವದ್ಗೀತೆ ಮೊದಲಾದವುಗಳನ್ನು ಪ್ರಮಾಣವಾಗಿ ಅಂಗೀಕರಿಸಿ ಪ್ರಸ್ಥಾನತ್ರಯಗಳಿಂದು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತಮತಗಳು ಹೊರಟಿವೆ.

ಅದ್ವೈತ ಮತ

ಅದ್ವೈತ ಮತವು "ಬ್ರಹ್ಮಸತ್ಯಂ ಜಗನ್ಮಿಥ್ಯಾ" ಎಂದು ಬ್ರಹ್ಮವೊಂದೇ ಸತ್ಯ, ಚೇತನಾಚೇತನಾತ್ಮಕವಾದ ಈ ಪ್ರಪಂಚವು ಅಪಾರಮಾರ್ಥಿಕ, ಎಂದು ಹೇಳಿ "ಸದೇವಸೋಮ್ಯೇದಮಗ್ರ ಆಸೀತ್ ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿ ಶ್ರುತಿಗಳಿಗೆ ಮುಖ್ಯ ಪ್ರಾಮಾಣ್ಯವನ್ನು ಕೊಟ್ಟು, ಜ್ಞಾ ಜ್ಞೌ ದ್ವಾವಜಾವೀಶನೀಶೌ, ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ ಏಕೋಬಹೂನಾಂ ಯೋವಿದಧಾತಿಕಾಮಾನ್, ಇತ್ಯಾದಿ ಭೇದ ಶ್ರುತಿಗಳನ್ನು ವ್ಯಾವಹಾರಿಕಗಳನ್ನಾಗಿ ಆಶ್ರಯಿಸಿ, ಬ್ರಹ್ಮವು ಸಜಾತೀಯ, ವಿಜಾತೀಯ, ಸ್ವಗತ ನಾನಾಭೇದ ರಹಿತವು ಎಂದು ಹೇಳಿ, ನಿರ್ವಿಶೇಷ ಬ್ರಹ್ಮವೇ ತತ್ವವೆಂದು ನಿರೂಪಿಸಿದೆ. "ಅಹಂಬ್ರಹ್ಮಾಸ್ಮಿ, ತತ್ವಮಸಿ, ಅಯಮಾತ್ಮಾ ಬ್ರಹ್ಮ, ಸರ್ವಂಖಲ್ವಿದಂ ಬ್ರಹ್ಮ, ಇತ್ಯಾದಿ ಅಭೇದಬೋಧಕ ವಾಕ್ಯಾರ್ಥಗಳ, ಶ್ರವಣ ಮನನ, ನಿದಿಧ್ಯಾಸನಾ ನಂತರ, "ಅಹಂ ಬ್ರಹ್ಮಾಸ್ಮಿ "ಎಂಬ ವಾಕ್ಯಜನ್ಯ ಜ್ಞಾನವೇ ಮುಕ್ತಿಸಾಧನವೆಂದು ಹೇಳಿ ಜೀವ ಬ್ರಹ್ಮೈಕ್ಯವೇ ಮೋಕ್ಷವೆಂದು ಸಿದ್ಧಾಂತೀಕರಿಸಿದೆ. ಹೀಗೆ ಅಭೇದ ಶ್ರುತಿಗಳೇ ಮುಖ್ಯ. ಭೇದ ಶ್ರುತಿಗಳು ಔಪಚಾರಿಕ, ಅಂದರೆ ವ್ಯವಹಾರ ದಶೆಯಲ್ಲಿ ಸತ್ಯ, ಪರಮಾರ್ಥದಶೆಯಲ್ಲಿ "ಅವಿಭಾಗೇನ ದೃಷ್ಟತ್ವಾತ್" ಎಂಬ ಸೂತ್ರದಲ್ಲಿ ಹೇಳಿರುವಂತೆ ಅಭೇದವೇ ಸತ್ಯವೆಂಬುದು ಈ ಮತದ ಸಾರ

ದ್ವೈತಮತ

ಅದ್ವೈತ ಮತಕ್ಕೆ ಪ್ರತಿಯಾಗಿ, ಐಕ್ಯವು ಪರಮಾರ್ಥವಲ್ಲ. ಚೇತನ, ಅಚೇತನ, ಈಶ್ವರರೆಂಬ ತತ್ವತ್ರಯಗಳು ಸತ್ಯ. ಜೀವ ಬ್ರಹ್ಮರಿಗೆ ಅತ್ಯಂತ ಭೇದವೇ ಸತ್ಯ. "ತತ್ವಮಸಿ" ಮೊದಲಾದ ಮಹಾವಾಕ್ಯಗಳಲ್ಲಿ ಜೀವನು ಬ್ರಹ್ಮಾಧೀನನಾದ್ದರಿಂದ ಅಭೇದವು ಅಮುಖ್ಯವಾದ ವ್ಯವಹಾರ. ಸತ್ಯಗುಣ ಪರಿಪೂರ್ಣನಾದ ಬ್ರಹ್ಮನಲ್ಲಿ ಭಕ್ತಿಯಿಂದಲೇ

ಮುಕ್ತಿ ಬ್ರಹ್ಮೈಕ್ಯ, ತದ್ಗತಗುಣಗಳಿಗೂ ಅಭೇದವನ್ನು ಒಪ್ಪಿ "ನೇಹನಾನಾಸ್ತಿ ಕಿಂಚನ" ಇತ್ಯಾದಿ ಭೇದ ನಿಷೇಧ ಶ್ರುತಿಗಳಿಗೆ ಅರ್ಥವನ್ನು ನಿರ್ವಹಿಸಿ, ನಂತರ ಬ್ರಹ್ಮ ತದ್ಗುಣಗಳಿಗೆ ಭೇದ ವ್ಯವಹಾರವನ್ನು ನಿರ್ವಾಹ ಮಾಡಲು, 'ವಿಶೇಷ' ಎಂಬ ಪದಾರ್ಥವನ್ನು ಸ್ವೀಕರಿಸಿರುವುದು ದ್ವೈತ ಮತದ ವೈಶಿಷ್ಟ್ಯ.

ವಿಶಿಷ್ಟಾದ್ವೈತ (ಸವಿಶೇಷಾದ್ವೈತ)

ಭಗವದ್ರಾಮಾನುಜರು 'ವೇದಾಃ ಪ್ರಮಾಣಂ' ಎಂದು ಸರ್ವ ಶ್ರುತಿಗಳಿಗೂ ಏಕರೂಪವಾದ ಅಂದರೆ ಒಂದು ಮುಖ್ಯ ಮತ್ತೊಂದು ಗೌಣವೆಂದಲ್ಲದೆ ಮುಖ್ಯವಾದ ಪ್ರಾಮಾಣ್ಯವನ್ನು ಒಪ್ಪಿ ಭೇದಾ ಭೇದ ಶ್ರುತಿಗಳಿಗೆ ಐಕಕಂರ್ಯವನ್ನು ಘಟಕ ಶ್ರುತಿಗಳೆಂದು ವ್ಯವಹರಿಸಲ್ಪಡುವ ಶರೀರಾತ್ಮಭಾವ ಸಂಬಂಧ ಬೋಧಕ ಶ್ರುತಿಗಳ ಮೂಲಕ ನಿರೂಪಿಸಿರುತ್ತಾರೆ. "ವೇದಾಃ ಪ್ರಮಾಣಂ" ಎಂಬಲ್ಲಿ ಪ್ರಮಾಣಾನಿ ಎಂಬ ಬಹುವಚನವನ್ನು ಹೇಳದೆ ಏಕವಚನವನ್ನು ಹೇಳಿರುವುದರಿಂದ ಸಕಲ ವಿಧಗಳಾದ ಶ್ರುತಿಗಳಿಗೂ ಏಕವಿಧವಾದ ಪ್ರಾಮಾಣ್ಯವನ್ನು ಸ್ವೀಕರಿಸಿರುವುದೇ ಕಾರಣ

ಚೇತನ, ಅಚೇತನ, ಈಶ್ವರನೆಂಬ ಮೂರು ತತ್ವಗಳೂ ಸತ್ಯ ಚೇತನಾಚೇತನಗಳು ಈಶ್ವರನಿಗೆ ಶರೀರ. ಅಂದರೆ ಅಪೃಥಕ್ ಸಿದ್ಧ ವಿಶೇಷಣಗಳು ಈಶ್ವರನು ಆತ್ಮಾ-ಶರೀರೀ. "ಅಂತಃ ಪ್ರವಿಷ್ಟಃಶ್ಯಾಸ್ತಾ ಜನಾನಾಂ ಸರ್ವಾತ್ಮಾ", ಎಂಬ ಶ್ರುತಿಯು ಈಶ್ವರನು ಸರ್ವಜನರಲ್ಲಿಯೂ ಅಂತಃ ಪ್ರವೇಶಿಸಿ ನಿಯಮಿಸುತ್ತಾನೆಂದು ತಿಳಿಸಿರುತ್ತೆ. ಇಲ್ಲಿ "ಸರ್ವಾತ್ಮಾ", ಎಂದು ಹೇಳಿರುವುದು ಗಮನಿಸತಕ್ಕದ್ದು. ಈಶ್ವರನು ಆತ್ಮಾವಾದರೆ ಇದಕ್ಕೆ ಪ್ರತಿ ಸಂಬಂಧಿಯು ಶರೀರವೇ ಆಗಿರಬೇಕಲ್ಲವೇ. ಪತಿ ಪತ್ನೀ ಭಾವ, ಸ್ವಸ್ವಾಮಿ ಭಾವ ಸಂಬಂಧಗಳಂತೆ ಈ ಶರೀರಾತ್ಮಭಾವ ಸಂಬಂಧವೂ ವಿಶೇಷವಾದದ್ದು. ಲೋಕದಲ್ಲಿ "ಅಸ್ಯ ಇಯಂಭಾರ್ಯಾ" ಎಂದು ಒಬ್ಬಳನ್ನು ಹೇಳಿದರೂ, ಇದಕ್ಕೆ ಪ್ರತಿಸಂಬಂಧಿಯಾದ "ಇದಂ" ಪದಾರ್ಥವು ಪುರುಷ-ಪತಿಯೇ ಆಗಬೇಕಲ್ಲವೇ. ಹಾಗೆ "ಸರ್ವಸ್ಯ ಆತ್ಮಾ" ಎಂದು ಈಶ್ವರನನ್ನು ಚೇತನಾಚೇತನರೂಪವಾದ ಜಗತ್ತಿಗೆ ಆತ್ಮನನ್ನಾಗಿ ಹೇಳಿರುವುದರಿಂದ, ಪ್ರತಿಸಂಬಂಧಿಗಳಾದ ಚೇತನಾ ಚೇತನಗಳು ಇವನಿಗೆ ಶರೀರವೆಂಬುದು ಸ್ವತಃ ಸಿದ್ಧ. ಇದರಿಂದ ಚೇತನಾಚೇತನಗಳಿಗೂ ಈಶ್ವರನಿಗೂ ಶರೀರಾತ್ಮಭಾವ ಸಂಬಂಧವು ಸಿದ್ಧವಾಯಿತು. ಬೃಹದಾರಣ್ಯಕದಲ್ಲಿ ಸ್ಪಷ್ಟವಾಗಿ, ಯಸ್ಯ ಪೃಥಿವೀ ಶರೀರಂ, ಯಸ್ಯಾತ್ಮಾ ಶರೀರಂ ಇತ್ಯಾದಿ ರೀತ್ಯಾ ಶಾಖಾಭೇದದಿಂದ 22 ಸಲ ಈ ಶರೀರಾತ್ಮಭಾವ ಸಂಬಂಧವು ಹೇಳಲ್ಪಟ್ಟಿದೆ. ನಮ್ಮ ಶರೀರದಂತೆ ಚೇತನಾ ಚೇತನಗಳು ಈಶ್ವರನಿಗೆ ಪ್ರಾಣಾಧೀನ ಧಾರಣವಾಗಿ ಭೋಗಾಯತನ ರೂಪವಾದದ್ದು ಎಂದು ಭಾವಿಸಕೂಡದು. ಇದು ಲೌಕಿಕ ಶರೀರ ಲಕ್ಷಣ. ಶ್ರುತ್ಯುಕ್ತಲಕ್ಷಣವು ಲೌಕಿಕ ವೈದಿಕ ಪ್ರಯೋಗಗಳಿಗೆಲ್ಲಾ ಸಾಧಾರಣವಾದದ್ದು ಅಂದರೆ ಲೋಕದಲ್ಲಿ ಕಂಡು ಬರುವ ಪ್ರತಿಜೀವ ಶರೀರಗಳಿಗೂ, ಜಗತ್ತಿಗೂ ಈಶ್ವರನಿಗೂ ಇರುವ ಶರೀರಾತ್ಮ ಭಾವಗಳಿಗೂ ಈ ಲಕ್ಷಣವು ಅಂದರೆ"ಯಸ್ಯಚೇತನಸ್ಯ ಯದ್ರವ್ಯಂ ಸ್ವಾರ್ಥೇ ನಿಯಂತುಂ ಧಾರಯಿತುಂಚ ಶಕ್ಯಂತಚ್ಛೇಷತ್ವೈಕ ಸ್ವಭಾವಂ ತತ್ತಸ್ಯ ಶರೀರಂ ಅನ್ಯತ್ ಶರೀರೀ", ಎಂಬುದು ಸಾಮಾನ್ಯವೆಂದು ಶ್ರೀ ಭಾಷ್ಯಕಾರರು ಶ್ರುತ್ಯನುಸಾರವಾಗಿ ವ್ಯವಸ್ಥೆಗೊಳಿಸಿದ್ದಾರೆ "ಯಸ್ಯ ಚೇತನಸ್ಯಯತ್ ಅಪೃಥಕ್ ಸಿದ್ಧಂ ದ್ರವ್ಯಂ ತತ್ತಸ್ಯ ಶರೀರಂ" ಎಂದು ಶ್ರೀ ನಿಗಮಾಂತ ಮಹಾದೇಶಿಕರು ಈ ಶರೀರಾತ್ಮ ಭಾವಲಕ್ಷಣವನ್ನು ಸಂಗ್ರಹವಾಗಿ ನಿರೂಪಿಸಿದ್ದಾರೆ. ಇದರಿಂದಾಗಿ ಚೇತನಾ ಚೇತನಗಳು ಪರಬ್ರಹ್ಮಕ್ಕೆ ನಿಯತ ವಿಶೇಷಣಗಳು ಎಂದು ಸಿದ್ಧವಾಯಿತು ಇದರಿಂದಲೇ ಸೂತ್ರಕಾರರೂ "ಅಂಶೋನಾನಾ ವ್ಯಪದೇಶಾತ್ ಅನ್ಯಥಾಚ ದಾಶಕಿತವಾದಿತ್ವಮಧೀಯತ ಏಕೇ"(ಬ್ರಹ್ಮಸೂತ್ರ 2-3-7) ಎಂಬು ಅಂಶಾಧಿಕರಣದಲ್ಲಿ ಜೀವನು ಬ್ರಹ್ಮನ ಅಂಶ-ವಿಶಿಷ್ಟಸ್ಯ ಏಕವಸ್ತುನಃ ವಿಶೇಷಣಂ ಅಂಶ ಏವ (ಭಾಷ್ಯ), ಎಂದು ನಿರೂಪಿಸಿರುತ್ತಾರೆ "ನಾತ್ಮಾಶ್ರುತೇಃ", ಎಂಬ ಹಿಂದಿನ ಸೂತ್ರದಿಂದ ಆತ್ಮ ಶಬ್ದವು ಅನುವರ್ತಿಸಲ್ಪಟ್ಟು ಪರಸ್ಯ ಬ್ರಹ್ಮಣಃ ಆತ್ಮಾ ಜೀವಃ ಅಂಶಃ, ನಾನಾವ್ಯಪದೇಶಾತ್-ಭೇದವ್ಯಪದೇಶಾತ್, ಅನ್ಯಥಾಚ-ಅಭೇದವ್ಯಪದೇಶಾಚ್ಚ

ಿದು ಸೂತ್ರಾರ್ಥ. ಅಂಶವೆಂದರೆ ಏಕವಸ್ತ್ವೇಕದೇಶಿತ್ವವೆಂಬ ಅರ್ಥದಲ್ಲಿ ಜೀವನೂ ಬ್ರಹ್ಮನೂ ಒಂದೇ
ಿಂದ ಜೀವಗತ ದುಃಖಾದಿಗಳು ಬ್ರಹ್ಮಕ್ಕೂ ಉಂಟಾಗುತ್ತದೆಯೋ ಎಂಬ ಭ್ರಮವನ್ನು ನಿರಾಕರಿಸಿ, "ಪ್ರಕಾ
ಶತ್ತು ನೈವಂಪರಃ" (ಬ್ರಹ್ಮಸೂತ್ರ 2-3-45) ಎಂದು ಅಗ್ನಿ ಸೂರ್ಯ ಮೊದಲಾದ ತೇಜೋದ್ರವ್ಯಗಳ ಪ್ರಕಾ
ಆ ದ್ರವ್ಯಗಳಿಗೆ ವಿಶೇಷಣವಾಗಿರುವಂತೆ, ಜೀವ ಬ್ರಹ್ಮರಿಗೆ ವಿಶೇಷಣ ವಿಶೇಷ್ಯ ಭಾವವನ್ನು ನಿರೂಪಿಸಿ, ಎರಡು
ಗಳೂ ಬೇರೆ ಬೇರೆ, ವಿಶೇಷಣ ವಿಶಿಷ್ಟವಾದದ್ದರಿಂದ ಒಂದು ಎಂಬ ವ್ಯವಹಾರವೆಂದು ನಿರೂಪಿಸಿ ಜೀವಗತ
ಾದಿಗಳು ಬ್ರಹ್ಮಕ್ಕೆ ಉಂಟಾಗುವುದಿಲ್ಲ, ವಿಶೇಷಣ ವಿಶೇಷ್ಯಗಳಿಗೆ ಸ್ವಭಾವ ವೈಲಕ್ಷಣ್ಯವು ಸಿದ್ಧವೆಂದು ನಿರೂಪಿ
ಾರೆ. ಹಾಗೆಯೇ ಅಹಿಕುಂಡಲಾಧಿಕರಣದಲ್ಲಿ (3-2-6) ಅಚೇತನಕ್ಕೂ ಬ್ರಹ್ಮಕ್ಕೂ ಅಂಶಾಂಶಿಭಾವವು ಹೇಳ
ದೆ. ಈ ರೀತಿಯಲ್ಲಿ ಚೇತನಾಚೇತನಗಳಿಗೂ ಈಶ್ವರನಿಗೂ ಪರಸ್ಪರ ಭೇದವೂ ಸತ್ಯ ಶರೀರಾತ್ಮಭಾವ
ಅಭೇದವೂ ಸತ್ಯ ಇದರಿಂದಾಗಿ ಭೇದಾಭೇದ ಶ್ರುತಿಗಳೆರಡೂ ಘಟಕ ಶ್ರುತಿಗಳ ಬಲದಿಂದ ಸುರಕ್ಷಿತಗಳು

ಶ್ರೀಮನ್ನ್ಯಾಯ ಸಿದ್ಧಾಂಜನದಲ್ಲಿ ಆರಂಭದಲ್ಲಿಯೇ, "ಅಶೇಷ ಚಿದಚಿತ್ಪ್ರಕಾರಂ ಬ್ರಹ್ಮ ಏಕಮೇವ ತತ್ತ್ವಂ –
ಪ್ರಕಾರ ಪ್ರಕಾರಿಣೋಃ ಪ್ರಕಾರಾಣಾಂಚ ಮಿಥಃ ಅತ್ಯಂತ ಭೇದೇಽಪಿ, ವಿಶಿಷ್ಟೈಕ್ಯಾದಿ ವಿವಕ್ಷಯಾ ಏಕತ್ವ
ೇಶಃ, ತದಿತರನಿಷೇಧಶ್ಚ, ಅನ್ಯಥಾ ಸಮಸ್ತ ಪ್ರಮಾಣ ಸಂಕ್ಷೋಭ ಪ್ರಸಂಗಾತ್", ಎಂದು ನಿಗಮಾಂತ
ದೇಶಿಕರು ಬ್ರಹ್ಮಸೂತ್ರ – ಭಾಷ್ಯಗಳ ಆಧಾರದ ಮೇಲೆ ಪ್ರಮೇಯವನ್ನು ನಿಷ್ಕರ್ಷಿಸಿರುತ್ತಾರೆ

ಈ ಅರ್ಥಗಳನ್ನೇ ಶ್ರೀಮದ್ರಹಸ್ಯತ್ರಯಸಾರದ ಪ್ರಧಾನ ಪ್ರತಿತಂತ್ರ, ತತ್ತ್ವತ್ರಯಾಧಿಕಾರಗಳಲ್ಲಿ ಆಚಾರ್ಯರು
ಾಣ ಪುರಸ್ಸರವಾಗಿ ನಿರೂಪಿಸಿರುತ್ತಾರೆ ನಮ್ಮಾಳ್ವಾರ್‌ರವರ ತಿರುವಾಯ್‌ಮೊಳಿ "ಉಯರ್‌ವರ ಉಯರ್
ಮುಡೈಯವನ್" (1-1-1), – ಅನಂತ ಗುಣ ವಿಶಿಷ್ಟನು, ಉಳನೆನಿಲ್ ಉಳನ್ – ಸೂಕ್ಷ್ಮ
ಾಚೇತನ ವಿಶಿಷ್ಟನು ಮತ್ತು ಸ್ಥೂಲ ಚೇತನಾಚೇತನ ವಿಶಿಷ್ಟನು – ಚೇತನಾಚೇತನ ಪ್ರಕಾರಕ ಬ್ರಹ್ಮ
ಲ್ ವಿಶ್ವೈಯುಯಿತನಕ್ಕರಂದೆಂಗುಂ ಪರಂದುಳನ್" – ಶರೀರದಲ್ಲಿ ಆತ್ಮಾ ಇರುವಂತೆ, ಸರ್ವವ್ಯಾಪಿ – ಅಂದರೆ
ಾಚೇತನಗಳಿಗೂ ಈಶ್ವರನಿಗೂ ಶರೀರಾತ್ಮಭಾವ ಸಂಬಂಧವಿದೆ, ಇತ್ಯಾದಿಯಾಗಿ ನಿರೂಪಿಸಿರುತ್ತಾರೆ. ಈ
ರುಗಳೇ ಮೇಲೆ ಹೇಳಿದ ನಿರ್ವಾಹಗಳಿಗೂ ಮೂಲವಾದ ಉಪದೇಶಗಳು.

ಇದರಿಂದಾಗಿ ವಿಶಿಷ್ಟಾದ್ವೈತ ಸಿದ್ಧವು ಲೋಕಾನುಸಾರವಾದ ಮತ. ಲೋಕದಲ್ಲಿ ರಾಜ, ಅವನ ಪ್ರಜೆ
ಪ್ರಜಾರಕ್ಷಣವು ರಾಜನ ಧರ್ಮ, ಇತ್ಯಾದಿ ವ್ಯವಸ್ಥೆಗಳಿರುವಂತೆ, ಭಗವಂತ, ಅವನಿಗೆ ಅಧೀನರಾದ
ರು, ಅವರುಗಳ ರಕ್ಷಣವು ಭಗವಂತನಿಗೆ ಸೇರಿದ್ದುದು ಇತ್ಯಾದಿಗಳು ಲೋಕ ನೀತಿಯನ್ನು ಅನುಸರಿಸಿವೆ.

ತ–ದ್ವೈತ–ವಿಶಿಷ್ಟಾದ್ವೈತ ಪ್ರಭೇದಗಳಿಗೆ ನಿದಾನ–ಕಾರಣ

ಬ್ರಹ್ಮ ಸೂತ್ರಗಳು ಜೀವನಿಗೂ ಬ್ರಹ್ಮಕ್ಕೂ ಭೇದವನ್ನು ಅನೇಕ ಕಡೆಗಳಲ್ಲಿ ಸಾರುತ್ತಿವೆ. ಜ್ಞಾಜ್ಞೌ
ಅಜಾ–ಈಶನೀಶಾ. ಜ್ಞಾನಿ, ಅಜ್ಞಾನಿ–ಇಬ್ಬರು–ಅಜರು–ನಿತ್ಯರು, ಒಬ್ಬ ಈಶ ಮತ್ತೊಬ್ಬ ಅನೀಶ. ನಿತ್ಯೋ
ನಾಂ ಚೇತನ ಶ್ಚೇತನಾನಾಂ, ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ, ಅಜೋಹ್ಯೇಕೋ ಜುಷಮಾಣೋನು
ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ, ಭೇದವ್ಯಪದೇಶಾತ್, ಅಧಿಕಂತು ಭೇದ ನಿರ್ದೇಶಾತ್,
ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್, ಇತ್ಯಾದಿ ಶ್ರುತಿ ಸೂತ್ರಗಳು ಸತ್ವಸಮ್ಮತ. ಹಾಗಿದ್ದರೂ ಮತ
ಕ ಕಾರಣವೇನೆಂದರೆ–ಅದ್ವೈತಿಗಳು, "ಪ್ರಾಣದಾತ್ಮಕೋಽಘಟಃ ಎಂಬಲ್ಲಿ ಆತ್ಮ ಶಬ್ದವು ಸ್ವರೂಪವಾಚೀ, ಪ್ರಾಣ ಸ್ವರೂ

ನೀಲೋಘಟಃ ಎಂದು ಅರ್ಥ ಹೇಳಿ ಹೀಗೆಯೇ ಐತದಾತ್ಮ್ಯಮಿದಂಸರ್ವಂ ತತ್ಸತ್ಯಂ,ಸ ಆತ್ಮಾ ತತ್ವಮಸಿ ಎಂಬ ಕಡೆಯಲ್ಲಿಯೂ ಆತ್ಮ ಶಬ್ದವು ಸ್ವರೂಪವಾಚೀ, ಆದ್ದರಿಂದ ಜೀವನಿಗೂ ಬ್ರಹ್ಮಕ್ಕೂ ಸ್ವರೂಪೈಕ್ಯವೇ ಶ್ರುತಿಗೆ ಮುಖ್ಯ ತಾತ್ಪರ್ಯ, ಹೀಗೆ ಅದ್ವೈತದಲ್ಲೇ ಶ್ರುತಿಗೆ ಮುಖ್ಯಗುರಿಃ ಮೇಲೆ ಹೇಳಿದ ಭೇದವು ವ್ಯವಹಾರ ದಶೆಯಲ್ಲಿ ಮಾತ್ರ ಅಂಗೀಕರಿಸಲ್ಪಡುತ್ತದೆ, ಶ್ರವಣ–ಮನನ–ನಿಧಿದ್ಯಾಸನಾ ನಂತರ ತತ್ವಮಸೀತ್ಯಾದಿ ವಾಕ್ಯದಿಂದ ಉಂಟಾಗುವ ಅಪರೋಕ್ಷ ಜ್ಞಾನದಿಂದಲೇ ಮುಕ್ತಿ, ಅಂದರೆ ಬ್ರಹ್ಮೈಕ್ಯ, ಎಂದು ಹೇಳಿದ್ದಾರೆ.ಹೀಗೆ ಆತ್ಮ ಶಬ್ದಕ್ಕೆ ಸ್ವರೂಪ ಪರವಾಗಿ ಅರ್ಥಮಾಡಿರುವುದೇ ಮೂಲ.

ದ್ವೈತಿಗಳು "ಇದಕ್ಕೆ ಪ್ರತಿಕೋಟಿಯಾಗಿ ಭೇದವೇ ಸತ್ಯ. ಮುಕ್ತಿ ಕಾಲದಲ್ಲೂ ಜೀವ ಬ್ರಹ್ಮರು ಅತ್ಯಂತ ಭಿನ್ನರು. ಜೀವನು ದಾಸಭೂತನು. ಐಕ್ಯವನ್ನು ಹೇಳುವ ಶ್ರುತಿಗಳು ಔಪಚಾರಿಕ. ಯದಧೀನಾಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ, ಎಂಬ ನ್ಯಾಯದಿಂದ ತಾದಧೀನ್ಯ ನಿಬಂಧನವಾಗಿ ಐಕ್ಯ ವ್ಯವಹಾರವು ಉಪಪನ್ನ. ಆತ್ಮ ಶಬ್ದವು 'ಸ್ವಾಮಿ' ಎಂಬರ್ಥದಲ್ಲಿ ಸ್ವರಸವೆಂದು ಸ್ವೀಕರಿಸಿ ಐಕ್ಯತೆಯನ್ನು ನಿರಾಕರಿಸಿದ್ದಾರೆ

ವಿಶಿಷ್ಟಾ ದ್ವೈತ ಮತದಲ್ಲಿ ಭಗವದ್ರಾಮಾನುಜಾಚಾರ್ಯರು "ವೇದಾಃ ಪ್ರಮಾಣಂ" ಎಂದು ಹೇಳಿದಂತೆ ಸರ್ವಶ್ರುತಿಗಳಿಗೂ ಮುಖ್ಯಾರ್ಥವನ್ನೇ ಹೇಳಿ ನಿರ್ವಾಹವನ್ನು ತೋರಿಸಿದ್ದಾರೆ ಆತ್ಮ ಶಬ್ದಕ್ಕೆ 'ಅಂತರ್ಯಾಮಿ' ಪರವಾಗಿ ಅರ್ಥಮಾಡಿ ಶರೀರಾತ್ಮ ಭಾವ ಸಂಬಂಧವನ್ನು ಆಧಾರವಾಗಿಟ್ಟುಕೊಂಡು ಭೇದಾಭೇದ ಶ್ರುತಿಗಳಿಗೆ ಮುಖ್ಯಾರ್ಥವನ್ನೇ ಕಲ್ಪಿಸಿರುತ್ತಾರೆ. ಪರಮಾತ್ಮನಿಯಾಮ್ಯತ್ವ, ತದೇಕಾಧಾರಕತ್ವಾದಿಗಳು ಲೌಕಿಕ ಪ್ರಮಾಣಾಗೋಚರವಾದ ರಿಂದ ಭೇದವನ್ನು ಹೇಳುವುದರಲ್ಲಿ ಈ ವಿಧವಾದ ಅಪೂರ್ವಾರ್ಥ ಬೋಧಕತ್ವವು ಉಪಪನ್ನ. ಅಭೇದವೆಂದರೆ ಜೀವಬ್ರಹ್ಮರಿಗೆ ಸ್ವರೂಪೈಕ್ಯವಲ್ಲ, ನೀಲೋಘಟಃ, ದೇವೋಽಹಂ, ಮನುಷ್ಯೋಽಹಂ, ಎಂಬ ಪ್ರಯೋಗಗಳಲ್ಲಿ ನೀಲಗುಣಕ್ಕೂ ಘಟಕ್ಕೂ, ಹಾಗೆಯೇ ದೇವ ಮನುಷ್ಯಾದಿ ಶರೀರಕ್ಕೂ, ಅಹಂಪದಾರ್ಥಕ್ಕೂ ಐಕ್ಯವನ್ನು ಯಾರೂ ಒಪ್ಪಿಲ್ಲ. ಆದರೆ ನೀಲಾಭಿನ್ನಃ ಘಟಃ, ದೇವಾಭಿನ್ನಃ ಅಹಂ, ಮನುಷ್ಯಾಭಿನ್ನಃ ಅಹಂ, ಎಂದು ನೀಲೋಘಟಃ, ದೇವೋಽಹಂ ಇತ್ಯಾದಿ ಐಕ್ಯ ವ್ಯವಹಾರಕ್ಕೆ ಏನು ತಾತ್ಪರ್ಯವೆಂದರೆ – ನೀಲ ಪದವು ನೀಲಗುಣ ವಿಶಿಷ್ಟವಾಚಿ, ಹಾಗೆಯೇ ದೇವ ಮನುಷ್ಯ ಪದಗಳೂ, ದೇವಶರೀರ, ಮನುಷ್ಯ ಶರೀರ ವಿಶಿಷ್ಟ ವಾಚಿಗಳು. ಈ ರೀತಿ ಅಭೇದವು ಸಂಗತವಾಗುತ್ತೆ – ಘಟಸ್ಯನೈಲ್ಯಂ, ಮಮೇದಂ ಶರೀರಂ, ಇತ್ಯಾದಿ ಅತ್ಯಂತ ಭೇದವೇ ಸರಿ. ಐಕ್ಯವು ಗುಣ – ಗುಣಿಗಳಿಗಲ್ಲ, ಶರೀರಾತ್ಮಗಳಿಗೆ ಅಲ್ಲ. ನೀಲ ಗುಣವಿಶಿಷ್ಟವೂ ಘಟತ್ವಜಾತಿ ವಿಶಿಷ್ಟವೂ ಒಂದೇ. ಹಾಗೆಯೇ ದೇವ, ಮನುಷ್ಯ ಶರೀರ ವಿಶಿಷ್ಟನೂ, ಅಹಂತ್ವ ವಿಶಿಷ್ಟನೂ ಒಬ್ಬನೇ ಆದ್ದರಿಂದ ವಿಶಿಷ್ಟ ವೇಷದಿಂದ ಐಕ್ಯವು ಉಪಪನ್ನವೆಂಬುದು ಶಾಸ್ತ್ರಕಾರರು ಒಪ್ಪಿರುವ ಮಾತು ಹೀಗೆಯೇ ಶ್ರೀ ಭಾಷ್ಯಕಾರರೂ ಸಹ "ಅಹಂಬ್ರಹ್ಮಾಸ್ಮಿ" ಇತ್ಯಾದಿಗಳಲ್ಲಿ ಅಹಂ – ಚೇತನನು ಬ್ರಹ್ಮ ಶರೀರ ಭೂತನಾದ್ದರಿಂದ ಅಹಂತ್ವ ಪ್ರಕಾರಕ ಬ್ರಹ್ಮವು, ಬೃಹತ್ವ ವಿಶಿಷ್ಟವು ಎಂದು ಐಕ್ಯವು ಸುಸಂಗತವೆಂದು ನಿರೂಪಿಸಿರುತ್ತಾರೆ. ಇದರಿಂದ ಜೀವ ಸ್ವರೂಪವು ಮುಕ್ತಿ ಕಾಲದಲ್ಲಿಯೂ ಪರಮಾತ್ಮ ಪರತಂತ್ರನೆಂಬುದು ಸಿದ್ಧವಾಗುತ್ತದೆ. ಈ ರೀತಿಯಲ್ಲಿ ವಿಶಿಷ್ಟ ನಿಷ್ಠವಾದ ಅದ್ವೈತವು – ಅಭೇದವು – ಸವಿಶೇಷಾದ್ವೈತವು ರಾಮಾನುಜೀಯರಿಂದ, ವಿಶಿಷ್ಟಾದ್ವೈತವೆಂದು ವ್ಯವಹರಿಸಲ್ಪಡುತ್ತದೆ. ಅಂದರೆ ಅಹಂ ಬ್ರಹ್ಮ, ಇತ್ಯಾದಿ ಸಾಮಾನಾಧಿಕರಣ್ಯದಿಂದ ಸ್ವರೂಪೈಕ್ಯವಲ್ಲ, ನಾನಾ ವಿಶೇಷಣಗಳಿಂದ ಕೂಡಿದ ವಿಶೇಷ್ಯವು ಒಂದೇ. ಅಹಂತ್ವ ಪ್ರಕಾರಕ, ಬೃಹತ್ವ ಪ್ರಕಾರಕ ಬ್ರಹ್ಮವೊಂದೇ ಎಂದು ತಾತ್ಪರ್ಯ.

ಈ ವಿಶಿಷ್ಟಾದ್ವೈತ ಮತದಲ್ಲಿ ಆತ್ಮಶಬ್ದವು ಮೇಲೆ ಹೇಳಿದಂತೆ ಸ್ವರೂಪ, ಸ್ವಾಮಿ–ಎಂಬ ಅರ್ಥಗಳನ್ನು ಬೋಧಿಸಿದರೂ, ಲೋಕ ಪ್ರಸಿದ್ಧಿ ಪ್ರಾಚುರ್ಯದಿಂದಲೂ, ಶ್ರುತಿ ಪ್ರಸಿದ್ಧಿಯಿಂದಲೂ, ಶರೀರ ಪ್ರತಿಸಂಬಂಧಿ ಚೇತನನನ್ನೇ ಝಟಿತಿ ಬೋಧಿಸುತ್ತದೆ ಗೋ ಶಬ್ದಕ್ಕೆ ಅನೇಕಾರ್ಥಗಳಿದ್ದರೂ, ಪ್ರಸಿದ್ಧಿ ಪ್ರಾಚುರ್ಯದಿಂದ ಹಸುವನ್ನೇ ತಿಳಿಸುತ್ತದೆಯಲ್ಲವೇ

ಹೀಗೆ ಚೇತನಾಚೇತನ, ಸಮಸ್ತ ಕಲ್ಯಾಣ ಗುಣ ಗಣ, ವಿಭೂತಿದ್ವಯ ವಿಶಿಷ್ಟನಾದ "ಶ್ರೀ ಮನ್ನಾರಾಯಣನು" ಒಂದೇ ತತ್ವ ಎಂಬ ತಾತ್ಪರ್ಯದಿಂದಲೂ "ವಿಶಿಷ್ಟಾದ್ವೈತ" ಎಂಬ ವ್ಯವಹಾರವು ಪ್ರಸಿದ್ಧವಾಗಿದೆ. ಸಜಾತೀಯ ಜೀವ, ವಿಜಾತೀಯ–ಅಚೇತನ, ಸ್ವಗತ ಗುಣ ವಿಗ್ರಹಾದಿ ಶೂನ್ಯವಾದ ನಿರ್ವಿಶೇಷ ಬ್ರಹ್ಮ ಒಂದೇ ಸತ್ಯ, ಅನ್ಯತ್ ಸರ್ವಂಮಿಥ್ಯಾ, ಎಂಬ ಮತಕ್ಕೆ ಪ್ರತಿಯಾಗಿ ಈ ವಿಧವಾದ ಮೂರು ವಸ್ತುಗಳೂ ಬ್ರಹ್ಮಕ್ಕೆ ಅಪೃಥಕ್ ಸಿದ್ಧ ವಿಶೇಷಣಗಳಾಗಿರುವುದರಿಂದ, ಇವುಗಳಿಂದ ಕೂಡಿದ ಅಂದರೆ ವಿಶಿಷ್ಟವಾದ ಬ್ರಹ್ಮ ಒಂದೇ ಸತ್ಯ, ಈ ವಿಶಿಷ್ಟಕ್ಕಿಂತ ಭಿನ್ನವಾದದ್ದು ಬೇರೆ ಯಾವುದೂ ಇಲ್ಲ– ಎಂಬುದು ಸಿದ್ಧಾಂತ. ಹಾಗೆಯೇ ಬ್ರಹ್ಮಕ್ಕೂ ಅವರ ಗುಣಗಳಿಗೂ ಭೇದವೇ ಸಿದ್ಧಾಂತ. ಐಕ್ಯವಿಲ್ಲ. ಅಭೇದವನ್ನು ಒಪ್ಪಿದರೆ ಏಕಾಂಶದಲ್ಲಿ ಸ್ವಗತ ಭೇದ ಶೂನ್ಯ ಎಂಬುದರಲ್ಲಿ ಅದ್ವೈತ ಪಕ್ಷವನ್ನು ಒಪ್ಪಿದಂತಾಗುತ್ತದೆ- ಅದನ್ನು ಒಪ್ಪದೆ ಸಮಸ್ತ ಕಲ್ಯಾಣ ಗುಣ ಪರಿಪೂರ್ಣವಾದ ಬ್ರಹ್ಮತತ್ವವನ್ನು ಭಗವದ್ರಾಮಾನುಜರು ಸಾಧಿಸಿದ್ದಾರೆ,

ಈ ರೀತಿಯಾಗಿ ಭೇದವು, ಚೇತನ, ಅಚೇತನ ಮತ್ತು ಬ್ರಹ್ಮಕ್ಕೂ, ಅಭೇದವು ಚೇತನಾಚೇತನ ವಿಶಿಷ್ಟ ಬ್ರಹತ್ವ ವಿಶಿಷ್ಟ ವಸ್ತುವಿಗೂ ಅಂಗೀಕರಿಸಲ್ಪಟ್ಟಿದೆ. ಇದನ್ನು ತಿಳಿದುಕೊಳ್ಳದೆ ಕೆಲವು ಪಂಡಿತಂ ಮನ್ಯರು, ಜೈನಮತದಲ್ಲಿ ಗುಣ ಗುಣಿಗಳಿಗೆ ಭೇದಾಭೇದವನ್ನು ಒಪ್ಪಿರುವಂತೆ ರಾಮಾನುಜ ಮತದಲ್ಲಿಯೂ ಜೀವ ಬ್ರಹ್ಮಗಳಿಗೆ ಭೇದಾಭೇದಗಳನ್ನು ಒಪ್ಪಿದ್ದಾರೆಂದು ಹೇಳುತ್ತಾರೆ. ಇದು ಅಜ್ಞಾನಮೂಲ. "ಅಂಶೋನಾನಾವ್ಯಪದೇಶಾತ್ ಅನ್ಯಥಾಚ" ಎಂಬ ಸೂತ್ರದಲ್ಲಿ ಅಂಶಾಂಶಿಗಳಿಗೆ, ಗುಣ ಗುಣಿಗಳಿಗೆ ಪರಸ್ಪರ ಭೇದವನ್ನು ಹೇಳಿ, ಗುಣವಿಶಿಷ್ಟ ಗುಣಿಯು ಒಂದೇ ಎಂಬಂತೆ ಜೀವನಿಗೂ (ವಿಶೇಷಣ), ಬ್ರಹ್ಮಕ್ಕೂ (ವಿಶೇಷ್ಯ) ಪರಸ್ಪರ ಭೇಧ, ಜೀವ ವಿಶಿಷ್ಟ ಬ್ರಹ್ಮಕ್ಕೆ ಅಂದರೆ ವಿಶಿಷ್ಟ ವೇಷದಲ್ಲಿ ಅಭೇದವೆಂಬುದನ್ನು ನಿರೂಪಿಸಿರುತ್ತಾರೆ. ಅದೇ ಅಧಿಕರಣದಲ್ಲಿ "ಪ್ರಕಾಶಾದಿವತ್ತು ನೈವಂಪರಃ" ಎಂದು ಸೂರ್ಯನಿಗೂ ಅವನ ಪ್ರಭೆಗೂ ಪರಸ್ಪರ ಭೇದವಿದ್ದರೂ ಪ್ರಭಾವಿಶಿಷ್ಟವಾದ ವಸ್ತುವು ಒಂದೇ ಎಂಬ ದೃಷ್ಟಾಂತವನ್ನು ಕೊಟ್ಟಿರುವುದೂ ಇಲ್ಲಿ ಗಮನಾರ್ಹ. ಆದ್ದರಿಂದ ವಿಶಿಷ್ಟಾದ್ವೈತವು ಅಪ್ರಕಂಪ್ಯವಾದ ಸಿದ್ಧಾಂತ.

ಉಪಾಯ ಸ್ವರೂಪ

ಅನಂತರ ಮೋಕ್ಷೋಪಾಯ ಸ್ವರೂಪವನ್ನು ನಿರೂಪಿಸುವವರಾಗಿ ಆ ಉಪಾಯವು, ಅವಿಧೇಯ–ವಿಧಿಸಲ್ಪಡದೆ, ಕೇವಲವಾಕ್ಯ ಜನ್ಯಜ್ಞಾನಾತ್ಮಕವೆಂದು ಹೇಳುವ ಅದ್ವೈತಮತವನ್ನು ಪ್ರಾಮಾಣಿಕವಲ್ಲವೆಂದು ನಿರೂಪಿಸಿ, ವಿಧೇಯಜ್ಞಾನಾತ್ಮಕ ವಿಶೇಷವಾದದ್ದು ಎಂದು ನಿರೂಪಿಸುತ್ತಾರೆ. ಇದನ್ನೇ ಅನುಷ್ಠಾನದಿಂದ ಸಾಧಿಸಲ್ಪಡತಕ್ಕದ್ದು – ಸಾಧ್ಯೋಪಾಯ ಎಂದು ವ್ಯವಹರಿಸುತ್ತೇವೆ. ಈ ಸಾಧ್ಯೋಪಾಯದಿಂದ ವಶೀಕೃತನಾಗಿ ಮೋಕ್ಷವನ್ನು ಕೊಡುವ ಭಗವಂತನು ಸಿದ್ಧೋಪಾಯ. ಶ್ರೀ ಭಾಷ್ಯಮಂಗಳ ಶ್ಲೋಕ ವ್ಯಾಖ್ಯಾನದಲ್ಲಿ, "ರಕ್ಷೈಕದೀಕ್ಷೇ", "ಪರಸ್ಮಿನ್" ಎಂಬ ಸಪ್ತಮ್ಯಂತ ಪದಗಳಿಂದ ಉಪೇಯವಾದ (ಪ್ರಾಪ್ಯನಾದ) ಸಿದ್ಧೋಪಾಯವು ಹೇಳಲ್ಪಟ್ಟಿದೆ. "ಭಕ್ತಿರೂಪಾ ಶೇಮುಷೀ", ಎಂದು ಸಾಧ್ಯೋಪಾಯವು ತಿಳಿಸಲ್ಪಟ್ಟಿದೆ. "ವಿಶೇಷೇಣನತಾಃ –

ವಿನತಾಃ" ಎಂದು ನ್ಯಾಸೋಪಾಸನಾತ್ಮಕ "ಅಶೇಷ ವಿದ್ಯಾ ವಿಶೇಷ ನಿಷ್ಠಾಃ ವಿವಕ್ಷಿತಾಃ" ಎಂಬುದು ಶ್ರುತ ಪ್ರಕಾಶಿಕೆ – ಅಂದರೆ ನ್ಯಾಸ – ಪ್ರಪತ್ತಿ, ಉಪಾಸನೆ – ಭಕ್ತಿ, ಇವೆರಡೂ ಸಾಧ್ಯೋಪಾಯಗಳು. ಇವುಗಳನ್ನು ಅನುಷ್ಠಿಸುವವರೆಲ್ಲರೂ "ವಿನತ" ಎಂಬ ಪದದಲ್ಲಿ ವಿವಕ್ಷಿತರು. ಅವರುಗಳನ್ನು ರಕ್ಷಿಸುವುದೇ ಸಿದ್ಧೋಪಾಯನಾದ ಭಗವಂತನಿಗೆ ದೀಕ್ಷೆ – ಸಂಕಲ್ಪ ಭಕ್ತಿಯೋಗದಲ್ಲಿ ಸಾಮರ್ಥ್ಯವಿಲ್ಲದವನಿಗೆ ಪ್ರಪತ್ತಿಯು ವಿಧಿಸಲ್ಪಟ್ಟಿದೆಯಷ್ಟೇ. ನಿದಿಧ್ಯಾಸಿತವ್ಯಃ, ಮಾಮುಪಾಸ್ವ, ಮಾಮೇಕಂ ಶರಣಂವ್ರಜ, ಮುಮುಕ್ಷುರ್ವೈ ಶರಣಮಹಂಪ್ರಪದ್ಯೇ, ಇತ್ಯಾದಿಗಳು ಉಪಾಯವಿಧಾಯಕ ವಾಕ್ಯಗಳು. ಭಕ್ತಿಯು ಅಸಕೃದಾವೃತ್ತವಾದ, ಅಂದರೆ ನಿತ್ಯವೂ ಉಪಾಸನಾರೂಪ ಪ್ರೀತಿರೂಪಾಪನ್ನವಾದ ಜ್ಞಾನವಿಶೇಷ. ಪ್ರಪತ್ತಿಯೂ ಪ್ರೀತಿರೂಪಾಪನ್ನವಾದ ಜ್ಞಾನವಿಶೇಷವು. ಆದರೆ ಸಕೃತ್ – ಒಂದೇ ಸಲ ಅನುಷ್ಠಿಸಲ್ಪಡತಕ್ಕದ್ದು. ಆದ್ದರಿಂದ "ಜ್ಞಾನಾನ್ಮೋಕ್ಷಃ" ಎಂಬ ಉಕ್ತಿಗೆ ವಿರೋಧವಿಲ್ಲ. ಆ ಜ್ಞಾನವು ಕೇವಲ ವಾಕ್ಯಜನ್ಯವಾದ ಶಾಸ್ತ್ರಾರ್ಥ ಜ್ಞಾನವಿಲ್ಲ. ಅದಕ್ಕಿಂತ ಬೇರೆಯಾದ ವಿಧೇಯಾತ್ಮಕ ಉಪಾಸನ ರೂಪ ಜ್ಞಾನವಿಶೇಷವು. ಜ್ಞಾನ ಸ್ವರೂಪವು ಪ್ರಮಾಣ ತಂತ್ರವಾದ್ದರಿಂದ ವಿಧೇಯವಲ್ಲ. ಆವೃತ್ತಿ ವಿಶಿಷ್ಟವಾದದ್ದು ಪುರುಷತಂತ್ರವಾದ್ದರಿಂದ ವಿಧೇಯವೇ. ಭಕ್ತಿಯೋಗವು ಆವೃತ್ತಿ ವಿಶಿಷ್ಟವಾದ, ಜ್ಞಾನಾತ್ಮಕವು ಭಕ್ತಿಯೋಗವನ್ನು ಮಾಡಲು ಅಶಕ್ತನಿಗೆ ಪ್ರಪತ್ತಿಯು ವಿಧಿಸಲ್ಪಟ್ಟಿದೆ. "ನಹಿವಚನ ವಿರೋಧೇ ನ್ಯಾಯಃ ಪ್ರಭವತಿ".

ಶ್ರೀ ಭಾಷ್ಯಕಾರರು ಸಾಧನಾಧ್ಯಾಯದಲ್ಲಿ "ನಾನಾಶಬ್ದಾದಿ ಭೇದಾತ್" ಎಂಬ ಸೂತ್ರ (3–3–56)ವ್ಯಾಖ್ಯಾನದಲ್ಲಿ ಈ ಸಾಧನಗಳು ಅನೇಕವಾದವು, ಎಂದು ಸೂತ್ರದಲ್ಲಿರುವ "ಶಬ್ದ ಭೇದಾತ್" ಎಂಬ ಪದಸ್ವಾರಸ್ಯದಿಂದ ಭಕ್ತಿ ಪ್ರಪತ್ತಿಗಳೆರಡನ್ನೂ ವಿವಕ್ಷಿಸಿ ವ್ಯಾಖ್ಯಾನ ಮಾಡಿರುತ್ತಾರೆ ಧ್ಯಾನ ಉಪಾಸನೆ ಇತ್ಯಾದಿ ಪರ್ಯಾಯ ಶಬ್ದಗಳು ಏಕಾರ್ಥಬೋಧಕಗಳು. ಆದ್ದರಿಂದ ನ್ಯಾಸ ವಿದ್ಯೆಯನ್ನೂ ವಿವಕ್ಷಿಸಿದರೇನೇ ಶಬ್ದ ಭೇದವು ಏರ್ಪಡುತ್ತದೆ. ಈ ಅಂಶವು ಸೂತ್ರಕಾರ ವಿವಕ್ಷಿತವೆಂಬುದು "ಅಕ್ಷರ ವಿದ್ಯಾದಿಕಾ ಇತಿ ಆದಿ ಶಬ್ದೇನ ನ್ಯಾಸೋ ವಿವಕ್ಷಿತಃ ಸೂತ್ರೇऽಪಿ ಶಬ್ದಾದಿ ಭೇದ ಸದ್ಭಾವಾತ್" ಎಂಬ ಶ್ರುತ ಪ್ರಕಾಶಿಕಾ ವ್ಯಾಖ್ಯಾನದಿಂದ ಸ್ಪಷ್ಟ ಅಂಗ ಪ್ರಪತ್ತಿ ಪರವಾಗಿ ಗೀತಾ ಚರಮಶ್ಲೋಕಕ್ಕೆ ಶ್ರೀ ಭಾಷ್ಯಕಾರರು ವ್ಯಾಖ್ಯಾನ ಮಾಡಿ, ಶರಣಾಗತಿ ಗದ್ಯದಲ್ಲಿ ಸ್ವತಂತ್ರ ಪ್ರಪತ್ತಿ ಪರವಾಗಿ ವ್ಯಾಖ್ಯಾನ ಮಾಡಿರುವುದರಿಂದ ಆಕಿಂಚನರ ವಿಷಯದಲ್ಲಿ ಪ್ರಪತ್ತಿಯು ಸರ್ವಫಲವನ್ನೂ ಸಾಧಿಸಿ ಕೊಡಬಲ್ಲದೆಂಬುದು ನಿರೂಪಿಸಿದಂತಾಯಿತು

ಈ ಪ್ರಪತ್ತಿ ಸ್ವರೂಪ ವಿಷಯದಲ್ಲೂ ಇದರ ಅನುಷ್ಠಾನ ವಿಷಯದಲ್ಲಿಯೂ ಭಗವದ್ರಾಮಾನುಜರ ಅರ್ವಾಚೀನರಲ್ಲಿ ವಿಪ್ರತಿಪತ್ತಿಗಳು ತಲೆದೋರಿವೆ ಆದಾಗಿ ಸಿದ್ಧೋಪಾಯನಾದ ಭಗವಂತನೇ ಮೋಕ್ಷಪ್ರದನು. ಸಂಬಂಧ ಜ್ಞಾನವಿದ್ದರೆ ಸಾಕು. ನಾವು ಅತ್ಯಂತ ಪರತಂತ್ರರಾದ್ದರಿಂದ ಸಿದ್ಧೋಪಾಯ ನಿಷ್ಠರು ಯಾವ ಉಪಾಯವನ್ನೂ ಅನುಷ್ಠಿಸಕೂಡದು. "ಉಪಪತ್ತೇಶ್ಚ" (ಬ್ರಹ್ಮ ಸೂತ್ರ 3–2–34) ಎಂಬ ಸೂತ್ರಭಾಷ್ಯದಲ್ಲಿ "ಅನನ್ಯೋಪಾಯತ್ವ ಶ್ರವಣಾತ್" ಎಂದು ಭಗವದ್ಭಾಷ್ಯಕಾರರೇ ಹೇಳಿರುವಂತೆ ಭಗವಂತನೇ ಉಪಾಯ, ಬೇರೆ ಉಪಾಯಗಳು ಬೇಕಿಲ್ಲ ನಿರ್ಹೇತುಕ ಕೃಪೆಯಿಂದಲೇ ಮೋಕ್ಷವು ಲಭ್ಯ ಇದರಿಂದ ನಾವು ಯಾವುದನ್ನೂ ಅನುಷ್ಠಿಸದೆ

ಶರೈಸ್ತು ಸಂಕುಲಾಂ ಕೃತ್ವಾಲಂಕಾಂ ಪರಬಲಾರ್ದನಃ |
ಮಾಂ ನಯೇದ್ಯದಿ ಕಾಕುತ್ಸ್ಥಃ ತತ್ತಸ್ಯ ಸದೃಶಂಭವೇತ್ ||

ಎಂಬ ಸೀತಾದೇವಿಯಂತೆ ರಕ್ಷಕಾವಷ್ಟಂಭದಲ್ಲಿ ವಿಶ್ವಾಸದಿಂದಿದ್ದರೆ ಸಾಕು ಸ್ವರಕ್ಷಣಾರ್ಥ ವ್ಯಾಪಾರವು ಬೇಕಿಲ್ಲ. ಪತಿಭೋಗವೇ ಉದ್ದೇಶ್ಯ. ಪ್ರಪತ್ತಿ ಎಂಬುದು ಉಪಾಯಾಂತರವಲ್ಲ. ಪ್ರಪತ್ತಿರ್ವಿಶ್ವಾಸಃ, ಎಂದು ಭಗವಂತನು ರಕ್ಷಿಸುತ್ತಾನೆಂಬುದರಲ್ಲಿ ವಿಶ್ವಾಸ ಮಾತ್ರ. ಸಾಧನಾನುಷ್ಠಾನದಲ್ಲಿ ಅಭಿಸಂಧಿಯು ಇಲ್ಲದೆ. ಅಂದರೆ ಅಭಿಸಂಧಿ ವಿರಾಮ ಮಾತ್ರವು ಇರುವುದು ಸಾಕು. ಪ್ರಪತ್ತಿಯು ಅನಿವಾರಣ ಮಾತ್ರ – ಭಗವಂತನು ರಕ್ಷಿಸುವಾಗ ನಾವು ತಡೆಯದೆ ಇದ್ದರೆ ಸಾಕು, ಇತ್ಯಾದಿ ವಾದಗಳು ಹೊರಟಿವೆ

ಈ ಅತಿವಾದಗಳು ಭಗವಂತನ ಸ್ವಾತಂತ್ರ್ಯ, ಕರುಣೆ ಮತ್ತು ಸಂಬಂಧ ಜ್ಞಾನಗಳಿಂದ ಉಂಟಾದವು. ಇವುಗಳನ್ನು ಯಥಾರ್ಥವಾಗಿ ಸ್ವೀಕರಿಸಕೂಡದು ಸಿದ್ಧೋಪಾಯನಾದ ಭಗವಂತನೇ ಮೋಕ್ಷ ಪ್ರದನೆಂಬುದ ನಿರ್ವಿವಾದ ಆ ಭಗವಂತನು ಸ್ವತಂತ್ರನೂ, ಸಮರ್ಥನೂ, ಸಹಜಕಾರುಣ್ಯಶಾಲಿಯೂ ಆಗಿದ್ದರೂ ಅನಾದಿ ಕರ್ಮ ಪ್ರವಾಹಗಳೆಂಬ ಪುಣ್ಯಪಾಪಗಳಿಂದ ಕೂಡಿದ ಚೇತನನನ್ನು, ಸರ್ವಮುಕ್ತಿ ಪ್ರಸಂಗವೂ, ವೈಷಮ್ಯ ನೈರ್ಘೃಣ್ಯಾದಿ ಅಂದರೆ ಪಕ್ಷಪಾತ, ಕೃಪೆಯಿಲ್ಲದಿರುವುದು ಎಂಬ ದೋಷಗಳುಬಾರದೆ ಇರಲು ವ್ಯಾಜಸಾಪೇಕ್ಷಕನಾಗಿಯೇ ರಕ್ಷಿಸುತ್ತಾನೆಂಬುದು ಸಿದ್ಧಾಂತ. ಭಕ್ತಿ ಪ್ರಪತ್ತಿಗಳು ಭಗವಂತನ ನಿಗ್ರಹವನ್ನು ಶಮಿಸಿ ಅನುಗ್ರಹವನ್ನು ಉಂಟುಮಾಡುತ್ತವೆ ಇವು ಪ್ರಸಾದಜನಕವಾದ ವ್ಯಾಜಗಳು. ವ್ಯವಹಿತ ಮೋಕ್ಷೋಪಾಯಗಳು. "ಮೋಕ್ಷಯಿಷ್ಯಾಮಿ" ಎಂದು ಸಂಕಲ್ಪಿಸುವ ಭಗವಂತನೇ ಅವ್ಯವಹಿತವಾದ ಮೋಕ್ಷೋಪಾಯಭೂತನು ಆಶ್ರಿತರನ್ನು ರಕ್ಷಿಸಲು ಸಿದ್ಧನಾಗಿರುವ ಉಪಾಯ. ಸಿದ್ಧೋಪಾಯನು ಸಂಬಂಧ ಜ್ಞಾನಾದಿಗಳು ಸಹಕಾರಿ ಕಾರಣಗಳು ಅಷ್ಟೇ. ಸ್ತನಂಧಯ ಪ್ರಜೆಗೆ (ಮಗುವಿಗೆ) ತಾಯಿಯು ತಾನೇ ಪ್ರೀತಿಯಿಂದ ಮೊಲೆಯನ್ನು ಕೊಟ್ಟರೂ' ಸ್ತನ್ಯವನ್ನು ನಿಗರಣ ಮಾಡುವ ವ್ಯಾಪಾರವು ಮಗುವಿಗೆ ಸೇರಿದಂತೆ ಜೀವನಿಗೆ ಭಗವದಧೀನವಾದ ಸ್ವವ್ಯಾಪಾರವೂ ಸೇರಿಯೇ ಇದೆ 'ಕರ್ತಾಶಾಸ್ತ್ರಾರ್ಥವತ್ವಾತ್' ಎಂಬ ಸೂತ್ರದಲ್ಲಿ ಜೀವನಿಗೆ ಕರ್ತೃತ್ವವು ವಿಹಿತ ಇದು ಪರಾತ್ತು ತಚ್ಛ್ರುತೇಃ" ಎಂಬ ಸೂತ್ರದ ಪ್ರಕಾರ ಭಗವದಧೀನ ಕರ್ತೃತ್ವ. ಕರಣ ಕಳೇಬರ, ಬುದ್ಧಿ, ಸ್ವಾತಂತ್ರ್ಯಾದಿ ಪ್ರದಾನಗಳನ್ನು ಸೃಷ್ಟಿಕಾಲದಲ್ಲಿ ಭಗವಂತನು ಎಲ್ಲಾ ಚೇತನರಿಗೂ ಸಮಾನವಾಗಿಯೇ ನಿರ್ಹೇತುಕ ಕೃಪೆಯಿಂದಲೇ ಕೊಡುತ್ತಾನೆ. ಶರೀರಾದಿ ಭೇದವು ಕರ್ಮ ನಿಬಂಧನ. ಆತ್ಮಕ್ಷೇಮ ಸಂಪಾದನೆಯು ಅವರವರ ಬುಧ್ಯಧೀನ.

'ಶರೈಸ್ತು ಸಂಕುಲಾಂಕೃತ್ವಾ" ಇತ್ಯಾದಿ ಸೀತೆಯು ಸ್ವರಕ್ಷಣಾರ್ಥ ವ್ಯಾಪಾರದಲ್ಲಿ ತನಗೆ ಯಾವ ಅನ್ವಯವೂ ಇಲ್ಲದೆ ಶ್ರೀರಾಮಚಂದ್ರನ ಕರುಣೆಯನ್ನೇ ಎದುರು ನೋಡುತ್ತಿದ್ದಳೆಂಬುದು, "ದತ್ತಾಃ ಪ್ರಜಾ ಜನಕವತ್ ತವದೇಶಿಕೇಂದ್ರೈಃ ಪತ್ಯಾಭಿನಂದ್ಯ ಭವತಾಪರಿಣೀಯಮಾನಾಃ" ಎಂಬ ಶರಣಾಗತಿದೀಪಿಕಾ (ಶ್ಲೋ30) ಶ್ರೀ ಸೂಕ್ತಿಯ ಪ್ರಕಾರ, ಜನಕನು ತನ್ನನ್ನು ಶ್ರೀ ರಾಮಚಂದ್ರನಿಗೆ ಮದುವೆ ಮಾಡಿಕೊಟ್ಟ ನಂತರ ಪತಿ ಪಾರಾರ್ಥ್ಯದಿಂದ ಸೀತೆಯು ಹೇಳಿದ ಮಾತು. ಇಲ್ಲಿ ವಿವಾಹವೇ ಶರಣಾಗತಿ ಸ್ಥಾನಾಪನ್ನ ಹಾಗೆಯೇ ಆಚಾರ್ಯರುಗಳ ಮೂಲಕ ಆತ್ಮರಕ್ಷಾ ಭರವನ್ನು ಭಗವಂತನಲ್ಲಿ ಮಾಡಿದ ನಂತರ ಪ್ರಪನ್ನನು ಸ್ವರಕ್ಷಣಾರ್ಥದಲ್ಲಿ ಬೇರೆ ಯಾವ ಪ್ರಯತ್ನವನ್ನೂ ಮಾಡಬೇಕಿಲ್ಲವೆಂಬುದು ತಾತ್ಪರ್ಯವೇ ಹೊರತು, ಉಪಾಯಾನುಷ್ಠಾನವೇ ಬೇಕಿಲ್ಲವೆಂದು ಅರ್ಥವಲ್ಲ ಈ ರೀತಿಯಲ್ಲಿಪ್ರಾಚೀನರ ಶ್ರೀ ಸೂಕ್ತಿಗಳಿಗೆ ಅವಿರೋಧವನ್ನು ಆಚಾರ್ಯರೇ ತೋರಿಸಿಕೊಟ್ಟಿರುವುದು ಗಮನಾರ್ಹ.

ಹೀಗೆಯೇ, "ಭುಂಕ್ತೇಸ್ವಭೋಗ ಮಖಿಲಂಪತಿ ಭೋಗಶೇಷಮ್" ಎಂದು ಪ್ರಧಾನ ಫಲಿತ್ವವು ಭಗವಂತನಿಗಾದರೂ ಪತಿಭೋಗ ಶೇಷವಾದ ಸ್ವಭೋಗವು ಜೀವನಿಗೆ ಸಿದ್ಧಿಸುತ್ತದೆ ತನ್ನ ಫಲಕ್ಕಾಗಿ ಎಂದು ಅನುಸಂಧಾನ ಮಾಡಬಾರದು ಆನುಷಂಗಿಕವಾದ ಫಲವೇ ಇಲ್ಲವೆಂದರೆ, ಅಚೇತನತ್ವವು ಪ್ರಾಪ್ತವಾಗುತ್ತದೆ ಆದ್ದರಿಂದ ಬದ್ಧಜೀವನು ಮೋಕ್ಷಾರ್ಥವಾಗಿ ಶರಣಾಗತಿಯನ್ನು ಅನುಷ್ಠಿಸಲೇ ಬೇಕು ಹಾಗೆ ಶಾಸ್ತ್ರವಶ್ಯನಾದ ಇವನಿಗೆ ಅನುಷ್ಠಾನವು ಸ್ವರೂಪ ವಿರುದ್ಧವಲ್ಲ. ಇವನ ಈಶ್ವರ ಪಾರತಂತ್ರ್ಯಕ್ಕೂ ವಿರೋಧವಾಗಲಾರದು. ಇದನ್ನು ಒಪ್ಪದಿದ್ದರೆ ಅತ್ಯಂತ ಪರತಂತ್ರನಾದ ಈ ಬದ್ಧ ಜೀವನು ಭೋಜನಾದಿ ವ್ಯಾಪಾರಗಳನ್ನೂ ಮಾಡದೇ ಇರಬೇಕಾದ ಪ್ರಸಂಗವು ಬರುತ್ತದೆ ಭಗವಂತನ ಶಾಸನ ರೂಪವಾದ ಶಾಸ್ತ್ರ ವ್ಯಾಕುಲತೆಯು ಏರ್ಪಡುತ್ತದೆ, ಶಾಸ್ತ್ರವಿಹಿತ ವ್ಯಾಪಾರವನ್ನು ಮಾಡುವುದು ದಾಸನ ಕರ್ತವ್ಯವಲ್ಲವೇ.

ಹಾಗೆಯೇ "ಉಪಸತ್ತೇಶ್ಚ" ಎಂಬ ಸೂತ್ರ ಭಾಷ್ಯದಲ್ಲಿ 'ಅನನ್ಯೋಪಾಯತ್ವ ಶ್ರವಣಾತ್' ಎಂದು ಹೇಳಿರುವುದು **ಸಿದ್ಧೋಪಾಯ** ವಿಷಯ. ಮುಂದೆ "ಫಲಮತ ಉಪಪತ್ತೇಃ"(4–2–37)ಎಂಬ ಸೂತ್ರಭಾಷ್ಯದಲ್ಲಿ, "ಸಏವಹಿ ಯಾಗದಾನ ಹೋಮಾದಿಭಿಃ **ಉಪಾಸನೇನಚ ಆರಾಧಿತಃ** ಐಹಿಕಾಮುಷ್ಮಿಕ ಭೋಗಜಾತಂ ಸ್ವ ಸ್ವರೂಪಾವಿರ್ಭಾವ ರೂಪಮಪವರ್ಗಂಚ ದಾತುಮಿಚ್ಛೇ" ಎಂದು **ಸಾಧ್ಯೋಪಾಯ** ದಿಂದ ಪ್ರೀತನಾದ ಭಗವಂತನೇ ಫಲಪ್ರದನೆಂದು ಹೇಳಿರುವುದು ಗಮನಾರ್ಹ ಇದು ಸಿದ್ಧೋಪಾಯ ಪ್ರಾಧಾನ್ಯತೆಯನ್ನು ಪುಷ್ಟೀಕರಿಸಿ, ಸಾಧ್ಯೋಪಾಯದ ಆವಶ್ಯಕತೆಯನ್ನೂ ಸ್ಥಿರೀಕರಿಸುತ್ತದೆಯಲ್ಲವೇ.

ಹೀಗೆ ಸಂಪ್ರದಾಯಗಳಲ್ಲಿ ಯಥಾಶ್ರುತವಾಗಿ ತೋರಿ ಬರುವ ಅಭಿಪ್ರಾಯ ಭೇದಗಳನ್ನೆಲ್ಲಾ ವಿವರಿಸಿ ತಾತ್ಪರ್ಯವನ್ನು ನಿರೂಪಿಸಿ, ಶ್ರೀ ಭಾಷ್ಯಕಾರರ ಶಿಷ್ಯಪರಂಪರೆಗಳಲ್ಲಿ ಐಕರಸ್ಯವನ್ನೇ ಆಚಾರ್ಯರು ಪ್ರತಿಪಾದಿಸಿರುತ್ತಾರೆ,

ಇತ್ಥಂ ಅರ್ಥಾವಿಶೇಷೇಽಪಿ ಯೋಜನಾಭೇದ ಮಾತ್ರತಃ ।

ಪ್ರಾಚಾಂ ವಿವಾದ ಸ್ಸಂವೃತ್ತಃ ಭಾಷ್ಯಕಾರೈರವಾರಿತಃ ॥

ಎಂಬ ಆಚಾರ್ಯ ಶ್ರೀ ಸೂಕ್ತಿಯು ಇಲ್ಲಿ ಅನುಸಂಧೇಯ.

ಶ್ರೀ ಭಾಷ್ಯಕಾರರು ವೇದಾರ್ಥ ಸಂಗ್ರಹದಲ್ಲಿ. "ಪರಮ ಪುರುಷಚರಣಾರವಿಂದಯುಗಳ ನ್ಯಸ್ತಾತ್ಮಾತ್ಮೀಯಸ್ಯ, ಎಂದು ಹೇಳಿರುತ್ತಾರೆ. "ಭಗವತಿನ್ಯಸ್ತ ಭರತ್ವಮಾಹ" ಎಂಬುದು ತಾತ್ಪರ್ಯ ದೀಪಿಕೆ

"ದೈವೀಹ್ಯೇಷಾಗುಣಮಯೀ ಮಮಮಾಯಾ ದುರತ್ಯಯಾ ।

ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿತೇ ॥"

ಎಂಬ ಗೀತಾ ಶ್ಲೋಕಕ್ಕೆ ವ್ಯಾಖ್ಯಾನವಾಗಿ, "ತಸ್ಸ್ವೈತಸ್ಯಾತ್ಮನಃ ಕರ್ಮಕೃತ ವಿಚಿತ್ರ ಗುಣಮಯ ಪ್ರಕೃತಿ ಸಂಸರ್ಗ ರೂಪಾತ್ಸಂಸಾರಾನ್ಮೋಕ್ಷೋ ಭಗವತ್ಪ್ರಪತ್ತಿಮಂತರೇಣ ನೋಪಪದ್ಯತೇ, ಇತ್ಯುಕ್ತಂಭವತಿ ನಾನ್ಯಃ ಪಂಥಾ ಅಯನಾಯ ವಿದ್ಯತೇ, ಇತ್ಯಾದಿ ಶ್ರುತಿಭಿಶ್ಚ", ಎಂದು ಹೇಳಿರುತ್ತಾರೆ ವೈಕುಂಠ ಗದ್ಯದಲ್ಲಿಯೂ, "ತತ್ಪ್ರಾಪ್ತಯೇ ತತ್ಪಾದಾಂಬುಜ ದ್ವಯ ಪ್ರಪತ್ತೇರನ್ಯನ್ನಮೇಃ ಕಲ್ಪಕೋಟಿ ಸಹಸ್ರೇಣಾಪಿ ಸಾಧನಮಸ್ತಿ" ಎಂದೂ, "ತಸ್ಯೈಚವಶೀಕರಣಂ ತಚ್ಛರಣಾಗತಿರೇವ" ಎಂದು ಆನುಮಾನಿಕಾಧಿಕರಣ (1–4–1) ಭಾಷ್ಯದಲ್ಲೂ ಶ್ರೀ ಭಾಷ್ಯಕಾರರು ಅನುಗ್ರಹಿಸಿರುವುದನ್ನು ಪ್ರಾಮಾಣಿಕರು ಅಂಗೀಕರಿಸಬೇಕು

ನಾವು ಪ್ರಪತ್ತಿಯನ್ನು ಒಪ್ಪುತ್ತೇವೆ ಆ ಪ್ರಪತ್ತಿಯು "ತ್ವಮೇವೋಪಾಯಭೂತೋಮೇ ಭವೇತಿ ಪ್ರಾರ್ಥನಾಮತಿಃ–ಶರಣಾಗತಿರಿತ್ಯುಕ್ತಾ" ಎಂದು ಭಗವಂತನೇ ಉಪಾಯವೆಂದಿರುವ ಬುದ್ಧಿ ಮಾತ್ರವೆಂಬುದು ಮತ್ತೊಂದುವಾದ ಈ ಶ್ಲೋಕಕ್ಕೆ ಆರಂಭದಲ್ಲಿ "ಅಹಮಸ್ಮ್ಯಪರಾಧಾನಾಮಾಲಯೋಽಕಿಂಚನೋಽಗತಿಃ" ಎಂದೂ ಕೊನೆಯಲ್ಲಿ ಸಾದೇವೇಽಸ್ಮಿನ್ ಪ್ರಯುಜ್ಯತಾಂ," ಎಂಬ ವಿಧಿಯೂ, ಪ್ರಾರ್ಥನಾಮತಿ"–ಪ್ರಾರ್ಥನಾ ರೂಪವಾದ ಬುದ್ಧಿ ವಿಶೇಷವೆಂದೂ ಹೇಳಿರುವುದನ್ನು ಗಮನಿಸಬೇಕು. ಇದು,

"ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾ ವಿಶ್ವಾಸ ಪೂರ್ವಕಂ ।

ತದೇಕೋಪಾಯತಾ ಯಾಂಚಾ ಪ್ರಪತ್ತಿಶ್ಶರಣಾಗತಿಃ ॥"

ಎಂಬ ಭರತಮುನಿ ಪ್ರಣೀತ ಶರಣಾಗತಿ ಸ್ವರೂಪವನ್ನು ನಿರೂಪಿಸುವ ವಾಕ್ಯಕ್ಕೆ ಸಮಾನಾರ್ಥಕ. ಆದಾಗಿ ತನ್ನಿಂದ

ರಕ್ಷಿಸಿಕೊಳ್ಳಲಾಗದ ವಸ್ತುವನ್ನು ರಕ್ಷಿಸಲು ಸಮರ್ಥನಾದವನಲ್ಲಿ ರಕ್ಷಿಸಿಕೊಡು ಎಂದು ಪ್ರಾರ್ಥಿಸಿ ಸಮರ್ಪಿಸುವದು ಶರಣಾಗತಿ, ಎಂದು ಹೇಳಿದೆಯಾದ್ದರಿಂದ, ವಿಧೇಯಾತ್ಮಕವಾದ ಸ್ವಾತ್ಮರಕ್ಷಾಭರಸಮರ್ಪಣ ರೂಪ ಪುರುಷ ತಂತ್ರವಾದ ಜ್ಞಾನವಿಶೇಷ. ಹೀಗೆ ಒಪ್ಪದಿದ್ದರೆ, ಮಾಯಾವಾದಿಗಳು ಹೇಳುವ ಅವಿಧೇಯ ಜ್ಞಾನಕ್ಕೆ ಸಮಾನವಾಗುತ್ತದೆ ಈ ವಿಷಯಗಳನ್ನೆಲ್ಲಾ ಆಚಾರ್ಯರು ಈ ಗ್ರಂಥದಲ್ಲಿ ವಿಸ್ತಾರವಾಗಿ ನಿರೂಪಿಸಿರುತ್ತಾರೆ

ಲಕ್ಷ್ಮೀವಿಭುತ್ವ

ಚಿದಚಿದ್ವಿಶಿಷ್ಟ ಬ್ರಹ್ಮವು ಜಗತ್ಕಾರಣವಾದ ವಸ್ತು. ಆ ಬ್ರಹ್ಮವು, ದೇವತಾಂತರ ವ್ಯಾವೃತ್ತವಾದ ಲಕ್ಷ್ಮೀ ವಿಶಿಷ್ಟ ನಾರಾಯಣನು ಉಪಾಯೋಪೇಯತ್ವಗಳು ಇಬ್ಬರಿಗೂ ಉಂಟು. ಅಂದರೆ ಮೋಕ್ಷವನ್ನು ಕೊಡುವವರೂ ಅವರಿಬ್ಬರೇ ಮೋಕ್ಷದಲ್ಲಿ ಪ್ರಾಪ್ಯಭೂತರೂ ಅವರಿಬ್ಬರೇ ಎಂಬುದು ಸಿದ್ಧಾಂತ "ಶ್ರದ್ಧಯಾ ದೇವೋ ದೇವತ್ವಮಶ್ನುತೇ", ಅಸ್ಯೇಶಾನಾಜಗತೋ ವಿಷ್ಣೋ ಪತ್ನೀ" ಎಂಬಿವೇ ಮೊದಲಾದ ಶ್ರುತಿಗಳು ಲಕ್ಷ್ಮೀವಿಶಿಷ್ಟ ನಾರಾಯಣನನ್ನು ಜಗತ್ಕಾರಣನು ಎಂದು ಸಾರುತ್ತವೆ.

ಹೀಗಿರುವಾಗ ಲಕ್ಷ್ಮಿಯು ವಿಭುವೇ, ಅಣುವೇ, ಜೀವಕೋಟಿಗೆ ಸೇರಿದವಳೇ, ಈಶ್ವರ ಕೋಟಿಗೆ ಸೇರಿದವಳೇ, ಇವಳು ಮೋಕ್ಷ ಪ್ರದಳೇ, ಉಪಾಯಭೂತಳೇ, ಅಲ್ಲವೇ ಇತ್ಯಾದಿ ವಿಪ್ರತಿಪತ್ತಿಗಳು ಅರ್ವಾಚೀನರಲ್ಲಿ ತಲೆದೋರಿವೆ ಮಹಾಲಕ್ಷ್ಮಿಯು ಬ್ರಹ್ಮ ಶಬ್ದವಾಚ್ಯೆ ಎಂಬುದು, (1) "ಯಾಂಜೀವಾಂ ಬ್ರಹ್ಮ ಪೂರ್ವ್ಯಂ ನಮೋಭಿರ್ವಿ ಶ್ಲೋಕ ಏತು ಪಥ್ಯೇವಸೂರೇಃ", ಋಕ್ ಸಂಹಿತೆ (10–13–1) (2) ಇಮಾಂ ಬ್ರಹ್ಮ ಸರಸ್ವತೀ ಜುಷಸ್ವವಾಜಿನೀವತಿ (ಋ. ಸಂ. 2–41–8) (3) ಮೂಲ ಪ್ರಕೃತಿ ರೇಕಾಸಾ ಪೂರ್ಣ ಬ್ರಹ್ಮ ಸ್ವರೂಪಿಣೀ (ಬ್ರಹ್ಮ ವೈ. ಪು. 1–30–18) ಮೂಲಪ್ರಕೃತಿಃ – ಮೂಲಪ್ರಕೃತ್ಯಭಿಮಾನಿ ದೇವತಾ ಇತ್ಯಾದಿ ಪ್ರಮಾಣಗಳಿಂದ ಸಿದ್ಧ ಇದರಿಂದ ಲಕ್ಷ್ಮಿಯು ಈಶ್ವರ ಕೋಟಿಗೆ ಸೇರಿದವಳು ಇವಳು ನಾರಾಯಣನಿಗೆ ಪತಿಪತ್ನೀ ಭಾವದಿಂದ ನೇಚ್ಛೆಯಿಂದ ಅಧೀನಳು ವಿಶೇಷಣಳು ಲಕ್ಷ್ಮೀವಿಶಿಷ್ಟನಾರಾಯಣನು ಬ್ರಹ್ಮ ಶಬ್ದ ವಾಚ್ಯನು "ವ್ಯಾಪಕಾವತಿ ಸಂಶ್ಲೇಷಾದೇಕ ತತ್ವಮಿವೋದಿತೌ", ಎಂದು ಭಗವಂತನಿಗೆ ಅಪೃಥಕ್ಭೂತ ಶೇಷ ಭೂತಳು ಲಕ್ಷ್ಮೀ. ತದ್ವಿಶಿಷ್ಟವಾದ ಪರತತ್ವವು "ಬ್ರಹ್ಮಾದ್ವೈತ"ವೆಂದು ಹೇಳಲ್ಪಡುತ್ತದೆ. ಅಂದರೆ ಇಬ್ಬರೂ ಸೇರಿ ಏಕತತ್ವವೆನ್ನುವಂತೆ, ಇರುತ್ತಾರೆ. "ಕಾಮವತ್ಸ್ಯಮೃತಂದುಹಾನಾ" ಎಂದೂ, "ವಿಮುಕ್ತಿಫಲದಾಯಿನೀ" ಎಂಬುದೂ ಲಕ್ಷ್ಮಿಯು ಮೋಕ್ಷ ಪ್ರದಳು ಎಂಬುದಕ್ಕೆ ಪ್ರಮಾಣಗಳು. "ದಾಯಿನೀ" ಎಂಬಲ್ಲಿ ತಾಚ್ಛೀಲ್ಯೇಣಿನಿ ಪ್ರತ್ಯಯ. ದಾಯಿನೀ – ಕೊಡುವ ಸ್ವಭಾವಳು ಎಂದು ಅರ್ಥ. ಕೊಡಿಸುವವಳನ್ನೂ ಕೊಡುವವಳೆಂದು ಔಪಚಾರಿಕವಾಗಿ ಹೇಳಬಹುದಾದರೆ, "ದಾಪಿನೀ" ಎಂದಿರಬೇಕು

"ಯಥಾ ಸರ್ವಗತೋ ವಿಷ್ಣುಃ ತಥೈವೇಯಂದ್ವಿಜೋತ್ತಮ" ಎಂಬ ವಿಷ್ಣು ಪುರಾಣ ವಚನವು ಲಕ್ಷ್ಮಿಯು ಭಗವಂತನ ಹಾಗೆ ವಿಭು (ಸರ್ವಗತೆ) ಸ್ವರೂಪೆ ಎಂದು ಹೇಳುತ್ತದೆ. 'ಯಥಾ ತಥಾ ಎಂಬ ಶಬ್ದಗಳು ಪ್ರಕಾರ ವಾಚಿ ವಿಷ್ಣುವು ವಿಭುವಾಗಿ ಸರ್ವಗತನಾಗಿರುವಂತೆ ಇವಳೂ ವಿಭು ಸ್ವರೂಪೆ ಎಂದು ಹೇಳಿದರೇನೇ ಯಥಾ ತಥಾ ಶಬ್ದಗಳು ಸ್ವರಸವಾಗುತ್ತವೆ. ಇವಳು ಧರ್ಮ ಭೂತಜ್ಞಾನದಿಂದ ವಿಭುಸ್ವರೂಪಳು. ಸ್ವರೂಪದಲ್ಲಿ ಅಣು, ಎಂದು ಹೇಳುವುದಕ್ಕೆ ಮೂಲ ಪ್ರಮಾಣವಿಲ್ಲ ಭಗವಂತನ ಹಾಗೆ ಉಪಾಯಭೂತೆಯೂ ಪ್ರಾಪ್ಯಭೂತೆಯೂ ಆದ ಲಕ್ಷ್ಮಿಗೆ ಪುರುಷಕಾರತ್ವವು ಹೆಚ್ಚಿನದು.

ದ್ವಯಮಂತ್ರದ ಉತ್ತರ ಖಂಡದಲ್ಲಿ 'ಶ್ರೀಮತೇ' ಎಂದು ಶ್ರೀ ವಿಶಿಷ್ಟನು ಉಪೇಯವೆಂದರೆ ಪೂರ್ವ ಖಂಡದಲ್ಲಿಯೂ 'ಶ್ರೀಮತ್' ಶಬ್ದಕ್ಕೆ ಶ್ರೀ ವಿಶಿಷ್ಟನೇ ಉಪಾಯವೆಂದು ಹೇಳುವುದು ಸ್ವರಸವಲ್ಲವೇ ಈ ಅರ್ಥಗಳನ್ನೆಲ್ಲಾ ಆಚಾರ್ಯರು ಈ ಗ್ರಂಥದಲ್ಲಿ ಅಲ್ಲಲ್ಲೇ ನಿರೂಪಿಸಿರುತ್ತಾರೆ

ಪುರುಷಾರ್ಥ ವಿಚಾರ

ಪರಮ ಪದದಲ್ಲಿ ಲಕ್ಷ್ಮೀ ವಿಶಿಷ್ಟ ನಾರಾಯಣನನ್ನು ಅರ್ಚಿರಾದಿ ಮಾರ್ಗವಾಗಿ ಪಡೆದು ಅವನನ್ನು ಅನುಭವಿಸಿ, ಅನುಭವಪರಿವಾಹವಾದ ಕೈಂಕರ್ಯವನ್ನು ಮಾಡುವುದೇ ಪರಮಪುರುಷಾರ್ಥವೆಂದು ಆಚಾರ್ಯರು ವ್ಯವಸ್ಥೆಗೊಳಿಸಿದ್ದಾರೆ ಜೀವ ಬ್ರಹ್ಮೈಕ್ಯವೇ ಮೋಕ್ಷವೆಂಬ ಅದ್ವೈತ ಮತವನ್ನೂ, ಜೀವ ಬ್ರಹ್ಮರಿಗೆ ಮೋಕ್ಷ ದಲ್ಲಿ ಆನಂದ ತಾರತಮ್ಯವನ್ನು ಹೇಳುವ ದ್ವೈತಪಕ್ಷವನ್ನೂ ನಿರಾಕರಿಸಿ, "ಭೋಗಮಾತ್ರಸಾಮ್ಯಲಿಂಗಾಚ್ಚ", ಜಗದ್ವ್ಯಾಪಾರವರ್ಜಂ' ಇತ್ಯಾದಿ ಬ್ರಹ್ಮಸೂತ್ರಗಳನ್ನು ಅನುಸರಿಸಿ "ಭಜತಿ ಪರಮಂಸಾಮ್ಯಂ ಭೋಗೇ ನಿವೃತ್ತಿಕಥೋಜ್ಝಿತಮ್', ಎಂದು ಪುನರಾವರ್ತಿಯಿಲ್ಲದೆ ಪರಿಪೂರ್ಣ ಬ್ರಹ್ಮಾನುಭವರೂಪ ಭೋಗದಲ್ಲಿ ಪರಮ ಸಾಮ್ಯವು, ಎಂದು ಆಚಾರ್ಯರು ನಿಗಮಿಸಿದ್ದಾರೆ

ನಿಗಮನ

ಹೀಗೆ ಶ್ರೀಮನ್ನಿಗಮಾಂತ ಮಹಾದೇಶಿಕರವರು ಅನುಗ್ರಹಿಸಿರುವ ರಹಸ್ಯತ್ರಯಸಾರವೆಂಬ ಗ್ರಂಥ ರತ್ನಕ್ಕೆ ಅನಪೇಕ್ಷಿತಾರ್ಥ ವಿಸ್ತಾರವಿಲ್ಲದೆ, ಅಪೇಕ್ಷಿತಾರ್ಥ ಸಂಕ್ಷೇಪವೂ ಇಲ್ಲದೆ, ಪೂರ್ವಾಚಾರ್ಯರುಗಳ ವ್ಯಾಖ್ಯಾನಗಳ ಆಧಾರದ ಮೇಲೆಯೂ, ಸತ್ಸಂಪ್ರದಾಯಾಗತ ಸಮೀಚೀನ ಶಾಸ್ತ್ರಾರ್ಥೋಪದೇಶಾದಿ ಆಧಾರದ ಮೇಲೆಯೂ, ಶ್ರೀಮಾನ್ ಸರಗೂರು ಮಾಡಭೂಷಣಂ ಕೃಷ್ಣಮಾಚಾರ್ಯರು ಆಸ್ತಿಕ ಲೋಕೋಪಕಾರಕ್ಕಾಗಿ 'ಸಾರ ಚಂದ್ರಿಕಾ' ಎಂಬ ವ್ಯಾಖ್ಯಾನವನ್ನು ಕನ್ನಡ ಭಾಷೆಯಲ್ಲಿ ಬರೆದಿರುವುದು ಬಹಳ ಶ್ಲಾಘನೀಯ ಪ್ರತೀಕವಾಗಿ ಆಚಾರ್ಯರು ಎತ್ತಿ ತೋರಿಸಿರುವ ಪ್ರಮಾಣ ವಚನಗಳನ್ನು ಪೂರ್ಣವಾಗಿ ಬರೆದು ಮುದ್ರಿಸಿ, ಆಕರವನ್ನು ಕೊಟ್ಟು, ಅರ್ಥವನ್ನೂ ಬರೆದಿರುವುದು ಓದುಗರಿಗೆ ಬಹಳ ಉಪಕಾರವಾಗಿದೆ. ಪ್ರತಿ ಅಧಿಕಾರದಲ್ಲಿಯೂ ವಿಷಯಗಳನ್ನು ವಿಂಗಡಿಸಿ, ಶೀರ್ಷಿಕೆಯನ್ನು ಕೊಟ್ಟು, ಸಂಗತಿಗಳನ್ನು ಬರೆದಿರುವುದೂ ಬಹಳ ಸಮರ್ಪಕವಾಗಿದೆ. ಇವರು ಸಂಸ್ಕೃತ ದ್ರಾವಿಡಾತ್ಮಕ ಉಭಯ ಭಾಷೆಗಳಲ್ಲೂ ಚನ್ನಾಗಿ ಪರಿಚಯ ಹೊಂದಿ ಉಭಯ ವೇದಾಂತಗಳಲ್ಲಿ ನಿಷ್ಣಾತರು. ಇವರು ಕೇಂದ್ರ ಸರ್ಕಾರದಲ್ಲಿ ಉನ್ನತ ಉದ್ಯೋಗದಲ್ಲಿದ್ದು ನಿವೃತ್ತರಾದವರು. ಹಿಂದೆ ಪ್ರಖ್ಯಾತರಾಗಿ, ನಮ್ಮ ಆಚಾರ್ಯವರ್ಯರಾದ ಶ್ರೀಮದಭಿನವ ರಂಗನಾಥ ಬ್ರಹ್ಮ ತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳವರ ಕೃಪಾಕಟಾಕ್ಷಕ್ಕೆ ಪರಿಪೂರ್ಣ ಪಾತ್ರರಾದವರು ಶ್ರೀ ಸನ್ನಿಧಿಯಲ್ಲಿ ಹತ್ತಾರು ವರ್ಷಗಳ ಕಾಲ ವೇದ ಪ್ರಬಂಧಗಳನ್ನು ಅಧ್ಯಯನ ಮಾಡಿರುತ್ತಾರೆ. ಸ್ವಾಚಾರ್ಯರಲ್ಲಿ ಸಾಂಪ್ರದಾಯಿಕ ಗ್ರಂಥಗಳನ್ನೂ ಉಪಯುಕ್ತ ಭಾಗಗಳನ್ನೂ ಅಧಿಕರಿಸಿ, "ಬಹುಭ್ಯಃ ಶ್ರೋತವ್ಯಂ ಬಹುಧಾಶ್ರೋತವ್ಯಂ" ಎಂಬಂತೆ ಶ್ರೀ ಶ್ರೀ ಸ್ವಾಮಿಗಳಲ್ಲೂ ಇನ್ನೂ ಅನೇಕ ವೇದಾಂತ ವಿದ್ವಾಂಸರುಗಳ ಹತ್ತಿರವೂ ಆಗಾಗ್ಯೆ ವೇದಾಂತ ವಿಚಾರ ಮಾಡಿ ಸಂಶಯಗಳನ್ನು ನಿವರ್ತಿಸಿಕೊಂಡು, ಅನವರತ ಪರಿಶ್ರಮಪಟ್ಟು ವೇದಾಂತ ಜ್ಞಾನ ನಿಷ್ಣಾತರಾಗಿ ಈ ಗ್ರಂಥ ರತ್ನವನ್ನು ಸವ್ಯಾಖ್ಯಾನ ಪ್ರಕಾಶ ಪಡಿಸಿರುತ್ತಾರೆ. ಈ ಗ್ರಂಥ ರತ್ನವು ಸಕಲ ಸಂಪ್ರದಾಯಾರ್ಥಗಳನ್ನೂ ಒಳಗೊಂಡಿದೆ. ಸರ್ವರಿಗೂ ಉಪಾದೇಯ. ಆಸ್ತಿಕರೆಲ್ಲರೂ ಸಂಕೇತ ಪಿಶಾಚಿಕೆಯನ್ನು ದೂರತಳ್ಳಿ, ಆಯಾಯಾ ಪ್ರದೇಶಗಳಲ್ಲಿರುವ ಸಮರ್ಥಜ್ಞಾನಿಗಳಲ್ಲಿ ಮೂಲ ಗ್ರಂಥವನ್ನು ಕಾಲ

ಕ್ಷೇಪ ಮಾಡಿ ಅನಂತರ ಈ ವ್ಯಾಖ್ಯಾನ ಗ್ರಂಥವನ್ನು ಓದಿ ವಿಶದವಾದ ಜ್ಞಾನವನ್ನು ಹೊಂದಿ ಪರಮ ಪುರುಷಾರ್ಥ ಸಾಧನವಾದ ಶರಣಾಗತಿಯನ್ನು ಅನುಷ್ಠಿಸಿ, ತದ್ವಾರಾ ಶಾಶ್ವತವಾದ ಸುಖವನ್ನು ಪಡೆಯಲಿ ಎಂದು ನಾವು ಸರ್ವಜ್ಞ ಸರ್ವಶಕ್ತ ಪರಮಕಾರುಣಿಕನಾದ ಶ್ರೀ ಲಕ್ಷ್ಮೀಹಯಗ್ರೀವನನ್ನು ಪ್ರಾರ್ಥಿಸುತ್ತೇವೆ. ಹಾಗೆಯೇ ಈ ಗ್ರಂಥ ಕರ್ತರು ಶ್ರೀ ಮನ್ನಿಗಮಾಂತ ಮಹಾದೇಶಿಕನ್‌ರವರು ಅನುಗ್ರಹಿಸಿರುವ ಚಿಲ್ಲರೈ ರಹಸ್ಯ ಗ್ರಂಥಗಳೇ ಆದಿಯಾಗಿ ಇತರ ಸಂಪ್ರದಾಯ ಗ್ರಂಥಗಳನ್ನೂ ಪ್ರಚುರಪಡಿಸಿ ನಮ್ಮ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸರ್ವತೋಮುಖ ವಾಗಿ ಹರಡಲಿ ಎಂದು ಆಶಿಸುತ್ತೇವೆ.

ಇತಿ **ನಾರಾಯಣ ಸ್ಮೃತಯಃ**

ಶ್ರೀ ಶ್ರೀ ಪರಕಾಲ ಸ್ವಾಮಿಗಳ ನಿಯಮಾನುಸಾರಿ ವ್ಯಾಕರಣ
ವೇದಾಂತ ವಿದ್ವಾನ್ ವಿದ್ವನ್ಮಣಿ, ಆಸ್ಥಾನ ವಿದ್ವಾನ್
ಸರಗೂರು **ಶ್ರೀನಿವಾಸ ವರದಾಚಾರ್ಯಃ**

ಶ್ರೀ

ಶ್ರೀಮತೇ ಲಕ್ಷ್ಮೀನೃಸಿಂಹ ಪರಬ್ರಹ್ಮಣೇ ನಮಃ

ಶ್ರೀಮತೇ ಶಠಗೋಪಾಯ ನಮಃ ।

ಶ್ರೀಮತೇ ರಾಮಾನುಜಾಯ ನಮಃ ।

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ ।

ಶ್ರೀಮದಾದಿವಣ್ ಶಠಗೋಪ ಯತೀಂದ್ರ ಮಹಾದೇಶಿಕಾಯ ನಮಃ ।

★

ಶ್ರೀಮದಹೋಬಿಲ ಮಠದ ಆಸ್ಥಾನದಲ್ಲಿ 44ನೇ ಪಟ್ಟದಲ್ಲಿ ಮೂರ್ಧಾಭಿಷಿಕ್ತರಾಗಿ ಜಿಜಯ ಮಾಡಿಸಿರುವ ಶ್ರೀ ಲಕ್ಷ್ಮೀನೃಸಿಂಹ ದಿವ್ಯ ಪಾದುಕಾ ಸೇವಕ, ಶ್ರೀ ಮತ್ಪರಮಹಂಸ ಶ್ರೀ. ಉಭ. ವೇ. **ವೇದಾಂತದೇಶಿಕ ಯತೀಂದ್ರ** ಮಹಾದೇಶಿಕನ್‌ರವರು ಅನುಗ್ರಹಿಸಿದ ಮಂಗಳಾಶಾಸನ ಶ್ರೀಮುಖ.

ಮಂಗಳಾಶಾಸನ ಶ್ರೀಮುಖಮ್

ಶ್ರಿಯಃ ಪತಿಯಾನ ಸರ್ವೇಶ್ವರನ್ ಇವ್ವುಲಹಿನಿಲ್ ಪಿರಂದಿರುಕ್ಕುಮ್ ಸಕಲ ಜೀವರಾಶಿಹಳುಮ್ ಮೋಕ್ಷ ಮಡೈಯ ವೇಂಡುಮೆನ್ರು ಪಾಡುಪಟ್ಟುವರುಹಿರಾನ್. ಅದರ್ಕ್ಕಾಹ ಸೃಷ್ಟಿಕಾಲತ್ತಿಲ್ ಸಕಲ ಜೀವರ್‌ಹಳುಕ್ಕುಂ ಶರೀರೇಂದ್ರಿಯಂಗಳೈಕ್ಕೊಡುತ್ತು, ಚತುರ್ಮುಖ ಬ್ರಹ್ಮದೇವನ್ ಮೂಲಮಾಹವುಮ್, ತಾನೇ ರಾಮಕೃಷ್ಣಾದ್ಯವತಾರಂಗಳೈಪ್ಪಣ್ಣಿಯುಮ್, ಆೞ್ವಾರ್‌ಹಳ್ ರೂಪ ಮಾಹ ಅಭಿನವ ದಶಾವತಾರಂ ಪಣ್ಣಿಯುಮ್, ಶ್ರೀಮನ್ನಾಥ ಯಾಮುನ ರಾಮಾನುಜ ವೇದಾಂತ ದೇಶಿಕ ಪ್ರಭೃತಿ ಆಚಾರ್ಯರ್‌ಹಳ್ ಮೂಲ ಮಾಹ ಅವತರಿತ್ತುಂ, ಜ್ಞಾನೋಪದೇಶಂ ಪಣ್ಣಿ ಉಪಕರಿತ್ತಿರುಕ್ಕಿರಾನ್ ಇಂದ ಜ್ಞಾನ ದೀಪತ್ತೈಕ್ಕೊಂಡು ಎಲ್ಲೋರುಮ್ ಸಂಸಾರ ಮಾಹಿರ ಇರುಟ್ಟೈಪ್ಪೋಕ್ಕಡಿತ್ತು, ಉಜ್ಜೀವನಂ ಪೆರವೇಂಡಿಯದೆನ್ಬದು ಅವನುಡೈಯ ತಿರುವುಳ್ಳಮ್.

ಪ್ರಕೃತಂ, ಶ್ರೀಮನ್ನಿಗಮಾಂತ ಮಹಾದೇಶಿಕನ್ ಇಂದ ಕಲಿಯಿಲ್ ಅವತರಿತ್ತು, ಪರಶ್ಶತಂಗಳಾನ ಗ್ರಂಥಗಳೈ ಸಂಸ್ಕೃತ ದ್ರಾವಿಡ ಭಾಷೈಗಳಿಲ್ ಅನುಗ್ರಹಿತ್ತಿರುಕ್ಕಿರಾರ್. ಅವೈಹಳಿಲ್ **ಶ್ರೀಮದ್ರಹಸ್ಯತ್ರಯಸಾರಂ** ಸಕಲ ವೇದಾಂತಾರ್ಥಂಗಳುಮ್ ಅಡಂಗಿಯಿರುಕ್ಕಿರ ಪ್ರಧಾನಮಾನ ಸಂಪ್ರದಾಯ ಗ್ರಂಥಮ್. ಇಕ್ಕಾಲತ್ತಿಲುಳ್ಳವರ್ ದೇಹಯಾತ್ರೈಕ್ಕಾಹವೇ ತಂಗಳ್ ಆಯುಸ್ಸು ಮುೞುವದೈಯುಮ್ ಶೆಲವೞಿತ್ತು ವರುಹಿರಾರ್ಹಳ್. ಇವರ್‌ಹಳ್ ಇಂದರಹಸ್ಯ ಗ್ರಂಥ ಮೊನ್ರೈಯಾವದು ಸದಾಚಾರ್ಯನಿಡಮ್ ಕಾಲಕ್ಷೇಪಮ್ ಪಣ್ಣಿ ಜ್ಞಾನಂ ಸಂಪಾದಿತ್ತುಕ್ಕೊಂಡು ಅವ್ವಾಚಾರ್ಯರ್‌ಹಳ್ ಮೂಲಮಾಹ ಎಂಬೆರುಮಾನ್ ತಿರುವಡಿಹಳಿಲ್ ಆತ್ಮರಕ್ಷಾಭರ ಸಮರ್ಪಣಮ್ ಶೆಯ್ದಾಲ್ ಆತ್ಮೋಜ್ಜೀವನಮ್ ಪೆರಲಾಮ್.

ವಿದ್ವಾನ್ ಸರಗೂರ್ ಮಾಡಪೂಶಿ ಕೃಷ್ಣಮಾಚಾರ್ಯರ್ ಸದಾಚಾರ್ಯರ್‌ಹಳಿಡಮ್ ಉಭಯ ವೇದಾಂತಂಗಳೈಯುಮ್ ನನ್ರಾಹ ಅಧಿಕರಿತ್ತವರ್. ಕರ್ಮಠರ್. ಇವರ್ ಏರ್ಕೆನವೇ ಷೋಡಶ ಕರ್ಮಾನುಷ್ಠಾನಗ್ರಂಥಂಗಳಾನ ಪೂರ್ವಾಪರ ಪ್ರಯೋಗಂಗಳೈಯುಮ್, ಶ್ರೀ ವೈಷ್ಣವರ್‌ಹಳ್ ಶೆಯ್ಯವೇಂಡಿಯ ಸ್ನಾನ ಸಂಧ್ಯಾವಂದನ

ಜಪಾದಿ ಭಗವದಾರಾಧನ ವರ್ಯಂತಗಳಾನ ನಿತ್ಯಕರ್ಮಂಗಳೈಯುಮ್ ಅಮಾವಾಸ್ಯಾದಿತರ್ಪಣಂಗಳೈಯುಮ್ ತೆರವಿಕ್ಕಿರ "ದಿನಚರಿ" ಗ್ರಂಥಮೊನ್ರೈಯುಂ, ಪೂರ್ವರ್‌ಹಳ್ ಅನುಷ್ಟಿತ್ತು ವನ್ದಿರುಹಿರಮುರೈಯಿಲ್, ಪೂರ್ವಾಚಾರ್ಯರ ಗ್ರಂಥಗಳೈ ಆಧಾರಮಾಹವೈತ್ತುಕ್ಕೊಂಡು ಪ್ರಕಾಶಪ್ಪಡುತ್ತಿಯಿರುಕ್ಕಿರಾರ್ ಇಪ್ಪೊಳುದು ಶ್ರೀ ಮದ್ರಹಸ್ಯತ್ರಯಸಾರತ್ತುಕ್ಕು ಎಳಿಯ ಕನ್ನಡ ಭಾಷೈಯಿಲ್ ಒರು ವ್ಯಾಖ್ಯಾನತ್ತೈ ಪೂರ್ವಾಚಾರ್ಯ ಗ್ರಂಥಗಳೈ ಅಡಿಯೊಟ್ರಿ ಎಳುದಿ, ಮೂಲ ಶ್ರೀ ಸೂಕ್ತಿಯುಡನ್ ಕನ್ನಡ ಲಿಪಿಯಿಲ್ ಅಚ್ಚಿಟ್ಟಿರುಕ್ಕಿರದು ಕನ್ನಡ ದೇಶತ್ತಾರ್ಕು ಮಿಹವುಮ್ ಉಪಯೋಗ ಮಾಯಿರುಕ್ಕುಮ್ "ಕರ್ಮಸಮುಚ್ಚಿತಾತ್ ಜ್ಞಾನಾತ್ ಅಪವರ್ಗಶ್ರುತೇಃ" ಎನ್ರು ಕರ್ಮಾನುಷ್ಠಾನ ಮೂಲಮಾನ ಜ್ಞಾನಮ್ ಮೋಕ್ಷತ್ತಿರ್ಕು ಕಾರಣಮ್ ಎನ್ಹಿರ ಸಿದ್ಧಾಂತತ್ತೈ ಅಡಿಯೊಟ್ರಿ ಎಲ್ಲೋರುಂ ಮೋಕ್ಷಂ ವೆರ ಇಗ್ರಂಥಂಗಳ್ ಮಿಹವುಂ ಪಯನ್‌ಪಡುಮ್, ಎನ್ರು ಸಂತೋಷಪ್ಪಡುಹಿರೋಮ್.

ಆಸ್ತಿಕರ್‌ಹಳ್ ಅನೈವರುಂ ಇಂದ "ರಹಸ್ಯತ್ರಯಸಾರ" ಶ್ರೀ ಕೋಶತ್ತೈ ವಿಲೈಕೊಡುತ್ತು ವಾಂಗಿಕ್ಕೊಂಡು, ಸದಾಚಾರ್ಯರ್ ಹಳಿಡತ್ತಿಲ್ ಕಾಲಕ್ಷೇಪಂಶೆಯ್ದು ನಲ್ಲ ಜ್ಞಾನತ್ತೈ ಅಡೈಂದು ಭಗವಾನ್ ತಿರುವಡಿಹಳಿಲ್ ಆತ್ಮರಕ್ಷಾಭರತ್ತೈ ಸಮರ್ಪಿತ್ತು, ಕೃತ ಕೃತ್ಯರ್‌ಹಳಾಹವುಮ್, ಕೃತಾರ್ಥರ್‌ಹಳಾಹವುಮ್, ವೇಂಡಿ ಆಶಾಸಿಕ್ಕಿರೋಮ್. ಇಪ್ಪಡಿಯೇ ಶ್ರೀಮಾನ್ ಸೆರಗೂರ್ ಕೃಷ್ಣಮಾಚಾರ್ಯರ್ ಶ್ರೀ ದೇಶಿಕರುಡೈಯ ಮಟ್ರೈಯ ಚಿಲ್ಲರೈ ರಹಸ್ಯ ಗ್ರಂಥಂಗಳೈಯುಮ್ ವೆಳಿಪ್ಪಡುತ್ತಿ ಉಲಹತ್ತೈ ವಾಳ್ವಿಕ್ಕುಂಪಡಿ ಶ್ರೀ ಲಕ್ಷ್ಮೀನೃಸಿಂಹನ್ ಅನುಗ್ರಹಿಕ್ಕವೇಂಡುಮೆನ್ರು ಅವ್ವೆಂಬೆರುಮಾನೈ ಪ್ರಾರ್ಥಿತ್ತು ಶೆಯ್ದಮಂಗಳಾಶಾಸನಮ್.

ಶ್ರೀ ಶಠಗೋಪಶ್ರೀಃ

ಶುಕ್ಲಸಂ. ಮಾಶಿಮಾದಮ್
ಶಭಿಷೆತ್ತೈ
25-2-1990

VEDANTA VIDWAN

SRINIKETAN
780 V Main Road
Hosahally
BANGALORE-40

Dr N S Anantharangachar, Ph.D,
Principal, Maharaja's Sanskrit College, Mysore (Retd)
Member, Academy of Sanskrit Research, Melkote
Hon Registrar Bharatiya Vidya Bhawan, Bangalore

ಶ್ರೀಮತೇ ರಾಮಾನುಜಾಯ ನಮಃ

ಗ್ರಂಥ ಪರಿಚಯ – ಆಶಾಸನೆ

"ಕವಿತಾರ್ಕಿಕ ಸಿಂಹರು", "ಸರ್ವತಂತ್ರ ಸ್ವತಂತ್ರರು, ವೇದಾಂತದೇಶಿಕರು" ಎಂಬ ಶ್ರೀನಾಮಗಳಿಗೆ ಅನ್ವರ್ಥಪಾತ್ರರಾದ ಶ್ರೀಮದ್ವೇಂಕಟನಾಥರು ಅನುಗ್ರಹಿಸಿದ ಶತಾಧಿಕ ಗ್ರಂಥ ರತ್ನಗಳಲ್ಲಿ **'ಶ್ರೀಮದ್ರಹಸ ತ್ರಯಸಾರ'ಕ್ಕೆ** ವಿಶಿಷ್ಟವಾದ ಸ್ಥಾನವಿದೆ ಇದು ಇವರ ಪರಿಣತವತ್ಸರದ ಫಲವಾಗಿ ಶ್ರೀ ವೈಷ್ಣವ ಸಿದ್ಧಾಂತದ ಸಾರಸರ್ವಸ್ವವನ್ನೂ ಒಳಗೊಂಡಿದೆ ಮುಮುಕ್ಷುವಾದವನೊಬ್ಬನು ಅವಶ್ಯವಾಗಿ ಅರಿಯಬೇಕಾದ ತತ್ತ್ವ–ಹಿತ–ಪುರುಷಾರ್ಥ ಸ್ವರೂಪವನ್ನೆಲ್ಲಾ ಲಲಿತವಾದ ಮತ್ತು ಮಂಜುಳವಾದ ಶೈಲಿಯಲ್ಲಿ ತಿಳಿಯಪಡಿಸುವ ಮೇರು ಕೃತಿಯಾಗಿದೆ ಇದು ಇದರ ವೈಶಿಷ್ಟ್ಯ ಹೀಗಿದೆ –

೧) ಪ್ರಪತ್ತಿಯು ಸ್ವತಂತ್ರವೂ ಸಮರ್ಥವೂ ಆದ ಮೋಕ್ಷೋಪಾಯವೆಂಬುದನ್ನು ಈ ಕೃತಿ ಸಿದ್ಧಾಂತಿಸುತ್ತದೆ.

೨) ಮೂಲಮಂತ್ರ, ದ್ವಯಮಂತ್ರ ಮತ್ತು ಚರಮಶ್ಲೋಕಗಳು ಈ ಪ್ರಪತ್ತಿ ಸಿದ್ಧಾಂತವನ್ನು ಪ್ರಕಾಶಪಡಿಸುವ ರಹಸ್ಯಗಳೆಂದು ಚೆನ್ನಾಗಿ ತೋರಿಸಿ ಕೊಡಲಾಗಿದೆ.

೩) ಜನಸಾಮಾನ್ಯರಿಗೆ ಅರ್ಥವಾಗುವಂತೆ ಸಂಸ್ಕೃತ ಮತ್ತು ತಮಿಳಿನ ಹಿತಮಿತ ವಾದ ಮಿಶ್ರಣವನ್ನು ಹೊಂದಿರುವ 'ಮಣಿ ಪ್ರವಾಳ ಶೈಲಿ'ಯಲ್ಲಿ ಇದು ರಚಿತವಾಗಿದೆ.

೪) ಇಲ್ಲಿ ಪ್ರತಿಪಾದಿಸಿರುವ ಸಿದ್ಧಾಂತಗಳಿಗೆ ಸ್ಮೃತೀತಿ ಹಾಸ ಪುರಾಣಗಳ ಪ್ರಮಾಣಗಳನ್ನೂ ಆಳ್ವಾರರುಗಳ ಶ್ರೀ ಸೂಕ್ತಿಗಳ ಪ್ರಮಾಣಗಳನ್ನೂ ಅನೇಕಶಃ ಉಲ್ಲೇಖಿಸಿದೆ ಉಭಯ ವೇದಾಂತಗಳ ಆಧಾರವಿರುವುದನ್ನು ಪ್ರಮಾಣೀಕರಿಸಲಾಗಿದೆ.

೫) ಪ್ರಸ್ಥಾನತ್ರಯ ಭಾಷ್ಯಗಳಂತೆ ಅಲ್ಲದೆ ಇದನ್ನು ಅಧಿಕರಿಸುವುದರಲ್ಲಿ ಸರ್ವರಿಗೂ ಅಧಿಕಾರವಿದೆ

೬) ಪ್ರಪತ್ತಿ ಸ್ವರೂಪ, ಪ್ರಪತ್ತಿಯ ಪ್ರಕಾರಗಳು, ಪ್ರಪತ್ತಿಯ ಪರಿಕರಗಳು ಪ್ರಪತ್ತ್ಯನುಷ್ಠಾನ ಕ್ರಮ, ಪ್ರಪನ್ನನ ಲಕ್ಷಣಗಳು, ಪ್ರಪನ್ನನ ಉತ್ತರಕೃತ್ಯ ಸ್ವರೂಪ – ಇವುಗಳನ್ನೆಲ್ಲಾ ಕುರಿತು ನಿಷ್ಕೃಷ್ಟವಾದ ನಿರೂಪಣೆ ಇಲ್ಲಿದೆ

೭) ಪ್ರಪತ್ತಿ ಸಿದ್ಧಾಂತದ ಬಗೆಗೆ ಭಗವದ್ರಾಮಾನುಜರ ಕಾಲದಿಂದ ತಮ್ಮ ಕಾಲದವರೆಗೆ ಬೆಳೆದಿದ್ದ ಬಹು ಮುಖ್ಯವಾದ ಅಭಿಪ್ರಾಯಗಳನ್ನೆಲ್ಲಾ ಪರಿಶೀಲಿಸಿ 'ಇದಮಿತ್ಥಂ' ಎಂದು ಶಾಸ್ತ್ರಮರ್ಯಾದೆ ಮತ್ತು ಸಂಪ್ರದಾಯಗಳಿಗನುಸಾರವಾಗಿಯೂ ಪ್ರಮಾಣ ಪೂರ್ವಕವಾಗಿಯೂ ನಿಷ್ಕರ್ಷಿಸಿ ಪ್ರತಿಪಾದಿಸಿರುವುದು ಇದರ ಮಹತ್ವವಾಗಿದೆ ಆಚಾರ್ಯರು ಈ ಕೃತಿಯನ್ನು ರಚಿಸದೆ ಹೋಗಿದ್ದರೆ, ಪ್ರಪತ್ತಿಯನ್ನು ಕುರಿತಂತೆ ಅನೇಕ ವಿಚಾರಗಳು ಸಂದಿಗ್ಧವಾಗಿಯೇ ಉಳಿದು ಹೋಗುತ್ತಿದ್ದವು

ಈ ಮಹತ್ಕೃತಿಯ ಅಧ್ಯಯನ ಮತ್ತು ಅರ್ಥಾನುಸಂಧಾನ ಎಲ್ಲ ಧಾರ್ಮಿಕರಿಗೂ ಅದರಲ್ಲಿಯೂ ವಿಶೇಷವಾಗಿ ಶ್ರೀ ವೈಷ್ಣವರಿಗೆ ಅತ್ಯಾವಶ್ಯಕವೆಂದು ಮನಗಂಡ ಸನ್ಮಾನ್ಯ ಶ್ರೀ ಸರಗೂರು ಮಾಡಪೂಶಿ ಕೃಷ್ಣಮಾಚಾರ್ಯರು 'ಸಾರಚಂದ್ರಿಕಾ' ಎಂಬ ಕನ್ನಡ ವ್ಯಾಖ್ಯಾನದೊಡನೆ ಈ ಕೃತಿಯನ್ನು ಪ್ರಕಾಶ ಪಡಿಸುತ್ತಿರುವುದು ಕನ್ನಡಿಗರೆಲ್ಲರಿಗೂ ಪರಮೋಪಕಾರಕವಾಗಿದೆ ಈ ಕೃತಿಯಲ್ಲಿ ಶ್ರೀ ಮದ್ರಹಸ್ಯತ್ರಯಸಾರದ ಮೂಲಪಾಠವನ್ನು ಉಪಯುಕ್ತವಾದ ಶೀರ್ಷಿಕೆಗಳಡಿಯಲ್ಲಿ ಕೊಟ್ಟು ಅದರ ಅನುವಾದವನ್ನೊಳಗೊಂಡ ವಿವರಣೆಗಳನ್ನು ಎಲ್ಲರಿಗೂ ಅರ್ಥವಾಗುವ ಶೈಲಿಯಲ್ಲಿ ಕೊಟ್ಟಿದ್ದಾರೆ. ಮೂಲದಲ್ಲಿ ಆಚಾರ್ಯರು ಉಲ್ಲೇಖಿಸಿರುವ ಪ್ರಮಾಣಗಳ ಆಕರವನ್ನು ಅಡಿ ಟಿಪ್ಪಣಿಯಲ್ಲಿ ಕೊಟ್ಟಿರುವುದಲ್ಲದೆ ಅವುಗಳ ಪೂರ್ಣಪಾಠವನ್ನೂ ಕೊಟ್ಟು ಅರ್ಥವಿವರಣೆ ಮಾಡಿರುವುದು ಬಹಳ ಉಪಯುಕ್ತವಾಗಿದೆ ಅನೇಕ ಉಪಯುಕ್ತವಾದ ವಿಷಯಗಳನ್ನು ವಿವರಣೆಯಲ್ಲಿ ವಿವೇಚಿಸಿರುವುದು ಆ ಬಗೆಗೆ ಹೆಚ್ಚಿನ ಅರಿವನ್ನು ಉಂಟು ಮಾಡಿ ಕೊಡುವುದಾಗಿವೆ. ಮಾನ್ಯ ಲೇಖಕರು ಈ ವ್ಯಾಖ್ಯಾನವನ್ನು ಸಿದ್ಧಪಡಿಸುವಲ್ಲಿ ಪರಮಪೂಜ್ಯರಾದ ಶ್ರೀ ಇಂಜಮೇಡು ಅಳಹಿಯಶಿಂಗರ್ ಅವರ ವ್ಯಾಖ್ಯಾನವನ್ನೂ ಶ್ರೀ ಕರೂರ್ ಸ್ವಾಮಿಗಳ ವ್ಯಾಖ್ಯಾನವನ್ನೂ ಮುಖ್ಯವಾಗಿ ಆಧಾರವನ್ನಾಗಿಟ್ಟುಕೊಂಡಿದ್ದಾರೆ ಶ್ರೀಮದ್ರಹಸ್ಯತ್ರಯಸಾರದ ಮೇಲಿನ ಪಂಚವ್ಯಾಖ್ಯಾನಗಳನ್ನು ಪರಿಶಿಲಿಸಿದ್ದಾರೆ ಇಂಥ ಒಂದು ಗ್ರಂಥದ ಪ್ರಕಟಣೆ ಬಹಳ ಆವಶ್ಯಕವಾಗಿತ್ತು. ಇದುವರೆಗೆ ಕನ್ನಡದಲ್ಲಿ ಪ್ರಕಟವಾದ ರಹಸ್ಯತ್ರಯಸಾರವನ್ನು ಕುರಿತ ಕೃತಿಗಳು ಬಹಳ ವಿಸ್ತಾರವಾಗಿ ಅಥವಾ ಬಹಳ ಸಂಗ್ರಹವಾಗಿ ಅಥವಾ ಮೂಲಪಾಠ ರಹಿತವಾಗಿ ಇರುವುದರಿಂದ ಈ ಕೃತಿ ಅತ್ಯಂತ ಉಪಯುಕ್ತವಾಗಿರುವುದರಲ್ಲಿ ಸಂಶಯವಿಲ್ಲ.

'ಸಾರಚಂದ್ರಿಕಾ' ವ್ಯಾಖ್ಯಾನವನ್ನು ರಚಿಸಿರುವ ಶ್ರೀ ಕೃಷ್ಣಮಾಚಾರ್ಯರು ಗುರು ಮುಖೇನ ಉಭಯ ವೇದಾಂತಗಳನ್ನೂ ಅಧಿಕರಿಸಿ ಅವುಗಳಲ್ಲಿ ಪ್ರಭುತ್ವವನ್ನು ಪಡೆದಿರುವ ಘನವಿದ್ವಾಂಸರಾಗಿದ್ದಾರೆ ವೇದಾಂತಾರ್ಥ ವಿಚಾರವನ್ನೇ ಅನವರತ ಮಾಡುವವರಾಗಿದ್ದಾರೆ ಶ್ರೀವೈಷ್ಣವ ಸಭೆಯ ಸಂಸ್ಥಾಪಕರಾಗಿ ಬಹು ಮುಖ್ಯವಾಗಿ ಸಮಾಜ ಸೇವೆಯನ್ನು ಸಲ್ಲಿಸುತ್ತಿರುವರಲ್ಲದೆ ಶ್ರೀ ಲಕ್ಷ್ಮೀನೃಸಿಂಹ ಸ್ವಾಮಿಯ ಕೈಂಕರ್ಯವನ್ನು ಅನವರತ ಮಾಡುವ ಪರಮ ಭಾಗ್ಯವನ್ನು ಹೊಂದಿದ್ದಾರೆ ಅನುಷ್ಠಾನ ತತ್ಪರರೂ ಶ್ರೀ ವೈಷ್ಣವ ಸಂಪ್ರದಾಯ ಭೂಷಣರೂ ಆಗಿರುವ ಮಾನ್ಯರು ಸಾರತಮವಾದ ಈ ಕೃತಿಯನ್ನು ರಚಿಸಿ ಪರಮೋಪಕಾರ ಮಾಡಿದ್ದಾರೆ. ಆಸ್ತಿಕರಾದ ಕನ್ನಡಿಗರೆಲ್ಲರೂ ಅಮೂಲ್ಯವಾದ ಈ ಕೃತಿಯನ್ನು ಅಧ್ಯಯನ ಮಾಡಿ ಜೀವನ ಸಾಫಲ್ಯವನ್ನು ಪಡೆದು ಕೊಳ್ಳುವಂತಾಗಲೆಂದು ನಾನು ಆಶಿಸುತ್ತೇನೆ.

ಎ. ಎಸ್. ಅನಂತರಂಗಾಚಾರ್ಯ

16-1-1990

॥ ಶ್ರೀಮತೇ ರಾಮಾನುಜಾಯ ನಮಃ ॥

॥ ಶ್ರೀಮನ್ನಿಗಮಾನ್ತ ಮಹಾದೇಶಿಕಾಯ ನಮಃ ॥

॥ ಶ್ರೀಮತೇ ಶ್ರೀವಣ್‌ಶಠಕೋಪ ಶ್ರೀವೇದಾನ್ತ ದೇಶಿಕಾಯತೀಂದ್ರ ಮಹಾದೇಶಿಕಾಯ ನಮಃ ॥

★

ಗ್ರಂಥಾವಲೋಕನ

ಶ್ರೀಮದ್ವೇದಾನ್ತದೇಶಿಕರೆಂದೇ ಜಗದ್ವಿಖ್ಯಾತರಾದ ಶ್ರೀವೇಂಕಟನಾಥಾಚಾರ್ಯ ಗುರುಗಳ ಶ್ರೀಮದ್ರಹಸ್ಯತ್ರಯ ಸಾರವು ಶ್ರೀ ವೈಷ್ಣವ ಪ್ರಸ್ಥಾನ ಗ್ರಂಥಗಳಲ್ಲಿ ಅಗ್ರಮಾನ್ಯತೆ ಪಡೆದ ಗ್ರಂಥರತ್ನವಾಗಿದ್ದು, ಮುಮುಕ್ಷುವು ಅವಶ್ಯವಾಗಿ ಅನುಸಂಧಿಸಿ ಅರ್ಥವರಿಯಬೇಕಾದ ನಾಲ್ಕು ದಿವ್ಯಗ್ರಂಥಗಳಲ್ಲಿ ಒಂದಾಗಿದೆ. ಗುರುಮುಖೇನ ಇದನ್ನು ಕಾಲಕ್ಷೇಪ ಕ್ರಮದಲ್ಲಿ ಕೇಳಿ, ತತ್ತ್ವ, ಹಿತ, ಪುರುಷಾರ್ಥಗಳನ್ನರಿತು, ಪ್ರಪನ್ನನು ತನ್ನ ಜೀವನವನ್ನು ಭಗವದ್ಭಾಗವತ ಕೈಂಕರ್ಯದಲ್ಲಿ ಸವೆಸಬೇಕಾದ ಅವಶ್ಯಕತೆಯೂ ಸಂಪ್ರದಾಯದಲ್ಲಿ ಬಂದಿದೆ ಶ್ರೀ ಮದ್ರಾಮಾನುಜಾಚಾರ್ಯರು ಬ್ರಹ್ಮಸೂತ್ರಗಳಿಗೆ ಬೋಧಾಯನ ವೃತ್ತ್ಯನುಸಾರಿಯಾಗಿಯೂ ಟಂಕದ್ರಮಿಡಾದಿ ಪೂರ್ವಾಚಾರ್ಯಾಭಿಪ್ರಾಯಾನು ಗುಣವಾಗಿಯೂ ಶ್ರೀ ಭಾಷ್ಯವನ್ನು ಅನುಗ್ರಹಿಸಿ ಉಪಕರಿಸಿದಂತೆ, ಶ್ರೀ ವೇದಾನ್ತದೇಶಿಕರೂ, ಪರಂಪರೆಯಲ್ಲಿ ಕಿವಿಯಿಂದ ಕಿವಿಗೆ ಮಾತ್ರ ಹೋಗುತ್ತಾ, ಬರೆವಣಿಗೆಯಲ್ಲಿ ಬಾರದೇ ಉಳಿದಿದ್ದ ಮೂಲಮಂತ್ರ, ದ್ವಯಮಂತ್ರ, ಚರಮ ಶ್ಲೋಕಗಳೆಂಬ ಮೂರು "ರಹಸ್ಯ"ಗಳ ದಿವ್ಯಾರ್ಥ ಸಾಗರವನ್ನೆಲ್ಲಾ ಕ್ರೋಡೀಕರಿಸಿ, ವೇದ, ಶಾಸ್ತ್ರ, ಪಾಂಚರಾತ್ರ, ಇತಿಹಾಸ, ಪುರಾಣ, ಧರ್ಮಶಾಸ್ತ್ರಾದಿ ಸಕಲ ಪ್ರಮಾಣ ಪೂರ್ವಕವಾಗಿ ಜ್ಞೇಯಾರ್ಥಗಳನ್ನು ನಿರ್ಧರಿಸಿ, ಸಂಶಯ ವಿಪರ್ಯಯಾದಿಗಳಿಗೆ ಅವಕಾಶವಿಲ್ಲದಂತೆ, ಈ ಪ್ರಪತ್ತಿ ಶಾಸ್ತ್ರವನ್ನು ಈ ರೂಪದಲ್ಲಿ ಅನುಗ್ರಹಿಸಿರುವರು ಪ್ರಪತ್ತಿಯ ಸ್ವರೂಪ, ಅದರ ಅಂಗಗಳ ಸ್ವರೂಪ, ಪರಸ್ಪರ ಸಂಬಂಧ, ಪ್ರಪತ್ತಿಗೆ ಅಧಿಕಾರಿಯಾಗುವವನ ಯೋಗ್ಯತೆ, ಪ್ರಪತ್ತಿ – ಭಕ್ತಿಗಳ ಅಂತರ, ಪ್ರಪನ್ನನಿಗಿರಬೇಕಾದ ಜ್ಞಾತ ಸ್ವರೂಪ, ಪ್ರಪನ್ನನ ಅನುಷ್ಠಾನ ಪ್ರಕಾರ, ಕೈಂಕರ್ಯ ಸ್ವರೂಪ, ಮೂರು ರಹಸ್ಯ ಮಂತ್ರಗಳಲ್ಲಿ ಅಡಗಿರುವ ದಿವ್ಯ ಜ್ಞಾನ, ದಿವ್ಯ ಕ್ರಿಯಾದಿಗಳ ಸ್ವರೂಪ, ಹೀಗೆ ಅನೇಕ ವಿಷಯಗಳನ್ನೂ, ಒಟ್ಟಿನಲ್ಲಿ ಶ್ರೀಭಾಷ್ಯಕಾರರು ಗದ್ಯಗಳಲ್ಲೂ ಶ್ರೀ ಭಾಷ್ಯಾದಿ ಗ್ರಂಥಗಳಲೂ ವಿಶದೀಕರಿಸಿರುವ ಅರ್ಥಗಳನ್ನೂ, ಅಲ್ಲಲ್ಲಿ ಕೆಲವು ಸೂಚನೆಗಳಲ್ಲಿ ಮಾತ್ರ ಉಳಿಸಿಟ್ಟ ಅರ್ಥಗಳನ್ನೂ ಒಂದೆಡೆ ಸೇರಿಸಿ, ಬೆಳೆಸಿ, ಸಮನ್ವಯಿಸಿ, ವಿಶಿಷ್ಟಾದ್ವೈತ ಸಿದ್ಧಾಂತಕ್ಕೂ, ಶ್ರೀ ವೈಷ್ಣವ ಧರ್ಮಕ್ಕೂ ಮಹೋಪಕಾರ ಮಾಡಿ ರಾಮಾನುಜ ದರ್ಶನಕ್ಕೆ ಭದ್ರಕೋಟೆಯೊಂದನ್ನೇ ನಿರ್ಮಿಸಿದ್ದಾರೆ

•

ಶ್ರೀ ಮದ್ರಹಸ್ಯತ್ರಯಸಾರವು ಶ್ರೀ ದೇಶಿಕರು ಹೀಗೆ ಅನುಗ್ರಹಿಸಿದ ರಹಸ್ಯ ಗ್ರಂಥಗಳಲ್ಲಿ ಮುಖ್ಯವೂ, ಅತಿವಿಸ್ತೃತವೂ, ಅತಿ ಗಂಭೀರವೂ, ಸಮಗ್ರವೂ ಆದ ಕೃತಿ ಇದರ ಭಾಷೆ ಸಂಸ್ಕೃತ ಮಿಶ್ರವಾದ (ಭೂಯಿಷ್ಠವಾದ) ತಮಿಳು. ವಿದ್ವದ್ಗೋಷ್ಠಿಗಳಲ್ಲಿ ವಿಚಾರ ವಿನಿಮಯವು ಸಾಮಾನ್ಯವಾಗಿ ಇಂದೂ ನಡೆಯುತ್ತಿರುವ ಒಂದು ಸುಲಭ ಭಾಷೆ. ಇದನ್ನು ಮಣಿ ಪ್ರವಾಳವೆನ್ನುವರು. ಇದನ್ನು ಬರವಣಿಗೆಯಲ್ಲಿ ಮೊದಲು ಆರಂಭಿಸಿದವರು, ಶ್ರೀ ರಾಮಾನುಜ ಮಾತುಲರಾದ ಶ್ರೀ ಪೆರಿಯ ತಿರುಮಲೈನಂಬಿಗಳ ಕುಮಾರರೂ, ಶ್ರೀ ರಾಮಾನುಜ ಸಚ್ಛಿಷ್ಯಾಗ್ರೇಸರರೂ ಆದ ಶ್ರೀ ತಿರುಕ್ಕುರುಗೈ ಪ್ಪಿರಾನ್ ಪಿಳ್ಳಾನ್ ನಮ್ಮಾಳ್ವಾರರ

ತಿರುವಾಯ್‌ಮೊೞಿಗೆ ಪ್ರಥಮ ವ್ಯಾಖ್ಯಾನವಾದ ಶ್ರೀ ಆರಾಯಿರಪ್ಪಡಿಯು ಈ ಆಚಾರ್ಯರ ಕೈಯಲ್ಲಿ ಅವತರಿಸಿದ್ದೇ ಈ ಭೋಗ್ಯ ಭಾಷೆಯಲ್ಲಿ.

ಶ್ರೀ ಪಿಳ್ಳೈಲೋಕಾಚಾರ್ಯರ ಪರ್ಯಂತ ರಹಸ್ಯತ್ರಯಗಳಾದ, ಶ್ರೀ ಅಷ್ಟಾಕ್ಷರ ಮಂತ್ರ, ದ್ವಯಮಂತ್ರ, ಚರಮ ಶ್ಲೋಕಗಳ ಅರ್ಥಗಳು ಗ್ರಂಥಸ್ಥವಾಗಲಿಲ್ಲ ಗುರುಮುಖೇನ ಕೇಳಿದವರ ಪಾಲಿಗೆ ಮಾತ್ರ ದೊರೆಯುತ್ತಿದ್ದವು ಅಷ್ಟೆ. ಪುನಃ ಅರ್ಥಾನುಸಂಧಾನಕ್ಕೆ ಪ್ರಪನ್ನನು ನೆನಪನ್ನೇ ಮಾತ್ರ ಅವಲಂಬಿಸುತ್ತಿದ್ದ ಕಾಲ ಅದು ಇವರು ಅನುಗ್ರಹಿಸಿದ ಹದಿನೆಂಟು ರಹಸ್ಯಗ್ರಂಥಗಳು, ಆ ಹೊತ್ತಿಗಾಗಲೇ ಶ್ರೀ ಭಾಷ್ಯಕಾರರ ಶಿಷ್ಯ ಪ್ರಶಿಷ್ಯಾದಿ ಪರಂಪರೆಗಳಲ್ಲಿ ಹರಿದು ಬಂದು ಕಿವಿಯಲ್ಲಿ ಅಲ್ಲಲ್ಲಿ ಮೇಧಾವೀ ಆಚಾರ್ಯರ ಹೃದಯಗಳಲ್ಲಿ ಉಳಿದ ಅರ್ಥರಾಶಿಗಳ ಪೈಕಿ ಅರ್ಥ ಗ್ರಹಿಕೆಯ ಪ್ರಕಾರಗಳಲ್ಲಿ ಭಿನ್ನತೆಯು ಏರ್ಪಟ್ಟಿದ್ದು ಈ ಆಚಾರ್ಯರ ಕಿರಿಯ ಸಮಕಾಲೀನರಾಗಿದ್ದ ಶ್ರೀ ದೇಶಿಕರು ಈ ಅರ್ಥಭಿನ್ನತೆಗಳ ಸಾಮಂಜಸ್ಯ ಸಮನ್ವಯ ನಿರೂಪಣೆಯ ಮಹಾಕಾರ್ಯಕ್ಕೆ ಕೈ ಹಾಕುವ ಅವಶ್ಯವಾಯಿತು. ಯಾವ ಆಚಾರ್ಯರನ್ನೂ ಗೌರವಿಸಿಯೇ, ಯಾರ ಮನಸ್ಸನ್ನೂ ನೋಯಿಸದೆಯೇ, ಪರಮ ಸಾತ್ತ್ವಿಕನಾಗಿಯೇ, "ಅಭಿಯುಕ್ತರ" ಅರ್ಥರಾಶಿಯನ್ನು ಏಕ ಪ್ರಕಾರವನ್ನಾಗಿಸಿರುವ ಶ್ರೀ ದೇಶಿಕರ ಕಾರ್ಯ ಸ್ತುತ್ಯವೂ, ಅಪೂರ್ವವೂ, ವಿಸ್ಮಯಕಾರಕವೂ, ಅದ್ಭುತವೂ ಆಗಿದೆಯೆನ್ನಬೇಕು "ಶ್ರೀ ಭಾಷ್ಯಕಾರರ ಶಿಷ್ಯ ಸಂಪ್ರದಾಯಗಳಲ್ಲಿ ಎಲ್ಲೂ, ಅರ್ಥಭೇದವಿಲ್ಲ. ವಾಕ್ಯಯೋಜನಾಭೇದ ಮಾತ್ರವೇ ಇದೆ, ಎಂದು (**ಸಂಪ್ರದಾಯ ಪರಿಶುದ್ಧಿಯಲ್ಲಿ**) ಅನುಗ್ರಹಿಸಿದ ಆಚಾರ್ಯರ ಹೃದಯ ವೈಶಾಲ್ಯವೂ ನಮ್ಮ ಇಂದಿನವರ ಮನಸ್ಸಿಗೆ ಬರಬೇಕಾಗಿದೆ. ಅತಿರೇಕದ, ವೈಭವವಾದಗಳ, ಅರ್ಥ ವೈಷಮ್ಯಗಳ, ಪ್ರಸ್ಥಾನಗಳ ಸ್ಥಾನಮಾನಗಳ ವೈಪರೀತ್ಯಗ್ರಹಿಕೆಗಳ ಏರುಪೇರುಗಳಲ್ಲಿ ಕಡಿವಾಣ ಹಾಕಿ, ಉಭಯ ವೇದಾಂತ ಸಾಮರಸ್ಯವನ್ನೂ ಮನೋಜ್ಞವಾಗುವಂತೆ, ಸಮತೋಲದ ಭಾಷೆಯಲ್ಲಿ ಸ್ಥಾಪಿಸಿ, ಶ್ರೀ ವೈಷ್ಣವರಿಗೆ ಪೂಜ್ಯವೂ ಗ್ರಾಹ್ಯವೂ ಆದ ಬಹು ಗ್ರಂಥಗಳ ಸಾರತಮ ಭಾಗಗಳನ್ನು ಅರ್ಥ ವಿಶೇಷಗಳನ್ನೂ ಒಗ್ಗೂಡಿಸಿ "ಪರಿಮಿತ ಗಂಭೀರ ಭಾಷಿ" ಎಂದೆನಿಸುವಂತೆ ರಚಿಸಿಕೊಟ್ಟು ಉಪಕರಿಸಿದ ಶ್ರೀ ದೇಶಿಕರಂಥಹ ಇನ್ನೊಬ್ಬ ಆಚಾರ್ಯರು ಇಲ್ಲವೆಂದೇ ಎನ್ನಬೇಕು. ಬ್ರಾಹ್ಮಣರು, ವರ್ಣಬಾಹಿರರು ಎಂಬ ಭೇದವಿಲ್ಲದಂತೆ, ಪಂಡಿತರು—ಪಾಮರರು ಅಂತರವಿಲ್ಲದಂತೆ, ಸಾತ್ತ್ವಿಕರೂ ಪ್ರಪನ್ನರೂ ಆದ ಎಲ್ಲರಿಗೂ ಅರ್ಥಗಳು ದೊರೆಯುವಂತೆ ಈ ಗ್ರಂಥವನ್ನನುಗ್ರಹಿಸಿದ ಹೃದಯ ವೈಶಾಲ್ಯವೂ (Catholicity) ನಮ್ಮ ಮನಸ್ಸಿಗೆ ಬರಬೇಕಾಗಿದೆ. ಶ್ರೀ ಭಾಷ್ಯವನ್ನು ಬಿಟ್ಟರೆ 'ಇದೇ ಶ್ರೀ ವೈಷ್ಣವರ ಎರಡನೆಯ ಮಹಾನಿಧಿಯೆಂದೂ, ಶ್ರೀ ಭಾಷ್ಯಾರ್ಥಗಳನ್ನು ಒಳಗೊಂಡಿರುವುದರಿಂದ ಅದಕ್ಕಿಂತಲೂ ಹೆಚ್ಚು ಪ್ರಿಯವೂ, ಭೋಗ್ಯವೂ, ಸುಲಭವೂ, ಪ್ರಪನ್ನ ಹೃದಯ ಸಮೀಪವೂ ಎಂದೂ ಹಿರಿಯರು ಶ್ರೀ ಮದ್ರಹಸ್ಯತ್ರಯಸಾರವನ್ನು ಗೌರವಿಸುವುದು ಇದರಿಂದಲೇ.

ಇಂಥ ಅಪೂರ್ವ ಗ್ರಂಥಕ್ಕೆ ಪ್ರಾಚೀನವಾದ ಪಂಚವ್ಯಾಖ್ಯಾನಗಳುಂಟು ಅವು **ಸಾರದೀಪಿಕೆ, ಸಾರಾಸ್ವಾದಿನೀ ಸಾರ ಪ್ರಕಾಶಿಕೆ, ಸಾರವಿವರಿಣೀ, ಸಾರ ಸಂಗ್ರಹಗಳೆಂಬವು** ಈ ಐದಲ್ಲದೆ, ಶ್ರೀ ಇಂಜಿಮೇಡು ಅೞಗಿಯಶಿಂಗರೆಂದು ಪ್ರಸಿದ್ಧರಾದ ಶ್ರೀವಣ್ ಶಠಕೋಪ ಶ್ರೀರಂಗಶಠಕೋಪ ಯತೀಂದ್ರ ಮಹಾದೇಶಿಕರು (ಶ್ರೀ ಅಹೋಬಿಲ ಮಠದ ೪೨ನೆಯ ಆಸ್ಥಾನ ಪತಿಗಳು) ಅನುಗ್ರಹಿಸಿದ **ಸಾರಬೋಧಿನಿಯೂ**, ಈಚೆಗೆ ಶ್ರೀ ಉಭ ವೇ ಉತ್ತಮೂರು ವೀರರಾಘವಾಚಾರ್ಯರು ಅನುಗ್ರಹಿಸಿದ **ಸಾರವಿಸ್ತಾರವೂ** ಸೇರಿ ಸಪ್ತ ವ್ಯಾಖ್ಯಾನಗಳು ಪ್ರಸಿದ್ಧವಿದ್ದರೂ ಇಂದು ಕೊನೆಯದೊಂದನ್ನು (ತಮಿಳು ಲಿಪಿಯಲ್ಲಿ) ಬಿಟ್ಟರೆ ಉಳಿದವಾವುವೂ ದೊರಕುವುದಿಲ್ಲ. ಪ್ರಾಚೀನ ಮುದ್ರಣದ ಈ ಕೋಶಗಳು ದೈವ ಕೃಪೆಯಿಂದ ದೊರೆತರೂ, ಕಾಲಕ್ಷೇಪ ಕ್ರಮದಲ್ಲಿ ಕೇಳಿ ಬಾರದವರಿಗೆ ಅವು ಪ್ರಯೋಜಕವೂ ಆಗುವಂತಿಲ್ಲ.

ಈ ಕೊರತೆಯನ್ನು ಕನ್ನಡ ನಾಡಿನ ಮಟ್ಟಿಗಾದರೂ ನೀಗಲು ಶ್ರೀ ಉ|ವೇ| ಸ. ಮಾ. ಕೃಷ್ಣಮಾಚಾರ್ಯ

ಸ್ವಾಮಿಗಳು ಮುಂದೆ ಬಂದು ಈ ಎಲ್ಲ ಪ್ರಕಟಿತ ಪ್ರಾಚೀನ ವ್ಯಾಖ್ಯಾನಗಳನ್ನೂ ಸಂಗ್ರಹಿಸಿ, ಈವರೆಗೆ ಪ್ರಕಟವಾಗದ ಶ್ರೀ ಕರೂರು ಸ್ವಾಮಿಗಳ **ಸಾರತಾತ್ಪರ್ಯ ಕೌಮುದೀ**ಯನ್ನೂ ಸೇರಿಸಿ, ಅತಿ ಸಂಗ್ರಹವೂ ಅತಿ ವಿಸ್ತರವೂ ಅಲ್ಲದ ಭೋಗ್ಯ ಶೈಲಿಯಲ್ಲಿ ಅರ್ಥಗಳನ್ನು ನಾತಿರೇಕವಿಲ್ಲದಂತೆ, ಈಗ ಈ **ಸಾರಚಂದ್ರಿಕೆ**ಯೆಂಬ ವ್ಯಾಖ್ಯಾನವನ್ನು ರಚಿಸಿ ಪ್ರಕಟಿಸಿರುವುದು ಕನ್ನಡ ನಾಡಿನ ಶ್ರೀವೈಷ್ಣವರ ಭಾಗ್ಯವೆಂದು ಹೇಳಬೇಕಾಗಿದೆ.

ಶ್ರೀ ಕೃಷ್ಣಮಾಚಾರ್ಯ ಸ್ವಾಮಿಗಳ ಪರಿಚಯವಿಲ್ಲದ ಶ್ರೀ ವೈಷ್ಣವರು ಅತಿವಿರಳ. ಆಚಾರ್ಯ ಕೃಪಾಕಟಾಕ್ಷಕ್ಕೆ ಪೂರ್ಣಪಾತ್ರರಾದ ಈ ಮಹನೀಯರು ಈಗಾಗಲೇ ಶ್ರೀ ವೈಷ್ಣವ ಸಮಾಜಕ್ಕೂ ಆಸ್ತಿಕ ವರ್ಗಕ್ಕೂ ಮಾಡಿದ ಸೇವೆಗಳು ಅವಿಸ್ಮರಣೀಯ. ಬೆಂಗಳೂರಿನಲ್ಲಿ ಶ್ರೀ ಮಾಲೋಲನೃಸಿಂಹ ಮಂದಿರ ಸ್ಥಾಪನೆ, ನಿತ್ಯೋತ್ಸವಾದಿಗಳ ವ್ಯವಸ್ಥೆ, ಸರಗೂರೆಂಬ ತಮ್ಮ ಶ್ರೀ ಗ್ರಾಮದಲ್ಲಿ ದೇವಾಲಯ ಜೀರ್ಣೋದ್ಧಾರ, ಸನಾತನ ಧರ್ಮಸಭೆಯ ಸ್ಥಾಪನೆ, ಪೂರ್ವಾಪರ ಪ್ರಯೋಗಗಳ ಮುದ್ರಣ, ಹೀಗೆ ಅನೇಕ ರೀತಿಗಳಲ್ಲಿ ಪ್ರಾಚೀನ ಸಂಪ್ರದಾಯರಕ್ಷೆಗೆ ಈ ಮಹನೀಯರು ಹಗಲಿರುಳೂ ದುಡಿದವರು. ದಕ್ಷರೂ, ಪ್ರಾಮಾಣಿಕರೂ, ವಿದ್ವಾಂಸರೂ, ವಿದ್ವತ್ಪ್ರಿಯರೂ, ಸಜ್ಜನರೂ, ಆಚಾರ್ಯಭಕ್ತಿ ನಿಷ್ಠರೂ, ವಿನಯಾನ್ವಿತರೂಪವಾದ ಸಮರ್ಥರೂ, ಅಪೂರ್ವ ಶೈಲಿಯಲ್ಲಿ ಗ್ರಂಥನಿರ್ಮಾಣ ನಿಪುಣರೂ, ವಾಗ್ಮಿಗಳೂ ಆದ ಈ ಮಹಾಪುರುಷರು ಈ ದಿವ್ಯ ಗ್ರಂಥ ಪ್ರಕಾಶಕ್ಕೆ ಆವಶ್ಯವಾದ ದ್ರವ್ಯ ಸಂಗ್ರಹವನ್ನೂ ನಾನಾ ಮುಖೇನ ಮಾಡಿಕೊಂಡು, ಸಮರ್ಥ ಸಂಪಾದಕ ಮಂಡಳಿಯನ್ನು ರಚಿಸಿ, ಅವರ ಸಲಹೆಗಳನ್ನು ಉಪಯೋಗಿಸಿ, ತಾವೇ ಈ ಅದ್ಭುತ ವ್ಯಾಖ್ಯಾನವನ್ನು ಮಾಡಿ, ಅವಿರತವಾದ ತಮ್ಮ ಕಾರ್ಯಬಾಹುಳ್ಯ ಮಧ್ಯದಲ್ಲಿ ಒಂದು ಸವಾಲನ್ನೇ ಮಾಡಿ ತೋರಿಸಿದ್ದಾರೆ. ಕೈಂಕರ್ಯಾಸಕ್ತರಿಗೆ ದೇವರು ಒದಗಿ ಬರುವನೆಂಬುದಕ್ಕೆ ಇದೊಂದು ನಿದರ್ಶನ.

ಈ ಮಹನೀಯರ ಕೃಪಾಕಟಾಕ್ಷಕ್ಕೆ ಬಿದ್ದವನು ಈ ಲೇಖಕದಾಸ. ಶ್ರೀ ಕೃಷ್ಣಮಾಚಾರ್ಯರು ಹಿಡಿದ ಕೆಲಸವನ್ನು ಎಂದೂ ಬಿಡದವರೆಂಬುದನ್ನು ಕಣ್ಣಿಂದ ಕಂಡವನು. ದಾಸನು ನಡೆಸಿದ ಅಲ್ಪ ಗ್ರಂಥ ಕೈಂಕರ್ಯವನ್ನು ಕಂಡು, ಕೇಳಿ, ದೂರದಲ್ಲಿದ್ದವನನ್ನೂ ಹತ್ತಿರ ಸೆಳೆದುಕೊಂಡು, ಗುಣೈಕ ಪಕ್ಷಪಾತಿಗಳಾಗಿ, ದಾಸನಿಗೆ ಈ ಲೇಖನವನ್ನು ಬರೆಯುವಂತೆ ನಿಯಮಿಸಿದವರು. ಶಿಷ್ಟಾಗ್ರೇಸರರೂ, ಬುಧಾಗ್ರೇಸರರೂ, ಶಿಷ್ಟಾಚಾರ–ವಿಚಾರ ಸಂರಕ್ಷಕರೂ, ಆಗಿರುವ ಈ ಮಹನೀಯರ ಆಜ್ಞೆಯನ್ನು ಲಂಘಿಸಲಾರದೆ ನಾಲ್ಕು ಮಾತುಗಳನ್ನು ಗ್ರಂಥಾವಲೋಕನ ರೀತಿಯಲ್ಲಿ ಬರೆಯುವ ಭಾಗ್ಯವೊದಗಿದುದು ಒಂದು ಪ್ರಸಾದವೇ.

ಪ್ರಕೃತ **ಸಾರಚಂದ್ರಿಕಾ** ವ್ಯಾಖ್ಯಾನದಲ್ಲಿ, ಅದರೊಡನೆ ಮೂಲ ಗ್ರಂಥವೂ ಸೇರಿದ್ದು ವಾಚಕರಿಗೆ ಮೂಲವನ್ನು ಅನುಸಂಧಿಸುತ್ತಾ, ಅರ್ಥವನ್ನು ಅನುಭವಿಸುವ ಯೋಗವಾಗುವಂತೆ ಗ್ರಂಥವನ್ನು ಮುದ್ರಿಸಲಾಗಿದೆ. ಶೈಲಿಯ ಭೋಗ್ಯತೆಯನ್ನು ಓದಿಯೇ ತಿಳಿಯಬೇಕು.

ಶ್ರೀಮದ್ರಹಸ್ಯತ್ರಯಸಾರದ **ಅರ್ಥಾನುಶಾಸನ ಭಾಗ**ವೆಂದು ಪರಿಗಣಿತವಾದ ಮೊದಲು ೨೨ ಅಧಿಕಾರಗಳೂ ಪ್ರಕೃತ ಗ್ರಂಥದಲ್ಲಿ ವ್ಯಾಖ್ಯಾತವಾಗಿವೆ. ಇನ್ನುಳಿದ ಹತ್ತು ಅಧಿಕಾರಗಳೂ ಬೇಗ ವ್ಯಾಖ್ಯಾನದಲ್ಲಿ ಹೊರ

ಬರುವಂತೆ ಶ್ರೀ ಮಾಲೋಲ ನೃಸಿಂಹನೂ ಪೂರ್ವಾಚಾರ್ಯರೂ ಅನುಗ್ರಹಿಸಬೇಕೆಂದು ಕೋರುತ್ತಾ, ಶ್ರೀ ಕೃಷ್ಣಮಾಚಾರ್ಯರ ಈ ಸಾಹಸಕ್ಕೆ ಮಂಗಳಾ ಶಾಸನ ಮಾಡುವ.

ಶ್ರೀವೈಷ್ಣವ ಪಾದರೇಣುಃ

ದಿನಾಂಕ 1–2–1990

ಕಂದಾಡೈ ಶ್ರೀ ನಾರಾಯಣಾಚಾರ್ಯ
ಮುಖ್ಯಸ್ಥರು, ಆಂಗ್ಲಸಾಹಿತ್ಯ ವಿಭಾಗ,
ಕರ್ನಾಟಕ ಆರ್ಟ್ಸ್ ಕಾಲೇಜು
ಧಾರವಾಡ

ಶ್ರೀಮತೇ ಲಕ್ಷ್ಮೀನೃಸಿಂಹ ಪರಬ್ರಹ್ಮಣೇನಮಃ

ಶ್ರೀಮತೇ ಶಠಗೋಪಾಯ ನಮಃ ।

ಶ್ರೀಮತೇ ರಾಮಾನುಜಾಯ ನಮಃ ।

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ !

ಶ್ರೀಮತೇ ಸುಂದರಸೌಮ್ಯ ನಾರಾಯಣಾರ್ಯ ಮಹಾದೇಶಿಕಾಯ ನಮಃ ।

ಶ್ರೀಮತೇ ಶ್ರೀನಿವಾಸ ಗೋಪಾಲಾರ್ಯ ಮಹಾದೇಶಿಕಾಯ ನಮಃ ।

ವಿಜ್ಞಾಪನೆ

ಶ್ರೀ ಮನ್ನಿಗಮಾಂತ ಮಹಾದೇಶಿಕನ್‌ರವರು, ತಮ್ಮ ಚರಮದಶೆಯಲ್ಲಿ ಶ್ರೀ ಮದ್ರಹಸ್ಯತ್ರಯಸಾರವೆಂಬ ಸತ್ಸಂಪ್ರದಾಯಾರ್ಥ ಗರ್ಭಿತವಾದ ಗ್ರಂಥರತ್ನವನ್ನು ಅನುಗ್ರಹಿಸಿರುತ್ತಾರೆ. ಶ್ರಿಯಃ ಪತಿಯು ಮಹಾಲಕ್ಷ್ಮಿಗೆ ಉಪದೇಶಿಸಿ, ಅವಳು ವಿಷ್ವಕ್ಸೇನರಿಗೆ ಉಪದೇಶಿಸಿ, ವಿಷ್ವಕ್ಸೇನರು ನಮ್ಮಾಳ್ವಾರಿಗೆ ಉಪದೇಶಿಸಿ, ತನ್ಮೂಲಕ ಪರಂಪರೆಯಾಗಿ ಶ್ರೀ ಭಾಷ್ಯಕಾರರಿಗೆ ಉಪದೇಶಿಸಿಲ್ಪಟ್ಟು, ಅವರ ಶಿಷ್ಯ ಪ್ರಶಿಷ್ಯರುಗಳ ಮೂಲಕ ಶ್ರೀಮನ್ನಿಗ ಮಾಂತ ಮಹಾದೇಶಿಕನ್‌ರವರಿಗೆ ಉಪದೇಶ ಮಾಡಲ್ಪಟ್ಟ ಪರಮರಹಸ್ಯಾರ್ಥವಿದು. ಶ್ರೀ ಭಾಷ್ಯಕಾರರ ಹದಿನೆಂಟಾವರ್ತಿ ತಿರುಕ್ಕೋಟ್ಟಿಯೂರ್ ನಂಬಿಗಳ ಪಾದ ಪದ್ಮಗಳಲ್ಲಿ ನಮಸ್ಕರಿಸಿ ಪ್ರಾರ್ಥಿಸಿ, ಚಿರ ಪರೀಕ್ಷೆ ಯಿಂದ ನಂಬಿಗಳು ಪರಮಕೃಪೆಯಿಂದ ಉಪದೇಶಿಸಿದ ಪರಮ ರಹಸ್ಯಾರ್ಥಗಳೂ ಇವುಗಳೇ. ಶ್ರೀ ಭಾಷ್ಯಕಾರರು ತಮ್ಮನ್ನು ಆಶ್ರಯಿಸಿದ ಶಿಷ್ಯರಗಳಿಗೆಲ್ಲಾ ಈ ಸಾರಾರ್ಥಗಳನ್ನು ಉಪದೇಶಿಸಿದರು. ಅವರುಗಳಲ್ಲಿ ಮಡೈಪ್ಪಳ್ಳಿ ಯಾಚ್ಚಾನ್ ಎಂದು ಸುಪ್ರಸಿದ್ಧರಾದ ಪ್ರಣತಾರ್ತಿಹರ ವರದ ಗುರುಗಳು ಆಗಾಗ್ಯೆ ಸಂಶಯಗಳನ್ನೆಲ್ಲಾ ಶ್ರೀ ಭಾಷ್ಯಕಾರರಿಂದ ಕೇಳಿ ತಿಳಿದುಕೊಂಡು ತಮ್ಮ ಶಿಷ್ಯರುಗಳಿಗೆ ಉಪದೇಶಿಸಿದುದರಿಂದ, ಈ ಸಂಪ್ರದಾಯಾರ್ಥಗಳಿಗೆ "ಮಡೈಪ್ಪಳ್ಳಿವಂದಮಣಮ್" – "ಯತಿರಾಜ ಮಹಾನಸ ಪರಿಮಳ" ಎಂದು ವ್ಯಪದೇಶ.

ಈ ಅರ್ಥಗಳನ್ನೇ ಕೂರತ್ತಾಳ್ವಾನ್, ಪರಾಶರಭಟ್ಟರ್, ನಂಜೀಯರ್ ಪ್ರಭೃತಿಗಳೂ ತಮ್ಮ ಪಂಚಸ್ತವ, ಶ್ರೀ ಗುಣರತ್ನಕೋಶ, ಶ್ರೀಸ್ತವ, ಶ್ರೀಸೂಕ್ತಭಾಷ್ಯಾದಿಗಳಲ್ಲಿ ನಿರೂಪಿಸಿರುತ್ತಾರೆ ಶ್ರೀ ಮನ್ನಿಗಮಾಂತ ಮಹಾ ದೇಶಿಕರು ಈ ಗ್ರಂಥಗಳನ್ನು ಆದರಿಸಿ, ತಾವು ಹೇಳುವ ಸಂಪ್ರದಾಯಾರ್ಥಗಳಿಗೆ ಪ್ರಮಾಣವಾಗಿ ಅಲ್ಲಲ್ಲೇ ಎತ್ತಿ ತೋರಿಸಿರುತ್ತಾರೆ ಕಾಲಕ್ರಮದಲ್ಲಿ ಉಪದೇಶ ಪರಂಪರೆಯಲ್ಲಿ ಬಂದ ಅರ್ಥಗಳಲ್ಲಿ ಅತಿವಾದಗಳು ತಲೆದೋರಿ, ಅವುಗಳನ್ನೇ ಯಥಾರ್ಥವಾಗಿ ಗ್ರಹಿಸಿ ವಿಪರೀತಾರ್ಥಗಳೂ, ಮುಖ್ಯವಾಗಿ ತತ್ವಹಿತ ಪುರುಷಾರ್ಥಗಳಲ್ಲಿಯೂ, ವಿಶೇ ಷತಃ ಪ್ರಪತ್ತಿ ಶಾಸ್ತ್ರದಲ್ಲಿಯೂ ಭಿನ್ನಾರ್ಥಗಳೂ ತಲೆ ದೋರಿದುವು. ಪರಮತ ಖಂಡನೆ ಮಾಡಿ ಸ್ವಮತ ಸ್ಥಾಪನೆ ಯನ್ನು ಮಾಡಿದ ಆಚಾರ್ಯರಿಗೆ, ಸ್ವಮತದಲ್ಲಿಯೇ ಒಡಕುಗಳು ಉಂಡಾಗಿದುದಕ್ಕೆ ವ್ಯಸನವು ಏರ್ಪಟ್ಟು, ತಮ್ಮ ಅವತಾರದ ಪರಮ ಪ್ರಯೋಜನವೆಂದು ಹೇಳುವಂತೆ ಈ ಗ್ರಂಥ ರತ್ನವನ್ನು ರಚಿಸಿ, ಆ ಭಿನ್ನಾರ್ಥಗಳನ್ನು ಸರಿ ಪಡಿಸಿ ಸಂಪ್ರದಾಯವನ್ನು ರಕ್ಷಿಸಿದ್ದಾರೆ. ನಮ್ಮಾಳ್ವಾರ್, ನಾಥಮುನಿಗಳು, ಆಳವಂದಾರ್, ಶ್ರೀ ಭಾಷ್ಯಕಾರರೇ ಮೊದಲಾದ ಪರಮಾಚಾರ್ಯರುಗಳು ಅನುಷ್ಠಿಸಿ ಬಂದ ಶರಣಾಗತಿ ಶಾಸ್ತ್ರಾರ್ಥದಲ್ಲಿ ಏರ್ಪಟ್ಟ ಸಂಶಯ ವಿಪರ್ಯಯ ಗಳನ್ನು ಹೋಗಲಾಡಿಸಿ, ಆ ಶಾಸ್ತ್ರಾರ್ಥಗಳನ್ನು ರಕ್ಷಿಸಿಕೊಟ್ಟ ಪರಮೋಪಕಾರವು ಶ್ರೀ ಮನ್ನಿಗಮಾಂತ ಮಹಾ ದೇಶಿಕರವರಿಗೇ ಸಲ್ಲತಕ್ಕದ್ದು. ಇದರಿಂದಾಗಿ ಭಕ್ತಿ ವಿದ್ಯೆಯಲ್ಲಿ ಅಧಿಕಾರವಿಲ್ಲದ, ಅಕಿಂಚನರಾದ ನಾವು ಈವತ್ತಿಗೂ

ಸದಾಚಾರ್ಯ ಸಮಾಶ್ರಯಣವನ್ನು ಮಾಡಿ, ಪ್ರಪತ್ತಿ ವಿದ್ಯೆಯನ್ನು ಅನುಷ್ಠಿಸಿ ಮೋಕ್ಷವನ್ನು ಪಡೆಯುವವರಾಗಿದ್ದೇವೆ ಪ್ರಪತ್ತಿ ವಿದ್ಯೆಯು ಮೋಕ್ಷಕ್ಕೆ ಸಾಕ್ಷಾತ್ ಸಾಧನವೆಂದು ಎತ್ತಿ ಹೇಳಿ, ಅವುಗಳ ಅಂಗಾಂಗಿಗಳ ಸ್ವರೂಪವನ್ನು ಸಪ್ರಮಾಣವಾಗಿ ನಿರೂಪಿಸಿ, ಇದು ವಿಧೇಯಾತ್ಮಕವಾದ ಜ್ಞಾನ ವಿಶೇಷವೆಂದು ಸ್ಥಾಪಿಸಿದ ಹಿರಿಮೆಯು ಆಚಾರ್ಯರಿಗೇನೆ ಸಲ್ಲತಕ್ಕದುದು ಇಂಥಹ ವಾದ ವಿಪ್ರತಿಪತ್ತಿಗಳಿಗೆ ಇದಕ್ಕೆ ಪೂರ್ವದಲ್ಲಿ ಅವಕಾಶವಿರಲಿಲ್ಲವೆಂದು ಹೇಳಿದರೂ ತಪ್ಪಾಗಲಾರದು. ಇದರಿಂದಾಗಿ ಈಶ್ವರನ ಚೇತನೋದ್ಧಾರಣ ಕೃತ್ಯವು ಇಲ್ಲಿಗೆ ಸಫಲಗೊಂಡಿದೆ.

ಶ್ರೀ ಮನ್ನಿಗಮಾಂತ ಮಹಾದೇಶಿಕರವರು ಭಗವದ್ರಾಮಾನುಜರ ಶ್ರೀ ಭಾಷ್ಯಾದಿ ಗ್ರಂಥಗಳ ಅನವರತ ಪರಿಚಯದಿಂದ ತಮ್ಮ ಆಯುಸ್ಸನ್ನು ಕಳೆದುದಾಗಿ, "ನಿರ್ವಿಷ್ಟಂ ಯತಿಸಾರ್ವಭೌಮವಚಸಾಂ ಆವೃತ್ತಿಭಿರ್ಯೌವನಂ", ಎಂದು ಅನುಸಂಧಾನ ಮಾಡಿದ್ದಾರೆ. ಪರವಾದಿ ನಿರಸನ ಮಾಡಿ ಸ್ವಮತ ಸ್ಥಾಪನೆಯನ್ನು ಮಾಡಲು, ಶತದೂಷಣೀ ತತ್ವಮುಕ್ತಾ ಕಲಾಪಾದಿ ಉದ್ಗ್ರಂಥಗಳನ್ನು ರಚಿಸಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ನಿಷ್ಕಂಟಕವಾಗಿ ಸ್ಥಾಪಿಸಿರುತ್ತಾರೆ ಪಂಡಿತ ಪಾಮರ ಜನ ಹೃದಯಂಗಮವಾಗಿ ಕಾವ್ಯ ನಾಟಕಗಳನ್ನೂ ಸ್ತೋತ್ರಪಾಠಗಳನ್ನೂ ರಚಿಸಿ ವೇದಾಂತಾರ್ಥಗಳನ್ನು ಎಲ್ಲರೂ ಸುಲಭವಾಗಿ ತಿಳಿದುಕೊಳ್ಳಲು ಅವಕಾಶವನ್ನು ಕಲ್ಪಿಸಿರುತ್ತಾರೆ. ಹಾಗೆಯೇ ಚಿಲ್ಲರೆ ರಹಸ್ಯ ಗ್ರಂಥಗಳೆಂದು ಕರೆಯಲ್ಪಡುವ ಚಿಕ್ಕ ಪುಟ್ಟ ಗ್ರಂಥಗಳನ್ನು ರಚಿಸಿ ಕಾಲಾವಕಾಶವಿಲ್ಲದ ಈಗಿನ ಕಾಲದವರೂ,ಸುಲಭವಾಗಿಯೂ ಸಂಗ್ರಹವಾಗಿಯೂ ವೇದಾಂತಾರ್ಥಗಳನ್ನು ತಿಳಿದುಕೊಂಡು ಆತ್ಮೋಜ್ಜೀವನವನ್ನು ಪಡೆಯಲು ಸಹಕರಿಸಿದ್ದಾರೆ

ಪ್ರಕೃತ ಶ್ರೀಮದ್ರಹಸ್ಯತ್ರಯಸಾರವು ವಿಸ್ತಾರವಾಗಿ ಸಕಲವೇದಾಂತಾರ್ಥಗಳನ್ನೂ ನಿರೂಪಿಸುವ ಸಂಪ್ರದಾಯ ಗ್ರಂಥವು ಇದು ಅರ್ಥಾನುಶಾಸನಭಾಗ (22 ಅಧಿಕಾರ), ಸ್ಥಿರೀಕರಣ ಭಾಗ (4 ಅಧಿಕಾರ ಪದವಾಕ್ಯ ಯೋಜನಾಭಾಗ (3 ಅಧಿಕಾರ), ಸಂಪ್ರದಾಯ ಪ್ರಕ್ರಿಯಾಭಾಗ (3 ಅಧಿಕಾರ) ವೆಂದು ನಾಲು ವಿಭಾಗವಾಗಿ, 32 ಅಧಿಕಾರಗಳಿಂದ ಕೂಡಿದೆ

ವೇದ ಪ್ರಾಮಾಣ್ಯ

"ಅಖಿಲ ಶ್ರುತೀಯಂ ರಾಮಾನುಜೀಯಂ" ಎಂದು ವಿಶಿಷ್ಟಾದ್ವೈತಿಗಳಾದ ನಾವು ಸರ್ವ ಶ್ರುತಿಗಳಿಗೂ ಅಂದರೆ ಭೇದಾ ಭೇದ ಘಟಕ ಶ್ರುತಿಗಳಿಗೆ ಮುಖ್ಯ ಪ್ರಾಮಾಣ್ಯವನ್ನು ಅಂಗೀಕರಿಸಿದ್ದೇವೆ ವೇದಗಳು ಅಪೌರುಷೇಯ. ಇದನ್ನು ಶ್ರೀ ಭಾಷ್ಯಾದಿಗಳಲ್ಲಿ ವಿಸ್ತಾರವಾಗಿ ನಿರೂಪಿಸಿರುತ್ತಾರೆ. ವೇದಾಂತಾರ್ಥಗಳನ್ನು ಇತಿಹಾಸ ಪುರಾಣಗಳ ಮೂಲಕ ವಿಶದವಾಗಿ ತಿಳಿದು ಅದಕ್ಕನುಗುಣವಾಗಿಯೇ ಪೂರ್ವಾಚಾರ್ಯರ ಶ್ರೀ ಸೂಕ್ತಿಗಳು ಬರೆಯಲ್ಪಟ್ಟಿವೆ. ಇದರಲ್ಲಿ ಒಂದು ವೈಶಿಷ್ಟ್ಯವಿದೆ. ನಿತ್ಯಸೂರಿಗಳ ಅವತಾರರಾದ ನಮ್ಮಾಳ್ವಾರ್ ಪ್ರಭೃತಿಗಳ ದಿವ್ಯ ಸೂಕ್ತಿಗಳು ಉಪಬೃಂಹಣಗಳಲ್ಲಿ ಶ್ರೇಷ್ಠವಾದವು ಇವುಗಳನ್ನು ದ್ರಮಿಡ ವೇದವೆಂದು ನಾವು ವಿಶೇಷವಾಗಿ ಆದರಿಸುತ್ತೇವೆ. ಈ ಆಳ್ವಾರುಗಳು ಭಗವಂತನ ಸ್ವರೂಪ ಸ್ವಭಾವಗಳನ್ನು ಸಾಕ್ಷಾತ್ಕರಿಸಿ, ಸಾಕ್ಷಾತ್ಕರಿಸಿದ ರೀತಿಯಲ್ಲಿಯೇ ತಮ್ಮ ದಿವ್ಯಸೂಕ್ತಿಗಳಲ್ಲ ನಿರೂಪಿಸಿರುತ್ತಾರೆ ಭಕ್ತಿ ಪೂರಿತವಾದ ಶ್ರೀ ಸೂಕ್ತಿಗಳಿವು. ಸಂಪ್ರದಾಯಾರ್ಥಗಳಿಗೆ ಇವುಗಳು ಮೂಲ. "ಪರಮಪುರುಷನ್ನೈ ಉಳ್ಳಪಡಿಯೇ ಆೞ್ವಾರ್ ತಾಮ್ ತಮ್ಮುಡೈಯ ತಿರುವುಳ್ಳತ್ತಾಲೇ ಅನುಭವಿತ್ತು ಅವ್ವನುಭವಜನಿತ ನಿರವಧಿಕ ಪ್ರೀತಿಯಾಲೇ ಅವನ್ನೈ ಅನುಭವಿತ್ತಪಡಿಯೇ ಪೇಶುಹಿರಾರ್" ಎಂದು ನಮ್ಮಾಳ್ವಾರ್ ತಿರುವಾಯ್ ಮೊೞಿಗೆ ಭಗವದ್ರಾಮಾನುಜರು ಉಪದೇಶಿಸಿದ ಅರ್ಥಗಳನ್ನು ಅವರ ಜ್ಞಾನ ಪುತ್ರರಾದ ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ ಅವರು 'ತಿರುವಾರಾಯಿರಪ್ಪಡಿ' ಎಂಬ ಗ್ರಂಥದಲ್ಲಿ ಅನುಗ್ರಹಿಸಿರುವಾಗ ಬರೆದಿರುವ ಅವತಾರಿಕೆಯಿದು

ಇದರಿಂದಾಗಿ ನಮ್ಮ ಸಿದ್ಧಾಂತವು ಸಂಸ್ಕೃತ ದ್ರಾವಿಡಾತ್ಮಕವಾದ ಉಭಯ ವೇದಾಂತಗಳಿಂದ ಪರಿಕರ್ಮಿತ

ವಾದದ್ದು. ಈ ಪ್ರಾಶಸ್ತ್ಯವು ಇತರ ಸಿದ್ಧಾಂತಿಗಳಿಗೆಬಾರದು. ಶಾಸ್ತ್ರಗಳ ಮೂಲಕವಾಗಿಯೂ, ಪ್ರತ್ಯಕ್ಷವಾಗಿ ಉಪದೇಶ ಮೂಲಕವಾಗಿಯೂ ತಿಳಿದ ಸಕಲ ವೇದಾಂತಾರ್ಥಗಳನ್ನೂ ಪರಸ್ಪರ ವಿರುದ್ಧವಿಲ್ಲದೆ ನಿರೂಪಿಸಲ್ಪಟ್ಟ ಉಭಯ ವೇದಾಂತ ಸಿದ್ಧಾಂತವಿದು.

> ಅಂದಮಿಲಾಪ್ಪೇರಿನ್ಬಮರುಂದ ವೇರ್ಕುಮಲ್, ಅಡಿಯೋಮ್ಕ್ಕು ಅರಿವುಡನೇಎನ್ರುಂಕಾತ್ತು
> ಮುಂದೈವಿಸ್ಯ ನಿರೈವಳ್ಳಿಯಿಲೊಳ್ಳುಹಾದ್ಮೈಮ್ಕ್ಕು ಮುನ್ನಿಲ್ಲೈಯಾಂದೇಶಿಕರ್ತಮ್ ಮುನ್ನೇಶೇರ್ತ್ತು,
> ಮಂದಿರಮುಮ್ ಮಂದಿರತ್ತಿನ್ ವಳ್ಳಿಯುಂಕಾಟ್ಟಿ, ವಳ್ಳಿಪ್ಪಡುತ್ತಿವಾನೇತ್ತಿ ಅಡಿಮೈಕೊಳ್ಳ,
> ಕಂದೆಮೈನ ನಿನ್ರು ತನಿತ್ತಿರುಮಾಲ್ ತಾಳಿಲ್ ವೈಲೈವೈತ್ತೋಮ್ ಶರಗೋಪನರುಳಿನಾಲೇ ||
>
> (ಅಮ್ರುತಾಸ್ವಾದಿನೀ–28)

ಎಂದು ಅಮೃತಾ ಸ್ವಾದಿನಿಯಲ್ಲಿ ಹೇಳಲ್ಪಟ್ಟಂತೆ ನಾವುಗಳೆಲ್ಲಾ ಶರಣಾಗತಿಯನ್ನು ಅನುಷ್ಠಿಸಿ ಭಗವಂತನ ಪಾದಾರವಿಂದಗಳನ್ನು ಪಡೆಯುವುದು ನಮ್ಮಾಳ್ವಾರವರ ಕೃಪೆಯಿಂದಲೇ ಮೇಲೂ ತಿರುವಷ್ಟಾಕ್ಷರವನ್ನು ಸಾರ್ಥವಾಗಿ ಸರ್ವೇಶ್ವರನಿಂದ ಪಡೆದ ತಿರುಮಂಗೈಯಾಳ್ವಾರ್ ಪ್ರಬಂಧಗಳೂ ಆ ಅಷ್ಟಾಕ್ಷರದಲ್ಲಿ ನಿರೂಪಿಸಿರುವ ಪರಮರಹಸ್ಯರ್ಥಗಳೇನು ದೇವತಾಂತರ ಭಜನ ಪರಿತ್ಯಾಗವೇನು, ಭಾಗವತ ಕೈಂಕರ್ಯ ಪ್ರಾಧಾನ್ಯವೇನು ಇವುಗಳಿಗೆ ಮೂಲ ಪ್ರಮಾಣಗಳಾಗಿವೆ ತಿರುಪ್ಪಾಣಾಳ್ವಾರ್ ಸಾಧಿಸಿರುವ 'ಅಮಲನಾದಿಪಿರಾನ್' ಪ್ರಬಂಧವೂ ಅಷ್ಟಾಕ್ಷರದ ಅರ್ಥ ವಿಶೇಷಗಳನ್ನು ಯಥಾರ್ಥವಾಗಿ ಪ್ರತಿಪಾದಿಸುತ್ತವೆಯೆಂಬುದನ್ನು "ಅಮಲನಾದಿ ಪಿರಾನ್", ವ್ಯಾಖ್ಯಾನದಲ್ಲಿ ಆಚಾರ್ಯರು ಪ್ರತಿಪಾದಿಸಿ, "ವೇದಿಯರ್ ತಾಮ್ ವಿರಿತ್ತುರೈಕ್ಕುಂವಿಳ್ಳೈವುಕ್ಕೆಲ್ಲಾಂ ವಿದ್ಯೆಯಾಹುಮಿದು"–ವೇದಗಳನ್ನು ಅರಿತವರು ವಿಸ್ತಾರವಾಗಿ ನಿರೂಪಿಸಿರುವ ಅರ್ಥಗಳಿಗೆ ಈ ಅಷ್ಟಾಕ್ಷರವೂ ಅದರ ಅರ್ಥಪ್ರತಿ ಪಾದಕವಾದ "ಅಮಲನಾದಿಪಿರಾನ್" ಪ್ರಬಂಧವೂ ಬೀಜವೆಂದು ಹೇಳಿರುತ್ತಾರೆ ಅದೂ ಅಲ್ಲದೆ "ಪಾಣ್ ಪೆರುಮಾಳ್ ಪಾಡಿಯದೋರ್ಪಾಡಲ್ಪತ್ತುಂ ಪಳ್ಳಮರೈಯಿನ್ ಪೊರುಳೆನ್ರು ಪರವುಹಿನ್ರೋಮ್" ಎಂದು "ಅಮಲನಾದಿಪಿರಾನ್" ಪ್ರಬಂಧವು ಅನಾದಿಯಾದ ವೇದಗಳ ಸಾರವೆಂದು ಹೊಗಳಿದ್ದಾರೆ.

ಹೀಗೆಯೇ ಹತ್ತು ಆಳ್ವಾರುಗಳೂ ಉಪದೇಶಿಸಿರುವ, ಶೆಯ್ಯುತಮಿಳ್ಳುಮಾಲೈಹಳ್ – ಋಜುಗಳಾದ ತಮಿಳು ಪ್ರಬಂಧಗಳನ್ನು, ನಾವು ಗುರು ಮುಖವಾಗಿ ಅಧ್ಯಯನ ಮಾಡಿ, ವೇದಗಳಲ್ಲಿ ತಿಳಿಯದ ಅರ್ಥವಿಶೇಷಗಳನ್ನೆಲ್ಲಾ, ತಿಳಿವಾಗಿ ತಿಳಿದು ಕೊಂಡಿದ್ದೇವೆಂದು, 'ಪೊಯ್ಹೈಮುನಿಪೂದತ್ತಾರ್' ಎಂದಾರಂಭಿಸುವ ಅಧಿಕಾರ ಸಂಗ್ರಹದ ಮೊದಲನೆಯ ಪಾಶುರದಲ್ಲಿ ಅನುಗ್ರಹಿಸಿರುತ್ತಾರೆ ಇದರಿಂದಾಗಿ ಆಳ್ವಾರುಗಳ ಪ್ರಬಂಧಗಳು ಸಂಪ್ರದಾಯಾರ್ಥಕ್ಕೆ ಮೂಲಗಳು ಎಂಬುದು ಏರ್ಪಡುತ್ತದೆ.

"ಇತ್ಥಂ ಶಾರೀರಕಾರ್ಥ ಕ್ರಮಮಿಹವಿಶದಂವಿಂಶತಿರ್ವಕ್ತಿ ಸಾಗ್ರಾ" ಎಂದು ದ್ರಮಿಡೋಪನಿಷತ್ತಾತ್ಪರ್ಯ ರತ್ನಾವಳಿಯಲ್ಲಿ ಶಾರೀರಕ ಮಿಮಾಂಸೆಯ ಅರ್ಥಗಳನ್ನು ನಮ್ಮಾಳ್ವಾರ್ ಪ್ರಬಂಧಗಳ ಮೊದಲು ಇಪ್ಪತ್ತು ಪಾಶುರಗಳೂ ಕೊನೆಯಲ್ಲಿ "ಶಾರ್ವೇತವನೆರಿಕ್ಕು (10 – 4) ಎಂದಾರಂಭಿಸಿ ಕೊನೆಯವರೆಗೆ ಹಾಡಿರುವ ಪಾಶುರಗಳೂ ಉಪದೇಶಿಸುತ್ತವೆಯೆಂದು ಆಚಾರ್ಯರು ಅನುಗ್ರಹಿಸಿರುವುದರಿಂದ ಇವುಗಳೇ ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟಿರುವ ಸಂಪ್ರದಾಯಾರ್ಥಗಳಿಗೆ ಮೂಲಭೂತಗಳೆಂದು ತಿಳಿಸಲ್ಪಡುತ್ತವೆ.

ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ, ಆಚಾರ್ಯಸಾರ್ವಭೌಮರು ರಹಸ್ಯತ್ರಯಸಾರದ ಕೊನೆಯಲ್ಲಿ, "ಇವ್ವರ್ಥಂಗಳೆಲ್ಲಾಮ್ ಸತ್ಸಂಪ್ರದಾಯತ್ತೋಡೇ ಶ್ರೀ ಭಾಷ್ಯಂ ಚಿರಕಾಲಂ ಪರಿಚಯಂ ಪಣ್ಣಿನ ಮಹಾನ್ಗಳುಕ್ಕು ನಿಲವಾಹುಮ್" ಎಂದು ತಾವು ರಹಸ್ಯತ್ರಯಸಾರದಲ್ಲಿ ಅನುಗ್ರಹಿಸಿರುವ ಅರ್ಥಗಳೆಲ್ಲಾ ಸತ್ಸಂಪ್ರದಾಯದೊಡನೆ ಅಂದರೆ ಮೇಲೆ ಹೇಳಿದ ಆಳ್ವಾರುಗಳ ಶ್ರೀಸೂಕ್ತಿಗಳೊಡನೆ ಶ್ರೀ ಭಾಷ್ಯವನ್ನು ಅನೇಕಾವರ್ತಿ

ಕಾಲಕ್ಷೇಪ ಮಾಡಿದವರಿಗೇನೆ ಸ್ಥಿರ ಪ್ರತಿಷ್ಠಿತವಾಗತ್ತವೆ ಎಂದು ಅನುಗ್ರಹಿಸಿರುತ್ತಾರೆ "ಮಾರನ್ ಮರೈಯುಮ್ ಇರಾಮಾನುಜನ್ ಭಾಷ್ಯಮುಮ್ ತೇರುಂ ಪಡಿಯುರೈಕ್ಕುಮ್ ಶೀರ್" – ನಮ್ಮಾಳ್ವಾರವರ ವೇದವಾದ ತಿರುವಾಯ್‌ಮೊಳಿಯನ್ನೂ ಭಗವದ್ರಾಮಾನುಜರ ಶ್ರೀ ಭಾಷ್ಯವನ್ನೂ ಒಂದು ಗೂಡಿಸಿ ಉಪದೇಶಿಸುವ ಸಾಮರ್ಥ್ಯವನ್ನುಳ್ಳವರು, ಎಂದು ಶ್ರೀ ದೇಶಿಕರನ್ನು ಅವರ ಶಿಷ್ಯರು ಗುಣಗಾನ ಮಾಡಿರುವುದು ಗಮನಾರ್ಹ.

ಏತಾವತಾ ಆಳ್ವಾರುಗಳ ಶ್ರೀ ಸೂಕ್ತಿಗಳೇ ಸತ್ಸಂಪ್ರದಾಯಾರ್ಥ ಬೋಧಕಗಳು. ನಮ್ಮ ಪೂರ್ವಾಚಾರ್ಯರುಗಳು ಸಂಸ್ಕೃತವೇದ, ದ್ರಮಿಡ ವೇದವೆಂಬ ಉಭಯ ವೇದಗಳಲ್ಲಿ ಪರಿನಿಷ್ಠಿತ ಜ್ಞಾನರಾಗಿ, ಉಭಯ ವೇದಾಂತಾಚಾರ್ಯರೆಂದು ಕೊಂಡಾಡಲ್ಪಡುತ್ತಾರೆ. ಈ ಎರಡು ವೇದಗಳೂ ಪರಸ್ಪರ ಹೊಂದಿಕೊಂಡಿವೆ ಸಂಸ್ಕೃತ ವೇದದ ಅರ್ಥವನ್ನು ದ್ರಮಿಡವೇದವು ವಿಶದೀಕರಿಸುತ್ತದೆ ಭಗವದ್ರಾಮಾನುಜರೂ ಶ್ರೀ ಭಾಷ್ಯ ಗ್ರಂಥವನ್ನು ಬೋಧಾಯನ ವೃತ್ತಿಗ್ರಂಥವನ್ನನುಸರಿಸಿಯೂ ಆಳ್ವಾರುಗಳ ಸೂಕ್ತಿಗಳಿಂದ ಲಭ್ಯವಾದ ಉಪದೇಶಾರ್ಥಗಳ ಆಧಾರದ ಮೇಲೆಯೂ ಅನುಗ್ರಹಿಸಿದ್ದಾರೆಂಬುದು ಹಿರಿಯರ ಮಾತು. ಹೀಗೆ ಉಭಯವೇದಾಂತಾರ್ಥಗಳನ್ನೂ ಶ್ರೀಮದ್ರಹಸ್ಯತ್ರಯಸಾರದಲ್ಲಿ ಶ್ರೀ ಮನ್ನಿಗಮಾಂತ ಮಹಾದೇಶಿಕರವರು ಅನುಗ್ರಹಿಸಿರುವುದರಿಂದ, ಈ ಗ್ರಂಥರತ್ನವನ್ನು ಸದಾಚಾರ್ಯ ಸಕಾಶದಿಂದ ಕಾಲಕ್ಷೇಪ ಮಾಡಿದವರಿಗೆ ವೇದಾಂತ ಜ್ಞಾನವು ಸುಪ್ರತಿಷ್ಠಿತವಾಗುವುದರಲ್ಲಿ ಸಂಶಯವಿಲ್ಲ.

ಈ ಅದ್ಭುತ ಗ್ರಂಥರತ್ನವು ಬಹಳ ವರ್ಷಗಳ ಹಿಂದೆ ಕನ್ನಡದಲ್ಲಿ ಸವ್ಯಾಖ್ಯಾನ ರೂಪದಲ್ಲಿ ಸಿ ಯಂ ವಿಜಯರಾಘವಾಚಾರ್ಯರೆಂಬ ಮಹಾಪುರುಷರೊಬ್ಬರಿಂದ ಬರೆದು ಅಚ್ಚಿಡಲ್ಪಟ್ಟಿತ್ತು. ಆ ಶ್ರೀ ಕೋಶವು ಈಗ ಲಭ್ಯವಿಲ್ಲ ಇದರಿಂದಾಗಿ ಭಾಗವತರ ಪ್ರೇರೇಪಣೆಯಿಂದಲೂ, ಮುಖ್ಯವಾಗಿ ಶ್ರೀ ಮದಭಿನವರಾಮಾನುಜ ಬ್ರಹ್ಮತಂತ್ರ ಪರಕಾಲ ಮಹಾದೇಶಿಕನ್‌ರವರ ದಿವ್ಯಾನುಗ್ರಹದಿಂದಲೂ ಅರ್ಥ ಸಹಾಯದಿಂದಲೂ ಈ ದಿವ್ಯಗ್ರಂಥವನ್ನು ಸವ್ಯಾಖ್ಯಾನ ಅಚ್ಚಿಡಲು ಅವಕಾಶವಾಯಿತು "ಶ್ರೀ ಲಕ್ಷ್ಮೀಹಯಗ್ರೀವನ ಅನುಗ್ರಹವು ನಿಮಗಿದೆ ಸೇವೆ ಬರೆಯಿರಿ" ಎಂಬುದನ್ನು ಶ್ರೀ ಶ್ರೀ ಸ್ವಾಮಿಗಳವರ ದಿವ್ಯಾದೇಶ ಶ್ರೀ ಮದಭಿನ ರಂಗನಾಥ ಬ್ರಹ್ಮತಂತ್ರ ಪರಕಾಲ ಮಹಾದೇಶಿಕನ್‌ರವರು ಶ್ರೀ ಲಕ್ಷ್ಮೀಹಯಗ್ರೀವನ ದಿವ್ಯಾಸ್ಥಾನವನ್ನು ಅಲಂಕರಿಸಿದ್ದಾಗ ಅವರ ದಿವ್ಯ ಕಟಾಕ್ಷಕ್ಕೆ ದಾಸನು ಪರಿಪೂರ್ಣ ಪಾತ್ರನಾಗಿ, ಹತ್ತಾರು ವರ್ಷ ಶ್ರೀ ಹಯಗ್ರೀವನ ಸನ್ನಿಧಿಯಲ್ಲಿ ವೇದ ಪ್ರಬಂಧಾಧ್ಯಯನ ಮಾಡಿ ಹಯಗ್ರೀವನ ಕೃಪಾಕಟಾಕ್ಷಕ್ಕೆ ಪಾತ್ರನಾದವನು

"ಅರಿಯಾಕ್ಕಾಲತ್ತುಳ್ಳೇ ಅಡಿಮೈಕ್ಕಣ್ ಅನ್ಬುಶೆಯ್‌ವಿತ್ತು ಅರಿಯಾ ಮಾಮಾಯಡಿತ್ತಯೇನ್ನೈ ವೈತ್ತಾಯಾಲ್" ಎಂಬಂತೆ ಬಾಲ್ಯದಲ್ಲಿಯೇ ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಸರ್ವತಂತ್ರ ಸ್ವತಂತ್ರೋಭಯ ವೇದಾಂತಾಚಾರ್ಯ ಭಗವದ್ರಾಮಾನುಜ ಸಿದ್ಧಾಂತ ನಿರ್ಧಾರಣ ಸಾರ್ವಭೌಮರಾದ **ಗೋಷ್ಠೀಪುರಂ ಸುಂದರ ಸೌಮ್ಯ ನಾರಾಯಣಾರ್ಯ ಮಹಾದೇಶಿಕನ್‌ರವರ** ದಿವ್ಯಕಟಾಕ್ಷಕ್ಕೆ ಪಾತ್ರನಾಗಿ ಅವರಿಂದ ಚಕ್ರಾಂಕಿತನಾಗಿ ರಹಸ್ಯ ಮಂತ್ರೋಪದೇಶವನ್ನು ಸಾರ್ಥವಾಗಿ ಪಡೆದು, ಅವರ ಪಾದಪದ್ಮದಲ್ಲಿಯೇ ಆತ್ಮ ರಕ್ಷಾಭರಸಮರ್ಪಣವನ್ನು ಮಾಡಿ ಕೃತಾರ್ಥನಾದವನು ಈ ಚೇತನನು. ಆ ಆಚಾರ್ಯವರ್ಯರ ಪರಮಾನುಗ್ರಹಕ್ಕೆ ಪಾತ್ರರಾಗಿ ಗ್ರಂಥ ಚತುಷ್ಟಯಗಳನ್ನೂ ಅವರ ಪಾದ ಪದ್ಮಗಳಲ್ಲಿಯೇ ಅಧಿಕರಿಸಿ, ಆತ್ಮರಕ್ಷಾಭರವನ್ನೂ ಅವಾದಪದ್ಮಗಳಲ್ಲಿಯೇ ಸಮರ್ಪಿಸಿ ಧನ್ಯಧನ್ಯರಾದ, ನಮ್ಮ ಪೂಜ್ಯ ಪಿತೃವರ್ಯರಾದ **ಸರಗೂರು ಮಾಡಭೂಷಣಂ ಶ್ರೀನಿವಾಸ ಗೋಪಾಲಾಚಾರ್ಯ ಮಹಾದೇಶಿಕನ್‌ರವರ** ಪಾದಪದ್ಮಗಳ ಸೇವಾಸಮಧಿಗತ ಸಕಲವೇದಾಂತಾರ್ಥಗಳನ್ನುಳ್ಳವನು ಈ ದಾಸನು. ಹಾಗೆಯೇ ಶ್ರೀ ಉಭ ವೇ ಪುತ್ತಂಕೋಟ್ಟಕಂ ಶ್ರೀನಿವಾಸಾಚಾರ್ಯ ಮಹಾದೇಶಿಕರಲ್ಲಿಯೂ ಮಧುರಾಂತಕ ವೀರರಾಘವಾಚಾರ್ಯ ಮಹಾದೇಶಿಕರಲ್ಲಿಯೂ ಈಗ ಲಕ್ಷ್ಮೀನೃಸಿಂಹಾಸ್ಥಾನವನ್ನಲಂಕರಿಸಿರುವ ಶ್ರೀ ಪರಮಹಂಸೇತ್ಯಾದಿ ವೇದಾಂತ ದೇಶಿಕ ಯತೀಂದ್ರ ಮಹಾದೇಶಿಕನ್‌ರವರಲ್ಲಿಯೂ ವೇದಾಂತ ಗ್ರಂಥಗಳ ಪರಿಚಯವನ್ನು ಮಾಡಿದ ಭಾಗ್ಯವಿದೆ.

ಹೀಗೆ ಆಚಾರ್ಯರುಗಳು ಪರಮಾನುಗ್ರಹಗಳಿಂದ ಲಭಿಸಿದ ಸಂಪ್ರದಾಯಾರ್ಥಗಳನ್ನೂ ಪೂರ್ವಾಚಾರ್ಯರುಗಳ ವ್ಯಾಖ್ಯಾನಗಳನ್ನೂ ಮುಖ್ಯವಾಗಿ ಇಂಜಿಮೇಡು ಅಳಗಿಯ ಶಿಂಗರ್ ಅನುಗ್ರಹಿಸಿದ ಸಾರಬೋಧಿನಿ ಮತ್ತು ಕರೂರು ಸ್ವಾಮಿಗಳೆಂದು ಜಗದ್ವಿಖ್ಯಾತರಾದ ರಂಗರಾಮಾನುಜ ಮುನಿವರು ಅನುಗ್ರಹಿಸಿದ "ಸಾರತಾತ್ಪರ್ಯ ಕೌಮುದಿ" ಎಂಬ ವ್ಯಾಖ್ಯಾನವನ್ನೂ ಅವಲಂಬಿಸಿ ದಾಸನು ಈ ಗ್ರಂಥರತ್ನಕ್ಕೆ ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆದಿರುತ್ತೇನೆ. ಇದರಲ್ಲಿ ಗುಣ ಭಾಗಗಳು ಆಚಾರ್ಯಾನುಗ್ರಹದಿಂದ ಲಭಿಸಿದುವು. ದೋಷಗಳಿದ್ದರೆ ಅದು ದಾಸನದು. ಪಂಡಿತರು ಆ ದೋಷಗಳನ್ನು ಎತ್ತಿತೋರಿಸಿ ಉಪಕರಿಸಿದರೆ ದಾಸನು ಕೃತಾರ್ಥನಾಗುತ್ತೇನೆ ಮುಂದಿನ ಗ್ರಂಥಗಳಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳಲು ಸದವಕಾಶವು ಲಭಿಸುತ್ತದೆ.

ಈ ವ್ಯಾಖ್ಯಾನವು ಆಚಾರ್ಯರ ತಮಿಳ್ ಶ್ರೀ ಸೂಕ್ತಿಗೆ ಕನ್ನಡದಲ್ಲಿ ಅರ್ಥಪರಿವರ್ತನಾತ್ಮಕವಾಗಿ ಬರೆಯಲ್ಪಟ್ಟಿದೆ ಅಲ್ಲಲ್ಲೇ ಮೂಲ ಶ್ರೀ ಸೂಕ್ತಿಯನ್ನು ಪ್ರತೀಕವಾಗಿ ಎತ್ತಿ ಅರ್ಥವನ್ನು ಬರೆದಿರುವುದರಿಂದ ಯಾವ ಪಂಕ್ತಿಗೆ ಯಾವುದು ಅರ್ಥವೆಂಬುದು ತಿಳಿಯುತ್ತದೆ. ಕ್ಲಿಷ್ಟಪದಗಳಿಗೆ ಅರ್ಥವೂ ಬರೆಯಲ್ಪಟ್ಟಿದೆ. ಅಲ್ಲಲ್ಲೇ ಶ್ರೀ ಸೂಕ್ತಿಗಳಿಗೆ ಭಾವಾರ್ಥಗಳೂ, ಬರೆಯಲ್ಪಟ್ಟಿವೆ ಪ್ರತಿ ಅಧಿಕಾರದಲ್ಲಿಯೂ ಆಚಾರ್ಯರು ಅನುಗ್ರಹಿಸಿರುವ ವಿಷಯಗಳಿಗೆ ಶೀರ್ಷಿಕೆಯನ್ನಿಟ್ಟು ಸಂಗತಿಗಳನ್ನು ಬರೆದಿರುವುದರಿಂದ ವಾಚಕರಿಗೆ ವಿಷಯಗಳು ಸುಲಭವಾಗಿ ಮನದಟ್ಟಾಗುವುವೆಂಬುದು ದಾಸನ ಅಭಿಪ್ರಾಯ. ಮತ್ತೊಂದು ಪ್ರಧಾನ ವಿಷಯ. ಕೆಲವೆಡೆಗಳಲ್ಲಿ ಶ್ರೀ ದೇಶಿಕರ ವಾಕ್ಯಗಳು ಬಹಳ ವಿಸ್ತಾರವಾಗಿವೆ. ವ್ಯಾಖ್ಯಾನದಲ್ಲಿ ಅವುಗಳನ್ನು ಮಧ್ಯೆ ಮಧ್ಯೆ ಕ್ರಿಯಾಪದಗಳನ್ನು ಸೇರಿಸಿ ಚಿಕ್ಕ ಚಿಕ್ಕ ವಾಕ್ಯಗಳಾಗಿ ಬರೆದಿರುತ್ತೇನೆ. ಹಾಗೆ ಬರೆಯುವಾಗ ಮೂಲ ಗ್ರಂಥದ ಪದಕ್ಕೆ ಉದಾಹರಣೆ, "ನಿರ್ಕ" ಎಂಬುದಕ್ಕೆ "ನಿಂತಿರುತ್ತಾನೆ" ಎಂದು ಅರ್ಥಮಾಡಿ ವಾಕ್ಯವನ್ನು ಮುಗಿಸಿದ್ದೇನೆ ಇದನ್ನು ಸಹೃದಯರು ಸರಿಯಾದ ಭಾವನೆಯಿಂದ ತಿಳಿದುಕೊಂಡು ಓದಬೇಕಾಗಿ ಪ್ರಾರ್ಥನೆ.

ಈ ಗ್ರಂಥದ ಮೊದಲೆರಡು ಭಾಗಗಳನ್ನು ಅಚ್ಚಿಡಲು ಶ್ರೀ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಮಹಾದೇಶಿಕನ್‌ರವರ ಆರ್ಥಿಕ ಸಹಾಯವು ಬಹಳ ನೆರವಾಗಿದೆ. ಹಾಗೆಯೇ ಸರಗೂರು ಸನಾತನ ಧರ್ಮ ಸಭೆಯವರೂ, ಪ್ರಕಾಶನಗರ ಶ್ರೀ ವೈಷ್ಣವ ಸಭೆಯವರೂ, T.T D. ದೇವಸ್ಥಾನದ ಅಧಿಕಾರಿಗಳೂ ಧನಸಹಾಯ ಮಾಡಿ ಬಹಳ ಉಪಕರಿಸಿದ್ದಾರೆ. ಇವರುಗಳಿಗೆಲ್ಲಾ ದಾಸನು ಕೈಜೋಡಿಸಿ ನಮಸ್ಕರಿಸಿ ಕೃತಜ್ಞತೆಯನ್ನು ವ್ಯಕ್ತಪಡಿಸಿಕೊಳ್ಳುತ್ತೇನೆ. ಇನ್ನೂ ಕೆಲವರು ಮುಂದಾಗಿಯೇ ಶ್ರೀ ಕೋಶಕ್ಕೆ ಒಂದೊಂದು ಪ್ರತಿಗೆ ಸಹಾಯ ಮಾಡಿರುತ್ತಾರೆ. ಅವರುಗಳಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಹೀಗೆಯೇ ಇನ್ನೂ ಇತರ ಆಸ್ತಿಕ ಸಂಸ್ಥೆಯರೂ, ದಾನಿಗಳೂ ಮುಂದೆ ಬಂದು ಸಹಾಯ ಮಾಡಿದರೆ ಉಳಿದ ಭಾಗಗಳೂ ಶೀಘ್ರದಲ್ಲೇ ಅಚ್ಚಾಗಲು ಉಪಕಾರವಾಗುತ್ತದೆ.

ಈ ಶ್ರೀ ಕೋಶದ ಮಾತೃಕೆಯನ್ನು ಶೋಧಿಸಿ ಕೊಡಲು ಮತ್ತು ಇತರ ಸಹಾಯಗಳನ್ನು ನೀಡಿ ದೇಹಧಾರಣ ನಿಮಿತ್ತ ಅಂತರ್ಯಾಮ್ಯಾರಾಧನವನ್ನೂ ನಿರ್ವಹಿಸಿ ಬಂದು ದಾಸನ ಸಹ ಧರ್ಮಚಾರಿಣಿಯೂ ಬಹಳ ಉಪಕರಿಸಿದ್ದಾಳೆ. ಇವಳಿಗೆ ಆಚಾರ್ಯರುಗಳ ಕಟಾಕ್ಷವು ಪರಿಪೂರ್ಣವಾಗಿದ್ದು, ದೀರ್ಘಸೌಮಂಗಲ್ಯಾದಿ ಸರ್ವಮಂಗಳಗಳನ್ನೂ ಆಚಾರ್ಯರುಗಳೂ ದಿವ್ಯದಂಪತಿಗಳೂ ಅನುಗ್ರಹಿಸಲೆಂದು ಹಾರೈಸುತ್ತೇನೆ

ಈ ಗ್ರಂಥವನ್ನು ಅಂದವಾಗಿ ಅಚ್ಚಿಟ್ಟ 'ಅವಿನಾಶ್ ಪ್ರಿಂಟರ್ಸ್' ಅವರಿಗೂ ನಮ್ಮ ಅನಂತ ಧನ್ಯವಾದಗಳು. ಗ್ರಂಥದಲ್ಲಿರುವ ಅಕ್ಷರಸ್ಖಾಲಿತ್ಯಗಳನ್ನು ಪಂಡಿತರು ತಿದ್ದಿಕೊಂಡು ಓದಬೇಕಾಗಿ ಪ್ರಾರ್ಥನೆ.

ಈ ಗ್ರಂಥವನ್ನು ಪರಾಮರ್ಶಿಸಿ ಇದಕ್ಕೆ "ಪ್ರಸ್ತಾವನೆ"ಯನ್ನು ಅನುಗ್ರಹಿಸಿದ ಶ್ರೀ ಉಭ. ಪರಮಹಂಸ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಮಹಾದೇಶಿಕನ್‌ರವರಿಗೂ, ಅವರ ನಿಯಮನವನ್ನು ಶಿರಸಾವಹಿಸಿ ಬರೆದುಕೊಟ್ಟ ಆಸ್ಥಾನ ವಿದ್ವಾನ್ ಪಂಡಿತ ಮಣಿ ವ್ಯಾಕರಣ ವಿದ್ವಾನ್ ಸ. ಮಾ ಶ್ರೀನಿವಾಸ ವರದಾಚಾರ್ಯ ಸ್ವಾಮಿಗಳಿಗೂ ನಮ್ಮ ಅನಂತ ಪ್ರಣಾಮಗಳು. ಹಾಗೆಯೇ ಈ ಗ್ರಂಥವನ್ನು ಆಮೂಲಾಗ್ರ ವಾಗಿ ಅವಲೋಕನೆ ಮಾಡಿ 'ಅಭಿನಂದನ' ಶ್ರೀಮುಖಗಳನ್ನು ಅನುಗ್ರಹಿಸಿದ ಶ್ರೀ ಉಭ. ಪ್ರೊಫೆಸರ್ ನಾರಾಯಣಾಚಾರ್ಯ ಸ್ವಾಮಿಗಳವರಿಗೂ, ಶ್ರೀ ಉಭ ವೇ. ಡಾ|| ಎನ್ ಎಸ್ ಅನಂತರಂಗಾಚಾರ್ಯರವರಿಗೂ ದಾಸನ ಕೃತಜ್ಞತಾ ಪೂರ್ವಗಳಾದ ಅನಂತ ಪ್ರಣಾಮಗಳು

'ಕಲೌಖಲುಭವಿಷ್ಯಂತಿ ನಾರಾಯಣ ಪರಾಯಣಾಃ, ಎಂದು ಈ ಕಲಿಯುಗದಲ್ಲಿಯೂ ನಾರಾಯಣ ಪರಾಯಣರು ಅಲ್ಲಲ್ಲೇ ಅವತರಿಸಿದ್ದಾರೆ ಅವರುಗಳು ಈ ಗ್ರಂಥವನ್ನು ಆದರದಿಂದ ಓದಿ ತಮ್ಮ ಶಿಷ್ಯ ಪುತ್ರಾದಿಗಳಿಗೆ ಹೇಳಿಕೊಟ್ಟು ತನ್ಮೂಲಕ ಜ್ಞಾನಪರಂಪರೆಯನ್ನು ಲೋಕದಲ್ಲಿ ಅಭಿವೃದ್ಧಿಗೊಳಿಸಿದರೆ ಭಗವಂತನ ಚೇತನೋದ್ಧಾರಣ ಕೃತ್ಯವು ದಾಸನ ಮೂಲಕ ನಡೆಸಿದುದು ಸಫಲವಾಗುತ್ತದೆ.

ದೇಶಿಕೋ ನಿಗಮಾಂತಾರ್ಯಾತ್ ತದ್ಭಕ್ತಾತ್ ಸಾತ್ವಿಕೋಜನಃ ।
ತತ್ಪ್ರಬಂಧಾತ್ ಪ್ರಬಂಧೋಽನ್ಯೋ ನಾಸ್ತಿನಾಸ್ತಿ ಮಹೀತಲೇ ॥
ಯತ್ಪದಾಂಭೋರುಹಧ್ಯಾನ ವಿಧ್ವಸ್ತಾಶೇಷಕಲ್ಮಷಃ ।
ವಸ್ತುತಾಮುಪಯಾತೋಽಹಂ ಸೌಮ್ಯನಾರಾಯಣಂ ಭಜೇ ॥

ಆಚಾರ್ಯಪದರೇಣುಃ


ಪ್ರಮೋದಸಂ ಮೇಷಮಾಸ
ಆರಿದ್ರಾ

ಸ. ಮಾ. ಕೃಷ್ಣಮಾಚಾರ್ಯದಾಸಃ

ಶ್ರೀಃ

ಶ್ರೀ ಲಕ್ಷ್ಮೀನೃಸಿಂಹ ಪರಬ್ರಹ್ಮಣೇ ನಮಃ
ಶ್ರೀ ಶಠಗೋಪನಾಥ ಯಾಮುನ ಭಗವದ್ರಾಮಾನುಜ ನಿಗಮಾಂತ ಮಹಾದೇಶಿಕೇಭ್ಯೋ ನಮಃ
ಅಸ್ಮದ್ಗುರು ಪರಂಪರಾಯೈ ನಮಃ





ಸಮರ್ಪಣಮ್

ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ, ಸರ್ವತಂತ್ರ ಸ್ವತಂತ್ರೋಭಯವೇದಾಂತಾಚಾರ್ಯ,
ಭಗವದ್ರಾಮಾನುಜ ಸಿದ್ಧಾಂತ ನಿರ್ಧಾರಣ ಸಾರ್ವಭೌಮ, ದೇಶಿಕದರ್ಶನ ವಿಜಯ ಧ್ವಜ

ಶ್ರೀ ಸುಂದರಸ್ವಾಮ್ಯ ನಾರಾಯಣಾರ್ಯ ಮಹಾದೇಶಿಕ

ಶ್ರೀಪಾದಪದ್ಮ ಸೇವಾಸಮಧಿಗತೋಭಯವೇದಾಂತಜ್ಞಾನ ವೈರಾಗ್ಯಾನುಷ್ಠಾನವತಾಂ

ಶ್ರೀಮತಾಂ ಶ್ರೀನಿವಾಸಗೋಪಾಲಾರ್ಯ ಮಹಾದೇಶಿಕಾನಾಂ

ಶ್ರೀಪಾದಪದ್ಮಯೋಃ ತತ್ತನೂಜೇನ ಸ. ಮಾ. ಕೃಷ್ಣದಾಸೇನ ಸಾದರಂ ಸಭಕ್ತಿಶ್ರದ್ಧಂ ಸಮರ್ಪಿತಮಿದಂ

ಸವ್ಯಾಖ್ಯಾನಂ ಶ್ರೀಮದ್ರಹಸ್ಯತ್ರಯಸಾರ ಶ್ರೀ ಕೋಶಂ, ವಿಜಯತೇತಮಾಮ್

ಪ್ರಮೋದೂತ ಮೇಷ ಶುಕ್ಲ ಅರಿದ್ರಾ

29-4-1990

ಶ್ರೀಮತೇ ಹಯಗ್ರೀವಾಯನಮಃ
ಶ್ರೀಮತೇ ಶಠಗೋಪಾಯನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾಂತಮಹಾದೇಶಿಕಾಯನಮಃ



ಶ್ರೀಮದ್ರಹಸ್ಯತ್ರಯಸಾರಃ

ವೇದಾಪಹಾರ ಪರಿತಪ್ತ ಚತುರ್ಮುಖೇನ
ಸಂಪ್ರಾರ್ಥಿತೋಹಯಮುಖೇನ ವಿಶುದ್ಧ ವೇದಾನ್ ।
ಪ್ರೋವಾಚಯಃ ಪ್ರಥಮತಃ ಕಮಲಾಸನಾಯ
ಆದ್ಯೋಗುರುರ್ವಿಜಯತೇ ಸ ರಮಾಹಯಾಸ್ಯಃ ॥

ಸಂಸಾರ ಸಾಗರ ನಿಮಗ್ನ ಸಮಸ್ತಜಂತು
ಸಂರಕ್ಷಣಾಯ ನಿಗಮಾನ್ತ ಗುರುರ್ದಯಾಲುಃ ।
ಮಂತ್ರತ್ರಯಾರ್ಥ ವಿವೃತಿಂ ವಿರಚಯ್ಯನಾವಂ
ಸಂರಕ್ಷತಿಸ್ಮ ಹೃದಯೋಜ್ವಲ ವಾಜಿವಕ್ತ್ರಃ ॥

ನಿಗಮಾಂತ ಗುರುಂ ವಂದೇ ಭವಸಾಗರ ತಾರಕಮ್ ।
ರಹಸ್ಯತ್ರಯ ಸಾರಾಖ್ಯ ಗ್ರಂಥರತ್ನೇನ ದೇಹಿನಾಮ್ ॥

ದೇಶಿಕೋನಿಗಮಾಂತಾರ್ಯಾತ್ ತದ್ಭಕ್ತಾತ್ ಸಾತ್ತ್ವಿಕೋಜನಃ ।
ತತ್ಪ್ರಬಂಧಾತ್ ಪ್ರಬಂಧೋನ್ಯೋ ನಾಸ್ತಿ ನಾಸ್ತಿಮಹೀತಲೇ ॥


ವಿಗಾಹೇನಿಗಮಾಂತಾರ್ಯ ವಿಷ್ಣುಪಾದ ಸಮುದ್ಭವಮ್ ।
ರಹಸ್ಯತ್ರಯ ಸಾರಾಖ್ಯಂ ತ್ರಿಸ್ರೋತಸಮಕಲ್ಮಷಮ್ ॥

ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ ।
ರಹಸ್ಯತ್ರಯಸಾರಾಖ್ಯಂ ಪರಂಬ್ರಹ್ಮಾಸ್ತು ಮೇಹೃದಿ ॥

——

ಶ್ರೀಃ

ಶ್ರೀಮತೇ ಹಯಗ್ರೀವಾಯ ನಮಃ ।
ಶ್ರೀಮತೆ ಲಕ್ಷ್ಮೀನೃಸಿಂಹಪರಬ್ರಹ್ಮಣೇ ನಮಃ
ಶ್ರೀಮತೇ ಶಠಗೋಪಾಯಂನಮಃ ।
ಶ್ರೀಮತೇ ರಾಮಾನುಜಾಯನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ ।
ಅಸ್ಮದ್ಗುರು ಪರಂಪರಾಯ್ಯೈ ನಮಃ



ಕುಮಾರನಯಿನಾರಾಚಾರ್ಯರು ಕೃಪೆ ಮಾಡಿದುದು.

ಶ್ರೀಮಾನ್ ವೇಂಕಟನಾಥಾರ್ಯಃ ಕವಿತಾರ್ಕಿಕ ಕೇಸರೀ ।
ವೇದಾಂತಾಚಾರ್ಯ ವರ್ಯೋಮೇ ಸನ್ನಿಧತ್ತಾಂ ಸದಾಹೃದಿ ॥

ಬ್ರಹ್ಮತಂತ್ರ ಸ್ವತಂತ್ರಸ್ವಾಮಿಗಳು ಕೃಪೆಮಾಡಿದುದು.

ರಾಮಾನುಜ ದಯಾಪಾತ್ರಂ ಜ್ಞಾನ ವೈರಾಗ್ಯ ಭೂಷಣಮ್ ।
ಶ್ರೀಮದ್ವೇಂಕಟನಾಥಾರ್ಯಂವಂದೇ ವೇದಾಂತ ದೇಶಿಕಮ್ ॥

ಪಿಳ್ಳೈ ಲೋಕಾಚಾರಿಯರ್ ಕೃಪೆಮಾಡಿದುದು.

ಶೀರೊನ್ರು ತೂಪ್ಪುಲ್ ತಿರುವೇಂಗಡಮುಡೈಯಾನ್
ಪಾರೊನ್ರಚ್ಚೊನ್ನ ಪೞಮೊೞಿಯುಳ್ – ಓರೊನ್ರು
ತಾನೇ ಅಮೈಯಾದೋ ತಾರಣಿಯಿಲ್ ವಾೞ್ವಾರ್ಕ್ಕು
ವಾನೇರಪ್ಪೋಮಳವುಮ್ ವಾೞ್ವು.

ಶ್ರೀ ಗುರು ಪರಂಪರಾ ಸಾರಃ

ಗುರುಭ್ಯ ಸ್ತದ್ಗುರುಭ್ಯಶ್ಚ ನಮೋವಾಕಮಧೀಮಹೇ ।
ವೃಣೀಮಹೇಚತತ್ರಾದ್ಯೌ ದಂಪತೀ ಜಗತಾಂಪತೀ ॥

ಶ್ರೀಮತೇ ಹಯಗ್ರೀವಾಯ ನಮಃ । ಶ್ರೀಮತೇ ಲಕ್ಷ್ಮೀನೃಸಿಂಹ ಪರಬ್ರಹ್ಮಣೇ ನಮಃ ।
ಶ್ರೀಮತೇ ಶಠಗೋಪಾಯ ನಮಃ । ಶ್ರೀಮತೇ ರಾಮಾನುಜಾಯ ನಮಃ ।
ಶ್ರೀ ಮತೇ ನಿಗಮಾಂತ ಮಹಾದೇಶಿಕಾಯ ನಮಃ । ಶ್ರೀಮತೇ ಶ್ರೀ ಸುಂದರಸೌಮ್ಯನಾರಾಯಣಾರ್ಯ ಮಹಾದೇಶಿಕಾಯ ನಮಃ । ಶ್ರೀಮತೇ ಶ್ರೀನಿವಾಸಗೋಪಾಲಾರ್ಯಾಯ ಮಹಾದೇಶಿಕಾಯನಮಃ ।
ಅಸ್ಮದ್ಗುರು ಪರಂಪರಾಯ್ಯೈ ನಮಃ ।

(ಸಾರ ಚಂದ್ರಿಕಾ ವ್ಯಾಖ್ಯಾ)

ಉಪೋದ್ಘಾತಃ – ಶ್ರಿಯಃ ಪತಿಯೂ, ಪರಮಕಾರುಣಿಕನೂ, ಅವಾಪ್ತ ಸಮಸ್ತಕಾಮನೂ, ಆದ ಸರ್ವೇಶ್ವರನು, ಸಂಸಾರದಲ್ಲಿ ಮುಳುಗಿ ಗೋಳುತ್ತಿರುವ ಜೀವರಾಶಿಗಳನ್ನು ಶಾಸ್ತ್ರವೆಂಬ ಕೈದೀಪವನ್ನು ತೋರಿಸಿ ಉದ್ಧರಿ

ಸಲು, ವೇದ, ಇತಿಹಾಸ ಪುರಾಣಗಳನ್ನು ತಾನೇ ಸಾಕ್ಷಾತ್ತಾಗಿ ಬ್ರಹ್ಮದೇವನಿಗೆಉಪದೇಶಿಸಿ, ಅವನಿಂದ ನಾರದ ವಾಲ್ಮೀಕಿ ಪರಾಶರ ಶುಕ ಶೌನಕಾದಿಗಳಿಗೆ ಉಪದೇಶಿಸಿ ತನ್ಮೂಲಕ ಗ್ರಂಥರೂಪವಾಗಿಯೂ, ಸಾಕ್ಷಾತ್ತಾಗಿಯೂ ಪ್ರಪಂಚಕ್ಕೆ ಉಪದೇಶಿಸಿರುತ್ತಾನೆ. ಆ ಶ್ರಿಯಃ ಪತಿಯಾದ ಸರ್ವೇಶ್ವರನೇ, ಶ್ರೀನಿವಾಸನಾಗಿ ವೆಂಕಟಾದ್ರಿಯಲ್ಲಿ ಅರ್ಚಾರೂಪಿಯಾಗಿ ಸಾನ್ನಿಧ್ಯ ಮಾಡಿಕೊಂಡು, ಭಕ್ತಾಭೀಷ್ಟವರಪ್ರದನಾಗಿರುತ್ತಾನೆ. ಈ ಕಲಿಯುಗದಲ್ಲಿ ಅವನೇ ತನ್ನ ಘಂಟೆಯ ರೂಪದಲ್ಲಿ **ಶ್ರೀಮನ್ನಿಗಮಾಂತ ಮಹಾದೇಶಿಕರಾಗಿ** ಅವತಾರ ಮಾಡಿ, ನಮ್ಮಾಳ್ವಾರ್, ನಾಥಮುನಿಗಳು, ಆಳವಂದಾರ್, ಶ್ರೀ ಭಗವದ್ರಾಮಾನುಜರೇ ಮೊದಲಾದ ಪರಮಾಚಾರ್ಯರುಗಳು ಉಪದೇಶಿಸಿದ ಸತ್ಸಂಪ್ರದಾಯಾಗತ ಸಮೀಚೀನ ಶಾಸ್ತ್ರಾರ್ಥಗಳನ್ನು ಪರಿಷ್ಕೃತಗ್ರಂಥಗಳ ಮೂಲಕ, ಲೋಕಕ್ಕೆ ಉಪದೇಶಿಸಿ ಉಪಕರಿಸಿದ್ದಾನೆ. ಹಾಗೆಯೇ ಈ ಆಚಾರ್ಯರ ಮೂಲಕ ತಮ್ಮ ಅವತಾರದ ಪರಮ ಪ್ರಯೋಜನವಾದ **"ಶ್ರೀ ಮದ್ರಹಸ್ಯತ್ರಯ ಸಾರ"** ವೆಂಬ ಗ್ರಂಥ ರತ್ನವನ್ನು, ಅನುಗ್ರಹಿಸಿ ಉಪಕರಿಸಿದ್ದಾನೆ. ಈ ಗ್ರಂಥರತ್ನದಲ್ಲಿ ತತ್ತ್ವ, ಹಿತ, ಪುರುಷಾರ್ಥಗಳನ್ನು ಯಥಾಶಾಸ್ತ್ರ ಯಥಾ ಸಂಪ್ರದಾಯ, ಪ್ರಮಾಣಪೂರ್ವಕವಾಗಿ, ಈ ಆಚಾರ್ಯರು ನಿರೂಪಿಸಿರುತ್ತಾರೆ. ಮುಖ್ಯವಾಗಿ ಪ್ರಪತ್ತಿಶಾಸ್ತ್ರ ವೆಂಬ ಸುಲಭವಾದ ಮೋಕ್ಷೋಪಾಯವನ್ನು ಆಕ್ಷೇಪ ಸಮಾಧಾನಗಳೊಡನೆ ನಿರೂಪಿಸಿ, ಸರ್ವರೂ ಅಧ್ಯಯನಮಾಡಿ ಉಪಾಯವನ್ನು ಅನುಷ್ಠಿಸಿ ಸಂಸಾರದಿಂದ ಬಿಡುಗಡೆ ಹೊಂದಿ ಭಗವದನುಭವರೂಪವಾದ ಆನಂದವನ್ನು ಪಡೆಯಲಿ ಎಂದು ಪರಮಕೃಪೆಯಿಂದ ಅನುಗ್ರಹಿಸಿರುತ್ತಾರೆ. ಮಹಾಭಾರತದ ವಿಷಯವಾಗಿ ಪೂರ್ವರು **"ಯಚ್ಚೇಹಾಸ್ತಿ ತದನ್ಯತ್ರ ಯನ್ನೇಹಾಸ್ತಿನತತ್ಕ್ವಚಿತ್"** (ಇದರಲ್ಲಿ ಹೇಳಿರುವ ವಿಷಯಗಳೇ ಬಾಕಿ ಪುರಾಣೇತಿಹಾಸಗಳಲ್ಲಿ ಹೇಳಲ್ಪಟ್ಟಿವೆ. ಇಲ್ಲಿ ಹೇಳದ ವಿಷಯಗಳನ್ನು ಬೇರೆಲ್ಲಿಯೂ ಹೇಳಿಲ್ಲ. ಆದಾಗಿ ಸಕಲ ಶಾಸ್ತ್ರಾರ್ಥಗಳೂ ಇಲ್ಲಿ ಅಡಗಿವೆ) ಎಂದು ಹೇಳಿರುವ ನ್ಯಾಯದಂತೆ, **ಶ್ರೀಮದ್ರಹಸ್ಯತ್ರಯ ಸಾರದಲ್ಲಿ** ಸಕಲ ವೇದಾಂತಾರ್ಥಗಳನ್ನು ಆಚಾರ್ಯವರ್ಯರು ಅನುಗ್ರಹಿಸಿರುತ್ತಾರೆ. ಇದನ್ನು ಅಧ್ಯಯನ ಮಾಡಿದರೆ ಸಕಲ ವೇದಾಂತಾರ್ಥಗಳೂ ಸುಲಭವಾಗಿ ತಿಳಿಯುತ್ತವೆ.

ಈ **ಶ್ರೀ ಮದ್ರಹಸ್ಯತ್ರಯ ಸಾರಕ್ಕೆ** ಸೇರಿದ ಹಾಗೆ **"ಗುರುಪರಂಪರಾ ಸಾರ** ವೆಂಬ ಗ್ರಂಥವನ್ನು ಆಚಾರ್ಯರು ರಚಿಸಿದ್ದಾರೆ. ಇದು ಪ್ರತ್ಯೇಕವಾದ ಗ್ರಂಥವಾದರೂ, ಶ್ರೀಮದ್ರಹಸ್ಯತ್ರಯ ಸಾರಕ್ಕೆ ಸೇರಿಸಿಕೊಂಡೇ ಇದನ್ನು ಆರಂಭದಲ್ಲಿ ಕಾಲಕ್ಷೇಪ ಮಾಡುವುದು ಸಂಪ್ರದಾಯ.

ಗುರುಪರಂಪರಾಭಜನ

ಪ್ರಾರೀಪ್ಸಿತಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿಯನ್ನು ಹೊಂದಲಿ, ಹಾಗೆಯೇ ಭಗವತ್ಪ್ರಾಪ್ತಿ ರೂಪವಾದ ಮಹಿಷ್ಟಮಂಗಳವು ಸಿದ್ಧಿಸಲಿ, ಎಂದು ಗುರುಪರಂಪರಾ ಪೂರ್ವಕ ಭಗವನ್ನಮಸ್ಕಾರವನ್ನು ಮೊಟ್ಟ ಮೊದಲು ತಮ್ಮ ಗ್ರಂಥದಲ್ಲಿ **"ಗುರುಭ್ಯಃ"** ಎಂದಾರಂಭಿಸಿ, ಆಚಾರ್ಯರು ನಿಬಂಧಿಸಿರುತ್ತಾರೆ.

ಮಂಗಳಾಚಾರಯುಕ್ತಾನಾಂ ನಿತ್ಯಂ ಚಪ್ರಯತಾತ್ಮನಾಮ್ |
ಜಪತಾಂಜುಹ್ವತಾಂಚೈವ ವಿನಿಪಾತೋನ ವಿದ್ಯತೇ ||

ಎಂಬುದು ಸ್ಮೃತಿವಚನ. ಅಂದರೆ ಮಂಗಳಕರವಾದ ಗುರುದೇವತಾ ನಮಸ್ಕಾರರೂಪವಾದ ಆಚಾರವುಳ್ಳವರೂ, ನಿತ್ಯವೂ ಜಪಹೋಮಾದಿಗಳನ್ನು ಮಾಡುತ್ತಾ ಶುದ್ಧರೂ ಆಗಿರುವವರಿಗೆ ಅನಿಷ್ಟವು ಉಂಟಾಗುವುದಿಲ್ಲ. ಈ ಶಾಸ್ತ್ರಾರ್ಥವನ್ನು ಅನುಸರಿಸಿ ಆಚಾರ್ಯವರ್ಯರು ಗುರುದೇವತಾತ್ಮಕವಾದ ನಮಸ್ಕಾರವನ್ನು ಮೊಟ್ಟಮೊದಲು ಅನುಷ್ಠಿಸುತ್ತಿದ್ದಾರೆ.

ಗುರುಭ್ಯ ಇತ್ಯಾದಿ : ತಮಗೆ ವೇದಾಂತ ಕಾಲಕ್ಷೇಪವನ್ನೂ ಪ್ರಪತ್ತಿರೂಪವಾದ ಬ್ರಹ್ಮವಿದ್ಯೆಯನ್ನೂ ಉಪದೇಶಿಸಿದ ಗುರುಗಳಿಗೆ. ಪೂಜಾರ್ಥದಲ್ಲಿ ಬಹುವಚನ.

ಪೊಯ್ ಹೈಮುನಿ, ಪೂದತ್ತಾರ್, ಪೇಯಾಳ್ವಾರ್ ತಣ್ಪೊರು ನಲ್ವರುಂ ಕುರುಕೇಶ, ವಿಷ್ಣುಚಿತ್ತನ್ ತುಯ್ಯಕುಲಶೇಖರ, ನಮ್ಪಾಣನಾರ್, ತೊಂಡರಡಿಪ್ಪೊಡಿ, ಮಳ್ಳಿಶೈವಂದ ಶೋತಿ |

"ಗು" ಶಬ್ದಸ್ತ್ವಂಧಕಾರಸ್ಯಾತ್" "ರು" ಶಬ್ದಸ್ತನ್ನಿರೋಧಕಃ |
ಅಂಧಕಾರನಿರೋಧಿತ್ವಾತ್ ಗುರುರಿತ್ಯಭಿಧೀಯತೇ ||

ಎಂಬುದು ಗುರುಶಬ್ದಕ್ಕೆ ನಿರ್ವಚನ. ಅದಾಗಿ ಅಜ್ಞಾನವೆಂಬ ಅಂಧಕಾರವನ್ನು (ಗುಶಬ್ದಾರ್ಥ.) ಹೋಗಲಾಡಿಸುವವನು (ರು ಶಬ್ದಾರ್ಥ) **"ಗುರು"** ಎಂದು ಹೇಳಲ್ಪಡುತ್ತಾನೆ.

ತದ್ಗುರುಭ್ಯಃ-ಅವರ ಆಚಾರ್ಯ ಪರಂಪರೆಗೆ, **ನಮೋವಾಕಮ್** ನಮಃ ಎಂಬ ಮಾತನ್ನು **ಅಧೀಮಹೇ**-ಅಧ್ಯಯನ ಮಾಡುತ್ತೇವೆ ಪುನಃ ಪುನಃ ಹೇಳುತ್ತೇವೆ ಎಂದರ್ಥ. ಗ್ರಂಥ ಪರಿಸಮಾಪ್ತಿಗೆ ವಿಘ್ನಗಳು ಬಹಳ. ಅವುಗಳನ್ನು ಹೋಗಲಾಡಿಸಿಕೊಳ್ಳಲು ಗುರು ಪರಂಪರೆಗೆ ನಮಸ್ಕಾರವನ್ನು ಪುನಃ ಪುನಃ ಮಾಡುವುದೇ ಪರಿಹಾರ **ತದ್ಗುರುಭ್ಯಃ** ಎಂದು ಭಗವಂತನ ಪರ್ಯಂತ ಗುರು ಪರಂಪರೆಗೆ ನಮಸ್ಕಾರ. ಆ ಭಗವಂತನು ಯಾರೆಂಬುದನ್ನು **ವೃಣೀಮಹೇಚ ತತ್ರಾದ್ಯೌ,** ಇತ್ಯಾದಿ ಉತ್ತರಾರ್ಧದಲ್ಲಿ ವಿವಕ್ಷಿಸುತ್ತಾರೆ. **ತತ್ರ** - ಆ ಗುರುಪರಂಪರೆಗೆ **ಆದ್ಯೌ**-ಆದಿಯಲ್ಲಿರುವ ಇಬ್ಬರು, **ಜಗತಾಂಪತೀ**-ಜಗತ್ತಿಗೆ ಸ್ವಾಮಿಗಳು. ಅವರುಗಳೇ, **ದಂಪತೀ**-ಪತಿಜಾಯಾರೂಪವಾದ ಮಿಥುನವು. ಅವರನ್ನು **ವೃಣೀಮಹೇ** (ಶರಣವಾಗಿ) ಆಶ್ರಯಿಸುತ್ತೇವೆ.

ಇಲ್ಲಿ **"ಜಗತಾಂ ಆದ್ಯೌ"** ಎಂದು ಅನ್ವಯಮಾಡಿ, ಆ ಪ್ರಥಮಾಚಾರ್ಯರಿಬ್ಬರೂ ಜಗತ್ತಿಗೆ **ಕಾರಣ** ಭೂತರು ಎಂದೂ ಹೇಳಬಹುದು ಅವರೇ **ಜಗತಾಂಪತೀ**-ಪ್ರಪಂಚಕ್ಕೆ ಸ್ವಾಮಿಗಳು. ಶೇಷಿತ್ವವು ಇಬ್ಬರಲ್ಲಿಯೂ ವ್ಯಾಸಜ್ಯ ವೃತ್ತಿಕ. ಅಂದರೆ ಇಬ್ಬರೊಡಗೂಡಿದ್ದುದು. ಇಬ್ಬರೂ ಪ್ರಪಂಚಕ್ಕೆ ಸ್ವಾಮಿಗಳಾದರೆ (ಈಶ್ವರರಾದರೆ) ದ್ವೈರಾಜ್ಯ ದೋಷವು (ಒಬ್ಬರ ಮಾತನ್ನು ಮತ್ತೊಬ್ಬರು ಕೇಳದೆ ಪರಸ್ಪರ ವಿರುದ್ಧವಾಗಿ ನಡೆದುಕೊಂಡು ರಾಜ್ಯಭಾರ ಮಾಡಿದರೆ ಉಂಟಾಗುವ ದೋಷ) ಬರುವುದಿಲ್ಲವೇ ಎಂದರೆ ಅದಕ್ಕೆ ಸಮಾಧಾನ **"ದಂಪತೀ"** ಎಂದು. ಅಂದರೆ ಪರಸ್ಪರ ಅನುಕೂಲವಾದ ಮನೋಭಾವವುಳ್ಳವರು. ಇಬ್ಬರೂ ಏಕಾಭಿಪ್ರಾಯರಾಗಿ, ಐಕರಸ್ಯಭಾವದಿಂದ ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರ ಮೋಕ್ಷಪ್ರದತ್ವಾದಿಗಳನ್ನು ನಡೆಸುವವರು ಎಂದರ್ಥ. ಇದರಿಂದ ಕೇವಲ ನಾರಾಯಣನೇ ಜಗತ್ಕಾರಣಭೂತನು ಎಂದು ಹೇಳುವ ಮತ ಸರಿಯಲ್ಲ. ಲಕ್ಷ್ಮೀನಾರಾಯಣಾತ್ಮಕವಾದ ಮಿಥುನವೇ ಜಗತ್ತಿಗೆ ಕಾರಣಭೂತರೆಂಬುದು ಸಿದ್ಧಾಂತ. ಲಕ್ಷ್ಮಿಯು ನಾರಾಯಣನಿಗೆ ಸ್ವೇಚ್ಛೆಯಿಂದ ಶೇಷಳಾಗಿ, ವಿಶೇಷಣವಾಗಿದ್ದಾಳೆ. ಈ ವಿಶೇಷಣ ವಿಶಿಷ್ಟವಾದ ತತ್ತ್ವವು **"ದಂಪತೀ"** ಶಬ್ದದಿಂದ ನಿರೂಪಿಸಲ್ಪಡುತ್ತದೆ ಈ ಶ್ಲೋಕದಲ್ಲಿ **"ಆದ್ಯಾದಂಪತೀ"** ಎಂದು ತತ್ತ್ವವೂ **"ವೃಣೀಮಹೇ"** ಎಂದು ಶರಣಾಗತಿಯೂ (ಹಿತ) **"ಜಗತಾಂಪತೀ"** ಎಂದು ಕೈಂಕರ್ಯ ಪ್ರತಿಸಂಬಂಧಿಯೂ ತದಾಕ್ಷಿಪ್ತವಾಗಿ ಪುರುಷಾರ್ಥವೂ ಹೇಳಲ್ಪಡುತ್ತದೆ.

ಆಳ್ವಾರ್‌ಗಳಲ್ಲಿ ಭಕ್ತಿ :

ಪೊಯ್ ಹೈಮುನಿ ಪೂದತ್ತಾರ್ ಇತ್ಯಾದಿ, ಅನಂತರ ಮೇಘಗಳು ಸಮುದ್ರಜಲವನ್ನು ಹೀರಿ ಸರ್ವೋಪಜೀವ್ಯವಾದ ತಣ್ಣೀರಾಗಿ ಸುರಿಸುವಂತೆ, ವೇದಾರ್ಥಗಳನ್ನು ಸರ್ವಾಧಿಕಾರವಾದ ತಮಿಳು ಭಾಷೆಯಲ್ಲಿ ಸುಲಭವಾಗಿ ಎಲ್ಲರೂ ತಿಳಿದುಕೊಳ್ಳುವಂತೆ ದ್ರಾವಿಡ ಪ್ರಬಂಧ ರೂಪದಲ್ಲಿ ಅನುಗ್ರಹಿಸಿದ ಆಳ್ವಾರುಗಳನ್ನು ಅನುಸಂಧಾನ ಮಾಡುತ್ತಾರೆ. ಇವರ ಪ್ರಬಂಧಗಳು ಶರಣಾಗತಿ ಶಾಸ್ತ್ರಾರ್ಥವನ್ನು ವಿಶೇಷವಾಗಿ ವಿಶದೀಕರಿಸಿವೆ ಎಂಬ ವೈಶಿಷ್ಟ್ಯವೂ ಇದೆ.

ವೈಯ್ಯಮೆಲ್ಲಾ ಮರ್ೈವಿಳಂಗವಾಳ್ವೇಲೇಂದು ಮಂಗೈಯರ್ ಕೋನೆನ್ರಿವರಗಳ್ ಮಹಿಳ್ನ್ದು ಪಾಡು ।
ಶೈಯ್ಯ ಶಮಿಳ್ ಮಾಲೈಗಳ್ನಾಂ ತೆಳಿಯವೋದಿ, ತ್ತೆಳಿಯಾದ ಮರ್ೈನಿಲಂಗಳ್ ತೆಳಿಹಿನ್ರೋಮೇ ॥

ಪೊಯ್ ಹೈಮುನಿ— ಸರೋವರದಲ್ಲಿ ಅವತರಿಸಿದ ಆಳ್ವಾರ್, **ಪೂದತ್ತಾರ್** - ಭೂತದಂತೆ ಭಗವದ್ವಿಷಯದಲ್ಲಿ ಲೀನರಾದ ಭೂದತ್ತಾಳ್ವಾರ್, **ಪೇಯಾಳ್ವಾರ್** - ಭಗವದ್ವಿಷಯದಲ್ಲಿ ಹುಚ್ಚು ಹಿಡಿದವರು, ತಲ್ಲೀನರು ಎಂದರ್ಥ.

ತಣ್ಪೊರುನಲ್ವರುಂ ಕುರುಕೇಶನ್ — ಶೀತಳವಾದ ತಾಮ್ರ ಪರ್ಣಿ ನದೀ ತೀರದಲ್ಲಿ ಅವತರಿಸಿದ, ಕುರುಕಾ ಪುರಿಯ "ಅಧೀಶನಾದ ಆದಿಪ್ಪಿರಾನ್" ಅವತಾರಭೂತರಾದ ನಮ್ಮಾಳ್ವಾರ್, **ವಿಷ್ಣು ಚಿತ್ತನ್** - ವಿಷ್ಣು ಧ್ಯಾನಪರರಾದ ಪೆರಿಯಾಳ್ವಾರ್, **ತುಯ್ಯಕುಲಶೇಖರನ್** - ಭಾಗವತ ಭಕ್ತಿಯೆಂಬ ಪರಿಶುದ್ಧಿಯುಳ್ಳ ಕುಲಶೇಖರಾಳ್ವಾರ್, **ನಮ್ಪಾಣನಾದನ್**, - ನಮ್ಮ ತಿರುಪ್ಪಾಣಾಳ್ವಾರ್ ತಿರುಪ್ಪಾಣಾಳ್ವಾರ್ರಿಗೆ ಮುನಿವಾಹನರೆಂಬ ಬಿರುದನ್ನೂ, ತಮಗೆ ವೇದಾಂತಾ ಚಾರ್ಯರ್ ಎಂಬ ಬಿರುದನ್ನೂ, ರಂಗನಾಥನು ದಯಪಾಲಿಸಿದುದರ ನಿಮಿತ್ತವಾಗಿ **ನಮ್** - ಎಂದು ಅವರೊಡನೆ ಸಂಬಂಧವನ್ನು ಬಯಸುತ್ತಾರೆ **ತೊಂಡರಡಿಪ್ಪೊಡಿ** - ಭಕ್ತರ ಪಾದಧೂಳಿ ಎಂದು ತಮ್ಮನ್ನು ವ್ಯಪದೇಶಿಸಿಗೊಳ್ಳುವ ಆಳ್ವಾರ್. **ಮುಳ್ಶೈವಂದ ಶೋದಿ**–ತಿರುಮುಳ್ಶೈ ಎಂಬ ಊರಿನಲ್ಲಿ ಅವತರಿಸಿದ ಜ್ಯೋತಿ ರೂಪರಾದ ಆಳ್ವಾರ್ ಒಂದು ಸಲ 'ಪೆರುಂಬುಲಿಯೂರ್' ಎಂಬ ಅಗ್ರಹಾದಲ್ಲಿ ನಡೆದಯಾಗದಲ್ಲಿ, ಯಾಗ ದೀಕ್ಷಿತರು ಮಹಾಜ್ಞಾನಿಯಾದ ಇವರಿಗೆ ಅಗ್ರ ಪೂಜೆಮಾಡಲು, ಶಿಶುಪಾಲಸಂಧಹ ಕೆಲವರು ಅದನ್ನು ಆಕ್ಷೇಪಿಸಲು, ಆಗ ಈ ಆಳ್ವಾರ್ರವರು ತಮ್ಮ ಹೃದಯದಲ್ಲಿ ಜ್ಯೋತಿ ಸ್ವರೂಪನಾದ ಭಗವಂತನನ್ನು ತೋರಿಸಿಕೊಡಲು, ಎಲ್ಲರೂ ಆಶ್ಚರ್ಯಪಟ್ಟು ಈ ಆಳ್ವಾರ್ರವರ ಪಾದಗಳಿಗೆ ನಮಸ್ಕರಿಸಿ ಅಪಚಾರಕ್ಷಾ ಮ್ರಪಣೆಯನ್ನು ಮಾಡಿಕೊಂಡರು ಎಂಬ ವೃತ್ತಾಂತವನ್ನು ಸೂಚಿಸಲು **ಮುಳ್ಶೈವಂದ ಶೋದಿ**, ಎಂದು ಸಂಬೋಧಿಸಿದ್ದಾರೆ.

ವೈಯ್ಯಮೆಲ್ಲಾಂ ಮರ್ೈವಿಳಂಗ ವಾಳ್‌ವೇಲೇಂದುಮ್ ಮಂಗೈಯರ್ ಕೋನ್–ಇಲ್ಲಿ ತಿರುಮಂಗೈಯಾಳ್ವಾರನ್ನು ಅನುಸಂಧಿಸಿದ್ದಾರ. ಇವರು ಸ್ತ್ರೀ ನಿಮಿತ್ತವಾಗಿ, ಪ್ರತಿದಿನವೂ ಕಾಡಿನ ದಾರಿಯಲ್ಲಿ ಬರುವವರ ಹತ್ತಿರ ಸಿಗುವ ಹಣ ಕಾಸುಗಳನ್ನು ನಿರ್ಬಂಧಿಸಿ ಕಿತ್ತುಕೊಂಡು ಬ್ರಾಹ್ಮಣ ಸಂತರ್ಪಣೆ ಮಾಡುತ್ತಿದ್ದರು. ಒಂದು ಸಲ ಇವರನ್ನು ಅನುಗ್ರಹಿಸಲು, ತಿರುವಾಲಿ ತಿರುನಗರಿಯಲ್ಲಿ ಅರ್ಚಾವತಾರದಿಂದ ಬಿಜಯ ಮಾಡಿಸಿರುವ ಭಗವಂತನು ಸರ್ವಾಭರಣಭೂಷಿತನಾಗಿ ಮಾರುವೇಷದಿಂದ ಇವರ ಎದುರಿಗೆ ತೋರಲು, ಈ ಆಳ್ವಾರ್ರವರು, ತಮ್ಮ ಕತ್ತಿಯನ್ನು ತೋರಿಸಿ ಹೆದರಿಸಿ, ಅವನ ಮೈಮೇಲೆ ಇದ್ದ ಆಭರಣಗಳನ್ನೆಲ್ಲಾ ಸಂತೋಷದಿಂದ ಕಳಚಿಕೊಂಡು, ಕಾಲಿನಲ್ಲಿ ಧರಿಸಿದ್ದ ಉಂಗುರವನ್ನು ಕೀಳಲು ಸಾಧ್ಯವಾಗದೆ, ಹಲ್ಲಿನಿಂದ ಕಚ್ಚಿ ಎಳೆದರು. ಆಗ ಭಗವಂತನ ಪಾದಾರವಿಂದ ಸ್ಪರ್ಶವಾಗಿ ಅಲ್ಲಿಂದ ಅಮೃತಧಾರೆಯು ಇವರ ಬಾಯಲ್ಲಿ ಬೀಳಲು, ದಿವ್ಯಜ್ಞಾನ ಉಂಟಾಗಿ, ತಾವು ಮಾಡಿದ ತಪ್ಪುಕೆಲಸಕ್ಕೆ ಶೋಚಿಸಿ, ಭಗವಂತನ ಸಾಕ್ಷಾತ್ಕಾರವನ್ನು ಪಡೆದು ಅವನನ್ನು "ವಾಡಿನೇನ್ ವಾಡಿ" ಎಂದಾರಂಭಿಸುವ ಪಾಶುರಗಳಿಂದ ಹಾಡಿದರು. ಇದೇ "ಪೆರಿಯತಿರುಮೊಳಿ" ಎಂದು ವ್ಯವಹರಿಸಲ್ಪಡುತ್ತದೆ. ಇದೇ ಮೊದಲಾದ ಪ್ರಬಂಧಗಳಿಂದ ಸಕಲ ವೇದಾಂತಾರ್ಥಗಳನ್ನೂ ಪ್ರತಿಪಾದಿಸಿರುತ್ತಾರೆ. ಹಾಗೆಯೇ ಸರ್ವಮಷ್ಟಾಕ್ಷರಾಂತಸ್ಥಂ" ಎಂದು ಹೇಳಲ್ಪಡುವ ಅಷ್ಟಾಕ್ಷರದ ಅರ್ಥವನ್ನು ತಮ್ಮ ಪ್ರಬಂಧಗಳಲ್ಲಿ ಪ್ರತಿಪಾದಿಸಿ, ವೇದವು ಉಜ್ವಲಿಸುವಂತೆ, ಅನುಗ್ರಹಿಸಿರುವುದನ್ನು ಸೂಚಿಸಲು, "ವೈಯ್ಯಮೆಲ್ಲಾಂ ಮರ್ೈವಿಳಂಗ" ಎಂದು ನಿರೂಪಿಸಿರುತ್ತಾರೆ. ಅಥವಾ "ವೈಯ್ಯಮೆಲ್ಲಾ ಮರ್ೈವಿಳಂಗ" ಎಂಬ ಪದಗಳನ್ನು "ಎನ್ರಿವರ್‌ಹಳ್ ಮಹಿಳ್ನ್ದು ಪಾಡುಮ್" ಎಂಬುದಕ್ಕೆ ವಿಶೇಷಣವಾಗಿಟ್ಟರೆ,

ಇನ್ಪತ್ತಿಲಿ ರ್ತೆಂಜುತಲಿ ಲಿಶೈಯುಂನ್ಪೇತ್ತಿಲಿ ಕಳ್ಳಾದಪಲ್ಲುರವಿಲಿ ರಾಗಂವಾತ್ತಿಲ್ ।
ತನ್ಪತ್ತಿಲ್ವಿ ನೈವಿಲಕ್ಕಿಲ್ ತಹವ್ರೋಕ್ಕತ್ತಿಲ್ ತತ್ತು ವತ್ತ್ಯೆಯುಣರ್ತ್ತುಲ್‌ದಲಿ ತನ್‌ನ್ಯೆಯಾಕ್ಕಿಲ್ ।

ಈ ಹತ್ತು ಆಳ್ವಾರುಗಳೂ ಹಾಡಿರುವ ಪದ್ಯಗಳು, ವೇದಗಳ ಉಪಬ್ರಂಹಣ – ಅಂದರೆ ವೇದಗಳ ಅರ್ಥಗಳನ್ನು ವಿವರಿಸುತ್ತವೆ, ಎಂಬುದು ದ್ಯೋತಿತವಾಗುತ್ತದೆ. ಇಂಥಹ **ಶೈಯ್ಯತಮಿಳ್ವಮಾಲೈಹಳ್** - ಋಜುವಾದ - ವೇದಾರ್ಥಗಳನ್ನು ಮರೆಮಾಚದೆ ಸ್ಪಷ್ಟವಾಗಿ ಹೇಳಿರುವ ಈ ತಮಿಳು ಪಾಶುರಗಳನ್ನು, **ನಾವರ್ ತೆಳಿಯ ಓದಿ**— ನಾವು ಅರ್ಥಜ್ಞಾನದೊಂದಿಗೆ ಸಂಶಯ ವಿಪರ್‍ಯಯಗಳಿಲ್ಲದೆ ಗುರು ಮುಖೇನ ಅಧ್ಯಯನ ಮಾಡಿ, **ತೆಳಿಯಾದ ಮರ್ಕೈ ನಿಲಂಗಳ್** - ಸರಿಯಾಗಿ ನಿಶ್ಚಯವಾಗದ ವೇದ ಭಾಗಗಳ ಅರ್ಥಗಳನ್ನು **ತೆಳಿಹಿನ್ರೋಮೇ - ನಿಶ್ಚಯಿ**ಸುತ್ತೇವೆ. ರಾಮಾಯಣ, ಮಹಾಭಾರತ, ವಿಷ್ಣುಪುರಾಣಾದಿ ಇತಿಹಾಸ ಪುರಾಣಗಳು ವೇದದ ಅರ್ಥಗಳ ಉಪಬ್ರಂಹಣಗಳು - ಹಾಗೆಯೇ ಈ ಆಳ್ವಾರುಗಳ ಪ್ರಬಂಧಗಳು ಉಪಬ್ರಂಹಣ ತಮಗಳೆಂದೂ, ಇವುಗಳೂ ವೇದಗಳ ಅರ್ಥಗಳನ್ನು ಮತ್ತಷ್ಟು ತಿಳಿವಾಗಿ ತಿಳಿಸುತ್ತವೆ ಎಂದೂ, ಶ್ರೀದೇಶಿಕರ ಅಭಿಪ್ರಾಯ. ಬಾಕಿ ಇತಿಹಾಸ ಪುರಾಣಗಳಿಗಿಂತ ಈ ಆಳ್ವಾರ್ ಪ್ರಬಂಧಗಳನ್ನು ತಾವು ಅಧ್ಯಯನ ಮಾಡಿ, ಸಕಲ ವೇದಾಂತಾರ್ಥಗಳನ್ನು ಚೆನ್ನಾಗಿ ತಿಳಿದುಕೊಂಡಿರುವುದಾಗಿ ಶ್ರೀದೇಶಿಕರು ಅಭಿಪ್ರಾಯ ಪಟ್ಟಿರುವುದಲ್ಲದೆ, ತಮ್ಮನ್ನು **'ಶಂದಮಿಹುತಮಿಳ್ವಮರ್ಯೋನ್'** ಛಂದಸ್ಸಿನಿಂದ ತುಂಬಿದ ದ್ರವಿಡವೇದವನ್ನು ಅಧ್ಯಯನ ಮಾಡಿದವನು — 'ದ್ರವಿಡ ಶಾಖಾಧ್ಯಾಯೀ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ

ಇದರಿಂದ, ಆಳ್ವಾರ್‌ಗಳ ಪ್ರಬಂಧಗಳು, ವೇದಾಂತಾರ್ಥಗಳನ್ನು ಬಹಳ ಚನ್ನಾಗಿ ವಿವರಿಸುವ ಸಂಪ್ರದಾಯ ಗ್ರಂಥಗಳು ಎಂದು ಕೃತಜ್ಞತೆಯಿಂದ ಆಳ್ವಾರುಗಳ ಪರಂಪರೆಯನ್ನು ಶ್ರೀ ದೇಶಿಕರು ಅನುಸಂಧಾನ ಮಾಡುತ್ತಾರೆ. ಗ್ರಂಥರೂಪವಾಗಿ ಉಪಕಾರ ಮಾಡಿರುವ ಗುರುಪರಂಪರೆ ಇದು. **"ತದ್ಗುರುಭ್ಯಶ್ಚ"** ಎಂಬ ಆಚಾರ್ಯ ಪರಂಪರೆಯಲ್ಲಿ ನಮ್ಮಾಳ್ವಾರ್‌ರವರು ಅನುಸಂಧಿಸಲ್ಪಟ್ಟಿದ್ದಾಗ್ಯೂ ಅವರನ್ನು "ಪೊಯ್‌ಹೈಮುನಿಪೂದತ್ತಾರ್" ಎಂಬ ಪಾಶುರದಲ್ಲಿ ಪುನಃ ಅನುಸಂಧಾನ ಮಾಡಿರುವುದು ಗ್ರಂಥಮುಖವಾಗಿ ಮಾಡಿರುವ ಉಪಕಾರವನ್ನು ಸ್ಮರಿಸಿ, "ತಣ್‌ಪೊರುನಲ್‌ವರುಂ ಕುರುಕೇಶನ್" ಎಂದು ವಿಶೇಷವಾಗಿ ಸ್ತುತಿಸಿದ್ದಾರೆ.

ಅನಂತರ ಮಧುರಕವಿಯಾಳ್ವಾರ್‌ರವರ "ಆಚಾರ್ಯನಿಷ್ಠೆ" ಯನ್ನು **"ಇನ್ಪತ್ತಿಲ್"** ಎಂದಾರಂಭಿಸುವ ಪಾಶುರದಲ್ಲಿ ಹೊಗಳುತ್ತಾರೆ. "ಯಸ್ಯದೇವೇ ಪರಾಭಕ್ತಿಃ ಯಥಾದೇವೇತಥಾಗುರೌ । ಎಂಬ ಶ್ರುತ್ಯುಕ್ತ ಪ್ರಕಾರ, ಭಗವಂತನಲ್ಲಿ ಪರಭಕ್ತಿಯು ಹೇಗೆ ಅವಶ್ಯಕವೋ ಹಾಗೆಯೇ ಆಚಾರ್ಯನಲ್ಲಿಯೂ ಪರದೇವತೆ ಎಂಬ ಪರಭಕ್ತಿಯು ಆವಶ್ಯಕ "ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇಮಹಾತ್ಮನಃ" ಎಂದು ಈ ಅಚಾರ್ಯಭಕ್ತಿಯಿಂದ ಆಚಾರ್ಯನು ಉಪದೇಶಿಸಿದ ಅರ್ಥಗಳೂ, "ತಸ್ಯೈತೇ ಅಕಥಿತಾಹ್ಯರ್ಥಾಃ" ಎಂದು ಪದವಿಭಾಗ ಮಾಡಿ, ಆಚಾರ್ಯನು ಉಪದೇಶಿಸದ ಅರ್ಥಗಳೂ ಆ ಮಹಾನುಭಾವನಾದ ಶಿಷ್ಯನಿಗೆ ಸ್ಫುರಿಸುತ್ತವೆಯಾದ್ದರಿಂದ ಭಗವಂತನ ರೂಪವೆಂದು ಆಚಾರ್ಯನನ್ನು ಉಪಾಸನೆ (ಧ್ಯಾನ) ಮಾಡಬೇಕು. ಈ ಅರ್ಥವನ್ನು ಮಧುರಕವಿಗಳು ತಮ್ಮ ಅನುಷ್ಠಾನದಿಂದ ನಿರೂಪಿಸಿರುತ್ತಾರೆ. ಆಚಾರ್ಯನಿಗೂ ಭಗವಂತನಿಗೂ ಇರುವ ಸಾಮ್ಯವನ್ನು **"ಇನ್ಪತ್ತಿಲ್ ಇರೈಂಜುಧಲಿಲ್"** ಎಂಬೀ ಪಾಶುರದಲ್ಲಿ ಶ್ರೀಮನ್ನಿಗಮಾಂತ ಮಹಾದೇಶಿಕರು ನಿರೂಪಿಸಿದ್ದಾರೆ. ಇಲ್ಲಿ "ಅಜ್ಞಾನಧ್ವಾಂತ" ಎಂದಾರಂಭಿಸುವ ನ್ಯಾಸವಿಂಶತಿ ಶ್ಲೋಕವನ್ನು ಅನುಸಂಧಾನ ಮಾಡುವುದು.

"ಇನ್ಪತ್ತಿಲ್" ಆನಂದರೂಪವಾದ ಅನುಭವದಲ್ಲಿ, ಮಧುರಕವಿಗಳು "ಕಣ್ಣಿನುಣ್ ಶಿರುತ್ತಾಂಬು" ಪ್ರಬಂಧದ ಮೊದಲನೇ ಪಾಶುರದ ಕೊನೆಯಲ್ಲಿ; "ತೆನ್‌ಕುರುಹೂರ್‌ನಂಬಿ ಎನ್ರಕ್ಕಾಲ್ ಅಣ್ಣಿಕ್ಕುಮ್ ಅಮು

ಅನ್ಬರ್ಕ್ಕೇಅವತರಿಕ್ಕ ಮಾಯನ್ನಿರ್ಕ ವರುಮರೈಹಳ್ ತಮಿೞ್ಶೆಯ್‌ದಾನ್ ತಾಳೇಕೊಂಡು । ತುನ್ಬತ್ತ ಮದುರಕವಿ ತೋನ್ರಕ್ಕಾಟ್ಟುಂ ತೊಲ್ವ್ೞಿಯೇ (ಶೊಲ್ವ್ೞಿಯೇ) ನಲ್ವ್ೞಿಗಳ್ ತುಣಿವಾರ್ ಕಟ್ಕೇ ॥

ದೂರುವಮ್ ಎನ್ನಾವುಕ್ಕೇ" ಎಂದೂ ಎರಡನೇ ಪಾಶುರದ ಆರಂಭದಲ್ಲಿ "ನಾವಿನಾಲ್‌ನವಿತ್ತಿನ್ಬಮೆಯ್‌ದಿನೇನ್" ಎಂದೂ, ನಮ್ಮಾಳ್ವಾರ್ ಅವರ ನಾಮಗ್ರಹಣ ಮಾಡಿದರೆ ಆನಂದವು ಉಂಟಾಗುತ್ತದೆ ಎಂದೂ ಹೇಳಿರುವುದು ವಿವಕ್ಷಿತೆ. **"ಇರೈಂಜುದಲಿಲ"** ಅವರ ಪಾದಸಮಾಶ್ರಯಣ ಮಾಡುವುದರಿಂದ, ಇದು "ಮೇವಿನೇನ್ **ಅವನ್** ಪೊನ್ನಡಿಮೆಯ್‌ಮ್ಮೈಯೇ" ಎಂಬುದರ ಅನುವಾದ. **"ಇಶೈಯುಮವರ್ ಪೇಟ್ರಿಲ್"** ನಾವು ಅಂಗೀಕರಿಸುವ ಪುರುಷಾರ್ಥದಲ್ಲಿ, "ತೇವುಮಟ್ರಱಿಯೇನ್" ಎಂದು ಆಳ್ವಾರೇ ಇವರ ದೇವರು. "ಪೆರಿಯ ಕೋಲತ್ತಿರುವುರು ಕ್ಕಾಣ್ಬನ್ ನಾನ್ ಪೆರಿಯವಣ್‌ಕುರುಹೂರ್‌ನಹರ್ ನಂಬಿಕ್ಕಾಳುಱಿಯನಾಯ್" ಎಂದು ಆಳ್ವಾರ್‌ರವರ ದಾಸನಾಗಿದ್ದು ಕೊಂಡು ಅವರ ಅಭಿಮತ ವಿಷಯವಾದ ಭಗವಂತನನ್ನು ಸೇವಿಸುತ್ತೇನೆ, ಎಂಬುದು ಮಧುರಕವಿಗಳ ಪುರುಷಾರ್ಥ ನಿಶ್ಚಯ. **ಇಹೞ್ದ ಪಲ್ಲುರವಿಲ್**-ಬಿಡದೆ ಶಾಶ್ವತವಾದ ಎಲ್ಲಾ ಬಂಧುತ್ವದಲ್ಲಿಯೂ, 'ಅನ್ನೈಯಾಯ್ **ಅತ್ತನಾಯ್"** ಎಂಬ ಪಾಶುರದ ತಾತ್ಪರ್ಯ. **ಇರಾಗವಮ್ ಮಾಟ್ರಿಲ್**-ಅರ್ಥಕಾಮಗಳಲ್ಲಿ ಆಸೆ ಬಿಡುವುದು. "ನಂಬಿನೇನ್ ಮಡವಾರೈಯುಮ್ ಮುನ್ನೆ **ಲಾಮ್** – ಅಡಿಯೇನ್ ಶದಿರ್ತ್ತೇನಿನ್ರೇ" ಎಂಬ ಅನುಸಂಧಾನವಿದು. **ತನ್‌ಪತ್ತಿಲ್** – ತನ್ನ ವಿಷಯವಾದ ಪ್ರೀತಿಯನ್ನುಂಟು ಮಾಡುವುದು. ಇದು "ನಿನ್ರುತನ್‌ಪುಹೞ್ ಏತ್ತವರುಳಿ ನಾನ್" ಎಂಬ ಪಾಶುರದ ಅರ್ಥ **ವಿನ್ನೈವಿಲಕ್ಕಿಲ್** ಪಾಪವನ್ನು ಹೋಗಲಾಡಿಸುವುದು, "ಪಂಡೈವಲ್ ವಿನ್ನೈಪಾತ್ತಿಯರುಳಿನಾನ್" ಎಂಬ ಪಾಶುರದ ಅರ್ಥ. **ತಹವೋಕ್ಕತ್ತಿಲ್** – ಕೃಪೆಯನ್ನುಂಟು ಮಾಡುವುದು; ಇದು "ಅರುಳ್‌ಕಂಡೀರ್ ಇವ್ವುಲಕಿನಿಲ್ ಮಿಕ್ಕದೇ" ಎಂಬ ಪಾಶುರದ ಅಭಿಪ್ರಾಯ. **ತತ್ತುವತ್ತೈ ಉಣರ್ತ್ತುದಲಿಲ್** – ತತ್ತ್ವಾರ್ಥವನ್ನು ತಿಳಿಸುವುದು, "ವೇದತ್ತಿನುಳ್ಪ್ಪೊರುಳ್ ನಿರ್ಕಪ್ಪಾಡಿ ಎನ್ನೆಂಜುಳ್ ನಿರುತ್ತಿನಾನ್" ಎಂಬ ಅನುಸಂಧಾನವಿದು. **ತನ್ನೈಯಾಕ್ಕಿಲ್** – ತನ್ನ ಸ್ವಭಾವವನ್ನು ಉಂಟು ಮಾಡುವುದು. ಆದಾಗಿ "ಶಯಲ್‌ನನ್ರಾಹತ್ತಿರುತ್ತಿಪ್ಪಣಿಕೊಳ್ವಾನ್" - ಭಗವದ್ಭಾಗವತ ಕೈಂಕರ್ಯದಲ್ಲಿ ಪ್ರೀತಿಯನ್ನುಂಟು ಮಾಡುವುದು ಎಂದಭಿಪ್ರಾಯ. ಈ ಹತ್ತು ವಿಷಯಗಳಲ್ಲಿ **ಅನ್ಬರ್ಕ್ಕೇ ಅವತರಿಕ್ಕುಮ್ ಆಯನ್‌ನಿರ್ಕ** – ಭಕ್ತರಿಗೋಸ್ಕರ ಅವತಾರ ಮಾಡುವ ಗೋಪಾಲನು, ಇದ್ದಾಗ್ಯೂ, ಅವನನ್ನು ಬಿಟ್ಟು, **ಅರುಮರೈಹಳ್ ತಮಿೞ್ಶೆಯ್ದಾನ್ ತಾಳೇಕೊಂಡು,** ಸುಲಭವಾಗಿ ತಿಳಿಯಲಾಗದ, ವೇದಗಳ ಅರ್ಥವನ್ನು, ನಾಲ್ಕು ತಮಿಳ್ ಪ್ರಬಂಧಗಳ ರೂಪದಲ್ಲಿ ಲೋಕಕ್ಕೆ ಉಪದೇಶಿಸಿದ ಆಳ್ವಾರ್‌ರವರ ಶ್ರೀಪಾದಗಳನ್ನೇ ಆಶ್ರಯಿಸಿ; "ಎನ್ನಪ್ಪನಿಲ್ ನಣ್ಣಿತ್ತೆನ್‌ಕುರುಹೂರ್ ನಂಬಿ ಎನ್ರಕ್ಕಾಲ್" ಎಂಬ ಪಾಶುರದ ಅರ್ಥ **ತುನ್ಬತ್ತ**–ಪ್ರಥಮ ಪರ್ವನಿಷ್ಠೈ, ಎಂಬ **ದೋಷವಿಲ್ಲದೆ,** ಆದಾಗಿ ಕೇವಲ ಭಗವದ್ಭಕ್ತಿ **ಮಾತ್ರ** ಪರ್ಯವಸಾನವಾಗಿ, ಭಾಗವತ ಭಕ್ತಿಪರ್ಯಂತ ಹರಿಯುವ ಭಕ್ತಿಗೆ ವಿಘ್ನಗಳೆಂಬ ಪಾಪಗಳಿಲ್ಲದ, **ಮಧುರಕವಿ** – ಚರಮ ಪರ್ವ ನಿಷ್ಠಾಪರ್ಯಂತವಾಗಿ ಆಚಾರ್ಯನನ್ನೇ ಸ್ತುತಿಸಿ "ಮಧುರಕವಿ" ಎಂದು ಹೆಸರನ್ನು ಪಡೆದ ಆಳ್ವಾರ್‌ರವರು, **ತೋನ್ರಕ್ಕಾಟ್ಟುಮ್** – ಲೋಕದಲ್ಲಿ ಎಲ್ಲರೂ ತಿಳಿದುಕೊಳ್ಳುವಂತೆ ತೋರಿಸಿಕೊಡುವ, **ತೊಲ್‌ವೞಿಯೇ** ಅನಾದಿಯಾದ ಮಾರ್ಗವೇ, **ತುಣಿವಾರ್‌ಹಳ್ಕ್ಕ** – ವಿಷಯ ಸುಖಗಳನ್ನು ಜಯಿಸಬೇಕೆಂಬ ದೃಢವಾದ ಅಧ್ಯವಸಾಯವುಳ್ಳವರಿಗೆ **ನಲ್‌ವೞಿಹಳ್** – ಭಕ್ತಿಪ್ರಪತ್ತಿರೂಪವೆಂಬ ಮಾರ್ಗಗಳು

ಮೋಕ್ಷವನ್ನು ಪಡೆಯಲು ವೇದಾಂತಗಳಲ್ಲಿ ಭಕ್ತಿ, ಪ್ರಪತ್ತಿ ಎಂಬ ಎರಡು ಮಾರ್ಗಗಳು ಉಪದೇಶಿಸಲಟ್ಟವೆ. ಹಾಗಿರುವಾಗ ಸಂಸಾರದಿಂದ ವಿಮುಕ್ತಿ ಪಡೆಯಲು ಆಚಾರ್ಯ ಸಮಾಶ್ರಯಣವನ್ನು, ಅನಾದಿಯಾದ ಮಾರ್ಗ

ಆಚಾರ್ಯಸಮಾಶ್ರಯಣ ಗುರುಪರಂಪರಾನು ಸಂಧಾನದ ಅವಶ್ಯಕತೆ

ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್ । ಆಚಾರ್ಯವತ್ತಯಾ ಮುಕ್ತೌ ತಸ್ಮಾದಾಚಾರ್ಯವಾನ್ ಭವೇತ್ ॥ ಎನ್ರು ಆಚಾರವತ್ತೆಯೇ ಸರ್ವರುಕ್ಕುಂ ಮೋಕ್ಷಕಾರಣ ಮೆನ್ರುರುದಿಯಿಟ್ಟಾರ್‌ಗಳ್.

ವೆಂದು ಹೇಳುವುದು ಸರಿಯೇ ಎಂಬ ಪ್ರಶ್ನೆಯು ಇಲ್ಲಿ ಉದ್ಭವಿಸುತ್ತದೆ. ಇದಕ್ಕೆ ಸಮಾಧಾನ – ಆಚಾರ್ಯನನ್ನು ಆಶ್ರಯಿಸಿಯೇ ಭಕ್ತಿ ಪ್ರಪತ್ತಿ ರೂಪ ವಿದ್ಯೆಗಳನ್ನು ಸಾಂಗವಾಗಿ ಉಪದೇಶ ಹೊಂದಬೇಕು. ನಂತರ ಅವುಗಳನ್ನು ಅನುಷ್ಠಿಸಿ ಮೋಕ್ಷವನ್ನು ಪಡೆಯಬೇಕು ಆಚಾರ್ಯ ಸಮಾಶ್ರಯಣವಿಲ್ಲದೆ ಅವನ ಉಪದೇಶ ಹೊಂದದ ಭಕ್ತಿ ಪ್ರಪತ್ತಿ ರೂಪ ವಿದ್ಯೆಗಳು ಮೋಕ್ಷವನ್ನು ಕೊಡಲಾರವು, ಎಂಬ ತಾತ್ಪರ್ಯದಲ್ಲಿ ಆಚಾರ್ಯ ಸಮಾಶ್ರಯಣವು ಅನಾದಿಯಾದ ಭಕ್ತಿ ಪ್ರಪತ್ತಿ ರೂಪವಾದ ಮಾರ್ಗವೆಂದು, ಅನ್ನವೇ ಪ್ರಾಣ ಎಂಬಂತೆ ಕಾರಣ ಕಾರ್ಯಗಳನ್ನು ಒಂದು ಮಾಡಿ ಹೇಳಿದ ಮಾತು

ಈ ಪಾಶುರದಲ್ಲಿ, ಆಚಾರ್ಯನಿಗೂ ಭಗವಂತನಿಗೂ 10 ವಿಧ ಸಾಮ್ಯಗಳನ್ನು ಹೇಳಿರುವುದರಿಂದ ಆಚಾರ್ಯನಲ್ಲಿಯೂ ಪರಭಕ್ತಿಯು ಅತ್ಯವಶ್ಯಕ.

ಆಚಾರ್ಯ ಸಮಾಶ್ರಯಣವು ಅವಶ್ಯಕ–ಪಾಪಿಷ್ಠ : ಕ್ಷತ್ರಬಂಧುಶ್ಚ ಇತ್ಯಾದಿಯಾಗಿ ಆಚಾರ್ಯ ಸಂಬಂಧವೇ ಎಲ್ಲರಿಗೂ ಮೋಕ್ಷ ಕಾರಣವೆಂದು ಸ್ಮೃತಿಕಾರರು ನಿಶ್ಚಯಿಸಿರುತ್ತಾರೆ

ಪಾಪಿಷ್ಠ : ಬಹಳ ಪಾಪ ಮಾಡಿದ, (1) **ಕ್ಷತ್ರಬಂಧುಶ್ಚ** – ಕ್ಷತ್ರಬಂಧುವೂ ಕೂಡ, ಚಕಾರವು ಆಚಾರ್ಯವತ್ತೆಯು, ಬಹಳ ಪಾಪ ಮಾಡಿದವರನ್ನೂ ರಕ್ಷಿಸಬಲ್ಲದು ಎಂದು ತಿಳಿಸುತ್ತದೆ.(2)–**ಪುಂಡರೀಕಶ್ಚ ಪುಣ್ಯಕೃತ್** – ಅತಿಶಯವಾಗಿ ಪುಣ್ಯ ಮಾಡಿದ ಪುಂಡರೀಕನೂ, ಇಲ್ಲಿ ಚಕಾರವು ಕೇವಲ ಪುಣ್ಯವೇ, ಆಚಾರ್ಯ ಸಂಬಂಧವಿಲ್ಲದೆ ಮೋಕ್ಷಕಾರಣವಾಗಲಾರದು ಎಂದು ತಿಳಿಸುತ್ತದೆ **ಆಚಾರ್ಯವತ್ತಯಾ ಮುಕ್ತೌ** – ಆಚಾರ್ಯ ಸಮಾಶ್ರಯಣದಿಂದ, ಮೋಕ್ಷವನ್ನು ಹೊಂದಿದರು. **ತಸ್ಮಾದಾಚಾರ್ಯವಾನ್ ಭವೇತ್**— ಆದ್ದರಿಂದ ಆಚಾರ್ಯನನ್ನು ಆಶ್ರಯಿಸಲೇಬೇಕು. ಆಚಾರ್ಯನನ್ನು ಆಶ್ರಯಿಸಿ, ಜ್ಞಾನವನ್ನು ಪಡೆದು, ಜ್ಞಾನರೂಪ ಭಕ್ತಿ ಪ್ರಪತ್ತಿಗಳನ್ನು ಅನುಷ್ಠಿಸಿ, ಮೋಕ್ಷವನ್ನು ಪಡೆಯುವದು ಕ್ರಮ.

ಆಚಾರ್ಯೋಪದಿಷ್ಟವಾದ ಜ್ಞಾನವು ಭಕ್ತಿ ಪ್ರಪತ್ತಿಗಳನ್ನು ಅನುಷ್ಠಿಸಲು, ಪ್ರಯೋಜನಪಡತ್ತದೆ, ಎಂಬುದು ಆಚಾರ್ಯವತ್ತಯಾ ಎಂಬಲ್ಲಿ ತೃತೀಯಾ ವಿಭಕ್ತಿಯಿಂದ (ಪ್ರಯೋಜಕೇ ತೃತೀಯಾ) ತಿಳಿಸಲ್ಪಡುತ್ತದೆ. ಪಾಪಿಷ್ಠ : ಎಂಬಲ್ಲಿ ಅತಿಶಯಿತ ಪಾಪಿ ಎಂದು ತಿಳಿಸಿರುವಂತೆ, ಪುಂಡರೀಕ : ಎಂಬಲ್ಲಿಯೂ ಪ್ರತಿನಿರ್ದೇಶದಿಂದ ಅತಿಶಯಿತ ಪುಣ್ಯವನ್ನು ಮಾಡಿದವನು ಎಂಬುದು ದ್ಯೋತವಾಗುತ್ತದೆ.

---

1. ಕ್ಷತ್ರಬಂಧೂ ಪಾಖ್ಯಾನ (ವಿಷ್ಣು ಧರ್ಮದಲ್ಲಿ ಹೇಳಿರುವುದು)

ಕ್ಷತ್ರಿಯ ವಂಶದವನಾದ ಒಬ್ಬ ರಾಜನು ರಾಜ್ಯವನ್ನು ಕಳೆದುಕೊಂಡು, ಭಾರ್ಯಾ ಪುತ್ರರ ರಕ್ಷಣೆಗೋಸ್ಕರ ನೀಚ ವೃತ್ತಿಯನ್ನು ಅವಲಂಬಿಸಿದನು. ಇದರಿಂದ ಅವನನ್ನು ಕ್ಷತ್ರಬಂಧು ಎಂದು ಪುರಾಣವು ಹೇಳುತ್ತದೆ. ಅವನು ಕಾಡಿನಲ್ಲಿ ವಾಸಮಾಡಿಕೊಂಡು, ದಾರಿಯಲ್ಲಿ ಬರುವವರನ್ನು ಹಿಂಸಿಸಿ ಅವರ ಹಣಕಾಸುಗಳನ್ನು ಕಸಿದುಕೊಂಡು ಗೃಹಸ್ಥ ವೃತ್ತಿಯನ್ನು ನಡೆಸುತ್ತಿದ್ದನು. ಒಂದು ದಿನ ನಾರದರು ಅವನಿರುವ ಮಾರ್ಗವಾಗಿ ಬರಲು, ಅವರನ್ನು ಹೊಡೆದು ಅವರಲ್ಲಿ ಒಡವೆ ಮೊದಲಾದವುಗಳನ್ನು ಕಿತ್ತುಕೊಳ್ಳಲು ಹೋದಾಗ, ಅವರು ಇವನನ್ನು ಕೃಪೆಯಿಂದ

ಮುಮುಕ್ಷುವುಕ್ಕಾಚಾರ್ಯವಂಶಂ ಭಗವಾನಳವುಂ ಶೆಲ್ಲವನುಸಂಧಿಕ್ಕವೇಣು ಮೆನ್ರೋದಪ್ಪಟ್ಟದು. "ತಮಿಮಂ ಸರ್ವಸಂಪನ್ನಮಾಚಾರ್ಯಂ ಪಿತರಂ ಗುರುಂ" ಎನ್ರುಂ, "ಮಮಾಪ್ಯಖಿಲಲೋಕಾನಾಂ

ಆದ ಕಾರಣ ಆಚಾರ್ಯ ಸಂಬಂಧವೇ ಸರ್ವರಿಗೂ ಮೋಕ್ಷಕಾರಣ ಆ ಆಚಾರ್ಯೋಪದಿಷ್ಟವಾದ ಭಕ್ತಿ ಪ್ರಪತ್ತಿಗಳನ್ನು ಅನುಷ್ಠಿಸಿ ಮೋಕ್ಷವನ್ನು ಪಡಯಬೇಕೇ ವಿನಹ, ಆಚಾರ್ಯೋಪದೇಶವಿಲ್ಲದೆ ಆ ವಿದ್ಯೆಗಳನ್ನು ಅನುಷ್ಠಿಸಿದರೆ ಅದು ಕಾರ್ಯಕಾರಿಯಾಗುವುದಿಲ್ಲ ಆಚಾರ್ಯನಿಂದ ಆ ವಿದ್ಯೆಗಳನ್ನು ಉಪದೇಶ ಹೊಂದಬೇಕಾದರೆ ಮುಮುಕ್ಷುವಿಗೆ ಆ ಆಚಾರ್ಯನಲ್ಲಿ ಉತ್ಕೃಷ್ಟವಾದ ಭಕ್ತಿಯು ಇರಬೇಕು ಈ ಎರಡು ಉಪಖ್ಯಾನಗಳು ತಿಳಿಸುವುದೇನೆಂದರೆ :-

ಸದಾಚಾರ್ಯ ವಿಷಯಕವಾದ ಪ್ರಕೃಷ್ಟ ಪ್ರೇಮವು, ಆ ಆಚಾರ್ಯನು ಪರಮಾನುಗ್ರಹವನ್ನು ಉಂಟು ಮಾಡಿ, ಅನಾದಿಯಾದ ಸಂಸಾರದಲ್ಲಿ ಉಂಟಾದ ಅನಂತ ಮಹಾಪರಾಧಗಳ ದೆಸೆಯಿಂದ ಶಿಷ್ಯನಿಗೆ ಮೋಕ್ಷ ವಿರೋಧವಾದ ಪಾಪಗಳ ಪ್ರತಿಬಂಧಕ ಶಕ್ತಿಯನ್ನು ಹೋಗಲಾಡಿಸುತ್ತದೆ ಪ್ರಕೃಷ್ಟತರ, ಅನಂತ ಪುಣ್ಯವಂತನಾಗಿದ್ದರೂ, ಮೋಕ್ಷವು ಸಿಗಲು ಅಂಥಹ ಆಚಾರ್ಯ ಸಂಬಂಧವು ಸಿಗದ ಪರ್ಯಂತ, ವಿಳಂಬವುಂಟು ಆದ ಕಾರಣ ಎಲ್ಲಾ ಮುಮುಕ್ಷುವಿಗೂ ಅಂಥಹ ಆಚಾರ್ಯಾನುಗ್ರಹ ವಿಶೇಷವನ್ನು ಉಂಟು ಮಾಡಲು, ಆ ಆಚಾರ್ಯನಲ್ಲಿ ಅತ್ಯರ್ಥ ಭಕ್ತಿಯು ಇರಬೇಕು ಇದೇ ಮೋಕ್ಷಕ್ಕೆ ಅಂತರಂಗ ಕಾರಣ

ಭಕ್ತಿ ಪ್ರಪತ್ತಿಗಳೇ ಮೋಕ್ಷಕ್ಕೆ ಕಾರಣವಲ್ಲವೇ ? ಹಾಗಿರುವಾಗ ಆಚಾರ್ಯ ಭಕ್ತಿಯು ಮೋಕ್ಷಕ್ಕೆ ಕಾರಣವೆಂಬುದು ಸರಿಯೇ ಎಂಬ ಪ್ರಶ್ನೆಯು ಇಲ್ಲಿ ಉದ್ಭವಿಸಬಹುದು ಇದಕ್ಕೆ ಸಮಾಧಾನ ಯಥಾಧಿಕಾರ ಭಕ್ತಿ ಪ್ರಪತ್ತಿ ರೂಪ, ಮೋಕ್ಷೋಪಾಯಗಳು ಸದಾಚಾರ್ಯ ವಿಷಯಕವಾದ ಪರಭಕ್ತಿಯಿಲ್ಲದೆ ಸಿದ್ಧಿಸಲಾರವು. ತತ್ತ್ವಜ್ಞಾನಾಕ್ಷೋಸ್ಕರ ಆಚಾರ್ಯನನ್ನು ಆಶ್ರಯಿಸಿ, ಅವನಿಂದ ತತ್ತ್ವಜ್ಞಾನವನ್ನು ಪಡೆದ ಶಿಷ್ಯನಿಗೆ, ಈ ತತ್ತ್ವಜ್ಞಾನವು, ಭಕ್ತಿ ಪ್ರಪತ್ತಿ ರೂಪ ಉಪಾಯಾನುಷ್ಠಾನ ಪರ್ಯಂತ ಪರಿಪಾಕವನ್ನು ಹೊಂದಲಿ ಎಂಬ, ಆ ಸದಾಚಾರ್ಯಾನುಗ್ರಹವು ಅವಶ್ಯಕ. ಅಂಥಹ ಅನುಗ್ರಹವು ಆ ಆಚಾರ್ಯನಲ್ಲಿ ಪರಿಪೂರ್ಣವಾದ ಭಕ್ತಿಯಿಲ್ಲದೆ ಸಿದ್ಧಿಸಲಾರದು. ಆದ ಕಾರಣ ಮುಮುಕ್ಷುವಿಗೆ ಆಚಾರ್ಯನಲ್ಲಿ ಪರಭಕ್ತಿಯು ಅತ್ಯವಶ್ಯಕ ಎಂಬುದು ತಾತ್ಪರ್ಯ "ಯಮೇ ವೈಷವೃಣುತೇ ತೇನ್ಯಭ್ಯಃ" ಎಂಬ ಶುತಿಯ ಅಭಿಪ್ರಾಯವು, ಭಾಷ್ಯ ಗ್ರಂಥದಲ್ಲಿ ವಿವರಿಸಿರುವ ಪ್ರಕಾರ ಆಚಾರ್ಯನು ಶಿಷ್ಯನನ್ನು ವರಿಸಬೇಕು ಎಂಬ ಅಂಶವನ್ನೂ ಒಳಗೊಂಡಿದೆ ಈ ಅರ್ಥಗಳು "ಗುರುಂ ಪ್ರಕಾಶಯೇದ್ಧೀಮಾನ್ ಎಂಬ ಪ್ರಮಾಣ ವಚನದಿಂದ ಮುಂದೆ ಸ್ಪಷ್ಟಪಡಿಸಲ್ಪಡುತ್ತವೆ. ಮೋಕ್ಷದಲ್ಲಿ ಆಸೆಯುಳ್ಳವನಿಗೆ, ಆಚಾರ್ಯವಂಶವು ಭಗವತ್ಪರ್ಯಂತ ಅನುಸಂಧಾನ ಮಾಡಲ್ಪಡಬೇಕೆಂದು ವೇದಗಳು ಹೊಗಳುತ್ತವೆ.

ಕಟಾಕ್ಷಿಸಿ, "ಕ್ಷತ್ರಬಂಧುವೇ ! ನೀನು ಮಾಡುವ ಪಾಪ ಕೃತ್ಯಗಳನ್ನು ನಿನ್ನ ಭಾರ್ಯಾ ಪುತ್ರಾದಿಗಳೂ ಸ್ವಲ್ಪ ವಹಿಸಿ ಕೊಳ್ಳುತ್ತಾರೆಯೇ ತಿಳಿದು ಬಾ," ಎನ್ನಲು, ಅವರ ಕಟಾಕ್ಷದಿಂದ ಸ್ವಲ್ಪ ಜ್ಞಾನೋದಯವಾಗಿ, ಮನೆಗೆ ಹೋಗಿ ಭಾರ್ಯಾಪುತ್ರಾದಿಗಳನ್ನು ಕೇಳಲು, ಅವರು, "ನಮ್ಮನ್ನು ರಕ್ಷಿಸುವ ಭಾರ ನಿನ್ನದು, ನಿನ್ನ ಪಾಪಗಳಿಗೆ ನಾವು ಎಳ್ಳಷ್ಟೂ ಹೊಣೆಯಾಗಲಾರೆವು," ಎಂದು ಹೇಳಿದರು ಇದರಿಂದ ಮನನೊಂದು, ನಾರದರಲ್ಲಿ ಈ ವಿಷಯವನ್ನು ತಿಳಿಸಿ, ಅವರ ಕಾಲಿಗೆ ಬಿದ್ದು ತನ್ನನ್ನು ರಕ್ಷಿಸಬೇಕೆಂದು ಕೇಳಿಕೊಳ್ಳಲು, ಅವರು ಇವನಿಗೆ "ಗೋವಿಂದ" ಎಂಬ ನಾಮವನ್ನು ಉಪದೇಶಿಸಿದರು. ಆ ನಾಮ ಸಂಕೀರ್ತನೆದಿಂದ ಅವನ ಪಾಪಗಳು ತೊಲಗಿ, ಮುಂದಿನ ಜನ್ಮದಲ್ಲಿ ಪರಮಸ್ವಾತ್ವಿಕನಾಗಿ ಹುಟ್ಟಿ, ಭಕ್ತಿಯೋಗವನ್ನು ಅನುಷ್ಠಿಸಿ ಮೋಕ್ಷವನ್ನು ಪಡೆದನು.

2. ಪುಂಡರೀಕ ವೃತ್ತಾಂತ (ಇತಿಹಾಸ ಸಮುಚ್ಚಯ)

ಪುಂಡರೀಕನೆಂಬುವನು ಮಹಾಧರ್ಮಿಷ್ಠನಾಗಿ, ಭಗವಂತನೊಡನೆ ಮಾತಾಡುತ್ತಿದ್ದನು. ಒಂದು ದಿವಸ ತನಗೆ ಮೋಕ್ಷವನ್ನು ಕೊಡಬೇಕೆಂದು ಕೇಳಲು, ಭಗವಂತನು ನಾರದರ ಮೂಲಕ ಅವನಿಗೆ ಮೋಕ್ಷವಿದ್ಯೆಯನ್ನು ಉಪದೇಶಿಸಿ, ಅದನ್ನು ಅನುಷ್ಠಿಸಿ ಮೋಕ್ಷವನ್ನು ಪಡೆಯುವಂತೆ ಮಾಡಿದನು.

ಭಗವಂತನು ಪ್ರಥಮಾಚಾರ್ಯನು

ಗುರುರ್ನ್ನಾರಾಯಣೋ ಗುರುಃ" ಎನ್ರುಂ, "ತ್ವಮೇವಬಂಧುಶ್ಚಗುರುಸ್ತ್ವಮೇವ" ಎನ್ರುಂ, "ಗುರರಸಿ ಗತಿಶ್ಚಾಸಿ ಜಗತಾಂ" ಎನ್ರುಂ ಶೊಲ್ಲುಹಿರ ||ಪಡಿಯೇ ಸರ್ವಲೋಕತ್ತುಕ್ಕುಂ ಪರಮಾಚಾರ್ಯನಾದ ಸರ್ವೇಶ್ವರ್ರ ಬ್ರಹ್ಮಾವುಕ್ಕು ಅಡಿಯಿಲೇ ವೇದಂಗಳೈಕ್ಕೊಡುತ್ತುಂ ಅವಟ್ರೈಕ್ಕು ಅಪಹಾರಂ ಪಿರಂದಪೋದು ಮೀಟ್ಟು ಕ್ಕೊಡುತ್ತುಂ ಇವರ್ ಮುಖಮಾಹ ಶಾಸ್ತ್ರಂಗಳೈ ಪ್ರವರ್ತಿಪ್ಪಿತ್ತುಂ, ಇವರ್ಪುತ್ರರ್ಹಳಾನ

"ಸಚಾಚಾರ್ಯವಂಶೋ ಜ್ಞೇಯಃ "ಆಚಾರ್ಯಣಾಮಸಾವಸಾವಿತ್ಯಾ ಭಗವತ್ತಃ" ಎಂಬುದು ಆಶ್ರುತಿ ವಾಕ್ಯ ಅನುಸಂಧಾನವೆಂದರೆ, ಪ್ರೀತಿಪೂರ್ವಕ ಸ್ಮರಣ 'ತದ್ವಿಜಿಜ್ಞಾಸಸ್ವ' ಎಂಬಲ್ಲಿಯೋವಾದಿಯಲ್ಲಿ ಜ್ಞಾ ಧಾತುವಿಗೆ ಉಪಾಸನ ಪರ್ಯಂತ ತಾತ್ಪರ್ಯವನ್ನು ಕೊಳ್ಳಬೇಕೆಂದು ಆಶಯ. ಆದಕಾರಣ, ಮುಮುಕ್ಷುವಿಗೆ, ಭಗವತ್ಪರ್ಯಂತ ಸರ್ವಾಚಾರ್ಯ ಉಪಾಸನೆಯು ಆವಶ್ಯಕವೆಂಬುದು ವಿಧಿಬಲ ಪ್ರಾಪ್ತ. ತನ್ನ ಆಚಾರ್ಯರನ್ನು ಮಾತ್ರ ಭಕ್ತಿ ಪೂರ್ವಕ ಅನು ಸಂಧಾನ ಮಾಡಿದರೆ ನಾಕೆಂಬುದು ಸರಿಯಲ್ಲ.

ಹೀಗೆ ವಿಧಿಬಲದಿಂದ ಆಚಾರ್ಯೋಪಾಸನೆಯನ್ನು ಮಾಡಬೇಕೆಂಬುದು ಮಾತ್ರವಲ್ಲ. ಭಗವಂತನು ಆ ಆಚಾರ್ಯರುಗಳಲ್ಲಿ ಆವಿರ್ಭವಿಸುರುತ್ತಾನೆ ಯಾದ್ದರಿಂದ, ಅವರಲ್ಲಿ ಪರಭಕ್ತಿಯು ಸ್ವರಸವಾಗಿ ಪರಿಣಮಿಸುತ್ತದೆ ಎಂಬ ಶಾಸ್ತ್ರಾರ್ಥವನ್ನು ವಿಶದೀಕರಿಸಲು ಆಚಾರ್ಯರುಗಳು ಭಗವಂತನಪಾದುಭಾರ್ವ ವಿಶೇಷಯುಕ್ತರು, ಎಂಬುದನ್ನು ಪ್ರಮಾಣ ಪೂರ್ವಕ "**ತಮಿಮಂ ಸರ್ವ ಸಂಪನ್ನಂ**" ಇತ್ಯಾದಿಯಾಗಿ, "**ಅರಿಂದು ಕೊಳ್ವದು**" ಇತ್ಯಂತ ನಿರೂಪಿಸುತ್ತಾರೆ.

ಭಗವಂತನು ಪ್ರಥಮಾಚಾರ್ಯನು :

ತಮಿಮಂ ಸರ್ವಸಂಪನ್ನಂ ಈ ಶ್ಲೋಕವನ್ನು ಧರ್ಮರಾಜನ ರಾಜಸೂಯಯಾಗದಲ್ಲಿ, ಅಗ್ರಪೂಜೆಯನ್ನು ಕೃಷ್ಣನಿಗೆ ಮಾಡಬೇಕಾದ ಸಂದರ್ಭದಲ್ಲಿ, ಸಹದೇವನು ಹೇಳುತ್ತಾನೆ. ನಾರದರೇ ಮೊದಲಾದವರು ಆ ಸಭೆಯಲ್ಲಿ ಕೃಷ್ಣನು ಸಾಕ್ಷಾತ್ ಸರ್ವೇಶ್ವರನೆಂದು ಉಪದೇಶಿಸಿದುದನ್ನು ತಿಳಿದುಕೊಂಡ, ಸಹ ದೇವನು ಕೃಷ್ಣನಿಗೇನೆ ಅಗ್ರಪೂಜೆಯು ಸಲ್ಲ ತಕ್ಕದುದೆಂದು ತೀರ್ಮಾನಿಸಿ, ಈ ಶ್ಲೋಕವನ್ನು ಹೇಳಿದನು. **ತಮ್** - ನಾರದಾದಿಗಳು ಉಪದೇಶಿಸಿದ ಪರತತ್ತ್ವ ವಿಷಯಕನಾದ, **ಇಮಮ್** - ಸಕಲ ಮನುಷ್ಯರಿಗೂ ಪ್ರತ್ಯಕ್ಷನಾಗಿರುವ ಸೌಲಭ್ಯವನ್ನುಳ್ಳ ಈ ಕೃಷ್ಣ ಪರಮಾತ್ಮನನ್ನು, **ಸರ್ವಸಂಪನ್ನಂ** – ಅಗ್ರ ಪೂಜಗೆ ಯೋಗ್ಯವಾದ ಸಕಲ ಕಲ್ಯಾಣ ಗುಣಗಳಿಂದ ಕೂಡಿದ **ಆಚಾರ್ಯಂ** - ಬ್ರಹ್ಮವಿದ್ಯೆಯನ್ನು ಉಪದೇಶಿಸದವನನ್ನೂ **ಪಿತರಂ** - ಎಲ್ಲರಿಗೂ ತಂದೆಯಾದವನನ್ನೂ **ಗುರುಂ**- ತನ್ನ ಉಪದೇಶದಿಂದ, ಸರ್ವರ ಅಜ್ಞಾನಾಂಧಕಾರವನ್ನು ಹೋಗಲಾಡಿಸುವವನನ್ನೂ.

"ಅರ್ಚ್ಯಮರ್ಚಿತು ಮಿಚ್ಛಾಮಿ ಸರ್ವೇಸಂಮಂತು ಮರ್ಹಥ" ಎಂಬುದು ಉತ್ತರಾರ್ಧ. ಪೂಜ್ಯನೂ ಆದ ಈ ಕೃಷ್ಣನನ್ನು, ಪೂಜಿಸಲು ಇಚ್ಛಿಸುತ್ತೇನೆ. ಎಲ್ಲರೂ ಇದಕ್ಕೆ ಸಮ್ಮತಿಸಬೇಕು ಎಂದು ಪ್ರಾರ್ಥಿಸುತ್ತಾನೆ. ಇಲ್ಲಿ ಭಗವಂತನನ್ನು ಆಚಾರ್ಯನೆಂದೂ, ಗುರುವೆಂದೂ ಹೇಳಿರುವುದು, ನಮಗೆ ವಿವಕ್ಷಿತ. ಹಾಗೆಯೇ,

ಮಮಾಪಿ – ನನಗೂ, **ಅಖಿಲ ಲೋಕಾನಾಂ** - ಎಲ್ಲಾ ಲೋಕಗಳಿಗೂ (ಜನರಿಗೂ) **ನಾರಾಯಣ :**- ನಾರಾಯಣನು, **ಗುರುಃ**, ಗುರುವು (ಸ್ವಯಂ) **ಅಗುರುಃ** – ತನಗೆ ಆಚಾರ್ಯನಿಲ್ಲದ ಪರಮಾಚಾರ್ಯನು, **ನಾರಾಯಣೋ ಗುರುಃ**, ಎಂಬಲ್ಲಿ **ನಾರಾಯಣಃ–ಅಗುರುಃ** ಎಂದು ಪದ ವಿಭಾಗ ಮಾಡಬೇಕು. ಇದು.

ಸನತ್ಕುಮಾರಾದಿಹಳ್ಳೈ "ಸ್ವಯಮಾಗತ ವಿಜ್ಞಾನಾ ನಿವೃತ್ತಿಂ ಧರ್ಮಮಾಸ್ಥಿತಾಃ" ಎನ್ರುಂ ಪಡಿಪಣ್ಣಿ ಅವರ್ಹಳ್ ಮುಖಂಗಳಾಲೇ ಹಿತಪ್ರವರ್ತನಂ ಪಣ್ಣಿ ನಿತ್ತುಂ, ಇಪ್ಪಡಿಯೇ ಮತ್ತುಂ ನಾರದ ಪರಾಶರ ಶುಕ ಶೌನಕಾದಿಹಳಾನ ಪಲಮಹರ್ಷಿಹಳ್ಳೈಯಿಟ್ಟು ಅಧ್ಯಾತ್ಮಸಂಪ್ರದಾಯಂಕುಲೈಯಾದಪಡಿ ನಡತ್ತಿಯುಂ

ಭಗವಂತನ ಶಾಸ್ತ್ರ ಪ್ರವರ್ತಕತ್ವಕೃಷಿ

"ಕೃಷ್ಣದ್ವೈಪಾಯನಂ ವ್ಯಾಸಂವಿದ್ಧಿನಾರಾಯಣಂ ಪ್ರಭುಂ । ಕೋಹ್ಯನ್ಯೋಭುವಿಮೈತ್ರೇಯ ಮಹಾಭಾರತ ಕೃದ್ಭವೇತ್" ಎನ್ರುಂ "ಮಹರ್ಷೇಃ ಕೀರ್ತನಾತ್ತಸ್ಯ ಭೀಷ್ಮಃ ಪ್ರಾಂಜಲಿರಬ್ರವೀತ್" ಎನ್ರುಂ ಶೊಲ್ಲುಕಿರಪಡಿ ನಿರ್ಕಿರ ವ್ಯಾಸಾದಿಗಳ್ಳೈಯನುಪ್ರವೇಶಿತ್ತು ಮಹಾಭಾರತ ಶಾರೀರಕಾದಿಹಳ್ಳೈ ಪ್ರವರ್ತಿಪ್ಪಿತ್ತುಂ, ಹಂಸಮತ್ಸ್ಯ ಹಯಗ್ರೀವ ನರನಾರಾಯಣ ಗೀತಾಚಾರ್ಯಾದ್ಯವತಾರಂಗಳಾಲೇ ತಾನೇವೆಳಿನಿನ್ರು ತತ್ವ ಹಿತಂಗಳ್ಳೈ

ವಿಷ್ಣು ಪುರಾಣದಲ್ಲಿ ಭೂದೇವಿಯ ವಚನ ಇಲ್ಲಿಯೂ ನಾರಾಯಣನು ಎಲ್ಲರಿಗೂ ಗುರುವು - ಆಚಾರ್ಯನು ಎಂಬುದು ವಿವಕ್ಷಿತ. **ತ್ವಮೇವ ಇತ್ಯಾದಿ** – ನೀನೇ ಬಂಧು, ನೀನೇ ಗುರು ಇದು ಗೀತಾವಚನ. **ಗುರುರಸಿಗತಿ ಶ್ಚಾಸಿಜಗತಾಂ** – ಪ್ರಪಂಚಕ್ಕೆ ಅಜ್ಞಾನವನ್ನು ಹೋಗಲಾಡಿಸುವ ಗುರು ನೀನೇ, ಜಗತ್ತಿಗೆ ನೀನೇ ಗತಿ ಪ್ರಾಪಕನೂ, ಪ್ರಾಪ್ಯನೂ ನೀನೇ, ಎಂದು ತಾತ್ಪರ್ಯ (ಆಳವಂದಾರ್ ಶ್ರೀ ಸೂಕ್ತಿ) – ಈ ರೀತಿಗಳಲ್ಲಿ ಹೇಳುವ ಪ್ರಕಾರ, ಸರ್ವಲೋಕಗಳಿಗೂ ಪರಮಾಚಾರ್ಯನಾದ ಸರ್ವೇಶ್ವರನು, ಬ್ರಹ್ಮದೇವನಿಗೆ ಆದಿಕಾಲದಲ್ಲಿ ವೇದಗಳನ್ನು ಉಪದೇಶಿಸಿಯೂ ಆ ವೇದಗಳಿಗೆ ಅಪಹಾರವು ಉಂಟಾದಾಗ ಅವುಗಳನ್ನು ತಂದುಕೊಟ್ಟು, ಆ ಬ್ರಹ್ಮದೇವನ ಮುಖವಾಗಿ ತಾನು ಅಂತರ್ಯಾಮಿಯಾಗಿದ್ದುಕೊಂಡು ಶಾಸ್ತ್ರಗಳನ್ನು ಲೋಕದಲ್ಲಿ ಪ್ರವರ್ತಿಸಿಯೂ, ಇವನ ಪುತ್ರರಾದ, ಸನತ್ಕುಮಾರರನ್ನು "ಸ್ವಯಮಾಗತ ವಿಜ್ಞಾನಾಃ, ನಿವೃತ್ತಿಂ ಧರ್ಮಮಾಸ್ಥಿತಾಃ" – ಸ್ವಯಂ ಜ್ಞಾನಿಗಳಾಗಿ, ಪ್ರಾಪಂಚಿಕ ಸುಖಗಳಲ್ಲಿ ಆಸೆ ಇಲ್ಲದೆ, ಭಗವಂತನನ್ನು ಹೊಂದಲು ಧರ್ಮಾನುಷ್ಠಾನ ಪರರನ್ನಾಗಿ ಮಾಡಿ ಅವರ ಮೂಲಕ ಹಿತ ಪ್ರವರ್ತನವನ್ನು ಮಾಡಿಸಿ, ಹೀಗೆಯೇ ನಾರದ, ಪರಾಶರ, ಶುಕ, ಶೌನಕಾದ್ಯನೇಕ ಮಹರ್ಷಿಗಳ ಮೂಲಕ ವೇದಾಂತ ಸಂಪ್ರದಾಯವು ನಷ್ಟವಾಗದ ರೀತಿಯಲ್ಲಿ, ನಡೆಸಿಬಂದನು.

ಭಗವಂತನ ಶಾಸ್ತ್ರಪ್ರವರ್ತಕತ್ವಕೃಷಿ :

ಕೃಷ್ಣದ್ವೈಪಾಯನಂ ವ್ಯಾಸಂ - ಮಹಾಭಾರತ ಕೃದ್ಭವೇತ್ – ಕೃಷ್ಣದ್ವೈಪಾಯನರೆಂದು ಹೆಸರುಳ್ಳವರೂ, **ವ್ಯಾಸಂ** – ವೇದಗಳನ್ನು ವಿಭಜನೆ ಮಾಡಿದರಿಂದ ವ್ಯಾಸರೆಂದು ಹೆಸರುಳ್ಳವರೂ, ಆದ ವೇದವ್ಯಾಸರನ್ನು ಸಾಕ್ಷಾತ್ **ನಾರಾಯಣಂ ಪ್ರಭುಮ್‌ವಿದ್ಧಿ** – ಸರ್ವೇಶ್ವರನಾದ ನಾರಾಯಣನೆಂದು ತಿಳಿಯಬೇಕು ಏಕೆಂದರೆ ಅವನು ವಿನಹ, ಈ ಭೂಮಿಯಲ್ಲಿ, ಎಲೈ ಮೈತ್ರೇಯನೇ ಬೇರಯಾರು ಮಹಾಭಾರತವನ್ನು ಬರೆಯಲು ಅರ್ಹರು.

ಮಹರ್ಷೇಃ ಕೀರ್ತನಾತ್ತಸ್ಯಭೀಷ್ಮಃ ಪ್ರಾಂಜಲಿರಬ್ರವೀತ್ – ಆ ಮಹರ್ಷಿಯ ನಾಮ ಗ್ರಹಣವನ್ನು ಭೀಷ್ಮರು ಕೈಮುಗಿದುಕೊಂಡು ಹೇಳಿದರು [ಆಚಾರ್ಯ ನಾಮಗ್ರಹಣದಲ್ಲಿ ಕೈಮುಗಿದುಕೊಂಡಿರಬೇಕೆಂಬುದು ಶಿಷ್ಟಾನುಷ್ಠಾನ]. ಹೀಗೆ ವೈಭವವುಳ್ಳ ವ್ಯಾಸರ ಮೂಲಕ ಮಹಾಭಾರತ ಶಾರೀರಕಾದಿ ಶಾಸ್ತ್ರಗಳನ್ನು ಲೋಕದಲ್ಲಿ ಭಗವಂತನು ಪ್ರವರ್ತಿಸಿದನು. ವ್ಯಾಸರು ಭಗವಂತನ ಅನುಪ್ರವೇಶಾವತಾರ. ಹಾಗೆಯೇ ಹಂಸ, ಮತ್ಸ್ಯ, ಹಯಗ್ರೀವ, ನರ ನಾರಾಯಣ ಗೀತಾಚಾರ್ಯಾದ್ಯವತಾರಗಳನ್ನೆತ್ತಿ ತಾನೇ ಪ್ರತ್ಯಕ್ಷವಾಗಿಯೂ ತತ್ತ್ವಹಿತ (ಪುರುಷಾರ್ಥ)ಗಳನ್ನು ಪ್ರಕಾಶಪಡಿಸಿದನು.

ಪ್ರಕಾಶಿಪ್ಪಿತ್ತುಂ, ತಾನುರುಳಿಚ್ಚೆಯದ್ದ ವರ್ಥಂಗಳೈಯೆಲ್ಲಾಂ ಶ್ರೀಭೀಷ್ಮರ್ ಮುದಲಾನಜ್ಞಾ ನಾಧಿಕರ್ಕೈ ಯಿಟ್ಟು ಮೂದಲಿಪ್ಪಿತ್ತುಂ,

ಪಂಚರಾತ್ರಾಗಮವಕ್ತಾ ನಾರಾಯಣನು

"ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾನಾರಾಯಣಸ್ಸ್ವಯಂ" ಎನ್ಗಿರಪಡಿಯೇ ಅಡಿಯಿಲೇ ತಾನರುಳಿಚ್ಚೆಯದ್ದ ಭಗವಚ್ಛಾಸ್ತ್ರತ್ತೈ "ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಶ್ಶೂದ್ರೈಶ್ಚ ಕೃತಲಕ್ಷಣೈಃ । ಅರ್ಚನೀಯಶ್ಚ ಸೇವ್ಯಶ್ಚ ನಿತ್ಯಯುಕ್ತೈಸ್ಸ್ವಕರ್ಮಸು । ಸಾತ್ವತಂವಿಧಿಮಾಸ್ಥಾಯ ಗೀತಸ್ಸಂಕರ್ಷಣೇನ ಯಃ । ದ್ವಾಪರಸ್ಯಯುಗಸ್ಯಾಂತೇ ಆದೌ ಕಲಿಯುಗಸ್ಯಚ" ಎನ್ಗಿರಪಡಿಯೇ ಅವಸರಂಗಳಿಲೇ ಆವಿಷ್ಕರಿತ್ತುಂ,

ಆಳ್ವಾರುಗಳು ಭಗವಂತನ ಅನುಪ್ರವೇಶಾವತಾರ

1) **"ಪೂರ್ವೋತ್ಪನ್ನೇಷು ಭೂತೇಷು ತೇಷು ತೇಷು ಕಲೌಪ್ರಭುಃ**
ಅನುಪ್ರವಿಶ್ಯಕುರುತೇ ಯತ್ಸಮೀಹಿತ ಮಚ್ಯುತಃ"1

ಅನಂತರ ತಾನು ಕೃಪೆಯಿಂದ ಹೇಳಿದ ಅರ್ಥಗಳನ್ನೆಲ್ಲಾ ಆ ಭಗವಂತನು ಭೀಷ್ಮರೇ ಮೊದಲಾದ ಮಹಾ ಜ್ಞಾನಿಗಳನ್ನು ಮುಂದಿಟ್ಟುಕೊಂಡು ಧರ್ಮರಾಜಾದಿಗಳಿಗೆ ಹೇಳಿಸಿದನು.

ಪಂಚರಾತ್ರಾಗಮಕ್ಕೂ ಭಗವಂತನೇವಕ್ತಾ :–

ಪಂಚರಾತ್ರಾಸ್ಯ ಕೃತ್ಸ್ನಸ್ಯವಕ್ತಾ ನಾರಾಯಣ : ಸ್ವಯಮ್ ।– ಪಂಚರಾತ್ರಸಂಹಿತೆಗಳನ್ನೆಲ್ಲಾ ನಾರಾಯಣನು ತಾನೇ ಉಪದೇಶಿಸಿದನು. ಕೃತಯುಗದಲ್ಲಿ ಉಪದೇಶಿಸಿದ ಈ ಸಂಹಿತೆಯು ಮಧ್ಯೆ ಅಂತರ್ಧಾನವಾಗಲು-(ಮರೆಯಲು) ಪುನಃ **ಸಾತ್ವತಂ ವಿಧಿಮಾಸ್ಥಾಯ ಗೀತ ಸ್ಸಂಕರ್ಷಣೇನಯಃ । ದ್ವಾಪರಸ್ಯಯುಗಸ್ಯಾಂತೇ ಅದೌಕಲಿಯುಗಸ್ಯಚ** – ದ್ವಾಪರ ಯುಗದ ಅಂತ್ಯದಲ್ಲಿಯೂ - ಕಲಿಯುಗದ ಆರಂಭದಲ್ಲಿಯೂ, **ಗೀತ ಸ್ಸಂಕರ್ಷಣೇನಯಃ** ಯಾವ - ಪಂಚರಾತ್ರಾಗಮಗಳು ಸಂಕರ್ಷಣ ರೂಪಿಯಾದ ಭಗವಂತನಿಂದ. ಪುನಃ ಗೀತಃ– ಪ್ರಕಾಶಪಡಿಸಲ್ಪಟ್ಟಿತೋ **ಸಾತ್ವತಂ ವಿಧಿಮಾಸ್ಥಾಯ** – ಆ ಪಂಚರಾತ್ರಾಗಮ ವಿಧಿಯನ್ನು ಅವಲಂಬಿಸಿ, **ಕೃತ ಲಕ್ಷ ಣೈ :–** (ತಪ್ತ) ಚಕ್ರಾಂಕನ ಚಿಹ್ನಗಳಿಂದ ಕೂಡಿದ, **ನಿತ್ಯಯುಕ್ತೈಃ– ಸ್ವಕರ್ಮಸು** - ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳಲ್ಲಿ ನಿರತರಾದ **ಬ್ರಾಹ್ಮಣೈಃ ಕ್ಷತ್ರಿಯೈಃ ವೈಶ್ಯೈಃಶೂದ್ರೈಶ್ಚ,** ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರಿಂದ **ಅರ್ಚನೀಯಶ್ಚ ಸೇವ್ಯಶ್ಚ** – ಆ ಭಗವಂತನು ಪೂಜಿಸಲ್ಪಡಬೇಕು- ಹಾಗೆಯೇ ಸೇವ್ಯಶ್ಚ– ಕೈಂಕರ್ಯಗಳಿಂದ ಸೇವಿಸಲ್ಪಡಬೇಕು. ಅಂದರೆ ಅವನಿಗೆ ಪೂಜಾದಿ ಕೈಂಕರ್ಯಗಳನ್ನು ಮಾಡಬೇಕು ಎಂದರ್ಥ. ಈ ವಚನದ ಪ್ರಕಾರ, ಕೃತಯುಗಾರಂಭದಲ್ಲಿ ನಾರಾಯಣನು ತಾನೇ ಉಪದೇಶಿಸಿದ ಪಂಚರಾತ್ರಾ ಗಮಗಳು ಮಧ್ಯ ಮರೆಯಾಗಲು, ಪುನಃ ಸಂಕರ್ಷಣ ರೂಪಿಯಾದ ಭಗವಂತನು ದ್ವಾಪರಯುಗದ ಅಂತ್ಯದಲ್ಲಿಯೂ ಕಲಿಯುಗದ ಆರಂಭದಲ್ಲಿಯೂ, ಆ ಪಾಂಚರಾತ್ರಾಗಮಗಳನ್ನು ಲೋಕಕ್ಕೆ ಪ್ರಕಾಶಪಡಿಸಿದನು, ಎಂಬುದು ವ್ಯಕ್ತ.

ಆಳ್ವಾರುಗಳು ಭಗವಂತನ ಅನುಪ್ರವೇಶಾವತಾರ

ಅನಂತರ, **1) ಪೂರ್ವೋತ್ಪನ್ನೇಷುಭೂತೇಷು........ಅಚ್ಯುತಃ** ಎಂಬ ವಚನದ ಪ್ರಕಾರ **ಪರಾಂಕುಶ – ನಮ್ಮಾಳ್ವಾರ್, ಪರಕಾಲ—ತಿರುಮಂಗೈಯಾಳ್ವಾರ್, ಮೊದಲಾದ ಆಳ್ವಾರುಗಳ ರೂಪದಲ್ಲಿ ಹೊಸದಾದ ದಶಾವತಾರವನ್ನೆತ್ತಿ–ಅಂದರೆ ಈ ಹತ್ತು ಆಳ್ವಾರುಗಳ ರೂಪದಲ್ಲಿ (ಮಧುರಕವಿಗಳೂ, ಆಂಡಾಳ್**

ಎಱಿರಪಡಿಯೇ ಪರಾಂಕುಶ ಪರಕಾಲಾದಿರೂಪತ್ತಾಲೇ ಅಭಿನವಮಾಹ ಒರುದಶಾವತಾರಂ ಪಣ್ಣಿ ಮೇಘಂಗಳ್ ಸಮುದ್ರಜಲತ್ತೈವಾಂಗಿ "ಸರ್ವೋಪಜೀವ್ಯಮಾನ ತಣ್ಣೀರಾಕ ಉಮಿೞುಮಾಪ್ಪೋಲೇ ವೇದಾರ್ಥಂಗಳಿಲ್" ವೇಂಡುಂ ಸಾರತಮಾಂಶತ್ತೈ ಸರ್ವರುಕ್ಕುಂ ಅಧಿಕರಿಕ್ಕಲಾನ ಭಾಷೈಯಾಲೇ ಸಂಗ್ರಹಿತ್ತು ಕ್ಕಾಟ್ಟಿಯುಂ,

---

ಸಹ ನಮ್ಮಾಳ್ವಾರ್ ಪೆರಿಯಾಳ್ವಾರ್‌ಗಳೊಡನೆ ತದೀಯರೆಂದು ಪರಿಗಣಿಸಲ್ಪಡುತ್ತಾರೆ) ಅನುಪ್ರವೇಶಾವತಾರವನ್ನು ಮಾಡಿ, ಮೇಘಗಳು ಸಮುದ್ರದ ನೀರನ್ನು ಕುಡಿದು, ಸರ್ವರಿಗೂ ಉಪಕಾರವಾಗುವ ಸ್ವಾದುವಾದ, ತಣ್ಣೀರಾಗಿ ವರ್ಷಿಸುವಂತೆ, ತ್ರೈವರ್ಣಾಧಿಕಾರವಾದ ವೇದಾರ್ಥಗಳ (ಇಲ್ಲಿ ವೇದಗಳೂ ಅವುಗಳ ಉಪಬೃಂಹಣಗಳಾದ ಇತಿಹಾಸ ಪುರಾಣಗಳೂ ವಿವಕ್ಷಿತ) ಸಾರಾಂಶವನ್ನು ವರ್ಣಾಶ್ರಮ ಭೇದವಿಲ್ಲದೆ ಎಲ್ಲರೂ ಅಧಿಕರಿಸಬಹುದಾದ ತಮಿಳು ಭಾಷೆಯಲ್ಲಿ (**ಅಗಸ್ತ್ಯಭಾಷೆ**) ಸಂಗ್ರಹಿಸಿ ತೋರಿಸಿದನು.

ಅದಾಗಿ ಆಳ್ವಾರುಗಳು ನಿತ್ಯಸೂರಿಗಳ ಅವತಾರ. "ಅಜಾಯಮಾನೋ ಬಹುಧಾವಿಜಾಯತೇ" ಎಂದು ಪುಣ್ಯಪಾಪರೂಪ ಕರ್ಮ ಸಂಬಂಧವಿಲ್ಲದ ಭಗವಂತನು ಹೇಗೆ ಈ ಲೋಕದಲ್ಲಿ ಬದ್ಧಚೇತನರನ್ನು ಉದ್ಧರಿಸಲು ಸ್ವೇಚ್ಛೆಯಿಂದ ಅವತಾರವನ್ನು ಎತ್ತುತ್ತಾನೆಯೋ ಹಾಗೆಯೇ ನಿತ್ಯಸೂರಿಗಳೂ ಈ ಆಳ್ವಾರುಗಳ ರೂಪದಲ್ಲಿ, ಪರಮಾತ್ಮನ ಇಚ್ಛಾಧೀನವಾದ ಸ್ವೇಚ್ಛೆಯಿಂದ ಅವತಾರ ಮಾಡಿರುತ್ತಾರೆ. "ಆದಿ ಭಕ್ತಾಸ್ತು ಅನಂತ ಗರುಡವಿಷ್ವಕ್ಸೇನಾದೀನಾ ಮಿಚ್ಛಾವತಾರಭೇದಾ ಇತಿ ಪುರಾಣ ಪ್ರಸಿದ್ಧಮ್" ಎಂದು ಆದಿಭಕ್ತರಾದ ಆಳ್ವಾರುಗಳು ಅನಂತಗರುಡ ವಿಷ್ವಕ್ಸೇನಾದಿಗಳ ಸ್ವೇಚ್ಛಾವತಾರರೆಂಬುದು ಪುರಾಣ ಪ್ರಸಿದ್ಧವೆಂದು ನಾರದೀಯವಚನ, ಭಾರ್ಗವ ಉಪಪುರಾಣಗಳ ಆಧಾರದಮೇಲೆ, ಶ್ರೀಮನ್ನಿಗಮಾಂತ ಮಹಾದೇಶಿಕರವರು, ಶ್ರೀಶತದೂಷಣಿಯಲ್ಲಿ ಅಲೇಪಕ ಮತಭಂಗವಾದದಲ್ಲಿ ಅನುಗ್ರಹಿಸಿದ್ದಾರೆ. ಇವರುಗಳ ಜನ್ಮವು ಪುಣ್ಯಪಾಪರೂಪಕರ್ಮದಿಂದಲ್ಲ. ಅಪ್ರಾಕೃತವಾದ ದಿವ್ಯಮಂಗಳ ವಿಗ್ರಹರೂಪದಲ್ಲಿ ಅವತರಿಸಿದ್ದರೂ, ಪ್ರಾಕೃತ ಜನಗಳ ಕಣ್ಣಿಗೆ, ಭಗವಂತನ ಹಾಗೆ, ಮಾಂಸರೂಪವಾದ ಮನುಷ್ಯ ಶರೀರದಂತೆ ಕಾಣಿಸುತ್ತಾರೆಯಷ್ಟೆ ಆಯಾಯಾ ವರ್ಣಗಳಲ್ಲಿ ಹುಟ್ಟಿ ಆಯಾಯಾ ವರ್ಣಾಶ್ರಮ ಧರ್ಮಗಳನ್ನು ಲೋಕನ್ಯಾಯವನ್ನು ಅನುಸರಿಸಿ ಅಭಿನಯ ಮಾಡುತ್ತಾರೆಯೇ ವಿನಹ, ಆ ಜಾತಿಗೆ ಸೇರಿದವರಲ್ಲ. ಭಗವಂತನ ಹಾಗೆ ಇವರು ಜಾತ್ಯತೀತರು. ಪರಮಪೂಜ್ಯರು. ಇವರುಗಳು ಉಪದೇಶಿಸಿರುವ ಪ್ರಬಂಧಗಳು ಅಜ್ಞಾನ, ಅನ್ಯಥಾಜ್ಞಾನ, ವಿಪರೀತಜ್ಞಾನಗಳಿಲ್ಲದಿರುವುದರಿಂದ ಪರಮೋಪಾದೇಯಗಳು. ಇವುಗಳೇ ಸಂಪ್ರದಾಯಾರ್ಥಗಳಿಗೆ ಮೂಲಭೂತವಾದವು, ಎಂಬೀ ಅಂಶಗಳು ಇಲ್ಲಿನ ಸಾರಾಂಶ. "ಸಂಕಲ್ಪಾದೇವತಚ್ಛ್ರುತೇಃ" – ಎಂಬ ಬ್ರಹ್ಮಸೂತ್ರದಲ್ಲಿ ನಿತ್ಯಸೂರಿಗಳ ಅವತಾರಗಳು ವಿವಕ್ಷಿತವಾಗಿವೆ. ಬ್ರಹ್ಮವಿದ್ಯಾರೂಪವಾದ ಉಪನಿಷದ್ಭಾಗಗಳ ಉಪಬೃಂಹಣದಿಂದ ಸರ್ವಚೇತನೋಜ್ಜೀವನವು ಪರಾಂಕುಶಾದಿಗಳ ಪ್ರಬಂಧಗಳ ಗುರಿ. ಆದ್ದರಿಂದ ಅವೈದಿಕ ಭಾಷೆಯಲ್ಲಿ ಪ್ರಬಂಧಗಳನ್ನು ಅವರುಗಳು ಮಾಡಿರುವುದೂ ಪರಮಕರುಣೆಯಿಂದ ಸರ್ವಜನರ ಉಪಯೋಗಕ್ಕಾಗಿಯೇ ಎಂದು ತಿಳಿಯಬೇಕು.(2) "ಭಾಷಾಗೀತಿ ಪ್ರಶಸ್ತಾ... .ಭೂಮಿಕಾಭೇದ ಯೋಗ್ಯಾ" ಎಂಬ ದ್ರಮಿಡೋಪನಿಷತ್ಸೂಕ್ತಿಯು ಇಲ್ಲಿ ಅನುಸಂಧೇಯ. ಭೂಮಿಕಾಪದವು – ಇಚ್ಛೆಯಿಂದ ಪರಿಗ್ರಹಿಸಿದ ಅನೇಕ ಶರೀರಗಳು

---

1) **ಪೂರ್ವೋತ್ಪನ್ನೇಷು** —ಪೂರ್ವೇ ಚ ತೇ ಉತ್ಪನ್ನಾಶ್ಚ, ಪೂರ್ವೋತ್ಪನ್ನಾಃ, **ತೇಷು**, ಯತ್ರ ಋಷಯಃ ಪ್ರಥಮಜಾ ಯೇ ಪುರಾಣಾಃ, ಯತ್ರ ಪೂರ್ವೇ ಸಾಧ್ಯಾಸ್ಸಂತಿದೇವಾಃ, ಎಂಬ ಶ್ರುತಿವಾಕ್ಯದ ಪ್ರಕಾರ. ನಿತ್ಯಸೂರಿಗಳು 'ಪೂರ್ವ' ಶಬ್ದ ವಿವಕ್ಷಿತರು. ಅವರುಗಳು ಉತ್ಪನ್ನಾಃ – ಈ ಲೋಕದಲ್ಲಿ ಆಳ್ವಾರುಗಳ ರೂಪದಲ್ಲಿ ಅವತರಿಸಿದ್ದಾರೆ. – **ಭೂತೇಷು** – ಭೂಃ ಸತ್ತಾಯಾಂ ವಾಚಿ, ಎಂದು ಭಗವದ್ಭಕ್ತಿ ಸಾಕ್ಷಾತ್ಕಾರಗಳಿಂದ ಸತ್ತೆ

ತ್ತಿ ಪ್ರವರ್ತಿಪ್ಪಿತ್ತ ಸತ್ವಥತ್ತುಕ್ಕುಪ್ರಕಟರಾಯುಂಪ್ರಚ್ಛನ್ನರಾಯುಂ ಮಿರುಂದುಳ್ಳ ಪಾಷಂಡಿ ಪರಿಹೋಧಂ ವಾರಾಮ್ಮೈಕ್ಕಾಹ, "ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯ ಂತನುಂ। ಮಗ್ನಾನುದ್ಧರತೇ ಲೋಕಾನ್ಕಾರುಣ್ಯಾಚ್ಛಾಸ್ತ್ರಪಾಣಿನಾ" ಎನ್ರುಂ, ತಹವಾಡೈಪ್ಪಿರಾನಾರ್ ಪಿರಮಗುರುವಾಹಿ ವಂದು" ಎನ್ರುಂ ಶೊಲ್ಲು ಪಿರಪಡಿಯೇ, ಅಗಸ್ತ್ಯ ಾನ ದೇಶತ್ತಿಲೇ ಅನೇಕ ದೇಶಿಕಾಪದೇಶತ್ತಾಲೇಯವತರಿತ್ತರುಳಿನರ್. ಇತ್ತೈಕ್ಕಣಿಶಿತ್ತು

'ದಶಧಾ ನಿರ್ವರ್ತಯನ್ ಭೂಮಿಕಾಂ' (ದಶಾವತಾರಸ್ತೋತ್ರ) 'ಬಹುವಿಧಭೂಮಿಕಾ ಪರಿಗ್ರಹೇಪಿ ಪಾರಮ್ಯಾಂ' (ಸಂಕಲ್ಪ ಸೂರ್ಯೋದಯ) ಎಂಬ ಶ್ರೀಸೂಕ್ತಿಗಳು ಇಲ್ಲಿ ಗಮನಾರ್ಹ ಪ್ರಲವೇ ತತ್ವ ವಿಶೇಷಣದಿಂದ ಶಿಷ್ಟ ಪರಿಗೃಹೀತತ್ವವು ಹೇಳಲ್ಪಟ್ಟಿತು.

ಚಾರ್ಯರುಗಳು ಭಗವಂತನ ಸಾಕ್ಷಾದವತಾರ :-

ಇಪ್ಪಡಿತ್ತಾನ್ ಪ್ರವರ್ತಿಪ್ಪಿತ್ತ ಸತ್ವಥತ್ತುಕ್ಕು, ಇತ್ಯಾದಿ - ಹೀಗೆ ಭಗವಂತನು ಪ್ರವರ್ತಿಸಿದ ಕ್ಕೆ ಪ್ರಕಟವಾಗಿಯೂ ಪ್ರಚ್ಛನ್ನರಾಗಿಯೂ [ಗುಪ್ತರು] ಇರುವ ಪಾಷಂಡಿಗಳಿಂದ, ಆಡಚಣೆ ಬಾರದೆ **ಸಾಕ್ಷಾನಾರಾಯಣೋ ದೇವಃ -- ಪಾಣಿನಾ** - ಎಂಬಂತೆ ನಾರಾಯಣನು ಶಾಸ್ತ್ರವೆಂಬ ದ, ಸಂಸಾರದಲ್ಲಿ ಮುಳುಗಿದ ಚೇತನರನ್ನು **ಸಾಕ್ಷಾತ್ತಾಗಿ** ಉದ್ಧರಿಸಲು, **ಅನೇಕ** ಆಚಾರ್ಯರುಗಳ), ಅಂದರೆ ನಾಥ, ಯಾಮುನ, ಯತಿವರ, ನಿಗಮಾಂತ ಮಹಾದೇಶಿಕ ರೂಪದಲ್ಲಿ ಅಗಸ್ತ್ಯರಿಂದ ಲ್ಪಟ್ಟ ದಕ್ಷಿಣ **ದೇಶ**ದಲ್ಲಿ ಅವತರಿಸಿದ್ದಾನೆ. ಆರ್ಯಾವರ್ತಾದಿ ಪುಣ್ಯಭೂಮಿಗಳು ಈ ಕಲಿಯುಗದಲ್ಲಿ **ಭ**ೂಯಿಷ್ಠವಾಗಿರುವುದರಿಂದ, ಅಗಸ್ತ್ಯ ಮುನಿಗಳು ವಾಸಮಾಡಿಕೊಂಡಿರುವ ದಕ್ಷಿಣ **ದೇಶ**ಕ್ಕೆ ಪ್ರಾಶಸ್ತ್ಯ, ೂಚಿಸುವುದು, **ಅಗಸ್ತ್ಯ ಮುನಿಸೇವಿತ ಮಾನದೇಶತ್ತಿಲೇ** ಎಂಬ ಶ್ರೀ ಸೂಕ್ತಿಗಳ ಸ್ವಾರಸ್ಯ. **ನ್ನಾರಾಯಣೋದೇವ :- ಪೀತಕವಾಡೈಪ್ಪಿರಾನಾರ್ ಪಿರಮ ಗುರುವಾಹಿವಂದು**,(೩) ಎಂಬ ವಚನಗಳೂ, ಆಚಾರ್ಯರುಗಳ ಅವತಾರವು ಸಾಕ್ಷಾದವತಾರಗಳೆಂದು ಪ್ರಮಾಣೀಕರಿಸುತ್ತವೆ ಶಬ್ದವನ್ನು **ಉದ್ಧರತೇ** ಎಂಬಲ್ಲಿ ಅನ್ವಯಿಸಿದರೆ, ಚೇತನೋಜ್ಜೀವನವು 'ಭಗವಂತನ ಸಾಕ್ಷಾತ್ಕೃತ್ಯ' ದ್ಯೋತವಾಗುತ್ತದೆ "ಎರುತ್ತುಕ್ಕೊಡಿಯುಡೈಯಾನುಂ, ಪಿರಮನುಂ, ಇಂದಿರನುಂ, ಮತ್ತು ರುಂ ಇಪ್ಪಿರವಿ ಎನ್ರುಂನೋಯ್ಕು ಮರುಂದರಿವಾರುಮಿಲ್ಲೈ" - ವೃಷಭಧ್ವಜನೂ ಬ್ರಹ್ಮದೇವನೂ ೂ, **ಬೇರೆ**ಯಾರೂ ಸಹ, ಈ ಸಂಸಾರವೆಂಬ ವ್ಯಾಧಿಗೆ ಔಷಧಿ ಏನೆಂಬುದನ್ನು ತಿಳಿಯರು, ಎಂಬ ಳ್ವಾರ್ ಶ್ರೀ ಸೂಕ್ತಿಯು ಇಲ್ಲಿ ಭಾವ್ಯ.

ಪಡೆದವರು. ಸದಾಪಶ್ಯಂತಿ ಸೂರಯಃ - ಎಂಬ ಶ್ರುತಿವಾಕ್ಯದಂತೆ ನಿತ್ಯವೂ ಅಸ್ಖಲಿತ ಪರಿಪೂರ್ಣ ಪ್ರ**ಕೃಷ್ಟ** ತತ್ತ್ವಾನುಭವ ಲಕ್ಷಣ ಸತ್ತಾವಿಶೇಷವಂತರು. **ತೇಷು ತೇಷು** - ಜಾತಿವರ್ಣಗಳನ್ನು ಅನಾದರಿಸಿ ರ **ಪ್ರ**ಕೃಷ್ಟ ಸುಕೃತ ತಾರತಮ್ಯಕ್ಕನುಗುಣವಾಗಿ, ಸಕಲವರ್ಣಗಳಲ್ಲಿಯೂ ಅವತರಿಸಿದವರು. **ಕಲೌಪ್ರಭುಃ** ಯುಗದಲ್ಲಿ, ಪ್ರಭುವಾದ ಸರ್ವೇಶ್ವರನು [ಪ್ರಭುತ್ವವು - [ತಾನು ಅನುಪ್ರವೇಶಮಾಡಲು ಯಾರ ೂ ಇಲ್ಲದ ಪ್ರಭುತ್ವ ಸೂಚಕ] **ಅಚ್ಯುತಃ** - ಆಶ್ರಿತರನ್ನು ನರಕಾದಿಗಳಲ್ಲಿ ಜಾರಿಬೀಳದೆ ಕಾಪಾಡುವ ಗಿ **ಮತ್ಸಮಿಹೀತಂ** - ಸಮೀಚೀನವಾದ ರಕ್ಷಣವನ್ನು, **ಅನುಪ್ರವಿಶ್ಯ** ಆಯಾಯಾ ಆಳ್ವಾರಾಗಿ ಅವ ಕ್ಷಿತ್ತಾದ ನಿತ್ಯಸೂರಿಗಳಲ್ಲಿ, ಅನುಪ್ರವೇಶಿಸಿ **ಕುರುತೇ** - ಮಾಡುತ್ತಾನೆ—(ಮುಂದುವರದಿದೆ.)

"ಕಲೌಖಲುಭವಿಷ್ಯಂತಿನಾರಾಯಣ ಪರಾಯಣಾಃ ।
ಕ್ವಚಿತ್ಕ್ವಚಿನ್ಮಹಾಭಾಗಾ ದ್ರಮಿಡೇಷು ಚ ಭೂರಿಶಃ ।
ತಾಮ್ರಪರ್ಣೀನದೀಯತ್ರ ಕೃತಮಾಲಾಪಯಸ್ವಿನೀ ।
ಕಾವೇರೀಚಮಹಾಭಾಗಾ ಪ್ರತೀಚೀಚ ಮಹಾನದೀ" ॥
ಎನ್ರು ಮಹರ್ಷಿ ಅರುಳಿಚ್ಚೆಯ್‌ದಾನ್.

ಆಳ್ವಾರಾಚಾರ್ಯರುಗಳ ಅವತಾರ - ಭಾಗವತದಲ್ಲಿ ಸೂಚನೆ :

ಈ ಆಳ್ವಾರ್ ಆಚಾರ್ಯರುಗಳ ಅವತಾರವನ್ನೂ ಅವರುಗಳ ಪರಮೈಕಾಂತಿ ಧರ್ಮವನ್ನೂ ಉದ್ದೇಶಿಸಿ, **"ಕಲೌಖಲು ಭವಿಷ್ಯಂತಿ ನಾರಾಯಣ ಪರಾಯಣಾಃ,** ಇತ್ಯಾದಿ ಮಹರ್ಷಿಯಾದ ಶುಕರು ಶ್ರೀಭಾಗವತದಲ್ಲಿ ಕೃಪೆಯಿಂದ ಹೇಳಿದ್ದಾರೆ.

---

2. ಭಾಷಾಗೀತಿ ಪ್ರಶಸ್ತಾ ಭಗವತಿವಚನಾತ್ ರಾಜವಚ್ಚೋಪಚಾರಾತ್
ಸಾಚಾಗಸ್ತ್ಯ ಪ್ರಸೂತಾತ್ವಿತಿಪರಿ ಜಗೃಹೇ ಭೂಮಿಕಾ ಭೇದಯೋಗ್ಯಾ ।
ಯತ್ತತ್‌ಕೃತ್ಯಂ ಶ್ರುತೀನಾಂ ಮುನಿಗಣವಿಹಿತೈಃ ಸೇತಿಹಾಸೈಃ ಪುರಾಣೈಃ
ತತ್ರಾಸೌ ಸತ್ತ್ವ ಸೀಮ್ನಃ ಶಠಮಥನಮುನೇಃ ಸಂಹಿತಾ ಸಾರ್ವಭೌಮೀ ॥ (ದ್ರ. ತಾ. ವಳೀ)
"ಹರಿಕೀರ್ತಿಂ ವಿನೈವಾನ್ಯದ್ಬ್ರಾಹ್ಮಣೇನ ನರೋತ್ತಮ ।
ಭಾಷಾಗಾನಂ ನಗಾತವ್ಯಂ ತಸ್ಮಾತ್ಪಾಪಂ ತ್ವಯಾಕೃತಮ್ ॥ **(ಮಾತ್ಸ್ಯಪುರಾಣಮ್)**

ಒಬ್ಬ ಬ್ರಾಹ್ಮಣನು ಸಂಸ್ಕೃತೇತರ ಭಾಷಯಲ್ಲಿ ವಿಷ್ಣುವನ್ನು ಹಾಡುತ್ತಿದ್ದನು. ಹರಿಕೀರ್ತನವಲ್ಲದ ಭಾಷಾಗಾನವು ಪಾಪಕರ. ಇದನ್ನು ತಿಳಿಯದ ರಾಜನು ಅವನನ್ನು ಧಂಡಿಸಿದ್ದನು. ಆ ರಾಜನು ಮರಣಾನಂತರ ಯಮಲೋಕಕ್ಕೆ ಒಯ್ಯಲ್ಪಟ್ಟು ಹರಿಕೀರ್ತನೆಯನ್ನು ಸಂಸ್ಕೃತವಲ್ಲದ ಬೇರೆ ಭಾಷೆಯಲ್ಲಿ ಮಾಡಿದ ಬ್ರಾಹ್ಮಣನನ್ನು ದಂಡಿಸಿದ್ದಕ್ಕಾಗಿ ಶಿಕ್ಷಿಸಲ್ಪಟ್ಟನು "ಹೇ ರಾಜನೇ ಹರಿಕೀರ್ತನವಲ್ಲದ ಕೇವಲ ಭಾಷಾಗಾನವು ಪಾಪಕರ. ಹರಿಕೀರ್ತನವನ್ನು ಸಂಸ್ಕೃತವಲ್ಲದ ಬೇರೆ ಭಾಷೆಯಲ್ಲಿ ಮಾಡಿದನೆಂಬ ಅಪಾದನೆ ಮೇಲೆ ಬ್ರಾಹ್ಮಣನನ್ನು ದಂಡಿಸಿದ್ದೀಯೆ. ಅದು ಹರಿಕೀರ್ತನವಾದ್ದರಿಂದ ಪಾಪಕರವಲ್ಲ ನೀನು ದಂಡಿಸಿದುದು ಪಾಪಕರ. ಆದ್ದರಿಂದ ನಿನಗೆ ಶಿಕ್ಷೆ ವಿಧಿಸಿದ್ದೇನೆಂದು," ಯಮನು ತಿಳಿಸಿದನು. ಈ ಉಪಾಖ್ಯಾನದಂತೆ ತಮಿಳುಭಾಷೆಯಲ್ಲಿ ಆಳ್ವಾರುಗಳು ಹಾಡಿರುವುದರಿಂದ ಇದು ಸರಿಯಲ್ಲವೆಂಬ ಕೆಲವರ ಶಂಕೆ ಸರಿಯಲ್ಲ. ಆಳ್ವಾರುಗಳು ಭಗವಂತನನ್ನು ಹಾಡಿರುವುದರಿಂದ ಈ ತಮಿಳು ಭಾಷೆಯೂ, ಗಾನವೂ ಎರಡೂ ಪ್ರಶಸ್ತ. (ಭಾಷಾಪ್ರಶಸ್ತಾ, ಗೀತಿಷ್ಟಪ್ರಶಸ್ತಾ) "ಯಥಾಯಮಾನಂರಾಜಾನಂ, ಉಪಚರೇದ್ಧರಿಮ್, ಎಂದು ಯೌವನದಿಂದ ಕೂಡಿದ ರಾಜನನ್ನು ಉಪಚರಿಸುವಂತೆ ಭಗವಂತನನ್ನು ಉಪಚರಿಸಬೇಕು, ಎಂದು ಹೇಳಿರುವ ವಚನದಪ್ರಕಾರ, ರಾಜಸೇವಕರು ರಾಜನನ್ನು ಎಲ್ಲಾ ಭಾಷೆಗಳಿಂದಲೂ ಸ್ತೋತ್ರ ಮಾಡುವಂತೆ, ಭಗವಂತನನ್ನು ಎಲ್ಲಾ ಭಾಷೆಗಳಿಂದಲೂ ಸ್ತೋತ್ರ ಮಾಡಬಹುದು. ಮೇಲೂ ಈ ದ್ರಮಿಡ ಭಾಷೆಯು ಅಗಸ್ತ್ಯಮುನಿ ಪ್ರಣೀತವಾದ್ದರಿಂದ ಇದು ಶಿಷ್ಟಪರಿಗ್ರಹೀತ. ಈ ಭಾಷಗೆ ಶ್ರೇಷ್ಠತೆಯುಂಟು. ಬ್ರಾಹ್ಮಣಾದಿ ಸರ್ವವರ್ಣದವರೂ ಇದನ್ನು ಪರಿಗ್ರಹಿಸಬಹುದು. (ಭೂಮಿಕಾ – ಬ್ರಾಹ್ಮಣಾದಿವರ್ಣ). ಋಷಿಗಳ ಪ್ರಬಂಧಗಳಾದ ಇತಿಹಾಸ ಪುರಾಣಗಳು ವೇದಗಳಿಗೆ ಉಪಬೃಂಹಣಗಳು - ವೇದಾಂತಾರ್ಥ ವಿಶದೀಕರಣ ಗ್ರಂಥಗಳು ಹಾಗೆಯೇ ಪರಮಸಾತ್ವಿಕರಾದ ಶಠಗೋಪಮುನಿ ಪ್ರಣೀತವಾದ ಸಂಹಿತೆಯು – ಶ್ರೀಸೂಕ್ತಿಯು ವೇದೋಪಬೃಂಹಣಗಳಲ್ಲಿ ಮೇಲಾದವು. ಉಪಬೃಂಹಣತಮವೆಂದರ್ಥ. (ಮುಂದುವರಿದಿದೆ.)

ಭಗವದ್ರಾಮಾನುಜರ ಪರ್ಯಂತ ಆಚಾರ್ಯಪರಂಪರೆ

ಇವ್ವಾಚಾರ್ಯರ್ಗಳಿಲ್ ಈಶ್ವರ ಮುನಿಹಳ್‌ಪಿಳ್ಳೈ, ನಾಥಮುನಿಹಳ್. ಇವರ್ ನ್ಯಾಯತತ್ವಮೆನ್‌ಹಿರ ಶಾಸ್ತ್ರಮುಂ ಯೋಗರಹಸ್ಯಮುಂ ಮರಳಿಚ್ಚೆಯ್‌ದಾರ್. ಇವರುಕ್ಕು ಶ್ರೀಮಧುರಕವಿಹಳ್ ಮುದಲಾಹ ಉಂಡಾನ ಸಂಪ್ರದಾಯ ಪರಂಪರೈಯಾಲುಂ, ಶ್ರೈತಿರುವಾಯ್‌ಮೊೞಿಮುಖತ್ತಾಲುಂ, ಶ್ರೈಯೋಗದ

ಕಲಿಯುಗದಲ್ಲಿ ಮಹಾಭಾಗ್ಯಶಾಲಿಗಳಾದ ನಾರಾಯಣಪರಾಯಣರು ನಿಶ್ಚಯವಾಗಿ ಅವತರಿಸುತ್ತಾರೆ, ಎಲ್ಲಿ ಎಂದರೆ ಅಲ್ಲಲ್ಲೇ ಎಂದು ಹೇಳಿ, ದ್ರವಿಡ ದೇಶದಲ್ಲಿ ಬಹಳ ಸಂಖ್ಯೆಯಲ್ಲಿ ಅವತರಿಸುತ್ತಾರೆ ಅವರುಗಳಲ್ಲಿ ಪ್ರಧಾನರು ನಮ್ಮಾಳ್ವಾರ್ ಎಂದು ಸೂಚಿಸಲು, ತಾಮ್ರ ಪರ್ಣಿನದಿಯನ್ನು ಮೊದಲು ಹೇಳಿರುತ್ತಾರೆ ಇದನ್ನು ಸ್ವಾಮಿ ದೇಶಿಕನ್ ರವರು ತಣ್‌ಪೊರುನಲ್ - ಶೀತಳವಾದ ತಾಮ್ರಪರ್ಣೀ ಎಂದು ನಿರ್ದೇಶಿಸಿರುತ್ತಾರೆ- ಅಲ್ಲಿ ಅವತರಿಸಿದ ನಮ್ಮಾಳ್ವಾರ್, ಕೃತಮಾಲಾ- ವೈಹೈನದಿ - ಅದರ ತೀರದಲ್ಲಿ ಪೆರಿಯಾಳ್ವಾರ್, ಪಯಸ್ವಿನೀ -ಪಾಲಾರ್ - ಅದರ ತೀರದಲ್ಲಿ ಮೊದಲಾಳ್ವಾರುಗಳು. ಕಾವೇರೀ ತೀರದಲ್ಲಿ ತಿರುಪ್ಪಾಣಾಳ್ವಾರ್! ಪ್ರತೀಚೀ - ಮಹಾನದೀ - ಪಶ್ಚಿಮವಾಹಿನಿಯಾದ ಪೆರಿಯಾರ್ - ಇದರ ತೀರದಲ್ಲಿ ಕುಲಶೇಖರಪ್ಪೆರುಮಾಳ್ ಅವತಾರ. ಇವು ಉಪಲಕ್ಷಣ.

ಹಾಗೆಯೇ ನಾಥಮುನಿಗಳು, ಆಳವಂದಾರ್, ಭಗವದ್ರಾಮಾನುಜರು, ಶ್ರೀಮನ್ನಿಗಮಾಂತ ಮಹಾದೇಶಿಕರೇ ಆದಿಯಾದ ನಾರಾಯಣ ಪರಾಯಣರಾದ ಪರಮಾಚಾರ್ಯರೂ, ಪರಮ ಭಾಗವತೋತ್ತಮರೂ ಈವತ್ತಿಗೂ ದ್ರವಿಡ ದೇಶದಲ್ಲಿ ಬಹುಸಂಖ್ಯೆಯಲ್ಲಿ ಅವತರಿಸಿ, ಲೋಕೋಜ್ಜೀವನವಾದ ಪವಿತ್ರ ಕಾರ್ಯಗಳನ್ನು ನಡೆಸುತ್ತಾರೆಂಬುದೂ ಈ ಶ್ಲೋಕಗಳಲ್ಲಿ ವಿವಕ್ಷಿತ. ಇದನ್ನು ವಿವಕ್ಷಿಸಿಯೇ, ಕಲಿಸ್ಸಾಧುಃ ಎಂದು ವ್ಯಾಸರು ಹೇಳಿರುತ್ತಾರೆ.

ಆಚಾರ್ಯವಂಶ ಕೀರ್ತನ :

ಅನಂತರ "ಸಚಾಚಾರ್ಯವಂಶೋಜ್ಞೇಯ .- "ಆಚಾರ್ಯಾಣಾಮಸಾವಸಾವಿತ್ಯಾಭಗವತ್ತಃ" ಎಂಬ ಶ್ರುತಿವಿವಕ್ಷಿತವಾದ ಆಚಾರ್ಯವಂಶಾನುಸಂಧಾನವನ್ನು **ಇವ್ವಾಚಾರ್ಯರ್‌ಹಳಿಲ್** ಎಂದಾರಂಭಿಸಿ ಮಾಡುತ್ತಾರೆ ಈಶ್ವರ ಮುನಿಗಳ ಮಕ್ಕಳು ನಾಥಮುನಿಗಳು ನಾಥಮುನಿಗಳ ಹೆಸರು ರಂಗನಾಥರೆಂಬುದು. ನಾಮೈಕದೇಶ ಗ್ರಹಣ ಮಾಡಿ, ಮುನಿ ಶಬ್ದವನ್ನು ಅದಕ್ಕೆ ಸೇರಿಸಿ, 'ನಾಥಮುನಿಗಳು' ಎಂದು ವ್ಯವಹರಿಸಿರುತ್ತಾರೆ. ಆ ತಾತ್ಪರ್ಯ ವೇನೆಂದರೆ, ಮುನಿಃ – ಮನನಶೀಲರು. ಇವರು ಪ್ರಪನ್ನರಾಗಿದ್ದಾಗ್ಯೂ, ಜನ್ಮಾಂತರ ಸುಕೃತದಿಂದ, ಫಲ ರೂಪವಾದ ಭಕ್ತಿಯೋಗದಿಂದ, "ಭಜನ ಸುಖಮೇಕಸ್ಯ ವಿಪುಲಂ" ಎಂಬಂತೆ ತಮ್ಮ ಜೀವಿತ ದಶೆಯಲ್ಲಿ ಭಗವತ್ಸಾಕ್ಷಾತ್ಕಾರವನ್ನು ಪಡೆದಿದ್ದರು, ಎಂದು ತಿಳಿಸಲು ಮುನಿಶಬ್ದದಿಂದ ಕೂಡಿದ ನಾಮಗ್ರಹಣ. ಇದರಿಂದ ನಮ್ಮ ದರ್ಶನಕ್ಕೆ ಆರ್ಷ ಸಂಪ್ರದಾಯತ್ವವು ದ್ಯೋತಿತ ಇವರು ನ್ಯಾಯತತ್ವ ಮತ್ತು ಯೋಗ ರಹಸ್ಯವೆಂಬ, ಎರಡು ಗ್ರಂಥಗಳನ್ನು ರಚಿಸಿ ಉಪಕರಿಸಿದ್ದಾರೆ.

ಪುಟ–15 3 "ಪೀತಕವಾಡೈಪ್ಪಿರಾನಾರ್ ಪಿರಮಗುರುವಾಹಿವಂದು - ಪೆರಿಯಾಳ್ವಾರ್ ತಿರುಮೊೞಿ (5 -2-8) - "ಪೀತಾಂಬರ ಧಾರಿಯಾದ ಪರಮೋಪಕರನಾದ ಭಗವಂತನು, ಬ್ರಹ್ಮೋಪದೇಶವನ್ನು ಮಾಡುವ ಆಚಾರ್ಯನಾಗಿ ಅವತರಿಸಿ," ಎಂದು ಆಚಾರ್ಯರು ಸಾಕ್ಷಾದ್ಭಗವತಾರವೆಂದು ಪೆರಿಯಾಳ್ವಾರ್ ತಿಳಿಸುತ್ತಾರೆ

ಯಿಲೇ ಸಾಕ್ಷಾತ್ಕೃತರಾಯುಂ (1) ನಮ್ಮಾೞ್ವಾರಾಚಾರ್ಯರಾನಾರ್. ನಾಥಮುನಿಹಳ್ ಪಿಳ್ಳೈ ಈಶ್ವರ ಭಟ್ಟಾೞ್ವಾರ್ ಈಶ್ವರಭಟ್ಟಾೞ್ವಾನ್ ಪಿಳ್ಳೈ ಆಳವಂದಾರ್. ಇವರರುಳಿಚ್ಚೆಯ್‌ದ ಪ್ರಬಂಧಗಳ್— ಆಗಮಪ್ರಾಮಾಣ್ಯಮುಮ್, ಪುರುಷನಿರ್ಣಯಮುಮ್, ಆತ್ಮಸಿದ್ಧಿ, ಈಶ್ವರಸಿದ್ಧಿ, ಸಂವಿತ್ಸಿದ್ಧಿ, ಎನ್‌ಹಿರ ಸಿದ್ಧಿತ್ರಯಮುಮ್, ಶ್ರೀಗೀತಾರ್ಥಸಂಗ್ರಹಮುಮ್, ಸ್ತೋತ್ರಮುಮ್, ಚತುಶ್ಶ್ಲೋಕಿಯುಮ್, ಆಹ ಎಟ್ಟು. ಆಳವಂದಾರ್ ಪಿಳ್ಳೈ ಶೊಟ್ಟೈನಂಬಿ. ಶೊಟ್ಟೈನಂಬಿ ಪಿಳ್ಳೈಯೆನ್ನಾಚ್ಚಾ‍ೞ್. ಎನ್ನಾಚ್ಚಾೞ್ ಪಿಳ್ಳೈಕಳ್ ನಾಲ್ವರ್. ಇವರ್ಗಳಿಲ್ ಒರುವರ್ ಪಿಳ್ಳೈಯಪ್ಪರ್. ಇವರುಡೆಯ ಪಿಳ್ಳೈ ತೋೞಪ್ಪರ್. ತೋೞಪ್ಪರ್ಕ್ಕು ಪೆಣ್ಪಿಳ್ಳೈಕಳಿರುವರ್. ನಾಥಮುನಿಹಳ್ ಶ್ರೀಪಾದತ್ತೈ ಆಶ್ರಯಿತ್ತ ಮುದಲಿಹಳ್—

ಇವರಿಗೆ ಮಧುರ ಕವಿಗಳಿಂದ ಆರಂಭವಾದ, ಅವರ ವಂಶಸ್ಥರ ಸಂಪ್ರದಾಯ ಪರಂಪರೆಯಿಂದಲೂ. ಯೋಗ ದಶೆಯಲ್ಲಿ (1) ಪ್ರಾದುರ್ಭವಿಸಿ ತಿರುವಾಯ್‌ಮೊೞಿ ಮೊದಲಾದ ಪ್ರಬಂಧಗಳನ್ನು ಉಪದೇಶಿಸಿದುದರಿಂದಲೂ, ನಮ್ಮಾಳ್ವಾರ್ ಆಚಾರ್ಯರಾದರು.

ಯೋಗದಶೈಯಿಲೇ ಸಾಕ್ಷಾತ್ಕೃತರಾಯುಮ್, ಎಂಬ ವಾಕ್ಯದಿಂದ ನಮ್ಮಾಳ್ವಾರ್ರವರು ಮುಕ್ತದಶೆಯಲ್ಲಿ ನಾಥ ಮುನಿಗಳಿಗೆ ಸಾಕ್ಷಾತ್ಕೃತರಾಗಿ ಉಪದೇಶಿಸಿದರು. ಆಗ್ಯೆ ನಾಥಮುನಿಗಳು ಆಚಾರ್ಯ ವರಣಮಾಡಿ, ಅವರಿಂದ ಸಕಲವೇದಾಂತಾರ್ಥಗಳನ್ನೂ, ಪ್ರಪತ್ತಿವಿದ್ಯೆಯನ್ನೂ, ತಿರುವಾಯ್‌ಮೊೞಿ ಪ್ರಬಂಧ ವನ್ನೂ ಅದರ ಜತೆಗೆ ಬಾಕಿ, ಆಳ್ವಾರುಗಳು ಅನುಗ್ರಹಿಸಿದ, ಮೂರು ಸಾವಿರ ಪ್ರಬಂಧಗಳನ್ನೂ ಉಪದೇಶ ಹೊಂದಿದರು. ಎಂಬುದು ಸ್ತೋತ್ರಭಾಷ್ಯದಲ್ಲಿ ಶ್ರೀನಿಗಮಾಂತ ಮಹಾದೇಶಿಕರು, "ಅಥಪರಾಶರ ಪ್ರಬಂಧಾದಪಿ ವೇದಾಂತರಹಸ್ಯ ವೈಶದ್ಯಾತಿಶಯಭೂತೈಃ ಸದ್ಯಃಪರಮಾತ್ಮನಿ ಚಿತ್ತರಂಜಕತಮೈಃ ಉಪಬೃಂಹಣೈಃ, ಮಧುರ ಕವಿಪ್ರಭೃತಿ ಸಂಪ್ರದಾಯ ಪರಂಪರಯಾ ನಾಥಮುನೇರಪ್ಯುಪಕರ್ತಾರಂ, ಕಾಲವಿಪ್ರಕರ್ಷೇಪಿ ಪರಮಪುರುಷ ಸಂಕಲ್ಪಾತ್ ಕದಾಚಿತ್ ಪ್ರಾದುರ್ಭೂಯ ಸಾಕ್ಷಾದಪಿ ಸರ್ವೋಪನಿಷತ್ಸಾರೋಪದೇಷ್ಟಾರಂ, ಪರಾಂಕುಶ ಮುನಿಂ," ಎಂದು ಹೇಳಿರುವ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಹೀಗೆ ಅವರು ನಾಥಮುನಿಗಳಿಗೆ ಉಪದೇಶಿಸಿದುದು ಬ್ರಾಹ್ಮಣ್ಯಾದಿ ವ್ಯವಸ್ಥಾತ್ಮಕ ತ್ರಿಗುಣ ಪರಿಣಾಮ ದೇಹಾವಸ್ಥೆಯುಳ್ಳಲ್ಲ "ಅನುಜ್ಞಾ ಪರಿಹಾರೌ ದೇಹಸಂಬಂಧಾತ್ ಜ್ಯೋತಿರಾದಿವತ್" ಎಂಬ ಸೂತ್ರವು ಬದ್ಧಾತ್ಮರ ವಿಷಯದಲ್ಲಿ ಹೇಳಿರುವುದು. ಭಗವಂತನಹಾಗೆ, ಅಪ್ರಾಕೃತ ಶುದ್ಧ ಸತ್ತ್ವಮಯ ಶರೀರಕರಾಗಿ, ಉಪದೇಶಿಸಿದ್ದಾರೆ. ಇದರಿಂದಾಗಿ ವಿಶಿಷ್ಟಾದ್ವೈತ ಮತವು ಅತ್ರೈವರ್ಣಿಕ ಮೂಲವೆಂಬ ಕೆಲವರ ಕುಚೋದ್ಯವು ನಿರಸ್ತ. ಭಗವಂತನೇ ಆದಿಯಾಗಿ ನಿತ್ಯ ಸೂರಿಗಳು ಈ ಸಂಪ್ರದಾಯಕ್ಕೆ ಮೂಲಭೂತರು ಅದಾಗ "ಭಗವಾನ್ ವಿಷ್ಣು, ಲಕ್ಷ್ಮೀದೇವಿ" ವಿಷ್ವಕ್ಸೇನರು, ನಮ್ಮಾಳ್ವಾರ್, ನಾಥಮುನಿಗಳು ಇತ್ಯಾದಿಯಾಗಿ ಗುರು ಪರಂಪರೆ ಆರಂಭಿಸಿದೆ. ವಿಷ್ವಕ್ಸೇನರು, ನಮ್ಮಾಳ್ವಾರಿಗೆ ಜ್ಞಾನೋಪದೇಶ ಮಾಡಿದರೆಂಬುದು ಸಂಪ್ರದಾಯ.

---

(1) ನಮ್ಮಾಳ್ವಾರ್ ಕಲಿಯುಗ ಆರಂಭಿಸಿದ 48ನೇ ದಿನದಲ್ಲಿ ಈ ಲೋಕದಲ್ಲಿ ಅವತರಿಸಿದರು, ಸುಮಾರು ನಾಲ್ಕು ಸಾವಿರ ವರ್ಷಗಳ ನಂತರ ನಾಥಮುನಿಗಳ ಅವತಾರ, ಹೀಗಿರುವಾಗ ನಾಥಮುನಿಗಳಿಗೆ ನಮ್ಮಾಳ್ವಾರಿಂದ ವೇದಾಂತಾರ್ಥಗಳು ತಿರುವಾಯ್‌ಮೊೞಿ ಮೊದಲಾದ ಪ್ರಬಂಧಗಳೂ ಹೇಗೆ ಉಪದೇಶವಾದುವು ಎಂಬುದು ಶಂಕೆ, ಇದಕ್ಕೆ ಸಮಾಧಾನವನ್ನು "ಶ್ರೀಮಧುರ ಕವಿಹಳ್ ಮುದಲಾನ ..... ನಮ್ಮಾಳ್ವಾರ್ ಆಚಾರ್ಯರಾನಾರ್" ಎಂದು ಆಚಾರ್ಯರು ಹೇಳಿರುತ್ತಾರೆ, ಆದಾಗಿ ನಾಥಮುನಿಗಳು ಮಧುರ ಕವಿಗಳ ವಂಶಸ್ಥರಾದ "ಪರಾಂಕುಶ ದಾಸರ್ ಎಂಬುವರಿಂದ ಕಣ್ಣಿನುಣ್" ಎಂದು ನಮ್ಮಾಳ್ವಾರ್ ವಿಷಯವಾಗಿ ಮಧುರ ಕವಿಗಳು ಹಾಡಿರುವ ಪ್ರಬಂಧವನ್ನು ಉಪದೇಶ ಹೊಂದಿ, ಅದನ್ನು 'ಪುರಶ್ಚರ್ಯೆ' ಮಾಡಿ (ಪುರಶ್ಚರ್ಯೆ - ಅನವರತಾನುಸಂಧಾನ) ನಮ್ಮಾಳ್ವಾರನ್ನು ಯೋಗಾಭ್ಯಾಸದ ದಶೆಯಿಂದ ಸಾಕ್ಷಾತ್ಕರಿಸಿದರು. ಭಗವಂತನು ಧ್ರುವಾದಿಗಳಿಗೆ ಸಾಕ್ಷಾತ್ತಾಗಿ ಎದುರುಗಡೆ ನಿಂತು ತನ್ನನ್ನು ತೋರಿಸಿದಂತೆ, ನಮ್ಮಾಳ್ವಾರ್‌ರವರು, ಅಪ್ರಾಕೃತವಾದ ತಮ್ಮ ರೂಪದೊಡನೆ ನಾಥಮುನಿಗಳಿಗೆ ತೋರಿಸಿಕೊಂಡರು.

ಉಯ್ಯಕೊಂಡಾರ್, ಕುರುಕೈಕ್ಕಾವಲಪ್ಪರ್, ನಂಬಿಕರುಣಾಕರದಾಸರ್, ಏರುತಿರುವುಡೈಯಾರ್, ತಿರುಕ್ಕಣ್ಣಮಂಗೈಯಾಂಡಾರ್, ವಾನಮಾದೇವಿಯಾಂಡಾರ್, ಉರುಪಟ್ಟೂರಾಚ್ಚಾರ್ಪಿಳ್ಳೈ, ಶೋಕತ್ತೂರಾಳ್ವಾರ್ ಆಹ ಎಣ್ಬರ್. ಉಯ್ಯಕ್ಕೊಂಡಾರ್ ಶ್ರೀಪಾದತ್ತೈ ಆಶ್ರಯಿತ್ತವರ್ಹಳ್ ಐವರ್. ಅವರ್ಹಳಾಹಿರಾರ್—ಮಣಕ್ಕಾಲ್‌ನಂಬಿ, ತಿರುವಲ್ಲಿಕ್ಕೇಣಿ ಪಾಣ್ಪೆರುಮಾಳರೈಯರ್, ಶೇಟ್ಟಲೂರ್ ಶೆಂಗೆಲಂಕಾರರ್, ಶ್ರೀ ಪುಂಡರೀಕದಾಸರ್, ಉಲಕಪ್ಪೆರುಮಾಳ್‌ನಂಗೈ. ಮಣಕ್ಕಾಲ್ ನಂಬಿಶ್ರೀಪಾದತ್ತೈ ಆಶ್ರಯಿತ್ತಮುದಲಿಹಳ್ ಐವರ್. ಅವರ್ಹಳಾಹಿರಾರ್—ಆಳವಂದಾರ್, ತೆಯ್‌ವತ್ತುಕ್ಕರಶುನಂಬಿ, ಗೋಮಠತ್ತುತಿರುವಣ್ಣಹರಪ್ಪರ್, ಶಿರುಪ್ಪುಳ್ಳೂರಾವುಡೈಯಪಿಳ್ಳೈ, ಅಚ್ಚಿ. ಆಳವಂದಾರ್ ಶ್ರೀಪಾದತ್ತೈ ಆಶ್ರಯಿತ್ತವರ್ಹಳ್ ಪದಿನೈವರ್. ಅವರ್ಹಳಾಹಿರಾರ್ ಪೆರಿಯನಂಬಿ, ತಿರುಕ್ಕೋಟ್ಟಿಯೂರ್ ನಂಬಿ, ತಿರುಮಾಲೈಯಾಂಡಾನ್, ಆಳವಂದಾರಾಳ್ವಾರ್, ತಿರುಮಲೈನಂಬಿ, ಈಶಾಂಡಾರ್, ತೆಯ್‌ವವಾರಿಯಾಂಡಾರ್, ಶಿರಿಯಾಂಡಾನ್, ತಿರುಮೊಹೂರರಪ್ಪರ್, ತಿರುಮೊಹೂರ್‌ನಿನ್ರಾರ್, ತೆಯ್‌ವಪ್ಪೆರುಮಾಳ್, ತಿರುಮಂಗೈಯಾಳಿಯಾರ್, ಪಿಳ್ಳೈತಿರುಮಾಲಿರುಂಶೋಲೈದಾಸರ್, ಮಾರನೇರ್‌ನಂಬಿ, ಆಳ್‌ಕೊಂಡಿ.

ನಾಥ ಮುನಿಗಳ ಮಕ್ಕಳು, ಈಶ್ವರಭಟ್ಟಾಳ್ವಾನ್. ಇವರ ಮಕ್ಕಳು, ಆಳವಂದಾರ್ ಇವರು ಕೃಪೆಮಾಡಿ ಅನುಗ್ರಹಿಸಿದ ಪ್ರಬಂಧಗಳು, ಆಗಮ ಪ್ರಾಮಾಣ್ಯ, ಪುರುಷ ನಿರ್ಣಯ, ಆತ್ಮಸಿದ್ಧಿ, ಈಶ್ವರಸಿದ್ಧಿ, ಸಂವಿತ್ಸಿದ್ಧಿ ಎಂಬ ಸಿದ್ಧಿತ್ರಯ, ಶ್ರೀಗೀತಾರ್ಥ ಸಂಗ್ರಹ, ಸ್ತೋತ್ರರತ್ನ, ಚತುಃ ಶ್ಲೋಕಿ, ಎಂದು ಎಂಟು ಪ್ರಬಂಧಗಳು. ಆಳವಂದಾರ್ ಮಗ ಶೊಟ್ಟೈನಂಬಿ. ಶೊಟ್ಟೈ ನಂಬಿಯವರ ಮಗ ಎನ್ನಾಚ್ಚಾನ್ ಎನ್ನಾಚ್ಚಾನ್ ಅವರಿಗೆ ನಾಲ್ಕು ಮಕ್ಕಳು. ಇವರುಗಳಲ್ಲಿ ಒಬ್ಬರು ಪಿಳ್ಳೈಯಪ್ಪರ್. ಇವರ ಮಗ ತೋಳಪ್ಪರ್, ಇವರಿಗೆ ಎರಡು ಹೆಣ್ಣು ಮಕ್ಕಳು ಇಲ್ಲಿ ಆಚಾರ್ಯರ ಪುತ್ರ ಶಿಷ್ಯಾದಿಗಳನ್ನು ಹೇಳಿರುವುದು, ಅವರುಗಳಲ್ಲಿಯೂ ಗೌರವನ್ನಿಡಬೇಕೆಂದು, ಶಾಸ್ತ್ರಾರ್ಥವನ್ನು ತಿಳಿಸಲು ಎಂದು ತಿಳಿಯಬೇಕು.

ನಾಥ ಮುನಿಗಳ ಶ್ರೀಪಾದವನ್ನು ಆಶ್ರಯಿಸಿದವರು, ಉಯ್ಯಕ್ಕೊಂಡಾರ್, ಕುರುಹೈಕ್ಕಾವಲಪ್ಪನ್, ನಂಬಿ ಕರುಣಾಕರ ದಾಸರು, ಏರುತಿರುವುಡೈಯಾನ್, ತಿರುಕ್ಕಣ್ಣ ಮಂಗೈಯಾಂಡಾನ್, ವಾನಮಾದೇವಿಯಾಂಡನ್ ಉರುಪ್ಪಟ್ಟೂರ್ ಆಚ್ಚಾನ್‌ಪಿಳ್ಳೈ, ಶೋಕತ್ತೂರಾಳ್ವಾನ್, ಸೇರಿ ಎಂಟು ಮಂದಿ ಉಯ್ಯಕ್ಕೊಂಡಾರ್ ಶ್ರೀ ಪಾದವನ್ನು ಆಶ್ರಯಿಸಿದವರು ಐದು ಮಂದಿ. ಮಣಕ್ಕಾಲ್‌ನಂಬಿ, ತಿರುವಲ್ಲಿಕ್ಕೇಣಿಪಾಣ್ ಪೆರುಮಾಳ್ ಅರೈಯರ್ ಇತ್ಯಾದಿ. ಮಣಕ್ಕಾಲ್ ನಂಬಿಗಳ ಶ್ರೀ ಪಾದವನ್ನು ಆಶ್ರಯಿಸಿದವರು, ಆಳವಂದಾರ್ ಪ್ರಭೃತಿಗಳು. ಆಳವಂದಾರ್ ಶ್ರೀಪಾದವನ್ನು ಆಶ್ರಯಿಸಿದವರು, ಪೆರಿಯ ನಂಬಿ ತಿರುಕ್ಕೋಟ್ಟಿಯೂರ್ ನಂಬಿ. ತಿರುಮಾಲೈಯಾಂಡನ್, ಆಳವಂದಾರಾಳ್ವಾರ್. ತಿರುಮಲೈನಂಬಿ, ಮೊದಲಾದ ಹದಿನೈದು ಮಂದಿ. ಪೆರಿಯನಂಬಿಗಳ ಶ್ರೀ ಪಾದವನ್ನು ಆಶ್ರಯಿಸಿದವರು, ಭಗವದ್ರಾಮಾನುಜರೇ ಮೊದಲಾದ ಆರುಮಂದಿ. ಭಗವದ್ರಾಮಾನುಜರು ತಿರುಕ್ಕೋಟ್ಟಿಯೂರ್ ನಂಬಿಗಳನ್ನು ಆಶ್ರಯಿಸಿ, ರಹಸ್ಯಾರ್ಥಗಳ ಅರ್ಥವನ್ನು ವಿವರವಾಗಿ ತಿಳಿದುಕೊಂಡರು. ಶ್ರೀ ರಾಮಾನುಜರು ಕೃಪೆಯಿಂದ ಅನುಗ್ರಹಿಸಿದ ಪ್ರಬಂಧಗಳು, ಶ್ರೀ ಭಾಷ್ಯ, ದೀಪ, ಸಾರ, ವೇದಾರ್ಥಸಂಗ್ರಹ, ಶ್ರೀ ಗೀತಾ ಭಾಷ್ಯ, ನಿತ್ಯ ಗದ್ಯ, ಶರಣಾಗತಿಗದ್ಯ, ವೈಕುಂಠಗದ್ಯ, ನಿತ್ಯ ಎಂದಾಗಿ ಒಂಭತ್ತು ಪ್ರಬಂಧಗಳು. ಇವರ ಶ್ರೀಪಾದದಲ್ಲಿ ಆಶ್ರಯಿಸಿದ ಮುದಲಿಗಳನ್ನು ಅವರವರ ಸಂಪ್ರದಾಯ ಪ್ರಕಾರ ತಿಳಿದುಕೊಳ್ಳುವುದು.

ಪೆರಿಯನಂಬಿಶ್ರೀಪಾದತ್ತೈ ಆಶ್ರಯಿತ್ತವರ್‌ಕಳ್ [ಅರುವರ್;] ಅವರ್ಗಳಾಹಿರಾರ್—ಎಂಬೆರುಮಾನಾರ್, ಮಲೈಕುನಿಯನಿನ್ರಾರ್, ಆರ್ಯಶ್ರೀಶಠಗೋಪದಾಸರ್, ಅಣಿಯರಂಗತ್ತಮುದನಾರ್, ತಿರುವಾಯ್ ಕುಲಮುಡೈಯಾನ್ಪಟ್ಟರ್, ತಿರುಕ್ಕಚ್ಚಿನಂಬಿ. ಎಂಬೆರುಮಾನಾರ್, ತಿರುಕ್ಕೋಟ್ಟಿಯೂರ್ ನಂಬಿ ಶ್ರೀಪಾದತ್ತಿಲೇ ರಹಸ್ಯಾರ್ಥಂಗಳೈ ಶಿಕ್ಷಿತ್ತಾರ್. ತಿರುಮಾಲೈಯಾಂಡಾನ್ ಶ್ರೀಪಾದತ್ತಿಲೇ ತಿರುವಾಯ್ ಮೊೞಿ ಕೇಟ್ಟಾರ್. ಆಳವಂದಾರ್ ಆೞ್ವಾರ್ ಶ್ರೀಪಾದತ್ತಿಲೇ ತಿರವಾಯ್‌ಮೊೞಿಯುಮೋದಿ ಸ್ತೋತ್ರಾದಿ ಹಳುಮ್, ಅರುಳಿಚ್ಚೆಯಲುಮ್, ನಲ್ ವಾರ್ತ್ತೈಗಳುಂ ಕೇಟ್ಟರುಳಿನಾರ್; ತಿರುಮಲೈನಂಬಿ ಶ್ರೀ ಪಾದತ್ತಿಲೇ ಶ್ರೀಮದ್ರಾಮಾಯಣಂ ಕೇಟ್ಟರುಳಿನಾರ್. ಇವರರುಳಿಚ್ಚೆಯ್‌ದ ಪ್ರಬಂಧಗಳ್ — ಶ್ರೀ ಭಾಷ್ಯಂ, ದೀಪಂ, ಸಾರಂ, ವೇದಾರ್ಥಸಂಗ್ರಹಂ, ಶ್ರೀಗೀತಾಭಾಷ್ಯಂ, ಶಿರಿಯಗದ್ಯಂ, ಪೆರಿಯ ಗದ್ಯಮ್, ಶ್ರೀವೈಕುಂಠಗದ್ಯಂ, ನಿತ್ಯಂ ಆಕಒಬ್ಪತು. ಇವರ್ ಶ್ರೀಪಾದತ್ತಿಲ್ ಆಶ್ರಯಿತ್ತಮುದ ಹಳ್ಳಿಲಿ ತನ್‌ದಾಂ ಸಂಪ್ರದಾಯಪ್ಪಡಿಹಳಿಲೇಯರಿಂದುಕೊಳ್ವದು.

ಗುರುಭಕ್ತಿ-ಮಂತ್ರ ಮಂತ್ರಾರ್ಥಗೋಪನ

ಗುರುಂಪ್ರಕಾಶಯೇದ್ಧೀಮಾನ್ ಮಂತ್ರಂ ಯೇತ್ನೇನ ಗೋಪಯೇತ್
ಅಪ್ರಕಾಶ ಪ್ರಕಾಶಾಭ್ಯಾಂ ಕ್ಷೀಯೇತೇಸಂಪದಾಯುಷೀ ॥ ಎನ್ರಾರ್‌ಹಳ್. ಗುರುವ್ವೈಯೊರುವರ್

ಆದಾಗಿ ಭಗವದ್ರಾಮಾನುಜರ ಶಿಷ್ಯರಾದ ಪಿಳ್ಳಾನ್, ಎಂಗಳಾೞ್ವಾನ್, ನಡದೂರ್ ಅಮ್ಮಾಳ್, ವಾದಿಹಂಸಾಂಬುವಾಹರ್—ಅಪ್ಪುಳ್ಳಾರ್, **ಶ್ರೀಮನ್ನಿಗಮಾಂತಮಹಾದೇಶಿಕರ್**, ಕುಮಾರವರದ ದೇಶಿಕರ್, ಬ್ರಹ್ಮ ತಂತ್ರ ಸ್ವತಂತ್ರ ಜೀಯರ್ ಇತ್ಯಾದಿ ಭಾಷ್ಯ ಭಗವದ್ವಿಷಯ ಪರಂಪರೆ ಭಗವದ್ರಾಮಾನುಜರು, ಯತೀಂದ್ರ ಮಾಹಾನಸಿಕರೆಂಬ ಪ್ರಣತಾರ್ತಿಹರರು, ಆತ್ರೇಯ ರಾಮಾನುಜರು, ರಂಗರಾಜಗುರು, ವಾದಿಹಂಸಾಬುವಾಹರೆಂಬ ರಾಮಾನುಜರು—ಅಪ್ಪುಳ್ಳಾರ್, **ಶ್ರೀಮನ್ನಿಗಮಾಂತಮಹಾದೇಶಿಕರು**, ಕುಮಾರವರದದೇಶಿಕರು, ಬ್ರಹ್ಮತಂತ್ರ ಸ್ವತಂತ್ರಜೀಯರ್ ಇತ್ಯಾದಿ ರಹಸ್ಯತ್ರಯಸಾರ ಪರಂಪರೆ. ಭಗವದ್ರಾಮಾನುಜರ್, ಎಂಭಾರ್, ಭಟ್ಟರ್, ನಂಜೀಯರ್, ನಂಬಿಳ್ಳೈ, ವಡಕ್ಕುತ್ತಿರುವೀದಿಪಿಳ್ಳೈ, ತಿರುವಾಯ್‌ಮೊೞಿಪ್ಪಿಳ್ಳೈ, ಮಣ ವಾಳ ಮಾಮುನಿಗಳು ಇತ್ಯಾದಿ ಮತ್ತೊಂದು ಆಚಾರ್ಯ ಪರಂಪರೆ...]

ಗುರುಂಪ್ರಕಾಶಯೇದಿತ್ಯಾದಿ, ಗುರುವನ್ನು ಪ್ರಕಾಶಪಡಿಸಬೇಕು. ಮಂತ್ರವನ್ನು ಪ್ರಯತ್ನ ಪೂರ್ವಕ ಗೋಪ್ಯವಾಗಿಡಬೇಕು. ಹಾಗೆ ಗುರುವನ್ನು ಪ್ರಕಾಶಪಡಿಸದೆ ಇರುವುದರಿಂದಲೂ, ಮಂತ್ರವನ್ನು ಗೋಪ್ಯವಾಗಿಡದೆ ಇರುವುದರಿಂದಲೂ ಇವನ **ಸಂಪತ್ತು** — ಜ್ಞಾನಸಂಪತ್ತು, ಅದರ ಅನುವೃತ್ತಿರೂಪವಾದ **ಆಯುಸ್ಸು** — ಅನುಷ್ಠಾನವೂ ಕ್ಷಯಿಸುತ್ತವೆ. ಈ ಶ್ಲೋಕದಲ್ಲಿ ಗುರುವನ್ನು ಪ್ರಕಾಶಪಡಿಸಬೇಕೆಂಬುದರ ತಾತ್ಪರ್ಯವೇನೆಂದರೆ ಗುರುವಿನಲ್ಲಿ ಉತ್ಕೃಷ್ಟವಾದ ಭಕ್ತಿಯನ್ನಿಡಬೇಕು ಎಂದರ್ಥ. ಇದು ವಿಧಿಸಲ್ಪಡುತ್ತಿದೆ. ಗುರುವಿನಲ್ಲಿರುವ ಪರಭಕ್ತಿಯ ಪರೀವಾಹವಾಗಿ ಗುರುಪ್ರಕಾಶನವು, ಅಂದರೆ ಗುರು ಸಂಬಂಧವಾದ ಸ್ತೋತ್ರಾದಿ ಗಳು ಹೊರಬೀಳುತ್ತವೆಯಲ್ಲವೇ. ಗುರುವಿನಲ್ಲಿರುವ ಪರಭಕ್ತಿಯು ತತ್ತ್ವಜ್ಞಾನ ರೂಪವಾದ ಸಂಪತ್ತನ್ನು ಅಧಿಕಗೊಳಿಸುತ್ತದೆ. ಅದು ಭಗವಂತನಲ್ಲಿ ಭಕ್ತಿಪ್ರಪತ್ತ್ಯಾತ್ಮಕ ತತ್ತ್ವಜ್ಞಾನ ಪರಿಪೂರ್ತಿಯನ್ನುಂಟುಮಾಡುತ್ತದೆ ಎಂದರ್ಥ. ಉಪಾಯಾನುಷ್ಠಾನವನ್ನು ಮಾಡಿದವರಿಗೆ, ಸ್ವಯಂಪ್ರಯೋಜನವಾದ ಆಚಾರ್ಯಾದಿ ಭಾಗವತ ಕೈಂಕರ್ಯ ಪರ್ಯಂತ ಭಗವತ್ಕೈಂಕರ್ಯವನ್ನು ವೃದ್ಧಿಗೊಳಿಸುತ್ತದೆ. ಆದ್ದರಿಂದ ತತ್ತ್ವಜ್ಞಾನದ ಅಭಿವೃದ್ಧಿಯು ಸ್ವರೂಪಕ್ಕೆ ತಕ್ಕ ಪುರುಷಾರ್ಥವನ್ನುಂಟು ಮಾಡುತ್ತದೆ. ಇದರಲ್ಲಿ ಅನಾದರವು ಉಂಟಾಗಬಾರದು. ವ್ಯಪದಿಷ್ಟಾಚಾರ್ಯ

ಪ್ರಕಾಶಿಪ್ಪಿಕ್ಕಿರದುವುಮ್, ಒರುವರ್ ಪ್ರಕಾಶಿಪ್ಪಿಯಾದೊಳ್ಹಿರುದುವುಮ್ ಗುರುಭಕ್ತಿಯಿನ್ ತಾರತಮ್ಯತ್ತಾಲೇಯಿರೇ. ಭಗವದ್ವಿಷಯತ್ತಿಲ್ಪೋಲೇ ಗುರುವಿಷಯತ್ತಿಲುಂ ಪರೈಯಾನಭಕ್ತಿಯಯುಡೈಯವನುಕ್ಕು ಅಪೇಕ್ಷಿ ತಾರ್ಥಂಗಳೆಲ್ಲಾಂ ಪ್ರಕಾಶಿಕ್ಕುಮೆನ್ನುಮಿಡಂ ಕಠ ಜಾಬಾಲಾದಿ ಶ್ರುತಿಹಳಿಲುಂ ಸಂಜಯಾದಿ ವೃತ್ತಾಂತಂಗಳಿಲುಂ ಪ್ರಸಿದ್ಧಮ್.

ವತ್ತಯಾದ ತನ್ನ ಉತ್ಕರ್ಷವನ್ನು ಹೇಳಿಕೊಳ್ಳಲು ಆಚಾರ್ಯನಾಮಸಂಕೀರ್ತನವು ಅನರ್ಥಕರ ಆದ್ದರಿಂದ ಪರಭಕ್ತಿಪೂರ್ವಕವಾದ ಮತ್ತು ಸ್ವೋತ್ಕರ್ಷ ಖ್ಯಾಪನವಲ್ಲದ ಆಚಾರ್ಯಪ್ರಕಾಶನವು ವಿವಕ್ಷಿತ **ಮಂತ್ರಂಯತ್ನೇನಗೋಪಯೇತ್** – ಇಲ್ಲಿ ಜ್ಞಾನದರಿದ್ರನಾದ ತನಗೆ ಮಹಾನಿಧಿಯು ಸಿಕ್ಕಿದ ಹಾಗೆ ಮಂತ್ರೋಪದೇಶವು ಪ್ರಾಪ್ತವಾಯಿತೆಂದು ಆ ಮಂತ್ರದಲ್ಲಿ ಪರಮ ಪ್ರೀತಿಯು ಇರಬೇಕೆಂಬುದರಲ್ಲಿ ತಾತ್ಪರ್ಯ ಅದುವಿಧಿಸಲ್ಪಡುತ್ತದೆ ಇದು ವಿನಹ ಇತರರಿಗೆ ಹೇಳಕೂಡದೆಂಬುದರಲ್ಲಿ ತಾತ್ಪರ್ಯವಿಲ್ಲ. ಭಕ್ತಿಶ್ರದ್ಧೆಯಿಂದ ತನ್ನನ್ನು ಆಶ್ರಯಿಸಿದ ಸಚ್ಛಿಷ್ಯರಿಗೆ ಕಾಲಾನುಗುಣವಾದ ಪರೀಕ್ಷೆಯನ್ನು ಮಾಡಿ ಮಂತ್ರವನ್ನು ಉಪದೇಶಿಸಬೇಕು, ಎಂಬುದೂ ಇಲ್ಲಿಯ ತಾತ್ಪರ್ಯ.

"ಗುರುವೈಒರುವನ್ ಪ್ರಕಾಶಿಪ್ಪಿಕ್ಕಿರದುವುಂ", ಇತ್ಯಾದಿ

ಗುರುವನ್ನು ಒಬ್ಬನು ಪ್ರಕಾಶಪಡಿಸುವುದೂ, ಪ್ರಕಾಶಪಡಿಸದೇ ಇರುವುದೂ ಗುರುಭಕ್ತಿಯಲ್ಲಿ ತಾರತಮ್ಯದಿಂದಲೇ ಭಗವದ್ವಿಷಯದಲ್ಲಿ ಹೇಗೋ ಹಾಗೆ ಗುರು ವಿಷಯದಲ್ಲೂ ಉತ್ಕೃಷ್ಟವಾದ ಭಕ್ತಿಯುಳ್ಳವನಿಗೆ ಅಪೇಕ್ಷಿತವಾದ ಅರ್ಥಗಳೆಲ್ಲಾ ಸ್ಫುರಿಸುತ್ತವೆ, ಎಂಬುದು ಕಠಜಾಬಾಲಾದಿ ಶ್ರುತಿಗಳಿಂದಲೂ, ಸಂಜಯಾದಿ ವೃತ್ತಾಂತಗಳಿಂದಲೂ ಪ್ರಸಿದ್ಧ ಅದಾಗಿ ಕಠಶ್ರುತಿಯಲ್ಲಿ "ಯಸ್ಯದೇವೇಪರಾಭಕ್ತಿಃ ಯಥಾದೇವೇತಥಾಗುರೌ । ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ||" ಭಗವಂತನಲ್ಲಿ ಹೇಗೆಯೋ ಹಾಗೆ ಆಚಾರ್ಯನಲ್ಲಿಯೂ ಉತ್ಕೃಷ್ಟವಾದ ಭಕ್ತಿಯುಳ್ಳ ಮಹಾತ್ಮನಿಗೆ, ಆಚಾರ್ಯೋಪದಿಷ್ಟವಾದ ಅರ್ಥಗಳೂ (ಕಥಿತಾಹ್ಯರ್ಥಾಃ), ಆಚಾರ್ಯನು ಉಪದೇಶಮಾಡದ ಅರ್ಥಗಳೂ (ಇಲ್ಲಿ ಅಕಥಿತಾಹ್ಯರ್ಥಾಃ ಎಂದು ಪದವಿಭಾಗ) ಪ್ರಕಾಶವಾಗುತ್ತವೆ, ಎಂದು ಹೇಳಿದೆ "ಆಚಾರ್ಯಾದ್ಧ್ಯೈವ ವಿದ್ಯಾವಿದಿತಾ ಸಾಧಿಷ್ಠಂಪ್ರಾಪತ್" ಎಂಬುದು ಜಾಬಾಲ ಶ್ರುತಿ. ಆಚಾರ್ಯನಿಂದ ಉಪದೇಶ ಹೊಂದಿದ ವಿದ್ಯೆಯೇ, ಫಲಕಾರಿಯಾಗುತ್ತದೆ 'ಆದಿ' ಶಬ್ದದಿಂದ 'ಆಚಾರ್ಯವಾನ್ಪುರುಷೋವೇದ' ಎಂಬ ಛಾಂದೋಗ್ಯಶ್ರುತಿಯು ವಿವಕ್ಷಿತ ಇಲ್ಲಿಯೂ ಆಚಾರ್ಯನಲ್ಲಿ ಭಕ್ತಿಯುಳ್ಳವನೇ ವಿವಕ್ಷಿತ ಅಂಥಹವನೇ ಜ್ಞಾನಸಂಪತ್ಸಮೃದ್ಧನು ಅವನೇ ಭಗವಂತನನ್ನು ಪಡೆಯಲು ಅವಶ್ಯವಾದ ಭಕ್ತಿಪ್ರಪತ್ತ್ಯನುಷ್ಠಾನದಿಂದ, ಭಗವಂತನನ್ನು ಪಡೆಯಬಲ್ಲನು.

ಸಂಜಯವೃತ್ತಾಂತ · ಸಂಜಯನು "ಶುದ್ಧಭಾವಂಗತೋಭಕ್ತ್ಯಾಶಾಸ್ತ್ರಾದ್ವೇದ್ಮಿಜನಾರ್ದನಂ" ಎಂದು ಭಗವಂತನಲ್ಲಿಯೂ ಆಚಾರ್ಯರಾದ ವ್ಯಾಸರಲ್ಲಿಯೂ ಪರಿಶುದ್ಧವಾದ ಭಕ್ತಿಯುಳ್ಳವನು ಆದ್ದರಿಂದ ಆಚಾರ್ಯೋಪದಿಷ್ಟಜ್ಞಾನದಿಂದ ಭಗವಂತನ ವಿಶ್ವರೂಪಸಾಕ್ಷಾತ್ಕಾರವು ತನಗೆ ಆಯಿತೆಂದು ಧೃತರಾಷ್ಟ್ರನಲ್ಲಿ ಹೇಳುವ ಮಾತು ವಿದ್ಯಾರಾಜನ್ನತೇ ವಿದ್ಯಾ, ಮಮವಿದ್ಯಾಗರೀಯಸೀ । ಮಾಯಾಂನಸೇವೇಭದ್ರಂತೇ ನವೃಥಾಧರ್ಮಮಾಚರೇ ||, ಎಂಬುದು ಇದಕ್ಕೆ ಹಿಂದಿನ ವಾಕ್ಯ ಎಲೈ ಧೃತರಾಷ್ಟ್ರನೇ ನಿನಗ ಆಚಾರ್ಯ ಭಕ್ತಿಯಿಲ್ಲ. ನನಗೆ ಆಚಾರ್ಯ ಭಕ್ತಿ ಇದೆ ಅದರಿಂದ ನನ್ನಜ್ಞಾನವು ಶ್ರೇಷ್ಠವಾದುದು. ಭಗವತ್ಸಾಕ್ಷಾತ್ಕಾರವು ನನಗೆ ಉಂಟಾಯಿತು. ನಾನು ವಂಚನೆ ಮಾಡುವವನಲ್ಲ ಧರ್ಮಾಚರಣೆ ಮಾಡುತ್ತೇನೆಂದು ತೋರಿಸಿಕೊಳ್ಳುವ ಕಪಟಸ್ವಭಾವನಲ್ಲ. ನಿನಗೆ ಇವೆಲ್ಲಾ ಇವೆ, ಎಂದರ್ಥ. ಶುದ್ಧಮನಸ್ಕನಾಗಿ ಆಚಾರ್ಯಭಕ್ತಿ ಭಗವದ್ಭಕ್ತಿಗಳು ಕಾರಣವಾಗಿ ಅರ್ಜುನನಿಗೆ ಕೃಷ್ಣನು ಯುದ್ಧರಂಗದಲ್ಲಿ ತೋರಿಸಿದ ವಿಶ್ವರೂಪವು, ಹಸ್ತಿನಾಪುರದಲ್ಲಿ ನಿನ್ನ ಅರಮನೆಯಲ್ಲಿ

ಇಂಗನಲ್ಲಾದಾರ್ಕು ಇಪ್ಪಡಿಜ್ಞಾನ ಸಂಪತ್ತುಂಡಾಹಾದೆನ್ನುಮಿಡಂ ಶಿಷ್ಯರ್‌ಹಳುಡೈಯ ಜ್ಞಾನತಾರತಮ್ಯತ್ತಾಲೇ ಕಂಡುಕೊಳ್ವದು. ಮಿಹವುಂ ಗುಣಾಧಿಕರಾನಶಿಷ್ಯರ್‌ಹಳುಕ್ಕುಂ ಕಡುಹ ಅಧ್ಯಾತ್ಮವಿಷಯಂಗಳೈಪ್ರಕಾಶಿಪ್ಪಿಯಾದಾರ್ಕು ನಿಷ್ಟೈಕುಲೈಯಾದೆನ್ನುಮಿಡಂ(1) ರೈಕ್ವಾದಿವೃತ್ತಾಂತಗಳಿಲೇ ಪ್ರಸಿದ್ಧಮ್. ಪೆತ್ತದು ಗುಣವಾಹ ಉಪದೇಶಿತ್ತಾಲ್ "ಶಿಷ್ಯಪಾಪಂ ಗುರೋರಪಿ"(2) ಎನ್ಗೈಯಾಲೇ ಆಚಾರ್ಯನಕ್ಕು ನಿಷ್ಟೈ, ಕುಲೈಯುಂಪಡಿಯಾಮೆನ್ನುಮಿಡಂ ವರುವದು ವಿಚಾರಿಯಾದೇ ಇಂದ್ರನುಕ್ಕು ಉಪದೇಶಿತ್ತು

ಕುಳಿತುಕೊಂಡಿರುವ ಹಾಗೆಯೇ ನನಗೆ ಸಾಕ್ಷಾತ್ಕೃತವಾಯಿತು, ಎಂದು ಹೇಳುತ್ತಾನೆ. ಆದ್ದರಿಂದ "ಗುರುಂಪ್ರಕಾಶಯೇತ್" ಎಂಬಲ್ಲಿ ಆಚಾರ್ಯನಲ್ಲಿ ಪರಭಕ್ತಿಯು ವಿಧಿಸಲ್ಪಟ್ಟಿದೆ, ಎಂಬುದು ತಾತ್ಪರ್ಯ. ಆದಿಶಬ್ದದಿಂದ ಏಕಲವ್ಯಾದಿ ವೃತ್ತಾಂತವು ಸೂಚಿತ.

ಆಚಾರ್ಯಭಕ್ತಿಯ ಅವಶ್ಯಕತೆ

'ಇಂಗನಲ್ಲಾದಾರ್ಕ್ಕು' ಇತ್ಯಾದಿ – ಆಚಾರ್ಯಭಕ್ತಿ ಇಲ್ಲದವರಿಗೆ ಇಂಥಹ ಜ್ಞಾನಸಂಪತ್ತು ಉಂಟಾಗುವುದಿಲ್ಲವೆಂಬುದನ್ನು ಶಿಷ್ಯರುಗಳ ಜ್ಞಾನತಾರತಮ್ಯದಿಂದ ತಿಳಿಯುವುದು. ಆಚಾರ್ಯನು ಏಕಕಾಲದಲ್ಲಿ ಬಹುಮಂದಿ ಶಿಷ್ಯರುಗಳಿಗೆ ಕಾಲಕ್ಷೇಪವನ್ನು ಹೇಳಿದ್ದರೂ, ಶಿಷ್ಯರುಗಳು ಸಮಾನಕಾಲದಲ್ಲಿ ಶ್ರವಣಮಾಡಿ, ಸಮಾನವಾದ ಪರಿಶ್ರಮವನ್ನು ಪಟ್ಟಿದ್ದರೂ ಅವರುಗಳಲ್ಲಿ ಪರಸ್ಪರಜ್ಞಾನ ತಾರತಮ್ಯವು ಲೋಕದಲ್ಲಿ ಕಾಣಬರುತ್ತಿರುವುದು ಅವರುಗಳ ಆಚಾರ್ಯ ಭಕ್ತಿತಾರತಮ್ಯದಿಂದಲೇ ಬಹಳವಾದ ಗುಣವುಳ್ಳ ಶಿಷ್ಯರುಗಳಿಗೂ, ಒಡನೆಯೇ ವೇದಾಂತ ವಿಷಯಗಳನ್ನು ಪ್ರಕಾಶಪಡಿಸಿದೆ, ಇರುವವರಿಗೆ ನಿಷ್ಠೆ - ಅಂದರೆ ಜ್ಞಾನಾನುಷ್ಠಾನಗಳು ನಶಿಸುವುದಿಲ್ಲವೆಂಬುದು ರೈಕ್ವಾದಿ ವೃತ್ತಾಂತಗಳಿಂದ ಪ್ರಸಿದ್ಧ. ಆದಿಶಬ್ದವು ಸತ್ಯಕಾಮ ಉಪಕೋಸಲ ವೃತ್ತಾಂತಗಳನ್ನು ತಿಳಿಸುತ್ತವೆ

ಸತ್ಯಕಾಮ ಉಪಕೋಸಲ ವೃತ್ತಾಂತ ..

ಹಾಗೆಯೇ, ಸತ್ಯಕಾಮ ಮತ್ತು ಉಪಕೋಸಲರು ಜ್ಞಾನವನ್ನು ಸಂಪಾದಿಸಲು ಆಚಾರ್ಯ ಸಮಾಶ್ರಯಣಮಾಡಿದರು ಆ ಆಚಾರ್ಯರುಗಳು ಇವರುಗಳನ್ನು ಹನ್ನೆರಡು ವರ್ಷಕಾಲ ಪರೀಕ್ಷಿಸಿ, ನಂತರ ಇವರ ಭಕ್ತಿ ಶ್ರದ್ಧೆಗೂ, ಗುರು ಶುಶ್ರೂಷಗೂ ಮೆಚ್ಚಿ ಇವರಿಗೆ ವೇದಾಂತವನ್ನು ಉಪದೇಶಿಸಿದರು, ಎಂಬುದು ಉಪನಿಷತ್ತಿನಲ್ಲಿ ಹೇಳಿರುವ ವೃತ್ತಾಂತ.

---

(1) "ರೈಕ್ವವೃತ್ತಾಂತ"–ಜಾನುಶ್ರುತಿಯೆಂಬ ರಾಜನು, ಮಹಾಧರ್ಮಿಷ್ಠನಾಗಿದ್ದನು. ಅವನಿಗೆ ತತ್ತ್ವಜ್ಞಾನವನ್ನುಂಟುಮಾಡಲು ದೇವತೆಗಳು ಆಕಾಶದಲ್ಲಿ ಎರಡು ಹಂಸರೂಪದಲ್ಲಿ ಹಾರಿಬಂದು, ತನ್ನ ಅರಮನೆಯ ಮಹಡಿಯಲ್ಲಿ ಮಲಗಿದ್ದ ಜಾನುಶ್ರುತಿಯ ಕಿವಿಗೆ ಬೀಳುವಂತೆ, ಮಾತಾಡಿದರು, ಆದಾಗಿ, ಮುಂದೆ ಹಾರಿ ಹೋಗುತ್ತಿದ್ದ ಹಂಸವನ್ನು, ಅದನ್ನು ಹಿಂಬಾಲಿಸುವ ಹಂಸವು, "ಎಲೈ ಜಾನುಶ್ರುತಿಯ ಮೇಲೆ ನಿನ್ನ ನೆರಳು ಬೀಳದಂತೆ ಹೋಗು, ಅವನು ಮಹಾ ಧರ್ಮಿಷ್ಠನು, ಅವನ ಧರ್ಮವು ನಿನ್ನನ್ನು ಸುಟ್ಟುಬಿಡುತ್ತದೆ" ಎಂದು ಹೇಳಿತು ಅದಕ್ಕೆ ಮೊದಲನೆ ಹಂಸವು, "ಇವನೇನು ಮಹಾಬ್ರಹ್ಮಿಷ್ಠನಾದ, ರೈಕ್ವನೇ" ಎಂದು ಹೇಳಿಹೋಯಿತು. ಈ ಮಾತನ್ನು ಕೇಳಿದ್ದ ಜಾನಶ್ರುತಿಯು, ತನಗೆ ಬ್ರಹ್ಮವಿದ್ಯೆಯು ಇಲ್ಲವೆಂದು ಶೋಕಿಸಿ. ಅದನ್ನು ಪಡೆಯಲು ರೈಕ್ವರನ್ನು ಬಹಳ ದ್ರವ್ಯಸಮರ್ಪಣ ಪೂರ್ವಕ ಆಶ್ರಯಿಸಿದನು. ಅವರು ಇವನನ್ನು ಪರೀಕ್ಷಿಸಲು, ಪ್ರಥಮತಃ ತಿರಸ್ಕರಿಸಿದರು. ಪುನಃ ಬಹುದ್ರವ್ಯವನ್ನೂ ತನ್ನ ಮಗಳನ್ನೂ ರೈಕ್ವರಿಗೆ ಸಮರ್ಪಿಸಿ ಅವರಿಂದ ಬ್ರಹ್ಮವಿದ್ಯೆಯನ್ನು ಪಡೆದನು,

2 ರಾಜ್ಞೋರಾಷ್ಟ್ರಕೃತಂಪಾಪಂ, ರಾಜಪಾಪಂ ಪುರೋಧಸಃ। ಭರ್ತುರ್ಭಾರ್ಯಾಕೃತಂಪಾಪಂ, ಶಿಷ್ಯಪಾಪಂ ಗುರೋರಪಿ (ಮನುಧರ್ಮಶಾಸ್ತ್ರ)॥ (ಮುಂದುವರೆದಿದೆ)

ತಾನುಂ ಬ್ರಹ್ಮವಿದ್ಯೈಯ್ಯೈಮರಂದು ತ್ತಚ್ಛಿಷ್ಯನಾನ ನಾರದಭಗವಾನ್ನೈಯಿಟ್ಟು ಸರ್ವೇಶ್ವರನುಜ್ಞಾರ್ತಿ ವಿಕ್ಕವೇಂಡುಂಪಡಿಯಿರುಂದ ಚತುರ್ಮುಖರ್ ಪಕ್ಕಲಿಲೇ ಕಂಡುಕೊಳ್ವದು. ಇಪ್ಪಡಿ "ಅಪ್ರಕಾಶ ಪ್ರಕಾಶಾಭ್ಯಾಂ" ಎನ್‌ಹಿರವಿರಂಡುಕ್ಕುಂ "ಕ್ಷೀಯೇತೇ ಸಂಪದಾಯುಷೀ" ಎನ್‌ಹಿರಫಲಂಗಳೈ ಔಚಿತ್ಯತ್ತಾಲುಂ ಪ್ರಮಾಣ ಪ್ರಸಿದ್ಧಿಯಾಲುಂ ಕ್ರಮತ್ತಾಲೇ ಉದಾಹರಿತ್ತವಿತ್ತನೈ. ಇರಂಡಿಲುಂ ಇರಂಡುಫಲಮನ್ವಯಿತ್ತಾಲುಂ ವಾಕ್ಯತ್ತಿಲ್ ವರುಂ ವಿರೋಧಮಿಲ್ಲೈ. ಅಹೈಯಾಲ್‌ಸರ್ವಾವಸ್ಥೈ ಯಿಲುಂ ಗುರುಭಕ್ತಿಯಿನ್ ಪರೀವಾಹಮಾಕ ಗುರುವೈಪ್ರಕಾಶಿಕ್ಕವುಂ, ಮಹಾರತ್ನಗರ್ಭಮಾನ ಮಾಣಿಕ್ಕಚ್ಚೆಪ್ಪುಪೋಲೇ ಇರುಕ್ಕಿರ ತಿರುಮಂತ್ರತ್ತಿನುಡೈಯ ಶೀರ್ಮೈಯುಂ ತನ್ನಿಷ್ಠೈಯುಂ ಕುಲೈಯಾಮೈಕ್ಕಾಹ ಶಿಲ್‌ವಾನಪ್ರಯೋಜನಂಗಳೈಪ್ಪತ್ತ ಶಿಷ್ಯಗುಣಪೂರ್ತಿಯಿಲ್ಲಾದ ಚಪಲರ್‌ಹ ಳುಕ್ಕು ವೆಳಿಯಿಡಾದೇ ಮಂತ್ರತ್ತೈ ಮಹವುಂ ಶೇಮಿಕ್ಕವುಮ್ ಪ್ರಾಪ್ತಮ್. ಇವ್ವಿಡತ್ತಿಲ್ ಗುರು ಶಬ್ದಂ ಪರಮಗುರುಕ್ಕಳುಕ್ಕುಮುಪಲಕ್ಷಣಮ್. ಸಾಮಾನ್ಯಮಾಹವುಮಾಮ್. ಮಂತ್ರಶಬ್ದಂ ಮಂತ್ರಾರ್ಥಂ ಮುದಲಾನ ರಹಸ್ಯಂಗಳುಕ್ಕುಂ ಪ್ರದರ್ಶನಪರಮ್. ತಾನಿಂದ ರಹಸ್ಯಂಗಳೈಯನು ಸಂಧಿಕ್ಕುಂ ಪೋದೆಲ್ಲಾಂ ಆಚಾರ್ಯಪರಂಪರೈಯೈಯನುಸಂಧಿಕ್ಕೈಯುಂ, ವಿಧಿಬಲಪ್ರಾಪ್ತಮ್.

ಹೀಗೆ ತನ್ನನ್ನು ಆಶ್ರಯಿಸಿದ ಶಿಷ್ಯನನ್ನು ಪರಿಕ್ಷೀಸಿ ನಂತರ ಅವನಿಗೆ ಬ್ರಹ್ಮವಿದ್ಯೋಪದೇಶಮಾಡಿದ ಆಚಾರ್ಯರುಗಳ ನಿಷ್ಠೆಯು ಕುಂದಲಿಲ್ಲ

ಶಿಷ್ಯಪರೀಕ್ಷೆಯ ಆವಶ್ಯಕತೆ :–

ಪೆಟ್ರೆದುಗುಣಮಾಹವಿತ್ಯಾದಿ ಹೀಗೆ ಶಿಷ್ಯ ಪರೀಕ್ಷೆಮಾಡದೆ, ಶಿಷ್ಯನು ಸಮರ್ಪಿಸಿದ ದ್ರವ್ಯವನ್ನು ಅಥವಾ ತನ್ನಲ್ಲಿಗೆ ಶಿಷ್ಯನು ವೇದಾಂತ ಕಾಲಕ್ಷೇಪಕ್ಕೆ ಬಂದನಲ್ಲಾ ಎಂಬುದನ್ನೇ ಪ್ರಧಾನವಾಗಿಟ್ಟುಕೊಂಡು, ಚಿರಕಾಲ ಶುಶ್ರೂಷಾದಿಗಳಿಲ್ಲದೆ, ಅವನಿಗೆ ಜ್ಞಾನೋಪದೇಶಮಾಡಿದ, ಆಚಾರ್ಯನ ಜ್ಞಾನಕ್ಕೆ, "ಶಿಷ್ಯನ ಪಾಪವು ಗುರುವಿಗೂ ಸಂಭವಿಸುತ್ತದೆ ಎಂಬ ಪ್ರಮಾಣದ ಪ್ರಕಾರ, ಕುಂದುಬರುತ್ತದೆ ಮುಂದೆ ಏನು ಫಲವೆಂಬುದನ್ನು ಯೋಚಿಸದೆ, ಬ್ರಹ್ಮದೇವನು ಇಂದ್ರನಿಗೆ ಶುಶ್ರೂಷಾದಿಗಳಿಲ್ಲದೆ, ಜ್ಞಾನೋಪದೇಶಮಾಡಲು, ತಾನು ಬ್ರಹ್ಮ ವಿದ್ಯೆಯನ್ನು ಮರೆತುಬಿಟ್ಟನು. ಅನಂತರ ಭಗವಂತನು, ಬ್ರಹ್ಮದೇವನ ಶಿಷ್ಯನಾದ ನಾರದನನ್ನು ಮುಂದಿಟ್ಟು ಕೊಂಡು ಬ್ರಹ್ಮದೇವನಿಗೆ ಜ್ಞಾನೋಪದೇಶವನ್ನು ಮಾಡಿಸಿದ ವೃತ್ತಾಂತವನ್ನು ತಿಳಿಯುವುದು. ಹೀಗೆ 'ಅಪ್ರಕಾಶಪ್ರಕಾಶಾಭ್ಯಾಂ' ಎಂಬ ಎರಡು ಪದಗಳಿಗೂ ಕ್ರಮವಾಗಿ "ಕ್ಷೀಯೇತೇ ಸಂಪದಾಯುಷೀ" ಎಂಬ ಫಲಗಳನ್ನು ಔಚಿತ್ಯ ಮೂಲಕವಾಗಿಯೂ, ಹಿಂದೆ ಹೇಳಿದ ಪ್ರಮಾಣ ಸಂಪ್ರದಾಯಗಳಿಂದಲೂ ಯಥಾಕ್ರಮ ಉದಾಹರಿಸಿದೆವು. ಗುರುವಿನಲ್ಲಿ ಅಪ್ರಕಾಶ - ಭಕ್ತಿಯಿಲ್ಲದೆ, ಅಥವಾ ಪ್ರಕಾಶಾಭ್ಯಾಂ ಮಂತ್ರಗಳನ್ನು ಗೋಪ್ಯ ವಾಗಿಡದೆ ಇರುವುದರಿಂದ, ಜ್ಞಾನಾನುಷ್ಠಾನಗಳೆರಡೂ ನಶಿಸುತ್ತವೆ, ಎಂದು ಎರಡು ವಾಕ್ಯಗಳಲ್ಲಿಯೂ ಎರಡು ಫಲಗಳನ್ನು ಅನ್ವಯಿಸಿದರೂ ವಾಕ್ಯವಿರೋಧವಿಲ್ಲ ಆದ್ದರಿಂದ ಸರ್ವಾವಸ್ಥೆಯಲ್ಲಿಯೂ ಗುರುಭಕ್ತಿ ಪರೀವಾಹವಾಗಿ ಗುರುವನ್ನು ಪ್ರಕಾಶಪಡಿಸಬೇಕು. ಮಹಾರತ್ನವನ್ನು ಒಳಗೆ ಇಟ್ಟುಕೊಂಡಿರುವ ಮಾಣಿಕ್ಯದ

ಪ್ರಜೆಗಳು ಮಾಡುವ ಪಾಪವು ರಾಜನಿಗೆ ಸಂಭವಿಸುತ್ತದೆ ಹಾಗೆಯೇ ರಾಜನ ಪಾಪವು ಪುರೋಹಿತನಿಗೂ ಭಾರ್ಯೆಯ ಪಾಪವು ಗಂಡನಿಗೂ, ಶಿಷ್ಯನ ಪಾಪವು, ಆಚಾರ್ಯನಿಗೂ ಸಂಭವಿಸುತ್ತದೆ ಆದ್ದರಿಂದ ಪ್ರಜೆಗಳೇ ಮೊದಲಾದವರು ಪಾಪವನ್ನು ಮಾಡದ ಹಾಗೆ ಅವರ ಪ್ರಭುಗಳು ಅವರನ್ನು ಉಪದೇಶಾದಿಗಳಿಂದ ಶಿಕ್ಷಿಸಿನೋಡಿಕೊಳ್ಳಬೇಕಾದದು ಅವರ ಧರ್ಮ

ಇವ್ವಾಚಾರ್ಯರ್ಗಳುಡೈಯುವನುಸಂಧಾನಂ, (1) "ಸಂಭಾಷ್ಯಪುಣ್ಯಕೃತೋ ಮನಸಾಧ್ಯಾಯೇತ್" ಎನ್ಗಿರ ಪಡಿಯೇ ಪ್ರತಿಷಿದ್ಧಸಂಭಾಷಣತ್ತುಕ್ಕುಪ್ರಾಯಶ್ಚಿತ್ತಮುಮಾಮ್.

ಎನ್ನುಯಿರ್ ತನ್ದಳಿತ್ತವರೈಚ್ಚರಣಂಪುಕ್ಕಿಯಾನಡೈವೇಯವರ್ ಗುರುಕ್ಕಳ್‌ನಿರೈ ವಣಂಗಿ |
ಪಿನ್ನರುಳಾಲ್‌ಪೆರಂಬೂದೂರ್ ವಂದ ವಳ್ಳಲ್ ಪೆರಿಯನಂಬಿಯಾಳವಂದಾರ್ ಮಣಕ್ಕಾಲ್‌ನಂಬಿ |
ನನ್ನೆರಿಯೈ ಯವರ್ಕ್ಕುರೈತ್ತ ವುಯ್ಯಕ್ಕೊಂಡಾರ್ ನಾಥಮುನಿ ಶಠಗೋಪನ್ ಶೇನೈನಾಥನ್ |
ಇನ್ನಮುದತ್ತಿರುಮಕಳೆ ನ್ರಿವರೈಮುನ್ನಿಟ್ಟೆಂಬೆರುಮಾನ್ ತಿರುಡಿಗಳಡೈಹಿನ್ರೇನೇ ||೧||

ಡಬ್ಬಿಯಹಾಗೆ ಇರುವ, ತಿರುಮಂತ್ರದ – ಅಷ್ಟಾಕ್ಷರದ ಹೆಮ್ಮೆಯೂ ತನ್ನ ಸಿಸ್ಥಯೂ ಕಡಿಮೆಯಾಗದೆ ಇರಲು ಅಲ್ಪಫಲಗಳಿಗೋಸ್ಕರ ಶಿಷ್ಯಗುಣಪೂರ್ತಿ ಇಲ್ಲದೆ ಇರುವ ಚಂಚಲ ಬುದ್ಧಿಯುಳ್ಳವರಿಗೆ ತಿಳಿಸದೆ ಮಂತ್ರವನ್ನು (ಡಬ್ಬಿ) – ಮಂತ್ರಾರ್ಥವನ್ನೂ (ಮಹಾರತ್ನ) ಸಹ ಬಹಳ ಗೋಪ್ಯವಾಗಿಡಬೇಕಾದುದು ಅವಶ್ಯಕ ಇಲ್ಲಿ **'ಗುರುಂಪ್ರಕಾಶಯೇದ್ಧೀಮಾನ್'** ಎಂಬಲ್ಲಿ **ಗುರು** ಶಬ್ದವು ಪರಮಗುರುಗಳನ್ನೂ ಉಪಲಕ್ಷಿಸುತ್ತದೆ. **ಮಂತ್ರಂಯತ್ನೇನಗೋಪಯೇತ್** ಎಂಬಲ್ಲಿ **ಮಂತ್ರಶಬ್ದವು** ಮಂತ್ರಾರ್ಥ ಮೊದಲಾದ ರಹಸ್ಯಾರ್ಥಗಳಿಗೂ ಪ್ರದರ್ಶನಪರ.

ಗುರುಪರಂಪರಾ ತನಿಯನ್ ಅನುಸಂಧಾನದ ಅವಶ್ಯಕತೆ

ತಾವು ಈ ರಹಸ್ಯಾರ್ಥಗಳನ್ನು ಅನುಸಂಧಾನ **ಮಾಡುವಾಗಲೆಲ್ಲಾ** ಆಚಾರ್ಯ ಪರಂಪರಯನ್ನು ಅನುಸಂಧಾನ ಮಾಡುವುದು ವಿಧಿಬಲ ಪ್ರಾಪ್ತ. ಈ ಆಚಾರ್ಯರುಗಳ ಅನುಸಂಧಾನವು "ಸಂಭಾಷ್ಯ ಪುಣ್ಯ ಕೃತೋಮನಸಾಧ್ಯಾಯೇತ್" (1) ಎಂಬ ರೀತಿಯಲ್ಲಿ ಪ್ರತಿಷಿದ್ಧರೊಡನೆ ಸಂಭಾಷಣೆ ಮಾಡುವುದಕ್ಕೆ ಪ್ರಾಯಶ್ಚಿತ್ತವೂ ಕೂಡ.

ಗುರುಪಙ್ಕ್ತಿ ಭಜನ :– ಎನ್ನುಯಿರ್‌ತಂದಳಿತ್ತವರೈ ಇತ್ಯಾದಿ – **ಯಾನ್** - ಆಚಾರ್ಯಾನುಗ್ರಹದಿಂದ ಲಬ್ಧಸತ್ತಾಕನಾದ ದಾಸಭೂತನು, **ಎನ್ನುಯಿರ್** - ನನಗೆ ಪ್ರಾಣಭೂತನಾದ ಸರ್ವೇಶ್ವರನನ್ನು, **ತಂದು** ಸ್ವರೂಪರೂಪಗುಣ ವಿಭವಗಳೊಡನೇ ಚೆನ್ನಾಗಿ, ಉಪದೇಶಿಸಿ, **ಅಳಿತ್ತವರೈ** - ನನ್ನನ್ನು "ಅಸ್ತಿಬ್ರಹ್ಮೇತಿ ಚೇದ್ವೇದ–ಸಂತಮೇನಂತ ತೋವಿದುಃ" ಎಂಬಂತೆ ಬ್ರಹ್ಮಜ್ಞಾನವನ್ನು ಉಪದೇಶಿಸಿ ಜೀವಿಕೆಯನ್ನು **ಸಾರ್ಥಕಗೊಳಿಸಿ** ರಕ್ಷಿಸಿದ, ಸಾಕ್ಷಾದಾಚಾರ್ಯರನ್ನು **ಶರಣಂಪುಕ್ಕು** – ಶರಣವಾಗಿ ಆಶ್ರಯಿಸಿ, **ಅಡೈವೇ** ಕ್ರಮವಾಗಿ, **ಅವರ್‌ಗುರುಕ್ಕಳ್‌ನಿರೈವಣಂಗಿ** – ಅವರ ಆಚಾರ್ಯ ಪರಂಪರೆಯನ್ನು ನಮಸ್ಕರಿಸಿ, **ಪಿನ್ ಅರುಳಾಲ್ ಪೆರಂಬೂದೂರ್ ವಂದವಳ್ಳಲ್** - ಅದಕ್ಕೆ ಪೂರ್ವದಲ್ಲಿ ಕೃಪೆಯಿಂದ ಪೆರಂಬೂದೂರಿನಲ್ಲಿ ಅವತರಿಸಿದ, ಪರಮೋದಾರರಾದ ಭಗವದ್ರಾಮಾನುಜರು, [ಇವರು ಹದಿನೆಂಟಾವರ್ತಿ ಗೋಷ್ಠೀಪುರಕ್ಕೆ ದಯ ಮಾಡಿಸಿ, ಗೋಷ್ಠಿಪೂರ್ಣರನ್ನು ಆಶ್ರಯಿಸಿ ಕೊನೆಯಲ್ಲಿ ಅವರು ಉಪದೇಶಿಸಿದ ಪರಮರಹಸ್ಯಾರ್ಥಗಳನ್ನು, ತಮ್ಮನ್ನಾಶ್ರಯಿಸಿದ ಶಿಷ್ಯರಿಗೆ ಉಪದೇಶ ಮಾಡಿದುದರಿಂದಲೂ, ಗದ್ಯಾದಿಗ್ರಂಥಗಳ ಮೂಲಕ ಶರಣಾಗತಿತತ್ತ್ವವನ್ನು ಉಪದೇಶಿಸಿದುದರಿಂದಲೂ, ಸಂಸಾರ ಘರ್ಮತಪ್ತರಾದ ಚೇತನರಲ್ಲಿ ಪರಮ

---

1) ನಮ್ಲೇಚ್ಛಾಽಶುಚ್ಯಧಾರ್ಮಿಕೈಃ ಸಹಸಂಭಾಷೇತ |
ಸಂಭಾಷ್ಯಪುಣ್ಯಕೃತೋ ಮನಸಾಧ್ಯಾಯೇತ್ || [ಗೌತಮಧರ್ಮಸೂತ್ರ 9-17, 18]
ಮ್ಲೇಚರು, ಅಶುದ್ಧರು ಅಧಾರ್ಮಿಕರು ಇವರೊಡನೆ ಮಾತನಾಡಬಾರದು, ಮಾತನಾಡಬೇಕಾಗಿ ಬಂದರೆ, ಮಾತನಾಡಿದ ನಂತರ, ಪುಣ್ಯಶೀಲರಾದ ಆಚಾರ್ಯರುಗಳನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು

ಏತೇ ಮಹ್ಯಮಪೋಢಮನ್ಮಥಶರೋನ್ಮಾಥಾಯ ನಾಥಾದಯಃ
ತ್ರಯ್ಯಂತಪ್ರತಿನಂದನೀಯ ವಿವಿಧೋದಂತಾಃ ಸ್ವದಂತಾಮಿಹ ।
ಶ್ರದ್ಧಾತವ್ಯ ಶರಣ್ಯದಂಪತಿ ದಯಾದಿವ್ಯಾಪಗಾ ವ್ಯಾಪಕಾಃ
ಸ್ಪರ್ಧಾವಿಪ್ಲವ ವಿಪ್ರಲಂಭ ಪದವೀ ವೈದೇಶಿಕಾ ದೇಶಿಕಾಃ ॥2॥

ಸೆಯಿಂದ ಕೂಡಿದವರಾದ, ಪರಮೋದಾರರೆಂದು **'ವಳ್ಳಲ್'** ಎಂಬ ಶಬ್ದದಿಂದ ನಿರ್ದೇಶಿಸಲ್ಪಡುತ್ತಾ ಬುದು ಶ್ರೀದೇಶಿಕರ ಆಶಯ.]

ಪೆರಿಯನಂಬಿ ಆಳವಂದಾರ್ ಮಣಕ್ಕಾಲ್ ನಂಬಿ- ಶ್ರೀ ರಾಮಾನುಜರ ಆಚಾರ್ಯರಾದ ಪೆರಿಯ ಬಿ, (ಮಹಾಪೂರ್ಣರು) ಅವರ ಆಚಾರ್ಯರಾದ ಆಳವಂದಾರ್, – ಯಾಮುನಾಚಾರ್ಯರು ಅವರ ಆಚಾರ್ಯರಾದ ಣಕ್ಕಾಲ್‌ನಂಬಿ (ರಾಮಮಿಶ್ರರು) - **ನನ್ನೆರಿಯೈ ಅವರ್ಕ್ಕುರೈತ್ತ ಉಯ್ಯಕ್ಕೊಂಡಾರ್** – ಒಳ್ಳೆಯದಾದ ಕ್ತಿಗಿಂತ ಸುಲಭವಾದ) ಪ್ರಪತ್ತಿಶಾಸ್ತ್ರವನ್ನು ರಾಮಮಿಶ್ರರಿಗೆ ಉಪದೇಶಿಸಿದ ಉಯ್ಯಕ್ಕೊಂಡಾರ್ – ಪುಂಡರೀಕಾ ು, **ನಾಥಮುನಿ, ಶಠಗೋಪನ್ ಸೇನೈನಾಥನ್,** ಪುಂಡರೀಕಾಕ್ಷರ ಆಚಾರ್ಯರಾದ ನಾಥಮುನಿಗಳು, ರರಿಗೆ ಯೋಗದಶೆಯಲ್ಲಿ ಸಾಕ್ಷಾತ್ಕೃತರಾಗಿ ಸಕಲ ವೇದಾಂತಾರ್ಥಗಳನ್ನೂ ಉಪದೇಶಿಸಿದ ನಮ್ಮಾಳ್ವಾರ್, ಅವರ ಚಾರ್ಯರಾದ ವಿಷ್ವಕ್ಸೇನರು, **ಇನ್ನಮುಂದತ್ತಿರುಮಹಳ್** - ವಿಷ್ವಕ್ಸೇನರಿಗೆ ವೇದಾಂತವನ್ನು ಉಪದೇಶಿಸಿದ ಹಾಲಕ್ಷ್ಮಿ, **ಎನ್ರಿವರೈ** – ಎಂಬುವರನ್ನು **ಮುನ್ನಿಟ್ಟು** – ಮುಂದಿಟ್ಟುಕೊಂಡು, **ಎಂಬೆರುಮಾನ್ ತಿರುವಡಿ ಳ್-ಪರಮಾಚಾರ್ಯನಾದ** ಭಗವಂತನ ಶ್ರೀಪಾದಗಳನ್ನು **ಅಡೈಹಿನ್ರೇನೇ** – ಆಶ್ರಯಿಸುತ್ತೇನೆ. ತಮ್ಮ ತಮ್ಮ ಚಾರ್ಯರಿಂದಾರಂಭಿಸಿ ಕ್ರಮವಾಗಿ ಎಲ್ಲಾ ಆಚಾರ್ಯರುಗಳ ದಿವ್ಯನಾಮ ಸಂಕೀರ್ತನವನ್ನು ಭಕ್ತಿ ಪುರಸ್ಸರವಾಗಿ ಾಡಿ ಭಗವಂತನನ್ನು ಶರಣ ಹೊಂದುತ್ತೇನೆಂಬುದು, ಈ ಪಾಶುರದ ತಾತ್ಪರ್ಯ

ಏತೇಮಹ್ಯಮಪೋಢ ಇತ್ಯಾದಿ - ಹೀಗೆ ಹೇಳಿದ ಆಚಾರ್ಯರುಗಳ ಅನುಗ್ರಹಗಳನ್ನು ಭಕ್ತಿ ರ್ವಕವಾಗಿ ಪ್ರಾರ್ಥಿಸುತ್ತಾರೆ ಹಾಗೆಯೇ ಸ್ವಪ್ರಾರ್ಥನಾವ್ಯಾಜದಿಂದ ಅನುಸಂಧಾತೃಗಳೆಲ್ಲರಿಗೂ ಆ ಪ್ರಾರ್ಥನಾ ಮವನ್ನು ಶಿಕ್ಷಿಸುತ್ತಾರೆ.

ಏತೇನಾಥಾದಯಃ- ಕಲ್ಯಾಣಗುಣ ಪರಿಪೂರ್ಣರಾದ ನಾಥಮುನಿ ಪ್ರಭೃತಿಗಳು, (ಅವರ ಚಾರ್ಯರಾದ ಆಳ್ವಾರ್‌ರವರೂ ಇಲ್ಲಿ ಸಂಗೃಹೀತ), **ಅಪೋಢಮನ್ಮಥ ಶರೋನ್ಮಾಥಾಯ** - ಮನ್ಮಥನ ಬಾಣ ಂದ ಏರ್ಪಟ್ಟ ಚಿತ್ತವಿಭ್ರಮೆಯನ್ನು ಹೋಗಲಾಡಿಸಿದ, ಅದಾಗಿ ಪ್ರಾಪಂಚಿಕ ಸುಖಗಳಲ್ಲಿ ಏರ್ಪಟ್ಟ ಅನಿಷ ನ್ನು ಹೋಗಲಾಡಿಸದವರು, ಎಂದರ್ಥ ಅಥವಾ ಮನ್ಮಥ – ಸಾಕ್ಷಾನ್ಮನ್ಮಥ ಮನ್ಮಥನಾದ ಭಗವಂತನ **ರಾಃ** – "ವಲ್‌ವಿನ್ಯೆಯೇನ್ನೈ ಈರ್‌ಹಿನ್ರಗುಣಂಗಳೈ ಯುಡೈಯಾಯ್" **ಎಂಬಂತೆ** ಭಗವಂತನ ಗುಣಾನುಭವವು ಶ್ಲೇಷ ದಶೈಯಲ್ಲಿ ಬಾಣಗಳಿಂದ ಚುಚ್ಚಲ್ಪಡುವಂತೆ ನಮ್ಮನ್ನು ಹಿಂಸಿಸುತ್ತವೆ. ಗುಣಗಳಲ್ಲಿ ತಲ್ಲೀನರಾದವರಿಗೆ ವನ ಅಗಲಿಕೆಯು ಸಹಿಸಲಶಕ್ಯ. ಅಂಥಹ ಕಲ್ಯಾಣಗುಣಗಳನ್ನುಳ್ಳವನು ಎಂದರ್ಥ. ಆಚಾರ್ಯಾನುಗ್ರಹದಿಂದ ಅಂಥಹ ಗವದ್ವಿಶ್ಲೇಷವು ಏರ್ಪಡದೆ, ಭಗವತ್ಸಾಕ್ಷಾತ್ಕಾರಪೂರ್ವಕ ಪ್ರಾಪ್ತಿಯು ಏರ್ಪಡಲು ಅದಕ್ಕೆ ವಿರೋಧವಾದ ಪಾಪಗಳನ್ನು **ುನ್ಮಾಥ** – ಚಿತ್ತದ ಭ್ರಮೆ – ಅಸ್ಥೈರ್ಯ) ಹೋಗಲಾಡಿಸುವ, **ನಾಥಾದಯಃ** ಆಳ್ವಾರ್ ನಾಥಯಾಮುನ ಿತಿವರಾದಿಗಳು; **ತ್ರಯ್ಯಂತ ಪ್ರತನಂದನೀಯ ವಿವಿಧೋದಂತಾಃ- ತ್ರಯ್ಯಂತ** - ವೇದಾಂತಿಗಳಿಂದ, **್ರತಿನಂದನೀಯ** - ಕೊಂಡಾಡಲ್ಪಡತಕ್ಕಂಥ, **ವಿವಿಧ** – ಅನೇಕ ವಿಧಗಳಾದ, **ಉದಂತಾಃ-** ವೃತ್ತಾಂತಗಳನ್ನು ಂಥಾ **ನಾಥಾದಯಃ** ಎಂದು ಅನ್ವಯ. ಈ ಆಚಾರ್ಯರುಗಳು ಪರಮತ ನಿರಸನ **ಪೂರ್ವಕ** ಸ್ವಮತ

ಹೃದ್ಯಾ ಹೃತ್ಪದ್ಮ ಸಿಂಹಾಸನ ರಸಿಕ ಹಯಗ್ರೀವಹೇಷೋರ್ಮಿ ಘೋಷ
ಕ್ಷಿಪ್ತಪ್ರತ್ಯರ್ಥಿದೃಪ್ತಿರ್ಜಯತಿ ಬಹುಗುಣಾಪಙ್ಕ್ತಿರಸ್ಮದ್ಗುರೂಣಾಂ ।
ದಿಕ್ಸೌಧಾಬದ್ಧ ಜೈತ್ರಧ್ವಜಪಟಪವನಸ್ಫಾತಿನಿರ್ಧೂತತತ್ತತ್
ಸಿದ್ಧಾಂತ ಸ್ತೋಮತೂಲಸ್ತಬಕ ನಿಗಮನವ್ಯಕ್ತ ಸದ್ವರ್ತನೀಕಾ ॥ 3॥

ಸ್ಥಾಪನೆಯನ್ನು ಮಾಡಿರುವುದರಿಂದ ವೇದಾಂತಗಳು – ಉಪನಿಷತ್ತುಗಳು ಇವರನ್ನು ಕೊಂಡಾಡುತ್ತವೆ **ಶ್ರದ್ಧಾತವ್ಯ** – ನಂಬಲರ್ಹವಾದ **ಶರಣ್ಯದಂಪತಿದಯಾ** – ನಮಗೆ ರಕ್ಷಕರಾದ ಲಕ್ಷ್ಮೀನಾರಾಯಣಾತ್ಮಕವಾದ ದಂಪತಿಗಳ ದಯೆಯೆಂಬ, **ದಿವ್ಯಾಪಗಾ ವ್ಯಾಪಕಾಃ**– ದಿವ್ಯ ನದಿಯನ್ನು ನಮ್ಮ ಮೇಲೆ ಹರಿಯುವಂತೆ ಮಾಡುವ ಅಂದರೆ ದಿವ್ಯದಂಪತಿಗಳ ಕಟಾಕ್ಷವು ನಮ್ಮ ಮೇಲೆ ಬೀಳುವಂತೆ ಮಾಡುವ **ಸ್ಪರ್ಧಾ** – ಪೋಟಿ, **ವಿಪ್ಲವ** – ವಿಪರೀತ, **ವಿಪ್ರಲಂಭ** - ವಂಚನೆ, **ಪದವೀ** - ಈ ಮಾರ್ಗಗಳಿಗೆ, **ವೈದೇಶಿಕಾಃ**– ಬಹೂದೂರ ದಲ್ಲಿರತಕ್ಕಂಥಾ, **ದೇಶಿಕಾಃ**– ಈಆಚಾರ್ಯರುಗಳು, **ಮಹ್ಯಂ ಸ್ವದಂತಾಮ್** - ನನಗೆ ರುಚಿಸಲಿ ಅನುಗ್ರಹಿಸಲಿ ಎಂಥರ್ಥ.

ಆಳ್ವಾರ್, ನಾಥ ಯಾಮುನ ಯತಿವರಾದಿಗಳು, ಒಬ್ಬರ ಮೇಲೆ ಪೋಟಿಗೋಸ್ಕರ ಅನ್ಯಥಾಕರಿಸಿ ವಂಚನ ಮಾಡದೆ, ಯಥಾರ್ಥವಾಗಿ ಉಪನಿಷದರ್ಥಗಳನ್ನು ಎತ್ತಿತೋರಿಸಿ, ಅದರಿಂದ ಉಪನಿಷತ್ಪುರುಷನು ಕೊಂಡಾಡುವಂತೆ ಸಮೀಚೀನ ಶಾಸ್ತ್ರಾರ್ಥಗಳನ್ನು ಶಿಷ್ಯರಿಗೆ ಉಪದೇಶಿಸಿ, ಅವರಿಗೆ ಪ್ರಾಕೃತವಾದ ಹೇಯ ಪುರುಷಾರ್ಥಗಳಲ್ಲಿರುವ ಸಂಗವನ್ನು ಹೋಗಲಾಡಿಸುವವರು. ಭಗವಂತನ ಗುಣಗಳಲ್ಲಿ ತಲ್ಲೀನರಾಗುವಂತೆ ಮಾಡು ವವರು. ಭಗವಂತನ ದಯೆಯು ಮಹಾಪಾಪಿಗಳಾದ ನಮ್ಮ ಮೇಲೆ ಬೀಳುವುದಿಲ್ಲವೋ ಎಂಬ ಸಂಶಯವು ಬಾರದಂತೆ, ಅವನನ್ನು ಭಕ್ತಿ ಪುರಸ್ಸರವಾಗಿ ಪ್ರಾರ್ಥಿಸಿ, ಶರಣ ಹೊಂದಿದವರನ್ನು ಅವಶ್ಯ ರಕ್ಷಿಸುತ್ತಾನೆಂಬ ವಿಶ್ವಾಸವನ್ನುಂಟು ಮಾಡುವವರು. ಮೇಲೂ ಈ ಆಚಾರ್ಯರು, ವಂಚನಾತ್ಮಕ ಬುದ್ಧಿಯಿಂದ ಕೂಡಿಲ್ಲದ, ಪೋಟಿಗಾಗಿ ವಿಪರೀತಾರ್ಥಗಳನ್ನು ಬೋಧಿಸದೆ, ಅವುಗಳಿಗೆ ಬಹುದೂರದಲ್ಲಿದ್ದುಕೊಂಡು ಪರಮ ಕೃಪೆಯಿಂದ ನಮಗೆ ಸದುಪದೇಶಗಳನ್ನು ಮಾಡಿ ರಕ್ಷಿಸುವವರು. ಇಂಥಹ ಆಚಾರ್ಯರುಗಳು ನಮಗೆ ಅನುಗ್ರಹಿಸಲಿ ಎಂಬುದು ತಾತ್ಪರ್ಯ.

ಪರಪಕ್ಷ ನಿರಸನಾಚಾರ್ಯ ಪರಂಪರೆಗೆ ಜಯಘೋಷ :

ಗುರುಭಕ್ತಿಪರಿವಾಹವಾಗಿ, ಆಗುರು ಪರಂಪರೆಗೆ, "ಜಯತ್ಯತಿ ಬಲೋರಾಮಃ" ಎಂಬಂತೆ ಉದ್ಘಾಷ್ಯವಾಗಿ **ಹೃದ್ಯಾಹೃತ್ಪದ್ಮ** ಎಂದಾರಂಭಿಸಿ ಜಯಘೋಷ ಮಾಡುತ್ತಾರೆ. **ಹೃತ್ಪದ್ಮ ಸಿಂಹಾಸನ ರಸಿಕ** - ಹೃದಯ ಕಮಲವೆಂಬ ಸಿಂಹಾಸನದಲ್ಲಿ ಪ್ರೀತಿಯಿಂದಿರುವ, **ಹಯಗ್ರೀವ ಹೇಷೋರ್ಮಿ ಘೋಷ**, ಹಯಗ್ರೀವನ ಕೆನೆಯುವ ಅಲೆಗಳ ಘೋಷ ರೂಪವಾದ ನಿರಸನ ಘೋಷದಿಂದ, **ಕ್ಷಿಪ್ತಪ್ರತ್ಯರ್ಥಿ ದೃಪ್ತಿಃ**– ಶತ್ರುಗಳ ದರ್ಪವನ್ನು ಹೋಗಲಾಡಿಸಿದ, **ಅಸ್ಮದ್ಗುರೂಣಾಂ**, **ಬಹುಗುಣಾ ಪಙ್ಕ್ತಿಃ**– ಅನೇಕ ಸದ್ಗುಣಗಳಿಂದ ಕೂಡಿದ ನಮ್ಮ ಆಚಾರ್ಯಪರಂಪರೆ **ಜಯತಿ** – ಸರ್ವೋತ್ಕೃಷ್ಟವಾಗಿ ಪ್ರಕಾಶಿಸುತ್ತದೆ. ಆ ಗುರು ಪಙ್ಕ್ತಿಯು, **ದಿಕ್ಸೌಧಾ** ದಿಕ್ಕುಗಳೆಂಬ ಉಪ್ಪರಿಗೆಗಳ ಮೇಲೆ, **ಆಬದ್ಧ** - ಕಟ್ಟಲ್ಪಟ್ಟ **ಜೈತ್ರಧ್ವಜ** ಪ್ರತಿವಾದಿ ನಿರಸನ **ಜಯದಿಂದ ಕಟ್ಟಲ್ಪಟ್ಟ** ಜಯಧ್ವಜದ, **ಪಟ್**– ಬಟ್ಟೆಯ, **ಪವನ** – ಗಾಳಿಯ **ಸ್ಫಾತಿ** – ಆಧಿಕ್ಯದಿಂದ **ನಿರ್ಧೂತ** ತಳ್ಳಲ್ಪಟ್ಟು ಅದರಿಂದ, **ತತ್ತತ್ ಸಿದ್ಧಾಂತ** ಆಯಾಯ ಆ ಸಿದ್ಧಾಂತಗಳ **ಸ್ತೋಮತೂಲ** - ಸಮೂಹವೆಂಬ **ಹತ್ತಿಯ ಸ್ತಬಕ** – ಗುಂಪಿನ, **ನಿಗಮನ** - ನಿರ್ಗಮನದಿಂದ, **ವ್ಯಕ್ತ** – ಪ್ರಕಾಶವಾದಂಥ **ಸದ್ವರ್ತನೀಕಾ** - ಸನ್ಮಾರ್ಗವನ್ನುಳ್ಳದ್ದಾಗಿದೆ.

ಅರಣನೂಲ್ ವಳ್ಹಿಚ್ಚೆವ್ವೈ ಯಳ್ಹಿತ್ತಿಡುಮ್ಮೈದುಕರ್‌ಕ್ಕೋರ್,
ವಾರಣಮಾಯವರ್ ವಾದಕ್ಕದಲಿಹಳ್ ಮಾಯ್‌ತ್ತಪಿರ್ರಾ ।
ಏರಣಿ ಕೀರ್ತಿಯಿರಾಮಾನುಜಮುನಿ ಇನ್ನುರೈ ಶೇರ್,
ಶೀರಣಿಶಿಂದ್ದೈಯಿನೋವರ್ ಶಿಂದಿಯೋಮಿನಿತ್ತೀವಿನೈಯೇ ॥4॥

ನಮ್ಮ ಗುರುಗಳ ಹೃದಯದಲ್ಲಿ ಹಯಗ್ರೀವನು ಕುಳಿತಿದ್ದಾನೆ. ಪರವಾದಿ ನಿರಸನ ಸಮಯದಲ್ಲ ಆ ಹಯಗ್ರೀವನ ಹೇಷಾರವಗಳು ಅಲೆ ಅಲೆಯಾಗಿ ಬಂದು ದುರ್ವಾದಿಗಳ- ಗರ್ವಗಳನ್ನೆಲ್ಲಾ ಅಡಗಿಸಿತ್ತಪ ಅಂದರೆ ವೇದಾಂತಾರ್ಥಗಳಿಗೆ ಪರವಾದಿಗಳು ಹೇಳುವ ಅಪಾರ್ಥಗಳನ್ನೆಲ್ಲಾ ಖಂಡಿಸುತ್ತವೆ. ಹೀಗೆ ಪರವಾದಿ ನಿರಸನ ಸೂಚಕವಾಗಿ ನಮ್ಮ ಆಚಾರ್ಯರುಗಳು ಜಯ ಪತಾಕೆಗಳನ್ನು ದಿಕ್ಕುವಿದಿಕ್ಕುಗಳಲ್ಲಿಯೂ ಹಾರಿಸಿ, ತನ್ಮೂಲಕ ದುರ್ವಾದಿಗಳ ತೂಲರಾಶಿಗಳಂಥಹ - ಅಪಾರ್ಥಗಳನ್ನು ಅನಾಯಾಸದಿಂದ ಹೋಗಲಾಡಿಸಿದ್ದಾರೆ ದಿಕ್ಕುಗಳಲ್ಲಿರುವ ಕಲ್ಮಷಗಳನ್ನು - ಹೋಗಲಾಡಿಸಿ, ಪ್ರಕಾಶಪಡಿಸುವಂತೆ, ದುರ್ಮಾರ್ಗಗಳನ್ನು ನಾಶಮಾಡಿ, ಸನ್ಮಾರ್ಗಗಳನ್ನು ಸ್ಥಾಪಿಸಿದ್ದಾರೆ ಇಂಥಹ ನಮ್ಮ ಗುರುಪರಂಪರೆಯು ಸರ್ವೋತ್ಕೃಷ್ಟವಾಗಿ ಪ್ರಕಾಶಿಸುತ್ತದೆ **ಜಯಂತಿ** ಎಂಬುದು **ಜಯತು** – ಎಂಬ ಅರ್ಥದಲ್ಲಿ ಪ್ರಕಾಶಿಸಲಿ ಎಂದು ಪ್ರಾರ್ಥನೆ

ಅನಂತರ ದುರ್ವಾದಿ ನಿರಸನ ಪೂರ್ವಕ ಸಿದ್ಧಾಂತ ಸ್ಥಾಪನೆ ಮಾಡಿದ, ಆಚಾರ್ಯರುಗಳಲ್ಲಿ ಪ್ರಧಾನರು ಶ್ರೀ ರಾಮಾನುಜರು, ಆಳವಂದಾರ್, ನಾಥಮುನಿಗಳು. ಇವರುಗಳಲ್ಲಿ ಕೃತಜ್ಞತೆಯನ್ನು ತೋರಿಸಲು ಸಂತೋಷದಿಂದ ಅವರುಗಳನ್ನು ಹಾಡಿ ಹೊಗಳುತ್ತಾರೆ.

ಭಗವದ್ರಾಮಾನುಜಾಚಾರ್ಯರ ಅನುಸಂಧಾನ :-

ಅರಣನೂಲ್ ವಳ್ಹಿಚ್ಚೆವ್ವೈ, ಇತ್ಯಾದಿ **ಅರಣನೂಲ್** – ವೇದಾಂತಶಾಸ್ತ್ರ, ಇದನ್ನು **ಅಳ್ಹಿತ್ತವರ್ ಹಳ್** – ಹಾಳು ಮಾಡಿದವರು, ವೇದ ಬಾಹ್ಯರಾದ್ಯ, ಸಾಂಖ್ಯ, ಸೌಗತ, ಚಾರ್ವಾಕಾದಿಗಳು; **ಅರಣನೂಲ್ ವಳ್ಹಿ ಅಳ್ಹಿತ್ತವರ್‌ಹಳ್** – ವೇದಾಂತಶಾಸ್ತ್ರದ ಮಾರ್ಗವನ್ನು (– **ವಳ್ಹಿ**) - ಭೇದ, ಅಭೇದ, ಘಟಕ ಶ್ರುತಿಗಳು ಪರಸ್ಪರ ಅವಿರುದ್ಧಗಳು ಎಂಬ ಮಾರ್ಗವನ್ನು ಹಾಳು ಮಾಡಿದವರು ಮಾಯಾವಾದಿಗಳು - ಅದ್ವೈತಿಗಳು - **ಅರಣನೂಲ್‌ವಳ್ಹಿಚ್ಚೆವ್ವೈ ಅಳ್ಹಿತ್ತವರ್‌ಹಳ್** - ಆ ಮೂರು ಶ್ರುತಿಗಳ ಋಜುವಾದ ಮಾರ್ಗವನ್ನು ಕೆಡಿಸಿ ದವರು ದ್ವೈತಿಗಳು, ಹೀಗೆ **ಅಳ್ಹಿತ್ತಿಡುಂ ಐತುಕರ್ಕು** -ಹಾಳುಮಾಡುವ ಹೇತುವಾದವನ್ನು ಮಾಡುವವರಿಗೆ – ಇವರುಗಳು ಹೇಳುವ ಹೇತುಗಳೆಲ್ಲಾ, ಆಭಾಸಗಳು, ಆದ್ದರಿಂದ ಇವರುಗಳನ್ನು ಹೈತುಕರೆಂದು ವ್ಯಪದೇಶಿಸುತ್ತಾರೆ. **ಓರ್ ವಾರಣಮಾಯರ್** – ಅದ್ವಿತೀಯವಾದ ಮದಿಸಿದ ಆನೆಯಂತೆ, **ಅವರ್‌ವಾದಕ್ಕದಲಿಹಳ್ ಮಾಯ್‌ತ್ತ** - ಅವರ ವಾದಗಳೆಂಬ ಬಾಳೆಕಂಬಗಳನ್ನು ಧ್ವಂಸಮಾಡಿದ **ಪಿರಾನ್** - ಪರಮೋಪಕಾರ ಮಾಡಿದವರು, ಇಲ್ಲಿ ಭಗವದ್ರಾಮನುಜರನ್ನು ಆನೆಗೆ ಹೋಲಿಸಿ ಹೈತುಕವಾದಗಳನ್ನು ಬಾಳೆಕಂಬಗಳೆಂದು ರೂಪಿಸಿರುವುದರಿಂದ, ವಾದಗಳನ್ನು ಹೋಗಲಾಡಿಸುವುದು ಅನಾಯಾಸವಾದ ಕೃತ್ಯವೆಂಬುದೂ, ವಾದಗಳು ಅತಿಬಲ್ಬಜಗಳೆಂಬುದೂ **ತಿಳಿಸಿದಂತೆ ಆಯಿತು.**

ಏರಣಿಕೀರ್ತಿ ಇರಾಮಾನುಜಮುನಿ – ಅವರ ಸ್ವಭಾವಕ್ಕೆ ತಕ್ಕದೂ (ಏರ್), ಲೋಕ ಪ್ರಸಿದ್ಧವೂ ಅಣಿ ಆದ ಕೀರ್ತಿಯನ್ನುಳ್ಳಂಥ ಶ್ರೀ ಭಾಷ್ಯಕಾರರವರ, **ಇನ್ನುರೈಶೇರ್** - ಸ್ವಾದು ತಮಗಳಾದ ಶ್ರೀಸೂಕ್ತಿಗಳಲ್ಲಿ ತಲ್ಲೀನ ವಾದ **ಶೀರಣಿಶಿಂದ್ದೈಯಿನೋವರ್** ಶಮದಮಾದಿ ಗುಣಗಳಿಂದ ಅಲಂಕೃತ ಮನಸ್ಸುಳ್ಳವರಾದೆವು. ಇನಿ- ಇನ್ನು ಮೇಲೆ

ನೀಳವಂದಿನ್ರು ವಿಧಿವಹೈಯಾಲ್ ನಿನೈವೊನ್ರಿಯ ನಾಂ
ಮಿಳವಂದಿನ್ನುಂ ವಿನೈಯುಡಂಬೊನ್ರಿವಿೞುಂದುೞಲಾದು ।
ಆಳವಂದಾರೆನ ವೆನ್ರರುಳ್ ತಂದು ವಿಳಂಗಿಯಶೀರ್,
ಆಳವಂದಾರಡಿಯೋಂ ಪಡಿಯೋಮಿನಿಯಲ್ ವೞಕ್ಕೇ ॥5॥

ತೀವಿನೈಯೇ - ಕೆಟ್ಟ ಮಾರ್ಗವನ್ನು **ಶಿಂದಿಯೋವ್** – ಮನಸ್ಸಿನಲ್ಲಿಯೂ ಚಿಂತಿಸುವುದಿಲ್ಲ ಅನುಷ್ಠಿಸುವು ದೆಂಬುದು ಎಲ್ಲಿಬಂತು

ತಾತ್ಪರ್ಯ :- ಭಗವದ್ರಾಮಾನುಜರು ಪರವಾದಿ ನಿರಸನ ಮಾಡಿ ಸಿದ್ಧಾಂತವನ್ನು ಸ್ಥಾಪಿಸಿದರು. ಆ ಗ್ರಂಥ ಗಳನ್ನು ಓದಿ ನಾವು ತಪ್ಪು ದಾರಿಯನ್ನು ಕಡ ಹಿಡಿಯದೆ, ಸನ್ಮಾರ್ಗವನ್ನು ಅವಲಂಬಿಸಿದೆವು, ಎಂದು ತಮ್ಮ ಕೃತಜ್ಞತೆಯನ್ನೂ ಕೃತಕೃತ್ಯತೆಯನ್ನೂ ವ್ಯಕ್ತಪಡಿಸುತ್ತಾರೆ

ಆಳವಂದಾರ್ ಅನುಸಂಧಾನ - ನೀಳವಂದಿನ್ರು ಇತ್ಯಾದಿ

ನೀಳ – ದೀರ್ಘಕಾಲವಾಗಿ ಅಂದರೆ ಅನಾದಿಯಾಗಿ, **ವಂದು** – ಸಂಸಾರ ಸಾಗರದಲ್ಲಿ ಮುಳುಗಿ ತೇಲಿ ಕೊಂಡುಬಂದು **ಇನ್ರು** – ಈ ಜನ್ಮದಲ್ಲಿ **ವಿಧಿವಹೈಯಾಲ್** - ಆದೃಷ್ಟದ ಪರಿಪಾಕದಿಂದ, **ನಿನೈವು**- ಜ್ಞಾನ, ಅದಾಗಿ ಆತ್ಮವಸ್ತುವು ದೇಹಕ್ಕಿಂತ ಬೇರೆಯಾದದ್ದು. ಇದು ಪುಣ್ಯಪಾಪ ಕರ್ಮಾನುಗುಣವಾಗಿ ಅನೇಕ ಜನ್ಮಗಳನ್ನು ಎತ್ತುತ್ತದೆ ಇದು ಭಗವಂತನಿಗೆ ಶೇಷಭೂತವಾದದ್ದು, ಭಗವಂತನನ್ನು ಪಡೆದು ಭಗವತ್ ಕೈಂಕರ್ಯ ರತಿಯಾಗಿರುವುದೇ ಇದರ ಸ್ವರೂಪವೆಂಬ ಜ್ಞಾನವನ್ನು **ಒನ್ರಿಯ** - ಕೂಡಿದ - ಪಡೆದ, **ನಾವ್** – ಸ್ಥಾವರಾದಿ ಜನ್ಮಗಳು ಕಳೆದು ಭಾಗ್ಯವಶದಿಂದ, ಮನುಷ್ಯ ಜನ್ಮವೆತ್ತಿ ಮೋಕ್ಷಾರ್ಥ ಚಿಂತೆಯನ್ನು ಪಡೆದ ನಾವು, **ಮೀಳವಂದು** – ಪುನಃ ಸಂಸಾರದಲ್ಲಿ ಹುಟ್ಟಿ, **ಇನ್ನುಂ** - ತಿರುಗಿಯೂ **ವಿನೈಯುಡಂಬು**- ಪಾಪಜನ್ಯವಾಗಿ, ಪಾಪವನ್ನು ಮಾಡುವ, ಶರೀರದೊಂದಿ **ಒನ್ರಿ** – ಕೂಡಿ; ದೇಹವೇ ಆತ್ಮ ಎಂದು ಭ್ರಮಿಸಿ, **ವಿೞುಂದುೞಲಾದು** - ಸಂಸಾರದಲ್ಲೇ ಬಿದ್ದು ನರಕಾದಿಗಳಲ್ಲಿ ಸಿಕ್ಕಿಕೊಂಡು ತೀವ್ರವಾದ ಕಷ್ಟಗಳನ್ನು ಅನುಭವಿಸದೇ ಇರುವಂತೆ; **ಆಳವಂದಾರ್** – ನಮ್ಮನ್ನು ರಕ್ಷಿಸಲು ಅವತರಿಸಿದವರು, **ಎನ** – ಎಂದು ಎಲ್ಲರೂ ಕೊಂಡಾಡುವಂತೆ, **ವೆನ್ರು** – ಚೋಳರಾಜನ ಸಭೆಯಲ್ಲಿ ಆಕ್ಕಿಯಾೞ್ವಾನ್ ಮೊದಲಾದವರನ್ನು ಜಯಿಸಿ, **ಅರುಳ್ ತಂದು** – ಕೃಪೆಮಾಡಿ, ಅಂದರೆ ಕೃಪೆಯಿಂದ ಸಿದ್ಧಿ ತ್ರಯವೇ ಮೊದಲಾದ ಗ್ರಂಥಗಳನ್ನು ರಚಿಸಿ, **ಲೋಕಕ್ಕೆ** ಅನುಗ್ರಹ ಮಾಡಿ. **ವಿಳಂಗಿಯ** - ಪ್ರಕಾಶಮಾನವಾದ, **ಶೀರ್** – ಕಲ್ಯಾಣ ಗುಣಗಳನ್ನುಳ್ಳಂಥ, "ತಮೋಯೇನಾಪಾಸ್ತಂ ಸಹಿ ವಿಜಯತೇ ಯಾಮುನಮುನಿಃ– ಅಜ್ಞಾನವು ಯಾರಿಂದ ಹೋಗಲಾಡಿಸಲ್ಪಟ್ಟಿತೋ ಅಂಥಹ 'ಯಾಮುನಾಚಾರ್ಯರು' ಸರ್ವೋತ್ಕೃಷ್ಟರಾಗಿ ಪ್ರಕಾಶಿಸುತ್ತಾರೆ, ಎಂದು ಭಾಷ್ಯಕಾರರಿಂದ ಕೊಂಡಾಡಲ್ಪಟ್ಟ ಕಲ್ಯಾಣಗುಣಗಳನ್ನುಳ್ಳ, **ಆಳವಂದಾರ್ ಅಡಿಯಾವ್** – ಆಳವಂದಾರ್

ತ್ವಂ ಮೇಽಹಂ ಮೇ ಕುತಸ್ತತ್ ತದಪಿ ಕುತ ಇತೋ ವೇದಮೂಲಪ್ರಮಾಣಾತ್
ಏತಚ್ಚಾನಾದಿಸಿದ್ಧಾದನುಭವವಿಭವಾತ್ತರ್ಹಿ ಸಾಕ್ರೋಶ ಏವ ।
ಕ್ವಾಕ್ರೋಶಃ ಕಸ್ಯಗೀತಾದಿಷು ಮಮವಿದಿತಃ ಕೋತ್ರಸಾಕ್ಷೀ ಸುಧೀಸ್ಸ್ಯಾತ್
ಹಂತತ್ವತ್ಪಕ್ಷಪಾತೀ ಸಇತಿನೃಕಲಹೇಮೃಗ್ಯ ಮಧ್ಯಸ್ಥವತ್ತ್ವಂ ॥

ಪರಾಶರಭಟ್ಟರು ಶ್ರೀರಂಗನಾಥನು, ಅಭಿಷೇಕ ಸಮಯದಲ್ಲಿ ತುಳಸೀಮಾಲೆಯನ್ನು ಧರಿಸಿ ನಿಂತಿರುವ ಸೇವೆಯಲ್ಲಿ ತಲ್ಲೀನರಾಗಿ ಹಾಡಿದ ಶ್ಲೋಕ.

ಎಲೈ ಸ್ವಾಮಿಯೇ । ರಂಗನಾಥನೇ । ಜೀವನಿಗೂ ನಿನಗೂ ಏರ್ಪಟ್ಟ ಕಲಹದಲ್ಲಿ ವಿವಾದಗ್ರಸ್ತವಾದ, "ನೀನು ಸ್ವಾಮಿ, ಜೀವನು ನಿನಗೆ ಶೇಷಭೂತನು" ಎಂಬ ವಿಷಯವನ್ನು ತುಳಸಿಮಾಲೆಯನ್ನು ಧರಿಸಿ ನೀರಿನಲ್ಲಿ ಮುಳುಗಿ ಪ್ರಮಾಣೀಕರಿಸುವಂತಿದೆ, ಆದಾಗಿ

ಕಾಳಂ ವಲಂಪುರಿಯನ್ನ ನರ್ಕ್ಕಾದಲುಡಿಯುವರ್ಕ್ಕುತಾಳಂ
ವ್ಳಙ್ಗಿಂತ್ತವಿಂೞ್ಮರೈಯಿನ್ನಿಶೈ ತಂದವಳ್ಳಲ್ ।
ಮೂಳುಂ ತವನೆರಿ ಮೂಟ್ಟಿಯನಾಥಮುನಿ ಕೞಲೇ
ನಾಳುಂ ದೊೞುದ್ಯೆೞುವೋಮ್ ನಮುಕ್ಕಾರ್ ನಿಹರ್ ನಾನಿಲತ್ತೇ ॥6॥

ಅವರ ದಾಸರಾದ ನಾವು, **ಇನಿ** – ಇನ್ನು ಮೇಲೆ, **ಅಲ್ವೞಕ್ಕು** – ಕೆಟ್ಟವಾದವನ್ನು, ಅಂದರೆ, ದೇಹವೇ ಆತ್ಮ, ಆತ್ಮಸ್ವತಂತ್ರ, ಭಗವಂತನಿಗೆ ಶೇಷ ಭೂತನಲ್ಲ ಇತ್ಯಾದಿಯಾದ, (1) **"ತ್ವಂಮೇಽಹಂಮೇ** ಎಂದು ಪರ-ಶರಭಟ್ಟರು ಹೇಳಿರುವಂತೆ, ತಪ್ಪುವಿವಾದವನ್ನು, **ಪಡಿಯೋಮ್** - ತಪ್ಪು ವಿವಾದಕ್ಕೆ ಕಾರಣವಾದ ನಾಸ್ತಿಕ ಗ್ರಂಥಗಳನ್ನು ಓದುವುದಿಲ್ಲ ತಾತ್ಪರ್ಯ – ಆಳವಂದಾರವರು ಅವತರಿಸಿ, ಸಿದ್ಧಿತ್ರಯ, ಪುರುಷ ನಿರ್ಣಯ, ಆಗಮ ಪ್ರಾಮಾಣ್ಯ, ಸ್ತೋತ್ರರತ್ನ, ಚತುಶ್ಲೋಕೀ, ಗೀತಾರ್ಥ ಸಂಗ್ರಹವೆಂಬ ಆರು ಗ್ರಂಥಗಳನ್ನು ಅನುಗ್ರಹಿಸಿದ ನಂತರ ಅವುಗಳನ್ನು ಸದಾಚಾರ್ಯ ಮುಖವಾಗಿ ಕಾಲಕ್ಷೇಪಮಾಡಿದ ನಾವು ದುರ್ವಾದಗ್ರಸ್ತಗಳಾದ ನಾಸ್ತಿಕ ಗ್ರಂಥಗಳನ್ನು ಅಂದರೆ ಸಾಂಖ್ಯ ಸೌಗತ, ಚಾರ್ವಾಕ, ಮಾಯಾವಾದಿಗಳ ಗ್ರಂಥಗಳನ್ನು ಓದುವುದಿಲ್ಲ ಅವುಗಳೆಲ್ಲಾ ನಿಸ್ಸಾರವಾದುವೆಂದು ಬಿಟ್ಟೆವು ಎಂದರ್ಥ

ನಾಥಮುನಿಗಳ ಅನುಸಂಧಾನ

ಕಾಳಂವಲಂಬುರಿ ಅನ್ನ ಇತ್ಯಾದಿ - **ಕಾಳಂ** - ಕಹಳೆವಾದ್ಯ, **ವಲಂಬುರಿ** – ಬಲಮುರಿಶಂಖ, **ಅನ್ನ** – ಇವಕ್ಕೆ ಸದೃಶವಾದ, **ನರ್ಕ್ಕಾದಲಡಿಯವರ್ಕ್ಕು** – ಭಕ್ತಿಯುಳ್ಳ ಶಿಷ್ಯರುಗಳಿಗೆ, - ಅದಾಗಿ ಕೀೞೈಯಹತ್ತಾೞ್ವಾನ್, **ಮೇಲೈ** ಅಹತ್ತಾೞ್ವಾನ್ ಎಂಬ ಸೋದರಳಿಯರು ನಾಥಮುನಿಗಳನ್ನು ಪರಭಕ್ತಿ ಪೂರ್ವಕವಾಗಿ ಆಶ್ರಯಿಸಿ, ದಿವ್ಯಜ್ಞಾನವನ್ನು ಪಡೆದು, ಕಹಳೆವಾದ್ಯ ಘೋಷ, ಶಂಖಘೋಷಗಳನ್ನು ಮಾಡಿದರೆ ಪರವಾದಿ ಹೃದಯ ವಿದ್ರಾವಕವಾಗುವಂತೆ, ಪ್ರತಿವಾದಿ ಸಿರಸನ ಮಾಡುತ್ತಿದ್ದರು ಅದಕ್ಕಾಗಿ ಇವರಿಗೆ ತತ್ತುಲ್ಯವಾದ ವ್ಯಪದೇಶ **ತಾಳಂವೞಂಗಿ** - ತಾಳಶಾಸ್ತ್ರ - ಅಂದರ ಸಂಗೀತ ಶಾಸ್ತ್ರವನ್ನು ಉಪದೇಶಿಸಿ, **ತಮಿೞ್ಮರೈ**-ದ್ರಾವಿಡ ವೇದದ **ಇನ್**– ಭೋಗ್ಯವಾದ, **ಇಶೈ** ದಿವ್ಯಗಾನವನ್ನು **ತಂದವಳ್ಳಲ್** – ಉಪದೇಶಿಸಿದ ಮಹೋದಾರರು **ಮೂಳುಮ್**– ಮೋಕ್ಷದಲ್ಲಿ ಅಭಿರುಚಿಯುಳ್ಳವರಿಗೆ, **ತವನೆರಿಮೂಟ್ಟಿಯ**–ಅಷ್ಟಾಂಗ ಯೋಗ, ರಹಸ್ಯಾದಿ ಗ್ರಂಥಗಳ ಮೂರ್ಲ್ಕು ಲೋಕದಲ್ಲ ಪ್ರಚಾರ ಮಾಡಿದ **ನಾಥಮುನಿ ಕೞಲೇ** - ನಾಥಮುನಿಗಳ ಪಾದಗಳನ್ನೇ **ನಾಳುಂತೊೞುದೆೞುವೋಮ್** – ಪ್ರತಿದಿನವೂ, ನಮಸ್ಕರಿಸಿ, ಆತ್ಮೋಜ್ಜೀವನವನ್ನು ಪಡೆಯುವೆವು. ಇದರಿಂದ ಶರೀರ ಶುದ್ಧಿ ಹೇಳಲ್ಪಟ್ಟಿತು **ನಮುಕ್ಕು** – ಇಂಥಹ ಭಾಗ್ಯವನ್ನು ಪಡೆದ ನಮಗೆ, **ನಾನಿಲತ್ತೇ** - ನಾಲ್ಕು ವಿಧವಾದ ಭೂಮಿಯಲ್ಲಿ, (ಜಲ, ಸ್ಥಲ, ಅರಣ್ಯ. ಪಯಿರುಗಳಿಂದ ಕೂಡಿದ ನಾಲ್ಕು ವಿಧವಾದ ಭೂಮಿಗಳು) **ಆರ್‌ನಿಹರ್**– ಯಾರು ಸಮರಿದ್ದಾರೆ. ನಾಥಮುನಿಗಳ ಶ್ರೀಪಾದ ಸಂಬಂಧವನ್ನು ಹೊಂದದ ಬೇರೆಯಾರೂ ಯಾವಮತ

ಭಗವಂತನು ಜೀವನನ್ನು ನೋಡಿ "ನೀನು ನನಗೆ ದಾಸನು ' ಎಂದು ಹೇಳಲು, ಜೀವನು 'ಅಲ್ಲ ನಾನು ಸ್ವತಂತ್ರ, ನಿನಗೆ ದಾಸನಲ್ಲ" ಎಂದನು ಅದು ಹೇಗೆ ಎಂದು ಭಗವಂತನ ಪ್ರಶ್ನೆ, ನಿನಗೆ ದಾಸನೆಂಬುದನ್ನು ಮೊದಲು ಹೇಳು ಎಂಬುದು ಜೀವನ ಪ್ರಶ್ನೆ ವೇದಗಳು ಜೀವನು ಭಗವಂತನಿಗೆ ದಾಸನೆಂದು ಹೇಳುತ್ತವೆ ಎಂದ ಭಗವಂತ "ನಾನು ಅನಾದಿಯಾಗಿ ಸ್ವತಂತ್ರ ಅನುಭವವೂ ಇದೆ" ಎಂಬುದು ಜೀವನ ಬದಿಲು, ತಾನು ಆಗಾಗ್ಯೆ ಅದನ್ನು ಆಕ್ಷೇಪಿಸಿ ಬರುತ್ತಿದ್ದೇನೆಂದ ಭಗವಂತ. ಅದು ನನಗೆ ಗೋತ್ತು ನೀನು ಗೀತೆಗೆ ಅರ್ಥ ಮಾಡುವುದನ್ನು ನಾನು ಒಪ್ಪಲಾರೆ ಸಾಕ್ಷಿ ಇದ್ದರೆ ಹೇಳೆಂದ ಜೀವ ವಿದ್ವಾಂಸರೇ ಸಾಕ್ಷಿ ಎಂದ ಭಗವಂತ ಅವರು ನಿನ್ನ ಪಕ್ಷಪಾತಿಗಳು ಅದನ್ನು ನಾನು ಒಪ್ಪಲಾರೆ ಎಂದ ಜೀವ ಹಾಗಾದರೆ "ನಾನು ನೀರಿನಲ್ಲಿ ಮುಳುಗಿ ಪ್ರಮಾಣ ಮಾಡುತ್ತೇನೆ. "ಜೀವನು ಭಗವಂತನಿಗೆ ದಾಸ" ಎಂದು ಭಗವಂತನು ಹೇಳಿ ಪ್ರಮಾಣೀಕರಿಸುವಂತಿದ, ಈ ದೃಶ್ಯ ಎಂದು ಹಾಡಿರುತ್ತಾರೆ.

ದವರೂ ನಮಗೆ ಸಮರಲ್ಲ. ಇದು ಗರ್ವೋಕ್ತಿಯಲ್ಲ, ಸಾತ್ವಿಕಾಹಂಕಾರ – ಅಂದರೆ ಇಂಥಹ ಭಾಗ್ಯವನ್ನು ಪಡೆದಿದ್ದೇವೆಂಬ ಹೆಮ್ಮೆ

ತಾತ್ಪರ್ಯ : ನಾಥಮುನಿಗಳು ಅವತಾರಮಾಡಿ, ನಮ್ಮಾಳ್ವಾರ್ ಮೂಲಕ ಸಕಲವೇದಾಂತಾರ್ಥಗಳನ್ನೂ ದಿವ್ಯ ಪ್ರಬಂಧಗಳನ್ನೂ ಭಕ್ತಿ ಪ್ರಪತ್ತಿ ವಿದ್ಯೆಗಳನ್ನೂ ಉಪದೇಶಹೊಂದಿ, ತಮ್ಮ ಪಾದಸಮಾಶ್ರಯಣ ಮಾಡಿದ ಭಾಗಿನೇಯರಿಬ್ಬರಿಗೆ ಉಪದೇಶಿಸಿ ತನ್ಮೂಲಕ ಲೋಕಕ್ಕೆ ಜ್ಞಾನವನ್ನು ಹರಡಿದರು. ಇಂಥಹ ಮಹಾಚಾರ್ಯರ ಶ್ರೀಪಾದಗಳನ್ನು ಆಶ್ರಯಿಸಿದ ನಾವೇ ಮಹಾ ಧನ್ಯರು ಆತ್ಮೋಜ್ಜೀವನವನ್ನು ಹೊಂದಿದವರು ಎಂದರ್ಥ

ಶ್ರೀಮನ್ನಿಗಮಾಂತ ಮಹಾ ದೇಶಿಕರು ಅನುಗ್ರಹಿಸಿದ ಗುರುಪರಂಪರಾಸಾರಕ್ಕೆ
ಸಾರಚಂದ್ರಿಕಾ ವ್ಯಾಖ್ಯಾನವು ಸಮಾಪ್ತ.

ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ
ಅಸ್ಮದ್ಗುರು ಪರಂಪರಾಯೈ ನಮಃ

ಶ್ರೀಮತೇ ಹಯಗ್ರೀವಾಯ ನಮಃ ।

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ ।



ಶ್ರೀಮದ್ರಹಸ್ಯತ್ರಯಸಾರಃ

ಉಪೋದ್ಘಾತಾಧಿಕಾರಃ

ಆಭಗವತ್ತಃ ಪ್ರಥಿತಾಮನಘಾಮಾಚಾರ್ಯ ಸಂತತಿಂ ವಂದೇ ।
ಮನಸಿ ಮಮ ಯತ್ಪ್ರಸಾದಾತ್ ವಸತಿ ರಹಸ್ಯತ್ರಯಸ್ಯ ಸಾರೋऽಯಮ್ ॥1॥

ಶ್ರೀಮತೇ ಹಯಗ್ರೀವಾಯನಮಃ । ಶ್ರೀಮತೇ ನಿಗಮಾಂತಮಹಾದೇಶಿಕಾಯನಮಃ ।
ಶ್ರೀಮತೇ ಸುಂದರ ಸೌಮ್ಯನಾರಾಯಣಾರ್ಯ ಮಹಾದೇಶಿಕಾಯ ನಮಃ । ಶ್ರೀಮತೇ ಶ್ರೀನಿವಾಸ ಗೋಪಾಲಾರ್ಯಾಯ ಮಹಾದೇಶಿಕಾಯನಮಃ ।

ಸಾರಚಂದ್ರಿಕಾ ವ್ಯಾಖ್ಯಾ

ಗುರುಭಜನ :

ಶ್ರೀಮನ್ನಿಗಮಾಂತಮಹಾದೇಶಿಕರು **ರಹಸತ್ರಯಸಾರವೆಂಬ** ಗ್ರಂಥವನ್ನು ಅನುಗ್ರಹಿಸಲು, ಪ್ರಥಮತಃ ಗುರುಪಙ್ಕ್ತಿಭಜನವನ್ನು ಮಾಡುತ್ತಾರೆ. ಗುರುಪರಂಪರಾ**ಸಾ**ರದಲ್ಲಿ **ನಿ**ರೂಪಿಸಿದಂತೆ ಗುರುಪಙ್ಕ್ತಿಭಜನವು ಮಂಗಳಕರ ಮತ್ತು ವೇದಾಂತ ಗ್ರಂಥಾರಂಭದಲ್ಲಿ ಆವಶ್ಯಾನುಷ್ಠೇಯ. ಅವರುಗಳ ಅನುಗ್ರಹದಿಂದ, ರಹಸ್ಯ ತ್ರಯಗಳ ಸಾರವು ಮನಸ್ಸಿನಲ್ಲಿ ಬೇರೂರಿರುತ್ತೆ. ರಹಸ್ಯತ್ರಯಸಾರಗಳನ್ನು ಅಧಿಕರಿಸಿ ರಚಿಸುವ ಗ್ರಂಥಕ್ಕೆ "**ರಹಸ್ಯ ತ್ರಯಸಾರ**"ವೆಂದು ನಾಮಧೇಯ ಇದು "ಅಧಿಕೃತ್ಯಕೃತೇ ಗ್ರಂಥೇ" ಎಂಬ ವ್ಯಾಕರಣ ಸೂತ್ರವನ್ನವಲಂಬಿಸಿದೆ **ಅನಘಾಂ - ಎಂ**ದರೆ ಗುರುಪಙ್ಕ್ತಿಯು ಭಗವಂತನ ಹಾಗೆ ಹೇಯಗುಣಕ್ಕೆ ಆಸ್ಪದವಿಲ್ಲದೆ, **ಕಲ್ಯಾಣಗುಣ** ಗಳಿಂದ ತುಂಬಿರುವುದು ಎಂದರ್ಥ. ಇದರಿಂದ ಆಚಾರ್ಯರು ಭಗವಂತನಿಗೆ ಸಮರು. ಭಗವಂತನೇ ಆಚಾರ್ಯರೂಪದಲ್ಲಿ ಅವತರಿಸಿದ್ದಾನೆಂಬುದು ಸೂಚಿತ. ಆ ಆಚಾರ್ಯರುಗಳ ಅನುಗ್ರಹದಿಂದ ರಹಸ್ಯತ್ರಯಸಾರಗಳು ನನ್ನ ಮನಸ್ಸಿನಲ್ಲಿ ಬೇರೂರಿವೆ ಎಂಬುದರಿಂದ ಸತ್ಸಂಪ್ರದಾಯಾಗತ ಸಮೀಚೀನ ಶಾಸ್ತ್ರಾರ್ಥಗಳು, ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಡುತ್ತವೆ ಎಂದು ಸೂಚಿತ.

ಆಭಗವತ್ತಃ ಇತ್ಯಾದಿ – **ಆಭಗವತ್ತಃ**- ಭಗವಂತನಿಂದ ಹಿಡಿದು, **ಪ್ರಥಿತಾಂ** – ಪ್ರಸಿದ್ಧಿಹೊಂದಿದ, **ಅನಘಾಂ** - ನಿರ್ದುಷ್ಟವಾದ **ಆಚಾರ್ಯಸಂತತಿಂ** – ಆಚಾರ್ಯ ಪರಂಪರೆಯನ್ನು, **ವಂದೇ** - ನಮಸ್ಕರಿಸುತ್ತೇನೆ. **ಯತ್ಪ್ರಸಾದಾತ್** – ಯಾವ ಆಚಾರ್ಯರ ಅನುಗ್ರಹದಿಂದ, **ಮಮ ಮನಸಿ** – ನನ್ನ ಮನಸ್ಸಿನಲ್ಲಿ, **ರಹಸ್ಯತ್ರಯಸ್ಯ** ಅಷ್ಟಾಕ್ಷರ, ದ್ವಯ, ಚರಮ ಶ್ಲೋಕಗಳೆಂಬ ಮೂರು ರಹಸ್ಯೋಪದೇಶಾರ್ಹವಾದ ಮಂತ್ರಗಳ **ಅಯಂ ಸಾರಃ**– ಈ ಗ್ರಂಥದಲ್ಲಿ ನಿರೂಪಿತವಾದ **ಸಾರಾರ್ಥವು**, **ವಸತಿ** - ಸರ್ವದಾ **ನಿ**ತ್ಯ **ಸಾ**ನ್ನಿಧ್ಯವನ್ನು ಹೊಂದಿವೆಯೋ ಅಂಥಹ ಆಚಾರ್ಯ ಪರಂಪರೆಯನ್ನು ನಮಸ್ಕರಿಸುತ್ತೇನೆಂದು ಅನ್ವಯ.

ಇಲ್ಲಿ **"ಆಭಗವತ್ತಃ"** ಎಂದಾರಂಭಿಸಿ ಪ್ರತ್ಯೇಕವಾಗಿ ಮಂಗಳವನ್ನು ಕೋರುವುದರಿಂದ, ರಹಸ್ಯತ್ರಯ ಸಾರವು, ಗುರುಪರಂಪರಾ ಸಾರಕ್ಕಿಂತ ಬೇರೆಯಾದ ಗ್ರಂಥವಾದಾಗ್ಯೂ, ಗುರು ಪರಂಪರಾ**ಸಾ**ರ ಗ್ರಂಥವು ರಹಸ್ಯತ್ರಯ

ಕರ್ಮಬ್ರಹ್ಮಾತ್ಮಕೇ ಶಾಸ್ತ್ರೇ ಕೌತಸ್ಕುತ ನಿವರ್ತಕಾನ್
ವಂದೇ ಹಸ್ತಿಗಿರೀಶಸ್ಯ ವೀಥೀ ಶೋಧಕ ಕಿಂಕರಾನ್ ||೭||
ಅಳುಮಡೈಕ್ಕಲಮೆನ್ರೆನ್ಮೈಯಂಬುಯತ್ತಾಳ್ |
ಕಣವನ್ ತಾಳಿಣೈ ಶೇರ್ನ್ದೆಮಕ್ಕು ಮನ್ನೈತನ್ದ ತಕವುಡೈಯಾರ್ ||

ಸಾರಕ್ಕೆ ಅಧಿಕಾರಾಂತರದ ಹಾಗೆ ಶೇಷಭೂತವು **ಗುರುಪರಂಪರಾಸಾರದ** ಆದಿಯಲ್ಲಿ, **ದಂಪತೀ ಜಗತಾಂಪತೀ'** ಎಂದು ಅನುಸಂಧಾನ ಮಾಡಿ, **ರಹಸ್ಯತ್ರಯಸಾರದ** ಕೊನೆಯಲ್ಲಿ "**ಶರಣ್ಯದಂಪತಿವಿದಾಂ**" ಎಂದು ಅನುಸಂಧಾನ ಮಾಡಿರುವುದರಿಂದ, ಈ ಅಂಶವು ಸೂಚಿತವೆಂಬುದು ಸಂಪ್ರದಾಯಿಕವಾದ ಮಾತು.

ಕರ್ಮಬ್ರಹ್ಮಾತ್ಮಕೇ, ಇತ್ಯಾದಿ - ಕರ್ಮಬ್ರಹ್ಮಾತ್ಮಕೇ ಶಾಸ್ತ್ರೇ - ಕರ್ಮ ಮೀಮಾಂಸ ಎಂಬ ಪೂರ್ವ ಮೀಮಾಂಸಾ, ಬ್ರಹ್ಮಮೀಮಾಂಸಾ ಎಂಬ ಉತ್ತರ ಮೀಮಾಂಸಾ, ಎಂಬ ಎರಡು ಭಾಗಗಳಿಂದ ಕೂಡಿದ ವೇದಾಂತ ಶಾಸ್ತ್ರದಲ್ಲಿ. ಇದರಿಂದ ಎರಡು ಭಾಗಗಳೂ ಸೇರಿ ಒಂದೇ ಶಾಸ್ತ್ರವೆಂಬುದು ಸೂಚಿತ **ಕೌತಸ್ಕುತ ನಿವರ್ತಕಾನ್ -** ಕುತಃ ಕುತಃ - ಹೇಗೆ ಎಂದು ವಾದ ಮಾಡುವ ಕುತರ್ಕಿಗಳಾದ ಹೈತುಕವಾದಿಗಳನ್ನು ನಿರಸನ ಮಾಡುವ, **ಹಸ್ತಿಗಿರೀಶಸ್ಯ –** ಹಸ್ತಿಗಿರಿ ಎಂಬ ಕಾಂಚಿಪುರದಲ್ಲಿ ನಿತ್ಯಸಾನ್ನಿಧ್ಯವನ್ನು ಮಾಡಿಕೊಂಡಿರುವ, ವರದ ರಾಜನ, **ವೀಥೀಶೋಧಕ ಕಿಂಕರಾನ್ –** ಸನ್ನಿಧಿಯನ್ನು ಗುಡಿಸಿ ಸಾರಿಸಿ ರಂಗೋಲೆಯಿಟ್ಟು ಚೊಕ್ಕಟ ಮಾಡುವ ಕೈಂಕರ್ಯವನ್ನು ನಿರ್ವಹಿಸುತ್ತಿದ್ದ, ಅಪ್ಪುಳ್ಳಾರೆಂಬ ಸ್ವಾಚಾರ್ಯರಾದ, ವಾದಿಹಂಸಾಂಬುವಾಹರನ್ನು, **ವಂದೇ –** ನಮಸ್ಕರಿಸುತ್ತೇನೆಂದು, ಶ್ರೀ ದೇಶಿಕರು ತಮ್ಮ ಸ್ವಾಚಾರ್ಯರನ್ನು ನಮಸ್ಕರಿಸುತ್ತಾರೆ ಇದು ಸಾರಾಸ್ವಾದಿನೀ ಸಾರಬೋಧಿನೀಕಾರರುಗಳ ಯೋಜನೆ

ಹಸಿಗಿರೀಶಸ್ಯವಿಥೀಶೋಧಕಕಿಂಕರಾನ್ ಎಂಬುದು ಶ್ರೀದೇಶಿಕರಿಗೆ ದ್ರಮಿಡೋಪನಿಷತ್ತನ್ನು ಅಧ್ಯಯನಮಾಡಿಸಿ, ಉಭಯವೇದಾಂತಗಳಲ್ಲಿಯೂ ಪಾರಂಗತರಾದ ಆಚಾರ್ಯರೊಬ್ಬರನ್ನು ಅನುಸಂಧಿಸುತ್ತಾರೆಂದು ಶ್ರೀಭಾಷ್ಯ ಶ್ರೀನಿವಾಸಾಚಾರ್ಯರವರ ಯೋಜನೆ ವೀಧಿ ಶೋಧನೆ ಎಂದರೆ, ವರದನ, ದಿವ್ಯಬೀದಿಗಳಲ್ಲಿ ದಿವ್ಯ ಪ್ರಬಂಧಗಾನವನ್ನು ಮಾಡಿಕೊಂಡು ಅಪಶಬ್ದಗಳನ್ನು ಹೋಗಲಾಡಿಸುವವರು ಎಂಬುದು ಅರ್ಥ.

ಸಾರಕೌಮುದೀಗ್ರಂಥದಲ್ಲಿ, ಕರೂರುಸ್ವಾಮಿಗಳೆಂದು ಜಗದ್ವಿಖ್ಯಾತರಾದ, ರಂಗರಾಮಾನುಜಮುನಿಗಳು, ಈ ಶ್ಲೋಕವನ್ನು ಭಗವದ್ರಾಮಾನುಜರ ಪರವಾಗಿ ವ್ಯಾಖ್ಯಾನಮಾಡಿದ್ದಾರೆ ಆದಾಗಿ, **ಕರ್ಮಬ್ರಹ್ಮಾತ್ಮಕವಾದ** ವೇದಾಂತ ಶಾಸ್ತ್ರದಲ್ಲಿ, ಕುದೃಷ್ಟಿಗಳೇ ಮೊದಲಾದ ವಾದಿಗಳನ್ನು ನಿರಸನೆಮಾಡಿ, **ಹಸ್ತಿಗಿರೀಶಸ್ಯವೀಥೀಶೋಧಕ ಕಿಂಕರಾನ್** ಹಸ್ತಿಗಿರೀಶಸ್ಯ ವೀಥೀಶೋಧಕಾಃ ಕಿಂಕರಾಃ ಯೇಷಾಂತೇ ತಾನ್, ಎಂದು ಬಹುವ್ರೀಹಿಸಮಾಸಮಾಡಿ, ಹಸ್ತಿಗಿರಿನಾಥನವೀಥಿ ಎಂಬುದು ವೇದಾಂತಮಾರ್ಗ, ಅಲ್ಲಿ ಶೋಧನೆ– ಕಂಟಕ ಶೋಧನೆ–ಪರವಾದಿಗಳು ಹೇಳುವ ಅಪಾರ್ಥಶೋಧನೆ ಅದನ್ನು ಮಾಡುವ ಶಿಷ್ಯರನೇಕರನ್ನುಳ್ಳ ಭಗವದ್ರಾಮಾನುಜರು ಅವರನ್ನು ನಮಸ್ಕರಿಸುತ್ತೇನೆ ಎಂದರ್ಥ.

"ಇತಿಯತಿರಾಜ ಮಹಾನಸ ಪರಿಮಳ ಪರೀವಾಹವಾಸಿತಾಂಪಿಬತ | ವಿಬುಧಪರಿಷನ್ನಿಷೇವ್ಯಾಂ ವೇದಾಂತೋದಯನ ಸಂಪ್ರದಾಯ ಸುಧಾಮ್ || ಎಂದು ವರ್ಣಿಸಿರುವ ಪ್ರಕಾರ ಪರಮಭೋಗ್ಯವಾದ ಶ್ರೀಮದ್ರಹಸ್ಯತ್ರಯ ಸಾರವು ಭಾಷ್ಯಕಾರಸಂಪ್ರದಾಯೋಪಜ್ಞವಾದ್ದರಿಂದ ಆ ಆಚಾರ್ಯರನ್ನು ಇಲ್ಲಿ ನಮಸ್ಕರಿಸುತ್ತಾರೆಂಬುದು, ಸಮಂಜಸವಾಗಿದೆ. ಶ್ರೀ ಭಾಷ್ಯಕಾರರು ಹದಿನೆಂಟಾವರ್ತಿ ಗೋಷ್ಠಿಪೂರ್ಣರನ್ನು ಅನುವರ್ತಿಸಿ

ಮೂಳುಮಿರುಳ್ ಹಳ್ವಿಳ್ಳ ಮುಯನ್ರೋದಿಯ ಮಲಾನ್ರಿನುಳ್ಳ್ಂ ।
ನಾಳುಮುಹಕ್ಕನಿಂಗೇ ನಮಕ್ಕೋರ್ವಿದಿ - ವಾಯ್ತ್ತನ್ರದೇ ॥ ॥

ಕೊನೆಯದಾಗಿ ಅವರು ಅನುಗ್ರಹಿಸಿದ ರಹಸ್ಯತ್ರಯಗಳ ಸಾರವಾದ ಅರ್ಥಗಳನ್ನು ಯತೀಂದ್ರಮಹಾನಸಿಕರೆಂದು ಪ್ರಸಿದ್ಧಿಹೊಂದಿದ ಆತ್ರೇಯ ಪ್ರಣತಾರ್ತಿಹರರೆಂಬುವರಿಗೆ ಉಪದೇಶಿಸಿದರು ತನ್ಮೂಲಕ ರಹಸ್ಯತ್ರಯಗಳ ಸಾರಾರ್ಥಗಳು ಬಂದಿವೆ. ಈ ಪ್ರಣತಾರ್ತಿಹರ ಗುರುಗಳನ್ನು ವೇದಾಂತೋದಯನರೆಂದೂ, ಅವರ ಮೂಲಕ ಉಪದೇಶದಲ್ಲಿ ಬಂದ ಸಾರಾರ್ಥಗಳನ್ನು "ವೇದಾಂತೋದಯನ ಸಂಪ್ರದಾಯಸುಧಾ" ಎಂದೂ ವ್ಯವಹರಿಸುತ್ತಿದ್ದೇವೆ. ಇದು ಯತಿರಾಜಮಹಾನಸದ ಪರಿಮಳ. "ಮಡೈಪ್ಪಳ್ಳಿವಂದಮಣವರ್" ಎಂದು ಪರಮಪದ ಸೋಪಾನದಲ್ಲಿ ಶ್ರೀದೇಶಿಕರು ನಿರೂಪಿಸಿದ್ದಾರೆ.

"ದತ್ತಂಯೇನದಯಾಸುಧಾಂಬುನಿಧಿನಾ ಪೀತ್ವಾವಿಶುದ್ಧಂಪಯಃ
ಕಾಲೇನಃ ಕರಿಶೈಲಕೃಷ್ಣ ಜಲದಃ ಕಾಂಕ್ಷಾಧಿಕಂವರ್ಷತಿ ॥" (ಯತಿರಾಜಸಪ್ತತಿ)

"ಕರಿಶೈಲ ಕೃಷ್ಣ ಮೇಘಃ ಕಾಂಕ್ಷಿತವರ್ಷೀಯದರ್ಪಿತೈಸ್ತೋಯೈಃ" ಎಂದು ಭಗವದ್ರಾಮಾನುಜರು ಹಸ್ತಿ ಶೈಲೇಶ್ವರನ ತಿರುವಾರಾಧನೆಗೆ ನಿತ್ಯವೂ ಶಾಲೈಕ್ಕಿಣರ್ ಎಂಬ ಭಾವಿಯಿಂದ ತೀರ್ಥವನ್ನು ತಂದು ಕೊಡುತ್ತಿದ್ದರು. ಇದರಿಂದ ಪ್ರೀತನಾದ ವರದನು ಇವರಿಗೆ ಪರಿಪೂರ್ಣಾನುಗ್ರಹ ಮಾಡಿದುದರ ಫಲ ರಹಸ್ಯ ತ್ರಯಸಾರಗಳ ಅರ್ಥಪ್ರಾಪ್ತಿ ಎಂಬುದನ್ನು **"ಹಸ್ತಿಗಿರೀಶ"** ಪದವು ಸೂಚಿಸುತ್ತದೆ.

ಅನಂತರ ತಾವು ಪ್ರತಿಪಾದಿಸಲು ಉಪಕ್ರಮಿಸಿದ ಸಾರಾರ್ಥಗಳು ತಮ್ಮ ಮನಸ್ಸಿನಲ್ಲಿ ತೋರಿಕೊಂಡುವು, ಅದರಿಂದಾಗಿ ತಮ್ಮ ಪೂರ್ವಾಚಾರ್ಯರಿಗೆ ಅರ್ಥಾನುಭವ ಮಾತ್ರ ಲಭಿಸಿತು, ತಮಗೆ ಅನುಭವ ಪರೀವಾಹವಾಗಿ ಗ್ರಂಥ ನಿರ್ಮಾಣರೂಪ ಕೈಂಕರ್ಯವೂ ಲಭಿಸಿತಲ್ಲಾ ಎಂದು ಸಂತೋಷಗೊಂಡು "ಆಳುಮಡೈಕ್ಕಲವನ್" ಎಂದು ಹಾಡ ಆರಂಭಿಸುತ್ತಾರೆ. **ಆಳುಮಡೈಕ್ಕಲ ಮೆನ್ರೆನ್ನೈ** ಇತ್ಯಾದಿ-**ಅಂಬುಯ ತ್ತಾಳ್ ಕಣವನ್** - ತಾಮರೆಪುಷ್ಪದಲ್ಲಿ ವಾಸಮಾಡುವ ಲಕ್ಷ್ಮಿಯ ಪತಿಯಾದ ನಾರಾಯಣನು **ಎನ್ನೈ**- ನನ್ನನ್ನು **ಅಡೈಕ್ಕಲವನ್** - ರಕ್ಷ್ಯವಸ್ತುವಾಗಿ ಸ್ವೀಕರಿಸಿ, **ಆಳುಮ್** - **ಆಳುತ್ತಾನೆ, ಎನ್ರು** -ಎಂದು **ಅಂಬುಯತ್ತಾಳ್ ಕಣವನ್‌ತಾಳಿಣೈಶೇರ್‌ನ್ದು** (ಕಾಕಾಕ್ಷಿನ್ಯಾಯದಪ್ರಕಾರ, ಅಂಬುಯತ್ತಾಳ್ ಕಣವನ್ ಎಂಬುದನ್ನು ತಾಳಿಣೈ ಶೇರ್‌ನ್ದು ಎಂಬ ಪದಗಳೊಡನೆಯೂ ಅನ್ವಯಿಸುವುದು) ತಾಮರೆಪುಷ್ಪವಾಸಿನಿಯಾದ ಲಕ್ಷ್ಮಿಯ ಪತಿಯ, ಎರಡು ಪಾದಗಳನ್ನು ತಾವು ಶರಣಹೊಕ್ಕು, **ಎಮಕ್ಕುಂಅವ್ವೈತಂದ** - ನಮಗೂ ಆ ಪಾದಗಳೆರಡನ್ನೂ ಆಶ್ರಯಿಸುವಂತೆ ತೋರಿಸಿಕೊಟ್ಟ ಅಥವಾ ತಾವಾಗಿಯೇ ನಮಗೋಸ್ಕರವೂ ಶರಣಮಾಡಿ ಸಂಪಾದಿಸಿಕೊಟ್ಟ, **ತಹವುಡೈಯಾರ್** ಕೃಪೆಯಿಂದ ಕೂಡಿದ, ಆಚಾರ್ಯರುಗಳು, **ಮೂಳುಂ** - ಅಭಿವೃದ್ಧಿಯನ್ನು ಹೊಂದುವ, **ಇರುಳ್‌ಹಳ್‌ವಿಳ್ಳ**-**ಅಜ್ಞಾನ**ಗಳು ನಿಶ್ಶೇಷವಾಗಿ ಹೋಗುವಂತೆ. **ಮುಯನ್ರೋದಿಯ** - ಎಡೆಬಿಡದೆ ಪ್ರಯತ್ನ ಮಾಡಿ, ನಮಗೆ ಓದಿಸಿದ, - ಉಪದೇಶಿಸಿದ **ಮಲಾನ್ರಿನುಳ್ಳವ್** - ರಹಸ್ಯತ್ರಯಗಳ ತಾತ್ಪರ್ಯವನ್ನು, **ಇಂಗೇ-ಈ** ಅಜ್ಞಾನವನ್ನುಂಟುಮಾಡುವ ಪ್ರಕೃತಿಮಂಡಲದಲ್ಲಿ, **ನಾಳುಮ್** - ಪ್ರತಿದಿನವೂ, **ಉಹಕ್ಕ** - ಓದಿ ಸಂತೋಷ ಪಡುವಂತೆ, **ನಮಕ್ಕು** - ನಮಗೆ **ಓರ್‌ವಿಧಿ**-ಅದ್ವಿತೀಯವಾದ ಅದೃಷ್ಟ ವಿಶೇಷವು **ವಾಯ್ತ್ತನ್ರದೇ**-ಲಭಿಸಿತಲ್ಲಾ ಎಂಥಹ ಭಾಗ್ಯ ವಿಶೇಷವಿದು. ಇದಕ್ಕೆ ಸದೃಶವಾದ ಭಾಗ್ಯವು, ಬೇರೆಯಾವುದೂ ಇಲ್ಲ.

ಮಣಿವರ ಇವಶೌರೇರ್ನಿತ್ಯಹೃದ್ಯೋಪಿ ಜೀವಃ ।
ಕಲುಷಮತಿರವಿಂದರ್ ಕಿಙ್ಕರತ್ವಾಧಿರಾಜ್ಯಮ್ ॥
ವಿಧಿಪರಿಣತಿ ಭೇದಾದ್ವೀಕ್ಷಿತಸ್ತೇನ ಕಾಲೇ ।
ಗುರುಪರಿಷದುಪಜ್ಞಂ ಪ್ರಾಪ್ಯಗೋಪಾಯತಿಸ್ವಮ್ ॥3॥

ಈ ಪಾಶುರದಲ್ಲಿ, **ಅಂಬುಯತ್ತಾಳ್ ಕಣವನ್** – ಲಕ್ಷ್ಮೀಪತಿ ಎಂದು ತತ್ತ್ವವನ್ನೂ **ತಾಳಿಣೈ ಶೇರ್‌ನ್ದು** – ಶರಣಾಗತಿಯೆಂಬ ಹಿತವನ್ನೂ, **ಆಳುಮದ್** - ಪುರುಷಾರ್ಥವಾದ ಕೈಂಕರ್ಯವನ್ನೂ, ನಿರೂಪಿಸಿದ್ದಾರೆ ಇದರಿಂದ ಅರ್ಥಾನುಶಾಸನ ಭಾಗವು ನಿರೂಪಿತ ಹಾಗೆಯೇ, **ಮೂನ್ರಿನುಳ್ಳಂ** ಎಂಬ ಪದದಿಂದ, ಪದಯೋಜನಾಭಾಗವೂ, **ಶೇರ್‌ನ್ದು ಎಮುಕ್ಕುಮುವೈತಂದ** – ಎಂದು ಆಚಾರ್ಯ ಕೃತ್ಯಾಧಿಕಾರವೂ, ನಿಗಮನಾಧಿಕಾರವೂ ಸೂಚಿತ. ಆಚಾರ್ಯರು ಶಿಷ್ಯನಿಗೆ ಶರಣಾಗತಿಯನ್ನು ಅನುಷ್ಠಿಸುವುದಕ್ಕೆ ಮುಂಚೆ ತಾವು ಪ್ರಪನ್ನರಾಗಿರಬೇಕೆಂಬುದು **"ತಾಳಿಣೈ** ಶೇರ್‌ನ್ದು', ಎಂಬಲ್ಲಿ ಸೂಚಿತ

ಅನಾದಿಕಾಲವಾಗಿ ಸಂಸಾರದಲ್ಲಿ ಮುಳುಗಿ ತೇಲುತ್ತಿರುವ ಜೀವನಿಗೆ ನಿತ್ಯನಿರ್ದುಷ್ಟರಾದ ನಿತ್ಯಸೂರಿಗಳ ಸ್ಥಾನವು ಲಭಿಸುವಂಥಹ ಅದೃಷ್ಟವಿದೆಯೇ, ಸ್ವರೂಪಯೋಗ್ಯತೆಯೂ ಇದೆಯೇ ಎಂಬ ಶಂಕೆಯನ್ನು ಹೋಗಲಾಡಿಸಲು, **ಮಣಿವರ ಇವಶೌರೇಃ** ಎಂದು ಪ್ರಬಂಧವನ್ನು ಆರಂಭಿಸುತ್ತಾರೆ.

ಮಣಿವರ ಇವ–ಕೌಸ್ತುಭಮಣಿಯಂತೆ, **ಶೌರೇಃ** – ಭಗವಂತನಿಗೆ, **ನಿತ್ಯಹೃದ್ಯಃ**– ನಿತ್ಯವೂ ಹೃದಯಂಗಮನಾಗಿದ್ದಾಗ್ಯೂ, ಕೌಸ್ತುಭ ಮಣಿಯು ನಿತ್ಯವೂ ಭಗವಂತನ ಹೃದಯದಲ್ಲಿ ಧರಿಸಲ್ಪಟ್ಟಿದೆ. ಅದರ ಹಾಗೆ ಜೀವನೂ **ನಿ**ತ್ಯನಿರ್ಮಲನೂ, ಜ್ಞಾನರೂಪನೂ, ಭಗವಂತನಿಗೆ ಕೌಸ್ತುಭಮಣಿಯಂತೆ ಅತಿಶಯವನ್ನುಂಟುಮಾಡುವವನೂ ಆಗಿದ್ದಾನೆ. ಇದರಿಂದ **ಇ**ವನಿಗೆ ಭಗವತ್ಪ್ರಾಪ್ತಿಗೆ ಸ್ವರೂಪ ಯೋಗ್ಯತೆಯುಂಟೆಂಬುದು ಸ್ಥಾಪಿತ. ಹಾಗಿರುವಾಗ ಭಗವಂತನನ್ನು ಪಡೆದು ಕೈಂಕರ್ಯವನ್ನು ಮಾಡಲು ಏನು ಅಡ್ಡಿ ಎಂದು ಕೇಳಿದರೆ, ಅದಕ್ಕೆ ಕಾರಣ – **ಕಲುಷಮತಿಃ,** ಇತ್ಯಾದಿ, **ಕಲುಷಮತಿಃ**–ಕಾಲುಷ್ಯದಿಂದ ಕೂಡಿದ ಬುದ್ಧಿಯುಳ್ಳವನಾಗಿ – **ದೇಹವೇ** ಆತ್ಮಾ ಇತ್ಯಾದಿ ಭ್ರಾಂತಿಯು, ಕಾಲುಷ್ಯ **ಕಿಂಕರತ್ವಾಧಿ ರಾಜ್ಯಂ,** – ಕೈಂಕರ್ಯರೂಪ ಸಾಮ್ರಾಜ್ಯವನ್ನು. "ಸರ್ವಂ ಪರವಶಂ ದುಃಖಂ" ಎಂದು ಪರವಶನಾಗಿ ಕಿಂಕರನಾಗಿರುವುದು ದುಃಖಜನಕವಲ್ಲವೇ ಎಂದರೆ ಕರ್ಮಸಂಬಂಧವಾದ ಕಿಂಕರತ್ವವು ಕ್ಲೇಶಕರವಾದರೂ, ಕರ್ಮ ನಿವೃತ್ತಿ ಏರ್ಪಟ್ಟು ಪರಮ ಶೇಷಿ (ಸ್ವಾಮಿ) ಗೆ ಕೈಂಕರಮಾಡುವದು (ದಾಸ್ಯವೃತ್ತಿ) ಯೌವರಾಜ್ಯ ತುಲ್ಯವೆಂಬುದನ್ನು **'ಅಧಿರಾಜ್ಯ'** ವೆಂಬ ಪದವು ಸೂಚಿಸುತ್ತದೆ. **ಅವಿಂದನ್** – ಹೊಂದದೆ,

ಹೀಗೆ ಅನಾದಿಯಾಗಿ ಕರ್ಮರೂಪ ಅವಿದ್ಯೆಯಿಂದ, ಭಗವತ್ಕೈಂಕರ್ಯವನ್ನು ಪಡೆಯದ ಇವನಿಗೆ, ಈಗ ಮುಮುಕ್ಷುತ್ವವು ಉಂಟಾಗಿ ಭಗವಂತನನ್ನು ಪಡೆದು ಅವನಿಗೆ ಕಿಂಕರನಾಗಿರುವ ಭಾಗ್ಯವು ಲಭಿಸುತ್ತದೆಯೇ ? ಎಂಬ ಶಂಕೆಯನ್ನು **ವಿಧಿಪರಣತಿ ಭೇದಾತ್** ಎಂದು ಹೋಗಲಾಡಿಸುತ್ತಾರೆ. **ಕಾಲೇ** ಕರ್ಮ ಪರಿಪಾಕ ಹೇತ ಭೂತವಾದ ಕಾಲ ವಿಶೇಷದಲ್ಲಿ, **ವಿಧಿ** – ಅನಾದಿಕರ್ಮ, ಅದರ **ಪರಿಣತಿ**–ಪರಿಣಾಮ, ಆ ಕರ್ಮವು ಕಾರ್ಯ ಮುಖವಾಗಿ ಸುಖ ದುಃಖಗಳನ್ನು ಕೊಡುವ ಅವಸ್ಥೆ, ಅದರ **ಭೇದಾತ್** – ವ್ಯತ್ಯಾಸದಿಂದ, ಅಜ್ಞಾತ ಯಾದೃಚ್ಛಿಕ, ಆನುಷಂಗಿಕ, ಪ್ರಾಸಂಗಿಕ ರೂಪ ಸುಕೃತಾದಿಗಳ ದೆಸೆಯಿಂದ, **ತೇನ ವಿಕ್ಷೀತಃ** – ಆ ಭಗವಂತನಿಂದ ಜಾಯಮಾನ ದಶೆಯಲ್ಲಿ ಕಟಾಕ್ಷಿಸಲ್ಪಟ್ಟವನಾಗಿ, **ಗುರುಪರಿಷದುಪಜ್ಞಂ** – ಗುರುಪರಂಪರಾಗತವಾದ ಆದ್ಯಜ್ಞಾನವನ್ನು – ಭಕ್ತಿಪ್ರಪತ್ತಿರೂಪಾತ್ಮಕವಾದ ಜ್ಞಾನವನ್ನು, **ಪ್ರಾಪ್ಯ** – ಉಪದೇಶಪೂರ್ವಕವಾಗಿ ಹೊಂದಿ **ಸ್ವಂ** – ತನ್ನನ್ನು, **ಗೋಪಾಯತಿ** – (ಭಕ್ತಿ ಪ್ರಪತ್ತಿ ರೂಪವಿದ್ಯೆಗಳಲ್ಲಿ ಒಂದನ್ನು ಅನುಷ್ಠಿಸಿ), ತನ್ನನ್ನು ರಕ್ಷಿಸಿಕೊಳ್ಳುತ್ತಾನೆ.

ಭಗವಂತನಿಗೆ ಕೈಂಕರ್ಯ ಮಾಡಲು ಜೀವಾತ್ಮನ ಸ್ವರೂಪ ಯೋಗ್ಯತೆ

ಶ್ರಿಯಃಪತಿಯಾನ ಸರ್ವೇಶ್ವರನುಕ್ಕು ಶ್ರೀಕೌಸ್ತುಭಸ್ಥಾನೀಯನಾಯ್‌ಕೊಂಡು ಹೃದಯಙ್ಗಮನಾಯ್ ಕುಮಾರನೆನ್ರುಂ, ಪುತ್ರನೆನ್ರುಂ, ಶಿಷ್ಯನೆನ್ರುಂ, ಪ್ರೇಷ್ಯನೆನ್ರುಂ, ಶೇಷಭೂತನೆನ್ರುಂ, ದಾಸಭೂತನೆನ್ರುಂ, ಅವ್ವೋಶಾಸ್ತ್ರಂಗಳಿಲೇ ಪ್ರತಿಪನ್ನನಾಯಿರುಕ್ಕುಂ ಜೀವಾತ್ಮಾ.

ನಿತ್ಯಸೂರಿಗಳ ಹಾಗೆ ಬದ್ಧ ಜೀವಿಯು ಭಗವತ್ಕೈಂಕರ್ಯ ಮಾಡಲು ಸ್ವರೂಪಯೋಗ್ಯತೆಯುಳ್ಳವನು. ಇವರ್ತನಕ್ಕುವಹುತ್ತ ಶೇಷಿಯಾಯ್, "ಅಯರ್ವರುಮಮರರ್‌ಗಳಧಿಪತಿಯಾಯ್, ಉಯರ್ವರವುಯರ್ ನಲ" ಮುಡೈಯವನಾಯ್, ನಮುಕ್ಕುಮ್ಪೂವಿನ್ ಮಿಶೈನಂಗೈಕ್ಕುಮಿನ್ಬನಾಯ್, ಞಾಲತ್ತಾರ್ ತನುಕ್ಕುಂ ವಾನತ್ತವರ್‌ಕ್ಕುಂ ಪೆರುಮಾನಾನ ಸರ್ವೇಶ್ವರ್ "ವೈಕುಂಠೇತು ಪರೇಲೋಕೇ ಶ್ರಿಯಾಸಾರ್ಧಂ ಜಗತ್ಪತಿಃ ಆಸ್ತೇ" ಎನ್ರುಂ, ಒಣ್ತೊಡಿಯಾಳ್ ತಿರುಮಹುಳುಂ ನೀಯುಮೇ ನಿಲಾನಿರ್ಪ" ಎನ್ರುಂ ಶೊಲ್ಲುಹಿರಪಡಿಯೇ

ಈ ಶ್ಲೋಕದಲ್ಲಿ ಸಂಗ್ರಹೀತವಾದ ಅರ್ಥವನ್ನು, ತಾವೇ ವಿವರಿಸುವವರಾಗಿ ಪ್ರಥಮತಃ **"ಮಣಿವರ ಇವ ಶೌರೇಃ ನಿತ್ಯ ಹೃದ್ಯೋऽಪಿ ಜೀವಃ"** ಎಂಬುದನ್ನು **ಶ್ರಿಯಃಪತಿಯಾನ ಸರ್ವೇಶ್ವರನುಕ್ಕು** ಎಂದಾರಂಭಿಸಿ ವಿವರಿಸುತ್ತಾರೆ.

ನಿತ್ಯಸೂರಿಗಳ ಹಾಗೆ ಭಗವಂತನಿಗೆ ಕೈಂಕರ್ಯ ಮಾಡಲು ಜೀವನು ಸ್ವರೂಪ ಯೋಗ್ಯತೆಯುಳ್ಳವನು .

ಅದಾಗಿ,ಶ್ರಿಯಃಪತಿಯಾದ ಸರ್ವೇಶ್ವರನಿಗೆ ಶ್ರೀಕೌಸ್ತುಭ ದ, ಹಾಗೆ ಹೃದಯಂಗಮನಾಗಿ–ಪ್ರೀತಿಪಾತ್ರನಾಗಿ (ಇದರಿಂದ ಇವನು ಕೈಂಕರ್ಯಕ್ಕೆ ಅರ್ಹನೆಂಬುದು ತಿಳಿಸಲ್ಪಟ್ಟಿತು), ಕುಮಾರನೆಂದೂ, ಪುತ್ರನೆಂದೂ, ಶಿಷ್ಯನೆಂದೂ, ಪ್ರೇಷ್ಯನೆಂದೂ–ಆಳೆಂದೂ, ಶೇಷಭೂತನೆಂದೂ, ದಾಸಭೂತನೆಂದೂ, ಆಯಾಯಾ ಶಾಸ್ತ್ರಗಳಲ್ಲಿ ಜೀವಾತ್ಮನು ಪ್ರತಿಪಾದಿಸಲ್ಪಟ್ಟಿದ್ದಾನೆ "ಅವಿಜ್ಞಾತಾಃ ಕುಮಾರಕಾಃ; ಭಗವತೋऽಹಂಪುತ್ರಃ ಪ್ರೇಷ್ಯಸ್ತಥಾಶಿಷ್ಯಶ್ಚ, ಶೇಷೋಹಿ ಪರಮಾತ್ಮನಃ, ದಾಸಭೂತಾಃ ಸ್ವತಸ್ಸರ್ವೇ, ಎಂಬ ವಚನಗಳು ಇಲ್ಲಿ ವಿವಕ್ಷಿತಗಳು. ಈ ಜೀವನಿಗೆ **ಪ್ರಾಪ್ತ**ನಾದ ಶೇಷಿ (ಸ್ವಾಮಿ)ಯಾಗಿಯೂ, ಅಜ್ಞಾನವಿಲ್ಲದ **ನಿತ್ಯ** ಸೂರಿಗಳಿಗೆ ಅಧಿಪತಿಯಾಗಿಯೂ, **ಇವನಿ**ಗಿಂತ ಯಾರೂ ಉಚ್ಛ್ರಾಯವಿಲ್ಲದ ಹಾಗೆ ಸರ್ವೋಚ್ಛ್ರಾಯನಾಗಿಯೂ, ಅನವಧಿಕಾತಿಶಯ ಗುಣಗಳನ್ನುಳ್ಳವನಾಗಿಯೂ, ನಮಗೂ ಮಹಾಲಕ್ಷ್ಮಿಗೂ ಪ್ರೀತಿಪಾತ್ರನಾಗಿಯೂ, ಭೂಮಿಯಲ್ಲಿ ಉಳ್ಳವರಿಗೂ, ಶ್ರೀವೈಕುಂಠವಾಸಿಗಳಿಗೂ **ನೀಚೋಚ್ಛ್ರಾಯ** ವ್ಯತ್ಯಾಸವಿಲ್ಲದೆ ಎಲ್ಲರಿಗೂ ಸ್ವಾಮಿಯಾ ಆಗಿರುವನು ಸರ್ವೇಶ್ವರನು ಇವನು

1) **ವೈಂಕಠೇತು ಪರೇಲೋಕೇ** — ವೈಕುಂಠವೆಂಬ ಉತ್ತಮ ಲೋಕದಲ್ಲಿ, **ಶ್ರಿಯಾ ಸಾರ್ಧಂ ಜಗತ್ಪತಿಃ ಆಸ್ತೇ** – ಲಕ್ಷ್ಮಿ ವಿಶಿಷ್ಟನಾಗಿ, ಜಗತ್ತಿಗೆಲ್ಲಾ ಸ್ವಾಮಿಯಾಗಿ ಕುಳಿತ್ತಿದ್ದಾನೆ.

2) **"ಒಂಡೊಡಿಯಾಳ್ ತಿರುಮಹಳುಮ್ ನೀಯುಮೇ ನಿಲಾನಿರ್ಪ"** ಎಂದು ಹೇಳುವ ರೀತಿಯಲ್ಲಿ, ಮಹಾಲಕ್ಷ್ಮಿಯೊಡಗೂಡಿ, **ಪರಮಾಕಾಶದಲ್ಲಿ** (ಪರಮಪದ) ಬಿಜಯ ಮಾಡಿಸಿರುತ್ತಾನೆ.

---

(1) ಆಸ್ತೇ ವಿಷ್ಣುರಚಿಂತ್ಯಾತ್ಮಾ ಭಕ್ತೈರ್ಭಾಗವತೈಸ್ಸಹ ॥ [ಲೈಂಗ ಪುರಾಣ] ಎಂಬುದು ಉತ್ತರಾರ್ಧ ಶೇಷ - ಅದಾಗಿ ಲಕ್ಷ್ಮಿ ವಿಶಿಷ್ಟನಾದ ಜಗತ್ಪತಿಯು ಮಹಾವಿಷ್ಣುವು, ಅಚಿಂತ್ಯಜ್ಞಾನ ಸ್ವರೂಪನು, ಶ್ರೀ ವೈಕುಂಠದಲ್ಲಿ ಭಕ್ತರಾದ ಭಾಗವತರೊಡಗೂಡಿದ್ದಾನೆ **ಎಂದರ್ಥ**

2 ಸೊಗಸಾದ ಕೈಬಳೆಗಳಿಂದ ಕೂಡಿದ ಮಹಾಲಕ್ಷ್ಮಿಯೂ, ನೀನಾದ ಸರ್ವೇಶ್ವರನೂ ನಿಮ್ಮಿಬ್ಬರು ವಿನಹ ಬೇರೆಯಾರೂ ಈಶ್ವರರಲ್ಲ ಎಂದು ಹೇಳುವಂತೆ ಇರುವವರು,

ಪೆರಿಯ ಪಿರಾಟ್ಟಿಯಾರೋಡೇ ಕೂಡ ತ್ತೆಳಿವಿಶುಂಬಿಲೇ "ಯಾಯೋಧ್ಯೇತ್ಯಪರಾಜಿತೇತಿ ವಿದಿತಾ ನಾಕಂಪರೇಣ ಸ್ಥಿತಾ" ಎಂಹಿರಪಡಿಯೇ ಆಯೋಧ್ಯಾದಿ ಶಬ್ದ ವಾಚ್ಯಮಾನ ಕಲಂಗಾಪ್ಪೆರುನಗರಿಲೇ, ಸಹಸ್ರ ಸ್ಥೂಣಾದಿ ವಾಕ್ಯಂಗಳಾಲೇ ಯೋದಪ್ಪಡುಹಿರ ತಿರುಮಾಮಣಿಮಂಟಪತ್ತಿಲೇ ಕೌಷೀತಕೀ ಬ್ರಾಹ್ಮಣಾದಿ ಹಳಿಲೇ ಯೋದಪ್ಪಡುಹಿರ ಪರ್ಯಂಕ ವಿಶೇಷತ್ತಿಲೇ "ಶೆನ್ರಾಲ್ ಕುಡೈಯಾ ಮಿರುನ್ದಾಲ್ ಶಿಂಗಾಸನಮಾಂ" ಎನ್ರುಂ, "ನಿವಾಸ ಶಯ್ಯಾಸನ" ಎನ್ರುಂ ಶೊಲ್ಲುಹಿರಪಡಿಯೇ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಂಗಳೈಯುಂ ಸರ್ವವಿಧಶರೀರಂಗಳಾಲೇ ಯನುಭವಿತ್ತು, ಶೇಷತ್ವಮೇ ತನಕ್ಕು ನಿರೂಪಕಮಾಹೈಯಾಲೇ ಶೇಷನೆನ್ರೇ ತಿರುನಾಮಮಾಂಪಡಿಯಾನ ತಿರುವನಂತಾಳ್ವಾನಾಹಿರ ತಿರುಪ್ಪಳ್ಳಿಮೆತ್ತೈಯಿಲೇ ವಾನಿಳವರಶಾಯ್ಕ್ಕೊಂಡು ತಾನಾಳ್ಹಿರಾನ್ವೈ ಸರ್ವಾತ್ಮಕ್ಕಳುಮುನು

ಆ ಪರಮಾಕಾಶದಲ್ಲಿ, **ಯಾಽಯೋಧ್ಯೇತ್ಯಪರಾಜಿತೇತಿ ವಿದಿತಾ ನಾಕಂಪರೇಣಸ್ಥಿತಾ**(1) (ದೇವಾನಾಂಪೂರಯೋಧ್ಯಾ, ತದಪರಾಜಿತಾಪುರಃ, ಪರೇಣನಾಕಂನಿಹಿತಂ, ಎಂಬ ಶ್ರುತಿಗಳು ಇಲ್ಲಿ ವಿವಕ್ಷಿತ) ಎಂದು ಹೇಳಲ್ಪಡುವ ಪ್ರಕಾರ, ಅಯೋಧ್ಯಾದಿ ಶಬ್ದ ವಾಚ್ಯವಾದ, ಅಭೇದ್ಯವಾದ (ಸಹಸ್ರಸ್ಥೂಣೇ ವಿಮಿತೇ ದೃಢಉಗ್ರೇ, ಪ್ರಭುವಿಮಿತಂ ಹಿರಣ್ಮಯಂ, ಎಂಬುವು ಆ ಶ್ರುತಿಗಳು) ಶ್ರೇಷ್ಠವಾದ ಮಣಿಗಳಿಂದ ವಿರಾಜಿತವಾದ ದೊಡ್ಡ ಮಂಟಪದಲ್ಲಿ, ಕೌಷೀತಕೀ ಬ್ರಾಹ್ಮಣಾದಿ ಉಪನಿಷತ್ತುಗಳಲ್ಲಿ ಹೇಳಲ್ಪಡುವ (ಸ ಆಗಚ್ಛತ್ಯಮಿತೌಜಸಂ ಪರ್ಯಂಕಂ – ತಸ್ಮಿನ್ ಬ್ರಹ್ಮಾಸ್ತೇ – ಆ ಮುಕ್ತಜೀವನು ಬಹಳ ತೇಜಸ್ಸಿನಿಂದ ಕೂಡಿದ ಪರ್ಯಂಕದ ಹತ್ತಿರ ಬರುತ್ತಾನೆ. ಆ ಪರ್ಯಂಕದಲ್ಲಿ ಭಗವಂತನು ಕುಳಿತಿದ್ದಾನೆ ಎಂಬ ಉಪನಿಷತ್ತು) ಪರ್ಯಂಕವಿಶೇಷದಲ್ಲಿ ಭಗವಂತನು ಕುಳಿತಿದ್ದಾನೆ. ಆ ಪರ್ಯಂಕವು (2) **ಶೆನ್ರಾಲ್ ಕುಡೈಯಾಮ್, ಇರುಂದಾಲ್ ಶಿಂಗಾಸನಮಾಮ್**,ಎಂದೂ (3) **"ನಿವಾಸಶಯ್ಯಾಸನ"** ಎಂದೂ, ಹೇಳುವ ಪ್ರಕಾರ, ಸರ್ವದೇಶಗಳಲ್ಲಿಯೂ ಸರ್ವಕಾಲಗಳಲ್ಲಿಯೂ, ಸರ್ವಾವಸ್ಥೆಗಳಲ್ಲಿಯೂ ಉಚಿತವಾದ ಸರ್ವವಿಧ ಕೈಂಕರ್ಯಗಳನ್ನು ಅನೇಕವಿಧ ಶರೀರಗಳನ್ನು ಧರಿಸಿ, ಮಾಡಿ, ಕೈಂಕರ್ಯಸುಖವನ್ನು ಅನುಭವಿಸಿ ಶೇಷತ್ವವೇ ತನಗೆ ನಿರೂಪಕವಾಗಿರುವುದರಿಂದ ಶೇಷನೆಂದೇ ದಿವ್ಯ ಹೆಸರನ್ನುಳ್ಳಂಥ ಆದಿಶೇಷನೇ ಆಗಿದ್ದಾನೆ. ಆ ಪರ್ಯಂಕವು ಬಿಳುಪು, ಮಾರ್ದವ, ಉಚ್ಛ್ರಾಯ, ಸೌರಭ್ಯ, ಶೈತ್ಯ, ಮೊದಲಾದ ದಿವ್ಯಗುಣಗಳನ್ನುಳ್ಳದ್ದು. ಅಂಥಹ ಶ್ರೀಮತ್ಪರ್ಯಂಕದಲ್ಲಿ ಪರಮಪದಕ್ಕೆ ನಿತ್ಯಯೌವನದಿಂದ ಕೂಡಿದ ಯುವರಾಜನಾಗಿ ಮಹಾಲಕ್ಷ್ಮಿಯೊಡಗೂಡಿ ["**ಪೆರಿಯ ಪಿರಾಟ್ಟಿಯಾರೋಡೇಕೂಡ**" ಎಂಬುದನ್ನು "ವೈಕುಂಠೇ ತು ಪರೇಲೋಕೇಶ್ರಿಯಾಸಾರ್ಧಂಜಗತ್ಪತಿಃ ಆಸ್ತೇ" ಎಂಬುದರ ಪ್ರಕಾರ **"ವಾನಿಳವರಶಾಯ್ ಕೊಂಡು"** ಎಂಬಲ್ಲಿ ಅನ್ವಯಿಸಬೇಕು.] ವಿರಾಜಮಾನನಾಗಿ

---

1) ಇಚ್ಛಾನುಗ್ರಹಫಲೀಮುಕ್ತೋಸ್ತೋಸ್ತ್ವಾಲಿ; ಪಲೀಪಾಳಿಶಾಲಿ ಭೇಜುಷಾಂ ಯಾಽಯೋಧ್ಯೇತ್ಯಪರಾಜಿತೇತಿ ವಿದಿತಾ ನಾಕಂಪರೇಣಸ್ಥಿತಾ । ಭಾವೈರದ್ಭುತಭೋಗಭೂಮ ಗಹನೈಃ ಸಾಂದ್ರಾಸುಧಾಸ್ಯಂದಿಭಿಃ ಶ್ರೀರಂಗೇಶ್ವರಗೇಹ ಲಕ್ಷ್ಮಿಯುವಯೋಸ್ತಾಂ ರಾಜಧಾನೀಂವಿದುಃ ॥ ಶ್ರೀಗುಣರತ್ನ ಕೋಶ (23)

ಆದಿವ್ಯದಂಪತಿಗಳ ರಾಜಧಾನಿಯು, ಅಯೋಧ್ಯಾ (ಯುದ್ಧಮಾಡಲಶಕ್ಯ) ಅಪರಾಜಿತಾ (ಜಯಿಸಲಶಕ್ಯ) ಎಂದು ವಿದಿತವಾಗಿ, ಎಲ್ಲಕ್ಕೂ ಮೇಲಾದ ಪರಮಪದದಲ್ಲಿದೆ

2) ಶೆನ್ರಾಲ್‌ಕುಡೈಯಾಮ್ ಇರುಂದಾಲ್ ಶಿಂಗಾಶನಮಾಮ್, ನಿನ್ರಾಲ್ ಮರವಡಿಯಾಮ್ ನೀಳ್‌ಕಡಲುಳ್ ಎನ್ರುಮ್ ಪುಣೈಯಾಮ್ ಮಣಿವಿಳಕ್ಕಾಮ್, ಪೂಂಪಟ್ಟಾಮ್ ಪುಲ್ಗುಮ್ ಅಣೈಯಾಮ್ ತಿರುಮಾಱ್ಕರವು (ಮು. ತಿರು. 53). ಭಗವಂತನು ನಡೆಯುವಾಗ ಛತ್ರಿಯಾಗಿಯೂ, ಕುಳಿತುಕೊಳ್ಳುವಾಗ ಸಿಂಹಾಸನವಾಗಿಯೂ ಆದಿಶೇಷನು ಇರುತ್ತಾನೆ (3) ಪ್ರತಿ ಸ್ತೋ

ಭವಿತ್ತು ಕೃತಾರ್ಥರಾಹವೇಣು ಮೆನ್ರು ಸಹೃದಯನಾಯಿರುಕ್ಕಿರ ವಿರುಪ್ಪಡಿಯಾಹ ನಿತ್ಯಾನುಭವಂ ಪಣ್ಣು ಹಿರ ಅಂದಮಿಲ್ ಪೇರಿನ್ಬತ್ತಡಿಯರಾನ ನಿತ್ಯಸೂರಿಹಳೋಡೊಕ್ಕತ್ತಾನುಂ ಸ್ವಾಮಿ ಕೈಂಕರ್ಯತ್ತುಕ್ಕು ಸ್ವರೂಪಯೋಗ್ಯತೈಯಾಲೇ ಇಟ್ಟುಪ್ಪಿರಂದು ವೈತ್ತು ಅನಾದಿಮಾಯೈಯಾಲೆ ಸುಪ್ತನಾಯ್, (1) "ಅನೇಕ ಜನ್ಮ ಸಾಹಸ್ರೀಂ ಸಂಸಾರ ಪದವೀಂ ವ್ರಜನ್ । ಮೋಹಶ್ರಮಂ ಪ್ರಯಾತೋಽಸೌ ವಾಸನಾ ರೇಣು ಕುಂಠಿತಃ", ಎನ್ಗಿರಪಡಿಯೇ ಪ್ರಕೃತಿಯಾಹಿರ ಪಾಳ್ಳಿಲೇ ವಿೞುಂದು, ಓಡಿಯೋಡಿಪ್ಪಲ ಪಿರಪ್ಪುಂ ಪಿರನ್ದು ತಟ್ಟುತ್ತಾವತ್ತು ಅೞುಕ್ಕಡೈನ್ದೊಳಿಯುೞಂದ ಪಡಿಯಾಲೇ ತತ್ವಹಿತವಿಷಯಮಾಯ್ ಯಥಾ ಪತ್ರಕಾಶ ರಹಿತನಾಯ್‌ನಿರ್ಕ;

ದ್ದಾನೆ ಇಂಥಹ ತನ್ನ ["ಕಮಲೈಯುಡನರಸಾಳುಮ್" (ದೇಶಿಕಪ್ರಬಂಧ) ಎಂಬುದು ಇಲ್ಲಿ ವಿವಕ್ಷಿತ.] ಐಶ್ವರ್ಯವನ್ನು (ಈಶ್ವರತ್ವವನ್ನು) ಎಲ್ಲಾ ಜೀವರುಗಳೂ ಅನುಭವಿಸಿ ಕೃತಾರ್ಥರಾಗಬೇಕೆಂದು ಅವನು ಬಯಸ್ಸುತ್ತಾನೆ. ಹೀಗೆ ಅವನ ಸಂಕಲ್ಪಾಧೀನರಾಗಿ ನಿತ್ಯಾನುಭವ ಮಾಡುವ, ಅಂತ್ಯವಿಲ್ಲದ ಮಹದಾನಂದಶಾಲಿಗಳಾದ ದಾಸಭೂತರಾದ ನಿತ್ಯಸೂರಿಗಳ ಹಾಗೆ ತಾನೂ ಸ್ವಾಮಿಯಾದ ಭಗವಂತನ ಕೈಂಕರ್ಯವನ್ನು ಮಾಡಲು ದಾಯಪ್ರಾಪ್ತವಾದ ಸ್ವರೂಪಯೋಗ್ಯತೆಯುಳ್ಳವನಾಗಿದ್ದಾನೆ ಬದ್ಧಜೀವ ಅನಂತರ **"ಕಲುಷಮತಿರವಿಂದನ್ ಕಿಂಕರತ್ವಾಧಿರಾಜ್ಯಂ"** ಎಂಬುದನ್ನು ವಿಸ್ತರಿಸುತ್ತಾರೆ. **ಅನಾದಿಮಾಯೈಯಾಲ್ ಸುಪ್ತನಾಯ್** ಇತ್ಯಾದಿ– ಆದರೆ ಈ ಬದ್ಧಜೀವನು ಅನಾದಿಯಾದ ಭಗವನ್ಮಾಯೆಯಿಂದ, ಅಂದರೆ ಪ್ರಕೃತಿಸಂಬಂಧದಿಂದ ಸ್ವಸ್ವರೂಪ ಪರಸ್ವರೂಪ ಜ್ಞಾನವಿಲ್ಲದೆ ಸಂಸಾರದಲ್ಲಿ ನಿದ್ರಿತನಾಗಿದ್ದಾನೆ. 1) **ಅನೇಕ ಜನ್ಮಸಾಹಸ್ರೀಂ ಸಂಸಾರಪದವೀಂ ವ್ರಜನ್ । ಮೋಹಶ್ರಮಂಪ್ರಯಾತೋಽಸೌವಾಸನಾರೇಣುಕುಂಠಿತಃ ||,** ಎಂಬಂತೆ ಪ್ರಕೃತಿ ಎಂಬ ಮರುಭೂಮಿಯಲ್ಲಿ ಅನೇಕ ಜನ್ಮಗಳನ್ನೆತ್ತಿ ಸುತ್ತಿಸುತ್ತಿ ವಿಶ್ರಾಂತಿ ಸಿಕ್ಕದೆ, ವಿಪರೀತ ವಾಸನಾ ರುಚಿಗಳಿಂದ ಕಲುಷಿತನಾಗಿ, ಸ್ವಾಭಾವಿಕವಾದ ತನ್ನ ಧರ್ಮಭೂತ ಜ್ಞಾನದ ಸಂಕೋಚವನ್ನು ಪಡೆದು, ತತ್ತ್ವಹಿತವಿಷಯಗಳಲ್ಲಿ ಯಥಾವತ್ತಾದ ಜ್ಞಾನಪ್ರಸರಣವಿಲ್ಲದವನಾಗಿದ್ದಾನೆ.

ಪುಟ--36 [3] ನಿವಾಸಶಯ್ಯಾಸನ ಪಾದುಕಾಂಶುಕೋಪಧಾನವರ್ಷಾತಪವಾರಣಾದಿಭಿಃ ।
ಶರೀರ ಭೇದೈಸ್ತವಶೇಷತಾಂಗತ್ಯೈಃ, ಯಥೋಚಿತಂ ಶೇಷ ಇತೀರಿತೇ ಜನ್ಯೈಃ ॥
ಆಳ, ಸ್ತೋ (40) ವಾಸಸ್ಥಾನದ, ಹಾಸಿಗೆ, ಸಿಂಹಾಸನ, ಪಾದುಕೆ, ಪೀತಾಂಬರ, ತಲೆದಿಂಬು, ಮಳೆಬಿಸಲುಗಳನ್ನು ತಡೆಯುವ ಛತ್ರೀ ಇಂಥಹ ರೂಪಗಳಲ್ಲಿ ಆಯಾಯಾ ಕಾಲಗಳಿಗೆ ತಕ್ಕಂತೆ ಅನೇಕ ಶರೀರಗಳನ್ನು ಧರಿಸಿ, ಭಗವಂತನಿಗೆ ಯಥೋಚಿತ ಶೇಷವೃತ್ತಿಯನ್ನು (ಕೈಂಕರ್ಯವನ್ನು) ಮಾಡುವುದರಿಂದ, ಆದಿಶೇಷನು ಎಲ್ಲರಿಂದಲೂ ಶೇಷನೆಂದೇ ಕರೆಯಲ್ಪಡುತ್ತಾನೆ

1ವಿ.ಪು (6–7–19) ಅನೇಕ ಸಾವಿರ ಜನ್ಮಗಳು, ಸಂಸಾರಮಾರ್ಗದಲ್ಲಿ ನಡೆದು ಈ ಜೀವನು **ಪೂರ್ವ ಪೂರ್ವ** ಕರ್ಮವಾಸನೆಯೆಂಬ ಧೂಳಿನಿಂದ ಮಸೃಣನಾಗಿ, ದೇಹಾತ್ಮ ವಿವೇಕವಿಲ್ಲದ ಮೋಹದಿಂದ ಕೂಡಿದ್ದಾನೆ.

ಪುಟ--38 [2] ಈ ದೃಷ್ಟಾಂತದಿಂದ ಲಕ್ಷ್ಮಿಯೊಡಗೂಡಿಯೇ ಭಗವಂತನು ಜಗತ್ಸೃಷ್ಟ್ಯಾದಿ ಲೀಲಾರಸವನ್ನು ಅನುಭವಿಸುತ್ತಾನೆಂಬುದು ತಿಳಿಸಲ್ಪಟ್ಟಿತ್ತು ಈ ಲೀಲಾಕಾರಣವಾಗಿ ಚೇತನನನ್ನು ಪ್ರಕೃತಿಯೊಡನೆ ಸಂಬಂಧ ಪಡದೆ ಇರುವಂತೆ ರಕ್ಷಿಸಲಿಲ್ಲವೆಂಬುದು ಸೂಚಿಸಲ್ಪಡುತ್ತದೆ ಹಾಗೆಯೇ ಮಾತು ಬಾರದ ದಶೆಯಂತೆ ಈ ಚೇತನನಿಗೆ ಪ್ರಕೃತಿ ಸಂಬಧವು ಅನಾದಿ ಎಂಬುದು ತಿಳಿಸಲ್ಪಡುತ್ತದೆ. ಮೇಲೂ ರಾಜನ ಹಾಗೆ ರಾಜಮಹಿಷಿಯೂ ಬೇಟೆಯಲ್ಲಿ ವ್ಯಗ್ರಳಾಗಿ ಮಗುವನ್ನು ಗಮನಿಸದೆ ಇರುವುದೋಪಾದಿಯಲ್ಲಿ ಜಗದ್ವ್ಯಾಪಾರದಲ್ಲಿ ಲಕ್ಷ್ಮಿಯೂ ಪ್ರವೃತ್ತಳಾಗಿರುವುದರಿಂದ ಜೀವನುಸಂಸಾರದಲ್ಲಿ ಮುಳುಗಿದ್ದಾನೆಂಬುದು ಸೂಚಿತ,

ಪುಟ--38 [3] ರಾಜನ ಹಾಗೆ ರಾಜಮಹಿಷಿಯೂ ಬೇಟೆಯಲ್ಲಿ ವ್ಯಗ್ರಳಾಗಿ ಮಗುವನ್ನು ಗಮನಿಸದೆ, ಇರಲು ಬೇರೆ ಮಾರ್ಗದಲ್ಲಿ ತಪ್ಪಿ ಹೋದ ರಾಜಕುಮಾರನಂತೆ, ಈ ಬದ್ಧಜೀವನೂ ಅನಾದ್ಯಜ್ಞಾನಲಂಘನ ರೂಪಪಾಪದಿಂದ ಅನರ್ಥ ಪರಂಪರೆಗಳಲ್ಲಿ ಸಿಕ್ಕಿಬಿದ್ದಿದ್ದಾನೆಂಬುದು ಸೂಚಿತ.

ರಾಜಕುಮಾರ ದೃಷ್ಟಾಂತ

ಒರುರಾಜಾ(2) ಅಂತಃಪುರುತ್ತುಡನೇ ವೇಟ್ಟೈಕ್ಕು ಶೆನ್ರು, ವಿಳೈಯಾಟ್ಟಿಲೇಸಕ್ತನಾನ ವಳವಿಲೇ ವಾರ್ತೈ ಯರಿವದರ್ಕು ಮುನ್ಪೇನೆಳಿತಪ್ಪಿನ ರಾಜಕುಮಾರನ್ (3) ಎಡುತ್ತಾರ್ ಕೈಯಿಲ್ ಪಿಳ್ಳೈಯಾಯ್ ಏದೇನುಮೊರುಕುರುಚ್ಚಿಯಿಲೇ ವಳರ, ಅವನ್ ತನಕ್ಕಿಲ್ಲಾದ ಶಬರತ್ವಾದಿ ಜಾತಿಹಳೈ ಏರಿಟ್ಟುಕ್ಕೊಂಡು, "ಮಾತಾಪ್ಯೇಕಾ ಪಿತಾಪ್ಯೇಕೋ ಮಮತಸ್ಯಚ ಪಕ್ಷಿಣಃ। ಅಹಂಮುನಿಭಿರಾನೀತ ಸ್ಸಚಾನೀತೋಗ ವಾಶನೈಃ। ಅಹಂ ಮುನೀನಾಂವಚನಂ ಶೃಣೋಮಿ ಗವಾಶನಾನಾಂ ಸವಚಶೃಣೋತಿ। ಪ್ರತ್ಯಕ್ಷ ಮೇತದ್ಭವತಾಪಿ ದೃಷ್ಟಂ ಸಂಸರ್ಗಜಾ ದೋಷಗುಣಾಭವಂತಿ ॥"

ಎನ್ಹಿರಪಡಿಯೇ[1] ವೇಡುವಚ್ಚೇರಿಯಿಲ್ ಕಿಳಿಪೋಲೇ ಅವರ್ಹಳ್ ಪಳ್ಕ್ಕಿವೈತ್ತ ಪಾಶು ರವೇ ತನಕ್ಕು ಪ್ರಾಶುರಮಾಯ್, ಆವರುಹಳುಕ್ಕುಪ್ಪಿರಂದವರ್ಹಳೈ ಪ್ಪೋಲೇ ಅವರ್ಗಳೂಣುಂ

ರಾಜಕುಮಾರದೃಷ್ಟಾಂತ

ಇದು ಸಂಭಾವಿತವೇ ಎಂಬ ಚೋದ್ಯಕ್ಕೆ ದೃಷ್ಟಾಂತವನ್ನು ಹೇಳುತ್ತಾರೆ. **ಒರುರಾಜಾ** ಇತ್ಯಾದಿ – ಆದಾಗಿ ಒಬ್ಬ ರಾಜನು 2) ತನ್ನ ಅಂತಃಪುರದೊಡನೆ ಬೇಟೆಯಾಡಲು ಹೋಗಿ, ಬೇಟೆ ಎಂಬ ಆಟದಲ್ಲಿ ಸಕ್ತನಾಗಿರುವಾಗ, ಮಾತು ಬಾರದೆ ಇರುವಾಗಲೇ ಆ ರಾಜಕುಮಾರನು, ದಾರಿತಪ್ಪಿಹೋಗಿ 3) ದಾರಿಹೋಕರ ಕೈಗೆ ಸಿಕ್ಕಿ ಅವರುಗಳು ತಮ್ಮ ಮಗುವಾಗಿ, ಯಾವುದೋ ಒಂದು ಹಳ್ಳಿಯಲ್ಲಿ ಸಾಕುತ್ತಿರಲು, ಆ ಮಗುವು ರಾಜಕುಮಾರನೆಂಬ ತನ್ನ ಸ್ವಂತ ಆಕಾರವನ್ನು ತ್ಯಜಿಸಿ, ಬೇಡನೆಂಬ ಜಾತಿಯನ್ನು ಪಡೆದುಕೊಳ್ಳುತ್ತಾನೆ. ಆದರ ಫಲವಾಗಿ

> **ಮಾತಾಪ್ಯೇಕಾ ಪಿತಾಪ್ಯೇಕಾ ಮಮತಸ್ಯಚ ಪಕ್ಷಿಣಃ।**
> **ಅಹಂಮುನಿಭಿರಾನೀತಸ್ಸಚಾನೀತೋ ಗವಾಶನೈಃ ॥**
> **ಅಹಂಮುನೀನಾಂ ವಚನಂ ಶೃಣೋಮಿಗವಾಶನಾನಾಂ ಸವಚ ಶೃಣೋತಿ।**
> **ಪ್ರತ್ಯಕ್ಷಮೇತತ್ ಭವತಾಪಿ ದೃಷ್ಟಂ ಸಂಸರ್ಗಜಾ ದೋಷಗುಣಾಭವಂತಿ ॥**

ಎಂಬಂತೆ ಬೇಡರಪಾಳ್ಯದಲ್ಲಿ ವಾಸವಾಗಿದ್ದ ದೃಷ್ಟಾಂತವನ್ನು ಹೇಳುತ್ತಾರೆ ಅದಾಗಿ "ಒಬ್ಬ ಋಷಿಕುಮಾರನು ಬೇಡರಪಾಳ್ಯದ ಮಾರ್ಗವಾಗಿ ಒಂದು ಋಷ್ಯಾಶ್ರಮಕ್ಕೆ ಹೋದನು. ದಾರಿಯಲ್ಲಿ ಬೇಡರ ಪಾಳ್ಯದಲ್ಲಿ ಬೆಳೆಸಿದ್ದ ಒಂದು ಗಿಣಿಯು "ಬಡಿ,ಕೊಲ್ಲು" ಇತ್ಯಾದಿ ಮಾತನ್ನು ಆಡುತ್ತಿತ್ತು ಋಷ್ಯಾಶ್ರಮದಲ್ಲಿ ವಾಸವಾಗಿದ್ದ ಗಿಣಿಯು "ಇದೋಅರ್ಘ್ಯ, ಇದೋ ಪಾದ್ಯ, ಇಲ್ಲಿ ದಯಮಾಡಿಸಿ, ಈ ಹಣ್ಣನ್ನು ತಿನ್ನಿರಿ" ಎಂದು ಉಪಚಾರ ಮಾತುಗಳನ್ನು ಆಡಿತು ಆ ಋಷಿಕುಮಾರನು, ಆಶ್ರಮದ ಗಿಣಿಯನ್ನು ನೋಡಿ, ಇದೇನಾಶ್ಚರ್ಯ "ನಿನ್ನ ಜಾತಿಗ ಸೇರಿ ಬೇಡರ ಪಾಳ್ಯದಲ್ಲಿ ವಾಸವಾಗಿರುವ ಮತ್ತೊಂದು ಗಿಣಿಯು 'ಬಡಿಕೊಲ್ಲು' ಇತ್ಯಾದಿ ಹೇಳುತ್ತಿದೆ. ನೀನು ಹೀಗೆ ಉಪಚಾರ ಮಾತನ್ನು ಆಡುತ್ತಿಯೇ" ಎನಲು, ಆ ಋಷಿಯ ಅಶ್ರಮದಲ್ಲಿ ಬೆಳೆದ ಗಿಣಿಯು, ನಾವಿಬ್ಬರೂ ಒಂದೇ ತಾಯಿ ತಂದೆಗೆ ಹುಟ್ಟಿದವರು. ನನ್ನನ್ನು ಋಷಿಗಳು ಸಾಕಿದರು. ಆ ಗಿಣಿಯನ್ನು ಬೇಡರು ಸಾಕಿದರು. ನಾನು ಋಷಿಗಳ ಮಾತನ್ನು ಕೇಳುತ್ತೇನೆ. ಅದು ಕಟುಕರ ಮಾತನ್ನು ಕೇಳುತ್ತದೆ. ಇದನ್ನು ನೀನು ಪ್ರತ್ಯಕ್ಷವಾಗಿ ನೋಡಿದ್ದೀಯಾ ಗುಣದೋಷಗಳು ಸಹವಾಸದಿಂದ ಉಂಟಾಗುತ್ತವೆ" ಎಂದು ಹೇಳಿತು **ಎನ್ಹಿರಪಡಿಯೇ ವೇಡುವಚ್ಚೇರಿಯಿಲ್ ಕಿಳಿಪೋಲ್ ಇತ್ಯಾದಿ** ಇದರ ಪ್ರಕಾರ, ಬೇಡರ ಪಾಳ್ಯದಲ್ಲಿ ಬೆಳೆದ ಗಿಣಿಯ ಹಾಗೆ ರಾಜಕುಮಾರನು ಅವರು ಪಳಗಿಸಿಕೊಟ್ಟ ಮಾತನ್ನೇ ಆಡುತ್ತಾ, ಅವರಿಗೆ ಹುಟ್ಟಿದ ಮಗುವಿನಂತೆ, ಅವರು ತಿನ್ನುವ ಆಹಾರವೇ ತನಗೆ ಆಹಾರವಾಗಿ ಅವರ ಜೀವನವೇ ತನಗೂ

---

(2) ಮತ್ತು (3) 73 ಪುಟ ನೋಡಿ.

ವೃತ್ತಿಯುಂವೋ ತನಕ್ಕು ಊಣುಂ ವೃತ್ತಿಯುಂವಾಯ್ ತಿಱಪಿರವಿಕ್ಕುಕ್ಕುರಿಯ ಭೋಗಂಗಳಿಲುಂ
ಆಚಾರ ಸಂಸ್ಕಾರಾದಿಹಳಿಲುಂ ಪುದಿಯದುಣ್ಡಾದೇ, ರಾಜಭೋಗವಿರದ್ಧಂಗಳಾನ ಜುಗುಪ್ಸಿತವಿಷಯಂ
ಗಳಿಲೇ ತನಕ್ಕು ಪ್ಪೇರುವಿಂಬ್ರವುಂ ಹರ್ಷಶೋಕಂಗಳುವಾಯ್, ರಾಜಕುಮಾರನೆನ್ರು ತಿಱಪಿರವಿ
ಯುರಿವಾರ್ ಶಿಲ ಋಷಿಪ್ರಾಯರುಂಡಾನಾಲುಮವರ್‌ಹಳುಕ್ಕು ಕ್ಕಿಟ್ಟವೊಣ್ಣಾದ ಅವಸ್ಥೆಯುಡೈಯವ
ನಾಯ್, ಇಪ್ಪಡಿ ಭ್ರಾಂತಿಸಿದ್ಧ ಶಬರತ್ವಾದ್ಯವಸ್ಥೈಯೋಡೇ ಯಾವಜ್ಜೀವಂ ನಡಕ್ಕಿಲ್, ಉತ್ತರ
ಜನ್ಮಙ್ಗಳಿಲುಮೊರುಯೋಗ್ಯತೈ ಪಿರವಿರಹಿಲ್ಲಾದ ಪಡಿಯಾಯ್ ತ್ತಿಟ್ಟುಪ್ಪಟ್ಟು ನಿರ್ಕುಮಾಪ್ಪೋಲೇ
ಇವನುಂ ದೇಹಾತ್ಮಾಭಿಮಾನಾದಿಹಳಾಲೇ ತನ್ನುರುಕ್ಕೊಡತ್ತುವೇಟ್ರುರುಕ್ಕೊಂಡು ನಿರ್ಕ;

ಧಾರ್ಮಿಕೋಪದೇಶ - ಅನ್ದರಾಜಕುಮಾರಾನುಡೈಯ ಲಕ್ಷಣಾದಿಹಳಾಲೇ ಜಾತಿವಿಶೇಷತ್ತೈ
ಯರಿವಾರ್ ಶಿಲ ಧಾರ್ಮಿಕರ್ ಒರುವಿರಹಾಲೇ ಇವನ್ನೈವಿಟಾಟ್ಕೆಪ್ಪೆತ್ತಭಿಮಾನಿಕ್ಕ ಇವನಕ್ಕು ವಂದೇ
ರಿಯಾನ ಜಾತ್ಯಂತರಾಭಿಮಾನತ್ತೈ ವಙ್ಗವಿಲಕ್ಕಿ ದೃಷ್ಟಾದೃಷ್ಟ ಸಂಸ್ಕಾರಾದಿಹಳಾಲೇ ಉತ್ತರೋತ್ತರ
ಭೋಗ ತದುಪಾಯಂಗಳಕ್ಕು ಯೋಗ್ಯನಾಂಪಡಿ ವಿರಹು ಶೆಯ್‌ದು ಇವನಕ್ಕು ಸ್ವಜಾತ್ಯನು

ಜೀವನವಾಗಿ, ತನ್ನ ಜಾತಿಗೆ ಉಚಿತವಾದ ರಾಜವೃತ್ತಿಗಳನ್ನೂ; ಉಪನಯನಾದಿ ಸಂಸ್ಕಾರಗಳನ್ನೂ ಒಂದು
ಸಮಯವೂ ಅನುಭವಿಸದೆ, ರಾಜಭೋಗ ವಿರುದ್ಧವಾಗಿ ಜುಗುಪ್ಸಿತ ವಿಷಯಗಳಲ್ಲಿ ತನಗೆ ಪುರುಷಾರ್ಥಪ್ರಾಪ್ತಿ
ಹಾನಿಗಳೂ, ಹರ್ಷಶೋಕಗಳೂ ಉಂಟಾಗುವಂತೆ ಜೀವನೂ ಭಗವತ್ಪ್ರಾಪ್ತಿ ತದನುಭವ ಸುಖಗಳನ್ನು ಕಳೆದುಕೊಂಡು
ಸಂಸಾರದಲ್ಲಿ ಸಿಕ್ಕಿ ಬಿದ್ದು ಹೇಯವಾದ ಶಬ್ದಾದಿ ವಿಷಯಸುಖದುಃಖಗಳನ್ನು ಅನುಭವಿಸಿಕೊಂಡು ಅದೇ ತನಗೆ
ಭೋಗ್ಯವಾದದ್ದೆಂದು ತಿಳಿದುಕೊಂಡಿದ್ದಾನೆ. **ತನ್ನಡಿಯರಿವಾರ್ ಇತ್ಯಾದಿ** – ಆ ಮಗುವನ್ನು ನೋಡಿದ ಕೆಲವು
ಋಷಿತುಲ್ಯರು ಅವನನ್ನು ರಾಜಕುಮಾರನೆಂದು ತಿಳಿದಿದ್ದರೂ, ಅವರುಗಳು ಸಮೀಪಕ್ಕೆಬಾರದೆ ಇರುವಂಥಹ
ದುರವಸ್ಥೆಯುಳ್ಳವನಾಗಿ, ಹೀಗೆ ಭ್ರಾಂತಿಯಿಂದ ಉಂಟಾದ ಬೇಡ ಜಾತ್ಯವಸ್ಥೆಗಳು ಯಾವಜ್ಜೀವ ಅನುವರ್ತಿಸಿದರೆ
ಮುಂದಿನ ಜನ್ಮಗಳಲ್ಲಿಯೂ ಒಳ್ಳೆಯ ಜನ್ಮವನ್ನು ಪಡೆಯುವ ಉಪಾಯವಿಲ್ಲದೆ ತನಗೆ ಪ್ರಾಪ್ತವಾದ ರಾಜ
ಭೋಗಗಳನ್ನು ಕಳೆದುಕೊಂಡು ಇರುವಂತೆ, ಜೀವನೂ ದೇಹಾತ್ಮಾಭಿಮಾನಾದಿಗಳಿಂದ, ತನಗೆ ಸ್ವಾಭಾವಿಕವಾದ
ಭಗವದ್ದಾಸ್ಯತ್ವ, ನಿರ್ಮಲತ್ವಾದಿಗಳನ್ನು ತಿಳಿದುಕೊಳ್ಳದೆ, ಔಪಾಧಿಕವಾದ ಮನುಷ್ಯತ್ವ, ಸ್ವತಂತ್ರತ್ವಾದಿ ಗುಣ
ಯುಕ್ತನಾಗಿ, ಸಾತ್ವಿಕಾದಿ ಬುದ್ಧ್ಯನ್ವೇಷಕ್ಕೆ ಅವಕಾಶವಿಲ್ಲದೆ ಆತ್ಮ ನಿಸ್ತರೋಪಾಯ ಶೂನ್ಯನಾಗಿ ಮುಂದಿನ
ಜನ್ಮಗಳಲ್ಲಿಯೂ ಇಂಥಹ ದುರವಸ್ಥೆಯು ಅನುವರ್ತಿಸುವಂತೆ ಇದ್ದಾನೆ

ವಿಧಿಪರಿಣತಿ ಭೇದಾತ್ ವೀಕ್ಷಿತಸ್ತೇನಕಾಲೇ ಎಂಬುದರ ಅರ್ಥ – ಹೀಗಿರುವಾಗ ಸಾಮುದ್ರಿಕ
ಶಾಸ್ತ್ರಗಳ ಮೂಲಕ ಆ ರಾಜಕುಮಾರನ ಲಕ್ಷಣಗಳಿಂದ ಜಾತಿ ವಿಶೇಷವನ್ನು (ಇವನು ಬೇಡನಲ್ಲ, ರಾಜಕುಮಾರನು
ಎಂಬುದನ್ನು) ತಿಳಿಯಬಲ್ಲ ಕೆಲವು ಧಾರ್ಮಿಕರು, ಒಂದು ಉಪಾಯದಿಂದ (ಇವನಿಗೆ ಕೆಲವು ಅನುಕೂಲಗಳನ್ನುಂಟು
ಮಾಡಿ ಸ್ನೇಹವನ್ನು ಸಂಪಾದಿಸಿ), ಇವನನ್ನು ತಮ್ಮಲ್ಲಿಗೆ ಬರಮಾಡಿಕೊಂಡು, ಹೇಗಾದರೂ ಇವನನ್ನು ಉದ್ಧರಿಸ
ಬೇಕೆಂದು ಅಭಿಪ್ರಾಯಪಟ್ಟು, ಆಗಂತುಕವಾದ ಜಾತ್ಯಂತರಾಭಿಮಾನವನ್ನು ತಮ್ಮ ಉಪದೇಶಗಳಿಂದ ಹೋಗ
ಲಾಡಿಸಿ, ದೃಷ್ಟಾದೃಷ್ಟ ಸಂಸ್ಕಾರಾದಿಗಳಿಂದ, ಅಂದರೆ ಸ್ನಾನ ಮಾಡಿಸಿ, ಒಳ್ಳೆಯ ಬಟ್ಟೆಗಳನ್ನು ತೊಡಿಸಿ, (ದೃಷ್ಟ
ಸಂಸ್ಕಾರ), ಉಪನಯನಾದಿ (ಅದೃಷ್ಟಸಂಸ್ಕಾರ) ಗಳನ್ನು ಮಾಡಿ, ಉತ್ತರೋತ್ತರ ರಾಜಭೋಗ ತತ್ಪ್ರಾಪ್ತ್ಯುಪಾಯ
ಗಳಿಗೆ ಯೋಗ್ಯನನ್ನಾಗಿ ಮಾಡಿ, ಸ್ವಜಾತ್ಯನುರೂಪವಾದ ದಾಕ್ಷಿಣ್ಯಾದಿ ಗುಣಗಳನ್ನೂ, ಸಂಧ್ಯೋಪಾಸನಾದಿ
ಆಚಾರಗಳನ್ನೂ, ತಮ್ಮ ಉಪದೇಶಗಳಿಂದಲೂ, ಅನುಷ್ಠಾನಗಳಿಂದಲೂ ಉಂಟುಮಾಡಿ, ಇವನಿಗೆ ಅನೇಕ
ದೋಷಗಳಿಂದ ದುಷ್ಟವಾದ ಶಬರಾದಿಭೋಗ್ಯ ಕ್ಷುದ್ರ ವಿಷಯಗಳಲ್ಲಿ ಹೇಯತ್ವ ಬುದ್ಧಿಯನ್ನು ರಾಜಾದಿ ಭೋಗ್ಯ

ರೂಪಮಾನ ಗುಣವೃತ್ತಂಗಳೈತ್ತಂಗಳುಪದೇಶಾನುಷ್ಠಾನಂಗಳಾಲೇ ಕುಡಿಪ್ಪುಹುರವಿಟ್ಟು, ಇವನುಕ್ಕು ಅನೇಕದೋಷ ದುಷ್ಟಂಗಳಾನ ಶಬರಾದಿ ಭೋಗ್ಯಕ್ಷುದ್ರ ವಿಷಯಂಗಳೈಯುರುವರುಪ್ಪಿತ್ತು. ರಾಜಾದಿ ಭೋಗ್ಯಂಗಳಾನವತಿಶಯಿತ ಪುರುಷಾರ್ಥಂಗಳೈಯಾಯ್ನ್ದಡುಕ್ಕವಲ್ಲ ಅಳವುಡೈವ್ವೈಯ್ಯೈಯುಂಡಾಕ್ಕಿ ವಿರುತ್ತುಮಾಪ್ಪೋಲೇ, ಇವ್ವಾತ್ಮಾವುಕ್ಕುಚ್ಚಿಲಧಾರ್ಮಿಕರ್ ಪಿತ್ರಾದಿಮುಖೇನನೊಡಿತ್ತು,

(1) ಪುಮಾನ್ನದೇವೋ ನನರೋ ನಪಶು ರ್ನಚ ಪಾದಪಃ ।
ಶರೀರಾಕೃತಿ ಭೇದಾಸ್ತು ಭೂಪೈತೇ ಕರ್ಮಯೋನಯಃ ।

ಎಱಹಿರಪಡಿಯೇ ಉರುವಿಯನ್ದ ವಿನ್ನಿಲವ್ವೈಯ್ಯು ಯುಣರ್ತ್ತಿ ಅದಕ್ಕುನುರೂಪಮಾನ ಪುರುಷಾರ್ಥ ತದುಪಾಯಂಗಳಿಲೇ ಅನ್ವಯಿಕ್ಕಲಾಂಪಡಿ ವಿರಗುಶೆಯ್ದು ಉಡಂಬುತಿನ್ನಾರ್ ಪಡಿಯನ್ರಿಕ್ಕೇ ಒರು

ಗಳಾದ ಅತಿಶಯಿತ ಪುರುಷಾರ್ಥಗಳನ್ನೂ ಪಡೆಯಲು ಬೇಕಾದ ವಿವೇಕಾದಿಗಳಿಂದ ಕೂಡಿದ ಸಾತ್ವಿಕ ಜ್ಞಾನವನ್ನುಂಟುಮಾಡುತ್ತಾರೆ **ಇವ್ವಾತ್ಮಾವುಕ್ಕು ಶಿಲಧಾರ್ಮಿಕರ್ ಇತ್ಯಾದಿ,** ಇದೇ ರೀತಿಯಲ್ಲಿ ಈ ಸಂಸಾರಿ ಚೇತನನನ್ನು, ಕೆಲವು ಧಾರ್ಮಿಕರು ಇವನ ತಂದೆಯೇ ಮೊದಲಾದವರ ಮೂಲಕ ಮಾತನಾಡಿಸಿ, (1)"**ಪುಮಾನ್ನ ದೇವೋ ನನರೋ ನಪಶುರ್ನಚಪಾದಪಃ । ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ॥**" ಎಂಬಂತೆ ದೇಹಕ್ಕಿಂತ ಬೇರೆಯಾದ ಆತ್ಮ ಸ್ಥಿತಿಯನ್ನು ತಿಳಿಸಿ, ಆದಕ್ಕನುರೂಪವಾದ ಪುರುಷಾರ್ಥ, ಅದನ್ನು ಪಡೆಯುವ ಉಪಾಯಗಳನ್ನು ಅನುಷ್ಠಿಸಲು ದಾರಿ ತೋರಿಸಿ, ದೇಹವೇ ಆತ್ಮಾವೆಂದು ತಿಳಿದವರ ಹಾಗೆ ಇಲ್ಲದೆ,

ಆತ್ಮಾದೇಹಕ್ಕಿಂತ ಬೇರೆಯಾದವನೆಂಬ ಜ್ಞಾನವುಳ್ಳವರಿಗೆ, ಉಂಟಾಗತಕ್ಕಂಥ ತತ್ವಹಿತ ಪುರುಷಾರ್ಥಗಳಲ್ಲಿ ಜಿಜ್ಞಾಸೆಯನ್ನೂ, ಕರ್ಮಾನುಷ್ಠಾನಗಳಲ್ಲಿ ಆಸ್ತಿಕ್ಯಪೂರ್ವಕ ಆಸಕ್ತಿಯನ್ನೂ ಉಂಟು ಮಾಡುತ್ತಾರೆ. ಹಾಗೆಯೇ ಆ ಧಾರ್ಮಿಕರು ಒಳ್ಳೆಯದು ಯಾವುದು ಕೆಟ್ಟದು ಯಾವುದು ಎಂದು ಪರೀಶಿಲಿಸಲು ಯೋಗ್ಯನನ್ನಾಗಿ ಮಾಡುತ್ತಾರೆ

ಆಚಾರ್ಯಪ್ರಾಪ್ತಿ ಮತ್ತು ಅವರ ಉಪದೇಶ

ಗುರುಪರಿಷದುಪಜ್ಞಂಪ್ರಾಪ್ಯ ಗೋಪಾಯತಿ ಸ್ವಮ್ – ಎಂಬುದರ ಅರ್ಥವನ್ನು ವಿವರಿಸುತ್ತಾರೆ. **ಇವನುಡೈಯ** ಇತ್ಯಾದಿಯಾಗಿ – ಇಂಥಹ ಸಂಸಾರಿ ಜೀವನೇ, ಆತ್ಮಕ್ಷೇಮಕ್ಕೆ ತಕ್ಕ ಯೋಗ್ಯತೆಯುಳ್ಳವನಾಗಿರುವುದನ್ನೂ, ಕೆಲವು ಧಾರ್ಮಿಕರ ಮೂಲಕವಾಗಿ ಸಂಪಾದಿಸಿಕೊಂಡ ಆಸ್ತಿಕ್ಯಾದಿಗಳನ್ನೂ ಸ್ಪಷ್ಟವಾಗಿ ತಿಳಿದುಕೊಂಡು (2) ಪರಮ ಕಾರುಣಿಕನಾದ (3) ಪರಮಶೇಷಿಯಿಂದ ಪ್ರೇರೇಪಿಸಲ್ಪಟ್ಟವರಾಗಿ ತಾವೂ ಕಾರುಣಿಕೋತ್ತಮರಾಗಿರುವ ಕೆಲವು ಆಚಾರ್ಯರು ಅವನಿಗೆ ಲಭಿಸುತ್ತಾರೆ ಈ ಆಚಾರ್ಯರು ಅಂತರ್ಯಾಮಿಯಾದ ಭಗವಂತನಿಂದ ಪ್ರೇರೇಪಿಸಲ್ಪಟ್ಟವರಾಗಿ, ತಮ್ಮನ್ನು "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ" ಎಂಬ ಕ್ರಮದಲ್ಲಿ ಆಶ್ರಯಿಸಿದ ಶಿಷ್ಯನಿಗೆ "ಕೃಪಯಾ ನಿಸ್ಪೃಹೋವದೇತ್" ಎಂಬಂತೆ ಚೇತನನ್ನು ಉಜ್ಜೀವಿಸಬೇಕೆಂಬ ದಯೆಯಿಂದಲೂ, ಖ್ಯಾತಿ ಲಾಭಪೂಜಾ ನಿರಪೇಕ್ಷವಾಗಿಯೂ ಜ್ಞಾನೋಪದೇಶ ಮಾಡುತ್ತಾರೆ.

---

(1) ವಿ.ಪು ೨ ೧೩-೯೮ **ಪುಮಾನ್ ಇತ್ಯಾದಿ**ಎಲೈ ಅರಸನೇ, ಜೀವನು ದೇವನಲ್ಲ - ಮನುಷ್ಯನಲ್ಲ, ಪ್ರಾಣಿಯಲ್ಲ ಮರವೂ ಅಲ್ಲ, ಶರೀರಸಂಬಂಧದಿಂದ ಉಂಟಾದ ಈ ಭೇದಗಳಿಗೆ ಅವನವನ ಪುಣ್ಯಪಾಪ ರೂಪಕರ್ಮಗಳು ಕಾರಣ

2 ಭಗವಂತನು ಪರಮಕಾರುಣಿಕನಾದರೂ ಅವನ ಕರುಣೆಯು ವ್ಯಾಜಸಾಪೇಕ್ಷ. ಬದ್ಧಜೀವನ ವಿಷಯದಲ್ಲಿ, ಆತನ ಅನಾದಿ ಪಾಪಕರ್ಮಗಳ ದೆಸೆಯಿಂದ ತಡೆಯಲ್ಪಟ್ಟ ಕರುಣೆಯು, ಮೇಲೆ ಹೇಳಿದ ಸಾತ್ವಿಕ ಸಂಭಾಷಣಾದಿ ಸುಕೃತಪರಿಪಾಕದಿಂದ ಉದ್ವಿಗ್ನವಾಗಿ ಇವನನ್ನು ವಿಷಯೀಕರಿಸುತ್ತದೆ. (ಪ್ರ.ತಿ.ನೋ)

ವೆಳಿಚ್ಚಿರಪ್ಪುಡೈಯಾರ್‌ಕ್ಕುಮವರುಂಗುಣವೃತ್ತಂಗಳೈ ಯುಂಡಾಕ್ಕಿ ಹೇಯೋಪಾದೇಯವಿಭಾಗಜ್ಞಾನಮುಮ ಪೂಕ್ಕಿ ನಿರುತ್ತಿನವಳವಿಲೇ. ಇವನುಡೈಯವಡಿಯುಡನ್ಪೈಯ್ಯುಯುಂ, ಆಳವ್ರುಡನ್ಪೈಯ್ಯುಯುಂ ನೇರಾ ಹಕ್ಕಂಡು ಪರಮ ಕಾರುಣಿಕನಾನ ಪರಮಶೇಷಿಯಾಲೇ ಪ್ರೇರಿತರಾಯ್ ತ್ತಾಂಗುಳುಂ ಕಾರುಣಿಕೋ ತ್ತಮರಾಯಿರುಪ್ಪಾರ್ ಶಿಲದೇಶಿಕರ್,

ಸದಾಚಾರ್ಯ ಪ್ರಾಪ್ತಿ

ಈಶ್ವರಸ್ಯಚ ಸೌಹಾರ್ದಂ ಯದೃಚ್ಛಾಸುಕೃತಂತಥಾ ।
ವಿಷ್ಣೋಃಕಟಾಕ್ಷ ಮದ್ವೇಷ ಮಾಭಿಮುಖ್ಯಂಚ ಸಾತ್ವಿಕೈಃ ।
ಸಂಭಾಷಣಂ ಷಡೈತಾನಿಹ್ಯಾಚಾರ್ಯಪ್ರಾಪ್ತಿ ಹೇತವಃ ।

ಸದಾಚಾರ್ಯ ಪ್ರಾಪ್ತಿ

ಈಶ್ವರಸ್ಯಚಸೌಹಾರ್ದಂ ಇತ್ಯಾದಿ. ಈ ಬದ್ಧಜೀವನಿಗೆ ಇಷ್ಟು ಕಾಲವೂ ಲಭಿಸದ ಸದಾಚಾರ್ಯಪ್ರಾಪ್ತಿಯು ಈಗ ಲಭಿಸಲು ಕಾರಣವನ್ನು ತಿಳಿಸುತ್ತಾರೆ. **ಈಶರ್ವಸ್ಯಚಸೌಹಾರ್ದಂ–** "ಸರ್ವಸ್ಯ ಶರಣಂಸುಹೃತ್" "ಸುಹೃದಂಸರ್ವಭೂತನಾಂ" ಎಂಬಂತೆ ಈಶ್ವರನು (ಲಕ್ಷ್ಮೀವಿಶಿಷ್ಟನಾದ ಭಗವಂತನು) ಎಲ್ಲಾ ಚೇತನರ ವಿಷಯದಲ್ಲಿ ಸಹಜ ಸ್ನೇಹಭಾವದಿಂದ ಕೂಡಿದ್ದಾನೆ. **ಯದೃಚ್ಛಾಸುಕೃತಂತಥಾ–** ಸಹಜ ಸೌಹಾರ್ದಭಾವದಿಂದ ಕೂಡಿರುವ ಭಗವಂತನು, ಅನಾದಿಯಾದ ತನ್ನ ಆಜ್ಞಾತಿಲಂಘನದಿಂದ ಕೂಡಿದ ಜೀವನ ವಿಷಯದಲ್ಲಿ ಯಾವುದಾದರೂ ಒಂದು ಯದೃಚ್ಛಾಸುಕೃತವನ್ನು ಅವಲಂಬಿಸಿ ಕಟಾಕ್ಷಿಸತೊಡಗುತ್ತಾನೆ. ಅವನ **ಸೌಹಾರ್ದಭಾವವೇ** ಇದಕ್ಕೆ ಕಾರಣ ಯದೃಚ್ಛಾಸುಕೃತವೆಂಬುದು – ಕಾರ್ಯಾಂತರ ಪರನಾದ ಕಾಲದಲ್ಲಿ ಜೀವನಿಗೆ **ಮಾರ್ಗದಲ್ಲಿ** ಲಭಿಸುವ **ಅಚಿಂತಿತ** ಭಗವತ್ಸೇವೆ. ಅವನ ನಾಮಗ್ರಹಣಾದಿಗಳು ಸ್ವತಃ ಪರಮಕಾರುಣಿಕನಾದ, ಪರಮಶೇಷಿಗೆ, ದ್ವೇಷ ಪಕ್ಷಪಾತವೆಂಬ ದೋಷಗಳು ಬಾರದ ಇರಲು ಈ ಯದೃಚ್ಛಾಸುಕೃತವೆಂಬ ವ್ಯಾಜವು ಅಪೇಕ್ಷಿತ. **ವಿಷ್ಣೋಃಕಟಾಕ್ಷಂ–** ಈ ಯದೃಚ್ಛಾಸುಕೃತವನ್ನು ವ್ಯಾಜವಾಗಿಟ್ಟುಕೊಂಡು, ಮುಂದೆ ಬರುವ ಜನ್ಮದಲ್ಲಿ ಜಾಯಮಾನ ದಶಯಲ್ಲಿ – ಅಂದರೆ ತಾಯಿಯಗರ್ಭದಿಂದ ಹೊರಬೀಳುವ ಸಮಯದಲ್ಲಿ, ಇವನು ಸಾತ್ವಿಕನಾಗಲೆಂದು ಮಧುಸೂದನನು ಕಟಾಕ್ಷಿಸುತ್ತಾನೆ. "ಜಾಯಮಾನಂ ಹಿಪುರುಷಂಯಂ ಪಶ್ಯೇತ್ ಮಧುಸೂದನಃ । ಸಾತ್ವಿಕಸ್ಸತು ವಿಜ್ಞೇಯಃ ಸವೈಮೋಕ್ಷಾರ್ಥಚಿಂತಕಃ ॥ ಎಂಬುದು ಇಲ್ಲಿ ವಿವಕ್ಷಿತ. ಅಂತಹ ಮಧುಸೂದನ ಕಟಾಕ್ಷವನ್ನು ಹೊಂದಿದವನು ಮೋಕ್ಷಾರ್ಥಚಿಂತಕನಾಗುತ್ತಾನೆ. ಅದಕ್ಕೆ ಕಾರಣ ಸಾತ್ವಿಕಬುದ್ಧಿ. ಅದು, ಹುಟ್ಟುವಾಗ ಭಗವಂತನ ಕಟಾಕ್ಷಕ್ಕೆ ಪಾತ್ರನಾಗುವುದರಿಂದ **ಉಂಟಾಗುತ್ತದೆ.** **ಅದ್ವೇಷಂ–** ಆ ಭಗವತ್ಕಟಾಕ್ಷದಿಂದ ಉಂಟಾದ **ಸಾತ್ವಿಕಬುದ್ಧಿಯಿಂದ,** ಭಗವಂತನಲ್ಲಿಯೂ ವೇದಗಳಲ್ಲಿಯೂ, ದ್ವೇಷವಿಲ್ಲದಿರುವುದು, ಭಗವಂತನನ್ನೂ ಅವನ ವಿಷಯವಾದ ಕಥೆಗಳನ್ನೂ ದೂಷಿಸದೆ, ಆದರಿಸುವುದು.

ಅಭಿಮುಖ್ಯಂಚಸಾತ್ವಿಕೈಃ – ಸಾತ್ವಿಕರೊಡನೆ ಕೂಡುವುದು, **ಸಂಭಾಷಣಂ** – ಅವರುಗಳೊಡನೆ ಮಾತನಾಡಿ ಆಪಾತತಃ ಹಿತಾಹಿತಗಳನ್ನು ತಿಳಿದುಕೊಳ್ಳುವುದು. **ಷಡೈತಾನಿ** – ಈ ಆರೂ, **ಆಚಾರ್ಯಪ್ರಾಪ್ತಿ ಹೇತವಃ** – ಆಚಾರ್ಯನನ್ನು ಪಡೆಯಲು ಕಾರಣವಾಗುತ್ತವೆ – ನಿಶ್ಚಯವೆಂದರ್ಥ. ಸಾತ್ವಿಕ ಸಂಭಾಷಣಾದಿಗಳಿಂದ **ಮೇಲೆ** ಮೇಲೆ ಜ್ಞಾನವನ್ನು ಪಡೆಯಲು ಜಿಜ್ಞಾಸೆಯುಂಟಾಗಿ, ಅವರು ತೋರಿಸಿಕೊಟ್ಟು, ಸದಾಚಾರ್ಯ ಪ್ರಾಪ್ತಿಯುಂಟಾಗುತ್ತದೆ.

ಪುಟ 40-- 3. ಆ ಭಗವಂತನು ಪರಮ ಶೇಷಿಯಾದ್ದರಿಂದ ಶೇಷವಸ್ತುವನ್ನು ಕಾಪಾಡುವುದು ಸ್ವತಃ ಪ್ರಾಪ್ತ. ಆದರೂ ವೈಷಮ್ಯ ನೈರ್ಘೃಣ್ಯಾದಿಗಳು ಬಾರದೆ ಇರಲು ಅವನು ವ್ಯಾಜ ಪ್ರತೀಕ್ಷಿಯಾಗಿದ್ದಾನೆ.

ಎನ್‌ಹಿರಪ್ಪಡಿಯೇ ನೇರ್‌ಪಟ್ಟು ಅಂಪರಾಜಕುಮಾರನುಕ್ಕುತಿಲರಾಜಾಂತರಂಗರ್ ನೇರ್‌ಪಟ್ಟುಪ್ಪಿರಿ ವಿಯ್ಯು ಯುಣರ್ತಿ, ವ್ನೇಲುಳ್ಳ ಪ್ರಿಯತಮಂಗಳ್ಳೈಯುಂ ಹಿತತಮಂಗಳ್ಳೈಯುಂ ತೆಳಿವಿತ್ತು, ಒರುವಿರ ಹಾಲೇ ಅಂದ ರಾಜಾವುಕ್ಕುಂ ರಾಜಕುಮಾರನುಕ್ಕುಂ ಪೆರಸ್ಪರ ಸಂಶ್ಲೇಷಾಕಾಂಕ್ಷೈಯೈ ಯುತ್ತಿರ ಭಿಕ್ಕುಮಾಪ್ಪೋಲೇ, ಇವನುಕ್ಕುಂ

ಆಚಾರ್ಯೋಪದೇಶ –

ನಾಯಂದೇವೋ ನಮರ್ತ್ಯೋ ವಾ ನ ತಿರ್ಯಕ್‌ಸ್ಥಾವರೋಪಿವಾ ।
ಜ್ಞಾನಾನಂದಮಯಸ್ತ್ವಾತ್ಮಾ ಶೇಷೋಹಿ ಪರಮಾತ್ಮನಃ ॥

ಎನ್ರುಂ ಪ್ರಮಾಣಂಗಳ್ ಶೊಲ್ಲುಹಿರಪಡಿಯೇ, "ಪೊಂಗೋದಂಶೂಳ್ನ್ದ ಪುವನಿಯುಂ ವಿಣ್ಣುಲಕಮುಞ್ಗಾ ದುಂ ಶೋರಾಮೇಯಾಳ್‌ಗಿನ್ರ ಶೆಂಗೋಲುಡ್ಯೆಯ" ಶ್ರಿಯಃಪತಿನಾರಾಯಣನುಡನೇ ಕುಡಲ್ ತುವಕ್ಕೈ ತ್ತೆಳಿವಿತ್ತು, ಇವನುಕ್ಕು ತತ್ಪ್ರಾಪ್ತ್ಯುಪಾಯಂಗಳಿಲೇ ಮುಯನ್ರು, ಇರ್ವ ಪೆರುಹಿರ ಪೇದೀತಂಗಳುಕ್ಕು ಪ್ಪೊನ್ನು ಲಗ್ಗೆಯುಂ ಪುವನಿಮುಳ್ಳತ್ತೈಯು ಮಾಳುಕ್ಕೈಯಾಹ ವುಹನ್ದು, ಅದಡಿಯಾಹ ವನ್ರೀನ್ರ ಕನ್ರು ಕ್ಕಿರಂಗಿಚ್ಚು ರುಕ್ಕುರಥೇನುಮ್ಮೈಪ್ಪೋಲೇ ಇದ್ದೇಶಿಕರಿವ್ವಾತ್ಮಾವುಕ್ಕು ಅಜ್ಞಾನಸಂಶಯ ವಿಪರ್ಯಯಂಗಳ್

ಎನ್ಹಿರಪಡಿಯೇನೇರ್ಪಟ್ಟು ಇತ್ಯಾದಿ - ಎಂದು ಮೇಲೆ ಹೇಳಿದ ಪ್ರಕಾರ ಸದಾಚಾರ್ಯಪ್ರಾಪ್ತಿ ಯುಂಟಾಗುತ್ತದೆ ಮೇಲೆ ಹೇಳಿದ ದೃಷ್ಟಾಂತದಲ್ಲಿ ರಾಜನ ಪ್ರೀತಿಯನ್ನು ಉದ್ದೇಶಿಸಿ ಕೆಲವು ರಾಜನ ಅಂತರಂಗ ಜನರು ರಾಜಕುಮಾರನಿಗೆ ಏರ್ಪಟ್ಟು, ಅವನಿಗೆ ತಾನು ರಾಜಕುಮಾರನಾಗಿ ಹುಟ್ಟಿರುವುದನ್ನೂ ತನಗೆ ರಾಜ್ಯಪ್ರಾಪ್ತ್ಯುಪಾಯಗಳನ್ನೂ ಪ್ರಿಯವಾದ ರಾಜ್ಯಪ್ರಾಪ್ತಿಯನ್ನೂ ತಿಳಿಸಿ, ಒಂದುಸಂದರ್ಭದಲ್ಲಿ ಆ ರಾಜನಿಗೂ, ಆ ರಾಜಕುಮಾರನಿಗೂ ಪರಸ್ಪರ ಸಂಶ್ಲೇಷಾಕಾಂಕ್ಷೆಯನ್ನುಂಟುಮಾಡಿ, ಅದನ್ನು ಸಂಘಟನೆ ಮಾಡುತ್ತಾರೆ

ಆಚಾರ್ಯೋಪದೇಶ – ಇದೇ ರೀತಿಯಲ್ಲಿ ಆಚಾರ್ಯರು ಇವನಿಗೆ, "**ನಾಯಂದೇವೋನಮರ್ತ್ಯೋ ವಾ** ಇತ್ಯಾದಿ – ಇವನು ದೇವನಲ್ಲ, ಮನುಷ್ಯನಲ್ಲ, ಚತುಷ್ಪಾಜ್ಜಂತುವೂ ಅಲ್ಲ, ಸ್ಥಾವರವೂ ಅಲ್ಲ, ಇವನು ಜ್ಞಾನಾನಂದಸ್ವರೂಪನು, ಇದರಿಂದ ಸ್ವಾಭಾವಿಕವಾದ ಇವನ ಜ್ಞಾನಾನಂದ ಶೇಷ ಸ್ವರೂಪಗಳು ಭಗವಂತ್ಕೈಂಕರ್ಯಕ್ಕೆ ಯೋಗ್ಯವೆಂದೂ, **ದಾಸಭೂತಾಃ ಇತ್ಯಾದಿ** ಎಲ್ಲಾ ಜೀವರುಗಳೂ ಪರಮಾತ್ಮನಿಗೆ ಸ್ವತಃ ದಾಸರು, ಎಂದೂ ಪ್ರಮಾಣ ಪುರಸ್ಸರವಾಗಿ ತಿಳಿಸಿ, **ಪೊಂಗೋದಮ್‌ಶೂಳ್ನ್‌ದ** - ಸಮುದ್ರದಿಂದ ಸುತ್ತುವರಿದ, **ಭುವನಿಯುಮ್** - ಭೂಲೋಕವೂ (ಇದು ಲೀಲಾ ವಿಭೂತಿಗೆ ಉಪಲಕ್ಷಣ) **ವಿಣ್ಣುಲುಗುಮ್** - ನಿತ್ಯವಿಭೂತಿಯೂ **ಅಂಗಾದುಮ್ ಶೋರಾಮೇ** ಇವುಗಳಲ್ಲಿ ಏಕದೇಶವನ್ನೂ ಬಿಡದೆ, **ಆಳ್‌ಹಿನ್ರ**–ನಿಯಮಿಸುವ **ಶೆಂಗೋಲುಡೈಯ** ಆಜ್ಞಾಚಕ್ರದಿಂದ ಕೂಡಿದ ಶ್ರಿಯಃ ಪತಿಯಾದ ನಾರಾಯಣನೊಡನೆ ಶರೀರ ಸಂಬಂಧವನ್ನು ತಿಳಿಸುತ್ತಾರೆ, ಅಂದರೆ ಭಗವಂತನಿಗೂ ಇವನಿಗೂ ಉಂಟಾದ ಶರೀರಾತ್ಮಭಾವ ಸಂಬಂಧವನ್ನು ತಿಳಿಸುತ್ತಾರೆ. ಅನಂತರ ತತ್ಪ್ರಾಪ್ತ್ಯುಪಾಯಂಗಳಿಲೇ ಮುಯನ್ರು ಆ ಭಗವಂತನನ್ನು ಹೊಂದಲು ಉಪಾಯಗಳಾದ ಭಕ್ತಿಪ್ರಪತ್ತಿಗಳಲ್ಲೊಂದರಲ್ಲಿ ಉದ್ಯುಕ್ತನಾಗುವಂತೆ ಜ್ಞಾನೋಪದೇಶವನ್ನು ಮಾಡುತ್ತಾರೆ. ಅದರಿಂದ ಇವನಿಗೆ ಲಭಿಸುವ ಪುರುಷಾರ್ಥವೇ ತಮಗೂ ನಿತ್ಯವಿಭೂತಿಯಾದಪರಮಪದವನ್ನೂ, ಲೀಲಾವಿಭೂತಿಯಾದ ಪ್ರಕೃತಿಮಂಡಲವನ್ನೂ ಅಂದರೆ ಉಭಯ ವಿಭೂತಿಗಳನ್ನೂ ಆಳುವ ಆಧಿಪತ್ಯವೆಂದು ಸಂತೋಷಪಡುತ್ತಾರೆ.

ಆಚಾರ್ಯಕೃತ್ಯ

ಅದಡಿಯಾಹ ಅನ್ರೀನ್ರ ಕನ್ರುಕ್ಕಿರಂಗುಮಾಪ್ಪೋಲೇ ಇತ್ಯಾದಿ - ಆ ಸಂತೋಷವೇ ಕಾರಣವಾಗಿ ಆವತ್ತು ಹಾಕಿದ ಕರುವಿನಲ್ಲಿ ವಾತ್ಸಲ್ಯದಿಂದ ಅದಕ್ಕೆ ಹಾಲನ್ನು ಕುಡಿಸುವ ಹಸುವಿನ ಹಾಗೆ, ಪ್ರಯೋಜ

ತೀರವೇಣುಮೆನ್ರು ಮಿಹುದಿಕುರ್ಮೈವರಚ್ಚುರಕ್ಕುಂ ಪಾಶುರಂಗಳೈಕ್ಕೊಂಡು, "ತತ್ತ್ವೇನ ಯಶ್ಚಿದಚಿದೀಶ್ವರ ತತ್ಸ್ವಭಾವ," ಇತ್ಯಾದಿಗಳಿರ್ಪಡಿಯೇ ಈಶ್ವರನುಡೈಯುವುಂ ಈಶಿತವ್ಯಂಗಳುಡೈಯುವುಂ ಸ್ವರೂಪ ಸ್ವಭಾವ ಸಂಬಂಧಗಳುಂ ಭೋಗಾಪವರ್ಗಂಗಳುಂ ತ್ಯಾಜ್ಯೋಪಾದೇಯಂಗಳಾನವಿವತ್ತಿನುಡೈಯುಉಪಾಯಂಗಳುಮ್ ಇವತ್ತಿನ್ ಗತಿಪ್ರಕಾರಂಗಳುಂ, ಉಕ್ತಾನುಕ್ತಂಗಳಾನ ಮೋಕ್ಷ ವಿರೋಧಿಹಳುಮಾಹಿರ ಇವ್ವರ್ಥಂಗಳ್ ಮುಮುಕ್ಷುವಾನ ಇವ್ವಾತ್ಮಾವುಕ್ಕು ಜ್ಞಾತವ್ಯಙ್ಗಳ್. ಇವ್ವರ್ಥಂಗಳೆಲ್ಲಾ ಮಧ್ಯಾತ್ಮ ವಿಷಯ ಶಬ್ದರಾಶಿಯಿಲ್ ಸಾರತಮಮಾನ ರಹಸ್ಯತ್ರಯತ್ತಿಲೇ ಪ್ರತಿತಂತ್ರಸಾರೋದ್ಧಾರೇಣ ಸಂಗ್ರಹಿಕ್ಕಪಡುಹಿರದು.

ನಾಂತರಗಳನ್ನು ಅಪೇಕ್ಷಿಸದೆ, ಆಚಾರ್ಯರು ಚೇತನನಿಗೆ ಕೇವಲ ವಾತ್ಸಲ್ಯದಿಂದ, ಜ್ಞಾನ ಸಂಶಯ ವಿಪರ್ಯಯ (ವ್ಯತ್ಯಾಸ) ಗಳು ತೀರುವಂತೆ **(ಮಿಹುದಿಕುರ್ಮೈವರ)** ಅನಪೇಕ್ಷಿತ ವಿಸ್ತರವೂ ಅಪೇಕ್ಷಿತ ಸಂಕೋಚವೂ ಇಲ್ಲದಂತೆ, ರಸವತ್ತಾಗಿ ಉಪದೇಶಿಸುತ್ತಾರೆ. ಅದಾಗಿ **ಶುರಕ್ಕುಂಪಾಶುರಂಗಳ್** - ಹಸುವು ಕರುವಿಗೆ ಅಜೀರ್ಣವಾಗದೆಯೂ, ರುಚಿಯಾಗಿಯೂ ಹಾಲುಕೊಡುವಂತೆ, ಆಚಾರ್ಯರುಗಳ ಶ್ರೀಸೂಕ್ತಿಗಳನ್ನು ಕೊಂಡು ಸುಲಭವಾಗಿ ತತ್ತ್ವಾರ್ಥಗಳನ್ನು ತಿಳಿಸುತ್ತಾರೆಂಬುದು ವಿವಕ್ಷಿತ. (1) **ತತ್ತ್ವೇನಯಶ್ಚಿದ ಚಿದೀಶ್ವರ ತತ್ಸ್ವಭಾವ,** ಇತ್ಯಾದಿ ಶ್ರೀಸೂಕ್ತಿಗಳಲ್ಲಿ ಹೇಳಿರುವ ಪ್ರಕಾರ, ಈಶ್ವರನ ಮತ್ತು ಈಶಿತವ್ಯಗಳ (ರಕ್ಷ್ಯವಸ್ತುಗಳ) ಸ್ವರೂಪ ಸ್ವಭಾವ ಸಂಬಂಧಗಳೂ, ಭೋಗಮೋಕ್ಷಗಳೂ, ಭೋಗೋಪಾಯವನ್ನು ಬಿಡುವ ರೀತಿಯೂ, ಮೋಕ್ಷೋಪಾಯ ಪರಿಗ್ರಹ ಪ್ರಕಾರವೂ, ಅವುಗಳನ್ನು ಪಡೆಯಲು ಜೀವನು ಹೋಗುವ ಧೂಮಮಾರ್ಗ ಅರ್ಚಿರಾದಿಮಾರ್ಗಗಳೂ, ಹೇಳಿಯೂ ಹೇಳದೆಯೂ ಇರುವ, ಮೋಕ್ಷವಿರೋಧಿಗಳಾದ ಅನೇಕ ವಿಷಯಗಳೂ, ಮೋಕ್ಷದಲ್ಲಿ ಅಭಿಲಾಷೆಯುಳ್ಳ ಈ ಚೇತನನು ತಿಳಿಯಬೇಕಾದುವು. ಈ ವಿಷಯಗಳೆಲ್ಲಾ (**ಅಧ್ಯಾತ್ಮ ವಿಷಯ ಶಬ್ದರಾಶಿಯಿಲ್**) ಜೀವಾತ್ಮ ಪರಮಾತ್ಮತತ್ತ್ವಗಳನ್ನು ನಿರೂಪಿಸುವ ಶಬ್ದ ಪ್ರಮಾಣ ಸಮುದಾಯಗಳ ಸಾರತಮಗಳಾದ ಅಷ್ಟಾಕ್ಷರ, ದ್ವಯ ಚರಮಶ್ಲೋಕವೆಂಬ ರಹಸ್ಯತ್ರಯಗಳಲ್ಲಿ ವಿಶಿಷ್ಟಾದ್ವೈತಿಗಳಿಗೇ (**ಪ್ರಧಾನಪ್ರತಿತಂತ್ರ**) ಅಸಾಧಾರಣವಾದ ಅರ್ಥಗಳ ಸಾರಗಳಾಗಿ ತೋರಿಸಲ್ಪಟ್ಟು ಸಂಗ್ರಹಿಸಲ್ಪಟ್ಟಿವೆ.

ಇದರಿಂದ ಕೆಲವರು ಶ್ರೀಭಾಷ್ಯಾದಿ ವೇದಾಂತಗಳಿಗಿಂತ, ರಹಸ್ಯತ್ರಯ ಸಾರಾದಿ ಔಪದೇಶಿಕ ಅರ್ಥಗಳು ಭಿನ್ನಪ್ರಸ್ಥಾನಗಳು ಎಂದು ಹೇಳುವುದು ಅನುಚಿತವೆಂಬುದು ಸೂಚಿಸಲ್ಪಟ್ಟಿತು. ಶಾರೀರಕಾದಿ ಗ್ರಂಥ ನಿರೂಪಿತವಾದ ಬ್ರಹ್ಮವಿದ್ಯೆಯನ್ನು ತನ್ನ ಅಧಿಕಾರಾನುರೂಪವಾಗಿ ಮುಮುಕ್ಷುವಾದವನು ಅನುಷ್ಠಿಸಲು, ಅಸ್ಖಲಿತವಾದ ಔಪದೇಶ ಪರಂಪರಾನುಗತವಾದ ರಹಸ್ಯತ್ರಯಗಳ ಸಾರಾರ್ಥಗಳು ಅನುಗ್ರಾಹಕಗಳು, ಅದಕ್ಕೋಸ್ಕರ ರಹಸ್ಯತ್ರಯಶಾಸ್ತ್ರಾರಂಭವೆಂಬುದು ಘಟ್ಟ ತಾತ್ಪರ್ಯ.

ಈ ಅಧಿಕಾರದಲ್ಲಿ ನಿರೂಪಿಸಿದ ಪ್ರಕಾರ ಸ್ವತಃ ಅಸತ್ಕಲ್ಪನಾದ ಜೀವನಿಗೆ ಮುಕ್ತೈಶ್ವರ್ಯ ಪರ್ಯಂತ ಲಾಭವು ಖಂಡಿತ ಸಿಗುತ್ತದೆಯೆಂದು, ಸಂತೋಷದಿಂದ **"ತಿರುವುಡನ್ವಂದ"** ಎಂದಾರಂಭಿಸಿ ಹಾಡುತ್ತಾರೆ.

1] ತತ್ತ್ವೇನ ಯಶ್ಚಿದಚಿದೀಶ್ವರ ತತ್ಸ್ವಭಾವ ಭೋಗಾಪವರ್ಗ ತದುಪಾಯ ಗತೀರುದಾರಃ ।
ಸಂದರ್ಶಯನ್ನಿರಮಿಮೀತ ಪುರಾಣರತ್ನಂ ತಸ್ಮೈ ನಮೋ ಮುನಿವರಾಯ ಪರಾಶರಾಯ ॥ [ಆಳವಂ. ಸ್ತೋ. 4]

ಪರಾಶರಮಹರ್ಷಿಗಳು ಚೇತನ, ಅಚೇತನ, ಈಶ್ವರನೆಂಬ ಮೂರು ತತ್ತ್ವಗಳನ್ನೂ, ಭೋಕ್ತೃತ್ವ ಭೋಗ್ಯತ್ವ ಈಶಿತೃತ್ವ ಎಂಬ ಅವುಗಳ ಸ್ವಭಾವಗಳನ್ನೂ, ಭೋಗ - ಇಹಲೌಕಿಕ ಸುಖ, ಅಪವರ್ಗ - ಮೋಕ್ಷ, ತದುಪಾಯ - ಅವುಗಳನ್ನು ಪಡೆಯುವ ಉಪಾಯ, ಗತೀಃ - ಜೀವನು ಹೋಗುವ ಧೂಮಾದಿಮಾರ್ಗ, ಅರ್ಚಿರಾದಿಮಾರ್ಗಗಳು, ಇವನ್ನೂ ತತ್ತ್ವೇನ ಸಂದರ್ಶಯನ್ - ಚೆನ್ನಾಗಿ ಯಥಾರ್ಥವಾಗಿ ತಿಳಿಸಿ, ಪುರಾಣರತ್ನಂ ಎಂದು ಹೇಳಲ್ಪಡುವ ವಿಷ್ಣುಪುರಾಣವನ್ನು ಯಃ ನಿರಮಿಮೀತ - ನಿರ್ಮಿಸಿದರೋ, ಆ ಮುನಿಶ್ರೇಷ್ಠರಿಗೆ ನಮಸ್ಕಾರ.

ತಿರುವುಡನ್‌ವಂದ ಶ್ಕ್ರುಮಣಿಪೋಲ್ ತಿರುಮಾಲಿದಯಂ ।
ಮರುವಿಡವೆನ್ನಮಲರಡಿ ಶೂಡುಂ ವಹೈ ಪೆರುನಾಂ ॥
ಕರುವುಡನ್‌ವನ್ದ ಕಡುವಿನೈಯಾತ್ರಿಲ್ ವಿಳ್ರುನ್ದೊಳ್ರುಕಾ ।
ದರುವುಡನೈನ್ದರಿವಾರರುಳ್ ಶೆಯ್ಯವನ್ದನರೇ ॥8॥
ಕರ್ಮ್ಯಾವಿದ್ಯಾದಿಚಕ್ರೇ ಪ್ರತಿಪುರುಷ ಮಿಹಾನಾದಿ ಚಿತ್ರಪ್ರವಾಹೇ ।
ತತ್ತತ್ಕಾಲೇ ವಿಪಕ್ತಿರ್ಭವತಿಹಿ ವಿವಿಧಾ ಸರ್ವಸಿದ್ಧಾಂತ ಸಿದ್ಧಾ ॥

ತಿರುವುಡನ್ - ಲಕ್ಷ್ಮಿಯೊಡನೆ, **ವಂದ** - ಕ್ಷೀರಾಬ್ಧಿಯಲ್ಲಿ ಆವಿರ್ಭವಿಸಿದ **ಶ್ಕ್ರುಮಣಿಪೋಲ್** ಶ್ಲಾಘ್ಯವಾದ ಕೌಸ್ತುಭರತ್ನದ ಹಾಗೆ, **ತಿರುಮಾಲ್** – ಲಕ್ಷಿಯಲ್ಲಿ ವ್ಯಾಮೋಹವನ್ನುಳ್ಳಂಥ ಭಗವಂತನ **ಇದಯಮ್** – ವಕ್ಷಸ್ಥಲವು **ಮರುವಿಡವ್** – ವಾಸಮಾಡಲು ಸುಖಸ್ಥಾನ, **ಎನ್ನ** - ಎಂದು ಹೇಳಬಹುದು, ಎಂಬಂತೆ ಇದ್ದುಕೊಂಡು, (ಜೀವರೂ ತಮಗೆ ಅಧಿಷ್ಠಾನದೇವತೆಯಾದ ಕೌಸ್ತುಭ ರತ್ನದ ಹಾಗೆ, ಭಗವಂತನಿಗೆ ಹೃದ್ಯರು ಎಂದು ತಾತ್ಪರ್ಯ) **ಮಲರಡಿಶೂಡುಂವಹೈ** - ತಾವರೆಪುಷ್ಪದಹಾಗೆ ಇರುವ ಭಗವಂತನ ಪಾದಗಳನ್ನು ಶಿರೋಭೂಷಣವಾಗಿ ಧರಿಸುವಂತೆ, **ಪೆರುನಾವ್** – ಭಾಗ್ಯವನ್ನು ಹೊಂದಿರುವ ನಾವು, ಅಂದರೆ ಪರಮಭೋಗ್ಯವಾದ ಭಗವಂತನ ಪಾದಾರವಿಂದಗಳಲ್ಲಿ ಕೈಂಕರ್ಯಮಾಡಲು ಯೋಗ್ಯತೆಯುಳ್ಳ ನಾವು, **ಕರುವುಡನ್‌ವಂದ** – ಗರ್ಭವಾಸದಿಂದ ಉಂಟಾದ, **ಕಡುವಿನೈಯಾಟ್ರಿಲ್**–ಅನಾದಿಯಾದ ಕ್ರೂರವಾದ ಪಾಪ ಕರ್ಮಗಳ ಪ್ರವಾಹದಲ್ಲಿ, ವಿಳ್ರುಂದೊಳ್ರುಹಾದು – ಬಿದ್ದು ತೇಲಿಹೋಗದೆ, **ಅರುವುಡನ್** – ಸೂಕ್ಷ್ಮವಾದ ಅರ್ಥದೊಡನೆ, ಸೂಕ್ಷ್ಮಗ್ರಾಹಿಗಳಿಗೆ ಬೋಧವಾಗುವ ಶರೀರಾತ್ಮಭಾವ ಸಂಬಂಧದೊಡನೆ, **ಐಂದರಿವಾರ್** ಅರ್ಥಪಂಚಕಗಳನ್ನು ತಿಳಿದ ಆಚಾರ್ಯರುಗಳು – ಸಂಬಂಧ ಜ್ಞಾನದೊಡನೆ ಅರ್ಥಪಂಚಕಜ್ಞಾನವು ಅವಶ್ಯಕ ವೆಂಬುದು ಸೂಚಿತ, – **ಅರುಳ್‌ಶೆಯ್ಯ** – ನಮಗೆ ಕೃಪೆಯಿಂದ ಉಪದೇಶಿಸಲು **ಅವ್ವಂದನರೇ** – ಪ್ರಾಪ್ತ ರಾಗಿದ್ದಾರೆ

ಅನಾದಿಕಾಲದಿಂದ ಸಂಸಾರಿಗಳಾಗಿ ಹುಟ್ಟಿಬರುವ ಬದ್ಧಚೇತನರಿಗೆ ಇಷ್ಟು ಕಾಲ ಲಭಿಸದ ಮೋಕ್ಷವೂ, ತದುಪಾಯ ಪ್ರವೃತ್ತಿಯೂ ಅದಕ್ಕೆ ಕಾರಣವಾದ ಆಚಾರ್ಯ ಪ್ರಾಪ್ತಿಯೂ ಅದಕ್ಕೆ ಕಾರಣವಾದ ಯಾದೃಚ್ಛಿಕ ಸುಕೃತಗಳೂ ಈಗ ಲಭಿಸುತ್ತವೆಯೇ ? ಭಗವಂತನು ಕೇವಲ ತನ್ನ ಸ್ವಾತಂತ್ರ್ಯದಿಂದ, ತನಗೆ ಅತ್ಯಂತ ಪರತಂತ್ರರಾದ ಜೀವರನ್ನು ಮೋಕ್ಷಕ್ಕೆ ಕರೆದೊಯುತ್ತಾನೆಂದು ಹೇಳಬೇಕಲ್ಲವೇ ? ಇಲ್ಲದಿದ್ದರೆ ಪರಮ ಕಾರಣಿಕನು ಇಷ್ಟು ಕಾಲ ಉಪೇಕ್ಷೆ ಮಾಡಿದುದು ಹೇಗೆ ಸಂಗತವಾಗುತ್ತದೆ, ಎಂಬೀ ಸಂಶಯಗಳನ್ನು **"ಕರ್ಮಾವಿದ್ಯಾದಿಚಕ್ರೇ"** ಎಂಬ ಶ್ಲೋಕದಲ್ಲಿ ಆಚಾರ್ಯರು ಪರಿಹರಿಸುತ್ತಾರೆ.

ಕರ್ಮಾವಿದ್ಯಾದಿ ಚಕ್ರೇ – ಕರ್ಮವೆಂದರೆ ಪುಣ್ಯಪಾಪ ರೂಪವಾದ ಅನಾದಿಯಾದಿ ಕರ್ಮ, **ಅವಿದ್ಯಾ** 'ಅನಾತ್ಮನ್ಯಾತ್ಮ ಬುದ್ಧಿರ್ಯಾ' ಎಂಬಂತೆ ದೇಹವೇ ಆತ್ಮಾ, ಎಂಬ ದೇಹಾತ್ಮಭ್ರಾಂತಿ, ಅಸ್ವೇಸ್ವಮಿತಿಯಾಮತಿಃ– ಭಗವಂತನಿಗೆ ಪರತಂತ್ರನಾದ ಜೀವನಲ್ಲಿ ಸ್ವತಂತ್ರತ್ವಭ್ರಾಂತಿ **ಆದಿ** ಶಬ್ದದಿಂದ ವಾಸನಾ, ರುಚಿ, **ಪ್ರಕೃತಿ** ಸಂಬಂಧಗಳು ವಿವಕ್ಷಿತ. ಅದಾಗಿ ಕರ್ಮವಾಸನಾ. ಅದರಿಂದ ಆಯಾಯಾ ಪುಣ್ಯಪಾಪ ರೂಪ ಕರ್ಮಗಳನ್ನು ಮಾಡಲು ಆಸಕ್ತಿ, ಇದಕ್ಕೆ ಕಾರಣ ಪ್ರಕೃತಿ ಸಂಬಂಧ, **ಪ್ರತಿಪುರುಷ ಮಿಹ** – ಪ್ರತಿಯೊಂದು ಜೀವನಿಗೂ, ಈ ಸಂಸಾರ ಚಕ್ರದಲ್ಲಿ, **ಅನಾದಿ ಚಿತ್ರಪ್ರವಾಹೇ** – ಅನಾದಿಯಾದ ವಿಚಿತ್ರವಾದ ಕರ್ಮ ಪ್ರವಾಹದಲ್ಲಿ **ತತ್ತತ್ಕಾಲೇ** - ಕರ್ಮವಿಪಾಕಾನುಗುಣವಾದ ಆಯಾಯಾ ಕಾಲಗಳಲ್ಲಿ, **ವಿಪಕ್ತಿಃ** - ಕರ್ಮಪರಿಪಾಕವು, – ಫಲವನ್ನು ಕೊಡುವ ದಶೆ, ಅದಾಗಿ ಸ್ವರ್ಗ, ನರಕ, ಮೋಕ್ಷ ಮೊದಲಾದ ಫಲಗಳನ್ನು ಕೊಡುವ ದಶೆ, **ಭವತಿಹಿ** - ಉಂಟಾಗುತ್ತದೆಯಲ್ಲವೆ. ಇದು ಲೋಕಾನುಭವಸಿದ್ಧವಾದುದು. **ಪ್ರತಿಪುರುಷಂ** – ಎಂಬದನ್ನು

ತಲ್ಲಬ್ಧ ಸ್ವಾವಕಾಶ ಪ್ರಥಮ ಗುರುಕೃಪಾಗೃಹ್ಯಮಾಣಃ ಕದಾಚಿತ್ ।
ಮುಕ್ತ್ಯೈಶ್ವರ್ಯಾಂತ ಸಂಪನ್ನಿಧಿರಪಿ ಭವಿತಾ ಕಶ್ಚಿದಿತ್ಥಂ ವಿಪಶ್ಚಿತ್ ॥4॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀಮದ್ವೇಂಕಟನಾಥಸ್ಯ ವೇದಾಂತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಉಪೋದ್ಘಾತಾಧಿಕಾರಃ ಪ್ರಥಮಃ

ಶ್ರೀಮತೇ ನಿಗಮಾಂತಮಹಾ ದೇಶಿಕಾಯನಮಃ

ಭವತಿ ಎಂಬ ಪದದೊಡನೆ ಸೇರಿಸಿಯೂ, ಪ್ರತಿಯೊಬ್ಬ ಚೇತನನಿಗೂ ವಿವಿಧವಾದ ವಿಪಾಕವು ಉಂಟಾಗುತ್ತದೆ ಎಂದು ಹೇಳಬಹುದು. **ಹಿ - ಎಂಬುದು** ಅವಧಾರಣಾರ್ಥಕ - ಅಂದರೆ **ಖಂಡಿತವಾಗಿ** ಉಂಟಾಗುತ್ತದೆ ಎಂದರ್ಥ. **ಸರ್ವಸಿದ್ಧಾಂತ ಸಿದ್ಧಾ** – ಚಾರ್ವಾಕರನ್ನು ಬಿಟ್ಟು ಬಾಕಿ **ಎಲ್ಲಾ** ಸಿದ್ಧಾಂತಿಗಳೂ ಸಾಮಗ್ರೀ ಪ್ರವಾಹ ಸಂಬಂಧದಿಂದ ಒಬ್ಬನಿಗೆ ಯಾವಾಗಲೋ ಒಂದು ಸಮಯದಲ್ಲಿ, ಮೋಕ್ಷ ಉಂಟಾಗುತ್ತದೆಯೆಂದು ಅಂಗೀಕರಿಸಿರುವುದರಿಂದ ಈ ಅಂಶವು ಸರ್ವಸಿದ್ಧಾಂತಗಳಲ್ಲಿಯೂ ಪ್ರಸಿದ್ಧವಾಗಿದೆ. **ತತ್ – ತಸ್ಮಾತ್** ಎಂದು ಅರ್ಥ - ಆದಕಾರಣ ಅಂದರೆ ಒಂದು ಕಾಲ ವಿಶೇಷದಲ್ಲಿ ಒಬ್ಬ ಪುರುಷ ವಿಶೇಷನಿಗೆ, ಒಂದು ಕರ್ಮವಿಶೇಷ ಪರಿಪಾಕವು ಉಂಟಾಗುವುದರಿಂದ, **ಲಬ್ಧ** – ಹೊಂದಲ್ಪಟ್ಟ, **ಸ್ವಾವಕಾಶಃ**- ತಾನು ಆ ಚೇತನನನ್ನು ವಿಷಯೀಕರಿಸಲು - ಅನುಗ್ರಹಿಸಲು, ಅವಕಾಶವನ್ನು ಹೊಂದಿದ, (**ಸ್ವಾವಕಾಶ - ಶಬ್ದವು ಕೃಪಾ** ವಿಶೇಷಣ) **ಪ್ರಥಮ ಗುರುಕೃಪಾ ಗೃಹ್ಯಮಾಣಃ**- ಆದಿಗುರುವಾದ ಭಗವಂತನ ಕೃಪೆಯಿಂದ ಜಾಯಮಾನ ದಶೆಯಲ್ಲಿ ಪರಿಗ್ರಹಿಸಲ್ಪಟ್ಟವನಾಗಿ - ಜಾಯಮಾನ ಕಟಾಕ್ಷಕ್ಕೆ ಪಾತ್ರನಾಗಿ ಎಂದರ್ಥ. **ಕದಾಚಿತ್** – ಒಂದಾನೊಂದು ಸಮಯ, **ಮುಕ್ತ್ಯೈಶ್ವರ್ಯಾಂತ ಸಂಪನ್ನಿಧಿಃ**- ಮೋಕ್ಷವೆಂಬ ಐಶ್ವರ್ಯವನ್ನು ಅವಧಿಯಾಗಿಉಳ್ಳ ಅಥವಾ ಮೋಕ್ಷವೆಂಬ ಐಶ್ವರ್ಯವನ್ನು ಫಲವಾಗಿ ಉಳ್ಳಂಥ, **ಸಂಪನ್ನಿಧಿಃ**-, ಸಂಪತ್ತಿಗೆ ಪಾತ್ರನಾಗಿ - ಸಾತ್ವಿಕ ಸಂಭಾಷಣ, ಆಚಾರ್ಯ ಪ್ರಾಪ್ತಿ, ಜ್ಞಾನೋಪದೇಶ, ಉಪಾಯಾನುಷ್ಠಾನವೆಂಬ ಸಂಪತ್ತುಗಳಿಗೆ ಪಾತ್ರನಾಗಿ, **ಅಪಿ** – ಸಂಭಾವನಾರ್ಥ– ಇಂತಹ ಸಂಪತ್ತುಗಳಿಗೆ ಪಾತ್ರನಾಗುವ ಸಂಭಾವನೆಯುಂಟು, ಎಂದರ್ಥ. **ಕಶ್ಚಿತ್** - ಯಾವನೋ ಒಬ್ಬ, ಮಹಾ ಭಾಗ್ಯಶಾಲಿಯು, **ಇತ್ಥಂ ವಿಪಶ್ಚಿತ್ ಭವಿತಾ** – ಹೀಗೆ ಆಚಾರ್ಯಪ್ರಾಪ್ತ ಜ್ಞಾನವಂತನಾಗಿ, ಆಗುತ್ತಾನೆ. **ಕಶ್ಚಿತ್**– ಎಂದು ವಸ್ತು ದೌರ್ಲಭ್ಯ ದ್ಯೋತಕ.

ತಾತ್ಪರ್ಯ : ಪೂರ್ವ ಪೂರ್ವ ಜನ್ಮಗಳಲ್ಲಿ ಮಾಡಿದ ಪುಣ್ಯಪಾಪ ರೂಪ ಕರ್ಮಗಳಿಂದ, ಜೀವನಿಗೆ ಅವಿದ್ಯೆಯು – ಅಂದರೆ ದೇಹವೇ ಆತ್ಮವೆಂದೂ, ಆತ್ಮ – ಸ್ವತಂತ್ರನೆಂದೂ ಅಜ್ಞಾನವು ಉಂಟಾಗುತ್ತದೆ. ಈ ಅಜ್ಞಾನದಿಂದ ಪುನಃ ಪುಣ್ಯಪಾಪ ರೂಪಕರ್ಮಗಳನ್ನು ಮಾಡುತ್ತಾನೆ. ಆ ಕರ್ಮಗಳ ಪರಿಪಾಕವು – ಅಜ್ಞಾನ. ಇದು ಚಕ್ರದ ಹಾಗೆ ಸುತ್ತುತ್ತಿರುತ್ತೆ. ಪ್ರತಿಯೊಂದು ಜೀವನಿಗೂ ಇಂಥಹ ದಶೆಯು ಅನಾದಿಯಾದದ್ದು' ಈ ಕರ್ಮವೂ **ಅದರ** ಪರಿಪಾಕವೂ ವಿಚಿತ್ರವಾದದ್ದು, ಪ್ರತಿ ಜೀವನಿಗೂ ಬೇರೆ ಬೇರೆಯಾದದ್ದು. ಹೀಗಿರುವಾಗ ಈ ಕರ್ಮ ಪ್ರವಾಹದಲ್ಲಿ, ಆಯಾ ಕಾಲದಲ್ಲಿ ಕರ್ಮ ಫಲವನ್ನು ಅನುಭವಿಸುವ ದಶೆಯುಂಟಾಗುತ್ತದೆ. ಇದನ್ನು **ಎಲ್ಲಾ** ಸಿದ್ಧಾಂತಿಗಳೂ (ಚಾರ್ವಾಕನು ವಿನಹ) ಒಪ್ಪಿದ್ದಾರೆ. ಈ ವಿಪಾಕವು ನಾನಾ ಪ್ರಕಾರವಾಗಿರುತ್ತದೆ ಆ ಕರ್ಮ ಪರಂಪರೆಯಲ್ಲಿ, ಯಾದೃಚ್ಛಿಕಸುಕೃತವೆಂದು ಪರಿಗಣಿಸಲ್ಪಡುವ ಒಂದು ಕರ್ಮವೂ ಸೇರಿದ್ದು. ಇದು ಯಾರಿಗೆ, ಯಾವಾಗ ಹೇಗೆ ಉಂಟಾಗುತ್ತದೆ ಎಂಬುದನ್ನು ಹೇಳಲಿಕ್ಕಾಗುವುದಿಲ್ಲ ವಿಚಿತ್ರವಾದ ಕರ್ಮ ಪರಂಪರೆಯ ನಡುವೆ, **ಅಕಸ್ಮಾತ್**, ಉಂಟಾಗತಕ್ಕದ್ದು ಇದು, ಭಗವಂತನ ನಾಮೋಚ್ಚಾರಣೆ – ಇದು ಯಾವ **ಬೆಟ್ಟ**ವೆಂದು ಕೇಳಿದ ದಾರಿಹೋಕನಿಗೆ, ಇದು 'ತಿರುಮಾಲಿರುಂ ಜೋಲೈ ಮಲೈ' ಎಂದು ಬದಿಲು ಹೇಳುವ ಮತ್ತೊಬ್ಬ ದಾರಿಹೋಕನಿಗೆ ಯದೃಚ್ಛೆಯಾಗಿ ಬಂದ ನಾಮೋಚ್ಚಾರಣಾ ಸುಕೃತ. ಈ ಕೋಟಿ ಯಾವುದು ಎಂದು

ಕೇಳಿದವನಿಗೆ ಶ್ರೀರಂಗದ ಕೋಟೆ "ಪೆರಿಯಕೋಯಿಲ್ ಮದಿಳ್ ತಿರುವರಂಗಮ್" ಎಂಬ ಯಾದೃಚ್ಛಿಕವಾದ ಭಗವನ್ನಾಮೋಚ್ಚಾರಣೆ. ಒಂದು ಹಸುವನ್ನು ಹಿಡಿದು ಕಟ್ಟಲು ಅಟ್ಟಿಸಿಕೊಂಡು ಹೋದಾಗ ಅದು ದೇವರಗುಡಿಯನ್ನು ಪ್ರದಕ್ಷಿಣೆ ಮಾಡಿಕೊಂಡು ಓಡಲು ತಾನೂ ಅದನ್ನು ಹಿಂಬಾಲಿಸಿ ಗುಡಿಪ್ರದಕ್ಷಿಣೆ ಮಾಡಿದ ಯಾದೃಚ್ಛಿಕ ಸುಕೃತ ವಿಶೇಷ. ಹೀಗೆಯೇ ಅಜ್ಞಾತವಾದ ಆನುಷಂಗಿಕ ಪ್ರಾಸಂಗಿಕವಾದ ಸುಕೃತಗಳು, ಒಬ್ಬ ಜೀವನಿಗೆ ಅವನ ಕರ್ಮಪರಂಪರೆಯ ಮಧ್ಯೆ ಉಂಟಾಗತಕ್ಕವು ಇದನ್ನು ವ್ಯಾಜ್ಯವಾಗಿಟ್ಟುಕೊಂಡು ಭಗವಂತನು ಮುಂದಿನ ಜನ್ಮ ಪರಂಪರೆಗಳಲ್ಲೊಂದರಲ್ಲಿ ಜಾಯಮಾನ ದಶೆಯಲ್ಲಿ ಕಟಾಕ್ಷಿಸಿ ತನ್ಮೂಲಕ ಸಾತ್ವಿಕ ಬುದ್ಧಿಯನ್ನುಂಟುಮಾಡಿ, ಸಾತ್ವಿಕರುಗಳೊಡನೆ ಸಂಭಾಷಣೆ, ಆಚಾರ್ಯಪ್ರಾಪ್ತಿ ಇತ್ಯಾದಿ ಮೋಕ್ಷಾಂತ ಐಶ್ವರ್ಯವನ್ನು ಹೊಂದಲು ಅವಕಾಶ ಮಾಡಿಕೊಡುತ್ತಾನೆ. ಇದಕ್ಕೆ ಹಿಂದೆಯೇ ಅನಾದಿಯಾದ ಜನ್ಮಪರಂಪರೆಗಳಲ್ಲಿ ಈ ಸುಕೃತವು ಏಕೆ ಲಭಿಸಲಿಲ್ಲ ಎಂದು ಕೇಳಬಹುದು. ಯಾದೃಚ್ಛಿಕಸುಕೃತ ರೂಪವಾದ ಈ ಕರ್ಮವು ಹಿಂದೆ ಸಂಭವಿಸಲಿಲ್ಲವೆಂಬುದೇ ಇದಕ್ಕೆ ಸಮಾಧಾನ ಭಗವಂತನು ಸರ್ವಸ್ವತಂತ್ರನೂ ಪರಮಕಾರುಣಿಕನೂ ಆಗಿದ್ದರೂ, ತನಗೆ ವೈಷಮ್ಯ - ಕೆಲವರಲ್ಲಿ ಪ್ರೀತಿ, ಕೆಲವರಲ್ಲಿ ಆ ಪ್ರೀತಿ ಎಂಬ ವ್ಯತ್ಯಾಸವಿಲ್ಲದಿರುವಿಕೆ, ನೈರ್ಘೃಣ್ಯ - ದಯೆಯಿಲ್ಲದಿರುವುದು, ಎಂಬೀದೋಷಗಳು ಬಾರದಿರುವುದಕ್ಕಾಗಿಯೂ, ತಾನು ವ್ಯವಸ್ಥೆ ಮಾಡಿದ ಶಾಸ್ತ್ರಗಳಿಗೆ ಅಪ್ರಾಮಾಣ್ಯಾದಿ ದೋಷಗಳು ಬಾರದೇ ಇರುವುದಕ್ಕಾಗಿಯೂ ಯಾದೃಚ್ಛಿಕಾದಿ ಸುಕೃತಗಳನ್ನು ವ್ಯಾಜವಾಗಿಟ್ಟುಕೊಂಡೇ ಕಟಾಕ್ಷಿಸತೊಡಗುತ್ತಾನೆಂಬುದು ಸಿದ್ಧಾಂತ. ಹಾಗಾದರೆ ಇದೂ ಭಗವಂತನ ಸಂಕಲ್ಪವೇ ಆಗಿರುವಾಗ ನಾವೇನೂ ಮಾಡಬೇಕಿಲ್ಲವಲ್ಲ, ಅವನೇ ನಮ್ಮನ್ನು ರಕ್ಷಿಸುತ್ತಾನೆಯಲ್ಲವೇ, ಎಂದು ಹೇಳಬಹುದು. ಕರ್ಮಪರಿಪಾಕವು ಸಾಮಾನ್ಯ ಸಂಕಲ್ಪಾಧೀನ. ಎಲ್ಲರಿಗೂ ಸಮ ವಿಶೇಷ ಸಂಕಲ್ಪವು ಜೀವನು ಮಾಡುವ ಯಾದೃಚ್ಛಿಕಾದಿಸುಕೃತಾಧೀನ ಮೇಲೆ ಮೇಲೆ ಸುಕೃತಗಳಲ್ಲಿ ಜೀವನನ್ನು ತೊಡಗಿಸುವುದೂ ಅವನ ಸುಕೃತ ಪರಂಪರಾಧೀನವೇ ಹೊರತು ನಿರ್ಹೇತುಕ ಕೃಪೆಯಿಂದಲ್ಲವೆಂಬುದು ಸಿದ್ಧಾಂತ.

ಇಂಥಹ ಯಾದೃಚ್ಛಿಕ ಸುಕೃತವನ್ನವಲಂಬಿಸಿಯೇ ಭಗವಂತನು ಕಟಾಕ್ಷಿಸತೊಡಗಿ ಮೋಕ್ಷಾಂತವಾದ ಐಶ್ವರ್ಯವನ್ನು ಜೀವನಿಗೆ ಕೊಡುತ್ತಾನೆ. ಆದ್ದರಿಂದ ಎಂಥಹಾ ಪಾಪಿಗೂ ಭಗವದಾಭಿಮುಖ್ಯವನ್ನು ಪಡೆಯುವ ಭಾಗ್ಯವಿದೆ. ಇದು ಯಾವಾಗ ಎಂದರೆ - ನಿರ್ದಿಷ್ಟವಾಗಿ ಹೇಳಲಿಕ್ಕಿಲ್ಲ. ಇದು ಯಾರಿಗೆ ಎಂದರೆ ಕಶ್ಚಿತ್ - ಒಬ್ಬ ಮಹಾ ಭಾಗ್ಯಶಾಲಿಗೆ ಲಭಿಸುತ್ತದೆ.

ಶ್ರೀಮನ್ನಿಗಮಾಂತ ಮಹಾದೇಶಿಕಾನು ಗೃಹೀತವಾದ ಶ್ರೀಮದ್ರಹಸ್ಯತ್ರಯಸಾರದಲ್ಲಿ
ಮೊದಲನೆಯದಾದ ಉಪೋದ್ಘಾತಾಧಿಕಾರಕ್ಕೆ
ಸಾರಚಂದ್ರಿಕಾ ವ್ಯಾಖ್ಯಾನವು ಸಮಾಪ್ತ

ಶ್ರೀಮತೇ ನಾರಾಯಣಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ ।

2. ಸಾರನಿಷ್ಕರ್ಷಾಧಿಕಾರಃ

[ರಹಸ್ಯತ್ರಯತ್ತಿನ್ ಉಪಾದೇಯ ತಮತ್ವಮ್]

ಶ್ರುತಿ ಪಥ ವಿಪರೀತಂ ಕ್ಷ್ವೇಳಕಲ್ಪಂ ಶ್ರುತೌಚ
ಪ್ರಕೃತಿ ಪುರುಷ ಭೋಗ ಪ್ರಾಪಕಾಂಶೋ ನಪಥ್ಯಃ
ತದಿಹ ವಿಬುಧ ಗುಪ್ತಂ ಮೃತ್ಯುಭೀತಾವಿಚಿನ್ವನ್ತ್ಯು
ಪನಿಷದಮೃತಾಬ್ಧೇರುತ್ತಮಂ ಸಾರ ಮಾರ್ಯಾಃ ॥5॥

ಶ್ರೀಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ
ಸಾರಚಂದ್ರಿಕಾ ವ್ಯಾಖ್ಯಾ

ಶ್ರುತಿಪಥವಿಪರೀತಂ, ಇತ್ಯಾದಿ.

ರಹಸ್ಯತ್ರಯವೆಂದುವ್ಯವಹರಿಸಲ್ಪಡುವ, ಅಷ್ಟಾಕ್ಷರ, ದ್ವಯ, ಮತ್ತು ಚರಮಶ್ಲೋಕವೆಂಬ ಮೂರು ಮಂತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಅರ್ಥಗಳೇ ಮುಮುಕ್ಷುವಿಗೆ ತಿಳಿಯಬೇಕಾದವು. ಇವು ಅಧ್ಯಾತ್ಮ ವಿಷಯಶಬ್ದರಾಶಿಯಲ್ಲಿ ಸಾರತಮವಾದುವು ಅಸಾರಗಳಾದ ಬಾಹ್ಯಕುದೃಷ್ಟಿ ಶಾಸ್ತ್ರಗಳೂ, ಐಹಿಕಫಲವನ್ನೂ ಆಮುಷ್ಮಿಕ ಸ್ವರ್ಗ, ಕೈವಲ್ಯಾದಿಫಲಗಳನ್ನೂ ನಿರೂಪಿಸುವ ಶಾಸ್ತ್ರಗಳೂ, ಅಲ್ಪಸಾರಗಳೂ, ಸಾರ, ಸಾರತರಗಳೂ ಆದರೂ ತ್ಯಾಜ್ಯಗಳೆಂದು ನಿರೂಪಿಸುವವರಾಗಿ ರಹಸ್ಯತ್ರಯ ಸಾರಾರ್ಥವೇ ಸಾರತಮವೆಂದು ಹೇಳಿ ಈ ಅಧಿಕಾರಾರ್ಥವನ್ನು ಶ್ಲೋಕರೂಪವಾಗಿ ಆಚಾರ್ಯರು ಸಂಗ್ರಹಿಸುತ್ತಾರೆ.

ಶ್ರುತಿಪಥವಿಪರೀತಂ – ಸಾಂಖ್ಯಾದಿ ಬಾಹ್ಯಕುದೃಷ್ಟಿ ಶಾಸ್ತ್ರಗಳು ವೇದಮಾರ್ಗಕ್ಕೆ ವಿಪರೀತವಾದುವು, ಅಂದರೆ ವೇದದಲ್ಲಿ ಹೇಳಿರುವ ಆತ್ಮಕ್ಷೇಮ ಸಾಧನಕ್ಕೆ ವಿಪರೀತವಾದುವು. **ಕ್ಷ್ವೇಳಕಲ್ಪಂ** – ವಿಷ ಸದೃಶವಾದುವು. ಇಷ್ಟಸಾಧನವಲ್ಲವು, ಹಾಗೆಯೇ ಅನಿಷ್ಟವನ್ನು ತರಬಲ್ಲವು, ಎಂದರ್ಥ. **ಶ್ರುತೌಚ** – ನಿತ್ಯ ನಿರ್ದೋಷವಾದ ಶ್ರುತಿಯಲ್ಲಿಯೂ **ಪ್ರಕೃತಿಪುರುಷಭೋಗ**– ಪ್ರಕೃತಿಭೋಗ - ಅಂದರೆ ಪಶು, ಅನ್ನ, ವೃಷ್ಟಿ - ಗೋಸಮೃದ್ಧಿ, ಆಹಾರ, ಮಳೆ ಇತ್ಯಾದಿ ಐಹಿಕಫಲಗಳನ್ನು **ಪ್ರಾಪಕಾಂಶಃ** – ಸಾಧಿಸಿ ಕೊಡುವ ಭಾಗಗಳೂ, **ಪುರುಷಭೋಗ** – ಕೇವಲಾತ್ಮಾನುಭವ, **ಪ್ರಾಪಕಾಂಶಃ** – ಸಾಧಿಸಿಕೊಡುವ ಭಾಗಗಳೂ, **ನಪಥ್ಯಃ** –– ಸದ್ಯದಲ್ಲಿ ಪ್ರಿಯವಾಗಿದ್ದರೂ ಉದರ್ಕದಲ್ಲಿ ಅಂದರೆ ಅಲ್ಪಾಸ್ಥಿರತ್ವಾದಿಫಲಗಳಿಂದ ಕೂಡಿರುವುದರಿಂದ ಭವಿಷ್ಯದಲ್ಲಿ ದುಃಖಹೇತುವಾದುವು. ಇದರಿಂದ ಶ್ರುತಿಗಳಲ್ಲಿಯೂ ಕೆಲವುಭಾಗಗಳು ಮುಮುಕ್ಷುವಿಗೆ ತ್ಯಾಜ್ಯವಾದುವು, ಎಂದು ಹೇಳಲ್ಪಟ್ಟಿತು. **ತತ್** – ತಸ್ಮಾತ್ – ಆದಕಾರಣ, ಅಂದರೆ ವೇದ ವಿಪರೀತ ಶಾಸ್ತ್ರಗಳೂ, ವೇದೈಕದೇಶಶಾಸ್ತ್ರಗಳೂ ದುಃಖ ಸಾಧನವಾಗಿರುವುದರಿಂದ, **ವಿಬುಧಗುಪ್ತಂ** – ತಿರುಕ್ಕೋಟ್ಟಿಯೂರ್‌ನಂಬಿ ಮೊದಲಾದ ಪೂರ್ವಾಚಾರ್ಯರುಗಳಿಂದ ರಕ್ಷಿಸಲ್ಪಟ್ಟ **ಉಪನಿಷದಮೃತಾಬ್ಧೇಃ** – ಉಪನಿಷತ್ತೆಂಬ ಅಮೃತ ಸಮುದ್ರದ, **ಉತ್ತಮಂಸಾರಂ** – ಸಾರವಾದ ಅಂಶಗಳಲ್ಲಿಯೂ ಉತ್ತಮವಾದುದನ್ನು, **ಮೃತ್ಯುಭೀತಾಃ** – ಮರಣಕ್ಕೆ ಹೆದರಿದ, **ಆರ್ಯಾಃ** – ಸಾರಾಸಾರವಿವೇಕ ಉಳ್ಳವರು **ವಿಚಿನ್ವಂತಿ** – ಹುಡುಕುತ್ತಾರೆ.

ಈ ಶ್ಲೋಕದಲ್ಲಿ, ಶಾಸ್ತ್ರಸಾಮಾನ್ಯವು ಸಮುದ್ರವೆಂದು ರೂಪಿತವಾಗಿದೆ. ಅದರಲ್ಲಿ ಸಾಂಖ್ಯ, ಸೌಗತಚಾರ್ವಾಕ, ಕುದೃಷ್ಟಿ (ಅದ್ವೈತ) ಮತಗಳು ಸಮುದ್ರದಿಂದ ಉಂಟಾದ ವಿಷಕ್ಕೆ ಸಮಾನ. ಪ್ರಕೃತಿ ಭೋಗ - ಐಹಿಕ ಸುಖ, ಸ್ವರ್ಗಸುಖ ಮೊದಲಾದುವೂ, ಹಾಗೆಯೇ ಪುರುಷಭೋಗವೆಂಬ ಕೇವಲ ಆತ್ಮಾನು ಭವವೂ, ಸಮುದ್ರದಿಂದುಂಟಾದ ಸುರಾದಿಸ್ಥಾನೀಯಗಳು. ಉಪನಿಷತ್ತುಗಳು ಅಮೃತಸ್ಥಾನತುಲ್ಯ ಆ ಉಪ ನಿಷತ್ತುಗಳೆಂಬ ಸಮುದ್ರದಲ್ಲಿ ಅಮೃತಕ್ಕಿಂತಲೂ ಸಾರವಾದ ಮಹಾಲಕ್ಷ್ಮಿಯಂತೆ, ರಹಸ್ಯತ್ರಯಗಳ ಸಾರಾರ್ಥ ಗಳು ಉತ್ತಮವಾದ ಸಾರಾಂಶಗಳು. ವೇದಾಂತ ಭಾಗಗಳಲ್ಲಿಯೂ ರಹಸ್ಯತ್ರಯಗಳ ಸಾರಾಂಶಗಳು ಉತ್ತಮೋತ್ತಮವೆಂದರ್ಥ

ಇಲ್ಲಿ, ಸಾಕ್ಷಾತ್ ಪುರುಷಾರ್ಥಕ್ಕೆ ಉಪಾಯಗಳಾದ ಭಗವದಾಪ್ತವರ್ಗ ಮಂತ್ರಗಳನೇಕವಿವೆ ಅವುಗಳಲ್ಲಿ ಶ್ರೀಮದಷ್ಟಾಕ್ಷರ, ದ್ವಯ, ಚರಮಶ್ಲೋಕಗಳನ್ನು ಮಾತ್ರ ಆರಿಸಿಕೊಂಡು ಅವುಗಳಿಗೆ ವ್ಯಾಖ್ಯಾನ ವನ್ನು ಬರೆಯುವ ಉದ್ದೇಶವೇನೆಂಬ ಆಕಾಂಕ್ಷೆಯು ಉಂಟಾಗುತ್ತದೆ. ಅಹಿರ್ಬುಧ್ನ್ಯಾದಿ ಸಂಹಿತೆಗಳಲ್ಲಿ ವ್ಯಾಪಕಮಂತ್ರಗಳು ಅನೇಕ, ವ್ಯಾಖ್ಯಾನ ಮಾಡಲ್ಪಟ್ಟವೆ ಅಂಥಹ ವ್ಯಾಪಕಮಂತ್ರಾಂತರಗಳಿಗಿಂತ ಅಷ್ಟಾಕ್ಷರಕ್ಕೆ ಪ್ರಾಧಾನ್ಯವೇನು ಹಾಗೆಯೇ ಅಹಿರ್ಬುಧ್ನ್ಯಾದಿ ಸಂಹಿತೆಗಳಲ್ಲಿ ಪ್ರಪತ್ತಿಗೆ ಬೇಕಾದ ಕರಣಮಂತ್ರಗಳನೇಕ, ಹೇಳಲ್ಪಟ್ಟಿದ್ದರೂ, ದ್ವಯಮಂತ್ರಕ್ಕೆ ಏನು ಪ್ರಾಶಸ್ತ್ಯ. ಹಾಗೆಯೇ ರಾಮಚರಮಶ್ಲೋಕ ವರಾಹಚರಮ ಶ್ಲೋಕ ಇತ್ಯಾದ್ಯನೇಕ ಪ್ರಪತ್ತಿ ವಿಧಾಯಕ ಮಂತ್ರಗಳಿಗಿಂತ, ಗೀತಾಚರಮಶ್ಲೋಕಕ್ಕೆ ಪ್ರಾಶಸ್ತ್ಯ ವೇನು, ಪೂರ್ವಾಚಾರ್ಯರುಗಳು ವಿಶೇಷವಾಗಿ ಈ ಮಂತ್ರಗಳನ್ನು ಆದರಿಸಿರುವುದಕ್ಕೆ ಕಾರಣವೇನು ಎಂಬ ಶಂಕೆಗೆ ಸಮಾಧಾನವೇನೆಂದರೆ

1 ಶ್ರೀಮದಷ್ಟಾಕ್ಷರ ಮಂತ್ರವು, ಪ್ರಧಾನ ಪ್ರತಿತಂತ್ರವಾದ ವ್ಯಾಪ್ಯ, ವ್ಯಾಪಕ ಸರ್ವತತ್ತ್ವಗಳನ್ನು ಅಂದರೆ ಚೇತನಾಚೇತನಗಳನ್ನು ನಾರಾಯಣನು ವ್ಯಾಪಿಸಿರುವನೆಂದು ಸ್ಪಷ್ಟವಾಗಿ ಹೇಳಿರುವುದಲ್ಲದೆ, ಉಪಾಯೋ ಪೇಯ ಭಾವಗಳನ್ನು ಹೇಳಿರುವ ಅಯನ ಶಬ್ದವನ್ನೊಳಗೊಂಡು, ಹಾಗೆಯೇ ದೇವತಾಂತರ ವ್ಯಾವರ್ತಕವಾದ ನಾರಾಯಣಶಬ್ದವನ್ನು ಮುಕ್ತಕಂಠವಾಗಿ ಹೇಳಿರುವುದರಿಂದಲೂ, ಶೇಷ ಶೇಷಿಭಾವ ಸಂಬಂಧವನ್ನೊಳಗೊಂಡ ಪ್ರಣವಯುಕ್ತವಾಗಿರುವುದರಿಂದಲೂ, ಶರಣಾಗತಿ ಸೂಚಕ ನಮಶ್ಶಬ್ದದಿಂದ ಕೂಡಿರುವುದರಿಂದಲೂ ಪ್ರಧಾನ.

2. ಪ್ರಪತ್ತಿ ಮಂತ್ರಾಂತರಗಳು ಇದ್ದರೂ, ಸಾಂಗಪ್ರಪದನರೂಪ ಪರಮಸೂಕ್ಷ್ಮಾರ್ಥಾಂಶಗಳಲ್ಲಿ ವಿಶದ ಪಾದಜ್ಞಾನವಿಲ್ಲದವರೂ, ಸಮುದಾಯ ಜ್ಞಾನಪೂರ್ವಕವಾಗಿ ದ್ವಯಮಂತ್ರದ ಸಕೃದುಕ್ತಿರೂಪ ಉಕ್ತಿನಿಷ್ಠೆ ಯನ್ನು ಅನುಷ್ಠಿಸಿದರೂ ಸಾಕು, ಪ್ರಪದನಾನುಷ್ಠಾನವು ಪೂರ್ತಿಹೊಂದುತ್ತದೆಯೆಂಬ, ಅಭಿಪ್ರಾಯದಿಂದ "ಸಕೃದುಚ್ಚಾರಃ ಸಂಸಾರತಾರಕಂ ಭವತಿ", ಎಂದು ಕಠಶ್ರುತಿಯಲ್ಲಿ ದ್ವಯಮಂತ್ರವನ್ನು ವಿಶೇಷವಾಗಿ ವಿಧಿ ಸಿದೆ. ಹಾಗೆಯೇ ಉಪಾಯೋಪೇಯಭೂತರಾದ ಶರಣ್ಯದಂಪತಿಗಳನ್ನೂ, ಅಂಗಾಂಗಿಗಳನ್ನೂ ಕಂಠೋಕ್ತವಾಗಿ ಹೇಳಿರುವುದರಿಂದ ದ್ವಯಮಂತ್ರಕ್ಕೆ ವಿಶೇಷವಾದ ಆದರ. **ನಮ್ಮಾಳ್ವಾರ್ ಪ್ರಭೃತಿಗಳು** ಈ ಮಂತ್ರವನ್ನೇ "ಅಹಲಹಿಲ್ಲೇನ್" ಎಂಬ ಪಾಶುರದಲ್ಲಿ ವಿಶೇಷವಾಗಿ ಆದರಿಸಿರುತ್ತಾರೆ. ಭಗವದ್ರಾಮಾನುಜರು "ಯೇನಕೇ ನಾಪಿ ಪ್ರಕಾರೇಣದ್ವಯ ವಕ್ತಾ ತ್ವಂ", ಎಂದು ಈ ಮಂತ್ರವನ್ನೇ ವಿಶೇಷವಾಗಿ ಆದರಿಸಿರುತ್ತಾರೆ. ಶ್ರೀ ಮನ್ನಿಗಮಾಂತ ಮಹಾದೇಶಿಕರೂ "ನದ್ವಯಾದೇಷಕತಃ ಕ್ಷೇಮಕರಣಮ್" ಎಂದು ಪೂರ್ವಾಚಾರ್ಯರುಗಳನ್ನು ಹಿಂಬಾಲಿಸಿಯೇ ಈ ಮಂತ್ರಕ್ಕೆ ವಿಶೇಷ ಆದರವನ್ನು ಕೊಟ್ಟಿದ್ದಾರೆ. ಆದ್ದರಿಂದ ದ್ವಯಮಂತ್ರಕ್ಕೆ ಪ್ರಾಶಸ್ತ್ಯವು ಅಧಿಕ.

ಇನ್ದ ರಹಸ್ಯತ್ರಯತ್ತಿಲ್ ತಿರುಮಂತ್ರಮ್ (೧) "ಸರ್ವಮಷ್ಟಾಕ್ಷರಾಂತಸ್ಥಮ್" ಎನ್ಗಿರ ಪಡಿಯೇ ತನ್ನರ್ಥತ್ತೈಯರಿಯವೆಲ್ಲಾ ವರ್ಥಙ್ಗಳೈಯುಂ ಮರಿನ್ದು ತರುಂಬಡಿಯಾಯಿರುಕ್ಕೈಯಾಲುಮ್, ಚರಮಶ್ಲೋಕಮ್ (೨) "ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂ ಶರಣಂವ್ರಜ" ಎನ್ರು ತಾನ್ ಶೊಲ್ಲು ಹಿರ ಉಪಾಯ ಮೊನ್ರೈಯುಮೇ ಅವಲಂಬಿಕ್ಕ ಸರ್ವೋಪಾಯ ಫಲಸಿದ್ಧಿಯುಂಡಾಮೆನ್ರು ಸ್ಥಾಪಿಕ್ಕೈಯಾಲುಂ, ದ್ವಯಮುಮ್ ಕಠ ಶ್ರುತ್ಯಾದಿಹಳಿಲ್ ಶೊಲ್ಲುಹಿರಪಡಿಯೇ ತನ್ನೈಯೊರು ಕ್ಕಾಲುಚ್ಚರಿತ್ತವನ್ನೈ ಸರ್ವಪ್ರಕಾರತ್ತಾಲುಂ ಕೃತಕೃತ್ಯನಾಕ್ಕವಲ್ಲ ಪ್ರಭಾವತ್ತೈ ಯುಡೈತ್ತಾ ಯಿರುಕ್ಕೈ ಯಾಲುಮ್ ರಹಸ್ಯತ್ರಯಮೇ ಮುಮುಕ್ಷುಕ್ಕಳುಕ್ಕಾದರಣೀಯಮ್.

---

೧ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನ ಮುಖಾರವಿಂದದಿಂದ ಹೊರಟುಬಂದ ಸರ್ವಧರ್ಮಾನ್ ಪರಿತ್ಯಜ್ಯ" ಎಂಬ ಚರಮ ಶ್ಲೋಕಕ್ಕೆ ಪ್ರಾಧಾನ್ಯ ಹೆಚ್ಚು. ಕಾರಣ ಇದು ಶರಣಾಗತಿಯನ್ನು ವಿಧಿಸುತ್ತದೆ. ಶರಣಾಗತಿ ವಿಧಯಕ ವಾಕ್ಯ ಎಂದರ್ಥ ಮೇಲೂ ಅನಂತ ಮಹಾಪಾಪಗಳೂ ಶರಣಾಗತಿಯಿಂದ ತೊಲಗುತ್ತವೆ ಎಂದು ಕಂಠೋಕ್ತವಾಗಿ ಹೇಳಿರುವುದರಿಂದಲೂ, ಯಾವ ವಿಧವಾದ ಶೋಕವೂ ನಿನಗೆ ಬೇಡ, ನಿನ್ನನ್ನು ಸರ್ವಪಾಪಗಳಿಂದ ಬಿಡಿಸಿ ಮೋಕ್ಷವನ್ನು ಕೊಡುತ್ತೇನೆಂದು ನೈರ್ಭರ್ಯವನ್ನು ಹೇಳಿ, ಇದು ಪರಮರಹಸ್ಯವಾದ ಅರ್ಥ ಎಂದು ಮುಂದೆ "ಇದಂತೇನಾತಪಸ್ಕಾಯ" ಎಂದಾರಂಭಿಸಿ ಇದರ ಪ್ರಾಶಸ್ತ್ಯವನ್ನು ಹೇಳಿರುವುದ ರಿಂದಲೂ ಬಾಕಿ ಚರಮ ಶ್ಲೋಕಗಳಲ್ಲಿ ಈ ಅಂಶಗಳು ಕಂಠೋಕ್ತವಾಗಿ ಹೇಳಲ್ಪಡದೇ ಇರುವುದರಿಂದಲೂ, ಗೀತಾಚರಮಶ್ಲೋಕವು ಪರಮೋಪಾದೇಯ. ವಿರೋಧ ಪರಿಹಾರ ಗ್ರಂಥದಲ್ಲಿ ಈ ಅಂಶಗಳು ನಿರೂಪಿತವಾಗಿವೆ.

ಈ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆಚಾರ್ಯರು, **ಇಂದರಹಸ್ಯತ್ರಯತ್ತಿಲ್,** **ಎಂದಾರಂಭಿಸುತ್ತಾರೆ.** ಅದಾಗಿ

ಈ ರಹಸ್ಯತ್ರಯದಲ್ಲಿ, ತಿರುಮಂತ್ರವೆಂದು ವ್ಯಪದೇಶಿಸಲ್ಪಡುವ ಶ್ರೀಮದಷ್ಟಾಕ್ಷರವು,(1) "ಸರ್ವ ಮಷ್ಟಾಕ್ಷರಾಂತಸ್ಥಂ, **ಎಂಬಂತೆ** ತನ್ನ **ಅರ್ಥವನ್ನು** ತಿಳಿದರೆ, **ಎಲ್ಲಾ** ಅರ್ಥಗಳನ್ನೂ ತಿಳಿಸುವಂತೆ ಇದೆ ಚರಮಶ್ಲೋಕವು, "ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂ ಶರಣಂವ್ರಜ" ಎಂದು ಹೇಳಲ್ಪಡುವ ಉಪಾಯ ವೊಂದನ್ನೇ ಅವಲಂಬಿಸಿದರೆ, ಬೇರೆ ಎಲ್ಲಾ ಉಪಾಯಗಳನ್ನೂ ಅವಲಂಬಿಸಿದರೆ ಉಂಟಾಗುವ ಸಿದ್ಧಿ ಉಂಟೆಂದು ಸ್ಥಾಪಿಸುತ್ತದೆ. ದ್ವಯಮಂತ್ರವು ಕಠಶ್ರುತ್ಯಾದಿಗಳಲ್ಲಿ ಹೇಳಲ್ಪಡುವಂತೆ, ತನ್ನನ್ನು ಒಂದು ಸಲ ಉಚ್ಚಾರ ಮಾಡಿದವರನ್ನು, ಸರ್ವಪ್ರಕಾರದಲ್ಲಿಯೂ ಕೃತಕೃತ್ಯನಾಗಿ ಮಾಡಬಲ್ಲ ವೈಭವವನ್ನುಳ್ಳದಾಗಿದೆ. ಆದ ಕಾರಣ ಗಳಿಂದ ರಹಸ್ರತ್ರಯಗಳೇ, ಮೋಕ್ಷದಲ್ಲಿ ಅಭಿರುಚಿಯುಳ್ಳವರಿಗೆ ಆದರಣೀಯವಾದುವು. ಹೀಗೆ 'ರಹಸ್ಯತ್ರಯ' ಗಳೇ ಸಾರತಮವಾದುವು ಎಂದು ಹೇಳಬಹುದೇಕೆ "ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶು

---

1. ತ್ರಯೋವೇದಾಃಷಡಂಗಾನಿ ಛಂದಾಸಿ ವಿವಿಧಾಃ ಸ್ವರಾಃ ।
ಸರ್ವಮಷ್ಟಾಕ್ಷರಾಂತಸ್ಥಂ ಯಚ್ಚಾನ್ಯದಪಿ ವಾಙ್ಮಯಮ್ ॥1॥ ನಾರದೀಯಕಲ್ಪ [1–95

ಋಚೋಯಜೂಗ್ಂಷಿ ಸಾಮಾನಿ ತಥೈವಾಥರ್ವಣಾನಿಚ ।
ಸರ್ವಮಷ್ಟಾಕ್ಷರಾಂತಸ್ಥಂ ಯಚ್ಚಾನ್ಯದಪಿವಾಙ್ಮಯಮ್ ॥ [ಹಾರೀತಸ್ಮೃತಿ [3 - 6೮]

ನಾಲ್ಕುವೇದಗಳೂ, ಆರು ಅಂಗಗಳೂ. ಛಂದಸ್ಸು, ಸ್ವರ, ಹಾಗೆಯೇ ಎಲ್ಲಾ ಶಬ್ದರಾಶಿಗಳೂ, ಅವುಗಳ ಮೂಲ್ಕ ತಿಳಿಯಬೇಕಾದ ಅಂಶಗಳೆಲ್ಲಾ ಅಷ್ಟಾಕ್ಷರದಲ್ಲಿ ಪ್ರತಿಪಾದ್ಯಗಳಾಗಿವೆ. [ತ್ರಯೋವೇದಾಃ - ಎಂದು ಮೂರುವೇದಗಳನ್ನು ಹೇಳಿರುವುದು ನಾಲ್ಕನೆಯ ವೇದವನ್ನು ಉಪಲಕ್ಷಣವಾಗಿ ಸೂಚಿಸುತ್ತದೆ.]

ಸಾರತಮಾರ್ಥ :- ಅಸಾರಮಲ್ಪಸಾರಂಚ ಸಾರಂ ಸಾರತರಂ ತ್ಯಜೇತ್ ।
ಭಜೇತ್ ಸಾರತಮಂ ಶಾಸ್ತ್ರೇರತ್ನಾಕರ ಇವಾಮೃತಮ್ ॥

ಮೋಕ್ಷ ಮೋಕ್ಷೋಪಾಯಗಳಿಗೆ ಶಬ್ದಪ್ರಾಮಾಣ್ಯ

ಪರಮ ಪುರುಷಾರ್ಥಮುಮ್ ತದುಪಾಯಮುಮ್ ಪ್ರತ್ಯಕ್ಷಾದಿ ಪ್ರಮಾಣಂಗಳಾಲರಿಯ ವೊಣ್ಣಾದ ಪಡಿಯಾಲೇ ಇವತ್ತಿರ್ಕ್ಕು (1)"ಶಾಸ್ತ್ರಾದ್ವೇದಿ ಜನಾರ್ದನಂ," (2) "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾ ಕಾರ್ಯ ವ್ಯವಸ್ಥಿತೌ" (3)"ಶಬ್ದಬ್ರಹ್ಮಣಿನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ" ಎನ್ರುಂ ಶೊಲ್ಲುಹಿರಪಡಿಯೇ ಶಬ್ದಮೇ ಪ್ರಮಾಣಮ್

ಪತಂತಥಾ ।" ಎಂದು **ಸಾಂಖ್ಯಾದಿಶಾಸ್ತ್ರ**ಗಳನ್ನೂ ವೇದಗಳೊಡನೆ ಸೇರಿಸಿ ಮಹಾಭಾರತದಲ್ಲಿ ಹೇಳಿರುವುದರಿಂದ ಅವುಗಳೂ ಅಂಗೀಕರಿಸಲ್ಪಡ **ತಕ್ಕವುಗಳಲ್ಲವೇ** ಇತ್ಯಾದಿ ಸಂದೇಹಗಳಿಗೆ **"ಅಸಾರಮಲ್ಪಸಾರಂಚ"** ಎಂದಾರಂಭಿಸುವ **ಕಾರಿಕೆಯಿಂದ** ಸಮಾಧಾನವನ್ನು ಆಚಾರ್ಯರು ಹೇಳುತ್ತಾರೆ ಈ ಕಾರಿಕೆಯನ್ನು ಪ್ರಮಾಣವಚನವಾಗಿ ಶ್ರೀದೇಶಿಕರು ಎತ್ತಿದ್ದಾರೆ ಕೆಲವರು ಇದು ಶ್ರೀದೇಶಿಕರ ವಚನವೆಂದು ಹೇಳುತ್ತಾರೆ. ಆದರೆ ದೀಪಿಕಾ, ಪ್ರಕಾಶಿಕಾ, ವ್ಯಾಖ್ಯಾನಕಾರರು ಇದನ್ನು ಪ್ರಮಾಣವಚನವೆಂದೂ, ಶ್ರೀದೇಶಿಕರ ವಾಕ್ಯವಲ್ಲವೆಂದೂ ಹೇಳುತ್ತಾರೆ. ಇಂಜಿಮೇಡು ಅಳಗಿಯಶಿಂಗರೂ ಸಹ ಇದನ್ನು ಅನುಮೋದಿಸಿರುತ್ತಾರೆ. ಇದೇ ಸಂಪ್ರದಾಯವೆಂಬುದು ಹಿರಿಯರ ಮಾತು.

ಅಸಾರಂ – ವೇದಬ್ರಾಹ್ಯ ಶಾಸ್ತ್ರಗಳು ಸಾರವಿಲ್ಲದವು. ಇಲ್ಲಿ ಶಾಸ್ತ್ರ ಶಬ್ದವು ವೇದ, ಅದನ್ನು ಅನುಸರಿಸಿರುವ, ಮತ್ತು ಅದಕ್ಕೆ ವಿರುದ್ಧವಾದ ಸರ್ವಶಾಸ್ತ್ರಗಳನ್ನೂ ಹೇಳುತ್ತದೆ. ಈ ಶ್ಲೋಕವ್ಯಾಖ್ಯಾನದಲ್ಲಿ ಶ್ರೀ ದೇಶಿಕರು **"ಬಾಹ್ಯಕುದೃಷ್ಟಿಶಾಸ್ತ್ರಂಗಳ್"** ಎಂದು ವೇದಬಾಹ್ಯಗ್ರಂಥಗಳನ್ನೂ ಶಾಸ್ತ್ರವೆಂದು ವ್ಯವಹರಿಸಿರುವುದು ಗಮನಾರ್ಹ. ಶಾಸ್ತ್ರವೆಂಬುದು ಶಬ್ದಾರ್ಥಗಳಿಂದ ಕೂಡಿದ ಗ್ರಂಥರಾಶಿಯನ್ನು ಹೇಳುತ್ತದೆ. ಮೇಲೂ **"ರತ್ನಾಕರ ಇವಾಮೃತಮ್"** ಎಂಬ ದೃಷ್ಟಾಂತದ ಪ್ರಕಾರ, ವೇದ ವಿರುದ್ಧ ಮತ್ತು ವೇದ ಪರಿಗೃಹೀತ ಸರ್ವ ಶಾಸ್ತ್ರಗಳೂ ಇಲ್ಲಿ ವಿವಕ್ಷಿತವಾಗಿ ಅವುಗಳಲ್ಲಿ **ಸಾರಾಸಾರವಿವೇಚನೆಯ**ನ್ನು ಆಚಾರ್ಯರು **ಎತ್ತಿ** ತೋರಿಸುವ ಪ್ರಕರಣವಾದ್ದರಿಂದ, **ಅಸಾರ** ಪದಕ್ಕೆ ವೇದ ವಿರುದ್ಧ ಶಾಸ್ತ್ರಗಳೇ ಉದ್ದೇಶ್ಯ. **"ಶ್ರುತಿಪಥವಿಪರೀತಂಕ್ಷ್ವೇಳಕಲ್ಪಂ"** ಎಂಬ ಶ್ಲೋಕಾಂಶವೂ ಆಗ್ಗೆ ಸಮಂಜಸವಾಗುತ್ತದೆ. ಆದ್ದರಿಂದ, **ಅಸಾರಂ** – ಎಂಬುದಕ್ಕೆ ವೇದಪರಿಗೃಹೀತವಾದ ಐಹಿಕಫಲ ಪ್ರತಿಪಾದನಪರಶಾಸ್ತ್ರಗಳೆಂದು ಕೆಲವರು **ಅರ್ಥ**ಮಾಡುವುದು ಸರಿಯಲ್ಲ. **ಅಲ್ಪಸಾರಂಚ** ಐಹಿಕಫಲವನ್ನು ನಿರೂಪಿಸುವ ವೇದಭಾಗಗಳು, **ಸಾರಂ,** – ಆಮುಷ್ಮಿಕಸ್ವರ್ಗಾದಿಫಲಗಳನ್ನು ನಿರೂಪಿಸುವ ವೇದಭಾಗಗಳು, **ಸಾರತರಂ** – ಆತ್ಮತತ್ತ್ವಪ್ರಾಪ್ತಿಯನ್ನು ನಿರೂಪಿಸುವ **ಅಂದರೆ** ಕೈವಲ್ಯ **ಲೋಕಾದಿಪ್ರಾಪ್ತಿ** ಪ್ರತಿಪಾದಕವಾದ ವೇದಭಾಗಗಳು, ಇವೆಲ್ಲವನ್ನೂ **ತ್ಯಜೇತ್** – ಬಿಡಬೇಕು. ವೇದಾಖ್ಯಶಾಸ್ತ್ರಗಳ ಅಂತ್ಯಭಾಗಗಳಲ್ಲಿ **ಅಂದರೆ** ಉಪನಿಷತ್ತುಗಳಲ್ಲಿ ಪ್ರತಿಪಾದಿಸುವ **ಸಾರತಮಂಶಾಸ್ತ್ರಂ** – ಸಾರತಮವಾದ ಪರಮಾತ್ಮ ತತ್ತ್ವಪ್ರಾಪ್ತಿಸಾಧಕವಾದ ಶಾಸ್ತ್ರಗಳನ್ನು **ರತ್ನಾಕರೇ** – ಸಮುದ್ರದಲ್ಲಿ **ಅಮೃತಮಿವ** – ಅಮೃತದ ಹಾಗೆ **ಭಜೇತ್** – ಪರಿಗ್ರಹಿಸಬೇಕು.

ಮೋಕ್ಷ, ಮೋಕ್ಷೋಪಾಯಗಳ ತಿಳುವಳಿಕೆಗೆ ಶಾಸ್ತ್ರವೇ ಪ್ರಮಾಣ

ಈ ಶ್ಲೋಕಕ್ಕೆ ಆಚಾರ್ಯಸಾರ್ವಭೌಮರು, **ಪರಮ ಪುರುಷಾರ್ಥಮುಮ್ ತದುಪಾಯಮುಮ್** ಎಂದಾರಂಭಿಸಿ ತಾವೇ ವ್ಯಾಖ್ಯಾನ ಮಾಡುತ್ತಾರೆ. ಅದ್ದಾಗಿ,

---

(1), (2), (3) -51 ಪು. ಟಿ. ನೋ.

ಇನ್ವಿಡತ್ತಿಲ್(4) "ಅನಂತಪಾರಂ ಬಹುವೇದಿತವ್ಯಮಲ್ಪಶ್ಚ ಕಾಲೋಬಹವಶ್ಚ ವಿಘ್ನಾಃ ।
ಯತ್ಸಾರಭೂತಂ ತದುಪಾದದೀತ ಹಂಸೋಯಥಾಕ್ಷೀರ ಮಿವಾಂಬು ಮಿಶ್ರಮ್ ||"
ಎನ್ಗಿರಶ್ಲೋಕತ್ತಿಲ್ "ಸಾರಭೂತ" ಮೆನ್ಗಿರಪದತ್ತಾಲೇ ಪ್ರತಿಪನ್ನ ಮಾನ ನಿರುಪಾಧಿಕ ಸಾರತ್ತೈ ವಿಷಯೀಕರಿಕ್ಕಿರ ಸಾರತಮ ಶಬ್ದಮುಪಾದೇಯಮಾಮ್.

ಅಸಾರವಿಷಯಮಾಮ್

ಬಾಹ್ಯಕುದೃಷ್ಟಿ ಶಾಸ್ತ್ರಙ್ಗಳ್ ಅತ್ಯನ್ತಾಸಾರಙ್ಗಳಾಹೈಯಾಲೇಯನುಪಾದೇಯಙ್ಗಳ್ ||

ಪರಮಪುರುಷಾರ್ಥವೂ, ತದುಪಾಯವೂ ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳಿಂದ ತಿಳಿಯ್ಯಲಾಗದೆ ಇರುವುದರಿಂದ, ಇವುಗಳನ್ನು, (1) **ಶಾಸ್ತ್ರಾದ್ವೇದ್ಮಿ ಜನಾರ್ದನಂ,** ಎಂದೂ (2) **ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾ ಕಾರ್ಯ ವ್ಯವಸ್ಥಿತೌ ।** ಎಂದೂ (3) **ಶಬ್ದಬ್ರಹ್ಮಣಿ ನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ ।,** ಎಂದೂ ಹೇಳುವ ರೀತಿಯಲ್ಲಿ ಶಬ್ದವೇ (ವೇದಾಂತ ಶಾಸ್ತ್ರಗಳೇ) ಪ್ರಮಾಣ – ಅಂದರೆ ಇವು ವೇದಾಂತ ಶಾಸ್ತ್ರಗಳಿಂದಲೇ ತಿಳಿಯತಕ್ಕವು,

ಅಸಾರ ಮಲ್ಪಸಾರ ಶ್ಲೋಕ ವ್ಯಾಖ್ಯಾನ

ಇಂಥಹ ವೇದರೂಪ ಶಾಸ್ತ್ರದಲ್ಲಿ, (4)"ಅನಂತಪಾರಂ ಬಹುವೇದಿತವ್ಯಂ ಅಲ್ಪಶ್ಚಕಾಲೋ ಬಹವಶ್ಚ ವಿಘ್ನಾಃ । ಯತ್ ಸಾರಭೂತಂತದುಪಾದದೀತ ಹಂಸೋಯಥಾಕ್ಷೀರಮಿವಾಂಬು ಮಿಶ್ರಂ" ||, ಎಂಬ ಶ್ಲೋಕದಲ್ಲಿ

---

1) ಮಾಯಾಂನ ಸೇವೇ ಭದ್ರಂತೇನ ವೃಥಾ ಧರ್ಮಮಾಚರೇ ।
ಶುದ್ಧಭಾವಂಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾರ್ದನಮ್ ॥ (ಭಾರತ 68–5)

ಸಂಜಯನು ಧೃತರಾಷ್ಟ್ರನಿಗೆ ಹೇಳುವ ಮಾತು -

ನಾನು ಕಪಟಿಯಲ್ಲ, ನಿನಗೆ ಮಂಗಳವಾಗಲಿ, ಧರ್ಮಗಳನ್ನು ವ್ಯರ್ಥವಾಗಿ ಆಚರಿಸುವುದಿಲ್ಲ. ಮನಸ್ಸು ಶುದ್ಧವಾಗಿ, ಭಕ್ತಿಯಿಂದ ಭಗವಂತನನ್ನು ಶಾಸ್ತ್ರಗಳ ಮೂಲಕ ತಿಳಿಯುತ್ತೇನೆ

2) ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥ (ಗೀತೆ 16 - 24)

ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಹೇಳುವ ಮಾತು - ಮಾಡತಕ್ಕದದು ಇದು, ಮಾಡಕೂಡದು ಇದು. ಎಂಬ ವ್ಯವಸ್ಥೆಗೆ ಶಾಸ್ತ್ರವನ್ನು ಆಧಾರವಾಗಿಟ್ಟುಕೊಳ್ಳಬೇಕು ಶಾಸ್ತ್ರಚೋದಿತವಾದ ಕರ್ಮಗಳನ್ನು ತಿಳಿದುಕೊಂಡು ಶಾಸ್ತ್ರಚೋದಿತ ರೀತಿಯಲ್ಲಿ ಮಾಡಬೇಕು

3) ದ್ವೇಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂಚಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ ॥ (ಭಾರ ಶಾನ್ತಿ 276 - 2)

ಶಬ್ದಬ್ರಹ್ಮ - ಆಗಮಗಳಿಂದ ತಿಳಿಯತಕ್ಕಜ್ಞಾನ. ಪರಂಬ್ರಹ್ಮ - ಉಪಾಸನಾತ್ಮಕ ಜ್ಞಾನ. 'ಶಬ್ದಬ್ರಹ್ಮಾಗ ಮಮಯಂ ಪರಂಬ್ರಹ್ಮ ವಿವೇಕಜಮ್, ಎಂದು ಮುಂದೆ ವಿವರಿಸಿದ್ದಾರೆ. ಆದರ ಪ್ರಕಾರ ವೇದ ಶಾಸ್ತ್ರಗಳಲ್ಲಿ ನಿಷ್ಣಾತನಾದವನು, ಉಪಸನಾತ್ಮಕ ಜ್ಞಾನವನ್ನು ಹೊಂದುತ್ತಾನೆ. ಭಕ್ತಿ ಪ್ರಪತ್ತಿರೂಪ ಜ್ಞಾನವನ್ನು ಪಡೆದು ಭಗವಂತನನ್ನು ಸಾಕ್ಷಾತ್ಕರಿಸುತ್ತಾನೆಂದರ್ಥ ಪ್ರತ್ಯಕ್ಷಾನುಮಾನಗಳಿಂದ ಭಗವಂತನನ್ನು ತಿಳಿಯಲಾಗುವುದಿಲ್ಲ ಶಾಸ್ತ್ರದಿಂದಲೇ ತಿಳಿಯತಕ್ಕದ್ದು.

4. **ಉತ್ತರಗೀತೆ (3-10)** ಮೋಕ್ಷಾರ್ಥವಾಗಿ ತಿಳಿಯಬೇಕಾದ ಸ್ತೋಪ ಬೃಂಹಣ ವೇದಾಂತ ಭಾಗಗಳು, ಎಲ್ಲೆ ಇಲ್ಲದೆ ಅನಿಶ್ಚಿತವಾಗಿವೆ, ಬಹಳವೂ ಆಗಿವೆ, ನಮ್ಮ ಆಯುಃ ಕಾಲ ಬಹಳ ಕಡಿಮೆ. ವಿಘ್ನಗಳೂ ಬಹಳ, ಆದ್ದರಿಂದ ಹಂಸವು ನೀರಿನಿಂದ ಮಿಶ್ರವಾದ ಹಾಲನ್ನು, ನೀರನ್ನು ಬಿಟ್ಟು ಕುಡಿಯುವಂತೆ, ಸಾರವಾದ ವಿಷಯಗಳನ್ನು ಮಾತ್ರ ಪರಿಗ್ರಹಿಸಬೇಕು ಅಸಾರ ಅಲ್ಪಸಾರ ವಿಷಯಗಳು, ಇವು ಎಂದು ವಿವೇಕಿಸಿ, ಸಾರ ಮಾತ್ರ ವಿಷಯವನ್ನು ಗ್ರಹಿಸಬೇಕು ಎಂದರ್ಥ.

ಅಲ್ಪಸಾರವಿಷಯಮ್

ವೇದತ್ತಿಲ್ ಪೂರ್ವಭಾಗತ್ತಿಲ್ ಐಹಿಕ ಫಲ ಸಾಧನ ಕರ್ಮ ಪ್ರತಿಪಾದಕ ಮಾನ ಪ್ರದೇಶಮ್ ಅಲ್ಪಸಾರಮಾಹೈಯಾಲೇ ಅನುಪಾದೇಯಮ್. ಆಮುಷ್ಮಿಕ ಫಲಪ್ರತಿಪಾದಕಾಂಶಮ್, ಐಹಿಕ ಫಲತ್ತಿರ್ಕ್ಕಾಟ್ಟಿಲತಿಶಯಿತ ಫಲತ್ತೈಯುಡೈತ್ತಾಹೈಯಾಲೇ ಶಿಲರ್ಕ್ಕು ಸಾರಮೆನ್ನಲಾಯಿರುನ್ದದೇಯಾಹಿಲುಮ್ ದುಃಖಮೂಲತ್ವಾದಿ ದೋಷದುಷ್ಟ ಮಾಹೈಯಾಲೇಯನುಪಾದೇಯಮ್.

ಸಾರತರಮ್

ಆತ್ಮ ತತ್ಪ್ರಾಪ್ತಿ, ತತ್ಸಾಧನ ಮಾತ್ರತ್ತೈ ಪ್ರತಿಪಾದಿಕ್ಕುಂ ಅಂಶಮುಂ ಸಾರತರಮಾಯಿರುನ್ದದೇ ಯಾಹಿಲುಮ್ ಅದಿಲುಮತ್ಯಂತಾತಿಶಯಿತಮಾನ ಪರಮಾತ್ಮಾನುಭವ ಸಾಪೇಕ್ಷರ್ಕ್ಕು ಅನುಪಾದೇಯಮ್.

ಸಾರಭೂತಂ, ಎಂಬ ಪದದಿಂದ ತಿಳಿಯಲ್ಪಡುವುದು ನಿರುಪಾಧಿಕ ಸಾರವೆಂಬುದು – ಅಂದರೆ ಸಾರತಮವಾದದ್ದು ಅದನ್ನು ನಾವು ಗ್ರಹಿಸಬೇಕು. ವೇದ ಬಾಹ್ಯ ಸಾಂಖ್ಯ ಬೌದ್ಧ ಚಾರ್ವಾಕಾದಿ ಕುದೃಷ್ಟಿ (ಶಾಂಕರ) ಗ್ರಂಥಗಳು ಅತ್ಯಂತ ಅಸಾರಗಳು. ಆದ್ದರಿಂದ ಅವು ನಮಗೆ ಉಪಾದೇಯವಲ್ಲ. "ಯಾವೇದ ಬಾಹ್ಯಾಸ್ಸ್ಮೃತಯಃ ಯಾಶ್ಚಕಾಶ್ಚ ಕುದೃಷ್ಟಯಃ । ತಾಸ್ಸರ್ವಾಃ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾಹಿತಾಃಸ್ಮೃತಾಃ" ‖ ಎಂಬ ವಚನದಂತೆ ವೇದವನ್ನು ಪ್ರಮಾಣವಾಗಿ ಅಂಗೀಕರಿಸದ ಸ್ಮೃತಿಗಳೂ, ಇತಿಹಾಸ ಪುರಾಣಗಳೂ, ಕುತ್ಸಿತ ದೃಷ್ಟಿಯಿಂದ ಬರೆಯಲ್ಪಟ್ಟ ಸ್ಮೃತೀತಿಹಾಸ ಪುರಾಣಗಳೂ, ಮರಣಾನಂತರ ಜೀವನಿಗೆ ಯಾವ ಸುಖ ಫಲವನ್ನೂ ಕೊಡುವುದಿಲ್ಲ ಅವು ತಮೋಗುಣದಿಂದ ಬರೆಯಲ್ಪಟ್ಟವು. ಆತ್ಮ ನಾಶಕರ "ಪ್ರೇತಾನ್ ಭೂತಗಣಾಂಶ್ಚೈವ ಯಜಂತೇ ತಾಮಸಾಜನಾಃ"– ಎಂಬ ಗೀತಾವಚನದಂತೆ ತಾಮಸ ಪ್ರಕೃತಿಗಳು ಪ್ರೇತಗಳನ್ನೂ, ಭೂತಗಣಗಳನ್ನೂ (ರುದ್ರಪಾರ್ಷದಾದಿಗಳನ್ನೂ) ಆರಾಧಿಸುತ್ತಾರೆ. ಇದರ ಫಲವು ದುಃಖಪ್ರಾಯ. ಅತ್ಯಲ್ಪ ಸುಖವನ್ನು ಜೀವಿತ ದಶೆಯಲ್ಲಿ ಕೊಡುತ್ತದೆ. "ಅಧರ್ಮಂ ಧರ್ಮಮಿತಿಯಾ ಮನ್ಯತೇ ತಮಸಾಽವೃತಾ । ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಸ್ಸಾಪಾರ್ಥ ತಾಮಸೀ ‖" – ಅಧರ್ಮವನ್ನೇ ಧರ್ಮವನ್ನಾಗಿಯೂ ಸರ್ವ ವಿಷಯಗಳನ್ನೂ ವಿಪರೀತವಾಗಿಯೂ ಗ್ರಹಿಸುವುದು ತಾಮಸವಾದ ಬುದ್ಧಿ ಆದ್ದರಿಂದ ತಾಮಸ ಪುರಾಣಗಳು ತಾಮಸ ಪ್ರಕೃತಿಗಳಿಂದ ಬರೆಯಲ್ಪಟ್ಟವು. ಅವುಗಳು ಅಸಾರವಾದುವು. ಸರ್ವಥಾತ್ಯಾಜ್ಯ.

ವೇದತ್ತಿಲ್ ಪೂರ್ವಭಾಗತ್ತಿಲ್ ಇತ್ಯಾದಿ ವೇದಗಳ ಪೂರ್ವಭಾಗಗಳಲ್ಲಿ ಐಹಿಕಫಲಗಳನ್ನು ತರಬಲ್ಲ ಕರ್ಮಗಳು, ಅಂದರೆ ಪಶು, ಅನ್ನ, ಮಳೆ, ಮೊದಲಾದವನ್ನು ಕೊಡತಕ್ಕವು, ಅವುಗಳನ್ನು ಪ್ರತಿಪಾದಿಸುವ ಭಾಗಗಳು ಅಲ್ಪಸಾರ– ಅಲ್ಪಪ್ರಯೋಜನಕರವಾದ್ದರಿಂದ, ಅನುಪಾದೇಯ. ಆಮುಷ್ಮಿಕ ಸ್ವರ್ಗಾದಿಫಲಗಳನ್ನು ಕೊಡಬಲ್ಲ ಅಂಶಗಳು ಕೆಲವರಿಗೆ ಸಾರವಾಗಿ ಕಂಡುಬಂದರೂ, ದುಃಖಮೂಲ – ಅಂದರೆ ದುಃಖದಿಂದ – ಅತಿಪ್ರಯಾಸದಿಂದ ಸಂಪಾದಿಸಲ್ಪಟ್ಟು, ದುಃಖಮಿಶ್ರ, ದುಃಖೋದರ್ಕಾದಿ ದೋಷಗಳಿಂದ ಕೂಡಿರುವುದರಿಂದ ಮೋಕ್ಷದಲ್ಲಿ ಆಸೆಯುಳ್ಳವರಿಗೆ ಅನುಪಾದೇಯ. ಐಹಿಕಾಮುಷ್ಮಿಕ (ಸ್ವರ್ಗಾದಿ) ಐಶ್ವರ್ಯಗಳಿಗಿಂತ, ಜ್ಞಾನಾನಂದಮಯನಾದ ಆತ್ಮಾ ವಿಲಕ್ಷಣನಾದುದರಿಂದ, ಅವನನ್ನು ಹೊಂದಲು ಸಾಧನವಾದ ಮಾರ್ಗಗಳನ್ನು ಪ್ರತಿಪಾದಿಸುವ ಅಂಶಗಳು ಸಾರತರಗಳು, ಆ ಕೈವಲ್ಯವೂ ಅನಿತ್ಯ. ಅವುಗಳಿಗಿಂತ ಅತಿಶಯವಾದದ್ದು ಪರಮಾತ್ಮಾನುಭವ. ಆ ಪರಮಾತ್ಮಾನು

ಸಾರತಮಮ್

ಪರಮಾತ್ಮ ತತ್ಪ್ರಾಪ್ತಿ ತದುಪಾಯಙ್ಗಳೈ ವೆಳಿಯಿಡುಮ್ ಪ್ರದೇಶಮ್ ಸಾರತಮಮಾಹೈ ಯಾಲೇ ವಿವೇಕಿಕ್ಕು ಉಪಾದೇಯಮ್. ಅವ್ವಂಶತ್ತಿಲುಂ ಪ್ರಧಾನ ಪ್ರತಿತಂತ್ರಂಗಳಾನ ತತ್ವಹಿತಂಗಳುಡೈಯ ಸಂಗ್ರಹಮಾಹೈಯಾಲೇ ಮಿಹವುಮ್ ಸಾರತಮ ಮಾಯಿರುಕ್ಕುಂ ರಹಸ್ಯತ್ರಯಮ್.

ಆಹೈಯಾಲ್ (1) ಬಹುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯೋ ಮತಿಮಾನ್ನರಃ ।
ಸರ್ವತಸ್ಸಾರ ಮಾದದ್ಯಾತ್ ಪುಷ್ಪೇಭ್ಯ ಇವಷಟ್ಪದಃ ॥

ಎನ್ಗಿರಪಡಿಯೇ ರಹಸ್ಯತ್ರಯಮ್ ಮುಮುಕ್ಷುವಾನ ಇವ್ವಾತ್ಮಾವುಕ್ಕು ಮಿಹವುಮುಪಾದೇಯ ಮಾಹಕ್ಕಡವದು.

ಭವದಲ್ಲಿ ಅಪೇಕ್ಷೆಯುಳ್ಳವರಿಗೆ, ಆ ಕೈವಲ್ಯಾನುಭವ ನಿರೂಪಕಶಾಸ್ತ್ರಗಳು ಅನುಪಾದೇಯ. ಪರಮಾತ್ಮನನ್ನು ಹೊಂದುವುದು, ಹೊಂದಲು ಅನುಷ್ಠಿಸಬೇಕಾದ ಉಪಾಯ, ಇವುಗಳನ್ನು ಪ್ರಕಾಶಪಡಿಸುವ ಭಾಗಗಳು ಸಾರತಮವಾದುದರಿಂದ, **ವಿವೇಕಿಕ್ಕು** – ಇದು ಹೇಯವಾದದ್ದು, ಇದು ಸ್ವೀಕರಿಸತಕ್ಕದ್ದು ಎಂಬ ವಿವೇಚನೆ ಮಾಡಲು ಶಕ್ತನಾದ ಮುಮುಕ್ಷುವಿಗೆ, ಉಪಾದೇಯ. **ಅದರಲ್ಲಿಯೂ**, ಪ್ರಧಾನಪ್ರತಿತಂತ್ರಗಳಾದ ತತ್ತ್ವಹಿತಗಳ ಸಂಗ್ರಹವಾದ ರಹಸ್ಯತ್ರಯವು **ಅತ್ಯಂತಸಾರತಮವಾದದ್ದು** ಆದ್ದರಿಂದ, **ಬಹುಭ್ಯಶ್ಚಮಹದ್ಭ್ಯಶ್ಚ** - ಅನೇಕಗಳಾದ, ಸಾರತಮಗಳಾದ ವೇದಾಂತ ಶಾಸ್ತ್ರಗಳ ಎಲ್ಲಾ ಭಾಗಗಳಲ್ಲಿಯೂ, ಬುದ್ಧಿವಂತನಾದವನು, ಮತ್ತಷ್ಟು ಸಾರವಾದ ವಿಷಯವನ್ನು ಗ್ರಹಿಸಬೇಕು. ಹೇಗೆಂದರೆ ಹೂವುಗಳಿಂದ ದುಂಬಿಯು, ಸಾರವಾದ ಮಕರಂದವನ್ನು ಸ್ವೀಕರಿಸುವಹಾಗೆ, ಸಾರದಲ್ಲಿಯೂ **ಸಾರವಿಷಯ** ಗ್ರಹಣವು **ಅತ್ಯಾವಶ್ಯಕ**. ಈ ರೀತಿಯಲ್ಲಿ ಈ ರಹಸ್ಯತ್ರಯಗಳು ಮೋಕ್ಷದಲ್ಲಿ ಆಸೆಯುಳ್ಳ ಈ ಜೀವಾತ್ಮನಿಗೆ ಅತ್ಯಂತ ಅವಶ್ಯಕವಾದವು.

"ಅಸಾರಮಲ್ಪಸಾರಂಚ....ಇವಾಮೃತಮ್" ಎಂಬ ಶ್ಲೋಕಕ್ಕೆ ಕೆಲವರು ಕೆಳಗೆ ಕಂಡ ರೀತಿಯಲ್ಲಿ ಅರ್ಥಮಾಡಿದ್ದಾರೆ. "ಅದಾಗಿ, 'ರತ್ನಾಕರಇವಾಮೃತಮ್', ಎಂಬ ದೃಷ್ಟಾಂತ ಸ್ವಾರಸ್ಯದಿಂದ, **ಅಸಾರಂ**, ಇತ್ಯಾದಿಗಳು ಒಂದೇ ಶಾಸ್ತ್ರದ ಅಂಶಗಳಾಗಿರಬೇಕು. ಆದ್ದರಿಂದ ವೇದಬಾಹ್ಯಮತಗಳು **ಅಸಾರ** ಶಬ್ದದಿಂದ ಹೇಳಲ್ಪಡುವುದಿಲ್ಲ. ಐಹಿಕಾಮುಷ್ಮಿಕ ಕ್ಷುದ್ರ ಫಲಗಳು ಹೇಳಲ್ಪಡುತ್ತವೆ. **ಅಲ್ಪಸಾರ, ಸಾರ,** ಶಬ್ದಗಳು ಕೈವಲ್ಯ, ಅದಕ್ಕೆ ಸಾಧನವಾದ ಶ್ರುತಿಭಾಗಪರ. **ಸಾರತರ** ಶಬ್ದವು, ಕೈಂಕರ್ಯ ಪರ್ಯಂತ ಪರಿಪೂರ್ಣಭಗವದನುಭವ ಲಕ್ಷಣ **ಮೋಕ್ಷವನ್ನೂ**, ಅದನ್ನು **ಸಾಧಿಸಿಕೊಡುವ**, ತೈತ್ತಿರೀಯದಲ್ಲಿ ಹೇಳಿರುವ ನ್ಯಾಸವಿದ್ಯೆಯನ್ನೂ, ಅಹಿರ್ಬುಧ್ನ್ಯಸಂಹಿತಾದಿ ಪಾಂಚರಾತ್ರಾಗಮಗಳಲ್ಲಿ ನ್ಯಾಸಾಧ್ಯಾಯಗಳಲ್ಲಿ ವಿವರಿಸಲ್ಪಟ್ಟ ನ್ಯಾಸವಿದ್ಯಾಪ್ರತಿಪಾದಕ ಶಾಸ್ತ್ರಾಂಶವನ್ನೂ ತಿಳಿಸುತ್ತದೆ. ಪುರುಷವಿದ್ಯೆಗೆ ಅಂಗವಾಗಿ ಶ್ರುತಿವಿಹಿತವಾದ ನ್ಯಾಸವಿದ್ಯೆಯು ಬೇರೆ. ಆನುಕೂಲ್ಯ ಸಂಕಲ್ಪಾದಿ ಅಂಗಪಂಚಕಗಳಿಂದ ಕೂಡಿದ ತಾಂತ್ರಿಕವಾದ ನ್ಯಾಸವಿದ್ಯೆಯು ಬೇರೆ. ಈ ವೈದಿಕ ತಾಂತ್ರಿಕನ್ಯಾಸವಿದ್ಯೆಗಳೆರಡೂ ಪರಮಶೇಷಿಯಾದ ಭಗವಂತನ ಕೈಂಕರ್ಯ ಪರ್ಯಂತ ಪರಿಪೂರ್ಣ ಬ್ರಹ್ಮಾನುಭವವನ್ನು ಸಾಧಿಸಿಕೊಟ್ಟರೂ, ಆ ಕೈಂಕರ್ಯದಲ್ಲಿ ಸ್ವಾರ್ಥತಾಬುದ್ಧಿಯು ಕೂಡಿರುವುದರಿಂದ, ಪರಮ ಪುರುಷಾರ್ಥ ರೂಪತ್ವವು ಆಗುವುದಿಲ್ಲ. **'ಭಜೇತ್ಸಾರತಮಂ'** ಎಂಬಲ್ಲಿ ಪಾರತಂತ್ರ್ಯ ಸ್ವರೂಪಾನುಸಂಧಾನವನ್ನು ಮಾಡುವವರು, ತನ್ನ ರಕ್ಷಣೆಗೆ ತಾನೇ ಪ್ರವರ್ತಿಸುವುದನ್ನು ಬಿಡುವದೆಂಬ ಉಪಾಯವೂ, ಮೋಕ್ಷಸಾಧನೆಗೆ ಉಪಾಯಪ್ರವೃತ್ತಿಯಾದ್ದರಿಂದ ಅನುಚಿತವಾದದ್ದು. ಆದ್ದರಿಂದ, ಸಿದ್ಧೋಪಾಯಾಧಿಕಾರವಿಶೇಷಣದಲ್ಲಿ, ಐಕರಸ್ಯವಾದ, ಶರಣಾಗತಿಯಲ್ಲಿ ನಿಷ್ಠೆಯಿಂದಿರುವುದೇ

ಸ್ವರೂಪ. ಅವರ ಮನಸ್ಸಿನಲ್ಲಿ ಯಾವ ಪುರುಷಾರ್ಥವೂ ಸ್ವಾರ್ಥವಾಗಿ ಪ್ರಾಪ್ತವಾಗದ ಕಾರಣ, ಪರಮ ಕಾರುಣಿಕನಾದ ಭಗವಂತನೇ, ಪಾರಾರ್ಥ್ಯೈಕರಸವಾದ, ಪರಿಪೂರ್ಣಸ್ವಾನುಭವ ಪರಿವಾಹವಾದ ನಿತ್ಯ ಕೈಂಕರ್ಯ ಸ್ವರೂಪವಾದ, ಪರಮಪುರುಷಾರ್ಥವನ್ನು, ನಿರ್ಹೇತುಕವಾಗಿ ಕೊಡುತ್ತಾನೆ. ಹೀಗೆ ಸರ್ವೇಶ್ವರನ ಸಿದ್ಧೋಪಾಯ ಸ್ವರೂಪವನ್ನು ಈ ರೀತಿಯಲ್ಲಿ ತಿಳಿದುಕೊಂಡು, ತ್ಯಕ್ತೋಪಾಯರಾದ ಮಹಾತ್ಮರಿಗೆ ಸರ್ವೇಶ್ವರನು ತಾನೇ ಪ್ರಕಾಶಿಸುತ್ತಾನೆ. ವಿವೇಕಿಗಳು ಈ ಸಿದ್ಧೋಪಾಯನಿಷ್ಠೆಯನ್ನು ಅವಲಂಬಿಸಬೇಕೆಂಬುದು **ಸಾರತಮಶಾಸ್ತ್ರ** ವಿಷಯ. ತಥಾಚ, ನ್ಯಾಸವು- ವೈದಿಕತಾಂತ್ರಿಕ ರೂಪೇಣ ಎರಡು ಬಗೆಯದು. ಅದಕ್ಕಿಂತ ಬೇರೆಯಾದುದು ಶರಣಾಗತಿ ಶಬ್ದವಾಚ್ಯವಾದ ಸಿದ್ಧೋಪಾಯನಿಷ್ಠೆ", ಈ ಸಿದ್ಧೋಪಾಯ ನಿಷ್ಠೆಯನ್ನು ಕಡೆ ಹಿಡಿದಿರುವವರ ನಿರ್ವಾಹವಿದು.

ಇದಕ್ಕೆ ಸಮಾಧಾನವಾಗಿ ವೇದಾಂತ ರಹಸ್ಯವಿದಗ್ರೇಸರರಾದ ಭಗವದ್ಭಾಷ್ಯಕಾರಾಭಿಪ್ರೇತವಾದ ಸಿದ್ಧಾಂತ ಸಾರವೇನೆಂದರೆ – ಶಾಸ್ತ್ರ ಶಬ್ದಕ್ಕೆ ಗ್ರಂಥರಾಶಿ ಎಂಬುದು ಲಕ್ಷಣ. ಅಸಾರಂ, ಅಲ್ಪಸಾರಂ, ಇತ್ಯಾದಿ ಐದೂ ಶಾಸ್ತ್ರದ ಏಕಾವಯವಗಳು. ವೇದಬಾಹ್ಯಾದಿ ಶಾಸ್ತ್ರಗಳು "ಶಾಸನಾಚ್ಛಾಸ್ತ್ರಮ್" ಎಂಬ ನಿರುಕ್ತ ಪ್ರಕಾರ ಹಿತಪ್ರವರ್ತಕತ್ವ ನಿಮಿತ್ತವನ್ನೊಳಗೊಂಡಿಲ್ಲದೆ ಇರುವುದರಿಂದ, ಶಾಸ್ತ್ರ ಶಬ್ದಾರ್ಥವಾಗಲಾರವು ಎಂದು ಹೇಳಲಿಕ್ಕಿಲ್ಲ. ಗ್ರಂಥರಾಶಿಪರತ್ವವೆಂಬುದು ಶಾಸ್ತ್ರಶಬ್ದಕ್ಕೆ ಲೋಕ ವ್ಯವಹಾರಾನುಗುಣವಾದ ಮಾತು, ವೇದ ಬಾಹ್ಯಾದಿ ಗ್ರಂಥಗಳೂ, ಶಾಸ್ತ್ರ, ಆಗಮ ಇತ್ಯಾದಿ ಶಬ್ದಗಳಿಂದ, ವೈದಿಕ ಲೌಕಿಕರಿಂದ ವ್ಯವಹರಿಸಲ್ಪಡುತ್ತವೆ. ಬೌದ್ಧಾಗಮಃ, ಪಾಶುಪತತಂತ್ರ, ಬಾಹ್ಯಶಾಸ್ತ್ರ ಇತ್ಯಾದಿ ಆಯಾಯಾ ಗ್ರಂಥಗಳನ್ನು ವ್ಯಪದೇಶಿಸಿ ಹೇಳುವುದು ಶಿಷ್ಟರಲ್ಲಿಯೂ ಇದೆ. (1)"ವೇದಶಾಸ್ತ್ರಾವಿರೋಧಿನಾ । ಯಸ್ತರ್ಕೇಣಾನು ಸಂಧತ್ತೇ" ಎಂಬಲ್ಲಿ, ವೇದಾಖ್ಯ ಶಾಸ್ತ್ರವೆಂಬ ಸವಿಶೇಷಣ ಶಬ್ದ ವ್ಯವಹಾರದಿಂದ, ಶಾಸ್ತ್ರ ಶಬ್ದವು ವೇದವಲ್ಲದ ಗ್ರಂಥವನ್ನೂ ತಿಳಿಸುತ್ತದೆಯಲ್ಲವೆ "ವೇದಾಚ್ಛಾಸ್ತ್ರಂ ಪರಂನಾಸ್ತಿ", ಎಂಬಲ್ಲಿಯೂ ಈ ವ್ಯಪದೇಶವು ಕಾಣುತ್ತದೆ. ವೇದಕ್ಕಿಂತ ಉತ್ಕೃಷ್ಟವಾದ ಶಾಸ್ತ್ರವು ಬೇರೆಯಿಲ್ಲ ಎಂಬುದು ಇಲ್ಲಿಯ ತಾತ್ಪರ್ಯ. ವೇದಾತ್, ಪರಂ- ಉತ್ಕೃಷ್ಟಂ ಶಾಸ್ತ್ರಂ ನಾಸ್ತಿ ಎಂದು ಅನ್ವಯವೇ ಹೊರತು, ಬೇರೆಯಾವುದೂ ಶಾಸ್ತ್ರಶಬ್ದವಾಚ್ಯವಾಗಲಾರದು ಎಂದು ಅರ್ಥಮಾಡಬಾರದು' 'ನದೈವಂಕೇಶವಾತ್ಪರಂ" ಎಂಬ ಅನಂತರಪಾದದಲ್ಲಿ ಪರಶಬ್ದವು ಉತ್ಕೃಷ್ಟವಾಚಿಯೇ ಹೊರತು ಕೇಶವನಿಗಿಂತ ಬೇರೆ ದೇವರಿಲ್ಲ ಎಂದಲ್ಲ. ಇದೇ ರೀತಿಯಲ್ಲಿ ಮೊದಲನೇ ಪರಶಬ್ದಕ್ಕೂ ಅರ್ಥ.

ಆದ ಕಾರಣ **ಅಸಾರ** ಪದವು ಅಸಾರಗಳಾದ ವೇದಬಾಹ್ಯ ಶಾಸ್ತ್ರಗಳನ್ನು ನಿರ್ದೇಶಿಸುತ್ತದೆ. **ಸಾರ** ಶಬ್ದವು ಪರಲೋಕದಲ್ಲಿಯ ಫಲವನ್ನು ಸೂಚಿಸುವುದರಿಂದ, "ಸರ್ವಾಸ್ತಾಃ ನಿಷ್ಫಲಾಃ ಪ್ರೇತ್ಯತಮೋನಿಷ್ಠಾಹಿತಾಃ ಸ್ಮೃತಾಃ", ಎಂಬ ಮನು ವಚನದ ಪ್ರಕಾರ, 'ಅಸಾರ'ವೆಂಬುದು ತಾಮಸವಾದ ಬೌದ್ಧಾಗಮಾದಿ ವೇದಬಾಹ್ಯ ಮತಗಳನ್ನು ತಿಳಿಸುತ್ತದೆ. **ಅಲ್ಪಸಾರ ಪದವು** ಪುತ್ರ, ಪಶುಮೊದಲಾದಿ ಐಹಿಕ ಫಲ ಭೋಗಗಳನ್ನೂ ಅವನ್ನು ಸಾಧಿಸಿಕೊಡುವ, ವೇದದ ಪೂರ್ವಭಾಗ ಶಾಸ್ತ್ರವನ್ನೂ ತಿಳಿಸುತ್ತದೆ.

ಈ ಭೋಗಗಳು ದೇಶ ಕಾಲದಿಂದಲೂ ಸ್ವರೂಪದಿಂದಲೂ ಪರಿಮಿತವಾದುವು "ಅಲ್ಪಸಾರಂಗಳವೈ ಶುವೈತ್ತಹನ್ರೊಳ್ಳಿಂದೇನ್" ಎಂಬ ಶ್ರೀಸೂಕ್ತಿಯ ಪ್ರಕಾರ ಐಹಿಕ ಫಲಗಳೂ ಆಮುಷ್ಮಿಕ ಸ್ವರ್ಗಾದಿ ಫಲಗಳೂ ಅಲ್ಪಗಳೆಂದು ತಿಳಿಸಲ್ಪಡುತ್ತವೆ. ಆದ್ದರಿಂದ **ಅಲ್ಪಸಾರವೆಂಬುದು** ಕೈವಲ್ಯವೆಂದು ಹೇಳುವವರಿಗೆ ದ್ರಮಿಡೋಪನಿಷತ್ತಿನೊಡನೆ ವಿರೋಧವು ದುಷ್ಪರಿಹರ. ಸಿದ್ಧಾಂತಿಗಳಿಗೆ ತ್ರಿವರ್ಗಫಲದ ಏಕದೇಶವಾದ ಐಹಿಕ ಫಲವೆಂದು ಹೇಳುವುದು ದ್ರಮಿಡೋಪನಿಷದನುಸರಣೀಯವಾಗಿದೆ. **ಸಾರ, ಸಾರತರ, ಸಾರತಮ ಶಬ್ದ**ಗಳಿಗೆ ಮೇಲೆ ಹೇಳಿದ ರೀತಿಯಲ್ಲಿ ಅರ್ಥವಿವರಣವನ್ನು ಮಾಡುವ ಪೂರ್ವಪಕ್ಷಿಗಳು ಸರ್ವಾರ್ಥಾನ್ ವಿಪರೀತಾಂಶ್ಚ ಪಶ್ಯಂತೀ ತಾಮಸಾಜನಾಃ", ಎಂದು ಹೇಳುವ ರೀತಿಯಲ್ಲಿ ಅಜ್ಞಾನದಲ್ಲಿ, ಬೀಳುತ್ತಾರೆ.

1) "ಆರ್ಷಂ ಧರ್ಮೋಪದೇಶಂಚ" ವೇದಶಾಸ್ತ್ರಾವಿರೋಧಿನಾ ।
ಯಸ್ತರ್ಕೇಣಾನು ಸಂಧತ್ತೇ ಸಧರ್ಮಂ ವೇದನೇತರಃ ॥

ಹೇಗೆಂದರೆ, ಮಿತಗದ್ಯದಲ್ಲಿ "ಸ್ವಾತ್ಮನಿತ್ಯನಿಯಾಮ್ಯ" ಎಂಬ ಚೂರ್ಣಿಕೆಯಲ್ಲಿ, ಜೀವಾತ್ಮನ, ನಿತ್ಯ ದಾಸ್ಯೈಕರಸತ್ವಾನು ಸಂಧಾನಪೂರ್ವಕಾನವಧಿಕಾತಿಶಯ ಭಗವತ್ಕಲ್ಯಾಣಗುಣ ಪರಿಪೂರ್ಣಾನುಭವ ಜನಿತ ಪ್ರೀತಿಕಾರಿತಾಶೇಷಾವಸ್ಥೋಚಿತಾಶೇಷ ಶೇಷತೈಕರತಿರೂಪ ನಿತ್ಯಕೈಂಕರ್ಯ ಲಕ್ಷಣ ಪರಮ ಪುರುಷಾರ್ಥಕ್ಕೆ ಉಪಾಯವು, ಸಾತ್ವಿಕತಾ, ಆಸ್ತಿಕ್ಯಾದಿ ಸಮಸ್ತಾತ್ಮಗುಣ ಸಂಪನ್ನಾಧಿಕೃತ ಜ್ಞಾನಕರ್ಮಯೋಗ ನಿಷ್ಠ ಅಧಿಕಾರಿ ವಿಶೇಷ ಸಾಧ್ಯವಾದ ಭಕ್ತಿಯೋಗವು ಹೇಳಲ್ಪಟ್ಟಿದೆ. ಪೃಥುಗದ್ಯದಲ್ಲಿಯೂ, (ಶರಣಾಗತಿಗದ್ಯ) "ಏವಂಭೂತ ಮತ್ಕೈಂಕರ್ಯ ಪ್ರಾಪ್ತ್ಯುಪಾಯತಯಾ, ಅವಕ್ಲೃಪ್ತಸಮಸ್ತ ವಸ್ತುವಿಹೀನೋಪಿ" ಎಂದಾರಂಭಿಸಿ ಮೇಲೆ ಹೇಳಿದ ಉಪಾಯವೇ ಸಂಗೃಹೀತವು ಶಾರೀರಕ ಭಾಷ್ಯದಲ್ಲಿ ಫಲಪಾದದಲ್ಲಿ ಸಂಕಲ್ಪದಿಂದಲೇ, ಸದೇಹ, ವಿದೇಹ, ಬಹುದೇಹ ಕೃತ ಸರ್ವವಿಧ ಕೈಂಕರ್ಯಾಖ್ಯ ಸ್ವರೂಪೋಚಿತ ಪರಮಪುರುಷ ಪ್ರಾಪ್ತಿಯು ಉಪಾಸನರೂಪ ಸಾಧ್ಯೋಪಾಯಸಾಧ್ಯ ಸ್ವರೂಪಾವಿರ್ಭಾವ ಪೂರ್ವಿಕೆಯೆಂದು ವ್ಯಕ್ತವಾಗಿ ಹೇಳಲ್ಪಟ್ಟಿದೆ. ಶೇಷತ್ವ ಪಾರತಂತ್ರ್ಯರತಿತ್ವವಿಲ್ಲದ ಸ್ವರೂಪಾವಿರ್ಭಾವವು ಎಂತಹುದು. "ಅಪರೋಕ್ಷ ಸಿದ್ಧಮನ್ನಿಯಾಮ್ಯತಾ ಮದ್ದಾಸ್ಯೈಕರಸಾತ್ಮ ಸ್ವಭಾವಾನು ಸಂಧಾನಪೂರ್ವಕ ಮದನುಭವಜನಿತ" ಇತ್ಯಾದಿ ಚೂರ್ಣಿಕೆಯಿಂದ ಭಗವಚ್ಛೇಷತ್ವ ಪಾರತಂತ್ರ್ಯಗಳು ಪ್ರತ್ಯಕ್ಷವಾಗಿ ತಿಳಿಯಲ್ಪಡುತ್ತವೆ, ಎಂದು ಹೇಳಿರುವ ಭಕ್ತಿ, ನ್ಯಾಸ ನಿಷ್ಠಾಧಿಕಾರಿಯನ್ನು, ಅಲ್ಲಗಳೆಯುವುದು ಸರಿಯಲ್ಲ. ನ್ಯಾಸವನ್ನು ವೈದಿಕ ತಾಂತ್ರಿಕ ರೂಪದಿಂದ ಬೇರೆ ಬೇರೆ ಎಂದು ಹೇಳುವುದು, ಶ್ರುತಿಸ್ಮೃತಿ ಪರ್ಯಾಲೋಚನೆ ಮಾಡದ ಕುಮತಿ ಕಲ್ಪಿತವು. "ಇದಂಮಹೋಪನಿಷದಂ ದೇವಾನಾಂ ಗುಹ್ಯಮುತ್ತಮಮ್", ಎಂಬ ಭಗವಚ್ಛಾಸ್ತ್ರ ವಚನವು, "ಏತದ್ವೈಮಹೋಪನಿಷದಂ ದೇವಾನಾಂಗುಹ್ಯಂ" ಎಂಬ ಶ್ರುತಿ ವಾಕ್ಯದಲ್ಲಿ ನಿರೂಪಿತವಾದ ನ್ಯಾಸ ವಿದ್ಯೆಯನ್ನು ಉಪಬ್ರಂಹಿಸಿ, ನ್ಯಾಸವಿದ್ಯೆಯನ್ನು ಪ್ರಮಾಣೀಕರಿಸುತ್ತದೆ. "ತಸ್ಮಾನ್ನ್ಯಾಸ ಮೇಷಾಂ ತಪಸಾಮತಿರಿಕ್ತ ಮಾಹುಃ" ಎಂಬ ಶ್ರುತಿ ವಾಕ್ಯವು "ಅತಿರಿಕ್ತಂತಪಃ ಶ್ರುತಮ್" ಎಂಬ ವಾಕ್ಯದಿಂದ ನ್ಯಾಸಪರವಾಗಿಯೇ, ಆಸಂಹಿತೆಯಲ್ಲಿಯೇ ನಿರೂಪಿತವಾಗಿದೆ. "ಷೋಢಾಹಿ ವೇದ ವಿದುಷಃ ವದಂತ್ಯೇನಂ ಮಹಾಮುನೇ", ಎಂದು ನ್ಯಾಸವಿದ್ಯೆಯನ್ನು ಪ್ರಸ್ತಾಪಿಸಿ," ಉಪಾಯೇ ಗೃಹರಕ್ಷಿತ್ರೋಃ ಶಬ್ದಃಶ್ಶರಣಮಿತ್ಯಯಮ್ । ವರ್ತತೇ ಸಾಂಪ್ರತಂ ತ್ವೇಷಃ ಉಪಾಯಾರ್ಥೈಕವಾಚಕಃ ||" ಎಂದು ಶರಣ ಶಬ್ದಾರ್ಥವು ಉಪಾಯಪರವಾಗಿ ವ್ಯಾಖ್ಯಾನಿಸಲ್ಪಟ್ಟಿದೆ. ಅನಂತರ ಮಂತ್ರವನ್ನು ಹೇಳಿ "ಸಕೃದೇವ ಪ್ರಪನ್ನಸ್ಯ ಕೃತ್ಯನ್ನೈವಾಸ್ತಿ ಶೋಭನೇ । ಎಂದು ನ್ಯಾಸನಿಷ್ಠನಾದ ಪ್ರಪನ್ನನನ್ನು ಪ್ರಶಂಸೆಮಾಡಿ, "ಸಮಿತ್ಸಾಧನಕಾದೀನಾಂ ಯಜ್ಞಾನಾಂ ನ್ಯಾಸಮಾತ್ಮನಃ । ನಮಸಾ ಯೋಽಕರೋದ್ದೇವೇ ಸಸ್ವಧ್ವರ ಇತೀರಿತಃ ||" ಇತ್ಯಾದಿ ಅನಂತರ ವಚನಗಳಿಂದ ನ್ಯಾಸ ವಿದ್ಯಾಪ್ರಾಶಸ್ತ್ಯವು ಹೇಳಿದೆ. ಆದ್ದರಿಂದ ಸಂದಂಶ ನ್ಯಾಯವನ್ನನುಸರಿಸಿ, ಶರಣಾಗತಿಯೇ ನ್ಯಾಸರೂಪವೆಂಬುದು ಅಪರಿಹಾರ್ಯ. ಉಪಕ್ರಮೋಪ ಸಂಹಾರಗಳಿಗೆ ವಿರೋಧವಿಲ್ಲದೆ ನ್ಯಾಸ, ಶರಣಾಗತಿ ಶಬ್ದಗಳು ಏಕಾರ್ಥ ಬೋಧಕಗಳೆಂದು ಹೇಳಬೇಕೇ ವಿನಹ ಬೇರೆಯಿಲ್ಲ. ಹಾಗೆಯೇ ಸಹ ಲಕ್ಷ್ಮೀತಂತ್ರದಲ್ಲಿಯು ಪ್ರಪತ್ತ್ಯಧ್ಯಾಯದಲ್ಲಿಯೂ "ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಂ । ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವವರಣಂ ತಥಾ । ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ।" ಎಂಬ ಅಹಿರ್ಬುಧ್ನ್ಯ ಸಂಹಿತಾವಚನವೇ ಕಥಿತವಾಗಿದೆ. ಅಲ್ಲೀ "ಕೇಶ ವಾರ್ಪಣ ಪರ್ಯಂತಾಹ್ಯಾತ್ಮ ನಿಕ್ಷೇಪ ಉಚ್ಯತೇ," "ಆತ್ಮಾತ್ಮೀಯ ಭರನ್ಯಾಸೋಹ್ಯಾತ್ಮ ನಿಕ್ಷೇಪ ಉಚ್ಯತೇ" ಎಂದು ಶರಣಾಗತಿಯ ನಿಕ್ಷೇಪ ಸ್ವರೂಪವು ಹೇಳಲ್ಪಟ್ಟಿದೆ. ಬೇರೆ ಅಧ್ಯಾಯದಲ್ಲಿ "ಪ್ರಪತ್ತಿಂತಾಂ ಪ್ರಯುಂಜೀತ ಸ್ವಾಂಗೈಃ ಪಂಚಭಿರಾವೃತಾಮ್", ಎಂದು ಅಂಗಗಳೊಡನೆ ಅಂಗಿಯನ್ನು ಅನುಷ್ಠಿಸಬೇಕೆಂಬುದು ವಿಹಿತವಾಗಿದೆ. ಅಹಿರ್ಬುಧ್ನ್ಯ ಸಂಹಿತೆಯಲ್ಲಿ ನಮಶ್ಶಬ್ದಾರ್ಥ ವಿವರಣ ಸಂದರ್ಭದಲ್ಲಿ ಷಡಂಗಕವಾದ ನ್ಯಾಸವು ವಿಸ್ತಾರವಾಗಿ ಹೇಳಲ್ಪಟ್ಟಿದೆ. ಸಾತ್ವಕಿತಂತ್ರದಲ್ಲಿ "ಶರಣಾಗತಿಯು ಯಾವ ರೀತಿಯುದು" ಎಂಬ ಬ್ರಹ್ಮದೇವನ ಪ್ರಶ್ನೆಗೆ ಭಗವಂತನು "ಸ್ವಾತ್ಮಾನಂ ಮಯಿನಿಕ್ಷಿಪೇತ್" ಎಂದು ಶರಣಾಗತಿಯು ನ್ಯಾಸ ವಿದ್ಯೆಗಿಂತ ಬೇರೆಯಿಲ್ಲ ಎಂದು ತೋರಿಸಿ,

ಅವ್ವೈಯಾವಿವ್ವೈಯೆನ್ನುಮಾಕ್ಕೈಯಿನಾಲರುಮಾನ್ರುಲಕಿಲ್ ।
ಶುಮ್ಮೈಯಾನ ಕಲ್ವಿಹಳ್ ಶೂಳ್ವನ್ದಾಲುಮ್ ಶೊಹೈಯಿವ್ವೈಯೆನ್ರು ॥

ಕೊಟ್ಟಿದ್ದಾನೆ. "ನಿಕ್ಷೇಪಾಪರ ಪರ್ಯಾಯೋ ನ್ಯಾಸಃ ಪಂಚಾಂಗ ಸಂಯುತಃ । ಸನ್ನ್ಯಾಸಸ್ತ್ಯಾಗ ಇತ್ಯುಕ್ತಃ ಶರಣಾಗತಿರಿತ್ಯಪಿ" ಎಂಬ ವಚನದಿಂದ ನ್ಯಾಯನಿರಪೇಕ್ಷವಾಗಿ, ನಿಕ್ಷೇಪ, ನ್ಯಾಸ, ತ್ಯಾಗ, ಶರಣಾಗತಿ ಶಬ್ದಗಳು ಪರ್ಯಾಯಗಳು, ಎಲ್ಲಾ ಒಂದೇ ಅರ್ಥವನ್ನು ತಿಳಿಸುತ್ತವೆ, ಎಂದು ತಿಳಿಸಲ್ಪಟ್ಟಿದೆ. ಶರಣಾಗತಿಯು ಪರಮ ಪುರುಷಾರ್ಥವನ್ನು ಸಂಪಾದಿಸಿಕೊಡುವ ಉಪಾಯವು ಎಂದು, "ನಿತ್ಯಕೈಂಕರ್ಯ ಪ್ರಾಪ್ತ್ಯಪೇಕ್ಷಯಾ ಪಾರಮಾರ್ಥಿಕೀ ಭಗವಚ್ಚರಣಾರವಿಂದ ಶರಣಾಗತಿರ್ಯಥಾವಸ್ಥಿತಾವಿರತಾಸ್ತುಮೇ", ಎಂದು ಮೋಕ್ಷದಲ್ಲಿ ಅಭಿಲಾಷೆಯುಳ್ಳವನು ಅನುಷ್ಠಿಸಬೇಕಾದದ್ದು ಎಂದು ವರ್ಣಿಸಲ್ಪಟ್ಟಿದೆ. "ತಯೈವ ತೇಸರ್ವಂಸಂಪತ್ಸ್ಯತೇ" ಎಂದು ತಯಾ, ಎಂಬಲ್ಲಿ, ಕರಣೇ ತೃತೀಯಾ ವಚನದಿಂದ ಸ್ಪಷ್ಟಪಡಿಸಲ್ಪಟ್ಟಿದೆ. "ಪ್ರಪತ್ತೇರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನಮಸ್ತೀತಿಮನ್ವಾನಃ, ಎಂಬ ಗದ್ಯವಾಕ್ಯದಿಂದ, ಪ್ರಪತ್ತಿಯು ಮೋಕ್ಷವನ್ನು ಸಾಧಿಸಿಕೊಡ ತಕ್ಕದ್ದು ಎಂದು ದೃಡೀಕೃತವಾಗಿದೆ. "ಚತುರ್ಥೋಯಮುಪಾಯಸ್ತೇ ಪ್ರೋಕ್ತಃ ಶೀಘ್ರಫಲಪ್ರದಃ । ಷಡಂಗಂ ತಮುಪಾಯಂಚ ಶೃಣುಮೇ ಪದ್ಮಸಂಭವೇ । ಉಪಾಯಸ್ಸುಕರಶ್ಚಾಯಂ ದುಷ್ಕರಶ್ಚ ಮತೋಮಮ ॥, ಇತ್ಯಾದಿ ಅನನ್ಯಪರ ಭಗವಚ್ಛಾಸ್ತ್ರ ವಚನಗಳಿಂದ ಶರಣಾಗತಿಯು ಉಪಾಯವೆಂದು ಧೃಡವಾಗಿ ಹೇಳಲ್ಪಟ್ಟಿದೆ ಆದ ಂದ ನ್ಯಾಸವಿದ್ಯೆ ಎರಡು ಬಗೆಯದು, ಶರಣಾಗತಿಯು ಬೇರೆ ಸಿದ್ಧೋಪಾಯ ನಿಷ್ಠೆಯನ್ನು ಸೂಚಿಸುತ್ತದೆ ಕೇವಲ ಅಧಿಕಾರಿ ವಿಶೇಷಣ, ಎಂಬೀ ಕುಮತಿಗಳ ಪರಿಕಲ್ಪನೆಯನ್ನು ಪ್ರಾಜ್ಞರ ಗೋಷ್ಠಿಯಲ್ಲಿ ನಿರ್ಮೂಲವೆಂದು ಸ್ಥೂಣಾನಿಖನನ್ಯಾಯೇನ ಪರಿಶೋಧನೆ ಮಾಡಿ ಕರೂರುಸ್ವಾಮಿಗಳು "ಸಾರಕೌಮುದಿಯಲ್ಲಿ" ಪರಿಹರಿಸಿದ್ದಾರೆ.

ಹಾಗೆಯೇ ನ್ಯಾಸವಿದ್ಯೆಯು ಪುರುಷ ವಿದ್ಯೆಗೆ ಅಂಗವು ಎಂದು ಶ್ರೀಭಾಷ್ಯದಲ್ಲಿ ತಿಳಿಯಲ್ಪಡಿಸುತ್ತದೆ ಯೆಂಬುದು ಆ ವಾತ ಪ್ರತಿಪನ್ನ ಸಂಪ್ರದಾಯರ ಗರ್ವದ ಮಾತು. ವಸ್ತು ವೃತ್ತಿಯಲ್ಲಿ ನ್ಯಾಸವಿದೇಯನ್ನು ಯಜ್ಞರೂಪವಾಗಿ, "ತಸ್ಯೈವಂ ವಿದುಷಃ" ಎಂಬ ಅನುವಾಕದಲ್ಲಿ ರೂಪಿಸಿರುವುದು ಅರ್ಥವಾದವ್ಯೆ ಹೊರತು ಬೇರೆಯಲ್ಲವೆಂದು, ನಿಕ್ಷೇಪರಕ್ಷಾದಿ ಗ್ರಂಥಗಳಲ್ಲಿ ಆಚಾರ್ಯರು ನಿರೂಪಣೆ ಮಾಡಿದ್ದಾರೆ ಆದ್ದರಿಂದ **"ಅಸಾರ ಮಲ್ಪಸಾರಂಚ"** ಎಂಬ ವಚನಕ್ಕೆ ಪೂರ್ವ ಪಕ್ಷಿಯು ಹೇಳುವುದು ಅತ್ಯಂತಾಭಾಸವು.

ಮೇಲೂ ಆಚಾರ್ಯರ ಹೃದಯವು ಹೀಗೆ :- "ಪಾರಾಶರ್ಯವಚಸ್ಸುಧಾಂ", ಎಂಬ ಶ್ರೀಭಾಷ್ಯ ಮಂಗಳ ಶ್ಲೋಕದಲ್ಲಿ" "ಭಜೇತ್ಸಾರತಮಂ ಶಾಸ್ತ್ರೇ ರತ್ನಾಕರ ಇವಾಮೃತವ್" ಎಂಬಲ್ಲಿ ಅಭಿಪ್ರೇತವಾದ ಸಾರತಮಭಾಗವು, ಉಪನಿಷತ್ ಪ್ರತಿಪಾದ್ಯವಾದ ಬ್ರಹ್ಮವಿದ್ಯೆ, ಮತ್ತು ಪರಮಫಲವಾದ ಮೋಕ್ಷ ಸಾಧಕವಿದ್ಯೆ ಎಂಬುದು ನಿರೂಪಿತವಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, "ತದಿಹವಿಬುಧಗುಪ್ತಂ ಮೃತ್ಯುಭೀತಾ ವಿಚಿನ್ವಂತಿ ಉಪನಿಷದಮೃತಾಬ್ಧೇಃ ಉತ್ತಮಂ ಸಾರಮಾರ್ಯಾಃ", ಎಂದು, ಪೂರ್ವಾಚಾರ್ಯ ಸುರಕ್ಷಿತಾಂ, — ವಿಬುಧಗುಪ್ತಂ, ಮೃತ್ಯುಭೀತಾಃ — ಸಂಸಾರಾಗ್ನಿ ವಿದೀಪನ ವ್ಯಪಗತ ಪ್ರಾಣಾಃ, ಆರ್ಯಾಃ— ಸುಮನಸಃ, ಉಪನಿಷದಮೃತಾಬ್ಧೇಃ ದುಗ್ಧಾಬ್ಧಿಮಥ್ಯೋದ್ಧೃತಾಮ್ ಎಂದು ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ **ಸಾರತಮ ಶಬ್ದವು** ಪರಮಾತ್ಮಪ್ರಾಪ್ತಿ ಸಾಧಕ ಶಾಸ್ತ್ರಗಳನ್ನು ಪ್ರತಿಪಾದಿಸುತ್ತದೆ, ಎಂಬುದು ನಿರ್ವಿವಾದ. [illegible]
[illegible]

[illegible] ಅನಂತರ ಈ ಅಧಿಕಾರದಲ್ಲಿ ಹೇಳಿರುವ ಅರ್ಥಗಳೆಲ್ಲಾ ಸದಾಚಾರ್ಯ ಸಕಾಶದಿಂದ ಪ್ರಾಪ್ತವಾದವು, ಎಂದು **ಅವ್ವೈಯುಂ ವಿವ್ವೈ ಎಂಬ** ಪಾಶುರದಿಂದ "ಸಂಗ್ರಹಿಸುತ್ತಾರೆ. ಇವ್ವೈ [illegible]" [illegible] **ಅವ್ವೈಯೊ [illegible] ಎನ್ನುಂ [illegible] ಆಕ್ಕೈಯಿನಾಲ್ [illegible] ಶುಮ್ಮೈಯುಳ್ಳ** [illegible]

ಇವ್ವೈಯಾವಿವ್ವೈಯುವರೇತ್ತಿಯು ವೆಟ್ಟೆರಣ್ಡೆಣ್ಣಿಯು ನವರ್ ।
ಶಮುಯಾಶಿರಿಯರ್ ಶದಿರ್ಕ್ಕುವರ್‌ತನಿ ನಿಲೈತನ್ದನರೇ ॥೧॥

ಶಾಖಾನಾಮುಪರಿ ಸ್ಥಿತೇನ ಮನುನಾ ಮೂಲೇನ ಲಬ್ಧಾತ್ಮಕಃ
ಸತ್ತಾ ಹೇತು ಸಕೃಜ್ಜಪೇನ ಸಕಲಂ ಕಾಲಂ ದ್ವಯೇನಕ್ಷಿಪನ್ ।
ವೇದೋತ್ತಂಸ ವಿಹಾರ ಸಾರಥಿದಯಾ (ಗಿರಾಂ) ಗುಂಭೇನ ವಿಸ್ರಂಭಿತಃ
ಸಾರಜ್ಞೋಯದಿ ಕಶ್ಚಿದಸ್ತಿ ಭುವನೇ ನಾಥಸ್ಸಯೂಥಸ್ಯ(ಸ್ಸ) ನಃ ॥೧॥

ಇತಿ ಶ್ರೀಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ
ಶ್ರೀಮದ್ವೇಂಕಟನಾಥಸ್ಯ ವೇದಾಂತಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಸಾರನಿಷ್ಕರ್ಷಾಧಿಕಾರ ದ್ವಿತೀಯಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ

ವೇದಭಾರ ಭರಾಕ್ರಾಂತಾಃ ಎಂಬ ರೀತಿಯಲ್ಲಿ ನಿಷ್ಫಲಗಳಾದ್ದರಿಂದ ಬರೀ ಭಾರವಾಗಿ ಲೋಕಸಿದ್ಧಗಳಾದ, **ಅರುಮೂನ್ರು** - ಹದಿನೆಂಟು **ಕಲ್ವಿಹಳ್** – ವಿದ್ಯೆಗಳು, ಅಥವಾ **ಆರುಮೂನ್ರು ಉಲಹಿಲ್** – ಹದಿನೆಂಟು ವಿದ್ಯಾಸ್ಥಾನಗಳಲ್ಲಿ (ಉಲಹು – ವಿದ್ಯಾಸ್ಥಾನಗಳು - ಲೋಕ್ಯತೇ ಅನೇನ ಇತಿಲೋಕಃ– ವಿದ್ಯೆ) **ಶುವ್ವೈಯಾನ ಕಲ್ವಿಹಳ್** – ಪರಮಪುರುಷಾರ್ಥ ಪ್ರತಿಪಾದಕದವಲ್ಲದೆ ಇರುವುದರಿಂದ ಭಾರವಾದ ಕಲೆಗಳು, ಎಂದು ಅನ್ವಯಮಾಡುವುದು. **ಶೂಳ್ವಂದಾಲುಮ್**–ಪೂರ್ತ ಜ್ಞಾತವ್ಯಗಳಾದರೂ, **ಇವ್ವೈತೊಹೈ ಎನ್ರು**–ಇವುಗಳು ಕೇವಲ ಭಾರವೆಂದು (ಸಂಖ್ಯಾಮಾತ್ರಪೂರಕಗಳೆಂದು) ನಿಶ್ಚಯಿಸಿ, **ಇವ್ವೈಯಾ ಇವ್ವೈಯುವರ್** – ರೆಪ್ಪೆ ಬಡಿಯದ, ದೇವತಗಳಿಂದ – ಅಂದರೆ ನಿತ್ಯಸೂರಿಗಳಿಂದ ಅವರು ಕ್ಷಣಕಾಲವೂ ಜ್ಞಾನ ಸಂಕೋಚವಿಲ್ಲದವರು, (ಸಾಧಾರಣರಾದ ದೇವತೆಗಳು ಎಂದು ಸಾರದೀಪ್ತಿಕಾ) **ಏತ್ರಿಯು** – ಸ್ತುತಿಸಲ್ಪಟ್ಟ, **ಎಟ್ಟೆರಂಡೆಣ್ಣಿಯು** - ಶ್ರೀಮದಷ್ಟಾಕ್ಷರವನ್ನೂ, ದ್ವಯ ಚರಮಶ್ಲೋಕಗಳನ್ನೂ ಸರ್ವದಾ ಅನುಸಂಧಾನ ಮಾಡುವ, **ನಮ್‌ಶಮುಯಾಶರಿಯರ್** – ನಮ್ಮ ದರ್ಶನ ಪ್ರವರ್ತಕರಾದ ಆಚಾರ್ಯರುಗಳು, **ಶದಿರ್ಕ್ಕುಮ್** – ಸಾಮರ್ಥ್ಯ ಪ್ರದಗಳಾದ **ತನಿನಿಲೈ** - ಅದ್ವಿತೀಯವಾದ ಸ್ಥಾನವನ್ನು, ಅಂದರೆ ಅಸಾರಾದಿಗಳನ್ನು ಬಿಟ್ಟು ಸಾರತಮದಲ್ಲಿಯೂ ಸಾರವಾದ ರಹಸ್ಯತ್ರಯಗಳೇ ಉಪಾದೇಯತಮಗಳೆಂದು ಅಂಗೀಕರಿಸುವ ಸ್ಥಿತಿಯನ್ನು **ತಂದನರ್** – ನಮಗೆ ಅನುಗ್ರಹಿಸಿದರು **ಏ** – ಎಂಬುದು ಕೇವಲ ಕೃಪೆಯಿಂದ ಉಪದೇಶಿಸಿದರು ಎಂದು ಸೂಚಿಸುತ್ತದೆ.

ತಾತ್ಪರ್ಯ – ಹದಿನೆಂಟು ವಿದ್ಯಾಸ್ಥಾನಗಳನ್ನು ಅಭ್ಯಸಿಸಿದ್ದರೂ ಇವುಗಳು ಕೇವಲಭಾರ. ಇವುಗಳಿಗಿಂತಲೂ ಶ್ರೇಷ್ಠವಾದುವು ರಹಸ್ಯತ್ರಯಗಳ ಸಾರಾರ್ಥಗಳು. ಇವುಗಳನ್ನು ನಮ್ಮ ಆಚಾರ್ಯರುಗಳು ಪರಮಕೃಪೆಯಿಂದ ನಮಗೆ ಉಪದೇಶಿಸಿದ್ದಾರೆ.

ಹೀಗೆ ಮೂರು ರಹಸ್ಯಗಳೂ ಸಾರತಮವಾಗಿದ್ದರೂ, ಅವುಗಳಲ್ಲಿ ಒಂದನ್ನು ಮಾತ್ರ ಅಧಿಕರಿಸಿದರೆ ಸಾಲದೇ ? ಮೂರೂಬೇಕೇ ? ಎಂಬ ಶಂಕೆಗೆ ಸಮಾಧಾನವಾಗಿ ಮೂರು ರಹಸ್ಯಗಳಿಗೂ ಪ್ರಯೋಜನವನ್ನು, **ಶಾಖಾನಾಮುಪರಿಸ್ಥಿತೇನ** ಎಂದಾರಂಭಿಸಿ ತಿಳಿಯಪಡಿಸುತ್ತಾರೆ.

ಶಾಖಾನಾಮುಪರಿ – ಅಥರ್ವಣವೇದಗಳ ಅಗ್ರಭಾಗದಲ್ಲಿ ಅಂದರೆ ನಾರಾಯಣೋಪನಿಷತ್ತಿನಲ್ಲಿ **ಸ್ಥಿತೇನ** – "ಓಮಿತ್ಯಗ್ರೇ ವ್ಯಾಹರೇತ್, ನಮ ಇತಿಪಶ್ಚಾತ್ ನಾರಾಯಣಾಯೇತ್ಯುಪರಿಷ್ಟಾತ್" ಎಂದು ಪ್ರತಿಪಾದಿಸಲ್ಪಟ್ಟ, **ಮೂಲೇನ ಮನುನಾ** – **ಮೂಲಮಂತ್ರದಿಂದ** **ಲಬ್ಧಾತ್ಮಕಃ** – ಆತ್ಮಸ್ವರೂಪಜ್ಞಾನವನ್ನು

ಹೊಂದಿ, [ಆತ್ಮಾ ಭಗವಂತನಿಗೆ ಶೇಷಭೂತನು (ಪ್ರಣವಾರ್ಥ), ಅವನು ಪರತಂತ್ರನು (ನಮಶ್ಶಬ್ದಾರ್ಥ), ಭಗವಂತನಿಗೆ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆ ಗಳಲ್ಲಿಯೂ ಕೈಂಕರ್ಯ ಮಾಡತಕ್ಕವನು (ನಾರಾಯಣಾಯ) ಎಂಬ ಶೇಷತ್ವ ಪಾರತಂತ್ರ್ಯಾದಿ ಜ್ಞಾನವನ್ನು ಹೊಂದುವುದರಿಂದ ಸತ್ಕಲ್ಪನಾಗುತ್ತಾನೆ ಇಲ್ಲದಿದ್ದರೆ ಅಸನ್ನೇವಸಭವತಿ, ಎಂಬ ಶ್ರುತಿ ವಾಕ್ಯದ ಪ್ರಕಾರ ಅಸತ್ಕಲ್ಪನಾಗುತ್ತಾನೆ.] **ಸತ್ತಾಹೇತು** – ದಾಸನ ಜೀವಿಕೆ – ದಾಸ್ಯವೃತ್ತಿ ಇದು ಸ್ವರೂಪಾನುಬಂಧಿ. ಇದಕ್ಕೆ ಕಾರಣವಾದ **ಸಕೃತ್‌ಜಪೇನ** – ಪ್ರಪತ್ತಿಕಾಲದಲ್ಲಿ ಕರಣಮಂತ್ರವಾಗಿ ನಕೃದುಚ್ಚಾರಮಾಡಿ, **ಶಾಖಾನುಮುಪರಿಸ್ಥಿತೇನ** – ಎಂಬುದನ್ನು ಇಲ್ಲಿಯೂ ಸೇರಿಸಿಕೊಳ್ಳುವುದು, ಇಲ್ಲಿ ದ್ವಯಮಂತ್ರವೂ ಕಠೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ, ಎಂಬುದು ಅಭಿಪ್ರಾಯ. **ದ್ವಯೇನ** – ದ್ವಯಮಂತ್ರದಿಂದ, **ಸಕಲಂಕಾಲಂಕ್ಷಿಪನ್** ಪ್ರಪತ್ತ್ಯನುಷ್ಠಾನಾನಂತರ, "ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ," ಎಂಬ ಶ್ರೀಭಾಷ್ಯಕಾರ ಶ್ರೀಸೂಕ್ತಿಪ್ರಕಾರ, ತನ್ನ ಜೀವಿತಕಾಲವನ್ನು ಸ್ವಯಂಪ್ರಯೋಜನವಾಗಿ ದ್ವಯಾರ್ಥಾನುಸಂಧಾನದಿಂದ ಕಳೆಯುತ್ತಾ **ವೇದೋತ್ತಂಸ** – ವೇದಗಳಿಗೆಲ್ಲಾ ಶಿರೋಭೂಷಣವಾದ ಅಂದರೆ ವೇದಾಂತ ಪ್ರತಿಪಾದ್ಯವಾದ, **ವಿಹಾರಸಾರಥಿದಯಯಾ** – ಲೀಲೆಯಿಂದ ಅರ್ಜುನ ಸಾರಥಿಯಾಗಿ ವೇಷವನ್ನು ಧರಿಸಿರುವ, (ಭಗವಂತನು ಕೃಷ್ಣನಾಗಿ ಅವತಾರಮಾಡಿರುವುದು ಕೇವಲ ಲೀಲೆಗೋಸ್ಕರ, ಕರ್ಮಕೃತವಲ್ಲ ಎಂಬುದು ತಾತ್ಪರ್ಯ) ಕೃಷ್ಣಪರಮಾತ್ಮನ ದಯೆಯ **ಗುಂಭೇನ** – ಸಮೂಹವಾದ (ಚರಮಶ್ಲೋಕವು ದಯೆಯ ಪರಿಣಾಮ ಸಂದರ್ಭ) **ವಿಸ್ರಂಭಿತಃ** – ಮಹಾ ವಿಶ್ವಾಸವನ್ನು ಹೊಂದಿದ. (ಈ ಪ್ರಕಾರ ಪ್ರಪತ್ತ್ಯನುಷ್ಠಾನಮಾಡಿದವನ ಸಕಲಪಾಪಗಳೂ ತೊಲಗಿ ಪರಮ ಪುರುಷಾರ್ಥವಾದ ಮೋಕ್ಷಸಾಮ್ರಾಜ್ಯವು ಲಭಿಸುತ್ತದೆ, ಇದರಲ್ಲಿ ಸಂಶಯವು ಬೇಡವೆಂಬ, ಮಹಾವಿಶ್ವಾಸ) **ಸಾರಜ್ಞೋಯದಿಕಶ್ಚಿದಸ್ತಿ ಭುವನೇ** – ಹೀಗೆ ರಹಸ್ಯತ್ರಯಗಳ ಸಾರಾರ್ಥಗಳನ್ನು ತಿಳಿದವನು ಈ ಭೂಮಿಯಲ್ಲಿ ಯಾವನಾದರೂ ಒಬ್ಬನು ಇದ್ದರೂ, (ಕಶ್ಚಿತ್, ಯದಿ ಎಂಬ ಪದಗಳು ವಸ್ತು ದೌರ್ಲಭ್ಯವನ್ನು ತಿಳಿಸುತ್ತವೆ), **ಸಃ** – ಅವನು **ನಃ** – ನಮ್ಮ **ಯೂಥಸ್ಯ** – ಸಮೂಹಕ್ಕೆ **ನಾಥಃ** – ನಿರ್ವಾಹಕನು, ಇದರಿಂದ ಬಹುಶಾಸ್ತ್ರವೇದಿಯಾಗಿಲ್ಲದಿದ್ದರೂ, ರಹಸ್ಯತ್ರಯಗಳ ಸಾರಾರ್ಥವನ್ನು ತಿಳಿದವನು ನಮ್ಮ ಸಂಪ್ರದಾಯ ಧುರಂಧರನು ಎಂಬ ಅಭಿಪ್ರಾಯವು ಸೂಚಿತ.

ತಾತ್ಪರ್ಯ : ಅಷ್ಟಾಕ್ಷರ ಮಂತ್ರವು ಪ್ರಧಾನವಾಗಿ ಶೇಷತ್ವ ಪಾರತಂತ್ರ್ಯಗಳನ್ನು ಬೋಧಿಸುತ್ತದೆ. ಇದರಿಂದ ಲಬ್ಧಸತ್ತಾಕನಾಗಿ ನಿರಂತರಭಗವತ್ಕೈಂಕರ್ಯವನ್ನು ಪಡೆಯಲು ಉಪಾಯವಾದ ಪ್ರಪತ್ತ್ಯನುಷ್ಠಾನವನ್ನು ದ್ವಯಮಂತ್ರವು ಬೋಧಿಸುತ್ತದೆ. ಚರಮಶ್ಲೋಕವು ಈ ರೀತಿ ಪ್ರಪನ್ನನಾದವನ ಸಕಲ ಪಾಪಗಳನ್ನೂ ಭಗವಂತನು ಹೋಗಲಾಡಿಸಿ ಮೋಕ್ಷ ಸಾಮ್ರಾಜ್ಯವನ್ನು ಕೊಡುತ್ತಾನೆ ಎಂದು ನಿಸ್ಸಂಶಯನಾಗಿರುವಂತೆ ಹೇಳಿ, ಇವನಿಗೆ ಮಹಾವಿಶ್ವಾಸವನ್ನುಂಟು ಮಾಡುತ್ತದೆ. ಹೀಗೆ ಮೂರು ರಹಸ್ಯಗಳೂ ಪ್ರಧಾನವಾದ ಒಂದೊಂದು ಅಂಶವನ್ನು ತಿಳಿಯಪಡಿಸುವುದರಿಂದ ಮೂರೂ ನಮಗೆ ಅವಶ್ಯವಾಗಿ ತಿಳಿಯಬೇಕಾದುವು. ಹೀಗೆ ರಹಸ್ಯತ್ರಯಗಳ ಸಾರಾಂಶವನ್ನು ತಿಳಿದವನು ನಮ್ಮ ಸಂಪ್ರದಾಯ ಧುರಂಧರನು.

ಇತಿ ಶ್ರೀಮನ್ನಿಗಮಾಂತ ಮಹಾದೇಶಿಕಾನುಗೃಹೀತವಾದ ರಹಸ್ಯತ್ರಯಸಾರದಲ್ಲಿ, ಎರಡನೆಯ ಸಾರನಿಷ್ಕರ್ಷಾಧಿಕಾರಕ್ಕೆ "ಸಾರಚಂದ್ರಿಕಾ" ವ್ಯಾಖ್ಯಾನವು ಸಮಾಪ್ತ.

ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಪ್ರಧಾನ ಪ್ರತಿ ತಂತ್ರಾಧಿಕಾರಃ

[ಶರೀರಾತ್ಮಭಾವಸಂಬಂಧಾದಿಗಳು]

ಆಧೇಯತ್ವಪ್ರಭೃತಿನಿಯಮನ್ಯೈ ರಾದಿಕರ್ತುಶ್ಶರೀರಂ ।
ಸತ್ತಾಸ್ಥೇಮಪ್ರಯತನಫಲೇ ಷ್ವೇತದಾಯತ್ತಮೇತತ್ ॥
ವಿಶ್ವಂ ಪಶ್ಯನ್ನಿತಿ ಭಗವತಿ ವ್ಯಾಪಕಾದರ್ಶ ದೃಷ್ಟೇ ।
ಗಂಭೀರಾಣಾಮಕೃತಕ ಗಿರಾ ಙ್ಗಾಹತೇ ಚಿತ್ತವೃತ್ತಿಮ್ ॥10॥

ಸಾರಚಂದ್ರಿಕಾವ್ಯಾಖ್ಯಾ

ಪೂರ್ವಾಧಿಕಾರದಲ್ಲಿ, "ಅವ್ವಂಶತ್ತಿಲುಮ್ ಪ್ರಧಾನಪ್ರತಿತಂತ್ರಗಳಾನ ತತ್ತ್ವಹಿತಂಗಳುಡೈಯ ಸಂಗ್ರಹಮಾಹೈಯಾಲೇ ಮಿಹವುಮ್ ಸಾರತಮಮಾಯಿರುಕ್ಕುಂ ರಹಸ್ಯತ್ರಯಮ್", ಎಂದು ರಹಸ್ಯತ್ರಯಗಳು ಸಾರತಮವಾದುವು ಎಂಬುದಕ್ಕೆ ಪ್ರಧಾನ ಪ್ರತಿತಂತ್ರಾರ್ಥಗಳನ್ನು ತಿಳಿಸುವುದು ಕಾರಣವಾಗಿ ಹೇಳಲ್ಪಟ್ಟದೆ. ಆ ಪ್ರಧಾನ ಪ್ರತಿತಂತ್ರಗಳಾವುವು, ಎಂಬುದನ್ನು ಈ ಅಧಿಕಾರದಲ್ಲಿ ಆಚಾರ್ಯವರ್ಯರು, **ಆಧೇಯತ್ವಪ್ರಭೃತಿನಿಯಮನ್ಯೈಃ,** ಎಂದಾರಂಭಿಸುವ ಶ್ಲೋಕದಲ್ಲಿ ನಿರೂಪಿಸುತ್ತಾರೆ.

ಭಗವತಿ ವ್ಯಾಪಕಾದರ್ಶದೃಷ್ಟೇಸತಿ, ಏತದ್ವಿಶ್ವಂ, ಸತ್ತಾಸ್ಥೇಮ ಪ್ರಯತನಫಲೇಷು ಏತದಾಯತ್ತಂ, (ಅತಏವ) ಆಧೇಯತ್ವ ಪ್ರಭೃತಿನಿಯಮನ್ಯೈಃ ಆದಿಕರ್ತುಃ ಶರೀರಮಿತಿ ಪಶ್ಯನ್ ಗಂಭೀರಾಣಾಮ್ ಅಕೃತಕಗಿರಾಂ ಚಿತ್ತವೃತ್ತಿಂ ಗಾಹತೇ ಎಂದು ಅನ್ವಯ.

ಶ್ಲೋಕಾರ್ಥಃ

ಭಗವತಿ – ಭಗವಂತನು, **ವ್ಯಾಪಕಾದರ್ಶದೃಷ್ಟೇಸತಿ** - – ವ್ಯಾಪಕಮಂತ್ರವಾದ ಅಷ್ಟಾಕ್ಷರವೆಂಬ, ಆದರ್ಶ – ಕನ್ನಡಿಯಲ್ಲಿ, ದೃಷ್ಟೇಸತಿ – ಕಾಣಲ್ಪಡಲು, ಸತಿಸಪ್ತಮಿ – ಪಾಥಸಿಪೀತೇ ತೃಷ್ಣಾ ಶಾಮ್ಯತಿ, ನೀರನ್ನು ಕುಡಿದರೆ ದಾಹವು ಶಮನವಾಗುತ್ತೆ ಎಂಬಂತೆ. ಅಷ್ಟಾಕ್ಷರವೆಂಬ ಕನ್ನಡಿಯಲ್ಲಿ ಭಗವಂತನನ್ನು ಕಾಣಲು, ಎಂದರ್ಥ. **ಏತದ್ವಿಶ್ವಂ** – ಈ ಚೇತನಾತ್ಮಕವಾದ ಪ್ರಪಂಚವು **ಸತ್ತಾ** – ಇರುವಿಕೆ, (ಸ್ವರೂಪ) **ಸ್ಥೇಮ** - ಸ್ಥಿತಿ ಅಂದರೆ ಆ ಸ್ವರೂಪದ ಅನುವೃತ್ತಿ, **ಪ್ರಯತನ ಫಲೇಷು** – ಪ್ರವೃತ್ತಿ -ಅಪರ ಫಲ - ಭೋಗ ಮೋಕ್ಷಗಳು – ಅಂದರೆ ಇಹಲೋಕದಲ್ಲಿ ಮತ್ತು ಸ್ವರ್ಗಾದಿ ಲೋಕಗಳಲ್ಲಿ ಅನುಭವಿಸುವ, ಭೋಗಗಳು ಸಂಸಾರ ನಿವೃತ್ತಿ ಪೂರ್ವಕವಾದ ಮಹಾನಂದ (ಮೋಕ್ಷ) ಇವುಗಳು, **ಏತದಾಯತ್ತಂ**— ಈ ಭಗವಂತನ ಅಧೀನವಾದವು. ಆದ ಕಾರಣ **ಆಧೇಯತ್ವಪಭೃತಿ** · ಆಧೇಯತ್ವ – ಭಗವಂತನಿಂದ ಸ್ವರೂಪಧಾರಣ ಪ್ರಭೃತಿ ಶಬ್ದದಿಂದ – ನಿಯಾಮ್ಯತ್ವ, ಶೇಷತ್ವಗಳು ವಿವಕ್ಷಿತ, ಅಂದರೆ ಭಗವಂತನಿಂದ ನಿಯಮಿಸಲ್ಪಟ್ಟು, ಅವನಿಗೆ' ಅಧೀನವಾಗಿರುವುವು. **ನಿಯಮೈಃ**- ಎಂಬ ನಿರ್ಬಂಧದಿಂದ – ಯಾವಾಗಲೂ ಭಗವಂತನಿಂದ ಧರಿಸಲ್ಪಟ್ಟು, ನಿಯಮಿಸಲ್ಪಟ್ಟು, ಅವನ ಪ್ರಯೋಜನಕ್ಕಾಗಿಯೇ ಇರುವುವು, ಆದ ಕಾರಣ **ಆದಿಕರ್ತುಃಶ್ಶರೀರಂ** – ಆದಿಕರ್ತಾವಾದ ಭಗವಂತನಿಗೆ ಶರೀರಭೂತಗಳು, **ಇತಿ** ಹೀಗೆ **ಪಶ್ಯನ್** - ತಿಳಿದುಕೊಂಡು, **ಗಂಭೀರಾಣಾಂ** – ಆಳವಾದ ಅರ್ಥಗಳನ್ನುಳ್ಳಂಥ – ಅಲ್ಪಜ್ಞಾನಿಗಳಿಗೆ ತಿಳಿಯಲಾಗದಂಥಹ, **ಅಕೃತ್ಯಕಗಿರಾಂ** – ಅಪೌರುಷೇಯಗಳಾದ ಭೇದಾ ಭೇದ **ಘಟಕ ಶ್ರುತಿಗಳ,** **ಚಿತ್ತವೃತ್ತಿಂ** – ಏಕಾರ್ಥಬೋಧಕ ತಾತ್ಪರ್ಯವನ್ನು, **ಗಾಹತೇ** – ತಿಳಿಯುತ್ತಾನೆ.

ಪ್ರತಿತಂತ್ರಶಬ್ದಾರ್ಥ

ಪ್ರತಿತಂತ್ರಮಾವದು ? ಮಟ್ರ್ರುಳ್ಳ ಸಿದ್ಧಾಂತಿಗಳೊರುವರು ಮಿಸೈಯಾದೇ ತನ್ನುಡೈಯ ಸಿದ್ಧಾನ್ತತ್ತಿರ್ಕೇ ಅಸಾಧಾರಣಮಾನವರ್ಥಮ್.

ಶರೀರ ಶರೀರಿಭಾವ ಸಂಬಂಧ

ಇಙ್ಙು ವೇದಾನ್ತಿ ಹಳಾನ ನಮ್ಮುಡೈಯ ದರ್ಶನತ್ತಿರ್ಕ್ಕೇ ಅಸಾಧಾರಣಮುಮಾಯ್ ಪ್ರಧಾನಮುಮಾನವರ್ಥಮೇದೆನ್ನಿಲ್ ? ಚೇತನಾಚೇತನಙ್ಗಳುಕ್ಕು ಈಶ್ವರನಕ್ಕುಮುಣ್ಡಾನ ಶರೀರಾತ್ಮ ಭಾವ ಸಂಬನ್ಧಾದಿಹಳ್.

ವ್ಯಾಪಕಾದರ್ಶವೆಂಬುದು –ಅಷ್ಟಾಕ್ಷರದಲ್ಲಿರುವ 'ನಾರಾಯಣ' ಶಬ್ದವು, ನಾರಾಃಅಯನಂ ಯಸ್ಯ" ಎಂಬ ಬಹುವ್ರೀಹಿ ಸಮಾಸದಿಂದ ಚೇತನಾ ಚೇತನಾತ್ಮಕ ಪ್ರಪಂಚವನ್ನು ವ್ಯಾಪರಿಸಿದವನು, ಎಂಬ ಅರ್ಥದಿಂದ ಕೂಡಿದೆ ಅಂಥಹ ನಾರಾಯಣ ಶಬ್ದದಿಂದ ಕೂಡಿದ ಅಷ್ಟಾಕ್ಷರಕ್ಕೆ "ವ್ಯಾಪಕ ಮಂತ್ರವೆಂದು ವ್ಯವಹಾರ. ಶರೀರಾತ್ಮಭಾವ ಸಂಬಂಧ –"ಯಸ್ಯಚೇತನಸ್ಯಯದ್ರವ್ಯಂ, ಸರ್ವಾತ್ಮನಾ ಸ್ವಾರ್ಥೇ ನಿಯಂತುಂ ಧಾರಯಿತುಂ ಚ ಶಕ್ಯಂ ಶೇಷ ತ್ವೈಕ ಸ್ವಭಾವಂಚ, ತತ್ತಸ್ಯ ಶರೀರಂ" ಎಂದು ಭಗವದ್ಭಾಷ್ಯಕಾರರು ಭಾಷ್ಯಾದಿ ಗ್ರಂಥಗಳಲ್ಲಿ ಶರೀರ ಲಕ್ಷಣವನ್ನು ಹೇಳಿರುತ್ತಾರೆ ಚೇತನನು ಮತ್ತು ಅಚೇತನವು ಇವೆರಡೂ, – ಭಗವತ್ಸ್ವರೂಪವನ್ನು ಆಶ್ರಯಿಸಿ ಧರಿಸಲ್ಪಟ್ಟು ಆಧೇಯತ್ವ ಅವನಿಂದ ನಿಯಮಿಸಲ್ಪಟ್ಟು (ನಿಯಾಮ್ಯತ್ವ) - ಇದು ಸಂಕಲ್ಪಾಶ್ರಿತತ್ವ – ಅವನ ಸಂಕಲ್ಪದಿಂದ ಇವುಗಳ ಸ್ಥಿತಿಯು – ಕಾಲಾಂತರದ ಅನುವೃತ್ತಿಯು ಉಂಟಾಗಿ, ಶೇಷತ್ವ – ಅವನ ಅಧೀನವಾಗಿವೆ. ಅವನ ಪ್ರಯೋಜನಕ್ಕಾಗಿಯೇ ಇವೆ. ಆದ್ದರಿಂದ ಇವುಗಳು ಅವನಿಗೆ ಶರೀರ. ಅವನು ಇವುಗಳಿಗೆ ಆತ್ಮಾ - ಅಂತರ್ಯಾಮಿ. ಈ ಸಂಬಂಧ ಜ್ಞಾನದಿಂದ, ಭೇದ ಶ್ರುತಿಗಳಿಗೂ, ಅಭೇದ ಶ್ರುತಿಗಳಿಗೂ, ಘಟಕಶ್ರುತಿಗಳ ಮೂಲಕ ಏಕಾರ್ಥ ಬೋಧಕತ್ವವು ಉಂಟಾಗುತ್ತದೆ.

ಪ್ರತಿತಂತ್ರ ಶಬ್ದಾರ್ಥ

ಪ್ರತಿತಂತ್ರ ಶಬ್ದಾರ್ಥವನ್ನು ಮುಂದೆ ವಿವರಿಸುತ್ತಾರೆ, **ಪ್ರತಿತಂತ್ರಮಾವದು,** ಇತ್ಯಾದಿಯಿಂದ – ಅದಾಗಿ ಪ್ರತಿತಂತ್ರವೆಂಬುದು, ಇತರ ಸಿದ್ಧಾಂತಿಗಳು ಯಾರೂ ಅಂಗೀಕರಿಸದೆ, ತಮ್ಮ ಸಿದ್ಧಾಂತಕ್ಕೇ ಅಸಾಧಾರಣವಾದ ಅರ್ಥ.

ಶರೀರಾತ್ಮಭಾವ ಸಂಬಂಧ

ಇಂಗು ವೇದಾಂತಿಹಳಾನ ಇತ್ಯಾದಿ – ಇಲ್ಲಿ ವೇದಾಂಗತಿಗಳಾದ ನಮ್ಮ ದರ್ಶನಕ್ಕೇ ಅಸಾಧಾರಣ ವಾಗಿಯೂ, ಪ್ರಧಾನವಾಗಿಯೂ ಇರುವ ಅರ್ಥವೇನೆಂದರೆ ಚೇತನ (ಜೀವರಾಶಿಗಳು) ಅಚೇತನ ಇವೆರಡಕ್ಕೂ ಈಶ್ವರ ನಿಗೂ (ಭಗವಂತನಾದ ಲಕ್ಷ್ಮೀಪತಿ) ಉಂಟಾಗಿರುವ ಶರೀರಾತ್ಮ ಭಾವ ಸಂಬಂಧ ಮತ್ತು ಆದಿಶಬ್ದದಿಂದ ಸರ್ವ ಶಬ್ದವಾಚ್ಯತ್ವಗಳು – ಅಂದರೆ ಎಲ್ಲಾ ಶಬ್ದಗಳು ಸಾಕ್ಷಾತ್ತಾಗಿಯೋ ಅಂತರ್ಯಾಮಿ ಪರವಾಗಿಯೋ ಭಗವಂತ ನನ್ನೇ ತಿಳಿಸುತ್ತವೆ, ಎಂಬ ಅರ್ಥಗಳು ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅಸಾಧಾರಣವಾದವು.

ಶರೀರ, ಶರೀರಿ ಲಕ್ಷಣ

ಇಲ್ಲಿ ಈಶ್ವರ ಪದವು ದಿವ್ಯದಂಪತಿ, ರೂಪಪತಿ ಪ್ರಾಧಾನ್ಯ ವಿವಕ್ಷಯಾ ವಿಶಿಷ್ಟವಾದ ಈಶ್ವರ ತತ್ತ್ವವನ್ನು ಸುತ್ತದೆ. ಜಗತ್ತಿಗೆ ಅಂತರ್ಯಾಮಿಯಾಗಿ ಇರುವುದು ಉಭಯ ಸಾಧಾರಣ. "ಯಥಾ ಸರ್ವಗತೋ ವಿಷ್ಣುಃ

(ಶರೀರ ಶರೀರಿಲಕ್ಷಣ)

ಅತಿಲ್ ಈಶ್ವರನಕ್ಕು ಶರೀರಿತ್ವಮಾವತು ಚೇತನಾಚೇತನ ದ್ರವ್ಯಂಗಳೈ ಪ್ಪೞ್ಱ ನಿಯಮೇನ ಧಾರಕನುಮಾಯ್, ನಿಯನ್ತಾವುಮಾಯ್, ಶೇಷಿಯುಮಾಯಿರುಕ್ಕೈ.

ಚೇತನಾಚೇತನಙ್ಗಳುಕ್ಕು ಶರೀರತ್ವಮಾವದು ನಿಯಮೇನ ಈಶ್ವರನೈಪ್ಪತ್ತ ಧಾರ್ಯ ಮುಮಾಯ್, ನಿಯಾಮ್ಯಮುಮಾಯ್, ಶೇಷಮುಮಾನ ದ್ರವ್ಯಮಾಯಿರುಕ್ಕೈ.

ಚೇತನಾಚೇತನಙ್ಗಳೈಪ್ಪತ್ತ ಧಾರಕನುಮಾಯ್, ನಿಯನ್ತಾವುಮಾಹೈ ಯಾವದು ತನ್ಸ್ವರೂಪತ್ತಾಲುಂ ಸಙ್ಕಲ್ಪತ್ತಾಲುಂ ಯಥಾರ್ಹಂ ಸತ್ತಾ ಸ್ಥಿತಿ ಪ್ರವೃತ್ತಿಹಳುಕ್ಕು ಪ್ರಯೋಜಕ ನಾಯಿರುಕ್ಕೈ.

ಈಶ್ವರನ ಧಾರಕತ್ವ ನಿಯಂತೃತ್ವ ನಿಯಾಮಕತ್ವ :

ಅದೆಙ್ಗನೇ ಯೆನ್ನಿಲ್? —ಈಶ್ವರನ್ ತನ್ ಸ್ವರೂಪ ನಿರೂಪಕಧರ್ಮಙ್ಗಳುಕ್ಕುಮ್, ನಿರೂಪಿತ ಸ್ವರೂಪ ವಿಶೇಷಣಙ್ಗಳಾನಗುಣಙ್ಗಳುಕ್ಕುಂ ಪೋಲೇ ಸ್ವವ್ಯತಿರಿಕ್ತ ಸಮಸ್ತ ದ್ರವ್ಯಙ್ಗಳುಕ್ಕುಮವ್ಯವ ಹಿತಮಾಹ ಸ್ವರೂಪೇಣವಾಧಾರಮಾಯಿರುಕ್ಕುಮ್, - ಅವ್ವೋ ದ್ರವ್ಯಙ್ಗಳೈಯಾಶ್ರಯಿತ್ತಿ ರುಕ್ಕುಮ್ ಗುಣಾದಿಹಳುಕ್ಕುಂ ಅವ್ವೋದ್ರವ್ಯದ್ವಾರಾ ಆಧಾರಮಾಯಿರುಕ್ಕುಮ್.

ತದ್ವೈವೇಯಂದ್ವಿಜೋತ್ತಮ, ಎಂಬ ವಿಷ್ಣು ಪುರಾಣ ವಚನದ ಪ್ರಕಾರ, ಸರ್ವಗತತ್ವ, ಸರ್ವವನ್ನೂ ವ್ಯಾಪಿಸಿರು ವುದು ದಿವ್ಯದಂಪತಿಗಳಿಬ್ಬರಿಗೂ ಸಮಾನ ಪ್ರಕಾರವು. ಇಬ್ಬರಿಗೂ ಅಂತಃ ಪ್ರವೇಶವು ನಿಯಮನಾರ್ಥಕ್ಕಾಗಿಯೇ ಅದರಿಂದ ಆತ್ಮತ್ವವು ಇಬ್ಬರಿಗೂ ಸಮಾನ. (ವಿಷ್ಣುಚಿತ್ತೀಯ ವ್ಯಾಖ್ಯಾನ) - ಇದು ಕರೂರು ಸ್ವಾಮಿಗಳವರ ಸಾರತಾತ್ಪರ್ಯಕೌಮುದಿಯಲ್ಲಿ ವಿವರಿಸಿರುವ ಅರ್ಥ.

ಅನಂತರ, "ಚೇಷ್ಟೇಂದ್ರಿಯಾರ್ಥಾಶ್ರಯಶ್ಶರೀರಂ" ಎಂಬ ನ್ಯಾಯ ಸೂತ್ರದಲ್ಲಿ ಹೇಳಿರುವ ಶರೀರ, ಶರೀರ ಲಕ್ಷಣವು ಅವ್ಯಾಪ್ತ್ಯಾದಿ ದೋಷದಿಂದ ಕೂಡಿರುವುದು ಆದ್ದರಿಂದ ಆ ಲಕ್ಷಣವು ಸರಿಯಲ್ಲವೆಂಬ ಅಭಿಪ್ರಾಯ ದಿಂದ ಭಗವದ್ರಾಮಾನುಜಾಚಾರ್ಯರು ಹೇಳಿರುವ ಶರೀರ, ಶರೀರಿ ಲಕ್ಷಣವನ್ನು ವಿವರಿಸುವವರಾಗಿ, **"ಅದಿಲ್ ಈಶ್ವರನುಕ್ಕು ಶರೀರಿತ್ವಮಾವದು,"** ಎಂದಾರಂಭಿಸುತ್ತಾರೆ. ಅವುಗಳಲ್ಲಿ ಈಶ್ವರನಿಗೆ (ಲಕ್ಷ್ಮೀವಿಶಿಷ್ಟ ನಾರಾಯಣ ನಿಗೆ) ಶರೀರಿತ್ವ (ಆತ್ಮ)ವೆಂಬುದು, ಚೇತನಾ ಚೇತನ ದ್ರವ್ಯಗಳನ್ನು ಕುರಿತು, ನಿಯಮೇನ (ಸತ್ತೆ ಇರುವ ಪರ್ಯಂತ-ಅನಾದ್ಯನಂತ ಕಾಲಾವಧಿ) ಧಾರಕನೂ, ನಿಯಮೇನ ನಿಯಮಿಸುವವನೂ, ನಿಯಮೇನ ಶೇಷಿ (ಸ್ವಾಮಿ)ಯೂ ಆಗಿರುವುದು ಚೇತನಾ ಚೇತನಗಳಿಗೆ ಶರೀರತ್ವವೆಂಬುದು, ನಿಯಮೇನ ಈಶ್ವರನಿಂದ (ಲಕ್ಷ್ಮೀಪತಿ) ಧರಿಸಲ್ಪಟ್ಟು ನಿಯಮಿಸಲ್ಪಟ್ಟು, ಶೇಷ (ಅಧೀನವಾಗಿರುವ) ದ್ರವ್ಯವಾಗಿರುವಿಕೆ. ನಿಯಮಿಸುವಿಕೆ ಎಂದರೇನು, ಎಂದರೆ ಈಶ್ವರನು ತನ್ನ ಸ್ವರೂಪದಿಂದ ಧರಿಸಿರುವುದು, ಮತ್ತು ಸಂಕಲ್ಪದಿಂದ ನಿಯಮಿಸುವುದು. ಇದರಿಂದ ಯಥಾರ್ಹ ಚೇತನಾ ಚೇತನಗಳ ಸತ್ತಾ, ಸ್ಥಿತಿ, ಪ್ರವೃತ್ತಿಗಳಿಗೆ ಪ್ರಯೋಜಕನಾಗಿರುವುದು ಧಾರಕತ್ವ. ಸಂಕಲ್ಪದಿಂದ ಇವುಗಳ ಸತ್ತಾಸ್ಥಿತಿ ಪ್ರವೃತಿಗಳಿಗೆ ಪ್ರಯೋಜಕನಾಗಿರುವುದು ನಿಯಂತೃತ್ವ. ಈ ಲಕ್ಷಣದಿಂದ ಘಟಕ್ಕೆ ಭೂತಲವು ಶರೀರವಾಗ ಲಾರದು. ಹಾಗೆಯೇ ಘಟದಲ್ಲಿರುವ ರೂಪವು ಯಾವಾಗಲೂ ಘಟದಿಂದ ಧಾರ್ಯವಾದರೂ, ರೂಪವು ದ್ರವ್ಯವಲ್ಲ: ಗುಣವಾಗಿರುವುದರಿಂದ ಈ ಲಕ್ಷಣವು ಅಲ್ಲಿ ವ್ಯಾಪರಿಸುವುದಿಲ್ಲ ವಾದ್ದರಿಂದ ರೂಪಕ್ಕೆ ಘಟವು ಶರೀರವಾಗುವುದಿಲ್ಲ.

ಈಶ್ವರನ ಧಾರಕತ್ವ, ನಿಯಂತೃತ್ವ ನಿಯಾಮಕತ್ವ

ಪ್ರತ್ಯಕ್ಷಾದಿ ಪ್ರಮಾಣದಿಂದ ಚೇತನಾ ಚೇತನಗಳಿಗೆ ಪೃಥಿವೀ ಮೊದಲಾದುವು ಆಧಾರವಾಗಿರುವಾಗ, ಇವುಗಳಿಗೆ ಈಶ್ವರನು ಆಧಾರವಾಗಿರುತ್ತಾನೆಂಬುದು ಹೇಗೆ ಎಂಬ ಸಂದೇಹವನ್ನು ನಿವರ್ತಿಸಲು, **"ಅದೆಂಗನೇ ಎನ್ನಿಲ್"** ಎಂದಾರಂಭಿಸುತ್ತಾರೆ.

ಜೀವರ್‌ಹಳಾಲೇ ಧರಿಕ್ಕಪ್ಪಡುಹಿರ ಶರೀರಙ್ಗಳುಕ್ಕು ಜೀವದ್ವಾರಾ ಆಧಾರವಾಯಿ ರುಕ್ಕು ಮೆನ್ರು ಶಿಲರ್ ಶೊಲ್ಲುವರ್‌ಹಳ್. ಜೀವನ್ನೈದ್ವಾರ ಮಾಹಕ್ಕೊಣ್ಡು ವ್ ಸ್ವರೂಪತ್ತಾಲು ಮಾಧಾರಮಾಯಿರುಕ್ಕುಮೆನ್ರು ಶಿಲವಾಚಾರ್ಯರ್‌ಹಳ್ ಶೊಲ್ಲುವರ್‌ಹಳ್. ಇಪ್ಪಡಿ ಸ್ವರಮುಮ್ ಈಶ್ವರಸ್ವರೂಪತ್ತೈಪ್ಪತ್ತಿ ಅಪೃಥಕ್ಸಿದ್ಧ ವಿಶೇಷಣ ಮಾಹೈಯಾಲೇ ಇವತ್ತಿನ್ ಸತ್ತಾದಿಹಳಾಶ್ರಯ ಸತ್ತಾಧೀನಂಗಳ್.

ಸರ್ವವಸ್ತುಕ್ಕಳುಡೈಯುಮ್ ಸತ್ತೈ ಸಙ್ಕಲ್ಪಾಧೀನೈಯಾಹೈ ಯಾವತು – ಅನಿತ್ಯಙ್ಗಳ್ ಅನಿತ್ಯೇಚ್ಛೈಯಾಲೇ ಉತ್ಪನ್ನಙ್ಗಳಾಯುಮ್, ನಿತ್ಯಙ್ಗಳ್ ನಿತ್ಯೇಚ್ಛಾ ಸಿದ್ಧಙ್ಗಳಾಯು ಮಿರುಕ್ಕೈ. ಅವ್ವರ್ಥತ್ತೈ "ಇಚ್ಛಾತ ಏವ ತವ ವಿಶ್ವಪದಾರ್ಥಸತ್ತಾ"(1) ಎನ್‌ಹಿರ ಶ್ಲೋಕತ್ತಾಲೇ ಅಭಿ

ಹೇಗೆಂದರೆ, ಈಶ್ವರನು ತನ್ನ ಸ್ವರೂಪ ನಿರೂಪಕಗಳಾದ ಧರ್ಮಗಳಿಗೂ, ನಿರೂಪಿತ ಸ್ವರೂಪ ವಿಶೇಷಣ ಗುಣಗಳಿಗೂ ಹೇಗೆ ಧಾರಕನೋ, ಹಾಗೆ ತನ್ನನ್ನು ಬಿಟ್ಟ ಸಮಸ್ತ ದ್ರವ್ಯಗಳಿಗೂ ಸಾಕ್ಷಾತ್ತಾಗಿ (ಅವ್ಯವಹಿತವಾಗಿ) ಆಧಾರನಾಗಿದ್ದಾನೆ. ಅವನ್ನು ಧರಿಸಿದ್ದಾನೆಂದರ್ಥ. ಆಯಾಯಾ ದ್ರವ್ಯಗಳನ್ನು ಆಶ್ರಯಿಸಿರುವ ಗುಣಗಳಿಗೆ ಆಯಾಯಾ ದ್ರವ್ಯಮೂಲಕವಾಗಿ ಆಧಾರನಾಗಿದ್ದಾನೆ ಜೀವಾತ್ಮರುಗಳಿಂದ ಧರಿಸಲ್ಪಟ್ಟಿರುವ ಶರೀರ ಗಳಿಗೆ ಜೀವದ್ವಾರಾ ಆಧಾರ ಭೂತನಾಗಿದ್ದಾನೆಂದು ಕೆಲವರು (ಸೋಮಾಶಿಯಾಂಡಾನ್) ಹೇಳುತ್ತಾರೆ "ಅನೇನ ಜೀವೇನಾತ್ಮನಾ ಅನುಪ್ರವಿಶ್ಯ" ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಜೀವನನ್ನು ದ್ವಾರವಾಗಿಟ್ಟುಕೊಂಡೂ, ಸಾಕ್ಷಾತ್ತಾಗಿಯೂ ತನ್ನ ಸ್ವರೂಪದಿಂದಲೂ ಆ ಶರೀರಗಳನ್ನು ಧರಿಸಿದ್ದಾನೆಂದು ಕೆಲವು ಆಚಾರ್ಯರುಗಳು ಹೇಳು ತ್ತಾರೆ. ಇದು ಸಿದ್ಧಾಂತಿಗಳ ಮತ. "ಯಸ್ಯಸರ್ವಾಣಿ ಭೂತಾನಿ ಶರೀರಮ್" ಎಂಬ ಶ್ರುತಿಯು ಸಾಕ್ಷಾತ್ತಾಗಿ ಭಗವಂತನು ತನ್ನ ಸ್ವರೂಪದಿಂದ ಸರ್ವಶರೀರಗಳನ್ನೂ ಧರಿಸಿದ್ದಾನೆಂಬುದಕ್ಕೆ ಪ್ರಮಾಣ "ಅನೇನ ಜೀವೇ ನಾತ್ಮನಾ ಅನುಪ್ರವಿಶ್ಯನಾಮರೂಪೇ ವ್ಯಾಕರವಾಣಿ" ಎಂಬ ಶ್ರುತಿಯು ಜೀವದ್ವಾರಾ ಭಗವಂತನು ಸರ್ವಶರೀರಗಳಿಗೂ ಆಧಾರಭೂತನೆಂಬುದಕ್ಕೆ ಪ್ರಮಾಣ. **"ಇಪ್ಪಡಿಸರ್ವಮುಮ್"** ಇತ್ಯಾದಿ - ಹೀಗೆ ಸರ್ವಚೇತನಾ ಚೇತನಗಳು ಈಶ್ವರನ (ಲಕ್ಷ್ಮೀ ವಿಶಿಷ್ಟನ) ಸ್ವರೂಪವನ್ನು ಬಿಟ್ಟು ಪ್ರತ್ಯೇಕವಾಗಿರಲು ಸಾಧ್ಯವಿಲ್ಲದೆ ಅವನಿಗೆ ವಿಶೇಷಣವಾಗಿರು ವುದರಿಂದ ಇವುಗಳ ಸ್ವರೂಪ [ಸತ್ತೆ] ಮತ್ತು ಸ್ಥಿತಿಗಳು ಆಶ್ರಯವಾದ ಈಶ್ವರನ ಸತ್ತಾಧೀನವಾಗಿವೆ

ಸರ್ವವಸ್ತುಕ್ಕಳುಡೈಯುಮ್ ಇತ್ಯಾದಿ –

ಸರ್ವ ವಸ್ತುಗಳ ಇರುವಿಕೆಯು ಈಶ್ವರನ ಸಂಕಲ್ಪಾಧೀನವಾಗಿವೆ ಎಂದರೆ ಅನಿತ್ಯ ವಸ್ತುಗಳು ಅನಿತ್ಯೇಚ್ಛೆಯಿಂದ ಉಂಟಾಗಿಯೂ ನಿತ್ಯ ವಸ್ತುಗಳು ನಿತ್ಯೇಚ್ಛಾಸಿದ್ಧಗಳಾಗಿಯೂ ಇರುವುವು. ಈ ವಸ್ತುವು ಅನಿತ್ಯವಾಗಿರಲಿ ಎಂಬುದು ಅನಿತ್ಯೇಚ್ಛಾಸಿದ್ಧತ್ವ. ಈ ವಸ್ತುವು ಶಾಶ್ವತವಾಗಿರಲಿ, ಎಂಬುದು ನಿತ್ಯೇಚ್ಛೆಯಿಂದ ಉಂಟಾದದು. ಈ ಅರ್ಥವನ್ನು (1) "ಇಚ್ಛಾತ ಏವತವ ವಿಶ್ವಪದಾರ್ಥಸತ್ತಾ" ಎಂಬ ಶ್ಲೋಕದಿಂದ ಅಭಿಯುಕ್ತರು (ಕೂರತ್ತಾಳ್ವಾನ್) ವಿಚಾರಿಸಿ ಹೇಳಿರುತ್ತಾರೆ.

---

(1) ಇಚ್ಛಾತ ಏವತವ ವಿಶ್ವಪದಾರ್ಥ ಸತ್ತಾ, ನಿತ್ಯಂ ಪ್ರಿಯಾಸ್ತವತು ಕೇಚನ ತೇಹಿನಿತ್ಯಾಃ ।
ನಿತ್ಯಂತ್ವದೇಕ ಪರತಂತ್ರ ನಿಜಸ್ವರೂಪಾಃ ಭಾವತ್ಕ ಮಂಗಲ ಗುಣಾಹಿ ನಿದರ್ಶನಂ ನಃ ॥

ವೈಕುಂಠಸ್ತವ-36) ಎಲೈ ಭಗವಂತನೇ, ನಿನ್ನ ಸಂಕಲ್ಪದಿಂದಲೇ ಎಲ್ಲಾ ಪದಾರ್ಥಗಳೂ ಸತ್ತೆ (ಇರುವಿಕೆ)ಯನ್ನು ಹೊಂದಿವೆ ಅವು (ಗಳಲ್ಲಿ ಕೆಲವು ನಿತ್ಯವಾಗಿರಲು ಇಷ್ಟ, ಅವು ನಿತ್ಯ ವಸ್ತುಗಳು. ಇದಕ್ಕೆ ನಿತ್ಯವೂ ನಿನಗೆ ಅಧೀನವಾದ ಸ್ವರೂಪದಿಂದ ಕೂಡಿದ ನಿನ್ನ ಮಂಗಳವಾದ ಗುಣಗಳು ದೃಷ್ಟಾಂತ ಭೂತಗಳು.

ಯುಕ್ತ್ರ್‌ಹಳ್. ವಿವೇಕಿತ್ತಾರ್ಗಳ್ ಇತ್ತಾಲೇ ಸರ್ವತ್ತಿನುಡೈಯುಂವುವುನ್ ಸತ್ತಾನುವೃತ್ತಿ ರೂಪೈಯಾನ ಸ್ಥಿತಿಯುಂವರ್ ಈಶ್ವರೇಚ್ಛಾಧೀನೈಯಾನ ಪಡಿಯಾಲೇ, ಸರ್ವಮುಂವರ್ ಈಶ್ವರ ಸಂಕಲ್ಪಾಶ್ರಿತ ಮೆನ್ರು ಶೊಲ್ಲುಹಿರದು. ಗುರುದ್ರವ್ಯಂಗಳ್ ಸಂಕಲ್ಪತ್ತಾಲೇ ಧೃತಙ್ಗಳೆನ್ರು ಶಾಸ್ತ್ರಙ್ಗಳಿಲ್ ಶೊಲ್ಲುಮದು (1) ದ್ಯೌಸ್ಸಚಂದ್ರಾರ್ಕ ನಕ್ಷತ್ರಂ ಖಂದಿಶೋಭೂರ್ಮಹೋದಧಿಃ । ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ" ಎನ್ಗಿರ ಪಡಿಯೇ ಓರೊರು ದೇಶವಿಶೇಷಙ್ಗಳಿಲೇ ವಿಘ್ರಾದಪಡಿ ನಿರುತ್ತಹೈಯೈಪ್ಪ ೯೯.

ಇಪ್ಪಡಿ ಇಚ್ಛಾಧೀನ ಸತ್ತಾಸ್ಥಿತ ಪ್ರವೃತ್ತಿಹಳಾನ ವಸ್ತುಕ್ಕಳುಕ್ಕು ಪರಮಾತ್ಮ ಸ್ವರೂಪ ಮೆನ್ ಶೆಯ್‌ಹಿರತೆನ್ನಿಲ್ ? ಪರಮಾತ್ಮಾವಿನುಡೈಯ ಇಚ್ಛೈ ಇವ್ವಸ್ತುಕ್ಕಳೈ ಪರಮಾತ್ಮಾವಿನ್ ಸ್ವರೂಪಾಶ್ರಿತಙ್ಗಳಾಹ ವಹುತ್ತು ವೈಕ್ಕುಮ್. ಇಪ್ಪಡಿ ಸರ್ವ ವಸುವುವುನ್ ಈಶ್ವರ ಸ್ವರೂಪಾಶ್ರಿತ ಮಾಯ್ ಈಶ್ವರೇಚ್ಛಾಧೀನಮಾಯ್ ಇರುಕ್ಕುಮ್. ಲೋಕತ್ತಿಲುಮ್ ಶರೀರಂ ಶರೀರಿಯಿ

ಇತ್ತಾಲೇ ಇತ್ಯಾದಿ – ಹೀಗೆ ಸರ್ವವಸ್ತುಗಳ ಇರುವಿಕೆಯು ಈಶ್ವರ ಸ್ವರೂಪಾಶ್ರಿತವಾಗಿರುವುದ ರಿಂದ ಸರ್ವ ವಸ್ತುಗಳ ಸತ್ತಾನುವೃತ್ತಿ ರೂಪವಾದ ಸ್ಥಿತಿಯೂ ಈಶ್ವರೇಚ್ಛಾಧೀನವಾಗಿ (ಸಂಕಲ್ಪಾಧೀನ) ಸರ್ವವೂ ಈಶ್ವರ ಸಂಕಲ್ಪವನ್ನು ಆಶ್ರಯಿಸಿದೆ ಎಂದು ಹೇಳುತ್ತೇವೆ. ಈಶ್ವರ ಶಬ್ದವು ಲಕ್ಷ್ಮೀವಿಶಿಷ್ಟ ನಾರಾಯಣವರ ಈಶ್ವರ ಶಬ್ದವು ದ್ವಿನಿಷ್ಠ. ಪತಿಪ್ರಾಧಾನ್ಯ ವಿವಕ್ಷೆಯಿಂದ ಏಕವಚನ ಪ್ರಯೋಗ. ಆದ್ದರಿಂದ ಈಶ್ವರ ಸ್ವರೂಪಾಧೀನ, ಸಂಕಲ್ಪಾಧೀನವೆಂಬ ಮಾತು ಲಕ್ಷ್ಮೀನಾರಾಯಣರಿಬ್ಬರ ಸ್ವರೂಪಾಧೀನ, ಮತ್ತು ಸಂಕಲ್ಪಾಧೀನವೆಂದರ್ಥ. ಯಾವ ವಸ್ತುವಿನ (ಸತ್ತೆ) ಸ್ವರೂಪವು, ಯಾವುದಕ್ಕೆ ಅಧೀನವಾಗಿದೆಯೋ, ಆ ಮೊದಲನೆ ವಸ್ತುವಿನ ಸತ್ತಾನುವೃತ್ತಿರೂಪ ವಾದ ಸ್ಥಿತಿಯೂ ಆ ಎರಡನೆ ವಸ್ತುವಿಗೆ ಅಧೀನವಾಗಿದೆ, ಎಂಬ ನಿಯಮವು ಇಲ್ಲಿ ಅಭಿಪ್ರೇತ. ಭಾರವಾದ ಪದಾರ್ಥಗಳು ಸಂಕಲ್ಪದಿಂದ ಧರಿಸಲ್ಪಟ್ಟಿವೆ, ಎಂದು ಶಾಸ್ತ್ರಗಳಲ್ಲಿ ಹೇಳುವುದು,(1) ದ್ಯೌಸ್ಸಚಂದ್ರಾರ್ಕ ನಕ್ಷತ್ರಖಂ ದಿಶೋಭೂರ್ಮಹೋದಧಿಃ । ವಾಸುದೇವಸ್ಯವೀರ್ಯೇಣ ವಿಧೃತಾನಿ ಮಹಾತ್ಮನಃ ॥, ಎಂಬಂತೆ, ಆಯಾಯಾ ಸ್ಥಾನ ಗಳಲ್ಲಿ, ಕೆಳಗೆ ಬೀಳದೆ, ನಿಲ್ಲಿಸಿರುವುದನ್ನು ಉದ್ದೇಶಿಸಿದೆ.

ಇಪ್ಪಡಿ ಇಚ್ಛಾಧೀನ ಇತ್ಯಾದಿ, ಹೀಗೆ ವಸ್ತುಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳು ಈಶ್ವರನ ಇಚ್ಛಾ-ಸಂಕಲ್ಪಾಧೀನ ವಾಗಿವೆ. ಹಾಗಾದರೆ ಪರಮಾತ್ಮ ಸ್ವರೂಪವು ಏನು ಮಾಡುತ್ತದೆ ಎಂದರೆ, ಭಗವಂತನ ಸಂಕಲ್ಪವು ಈ ವಸ್ತು ಗಳನ್ನು ಪರಮಾತ್ಮ ಸ್ವರೂಪಾಶ್ರಿತಗಳಾಗಿ ಇರುವಂತೆ ವ್ಯವಸ್ಥೆ ಮಾಡುತ್ತದೆ. "ಮತ್‌ಸ್ಥಾನಿಸರ್ವಭೂತಾನಿ" ಎಂಬಂತೆ ಸರ್ವ ವಸ್ತುಗಳೂ ಈಶ್ವರನ ಸ್ವರೂಪಾಧೀನವಾಗಿಯೂ, ಈಶ್ವರನ ಇಚ್ಛಾಧೀನವಾಗಿಯೂ ಇರುತ್ತವೆ. ಲೋಕದಲ್ಲಿಯೂ ಶರೀರವು ಶರೀರಿಯಾದ ಜೀವಾತ್ಮನ ಸ್ವರೂಪಾಶ್ರಿತವಾಗಿಯೂ ಇರುವುದು ಅನುಭವಸಿದ್ಧ ಜೀವನು ಇರುವ ಪರ್ಯಂತ ಇದ್ದು ಅವನು ಶರೀರವನ್ನು ಬಿಟ್ಟು ಹೋದ ಮೇಲೆ ಶರೀರವು ಕೊಳೆಯುವುದರಿಂದ

---

(1) ಸ್ವರ್ಗ, ಚಂದ್ರ, ಸೂರ್ಯ, ನಕ್ಷತ್ರ, ಆಕಾಶ, ದಿಕ್ಕು, ಭೂಮಿ, ಸಮುದ್ರ ಮೊದಲಾದವು, ಮಹಾತ್ಮನಾದ ವಾಸುದೇವನ (ಭಗವಂತನ) ಸಂಕಲ್ಪದಿಂದ ಧರಿಸಲ್ಪಟ್ಟಿವೆ. ಆಕಾಶ, ದಿಕ್ಕು, ಸಮುದ್ರ ಇವುಗಳು ಹೇಗೆ ಧರಿಸಲ್ಪಟ್ಟಿವೆ ಎದರೆಂ, ಆಕಾಶವು ದೇಶಾಂತರವನ್ನು ಹೊಂದದೆ ಇರುವಿಕೆದಿಕ್ಕುಗಳು. ಉಪಾಧ್ಯವಚ್ಛಿನ್ನವಾದ ಆಕಾಶ. ಇವುಗಳಿಗೂ ಆಯಾಯಾ ಸ್ಥಾನಗಳಲ್ಲಿಯೇ ಧರಿಸಿರುವುದೇ, ವಿಧರಣಾರ್ಥ. ಸಮುದ್ರವು ತನ್ನ ಎಲ್ಲೆಯನ್ನು ಮೀರದೇ ಇರುವುದೇ, ಭಗವತ್ಸಂಕಲ್ಪದಿಂದ ಧರಿಸಿರುವಿಕೆ. "ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ ವಿಧೃತೇತಿಷ್ಠತಃ", ಎಂದು ಭಾರವಾದ ಸ್ವರ್ಗ, ಭೂಮಿಗಳನ್ನು ಸಂಕಲ್ಪದಿಂದ ಧರಿಸಿರು ವಂತೆ ಹೇಳುವುದು ಹೇಗೆ ಸರಿ, ಸ್ವರೂಪದಿಂದಲ್ಲವೇ ಧರಿಸಿರುವುದು ಎಂಬ ಶಂಕೆಗೆ ಸಮಾಧಾನವಾಗಿ, ಆಯಾಯಾ ಸ್ಥಾನಗಳನ್ನು ಬಿಟ್ಟು ಚಲಿಸದೆ ಇರುವಂತೆ ಸಂಕಲ್ಪಮಾಡಿ ಧರಿಸಿರುವುದು ಎಂದರ್ಥ.

ಸುಡೈಯ ಸ್ವರೂಪಾಶ್ರಿತ ಮುಮಾಯ್ ಸಙ್ಕಲ್ಪಾಶ್ರಿತ ಮುಮಾಯಿರುಕ್ಕ ಕ್ಕಾಣಾನಿನ್ರೋಮ್. ಸ್ವರೂಪಾಶ್ರಿತಮಾವದು, ಸಙ್ಕಲ ಜೀವನಿರುನ್ದ ಕಾಲಮಿರುನ್ದು, ಇವರ್ವಿಟ್ಟುಪೋದಳ್ಳಿಹೈಯಾಲೇ ಸ್ವರೂಪಾಶ್ರಿತವ್. ಇವ್ವರ್ಥಂ ಸಙ್ಕಲ ಜೀವನಿರುನ್ದ ಕಾಲಮಿರುನ್ದು, ಇವರ್ವಿಟ್ಟುಪೋದಳ್ಳಿಹೈಯಾಲೇ ಸ್ವರೂಪಾಶ್ರಿತವ್. ಜಾಗರಾದಿ ದಶೈಹಳಿಲ್ ಸಙ್ಕಲ್ಪತ್ತಾಲೇ ವಿಳ್ಳಾದಪಡಿ ವಿಲ್ಲಾದ ಸುಷುಪ್ತ್ಯಾದ್ಯವಸ್ಥೈಹಳಿಲೇ ತೆಳಿವದು. ಜಾಗರಾದಿ ದಶೈಹಳಿಲ್ ಸಙ್ಕಲ್ಪತ್ತಾಲೇ ವಿಳ್ಳಾದಪಡಿ ತಾಙ್ಗಂಪೋದು ಸಙ್ಕಲ್ಪಾಶ್ರಿತ ಮೆನ್ನಕ್ಕಡವದು.

ಆಧೇಯತ್ವ, ವಿಧೇಯತ್ವ, ಶೇಷತ್ವಗಳ, ಅರ್ಥ ನಿರೂಪಣೆ

ಇದಿಲ್ ಸ್ವರೂಪಾಶ್ರಿತ ಮಾಯಿರುಕ್ಕಿರ ಪಡಿಯೈ ಆಧೇಯತ್ವಮೆನ್ರುಂ, ಸಙ್ಕಲ್ಪಾಧೀನ ಮಾಯಿರುಕ್ಕಿರ ಪಡಿಯೈ ನಿಯಾಮ್ಯತ್ವಮೆನ್ರುಂ ಶೊಲ್ಲುಹಿರುದು. ಈಶ್ವರನ್ ಸರ್ವಶೇಷಿಯಾಹೈಯಾವದು ವದತಿವಾಗೌಪನಿಷದೀ । "ಉಪಾದತ್ತೇ ಸತ್ತಾಸ್ಥಿತಿನಿಯಮನಾದ್ಯೈಶ್ಚಿದಚಿತೌ ಸ್ವಮುದ್ದಿಶ್ಯ ಶ್ರೀಮಾನಿತಿ ವದತಿವಾಗೌಪನಿಷದೀ । ಉಪಾಯೋಪೇಯತ್ವೇ ತದಿಹತವತತ್ತ್ವಂ ನತುಗುಣಾ ವತಸ್ತ್ವಾಂ ಶ್ರೀರಂಗೇಶಯ ಶರಣಮವ್ಯಾಜ ಮಭಜಮ್ ॥

ಸ್ವರೂಪಾಶ್ರಿತ. ಈ ಅರ್ಥವು ಸಂಕಲ್ಪವಿಲ್ಲದೆ ಗಾಢವಾಗಿ ನಿದ್ರಿಸುವ ಮತ್ತು ಮೂರ್ಛೆ ಹೋಗಿರುವ ಅವಸ್ಥೆಗಳಲ್ಲಿ ತಿಳಿಯುತ್ತದೆ ಜಾಗರನಾಗಿಯೂ, ಸ್ವಪ್ನವನ್ನು ಕಾಣುವಾಗಲೂ, ಸಂಕಲ್ಪದಿಂದ ಈ ಶರೀರವನ್ನು ಬೀಳದ ಹಾಗೆ ಧರಿಸುವುದು ಸಂಕಲ್ಪಾಶ್ರಿತವೆಂದು ಹೇಳತಕ್ಕದ್ದು.

ವಿಧೇಯತ್ವ ಶೇಷತ್ವಗಳ ಅರ್ಥನಿರೂಪಣೆ

ಇದಿಲ್ ಸ್ವರೂಪಾಶ್ರಿತ ಮಿತ್ಯಾದಿ – ಇವೆರಡರಲ್ಲಿ ಸ್ವರೂಪಾಶ್ರಿತವಾಗಿರುವ ರೀತಿಯನ್ನು ಆಧೇಯತ್ವವೆಂದೂ, ಸಂಕಲ್ಪಾಧೀನವಾಗಿರುವ ರೀತಿಯನ್ನು ನಿಯಾಮ್ಯತ್ವವೆಂದೂ ಹೇಳುತ್ತೇವೆ. ಈಶ್ವರನು ಸರ್ವಶೇಷಿ - ಸರ್ವಚೇತನಾ ಚೇತನಗಳಿಗೂ ಶೇಷಿಯಾಗಿರುವುದು, ಹೇಗೆಂದರೆ "ಪರಗತಾತಿಶಯಾ ಧಾನೇಚ್ಛಯಾ ಉಪಾದೇಯತ್ವಮೇವ ಯಸ್ಯ ಸ್ವರೂಪಂ, ಸಶೇಷಃ ಪರಶ್ಶೇಷೀ," ಎಂಬುದು ಶೇಷ ಶೇಷಿಭಾವ ಲಕ್ಷಣ ಅಂದರೆ ತನಗೆ ಅಧೀನವಾದ ವಸ್ತುವಿಗ, ತನಗೆ ಒಂದು ಅತಿಶಯತ್ವವನ್ನು ಉಂಟು ಮಾಡುವುದೇ, ಸ್ವರೂಪವಾದರೆ ಆ ವಸ್ತುವು ತನಗೆ ಶೇಷವಾದದ್ದು. ತಾನು ಅದಕ್ಕೆ ಶೇಷಿ, ಈ ರೀತಿಯಲ್ಲಿ, (1)"ಉಪಾದತ್ತೇ ಸತ್ತಾಸ್ಥಿತಿನಿಯಮನಾದ್ಯೈಶ್ಚಿದಚಿತೌ

---

1 ಶ್ರೀರಂಗರಾಜಸ್ತವ--2-87

ಶ್ರೀಮಾನ್ - ಲಕ್ಷ್ಮೀಪತಿಯು [ಇದರಿಂದ ಇಬ್ಬರೂ ಚೇತನಾಚೇತನಗಳಿಗೆ ಶೇಷಿಗಳು ಎಂಬರ್ಥ ದ್ಯೋತ್ಯ.]ಸ್ವಮುದ್ದಿಶ್ಯ - ತನ್ನ ಪ್ರಯೋಜನಕ್ಕಾಗಿ, ಸತ್ತಾಸ್ಥಿತಿನಿಯಮನಾದ್ಯೈಃ - ಇರುವಿಕೆ, ಅದರ ಅನುವೃತ್ತಿ, ನಿಯಮನ ಆದಿ ಶಬ್ದದಿಂದ ಭೋಗಮೋಕ್ಷ ಪ್ರದತ್ವಗಳು, ಇವುಗಳಿಂದ, ಚಿದಚಿತೌ - ಚೇತನಾಚೇತನಗಳನ್ನು, ಉಪಾದತ್ತೇ - ಸ್ವೀಕರಿಸುತ್ತಾನೆ ಜೀವರು ಸ್ವಾರ್ಥಕ್ಕಾಗಿಯೇಯೆಂದು ಭ್ರಮಿಸುವ ಭೋಗಮೋಕ್ಷಗಳನ್ನು ಭಗವಂತನು ತನ್ನ ಲೀಲೆಗಾಗಿಯೂ, ಭೋಗಕ್ಕಾಗಿಯೂ ಕೊಟ್ಟು ಸ್ವಾರ್ಥವಾಗಿ ಅನುಭವಿಸುತ್ತಾನೆಯಾದ್ದರಿಂದ, ಚೇತನರಿಗೆ ಪಾರಾರ್ಥ್ಯವೇ (ಶೇಷಭಾವವೇ) ಸ್ವರೂಪ ಸ್ವಾರ್ಥವೆಂಬುದು ಭ್ರಾಂತಿಸಿದ್ಧ ಇತಿವದತಿವಾಕ್ - ಔಪನಿಷದೀ - ಹೀಗೆ ಉಪನಿಷತ್ತು ಹೇಳುತ್ತದೆ "ಸಏಕಾಕೀನರಮೇತ, ತಸ್ಯಧ್ಯಾನಾಂತಸ್ಥಸ್ಯ, ಬಾಲಕ್ರೀಡನಕೈರಿವ" ಎಂಬುದು ಉಪಬೃಂಹಣಶ್ಲೋಕ

ಉಪಾಯೋಪೇಯತ್ವೇ ತದಿಹ ತವ ತತ್ತ್ವಂ - ತತ್ - ಆದ ಕಾರಣ, ಜೀವರುಗಳಿಗೆ ಉಪಾಯವಾಗಿಯೂ, ಉಪೇಯ- ಹೊಂದಲ್ಪಡುವವನಾಗಿಯೂ ಹೇಳಿರುವುದು, ನಿನ್ನ ಸ್ವರೂಪ ನಿನಗೆ - ಸ್ವಭಾವ–ಸಿದ್ಧಗಳು, ನತುಗುಣೌ - ಆಗಂತುಕಗಳಲ್ಲ. ಅತಃ ಆದಕಾರಣ, - ಶ್ರೀರಂಗೇಶಯ - ಶ್ರೀರಂಗದಲ್ಲಿ ಮಲಗಿರುವ, ತ್ವಾಂ - ನಿನ್ನನ್ನು ಅವ್ಯಾಜಂ - ನನಗೆ ಒಂದು ಪ್ರಯೋಜನವಿಲ್ಲದೆ ಶರಣಮಭಜಮ್ - ರಕ್ಷಕನಾಗಿ - ಉಪಾಯವಾಗಿ, ಆಶ್ರಯಿಸಿದ್ದೇನೆ. ಇದರಿಂದ ನಾವು ಭಗವಂತನನ್ನು ರಕ್ಷಕನನ್ನಾಗಿ ಶರಣ ಹೊಂದುವುದೂ, ನಮ್ಮ ಪ್ರಯೋಜನಕ್ಕಲ್ಲ. ಭಗವಂತನ ಪ್ರಯೋಜನಕ್ಕಾಗಿಯೇ ಇದರಿಂದ, ಜೀವರುಗಳ ಪಾರಾರ್ಥ್ಯ ಭಾವವು ದೃಢೀಕೃತ.

ಎನ್ನಿಡ್ರಪಡಿಯೇ ತ್ತ್ ಪ್ರಯೋಜನತ್ತುಕ್ಕಾಕವೇ ಪಾರಾರ್ಥ್ಯೈಕ ಸ್ವಭಾವಙ್ಗಳಾನ ಇವಱ್ಱೈ ಯುಪಾದಾನಂ ಪಣ್ಣಿ ಇವಱ್ಱಾಲೇ ಅತಿಶಯುವಾನಾಪ್ಪೈ.

ಆಧಾರಾಧೇಯಾದಿ ಭಾವಪ್ರಯೋಜನಮ್

ಇನ್ದ ವಾಧಾರಾಧೇಯ ಭಾವಾದಿಕಳಾಲಿಚ್ಚೇತನನುಕ್ಕು ಫಲಿಪ್ಪದೆನ್ನೆನ್ನಿಲ್ ಆಧಾರಾಧೇಯ ಭಾವತ್ತಾಲೇ ಅವನುಡೈಯ ಜ್ಞಾನಶಕ್ತ್ಯಾದಿಕಳುಕ್ಕು ಪ್ಪೋಲೇ ಅಪೃಥಕ್ಸಿದ್ಧ ಸ್ವರೂಪಲಾಭಮುಮ್, ಶೇಷಶೇಷಿಭಾವತ್ತಾಲೇ ಆತ್ಮಾಭಿಮಾನಾನುಗುಣ ಪುರುಷಾರ್ಥವ್ಯವಸ್ಥೈಯಿರ್ ಪಡಿಯೇ ಸ್ವರೂಪಾನುರೂಪಮಾನ ಪುರುಷಾರ್ಥರುಚಿಯುಮ್, ಶೇಷ ಶೇಷಿಭಾವತ್ತಾಲುಮ್, ನಿಯನ್ತೃನಿಯಾಮ್ಯ ಭಾವತ್ತಾಲುಮ್, ಸ್ವರೂಪಾನುರೂಪಮಾನ ಪುರುಷಾರ್ಥತ್ತುಕ್ಕನುರೂಪಮುಮಾಯ್, ನಿರಪೇಕ್ಷ

ಸ್ವಮುದ್ದಿಶ್ಯ ಶ್ರೀಮಾನ್ ಇತಿವದತಿವಾಗೌಪನಿಷದೀ । ಉಪಾಯೋಪೇಯತ್ವೇ ತದಿಹತವತತ್ತ್ವಂ ನತುಗುಣೌ ಅತಸ್ತ್ವಾಂಶ್ರೀರಂಗೇಶಯ ಶರಣಮವ್ಯಾಜಮಭಜಮ್ ॥ ಎಂಬಂತೆ, ಪರಪ್ರಯೋಜನವೇ ತಮ್ಮ ಸ್ವಭಾವವಾದ, ಚೇತನಾ ಚೇತನಗಳನ್ನು, ತನ್ನ ಪ್ರಯೋಜನಕ್ಕಾಗಿಯೇ ಸ್ವೀಕರಿಸಿ, ಅದರಿಂದ ಭಗವಂತನು ಅಧಿಕಪಾಶಸ್ತ್ಯವುಳ್ಳವನಾಗಿರುವುದೇ 'ಶೇಷಿ' ಭಾವ. "ಕೃಷ್ಣಸ್ಯಹಿಕೃತೇ ಭೂತಮಿದಂ ವಿಶ್ವಂ ಚರಾಚರಮ್", ಚರಾಚರಾತ್ಮಕವಾದ ಪ್ರಪಂಚವು ಕೃಷ್ಣಪರಮಾತ್ಮನಿಗೆ ಸೇರಿದ್ದುದು ಎಂಬುದು ಇಲ್ಲಿ ಅಭಿಪ್ರೇತ.

ಆಧಾರಾಧೇಯ ಭಾವದಿಂದ ಚೇತನನಿಗೆ ಉಂಟಾಗುವ ಪ್ರಯೋಜನ

ಇವ್ವಾಧಾರಾಧೇಯ ಭಾವತ್ತಾಲ್ – ಇತ್ಯಾದಿ ಈ ಆಧಾರಾಧೇಯಭಾವಗಳಿಂದ ಚೇತನನಿಗೆ, ಏನು ಫಲ ಎಂದರೆ -- ಆಧಾರಾಧೇಯಭಾವದಿಂದ, ಭಗವಂತನ ಜ್ಞಾನ ಶಕ್ತ್ಯಾದಿಗಳ ಹಾಗೆ, ಜೀವರುಗಳಿಗೆ ಭಗವಂತನನ್ನು ಬಿಟ್ಟು ಪ್ರತ್ಯೇಕವಾಗಿರಲಾರದ ಸ್ವರೂಪಲಾಭವೂ, ಶೇಷ ಶೇಷಿಭಾವದಿಂದ ಆತ್ಮಾಭಿಮಾನಾನುಗುಣ ಪುರುಷಾರ್ಥ ವ್ಯವಸ್ಥೆಯ ಪ್ರಕಾರ, ಸ್ವರೂಪಾನುರೂಪವಾದ ಪುರುಷಾರ್ಥದಲ್ಲಿ ರುಚಿಯೂ ಉಂಟಾಗುತ್ತದೆ. ಅದು ಹೇಗೆಂದರೆ,

"ಅನ್ನಂಭೋಜ್ಯಂ ಮನುಷ್ಯಾಣಾಂ ಅಮೃತಂತು ದಿವೌಕಸಾಮ್ ।
ಶ್ವಪಶೂ ವಿಟ್‌ತೃಣಾಹಾರೌ ಸಂತೋದಾಸ್ಯೈಕ ಜೀವನಾಃ ॥"

ಎಂಬಂತೆ ಮನುಷ್ಯನಾಗಿ ತನ್ನನ್ನು ತಿಳಿದವನಿಗೆ ಅನ್ನವು ರುಚಿಯಾದ ಆಹಾರ, ದೇವತೆಯಾಗಿ ತನ್ನನ್ನು ತಿಳಿದವನಿಗೆ ಅಮೃತವು ಭೋಗ್ಯವಾದ ಆಹಾರ. ನಾಯಿ ಹಸುಗಳಿಗೆ ಅಮೇಧ್ಯ, ಹುಲ್ಲು ಇವು ಭೋಗ್ಯವಾದ ಆಹಾರ. ಸತ್ಪುರುಷರಿಗೆ ಅಂದರೆ ಭಗವಚ್ಛೇಷತ್ವಜ್ಞಾನದಿಂದ ಆತ್ಮಸತ್ತೆಯನ್ನು ಪಡೆದಿರುವುದಾಗಿ ತಿಳಿದವರಿಗೆ ಭಗವಂತನಿಗೆ ದಾಸ್ಯವೃತ್ತಿಯನ್ನು ಮಾಡುವುದೇ ಭೋಗ್ಯವಾದ ಜೀವನ **ಶೇಷಶೇಷಿಭಾವತ್ತಾಲುಮ್**, ಇತ್ಯಾದಿ – ತಾನು ಭಗವಂತನಿಗೆ ಶೇಷಭೂತನು, ಭಗವಂತನು ತನಗೆ ಶೇಷಿ, ಎಂಬಜ್ಞಾನದಿಂದ ತನ್ನ ಸ್ವರೂಪಕ್ಕೆ ಅನುರೂಪವಾದ ಪುರುಷಾರ್ಥವು ಶೇಷಿ ಕೈಂಕರ್ಯವೆಂದು ತಿಳಿದು, ಅದಕ್ಕೆ ಭಗವಂತನೇ ಉಪಾಯವೆಂದು ತಿಳಿಯಲು ಸೌಕರ್ಯವಾಗುತ್ತದೆ. ಹಾಗೆಯೇ ತಾನು ಭಗವಂತನಿಂದ ನಿಯಾಮ್ಯನು – ಅವನ ಆಜ್ಞೆಗೆ ಒಳಪಟ್ಟವನು, ಭಗವಂತನು ನಿಯಾಮಕನು - ಆಜ್ಞಾಕಾರೀ ಎಂಬ ಜ್ಞಾನದಿಂದ ಸರ್ವನಿಯಂತಾವಾದ ಭಗವಂತನೇ ಸ್ವಾಧೀನ ಸಹಕಾರ್ಯಂತರ ನಿರಪೇಕ್ಷೋಪಾಯನು ಎಂದು ತಿಳಿಯಲು ಸೌಕರ್ಯವಾಗುತ್ತದೆ. ಅಂದರೆ ಒಬ್ಬ ಚೇತನನಿಗೆ ಮೋಕ್ಷರೂಪ ಪುರುಷಾರ್ಥವನ್ನು ಕೊಡಲು ಭಗವಂತನೇ ಸಿದ್ಧೋಪಾಯ. ಆ ಸಿದ್ಧೋಪಾಯ ವಶೀಕರಣಾರ್ಥವಾಗಿ ಅವನ ಆಜ್ಞಾರೂಪಶಾಸ್ತ್ರಗಳಿಂದ ಏರ್ಪಟ್ಟ, ಭಕ್ತಿ ಪ್ರಪತ್ತಿ ರೂಪ ಉಪಾಯಗಳಲ್ಲೊಂದನ್ನು ಅನುಷ್ಠಿಸಬೇಕೆಂಬ ಜ್ಞಾನವನ್ನು ಪಡೆಯಲು ಸೌಕರ್ಯವಾಗುತ್ತದೆ.

ಮುಮಾಯ್, ಇರುನ್ದುಳ್ಳ ಉಪಾಯವಿಶೇಷತ್ತೈ ಅರಿಹೈಯುಮ್ ಫಲಿಕ್ಕುಮ್. ಅಹವಿವ ಟ್ರಾಲಿಚ್ಚೇತನನ್, ಅನನ್ಯಾಧಾರನ್, ಅನನ್ಯ ಪ್ರಯೋಜನನ್, ಅನನ್ಯಶರಣನ್, ಎನ್ರದಾಯಿತ್ತು.

ಉಕ್ತಾರ್ಥಾನಾಂ ರಹಸ್ಯತ್ರಯ ಪ್ರತಿಪಾದ್ಯತ್ವಮ್.

ಇವ್ವರ್ಥಮ್ ಪ್ರಥಮ ರಹಸ್ಯತ್ತಿಲ್ ಕಿಡಕ್ಕಿರಪಡಿ ಎಙ್ಗನೇಯೆನ್ನಿಲ್, ನಾರಾಯಣ ಶಬ್ದತ್ತಿಲ್ ತತ್ಪುರುಷ ಬಹುವ್ರೀಹಿ ಸಮಾಸದ್ವಯತ್ತಾಲು ಮುಣ್ಡಾನ ಧಾರಕತ್ವ ವ್ಯಾಪಕತ್ವಾದಿಹಳಾಲೇ ಅನನ್ಯಾಧಾರತ್ವಾದಿ ವಿಶಿಷ್ಟ ಸ್ವರೂಪಲಾಭಮುಮ್, ಪಾರಾರ್ಥ್ಯ ಪಾರತಂತ್ರ್ಯ ಗರ್ಭಮಾನ ಕೀಱ್ಱಿಲ್ ಪದದ್ವಯತ್ತಾಲೇ ಅನನ್ಯ ಪ್ರಯೋಜನತ್ವಮುಮ್, ಅನನ್ಯ ಶರಣತ್ವಮುಮ್ ಫಲಿಕ್ಕುಮ್

"ನಿರಪೇಕ್ಷಮುಮಾಯಿರುಂದುಳ್ಳ ಉಪಾಯವಿಶೇಷತ್ತೈ" ಎಂಬ ವಚನಗಳು, ಸಿದ್ಧೋಪಾಯನಾದ ಭಗವಂತನನ್ನು ತಿಳಿಸುತ್ತವೆ ಎಂದು ದೀಪಿಕಾಕಾರರು ಅರ್ಥಮಾಡಿದ್ದಾರೆ ಹೀಗೆಹೇಳಬೇಕಾದ ನಿರ್ಬಂಧವಿಲ್ಲ. ಹೇಗೆಂದರೆ, "ವಿಕಲ್ಪೋಽವಿಶಿಷ್ಟಫಲತ್ವಾತ್" ಎಂಬ ನ್ಯಾಯವನ್ನು ಅವಲಂಬಿಸಿ, ಪರಸ್ಪರ ನೈರಪೇಕ್ಷವಾದ ಉಪಾಯಗಳಾದ ಭಕ್ತಿ ಪ್ರಪತ್ತಿಗಳನ್ನು ತಿಳಿಸುತ್ತವೆ, ಎಂದು ಅರ್ಥಮಾಡಿ, **ಉಪಾಯವಿಶೇಷತ್ತೈ ಅರಿಹೈಯುಮ್** - ಎಂಬ ಪಂಙ್ತಿಗಳಿಗೆ ಈ ರೀತಿಯಾದ ವ್ಯಾಜವಿಶೇಷವನ್ನುಂಟುಮಾಡಿ ಚೇತನನ ರಕ್ಷಣದಲ್ಲಿ ಭಗವಂತನು ತನ್ನ ಪರಮ ಕರುಣೆಯಿಂದ ಸಿದ್ಧೋಪಾಯನಾಗಿದ್ದಾನೆಂಬುದು ತಾತ್ಪರ್ಯವೆಂದು ಕರೂರು ಸ್ವಾಮಿಗಳ ಅಭಿಪ್ರಾಯ.

ಅಹವಿವಟ್ರಾಲ್ ಇತ್ಯಾದಿ ಸಫಲವಾದ ಆಧಾರಾಧೇಯಭಾವದಿಂದ, ಈ ಚೇತನನು ಭಗವಂತನಲ್ಲದೆ ಬೇರೆಯವರಿಂದ ಆಧಾರನಲ್ಲ – ಧರಿಸಲ್ಪಟ್ಟವನಲ್ಲ ಅಚೇತನವು ಜೀವೇಶ್ವರೋಭಯಾಧಾರಕವಾದ್ದರಿಂದ ಅನನ್ಯಾಧಾರತ್ವವು ಚೇತನನಿಗೆ ಮಾತ್ರ ಅನ್ವಯಿಸುತ್ತದೆ ಹಾಗೆಯೇ ಜೀವನು ಅನನ್ಯ ಪ್ರಯೋಜನನು, ಅನನ್ಯ ಶರಣನು. ಭಗವಂತನಲ್ಲದೆ ಬೇರೆಯವರಿಂದ ಯಾವ ಪ್ರಯೋಜನವನ್ನೂ ಹೊಂದುವವನಲ್ಲ. ಭಗವಂತನಲ್ಲದೆ ಬೇರೆಯವರು, ಯಾರೂ ಇವನಿಗೆ ರಕ್ಷಕರಲ್ಲ.

ರಹಸ್ಯತ್ರಯದಲ್ಲಿ ಅನನ್ಯಾಧಾರತ್ವಾದಿ ನಿರೂಪಣೆ

ಆಚಾರ್ಯರು, ಹೀಗೆ ಹೇಳಿದ ಅರ್ಥಗಳು ರಹಸ್ಯತ್ರಯಗಳಲ್ಲಿ ನಿರೂಪಿತವಾಗಿವೆ ಎಂದು, **ಇವ್ವರ್ಥಂ ಪ್ರಥಮ ರಹಸ್ಯತ್ತಿಲ್** ಇತ್ಯಾದಿ ವಿವರಿಸುತ್ತಾರೆ. ಅದಾಗಿ–

ಇವ್ವರ್ಥಮ್ – ಈಶ್ವರನು ಧಾರಕನು, ನಿಯಾಮಕನು, ಶೇಷಿ, ನಿಯಂತೃತ್ವ ಫಲಿತ ಶರೀರಿತ್ವನು, (ಆತ್ಮಾ), ತತ್ಫಲಿತ ಸರ್ವಶಬ್ದವಾಚ್ಯತ್ವನು - ಎಲ್ಲಾ ಶಬ್ದಗಳೂ ಅವನನ್ನೇ ತಿಳಿಸುತ್ತವೆ ಎಂಬುದು. ಹಾಗೆಯೇ ಜೀವನು ಧಾರ್ಯನು, ನಿಯಾಮ್ಯನು, ಶೇಷನು ಭಗವಂತನ ನಿಯಮನದ ಫಲವಾಗಿ ಅವನಿಗೆ ಶರೀರಭೂತನು, ಅದರಿಂದ ಅನನ್ಯಾಧಾರತ್ವ, ಅನನ್ಯ ಪ್ರಯೋಜನತ್ವ, ಅನನ್ಯಶರಣತ್ವಾದಿ, ಧರ್ಮವಿಶಿಷ್ಟನೆಂಬೀ ಅರ್ಥಗಳು, ಪ್ರಥಮ ರಹಸ್ಯವಾದ ಮೂಲಮಂತ್ರದಲ್ಲಿ (ಅಷ್ಟಾಕ್ಷರದಲ್ಲಿ) ಇರುವುವು. ಹೇಗೆಂದರೆ, – ನಾರಾಯಣ ಶಬ್ದದಲ್ಲಿ, ನಾರಾಣಾಂ ...ಅಯನಂ, ಎಂಬ ತತ್ಪುರುಷ ಸಮಾಸ, ನಾರಾಃ ಅಯನಂ ಯಸ್ಯ, ಎಂಬ ಬಹುವ್ರೀಹಿ ಸಮಾಸ, ಇವೆರಡುಗಳಿಂದ ಕ್ರಮವಾಗಿ ಧಾರಕತ್ವ, ವ್ಯಾಪಕತ್ವಗಳು ಲಭಿಸುತ್ತವೆ. ನಾರಗಳಿಗೆ ವಾಸಸ್ಥಾನಭೂತನು ಎಂದು ಧಾರಕತ್ವ, ನಾರಗಳು (ಚೇತನಾಚೇತನಗಳು) ಯಾವನಿಗೆ ವಾಸಸ್ಥಾನಗಳೋ, ಅವನು ಎಂದು, ವ್ಯಾಪಕತ್ವವು – ಎಲ್ಲಾ ಚೇತನಾಚೇತನಗಳನ್ನು ವ್ಯಾಪರಿಸಿರುವವನು, ಎಂಬ ಅರ್ಥಗಳು ಲಭಿಸುತ್ತವೆ. ವ್ಯಾಪಕತ್ವವು ನಿಯಮನಕ್ಕೋಸ್ಕರ. ಇದರಿಂದ ಭಗವಂತನು ನಿಯಾಮಕನು, ಜೀವರು ನಿಯಾಮ್ಯರು ಎಂಬುದು, **ಆದಿ** ಶಬ್ದಕ್ಕೆ ಅರ್ಥ. ಹೀಗೆ ನಾರಾಯಣ ಶಬ್ದದಲ್ಲಿ ಪ್ರಧಾನಪ್ರತಿತಂತ್ರಾರ್ಥ

ಪ್ರಪತ್ತ್ಯನುಷ್ಠಾನ ಪ್ರಕಾಶಕಮಾನ ಮಂತ್ರರತ್ನತ್ತಿಲ್ ಪೂರ್ವಖಂಡತ್ತಾಲೇ ಅನನ್ಯಶರಣತ್ವಮುಮ್, ಉತ್ತರಖಂಡತ್ತಾಲೇ ಅನನ್ಯ ಪ್ರಯೋಜನತ್ವಮುಮ್, ಉಭಯ ಭಾಗತ್ತಾಲುಮ್, ಅನನ್ಯಾಧಾರತ್ವಮುಮ್, ಪ್ರಕಾಶಿಕ್ಕಿರದು. ಇಪ್ಪಡಿ ಶಾಬ್ದಮಾಹವುಮ್ ಆರ್ಥಮಾಹವುಮ್, ಚರಮ ಶ್ಲೋಕತ್ತಿಲು ಮಿವ್ವಹುಪ್ಪುಕ್ಕಣ್ಡುಕೊಳ್ವದು.

ಲಾಭವು ಏರ್ಪಡುತ್ತದೆ ಇದರಿಂದ ಜೀವನಸ್ವರೂಪವು ಭಗವಂತನನ್ನು ಬಿಟ್ಟು ಬೇರೆಯವರಿಂದ ಧರಿಸಲ್ಪಡುವುದಿಲ್ಲ, ವ್ಯಾಪರಿಸಲ್ಪಡುವುದಿಲ್ಲ, ನಿಯಮಿಸಲ್ಪಡುವುದಿಲ್ಲ ಎಂಬ ಅರ್ಥಗಳೂ ಲಭಿಸುತ್ತವೆ. **ಪಾರಾರ್ಥ್ಯ ಪಾರತಂತ್ರ್ಯ ಗರ್ಭಮಾನ** ಇತ್ಯಾದಿ – ಪ್ರಣವ ಮತ್ತು ನಮಃ ಎಂಬ ಎರಡು ಪದಗಳಿಂದ ಜೀವನಿಗೆ ಅನನ್ಯ ಪ್ರಯೋಜನತ್ವವೂ, ಅನನ್ಯ ಶರಣತ್ವವೂ ಲಭಿಸುತ್ತವೆ. ಪ್ರಣವವು ಪಾರಾರ್ಥ್ಯವನ್ನು ತನ್ನಲ್ಲಿಅಡಗಿಸಿಕೊಂಡಿದೆ ಹೇಗೆಂದರೆ "ಆಯ್ ಮ್" ಎಂದು ಪ್ರಣವದ ಅಕಾರದಲ್ಲಿ ಚತುರ್ಥಿಯು ಲೋಪವಾಗಿದೆ ಆ ಚತುರ್ಥಿಗೆ ಪಾರಾರ್ಥ್ಯವು ಅರ್ಥ– ಅಂದರೆ ಭಗವಂತನ ಪ್ರಯೋಜನಕ್ಕಾಗಿರುವಿಕೆ ಎಂಬುದು. ಹಾಗೆಯೇ ನಮಶ್ಶಬ್ದದಲ್ಲಿ, ನ ಮಃ ಎಂದು ಎರಡುಪದವಾಗಿ ವಿಭಾಗಿಸಿ, ಮಃ ಮಕಾರವಾಚ್ಯನಾದ ಜೀವನಿಗೆ ಸ್ವಾತಂತ್ರ್ಯಮ್, ಸ್ವಾತಂತ್ರ್ಯ ಎಂಬ ಪದವನ್ನು ಅಧ್ಯಾಹರಿಸಿ, ಸ್ವಾತಂತ್ರ್ಯವಿಲ್ಲ ಎಂದು ಸ್ವಾತಂತ್ರ್ಯನಿವೃತ್ತಿ ಶಾಬ್ದವಾಗಿ, ಅದರಿಂದ ಪಾರತಂತ್ರ್ಯವು ಆರ್ಥವಾಗಿ ತೋರುತ್ತದೆಯಾದ್ದರಿಂದ, ನಮಶ್ಶಬ್ದವು ಪಾರತಂತ್ರ್ಯವನ್ನು ಅಡಗಿಸಿಕೊಂಡಿದೆ. ಹೀಗೆ ಪಾರಾರ್ಥ್ಯ ಪಾರತಂತ್ರ್ಯಗರ್ಭಗಳಾದ ಪ್ರಣವ, ನಮಸ್ಸುಗಳಿಗೆ ಅನನ್ಯಪ್ರಯೋಜನತ್ವವೂ, ಅನನ್ಯ ಶರಣತ್ವವೂ ತಾತ್ಪರ್ಯ. ಪ್ರಣವವನ್ನೂ, ನಮಸ್ಸನ್ನೂ ಹೀಗೆ ಅಕ್ಷರವಿಭಾಗ ಮಾಡಿ ಅರ್ಥವನ್ನು ಹೇಳುವುದು ನಿರುಕ್ತಸಿದ್ಧ.

ಪ್ರಪತ್ತ್ಯನುಷ್ಠಾನಪ್ರಕಾಶಕ ವಾದ ದ್ವಯಮಂತ್ರದಲ್ಲಿ **(ಮಂತ್ರರತ್ನ)** ಪೂರ್ವಖಂಡದಲ್ಲಿ, ಶ್ರೀಮತೇ ನಾರಾಯಣಾಯ ಎಂದು ಅನನ್ಯ ಪ್ರಯೋಜನತ್ವವೂ, ಅನನ್ಯಶರಣತ್ವವೂ, ಉತ್ತರಖಂಡದಲ್ಲಿ ಅನನ್ಯ ಪ್ರಯೋಜನತ್ವವೂ, ಉಭಯಭಾಗಗಳಲ್ಲಿ ಹೇಳಲ್ಪಡುವ ನಾರಾಯಣ ಶಬ್ದದಿಂದ ಅನನ್ಯಾಧಾರತ್ವವೂ ಸ್ಪಷ್ಟವಾಗಿ ತಿಳಿಸಲ್ಪಡುತ್ತವೆ. ಮೇಲೂ ಕೇವಲ ನಾರಾಯಣ ಶಬ್ದವು ಎಲ್ಲೆಲ್ಲಿ ಹೇಳಲ್ಪಟ್ಟಿದೆಯೋ ಅಲ್ಲೆಲ್ಲಾ ಲಕ್ಷ್ಮೀವಿಶಿಷ್ಟ ನಾರಾಯಣನೆಂದು ತಿಳಿಯಬೇಕೆಂಬುದು "ಶ್ರೀಮನ್ನಾರಾಯಣ, ಶ್ರೀಮತೇ ನಾರಾಯಣಾಯ," ಎಂಬ ಪದಗಳ ತಾತ್ಪರ್ಯ. ಇದರಿಂದ ಅನನ್ಯಾಧಾರತ್ವ, ಅನನ್ಯಶರಣತ್ವ, ಅನನ್ಯ ಪ್ರಯೋಜನತ್ವಗಳಿಗೆ ಪ್ರತಿಸಂಬಂಧಿಯು ಲಕ್ಷ್ಮೀ ವಿಶಿಷ್ಟನಾದ ನಾರಾಯಣನೆಂದು ಶಿಕ್ಷಿತವಾಯಿತು ಶರೀರಿತ್ವವು (ಆತ್ಮತ್ವವು) ಉಭಯವಿಶಿಷ್ಟವು, ಎಂಬು ಅರ್ಥ.

ಇಪ್ಪಡಿಶಾಬ್ದಮಾಹವುಮ್ ಇತ್ಯಾದಿ–ಹೀಗೆ ಚರಮಶ್ಲೋಕದಲ್ಲಿಯೂ, ಶಾಬ್ದವಾಗಿ ಮಾಮೇಕಂ– ಎಂಬಲ್ಲಿ ಏಕ ಶಬ್ದದಿಂದ ಅನನ್ಯಶರಣತ್ವವೂ ಪ್ರಾಪ್ಯಪ್ರಾಪಕ ಐಕ್ಯದಿಂದ ಅನನ್ಯ ಪ್ರಯೋಜನತ್ವವೂ ಹೇಳಲ್ಪಡುತ್ತದೆ. ಅನನ್ಯಾಧಾರತ್ವವು **"ಮಾಮ್, ಅಹಂ"** ಎಂಬ ಶಬ್ದಗಳಿಂದ ಆರ್ಥವಾಗಿದೆ. ಹೀಗೆ ರಹಸ್ಯತ್ರಯಗಳಲ್ಲಿ ಈ ಅರ್ಥಗಳೆಲ್ಲಾ ಹೇಳಲ್ಪಟ್ಟಿವೆಯಾದ್ದರಿಂದ ಈ ರಹಸ್ಯತ್ರಯಗಳು ಆದರಣೀಯ.

ರಹಸ್ಯತ್ರಯಗಳ ಅವಶ್ಯಕತೆ

ಹೀಗೆ ರಹಸ್ಯತ್ರಯಗಳಲ್ಲಿ ಈ ಅರ್ಥಗಳೆಲ್ಲಾ ಹೇಳಲ್ಪಟ್ಟಿರುವುದರಿಂದ ಯಾವುದಾದರೂ ಒಂದು ರಹಸ್ಯಮಂತ್ರದ ಅರ್ಥವನ್ನು ತಿಳಿದುಕೊಂಡರೆ ಸಾಕಲ್ಲವೇ. ಮೂರೂ ಬೇಕೇ ಎಂಬ ಸಂಶಯವನ್ನು **ಇಪ್ಪಡಿ**

ರಹಸ್ಯತ್ರಯಗಳ ಅವಶ್ಯಕತೆ

ಇಪ್ಪಡಿ ಚರಮಶ್ಲೋಕತ್ತಿಲೇ ಸಿದ್ಧೋಪಾಯ ವಶೀಕರಣಾರ್ಥಮಾಹ ವಿಹಿತಮಾನ ಸಾಧ್ಯೋಪಾಯ ವಿಶೇಷತ್ತೈ ದ್ವಯತ್ತಾಲೇಯನುಷ್ಠಿಕ್ಕುಮ್ ಪೋದೈಕ್ಕು ಅನುಸನ್ಧೇಯಙ್ಗಳಾಯ್ ಕ್ಕೊಂಡು ಅವಶ್ಯಾಪೇಕ್ಷಿತಙ್ಗಳಾನ ವರ್ಥಂಗಳೈಯೆಲ್ಲಾಮ್ ಶಿರಿಯ ಕಣ್ಣಾಡಿ ಪೆರಿಯವುರುಕ್ಕಳೈಕ್ಕಾಟ್ಟು ಮಾಪ್ಪೋಲೇ ಶುರುಙ್ಗ ತ್ತೆಳಿವಿಕ್ಕುಮ್ ತಿರುಮನ್ತ್ರಮ್,

ಅಪ್ಪುಳ್ಳಾರ್ ಅರುಳಿಚ್ಚೆಯ್ದ ವಿರಹು

ಇದಿಲ್ಪ್ರಥಮ ಪದತ್ತಿಲರ್ಥಙ್ಗಳೈ ಅರ್ಜುನ ರಥತ್ತಿಲುಮ್, (1) "ಅಗ್ರತಃ ಪ್ರಯಯೌ ರಾಮಃ" ಎನ್ಗಿರ ಶ್ಲೋಕತ್ತಿಲುಮ್ ಕಂಡು ಕೊಳ್ವದು.

ಚರಮಶ್ಲೋಕತ್ತಿಲೇ, ಎಂದಾರಂಭಿಸಿ ಮೂರು ರಹಸ್ಯಮಂತ್ರಗಳ ಅರ್ಥಗಳ ಆವಶ್ಯಕತೆಯನ್ನು ತಿಳಿಸುತ್ತಾರೆ– ಹೀಗೆ ಚರಮಶ್ಲೋಕದಲ್ಲಿ ಸಿದ್ಧೋಪಾಯನಾದ ಲಕ್ಷ್ಮೀಪತಿಯನ್ನು ವಶಪಡಿಸಿಕೊಳ್ಳಲು ಸಾಧ್ಯೋಪಾಯ ವಿಶೇಷವಾದ ಪ್ರಪತ್ತಿಯು ವಿಧಿಸಲ್ಪಟ್ಟಿದೆ. ಆ ಸಾಧ್ಯೋಪಾಯ ವಿಶೇಷವಾದ ಪ್ರಪತ್ತಿಯನ್ನು ದ್ವಯಮಂತ್ರದಿಂದ ಅನುಷ್ಠಿಸಬೇಕು ಹಾಗೆ ಅನುಷ್ಠಿಸುವ ಸಮಯದಲ್ಲಿ ಅನುಸಂಧಾನಮಾಡಲ್ಪಡುವವಗಳಾಗಿ, ಅವಶ್ಯಾಪೇಕ್ಷಿತ ಳಾಗದ ಅರ್ಥಗಳನ್ನೆಲ್ಲಾ, ಚಿಕ್ಕ ಕನ್ನಡಿಯು ದೊಡ್ಡ ರೂಪಗಳನ್ನು ತೋರಿಸಿಕೊಡುವಂತೆ, ತಿರುಮಂತ್ರ ವಾದ ಅಷ್ಟಾಕ್ಷರವು ಸಂಗ್ರಹವಾಗಿ ತಿಳಿಸುತ್ತದೆ. ಹೀಗೆ ಚರಮಶ್ಲೋಕವು ಸಾಧ್ಯೋಪಾಯವನ್ನು ವಿಧಿಸು ತ್ತದೆ. ಅನುಷ್ಠೇಯವಾದ ಸಾಂಗಭರಸಮರ್ಪಣವನ್ನು, ದ್ವಯಮಂತ್ರವು ಸ್ಪಷ್ಟವಾಗಿ ಪ್ರಕಾಶಪಡಿಸುತ್ತದೆ. ಶರಣಾಗತಿಯೆಂಬ ಭರಸಮರ್ಪಣವನ್ನು ಅನುಷ್ಠಿಸುವಾಗ, ಈ ಜೀವನು ಪರಮಾತ್ಮನಿಗೆ ಅನನ್ಯಾರ್ಹಶೇಷ ಭೂತನು, ಅನನ್ಯ ಪರತಂತ್ರನು ಎಂಬೀ ಅರ್ಥಗಳನ್ನು ಪ್ರಣವ, ನಮಶ್ಶಬ್ದಗಳಿಂದ ಕೂಡಿದ ತಿರುಮಂತ್ರವು ವಿವರಿ ಸುತ್ತದೆ ಆದ್ದರಿಂದ ಈ ಮೂರು ರಹಸ್ಯಗಳೂ ಅವಶ್ಯಾಪೇಕ್ಷಿತಗಳು

ಅಪ್ಪುಳ್ಳಾರ್ ಕೃಪೆಮಾಡಿದ ಚಿನ್ಹೆ

ಈ ರಹಸ್ಯಗಳ ಅರ್ಥಗಳನ್ನು ಅನುಸಂಧಿಸುವ ಕ್ರಮವನ್ನು ಶ್ರೀಮನ್ನಿಗಮಾಂತ ಮಹಾದೇಶಿಕರ ಆಚಾರ್ಯರಾದ ವಾದಿಹಂಸಾಂಬುವಾಹರು (ಅಪ್ಪುಳ್ಳಾರ್) ತಿಳಿಸಿರುತ್ತಾರೆಂದು **ಇದಿಲ್ ಪ್ರಥಮಪದತ್ತಿಲ್** ಎಂದಾರಂಭಿಸಿ ಮುಂದೆ **ಹೇಳುತ್ತಾರೆ.**

ಇದಿಲ್ – ಈ ಅಷ್ಟಾಕ್ಷರಮಂತ್ರದಲ್ಲಿ, ಮೊದಲನೇ ಪದವಾದ ಪ್ರಣವದ ಅರ್ಥಗಳನ್ನು ಅರ್ಜುನನ ರಥದಲ್ಲಿಯೂ (1)"ಅಗ್ರತಃ ಪ್ರಯಯೌರಾಮಃ" ಎಂಬ ಶ್ಲೋಕದಲ್ಲೂ ತಿಳಿದುಕೊಳ್ಳತಕ್ಕದ್ದು – ಅಂದರೆ ಅರ್ಜುನನ ರಥದಲ್ಲಿ ಭಗವಂತ ಮುಂದುಗಡೆ ಸಾರಥಿಯಾಗಿ ಕುಳಿತಿರುವಂತೆ ಪ್ರಣವದಲ್ಲಿರುವ ಅಕಾರದಲ್ಲಿ ಶೇಷಿಯಾದ ಭಗ ವಂತನು ಮೊದಲು ಪ್ರತಿಪಾದ್ಯನಾಗಿದ್ದಾನೆ. ಹಾಗೆಯೇ ಆ ರಥದಲ್ಲಿ ಅರ್ಜುನನು ಹಿಂಭಾಗದಲ್ಲಿ ಕುಳಿತಿರುವಂತೆ ಪ್ರಣವದಲ್ಲಿ ಮಕಾರದಲ್ಲಿ ಜೀವನು ಪ್ರತಿಪಾದ್ಯನಾಗಿದ್ದಾನೆ. ಅಗ್ರತಃ ಪ್ರಯಯೌರಾಮಃ- ಎಂಬ ಶ್ಲೋಕದಲ್ಲಿ ರಾಮನು ಮುಂದೆ, ಸೀತೆಯು ನಡುವೆ, ಅವರಿಬ್ಬರಿಗೆ ಹಿಂಭಾಗದಲ್ಲಿ ಲಕ್ಷ್ಮಣನು ಧನುಷ್ಪಾಣಿಯಾಗಿ ಅರಣ್ಯದಲ್ಲಿ

---

1) ಅಗ್ರತಃ ಪ್ರಯಯೌರಾಮಃ ಮಧ್ಯೇಸೀತಾ ಸುಮಧ್ಯಮಾ ।
ಪೃಷ್ಠತಸ್ತು ಧನುಷ್ಪಾಣಿಃ ಲಕ್ಷ್ಮಣೋಽನುಜಗಾಮಹ ॥ (ರಾಮಾಯಣ ಅರಣ್ಯಕಾಂಡ ॥ ಸರ್ಗ-11_1ನೇ ಶ್ಲೋ)
ರಾಮನು ಮುಂದೆ ಹೊರಟನು, ಶೋಭನವಾದ ಸೊಂಟವನ್ನುಳ್ಳ ಸೀತೆಯು ನಡುವೆ ಹೋದಳು. ಅವರಿಬ್ಬರಿಗೂ ಹಿಂದುಗಡೆ ಧನುಷ್ಪಾಣಿಯಾಗಿ, ಲಕ್ಷ್ಮಣನು ಹೋದನು ಧನುಷ್ಪಾಣಿತ್ವವು - ಕಿಂಕರ್ತ್ವತ ಸೂಚಕ

ದ್ವಿತೀಯ ಪದತ್ತಿಲ್ ಶಬ್ದತ್ತಾಲು ಮರ್ಥ ಸ್ವಭಾವತ್ತಾಲುಮ್ ವರುಮರ್ಥಙ್ಗಳೈ ಶ್ರೀ ಭರತಾಳ್ವಾನುಡೈಯುವುಮ್ ಶ್ರೀ ಶತ್ರುಘ್ನಾಳ್ವಾನುಡೈಯುವುಮ್ ವೃತ್ತಾಂತಙ್ಗಳಿಲೇಯರಿವದು. "ನಾನುನ್ನೈ ಯನ್ರಿಯಿಲೇನ್ ಕಣ್ಡಾಯ್ ನಾರಣನೇ ನೀಯೆನ್ನೈ ಯನ್ರಿಯಿಲೈ" ಯೆನ್ನುಮ್ಪಡಿ ನಿರ್ಕಿರ ನಾರಯಣ ಶಬ್ದಾರ್ಥತ್ತೈ ಕೋಸಲ ಜನಪದತ್ತಿಲ್ ಜನ್ತುಕ್ಕಳೈಯುಮ್ ಚಕ್ರವರ್ತಿತ್ತಿರುಮ ಹನ್ಯೆಯುಮ್ ಉದಾಹರಣಮಾಕ್ಕಿ ಕ್ಕಣ್ಡುಕೊಳ್ವದು. ಪೂರ್ವಪದ ದ್ವಯತ್ತಿಲ್ ತೋನ್ರಿನ ಕಾಷ್ಠಾ ಪ್ರಾಪ್ತ ಪಾರಾರ್ಥ್ಯಪಾರತನ್ತ್ರ್ಯಂಗಳ್ ಪೇರಣೆಯಾಹ ತೃತೀಯ ಪದತ್ತಿಲ್ ಚತುರ್ಥಿಯಿಲ್ ಕರುತ್ತಿಲೇ ಪ್ರಾರ್ಥನೀಯಮಾನ್ದ ಶೇಷಿಯಾಹನ್ದ ಕೈಂಕರ್ಯತ್ತೈ ಇಳೈಯ ಪೆರುಮಾಳುಡೈಯವುಮ್,

---

ಹೋದರೆಂದು,ಋಷಿಯು ವರ್ಣಿಸಿರುವ ರೀತಿಯಲ್ಲಿ, ಪ್ರಣವದ ಅಕಾರದಲ್ಲಿ ವಿಷ್ಣುವೂ, ಉಕಾರದಲ್ಲಿ ಲಕ್ಷ್ಮಿಯೂ, ಮಕಾರದಲ್ಲಿ ಅವರಿಬ್ಬರಿಗೂ ದಾಸನಾದ ಜೀವತತ್ತ್ವವೂ ಹೇಳಲ್ಪಟ್ಟಿದೆ

ದ್ವಿತೀಯ ಪದತ್ತಿಲ್ ಎರಡನೇ ಪದವಾದ ನಮಶ್ಶಬ್ದದಲ್ಲಿ ಅಕಾರಾರ್ಥಾಯೈವ ಅಹಂ, ನಮಃ ಎಂದು ಅನ್ವಯಮಾಡಿ, ಶಬ್ದದಿಂದ ಬರುವ ಅರ್ಥ ಭಗವಂತನಿಗೆ ಪರತಂತ್ರನಾಗಿರುವುದು ಆ ಭಗವತ್ಪಾರತಂತ್ರ್ಯವು, ಕಾರಣವಾಗಿ ಭಗವಂತನು ತನ್ನಿಚ್ಛೆಯಿಂದ, ಭಾಗವತ ಪಾರತಂತ್ರ್ಯ (ದಾಸ) ಪರ್ಯಂತ ನಿಯೋಗಿಸುತ್ತಾನೆಯಾದ್ದರಿಂದ ಭಾಗವತ ಪಾರತಂತ್ರ್ಯವು ಅರ್ಥಸಿದ್ಧ. ಭಗವತ್ಪಾರತಂತ್ರ್ಯದ ಎಲ್ಲೆ ಇದು. ಈ ಅರ್ಥಗಳನ್ನು ಶ್ರೀ ಭರತಾಳ್ವಾನ್ ಶತ್ರುಘ್ನಾಳ್ವಾನ್ ಅವರ ವೃತಾಂತಗಳಿಂದ ತಿಳಿಯಬಹುದು. ಆಳ್ವಾನ್ ಎಂಬ ಪದಕ್ಕೆ ಭಗವತ್ಪ್ರೇಮದಲ್ಲಿ ಮುಳುಗಿದವರು, ಹಾಗೆಯೇ ಭಾಗವತ ಪ್ರೇಮದಲ್ಲಿ ಮುಳುಗಿದವರು ಎಂದರ್ಥ ಇದು ಸಾಂಪ್ರದಾಯಿಕವಾದ ವ್ಯವಹಾರ. ಶ್ರೀ ಭರತರು ಭಗವದ್ದಾಸ್ಯದಲ್ಲಿ ನಿರತರಾಗಿದ್ದರು ಶ್ರೀ ಶತ್ರುಘ್ನರು, ಭಾಗವತರಾದ ಭರತಾಳ್ವಾನ್ ರವರ ದಾಸ್ಯದಲ್ಲಿ ನಿರತರಾಗಿದ್ದರು.

( ) **ನಾನುನ್ನೈ ಅನ್ರಿಇಲೇನ್ ಕಂಡಾಯ್,** ಇತ್ಯಾದಿ – ಎಲೈ ನಾರಾಯಣನೇ ಆಧಾರ ಭೂತನಾದ ನಿನ್ನನ್ನು ಬಿಟ್ಟು ನನಗೆ ಸತ್ತೆ (ಇರುವಿಕೆ) ಎಂಬುದು ಇಲ್ಲ. ಇದು ತತ್ಪುರುಷ ಸಮಾಸ ದಿಂದ ಲಭಿಸುವ ಅರ್ಥ. **ನೀ ಎನ್ನೈ ಅನ್ರಿ** ಇತ್ಯಾದಿ, ವ್ಯಾಪ್ಯನಾಗಿ ನಿರೂಪಿಸಲ್ಪಡುವ ನನ್ನನ್ನು ಬಿಟ್ಟು ವ್ಯಾಪಕನಾದ ನಿನಗೆ ಸತ್ತೆ (ಇರುವಿಕೆ) ಇಲ್ಲ. ಇದು ಬಹುವ್ರೀಹಿ ಸಮಾಸಾರ್ಥ. ಹೀಗಿರುವ ನಾರಾಯಣ ಶಬ್ದಾರ್ಥವನ್ನು "ಕೋಸಲ ಜನಪದ ಜಂತುಗಳು ರಾಮನನ್ನು ಅಗಲಿ ಇರಲಾರದೆ ತತ್ತಳಿಸುತ್ತಿದ್ದವು. ಕೊನೆಯಲ್ಲಿ ರಾಮನು ವೈಕುಂಠಕ್ಕೆ ಹೊರಟಾಗ ಜತೆಯಲ್ಲಿ ಹೊರಟವು," ಎಂಬ ಸಂದರ್ಭದಲ್ಲಿ ತಿಳಿಯಬಹುದು. ಹಾಗೆಯೇ ದಶರಥನು ರಾಮನನ್ನು ಬಿಟ್ಟು ಅಗಲಿರಲಾರದೆ ಪ್ರಾಣವನ್ನು ಬಿಟ್ಟನು ಎಂಬಲ್ಲಿಯೂ ತಿಳಿಯಬಹುದು.

ಪೂರ್ವ ಪದದ್ವಯತ್ತಿಲ್ ಇತ್ಯಾದಿ ಪೂರ್ವಪದಗಳಾದ ಪ್ರಣವ ನಮಶ್ಶಬ್ದಗಳಲ್ಲಿ ಕ್ರಮವಾಗಿ ತಿಳಿಸಲ್ಪಟ್ಟ ಕಾಷ್ಠಾಪ್ರಾಪ್ತ (ಎಲ್ಲೆಯಾದ – ಭಾಗವತ ಪರ್ಯಂತವಾದ ಎಂದರ್ಥ) ಪಾರಾರ್ಥ್ಯ ಪಾರತಂತ್ರ್ಯಗಳ ಕಾರಣವಾಗಿ, ಮೂರನೇ ಪದವಾದ ನಾರಾಯಣ ಶಬ್ದದ ಮೇಲಿರುವ, **"ಆಯ"** ಎಂಬ ಚತುರ್ಥಿ ವಿಭಕ್ತಿ

---

1) ಇನ್ರಾಹನಾಳೈಯೇ ಯಾಹ ಇನಿಚ್ಚಿರುದುಮ್
ನಿನ್ರಾಹ ನಿನ್ನರುಳ್ ಎನ್ಪಾಲದೇ - ನನ್ರಾಹ
ನಾನುನ್ನೈ ಅನ್ರಿಇಲೇನ್ ಕಂಡಾಯ್ ನಾರಣನೇ
ನೀ ಎನ್ನೈಯನ್ರಿಯಿಲೈ (ನಾನ್ಮುಕನ್ ತಿರುವಂದಾದಿ - 7)
ನಾರಾಯಣಾ ನಾನು ಆಧಾರಭೂತನಾದ ನಿನ್ನನ್ನು ಬಿಟ್ಟು ಇರಲಾರೆ, ನೀನು ನನ್ನನ್ನು ಬಿಟ್ಟು ಇರಲಾರೆ.

ಇವರುಡೈಯ ಅವತಾರ ವಿಶೇಷಮಾನ ತಿರುವಡಿ ನಿಲೈ ಯಾೞ್ವಾರುಡೈಯವುಮ್ ಪ್ರವೃತ್ತಿ ನಿವೃತ್ತಿಹಳಿಲೇ ತೆಳಿವದು. ಇದು ತಿರುಮನ್ತ್ರಾರ್ಥಾನುಸಂಧಾನತ್ತುಕ್ಕುಕ್ಕುರಿಪ್ಪಾಹಅಪ್ಪುಳ್ಳಾರ್ ಅರುಳಿಚೆಯ್ದು ವಿರಗು.

ಇದಿನ್ ಪಡಿಯಲೇ ದ್ವಯತ್ತಿಲುಮ್ ಚರಮಶ್ಲೋಕತ್ತಿಲುಮುಳ್ಳ ವರ್ಥಂಗಳ್ ತೆಳಿನು ಕೊಳ್ವದು.

ಶೇಷಶೇಷಿತ್ವವು, ಸ್ವಾಮಿ ದಾಸತ್ವದಲ್ಲಿ ಪರ್ಯವಸಾನ

ಇವತ್ತಿಲ್ ಈಶ್ವರನುಕ್ಕು ಪ್ರಕಾಶಿತ್ತ ಶೇಷಿತ್ವಂ, ಚೇತನಾ ಚೇತನ ಸಾಧಾರಣ ಧರ್ಮಮಾಹೈಯಾಲೇ ಚೇತನೈಕಾಂತಮಾನ ಸ್ವಾಮಿತ್ವಮಾಹಿರ ವಿಶೇಷತ್ತಿಲೇ ಪರ್ಯವಸಿಪ್ಪಿತ್ತನುಸಂಧಿಕ್ಕಪ್ರಾಪ್ತಮ್.

ಯಲ್ಲಿ ಪ್ರಾರ್ಥನೀಯವಾಗಿ ಅಭಿಪ್ರೇತವಾದ ಶೇಷ್ಯಭಿಮತವಾದ ಕೈಂಕರ್ಯವನ್ನು, ಲಕ್ಷ್ಮಣನ ಮತ್ತು ಪಾದುಕೆಗಳ ಪ್ರವೃತ್ತಿ ನಿವೃತ್ತಿಗಳಲ್ಲಿ ತಿಳಿಯಬಹುದು ಅದಾಗಿ ಪ್ರಣವದ ಲುಪ್ತ ಚತುರ್ಥಿಯಲ್ಲಿ [ಅ, ಉ, ಮ್, ಎಂಬಲ್ಲಿ ಅಕಾರದ ಮೇಲೆ ಚತುರ್ಥಿಯು ಲುಪ್ತವಾಗಿದೆ ಅಂದರೆ ಆಯ, ಉ, ಮ್ ಎಂಬುದು ಅಲ್ಲಿಯ ಪದಗಳ ಕ್ರಮ] 'ಆಯ' ಎಂಬಲ್ಲಿ ತಾದರ್ಥ್ಯವು ಹೇಳಲ್ಪಟ್ಟಿದೆ. ಈ ತಾದರ್ಥ್ಯದ ಕಾಷ್ಠಾಪ್ರಾಪ್ತವಾದ – ಎಲ್ಲೆಯಾದ ಭಗವದ್ಭಾಗವತ ಕೈಂಕರ್ಯವು ನಾರಾಯಣಾಯ ಎಂಬಲ್ಲಿರುವ ಆಯ ಶಬ್ದದಿಂದ ತಾತ್ಪರ್ಯ ವೃತ್ತ್ಯಾ ಬೋಧ್ಯವು. ಇಲ್ಲಿ **ಶೇಷಿ** ಪದವು ಭಗವದ್ಭಾಗವತ ಉಭಯಪರ

ಲಕ್ಷ್ಮಣನು ಭಗವದಭಿಮತಕ್ಕೆ ಅನುಸಾರವಾಗಿ ಶ್ರೀರಾಮನ ಜತೆಯಲ್ಲಿದ್ದು (ಪ್ರವೃತ್ತಿ) ಕೈಂಕರ್ಯವನ್ನು ಮಾಡುತ್ತಿದ್ದನು. ಶ್ರೀರಾಮನ ಪಾದುಕೆಗಳು, ಅವನ ಅಭಿಮತವನ್ನನುಸರಿಸಿ, ಭಾಗವತನಾದ ಭರತನ ಇಷ್ಟಾರ್ಥವನ್ನು ನೆರವೇರಿಸಲು ಅಯೋಧ್ಯೆಗೆ ಅವನೊಡನೆ ಹಿಂತಿರುಗಿದುವು (ನಿವೃತ್ತಿ). ಈ ನಿರೂಪಣಗಳು ತಿರುಮಂತ್ರಾರ್ಥವನ್ನು ಅನುಸಂಧಾನ ಮಾಡಲು ದೃಷ್ಟಾಂತವಾಗಿ ಅಪ್ಪುಳ್ಳಾರವರು (ಶ್ರೀದೇಶಿಕರ ಆಚಾರ್ಯರು) ಕೃಪೆಮಾಡಿ ಹೇಳಿದ ಉಪಾಯ (**ಕುರಿಪ್ಪು**) ಇದೇ ರೀತಿಯಲ್ಲಿ ದ್ವಯ, ಮತ್ತು ಚರಮಶ್ಲೋಕಗಳಲ್ಲಿ ಹೇಳಿರುವ ಅರ್ಥಗಳನ್ನು ತಿಳಿದುಕೊಳ್ಳುವುದು. ಅದಾಗಿ ದ್ವಯಮಂತ್ರದ ಆದಿಯಲ್ಲಿ ಶ್ರೀಮಾನಾದ ಶೇಷಿಯೂ, 'ಪ್ರಪದ್ಯೇ' ಎಂಬಲ್ಲಿಯ ಉತ್ತಮ ವಿಭಕ್ತಿಯಲ್ಲಿ ಶೇಷನೂ, ನಾರಾಯಣ ಶಬ್ದಗಳಲ್ಲಿ ಪರಸ್ಪರ ಸಾಪೇಕ್ಷತೆಯೂ, ನಾರಾಯಣಾಯ, ಎಂಬಲ್ಲಿಯ **ಆಯ**' ಶಬ್ದದಲ್ಲಿ ಕೈಂಕರ್ಯವೂ ಪ್ರತಿಪಾದ್ಯವಾಗಿವೆ.

ಚರಮ ಶ್ಲೋಕದಲ್ಲಿಯೂ, **ಮಾಂ** ಎಂಬಲ್ಲಿ ಶೇಷಿಯೂ, **ತ್ವಾ** – ಎಂಬಲ್ಲಿ ಶೇಷನೂ, 'ಸರ್ವಪಾಪೇ ಭ್ಯೋ ಮೋಕ್ಷಯಿಷ್ಯಾಮಿ' ಎಂಬಲ್ಲಿ ತಾತ್ಪರ್ಯವಾಗಿ ಕೈಂಕರ್ಯವೂ ವಿವಕ್ಷಿತವು.

ಶೇಷಶೇಷಿ ಭಾವವು ಸ್ವಾಮಿತ್ವ ದಾಸತ್ವದಲ್ಲಿ ಪರ್ಯವಸಾನ

ಇವತ್ತಿಲ್ ಈಶ್ವರನುಕ್ಕು, ಇತ್ಯಾದಿ - ಇವುಗಳಲ್ಲಿ ಈಶ್ವರನಾದ ಲಕ್ಷ್ಮೀ ವಿಶಿಷ್ಟ ನಾರಾಯಣನಿಗೆ ಪ್ರಕಾಶಿತವಾದ ಶೇಷಿತ್ವವು, ಚೇತನಾ ಚೇತನ ಸಾಧಾರಣ ಧರ್ಮ – ಅಂದರೆ ಚೇತನ ಮತ್ತು ಅಚೇತನಗಳೆರಡೂ ಈಶ್ವರನಿಗೆ ಶೇಷಭೂತಗಳು. ಆದ್ದರಿಂದ ಚೇತನನಿಗೆ ಮಾತ್ರ ಅನ್ವಯಿಸುವ ಸ್ವಾಮಿತ್ವವೆಂಬ ವಿಶೇಷಾರ್ಥದಲ್ಲಿ ಪರ್ಯವಸಿತವೆಂದು ತಿಳಿದು ಅನುಸಂಧಾನ ಮಾಡಬೇಕು ಹೀಗೆ ಶೇಷತ್ವವೂ ಚೇತನಾಚೇತನಗಳೆರಡಕ್ಕೂ ಸಾಮಾನ್ಯ ಧರ್ಮವಾಗಿರುವುದರಿಂದ ಚೇತನನ ಶೇಷತ್ವವು ದಾಸತ್ವದಲ್ಲಿ ಪರ್ಯವಸಿತವೆಂದು ತಿಳಿದು ಅನುಸಂಧಾನ ಮಾಡಬೇಕು. ಅಂದರೆ ಭಗವಂತನು ಚೇತನನಿಗೆ ಸ್ವಾಮಿ, ಚೇತನನು ಭಗವಂತನಿಗೆ ದಾಸ ಎಂಬುದು ಪರ್ಯವಸಿತಾರ್ಥ.

ಇಪ್ಪಡಿತ್ತನ್ನುಡೈಯ ಶೇಷತ್ವಮುಮ್ ಸಾಮಾನ್ಯ ಮಾಹೈಯಾಲೇ ದಾಸತ್ವಮಾಹಿರ ವಿಶೇಷತ್ತಿಲೇ ವಿಶ್ರಮಿಪ್ಪಿತ್ತನುಸಂಧಿಕ್ಕವೇಣುಮ್. ಇವಱ್ಱಿಲ್ ಸಾಮಾನ್ಯಮಾನ ಶೇಷಶೇಷಿಭಾವಮ್ ಪ್ರಥಮಾಕ್ಷರತ್ತಿಲ್ ಚತುರ್ಥಿಯಾಲೇ ಪ್ರಕಾಶ್ಯಮ್. ಇದಿನ್ ವಿಶೇಷಮಾನ ದಾಸತ್ವ ಸ್ವಾಮಿತ್ವಙ್ಗಳ್, ಇರುವರುಮ್ ಚೇತನರಾಯ್ ಕೊತ್ತು ಹೈಯಾಲೇ ಅರ್ಥಸಿದ್ಧಮ್. ಇಪ್ಪಡಿ ನಾರಾಯಣ ಶಬ್ದತ್ತಿಲುಮ್ ಸಾಮಾನ್ಯಮುಮ್, ವಿಶೇಷಮುಮ್ ಕಣ್ಡುಕೊಳ್ವದು. ಇದಿಲ್ ಸಾಮಾನ್ಯಮಾನ ಶೇಷತ್ವತ್ತಾಲೇ ಚೇತನನುಕ್ಕುಪ್ಪ್ರಾಪ್ತಮಾನ ಕಿಂಚಿತ್ಕಾರಮ್ ದಾಸತ್ವಮಾಹಿರ ವಿಶೇಷತ್ತಾಲೇಕೈಙ್ಕರ ರೂಪಮಾನ ಪುರುಷಾರ್ಥಮಾಯಿಱ್ಱು. ಇಪ್ಪಡಿ ಶೇಷಿತ್ವತ್ತಾಲೇ ವಂದ ವೀಶ್ವರನುಡೈಯ ವತಿಶಯ ಯೋಗಮುಮ್ ಸ್ವಾಮಿತ್ವಮಾಹಿರ ವಿಶೇಷತ್ತಾಲೇ ಅವನುಕ್ಕು ಪುರುಷಾರ್ಥಮಾಯ್ ಫಲಿಕ್ಕಿರದು.

ಉಪಾಯಾನುಷ್ಠಾನತ್ತಿನ್ ಅವಶ್ಯಕತ್ವಮ್

ಚೇತನ ರುಡೈಯ ರಕ್ಷಣತ್ತಿಲ್ ಈಶ್ವರ್ ಪ್ರಾಪ್ತನುಮಾಯ್, ಶಕ್ತನುಮಾಯ್, ತದ

ಸ್ವಾಮಿತ್ವ ದಾಸತ್ವದ ವಿವರ.

ಇವಱ್ಱಿಲ್ ಸಾಮಾನ್ಯಮಾನ ಇತ್ಯಾದಿ ಇವುಗಳಲ್ಲಿ ಸಾಮಾನ್ಯವಾದ ಶೇಷ ಶೇಷಿ ಭಾವವು ಪ್ರಣವದಲ್ಲಿ ಪ್ರಥಮಾಕ್ಷರವಾದ ಅಕಾರದ ಮೇಲಿರುವ ಲುಪ್ತಚತುರ್ಥಿಯಲ್ಲಿ ಪ್ರಕಾಶಿತವಾಗಿದೆ. ಆಯ ಮ್ ಎಂಬಲ್ಲಿ ಶೇಷ ಶೇಷಿ ಭಾವವು ಪ್ರಕಾಶಿತವೆಂದರ್ಥ. ಆದರೆ ಅಕಾರ ವಾಚ್ಯನೂ, ಮಕಾರವಾಚ್ಯನೂ ಚೈತನ್ಯ ಗುಣದಿಂದ ಕೂಡಿರುವುದರಿಂದ ಭಗವಂತನು ಸ್ವಾಮಿ, ಜೀವನು ದಾಸ ಎಂಬುದು ಅರ್ಥಸಿದ್ಧ. ಅಂದರೆ ಶೇಷ ಶೇಷಿ ಭಾವವೇ ದಾಸಸ್ವಾಮಿ ರೂಪವಾಗಿ ಸಿದ್ಧಿಸುತ್ತದೆ ಎಂಬುದು ತಾತ್ಪರ್ಯ. ಹೀಗೆಯೇ 'ನಾರಯಣಾಯ' ಎಂಬಲ್ಲಿರುವ ಚತುರ್ಥೀ ವಿಭಕ್ತಿಯಲ್ಲಿಯೂ ಈ ಸಾಮಾನ್ಯ ವಿಶೇಷ ಸಂಬಂಧವು ತಿಳಿಯತಕ್ಕದ್ದು. ಇಲ್ಲಿ ಶೇಷ ಶೇಷಿ ಭಾವವನ್ನು ಶಾಬ್ದವಾಗಿ ಹೇಳಿ ಆರ್ಥವಾಗಿ ಚೈತನ್ಯಾಶ್ರಯವಾದ ದಾಸ ಸ್ವಾಮಿ ಭಾವದಲ್ಲಿ ಪರ್ಯವಸಿತವಾಗುವಂತೆ ನಿರೂಪಿಸುವುದಕ್ಕೆ ಕಾರಣವೇನೆಂದರೆ, ಶೇಷ ಶೇಷಿ ಭಾವವು ಶರೀರಾತ್ಮ ಭಾವಸಾಧಕ, ಇದು ಚೇತನಾ ಚೇತನ ಸಾಧಾರಣ. ಇದು ಪ್ರಧಾನವಾದ ಅಂಶವಾಗಿ ಪ್ರತಿಪಾದ್ಯ ಇದರಿಂದ ದಾಸಸ್ವಾಮಿ ಭಾವವು ಚೇತನ ವಿಷಯದಲ್ಲಿ ಲಭಿಸುತ್ತದೆ ಎಂಬುದು ಇಲ್ಲಿಯ ಭಾವ ಇಲ್ಲಿ ಸಾಮಾನ್ಯವಾದ ಶೇಷತ್ವದಿಂದ ಚೇತನನಿಗೆ ಪ್ರಾಪ್ತವಾದ ಕಿಂಚಿತ್ಕಾರವು ದಾಸತ್ವವೆಂಬ ವಿಶೇಷದಲ್ಲಿ ಪರ್ಯವಸಿತವಾಗಿದೆ. ಇದರಿಂದ ದಾಸನಿಗೆ ಸ್ವಾಮಿ ಕೈಂಕರ್ಯವೇ ಪುರುಷಾರ್ಥ ಹೀಗೆಯೇ ಶೇಷಿತ್ವದಿಂದ ಈಶ್ವರನಿಗೆ ಲಭಿಸಿದ ಅತಿಶಯವು, ಸ್ವಾಮಿತ್ವವೆಂಬ ವಿಶೇಷದಲ್ಲಿ ಪರ್ಯವಸಿತವಾಗಿ, ಅವನಿಗೆ ಪುರುಷಾರ್ಥವಾಗಿ ಫಲಿಸುತ್ತದೆ. ಇಲ್ಲಿ "ಪರಗತ ಅತಿಶಯಾಧಾಯಕತಯಾ ಉಪಾದೇಯತ್ವಮೇವ ಯಸ್ಯ ದ್ರವ್ಯಸ್ಯ ಸ್ವರೂಪಂ ಸಶೇಷಃ ಪರಶ್ಶೇಷೀ" ಎಂಬ ಭಗವದ್ರಾಮಾನುಜಸೂಕ್ತಿಯು ಅನುಸಂಧೇಯ.

ಉಪಾಯಾನುಷ್ಠಾನದ ಅವಶ್ಯಕತೆ

ಹೀಗೆ ಸರ್ವಸ್ವತಂತ್ರನಾದ ಸ್ವಾಮಿಯು ಶೇಷಭೂತನಾದ ಜೀವನನ್ನು ರಕ್ಷಿಸಲು ಪ್ರಾಪ್ತನೂ ಸಮರ್ಥನೂ ಆಗಿರುವಾಗ, ಧನದಹಾಗೆ ಸ್ವವ್ಯಾಪಾರದಲ್ಲಿ ಅನರ್ಹನಾದ ಮತ್ತು ಅಶಕ್ತನಾದ ಜೀವನು, ಪ್ರವರ್ತಿಸುವುದು ಅನುಚಿತವೆಂದು ಹೇಳುವವರ ಶಂಕೆಯನ್ನು ಅನುವಾದಮಾಡಿ **ಚೇತನರುಡೈಯ ರಕ್ಷಣತ್ತಿಲ್,** ಎಂದಾರಂಭಿಸಿ ಆಚಾರ್ಯರು ಹೋಗಲಾಡಿಸುತ್ತಾರೆ.

ಧೀನಪ್ರವೃತ್ತಿಯ್ಯೈಯೊಪ್ರಯು ಚೇತನರ್ ಅಪ್ರಾಪ್ತರುಮಾಯ್ ಅಶಕ್ತರುಮಾಯಿರುಕ್ಕೈಕ್ಕು ನಿಬನ್ಧನಮ್ ಈಶ್ವರನುಡೈಯ ನಿರುಪಾಧಿಕ ಶೇಷಿತ್ವಮುಮ್, ನಿರುಪಾಧಿಕ ನಿಯಂತೃತ್ವಮುಮ್, ಇವರ್ಹಳುಡೈಯ ನಿರುಪಾಧಿಕ ಶೇಷತ್ವಮುಮ್, ನಿರುಪಾಧಿಕನಿಯಾಮ್ಯತ್ವಮುಮ್. ಉಡೈಯುವ ನುಡೈಮೈಯ್ಯೈ ರಕ್ಷಿಕ್ಕೈಯುಮ್, ಸಮರ್ಥ ಅಸಮರ್ಥನ್ನೈ ರಕ್ಷಿಕ್ಕೈಯುಮ್ ಪ್ರಾಪ್ತಮಿರೇ ರಕ್ಷಿಕ್ಕುಮ್ ಪೋದು ಕರ್ಮವಶ್ಯರೈಯೊರು ಉಪಾಯತ್ತಿಲೇ ಮೂಟ್ಟಿ ರಕ್ಷಿಕ್ಕೈ ಈಶ್ವರನುಕ್ಕು ಸ್ವಸಙ್ಕಲ್ಪ ನಿಯತಮ್.

ಅದಾಗಿ – ಚೇತನರ ರಕ್ಷಣದಲ್ಲಿ ಈಶ್ವರನು ಪ್ರಾಪ್ತನಾಗಿದ್ದಾನೆ – ಅಂದರೆ ಚೇತನರ ರಕ್ಷಣವು ಈಶ್ವರನ ಕರ್ತವ್ಯ ಈಶ್ವರನು ಶಕ್ತನೂ ಆಗಿದ್ದಾನೆ. ಚೇತನರು ಆ ಈಶ್ವರಾಧೀನ ಪ್ರವೃತ್ತಿಯಿಲ್ಲದೆ ಸ್ವರಕ್ಷಣದಲ್ಲಿ ಸ್ವತಃ ಅಶಕ್ಯರಾಗಿದ್ದಾರೆ ಇವಕ್ಕೆ ಕಾರಣವೇನೆಂದರೆ ಈಶ್ವರನು ನಿರುಪಾಧಿಕ ಶೇಷಿ ಮತ್ತು ನಿರುಪಾಧಿಕನಿಯಂತಾ. ಯಾವಕಾರಣವೂ ಇಲ್ಲದೆ ಚೇತನರಿಗೆ ಸ್ವಾಮಿ ಮತ್ತು ನಿಯಾಮಕನು ಹಾಗೆಯೇ ಚೇತನರು ನಿರುಪಾಧಿಕವಾಗಿ (ಯಾವನಿಮಿತ್ತವೂ ಇಲ್ಲದೆ) ಶೇಷಭೂತರು ಮತ್ತು ನಿಯಾಮ್ಯರು. ತನ್ನ ಸ್ವತ್ತನ್ನು ತಾನು ರಕ್ಷಿಸುವುದೂ, ಸಮರ್ಥನು ಅಸಮರ್ಥನನ್ನು ರಕ್ಷಿಸುವುದೂ ಪ್ರಾಪ್ತವಾದದ್ದು. ಆದ್ದರಿಂದ ಸಂಸಾರಿಚೇತನನ್ನು **ಅವನ ಪ್ರಯತ್ನವಿಲ್ಲದೆ** ಭಗವಂತನೇ ರಕ್ಷಿಸಬೇಕಲ್ಲವೇ ಎಂದರೆ, ಶೇಷಿಯಾದ ಭಗವಂತನು ಕರ್ಮವಶ್ಯರಾದ ಜೀವನನ್ನು ರಕ್ಷಿಸುವಾಗ, ಅವರನ್ನು ಭಕ್ತಿಪ್ರಪತ್ತಿರೂಪ ಉಪಾಯಾನುಷ್ಠಾನದಲ್ಲಿ ಪ್ರವರ್ತಿಸಿ ರಕ್ಷಿಸುತ್ತಾನೆ ಇದು ಈಶ್ವರನಿಗೆ ಸ್ವಸಂಕಲ್ಪನಿಯತ. ಭಗವಂತನು ಪ್ರವರ್ತಿಸಿರುವ ಶಾಸ್ತ್ರಗಳೇ `ಅವನ ಸಂಕಲ್ಪವೇನೆಂಬುದನ್ನು ತಿಳಿಸುತ್ತವೆ. ಜೀವರು ಕರ್ಮವಶ್ಯರಾಗಿರುವುದೇ ಇಂಥಹ ಸಂಕಲ್ಪಕ್ಕೆ ಕಾರಣ ಶಾಸ್ತ್ರಸಿದ್ಧವಾದ ಈ ಅಂಶವನ್ನು ಅಂಗೀಕರಿಸದೇ ಹೋದರೆ ಸರ್ವಮುಕ್ತಿ ಪ್ರಸಂಗಾದಿದೋಷಗಳನ್ನು ಪರಿಹರಿಸಲಾಗುವುದಿಲ್ಲ. ಇದನ್ನು ಒಪ್ಪದಿದ್ದರೆ ತಾವು ಅಚಿತ್ತುಲ್ಯ ಶೇಷತ್ವ ಪಾರತಂತ್ರ್ಯಕಾಷ್ಠೆಯನ್ನವಲಂಬಿಸಿರುವಂತೆ ಹೇಳಿಕೊಂಡು, ಸ್ವಬುದ್ಧಿಪೂರ್ವಕ ಸ್ವಾಮಿ ಕೈಂಕರ್ಯದಲ್ಲಿ ಪ್ರವೃತ್ತಿಸುವುದು ಉಪಪನ್ನವೆಂಬುದು ಹೇಗೆ. ಭಗವಂತನು ತನ್ನ ಕೈಂಕರ್ಯದಲ್ಲಿ ರಾಸಿಕ್ಯವನ್ನುಳ್ಳವರಿಗೆ, **"ವ್ರತಾಂತಮಖಿಲಂಕಾಲಂ ಸೇಚಯತ್ಯಮ್ಯತೇನವೈ"** ಎಂಬುದೇ ಮೊದಲಾದ ಪ್ರಮಾಣಗಳಿಂದ ತನ್ನ ಸ್ವಾತಂತ್ರದಿಂದ ತನ್ನ ಪುರುಷಾರ್ಥವೆಂಬ ಬುದ್ಧಿಯಿಂದ ಆ ಕೈಂಕರ್ಯಗಳನ್ನು ನಡೆಸಿಕೊಳ್ಳುತ್ತಾನೆಂದರೆ, ಹಾಗೆಯೇ ಭಕ್ತಿಪ್ರಪತ್ತಿಗಳೆಂಬ ಉಪಾಯಗಳಲ್ಲಿಯೂ ಅವುಗಳ ಅಂಗಗಳಲ್ಲಿಯೂ ಪ್ರವೃತ್ತಿಯನ್ನು ಸ್ವಾಮಿಯ ಆಜ್ಞೆಯೆಂದು ತಿಳಿದು ಅವುಗಳನ್ನು ಅನುಷ್ಠಿಸಿತನ್ಮುಖೇನ ಭಗವಂತನನ್ನು ಪ್ರೀತಿಗೊಳಿಸುವುದೂ ಕೈಂಕರ್ಯವಾದ್ದರಿಂದ ದಾಸತ್ವ ಪಾರತಂತ್ರ್ಯರಸಿಕನಾದ ತನಗೆ ಸ್ವರೂಪೋಚಿತವೆಂದು ತಿಳಿಯಬೇಕು. ಅಂಥಹ ಪ್ರವೃತ್ತಿಯು ಅನುಚಿತವೆಂಬ ಮಾತು ಅನಿರೂಪಣಮೂಲ, ಎಂಬುದು, **"ಇವರ್ಹಳ್ ಇತ್ಯಾದಿ ಸ್ವಸಂಕಲ್ಪ ನಿಯತಮ್"** ಎಂಬ ಶ್ರೀಸೂಕ್ತಿಗಳ ತಾತ್ಪರ್ಯವೆಂದು ಕರೂರುಸ್ವಾಮಿಗಳೆಂದು ಸುಪ್ರಸಿದ್ಧರಾದ ರಂಗರಾಮಾನುಜಮುನಿಗಳವರು ಉಪಪಾದಿಸಿದ್ದಾರೆ.

ಮೇಲೂ **'ಸಾರತಾತ್ಪರ್ಯಕೌಮುದಿ'** ಎಂಬ ತಮ್ಮ ರಹಸ್ಯತ್ರಯ ಸಾರವ್ಯಾಖ್ಯಾನಗ್ರಂಥದಲ್ಲಿ ಏಕದೇಶಿಗಳ ಅಭಿಪ್ರಾಯವನ್ನು ಹೀಗ ಅನುವಾದಿಸಿ ಖಂಡಿಸಿರುತ್ತಾರೆ. ಅದಾಗಿ

ಶ್ರೀಮನ್ನಿಗಮಾಂತ ಮಹಾದೇಶಿಕರು ವೇದಾಂತಸಿದ್ಧಾಂತ ಪ್ರವರ್ತನ ಧುರಂಧರರಾದ **ಶ್ರೀಭಾಷ್ಯಕಾರರ ಹೃದಯ**ವನ್ನು ಯಥಾವತ್ತಾಗಿ ತಿಳಿದುಕೊಂಡು, ಅವರಿಗೆ ಅನಭಿಮತವಾದ ಕುಮತಿ ಪರಿಕಲ್ಪಿತ ದುರರ್ಥಜಾಲಗಳನ್ನು ನಿರ್ಮೂಲಗೊಳಿಸಿ, ನಿಪುಣರಿಂದ ಅಂಗೀಕರಿಸಲ್ಪಟ್ಟ ಸರ್ವಪ್ರಮಾಣಾನುಸಾರವಾದ ಪ್ರಧಾನಪ್ರತಿತಂತಾರ್ಥವನ್ನು ನಿರ್ಧಾರಿಸುವವರಾಗಿ, **ಅಥೇಯೇತ್ಯ ಪ್ರಭೃತಿನಿಯಮ್ಯೈಃ** ಇತ್ಯಾದಿ ಶ್ಲೋಕ

ವನ್ನು ಅನುಗ್ರಹಿಸಿರುತ್ತಾರೆ. ವೇದಾಂತ ಸಿದ್ಧಾಂತವು ಕಾರ್ತಯುಗವಾದದ್ದು ಕಲಿಯುಗದಲ್ಲಿಯೂ ಅವಿಪ್ಲುತವಾಗಿ ಭಗವದ್ಭಾಷ್ಯಕಾರರಿಂದ ಸತ್ಪಸ್ಥರಲ್ಲಿ ಕೃಪೆಯಿಂದ ಪ್ರವರ್ತಿಸಲ್ಪಟ್ಟಿದೆ ಈ ಸಿದ್ಧಾಂತವನ್ನು ರಾಮಾನುಜೀಯರೆಂದು ಹೇಳಿಕೊಂಡು, ಅವರ ಶ್ರೀ ಸೂಕ್ತಿಗಳಿಗೆ ವಿರೋಧವಾಗಿ ಅರ್ಥಮಾಡಿ, ಆ ಸಿದ್ಧಾಂತಕ್ಕೆ ವಿರೋಧವನ್ನುಂಟುಮಾಡುವುದು ಸರಿಯಲ್ಲ ಹಾಗೆ ತಮ್ಮಿಷ್ಟಾನುಸಾರ ಅರ್ಥಮಾಡಿ, ಭಾಷ್ಯಕಾರ ಸಂಪ್ರದಾಯವನ್ನು ಅನುವರ್ತಿಸುವುದಾಗಿ ಅಭಿನಯಮಾಡುವುದು ಕೃದೃಷ್ಟಿ ಮತನಿಷ್ಠೆಯನ್ನು ಅವಲಂಬಿಸಿಕೊಂಡು ಇರುವ ಹಾಗೆ ಆಗುತ್ತದೆ ಆದ್ದರಿಂದ ಭಾಷ್ಯಕಾರ ಸಂಪ್ರದಾಯವನ್ನು ಅನುವರ್ತಿಸುವುದರಲ್ಲೇ ಆಸಕ್ತಿಯುಳ್ಳವರಿಗೆ, ಅವರಿಂದ ನಿರೂಪಿಸಲ್ಪಟ್ಟ ಅರ್ಥ ವಿಶೇಷವೇ ಪ್ರಧಾನ ಪ್ರತಿತಂತ್ರವಾಗಿ, ಅಂಗೀಕರಿಸಲ್ಪಡಬೇಕು. ಆ ಪ್ರಧಾನ ಪ್ರತಿತಂತ್ರವು ಜಗದೀಶ್ವರರಿಗೆ ಇರುವ ಶರೀರಾತ್ಮಭಾವ ಸಂಬಂಧವೇ ಹೊರತು ನಿರಪೇಕ್ಷೋಪಾಯತ್ವವಲ್ಲ. ಪರಿಣಾಮ್ಯುಪಾದಾನತ್ವವೇ ಮೊದಲಾದವು ಜಗತ್ಕರ್ತಾವಿಗೆ ಶರೀರಾತ್ಮಭಾವಸಂಬಂಧದಿಂದ ನಿರವದ್ಯಗಳು ಜಗತ್ತಿಗೂ ಬ್ರಹ್ಮಕ್ಕೂ ಇರುವ ಈ ಶರೀರಾತ್ಮಭಾವಸಂಬಂಧವು ಸೇಶ್ವರಸಾಂಖ್ಯ, ಗೌತಮೀಯ ನೈಯಾಯಿಕ ಮತದವರಿಗೆ ಈಶ್ವರತತ್ತ್ವವನ್ನು ಅಂಗೀಕರಿಸಿದ್ದಾಗ್ಯೂ, ಅನಭಿಮತ. ಆದ್ದರಿಂದ ವಿಶಿಷ್ಟಾದ್ವೈತಿಗಳಿಗೆ ಅಪ್ರಧೃಷ್ಯ ಪ್ರಧಾನಪ್ರತಿತಂತ್ರಗಳು. ಬ್ರಹ್ಮವೇ ಜಗತ್ತಿಗೆ ನಿಮಿತ್ತಭೂತನು, ಅವನೇ ಜಗತ್ತಿಗೆ ಉಪಾದಾನ ಕಾರಣವೊದಲಾದ ಉಪನಿಷತ್ಪ್ರತಿಪಾದ್ಯ ಅರ್ಥಗಳು, ದಿವ್ಯಾತ್ಮಸ್ವರೂಪವು ವಿಕಾರರಹಿತವೆಂದು ಹೊಗಳುವ ಶ್ರುತ್ಯಾದಿಗಳಿಗೆ ಪ್ರಾಮಾಣ್ಯಗಳನ್ನು ಬಾಧಿಸುವುದಿಲ್ಲ ಈ ನಿರ್ವಾಹವು ನಿಷ್ಕಂಪವಾಗಿ ನಿರ್ಣಯಿಸಿರುವುದರಿಂದ ಪ್ರಧಾನ ಪ್ರತಿತಂತ್ರವು ಸರ್ವ ವೇದಾಂತಿದರ್ಶನಗಳಿಗಿಂತಲೂ ಮೇಲಾದುದು

ಪರಮಪುರುಷಾರ್ಥದಲ್ಲಿ ಪರ್ಯವಸಾನವನ್ನು ಹೊಂದುವ ರೀತಿಗೆ ಈ ಶರೀರಾತ್ಮ ಭಾವವು ಹೇಗೆ ಪ್ರಧಾನವಾದದು ಎಂದು ಕೇಳಬಹುದು ಇದಕ್ಕೆ ಬದಿಲು :–ಎಲ್ಲಾ ಜೀವರೂ ಈಶ್ವರನೊಬ್ಬನಿಂದಲೇ ಧರಿಸಲ್ಪಟ್ಟು, ಅವನಿಂದಲೇ ನಿಯಮಿಸಲ್ಪಟ್ಟು, ಅವನೊಬ್ಬನಿಗೇ (ಲಕ್ಷ್ಮೀವಿಶಿಷ್ಟನಿಗೆ) ಶೇಷಭೂತರಾದ್ದರಿಂದ ಅವನಿಗೆ ನಿತ್ಯನಿರುಪಾಧಿಕವಾದ ಮತ್ತು ಅಪೃಥಕ್ಸಿದ್ಧ ವಿಶೇಷಣ ದ್ರವ್ಯವಾಗಿರುವುದರಿಂದ, ಭಗವತ್ಸ್ವರೂಪನಿರೂಪಕ ಧರ್ಮದ ಹಾಗೆ, ಅವನಿಗೆ ಅಧೀನವಾದ ಸತ್ತೆಯನ್ನುಳ್ಳವರು. ಭಗವಂತನ ಶುಭಾಶ್ರಯ ದಿವ್ಯಮಂಗಳ ವಿಗ್ರಹದ ಹಾಗೆ, ಅವನಿಂದಲೇ ರಕ್ಷಿಸಲ್ಪಡುವವರು, ಜೀವರಕ್ಷಣೆಯಲ್ಲಿ ಭಗವಂತನಿಗೆ ಸ್ವಪ್ರಯೋಜನತ್ವವು ಎಂಬ ಅರ್ಥವು ಅವಿವಾದ ಮತ್ತು ಶ್ರುತ್ಯಾದ್ಯುಕ್ತ ಪ್ರಕಾರವಾದುದು. ಈ ಪ್ರಕಾರ ತತ್ತ್ವಾಂಶವು ಒಪ್ಪಕೊಳ್ಳಲ್ಪಡುತ್ತದೆ. ಹೀಗೆಯೇ ಶ್ರುತ್ಯಾದ್ಯುಪದರ್ಶಿತ ರೀತಿಯಲ್ಲಿ ಪರಮಪುರುಷಾರ್ಥಕ್ಕೆ ಉಪಾಯಗಳಾದ ನ್ಯಾಸೋಪಾಸನ (ಭಕ್ತಿಪ್ರಪತ್ತಿಗಳು) ಗಳಿಗೆ ಬಾಧಕವಿಲ್ಲದೆ ಭಗವಂತನ ನಿರಪೇಕ್ಷೋಪಾಯತ್ವವು ಪ್ರತಿಪಾದಿಸಲ್ಪಡಬೇಕು. ಭಗವಂತನು ಸಿದ್ಧೋಪಾಯನೆಂಬುದು ಭಕ್ತಿಪ್ರಪತ್ತಿ ನಿಷ್ಠರಿಬ್ಬರಿಗೂ ಸಾಧಾರಣ. ನೈರಪೇಕ್ಷ್ಯವು ಮಾತ್ರ ನ್ಯಾಸನಿಷ್ಠೆಗೆ ವಿಶೇಷವಾದದ್ದು. ಅಂಗಪ್ರಪತ್ತಿ ನಿಷ್ಠೆಯಲ್ಲಿಯೂ, ಸ್ವತಂತ್ರ ಪ್ರಪತ್ತಿ ನಿಷ್ಠೆಯಲ್ಲಿಯೂ ಈ ನೈರಪಾಕ್ಷ್ಯಾಂಶವು ವಿಶೇಷವಾದದ್ದು. ಶರಣಾಗತಿಮಾಡಿದಮೇಲೆ, ಈ ನೈರಪೇಕ್ಷ್ಯಾಂಶವನ್ನು ಬೇರೆ ಪ್ರಯತ್ನಗಳುಬೇಕಿಲ್ಲ ಎಂಬ ಅರ್ಥದಲ್ಲಿ ಮಾತ್ರ ವ್ಯವಸ್ಥೆಮಾಡಬೇಕು. **ಇತಃ ಪಶ್ಚಾದಸ್ಮದ್ಯತನ ನಿರಪೇಕ್ಷೇಣ ಭವತಾ ಸಮರ್ಥ್ಯೋರ್ಯಸಾವರ್ಥಃ.** ಎಂಬ ಚೇತನಪ್ರಾರ್ಥನಾನುಸಾರ ಆತ್ಮನಿಕ್ಷೇಪಾನಂತರ ಮೋಕ್ಷಕ್ಕೆ ಬೇರೆ ಪ್ರಯತ್ನಗಳಾವುವೂ ಬೇಕಿಲ್ಲವೆಂಬ ಅಂಶದಲ್ಲಿ ನಿರಪೇಕ್ಷೋಪಾಯತ್ವವನ್ನು ತಡೆಗಟ್ಟಬೇಕು ಹಾಗಿಲ್ಲದೇಹೋದರೆ ಅಂಥಹ ನಿರಪೇಕ್ಷೋಪಾಯತ್ವ ರೂಪಪ್ರಾರ್ಥನೆಯೂ ಕೂಡಚೇತನ ವ್ಯಾಪಾರವಾದ್ದರಿಂದ, ಆ ಪ್ರಾರ್ಥನೆಗೂ ನೈರಪೇಕ್ಷ್ಯವನ್ನು ಹೇಳಬೇಕಾದ ದುರವಸ್ಥೆಯು ಬರುತ್ತದೆ.

**ಶರೈಸ್ತು ಸಂಕುಲಾಂ ಕೃತ್ವಾಲಂಕಾಂ ಪರಬಲಾರ್ದನಃ। ಮಾಂನಯೇದ್ಯದಿ ಕಾಕುತ್ಸ್ಥ:
ತತ್ತಸ್ಯ ಸದೃಶಂಭವೇತ್ ॥**, ರಾಮನು ಬಾಣಗಳಿಂದ ಲಂಕೆಯನ್ನು ಧ್ವಂಸಮಾಡಿ ತನ್ನನ್ನು ಕರೆದುಕೊಂಡು
ಹೋಗಬೇಕೆಂಬ, ಸೀತೆಯ ಅಭಿಸಂಧಿಯು, **ಪ್ರತೀಚ್ಛ ಚೈನಾಂ ಭದ್ರಂತೇ ಪಾಣಿಂ ಗೃಹ್ಣೀಷ್ವಪಾಣಿನಾ**
ಈ ಸೀತೆಯನ್ನು ನೀನು ಸ್ವೀಕರಿಸು, ನಿನ್ನ ಕೈಯ್ಯಿಂದ ಅವಳ ಕೈಯ್ಯನ್ನು ಹಿಡಿದು ಕೋ – ಪಾಣಿಗ್ರಹಣ
ಮಾಡು, ಎಂಬ ರೀತಿಯಲ್ಲಿ ಸದಾಚಾರ್ಯನಿಂದ ಆತ್ಮ ಸಮರ್ಪಣಾನುರೂಪವಾದ ವ್ಯಭಿಮಾನವುಂಟಾದ ಮೇಲೆಯೇ
ಹೊರ್ತು ಮುಂಚೆಯಲ್ಲ **ದತ್ತಾಃ ಪ್ರಜಾಜನಕವತ್ತವ ದೇಶಿಕೇಂದ್ರೈಃ ಪತ್ಯಾಭಿನಂದ್ಯ ಭವತಾಪರಿ
ಣೀಯ ಮಾನಾಃ** – (ಶರಣಗತಿ ದೀಪಿಕಾ) – ಜನಕರಿಂದ ಸೀತೆಯು ರಾಮನಿಗೆ ಸಹಧರ್ಮಚಾರಿಣಿಯಾಗಿ ಸಮ
ರ್ಪಿಸಲ್ಪಟ್ಟ ರೀತಿಯಲ್ಲಿ ಆಚಾರ್ಯರುಗಳಿಂದ ಸಂಸಾರಿ ಚೇತನರು ಭಗವಂತನಲ್ಲಿ ಸ್ವಾತ್ಮ ಸಮರ್ಪಣೆ ಮಾಡಲ್ಪ
ಡುತ್ತಾರೆ ನಂತರ ಸೀತೆಯನ್ನು ಶ್ರೀರಾಮಚಂದ್ರನು ಅಂಗೀರಿಸಿದಂತೆ, ಚೇತನನನ್ನು ಭಗವಂತನು ಅಂಗೀ
ಕರಿಸುತ್ತಾನೆ ನಂತರ, ಸೀತೆಯ ರಕ್ಷಣಾದಿಭರಗಳು ಭರ್ತಾವಾದ ರಾಮಚಂದ್ರನಿಗೆ ಸೇರಿದ ಹಾಗೆ, ಜೀವನ
ರಕ್ಷಣಾದಿಗಳು, ಮೋಕ್ಷಕ್ಕೆ ಕರೆದೊಯ್ದು ಸ್ವಸಮಾನಭೋಗ ಸಾಮ್ರಾಜ್ಯದಲ್ಲಿ ಅವನನ್ನು ಇರಿಸುವ ಪರ್ಯಂತ
ಭಗವಂತನ ಕೃತ್ಯ. ಅದಕ್ಕಾಗಿ ಭರಸಮರ್ಪಣಾನಂತರ ಇವನೇನನ್ನೂ ಸ್ವಾತ್ಮರಕ್ಷಣೆಗಾಗಿ ಮಾಡಬೇಕಿಲ್ಲ.
ಇದೇ ನೈರಪೇಕ್ಷ್ಯವೇವಿನಹ ಕರ್ಮವಶ್ಯನಾದ ಚೇತನನನ್ನು **ನಿರ್ಹೇತುಕವಾ**ಗಿ ಭಗವಂತನು ತಾನೇ ರಕ್ಷಿಸುತ್ತಾ
ನೆಂಬುದಲ್ಲ. ಹಾಗೆ ರಕ್ಷಿಸಿದರೆ, ವೈಷಮ್ಯ ನೈರ್ಘೃಣ್ಯ, ಸರ್ವಮುಕ್ತಿ ಪ್ರಸಂಗ, ಇತ್ಯಾದಿ ದೋಷಗಳು ಬರು
ತ್ತವೆಯೆಂದು ಹಿಂದೆಯೇ ಹೇಳಿದ್ದೇವೆ.

ಮೇಲೆ ಹೇಳಿದ ರೀತಿಯಾದ ಉಪಾಯ ವಿಶೇಷ ಪ್ರವರ್ತನವೂ ಸ್ವಾರ್ಥವಾಗಿ ಪ್ರಯತ್ನ ಮಾಡುವ
ಶ್ರೀಮಾನಾದ ನಾರಾಯಣನಿಂದ ಮಾಡಿಸಲ್ಪಡುತ್ತದೆ ಆದ್ದರಿಂದ ಅವನು ನಿರುಪಾಧಿಕ ಸರ್ವಶೇಷಿ. ಜೀವನು
ಸ್ವರಕ್ಷಣಾರ್ಥವಾಗಿ ನ್ಯಾಸೋಪಾಸನಗಳಲ್ಲಿ ಪ್ರವರ್ತಿಸುವುದು ಇವನ ಭಗವದೇಕ ಪಾರತಂತ್ರ್ಯವನ್ನು ನಾಶ
ಮಾಡಲಾರದು. ಅಚಿತ್ತಿಗೂ ಸರ್ವೇಶ್ವರನ ಸಂಕಲ್ಪ ಕಲ್ಪಿತವಾದ ಶಬ್ದ ಸ್ಪರ್ಶಾದ್ಯಾಶ್ರಯತ್ವವು, ತದನು
ರೂಪವಾದ ಸುಖದುಃಖಾದಿ ಜನನ ವ್ಯಾಪಾರಗಳು ಇದ್ದೂ ಆದರ ಪಾರ ತಂತ್ರ್ಯವನ್ನು ಹೋಗಲಾಡಿಸುವುದಿಲ್ಲ
ವಲ್ಲವೇ ಹಾಗೆಯೇ ಅಚಿತ್ತುಲ್ಯವಾದ ಪಾರತಂತ್ರ್ಯವನ್ನುಳ್ಳ ಚೇತನನು ಭಗವಂತನ ಸಂಕಲ್ಪಾಧೀನವಾದ ಸಿದ್ಧಿಯನ್ನು
ಕೊಡುವ ಸ್ವಬುದ್ಧಿ ಪೂರ್ವಕ ಪ್ರಯತ್ನಕ್ಕೆ ತಾನು ಆಶ್ರಯನಾಗಿ, ಅದಕ್ಕನುರೂಪವಾದ ವ್ಯಾಪಾರವನ್ನು
ಮಾಡುವುದರಿಂದ ಪಾರತಂತ್ರವು ಹೋಗುವುದಿಲ್ಲ ಇದು ಚೈತನ್ಯ ಕೃತ್ಯ ಅಚೇತನಕ್ಕೂ ಚೇತನನಿಗೂ
ಇರುವ ಅಂತರ. ಸ್ವತಂತ್ರನ ಸಂಕಲ್ಪಾನುಗುಣವಾಗಿ ನಡೆದುಕೊಳ್ಳುವುದೇ ಪಾರತಂತ್ರ್ಯದ ಕಾಷ್ಠೆ. ಆದ್ದರಿಂದ
ಭಗವದಾಜ್ಞೆಯನ್ನು ಅನುಸರಿಸಿದ ಸ್ವಾಧಿಕಾರಾನುರೂಪ ಸ್ವಪ್ರವೃತ್ತಿಯೇ ಚೇತನಪಾರತಂತ್ರ್ಯದ ಎಲ್ಲೆ ಹೀಗೆ
ಪ್ರವರ್ತಿಸುವವರಿಗೂ, **ಮಮಯಾಃ ಕ್ರಿಯಾಃ ತಾಸ್ಸರ್ವಾ ಭಗವತ ಏವ,** ಎಂಬ ರೀತಿಯಲ್ಲಿ, ಅವನಿಗೇನಶೇಷ
ಭೂತನಾಗಿ ಅವನಿಂದ ಮಾಡಿಸಲ್ಪಟ್ಟವನಾಗಿ ಅವನ ಸಂತೋಷವನ್ನುಂಟುಮಾಡುವ ಪುರುಷಾರ್ಥಸಾಧನ
ಉಪಾಯತ್ವಾದಿಗಳು,ಸ್ವರೂಪೋಚಿತವಾದವುಗಳು. ಈ ವ್ಯಾಪಾರಗಳಲ್ಲಿ ನಿರುಪಾಧಿಕ ಸ್ವಸಂಬಂಧವು ಅಂದರೆ
ತಾನೇ ಸ್ವತಂತ್ರನಾಗಿ ಮಾಡಿದೆನೆಂಬ ಅನುಸಂಧಾನವು ಪಾರತಂತ್ರ್ಯವನ್ನು ಹೋಗಲಾಡಿಸುತ್ತದೆ. ವಿವೇಕಿಗೆ
ಅದು ಕೂಡದು. ಆದ್ದರಿಂದ ಚೇತನಾ ಚೇತನಗಳು ಏಕ ಪ್ರಕಾರವಾಗಿ ಭಗವಂತನಿಗೆ ಶರೀರವಾಗಿರುವುದು
ಸ್ವರೂಪವಾಗಿದ್ದು, ಚೇತನರಿಂದ **ಚೈತನ್ಯಾನು ರೂಪವಾಗಿ** ಈಶ್ವರನಿಂದ ಮಾಡಿಸಲ್ಪಡುವ ಸ್ವರಕ್ಷಣಾರ್ಥಸ್ವ
ವ್ಯಾಪಾರಗಳು; ಯಥಾವಸ್ಥಿತವಾದ ತತ್ತ್ವಜ್ಞಾನವುಳ್ಳವನಿಗೆ ಸ್ವರೂಪಕ್ಕೆ ಅನುರೂಪವಾದುವು. ಹೀಗೆ
ಸ್ವರೂಪಕ್ಕೆ ಉಚಿತವಾದ ಪುರುಷಾರ್ಥಕ್ಕೆ ಉಪಾಯಭೂತಗಳಾದ **ಭಕ್ತಿಪ್ರಪತ್ತಿ** ಗಳಲ್ಲೊಂದರಲ್ಲಿ ಪ್ರವರ್ತಿಸುವುದು'

ನಿಲ್ಲೈತನ್ದ ತಾರಕನಾಯ್ ನಿಯಮಿಕ್ಕುಮಿರೈವನುಮಾಯ್ ।
ಇಲ್ಲದೊನ್ರೈನಾವಹೈಯೆಲ್ಲಾನ್ತನದೆನುಮೆನ್ದೈಯುಮಾಯ್ ॥

ಅಚೇತನದ ಹಾಗೆ ಚೇತನರೂ ಭಗವಂತನಿಗೆ ಶರೀರವಾಗಿರುವರೆಂದು ತಮ್ಮ ಸ್ವರೂಪವನ್ನು ತಿಳಿದವರಿಗೆ ಉಚಿತವಾದದ್ದು. ಇಂಥಹ ತತ್ತ್ವಜ್ಞಾನವು ಆತ್ಮಕ್ಷೇಮದಲ್ಲಿ ಪರ್ಯವಸಾನವನ್ನು ಹೊಂದುವುದರಿಂದ ಶರೀರಾತ್ಮಭಾವವು ಪ್ರಧಾನ ಪ್ರತಿತಂತ್ರವೆಂಬುದು ಉಪಪನ್ನತರ. ಭಕ್ತಿಪ್ರಪತ್ತಿ ವಿಧಿಗಳು ಅಧಿಕಾರಿ ವಿಶೇಷಣವೆಂಬ ಅತಿವಾದವು **ಸ್ಥಿರೀಕರಣ ಭಾಗದಲ್ಲಿ** ನಿರಾಕರಿಸಲ್ಪಡುತ್ತವೆ. ಅದರಿಂದಲೇ ಲೋಕಮಾತಾವಿನ ಪುರುಷಕಾರತ್ತ್ವವೂ ವ್ಯಾಜಸಾಪೇಕ್ಷ – ಅಂದರೆ ಅವಳಲ್ಲಿ ಪುರುಷಕಾರ ಪ್ರಪತ್ತಿಯನ್ನು ಮಾಡುವುದರಿಂದಲೇ ಉಂಟಾಗುತ್ತದೆಯೇ ವಿನಹ ನಿರ್ಹೇತುಕವಾಗಲ್ಲ ಮೇಲೂ ಜಗನ್ಮಾತೆಯು ಪುರುಷಕಾರವನ್ನು ಮಾತ್ರ ಮಾಡುವವಳು ಎಂಬುದು **ಉಪಾದತ್ತೇ ಸತ್ತಾಸ್ಥಿತಿನಿಯಮನಾದ್ಯೈಶ್ಚಿದಚಿತೌ ಸ್ವಮುದ್ದಿಶ್ಯ ಶ್ರೀಮಾನಿತಿವದತಿವಾಗೌಪನಿಷದೀ ॥** (ಚೇತನಾಚೇತನಗಳ ಸ್ವರೂಪಸ್ಥಿತಿ ಪ್ರವೃತ್ತಿಗಳನ್ನು ಲಕ್ಷ್ಮೀ ಪತಿಯು ಅಂಗೀಕರಿಸುತ್ತಾನೆ– ಅಂದರೆ ಚೇತನಾಚೇತನಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳು **ಲಕ್ಷ್ಮೀಪತಿಯ** ಪ್ರಯೋಜನಕ್ಕಾಗಿಯೇ ಸ್ವೀಕರಿಸಲ್ಪಡುತ್ತವೆ, ಎಂದು ಉಪನಿಷತ್ತು ಘೋಷಿಸುತ್ತದೆ) ಎಂಬ ಕೂಟಸ್ಥ ಸೂಕ್ತಿ ತಾತ್ಪರ್ಯವನ್ನು ತಿಳಿಯದವರ ಮಾತು **ಶ್ರೀಮಾನ್** ಎಂದು ಲಕ್ಷ್ಮೀ ವಿಶಿಷ್ಟ ತತ್ತ್ವವು ಸ್ವಾಧೀನಸ್ವಾರ್ಥ ಸಮಸ್ತ ಚಿದಚಿದ್ವಸ್ತು ಸ್ವರೂಪಸ್ಥಿತಿ ಪ್ರವೃತ್ತಿಯುಳ್ಳದ್ದು ಚೇತನಾಚೇತನರ ಸ್ವರೂಪ, ಕಾಲಾಂತರ ಅನುವೃತ್ತಿ, ವ್ಯಾಪಾರಗಳು ಲಕ್ಷ್ಮೀಪತಿಯ ಅಧೀನವಾದವುಗಳು ಮತ್ತು ವಿಶಿಷ್ಟ ದಂಪತಿಗಳ ಪ್ರಯೋಜನಕ್ಕಾಗಿಯೇ ಉಂಟಾದವು, ಎಂದರ್ಥ. ಆದ್ದರಿಂದ ಶ್ರೀ ಭಾಷ್ಯಕಾರರಿಂದ ನಿರೂಪಿಸಲ್ಪಟ್ಟ ಪ್ರಧಾನ ಪ್ರತಿತಂತ್ರದ ಅರ್ಥವನ್ನು ಅಂಗೀಕರಿಸದೆ, ತಮ್ಮಬುದ್ಧನ್ಯುಸಾರವಾಗಿ ನಿರ್ಹೇತಕ ಕೃಪಾಮೂಲವಾದ ನಿರಪೇಕ್ಷೋಪಾಯತ್ವಾದಿಗಳನ್ನು ಪ್ರಧಾನ ಪ್ರತಿತಂತ್ರಗಳೆಂದು ಹೇಳುವುದು ಸರಿಯಲ್ಲ.

ಈ ಶರೀರಾತ್ಮಭಾವಸಂಬಂಧವು ಯಥಾವಸ್ಥಿತವಾದ ವೇದ ತಾತ್ಪರ್ಯವನ್ನು ತಿಳಿದಿರುವ ಪೂರ್ವಾಚ್ಯಾರ್ಯರುಗಳಿಂದ ಅಂಗೀಕರಿಸಲ್ಪಟ್ಟ ಪ್ರಧಾನ ಪ್ರತಿತಂತ್ರವೆಂದು, ಇದರ **ಸ್ವಾದು**ತಮತ್ತ್ವವನ್ನು ಅನುಭವಿಸಿ ಸಂತೋಷದಿಂದ, **ನಿಲ್ಲೈತಂದತಾರಕನಾಯ್** ಎಂಬ ಪಾಶುರವನ್ನು ಆಚಾರ್ಯರು ಹಾಡುತ್ತಾರೆ. **ನಿಲ್ಲೈ ತಂದತಾರಕನಾಯ್ – ನಿಲ್ಲೈ** - ಸತ್ತೆ (ಇರುವಿಕೆ) ಇದುಸ್ಥಿತಿ ಪ್ರವೃತ್ತಿಗಳಿಗೂ ಉಪಲಕ್ಷಣ – ಸ್ಥಿತಿಪ್ರವೃತ್ತಿಗಳನ್ನೂ ನೇರಿಸಿಕೊಳ್ಳಬೇಕೆಂದರ್ಥ. ಸತ್ತಾಸ್ಥಿತಿಪ್ರವೃತ್ತಿಗಳನ್ನು **ತಂದ** – ಕೊಟ್ಟ. **ತಾರಕನಾಯ್** – ಧಾರಕನಾಗಿ, ಜೀವನ ಸ್ವರೂಪಸ್ಥಿತಿ ಪ್ರವೃತ್ತಿರೂಪ ವ್ಯಾಪಾರಗಳಿಗೆ ಈಶ್ವರನು ಧಾರಕನು ಕೇವಲ ಆಧಾರ ಭೂತಗಳಾದ ಪೃಥಿವ್ಯಾದಿವ್ಯಾವೃತ್ತಿ. **ನಿಯಮಿಕ್ಕುಮ್ ಇರೈವನುಮಾಯ್** – ನಿರುಪಾಧಿಕ ನಿಯಮನೈಕ ಸ್ವಭಾವನಾದ ನಿಯಂತಾವಾಗಿ – ತಂದೆ ರಾಜಾ ಮೊದಲಾದ ಇತರರು ಸೋಪಾಧಿಕ ಸ್ವಾಮಿಗಳು – ತಂದೆಗೆ ಶರೀರ ಸಂಬಂಧ, ರಾಜ್ಯದಲ್ಲಿರುವ **ಪ್ರಜೆ ಎಂಬ** ಸಂಬಂಧ ರಾಜರುಗಳಿಗೆ. ಅದರಿಂದ ಅವರುಗಳು ಸೋಪಾಧಿಕ ಬಂಧುಗಳು - ನಿಮಿತ್ತದಿಂದ ಸ್ವಾಮಿಗಳು ಎಂದರ್ಥ.

ಇಲದೊನ್ರೈನಾವಹೈ - ಈಶ್ವರನಾದ ತನಗೆ ಶೇಷವಲ್ಲದು ಯಾವದೂ ಇಲ್ಲವೆನ್ನುವಂತೆ, **ಎಲ್ಲಾಂತನದೆನುಮೆಂದೆಯು ಮಾಯ್** – ಎಲ್ಲಾ ವಸ್ತುಗಳೂ (ಚೇತನಾ ಚೇತನಗಳು) ತನಗೆ ಶೇಷವಾಗಿಯೂ, (ನನಗೂ ಸ್ವಾಮಿಯಾಗಿಯೂ ಇರುವ **ತುಲ್ಯೆಯೊನ್ರಿಲ್ಲೆಯೆನನಿನ್ರ** – ಮೇಲೆ ಹೇಳಿದ ಧಾರಕತ್ವ, ನಿಯಂತೃತ್ವ, **ಶೇಷಿತ್ವ**ರೂಪದಿಂದ ತನಗೆ ಸದೃಶನಾದವನು **ಬೇರೆಯಾರೂ** ಇಲ್ಲ

ತುಳ್ಳೆಯೊನ್ರಿಲ್ಲೈ ಯೆನ ನಿನ್ರ ತುೞಾಯ್ ಮುಡಿಯಾನುಡಮ್ಬಾಯ್ ।
ವಿಳ್ಳೆಯಿನ್ರಿ ನಾಮುಡಿ ಯೋಮೆನ್ರು ವೇದಿಯರ್ ಮೆಯ್ಪ್ಪೊರುಳೇ ॥೧೦॥
ಯದ್ಯೇತಂ ಯತಿಸಾರ್ವಭೌಮ ಕಥಿತಂ ವಿದ್ಯಾದವಿದ್ಯಾತಮಃ ।
ಪ್ರತ್ಯೂಷಂ ಪ್ರತಿತನ್ತ್ರ ಮನ್ತಿಮ ಯುಗೇ ಕಶ್ಚಿದ್ವಿಪಶ್ಚಿತ್ತಮಃ ॥
ತತ್ರೈಕತ್ರ ಝಟಿತ್ಯುಪೈತಿ ವಿಲಯಂ ತತ್ತನ್ಮತಸ್ಥಾಪನಾ ।
ಹೇವಾಕ ಪ್ರಥಮಾನ ಹೈತುಕ ಕಥಾ ಕಲ್ಲೋಲ ಕೋಲಾಹಲಃ ॥೧೧॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತನ್ತ್ರ ಸ್ವತನ್ತ್ರಸ್ಯ
ಶ್ರೀಮದ್ವೇಙ್ಕಟನಾಥಸ್ಯ ಶ್ರೀಮದ್ವೇದಾಂತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಪ್ರಧಾನ ಪ್ರತಿತನ್ತ್ರಾಧಿಕಾರ ಸ್ತೃತೀಯಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ

ವೆನ್ನುವಂತೆ, ಪ್ರಕಾಶಿಸುವ, **ತುೞಾಯ್‌ಮುಡಿಯಾನ್** – ತುಳಸಿಮಾಲೆಯನ್ನು ತಲೆಯಲ್ಲಿ ಧರಿಸಿರುವ ಭಗವಂತನಿಗೆ, **ಉಡಂಬಾಯ್** – ಮೇಲೆ ಹೇಳಿದ - ನಿಯತ ಅಧೇಯತ್ವ, ವಿಧೇಯತ್ವ ಶೇಷತ್ವಗಳಿಂದ ಭಗವಂತನಿಗೆ ಸರ್ವವೂ ಶರೀರವಾಗಿ, ಇಲ್ಲಿ ತುಳಸೀಮಾಲೆಯನ್ನು ತಲೆಯಲ್ಲಿ ಧರಿಸಿರುವನೆಂದು ಹೇಳಿರುವುದರಿಂದ, ಅವನ ದಿವ್ಯಮಂಗಳ ವಿಗ್ರಹದ ಹಾಗೆ, ಆಧೇಯತ್ವಾದಿಗಳಿಂದ ಸರ್ವಚೇತನಾ ಚೇತನಗಳೂ ಅವನಿಗೆ ಶರೀರವೆಂಬುದು ಸೂಚಿತ **ವಿಳ್ಳೆಯಿನ್ರಿ ನಾಮುಡಿಯೋಮ್ (ವಿಳ್ಳೆ** - ಕ್ರಯ,) ಕ್ರಯವಿಲ್ಲದದಾಸರು- ನಿರುಪಾಧಿಕದಾಸ ಭೂತರು **ಎನ್ರು** – ಎಂಬ ಇದು, **ವೇದಿಯರ್ ಮೆಯ್ ಪ್ಪೊರುಳೇ** – ಯಥಾವಸ್ಥಿತವಾದ ವೇದ ತಾತ್ಪರ್ಯವನ್ನು ಅರಿತ ನಮ್ಮ ಪೂರ್ವಾಚಾರ್ಯರುಗಳು, "ಯಸ್ಯ ಪೃಥಿವೀ ಶರೀರಂ", "ಯಸ್ಯಾತ್ಮಾ ಶರೀರಂ," ಇತ್ಯಾದಿ ಶ್ರುತಿಗಳ ಅರ್ಥಗಳನ್ನು ತಿಳಿದು, ಹೇಳುವ ನಿಜವಾದ ಅರ್ಥ

ಈ ಪ್ರಕಾರವಾದ ಪ್ರಧಾನ ಪ್ರತಿತಂತ್ರಾರ್ಥ ನಿರ್ಣಯವು ಸ್ವರೂಪಕ್ಕೆ ಉಚಿತವಾದ ಪುರುಷಾರ್ಥದಲ್ಲಿ ರುಚಿಯನ್ನುಂಟು ಮಾಡಿ ಅದನ್ನು ಪಡೆಯಲು ಉಪಾಯವಾದ ಭಕ್ತಿ ಪ್ರಪತ್ತಿಗಳಲ್ಲೊಂದರಲ್ಲಿ ಪ್ರವೃತ್ತಿಯನ್ನುಂಟುಮಾಡುತ್ತದೆ, ಎಂಬುದು ಮಾತ್ರವಲ್ಲ. ನಮ್ಮ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಸರ್ವಶುತ್ರಿಗಳಿಗೂ ಸ್ವಾರಸ್ಯವಾದ ಅರ್ಥವಿಶೇಷವನ್ನು ಸಂಪಾದಿಸಿಕೊಟ್ಟು, ಇತರ ಸಿದ್ಧಾಂತಿಗಳು, ಇಂಥಹ ಸರ್ವಶುತ್ರಿ ಸಾಮರಸ್ಯವಿಲ್ಲದೆ, **ವಶಿಕತಟನೀ ವರ್ಷಾರಂಭ ಪ್ರವಾಹ ವಿಡಂಬಕ್ಯೈಃ,** ಎಂಬ ರೀತಿಯಲ್ಲಿ ಮಳೆಗಾಲ ದ ಕ್ಷುದ್ರನದೀ ಪ್ರವಾಹವನ್ನು ಅನುಕರಿಸಿ ಮಹಾ ಆರ್ಭಾಟಗಳನ್ನು ಮಾಡಿ ಪರ್ಯವಸಾನದಲ್ಲಿ ಆ ಕ್ಷುದ್ರನದಿಯು ಬತ್ತಿ ಹೋಗುವಂತೆ, ಬಾಲಿಶ ವ್ಯಾಮೋಹದಿಂದ ಕೊನೆಗೆ ಜೋರೊಡನೆ ಕಿತ್ತೆಸೆಯಲ್ಪಡುತ್ತಾರೆಂಬುದೂ ಪ್ರಯೋಜನ· ಆ ರೀತಿಯಲ್ಲಿ ಪರಸಿದ್ಧಾಂತಿಗಳನ್ನು ಜಯಿಸಿ ಜಯಪತಾಕೆಯನ್ನೂ ಹಾರಿಸುವುದು ಸುಲಭವೆಂಬುದು ತಾತ್ಪರ್ಯವೆಂದು, ಆಚಾರ್ಯರು **"ಯದ್ಯೇತಂ ಯತಿಸಾರ್ವಭೌಮ ಕಥಿತಂ,** – ಎಂಬ ಶ್ಲೋಕದಿಂದ ನಿರೂಪಿಸುತ್ತಾರೆ.

ಯತಿಸಾರ್ವಭೌಮ ಕಥಿತಂ. – ಭಗವದ್ರಾಮಾನುಜರಿಂದ "ಅವಸ್ಥಿತೇರಿತಿಕಾಶಕೃತ್ಸ್ನಃ, ನತ್ವ ದೃಷ್ಟಾಂತ ಭಾವಾತ್ (2–1-9) ಎಂಬ ಬ್ರಹ್ಮಸೂತ್ರ ಭಾಷ್ಯಗಳಲ್ಲಿ ಪ್ರಮಾಣ ಮತ್ತು ಉಪಪತ್ತಿ (ನ್ಯಾಯ) ಪೂರ್ವಕವಾಗಿ ಅನುಗ್ರಹಿಸಲ್ಪಟ್ಟ, **ಅವಿದ್ಯಾತಮಃ ಪ್ರತ್ಯೂಷಂ** – ಅನಾತ್ಮನ್ಯಾತ್ಮಬುದ್ಧಿರ್ಯಾ, ಅಸ್ವೇ ಸ್ವಮಿತಿ ಯಾಮತಿಃ- **ಎಂಬ** ಪ್ರಕಾರ **ದೇಹವೇ** ಆತ್ಮವೆಂದು **ತಿಳಿಯುವ** ತನ್ನದಲ್ಲದ ಗೃಹಾರಾಮಾದಿಗಳನ್ನು ತನ್ನದೇ **ವೆಂದು ತಿಳಿಯುವ, ದೇಹಾತ್ಮಭ್ರಮ ಸ್ವತಂತ್ರಾತ್ಮಭ್ರಮಾದಿಗಳೆಂಬ ಅಜ್ಞಾನಾಂಧಕಾರಕ್ಕೆ,**

ಉಷ :
ಪ್ರತಿತಕಾಲವಾದ, – ಅಂದರೆ ಕತ್ತಲೆಯನ್ನು ಅರುಣೋದಯವು ಹೋಗಲಾಡಿಸುವಂತೆ ಅಜ್ಞಾನವನ್ನು ಪ್ರಧಾನಂತ್ರಾರ್ಥವು ಹೋಗಲಾಡಿಸುತ್ತದೆ. **ಏತಂ ಪ್ರತಿತಂತ್ರಂ** – ಪ್ರಧಾನಪ್ರತಿತಂತ್ರವಾದ ಶರೀರಾತ್ಮಭಾವ ಸಂಬಂಧವನ್ನು, **ಅಂತಿಮಯುಗೇ** - ಕಲಿಯುಗದಲ್ಲಿ, ಕೃತಾದಿ ಯುಗಗಳಲ್ಲಿ ಈ ಅರ್ಥವು ಸರ್ವಜನವಿದಿತ ವಾಗಿತ್ತು ಎಂಬುದು ಸೂಚಿತ **ಯದಿಕಶ್ಚಿತ್ ವಿಪಶ್ಚಿತ್ತಮಃ** – ಯದಿಕಶ್ಚಿತ್ - ಯಾವನಾದರೂ ಒಬ್ಬ' ಯದಿಶಬ್ದವು ಈ ಜ್ಞಾನವು ಸುಕೃತ ಪರಿಪಾಕಲಭ್ಯವೆಂದೂ, ಕಶ್ಚಿತ್‌ಪದವು - ಸಮಹಾತ್ಮಾ ಸುದುರ್ಲಭಃ – ಎಂಬಂತೆ ಅಧಿಕಾರಿ ದೌರ್ಲಭ್ಯವನ್ನೂ ಸೂಚಿಸುತ್ತವೆ, ವಿಪಶ್ಚಿತ್ತಮಃ – ಅಂಧಹನನು ವಿದ್ವತ್ ಶ್ರೇಷ್ಠನು ದುರ್ವಾದಿಗರ್ವನಿರ್ಮೂಲನಕ್ಷಮನು ಎಂದು ಭಾವ. **ತತ್ರೈಕತ್ರ** – ಶ್ರೀಭಾಷ್ಯಾದಿ ಜ್ಞಾನಪೂರ್ಣನಾದ ಅವನೊಬ್ಬ ನಲ್ಲಿ, **ತತ್ತನ್ಮತ ಸ್ಥಾಪನಾ** - ಆಯಾಯಾ ಮತಗಳನ್ನು ಸ್ಥಾಪಿಸುವುದರಲ್ಲಿ **ಹೇವಾಕ** - ಕುತೂಹಲದಿಂದ **ಪ್ರಥಮಾನ** - ಅಭಿವೃದ್ಧವಾದ **ಹೈತುಕ ಕಥಾ** – ಹೇತುವಾದಿಗಳ ಜಲ್ಪವಿತಂಡಾದಿ ರೂಪವಾದ, **ಕಲ್ಲೋಲ ಕೋಲಾಹಲಃ**– ಅಲೆಗಳ ಕೋಲಾಹಲವು – ಕಲಕಲ ಶಬ್ದಾಡಂಬರಗಳು-

> ಉಚ್ಚೈರುಚ್ಚರಿತವ್ಯಾ ಯತ್ಕಿಂಚಿದಜಾನತಾಪಿ ಪುರುಷೇಣ ।
> ಬಹುಮನ್ಯಂತೇಹಿ ಮೂಢಾಃ, ವಿದುಷಾಮಪಿ ಸಂಶಯೋಭವತಿ ॥

ಸ್ವಲ್ಪ ಜ್ಞಾನವೂ ಇಲ್ಲದ ಪುರುಷನು ಘಟ್ಟಿಯಾಗಿ ಮಾತನಾಡಿ, ಅದರಿಂದ ಮೂಢರಿಗೆ ಇವನು ದೊಡ್ಡ ಪಂಡಿತನೆಂಬ ಭ್ರಮವನ್ನುಂಟು ಮಾಡುವುದಲ್ಲದೆ, ಪಂಡಿತರಿಗೂ ಸಂಶಯವನ್ನುಂಟು ಮಾಡುತ್ತಾನೆಂಬ ರೀತಿಯಲ್ಲಿ ಮತಾಂತರಸ್ಥರ ಜಲ್ಪವಿತಂಡಾವಾದಗಳು, **ಝಟಿತಿ** – ತತ್‌ಕ್ಷಣದಲ್ಲಿಯೇ, **ವಿಲಯಮುಪೈತಿ** – (ಸಮುದ್ರದಲ್ಲಿ ಬಿದ್ದ ಕ್ಷುದ್ರನದಿಯ ಅಲೆಯ ಶಬ್ದದ ಹಾಗೆ), ನಾಶವನ್ನು – ಆತ್ಯಂತಿಕಲಯವನ್ನು ಹೊಂದುತ್ತದೆ.

ಭಗವದ್ರಾಮಾನುಜರಿಂದ ನಿರೂಪಿತವಾದ ಶರೀರಾತ್ಮಭಾವ ಸಂಬಂಧವನ್ನು ತಿಳಿದ ಪಂಡಿತ ಶ್ರೇಷ್ಠನು ಮತಾಂತರಸ್ಥರ ದುರ್ವಾದಗಳನ್ನು ಸಮೂಲವಾಗಿ ಅನಾಯಾಸೇನ ನಾಶ ಮಾಡಲು ಸಮರ್ಥನಾಗುತ್ತಾನೆಂಬುದು ತಾತ್ಪರ್ಯ. ಶರೀರಾತ್ಮಭಾವ ಸಂಬಂಧ ಜ್ಞಾನಕ್ಕೆ ಪರವಾದಿ ನಿರಸನವೂ ಫಲವೆಂಬುದು ನಿರೂಪಿಸಲ್ಪಟ್ಟಿತು.

ಶ್ರೀಮದ್ರಹಸ್ಯತ್ರಯಸಾರದ ಪ್ರಧಾನ ಪ್ರತಿತಂತ್ರಾಧಿಕಾರದ "ಸಾರಚಂದ್ರಿಕಾ" ವ್ಯಾಖ್ಯಾನವು ಸಮಾಪ್ತ

ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಅರ್ಥ ಪಂಚಕಾಧಿಕಾರಃ

ಆದೌಪ್ರಾಪ್ಯಂ ಪರಮ ಮನಘಂ ಪ್ರಾಪ್ತೃರೂಪಂಚ ಮಾದೌ |
ಇಷ್ಟೋಪಾಯನ್ತ್ವಯನ ನಮಸೋರೀಪ್ಸಿತಾರ್ಥಂ ಚತುರ್ಥ್ಯಾಮ್ ||
ತದ್ವ್ಯಾಘಾತಂ ಮಮಕೃತಿಗಿರಿ ವ್ಯಂಜಯಂತಂ ಮನುಂ ತಮ್ |
ತತ್ಪ್ರಾಯಂಚ ದ್ವಯಮಪಿ ವಿದರ್ ಸಮ್ಮತ ಸ್ಸರ್ವವೇದೀ ||12||

ಶ್ರೀಃ
ಶ್ರೀಮತೆ ನಿಗಮಾಂತ ಮಹಾ ದೇಶಿಕಾಯನಮಃ
ಸಾರಚಂದ್ರಿಕಾವ್ಯಾಖ್ಯಾ

ಹೀಗೆ ಶಾರೀರಕ ಶಾಸ್ತ್ರಪ್ರವೃತ್ತಿಯಿಂದ ಉಂಟಾದ ಮೋಕ್ಷಾಭಿಲಾಷೆಯುಳ್ಳವನಿಗೆ ರಹಸ್ಯಶಾಸ್ತ್ರದಲ್ಲಿ ಪ್ರವೃತ್ತಿಸುವ ಪ್ರಕಾರವನ್ನು ತಿಳಿಸಿ, ರಹಸ್ಯಗಳಲ್ಲಿಯೂ ಶ್ರೀಮನ್ಮೂಲಮಂತ್ರ, ದ್ವಯ, ಚರಮಶ್ಲೋಕಗಳೆಂಬ ಮೂರು ಮಂತ್ರಗಳು ಪ್ರಧಾನ ಪ್ರತಿತಂತ್ರಾರ್ಥಗಳನ್ನು ವಿಶದವಾಗಿ ತಿಳಿಸುತ್ತವೆಯೆಂದು ವಿಚಾರಿಸಿ, ಜಗದೀಶ್ವರರ ಶರೀರಾತ್ಮ ಭಾವ ಸಂಬಂಧವೇ ವೇದಾಂತಿಗಳಿಗೆ ಪ್ರಧಾನವಾದ ಪ್ರತಿತಂತ್ರವೆಂದು ನಿರ್ಧಾರಣೆಮಾಡಿ, ಅನಂತರ ಅದರಿಂದ ಲಭ್ಯವಾದ ಅರ್ಥಪಂಚಕವನ್ನು **"ಆದೌಪ್ರಾಪ್ಯಂ** ಎಂದಾರಂಭಿಸಿ ಆಚಾರ್ಯಸಾರ್ವಭೌಮರು ನಿರೂಪಿಸುತ್ತಾರೆ.

ಆದೌ – ಅಕಾರಃ ಆದಿಃ ಯಸ್ಯ ಸಮುದಾಯಸ್ಯ ತಸ್ಮಿನ್ – ಅಕಾರ, ನರ, ಅಯನ ನಾರಾಯಣ ಶಬ್ದ ಸಮುದಾಯದಲ್ಲಿ, **ಪರಮಂ** – ಸರ್ವೋತ್ಕೃಷ್ಟನಾದ, **ಅನಘಂ,** – ಹೇಯಪ್ರತ್ಯನೀಕನಾದ, **ಪ್ರಾಪ್ಯಂ** – ಪರಮಂ ಎಂಬ ಶಬ್ದವನ್ನು ಇಲ್ಲಿಯೂ ಕಾಕಾಕ್ಷಿನ್ಯಾಯೇನ ಅನ್ವಯಿಸಿ, ಪರಮಂಪ್ರಾಪ್ಯಂ – ಪರಮಪ್ರಾಪ್ಯವಾದ ಬ್ರಹ್ಮವನ್ನೂ, **ಮಾದೌ** – ಮಃ ಆದಿಃ ಯಸ್ಯ ಪದ ಸಮುದಾಯಸ್ಯ, ಎಂದು ವಿಗ್ರಹಮಾಡಿ, ಮಕಾರವೇ ಆದಿಯಾಗಿರತಕ್ಕಂಥ ಪದಸಮುದಾಯಗಳಲ್ಲಿ - ಅದಾಗಿ, ಪ್ರಣವದಲ್ಲಿಯೂ, ನಮಶ್ಶಬ್ದದಲ್ಲಿಯೂ ಇರುವ ಮಕಾರಗಳೆರಡರಲ್ಲಿಯೂ, ನಾರ, ಅಯನ ಶಬ್ದಗಳಲ್ಲಿಯೂ, **ಪ್ರಾಪ್ತೃರೂಪಂಚ** - ಪ್ರಾಪ್ತವಾದ ಜೀವಾತ್ಮನ ಸ್ವರೂಪವನ್ನೂ, **ಇಷ್ಟೋಪಾಯಂ** – ಇಷ್ಟವಾದ ಭಗವತ್ಪ್ರಾಪ್ತಿರೂಪ ಫಲಕ್ಕೆ ಉಪಾಯವನ್ನು, ಅಥವಾ ಆಯಾಸವಿಲ್ಲದೆ ಫಲವನ್ನು ಸಾಧಿಸಿ ಕೊಡುವ ಉಪಾಯವಾದ್ದರಿಂದಲೂ, ಫಲಕ್ಕೆ ಅನುಗುಣವಾದ್ದರಿಂದಲೂ ಉಪಾಯವು ಸಮ್ಮತವು (ಇಷ್ಟವು), ಎಂಬ ಅರ್ಥದಲ್ಲಿಯೂ 'ಇಷ್ಟೋಪಾಯಂ', ಎಂದು ವ್ಯವಹರಿಸುವುದು, **ಅಯನ ನಮಸೋಃ,** ಅಯನ ನಮಶ್ಶಬ್ದಗಳಲ್ಲಿ ಈಯತೇ–ಅನೇನ, ಎಂಬ ವ್ಯುತ್ಪತ್ತಿಯಿಂದ ನಾರಾಯಣ ಶಬ್ದದಲ್ಲಿರುವ, ಅಯನ ಶಬ್ದವು ಸಿದ್ಧೋಪಾಯನಾದ ಭಗವಂತನನ್ನು ತಿಳಿಸುತ್ತದೆ. ಹಾಗೆಯೇ ನಮಶ್ಶಬ್ದವು "ನಮಸ್ಕಾರಾತ್ಮಕಂ ಯಸ್ಮೈವಿಧಾಯಾತ್ಮ ನಿವೇದನಮ್", ನಮಸ್ಕಾರ ರೂಪವಾದ ಆತ್ಮನಿವೇದನ – ಆತ್ಮಸಮರ್ಪಣವನ್ನು ವಿಧಾಯ – ಮಾಡಿ, ಎಂಬ ಪ್ರಮಾಣದಿಂದ ನಮಶ್ಶಬ್ದವು ಶರಣಾಗತಿಪರವಾಗಿ ಹೇಳಲ್ಪಟ್ಟಿದೆ. ಇದು ಸಾಧ್ಯೋಪಾಯ; ಹೀಗೆ ಅಯನ, ನಮಶ್ಶಬ್ದಗಳಲ್ಲಿ, ಉಪಾಯ ಸ್ವರೂಪವು ನಿರೂಪಿಸಲ್ಪಟ್ಟಿದೆ. **ಈಪ್ಸಿತಾರ್ಥಂ** – ನಮಗೆ ಅಪೇಕ್ಷಿತವಾದ, ಪುರುಷಾರ್ಥವನ್ನು **ಚತುರ್ಥ್ಯಾಂ,** – 'ಆಯ' ಎಂಬ ಚತುರ್ಥೀ ವಿಭಕ್ತಿಯಲ್ಲಿ ನಿರೂಪಿಸಿರುತ್ತದೆ. **ಮಮಕೃತಿ** – ನಮಶ್ಶಬ್ದದಲ್ಲಿರುವ 'ಮ' ಎಂಬುದು **"ಮಮ"** **ಎಂಬ**

ಅರ್ಥಪಂಚಕ ಸ್ವರೂಪ ಕಥನ-ರ್, ಅರ್ಥಪಂಚಕ ಷಡರ್ಥ ಶಬ್ದಯೋರಭೇದಃ

ನಾರಾಯಣಾದಿ ಶಬ್ದಂಗಳಿಲೇ ವಿವಕ್ಷಿತಮಾನ ಸಂಬನ್ದ ವಿಶೇಷತ್ತೈ ಸಿದ್ಧಾನ್ತತ್ತುಕ್ಕು ತ್ತಳಮಾಕ್ಕಿ ಇತ್ತೈಯನುಬನ್ದಿತ್ತಿರುಕ್ಕುಮರ್ಥಪಂಚಕತ್ತೈಶಿಲರ್ ವಿಚಾರಿತ್ತಾರ್‌ಹಳ್. ಇಸ್ಸಂಬಂಧ ತ್ತೋಡೇ ಕೂಡ ಷಡರ್ಥಙ್ಗಳೈನ್ರು ಶಿಲರ್ ಅನುಸಂಧಿತ್ತಾರ್ಗ್ಹಳ್.

ಪದವನ್ನು ತಿಳಿಸುತ್ತದೆ. ಆ "ಮಮಕಾರ", ವಾಚಿಯಾದ **ಗಿರಿ** – ಮಾತಿನಲ್ಲಿ, **ತದ್ವ್ಯಾಘಾತಂಚ** - ಪುರುಷಾರ್ಥ ಪ್ರತಿಬಂಧಕವಾದ 'ಮಮ' ಕಾರವನ್ನು, ಇದು ಅಹಂಕಾರ ಮಮಕಾರಾದಿ ಸರ್ವವಿರೋಧಿಪಾಪವನ್ನು ತಿಳಿಸುತ್ತದೆ. **ವ್ಯಂಜಯಂತಂ** – ಪ್ರಕಾಶಪಡಿಸುವ, **ತಂ ಮನುಂ** – ಆ ಅಷ್ಟಾಕ್ಷರವನ್ನೂ, **ತತ್ಪ್ರಾಯಂಚ** – ತಿರುಮಂತ್ರದ ಹಾಗೆಯೇ (ಪ್ರಾಯಂ – ಪ್ರಕಾರ, ಅದರ ಹಾಗೆಯೇ ಎಂದರ್ಥ) ಅರ್ಥಪಂಚಕ ಜ್ಞಾನವನ್ನು ಶಬ್ದಗಳಿಂದಲೂ, ಅರ್ಥಗಳಿಂದಲೂ ತಿಳಿಸುವ **ದ್ವಯಮಪಿ** - ದ್ವಯಮಂತ್ರವನ್ನೂ, ಅಪಿಶಬ್ದವು ಚರಮ ಶ್ಲೋಕವನ್ನೂ ತಿಳಿಸುತ್ತದೆ - ಅದಾಗಿ ದ್ವಯ ಮತ್ತು ಚರಮಶ್ಲೋಕಗಳನ್ನು **ವಿದನ್** – ಇವುಗಳು ಅರ್ಥಪಂಚಕಗಳನ್ನು ತಿಳಿಸುತ್ತವೆ ಎಂದು ಅವುಗಳನ್ನು ತಿಳಿದವನ್, **ಸರ್ವವೇದೀ** - ಎಲ್ಲಾ ವೇದಗಳನ್ನು ತಿಳಿದವನಾಗಿ **ಸಮ್ಮತಃ** - ಅಂಗೀಕರಿಸಲ್ಪಡುತ್ತಾನೆ. ಅದಾಗಿ ಅರ್ಥಪಂಚಕ ಜ್ಞಾನವನ್ನು ತಿಳಿದವನು ಸರ್ವವೇದಗಳನ್ನೂ ಸ್ಮೃತೀತಿಹಾಸ ಪುರಾಣಗಳನ್ನೂ ತಿಳಿದವನೆಂದು ಭಾವಿಸಲ್ಪಡುತ್ತಾನೆ

ಹೀಗೆ ಶರೀರಾತ್ಮಭಾವ ಸಂಬಂಧವು ಪ್ರಧಾನ ಪ್ರತಿತಂತ್ರವೆಂದು ನಿರ್ಧಾರಿಸಿ, ಅರ್ಥಪಂಚಕ ಜ್ಞಾನವನ್ನು ನಂತರ ವಿವರಿಸುತ್ತಾರೆ ಅರ್ಥಪಂಚಕವನ್ನು ಮಾತ್ರ ವಿಚಾರಿಸಿ, ಶರೀರಾತ್ಮ ಭಾವ ಸಂಬಂಧವನ್ನು ವಿಚಾರಿಸದೆ ಇರುವ ಕೆಲವು ಪೂರ್ವಾಚಾರ್ಯಗ್ರಂಥಗಳಿಗೆ ವಿರೋಧವಾಗದ ಹಾಗೆ, ಅವರ ಅಭಿಪ್ರಾಯವನ್ನು ತಿಳಿದುಕೊಂಡು, **ನಾರಾಯಣಾದಿ ಶಬ್ದಂಗಳಿಲೇ**' ಎಂದು ಆಚಾರ್ಯರು ವರ್ಣನೆ ಮಾಡುತ್ತಾರೆ,

ಅರ್ಥಪಂಚಕ ಶರೀರಾತ್ಮ ಭಾವಸಂಬಂಧಗಳ ಪರಸ್ಪರ ಸಾಕಾಂಕ್ಷತೆ,

ನಾರಾಯಣಾದಿ - ನಾರಾಯಣ ಶಬ್ದದಲ್ಲಿಯೂ ಹಾಗೆಯೇ ಪ್ರಣವದಲ್ಲಿಯೂ ವಿವಕ್ಷಿತವಾದ ಶರೀರಾತ್ಮಭಾವ ಸಂಬಂಧ ವಿಶೇಷವನ್ನು ಸಿದ್ಧಾಂತಕ್ಕೆ ಆಧಾರವಾಗಿಟ್ಟುಕೊಂಡು, (ದಳ-ಅಡಿಭಾಗ) ಇದನ್ನು ಅನುಬಂಧಿಸಿ - ಆಶ್ರಯಿಸಿರುವ ಅರ್ಥಪಂಚಕವನ್ನು ಮಾತ್ರ ಕೆಲವರು ವಿಚಾರಿಸಿದರು. ಈ ಶರೀರಾತ್ಮ ಭಾವ ಸಂಬಂಧವನ್ನೂ ಅರ್ಥಪಂಚಕವನ್ನೂ ಸೇರಿಸಿ, ಆರು ಅರ್ಥಗಳು, ತಿರುಮಂತ್ರ ಪ್ರತಿಪಾದ್ಯವೆಂದು ಕೆಲವು ಆಚಾರ್ಯರುಗಳು ಅನುಸಂಧಾನ ಮಾಡಿದ್ದಾರೆ. ಅದಾಗಿ ಪೂರ್ವಾಧಿಕಾರದಲ್ಲಿ ಪ್ರಧಾನ ಪ್ರತಿತಂತ್ರವೆಂದು ಶರೀರಾತ್ಮಭಾವ ಸಂಬಂಧವನ್ನು ಆಚಾರ್ಯರು ನಿರೂಪಿಸಿದರು. ಈ ಅಧಿಕಾರದಲ್ಲಿ ಅರ್ಥಪಂಚಕವನ್ನು ಪೃಥಕ್ಕಾಗಿ ನಿರೂಪಿಸಿರುತ್ತಾರೆ. ಹಾಗೆಯೇ ನಿಗಮನಾಧಿಕಾರದಲ್ಲಿ ಶರಿರಾತ್ಮಭಾವ ಸಂಬಂಧವನ್ನೂ, ಅರ್ಥಪಂಚಕವನ್ನೂ ಬೇರೆ ಬೇರೆಯಾಗಿಯೇ ಅನುಭಾಷಣ ಮಾಡಿರುತ್ತಾರೆ. ಕೆಲವು ಅಚಾರ್ಯರು ಅರ್ಥಪಂಚಕವನ್ನು ಮಾತ್ರ ನಿರೂಪಿಸಿದ್ದಾಗ್ಯೂ ಶ್ರೀರಾಮಮಿಶ್ರರ ಷಡರ್ಥ ಸಂಕ್ಷೇಪಗ್ರಂಥದಲ್ಲಿ ಈ ಆರು ಅರ್ಥಗಳನ್ನು ಸೇರಿಸಿ ನಿರೂಪಿಸಿದ್ದಾಗ್ಯೂ, ಅರ್ಥಕ್ಕೆ ಬಾಧಕವಿಲ್ಲವಾದರೂ ಔಚಿತ್ಯವಾದ ಕ್ರಮವು ಇದೆಯೆಂದರ್ಥ. ಅರ್ಥಪಂಚಕಜ್ಞಾನವು ಶರೀರಾತ್ಮ ಭಾವ ಸಂಬಂಧದಿಂದ ಸಿದ್ಧಿಸುತ್ತದೆ, ಹೇಗೆಂದರೆ, ಶರೀರಾತ್ಮ ಭಾವಸಂಬಂಧದಿಂದ ಶೇಷ ಶೇಷಿ ಭಾವ ಸಂಬಂಧಜ್ಞಾನವು ಸಿದ್ಧಿಸುತ್ತದೆ. ಅದರಿಂದ ಶೇಷಿಯಾದ ಸರ್ವೇಶ್ವರನು ಪ್ರಾಪ್ಯನೆಂದೂ, ಶೇಷಭೂತನಾದ ಜೀವನು ಪ್ರಾಪ್ತಾವೆಂದೂ, ಶೇಷ ಸ್ವರೂಪಾನುಗುಣ ಶರಣಾಗತಿಯು ಉಪಾಯವೆಂದೂ, ಶೇಷಭೂತನಾದ

ಇಸ್ಸಂಬನ್ಧಂ ಪೋಲೇ ಮುಮುಕ್ಷುಕ್ಕುವುಕ್ಕು ವಿಶೇಷಿತ್ತರಿಯವೇ ಣ್ಡುವದಾಹ ಚ್ಚೇರ್ತ್ತ ವರ್ಥಪಞ್ಚಕಮೋದೆನ್ನಿಲ್ :–

ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂಚೈವ ತಥಾಪ್ರಾಪ್ತಿ ವಿರೋಧಿಚ ।
ವದನ್ತಿ ಸಕಲಾ ವೇದಾಸ್ಸೇತಿಹಾಸ ಪುರಾಣಕಾಃ ॥

ಜೀವನಿಗೆ ಶೇಷಿ ಪ್ರಾಪ್ತಿಯೇ ಪುರುಷಾರ್ಥವೆಂದೂ, ಇದಕ್ಕೆ ವಿರೋಧವಾದುದು ಸಾತಂತ್ರ್ಯಭೂತವಾದ ಅಹಂಕಾರ ಮಮಕಾರಗಳೆಂದೂ, ಅರ್ಥಪಂಚಕ ಜ್ಞಾನವು ಶರೀರಾತ್ಮಭಾವ ಸಂಬಂದ ಜ್ಞಾನದಿಂದ ಲಭಿಸುತ್ತದೆ.

ಅರ್ಥಪಂಚಕ ಮತ್ತು ಷಡರ್ಥಗಳು ಬೇರೆ ಬೇರೆಯಲ್ಲ

ಆದ್ದರಿಂದ ಕೇವಲ ಐದು ಅರ್ಥಗಳು ನಿರೂಪಿಸಿದ್ದ್ಯಾಗ್ಯೂ, ಆರು ಅರ್ಥಗಳನ್ನು ನಿರೂಪಿಸಿದ್ದಾಗ್ಯೂ ಬಾಧಕವಿಲ್ಲವೆಂದು ತಾತ್ಪರ್ಯ. ಐದು ಅರ್ಥಗಳನ್ನು ನಿರೂಪಿಸಿದ್ದರೂ ಇವಕ್ಕೆ ಆಧಾರಭೂತವಾದ ಶರೀರಾತ್ಮಭಾವ ಸಂಬಂಧ ಜ್ಞಾನವು ಕಟ್ಟಡದ ಅಡಿಯಲ್ಲಿ ಮರೆಯಾಗಿರುವ ಅಡಿಭಾಗದ ಹಾಗೆ, ಊಹ್ಯವೆಂದರ್ಥ.

ಕೇವಲ ಶರಿರಾತ್ಮ ಭಾವಸಂಬಂಧ ಜ್ಞಾನವನ್ನು ಮಾತ್ರ ತಿಳಿದುಕೊಂಡು ಅದರಿಂದ ಲಬ್ಧವಾದ ಶೇಷ ಶೇಷಿ ಭಾವ ಜ್ಞಾನವನ್ನು ಅವಲಂಬಿಸಿ, ಶೇಷ ವಸ್ತುವನ್ನು ರಕ್ಷಿಸುವ ಭಾರವು ಶೇಷಿಗೇನೆ ಸೇರಿದ್ದದು, ಅತ್ಯಂತ ಪರತಂತ್ರರಾದ ನಾವು, ನಾವಾಗಿಯೇ ಪುರುಷಾರ್ಥ ಪ್ರಾಪ್ತಿಗೆ ಯಾವ ಉಪಾಯವನ್ನೂ ಅನುಷ್ಠಿಸ ಬೇಕಿಲ್ಲವೆಂಬ, ಕೆಲವರ ಆಪಾತತಃ ಉಂಟಾಗುವ ಮೋಹವನ್ನು ಹೋಗಲಾಡಿಸಲು ಅರ್ಥಪಂಚಕ ಜ್ಞಾನವನ್ನು ಅವಶ್ಯವಾಗಿ ತಿಳಿಯಬೇಕೆಂಬುದು ಈ ಅಧಿಕಾರದ ತಾತ್ಪರ್ಯವೆಂದು ಅಭಿನವ ದೇಶಿಕ ಉತ್ತಮೂರ್ ವೀರರಾಘವಾ ಚಾರ್ಯ ಸ್ವಾಮಿಗಳವರು ತಮ್ಮ ಗಂಥದಲ್ಲಿ ಈ ಅಧಿಕಾರಕ್ಕೆ ಅವತಾರಿಕೆಯನ್ನು ಅನುಗ್ರಹಿಸಿರುತ್ತಾರೆ.

ಇಸ್ಸಂಬಂಧಂಪೋಲೀ, ಈ ಶರೀರಾತ್ಮಭಾವ ಸಂಬಂಧದ ಹಾಗೆ, ಮೋಕ್ಷದಲ್ಲಿ ಅಭಿಲಾಷೆಯುಳ್ಳವನಿಗೆ ವಿಶೇಷವಾಗಿ ತಿಳಿಯಬೇಕಾದದು ಎಂದು ಅರ್ಥಪಂಚಕವನ್ನು ಸೇರಿಸಿರುತ್ತಾರೆ. ಈ ಅರ್ಥಪಂಚಕ ಜ್ಞಾನವಿಲ್ಲ ದವನಿಗೆ ಮೋಕ್ಷವೇ ಸಿದ್ಧಿಸುವುದಿಲ್ಲವೆಂದು ತಾತ್ಪರ್ಯ.

ಅರ್ಥಪಂಚಕದ ವಿವರ

ಈ ಅರ್ಥಪಂಚಕವು ಯಾವುದೆಂದರೆ, (1)**ಪ್ರಾಪ್ಯಸ್ಯ ಬ್ರಹ್ಮಣೋರೂಪಂ** ಇತ್ಯಾದಿ ಹೇಳಲ್ಪಟ್ಟದೆ.

---

1) ಹಾರೀತಸಂಹಿತೆ–ಪ್ರಾಪ್ಯನಾದ ಆದಾಗಿ ನಮ್ಮಿಂದ ಪಡೆಯಲ್ಪಡುವ ಭಗವಂತನ ಸ್ವರೂಪ ರೂಪ ಗುಣವಿಭೂತಿಗಳೂ ಪ್ರಾಪ್ತುಶ್ಚ - ಆ ಬ್ರಹ್ಮವನ್ನು ಪಡೆಯುವ ಜೀವಾತ್ಮ ಸ್ವರೂಪ, ಪ್ರಾಪ್ತ್ಯುಪಾಯಂ - ಆ ಬ್ರಹ್ಮನನ್ನು ಪಡೆಯಲು ಅನುಷ್ಠಿಸಬೇಕಾದ ಸಾಧನೆ, ಫಲಂಪ್ರಾಪ್ತೇಃ- ಬ್ರಹ್ಮವನ್ನು ಪಡೆಯುವದೆಂಬ ಪುರುಷಾರ್ಥ, ಪ್ರಾಪ್ತಿ ವಿರೋಧಿ – ಹಾಗೆಯೇ ಬ್ರಹ್ಮಪ್ರಾಪ್ತಿಗೆ ವಿರೋಧ ವಾದ ಪುಣ್ಯಪಾಪ ರೂಪ ಕರ್ಮಗಳು ಈ ಐದು ಅರ್ಥಗಳನ್ನು ವೇದಗಳೂ ಅವುಗಳ ಅರ್ಥಗಳನ್ನು ವಿವರಿಸುವ ಇತಿಹಾಸ ಪುರಾಣ ಗಳೂ ಮೊಳಗುತ್ತವೆ. ಇದರಿಂದ ಅರ್ಥಪಂಚಕ ಜ್ಞಾನವು ಬಹಳ ಅವಶ್ಯಕವೆಂಬುದು ದ್ಯೋತಿತ.

ಎನ್ರುಶೊಲ್ಲಪ್ಪಟ್ಟನ. ಇವತ್ತಿಲ್ ಪ್ರಾಪ್ಯಮಾನ ಬ್ರಹ್ಮತ್ತಿನುಡೈಯ ಸ್ವರೂಪಮ್ ತಿರುಮನ್ತ್ರತ್ತಿಲ್ ಪ್ರಥಮಾಕ್ಷರತ್ತಿಲುಂ, ನಾರಾಯಣ ಶಬ್ದತ್ತಿಲುಮ್, ದ್ವಯತ್ತಿಲ್ ಸವಿಶೇಷಣಙ್ಗಳಾನ ನಾರಾಯಣ ಶಬ್ದಂಗಳಿಲುಂ, ಚರಮಶ್ಲೋಕತ್ತಿಲ್ "ಮಾಂ" "ಅಹಂ" ಎನ್ಹಿರ ಪದಙ್ಗಳಿಲುಮನುಸನ್ಧೇಯಮ್.

ಶ್ಲೋಕ ಸಂಗೃಹೀತವಾದ ಅರ್ಥವನ್ನು ಆಚಾರ್ಯ ಸಾರ್ವಭೌಮರು ಇವತ್ತಿಲ್ ಪ್ರಾಪ್ಯಮಾನ ಎಂದಾರಂಭಿಸಿ ಅನುಗ್ರಹಿಸುತ್ತಾರೆ.

ರಹಸ್ಯಗಳಲ್ಲಿ ಬ್ರಹ್ಮಸ್ವರೂಪ ನಿರೂಪಣೆಯು ಎಲ್ಲಿ ಎಂಬುದು.

ಇವತ್ತಿಲ್ - ಈ ಅರ್ಥಪಂಚಕ ಮಧ್ಯದಲ್ಲಿ, ಪ್ರಾಪ್ಯನಾದ ಪರಬ್ರಹ್ಮ ಸ್ವರೂಪವು ಅಷ್ಟಾಕ್ಷರದಲ್ಲಿ ಮೊದಲನೆಯ ಅಕ್ಷರವಾದ ಅಕಾರದಲ್ಲಿಯೂ ನಾರಾಯಣ ಶಬ್ದದಲ್ಲಿಯೂ, ದ್ವಯ ಮಂತ್ರದಲ್ಲಿ ಶ್ರೀ ವಿಶಿಷ್ಟ ನಾರಾಯಣ ಶಬ್ದದಲ್ಲಿಯೂ, ಚರಮ ಶ್ಲೋಕದಲ್ಲಿ, ಮಾಂ, ಅಹಂ ಎಂಬ ಪದಗಳಲ್ಲಿಯೂ, ಅನುಸಂಧಾನ ಮಾಡಬೇಕು ಅಕಾರದಲ್ಲಿ ಸರ್ವರಕ್ಷಕನಾಗಿಯೂ, 'ನಾರಾಯಣ' ಶಬ್ದದಲ್ಲಿರುವ 'ನಾರ' ಶಬ್ದದಿಂದ ವಿಗ್ರಹ, ಗುಣ, ವಿಭೂತಿ ವಿಶಿಷ್ಟನಾಗಿಯೂ, ದ್ವಯಮಂತ್ರದಲ್ಲಿ ಹೇಳಲ್ಪಟ್ಟಿರುವ ಶ್ರೀಮನ್ನಾರಾಯಣ, ಶ್ರೀಮತೇ ನಾರಾಯಣಾಯ, ಎಂಬ ಪದಗಳಿಂದ ಲಕ್ಷ್ಮೀವಿಶಿಷ್ಟನಾಗಿಯೂ, ಚರಮಶ್ಲೋಕದಲ್ಲಿ ಹೇಳಿರುವ ಸರ್ವನಾಮಗಳಾದ ಮಾಮ್, ಅಹಂ ಎಂಬ ಪದಗಳಿಂದ ರಕ್ಷಣೆಗೆ ಬೇಕಾದ ಹಾಗೆಯೇ ಮೋಕ್ಷವನ್ನು ಕೊಡಲು ಬೇಕಾದ ಕಾರುಣ್ಯ, ವಾತ್ಸಲ್ಯ, ಸ್ವಾಮಿತ್ವ, ಔದಾರ್ಯ, ಸರ್ವಶಕ್ತಿತ್ವ, ಸರ್ವಪಾಪ ವಿಮೋಚನ ಕ್ಷಮತ್ವ ಇತ್ಯಾದಿ ಗುಣಗಳೂ ಅನುಸಂಧೇಯಗಳು

ಲಕ್ಷ್ಮಿಯೂ ಬ್ರಹ್ಮ ಶಬ್ದ ವಾಚ್ಯೆ-

ಇಲ್ಲಿ **ಪ್ರಾಪ್ಯಮಾನ ಬ್ರಹ್ಮ ಸ್ವರೂಪಂ,** ಎಂದಾರಂಭಿಸಿ **ದ್ವಯತ್ತಿಲ್ ಸವಿಶೇಷಣಂಗಳಾನ ನಾರಾಯಣ ಶಬ್ದಂಗಳಿಲುಮ್ ಇತ್ಯಾದಿ**–ಬ್ರಹ್ಮಸ್ವರೂಪವು ದ್ವಯಮಂತ್ರದ ಲಕ್ಷ್ಮೀವಿಶಿಷ್ಟನಾರಾಯಣ ಶಬ್ದಗಳಲ್ಲಿ ಅನುಸಂಧೇಯವೆಂದು ಹೇಳಿರುವುದರಿಂದ, ಶ್ರೀಮನ್ನಾರಾಯಣನು ಅಂದರೆ ಶ್ರೀಮತ್ಪದವಿಶಿಷ್ಟ ನಾರಾಯಣನೇ ಬ್ರಹ್ಮ ಶಬ್ದವಾಚ್ಯನೆಂದು ಸ್ಪಷ್ಟಪಡಿಸಲ್ಪಟ್ಟಿದೆ ಲಕ್ಷ್ಮಿಯು ಬ್ರಹ್ಮಶಬ್ದ ವಾಚ್ಯಳಲ್ಲವಾದರೆ **ಸವಿಶೇಷಣ**ವೆಂದು ಹೇಳಬಾರದಾಗಿತ್ತು ಪ್ರಯೋಜನವಿಲ್ಲದ ಶಬ್ದವನ್ನು ಹೇಳಬೇಕಾದ ಪ್ರಸಂಗವಿಲ್ಲ. ಆದ್ದರಿಂದ 'ಲಕ್ಷ್ಮೀವಿಶಿಷ್ಟ ನಾರಾಯಣನೇ' ಬ್ರಹ್ಮ ಶಬ್ದಾರ್ಥವೆಂಬುದು ಸಿದ್ಧಾಂತವೆಂಬುದು ಆಚಾರ್ಯ ಸಾರ್ವಭೌಮರ ಹೃದಯ.

ಶ್ರೀಪತಿಯಲ್ಲಿಯೇ ಬ್ರಹ್ಮಶಬ್ದವು ರೂಢಿಯಾಗಿದೆ ಆದ್ದರಿಂದ ಶೇಷಿತ್ವ ವಿಶೇಷ ಸಂಬಂಧದಿಂದ ಶ್ರೀ ವಿಶಿಷ್ಟವಾದ ಪರತತ್ತ್ವವು ಬ್ರಹ್ಮ ಶಬ್ದಾರ್ಥ. ಅನವಧಿಕಾತಿಶಯ ಬೃಹತ್ವ ಬೃಂಹಣತ್ವಗಳು, ಯೋಗ ಶಕ್ತಿಬಲದಿಂದ ವಿಶಿಷ್ಟ ವಸ್ತುವಿನಲ್ಲಿ ಅನ್ವಯಿಸುತ್ತವೆ ವಿಶೇಷ್ಯದ ಹಾಗೆ ವಿಶೇಷಣದಲ್ಲೂ ಅನ್ವಯಿಸುತ್ತವೆ ಎಂಬುದು ಸಿದ್ಧ ಆದ್ದರಿಂದ ಪರತ್ತ್ವವು ಇಬ್ಬರಿಗೂ ಸಮಾನವಾದದ್ದು ಶಾಬ್ದ ಪ್ರಾಧಾನ್ಯವು ಪತಿಗೇನೆ ಇರುವುದರಿಂದ ಲಕ್ಷ್ಮಿಗೆ ಬ್ರಹ್ಮಶಬ್ದಾರ್ಥದಲ್ಲಿ ಅನ್ವಯವಿಲ್ಲವೆಂಬ ಸಯೂಥ್ಯರ ಮಾತು, ಪತಿಪ್ರಾಧಾನ್ಯ ವಿವಕ್ಷೆಯಿಂದ ಹೇಳುವುದಾದರ ಬಾಧಕವಿಲ್ಲ ಆದರೆ ಪರತ್ವವು ಉಭಯಾವಿಶಿಷ್ಟವಾದ್ದರಿಂದ ಲಕ್ಷ್ಮೀವಿಶಿಷ್ಟ ನಾರಾಯಣನು ಬ್ರಹ್ಮ ಶಬ್ದವ್ಯಪದೇಶ್ಯನೆಂಬುದು ಅಪ್ರಕಂಪ್ಯ.

ಬ್ರಹ್ಮ ಸ್ವರೂಪ ನಿರೂಪಕ ಧರ್ಮ

ಮೊದಲು ಬ್ರಹ್ಮಸ್ವರೂಪವನ್ನು ಸ್ವರೂಪ ನಿರೂಪಕ ಧರ್ಮ ವಿಶಿಷ್ಟವಾಗಿ ನಿರೂಪಿಸುತ್ತಾರೆ ಯಾವ ಧರ್ಮಗಳು ಇಲ್ಲದಿದ್ದರೆ ಸ್ವರೂಪವು ನಿರೂಪಿಸಲ್ಪಡುವುದಿಲ್ಲವೋ ಅವುಗಳು ಸ್ವರೂಪ ನಿರೂಪಕ ಧರ್ಮಗಳು.

ಶ್ರಿಯಃ ಪತಿತ್ವ ಮತ್ತು ಜ್ಞಾನಾನಂದ ಸ್ವರೂಪತ್ವ

ಅನ್ವಿಡಙ್ಗಳಿಲನುಸನ್ಧಿಕ್ಕುಮ್ ಪೋದು (1)ಶ್ರಿಯಾಸಾರ್ಧಂ ಜಗತ್ಪತಿಃ" (2) ವಿಷ್ಣುನಾರಾಯಣ ಶ್ರೀಮಾನ್" (3) ಭವಾನ್ನಾರಾಯಣೋದೇವಃ ಶ್ರೀಮಾಂಶ್ಚಕ್ರಧರೋವಿಭುಃ (4) ಶ್ರೀವತ್ಸವಕ್ಷಾ ನಿತ್ಯ ಶ್ರೀಃ

ಸತ್ಯತ್ವ, ಜ್ಞಾನತ್ವ ಅನಂತತ್ವ, ಅಮಲತ್ವ, ಆನಂದತ್ವಗಳು ಸ್ವರೂಪ ನಿರೂಪಕ ಧರ್ಮಗಳು. ಬ್ರಹ್ಮ, ರುದ್ರಾದಿ ದೇವತೆಗಳು ಬ್ರಹ್ಮ ಶಬ್ದವಾಚ್ಯರೋ ಎಂಬ ಸಂದೇಹ ನಿವಾರಣೆಗಾಗಿ, ಬ್ರಹ್ಮವು ಲಕ್ಷ್ಮೀಪತಿ ಎಂದು ವಿಶೇಷಣವು ತಿಳಿಸುತ್ತದೆ ಆದ್ದರಿಂದ ಲಕ್ಷ್ಮೀಪತಿತ್ವವು ದೇವತಾಂತರ ವ್ಯಾವರ್ತನ ಪೂರ್ವಕ ಸ್ವರೂಪ **ನಿರೂಪಕ ಧರ್ಮ**. ಈ ಧರ್ಮ ವಿಶಿಷ್ಟನು ನಾರಾಯಣನೇ ಹೊರತು ಚತುರ್ಮುಖ ಬ್ರಹ್ಮ, ಶಿವ, ಇಂದ್ರಾದಿಗಳಿಲ್ಲ.

ಬ್ರಹ್ಮವು ಸರ್ವಾವಸ್ಥೆಗಳಲ್ಲಿಯೂ ಲಕ್ಷ್ಮೀ ವಿಶಿಷ್ಟನೆಂಬುದಕ್ಕೆ ಪ್ರಮಾಣ

ಸ್ವರೂಪ ನಿರೂಪಕ ಧರ್ಮವು ಸ್ವರೂಪದಲ್ಲಿ ಯಾವಾಗಲೂ ಇದ್ದೇತೀರಬೇಕು ಕೆಲವು ಕಾಲವಿದ್ದು ಕೆಲವು ಕಾಲದಲ್ಲಿ ಇಲ್ಲದೆ ಹೋದರೆ ಅದು ಸ್ವರೂಪ ನಿರೂಪಕ ಧರ್ಮವಾಗಲಾರದು ಆದ್ದರಿಂದ ಸರ್ವಾವಸ್ಥೆಗಳಲ್ಲಿಯೂ ನಾರಾಯಣನು ಲಕ್ಷ್ಮೀವಿಶಿಷ್ಟನು ಎಂದು ತಿಳಿಸಲು, ಪ್ರಮಾಣ ಸಂಪ್ರದಾಯ ವಚನಗಳನ್ನು ಆಚಾರ್ಯರು **ಅನ್ವಿಡಂಗಳಿಲ್ ಅನುಸಂಧಿಕ್ಕುಂ ಪೋದು** ಇತ್ಯಾದಿ ಆರಂಭಿಸಿ ಎತ್ತಿ ತೋರಿಸುತ್ತಾರೆ (1) **ಶ್ರಿಯಾ ಸಾರ್ಧಂ ಜಗತ್ಪತಿಃ** - ಇದು "ಉಭಯಾಧಿಷ್ಠಾನಂ ಚೈಕಂಶೇಷಿತ್ವಂ" ಎಂಬ ರೀತಿಯಲ್ಲಿ ಪರಮ ಪ್ರಾಪ್ಯವಾದ ಪರವಾಸುದೇವನು ಪರಮಪದದಲ್ಲಿ ಲಕ್ಷ್ಮೀವಿಶಿಷ್ಟನಾಗಿಯೇ, ದಾಸ್ಯಪ್ರತಿಸಂಬಂಧಿಯಾಗಿ ಅಂದರೆ ನಾವು ಮಾಡುವ ಕೈಂಕರ್ಯಗಳನ್ನು ಸ್ವೀಕರಿಸುವವನಾಗಿ ಇದ್ದಾನೆಂದು ತಿಳಿಸುತ್ತದೆ. ಇದರಿಂದ ಸ್ವಾಮಿತ್ವವು, ಲಕ್ಷ್ಮೀನಾರಾಯಣರಿಬ್ಬರಲ್ಲಿ ವ್ಯಾಸಜ್ಯವೃತ್ತಿಕವು. ಇಬ್ಬರಲ್ಲಿಯೂ ಅನ್ವಯಿಸ ತಕ್ಕದ್ದು. (2) **ವಿಷ್ಣುನಾರಾಯಣಃ ಶ್ರೀಮಾನ್** ' – ಈ ವಾಕ್ಯವು ನಾರಾಯಣನು **ಲಕ್ಷ್ಮೀ ವಿಶಿಷ್ಟನಾಗಿ** ವ್ಯೂಹಾವತಾರದಲ್ಲಿ ಅನಿರುದ್ಧ ರೂಪದಿಂದ ಕ್ಷೀರಾರ್ಣವದಲ್ಲಿ ಮಲಗಿದ್ದು ಜಗತ್ತಿನ ರಕ್ಷಣೆಯನ್ನು ಮಾಡುತ್ತಾನೆಂಬ ದನ್ನು ತಿಳಿಸುತ್ತದೆ **'ಶಕ್ತಿತೇಜೋಽನಿರುದ್ಧೋ ಬಿಭ್ರಾಣಃ ಪಾಸಿ ತತ್ತ್ವಂ ಗಮಯಸಿಚ ತಥಾವ್ಯೂಹ್ಯ ರಂಗಾಧಿರಾಜ'** ಎಂಬ ಪ್ರಮಾಣವಚನದಂತೆ ರಕ್ಷಣಾಕಾರ್ಯವು ಇಬ್ಬರಿಗೂ ಸೇರಿದ್ದುದು ಹಾಗೆಯೇ, "ಬಲಾದ್ಧ್ಯಾತ್ ಬೋಧಾತ್ ಸಂಕರ್ಷಣಸ್ತ್ವಂ ಹರಸಿವಿತನುಷೇಶಾಸ್ತ್ರಂ. ಎಂಬ ಸಂಹಾರಕಾರ್ಯವು ಶಾಸ್ತ್ರೋಪದೇಶವೂ ಲಕ್ಷ್ಮೀವಿಶಿಷ್ಟನಾದ ಸಂಕರ್ಷಣನು ವ್ಯೂಹರೂಪಿಯಾಗಿ ಮಾಡುವ ಕಾರ್ಯ "ಐಶ್ವರ್ಯ ವೀರ್ಯಾತ್ ಪ್ರದ್ಯುಮ್ನಃ ಸರ್ಗಧರ್ಮೌ ನಯಸಿ ಎಂಬ ಸೃಷ್ಟಿಕಾರ್ಯವೂ ಪ್ರದ್ಯುಮ್ನ ವ್ಯೂಹ ರೂಪದಲ್ಲಿ ಲಕ್ಷ್ಮೀವಿಶಿಷ್ಟನಾದ ಭಗವಂತನ ಕಾರ್ಯವೆಂದು ತಿಳಿಸಲ್ಪಡುತ್ತದೆ, 3)**ಭವಾನ್ ನಾರಾಯಣೋದೇವಃ ಶ್ರೀಮಾನ್ ಚಕ್ರಧರೋ ವಿಭುಃ**– ಇದು ವಿಭವಾವತಾರಕಾರ್ಯಗಳಲ್ಲಿಯೂ ಲಕ್ಷ್ಮೀನಾರಾಯಣರಿಬ್ಬರೂ ಒಡಗೂಡಿಯಿರುತ್ತಾರೆಂಬುದನ್ನು ಪ್ರಮಾಣೀಕರಿಸುತ್ತದೆ 4) **ಶ್ರೀವತ್ಸವಕ್ಷಾಃ ನಿತ್ಯಶ್ರೀಃ**– ಮೇಲೆ ಉದಾಹರಿಸಿದ ಪ್ರಮಾಣಗಳಿಂದ ದಿವ್ಯಾತ್ಮ ಸ್ವರೂಪಗಳ ಪರಸ್ಪರ ಅವಿನಾಭಾವವು (ಅವನಿಲ್ಲದ ಇವಳೂ ಇವಳಿಲ್ಲದ ಅವನೂ ಇಲ್ಲದಿರುವಿಕೆ) ಸೃಷ್ಟ್ಯಾದಿ ವ್ಯಾಪಾರಗಳಲ್ಲಿ ಅನ್ವಯಿಸಿರುವಂತೆ, ಶುಭಾಶ್ರಯ ದಿವ್ಯಮಂಗಳ ವಿಗ್ರಹರೂಪದಲ್ಲಿಯೂ ಪರಸ್ಪರ ಅವಿನಾಭಾವವು ತಿಳಿಸಲ್ಪಟ್ಟು, ಬ್ರಹ್ಮವಿದ್ಯೆಗಳಿಂದ ಉಪಾಸ್ಯವಾದ ತತ್ತ್ವವಿದು ಎಂಬುದು ಸೂಚಿಸಲ್ಪಡುತ್ತದೆ. ಭಗವಂತನ ಶುಭಾಶ್ರಯ ದಿವ್ಯಮಂಗಳ ವಿಗ್ರಹವು ಪರರೂಪದಲ್ಲಿ ದಿವ್ಯಮಹಿಷಿಯಿಂದ ವಕ್ಷಸ್ಥಲದಲ್ಲಿ ನಿತ್ಯವಾಗಿ ಲಕ್ಷಿಸಲ್ಪಡುತ್ತದ

---

1) ವೈಕುಂಠೇತು ಪರೇಲೋಕೇ ಶ್ರಿಯಾ ಸಾರ್ಧಂ ಜಗತ್ಪತಿಃ ।
ಆಸ್ತೇ ವಿಷ್ಣುರಚಿಂತ್ಯಾತ್ಮಾ ಭಕ್ತೈರ್ಭಾಗವತೈಸ್ಸಹ ॥ (ಲೈಂಗಪುರಾಣ)

(ಮುಂದುವರಿದಿದೆ)

5) ವಿಷ್ಣೋಃ ಶ್ರೀರನಪಾಯಿನೀ", 6) "ಸೀತಾ ಸಮಕ್ಷಂ ಕಾಕುತ್ಸ್ಥಮಿದಂ ವಚನ ಮಬ್ರವೀತ್ 7) ಸೀತಾಮುವಾಚಾತಿಯಶಾಃ ರಾಘವಂಚ ಮಹಾವ್ರತಂ"

ಮೇಲೆ ಹೇಳಿದ ವಚನಗಳಲ್ಲಿ ಶ್ರೀಮಾನ್ ಎಂಬಲ್ಲಿಯ 'ಮತುಪ್' ಪ್ರತ್ಯಯವು 'ಲಕ್ಷ್ಮೀನಾರಾಯಣ ರಿಬ್ಬರ ನಿತ್ಯಯೋಗವನ್ನು – ನಿತ್ಯಸಂಬಂಧವನ್ನು ತಿಳಿಸುತ್ತದೆ. ಭಗವಂತನ ದಿವ್ಯ ವಕ್ಷಃಸ್ಥಲದಲ್ಲಿ ವಿರಾಜಿಸುವ ದಿವ್ಯರೂಪವೇ ಲಕ್ಷ್ಮಿಯ ಪರರೂಪವು. ವ್ಯೂಹವಿಭವಾದ್ಯವತಾರಗಳಿಗೆ ಉಪಾದಾನ ಭೂತವಾದದ್ದು ಎಂಬುದನ್ನು ಪರರೂಪವೆಂಬುದು ತಿಳಿಸುತ್ತದೆ, "ಧತ್ತೇಶೋಭಾಂ ಹರಿಮರತಕೇ ತಾವಕೀ ಮೂರ್ತಿರಾದ್ಯಾ ತನ್ವೀತುಂಗಸ್ತನ ಭರನತಾ ತಪ್ತ ಜಾಂಬೂನದಾಭಾ । ಯಸ್ಯಾಗಚ್ಛಂತ್ಯುದಯ ವಿಲಯೈಃ ನಿತ್ಯಮಾನಂದ ಸಿಂಧಾವಿಚ್ಛಾವೇಗೋಲ್ಲಸಿತಲಹರೀ ವಿಭ್ರಮ ವ್ಯಕ್ತಯಸ್ತೇ ||, ಎಂಬ ಶ್ರೀ ಸ್ತುತಿ ಶ್ರೀ ಸೂಕ್ತಿಯಿಂದ ಈ ಅರ್ಥವು ತಿಳಿಸಲ್ಪಡುತ್ತದೆ

"ಆಪನ್ನಾರ್ತಿ ಪ್ರಶಮನ ವಿಧೌ ಬದ್ಧದೀಕ್ಷಸ್ಯ ವಿಷ್ಣೋರಾಚಖ್ಯುಸ್ತ್ವಾಂ ಪ್ರಿಯಸಹಚರೀಮೈಕಮತ್ಯೋಪಪನ್ನಾಮ್ । ಪ್ರಾದುರ್ಭಾವೈರಪಿ ಸಮತನುಃ ಪ್ರಾಧ್ವಮನ್ವೀಯಸೇತ್ವಂ ದೂರೋತ್ಕ್ಷಿಪ್ತೈರಿವ ಮಧುರತಾ ದುಗ್ಧರಾಶೇಸ್ತರಂಗೈಃ || ಎಂಬ ಶ್ರೀಸೂಕ್ತಿಯು, ದಿವ್ಯಾತ್ಮ ಸ್ವರೂಪಗಳ ವಿಶೇಷಣ ವಿಶೇಷ್ಯ ಭಾವದಂತೆ, (ಲಕ್ಷ್ಮೀನಾರಾಯಣ) ದಿವ್ಯಶುಭಾಶ್ರಯ ವಿಗ್ರಹಗಳೂ ವಿಶೇಷಣ ವಿಶೇಷ್ಯ ಭಾವದಿಂದ ಕೂಡಿವೆ. ದೂರ ಎಸೆಯಲ್ಪಟ್ಟ ಕ್ಷೀರ ಸಮುದ್ರದ ಅಲೆಗಳಲ್ಲಿ ಮಾಧುರ್ಯವು ಕೂಡಿಯೇ ಇರುವಂತೆ, ಆಪದ್ರಕ್ಷಣಾರ್ಥವಾಗಿ ಭಗವಂತನು ಎತ್ತಿಕೊಳ್ಳುವ ಅವತಾರಗಳಲ್ಲಿ ಪ್ರಿಯ ಸಹಧರ್ಮ ಚಾರಿಣಿಯಾಗಿ ಐಕಮತ್ಯ ಭಾವದಿಂದ ಲಕ್ಷ್ಮೀಯೂ ಅವತಾರಗಳನ್ನು ಎತ್ತಿಕೊಂಡು ಅನ್ವಯಿಸುತ್ತಾಳೆ ಹೀಗೆ ಲಕ್ಷ್ಮೀ ವಿಶಿಷ್ಟನಾಗಿಯೇ ಭಗವಂತನ ಶುಭಾಶ್ರಯ, ದಿವ್ಯಮಂಗಳ ವಿಗ್ರಹವು ಬ್ರಹ್ಮವಿದ್ಯೆಗಳಲ್ಲಿ ವುಪಾಸ್ಯವು ಎಂಬುದು 'ತತ್ಕಲ್ಯಾಣಂ ಕಿಮಪಿ ಯಮಿನಾಂ ಏಕಲಕ್ಷ್ಯಂ ಸಮಾಧೌ ಪೂರ್ಣಂತೇಜಸ್ಸ್ಫುರತಿ ಭವತೀ ಪಾದಲಾಕ್ಷಾರಸಾಂಕಮ್" ಎಂದು ನಿರೂಪಿಸಲ್ಪಟ್ಟಿದೆ. ಹೀಗೆ ದಿವ್ಯದಂಪತಿಗಳ ದಿವ್ಯಾತ್ಮ ಸ್ವರೂಪವೂ ದಿವ್ಯಮಂಗಳ ವಿಗ್ರಹವೂ ಸರ್ವಕಾರ್ಯಗಳಲ್ಲಿಯೂ ಪರಸ್ಪರ ಅವಿನಾಭೂತವೆಂಬುದೇ ನಿತ್ಯಾನಪಾಯಿತ್ವವೆಂಬುದಕ್ಕೆ ಅರ್ಥವೆಂದು 5) **ವಿಷ್ಣೋಃಶ್ರೀರನಪಾಯಿನೀ** ಎಂದು ವ್ಯತಿರೇಕಮುಖವಾಗಿ ಹೇಳುತ್ತಾರೆ.

ಶ್ರೀ ವೈಕುಂಠವೆಂಬ ಸರ್ವೋತ್ಕೃಷ್ಟ ಲೋಕದಲ್ಲಿ ಜಗತ್ಪತಿಯಾದ ಮಹಾವಿಷ್ಣುವು ಲಕ್ಷ್ಮೀವಿಶಿಷ್ಟನಾಗಿದ್ದಾನೆ, ಭಕ್ತರೂ ಭಾಗವತರೂ ಸಹ ಅವನೊಡಗೂಡಿದ್ದಾರೆ ಅವನ ಸ್ವರೂಪ ಸ್ವಭಾವಗಳು ಅಚಿಂತ್ಯ ವೈಭವವುಳ್ಳವು

2) ಏಷನಾರಾಯಣ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ ।
ನಾಗಪರ್ಯಂಕ ಮುತ್ಸೃಜ್ಯ ಹ್ಯಾಗತೋ ಮಧುರಾಂಪುರೀಮ್ ||

ಹರಿವಂಶ 113-64

ಲಕ್ಷ್ಮೀವಿಶಿಷ್ಟನಾದ, ಈ ನಾರಾಯಣನು ಕ್ಷೀರಾರ್ಣವಶಾಯಿಯಾಗಿದ್ದು, ಅಲ್ಲಿಂದ ಮಧುರಾನಗರಕ್ಕೆ ಬಂದು ಕೃಷ್ಣನಾಗಿ ಅವತರಿಸಿದನು. ಅವತರಿಸುವುದಕ್ಕೆ ಮೊದಲು ತನ್ನ ಆದಿಶೇಷನನ್ನು ಬಲರಾಮನಾಗಿ ಅವತಾರ ಮಾಡುವಂತೆ ಭೂಮಿಗೆ ಕಳುಹಿಸಿದನು. ["ನಾಗಪರ್ಯಂಕಂ ಭೂಮಾವುತ್ಸೃಜ್ಯ", ಎಂದು ಭೂಮಿ ಪದಾಧ್ಯಾಹಾರ ಮಾಡಿ ಹೀಗೆ ಹಿರಿಯರು ಅರ್ಥಮಾಡುತ್ತಾರೆ]

3) ಭವಾನ್ ನಾರಾಯಣೋದೇವಃ ಶ್ರೀಮಾಂಶ್ಚ ಕ್ರಧರೋವಿಭುಃ । ಯುದ್ಧಕಾಂಡ ರಾಮಯಣ-120-18
ಏಕಶೃಂಗೋ ವರಾಹಸ್ತ್ವಂ ಭೂತಭವ್ಯ ಸಪತ್ನಜಿತ್ ||

(ಮುಂದುವರೆದಿದೆ)

"ಅನಪಾಯಿನೀ" ಎಂಬ ವಚನ ಸ್ವಾರಸ್ಯದಿಂದ, ಸತ್ಯತ್ವಾದಿ ಧರ್ಮಗಳು ಭಗವತ್ಸ್ವರೂಪದಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿರುವಂತೆ, ಶ್ರೀ ಸ್ವರೂಪವೂ ವಿಭುವಾಗಿದ್ದರೇನೆ (ಎಲ್ಲಾ ಕಡೆಯಲ್ಲಿಯೂ ವ್ಯಾಪರಿಸಿದ್ದರೇನೆ, ಪರಿಚ್ಛಿನ್ನವಾಗಿ ಉಪಾಸನ ಮಾಡಲಾಗಲು, ಪರಮಾತ್ಮ ಸ್ವರೂಪಕ್ಕೆ ಲಕ್ಷ್ಮಿಯು ಸ್ವರೂಪ ನಿರೂಪಕ ಧರ್ಮಳಾಗುತ್ತಾಳೆ ಲಕ್ಷ್ಮೀ ವಿಶೇಷಣ ವಿಶಿಷ್ಟವಾದ ತತ್ವವು ವಿಭುವಾಗಿರುವುದರಿಂದ, ಇವಳ ಸ್ವರೂಪವೂ ವಿಭುವಾಗಿದೆ ಎಂದು ಏರ್ಪಡುತ್ತದೆ ಇವಳು ಅಣುಭೂತೆ ಧರ್ಮಭೂತಜ್ಞಾನ ದಿಂದ ವಿಭ್ವೀ ಎಂಬ ಮಾತು ಪ್ರಮೇಯ ವಿರುದ್ಧ. ಹಾಗೆಯೇ ಭಗವಂತನ ದಿವ್ಯಶರೀರಕ್ಕೆ ಲಕ್ಷ್ಮಿಯ ದಿವ್ಯ ಶರೀರವು ನಿತ್ಯಸಂಬದ್ಧವಾಗಿದೆ ಎಂಬುದೂ 'ಅನಪಾಯಿನೀ' ಎಂಬ ಪದದಿಂದದ್ಯೋತವಾಗುತ್ತದ. **6) ಸೀತಾಸಮುಕ್ಷಂ ಕಾಕುತ್ಸ್ಥಂ ಇದಂ ವಚನಮಬ್ರವೀತ್**–ಇದು ಲಕ್ಷ್ಮಿಯು ಪುರುಷಕಾರಭೂತೆಯೂ ಅಹುದು, ಉಪಾಯ ಭೂತೆಯೂ ಅಹುದ್ಮ ಎಂಬುದಕ್ಕೆ ಪ್ರಮಾಣ. ಪುರುಷಕಾರತ್ವವು ಹೇಗೆಂದರೆ ಪಂಚವಟಿಯಲ್ಲಿ ಮೂರು ಜನರೂಸುಖವಾಗಿರಲು, ಸರಿಯಾದ ಸ್ಥಳವನ್ನು ನೀನೇ ನೋಡಿ ಪರ್ಣ ಶಾಲೆಯನ್ನು ನಿರ್ಮಿಸು ಎಂದು ರಾಮನು ಲಕ್ಷ್ಮಣನಿಗೆ ಆಜ್ಞಾಪಿಸಲ್ಕ "ನಾನು ಈಗ ಮಾತ್ರವಲ್ಲ ಎಂದೆಂದಿಗೂ ನಿಮಗೆ ಪರತಂತ್ರನು, ನೀವೇ ನಿಮಗೆ ಸರಿಯಾದ ಸ್ಥಳವನ್ನು ತಿಳಿಸಿ," ಎಂಬ ಲಕ್ಷ್ಮಣನ ಪ್ರಾರ್ಥನೆಯನ್ನು ಅಂಗೀಕರಿಸಿ, ಸೀತೆಯು ತಮಗ ಅನುಕೂಲವಾದ ಸ್ಥಳವನ್ನು ಲಕ್ಷ್ಮಣನಿಗೆ ತೋರಿಸುವಂತೆ ರಾಮನಿಗೆ ಶಿಫಾರಸ್ ಮಾಡುತ್ತಾಳೆ. ಇದು ಪುರುಷಕಾರತ್ವ ನಂತರ ಸೀತಾರಾಮರಿಬ್ಬರೂ ಸೇರಿದ್ದು ಲಕ್ಷ್ಮಣನಿಗೆ ಅವನ ಪ್ರಾರ್ಥನೆಯಂತೆ ಸರಿಯಾದ ಸ್ಥಳವನ್ನು ತೋರಿಸಿಕೊಡುವುದರಿಂದ ಉಪಾಯ ಭೂ ರೂ ಅಹುದು. ಆದ್ದರಿಂದಲಕ್ಷ್ಮಿಗೆ ಉಪಾಯತ್ವವೂಉಂಟು ಎಂಬುದು ದ್ಯೋತಿತ.

ನೀನು ನಾರಾಯಣನು ದೇವನು ಲಕ್ಷ್ಮೀ ವಿಶಿಷ್ಟನಾಗಿ, ಚಕ್ರಪಾಣಿಯಾಗಿದ್ದೀಯೆ ನೀನು ಏಕ ಶೃಂಗನು-ಮುಖ್ಯನು ಎಂದರ್ಥ ವರಾಹನಾಗಿ ಅವತರಿಸಿದ್ದೀಯೆ ಭೂತ ಭವಿಷ್ಯತ್ ವರ್ತಮಾನ ಕಾಲಗಳಲ್ಲಿರುವ ಶತ್ರುಗಳನ್ನೆಲ್ಲಾ ಜಯಿಸಿದವನು.

4) ತಮಸಃ ಪರಮೋಧಾತಾ ಶಂಖ ಚಕ್ರ ಗದಾಧರಃ ।
ಶ್ರೀವತ್ಸವಕ್ಷಾ ನಿತ್ಯಶ್ರೀಃ ಅಜಯ್ಯಶ್ಶಾಶ್ವತೋ ಧ್ರುವಃ ॥

(ರಾಮಾಯಣ ಯುದ್ಧಕಾಂಡ 11475

ತಮಸ್ತತ್ವಕಾರ್ಯವಾದ ಪ್ರಕೃತಿ ಮಂಡಲಕ್ಕೆ ಮೇಲಿರುವ ಅಪ್ರಾಕೃತ ದಿವ್ಯ ದೇಶಕ್ಕೆ ಧಾತಾ-ಯಜಮಾನನು ಶಂಖ ಚಕ್ರ ಗದಾಪಾಣಿಯು ಶ್ರೀವತ್ಸವೆಂಬ ಮಚ್ಚೆಯನ್ನು ಎದೆಯಲ್ಲುಳ್ಳವನು ನಿತ್ಯವೂ ಎಡೆಬಿಡದೆ ಲಕ್ಷ್ಮೀಯೊಡಗೂಡಿರುವನು ಯಾರಿಂದಲೂ ಜಯಿಸಲಶಕ್ಯನು. ಶಾಶ್ವತನು ಅಚಲನು.

5) ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀ ರನ ಪಾಯಿನೀ ।
ಯಥಾ ಸರ್ವಗತೋವಿಷ್ಣುಃ ತಥೈ ವೇಯಂ ದ್ವಿಜೋತ್ತಮ ॥

ಈ ಜಗನ್ಮಾತೆಯಾದ ಲಕ್ಷ್ಮಿಯು ವಿಷ್ಣುವನ್ನು ಅಗಲದೆ ಇರುವವಳು ವಿಷ್ಣುವು ಹೇಗೆ ಸರ್ವವ್ಯಾಪಿಯಾಗಿ ಸರ್ವನಿಯಾಮಕನಾಗಿ ವಿಭುವಾಗಿದ್ದಾನೆಯೋ,ಹಾಗೆಯೇ ಇವಳೂ ವಿಭುಸ್ವರೂಪೆ. ಸರ್ವಚೇತನಾ ಚೇತನ ವಸ್ತುಗಳನ್ನು ಅಂತಃ ವ್ಯಾಪಿಸಿ ನಿಯಮಿಸುವವಳು ವಿಷ್ಣುವಿನ ಸರ್ವಗತತ್ವ ಸತ್ಯಜ್ಞಾನಾದಿ ಸ್ವರೂಪ, ಕಲ್ಯಾಣ ಗುಣಗಳನ್ನು ಲಕ್ಷ್ಮಿಯಲ್ಲಿ ಅತಿದೇಶ ಮಾಡುತ್ತಾರೆ. ಅಂದರೆ ಈ ಸ್ವರೂಪ ಸ್ವಭಾವಗಳು ಅವಳಿಗೂ ಉಂಟು ಎಂದರ್ಥ

6) ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಸಂಯತಾಂ ಜಲಿಃ
ಸೀತಾ ಸಮುಕ್ಷಂ ಕಾಕುತ್ಸ್ಥಂ ಇದಂ ವಚನಮಬ್ರವೀತ್ ॥

(ರಾಮಾ ಅರಣ್ಯ 15-6)

ರಾಮನು ನಿನಗೆ ಸೌಕರ್ಯವಾದ ರೀತಿಯಲ್ಲಿ ಪರ್ಣಶಾಲೆಯನ್ನು ಕಟ್ಟು ಎಂದಾಗ, ಲಕ್ಷ್ಮಣನು ಕೈಮುಗಿದುಕೊಂಡು ಸೀತೆಯನು ಪುರುಷಾಕಾರವಾಗಿಟ್ಟುಕೊಂಡು, ಕಾಕುತ್ಸ್ಥನಿಗೆ ಹೀಗೆ ಹೇಳಿದನು

(ಮುಂದುವರೆದಿದೆ)

8) ಅಲ ಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಂ 9) ಭವೇಯಂ ಶರಣಂ ಹಿವಃ,
10) ಭವಾಂಸ್ತು ಸಹ ವೈದೇಹ್ಯಾ 11) ತಯಾ ಸಹಾಸೀನ ಮನಂತ ಭೋಗಿನಿ.
12) ಕಾಂತಸ್ತೇ ಪುರುಷೋತ್ತಮಃ 13) ಸ್ವಪರಿಚರಣಭೋಗೈ ಶ್ರೀಮತಿ ಪ್ರೀಯಮಾಣೇ

7) **ಸೀತಾಮುವಾಚ** ಇತ್ಯಾದಿ ಇದು ಭಗವಂ ನಹಾಗೆ ಲಕ್ಷ್ಮಿಗೂ ಉಪಾಯತ್ವವುಂಟು ಅಂದರೆ "ಮೋಕ್ಷಯಿಷ್ಯಾಮಿ" ಎಂದು ಸಂಕಲ್ಪ ಮಾಡುವ ಅಧಿಕಾರವುಂಟು ಎಂಬುದಕ್ಕೆ ಸ್ಪಷ್ಟವಾದ ಪ್ರಮಾಣ

8) **ಅಲಮೇಷಾಪರಿತ್ರಾತುಂ, 9) ಭವೇಯಂಶರಣಮ್ ಹಿವ** ಈ ವಚನಗಳು ಲಕ್ಷ್ಮಿಯ ಉಪಾಯತ್ವವನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತವೆ ಮೇಲೂ ಭಗವಂತನನ್ನು ನಿರ್ಬಂಧಿಸಿ ರಕ್ಷಿಸಲು ಬೇಕಾದ ಜ್ಞಾನ ಶಕ್ತಿಕಾರುಣ್ಯಾದಿಗಳು ಇವಳಲ್ಲಿಯಾ ಇವೆ, ಎಂಬುದು ತಾತ್ಪರ್ಯ.

10) **ಭವಾಂಸ್ತುಸಹವೈದೇಹ್ಯಾ** – ಇದು ಪ್ರಾಪ್ಯತ್ವ-ಅಂದರೆ ನಾವು ಮಾಡುವ ಕೈಂಕರ್ಯಗಳನ್ನು ದಿವ್ಯದಂಪತಿಗಳಿಬ್ಬರೂ ಸ್ವೀಕರಿಸುವವರು (ಕೈಂಕರ್ಯ ಪ್ರತಿಸಂಬಂಧೀ) ಎಂಬುದಕ್ಕೆ ಪ್ರಮಾಣ ಅನಂತರ ಲಕ್ಷ್ಮೀ ಸಂಬಂಧದಲ್ಲಿ ಪೂರ್ವಾಚಾರ್ಯ ಸಂಪ್ರದಾಯ ವಚನಗಳನ್ನು ತೋರಿಸುತ್ತಾರೆ

11) **ತಯಾಸಹಾಸೀನ ಮನಂತ ಭೋಗಿನಿ** ಇದು ಪ್ರಾಪ್ಯತ್ವಾ ವಸ್ಥೆಯಲ್ಲಿ ಲಕ್ಷ್ಮೀ ಸಂಬಂಧವನ್ನು ತಿಳಿಸುತ್ತದೆ 12) **ಕಾಂತಸ್ತೇ ಪುರುಷೋತ್ತಮ** :– ಇದು ಚತುಃಶ್ಲೋಕಿಯ ಪ್ರತೀಕಧಾರಣ. ಶಾರೀರಕಚತುರಧ್ಯಾಯಗಳಲ್ಲಿ ಪತಿಯಹಾಗೆ ಲಕ್ಷ್ಮಿಗೂ ಸರ್ವಕಾರಣತ್ವ. ಉಪಾಯತ್ವಾದಿಗಳುಂಟು ಎಂಬುದನ್ನು ಧೃಡೀಕರಿಸುತ್ತದೆ. ಇಲ್ಲಿ ಶ್ರೀದೇಶಿಕರು **ಚತುಶ್ಲೋಕೀಭಾಷ್ಯದಲ್ಲಿ ಹೇಳಿರುವ, ಸ್ವಶೇಷಾಶೇಷಾಭೋಗನಿರವಧಿಕ** ನಿರ್ಬಾಧ ಮಹಿಮಾ ಫಲಾನಾಂದಾತಾಯ: ಫಲಮಪಿಚಶಾರೀರ ಕಮಿತ: । ಶ್ರಿಯಂತತ್ಸನ್ನಿಧೀಂ ತದುಪಸದನ ತ್ರಾಸ ಶಮನೀಂ ಅಭಿಷ್ಟೌತಿಸ್ತುತ್ಯಾಮವಿತಥಮತಿರ್ಯಾಮುನಮುನಿ: ॥ ಎಂಬ ಶ್ಲೋಕವು ಅನುಸಂಧೇಯ. ಅದಾಗಿ ಭಗವಂತನು ಎಲ್ಲಾ ಪದಾರ್ಥಗಳನ್ನು ತನಗೆ ಅಧೀನವಾಗಿ ಉಳ್ಳವನು, ಜಗತ್ಕಾರಣನು ಎಂದರ್ಥ ಇವನ ಮಹಿಮೆಗೆ

7) ಸಭ್ರಾತುಶ್ಚರಣೌಗಾಢಂ ನಿಪೀಡ್ಯ ರಘುನಂದನಃ ।
ಸೀತಾಮು ವಾಚಾತಿಯಶಾಃ ರಾಘವಂಚ ಮಹಾವ್ರತಮ್ ॥ (ರಾಮಾ ಅಯೋ 31-2)

ಸಭ್ರಾತುಃ-ಸಸೀತಸ್ಯಭ್ರಾತುಃ- ಸೀತೆಯೊಡಗೂಡಿದ ರಾಮನ ಎರಡು ಪಾದಗಳನ್ನು, (ಪುರುಷ ಪ್ರಾಧಾನ್ಯವಿವಕ್ಷೆಯಿಂದ ಪಾದೌ ಎಂದು ನಿರ್ದೇಶ) ವಾಸ್ತವದಲ್ಲಿ ಸೀತಾ ರಾಮರಿಬ್ಬರ ಕಾಲುಗಳಲ್ಲಿಯೂ ನಮಸ್ಕಾರಮಾಡಿ, ಮಹಾಕೀರ್ತಿಮಂತನಾದ ಲಕ್ಷ್ಮಣನು ಸೀತೆಯಲ್ಲಿಯೂ ಮಹಾವ್ರತ ಶಾಲಿಯಾದ ರಾಮನಲ್ಲಿಯೂ ವಿಜ್ಞಾಪಿಸುತ್ತಾನೆ ವಿಜ್ಞಾಪನೆಯನ್ನು ಇಬ್ಬರಲ್ಲಿಯೂ ಮಾಡುವ ಹಾಗೆ ನಮಸ್ಕಾರ ಇಬ್ಬರಲ್ಲಿಯೂ ಮಾಡುತ್ತಾನೆಂದು ಹೇಳುವುದು ಸೂಕ್ತಿಸ್ವಾರಸ್ಯ "ಗುರೋಸ್ಸದಾರಸ್ಯ ನಿಪೀಡ್ಯಪೌದೌ" ಎಂಬುವಂತೆ ಇದೂ ಸಹ

8) ಅಲಮೇಷಾ ಪರಿತ್ರಾತುಂ ರಾಘ ವಾದ್ರಾಕ್ಷಸೀ ಗಣಮ್ ।
ಅಭಿಯಾಚಾಮ ವೈದೇಹೀಂ ಏತದ್ಧಿ ಮಮ ರೋಚತೇ ॥ (ರಾ ಮಾ ಸುಂದರ 58–87)
"ಸೀತೆಯು ರಾಕ್ಷಸಿಗಳ ಗಣವನ್ನು ರಾಮನಿಂದ ಕಾಪಾಡಲು ಸಮರ್ಥೆ ಆದ್ದರಿಂದ ಸೀತೆಯನ್ನು ಪ್ರಾರ್ಥಿಸೋಣ ಇದು ನನಗೆ ತೋರುತ್ತೆ" ಎಂದು ತ್ರಿಜಟೆ ಹೇಳುವ ಮಾತು

9) ತತಃ ಸಾಹ್ರೀಮತಿಬಾಲಾ ಭರ್ತುರ್ವಿಜಯ ಹರ್ಷಿತಾ ।
ಅವೋಚದ್ಯದಿ ತತ್ತಥ್ಯಂ ಭವೇಯಂಶರಣಂ ಹಿವಃ ॥
ಅನಂತರ, ಲಜ್ಜೆಯಿಂದ ಕೂಡಿದ ಬಾಲೆಯಾದ ಸೀತೆಯು ತನ್ನ ಭರ್ತಾವಿನ ವಿಜಯವಾರ್ತೆಯನ್ನು ಕೇಳಿ ಸಂತೋಷಗೊಂಡು ನೀವು ಹೇಳುವುದು ನಿಜವಾದರೆ, ನಿಮಗೆ ರಕ್ಷಕಳಾಗುತ್ತೇನೆಂದು, ತನ್ನನ್ನು ಹಿಂಸಿಸುತ್ತದ್ದ ರಾಕ್ಷಸಿಗಳಿಗೆ ಅಭಯ ಪ್ರದಾನ ಮಾಡುತ್ತಾಳೆ

(ಮುಂದುವರಿದಿದೆ)

14) ಶ್ರೀಮತೇ ನಿರ್ಮಲಾನಂದೋದನ್ವತೇ ವಿಷ್ಣವೇ ನಮಃ 5) ಶ್ರಿಯಃಕಾಂತೋಽನಂತೋ ವರಗುಣಗಣೈಕಾಸ್ಪದ ವಪುಃ,

---

ಎಲ್ಲೆ ಇಲ್ಲ. ತಡೆಯಿಲ್ಲ ಫಲವನ್ನು ಕೊಡುವವನು ಉಪಾಯ ಭೂತನು, ಎಂದರ್ಥ. ಫಲವೂ ಪ್ರಾಪ್ಯವೂ ಅವನೇ ಇದು ಶಾರೀರಕ ಶಾಸ್ತ್ರದಲ್ಲಿ ಪ್ರತಿಪಾದ್ಯವು ಲಕ್ಷ್ಮಿಯು ಅದಕ್ಕೆ ಅನುರೂಪಳು ಅಂದರೆ ಜಗತ್ಕಾರಣ ಭೂತೆ ತಡೆ ಯಿಲ್ಲದ ಮಹಿಮೆಯಿಂದ ಕೂಡಿದವಳು ಮೋಕ್ಷಕ್ಕೆ ಉಪಾಯಭೂತೆ, ಮುಕ್ತಪ್ರಾಪ್ಯಳೂ ಅಹುದು. ಇದಕ್ಕೆ ಮೇಲೆ. ಭಗವಂತನನ್ನು ಆಶ್ರಯಿಸಲು ವಿರೋಧಿಯಾದ ಪಾಪವನ್ನು ಹೋಗಲಾಡಿಸಿ ಪುರುಷ ಕಾರ ಭೂತೆಯೂ ಹೌದು ಎಂಬ ಈ ಅಂಶಗಳು ಇಲ್ಲಿ ಯಾಮುನಾಚಾರ್ಯರ ಚತು ಶ್ಲೋಕಿಯ, ನಾಲ್ಕು ಪದ್ಯಗಳಿಂದ ಕ್ರಮವಾಗಿ ತಿಳಿಯ ತಕ್ಕದ್ದು

ಅನಂತರ ಮುಕ್ತರ ಹಾಗೆ ಮುಮುಕ್ಷಗಳಿಗೂ ಕೈಂಕರ್ಯಕ್ಕೆ ಶ್ರೀವಿಶಿಷ್ಟನೇ ಲಕ್ಷ್ಯಭೂತನು, ಎಂದು ಅಭಿ ಪ್ರಾಯಗೊಂಡು **ಸ್ವಪರಿಚರಣಭೋಗ್ಯೈ : ಶ್ರೀಮತಿಪ್ರೀಯಮಾಣೇ"** **ಎಂದು ಪ್ರಮಾಣೀ** ಕರಿಸುತ್ತಾರೆ

ತನ್ನ ಪತಿಯ ಸ್ವರೂಪನಿರೂಪಕ ಧರ್ಮವರ್ಗಗಳಲ್ಲಿ ಪ್ರಧಾನ ಭೂತೆಯಾದ ಲಕ್ಷ್ಮಿಗೆ ಯಾವ ವಿಧಧ ಲ್ಲಿಯೂ, ಬ್ರಹ್ಮವಿದ್ಯಾವೇದ್ಯತ್ವ ವಿಲ್ಲವೆಂದು ಅಪಲಾಪ ಮಾಡುವುದು ಅಶಕ್ಯ–ಬಾಕಿಸ್ವರೂಪ ನಿರೂಪಕ ಧರ್ಮಗಳಿಂತ ಲಕ್ಷ್ಮೀ ಪತಿತ್ವವು ಪ್ರಧಾನವೆಂಬುದನ್ನು "ಅಭ್ಯರ್ಹಿತಂಪೂರ್ವಂ" ಎಂಬನ್ಯಾಯವನ್ನು ಅನುಸರಿಸಿ ಭಾಷ್ಯಕಾರರು "ಶ್ರೀಮತೇ" ಎಂದಾರಂಭಿಸಿದ್ದಾರೆ ಎಂದು ತಿಳಿಸಲು, ಭಾಷ್ಯಕಾರ ವಚನಗಳನ್ನು ಆಚಾರ್ಯರು ಉದಾಹರಿಸುತ್ತಾರೆ

14) ಶ್ರೀಮತೇ ನಿರ್ಮಲಾನಂದೋದನ್ವತೇ ವಿಷ್ಣವೇನಮಃ :-ವೇದಾಂತಸಾರದಲ್ಲಿ ಭಗವದ್ರಾ ಮಾನುಜರ ವಾಕ್ಯವಿದು ಲಕ್ಷ್ಮಿಯು ಶರಣಾಗತಿಗೆ ಉದ್ದೇಶ್ಯ ಕೋಟಿಯಲ್ಲಿ ಸೇರಿದವಳು ಅಂದರ ಉಪಾಯ ಭೂತಳು ಎಂಬುದನ್ನು ತಿಳಿಯಪಡಿಸುತ್ತದೆ

15) ಶ್ರಿಯಃ ಕಾಂತೋಽನಂತೋವರ ಗುಣಗಣೈಕಾಸ್ಪದ ವಪು :-

ವೇದಾಂತ ದೀಪದಲ್ಲಿ ಭಗವದ್ರಾಮಾನುಜರು, ಕೈಂಕರ್ಯಕ್ಕೆ ಉದ್ದೇಶ್ಯ ಭೂತರು ಲಕ್ಷ್ಮೀ ಮತ್ತು ಆವಳ ಕಾಂತನೆಂದು ಹೇಳುತ್ತಾರೆ

---

10 ಭವಾಂಸ್ತು ಸಹ ವೈದೇಹ್ಯಾ ಗಿರಿ ಸಾನುಷುರಂಸ್ಯತೇ ।
ಅಹಂಸರ್ವಂ ಕರಿಷ್ಯಾಮಿ ಜಾಗ್ರತ ಸ್ವಪತಶ್ಚತೇ ॥ (ರಾಮ. ಅಯೋ 31-27)
ತಾವು ವೈದೇಹಿಯೊಡನೆ ಬೆಟ್ಟದ ತಪ್ಪಲು ಪ್ರದೇಶಗಳಲ್ಲಿ ವಿನೋದವಾಗಿ ಕಾಲ ಕಳೆಯುವಾಗ, ಹಾಗೆಯೇ ಎಚ್ಚರವಾಗಿರುವಾಗಲೂ ನಿದ್ರಿಸುವಾಗಲೂ ಸಹ ಸರ್ವವಿಧ ಕೈಂಕರ್ಯಗಳನ್ನು ಮಾಡುತ್ತೇನೆಂದು ಲಕ್ಷ್ಮಣನು ಸೀತಾರಾಮರಲ್ಲಿ ವಿಜ್ಞಾಪಿಸುವ ಮಾತು. ಇದು ಪ್ರಾಪ್ಯತ್ತ್ವವನ್ನು ತಿಳಿಸುತ್ತದೆ

11 ತಯಾಸಹಾಸೀನ ಮನಂತ ಭೋಗಿನಿ ಪ್ರಕೃಷ್ಟ ವಿಜ್ಞಾನ ಬಲೈಕ ಧಾಮನಿ
ಫಣಾಮಣಿವ್ರಾತ ಮಯೂಖ ಮಂಡಲ ಪ್ರಕಾಶ ಮಾನೋದರ ದಿವ್ಯಧಾಮನಿ ॥ (ಆಳ. ಸ್ತೋ 39)
ಪ್ರಕೃಷ್ಟ ಜ್ಞಾನಬಲಗಳಿಗೆ ವಾಸಸ್ಥಾನವಾದ, ಹಾಗೆಯೆ ತನ್ನ ಹೆಡೆಯಲ್ಲಿರುವ ರತ್ನ ಸಮೂಹಗಳ ಕಿರಣ ಮಂಡಲದಿಂದ ಪ್ರಕಾಶಮಾನವಾದ ಉದರ ಭಾಗವನ್ನುಳ್ಳಂಥ, ಆದಶೇಷನ ಮಡಿಯಲ್ಲಿ ಲಕ್ಷ್ಮಿಯೊಡಗೂಡಿ ಸರ್ವೇಶ್ವರನು ಪರಮಪದದಲ್ಲಿ ಕುಳಿತಿದ್ದಾನೆ.

(ಮುಂದುವರಿದಿದೆ)

(16) ಬ್ರಹ್ಮಣಿ ಶ್ರೀನಿವಾಸೇ (17) ಶ್ರಿಯಃಪತಿರ್ನಿಖಿಲಹೇಯ ಪ್ರತ್ಯನೀಕ ಕಲ್ಯಾಣೈಕ ತಾನಾನಂತ ಜ್ಞಾನಾನಂದೈಕ ಸ್ವರೂಪಃ" (18) ನೀಯುಂ ನ್ತಿರುಮುಹಳುಂ ನಿನ್ರಾಯಾಲ್, 19) ಒಣ್ತೊಡಿಯಾಳ್ ತಿರುಮುಹಳುಂ ನೀಯುಮೇ ನಿಲಾ ನಿರ್ಪ", 20) ಕೋಲತ್ತಿರುಮಾಮುಹ ಳೋಡುನ್ನೈ" 21) ನಿನ್ತಿರುವ ರುಳುಮ್ ಪಙ್ಗಯತ್ತಾಳ್ ತಿರುವರುಳುಮ್, 22) ಉನ್‌ತಾಮರೈ ಮಙ್ಗೈಯುಮ್ ನೀಯುಮ್ 23) ಅಹಲಹಿಲ್ಲೇನಿರೈಯುಮ್

ಇಲ್ಲದಿದ್ದರೆ ಇತರ ವ್ಯಾವರ್ತಕತ್ವ ಜ್ಞಾನವು ಉಂಟಾಗುವುದಿಲ್ಲ ಲಕ್ಷ್ಮಿಯು ದೇವತಾಂತರ ವ್ಯಾವೃತ್ತಿ ಪ್ರೂರ್ವಕ ಭಗವಂತನ ಸ್ವರೂಪ ನಿರೂಪಕ ಧರ್ಮಳಾಗಿದ್ದಾಳೆ. ನಾರಾಯಣ ಶಬ್ದವು ಬ್ರಹ್ಮರುದ್ರಾದಿಗಳಿಂದ ಬೇರೆಯಾದ ಶ್ರಿಯಃಪತಿ–ಎಂಬ ಅರ್ಥದಲ್ಲಿ ರೂಢಿಯಾದ ಹೆಸರು.

16) **ಬ್ರಹ್ಮಣಿ ಶ್ರೀನಿವಾಸೇ** ಸತ್ಯತ್ವಾದಿ ಸ್ವರೂಪ ನಿರೂಪಕ ಧರ್ಮ ಪಂಚಕಗಳಿಂದ ಪರಬ್ರಹ್ಮವು ನಿರೂಪಿಸಲ್ಪಟ್ಟರೂ, ಶ್ರೀನಿವಾಸನೆಂಬ ವಿಶೇಷಣದಿಂದ ಕೂಡಿಯೇ ಬ್ರಹ್ಮವಿದ್ಯೆಗಳಲ್ಲಿ ಉಪಾಸಿಸಲ್ಪಡಬೇಕೆಂಬುದು ಹೇಳಲ್ಪಡುತ್ತದೆ–(ತತ್ವಟೀಕೆ)

17) **ಶ್ರಿಯಃ ಪತಿ:** ಇತ್ಯಾದಿ "ನಾರಾಯಣ ಪರಂಬ್ರಹ್ಮ" ಎಂಬ ಗೀತಾರ್ಥ ಸಂಗ್ರಹದಲ್ಲಿಯ, ಶ್ಲೋಕದಲ್ಲಿ "ನಾರಾಯಣ" ಎಂಬ ಶಬ್ದಕ್ಕೆ ವ್ಯಾಖ್ಯಾನವಾಗಿ, "ಶ್ರಿಯಃ ಪತಿಃ ನಿಖಿಲ ಹೇಯಪ್ರತ್ಯನೀಕ ಎಂದಾರಂಭಿಸಿ ಗೀತಾಭಾಷ್ಯದಲ್ಲಿ ಭಗವದ್ರಾಮಾನುಜಾಚಾರ್ಯರು ಹೇಳಿದ್ದಾರೆಂದು, ಶ್ರೀಮತ್ತಾತ್ಪರ್ಯಚಂದ್ರಿಕೆಯಲ್ಲಿ ದೇಶಿಕರು ಹೇಳಿದ್ದಾರೆ. ಇದರಿಂದ ಶ್ರಿಯಃಪತಿತ್ವವೆಂಬುದು ಸ್ವರೂಪ ನಿರೂಪಕಧರ್ಮಗಳಲ್ಲಿ ಪ್ರಧಾನವಾದುದು. ಭಗವಂತನ ಹಾಗೆ ಲಕ್ಷ್ಮಿಗೂ ಸತ್ಯತ್ವ ಜ್ಞಾನತ್ವ ಅನಂತತ್ವ ಆನಂದತ್ವ, ಅಮಲತ್ವಗಳು ಹೇಳಲ್ಪಡುತ್ತವೆ, ಎಂಬ ಅರ್ಥವೂ ದ್ಯೋತಿತ. ನಾರಾಯಣ ಪದಕ್ಕೆ ಶ್ರೀ ಪತಿತ್ವವು ರೂಢ್ಯರ್ಥ. ಶಬ್ದಗಳ ಸ್ವರೂಪನಿರೂಪಕ ಧರ್ಮಗಳೇ ಆಯಾಯಾ ಸಂಜ್ಞಗಳನ್ನು ತಿಳಿಸಲು ಗವಾದಿ ಶಬ್ದಗಳಲ್ಲಿ ಗೋತ್ವಾದಿಗಳ ಹಾಗೆ ರೂಢಿ ಶಕ್ತಿ ನಿಮಿತ್ತ.

ಇನ್ನು ಮೇಲೆ ಆಳ್ವಾರುಗಳ ಪಾಶುರಗಳನ್ನು ಪ್ರಮಾಣವಾಗಿ ಎತ್ತಿತೋರಿಸುತ್ತಾರೆ

18. ನೀಯುಮ್ ತಿರುಮುಹಳುಮ್ ನಿನ್ರಾಯಾಲ್–

ಭಗವಂತನು ಗೋವರ್ಧನ ಗಿರಿಯನ್ನು ಎತ್ತಿಕೊಂಡು, ಹಾಗಯೇ ತಿರುಕ್ಕೋವಲೂರ್ ದಿವ್ಯ ದೇಶದಲ್ಲಿ ಬಿಜಯ ಮಾಡಿಸಿಕೊಂಡು ಸರ್ವರನ್ನೂ ರಕ್ಷಿಸುವ ದಶೆಯಲ್ಲಿ ಲಕ್ಷ್ಮಿಯೊಡಗೂಡಿದ್ದಾನೆ **19) ಒಂಡೊಡಿ ಯಾಳ್–** ಇತ್ಯಾದಿ– ಉಜ್ವಲವಾದ ಹಸ್ತಾ ಭರಣವುಳ್ಳ ಲಕ್ಷ್ಮಿಯೂ ನೀವೂ ಸಹ ಕೂಡಿ ಇರುವ ಎಂದರ್ಥ, ಇದರಿಂದ ಲಕ್ಷ್ಮೀ ವಿಶಿಷ್ಟನು ಪ್ರಾಪ್ಯನೆಂದರ್ಥ **(20) ಕೋಲತ್ತಿರುಮಾ ಮುಹಳೋಡುನ್ನೈ**-ಭಗವದ್ವ ಶೀಕರಣ ಯೋಗ್ಯವಾದ ಸೌಂದರ್ಯವನ್ನುಳ್ಳ ಲಕ್ಷ್ಮಿಯೊಡಗೂಡಿದ ನಿನ್ನನ್ನು–**21)** ನಿನ್ **ತಿರುವರುಳುಮ್ ಪಂಗಯತ್ತಾಳ್‌ತಿರು ವರುಳುಮ್** ನಿನ್ನ ಮತ್ತು ಪಂಕಜವಾಸಿನಿಯ ಶ್ರೀಮತ್ಕೃಪೆಯನ್ನು (22) **ಉನ್‌ತಾಮರೈ ಮಂಗೈಯುಮ್**

---

12) ಕಾಂತಸ್ತೇ ಪುರುಷೋತ್ತಮ · ಫಣಿಪತಿಃ ಶಯ್ಯಾಽಸನಂ ವಾಹನಂ
ವೇದಾತ್ಮಾ ವಿಹಗೇಶ್ವರೋ ಯವನಿಕಾ ಮಾಯಾ ಜಗನ್ಮೋಹಿನೀ ।
ಬ್ರಹ್ಮೇಶಾದಿಸುರವ್ರಜಃ ಸದಯಿತಃ ತ್ವದ್ದಾಸದಾಸೀಗಣಃ
ಶ್ರೀರಿತ್ಯೇವಚನಾಮತೇ ಭಗವತಿಬ್ರೂಮಃ ಕಥಂತ್ವಾಂ ವಯಮ್ ॥ (ಚತುಶ್ಲೋಕಿ)
ಎಲೈಲಕ್ಷ್ಮಿಯೇ ಪುರುಷೋತ್ತಮನು ನಿನಗೆ ಅನುರೂಪಪತಿಯು ಪ್ರಿಯನು ಅವನ ಎಲ್ಲಾ ವಿಭೂತಿಗಳೂ ನಿನಗೂ ವಿಭೂತಿ. ಶ್ರೀ ಎಂದೇ ನಿನ್ನ ಹೆಸರು ನಿನ್ನನ್ನು ಪೂರ್ಣವಾಗಿ ನಾವು ಹೇಗೆ ಸ್ತೋತ್ರ ಮಾಡಲಾದೀತು.

(ಮುಂದುವರಿದಿದೆ)

24) "ಉಣರ್ ಮುಱ್ಱುನಲಂ"(25)"ನನ್ದಾ ವಿಳಕ್ಕೇ ಯಳತ್ತರ್‌ಕ್ಕರಿಯಾಯ್," ಎನ್ರುಂ ಪ್ರಮಾಣಙ್ಗಳ್ ಶೊಲ್ಲುಹಿರಪಡಿಯೇ ಸರ್ವಪ್ರಕಾರತ್ತಾಲುಂ ಸರ್ವಾವಸ್ಥೈಯಿಲುಂ ಸಹಧರ್ಮಚಾರಿಣಿಯಾನ ಪೆರಿಯಪಿರಾಟ್ಟಿ

ನೀಯುಂವುಮ್‌ನಿನ್ನ ವಳಾದ ಕಮಲವಾಸಿನಿಯೂ ನೀನೂ (23)ಅಹಲ ಹಿಲ್ಲೇನ್ ಇರೈಯುಂ, ಕ್ಷಣ ಕಾಲವೂ ಬಿಟ್ಟಿರಲಾರೆ–20 21, 22, 23 ವಚನಗಳು ಉಪಾಯ ದಶೈಯಲ್ಲಿ ಲಕ್ಷ್ಮೀ ಸಂಬಂಧಕ್ಕೆ ಪ್ರಮಾಣ ವಚನಗಳು. ಆದಾಗಿ ಭಗವಂತನು ಚೇತನನನ್ನು ರಕ್ಷಿಸುವಾಗ ಲಕ್ಷ್ಮೀವಿಶಿಷ್ಟನಾಗಿಯೇ ರಕ್ಷಿಸುತ್ತಾನೆ, ರಕ್ಷಣವ್ಯಾಪಾರವು ಇಬ್ಬರಿಗೂ ಸೇರಿದ್ದುದು ಎಂದರ್ಥ.

ಹೀಗೆ ಶ್ರಿಯಃ ಪತಿತ್ವವು ಎಲ್ಲಾ ಅವಸ್ಥೆಗಳಲ್ಲಿಯೂ ಸ್ವರೂಪ ನಿರೂಪಕ ಧರ್ಮವಾಗಿದೆ, ಎಂಬುದಕೆ ಪ್ರಮಾಣ ವಚನಗಳನ್ನು ತೋರಿಸಿ ನಂತರ ಸತ್ಯತ್ವ, ಜ್ಞಾನತ್ವಾದಿ ಸ್ವರೂಪ ನಿರೂಪಕಧರ್ಮಗಳಿಗೆ ಪ್ರಮಾಣ ವಚನಗಳನ್ನು ಆಚಾರ್ಯರು, (24)ಉಣರ್‌ಮುಱ್ಱುನಲಮ್, ಎಂದಾರಂಭಿಸಿ ತಿಳಿಯ ಪಡಿಸುತ್ತಾರೆ. ಮುಱ್ಱು ಎಂಬಪದವನು ಮಧ್ಯ ಮಣಿನ್ಯಾಯದಿಂದ ಎರಡು ಕಡೆಯೂ ಅನ್ವಯಿಸಿ, ಮುಱ್ಱುಉಣರ್–ಪರಿಪೂರ್ಣ ಜ್ಞಾನ ಸ್ವರೂಪನು, ಮುಱ್ಱುನಲಮ್–ಪರಿಪೂರ್ಣ ಆನಂದ ಸ್ವರೂಪನು ಎಂದು ತಿಳಿಯ ಬೇಕು 25)ನಂದಾವಿಳಕ್ಕೇ ಅಳತ್ತರ್ಕರಿಯಾಯ್,·"ಕೃತ್ಸ್ನಃ ಪ್ರಜ್ಞಾನ ಘನ ಏವ" ಎಂಬ ಶ್ರುತಿಯ ಪ್ರಕಾರ, ಪರಮಾತ್ಮ ಸ್ವರೂಪದಲ್ಲಿ ಏಕದೇಶವೂ ಜಡವಲ್ಲ. ಸ್ವಯಂ ಪ್ರಕಾಶವಿಲ್ಲದ್ದುಸು ಇಲ್ಲ ಮುಱ್ಱುನಲಮ್ ಎಂಬುದರಿಂದ ಅನುಕೂಲ ವಿಲ್ಲದ ಅಂಶವು ಯಾವುದೂ ಇಲ್ಲ ಎಂದರ್ಥ. ನಂದಾವಿಳಕ್ಕೇ - ನಂದಾ– ನಶಿಸದ, ವಿಳಕ್ಕು–ಜ್ಞಾನಸ್ವರೂಪನು ಎಂದು ನಿರ್ವಿಕಾರತ್ವರೂಪವಾದ ಸತ್ಯತ್ವವೂ ವಿಳಕ್ಕು–ಎಂಬುದರಿಂದ ಜ್ಞಾನತ್ವವೂ ಹೇಳಲ್ಪಟ್ಟಿತು. ಅಳತ್ತರ್ಕರಿಯಾಯ್–ಅಳವಿಡಲು ಅಶಕ್ಯನೇ ತ್ರಿವಿದ ಪರಿಚ್ಛೇದ ರಹಿತ; ಅಂದರೆದೇಶತಃ ಕಾಲತಃ, ವಸ್ತುತಃ ಅಳವಡಿಸಲಶಕ್ಯನು–ಅನಂತಶಬ್ದಾರ್ಥ ಇದರಿಂದ ಸತ್ಯಂಜ್ಞಾನಮನಂತಂಬ್ರಹ್ಮ ' ಎಂಬ ಶ್ರುತ್ಯರ್ಥವು ತಿಳಿಸಲ್ಪಟ್ಟಿತು

ಈ ವಚನಗಳಿಂದ ಹೇಳಲ್ಪಟ್ಟ ಅರ್ಥಗಳನ್ನು, "ಎನ್ರುಂಪ್ರಮಾಣಂಗಳ್ ಶೊಲ್ಲುಹಿರಪಡಿಯೇ" ಎಂದಾರಂಭಿಸಿ ಸಂಗ್ರಹಿಸುತ್ತಾರೆ ಆದಾಗಿ ಆ ಬ್ರಹ್ಮತತ್ತ್ವವನ್ನು ಸರ್ವಪ್ರಕಾರದಿಂದಲೂ ಸರ್ವಾವಸ್ಥೆಯಲ್ಲಿಯೂ ಸಹಧರ್ಮಚಾರಿಣಿಯಾದ ಪ್ರಧಾನ ಮಹಿಷಿಯಾದ ಲಕ್ಷ್ಮಿಯನ್ನು ಬಿಡದೆ ಇರುವ ಅಪರಿಚ್ಛಿನ್ನಾನಂದಗುಣದಿಂದ ಕೂಡಿದ, ಅನಂತಜ್ಞಾನಾನಂದ ಸ್ವರೂಪವನ್ನಾಗಿ, ಅನುಸಂಧಾನ ಮಾಡಬೇಕು

ಸರ್ವಪ್ರಕಾರತ್ತಾಲುಮ್. ಸತ್ಯತ್ವ, ಜ್ಞಾನತ್ವಾದಿ ಪ್ರಕಾರಗಳು (ಧರ್ಮಗಳು) ಲಕ್ಷ್ಮೀವಿಶಿಷ್ಟಸ್ವರೂಪ ನಿರೂಪಕ ಧರ್ಮಗಳು, ವಿಶೇಷಣ ವಿಶೇಷ್ಯಗಳಿಗೆ ಅಂದರೆ ಲಕ್ಷ್ಮಿಗೂ, ಅವಳ ಪತಿಗೂ ಸಮಾನವಾದುವು ಆದ್ದರಿಂದಲೇ ಸೃಷ್ಟಿ, ರಕ್ಷೆ (ಸ್ಥಿತಿ) ಸಂಹಾರಾದಿಗಳು ವಿಶಿಷ್ಟೈಕತತ್ತ್ವಕ್ಕೆ ಸೇರಿದುವು. ಅಂದರೆಭಗವಂತನು ಜಗತ್ಸೃಷ್ಟ್ಯಾದಿಗಳನ್ನು ಸಂಕಲ್ಪಿಸುವಾಗ ಮಹಾಲಕ್ಷ್ಮಿಯೂ ಅವುಗಳನ್ನು ಸಂಕಲ್ಪಿಸುತ್ತಾಳೆ. ಅವತಾರ ಮಾಡಲು ಸಂಕಲ್ಪಿಸುವಾಗ ಲಕ್ಷ್ಮಿಯೂ ಸೇರಿ ಸಂಕಲ್ಪಿಸುತ್ತಾಳೆಂದರ್ಥ, ಸರ್ವಾವಸ್ಥೈಯಿಲುಂ ಪರರೂಪದಲ್ಲಿ ಆದಿಶೇಷನ

---

13) ಪ್ರಕೃತಿ ಪುರುಷ ಕಾಲಾವ್ಯಕ್ತ ಮುಕ್ತಾಃಯದಿಚ್ಛಾಂ
ಅನುವಿದಧತಿ ನಿತ್ಯಂ ನಿತ್ಯಸಿದ್ಧೈರನೇಕೈಃ ।
ಸ್ವಪರಿಚರಣ ಭೋಗ್ಯೈಃ ಶ್ರೀಮತೇ ಪ್ರೀಯಮಾಣೇ
ಭವತು ಮಮ ಪರಸ್ಮಿನ್ ಪೂರುಷೇ ಭಕ್ತಿ ಭೂಮಾ ॥ (ಆತ್ಮ ಸಿದ್ಧಿ–ಮಂಗಳ ಶ್ಲೋಕ)
ಪ್ರಕೃತಿ ಪುರುಷ, ಕಾಲ, ಅವ್ಯಕ್ತ, ಮುಕ್ತರು, ಭಗವಂತನ ಇಚ್ಛಾನುಸಾರ ನಡೆದುಕೊಳ್ಳುತ್ತಾರೆ. ಹಾಗೆಯೇ ಅನೇಕ ನಿತ್ಯರೂ ಸಿದ್ಧಪುರುಷರೂ ಸಹ ಅವನಗೆ ಕೈಂಕರ್ಯಗಳನ್ನು ಭೋಗ್ಯವಾಗಿ ತಿಳಿದು ಮಾಡುತ್ತಾರೆ. ಆದರಿಂದ ಲಕ್ಷ್ಮೀ ವಿಶಿಷ್ಟನು ಪ್ರೀತನಾಗುತ್ತಾನೆ. ಆ ಪರಮಪುರುಷನಲ್ಲಿ ನನಗೆ ನಿರವಧಿಕ ಭಕ್ತಿಯು ಉಂಟಾಗಲಿ (ಮುಂದುವರಿದಿದೆ)

ಯಾರೋಡು ಪಿರಿವಿಲ್ಲಾದ ಮುಮ್ಮುನಲಮಾನವನನ್ತ ಜ್ಞಾನ ಸ್ವರೂಪಮಾಹವನುಸನ್ಧಿಕ್ಕವೇಣುಮ್.

ಪರ್ಯಂಕದಲ್ಲಿ ಪರ ರೂಪದಿಂದ ಕೂಡಿರುವುದು, ಅವತಾರಗಳಲ್ಲಿ, "ದೇವತ್ವೇದೇವ ದೇಹೇಯಂ ಮನುಷ್ಯತ್ವೇಚ ಮಾನುಷೀ" ಎಂಬಂತೆಯೂ, "ರಾಘವತ್ವೇಽಭವತ್ಸೀತಾ ರುಕ್ಮಿಣೀ ಕೃಷ್ಣ ಜನ್ಮನಿ" । ಎಂಬಂತೆಯೂ ಭಗವಂತನಿಗೆ ಅನುರೂಪವಾಗಿ ತಾನೂ ಅವತರಿಸುತ್ತಾಳೆ.

ಸಹಧರ್ಮಚಾರಿಣಿಯಾನ–ನಿತ್ಯಂತದ್ಧರ್ಮ ಧರ್ಮಿಣೀ॥ ಎಂಬವಚನವು ಅಭಿಪ್ರೇತ. ಇಲ್ಲಿಲಕ್ಷ್ಮಿಗೆ ಸಹಧರ್ಮಚಾರಿತ್ವವು ಭಗವಂತನು ಉಪಾಯವಾದಾಗ ತಾನೂ ಉಪಾಯವಾಗಿರುವುದು, ಪ್ರಾಪ್ಯ ದಶೆಯಲ್ಲಿ ತಾನೂ ಪ್ರಾಪ್ಯಳಾಗಿ ಕೈಂಕರ್ಯ ಪ್ರತಿಸಂಬಂಧಿಯಾಗಿರುವುದು. ಎಂದರ್ಥ. **ಪೆರಿಯ ಪಿರಾಟ್ಟಿಯಾರೋಡು–** "ಕೃತಾಭಿಷೇಕಾ ಮಹಿಷೀ " ಇತ್ಯಾದಿ ಕೋಶವನ್ನು ಅನುಸರಿಸಿ, "ದೇವದೇವ ದಿವ್ಯಮಹಿಷೀಂ "ಎಂದು ಭಾಷ್ಯಕಾರರಿಂದ ವಿವರಿಸಲ್ಪಟ್ಟ ಲೋಕ ಮಾತೆಯಾದ ಮಹಾಲಕ್ಷ್ಮಿಯು ವಿವಕ್ಷಿತೆ. ಭಗವಂತನ ಪ್ರೇಯಸಿಗಳಾದ ಭೂಮಿ ನೀಳೆಗಳಿಗಿಂತ ಇವಳು ಮೇಲಾದವಳು. ಮೇಲೆಹೇಳಿದ **ಸರ್ವಾವಸ್ಥತ್ವ ಸರ್ವಪ್ರಕಾರತ್ವ, ಸಹಧರ್ಮಚಾರಿತ್ವ**ಗಳು ಮಹಾಲಕ್ಷ್ಮಿಗೆ ಇರ ವಹಾಗೆ ಅವರಿಗೆಲ್ಲ ಸಂಭವಿಸವು ಭಾವಗಳು ಮಾತ್ರ ಇವನ್ನು **"ಪೆರಿಯ"** ಎಂಬ ವಿಶೇಷಣವು ವ್ಯಾವರ್ತಿಸುತ್ತದೆ **ಪಿರಿವಿಲ್ಲಾದ**-ಭಗವಂತನ ಸರ್ವಾವಸ್ಥೆಗಳಲ್ಲಿಯೂ ಮಹಾಲಕ್ಷ್ಮಿಯು ಅವನನ್ನು ಬಿಟ್ಟಿಲ್ಲದೆ ಇರುವವಳು. ವ್ಯಾಪಕಾವತಿಸಂಶ್ಲೇಷಾದೇಕತತ್ತ್ವ ಮಿವೋದಿತೌ, ಭಾಸ್ಕರೇಣ ಪ್ರಭಾಯಥಾ" ಎಂಬ ವಚನಗಳ ಪ್ರಕಾರ, ಎಲ್ಲೆಲ್ಲಿಯೂ ವಿಭುಸ್ವರೂಪವಾಗಿ ಪರಸ್ಪರ ಸಂಶ್ಲೇಷದಿಂದ, ಏಕತತ್ತ್ವವೆಂದು ಹೇಳ ಬಹುದಾದ ರೀತಿಯಲ್ಲಿ ಇರುವಹಾಗೆ,"ದೀಪ ಸ್ತ್ವಮೇವಜಗತಾಂ ದಯಿತಾರುಚಿಸ್ತೇ" ಎಂಬಂತೆ ದೀಪವೂ ಅದರ ಕಾಂತಿಯೂ ಸೇರಿರುವಹಾಗೆ ಇರುವವರು, ಎಂದರ್ಥ. **ಮುಮ್ಮುನಲ ಮಾನ ವನಂತ ಜ್ಞಾನ ಸ್ವರೂಪ ಮಾಹವನು ಸಂಧಿಕ್ಕವೇಣುಮ್** ಹೀಗೆ ಲಕ್ಷ್ಮಿಯನ್ನು ಅಗಲಿರದ ಪರಿಪೂರ್ಣ ಅನಂತ ಜ್ಞಾನ ಸ್ವರೂಪನನ್ನಾಗಿ ಅನುಸಂಧಾನ ಮಾಡಬೇಕು. **"ಅನಂತ ಜ್ಞಾನಾನಂದ ಸ್ವರೂಪಮಾಹ** ಎಂಬಪಾಠದಲ್ಲಿ 'ಆನಂದ' ಶಬ್ದವು ಪುನರುಕ್ತಿಯೆಂದು ಅಂಗೀಕರಿಸಿಲ್ಲ. ಇಂಜಿಮೇಡು ಅಳಗಿಯಶಿಂಗರ ವ್ಯಾಖ್ಯಾನದಲ್ಲಿ ಮುಮ್ಮುನಲಮಾನ ಅನಂತಜ್ಞಾನಾನಂದ ಸ್ವರೂಪ ವೆಂಬಪಾಠವನ್ನು ಅಂಗೀಕರಿಸಿ, ಆನಂದ ಎಂಬುದು ಧರ್ಮಿಜ್ಞಾನ, ಮುಮ್ಮುನಲಮಾನ ಎಂಬುದು ಧರ್ಮ ಭೂತ ಜ್ಞಾನವನ್ನು ತಿಳಿಸುವುದಾಗಿ ಪುನರುಕ್ತಿಪರಿಹಾರಮಾಡಿ ವ್ಯಾಖ್ಯಾನ ಮಾಡಿದ್ದಾರೆ. ಕರೂರುಸ್ವಾಮಿಗಳೂ ಉತ್ತಮೂರ್ ವೀರರಾಘವಾಚಾರ್ಯ ಸ್ವಾಮಿಗಳೂ ಈ ಪಾಠವನ್ನುಆದರಿಸಿಲ್ಲ ಲಕ್ಷ್ಮೀನಾರಾಯಣರಿಬ್ಬರೂ, ಅನಂತ ಸ್ವರೂಪರಂನ

---

14) ಸಮಸ್ತ ಚಿದಚಿದ್ವಸ್ತು ಶರೀರಾಯಾಖಿಲಾತ್ಮನೇ
ಶ್ರೀಮತೇ ನಿರ್ಮಲಾನಂದೋದನ್ವತೇ ವಿಷ್ಣವೇ ನಮಃ ॥
(ವೇದಾಂತಸಾರ ಮಂಗಳ ಶ್ಲೋಕ) ಎಲ್ಲಾ ಚೇತನಾ ಚೇತನಾತ್ಮಕ ವಸ್ತುಗಳನ್ನು ಶರೀರವಾಗಿ ಉಳ್ಳವನಾಗಿ ಅವಕ್ಕೆ ಆತ್ಮನಾದವನ ಲಕ್ಷ್ಮೀಪತಿ. ಅವನು ಮಲಸಂಬಂಧವಿಲ್ಲದವನು ಆನಂದಸಾಗರನು ಎಲ್ಲವನ್ನೂ ವ್ಯಾಪಿಸಿರುವುದರಿಂದ ವಿಷ್ಣು ಶಬ್ದ ವಾಚ್ಯನು ಅವನಿಗೆ ನಮಸ್ಕಾರ.

15) ಪ್ರಿಯಾಕಾಂತೋಽನಂತೋ ವರಗುಣ ಗಣೈಕಾಸ್ಪದ ವಪುಃ
ಹತಾಶೇಷಾವದ್ಯಃ ಪರಮಪದೋ ವಾಙ್ಮನಸಯೋಃ
ಅಭೂಮಿ ರ್ಭೂಮಿರ್ಯಃ ನತ ಜನದೃಶಾಮಾದಿ ಪುರುಷೋ
ಮನಸ್ತತ್ಪಾದಾಬ್ಜೇ ಪರಿಚರಣ ಸಕ್ತಂ ಭವತುಮೇ ॥ (ವೇದಾಂತ ದೀಪ ಮಂಗಳ ಶ್ಲೋಕ)

ಲಕ್ಷ್ಮಿಗೆ ಪ್ರಿಯನಾದ ಭರ್ತಾ ಅನಂತನು ಸಮಸ್ತಕಲ್ಯಾಣಗುಣಾತ್ಮಕನು ಅನವದ್ಯನು ವಾಕ್ಕು ಮನಸ್ಸು ಇವುಗಳಿಗೆ ಎಟಕಿಸದವನು ತನ್ನಲ್ಲಿ ತಲೆಬಾಗಿಸಿದವರಿಗೆ, ವಶ್ಯನು ಆದಿಪುರುಷನು, ಆವರಿಬ್ಬರ ಪಾದಾಂಬುಜಗಳಲ್ಲಿ ಕೈಂಕರ್ಯ ಮಾಡುವಂತೆ ನನ್ನ ಮನಸ್ಸು ಸಕ್ತವಾಗಲಿ. ಪುಂಪ್ರಧಾನವಾಗಿ ಎಂದರೆ ಇಬ್ಬರೂ ಸೇರಿದ ಮಿಥುನವು ಕೈಂಕರ್ಯ ಪ್ರತಿಸಂಬಂಧಿ ಎಂದರ್ಥ

(ಮುಂದುವರಿದಿದೆ)

ಹೇಳಿರುವುದರಿಂದ, "ಸರ್ವ್ರದೇಶೋನತಸ್ಯಾಸ್ತಿ ಯೋನಭೂತಂ ಮಯಾವಿನಾ" ನಾನಿಲ್ಲದ (ಲಕ್ಷ್ಮಿ) ಪ್ರದೇಶವು ಆ ಭಗವಂತನಿಗಿಲ್ಲ, ಎಂದು ಇಬ್ಬರಿಗೂ ಅಂತರ್ವ್ಯಾಪ್ತಿ ಬಹಿರ್ವ್ಯಾಪ್ತಿ ರೂಪವಾದ ವ್ಯಾಪ್ತಿಯು ಸಮಾನವೆಂದು ತಿಳಿಸಲ್ಪಡುತ್ತದೆ. ಆದ್ದರಿಂದ ಆಸಂತ್ಯಶ್ರುತಿಯು ವಿಶೇಷಣ ವಿಶೇಷ್ಯಭೂತರಾದ ಲಕ್ಷ್ಮೀನಾರಾಯಣರಿಬ್ಬರಲ್ಲಿಯೂ ಸಮಾನವಾಗಿ ಪ್ರವೃತ್ತಿಸುತ್ತದೆ.

---

16) ಅಖಿಲ ಭುವನ ಜನ್ಮ ಸ್ಥೇಮಭಂಗಾದಿಲೀಲೇ
ವಿನತ ವಿವಿಧ ಭೂತವ್ರಾತ ರಕ್ಷೈಕ ದೀಕ್ಷೇ ।
ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ
ಭವತು ಮಮಪರಸ್ಮಿನ್ ಶೇಮುಷೀ ಭಕ್ತಿರೂಪಾ ॥ (ಶ್ರೀ ಭಾಷ್ಯ ಮಂಗಳ ಶ್ಲೋಕ)

ಎಲ್ಲಾ ಪ್ರಪಂಚಗಳ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಲೀಲೆಯಾಗಿ ಉಳ್ಳವನೂ ತನ್ನಲ್ಲಿ ಭಕ್ತಿ ಪ್ರಪತ್ತಿ ಮಾಡಿದ ವಿವಿಧ ಚೇತನರ ರಕ್ಷಣೆಯೇ ದೀಕ್ಷೆಯಾಗಿ ಉಳ್ಳವನೂ, ವೇದಾಂತ ಅಂದರೆ ಉಪನಿಷತ್ತುಗಳಲ್ಲಿ ವಿಶೇಷವಾಗಿ ಪ್ರತಿಪಾದ್ಯನೂ ಆದ, ಲಕ್ಷ್ಮೀಪತಿಯು ಬ್ರಹ್ಮ ಶಬ್ದವಾಚ್ಯನು ಅವನಲ್ಲಿ ಭಕ್ತಿರೂಪವಾದ ಜ್ಞಾನವು ಉಂಟಾಗಲಿ

17) ಶ್ರಿಯಃ ಪತಿ ಇತ್ಯಾದಿ (ಗೀತಾಭಾಷ್ಯ)

18) ನೀಯುಂ ತಿರುಮಗಳುಂ ನಿನ್ರಾಯಾಲ್ ಕುನ್ರೆಡುತ್ತು
ಪ್ಪಾಯುಂ ಪನಿಮರೈತ್ತ ಪಣ್ಬಾಳಾ-ವಾಶಲ್
ಕಡೈಕಳ್ಳಿಯಾ ಉಳ್ಪುಹಾ ಕಾಮರ್ ಪೂಂಗೋವಲ್
ಇಡೈಕಳ್ಳಿಯೇ ಪತ್ತಿಯಿನಿ । (ಮುದಲ್ ತಿರುವಂದಾದಿ-86)

ಭಗವಂತನೇ, ನೀನೂ ಮಹಾಲಕ್ಷ್ಮಿಯೂ ಒಡಗೂಡಿ, ಗೋವರ್ಧನ ಗಿರಿಯನ್ನು ಎತ್ತಿ, ಮಳೆಯನ್ನು ತಡೆದ ಪ್ರಕಾರವೂ, ತಿರುಕ್ಕೋವಲೂರ್ ದಿವ್ಯದೇಶದಲ್ಲಿ ಹೊರಗೂ ಒಳಗೂ ಇಲ್ಲದೆ ದೇಹಳಿಯಲ್ಲಿ ನಿಂತುಗೊಂಡು, ಸೇವೆ ಕೊಡುತ್ತಿರುವುದೂ ಆಶ್ರಿತರ ರಕ್ಷಣದ ಪ್ರಕಾರ.

19) ಕಂಡುಕೇಟ್ಟುಟ್ರು ಮೋಂದುಂಡುಳ್ಳಲುಮ್, ಐಂಗರುವಿ
ಕಂಡ ವಿನ್ಬಮ್ ತೆರಿವರಿಯ ಅಳವಿಲ್ಲಾ ಚ್ಚಿಟ್ರಿನ್‌ಬಮ್
ಒಂಡೊಡಿಯಾಳ್ ತಿರುಮಗಳುಂ ನೀಯುಮೇ ನಿಲಾನಿರ್ಪ್ಪಕ್ಕಂಡ ಶದಿರ್ ಕಂಡೊಳ್ಳಿಂದೇನ್
ಅಡೈಂದೇನ್ ಉನ್‌ತಿರುವಡಿಯೇ ॥

ಎಲೈಭಗವಂತನೇ, ಪ್ರಕಾಶಮಾನವಾದ ಹಸ್ತಾಭರಣವುಳ್ಳ ಲಕ್ಷ್ಮಿಯೂ, ನೀನೂ ಸಹ ಕೂಡಿ ಇರುವ ಸಾಮರ್ಥ್ಯವನ್ನು ಸೇವಿಸಿ. ಶಬ್ದಾದಿ ವಿಷಯಗತ ಆನಂದವನ್ನೂ ಕೈವಲ್ಯಸುಖವನ್ನೂ ತ್ಯಜಿಸಿದೆನು. ಲಕ್ಷ್ಮೀ ವಿಶಿಷ್ಟನಾದ ನಿನ್ನ ಪಾದಗಳನ್ನು ಆಶ್ರಯಿಸಿದ್ದೇನೆ. ನೀಯುಮೇ ಎಂಬಲ್ಲಿ ಏವಕಾರದಿಂದ, ನಿಮ್ಮಿಬ್ಬರು ವಿನಹ ಪ್ರಾಪ್ಯವು ಬೇರೆ ಇಲ್ಲ ನಿಮ್ಮ ಪಾದಾರವಿಂದಗಳಲ್ಲಿ ನನ್ನ ಮನಸ್ಸು ಕೈಂಕರ್ಯಸಕ್ತವಾಗಲಿ ತಿರುವಾಯ್ 4-9-10

20) ಞಾಲತ್ತೂಡೇನಡಂದುಂ ನಿನ್ರುಂ ಕಿಡಂದಿರುಂದುಂ
ಸಾಲಪ್ಪಲನಾಳ್ ಉಗಂದೋರುಯಿರ್‌ಗಳ್ ಕಾಪ್ಪಾನೇ ॥
ಕೋಲತ್ತಿರುಮಾ ಮಗಳೋಡುನ್ನೈ ಕ್ಕೂಡಾದೇ ।
ಶಾಲಪ್ಪಲನಾಳ್ ಅಡಿಯೇನ್ ಇನ್ನುಂ ತಳರ್ವೇನೋ ॥

ಎಲೈಭಗವಂತನೇ, ಲಕ್ಷ್ಮೀವಿಶಿಷ್ಟನಾಗಿ ನೀನು ಈ ಭೂಮಿಯಲ್ಲಿ ಅವತರಿಸಿ ಸಂಚಾರ ಮಾಡಿಯೂ ವಿಭವಾವತಾರಗಳಲ್ಲಿ ನಿಂತೂ ಮಲಗಿಯೂ ನಿನ್ನ ಸೇವೆಯನ್ನು ಕೊಟ್ಟು, ಜೀವರನ್ನು ಕಾಪಾಡುತ್ತಿದ್ದೀಯೆ ಅಂಥಹ ನಿನ್ನನ್ನು ಹೊಂದದೇ ನಾನು ಇನ್ನು ಎಷ್ಟು ಕಾಲ ಕಷ್ಟ ಪಡಲಿ.

(ಮುಂದುವರಿದಿದೆ)

21) ಪಂಡ್ಶೈನಾಳಾರೇ ನಿನ್‌ತಿರುವರುಳುಂ ಪಂಗಯತ್ತಾಳ್ ತಿರುವರುಳುಂಕೊಂಡು
ನಿನ್ ಕೋಯಿಲ್‌ಶೀಯ್ತ್ಪುಪ್ಪಲ್ ಪಡಿಕಾಲ್ ಕುಡಿಕುಡಿ ವೞಿವಂದಾಳ್ ಶೆಯ್ಯುಂ ।
ತೊಂಡರೋರ್ಕ್ಕರುಳಿ ಜ್ಯೋದಿವಾಯ್ ತಿರಂದು, ಉನ್‌ತಾಮರೈ ಕ್ಕಣ್ಗಳಾಲ್ ನೋಕ್ಕಾಯ್
ತಣ್ಡರೈಪ್ಪೂರುನಲ್ ತಣ್‌ಪಣೈಶೂೞ್ನ್ದ ತಿರುಪ್ಪುಳಿಂಗುಡಿ ಕ್ಕಿಡಂದಾನೇ ॥ ತಿರುವಾಯ್ ಮೊೞಿ (9-2-1,

ನಿನ್ನ ಮತ್ತು ಪಂಕಜ ವಾಸಿನಿಯಾದ ಲಕ್ಷ್ಮಿಯ ಶ್ರೀಮತ್ಕೃಪೆಯನ್ನು ಅವಲಂಬಿಸಿ, ನಿಮ್ಮ ಗುಡಿಯನ್ನು ಗುಡಿಸಿ ಸಾರಿಸಿ ಅಲಂಕರಿಸಿ ನಿಮ್ಮಿಬ್ಬರಿಗೂ ವಂಶಪಾರಂಪರ್ಯವಾಗಿ ಕೈಂಕರ್ಯವನ್ನು ಮಾಡುವೆನು
ಕೈಂಕರ್ಯವು ಲಕ್ಷ್ಮೀ ವಿಶಿಷ್ಟ ನಾರಾಯಣನಲ್ಲಿ ಮಾಡ್ಪುವೆ–ಅಂದರೆ ಪ್ರಾಪ್ಯವು ನೀವು ಎಂದರ್ಥ

22) ಕಿಡಂದನಾಳ್‌ಕಿಡಂದಾಯ್ ಎತ್ತನೈಕಾಲಂ ಕಿಡತ್ತಿ ಉನ್ ತಿರುವುಡಂಬಶೈಯ ।
ತೊಡರ್‌ನ್ದುಕುತ್ತೇವಲ್‌ಶೆಯ್ದು ತೊಲ್ಲಡಿಮೈವೞಿವರುವ್ ತೋಡರೋರ್ಕ್ಕರುಳಿ ।
ತಡಂಗೊಳ್‌ತಾಮರೈಕ್ಕಣ್ ವಿೞಿತ್ತು ನೀ ಎೞುಂದು ಉನ್‌ತಾಮರೈಮಂಗೈಯುವ್ ನೀಯುವ್ ।
ಇಡಂಗೊಳ್ ಮೂವುಲಕುವ್ ತೊೞವಿರುಂದರುಳಾಯ್ ತಿರುಪ್ಪುಳಿಂಗುಡಿಕ್ಕಿಡಂದಾನೇ ॥

ಎಲೈ ತಿರುಪ್ಪುಳಿಂಗುಡಿಯಲ್ಲಿ ಮಲಗಿರುವ ಭಗವಂತನೇ । ನೀನು ಮಲಗಿರುವ ದಿವಸದಿಂದ ಆರಂಭಿಸಿ ಎಷ್ಟು ಕಾಲ ನಿನ್ನ ಮೈನೋವು ಉಂಟಾಗುವಂತೆ ಮಲಗಿರುತ್ತೀಯಾ ? ನಿರಂತರ ನಿನಗೆ ಸೇವಕ ವೃತ್ತಿಯನ್ನು ಮಾಡುವ ಭಕ್ತರಿಗೆ ಕೃಪೆಮಾಡಿ, ನಿನ್ನ ವಿಶಾಲವಾದ ಕಣ್ಣುಗಳನ್ನು ತೆರೆದು ಎದ್ದು ನೀಯೂ ಪಂಕಜವಾಸಿನಿಯಾದ ಲಕ್ಷ್ಮಿಯೂ, ವಿಶಾಲವಾದ ಮೂರು ಲೋಕದ ಜನರೂ ನಿಮ್ಮ ಪಾದಸೇವೆ ಮಾಡುವಂತೆ ಕುಳಿತುಕೊಂಡು ಬಂದು ಅನುಗ್ರಹಿಸು

23) ಅಹಲ ಹಿಲ್ಲೇನ್ ಇರೈಯುಮೆನ್ರು ಅಲರ್‌ಮೇಲ್ ಮಂಗೆಯುರೈ ಮಾರ್ಪಾ ।
ನಿಹರಿಲ್ ಪುಹೞಾಯ್ ಉಲಹಮೂನ್ರುಡೈಯಾಯ್ ಎನ್ನೈಯಾಳ್ವಾನೇ ।
ನಿಹರಿಲ್ ಅಮರರ್ ಮುನಿಕ್ಕಣಂಗಳ್ ವಿರುಂಬುಮ್ ತಿರುವೇಂಗಡತ್ತಾನೇ ।
ಪುಹಲೊನ್ರಿಲ್ಲಾವಡಿಯೇನ್ ಉನ್ನಡಿಕ್ಕೀೞ್ ಅಮರ್ನ್ದು ಪುಹುಂದೇನೇ ॥ (ತಿರುವಾಯ್ ಮೊೞಿ 6-10-10)

"ಕ್ಷಣ ಕಾಲವೂ ನಿನ್ನನ್ನು ಬಿಟ್ಟಿರಲಾರೆ ಎಂಬ", ಪಂಕಜವಾಸಿನಿಯು ವಾಸಮಾಡುತ್ತಿರುವ, ಎದೆಯನ್ನುಳ್ಳವನು ಭಗವಂತ ಸ್ವಾಮಿತ್ವ, ಸೌಲಭ್ಯ, ಸೌಶೀಲ್ಯ ವಾತ್ಸಲ್ಯಾದಿ ಗುಣಗಳಿಂದ ಕೂಡಿದ ನಿಮ್ಮ ಪಾದಗಳಲ್ಲಿ ಆಕಿಂಚನ್ಯಾನನ್ಯಗತಿ ಪೂರ್ವಕ ಶರಣ ಹೊಂದಿದ್ದೇನೆ ಇಬ್ಬರೂ ಸೇರಿ ಉಪಾಯ ಭೂತರು ಎಂದರ್ಥ

24) ಮನನಹ ಮಲಮಱ ಮಲರ್‌ಮಿಶೈ ಎೞುದರುಂ
ಮನನುಣರ್‌ವಳವಿಲನ್ ಪೊರಿಯುಣರ್‌ವವೈ ಯಿಲನ್ ।
ಇನನುಣರ್ ಮುೞುನಲಮ್ ಎದಿರ್‌ನಿಹೞ್ ಕೞಿ ವೆನುಂ
ಇನನಿಲ ನೆ ನನುಯಿರ್ ಮಿಹುನರೈಯಿಲನೇ ॥ ತಿರುವಾಯ್ ಮೊೞಿ (1-1-2)

ಭಗವಂತನು ಪೂರ್ಣಜ್ಞಾನಾನಂದ ಸ್ವರೂಪನು

25) ನಂದಾವಿಳಕ್ಕೇ ಅಳತ್ತರ್ಕರಿಯಾ ನರನಾರಣನೇ ಕರುಮಾಮುಹಿಲ್‌ಪೋಲ್
ಎಂದಾಯ್, ಎಮಕ್ಕೇ ಅರುಳಾಯೆನನಿನ್ರು ಇಮೈಯೋರ್ ಪರವುಮಿಡಮ್, ಎತ್ತಿಶೈಯುಂ, ॥
ಕಂದಾರ ಮಂದೇನ್ ಇಶೈಪಾಡಮಾಡೇ ಕಳಿವಂಡು ಮಿೞಟ್ರನಿೞಲ್ ತುದೈಂದು ।
ಮುಂದುರಂ ನಿನ್ರು ಮಣಮಲ್ಗು ನಾಂಗೂರ್ ಮಣಿ ಮಾಡಕ್ಕೋಯಿಲ್ ವಣಂಗೆನ್ಮನನೇ ।
ನಾಶವಿಲ್ಲದ (ಸತ್ಯತ್ವ) ಜ್ಯೋತಿ ಸ್ವರೂಪನು (ಜ್ಞಾನತ್ವ). ಅನಂತ ಸ್ವರೂಪನು ಭಗವಂತ ।

ಪರಿ ತಿರು (3-8-1)

ಹೇಯಪ್ರತ್ಯನೀಕತ್ವ

ಇಪ್ಪಡಿ (26) ಸಮಸ್ತ ಹೇಯ ರಹಿತಂ ವಿಷ್ಣ್ವಾಖ್ಯಂ ಪರಮಂ ಪದಂ, (27) "ಪರಃಪರಾಣಾಂ ಸಕಲಾನಯತ್ರ ಕ್ಲೇಶಾದಯಸ್ಸಂತಿ ಪರಾವರೇಶೇ" ಎನ್ಗಿರ ಪಡಿಯೇ ಹೇಯಪ್ರತ್ಯನೀಕನಾಯಿನು ಸನ್ದೇಯಮ್

ಅನಂತಕಲ್ಯಾಣ ಗುಣಾಕರತ್ವ

1) "ತ್ಯೈರ್ಯುಕ್ತ ಶ್ರೂಯತಾಂ ನರಃ" 2) "ತಮೇವಂ ಗುಣಸಂಪನ್ನಂ," 3) ಜ್ಯೇಷ್ಠಂ ಶ್ರೇಷ್ಠ ಗುಣೈರ್ಯುಕ್ತಂ," 4 "ಏವಂ ಶ್ರೇಷ್ಠಗುಣೈರ್ಯುಕ್ತಂ" 5) "ಗುಣೈರ್ವಿರುರುಚೇ ರಾಮಃ"

ಈಶ್ವರನು ಹೇಯ ಗುಣವಿಲ್ಲದವನು :– ಅನಂತರ ಸತ್ಯಜ್ಞಾನಾನಂತಾನಂದ ಸ್ವರೂಪನಾದ ಲಕ್ಷ್ಮೀಪತಿಯು ಹೇಯಗುಣ ಸಂಬಂಧ ವಿಲ್ಲದವನೆಂಬುದನ್ನು (26) **ಇಪ್ಪಡಿಸಮಸ್ತಹೇಯರಹಿತಂ,** ಎಂದಾರಂಭಿಸಿ ಆಚಾರ್ಯರು ಉಪಪಾದಿಸುತ್ತಾರೆ. ಆ ಭಗವಂತನು ಯಾವ ವಿಧವಾದ ಹೇಯ ಗುಣಗಳೂ ಇಲ್ಲದವನು. ಅಂದರೆ ಅಚೇತನಕ್ಕಿರುವ ಜಡತ್ವ ವಿಕಾರಾದಿಗಳೂ ಬದ್ಧ ಜೀವರಿಗುಳ್ಳ ಪ್ರಾಕೃತ ಸುಖಃದುಖಾದಿಗಳೂ, ಪ್ರಾಪ್ಯಭೂತನಾದ ವಿಷ್ಣುವಿಗೆ ಇಲ್ಲವೆಂದರ್ಥ. 27) **ಪರಃ ಪರಾಣಾಂ** ಎಂಬಂತೆ ಹೇಯ ಪ್ರತ್ಯನೀಕನೆಂದು ಅನುಸಂಧಾನ ಮಾಡಬೇಕು

ಅನಂತ ಕಲ್ಯಾಣ ಗುಣಾಕರನು :–

ಆವನು ಸಮಸ್ತ ಕಲ್ಯಾಣಗುಣಾತ್ಮಕನು ಎಂಬುದಕ್ಕೆ (1) **ತ್ಯೈಯರ್ುಕ್ತಶ್ರೂಯತಾಂನರಃ** ಇತ್ಯಾದಿ ಪ್ರಮಾಣಗಳನ್ನು ಎತ್ತಿ ತೋರಿಸುತ್ತಾರೆ. ಹೀಗೆ ಮಂಗಳ ಗುಣಗಳಿಂದ ಕೂಡಿದವನು, ಶ್ರೇಷ್ಠವಾದ ಗುಣಗಳುಳ್ಳವನು ರಾಮನು ಗುಣಗಳಿಂದ ವಿಶೇಷವಾಗಿ ಪ್ರಕಾಶಿಸುತ್ತಿದ್ದನು. ಹೀಗೆ ಗುಣಗಳಿಂದ ಕೂಡಿದವನಾಗಿ, ಯಾರಿಂದಲೂ ಜಯಿಸಲು ಸಾಧ್ಯವಾಗದ ಪರಾಕ್ರಮವುಳ್ಳವನು ಎಲೈರಾಜನೇ ನಿನ್ನ ಮಗನಲ್ಲಿ ಅನೇಕ ಕಲ್ಯಾಣಗುಣಗಳಿವೆ ಪುರುಷೋತ್ತಮನಾದ ರಾಮನಲ್ಲಿ ಆನೃಶಂಸ್ಯ-ಆಶ್ರಯಿಸಿದವರನ್ನು ರಕ್ಷಿಸುವಿಕೆ, ವೇದಗಳನ್ನು ತಿಳಿದಿರುವುದು, ನಡತೆ, ಬಾಹ್ಯಾಂತರ ಇಂದ್ರಿಯನಿಗ್ರಹ, ಎಂಬ ಗುಣಗಳ ಪ್ರಕಾಶಿಸುತ್ತವೆ.

---

26 ಏವಂಪ್ರಕಾಶಮಮಲಂ ನಿತ್ಯಂ ವ್ಯಾಪಕಮಕ್ಷಯಮ್ ॥
ಸಮಸ್ತಹೇಯರಹಿತಂ ವಿಷ್ಣ್ವಾಖ್ಯಂ ಪರಮಂಪದಮ್
ವಿಷ್ಣು ಪುರಾಣ 1-22ಂ53
ಪರಮ ಪ್ರಾಪ್ಯನಾದ ಮಹಾವಿಷ್ಣುವು ಈ ರೀತಿಯಲ್ಲಿ, ಜ್ಞಾನ ಸ್ವರೂಪನು, ಸರ್ವವ್ಯಾಪಿ, ಅಕ್ಷಯನು ಯಾವ ವಿಧವಾದ ಹೇಯಗುಣವೂ ಇಲ್ಲದವನು

7 ತೇಜೋ ಬಲೈಶ್ವರ ಮಹಾವಬೋಧ ಸುವೀರ್ಯ ಶಕ್ತ್ಯಾದಿ ಗುಣೈಕರಾಶಿಃ॥
.. ಪರಃ ಪರಾಣಾಂ ಸಕಲಾನಯತ್ರ ಕ್ಲೇಶಾದಯಸ್ಸಂತಿ ಪರಾವರೇಶೇ॥

ತೇಜಸ್ಸು, ಬಲ, ಐಶ್ವರ್ಯ, ಜ್ಞಾನ, ವೀರ್ಯ ಶಕ್ತ್ಯಾದಿ ಗುಣಗಳುಳ್ಳವನು ಉತ್ಕೃಷ್ಟರಾದ ಎಲ್ಲರಿಗಿಂತಲೂ ಮೇಲಾದವನು, ಉತ್ತಮಾಧಮವಸ್ತುಗಳಿಗೆಲ್ಲಾ ಈಶನು–ಸ್ವಾಮಿ, ಅವನಲ್ಲಿ ಕ್ಲೇಶಾದಿಗಳು ಯಾವುವೂ ಇಲ್ಲ "ಕ್ಲೇಶ ಕರ್ಮ ವಿಪಾಕಾಶಯೈರಪರಾಮೃಷ್ಟಃ ಪುರುಷವಿಶೇಷಃ ಈಶ್ವರಃ, ಎಂಬ ಯೋಗಸೂತ್ರದ ಪ್ರಕಾರ, ಕ್ಲೇಶವೆಂಬುದು—ಅವಿದ್ಯಾ, ಅಸ್ಮಿತಾ,ರಾಗ, ದ್ವೇಷ, ಅಭಿನಿವೇಶ,—ಅಜ್ಞಾನ, ಅಹಂಕಾರ, ಆಸೆ, ಶಾತ್ರವ, ಹಠ ಎಂಬುವು ಕರ್ಮಗಳು— ಪುಣ್ಯಪಾಪಗಳು ವಿಪಾಕಗಳು-ಜಾತಿ, ಆಯುಸ್ಸು ಭೋಗಗಳು ಜಾತಿ–ಜನ್ಮ ಹುಟ್ಟುವುದು), ಭೋಗ-ಸುಖದುಃಖಗಳು-

ಆಶಯ ಮರ್ವಾಸನೆ ಇವಗಳೆಲ್ಲಾ ಇಲ್ಲದವನು ಈಶ್ವರನು

1) ಬಹವೋ ದುರ್ಲಭಾಶ್ಚೈವ ಯೇತ್ವಯಾ ಕೀರ್ತಿತಾಗುಣಾಃ
ಮುನೇವಕ್ಷ್ಯಾಮ್ಯಹಂಬುಧ್ವಾ ತ್ಯೈರ್ಯುಕ್ತ ಶ್ರೂಯತಾಂನರಃ ॥

(ರಾಮಾಯಣ 1-1-7) (ಮುಂದುವರೆದಿದೆ)

6) "ತಮೇವಂ ಗುಣಸಂಪನ್ನ ಮಪ್ರಧೃಷ್ಯ ಪರಾಕ್ರಮಂ" 7) "ಬಹವೋನೃಪ ಕಲ್ಯಾಣ ಗುಣಾಃ ಪುತ್ರಸ್ಯ ಸನ್ತಿತೇ" 8) ಆನೃಶಂಸ್ಯ ಮನುಕ್ರೋಶ ಶ್ಶ್ರುತಂಶೀಲಂ ದಮ ಶ್ಶಮಃ। ರಾಘವಂ ಶೋಭಯನ್ತ್ಯೇತೇ ಷಡ್ಗುಣಾಃ ಪುರುಷೋತ್ತಮಂ" (9) "ವಿದಿತಸ್ಸಹಿ ಧರ್ಮಜ್ಞಶ್ಶರಣಾಗತವತ್ಸಲಃ" (10) "ಶರಣ್ಯಂ ಶರಣಂ ಚತ್ವಾಮಾಹುರ್ದಿವ್ಯಾ ಮಹರ್ಷಯಃ" (11) "ನಿವಾಸ ವೃಕ್ಷಸ್ಸಾಧೂನಾಂ" (12) ತೇಜೋಬಲೈಶ್ವರ್ಯ ಮಹಾವಬೋಧ ಸುವೀರ್ಯ ಶಕ್ತ್ಯಾದಿ ಗುಣೈಕರಾಶಿಃ," (13) "ಸರ್ವಭೂತಾತ್ಮ ಭೂತಸ್ಯ ವಿಷ್ಣೋಃ ಕೋ ವೇದಿತುಂ ಗುಣಾನ್" (14) ಯಥಾ ರತ್ನಾನಿ ಜಲಧೇ ರಸಙ್ಖ್ಯೇಯಾನಿ ಪುತ್ರಕ। ತಥಾಗುಣಾಶ್ಚ ದೇವಸ್ಯ ತ್ವಸಙ್ಖ್ಯೇಯಾ ಹಿ ಚಕ್ರಿಣಃ॥" (15) "ವರ್ಷಾಯುತೈರ್ಯಸ್ಯಗುಣಾ ನ ಶಕ್ಯಾ ವಕ್ತುಂ ಸಮೇತೈ ರಪಿ ಸರ್ವದೇವೈಃ। 16) ಚತುರ್ಮುಖಾಯು ರ್ಯದಿ ಕೋಟಿವಕ್ತ್ರೋ ಭವೇನ್ನರಃ ಕ್ವಾಪಿ ವಿಶುದ್ಧ ಚೇತಾಃ॥ ಸತೇ ಗುಣಾನಾ ಮಯುತೈಕ ಮಂಶಂ ವದೇನ್ನವಾ ದೇವವರ ಪ್ರಸೀದ॥ 17) ತವಾನನ್ತ ಗುಣಸ್ಯಾಪಿ ಷಡೇವ ಪ್ರಥಮೇ ಗುಣಾಃ॥ (18) ಇಷುಕ್ಷಯಾ ನ್ನಿವರ್ತಂತೇ ನಾಂತರಿಕ್ಷ ಕ್ಷಿತಿಕ್ಷಯಾತ್। ಮತಿಕ್ಷಯಾ ನ್ನಿವರ್ತಂತೇ ನ ಗೋವಿನ್ದಗುಣ ಕ್ಷಯಾತ್॥ (19) "ವಲ್‌ವಿನೈ ಯೇನ್ನೈಯೀರ್‌ಹಿನ್ರ ಗುಣಙ್ಗಳೈಯುಡೈಯಾಯ್ 20) " ಉಯರ್‌ವರ ವುಯರ್‌ನಲ ಮುಡೈಯವನ್ " ಎನ್ನಿರಪಡಿಯೇ ಪ್ರಾಪ್ಯತ್ವಪ್ರಾಪಕತೋಪಯುಕ್ತಙ್ಗಳಾನ ಗುಣಙ್ಗಳಾಲೇ ವಿಶಿಷ್ಟ ಮಾಹವನುಸನ್ಧೇಯಮ್.

---

8) **ಆನೃಶಂಸ್ಯಂ** ಇತ್ಯಾದಿ ಆಶ್ರಿತ ರಕ್ಷಣ ಶೀಲತ್ವ, ದಯೆ, ಶಾಸ್ತ್ರೀಯಜ್ಞಾನ, ಸೌಶೀಲ್ಯ ಅಥವಾ ಸದ್ವೃತ್ತಿ, ಬಾಹ್ಯೇಂದ್ರಿಯ ನಿಗ್ರಹ, ಅಂತರಿಂದ್ರಿಯ (ಮನಸ್ಸು) ನಿಗ್ರಹ, ಈ ಆರು ಗುಣಗಳು ಸೌಲಭ್ಯ ಗುಣಾಧೀನಗಳು. ಇವು ಒಳ್ಳೆಯವಂಶದಲ್ಲಿ ಹುಟ್ಟಿರುವುದರಿಂದಲೂ ಪುರುಷೋತ್ತಮ ಸ್ವಭಾವದಿಂದಲೂ ಶ್ರೀರಾಮ ಚಂದ್ರನನ್ನು ಶೋಭಿಸುತ್ತವ. ಅನಂತರ ಶರಣ್ಯ ಗುಣಗಳನ್ನು (9)**ವಿದಿತಸ್ಸಹಿ** ಎಂದಾರಂಭಿಸಿ ತಿಳಿಯ ಪಡಿಸುತ್ತಾರೆ.

ಅನಂತರ ಪರತ್ವಕ್ಕ ಸೇರಿದ ಆರುಗುಣಗಳನ್ನು (12) **ತೇಜೋಬಲೈಶ್ವರ್ಯ** ಎಂದಾರಂಭಿಸಿ ತಿಳಿಸುತ್ತಾರ. 13) **ಸರ್ವಭೂತಾತ್ಮಭೂತಸ್ಯ**–ಅ ಸರ್ವಭೂತಾಂತರಾತ್ಮನಾದ ವಿಷ್ಣುವಿನ ಗುಣಗಳನ್ನು ಯಾರು ಅರಿಯ ಬಲ್ಲರು. **14) ಯಥಾರತ್ನಾನಿ 15, ವರ್ಷಾಯುತೈರ್ಯಸ್ಯ - ಚತುರ್ಮುಖಾಯುಃ 16) ತವಾನಂತ ಗುಣಸ್ಯ** ಈವಚನಗಳು ಭಗವಂತನ ಗುಣಗಳು ಅಸಂಖ್ಯೇಯವಾದುವು ಎಂದು ತಿಳಿಸುತ್ತವ. ಆದರೆ ಷಡ್ಗುಣ ಪರಿಪೂರ್ಣನು, ಸಹಸ್ರನಾಮಗಳುಳ್ಳವನು ಎಂದು ಪರಿಮಿತಿ ಹೇಳುವುದಕ್ಕೆ ತಾತ್ಪರ್ಯವನ್ನು **ತವಾನಂತಗುಣಸ್ಯ**, ಎಂದಾರಂಭಿಸಿ ಹೇಳುತ್ತಾರೆ. ಅದಾಗಿ ಜ್ಞಾನ ಬಲೈಶ್ವರ್ಯ ವೀರ್ಯ ಶಕ್ತಿ ತೇಜಸ್ಸೆಂಬ ಆರುಗುಣಗಳು ಪ್ರಧಾನವಾದುವು. ಬಾಕಿ ಕಾರುಣ್ಯಾದಿ ಗುಣಗಳೂ, ಜ್ಞಾನ ಶಕ್ತ್ಯಾದಿ ಗುಣಗಳೂ ಅವಾಂತರ ಭೇದಗಳು. ಅಸಂಖ್ಯೇಯಗಳು.

ಜಗತ್ತನ್ನು ನಿನ್ನ ಹೊಟ್ಟೆಯಲ್ಲಿಟ್ಟುಕೊಂಡಿರುವುದರಿಂದ ನೀನು ಪ್ರಧಾನನಾದ ಹಾಗೆ ಈ ಜ್ಞಾನ ಬಲೈಶ್ವರ್ಯಾದಿ ಗುಣಗಳು ಪ್ರಧಾನವಾದುವು ಆದರಿಂದ ಅನಂತ ಗುಣ ಪರಿಪೂರ್ಣನೆಂಬವಚನಗಳಿಗೆ ಭಂಗವಿಲ್ಲ. ಈ ಕಾರುಣ್ಯಾದಿ ಗುಣಗಳು ಅಸಂಖ್ಯೇಯಗಳೆಂಬುದನ್ನು (18) **ಇಷುಕ್ಷಯಾತ್** ಎಂದು ಪ್ರಮಾಣ ಪುರಸ್ಸರವಾಗಿ ತಿಳಿಸುತ್ತಾರ. ಸಹಸ್ರ

ನಾರದರು ವಾಲ್ಮೀಕಿಯ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಹೇಳುವ ಮಾತು. ಎಲೈವಾಲ್ಮೀಕಿಯೇ ನಿನ್ನಿಂದ ಹೇಳಲ್ಪಟ್ಟ ಗುಣಗಳು ಬಹಳ, ದುರ್ಲಭವಾದವು ಎಲ್ಲಾಗುಣಗಳನ್ನು ಉಳ್ಳವನಾದ ಆ ನರನನ್ನು ಯೋಚಿಸಿಹೇಳುತ್ತೇನೆ ಕೇಳು ಬುಧ್ವಾ- ಆ ಗುಣಗಳನ್ನು ನೆನೆಸಿಕೊಂಡಕ್ಷಣವೇ ಬುದ್ಧಿ ಭ್ರಮಣವಾಗುತ್ತದೆ ಸಮಾಧಾನಪಡಿಸಿಕೊಂಡು ಹೇಳುತ್ತೇನೆಂದು ರಾಮಗುಣಗಳಲ್ಲಿ ತಲ್ಲೀನರಾದ ನಾರದರು ಹೇಳುವ ಮಾತು.

ಪು. ತಿ. ನೋ.

ನಾಮಾಧ್ಯಾಯಗಳಲ್ಲಿ ಸಾವಿರ ಗುಣಗಳನ್ನು ಮಾತ್ರ ಹೇಳಿರುವುದು ನಮ್ಮ ಬುದ್ಧಿದೌರ್ಬಲ್ಯದಿಂದಲೇ ಹೊರತು ಬೇರೆಯಲ್ಲ ಎಂಬುದಕ್ಕೆ ದೃಷ್ಟಾಂತವಾಗಿ, ಬಾಣಗಳನ್ನು ಎಷ್ಟು ಬಿಟ್ಟರೂ ಆಕಾಶವು ತುಂಬಲಾರದು. ಬಾಣಗಳು ಮುಗಿದವೆಂದು, ಬಾಣಬಿಡುವರು ಹಿಂತಿರುಗುತ್ತಾರೆ ಯಲ್ಲವೆ ಎಂದು ಹೇಳುತ್ತಾರೆ. ಗುಣಾನಂತ್ಯಕ್ಕೆ ದ್ರಮಿಡವೇದಗಳನ್ನು ಪ್ರಮಾಣೀಕರಿಸುತ್ತಾರೆ. 19)ವಲ್ವಿನೈಯೇನೈ ಇತ್ಯಾದಿ–ಬಲಿಷ್ಠಪಾಪಗಳನ್ನುಳ್ಳ ನನ್ನನ್ನು ವಿರಹದಶೆಯಲ್ಲಿ ಪೀಡಿಸುವ ಗುಣಗಳನ್ನುಳ್ಳವನೇ. 20) ಉಯರ್‌ವರ-ನಿರತಿಶಯೋತ್ಕೃಷ್ಟಗಳಾದ ಆನಂದಾದಿ ಗುಣಗಳನ್ನುಳ್ಳವನೇ, ಎಂಬಂತೆ ಭಗವಂತನನ್ನು ಪ್ರಾಪ್ಯತ್ವಗುಣವಿಶಿಷ್ಟನಾಗಿ ಅನುಸಂಧಾನ ಮಾಡಬೇಕು ಪ್ರಾಪ್ಯತ್ವಗುಣಗಳು ಶೇಷಿತ್ವ ಮಾಧುರ್ಯಾದಿಗಳು. ಪ್ರಾಪಕತ್ವ ಗುಣಗಳು, ವಾತ್ಸಲ್ಯ, ದಯಾ, ಕ್ಷಾಂತಿಃ, ಔದಾರ್ಯಾದಿ ಗುಣಗಳು. ಜ್ಞಾನಶಕ್ತ್ಯಾದಿ ಗುಣಗಳು ಉಭಯದಶೆಯಲ್ಲಿಯೂ ಉಪಯುಕ್ತವಾದವು. ಭಗವಂತನು ಅನಂತ ಗುಣಗಳಿಂದ ಕೂಡಿದ್ದಾಗ್ಯೂ ಆಯಾಯಾ ವಿದ್ಯೆಗಳಿಗೆ ಉಪಯುಕ್ತವಾಗಿ ಹೇಳಲ್ಪಟ್ಟ, ಪ್ರಾಪ್ಯತ್ವ ಪ್ರಾಪಕತ್ವ ರೂಪ ಕೆಲವೇ ಗುಣಗಳನ್ನು ಮುಮುಕ್ಷುವು ಅನುಸಂಧಾನ ಮಾಡಲು ಶಕ್ಯವಾಗಬಹುದು

ಹೀಗೆ ಗುಣಗಳಿಂದ ಕೂಡಿದ ರಾಮನನ್ನು ಭೂಮಿಯು ತನ್ನ ರಾಜನನ್ನಾಗಿ ವರಿಸಿದಳು.

3) ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಃ ಸುತಮ್ ।
ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿ ಪ್ರಿಯಕಾಮ್ಯಯಾ ॥ ರಾಮಾ 1-1-29

4) ಏವಂ ಶ್ರೇಷ್ಠಗುಣೈರ್ಯುಕ್ತಂ ಪ್ರಜಾನಾಂ ಪಾರ್ಥಿವಾತ್ಮಜಃ ।
ಸಮಂತಸ್ತ್ರಿಷು ಲೋಕೇಷು ವಸುಧಾಯಾ ಕ್ಷಮಾಗುಣೈಃ ॥
ಶ್ರೇಷ್ಠಗುಣಗಳಿಂದ ಕೂಡಿದವನು ಶ್ರೀರಾಮ ಚಂದ್ರನು (ರಾಮಾ 2-1-31)

5) ತಥಾ ಸರ್ವಪ್ರಜಾ ಕಾಂತೈಃ ಪ್ರೀತಿ ಸಂಜನನೈಃ ಪಿತುಃ ।
ಗುಣೈರ್ವಿರುರುಚೇ ರಾಮೋ ದೀಪ್ತಃ ಸೂರ್ಯ ಇವಾಂಶುಭಿಃ ॥

ಹೀಗೆ ಗುಣಗಳಿಂದ ಕೂಡಿದವನು ರಾಮಾ 2-1-33

6) ತಮೇವಂ ಗುಣಸಂಪನ್ನಂ ಅಪ್ರಧೃಷ್ಯ ಪರಾಕ್ರಮಮ್ ॥
ಲೋಕ ಪಾಲೋಪಮಂ ನಾಥಂ ಅಕಾಮಯತ ಮೇದಿನೀ ॥

(ರಾಮಾ 2-1-34)

ಹೀಗೆ ಅಪ್ರಧೃಷ್ಯನಾದ ಪರಾಕ್ರಮವುಳ್ಳ, ಲೋಕಪಾಲರಿಗೆ ಸಮನಾದ ರಾಮನನ್ನು ಭೂ ದೇವಿಯು ರಾಜನನ್ನಾಗಿ ವರಿಸಿದಳು.

7) ಸೇವಸ್ವಾಮೋ ವರ್ಮಾತ್ಮಾನಂ ಪೌರಜಾನಪದೈಃ ಸಹ ॥
ಬಹವೋ ನೃಪ ಕಲ್ಯಾಣ ಗುಣಾಃ ಪುತ್ರಸ್ಯ ಸಂತಿತೇ ॥
(ರಾಮಾ 2-3-26)
ದಶರಥನನ್ನು ಕುರಿತು ಪಟ್ಟಣದವರೇ ಆದಿಯಾಗಿ ರಾಷ್ಟ್ರದವರೆಲ್ಲರೂ, ಎಲೈ ರಾಜನೇ ನಿನ್ನ ಮಗನಲ್ಲಿ ಬಹಳ ಮಂಗಲ ಗುಣಗಳಿವೆ ಆ ಗುಣಗಳು, ಅವನನ್ನು ಬಿಡಲಾರದ ನಮ್ಮನ್ನು, ಪೀಡಿಸುತ್ತವೆಂಬುದು ಭಾವ

8) ಅನ್ಯಾಂಶಸ್ಯಂ ಇತ್ಯಾದಿ —
ರಾಮಾಯಣ 2-3-26

9) ವಿದಿತಸ್ಸಹಿ ಧರ್ಮಜ್ಞಃ ಶರಣಾಗತವತ್ಸಲಃ ॥
ತೇನಮೈತ್ರೀ ಭವತುತೇ ಯದಿ ಜೀವಿತು ಮಿಚ್ಛಸಿ ॥
[ರಾಮಾ 5-21-20]

ಸೀತೆಯು ರಾವಣನಿಗೆ ಉಪದೇಶಿಸುವ ಮಾತು-ಆ ರಾಮಚಂದ್ರನು ಶರಣಾಗತ ರಕ್ಷಣ ಧರ್ಮಜ್ಞನಲ್ಲವೇ. ಶರಣಾಗತರನ್ನು ಕಾಪಾಡುವ ವಾತ್ಸಲ್ಯಸ್ವಭಾವನು. ನೀನು ಜೀವಿಸಬೇಕೆಂದಿದ್ದರೆ ಅವನೊಡನೆ ಸ್ನೇಹ ಭಾವವನ್ನು ಬೆಳೆಸಿಕೋ, ಅವನಲ್ಲಿ ಶರಣಾಗತನಾಗು ಎಂದರ್ಥ.

10) ಇಂದ್ರಕರ್ಮಾ ಮಹೇಂದ್ರಸ್ತ್ವಂ ಪದ್ಮನಾಭೋ ರಣಾಂತ ಕೃತ್ ॥
ಶರಣ್ಯಂ ಶರಣಂ ಚತ್ವಾ ಮಾಹುರ್ದಿವ್ಯಾಮಹರ್ಷಯಃ ॥
ಸಹಸ್ರ ಶೃಂಗೋ ವೇದಾತ್ಮಾ ಶತಜಿಹ್ವೋ ಮಹರ್ಷಭಃ ॥

(ರಾ - 6-120-18)

(ಮುಂದುವರಿದಿದೆ)

ದಿವ್ಯರಾದ ಮಹರ್ಷಿಗಳಾದ ಸನಕಾದಿಗಳು, ಎಲ್ಯರಾಮಚಂದ್ರನೇ, ನೀನು ಶರಣುಹೊಂದಲು ಯೋಗ್ಯನು, ಶರಣಹೊಂದಿದವರನ್ನು ರಕ್ಷಿಸುವವನು ಸಹಸ್ರಶೀರ್ಷನು ವೇದ ಪ್ರತಿಪಾದ್ಯನು ಅನೇಕ ನಾಲಿಗೆ ಯುಳ್ಳವನು. "ಸಹಸ್ರ ಬಾಹೂದರ ವಕ್ತ್ರ ನೇತ್ರಂ" ಎಂದು ಹೇಳುವ ವಿರಾಟ್ ಪುರುಷನು ಋಷಭ ಶ್ರೇಷ್ಠನು, ಇತ್ಯಾದಿ ಹೇಳುತ್ತಾರೆ

11 ನಿವಾಸ ವೃಕ್ಷ ಸ್ಸಾಧೂನಾಂ ಆಪನ್ನಾನಾಂ ಪರಾಗತಿಃ ॥
ಆರ್ತಾನಾಂ ಸಂಶ್ರಯಶ್ಚೈವ ಯಶಸಶ್ಚೈಕಭಾಜನಮ್ ॥
ಸಾಧುಗಳಿಗೆ ನೆರಳನ್ನು ಕೊಡುವ ಕಲ್ಪವೃಕ್ಷ. ಆಪತ್ತಿನಲ್ಲಿಸಿಕ್ಕಿ ಬಿದ್ದವರನ್ನು ಕಾಪಾಡುವವನು ದೀನ ಬಂಧು ಕೀರ್ತಿಗಳ ಪೆಟ್ಟಿಗೆ
ಇದು ತಾರೆಯು ವಾಲಿಗೆ ಬೋಧಿಸುವ ವಾಕ್ಯ (ರಾ 4-15-19)

12] ತೇಜೋ ಬಲೈಶ್ವರ್ಯ ಮಹಾವಬೋಧಸುವೀರ್ಯ ಶಕ್ತ್ಯಾದಿ ಗುಣೈಕರಾಶಿಃ ॥
ಪರಂ ಪರಾಣಾಂಸಕಲಾನಯತ್ರ ಕ್ಲೇಶಾದಯ ಸ್ಸಂತಿಪರಾವ ರೇಶೇ ॥
[ವಿ ಪು, 6-5-85] ತೇಜಸ್ಸು- ಶತ್ರುಗಳನ್ನು ತಿರಸ್ಕರಿಸಬಲ್ಲ ಸಾಮರ್ಥ್ಯ. ಬಲ. ಐಶ್ವರ್ಯ-ಜ್ಞಾನ, ವೀರ್ಯ, ಶಕ್ತಿ ಮೊದಲಾದ ಮಹಾಮಂಗಳಗುಣಗಳಿಗೆ ಆಶ್ರಯನು, ಬಹಳ ಮೇಲಾದವರಾದ ಬ್ರಹ್ಮರುದ್ರೇಂದ್ರರಿಗೆ ಮೇಲಾದವನು ಉತ್ಕೃಷ್ಟರಿಗೂ, ನಿಕೃಷ್ಟರಿಗೂ ವ್ಯಾಪಿಯಾದ ಭಗವಂತನು ಕ್ಲೇಶಗಳಾವುವೂ ಇಲ್ಲದವನು

14] ಸರ್ವಭೂತಾತ್ಮ ಭೂತಸ್ಯ ವಿಷ್ಣೋಃ ಕೋವೇದಿತುಂಗುಣಾನ್ ॥
ಶಕ್ತೋಮಹೇಶ್ವರಾದನ್ಯಃ ಪಾರ್ವತ್ಯಾಶ್ಚಾಪಮಾಧವಾತ್ । (ಬ್ರಾಹ್ಮಪುರಾಣ)
ಸರ್ವಪ್ರಾಣಿಗಳಿಗೂ ಅಂತರಾತ್ಮನಾದ ವಿಷ್ಣುವಿನಗುಣಗಳನ್ನು, ಪಾರ್ವತಿ ಪರಮೇಶ್ವರರು ವಿನಹ ಬೇರೆ ಯಾರು ಅರಿಯಬಲ್ಲರು

15] ವಾಮನಪುರಾಣ [74-40] ಮಗನೇ ಸಮುದ್ರದಲ್ಲಿರುವ ರತ್ನಗಳು ಹೇಗೆ ಅಸಂಖ್ಯೇಯಗಳೋ ಹಾಗೆಯೇ ಚಕ್ರಾಯುಧಧರನಾದ ದೇವ ದೇವನ ಗುಣಗಳು ಅಪ್ರಮೇಯವಾದವು ವಿವಗುಣಸಂಪನ್ನನು

16] ವರ್ಷಾಯುತೈರ್ಯಸ್ಯ ಗುಣಾನಶಕ್ಯಾವಕ್ತುಂ ಸಮೇತೈರಪಿ ಸರ್ವ ದೇವೈಃ ॥
ಮಹಾತ್ಮನಃ ಶಂಖ ಚಕ್ರಾಸಿ ಪಾಣೇಃ ವಿಷ್ಣೋರ್ಜಿಷ್ಣೋರ್ವಸು ದೇವಾತ್ಮಜಸ್ಯ ॥
ಎಲ್ಲಾ ದೇವತೆಗಳು ಒಂದುಗೂಡಿದರೂ ಮಹಾತ್ಮನಾದ ಶಂಖ ಚಕ್ರ ಖಡ್ಗ ಪಾಣಿಯಾದ, ಜಯಶೀಲನಾದ ವಸುದೇವನ ಮಗನಾದ ವಿಷ್ಣುವಿನ ಗುಣಗಳನ್ನು ಲಕ್ಷಾಂತರವರ್ಷಗಳಾದರೂ ಹೇಳಿತೀರದು ಮಹಾ. ಭಾರತ್ಕರ್ಣಪರ್ವ 91-17
(ವರಾಹ ಪುರಾಣ 73-35) ಪರಿಶುದ್ಧ ಮನಸ್ಕನಾಗಿ, ಬ್ರಹ್ಮದೇವನ ಆಯುಸ್ಸೂ ಕೋಟಿ ಸಂಖ್ಯೆಯ ಬಾಯಿಗಳೂ, ಉಳ್ಳ ಒಬ್ಬಮನುಷ್ಯನು, ನಿನ್ನಗುಣಗಳ ಲಕ್ಷದಲ್ಲಿ ಒಂದು ಭಾಗವನ್ನು ಹೇಳಬಲ್ಲನೋ, ಇಲ್ಲವೋ, ಹೇ ದೇವಶ್ರೇಷ್ಠನೇ ಪ್ರಸನ್ನನಾಗು

17) ನಿನ್ನ ಅಸಂಖ್ಯಾತ ಗುಣಗಳಲ್ಲಿ ಜ್ಞಾನಬಲೈಶ್ವರ್ಯ ವೀರ್ಯ ಶಕ್ತಿತೇಜಸ್ಸೆಂಬ ಆರುಗುಣಗಳೇ ಪ್ರಧಾನವಾದವು. ಪ್ರಪಂಚವನ್ನು ನೀನು ನಿನ್ನ ಹೊಟ್ಟೆಯಲ್ಲಿಟ್ಟುಕೊಂಡಿರುವಂತೆ, ಬಾಕಿಗುಣಗಳು, ಈ ಆರು ಗುಣಗಳ ಅವಾಂತರ ಭೇದಗಳು

18) ಆಕಾಶದಲ್ಲಿ ಜಾಗವಿಲ್ಲದೆ ಬಾಣಬಿಡುವವನು ಹಿಂತಿರುಗುವುದಿಲ್ಲ ಮತ್ತೇನೆಂದರೆ ಬಾಣಗಳು ಮುಗಿದು ಹೋದವೆಂದು ಉಪರತ ವ್ಯಾಪಾರನಾಗುತ್ತಾನೆ ಹಾಗೆಯೇ ಗೋವಿಂದನ ಗುಣಗಳು ಇಷ್ಟಕ್ಕೆ ಮುಗಿದವು ಎಂದಲ್ಲ ಅವನ ಗುಣಗಳನ್ನು ಎತ್ತಿಹೇಳಲು ತನ್ನ ಬುದ್ಧಿಯು ಅಲ್ಲಿಗೇ ನಿಂತುಹೋಯಿತು, ಎಂದು, ಹೀಗೆ ಅಸಂಖ್ಯಾತ ಗುಣಗಣನು ಪರಮಾತ್ಮಾ ಎಂದು ತಾತ್ಪರ್ಯ

19 ವರ್ಣಂದಪೇರಾಯೊ ಮೂಯುತ್ತಾಲ್‌ಮುಟ್ರುದುಂ ವಲ್‌ವಿನ್ಯೆಯ್ಯ ಯೀರ್‌ಹಿನ್ರು ।
ಗುಣಂಗಳೈಯುಡೈಯಾಯ್ ಅಶುರರ್‌ವನ್ ಕೈಯರ್ ಕೊಟ್ರುಮೇ ಕೊಡಿಯ ಪುಳ್ಳುಯರ್ತ್ತಾಯ್ ॥
ಪಣಂಗಳಾಯಿರ ಮುಡೈಯ ಪೈನ್ನಾಹಪ್ಪಳ್ಳಿಯಾಯ್ ಪಾರ್ಕ್ಕಲ್ ಶೇಪ್ಪಾ ।
ವಣಂಗು ಮಾರರಿಯೇನ್‌ಮನಮುಮ್ ವಾಶಕಮುಮ್ ಶೆಯ್ಕೈಯುಮ್ ಯಾನುನೀತಾನೇ ॥ ತಿರುವಾಯ್ (8-1-8)

20) ಉಯರ್‌ವರ ಉಯರ್ ನಲಮುಡೈಯವನ್ ಯವನವನ್ ।
ಮಯರ್‌ವರಮದಿನಲ ಮರುಳಿನನ್‌ಯವನವನ್, ಆಯರ್‌ವರು ॥
ಮಮರರ್ಹಳ ಅಧಿಪತಿಯವನವನ್ ।
ತ ಯರ್ ಶುಡರಡಿತೊ ಜುದೆಳ್ಳೆನ್‌ಮನನೇ ॥ ತಿರುವಾಯ್-ಶ್ಲೋಕ (1-1-1)

ಉತ್ಕೃಷ್ಟರಲ್ಲಿ ಉತ್ಕೃಷ್ಟವಾದ ಆನಂದಾದಿ ಗುಣಗಳನ್ನುಳ್ಳವನೂ, ಅಜ್ಞಾನವನ್ನು ಹೋಗಲಾಡಿಸಿ ಜ್ಞಾನಪ್ರದಾನನೂ ನಿತ್ಯಸೂರಿ ನಿರ್ವಾಹಕನೂ ಆದ ಭಗವಂತನ ಪಾದಗಳನ್ನು ಆಶ್ರಯಿಸಿ ಉಜ್ಜೀವಿಸು, ಎಲೈ ಮನಸ್ಸೇ

ದಿವ್ಯಮಙ್ಗಳ ವಿಗ್ರಹ ವಿಶಿಷ್ಟತ್ವಂ

(1) "ಸದೈಕರೂಪ ರೂಪಾಯ", "ನಿತ್ಯಸಿದ್ಧೇತದಾಕಾರೇ ತತ್ಪರತ್ವೇಚ ಪೌಷ್ಕರ । ಯಸ್ಯಾಸ್ತಿ ಸತ್ತಾ ಹೃದಯೇತಸ್ಯಾ ಸೌ ಸನ್ನಿಧಿಂ ವ್ರಜೇತ್" (3) "ಸಮಸ್ತಾ ಶ್ಶಕ್ತಯಶ್ಚೈತಾ ನೃಪಯತ್ರ ಪ್ರತಿಷ್ಠಿತಾಃ । ತದ್ವಿಶ್ವರೂಪ ವೈರೂಪ್ಯಂ ರೂಪ ಮನ್ಯದ್ಧರೇ ರ್ಮಹತ್"

4) ಇಚ್ಛಾ ಗೃಹಿತಾಭಿಮತೋರುದೇಹಃ" 5) "ನಭೂತಸಙ್ಗ ಸಂಸ್ಥಾನೋ ದೇಹೋಽಸ್ಯ ಪರಮಾತ್ಮನಃ ॥" (6 ನತಸ್ಯಪ್ರಾಕೃತಾ ಮೂರ್ತಿ ರ್ಮಾಂಸಮೇಧೋಸ್ಥಿ ಸಂಭವಾ ॥ " 7) ಭುಂಜೈ ಶ್ಚತುರ್ಭಿ ಸ್ಸಮುಪೇತ ಮೇತದ್ರೂಪಂ ವಿಶಿಷ್ಟಂದಿವಿ ಸಂಸ್ಥಿತಂಚ ॥ " 8) "ರುಕ್ಮಾಭಂಸ್ಸಪ್ನ ಧೀಗಮ್ಯಂ " 9) ತತ್ರೈಕಸ್ಥಂ ಜಗತ್ಕೃತ್ಸ್ನಂ 10) "ಪಶ್ಯಾಮಿ ದೇವಾಂಸ್ತ ವ ದೇವ ದೇಹೇ "

ಶುಭಾಶ್ರಯ ದಿವ್ಯ ಮಂಗಳ ವಿಗ್ರಹ ವಿಶಿಷ್ಟನು :– ಅನಂತರ ಆಭಗವಂತನನ್ನು ವಿಗ್ರಹ ವಿಶಿಷ್ಟನನ್ನಾಗಿ. ಅನುಸಂಧಾನ ಮಾಡಬೇಕೆಂದು 1) **ಸದೈಕರೂಪರೂಪಾಯ** 2) **ನಿತ್ಯಸಿದ್ಧೇ,** ಎಂದಾರಂಭಿಸಿ ಪ್ರಮಾಣೀಕರಿಸು ತ್ತಾರೆ ಈ ಎರಡು ಪ್ರಮಾಣಗಳೂ ವೈಕುಂಠದಲ್ಲಿ ನಿತ್ಯವಾಗಿವಿರಾಜಮಾನವಾದ ಭಗವಂತನ ಪರವಿಗ್ರಹವನ್ನು ನಿರೂಪಿಸುತ್ತವೆ. ಭಗವಂತನ ಪರವಿಗ್ರಹವು ಸಾವಯವು, ಆದ್ದರಿಂದ ಅನಿತ್ಯವು ಎಂದು ಹೇಳುವ ಕುತರ್ಕಗಳಿಗೆ ಧರ್ಮಿಗಾಹಕ ಪ್ರಮಾಣ ಬಾಧ್ಯತ್ವವನ್ನು ತಿಳಿಸುತ್ತವೆ. (3) **ಸಮಸ್ತಾಶ್ಶಕ್ತಯಃ** ಎಂಬ ಪ್ರಮಾಣವು ಭಗವಂತನ ವಿಗ್ರಹವು ಅಪ್ರಾಕೃತವಾದದ್ದು ಎಂದು ತಾತ್ಪರ್ಯ 4) ಇಚ್ಛಾಗೃಹೀತ ಎಂಬ ಶ್ಲೋಕದಿಂದ ಅವನ ಅವತಾರ ವಿಗ್ರಹಗಳು ಪುಣ್ಯಪಾಪರೂಪ ಕರ್ಮದಿಂದಲ್ಲ ಸ್ವೇಚ್ಛೆಯಿಂದ, ಭಕ್ತರಿಗಾಗಿಎತ್ತಿಕೊಂಡ ದೊಡ್ಡ ರೂಪಗಳು. ಇದರಿಂದ ಜಗತ್ತಿಗೆ ಕ್ಷೇಮವನ್ನುಂಟುಮಾಡುತ್ತಾನೆ 5) **ನಭೂತ ಸಂಘ ಸಂಸ್ಥಾನ :** ಇದರಿಂದ ಇವನ ಶರೀರವು ಪಂಚ ಭೂತಾತ್ಮಕವಲ್ಲ 6) **ನತಸ್ಯ ಪ್ರಾಕೃತಾಮೂರ್ತಿಃ,** ಹಾಗೆಯೇ ಅವನ ಶರೀರವು ಮಾಂಸ ಮೇದಸ್ಸಿನಿಂದ ಕೂಡಿದ ಪ್ರಾಕೃತ ಶರೀರವಲ್ಲ 7) **ಭುಂಜೈಶ್ಚತುರ್ಭಿಃ** ಭಗವಂತನ ರೂಪವು ನಾಲ್ಕು ಭುಜಗಳಿಂದ ಕೂಡಿದುದು ಲೋಕ ವಿಲಕ್ಷಣವು. ಪರಮ ಪದದಲ್ಲಿರುವ ರೂಪವಿದು ಈಗ ಭೂಮಿಯಲ್ಲಿ ಅವತರಿಸುವ ಅಪ್ರಮೇಯನಾದ ಇವನನ್ನು ಪೂಜಿಸಿ ನಾನು ಯಾವಾಗಲೂ ಅವನಲ್ಲಿಯೇ ವಾಸ ಮಾಡುತ್ತಿದ್ದೇನೆ. 8) **ಪ್ರಶಾಸಿತಾರಂ** ಸರ್ವೇಷಾಂ ಅಣೀಯಾಂಸಂ ಅಣೀಯಸಾಂ । **ರುಕ್ಮಾಭಂ ಸ್ವಪನ್ನಧೀಗಮ್ಯಂ** ವಿದ್ಯಾತ್ತು ಪುರುಷೋತ್ತಮಮ್", ಎಂಬುದು ಪೂರ್ಣ ಶ್ಲೋಕ (ಮನುಸ್ಮೃತಿ 12–122) ಎಲ್ಲರನ್ನೂ ನಿಯಮಿಸುವವನು ಸೂಕ್ಷ್ಮವಾದ ವಸ್ತುಗಳಲ್ಲಿಯೂ ಅತ್ಯಂತ ಸೂಕ್ಷ್ಮನಾಗಿ ಅಂತಃ ಪ್ರವಿಷ್ಟನು, ಚಿನ್ನದ ಕಾಂತಿಯುಳ್ಳವನು ಸ್ವಪ್ನ ಬುದ್ಧಿಗೆ ತುಲ್ಯವಾದ ಸ್ಮೃತಿಯಿಂದ ಪ್ರತ್ಯಕ್ಷ ಸಮಾನಾಕಾರವಾಗಿ ಗ್ರಹಿಸಲು ಯೋಗ್ಯನು ಸ್ವಪ್ನ ಜ್ಞಾನದಹಾಗೆ ಬಾಹ್ಯೇಂದ್ರಿಯಗಳು ವ್ಯಾಪರಿಸದ ಕಾಲದಲ್ಲಿ, ನಿಯತವಾದುದರಿಂದ ಸ್ವಪ್ನಧೀ ಎಂದು ಹೇಳುತ್ತಾರೆ. ಇದರಿಂದ ಶುಭಾಶ್ರಯತ್ವವು ದ್ಯೋತಿತ. 9) **ತತ್ರೈಕಸ್ಥಂ ಜಗತ್ ಕೃತ್ಸ್ನಂ** 10) **ಪಶ್ಯಾಮಿ ದೇವಾಂಸ್ತವದೇವ ದೇಹೇ**

(1) ಅವಿಕಾರಾಶುದ್ಧಾಯ ನಿತ್ಯಾಯಪರಮಾತ್ಮನೇ ॥
ಸದೈಕರೂಪರೂಪಾಯ ವಿಷ್ಣವೇಸರ್ವಜಿಷ್ಣವೇ ॥

(ವಿ ಪು. 1-2 1)

ವಿಕಾರವಿಲ್ಲದವನೂ- ಶುದ್ಧನೂ, ಯಾವಾಗಲೂ ಒಂದೇ ರೂಪವಾದ ವಿಗ್ರಹವನ್ನುಳ್ಳವನೂ , ಸರ್ವಜಯಶೀಲನೂ ಆದ ವಿಷ್ಣುವಿಗ ನಮಸ್ಕಾರ

(2) ಪೌಷ್ಕರಸಂಹಿತೆ, ಪೌಷ್ಕರಸೇ (ಕಮಲದಲ್ಲಿ ಹುಟ್ಟಿದ ಬ್ರಹ್ಮದೇವನೇ ಎಂದರ್ಥ)
ಆ ಭಗವಂತನ ನಿತ್ಯಸಿದ್ಧವಾದ ವಿಗ್ರಹರೂಪ ಆಕಾರದಲ್ಲಿಯೂ ಅವನು ಸರ್ವಸ್ವಾತ್ಮತ್ವರನೂ ಎಂಬ ವಿಷಯದಲ್ಲಿಯೂ ಯಾರಿಗೆ ಸಂಶಯವಿಲ್ಲದೆಯೋ ಅವನ ಮನಸ್ಸಿನಲ್ಲಿ ಭಗವಂತನು ನೆಲೆಯಾಗಿರುತ್ತಾನೆ ಅವನು ಭಗವತ್ಸಾಕ್ಷಾತ್ಕಾರ ಪಡೆಯಲು ಅರ್ಹನು,

(ವಿ. ಪು 6-7-70)

(3) ಎಲ್ಲಾ ಶಕ್ತಿಗಳೂ ಅಂದರೆ ಬದ್ಧ, ಮುಕ್ತ, ಅವಿದ್ಯೆಗಳು, ಅವುಗಳ ಅಭಿಮಾನಿ ದೇವತಾ ರೂಪದಲ್ಲಿ ಯಾವ ಭಗವಂತನ ಆಭರಣಗಳಾಗಿವೆಯೋ, ಆ ಭಗವಂತನ ರೂಪವು ಅಂದರೇ ಶರೀರವು ಪ್ರಪಂಚದಲ್ಲಿರುವ ಪ್ರಾಕೃತ ಶರೀರಗಳಿಗಿಂತ ಬೇರೆಯಾದುದು, ಬಹಳ ಉತ್ಕೃಷ್ಟವಾದ ಅಪ್ರಾಕೃತ ರೂಪದಿಂದ ಕೂಡಿದದು

(4) ಸಮಸ್ತ ಕಲ್ಯಾಣ ಗುಣಾತ್ಮಕೋಸೌ ಸ್ವಶಕ್ತಿಲೇಶಾದ್ಧೃತ ಭೂತಸರ್ಗಃ॥
ಇಚ್ಛಾಗೃಹೀತಾಭಿಮತೋರು ದೇಹಃ ಸಂಸಾಧಿತಾಶೇಷಜಗದ್ಧಿತೋऽಸೌ ॥

ವಿ ಪು 6-5-84

ಇವನು (ಭಗವಂತನು) ಎಲ್ಲಾ ಮಂಗಳಗುಣಗಳಿಂದ ಕೂಡಿದವನು, ತನ್ನ ಶಕ್ತಿಯ ಏಕದೇಶದಿಂದ ಪ್ರಾಣಿ ಜಾತಿಗಳನ್ನು ಧರಿಸಿದವನು. ಸೃಷ್ಟಿಸಿದವನು ತನ್ನ ಸಂಕಲ್ಪ ಮಾತ್ರದಿಂದಲೇ ತನಗೆ ಅಥವಾ ತನ್ನನ್ನಾಶ್ರಯಿಸಿದವರಿಗೆ ಅಭಿಮತವಾದ ಅನೇಕ ಶರೀರಗಳನ್ನು ಧರಿಸಿದವನು ಪ್ರಪಂಚದಲ್ಲಿರುವ ಪ್ರಾಣಿಗಳಿಗೆಲ್ಲಾ ಹಿತವನ್ನು ಉಂಟುಮಾಡುವವನು.

(5) ತದೇವ ಕೃಷ್ಣೋ ದಾಶಾರ್ಹಃ ಶ್ರೀಮಾನ್ ಶ್ರೀವತ್ಸಲಕ್ಷಣಃ ।
ನಭೂತಸಂಘಸಂಸ್ಥಾನೋ ದೇಹೋऽಸ್ಯ ಪರಮಾತ್ಮನಃ॥

(ಭಾರಶಾಂತಿ 20-60)

(6) ನತಸ್ಯ ಪ್ರಾಕೃತಾ ಮೂರ್ತಿಃ ಮಾಂಸಮೇದೋऽಸ್ಥಿ ಸಂಭವಾ ॥
ಯೋಗಿತ್ವಾಚ್ಚೇಶ್ವರತ್ವಾಚ್ಚ ಸರ್ವರೂಪಧರೋ ವಿಭುಃ ||

ವರಾಹಪುರಾಣ 75–44,457

ಅವನ (ಭಗವಂತನ) ಶರೀರವು ಮಾಂಸ, ಮೇದಸ್ಸುಗಳಿಂದ ಉಂಟಾದ ಪ್ರಾಕೃತವಾದ ರೂಪವಲ್ಲ ಅವನು ಯೋಗಿ ಈಶ್ವರನು ವಿಭು ಸ್ವರೂಪನು ಸರ್ವಶರೀರಗಳನ್ನೂ ಅಂತರ್ಯಾಮಿಯಾಗಿ ಧರಿಸಿರುವವನು,

(7) ಭುಂಜೈಶ್ಚತುರ್ಭಿಃ ಸಮುಪೇತಮೇತದ್ರೂಪಂ ವಿಶಿಷ್ಟಂ ದಿವಿಸಂಸ್ಥಿತಂಚ।
ಭೂಮೌಗತಂ ಪೂಜಯತಾऽಪ್ರಮೇಯೋ ಸದಾಹಿತಸ್ಮಿನ್ ನಿವಸಾಮಿದೇವಾಃ ||

(8) ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ|| ಗೀತ ||
ಆ ಕೃಷ್ಣ ಪರಮಾತ್ಮನ ವಿಶ್ವರೂಪ ಶರೀರದಲ್ಲಿ ಒಂದು ಮೂಲೆಯಲ್ಲಿ ಅನೇಕ ಪ್ರಕಾರವಾದ ಈ ಪ್ರಪಂಚವನ್ನು ಪೂರ್ತಿಯಾಗಿ ಅರ್ಜುನನು ನೋಡಿದನು,

9 ಪಶ್ಯಾಮಿ ದೇವಾಂಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತ ವಿಶೇಷ ಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಸ್ಥಂ ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥

ಗೀತ 11 15

ಎಲೈ ದೇವನೇ ನಿನ್ನ ಶರೀರದಲ್ಲಿ ದೇವತೆಗಳೇ ಮೊದಲಾದ ಎಲ್ಲಾ ಪ್ರಾಣಿಗಳನ್ನೂ ನೋಡುತ್ತೇನೆ, ಮುಖ್ಯವಾಗಿ ಹೇಳುವುದಾದರೆ ಚತುರ್ಮುಖ ಬ್ರಹ್ಮ, ರುದ್ರ, ಋಷಿಗಳು, ಎಲ್ಲಾ ಹಾವುಗಳು ಇತ್ಯಾದಿಗಳನ್ನು ನೋಡುತ್ತೇನೆ

11) "ಅಸ್ತ್ರಭೂಷಣ ಸಂಸ್ಥಾನ ಸ್ವರೂಪಂ" (12 "ಭೂಷಣಾಸ್ತ್ರ ಸ್ವರೂಪಸ್ಥಂ ಯದೇತ ದಖಿಲಂಜಗತ್" [13] "ತಮಸಃ ಪರಮೋಧಾತಾ ಶಂಖಚಕ್ರ ಗದಾಧರಃ" ಎನ್ ಕಿರಪಡಿಯೇ, ಸರ್ವಜಗದಾಶ್ರಯಮಾನವ ಪ್ರಾಕೃತ ದಿವ್ಯಮಙ್ಗಳವಿಗ್ರಹ ವಿಶಿಷ್ಟ ಮಾಹ ವನುಸನ್ಧೇಯಮ್. ಇವ್ವಿಗ್ರಹಂ ಪರ ವ್ಯೂಹ ವಿಭವ ಹಾರ್ದಾರ್ಚಾವತಾರ ರೂಪೇಣ ಪಂಚಪ್ರಕಾರ ಮಾಯಿರಕ್ಕುಂ ಪಡಿಯುಂ, ಇವಱ್ಱಿಲುಳ್ಳ ವಿಶೇಷಙ್ಗಳುಂ ಭಗವಚ್ಛಾಸ್ತ್ರ ಸಂಪ್ರದಾಯತ್ತಾಲೇ ಯರಿಯ ಪ್ಪಡುಮ್.

"ಉಭಯ ವಿಭೂತಿಯುಕ್ತಃ"

14] "ವಿಷ್ಣೋರೇತಾ ವಿಭೂತಯಃ" 15] "ಮಹಾವಿಭೂತಿ ಸಂಸ್ಥಾನಂ" 16]"ನಾಂತೋಸ್ತಿ ಮಮದಿವ್ಯಾನಾಂ ವಿಭೂತೀನಾಂ ಪರಂತಪ" ಇತ್ಯಾದಿಹಳುಡೈಯ ಸಂಗ್ರಹಮಾನ 17] "ಯದಣ್ಡಮಣ್ಡಾಂತರ ಗೋಚರಂಚಯತ್" ಎನ್ಗಿರ ಶ್ಲೋಕತ್ತಿನ್‌ಪಡಿಯೇ ಅನಂತ ವಿಭೂತಿ ವಿಶಿಷ್ಟಮಾಹ ವನುಸಂಧೇಯಮ್.

---

11) **ಅಸ್ತ್ರಭೂಷಣ ಸಂಸ್ಥಾನ ಸ್ವರೂಪಂ** 11) **ಭೂಷಣಾಸ್ತ್ರ ಸ್ವರೂಪಸ್ಥಂ** 15) **ತಮಸಃ ಪರಮೋಧಾತಾ,** ಎಂದು ಹೇಳುವ ಪ್ರಕಾರ ಸರ್ವ ಜಗದಾಶ್ರಯಭೂತವಾದ ಅಪ್ರಾಕೃತ ದಿವ್ಯ ಮಂಗಳ ವಿಗ್ರ ವಿಶಿಷ್ಟವಾಗಿ ಅನುಸಂಧೇಯ. **ಇವ್ವಿಗ್ರಹಮ್ ಇತ್ಯಾದಿ** - ಈ ವಿಗ್ರಹವು ಪರ (ಶ್ರೀವೈಕುಂಠದಲ್ಲಿರುವುದು) ವ್ಯೂಹ, (ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ರೂಪಗಳು) ವಿಭವ, (ರಾಮಕೃಷ್ಣಾದ್ಯವತಾರಗಳು) ಹಾರ್ದ, (ನಮ್ಮ ಹೃದಯದಲ್ಲಿರುವ ರೂಪ) ಅರ್ಚಾ, (ದೇವಾಲಯಗಳಲ್ಲಿರುವ ವಿಗ್ರಹರೂಪ) ರೂಪವಾಗಿ ಐದು ಪ್ರಕಾರವಾಗಿರುವುದು ಇವುಗಳಲ್ಲಿರುವ ವಿಶೇಷಗಳು ಸಾತ್ವತ ಸಂಹಿತೆ, ಲಕ್ಷ್ಮೀ ತಂತ್ರಾದಿ ಪಾಂಚರಾತ್ರ ಶಾಸ್ತ್ರಗಳಿಂದಲೂ ಸಂಪ್ರದಾಯ ಸೂಕ್ತಿಗಳಿಂದಲೂ ತಿಳಿಯಲ್ಪಡುತ್ತವೆ.

ಅನಂತ ವಿಭೂತಿ ವಿಶಿಷ್ಟನು: – ಅನಂತರ ಕೈಂಕರ್ಯದಲ್ಲಿ ರುಚಿ ವಿಶೇಷವು ಸಿದ್ಧಿಸಲು, ಆ ಭಗವಂತನನು ವಿಭೂತಿಯೊಡಗೂಡಿದವನಾಗಿ ಅನುಸಂಧಿಸಬೇಕು ಎಂದು ತಿಳಿಸುತ್ತಾರೆ 1) **"ವಿಷ್ಣೋರೇತಾ ವಿಭೂತಯಃ"** 2) **ಮಹಾವಿಭೂತಿ ಸಂಸ್ಥಾನಃ** 3) **ನಾಂತೋಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ,** ಇತ್ಯಾದಿಗಳ ಸಂಗ್ರಹವಾದ 4) **ಯದಂಡ ಮಂಡಾಂತರ ಗೋಚರಂಚಯತ್** । ಎಂಬ ಶ್ಲೋಕದ ಪ್ರಕಾರ, ಆ ಭಗವಂತನನ್ನು ಅನಂತ ವಿಭೂತಿ ವಿಶಿಷ್ಟನೆಂದು ಅನುಸಂಧಾನಮಾಡಬೇಕು.

---

11 ಅಸ್ತ್ರಭೂಷಣ ಸಂಸ್ಥಾನ ಸ್ವರೂಪಂ ರೂಪವರ್ಜಿತಃ ।
ಬಿಭರ್ತಿ ಮಾಯಾ ರೂಪೋಽಸೌ ಶ್ರೇಯಸೇ ಪ್ರಾಣಿನಾಂಹರಿಃ ॥

ವಿ. ಪು 1-32-76

ಅಸ್ತ್ರಭೂಷಣಗಳಿಗೆ ಆಧಾರವಾದ ಅಪ್ರಾಕೃತ ಅಸಾಧಾರಣ ವಿಗ್ರಹವನ್ನುಳ್ಳವನು. ಅವನು ಕರ್ಮನಿಮಿತ್ತವಾದ ಪ್ರಾಕೃತ ಶರೀರ ವಲ್ಲವನು ಪ್ರಾಣಿಗಳ ಶ್ರೇಯಸ್ಸಿಗೋಸ್ಕರ, ಅವರುಗಳು ಸಾಕ್ಷಾತ್ಕರಿಸಲು, ಚಿಂತಿಸಲು. ನಾಮ ಸಂಕೀರ್ತನಾದಿಗಳಿಂದ ಸ್ತುತಿಸಲು ಯೋಗ್ಯವಾದ ಆಶ್ಚರ್ಯವಾದ (ಮಾಯಾ) ರೂಪವನ್ನು (ಶರೀರವನ್ನು) ಧರಿಸುತ್ತಾನೆ

12 ಭೂಷಣಾಸ್ತ್ರ ಸ್ವರೂಪಸ್ಥಂ ಯದೇತದಖಿಲಂ ಜಗತ್ ।
ಬಿಭರ್ತಿ ಭಗವಾನ್ ವಿಷ್ಣುಃ ತನ್ಮಮಾಖ್ಯಾತು ಮರ್ಹಸಿ ॥

ವಿ ಪು. 1-22,66

ಚೇತನಾಚೇತನಾತ್ಮಕವಾದ ಈ ಎಲ್ಲಾ ಲೋಕಗಳನ್ನು ಅಭಿಮಾನ ದೇವತಾ ರೂಪದಲ್ಲಿ ಭೂಷಣ ರೂಪವಾಗಿಯೂ ಅಸ್ತ್ರ ರೂಪವಾಗಿಯೂ ಭಗವಂತನಾದ ವಿಷ್ಣುವು ಹೇಗೆ ಧರಿಸಿರುತ್ತಾನೆಯೋ, ಅದನ್ನು ನನಗೆ ತಿಳಿಸಿ.

ಜಗದ್ವ್ಯಾಪಾರಯುಕ್ತನು

ಇವ್ವಿಭೂತಿಹಳಿಲ್ ಚೇತನಂಗಳಾಯುಂ ಅಚೇತನಂಗಳಾಯುಮುಳ್ಳ ಇರಂಡುವಹೈಯುಮ್ ಲೀಲಾರ್ಥಂಗಳಾಯುಮ್, ಭೋಗಾರ್ಥಂಗಳಾಯುಮ್ ವಿಭಕ್ತಂಗಳಾಯಿರುಕ್ಕುಮ್. ಆನುಕೂಲ್ಯಮಾತ್ರಂ ಪೊದುವಾಯಿರುಕ್ಕ ರಸವೈಷಮ್ಯತ್ತಾಲೇ ಲೀಲಾಭೋಗ ವಿಭಾಗಂ ಯಥಾಲೋಕಂ ಕಂಡುಕೊಳ್ವದು ಅಪ್ಪಡಿಯೇ 18) "ಜನ್ಮಾದ್ಯಸ್ಯಯತಃ" 19) "ಕ್ರೀಡಾಹರೇರಿದಂಸರ್ವಂ" 20 "ಕ್ರೀಡತೋ ಬಾಲಕಸ್ಯೇವ" 21)"ಬಾಲ ಕ್ರೀಡನಕೈರಿವ" 22) "ಹರೇ ವಿಹರಸಿ ಕ್ರೀಡಾಕನ್ತು ಕೈರಿವ ಜನ್ತುಭಿಃ" (23) "ಲೋಕವತು ಲೀಲಾ ಕೈವಲ್ಯಂ, ಎನ್‌ಹಿರಪಡಿಯೇ ಲೀಲಾ ರೂಪ ಜಗದ್ವ್ಯಾಪಾರ ಲಕ್ಷಣಮಾಹವನು ಸನ್ಧೇಯಮ್.

ಲೀಲಾರೂಪ ಜಗದ್ವ್ಯಾಪಾರ ಉಳ್ಳವನು ಭಗವಂತ

ಇವ್ವಿಭೂತಿಹಳಿಲ್ ಇತ್ಯಾದಿ – ಈ ವಿಭೂತಿಯಲ್ಲಿ ಚೇತನಗಳೆಂದೂ ಅಚೇತನಗಳೆಂದೂ ಇರುವ ಎರಡು ಭಾಗಗಳು, ಲೀಲಾರ್ಥಗಳಾಗಿಯೂ ಭೋಗಾರ್ಥಗಳಾಗಿಯೂ ವಿಭಾಗ ಮಾಡಲ್ಪಟ್ಟಿವೆ ಆನುಕೂಲ್ಯವು ಎರಡಕ್ಕೂ ಸಮಾನವಾಗಿರುವಾಗ, ರಸವೈಷಮ್ಯದಿಂದ ಲೀಲಾ, ಭೋಗವಿಭಾಗಗಳನ್ನು ಲೋಕದಲ್ಲಿರುವ ಹಾಗೆ ತಿಳಿಯತಕ್ಕದ್ದು ಆದಾಗಿ ಲೋಕದಲ್ಲಿ ರಾಜನಿಗೆ ತರಣೀ ಚಂದನ ಕುಸುಮಾದಿಗಳು ಅವುಗಳಿಂದ ಉಂಟಾಗುವ ಸಂತೋಷದಿಂದ ಭೋಗೋಪಕರಣಗಳಾಗಿವೆ ಉದ್ಯಾನ–ಕೋಟೆ, ಕಂತುಕ ಚೆಂಡು ಮೊದಲಾದವು ಲೀಲೋಪಕರಣಗಳಾಗಿವೆಯಲ್ಲವೆ. ಈರೀತಿಯಲ್ಲಿ ಭಗವಂತನಿಗೆ ಕೆಲವು ಲೀಲಾರ್ಥವಾಗಿಯೂ ಕೆಲವು ಭೋಗಾರ್ಥವಾಗಿಯೂ ಇವೆ ಹಾಗೆಯೇ 1) **ಜನ್ಮಾದ್ಯ ಸ್ಯಯತಃ, 2) ಕ್ರೀಡಾಹರೇರಿದಂಸರ್ವಂ,** ಇತ್ಯಾದಿ ಪ್ರಮಾಣಗಳು ಹೇಳುವಂತೆ, ಲೀಲಾರೂಪ ಜಗದ್ವ್ಯಾಪಾರ ಲಕ್ಷಣವುಳ್ಳವನೆಂದು ಅನುಸಂಧೇಯನು. [ಈ ಅನುಸಂಧಾನಕ್ರಮವು ಶರಣಾಗತಿ ಗದ್ಯದಲ್ಲಿ "ಅಖಿಲಹೇಯ ಪ್ರತ್ಯನೀಕ" ಎಂದಾರಂಭಿಸಿರುವ ಚೂರ್ಣಿಕೆಯಲ್ಲಿ ಸ್ಪಷ್ಟವಾಗಿದೆ.]

---

13 ತಮಸಃ ಪರಮೋಧಾತಾ ಶಂಖ ಚಕ್ರಗದಾಧರಃ ॥
ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಶ್ಶಾಶ್ವತೋಧ್ರುವಃ ॥

ರಾಮಾ 6–114-15

ಪ್ರಕೃತಿಮಂಡಲಕ್ಕೆ ಮೇಲೆ ಇರುವವನು ಧಾತಾ–ಧರಿಸುವವನು ಪೋಷಕನು ಶಂಖ ಚಕ್ರಗದಾಪಾಣಿ ಶ್ರೀವತ್ಸವನ್ನು ಎದೆಗೆ ಳ್ಳುಳ್ಳವನು, ನಿತ್ಯಶ್ರೀಯು ಅಜಯ್ಯನು ಶಾಶ್ವತನು

14 ವಿಷ್ಣುರ್ಮನ್ವಾದಯಃ ಕಾಲಃ ಸರ್ವಭೂತಾನಿ ಚ ದ್ವಿಜ ॥
ಸ್ಥಿತೇರ್ನಿಮಿತ್ತಭೂತಸ್ಯ ವಿಷ್ಣೋರೇತಾ ವಿಭೂತಯಃ

ವಿ ಪು 4-22-32,

ವಿಷ್ಣುವು - ವಿಭವಾದಿ ಅವತಾರಗಳು, ಮನು, ಕಾಲ, ಸರ್ವ ಪ್ರಾಣಿಗಳು, ಮೊದಲಾದವು, ಸ್ಥಿತಿಗೆ ಕಾರಣಭೂತವಾದ ಮಹಾವಿಷ್ಣುವಿನ ವಿಭೂತಿಗಳು, ಅವನ ಐಶ್ವರ ಸಂಪರ್ಧ,

15 ಸಕಲಾವರಣಾತೀತ ನಿರಾಲಂಬನ ಭಾವನ ॥
ಮಹಾವಿಭೂತಿ ಸಂಸ್ಥಾನ ನಮಸ್ತೇ ಪುರುಷೋತ್ತಮ ॥

ವಿ ಪು 5–1-50

ಪ್ರಕೃತಿ ಮಂಡಲದ ಸುತ್ತಲಿರುವ ಆವರಣಗಳನ್ನು ದಾಟಿದವನು ಅವುಗಳಿಗೊ ಚೇರದಾಗಿದವನು ನಿರಾಲಂಬನ-ಆಶ್ರಯನು, ಅವರಿಂದ ಭಾವನ–ಭಾವಿಸಲ್ಪಡುವವನು ಮಹಾವಿಭೂತಿ–ತ್ರಿಪಾದ್ವಿಭೂತಿ ಎಂಬವೈಕುಂಠಲೋಕದಲ್ಲಿ ಸಂಸ್ಥಾನ- ಇರುವವನು, ಅಂಥವ ಪುರುಷೋತ್ತಮನೇ ನಿನಗೆ ನಮಸ್ಕಾರ ಇದರಿಂದ ಲೀಲಾವಿಭೂತಿ, ನಿತ್ಯ ವಿಭೂತಿಗಳಿಗೆ ನಿಯಾಮಕನು ಎಂದು ತಿಳಿಸಲ್ಪಡುತ್ತದೆ,

16. ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ॥
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ ॥
ಶತ್ರುಗಳನ್ನು ತಪಿಸುವವನೇ (ಅರ್ಜುನನೇ) ನನ್ನ ದಿವ್ಯ ವಿಭೂತಿಗಳಿಗೆ ಎಲ್ಲೆ ಇಲ್ಲ ನನ್ನ ವಿಭೂತಿಗಳ ಕೆಲವನ್ನು ಉದ್ದೇಶವಾಗಿ ವಿಸ್ತರಿಸಿ ಹೇಳಿದೆ

ಗೀತೆ (10-40)

17. ಯದಂಡಮಂಡಾಂತರ ಗೋಚರಂಚಯತ್ ದಶೋತ್ತರಾಣ್ಯಾವರಣಾನಿ ಯಾನಿಚ ॥
ಗುಣಾಃ ಪ್ರಧಾನಂ ಪುರುಷಃ ಪರಂಪದಂ ಪರಾತ್ಪರಂ ಬ್ರಹ್ಮಚತೇ ವಿಭೂತಯಃ ॥
ಬ್ರಹ್ಮಾಂಡ, ಅಂಡದೊಳಗಿನ ಇರುವವಸ್ತುಗಳು, ಒಂದಕ್ಕೆ ಹತ್ತು ಇರುವಹತ್ತು ಆವರಣಗಳು, ಗುಣತ್ರಯಗಳು, ಪ್ರಕೃತಿ ಪುರುಷ, ಪರಮಪದ, ಪರಬ್ರಹ್ಮರೂಪ ದಿವ್ಯಮಂಗಳ ವಿಗ್ರಹ, ಭೂಷಣಾಯುಧಗಳು, ಇವುಗಳೆಲ್ಲಾ ನಿನ್ನ ವಿಭೂತಿ ನಿನ್ನಿಂದ ನಿಯಾಮ್ಯಗಳಾಗಿ ನಿನಗೆ ಶೇಷಭೂತಗಳು ಎಂದರ್ಥ.

ಆಳ ಸ್ತೋ (17)

18 ಬ್ರಹ್ಮಸೂತ್ರ (1-1-2)- ಈ ಪ್ರತ್ಯಕ್ಷ ವಿಚಿತ್ರ ಚೇತನಾ ಚೇತನಾತ್ಮಕವಾದ ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರ ಮೋಕ್ಷ ಪ್ರದತ್ವಾದಿಗಳು ಯಾವನಿಂದ ಉಂಟಾಗುತ್ತವೋ ಅವನು ಬ್ರಹ್ಮ

19. ಅವ್ಯಕ್ತಾದಿವಿಶೇಷಾಂತಂ ಪರಿಣಾಮರ್ಧಿ ಸಂಯುತಮ್ ॥
ಕ್ರೀಡಾಹರೇರಿದಂ ಸರ್ವಂ ಕ್ಷರಮಿತ್ಯುಪಧಾರ್ಯತಾಮ್ ॥

ಭಾರ ಶಾಂತಿಪರ್ವ (206-58)

ಅವ್ಯಕ್ತ ಮಹದಹಂಕಾರಾದಿ ಪರಿಣಾಮಗಳನ್ನುಳ್ಳ , ಈ ಎಲ್ಲಾ ತತ್ವಗಳೂ, ಕ್ರೀಡೆ-ಆಟ, ಆಡುವ ಭಗವಂತನಿಗೆ ಶೇಷ ಭೂತಗಳು. ಇವು ಕ್ಷರ ಸ್ವಭಾವಗಳು.

20 ವ್ಯಕ್ತಂ ವಿಷ್ಣುಸ್ತಥಾವ್ಯಕ್ತಂ ಪುರುಷಃ ಕಾಲಏವಚ ॥
ಕ್ರೀಡತೋ ಬಾಲಕಸ್ಯೇವ ಚೇಷ್ಟಾಂತಸ್ಯ ನಿಶಾಮಯ ॥

(ವಿ ಪು 1-2-18)

ವಿಷ್ಣುವು ವ್ಯಕ್ತ ಸ್ವರೂಪವಾಗಿ ತಿಳಿಯುವ ಪ್ರಪಂಚರೂಪನು ಹಾಗೆಯೇ ವಿಕಾರ ಹೊಂದದೆ ಅವ್ಯಕ್ತವಾದ ಪ್ರಕೃತಿ ಪುರುಷ, ಕಾಲಸ್ವರೂಪನು ಆಟವಾಡುವ ಹುಡುಗನಹಾಗೆ, ಪ್ರಕೃತಿ, ಪುರುಷ, ಕಾಲವಾಗಿ ಈ ಪ್ರಪಂಚದ ಪರಿಣಾಮಗಳು ಅವನ ವ್ಯಾಪಾರ ಇದು ಕ್ರೀಡಾ ರೂಪವಾದದ್ದು.

21 ಅನಿಯೋಜ್ಯೋಽಪ್ರಮೇಯಶ್ಚ ಯಸ್ತುಕಾಮ ಶರೀರ ಧೃತ್ ॥
ಮೋದತೇ ಭಗವಾನತ್ರ ಬಾಲಃ ಕ್ರೀಡನಕೈರಿವ ॥

ಭಾರ ಸಭಾ 40-78

ಭಗವಂತನು ನಿಯಮಿಸಲ್ಪಡದವನು. ಅಪ್ರಮೇಯನು. ತಿಳಿಯಲಶಕ್ಯನು ತನಗೆ ಇಷ್ಟವಾದ ಶರೀರಗಳನ್ನು ಧರಿಸುವವನು. ಬಾಲನು ಆಟದ ಸಾಮಾನುಗಳಿಂದ ಸಂತೋಷ ಪಡುವಂತೆ, ಭಗವಂತನು ಈ ಚೇತನಾಚೇತನಾತ್ಮಕ ಪ್ರಪಂಚದ ಸೃಷ್ಟಿಸ್ಥಿತಿ ಸಂಹಾರಾದಿ ಲೀಲೆಯಿಂದ ಸಂತೋಷಪಡುತ್ತಾನೆ.

ಜೀವಾತ್ಮ ಸ್ವರೂಪ

ಇಪ್ಪಡಿ ಲಕ್ಷ್ಮೀ ಸಹಾಯ ನಾಯ್, ಅಪರಿಮಿತ ಜ್ಞಾನಾನನ್ದ ನಾಯ್, ಹೇಯ ಪ್ರತ್ಯನೀಕ ನಾಯ್, ಜ್ಞಾನ ಶಕ್ತ್ಯಾದ್ಯನನ್ತ ಮಙ್ಗಳಗುಣ ವಿಶಿಷ್ಟನಾಯ್ ದಿವ್ಯ ಮಙ್ಗಳ ವಿಗ್ರಹೋಪೇತ ನಾಯ್, ಶರೀರ ಭೂತ ವಿಭೂತಿದ್ವಯ ಯುಕ್ತ ನಾಯ್, ಜಗತ್ಸೃಷ್ಟ್ಯಾದಿ ವ್ಯಾಪಾರ ಲೀಲನಾಯ್‌ಕ್ಕೊಂಡು ಪ್ರಾಪ್ಯನಾನಬ್ರಹ್ಮತ್ತೈ ಪ್ರಾಪಿಕ್ಕುಂ, ಪ್ರತ್ಯಗಾತ್ಮಾ ವಿನುಡೈಯಬದ್ಧಮುಕ್ತ ನಿತ್ಯಸಾಧಾರಣ ರೂಪಮುಮ್, ಉಪಾಯಾಧಿಕಾರಿಯಾನ ತನಕ್ಕಿಪ್ಪೋದು ಅಸಾಧಾರಣಮಾನ ರೂಪ ಮುಮರಿಯವೇಣುಮ್

ಬದ್ಧಮುಕ್ತ ನಿತ್ಯಾನಾಂ ಲಕ್ಷಣಮ್

ಇವರ್ಗಳಿಲ್ ಬದ್ಧರಾವಾರ್? ಅನಾದಿಕರ್ಮ ಪ್ರವಾಹತ್ತಾಲೇಯನು ವೃತ್ತ ಸಂಸಾರರಾಯ್ ಬ್ರಹಾದಿಸ್ತಂಬ ಪರ್ಯನ್ತ ವಿಭಾಗಭಾಗಿಗಳಾನಕ್ಷೇತ್ರಜ್ಞರ್. ಮುಕ್ತರಾವಾರ್. ಶಾಸ್ತ್ರಚೋದಿತಙ್ಗಳಾನ ಉಪಾಯ ವಿಶೇಷಙ್ಗಳಾಲುಣ್ಡಾನ ಭಗವತ್ಪ್ರಸಾದತ್ತಾಲೇ ಅತ್ಯನ್ತ ನಿವೃತ್ತ ಸಂಸಾರರಾಯ್ ಸಙ್ಕೋಚರಹಿತ ಭಗವದನುಭವತ್ತಾಲೇ ನಿರತಿಶಯಾನಂದರಾಯಿರುಕ್ಕುಮವರ್‌ಹಳ್.

ಮೇಲೆ ಹೇಳಿದ ಪ್ರಕಾರವನ್ನು "ಇಪ್ಪಡಿ ಲಕ್ಷ್ಮೀಸಹಾಯನಾಯ್" ಎಂದಾರಂಭಿಸಿ ಕ್ರೋಡಿಕರಿಸುತ್ತಾರೆ ಅದಾಗಿ ಹೀಗೆ ಲಕ್ಷ್ಮೀಸಹಾಯನಾಗಿ ಅಪರಿಮಿತ ಜ್ಞಾನಾನಂದ ಸ್ವರೂಪನಾಗಿ, ಹೇಯ ಗಣ ಪ್ರತಿಭಟನಾಗಿ, ಜ್ಞಾನಶಕ್ತ್ಯಾದಿ ಅನಂತ ಮಂಗಳ ಗುಣವಿಶಿಷ್ಟನಾಗಿ, ದಿವ್ಯಮಂಗಳ ವಿಗ್ರಹದಿಂದ ಕೂಡಿದವನಾಗಿ ತನಗೆ ಶರೀರ ಭೂತವಾದ ಲೀಲಾ ವಿಭೂತಿ, ನಿತ್ಯ ವಿಭೂತಿ ಎಂಬ ಎರಡು ವಿಭೂತಿಗಳಿಂದ ಕೂಡಿದವನಾಗಿ, ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರ ಮೋಕ್ಷ ಪ್ರದತ್ವಾದಿ ವ್ಯಾಪಾರಗಳನ್ನು ತನಗೆ ಲೀಲೆಯಾಗಿ ಕೊಂಡಿರುವವನಾಗಿರುವ ಪರಬ್ರಹ್ಮನು ಪ್ರಾಪ್ಯನು. ಇಲ್ಲಿ "ಲಕ್ಷ್ಮೀ ಸಹಾಯನಾಯ್" ಎಂದಾರಂಭಿಸಿರುವುದರಿಂದ, "ಅಪರಿಮಿತ ಜ್ಞಾನಾನಂದ ಸ್ವರೂಪನಾಯ್", ಇತ್ಯಾದಿ ಸ್ವರೂಪ ಗುಣಾದಿಗಳು ಮಹಾಲಕ್ಷ್ಮಿಗೂ ಮಹಾವಿಷ್ಣುವಿಗೂ ಸಮಾನವೆಂಬುದು ತಿಳಿಸಲ್ಪಡುತ್ತದೆ ಹಾಗಯೇ ಸ್ವರೂಪ ರೂಪ, ಗಣ, ವಿಗ್ರಹ ಪರಿಗ್ರಹ, ಎಲ್ಲಾ ವ್ಯಾಪಾರಗಳಿಂದಲೂ ಪರಿಪೂರ್ಣವಾದ ಬ್ರಹ್ಮವು ಮುಕ್ತ ಪ್ರಾಪ್ಯವೆಂದು ತಿಳಿಸಲ್ಪಡುತ್ತದೆ.

ಜೀವಾತ್ಮ ಸ್ವರೂಪ :—

ಈ ಬ್ರಹ್ಮವನ್ನು ಹೊಂದುವ ಪ್ರತ್ಯಗಾತ್ಮಾವಿನ (ಜೀವಾತ್ಮನ) ಬದ್ಧ ಮುಕ್ತ ನಿತ್ಯ ಸಾಧಾರಣ ರೂಪವನ್ನು, ಉಪಾಯಕ್ಕೆ ಅಧಿಕಾರಿಯಾದ ತನಗೆ ಈ ಬದ್ಧ ದಶೆಯಲ್ಲಿರುವ ಅಸಾಧಾರಣ ರೂಪವನ್ನೂ ತಿಳಿಯಬೇಕು ನಿತ್ಯ ಮುಕ್ತರ ರೂಪವನ್ನು ತಿಳಿಯುವುದರ ಫಲವೇನೆಂದರ, ಅಕರ್ಮವಶ್ಯರಾದ ನಿತ್ಯಸೂರಿಗಳ ಹಾಗೆ ಕರ್ಮವಶ್ಯರಾದ ನಮಗೂ ಭಗವತ್ಕೈಂಕರ್ಯವು ಲಭಿಸುತ್ತದೆಯೋ ಎಂದು ಸಂದೇಹವಿಲ್ಲದೆ ಇರಲು, ಮೊದಲು ಕರ್ಮವಶ್ಯರಾಗಿದ್ದು ಈಗ ಕರ್ಮವಶ್ಯತೆಯು ನೀಗಿ ಮುಕ್ತರಾಗಿರುವವರ ಸ್ವರೂಪವನ್ನು ಅರಿತು, ಬದ್ಧರಾದ ನಾವೂ, ಮೋಕ್ಷೋಪಾಯವನ್ನು ಅನುಷ್ಠಿಸಿದರೆ ಕೈಂಕರ್ಯವು ಲಭಿಸುತ್ತದೆಯೆಂದು ತಿಳಿದುಕೊಳ್ಳಲು, ಉಪಕಾರವಾಗುತ್ತದೆ. **ಇವರ್‌ಹಳಿಲ್ ಬದ್ಧರಾವಾರ್** ಇತ್ಯಾದಿ — ಇವರುಗಳಲ್ಲಿ ಬದ್ಧರು ಯಾರೆಂದರ ಅನಾದಿಯಾದ ಕರ್ಮಪ್ರವಾಹದಿಂದ ಅನುವೃತ್ತ ಸಂಸಾರವಾದ ಬ್ರಹ್ಮಾದಿ ಸ್ತಂಭಪರ್ಯಂತರಾಗಿ ವಿಭಕ್ತರಾದ ಕ್ಷೇತ್ರಜ್ಞರು. ಆಚಾರ್ಯರು, ಬ್ರಹ್ಮ ರುದ್ರೇಂದ್ರಾದಿಗಳು ಕರ್ಮವಶ್ಯರು, ಅವರುಗಳನ್ನಾಶ್ರಯಿಸಿದರೆ ಮೋಕ್ಷವು ದೊರೆಕಲಾರದು, ಅವರು ಈಶ್ವರ ಕೋಟಿಗೆ ಸೇರಿದವರಲ್ಲ ವೆಂಬುದನ್ನು ತಿಳಿಯಪಡಿಸಲು, ಇಲ್ಲಿ 'ಬ್ರಹ್ಮಾದಿ'ಗಳೆಂದು ಅವರನ್ನೂ ಸೇರಿಸಿ ತಿಳಿಯಪಡಿಸುತ್ತಾರೆ.

ನಿತ್ಯರಾವಾರ್ ಈಶ್ವರನೈ ಪ್ಪೋಲೇಅನಾದಿಯಾಹ ಜ್ಞಾನ ಸಂಕೋಚಮಿಲ್ಲಾ ನ್ಮೈಯಾಲೇ (1) "ಸವಯಸ ಇವಯೋ ನಿತ್ಯನಿರ್ದ್ದೋಷಗಂಧಾಃ" ಎನ್ಹಿರಪಡಿಯೇ ಅಸ್ಪೃಷ್ಟಸಂಸಾರರಾಯ್ ಕ್ಕೊಂಡು ನಿತ್ಯಕೈಙ್ಕರ್ಯಂಪಣ್ಣುಹಿರ ಅನನ್ತಗರುಡವಿಷ್ವಕ್ಸೇನಾದಿಹಳ್.

ಜೀವ ಸ್ವರೂಪ ನಿರೂಪಣಂ – ಇವರ್ಹ ಳೆಲ್ಲಾರ್ಕ್ಕುಂ ಸಾಧಾರಣಮಾನ ರೂಪಂ ಅಣುತ್ವ ಜ್ಞಾನಾನನ್ದಾ ಮಲತ್ವಾದಿಹಳುಮ್, ಭಗವಚ್ಛೇಷತ್ವ, ಪಾರತನ್ತ್ರ್ಯಾದಿಹಳುಮ್. ಮುಮುಕ್ಷುವಾನ ತನಕ್ಕಸಾಧಾರಣ ಮಾಹವರಿಯ ವೇಣ್ಣುಮಾಕಾರಙ್ಗಳ್ ಉಪೋದ್ಘಾತತ್ತಿಲೇ ಶೊನ್ನೋಮ್. ಮೇಲುಮ್ ಕಣ್ಣು ಕೊಳ್ವದು.

ರಹಸ್ಯತ್ರಯೋ ಪ್ರಾಪ್ತೃ ಸ್ವರೂಪ ನಿರೂಪಣಮ್

ಇಪ್ಪ್ರಾಪ್ತಾ ವಿನುಡೈಯ ಸ್ವರೂಪಂ ಪ್ರಣವ ನಮಸ್ಸುಕ್ಕಳಿಲುಮ್, "ಮ"ಕಾರಙ್ಗಳಿಲುಮ್, "ಪ್ರಪದ್ಯೇ" ಎನ್ಹಿರ ಉತ್ತಮ ನಿಲುಮ್ "ತ್ವಾ" ಎನ್ಹಿರ ಪದತ್ತಿಲುಮ್, "ಮಾಶುಚಃ" ಎನ್ಹಿರವಾಕ್ಯತ್ತಿ ಲುಮ್ 'ವ್ರಜ'ವೆನ್ಹಿರ ಮಧ್ಯಮನಿಲುಮ್ ಅನುಸನ್ಧೇಯಮ್.

ಮುಕ್ತರಾವಾರ್ ಇತ್ಯಾದಿ - ಮುಕ್ತರು ಯಾರೆಂದರೆ ಶಾಸ್ತ್ರಚೋದಿತಗಳಾದ ಮೋಕ್ಷೋಪಾಯಗಳನ್ನನುಷ್ಠಿಸಿ ಭಗವಂತನ ಪ್ರಸಾದವನ್ನು (ಅನುಗ್ರಹವನ್ನು) ಪಡೆದು ಅತ್ಯಂತ ನಿವೃತ್ತ ಸಂಸಾರರಾದವರು ಭಗವಂತನು "ಸಮೋಽಹಂ ಸರ್ವಭೂತೇಷು", "ಸುಹೃದಂ ಸರ್ವಭೂತಾನಾಂ", ಎಂಬ ರೀತಿ ಯಲ್ಲಿ ಎಲ್ಲರಲ್ಲಿಯೂ ಸಮನಾಗಿದ್ದರೂ ಕವ ಣಮಸ್ಯರನ್ನು ಮೋಕ್ಷಕ್ಕೆ ಕರೆದೊಯ್ಯಲು, "ಯೇಭಜಂತಿತುಮಾಂಭಕ್ತ್ಯಾ", ಎಂದು ಹೇಳಿರುವಂತೆ, ಚೇತನಗತ ವ್ಯಾಜ ಸಾಪೇಕ್ಷನೆಂಬುದನ್ನು, **"ಶಾಸ್ತ್ರ ಚೋದಿತಂಗಳಾನ ಉಪಾಯವಿಶೇಷಂಗಳಾಲ್",** ಎಂದು ತಿಳಿಸಿರುತ್ತಾರೆ ಇಲ್ಲಿ ಹೇಳಿರುವ ಉಪಾಯ ವಿಶೇಷಗಳು, ಭಕ್ತಿ, ಪ್ರಪತ್ತಿಗಳು ಇವುಗಳಲ್ಲೊಂದನ್ನು ಅನುಷ್ಠಿಸಿ ಮುಕ್ತರಾದವರು, ಸಂಕೋಚರಹಿತವಾದ ಭಗವಂತನ ಅನುಭವದಿಂದ ನಿರತಿಶಯಾನಂದಭರಿತರಾಗಿರುತ್ತಾರೆ.

ನಿತ್ಯರು ಯಾರೆಂದರೆ, ಈಶ್ವರನಹಾಗೆ ಅನಾದಿಕಾಲದಿಂದ ಜ್ಞಾನಸಂಕೋಚವಿಲ್ಲದಕಾರಣ, 1) "ಸವಯಸ ಇವಯೇ ನಿತ್ಯ ನಿರ್ದೋಷಗಂಧಾಃ", ಎಂಬುವಂತೆ, ಅಸ್ಪೃಷ್ಟ ಸಂಸಾರರಾಗಿ, ಭಗವಂತನಿಗೆ ನಿತ್ಯ ಕೈಂಕರ್ಯವನ್ನು ಮಾಡಿ ಬರು ಅನಂತ, ಗರುಡ, ವಿಷ್ವಕ್ಸೇನಾದಿಗಳು. ಇದರಿಂದ ಬದ್ಧರಿಗೆ ಅನ ವೃತ್ತ ಸಂಸಾರತ್ವವು ಅಸಾಧಾರಣ ಲಕ್ಷಣ ಅತ್ಯಂತ ನಿವೃತ್ತ ಸಂಸಾರತ್ವವು ಮುಕ್ತರಿಗೆ ಅಸಾಧಾರಣ ಲಕ್ಷಣ ಅಸ್ಪೃಷ್ಟ ಸಂಸಾರತ್ವವು, ನಿತ್ಯರಿಗೆ ಅಸಾಧಾರಣ ಲಕ್ಷಣ "ತದ್ವಿಷ್ಣೋಃ ಪರಮಂ ಪದಂ **ಸದಾಪಶ್ಯಂತಿ ಸೂರಯಃ**", ಎಂಬ ಧರ್ಮಿಗ್ರಾಹಕ ಪ್ರಮಾಣದಿಂದ ನಿತ್ಯ ಜೀವರು ಉಂಟೆಂಬುದು ಏರ್ಪಡುತ್ತದೆ ಇದಕ್ಕೆ "ಸವಯಸ ಇವಯೇ" ಎಂಬ ಶ್ರೀಪರಾಶರ ಭಟ್ಟರ ಶ್ರೀಸೂಕ್ತಿಯ ಸಾಂಪ್ರದಾಯಿಕವಾದ ಪ್ರಮಾಣ.

ಜೀವ ಸ್ವರೂಪ ನಿರೂಪಣೆ :

ಇವರ್ ಹಳೆಲ್ಲಾರುಕ್ಕುಂ – ಇತ್ಯಾದಿ :– ಈ ಬದ್ಧ ಮುಕ್ತ ನಿತ್ಯರುಗಳೆಲ್ಲರಿಗೂ ಸಾಧಾರಣವಾದ ರೂಪವು (ಸ್ವರೂಪ ನಿರೂಪಕ ಧರ್ಮವು) ಅಣುತ್ವ, ಜ್ಞಾನತ್ವ, ಆನಂದತ್ವ ಅಮಲತ್ವಾದಿಗಳು. ಆದಿಪದದಿ-ದ ಪ್ರತ್ಯಕ್ತ್ವವು ಗ್ರಾಹ್ಯವು. ಭಗವಚ್ಛೇಷತ್ವ, ಪಾರತಂತ್ರ್ಯಾದಿಗಳು ನಿರೂಪಿತ ಸ್ವರೂಪ ವಿಶೇಷ ಧರ್ಮಗಳು ಆದಿಶಬ್ದದಿಂದ ಕೈಂಕರ್ಯವು ಗ್ರಾಹ್ಯ. ಮೋಕ್ಷದಲ್ಲಿ ಆಸೆಯುಳ್ಳ ತನಗೆ ಅಸಾಧಾರಣವಾಗಿ ತಿಳಿಯಬೇಕಾದ ಆಕಾರವನ್ನು ಅಂದರೆ ರಾಜಕುಮಾರನಿಗ ಶಬರ ಜಾತಿಸಂಬಂಧವು ಪ್ರಾಪ್ತವಾದಹಾಗೆ ತನಗೆ "ಅನಾದಿಮಾಯಯಾಸುಪ್ತಃ", ಇತ್ಯಾದಿ ಪ್ರಮಾಣಗಳು ತಿಳಿಸುವಂತೆ, ಅನಾದಿ ಪ್ರಕೃತಿ ಸಂಬಂಧವನ್ನೂ, ತನ್ಮೂಲಕ ಯಥಾವಸ್ಥಿತವಾದ ಜ್ಞಾನ ಸಂಕೋಚವನ್ನೂ ಉಪೋದ್ಘಾತಾಧಿಕಾರದಲ್ಲಿ **ಹೇಳಿದೆ.** ಮುಂದೆಯೂ ಮುಮುಕ್ಷುತ್ವಾಧಿಕಾರದಲ್ಲಿ ಹೇಳಲ್ಪಡುತ್ತದೆ. ಪ್ರಕೃತಿ ಸಂಬಂಧವು ಆಗಂತುಕವಾಗಿ ಪುರುಷಾರ್ಥ ಪ್ರತಿಬಂಧಕ ಅದನ್ನು ಹೋಗಲಾಡಿಸಿಕೊಳ್ಳಲು ಉಪಾಯಾನುಷ್ಠಾನ ದಲ್ಲಿ ಪ್ರವರ್ತಿಸಬೇಕೆಂಬುದು ತಾತ್ಪರ್ಯ.

ಪ್ರಾಪ್ತ್ಯುಪಾಯ ಫಲ ಸ್ವರೂಪ ನಿರೂಪಣಮ್ :-

ಪ್ರಾಪ್ತ್ಯುಪಾಯ ಮುಮ್ ಅದಿನ್ ಪರಿಕರಙ್ಗಳುಮ್ ಫಲ ಸ್ವರೂಪ ನಿರುಕ್ಕುಮ್ ಪಡಿಯುಮ್, ಮೇಲೇ ಪ್ರಾಪ್ತ ಸ್ಥಲಙ್ಗಳಿಲೇ ಪರಕ್ಕ ಚೊಲ್ಲಕ್ಕಡವೋಮ್

ರಹಸ್ಯತ್ರಯೇ ಪ್ರಾಪ್ತ್ಯುಪಾಯ ಫಲಸ್ವರೂಪಾನು ಸ್ಥನಾನ ಸ್ಥಲ ಪ್ರದರ್ಶನಮ್ :-

ಇವತ್ತಿಲ್ ಉಪಾಯಮ್ ತಿರುಮನ್ತ್ರತ್ತಿಲ್ ನಮಸ್ಸಿಲುಮ್, ಅಯನ ಶಬ್ದತ್ತಿಲುಮ್, ದ್ವಯತ್ತಿಲ್ ಪೂರ್ವಖಣ್ಡತ್ತಿಲುಮ್, ಚರಮ ಶ್ಲೋಕತ್ತಿಲ್ ಪೂರ್ವಾರ್ಧತ್ತಿಲು ಮನುಸನ್ಧೇಯಮ್. ಫಲಸ್ವರೂಪಮ್, ಚತುರ್ಥ್ಯನ್ತ ಪದಙ್ಗಳಿಲುಂ, ದ್ವಯತ್ತಿಲ್ ನಮಸ್ಸಿಲುಮ್, ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎನ್ಗಿಱ ಇಡತ್ತಿಲುಮನುಸನ್ಧೇಯಮ್

ಪ್ರಾಪ್ತಿ ವಿರೋಧಿ ಸ್ವರೂಪ ಕಥನಂ :-

ಪ್ರಾಪ್ತಿ ವಿರೋಧಿ ಯಾವದು ಅವಿದ್ಯಾ ಕರ್ಮವಾಸನಾದಿರೂಪಮಾನ ಮೋಕ್ಷಪ್ರತಿಬನ್ಧಕವರ್ಗಮ್, ಇದಿಲ್ ಪ್ರಧಾನಂ ಅನಾದಿಯಾಹ ಸಂತನ್ಯಮಾನ ಪಾಪತ್ತಾಲುಂಡಾನ ಮುಡಿಯಾಹ ಪ್ಪಿರನ್ದ ಭಗವನ್ನಿಗ್ರಹಮ್.

ರಹಸ್ಯತ್ರಯದಲ್ಲಿ ಪ್ರಾಪ್ತ್ಯ ಸ್ವರೂಪ ನಿರೂಪಣೆ.

ಇಪ್ರಾಪ್ತಾ ವಿನುಡೈಯ ಸ್ವರೂಪಂ – ಈ ಪ್ರಾಪ್ತನಾದ ಜೀವನಸ್ವರೂಪವನ್ನು, ಪ್ರಣವನಮಸ್ಸುಗಳಲ್ಲಿರುವ ಮಕಾರಗಳಲ್ಲಿಯೂ 'ನಾರ' ಶಬ್ದಗಳಲ್ಲಿಯೂ, 'ಪ್ರಪದ್ಯೇ' ಎಂಬ ಧಾತುವಿನ, ಉತ್ತಮ ಪುರುಷದಲ್ಲಿಯೂ, ವ್ರಜ" ಎಂಬಲ್ಲಿರುವ ಮಧ್ಯಮ ಪುರುಷನಲ್ಲಿಯೂ 'ತ್ವಾ', ಎಂಬ ಪದದಲ್ಲಿಯೂ, 'ಮಾ ಶುಚಃ' ಎಂಬ ವಾಕ್ಯದಲ್ಲಿಯೂ (ರಹಸ್ಯ ತ್ರಯಗಳಲ್ಲಿ) ಅನುಸಂಧಿಸಬೇಕು ಆದಾಗಿ ಪ್ರಣವದಲ್ಲಿರುವ ಮಕಾರದಲ್ಲಿ ಜ್ಞಾನತ್ವಾನಂದತ್ವಾಣುತ್ವಗಳೂ ಶೇಷತ್ವವೂ ಅನುಸಂಧೇಯ. ನಮಸ್ಸಿನ ಮಕಾರದಲ್ಲಿ ಪಾರತಂತ್ರ್ಯವೂ, ತನಗೆ ಅಸಾಧಾರಣವಾದ ಪ್ರಕೃತಿ ಸಂಬಂಧ ರೂಪ ವಿರೋಧಿ ಆದಾದ ಕರ್ಮದಿಂದ ಕೂಡಿರುವುದೂ ಅನುಸಂಧೇಯ. ನಾರ ಶಬ್ದದಲ್ಲಿ ನಿತ್ಯತ್ವ, ಬಹುತ್ವಾದಿಗಳು ಅನುಸಂಧೇಯ ದ್ವಯ ಮಂತ್ರದಲ್ಲಿರುವ 'ನಾರ' ಶಬ್ದಗಳಲ್ಲಿ ಸಾಧಾರಣಾಕಾರವೂ, ಉತ್ತಮ ಪುರುಷದಲ್ಲಿ ಅಸಾಧಾರಣಾಕಾರವೂ ಅನುಸಂಧೇಯ. ಚರಮ ಶ್ಲೋಕದಲ್ಲಿ ವ್ರಜ, ತ್ವಾ, ಮಾಶುಚಃ ಎಂಬಲ್ಲಿಯ ಮಧ್ಯಮ ಪುರುಷದಲ್ಲಿ ಅಸಾಧಾರಣ ಧರ್ಮವನ್ನು ಶಾಬ್ದವಾಗಿಯೂ ಅನುಸಂಧಾನ ಮಾಡಬೇಕು.

ಉಪಾಯ ಫಲ ಸ್ವರೂಪ : ಪ್ರಾಪ್ತ್ಯುಪಾಯಮುಮ್ ಇತ್ಯಾದಿ – ಭಗವಂತನನ್ನು ಹೊಂದಿಸುವ ಉಪಾಯವನ್ನೂ, ಇದರ ಪರಿಕರ (ಅಂಗ)ಗಳನ್ನೂ, ಫಲ ಸ್ವರೂಪವೇನೆಂಬುದನ್ನೂ ಮುಂದೆ ಪ್ರಾಪ್ತ ಸ್ಥಲಗಳಲ್ಲಿ ವಿಸ್ತಾರವಾಗಿ ಆಚಾರ್ಯರು ನಿರೂಪಿಸುತ್ತಾರೆ.

ರಹಸ್ಯತ್ತಿಲ್ ಅನುಸಂಧಾನ ಸ್ಥಲಮ್ – ಇವತ್ತಿಲ್ ಉಪಾಯಂ – ಇವುಗಳಲ್ಲಿ ಉಪಾಯವು, ತಿರುಮಂತ್ರದಲ್ಲಿ ನಮಸ್ಸಿನಲ್ಲಿಯೂ, ಅಯನ ಶಬ್ದದಲ್ಲಿಯೂ, ದ್ವಯಮಂತ್ರದ ಪೂರ್ವಾರ್ಧದಲ್ಲಿಯೂ, ಅನುಸಂಧಾನ ಮಾಡಲ್ಪಡಬೇಕು. ಫಲಸ್ವರೂಪವು ಚತುರ್ಥ್ಯಂತ ಪದಗಳಲ್ಲಿಯೂ, ದ್ವಯಮಂತ್ರದ 'ನಮಃ' ಎಂಬ ಶಬ್ದದಲ್ಲಿಯೂ, 'ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ' ಎಂಬಲ್ಲಿಯೂ ಅನುಸಂಧೇಯವು. ಪ್ರಣವ, ನಮಸ್ಸು, ಪ್ರಪದ್ಯೇ, ಶರಣಂವ್ರಜ, ಎಂಬ ಸ್ಥಳಗಳಲ್ಲಿ ಸಾಧ್ಯೋಪಾಯವು ಶಿಕ್ಷಿತ. ಹಾಗೆಯೇ ಚತುರ್ಥ್ಯಂತ ಪದಗಳಲ್ಲಿ ಅಂದರೆ– ಅಷ್ಟಾಕ್ಷರ ದ್ವಯಮಂತ್ರಗಳಲ್ಲಿರುವ ನಾರಾಯಣ ಶಬ್ದದ ಮೇಲೆ ಬಂದಿರುವ 'ಆಯ' ಎಂಬ ಚತುರ್ಥಿಯು, ತಾದರ್ಥ್ಯವನ್ನು

ತೇ ಸಾಧ್ಯಾಃ ಸ್ಸಂತಿ ದೇವಾ ಜನನಿ ಗುಣವಪುರ್ವೇಷ ವೃತ್ತಸ್ವರೂಪೈಃ ।
ಭೋಗೈಸ್ಸಾಮ್ಯಂ ನಿರ್ವಿಶೇಷಾಃ ಸಮದಧಸ ಇವಯೋನಿತ್ಯ ನಿರ್ದೋಷಗಂಧಾಃ
ಹೇ ಶ್ರೀ ಶ್ರೀರಂಗ ಭರ್ತುಸ್ತ್ವವಚ ಪದಪರಿಚಾರವೃತ್ತ್ಯೈ ಸದಾತ್ತಾಃ ॥
ಪ್ರೇಮ ಪ್ರದ್ರಾಣ ಭಾವಾ ವಿಲ ಹೃದಯ ಹರಾತ್ಕಾರಕೈಂಕರ್ಯ ಭೋಗಾಃ ॥

(1) ಎಲೌ ಮಾತೆಯೇ ! ಯತ್ರ ಪೂರ್ವೇ ಸಾಧ್ಯಾಸ್ಸಂತಿದೇವಾ – ಎಂಬ ಶ್ರುತಿ ವಚನಕ್ಕೆ ಅನುಗುಣವಾಗಿ, ವೈಕುಂಠದಲ್ಲಿ ಸಾಧ್ಯ ದೇವರೆಂದು ನಿತ್ಯಾತ್ಮರು ಇರುತ್ತಾರೆ. ಅವರು ಗುಣ, ಶರೀರ, ವೇಷ, ನಡತೆ, ಭೋಗಾನುಭವಗಳಲ್ಲಿ ಸಮಾನರು, ನಿತ್ಯ, ನಿರ್ದೋಷ ಗಂಧರು. ದೋಷ ಗಂಧವು ಎಂದಿಗೂ

ಪು ತಿ ನೋ

ಭಗವನ್ನಿಗ್ರಹ ಜನಿತಾವಸ್ಥಾ ಃ–

ಇದು ಕ್ಷೇತ್ರಜ್ಞರ್ಕ್ಕು (1) ಜ್ಞಾನ ಸಙ್ಕೋಚ ಕರವಾನ ತ್ರಿಗುಣಾತ್ಮಕ ಪ್ರಕೃತಿ ಸಂಸರ್ಗವಿಶೇಷತ್ತೈ ಯುಂಡಾಕ್ಕಿ ಯುಂವರ್, (2 ಪ್ರಕೃತಿಪರಿಣಾಮ ವಿಶೇಷಙ್ಗಳಾನ ಶರೀರೇಂದ್ರಿಯಾದಿಹಳೋಡೇ ತುವಕ್ಕಿ, (1)"ತಿಣ್ಣ ಮುನ್ದಕ್ಕಟ್ಟಿ ಪ್ಪಲಶೆಯ್ ವಿನ್ನೈ ವನ್ ಕಯಿ ಟ್ರಾಲ ಪುಣ್ಣೈ ಮರಿಯು ಪರಿನ್ದೆನ್ನೈ ಪ್ಪೋರ ವೈತ್ತಾಯ್ ಪುರಮೇ" ಎನ್ನುಂ (ii) ಅನ್ನಾಳ್ ನೀತನ್ದ ಆಕ್ಕೈಯಿನ್ ವಳಿಯುಳ್ ವೇನ್" ಎನ್ನುಂ ಶೊಲ್ಲುಹಿರ ಪಡಿಯೇ ದೇಹೇಂದ್ರಿಯಾದಿ ಪರತನ್ತ್ರನಾಕ್ಕಿಯುಂವರ್; (3)ಅವ್ವವಸ್ಥೈಯಿಲುವರ್ ಶಾಸ್ತ್ರವಶ್ಯತೈಕೂಡಾದ ತಿರ್ಯಗಾದಿ ಪಕ್ಷೈಹಳಿಲೇ ನಿರುತ್ತಿಯುಂವರ್; [4] ಶಾಸ್ತ್ರಯೋಗ್ಯಙ್ಗಳಾನ ಮನುಷ್ಯಾದಿ ಜನ್ಮಙ್ಗಳಿಲ್ ಬಾಹ್ಯಕುದೃಷ್ಟಿ ಮತಙ್ಗಳಾಲೇ ಕಲಕ್ಕಿಯುಂವರ್ [5] ಅವಟ್ರಿಲ್ ಇ ಯಾದವರ್‌ಹಳೈಯುಂ ಮುಳ್‌ಪಡ (ii)" ಗವತ್ಸ್ವರೂಪ ತಿರೋಧಾನಕರೀಂ ವಿಪರೀತ ಜ್ಞಾನ ಜನನೀಂ

ಅಂದರೆ ಭಗವಂತನ ಪ್ರಯೋಜನಕ್ಕಾಗಿ, ಎಂಬ ಅರ್ಥವನ್ನು ತಿಳಿಸಿ ಫಲಸ್ವರೂಪವನ್ನು ತಿಳಿಸುತ್ತದೆ ಹಾಗೆಯೇ ದ್ವಯ ಮಂತ್ರದಲ್ಲಿ ಉತ್ತರ ಖಂಡದಲ್ಲಿ 'ನಮಃ' ಎಂಬ ಶಬ್ದವು ನಮ ಎಂದು ಪದ ವಿಭಾಗ ಮಾಡಲ್ಪಟ್ಟು, ಅನಿಷ್ಟ ನಿವೃತ್ತಿ ರೂಪಫಲವನ್ನು ತಿಳಿಸುತ್ತದೆ ಅನಿಷ್ಟ ನಿವೃತ್ತಿ ಪೂರ್ವಕ ಇಷ್ಟ ಪ್ರಾಪ್ತಿಯೆಂಬುದು ಫಲ ಇವುಗಳಲ್ಲಿ ಚತುರ್ಥಿಗಳಲ್ಲಿ ಇಷ್ಟ ಪ್ರಾಪ್ತ್ಯಂಶವೂ, ನಮಃ, ಮೋಕ್ಷಯಿಷ್ಯಾಮಿ ಎಂಬಲ್ಲಿ ಅನಿಷ್ಟ ನಿವೃತ್ತ್ಯಂಶವೂ, ತಿಳಿಸಲ್ಪಡುತ್ತದೆ ಎಂಬುದು ಆಚಾರ್ಯರ ಹೃದಯ

ಪ್ರಾಪ್ತಿ ವಿರೋಧಿ :

ಪ್ರಾಪ್ತಿ ವಿರೋಧಿಯಾವದು ಇತ್ಯಾದಿ– ಭಗವತ್ಪ್ರಾಪ್ತಿಗೆ ವಿರೋಧಿ ಯಾವುದೆಂದರೆ, ಅವಿದ್ಯಾ ಕರ್ಮ ವಾಸನಾದಿರೂಪವಾದ ಮೋಕ್ಷ ಪ್ರತಿಬಂಧಕವರ್ಗ ಅವಿದ್ಯೆಯೆಂದರೆ" ಅನಾತ್ಮನ್ಯಾತ್ಮ ಬುದ್ಧಿ ರ್ಯಾ, ಅಸ್ವೇಸ್ವಮಿತಿ ಯಾಮತಿಃ, ಎಂಬಂತೆ ದೇಹವೇ ಆತ್ಮ ಎಂಬುದೂ, ಭಗವಂತನಿಗೆ ಅಧೀನವಾದ "ಆತ್ಮ'ವನ್ನು, ಸ್ವತಂತ್ರನೆಂದು ತಿಳಿಯುವುದೂ, ಅದಾಗಿ ದೇಹಾತ್ಮಭ್ರಮ ಮತ್ತು ಸ್ವತಂತ್ರಾತ್ಮಭ್ರಮ **ಕರ್ಮ** – ಪುಣ್ಯಪಾಪರೂಪ ಕರ್ಮ **ವಾಸನಾ**- ಅವಿದ್ಯೆಯ ಮತ್ತು ಕರ್ಮದ ಸಂಸ್ಕಾರ **ಆದಿ** ಶಬ್ದದಿಂದ ರುಚಿ ಅನ್ನ, ತನ್ಮೂಲಕ ಪ್ರಕೃತಿ ಸಂಬಂಧಗಳು ವಿವಕ್ಷಿತಗಳು **ಇವುಗಳಲ್ಲಿ** ಪ್ರಧಾನವಾದದ್ದು. ಅನಾದಿಯಾಗಿ ಸಂತನ್ಯವಾದ ಭಗವದಾಜ್ಞಾತಿ ಲಂಘನದಿಂದ ಉಂಟಾದ ಭಗವನ್ನಿಗ್ರಹ ಭಗವದಾಜ್ಞಾ ಶ್ರುತಿಸ್ಮೃತಿಗಳು. ಅತಿಲಂಘನ-ಶ್ರುತಿಸ್ಮೃತಿ ಚೋದಿತವಾದ ಕರ್ಮಗಳನ್ನು ಮಾಡದೇ ಇರುವುದೂ ಮಾಡಕೂಡದ ಕಾರ್ಯಗಳನ್ನು ಮಾಡುವುದು. ಅದಾಗಿ ಅಕೃತ್ಯ ಕರಣ, ಕೃತ್ಯಾಕರಣ ಇದಕ್ಕೆ ಕಾರಣ ಪೂರ್ವಪೂರ್ವ ಪುಣ್ಯಪಾಪ ರೂಪ ಕರ್ಮಗಳ ಬೀಜಾಂಕುರನ್ಯಾಯದಿಂದ ಸಂತನ್ಯವಾಗಿ–ಒಂದರ ಮೇಲೊಂದು ಪರಂಪರೆಯಾಗಿ ಉಂಟಾಗ ವುವು ಈ ಭಗವನ್ನಿಗ್ರಹವು ಕ್ಷೇತ್ರಜ್ಞರಿಗ-ಬದ್ಧ ಜೀವನಿಗೆ ಜ್ಞಾನಸಂಕೋಚ ವನ್ನುಂಟು ಮಾಡುವ ಸತ್ವರಜಸ್ತಮೋರೂಪಗುಣಾತ್ಮಕವಾದ ಪ್ರಕೃತಿಯೊಡನೆ **ಸಂಸರ್ಗ** - ಕೂಡಿಯಿರುವಿಕೆ ಯನ್ನುಂಟುಮಾಡುತ್ತದೆ ಇದು ನಿತ್ಯ ಮುಕ್ತರಿಗಿಲ್ಲದ ಬದ್ಧ ಜೀವಿಗ ವಿಶೇಷವಾದದ್ದು ಭಗವನ್ನಿಗ್ರಹರೂಪವಾದ ಈ ಪ್ರಕೃತಿಸಂಸರ್ಗವು ಪ್ರಳಯದಶೆಯಲ್ಲಿ ಅತ್ಯಂತ ಜ್ಞಾನ ಸಂಕೋಚವನ್ನುಂಟು ಮಾಡಿ ಈ ಬದ್ಧ ಜೀವಿಗ ಅಚೇತನಕ್ಕೆ ಸದೃಶವಾದ ದಶೆಯನ್ನುಂಟು ಮಾಡುತ್ತದೆ **ಅನಂತರ** ಭಗವಂತನ ಕೃಪಾಮೂಲವಾದ ಸೃಷ್ಟಿ ದಶೆಯಲ್ಲಿ ಪ್ರಕೃತಿಪರಿಣಾಮವಾದ ಶರೀರೇಂದ್ರಿಯ ಗಳೊಡನೆ ದೃಢವಾಗಿ ಕಟ್ಟಿ (**ತುವಕ್ಕಿ**), 1) **ತಿಣ್ಣಮು**ಮ್ಮಂದ **ಕ್ಕಟ್ಟಿ** ಎಂಬಂತೆಯೂ **2) ಅನ್ನಾಳ್ ನೀ ತಂದ** ಎಂದು ಹೇಳಲ್ಪಡುವ ರೀತಿಯಲ್ಲಿಯೂ ದೇಹೇಂದ್ರಿಯಾದಿಪರತಂತ್ರನನ್ನಾಗಿ ಮಾಡುತ್ತದೆ, ಇದರಿಂದ ಜ್ಞಾನ ಸಂಕೋಚಕರವಾದ ಪ್ರಕೃತಿಸಂಬಂಧವು ಸೃಷ್ಟಿ ಕಾಲದಲ್ಲಿಯೂ ಇವನನ್ನು ಬಿಟ್ಟಿರಲಾರದು, ಎಂಬುದು ತಿಳಿಸಲ್ಪಡುತ್ತದೆ

ಇಲ್ಲದವರು ಸಮಾನವಯಸ್ಕರು ಇವರು ಪ್ರೀತಿಯಿಂದ ದ್ರವೀಭೂತ ಹೃದಯರು ದಿವ್ಯ ದಂಪತಿಗಳ ಪಾದ ಪದ್ಮಗಳಲ್ಲಿ ಸದಾ ಕೈಂಕರ್ಯ ಮಾಡುವವರು ಅದೇ ಇವರಿಗೆ ಭೋಗ

1) ಕಣ್ಣಪಿರಾನ್ನೈ ವಿಣ್ಣೋರ್ ಕರುಮಾಣಿಕ್ಕತ್ತೈ ಅಮುದ್ದೈ |
ನಣ್ಣಿಯುಂ ನಣ್ಣಹಿಲ್ಲೇನ್ ನಡುವೇಯೋರ್ ಉಡಂಬಿಲಿಟ್ಟು
ತಿಣ್ಣಮಳ್ಳುಂದಕ್ಕಟ್ಟಿಪಲಶೆಯ್ ವಿನ್ನವನ್ ಕಯಿ ಟ್ರಾಲ್
ಪುಣ್ಣೈಮರ್ಯೈಯುಪರಿಂದು ವಿನ್ನೈಪ್ಪೋರವೈತ್ತಾಯ್ ಪುರಮೇ ॥ ತಿರುವಾಯ್‌ಮೊಳಿ 5-1-5

ಸ್ವವಿಷಯಯಾಯಾಶ್ಚ ಭೋಗ್ಯ ಬುದ್ಧೇರ್ಜನನೀಂ," ಎನ್‌ಹಿರಪಡಿಯೇ ಇವಮ್ಮೂಲ ಪ್ರಕೃತಿ ಮುದಲಾನ ಮೋಹನ ಪಿಂಛಿ ತನ್ನಾಲೇ ತತ್ತ್ವಾಜ್ಞಾನ ವಿಪರೀತ ಜ್ಞಾನ ವಿಷಯ ಪ್ರಾವಣ್ಯಙ್ಗಳೈ ಪ್ಪಣ್ಣಿಯುಮ್;

6. ಇನ್ನೈಯುಡಿಯಾಹ (IV) "ಅವಿತಿಹೈಕ್ಕುಐವರ್ ಕುಮೈಕ್ಕುಂ ಶಿತ್ತಿನ್ನವುಮ್ ಪಾವಿಯೇನೈಪ್ಪಲನೀಕಾಟ್ಟಿ ಪ್ಪಡುಪ್ಪಾಯೋ ।" ಎನ್‌ಹಿರಪಡಿಯೇ ಸುಖಲವಾರ್ಥ ಮಾನ ಅಕೃತ್ಯಕರಣಾದಿ ರೂಪಮಾನವಾಜ್ಞಾತಿ ಲಂಘನತ್ತೈಪ್ಪಣ್ಣುವಿತ್ತುಮ್ :-

---

ಮೇಲೂ ಕೃಪಾಕಾರ್ಯವಾದ ಈ ಸೃಷ್ಟ್ಯವಸ್ಥೆಯಲ್ಲಿ ಈ ಬದ್ಧಜೀವಿಗೆ ಅಚಿತ್ತಿಗೆ ಸಮನಾದ ದಶಯು ಕಳೆದರೂ ಈ ಭಗವನ್ನಿಗ್ರಹವು ದೇಹೇಂದ್ರಿಯಗಳ ಪಾರವಶ್ಯತೆಯಿಂದ ವಿಷಯ ಪ್ರಾವಣ್ಯತೆಯನ್ನುಂಟುಮಾಡಿ ಭಗವತ್ಪ್ರಾಪ್ತಿಗೆ ತಡೆಯನ್ನುಂಟು ಮಾಡುತ್ತದೆ ಹೇಗೆಂದರೆ ಈ ದೇಹೇಂದ್ರಿಯ ಸಂಬಂಧವು, ಶಾಸ್ತ್ರವಶ್ಯತೆ ಕೂಡದ ತಿರ್ಯಕ್ ಜಂತುಗಳ [ಪ್ರಾಣಿಗಳ] ದಶೆಯಲ್ಲಿರಿಸಿ, ಜ್ಞಾನವನ್ನು ಸಂಪಾದಿಸಲಶಕ್ಯತೆಯನ್ನುಂಟು ಮಾಡಿ, ಬಂಧಕವಾಗುತ್ತದೆ ಹಾಗೆಯೇ ಶಾಸ್ತ್ರವಶ್ಯತೆಗೆ ಯೋಗ್ಯವಾದ ಮನುಷ್ಯಾದಿ ಜನ್ಮಗಳಲ್ಲಿ (ಆದಿ ಶಬ್ದವು ರಾಕ್ಷಸ ಜನ್ಮವನ್ನು ಸೂಚಿಸುತ್ತದೆ] ಹುಟ್ಟಿಸಿಯೂ, ವೇದಬಾಹ್ಯವಾದ, ಸಾಂಖ್ಯ, ಬೌದ್ಧ, ಜೈನ, ಚಾರ್ವಾಕ, ಪಾಶುಪತಾದಿ ಮತಗಳಿಂದಲೂ, ವೇದವನ್ನು ಪ್ರಮಾಣವಾಗಿ ಅಂಗೀಕರಿಸಿದ ಕುದೃಷ್ಟಿ ಅಂದರ ಅದ್ವೈತ ಮತದಿಂದಲೂ ಇವನ ಬುದ್ಧಿಯನ್ನು ಕಲಗಿಸಿ ಬಂಧಕವಾಗುತ್ತದೆ

ಹೀಗೆ ಬಾಹ್ಯಕುದೃಷ್ಟಿಮತಗಳಲ್ಲಿ ಪ್ರವೇಶಿಸಿದವರನ್ನೂ ಪ್ರವೇಶಿಸದೆ ಇರುವವರನ್ನೂ iii] **ಭಗವತ್ಸ್ವರೂಪ ತಿರೋಧಾನಕರೀಂ** ಇತ್ಯಾದಿ ಹೇಳಲ್ಪಟ್ಟರೀತಿಯಲ್ಲಿ, ತ್ರಿಗುಣಾತ್ಮಕವಾದ ಮೂಲ ಪ್ರಕೃತಿ, ಮಹದಹಂಕಾರ ಶರೀರಾಂತ ಪರಿಗ್ರಹರೂಪವಾದ ಮೋಹನಪಿಂಛಿಕೆ (ಇಂದ್ರಜಾಲಕರು ಇತರರನ್ನು ಮೋಹಿಸಲು ಕೈಯ್ಯಲ್ಲಿ ಹಿಡಿದಿರುವ ನವಿಲುಗರಿ) ಯಿಂದ, ತತ್ತ್ವವನ್ನು ತಿಳಿಯದೆ, ವಿಪರೀತ ಜ್ಞಾನವನ್ನುಂಟುಮಾಡಿಯೂ, **ಶಬ್ದಾದಿ** ಪ್ರಾಕೃತವಿಷಯಸುಖಗಳಲ್ಲಿ ಪ್ರಾವಣ್ಯತೆ [ಅಂದರೆ ಪ್ರಾಕೃತಸುಖಗಳನ್ನು ಅನುಭವಿಸದೆ ಕ್ಷಣಕಾಲವೂ ಇರಲಾಗದದವೆ] ಯನ್ನುಂಟು ಮಾಡಿಯೂ ಬಂಧಕವಾಗುತ್ತವೆ ಈ ಪ್ರಾಕೃತ ಸುಖಾನುಭವವು vi] **ಅವಿತಿಹೈಕ್ಕ** ಇತ್ಯಾದಿ ರೀತಿಯಲ್ಲಿ ಅತ್ಯಲ್ಪಸುಖ ಪ್ರಯೋಜನವಾದ ಅಕೃತ್ಯಕರಣ, ಕೃತ್ಯಾಕರಣರೂಪವಾದ ಭಗವದಾಜ್ಞಾತಿಲಂಘನ ವನ್ನುಂಟುಮಾಡುತ್ತದೆ.

ನಿತ್ಯಸೂರಿಗಳಿಗೆ ನೀಲಮಣಿಯಂತೆ ಅನುಭಾವ್ಯನೂ, ಅಮೃತಸ್ವರೂಪನೂ ಆದ ಕೃಷ್ಣ ಪರಮಾತ್ಮನನ್ನು ಸಮೀಪಿಸಿಯೂ, ಅನುಭವಿಸಲಾಗದ ರೀತಿಯಲಿದ್ದೇನೆ ಕಾರಣವೆ ನಂದರೆ ನನ್ನ ನಿನ್ನ ಮಧ್ಯೆ ಒಂದು ಶರೀರದಲ್ಲಿಟ್ಟು ಬಲಿಷ್ಠವಾದ ನಾನು ಮಾಡಿದ ಪುಣ್ಯಪಾಪ ರೂಪ ಈ ಕರ್ಮಗಳೆಂಬ ಹಗ್ಗದಿಂದ ಧೃಢವಾಗಿ ಕಟ್ಟಿ ಹೇಯವಾದ ಹುಣ್ಣುಗಳನ್ನು ಚರ್ಮದಿಂದ ಮರೆಸಿ, ನನ್ನನ್ನು ಬಿಟ್ಟು ಇತರ ವಿಷಯಗಳಲ್ಲಿ ವ್ಯಾಪರಿಸಿರುವಂತೆ ಮಾಡಿರುತ್ತೀಯೆ

2) ಉ ಮುನ್ನೀರ್ ಜ್ಞಾಲಮ್ ಪಡೈತ್ತ ಎಮ್ಮುಹಿಲ್‌ವಣ್ಣನೇ
ಅನ್ನಾಳ್ ನೀ ತಂದ ವ್ಯಾಕ್ಕೈ, ಯಿನ್ ವೞಿ ಉೞನ್ಱೇನ್ ॥
ವೆನ್ನಾಳ್ ನೋಯ್ ವೀಯ ವಿನೈಹಳೈ ವೇರಱಪ್ಪಾಱ್ಱಿ
ಎನ್ನಾಳ್ ಯಾನ್ ಉನ್ನೈ, ಇನಿವಂದು ಕೂಡುವನೇ ॥ ತಿರುವಾಯ್ (3-2-1)

ಪ್ರಪಂಚವನ್ನು ಸೃಷ್ಟಿಸಿದ ನೀಲ ಮೇಘಶ್ಯಾಮಳನೇ, ಸೃಷ್ಟಿಕಾಲದಲ್ಲಿ ನೀನು ಕೊಟ್ಟ ಶರೀರೇಂದ್ರಿಯಗಳ ಹಿಡಿದುಕೊಂಡು ಹೋಗುವ ದಾರಿಯಲ್ಲೇ ಹೋಗುತ್ತಿದ್ದೇನ ಈ ಸಂಸಾರ ವ್ಯಾಧಿಗೆ ಕಾರಣವಾದ ಪಾಪಗಳನ್ನು ಸವಾಸನವಾಗಿ ನಾಶಮಾಡಿ ನಿನ್ನ ಪಾದ ಪದ್ಮಗಳನ್ನು ನಾನು ಯಾವತ್ತಿಗೆ ಸೇರುವೆನೋ ?

(III) ಮದೀಯಾನಾದಿಕರ್ಮ ಪ್ರವಾಹ ಪ್ರವೃತ್ತಾಂ, ಭಗವತ್ಸ್ವರೂಪತಿರೋಧಾನಕರೀಂ, ವಿಪರೀತಜ್ಞಾನ ಜನನೀಂ, ಸ್ವವಿಷಯಾಯಾಶ ಭೋಗ್ಯಬುದ್ಧೇರ್ಜನನೀಂ ದೇಹೇಂದ್ರಿಯತ್ವೇನ, ಭೋಗ್ಯತ್ವೇನ, ಸೂಕ್ಷ್ಮರೂಪೇಣಚಾವಸ್ಥಿತಾಂ ದೈವೀಂ ಗುಣಮಯೀಂ ಮಾಯಾಂ ದಾಸಭೂತ: ಶರಣಾಗತೋಽಸ್ಮಿ ತವಾಸ್ಮಿದಾಸ ಇತಿವಕ್ತಾರಂ ಮಾಂ ತಾರಯ (ಶರಣಾಗತಿಗದ್ಯ) ನನ್ನ ಅನಾದಿಕರ್ಮ ಪ್ರವಾಹದಿಂದ ಉಂಟಾದ ಸತ್ತ್ವಾದಿ ಗುಣಮಯೀ ರೂಪವಾದ ಪ್ರಕೃತಿಸಂಬಂಧವು, ಭಗವಂತನ ಸ್ವರೂಪವನ್ನು ಮರೆಸಿ, ವಿಪರೀತಜ್ಞಾನವನ್ನುಂಟು ಮಾಡಿ ಪ್ರಾಕೃತವಿಷಯಾನುಭವಗಳಲ್ಲಿ ಭೋಗ್ಯ ಬುದ್ಧಿಯನ್ನುಂಟು ಮಾಡುತ್ತದೆ ಇದು ದೇಹೇಂದ್ರಿಯ ರೂಪವಾಗಿಯೂ, ಭೋಗ್ಯವಾಗಿಯೂ ಸೂಕ್ಷ್ಮರೂಪವಾಗಿಯೂ ಇದೆ ನಿನಗೆ ದಾಸನಾಗಿ ಶರಣಾಗತನಾದ ನನ್ನ ಇದರಿಂದ ಕಾಪಾಡು

(iv) ಅವಿತಿಹೈಕ್ಕ ಐವರ್‌ಕುಮೈಕ್ಕುಂ ಶಿಟ್ರಿನ್ನವುಮ್,
ಪಾವಿಯೇನೈ ಪ್ಪಲನೀಕಾಟ್ಟಿ ಪ್ಪಡುಪ್ಪಾಯೋ ।

7) (ಇ) "ಪಾಪಃ ಪ್ರಜ್ಞಾಂ ನಾಶಯತಿ ಕ್ರಿಯಮಾಣಂ ಪುನಃ ಪುನಃ ನಷ್ಟಪ್ರಜ್ಞಃ ಪಾಪಮೇವ ಪುನರಾರಭತೇ ನರಃ॥"ಎನ್‌ಹಿರಪಡಿಯೇ ಪೋನ್ ಅಪರಾಧ ಪರಂಪರೈಹಳಿಲೇ ಮೂಟ್ಟೆಯುಮ್ 8.ಅದಿನ್ ಫಲಮಾಹ (ಈ)"ಕ್ಷಿಪಾಮ್ಯಜಸ್ರಂ"ಇತ್ಯಾದಿಹಳಿಲ್ ಪಡಿಯೇ ಗರ್ಭಜನ್ಮ ಜರಾಮರಣ ನರಕಾದಿ ಚಕ್ರ ಪರಿವೃತ್ತಿಯಿಲೇ ಪರಿಭ್ರಮಿಪ್ಪಿತ್ತುಮ್; 9 ಕ್ಷುದ್ರ ಸುಖಾದಿಹಳುಕ್ಕು ಸಾಧನಮಾನ ರಾಜಸತಾಮಸ ಶಾಸ್ತ್ರಙ್ಗಳೈಕ್ಕೊಂಡು (ಉ)"ಯಕ್ಷರಕ್ಷಾಂಸಿ ರಾಜಸಾಃ। ಪ್ರೇತಾನ್ ಭೂತ ಗಣಾಂಶ್ಚಾನ್ಯೇ ಯಜನ್ತೇತಾಮಸಾ ಜನಾಃ॥" ಎನ್‌ಹಿರ ಪಡಿಯೇ ತನ್ನೋಡೊಕ್ಕ ವೃಕ್ಷಹು ಶಕ್ತಿಲಿಯಲೇ ಕಟ್ಟುಂಡುಕಿಡಕ್ಕುಹಿರ ಕ್ಷೇತ್ರಜ್ಞರ್ ಕಾಲಿಲೇ ವಿೞಪ್ಪಣ್ಣಿಯುಮ್, 10) ಅವರ್‌ಹಳ್ ಕೊಡುತ್ತ ಜುಗುಪ್ಸಾವಹ ಕ್ಷುದ್ರ ಪುರುಷಾರ್ಥಙ್ಗಳಾಲೇ ಕ್ರಿಮಿಹಳೈಪ್ಪೋಲೇ ಕೃತ ರ್ತರಾಹ ಮಯಕ್ಕಿಯುಮ್;

(ಇ) **ಪಾಪಃ ಪ್ರಜ್ಞಾಂ ನಾಶಯತಿ**, ಎಂಬ ಹೇಳುವ ರೀತಿಯಲ್ಲಿ **ಮೇಲೆ** ಮೇಲೆ ಪಾಪವು (ಭಗವನ್ನಿಗ್ರಹವು) ವಿವೇಕ ಜ್ಞಾನವನ್ನು ಹಾಳುಮಾಡಿ, ಅವಿವೇಕವನ್ನು ಕೊಟ್ಟು, ಆ ಅವಿವೇಕದ ಮೂಲವಾಗಿ ಅಪರಾಧ ಪರಂಪರೆಗಳಲ್ಲಿ ತೊಡಗಿಸುತ್ತದೆ. ಅದರ ಫಲವಾಗಿ ಈ) **'ಕ್ಷಿಪಾಮ್ಯಜಸ್ರಮ್'** ಎಂಬ ಮೊದಲಾದ ರೀತಿಯಲ್ಲಿ ಗರ್ಭ ಜನ್ಮ, ಜರಾ, ಮರಣ ನರಕಾದಿಗಳಲ್ಲಿ ಚಕ್ರದಹಾಗೆ ಸುತ್ತಿ ಸುತ್ತಿ ಪರಿಭ್ರಮಿಸುವಂತೆ ಮಾಡುತ್ತದೆ **ಚಕ್ರಪರಿವೃತ್ತಿ**–ಚಕ್ರದ ಸುತ್ತುವಿಕೆ. "ಕ್ಷಿಪಾಮ್ಯಜಸ್ರಮ್", "ಆಸುರೀಂಯೋನಿ ಮಾಪನ್ನಾ" ಎಂಬ ಮುಂದಿನ ಶ್ಲೋಕದಲ್ಲಿರುವ "ಮಾಮಪ್ರಾಪ್ಯೈವ" – (ನನ್ನನ್ನು ಹೊಂದದೇನೆ) ಎಂಬಲ್ಲಿಯ 'ಏವಕಾರದಿಂದ' ಇಂಥವರು ನಿತ್ಯ ಸಂಸಾರಿಗಳಾಗಿಯೂ ನಿತ್ಯನಾರಕಿಗಳಾಗಿಯೂ ಇರುವರೆಂಬ ಪಕ್ಷವನ್ನು ಕೆಲವರು ಆದರಿಸುತ್ತಾರೆ ಆದರೆ ರಾಮಾನುಜ ಮತೀಯರು ಇದನ್ನು ಒಪ್ಪುವುದಿಲ್ಲ. 'ಮಾಮಪ್ರಾಪ್ಯೈವ' ಎಂಬಲ್ಲಿಯ "ಏವ"ಕಾರವನ್ನು ಅಧಮಾಂ, ಎಂಬಲ್ಲಿ ಸೇರಿಸಿ, "ಅಧಮಾಮೇವಗತಿಂ ಯಾಂತಿ", ಬಹಳ ನೀಚವಾದ ಗತಿಯನ್ನು ಹೊಂದುತ್ತಾರೆಂದು ಭಗವದ್ರಾಮಾನುಜ ಭಾಷ್ಯ ಇದರಿಂದ ನಿಸ್ತಾರವು ಬಹಳ ದುಸ್ತರವೆಂಬುದರಲ್ಲಿ ಮಾತ್ರ ತಾತ್ಪರ್ಯ. ಬಹಳ ಬಹಳ ಕಾಲದನಂತರ ಇವರುಗಳಿಗೂ ಸಂಸಾರ ನಿಸ್ತಾರಕ್ಕೆ ಮಾರ್ಗವುಂಟು, ಎಂಬುದು ಆಚಾರ್ಯರ ಶ್ರೀಸೂಕ್ತ್ಯಂತರಗಳಲ್ಲಿ ನಿರೂಪಿಸಲ್ಪಟ್ಟಿದೆ. ಹೀಗೆ ವೇದದಲ್ಲಿ ವಿಶ್ವಾಸವಿಲ್ಲದ ನಾಸ್ತಿಕರ ಗತಿಯನ್ನು ನಿರೂಪಿಸಿ, ಈ ಪ್ರಕೃತಿ ಸಂಬಂಧವು, ವೇದಗಳಲ್ಲಿ ವಿಶ್ವಾಸವುಳ್ಳವರಿಗೂ ಕ್ಷುದ್ರ ಸುಖಗಳಲ್ಲಿ ಆಸೆಯಿಂದ, ದೇವತಾಂತರಗಳ ಭಜನಾದಿಗಳಲ್ಲಿ ಆಸಕ್ತಿಯನ್ನುಂಟುಮಾಡಿ, ಭಗವತ್ಪ್ರಾಪ್ತಿಗೆ ವಿರೋಧವನ್ನುಂಟುಮಾಡುತ್ತದೆ, ಎಂದು **"ಕ್ಷುದ್ರ ಸುಖಾದಿ ಹಳಕ್ಕು ಸಾಧನಮಾನ"** ಎಂಬ ವಾಕ್ಯದಿಂದ ಆಚಾರ್ಯರು ನಿರೂಪಿಸುತ್ತಾರೆ ಕ್ಷುದ್ರಸುಖಾದಿಗಳಿಗೆ (ಆದಿಶಬ್ದವು ಸ್ವರ್ಗ ಸುಖವನ್ನು ತಿಳಿಸುತ್ತದೆ.) ಸಾಧನವಾದ ರಾಜಸ ತಾಮಸ ಶಾಸ್ತ್ರಾರ್ಥಗಳನ್ನು ಅಭ್ಯಾಸ ಮಾಡಿಸಿ, **'ಯಕ್ಷ ರಕ್ಷಾಂಸಿ ರಾಜಸಾಃ' 'ಪ್ರೇತಾನ್ ಭೂತಗಣಾನ್'** ಇತ್ಯಾದಿ ಹೇಳಲ್ಪಟ್ಟ ರೀತಿಯಲ್ಲಿ ತನ್ನಂತೆಯೇ ಬದ್ಧರಾಗಿ, ದೀರ್ಘವಾದ ಸರಪಣಿಯಲ್ಲಿ ಕಟ್ಟಲ್ಪಟ್ಟ ಬದ್ಧಜೀವರಾದ, ಯಕ್ಷ, ರಕ್ಷ, ಪ್ರೇತ, ಭೂತಗಳನ್ನು ಪೂಜಿಸಿ ಅವರ ಕಾಲಲ್ಲಿ ಬೀಳುವಂತೆ ಮಾಡಿ, ಅವರುಗಳು ಕೊಟ್ಟ ಜುಗುಪ್ಸಿತವಾದ ಅತ್ಯಲ್ಪ ಪುರುಷಾರ್ಥಗಳಲ್ಲಿ, ವಿಷಕ್ರಿಮಿಗಳ ಹಾಗೆ ಕೃತಾರ್ಥರನ್ನಾಗಿ ಮೋಹಿಸುತ್ತದೆ. ಇದರಿಂದ ಯಕ್ಷ, ರಕ್ಷ, ಪಿಶಾಚಾದಿಗಳ ಪೂಜೆಯು ರಾಜಸ, ತಾಮಸ ಶಾಸ್ತ್ರಗಳ ಗುರಿ ರಾಜಸ ಶಾಸ್ತ್ರಗಳು ಪತನ ಭೀತಿಯಿಂದ ಕೂಡಿದ ಸ್ವರ್ಗಾದಿ ಸುಖಗಳನ್ನು ಕೊಡುವ ಜ್ಯೋತಿಷ್ಟೋಮಾದಿಗಳನ್ನೂ ಒಳಗೊಂಡಿವೆ ಇಲ್ಲಿ ಹೇಳಿರುವ

ತಾವಿಪ್ಪೈಯ್ಯಂಕೊಂಡ ತಡಂತಾಮರೈಪೆಳ್ಕೇ

ಕೂವಿಕ್ಕೊಳ್ಳುಂಕಾಲಂ ಇನ್ನಂಕುರುಹಾದೋ ॥ (ತಿರುವಾಯ್ ಮೊೞಿ 6-9-9)

ಆತ್ಮವು ಭ್ರಮಿಸುವಂತೆ, ಪಂಚೇಂದ್ರಿಯಗಳು ಸೆಳೆದುಕೊಂಡು ಹಿಂಸಿಸುವ ಈ ಅಲ್ಪ ಸುಖಗಳನ್ನು ತೋರಿಸಿ, ಪಾಪಿಯಾದ ನನ್ನನ್ನು ಕಷ್ಟ ಪಡಿಸುತ್ತೀಯಾ ! ಮೂರು ಲೋಕಗಳನ್ನೂ ಧಾವಿಸಿ ಅಳೆದ ನಿನ್ನಪಾದ ಪದ್ಮಗಳಿಗೆ ನನ್ನನ್ನು ಸೇರಿಸಿಕೊಳ್ಳುವ ಕಾಲವು ಇನ್ನೂ ಬರುವುದಿಲ್ಲವೇ

ಇ ಪಾಪವು ಜ್ಞಾನವನ್ನು ನಾಶಗೊಳಿಸುತ್ತದೆ ಜ್ಞಾನವಿಲ್ಲದವನು ಪಾಪವನ್ನೇ ಪುನಃ ಪುನಃ ಮಾಡಲು ಆರಂಭಿಸುತ್ತಾನೆ. ಆವನಿಗೆ ತಾನು ತಪ್ಪು (ಪಾಪ) ಮಾಡುತ್ತಿದ್ದೇನೆಂಬ ನಿರ್ವೇದವಿಲ್ಲದೆ ಇರುವುದೇ ಇದಕ್ಕೆ ಕಾರಣ–ಪಾಪಮೇವ, ಎಂಬಲ್ಲಿಯ "ಏವ" ಕಾರವು ಇವನಿಗೆ ಅನುತಾಪಾದಿ ನಿರ್ವೇದ ಗಳಿಲ್ಲವೆಂಬುದನ್ನು ಸೂಚಿಸುತ್ತದೆ

ಈ ತಾನಹಂದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ಕ್ಷಿಪಾಮ್ಯಜಸ್ರಮಶುಭಾನ್ ಆಸುರೀಷ್ವೇವಯೋನಿಷು ॥

11) ಯೋಗಪ್ರವೃತ್ತ ರಾನವರ್‌ಹಳ್ಳೆಯುಮ್ ಕ್ಷುದ್ರದೇವತಾ ಯೋಗಙ್ಗಳಿಲೇಯಾದಲ್, ನಾಮಾದ್ಯ ಚೇತನೋಪಾಸನಙ್ಗಳಿಲೇಯಾದಲ್ ಮೂಳಪ್ಪಣ್ಣಿ, ಶಿಲ್ಪಾನಙ್ಗಳಾನ ಫಲಙ್ಗಳಾಲೇ ಯೋಗತ್ತೈ ತಲೈ ಶಾಯ್‌ಪ್ಪಿತ್ತುಮ್; 2. ಆತ್ಮಪ್ರವಣರ್ಕೈಯುಮ್ ಪ್ರಕೃತಿ ಸಂಸೃಷ್ಟಂ, ಪ್ರಕೃತಿ ವಿಯುಕ್ತ ಮೆನ್‌ಹಿರ ಇವ್ವಿರಣ್ಡು ವಡಿಯಲುಮ್ ಬ್ರಹ್ಮದೃಷ್ಟಿಯಾಲೇ ಯಾದಲ್ ಸ್ವರೂಪಮಾತ್ರತ್ತಾಲೇಯಾದಲ್

ಯಕ್ಷ ರಕ್ಷಸ್ಸುಗಳೊಡನೆ ಇಂದ್ರಾದಿ ದೇವತೆಗಳೂ ಅಭಿಪ್ರೇತರು. ತಾಮಸ ಶಾಸ್ತ್ರಗಳೂ ಬಹಳ ದುಃಖದಿಂದ ಕೂಡಿದ ಅತ್ಯಲ್ಪ ಸುಖ ಪ್ರದಗಳು **ತನ್ನೋಡೊಕ್ಕ ಒಙ್ಗುಹು ಶಂಗಲಿಯಿಲೇ ಕಟ್ಟುಂಡುಙ್ಗಲುಹಿರ ಕ್ಷೇತ್ರಜ್ಞರ್ –** ಇಂದ್ರಾದಿ ದೇವತೆಗಳೂ, ಯಕ್ಷ ರಕ್ಷ ಭೂತ, ಪಿಶಾಚಿಗಳೂ, ತನ್ನಂತೆಯೇ ಸಂಸಾರದಲ್ಲಿ ಬದ್ಧರು ಅವರುಗಳು ಬದ್ಧ ಜೀವನನ್ನು ಸಂಸಾರದಿಂದ ಬಿಡಿಸಲು ಸರ್ವಥಾ ಅನರ್ಹರು ಎಂಬ ಅಂಶವು ಇಲ್ಲಿ ತಿಳಿಸಲ್ಪಡುತ್ತದೆ. ಉತ್ಕೃಷ್ಟವಾದ ಯೋಗದಲ್ಲಿರುವವರ ವಿಷಯದಲ್ಲಿ ಭಗವನ್ನಿಗ್ರಹಕ್ಕೆ ಅವಕಾಶವುಂಟೇ ಎಂದರೆ ಉಂಟು. ಅದನ್ನು **ಯೋಗಪ್ರವೃತ್ತ ರಾನವರ್‌ಹಳ್ಳೆಯುಂ,** ಎಂದಾರಂಭಿಸಿ ಆಚಾರ್ಯರು ನಿರೂಪಿಸಿರುತ್ತಾರೆ. ಕ್ಷುದ್ರದೇವತೆಗಳನ್ನುದ್ದೇಶಿಸಿ ಯಾಗ ಮಾಡಿ ಫಲವನ್ನು ಅನುಭವಿಸುವವನನ್ನು ಹೇಳಿದ್ದಾಯಿತು. ಯೋಗಪ್ರವೃತ್ತರನ್ನೂ ಇಂದ್ರಾದಿ ಆ ಕ್ಷುದ್ರ ದೇವತೆಗಳನ್ನೂ ಕುರಿತು ಯೋಗ (ಉಪಾಸನೆ) ಮಾಡುವಂತೆಯೂ, ನಾಮಾದ್ಯಚೇತನೋಪಾಸನೆ ಮಾಡುವಂತೆಯೂ, ಇವನಿಗೆ ಬುದ್ಧಿಯನ್ನುಂಟುಮಾಡಿ, ಅಲ್ಪಗಳಾದ ಫಲಗಳನ್ನು ಕೊಟ್ಟು, ಯೋಗವನ್ನು ಉಪಕ್ಷೀಣಿಸುತ್ತದೆ. ಇದೂ ಭಗವನ್ನಿಗ್ರಹ ಫಲ. ಏತಕ್ಕೆಂದರೆ ಸಂಸಾರವನ್ನು ದಾಟದೆ ಇಲ್ಲಿಯೇ ಅಲ್ಪಫಲಗಳನ್ನನುಭವಿಸಿಕೊಂಡಿರುತ್ತಾನೆಯಲ್ಲವೆ. **ನಾಮಾದ್ಯಚೇತನೋಪಾಸನೆಯುಮ್** 'ನಾಮ ಬ್ರಹ್ಮೇತ್ಯುಪಾಸೀತ' ಎಂಬ ವೇದ ಶಬ್ದ ರಾಶಿಗಳನ್ನು ಬ್ರಹ್ಮವೆಂದು ತಿಳಿದು ಉಪಾಸನೆ ಮಾಡುವುದು. ಇವರಿಗೆ ಫಲವು "ತಸ್ಯಸರ್ವೇಷು ಲೋಕೇಷು ಕಾಮಚಾರೋ ಭವತಿ", ಎಂಬುದು ಆ ಶಬ್ದರಾಶಿಗಳು ಪರಡುವ ಲೋಕಗಳಲೆಲ್ಲಾ ಯಥೇಚ್ಛೆಯಾಗಿ ಸಂಚಾರವನ್ನು ಹೇಳಿರುವುದರಿಂದ ಇದರಲ್ಲಿ ಕೆಲವರಿಗೆ ವ್ಯಾಮೋಹವುಂಟಾಗುತ್ತದೆ **'ನಾಮಾದಿ'**, ಎಂಬಲ್ಲಿಯು ಆದಿಶಬ್ದದಿಂದ, ಭೂಮ ವಿದ್ಯೆಯಲ್ಲಿ ಹೇಳಲ್ಪಟ್ಟ ವಾಗಾದಿ ಹದಿಮೂರು ವಸ್ತುಗಳನ್ನು ಬ್ರಹ್ಮವೆಂದು ತಿಳಿದು ಉಪಾಸನೆ ಮಾಡುವುದೂ, ಮುಖ್ಯ ಪ್ರಾಣವನ್ನು ಬ್ರಹ್ಮವೆಂದು ತಿಳಿದು ಉಪಾಸನೆ ಮಾಡುವುದೂ ವಿವಕ್ಷಿತ. ಇವುಗಳಿಗೆ ಫಲವು ಹೆಚ್ಚಾದರೂ, ಮೋಕ್ಷವು ಸಿಗಲಾರದು. ಇವೂ ಪ್ರಾಕೃತ ಫಲಪ್ರದಗಳು ಎಂಬರ್ಥ.

ಅನಂತರ **'ಆತ್ಮಪ್ರವಣರ್ಕೈಯುಂ'** ಎಂದಾರಂಭಿಸಿ, ಆತ್ಮೋಪಾಸನೆ ಮಾಡುವವರಿಗೂ ಭಗವನ್ನಿಗ್ರಹವು ಇದೆ ಎಂದು ನಿರೂಪಿಸುತ್ತಾರೆ ಅದಾಗಿ ಆತ್ಮೋಪಾಸಕರು ನಾಲ್ಕು ವಿಧ. 1) ಪ್ರಕೃತಿಯಿಂದ ಕೂಡಿದ ತನ್ನನ್ನು (ಆತ್ಮಾ) ಬ್ರಹ್ಮವೆಂದು ತಿಳಿದು ಉಪಾಸನೆ ಮಾಡುವುದು 2) ಪ್ರಕೃತಿಯಿಂದ ಕೂಡಿದ ತನ್ನನ್ನು (ಆತ್ಮಾ), ಅಹಂ, ಅಹಂ, ಎಂದು ಉಪಾಸಿಸುವುದು 3) ಪ್ರಕೃತಿವಿಯುಕ್ತ (ಬಿಟ್ಟ) ತನ್ನಾತ್ಮವನ್ನು ಬ್ರಹ್ಮವೆಂದು ತಿಳಿದು ಉಪಾಸನೆ ಮಾಡುವುದು 4) ಪ್ರಕೃತಿವಿಯುಕ್ತ ತನ್ನ ಶುದ್ಧ ಸ್ವರೂಪವನ್ನು 'ಅಹಂ ಅಹಂ', ಎಂದು ಉಪಾಸನೆಮಾಡುವುದು ಈ ನಾಲ್ಕೂ ವಿಧಗಳಾದ ಉಪಾಸನೆಗೆ ಫಲವಾಗಿ ಅಲ್ಪಸುಖದಿಂದ ಕೂಡಿದ ಕೈವಲ್ಯ ಲೋಕವನ್ನು ಕೊಟ್ಟು, ತಿರುಗಿ ಸಂಸಾರದಲ್ಲಿ ಜನನವನ್ನು ಕೊಡುತ್ತಾನೆ ಕೇವಲಾತ್ಮಾನುಭವವು ಬಾಕಿ ಪ್ರಾಕೃತ ಸುಖಗಳಿಗಿಂತಲೂ ಮೇಲಾಗಿದ್ದರೂ, ಭಗವದನುಭವರೂಪ ಆನಂದಕ್ಕೆ ಸರಿಹೋಲಿಸಿ ನೋಡಿದರೆ, ಅತ್ಯಲ್ಪವಾದದ್ದು. ಮೇಲೂ ಇದು ಶಾಶ್ವತವಲ್ಲ. ಕೈವಲ್ಯ ಲೋಕದಲ್ಲಿ ಸ್ವಾತ್ಮಾನುಭವವನ್ನು ಅನುಭವಿಸಿ, ಹಿಂತಿರುಗುವುದರಿಂದ ಅನಿತ್ಯ ಇದೂ ಮೋಕ್ಷಾನಂದಕ್ಕೆ ವಿರುದ್ಧವಾದ್ದರಿಂದ ಭಗವನ್ನಿಗ್ರಹಕ್ಕೆ ದ್ವಾರವು.

ತಾ.–ಅಹಂಕಾರ ಬಲ, ದರ್ಪ, ಕಾಮ, ಕ್ರೋಧಗಳಿಂದ ಕೂಡಿದವರಾಗಿ ತನ್ನನ್ನು ಸ್ವತಂತ್ರನೆಂದು ತಿಳಿದುಕೊಂಡು ಅಂತರ್ಯಾಮಿಯಾದ ಭಗವಂತನನ್ನು ಅಲ್ಲಗಳೆದು ದ್ವೇಷಿಸುವವರೂ ಕ್ರೂರರೂ ನರಾಧಮರೂ ಅಶುಭರೂ ಆದವರನ್ನು ಜನ್ಮಜರಾಮರಣಾದಿರೂಪದಲ್ಲಿ ಸುತ್ತುತ್ತಿರುವ ಸಂಸಾರದಲ್ಲಿ, ಅದರಲ್ಲಿಯೂ ಭಗವದನುಭವ ವಿರೋಧಿಯಾದ ಜನ್ಮಗಳಲ್ಲಿಯೇ ತಳ್ಳುತ್ತೇನೆ, ಆಯಾದ

(109 ಪು ನೋ)

ಉಪಾಸಿಕ್ಕ ಮುಟ್ಟೆ, ಅನ್ನೈಸಾಲುವಹೈಕ್ಕುಮ್ ಫಲವಾಹ ಅಲ್ಪಾಸ್ವಾದಙ್ಗಳೈ ಕ್ಕೊಡುತ್ತು ಪುರಾವೃತ್ತಿಯೈ ಪ್ಪಣ್ಣಿಯುಂ 13. ಬ್ರಹ್ಮಾತ್ಮಕ ಸ್ವಾತ್ಮಚಿನ್ತನ ಪ್ರವೃತ್ತರಾನವರ್ಗಳೈಯುಮ್, ಸ್ವಾತ್ಮಶರೀರಕ ಪರಮಾತ್ಮ ಚಿನ್ತನ ಪರರ್ಕೈಯುಮ್, ಅನ್ತರಾಯಮಾನ ವಾತ್ಮಾನುಭವತ್ತಾಲೇಯಾದಲ್, ಅಷ್ಟೈಶ್ವರ ಸಿದ್ಧಿಗಳಾಲೇಯಾದಲ್, ವಸ್ವಾದಿಪದಪ್ರಾಪ್ತಿ ಬ್ರಹ್ಮಕಾಯ ನಿಷೇವಣಾದಿಗಳಾಲೇಯಾದಲ್, ಅಭಿಷೇಕತ್ತುಕ್ಕು ನಾಳಿಟ್ಟ ರಾಜಕುಮಾರನುಕ್ಕುಕ್ಕಿರೈಯಿಲೇಯೆಡುತ್ತುಕ್ಕೈ ನೀಟ್ಟಿನ ಚೇಟಿಮಾರ್ ಪಕ್ಕಲಿಲೇ ಕಣ್ಣೋಟ್ಟ ಮುಂಡಾಮಾಪ್ಪೋಲೇ

ಇವರ್ಕ್ಕೆ ಗೀಲಾಗಿ ಪಂಚಾಗ್ನಿ ವಿದ್ಯಾನಿಷ್ಠರನ್ನು, **ಬ್ರಹ್ಮಾತ್ಮಕಸ್ವಾತ್ಮ ಚಿಂತನ ಪ್ರವೃತ್ತ** ರೆಂದಾರಂಭಿಸಿ. **ಅವರಿಗೂ ಭಗವನ್ನಿಗ್ರಹವು ಉಂಟೆಂದು ಉಪಪಾದಿಸುತ್ತಾರೆ** ಆದಾಗಿ ಬ್ರಹ್ಮಾತ್ಮಕಸ್ವಾತ್ಮ ಚಿಂತನೆಯಲ್ಲಿ ಪ್ರವೃತ್ತರಾದವರನ್ನೂ ಸ್ವಾತ್ಮ ಶರೀರಕ ಪರಮಾತ್ಮ ಚಿಂತನ ಪರರನ್ನೂ, **(ಅಂತರಾಯ – ವಿಘ್ನ)** ವಿಘ್ನವಾದ ಆತ್ಮಾನುಭವ ಅಷ್ಟೈಶ್ವರ್ಯಸಿದ್ಧಿ ವಸ್ವಾದಿಪದ ಪ್ರಾಪ್ತಿ, ಬ್ರಹ್ಮಕಾಯ ನಿಷೇವಣಾದಿಗಳಲ್ಲಿಯೂ ಮನಸ್ಸು ಹೋಗುವಂತೆ ಮಾಡಿ ಭಗವಂತನ ಸಾಯುಜ್ಯವನ್ನು ಪಡೆಯಲು ವಿಳಂಬವನ್ನುಂಟು ಮಾಡುತ್ತದೆ. ಬ್ರಹ್ಮವನ್ನು ತನಗೆ ಆತ್ಮವಾಗಿ ತಿಳಿದು ಉಪಾಸನೆ ಮಾಡುವುದು ಬ್ರಹ್ಮಾತ್ಮಕ ಸ್ವಾತ್ಮ ಚಿಂತನೆ

ಸ್ವಾತ್ಮವನ್ನು ಶರೀರವಾಗಿ ಉಳ್ಳ **ಪರಮಾತ್ಮ ಚಿಂತನೆಯು ಸ್ವಾತ್ಮ** ಶರೀರಕ ಪರಮಾತ್ಮೋಪಾಸನೆ **ಈ** ಉಪಾಸನೆ ಫಲವಾಗಿ ಜೀವನು **ಕೆಲವುಕಾಲ ಕೈವಲ್ಯ ಲೋಕದಲ್ಲಿದ್ದು ಸ್ವಾತ್ಮಾನುಭವ ಮಾಡಿ** ನಂತರ ಮೋಕ್ಷವನ್ನು ಪಡೆಯುತ್ತಾನೆ ಇದು **ಪಂಚಾಗ್ನಿ** ವಿದ್ಯೆ

ವಸ್ವಾದಿಪದ ಪ್ರಾಪ್ತಿ : ಎಂದರೆ ಮಧು ವಿದ್ಯೆಯನ್ನು ಅವಲಂಬಿಸಿ ಉಪಾಸನೆಮಾಡುವವರು, ಸ್ವಲ್ಪಕಾಲ ವಸುಲೋಕದಲ್ಲಿದ್ದು, ಸೂರ್ಯನನ್ನು, ಮಧು (ಜೇನುತುಪ್ಪ) ಆಸ್ವಾದಮಾಡುವಂತೆ, ಅನುಭವಿಸಿ ಅನಂತರ **ಮೋಕ್ಷವನ್ನು** ಪಡೆಯುತ್ತಾರೆ. ಈ ರೀತಿಯ ಉಪಾಸನೆಯಿಂದಲೂ, ಮೋಕ್ಷವು ವಿಳಂಬಿಸುತ್ತದೆ,

ಬ್ರಹ್ಮಕಾಯ ನಿಷೇವಣಾದಿ : ಎಂದರೆ ಚತುರ್ಮುಖನ ಶರೀರವನ್ನು ಪ್ರವೇಶಿಸಿ ಅವನಿಗೆ ಸಮಾನವಾದ ಭೋಗವನ್ನು ಅನುಭವಿಸುವುದು. ಮಹಾಭಾರತ, ಮೋಕ್ಷ ಧರ್ಮದಲ್ಲಿ ಜಾಪಕೋಪಾಖ್ಯಾನದಲ್ಲಿ "ಉಷ್ಯತಾಂ ಮಯಿ ಚೇತ್ಯುಕ್ತ್ವಾ ವ್ಯಾದದೇ **ಸ**ತತೋಮುಖಮ್ || ಅಥತಸ್ಯ ವಿವೇಶಾ ऽऽಸ್ಯಂ ಬ್ರಹ್ಮಣೋವಿಗತ ಜ್ವರ **:** ನನ್ನಲ್ಲಿ ವಾಸಮಾಡ , ಎಂದು ಬ್ರಹ್ಮದೇವನು ಬಾಯನ್ನು ಅಗಲವಾಗಿತೆಗೆದನು. ಆ ಬಾಯಿಯನ್ನು ಜಾಪಕನ ಪ್ರವೇಶಿಸಿ ಸಹಿಂಸಾರಿಕಕ್ಲೇಶವನ್ನು ನೀಗಿಸಿದನು. **ಆದಿ** ಶಬ್ದದಿಂದ ಬ್ರಹ್ಮಲೋಕವಾಸವು ತಿಳಿಸಲ್ಪಡುತ್ತದೆ ಹೀಗೆ ಪ್ರಯೋಜನಂತರಗಳಿಂದ ಕೂಡಿದ ಬ್ರಹ್ಮವಿದ್ಯಾನಿಷ್ಠರಿಗೆ ಮೋಕ್ಷವಿಳಂಬ ಹೇತುಗಳಿಂದ ಮಧು ಸೇವನೆ, ಬ್ರಹ್ಮಕಾಯ ನಿಷೇವಣೆ, ಬ್ರಹ್ಮಲೋಕವಾದ ಕೈವಲ್ಯಲೋಕವಾಸಾದಿ ಮೋಕ್ಷವಿಳಂಬವು ಹೇಳಲ್ಪಟ್ಟಿತು ಹಾಗೆಯೇ **ಸಾಕ್ಷಾತ್ತಾಗಿ** ಅಂದರೆ ಅನನ್ಯ ಪ್ರಯೋಜನರಾಗಿ ಬ್ರಹ್ಮವಿದ್ಯಾನಿಷ್ಠರಾಗಿರುವವರಿಗೂ, ಭಗವನ್ನಿಗ್ರಹದಿಂದ ಮೋಕ್ಷವಿಳಂಬ ವುಂಟೇ ಎಂದು ಕೇಳಿದರೆ, ಉಂಟೆಂದು ದೃಷ್ಟಾಂತ**ಪೂರ್ವ**ಕವಾಗಿ **ಅಭಿಷೇಕತ್ತುಕ್ಕು ನಾಳಿಟ್ಟ,** ಎಂದಾರಂಭಿಸಿ ತಿಳಿಸುತ್ತಾರೆ. ರಾಜಕುಮಾರನನ್ನು, ಅವನು ಮಾಡಿದ ತಪ್ಪಿಗಾಗಿ ಸ್ವಲ್ಪಕಾಲ ಸೆರೆಯಲ್ಲಿಟ್ಟಿದ್ದು, ನಂತರ ಯೌವರಾಜ್ಯ ಪಟ್ಟಾಭಿಷೇಕಕ್ಕೆ ದಿನವನ್ನು ಗೊತ್ತುಮಾಡಿ ಸೆರೆಯಿಂದ ಬಿಡಿಸಿ ಕರೆತರಲು ರಾಜನು ಆಜ್ಞಾಪಿಸಿದನು ಆಗ ಆರಾಜಕುಮಾರನು ಸೆರೆಯಲ್ಲಿ ತನಗೆ ಶುಶ್ರೂಷೆಮಾಡಿದ ದಾಸಿಗಳ **ಮೇಲೆ ಆಸೆಯಿಂದ** ಅವರನ್ನು ಅನುಭವಿಸಲು ಮನಸ್ಸುಮಾಡಿದನು. ಇದರಿಂದ **ಅವನಿಗೆ ಕಾರಾಗೃಹದಿಂದ ಬಿಡುಗಡೆಯು ವಿಳಂಬಿಸಿ,** ಯೌವರಾಜ್ಯಪಟ್ಟಾಭಿಷೇಕವು ಮುಂದೂಡಿತು

ಪ್ರಾರಬ್ಧಕರ್ಮಫಲಮಾನ ದೇಹೇನ್ದ್ರಿಯಙ್ಗಳೈಯುಮ್ ತದನುಬನ್ಧಿಗಳಾನ ಪರಿಗ್ರಹಙ್ಗಳೈಯುಮ್, ತನ್ಮೂಲ ಭೋಗಙ್ಗಳೈಯುಮ್ ಕಾಲ್ ತಾಙ್ಗಪ್ಪಣ್ಣಿ ಯಾದಲ್ ಅನ್ಯಪರರಾಕ್ಕಿಯುಮ್, ಇಪ್ಪಡಿ ಪ್ಪಲವಙ್ಗಳಾಲೇ ಭಗವತ್ಪ್ರಾಪ್ತಿಕ್ಕು ವಿಲಕ್ಕಾಯಿರುಕ್ಕುಮ್. ಮುಪ್ಪತ್ತಿರಣ್ಡಡಿಯಾನ ತುರುವುತತ್ತುವಾರ್ ಮುನ್ನಡಿಯಿಲೇ ವಿಳುನ್ದವರೋಡುಮ್ ಮುಪ್ಪದಾಮಡಿಯಿಲೇ ವಿಳುನ್ದವನೋಡುಮ್ ವಾಶಿಯಿಲ್ಲಾದಾಪ್ಪೋಲೇ ಏದೇನು ಮೊರು ಪರ್ವತ್ತಿಲೇ ಯನ್ತರಾಯಮುಣ್ಡಾನಾಲುಂ ಇವನ್ ಸಂಸಾರತ್ತೈ ಕಡನ್ದಾನಾಹಾನ್. ಕರ್ಮಯೋಗಾದಿಹಳಿಲ್ ಪ್ರವೃತ್ತನುಕ್ಕು "ನೇಹಾಭಿಕ್ರಮನಾಶೋಸ್ತಿ" ತ್ಯಾದಿಗಳಿಲ್ ಪಡಿಯೇ ಯಿಟ್ಟಪಡ್ಪೈ ಕರ್ ಪಡ್ವೈಯಾಂ ಏನ್ರೇನು ಮೊರುನಾಳ್ ಪ ಸಿದ್ಧಿಯುಣ್ಡಾಮೆನ್ಗಿರವಿದುವುಂ, ಕಲ್ಪಾನ್ತರ ಮನ್ವನ್ತರ ಯುಗಾನ್ತ ರಜನ್ಮಾಂತರಂಗಳಿಲ್ ಏದಿಲೇಯೆನ್ರು ತೆರಿಯಾದು. ಆನುಕೂಲ್ಯಂ ಮಿಹವುಮುಣ್ಡಾಯಿರುಕ್ಕ ವಶಿಷ್ಠಾದಿಗಳುಕ್ಕು ವಿಳಂಬಙ್ಗಾಣಾ ನಿನ್ರೋಮ್; ಪ್ರಾತಿಕೂಲ್ಯಂ ಮಿಹವುಮುಣ್ಡಾಯಿರುಕ್ಕ ವೃತ್ರ ಕ್ಷತ್ರಬಂಧು ಪ್ರಭೃತಿಹಳುಕ್ಕು ಕ್ಕಡುಹಮೋಕ್ಷಮುಂಡಾಹಕ್ಕಾಣಾನಿನ್ರೋಮ್. ಆದಲಾಲ್ ವಿಳಂಬ ರಹಿತ ಮೋಕ್ಷ ಹೇತುಕ್ಕಳಾನ ಸುಕೃತ ವಿಶೇಷಙ್ಗಳ್ ಆರ್ ಪಕ್ಕಲಿಲೇ ಕಿಡಕ್ಕುಮೆನ್ರು ತೆರಿಯಾದು. ವಿಳಂಬ ಹೇತುವಾನ ನಿಗ್ರಹತ್ತುಕ್ಕು ಕ್ಕಾರಣಙ್ಗಳಾನ ದುಷ್ಕರ್ಮ ವಿಶೇಷಙ್ಗಳುಮ್ ಆರ್ ಪಕ್ಕಲಿಲೇ ಕಿಡಕ್ಕುಮೆನ್ರುಂ ತೆರಿಯಾದು.

ಈ ರೀತಿಯಲ್ಲಿ ಅನನ್ಯ ಪ್ರಯೋಜನರಾಗಿ ಬ್ರಹ್ಮವಿದ್ಯಾನಿಷ್ಠರಾದವರಿಗೂ ಪ್ರಾರಬ್ಧಕರ್ಮಫಲವಾದ ದೇಹೇಂದ್ರಿಯಗಳಲ್ಲಿಯೂ, ಅವನ್ನು ಅನುಸರಿಸಿ ಬರುವ ಪರಿಗ್ರಹಗಳಲ್ಲಿಯೂ, ಮನಸ್ಸನ್ನು ಸೆಳೆಯಿಸಿ ವಿಳಂಬವನ್ನುಂಟುಮಾಡಿ, ಅನ್ಯಪರರನ್ನಾಗಿಮಾಡುವುದೂ ನಿಗ್ರಹಕೃತ್ಯ ಈ ರೀತಿಯಲ್ಲಿ ಅನೇಕ ದ್ವಾರಗಳಿಂದ ಭಗವತ್ಪ್ರಾಪ್ತಿಗೆ ತಡೆಯುಂಟಾಗುತ್ತದೆ ಮೂವತ್ತೆರಡು ಅಡಿ ಅಗಲವಾದ ಭಾವಿಯನ್ನು ದಾಟಲು ಉಪಕ್ರಮಿಸಿ, ಮೊದಲನೇ ಅಡಿಯಲ್ಲಿಯೇ ಭಾವಿಗೆ ಬಿದ್ದವರಿಗೂ ಮೂವತ್ತೊಂದನೇ ಅಡಿಯಲ್ಲಿ ಭಾವಿಗೆ ಬಿದ್ದವರಿಗೂ ವ್ಯತ್ಯಾಸವಿಲ್ಲದ ಹಾಗೆ, ಯಾವುದಾದರೂ ಒಂದು ಪರ್ವದಲ್ಲಿ ಅಂತರಾಯವು (ವಿಘ್ನವು) ಉಂಟಾದರೆ ಇವನು ಸಂಸಾರವನ್ನು ದಾಟಿದವನಾಗುವುದಿಲ್ಲ. ಕರ್ಮಯೋಗಾದಿಗಳಲ್ಲಿ ಪ್ರವೃತ್ತನಾದವನಿಗೆ, **ನೇಹಾಭಿಕ್ರಮನಾ ಶೋಸ್ತಿ** ಇತ್ಯಾದಿ ಪ್ರಕಾರ, ಆರಂಭಿಸಿದ ಕಾರ್ಯವು ನಾಶವಾಗದೆ, ಯಾವತ್ತಿಗಾದರೂ ಫಲವು ಸಿದ್ಧಿಸುತ್ತದೆ ಎಂಬ ಈ ಮಾತೂ ಕಲ್ಪಾಂತರ, ಮನ್ವಂತರ, ಯುಗಾಂತರ, ಜನ್ಮಾಂತರಾದಿಗಳಲ್ಲಿ ಯಾವುದರಲ್ಲಿ ಸಿದ್ಧಿ ಯುಂಟಾಗುತ್ತದೆ ಎಂದು ತಿಳಿಯದು ಭಗವದಾನುಕೂಲ್ಯವು ಹೆಚ್ಚಾಗಿದ್ದರೂ ವಸಿಷ್ಠಾದಿಗಳಿಗೆ ಮೋಕ್ಷವು ವಿಳಂಬಿಸುವುದನ್ನು ನೋಡುತ್ತಿದ್ದೇವೆ ಅಧಿಕಾರಿಕಪುರುಷರಾಗಿ, ವಸಿಷ್ಠಾದಿ ಲೋಕದಲ್ಲಿದ್ದುಕೊಂಡು ಒಂದು ಅಧಿಕಾರವನ್ನು ನಿರ್ವಹಿಸುತ್ತಿರುವುದರಿಂದ ಅವರಿಗೆ ಅಪದಪ್ರಾಪ್ತಿಯಾದ ನಂತರ ಮೋಕ್ಷವು ಲಭಿಸುತ್ತದೆ ಆದ್ದರಿಂದ ವಿಳಂಬವುಂಟು ಈ ವಿಳಂಬವೂ ಭಗವನ್ನಿಗ್ರಹಫಲ. ಹಾಗೆಯೇ ಭಗವತ್ಪ್ರಾತಿಕೂಲ್ಯವು ಹೆಚ್ಚಾಗಿರುವ ವೃತ್ರಾಸುರನಿಗೂ ಕ್ಷತ್ರಬಂಧು ಮೊದಲಾದವರಿಗೂ ಶೀಘ್ರದಲ್ಲಿಯೇ ಮೋಕ್ಷವು ಲಭಿಸಿದ್ದನ್ನು ಇತಿಹಾಸಪುರಾಣಗಳಿಂದ ತಿಳಿದಿದ್ದೇವೆ. ಆದ್ದರಿಂದ ವಿಳಂಬರಹಿತವಾದ ಮೋಕ್ಷಕ್ಕೆ ಕಾರಣಗಳಾದ ಸುಕೃತ ವಿಶೇಷವು ವಿಳಂಬಕ್ಕೆ ಕಾರಣವಾದ ಪಾಪ ಕರ್ಮವೂ ಯಾರಲ್ಲಿ ಇದೆ ಎಂಬುದು ತಿಳಿಯದು

ಆಯಾಯಾ ಜನ್ಮಗಳನ್ನು, ಪಡೆಯಲು ಅನುಗುಣವಾದ ಪ್ರವೃತ್ತಿಗಳಿಗೆ ಹೇತುವಾದ (ಕಾರಣವಾದ) ಕ್ರೂರಬುದ್ಧಿಗಳೊಡನೆ ನಾನೇ ಅವರನ್ನು ಸೇರಿಸಿಡುತ್ತೇನೆಂದರ್ಥ

ಅಜಸ್ರಂ, ಎಂಬ ಪದದಿಂದ. ಈ ಅಸುರ ಜನ್ಮ ಮೂಲಕ ನರಕಾದಿ ರೂಪ ಚಕ್ರಪರಿವೃತ್ತಿಗೆ (ಸುತ್ತುತ್ತಿರುವುದಕ್ಕೆ) ಅಂತವಿಲ್ಲವೆಂಬುದು ತಾತ್ಪರ್ಯ, ಈ ವಚನವನ್ನೂ ಇದಕ್ಕೆ ಅನಂತರ ಹೇಳಿರುವ, ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿಜನ್ಮನಿ) ಮಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂಗತಿಮ್ ॥, ಅಸುರ ಜನ್ಮವನ್ನು ಪಡೆದು ಪುನ ಪುನ: ಮೂಢರಾಗಿ (ಭಗವದ್ವಿಪರೀತಜ್ಞಾನರಾಗಿ) ಅಧಮಗತಿ ರೂಪವಾದ ಜನ್ಮವನ್ನು ಹೊಂದುತ್ತಾರೆಂಬ ವಚನದಲ್ಲಿ ಅಪ್ರಾಪ್ಯೈವ ಎಂಬ ವಾಕ್ಯವನ್ನು ಅವಲಂಬಿಸಿ, ಇವರನ್ನು ನಿತ್ಯ ಸಂಸಾರಿಗಳೆಂದೂ, ನಿತ್ಯನಾರಕಿಗಳೆಂದು ಕೆಲವರು ಅಭಿಪ್ರಾಯ ಪಡುತ್ತಾರೆ ರಾಮಾನುಜ ಸಿದ್ಧಾಂತಿಗಳು ಇವರಿಗೂ ನಿಸ್ತಾರಕ್ರಮವನ್ನು ಒಪ್ಪುತ್ತಾರೆ.

(೮) ಯಜಂತೇ ಸಾತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾ ।
ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾಜನಾ ॥ (ಗೀತೆ 17-5)

ಸತ್ತ್ವಗುಣವು ಅಧಿಕವಾಗಿರುವವರು. ಸಾತ್ವಿಕ ಶ್ರದ್ಧೆಯಿಂದ ಕೂಡಿದವರಾಗಿ ಇಂದ್ರಾದಿ ದೇವತೆಗಳನ್ನು ಪೂಜಿಸುತ್ತಾರೆ ದುಃಖವಿಲ್ಲದ ಉತ್ಕೃಷ್ಟಸುಖವನ್ನು ಕೊಡುವ ದೇವತೆಗಳ ಯಾಗವು ಸಾತ್ವಿಕ ಬುದ್ಧಿಯಿಂದ ಮಾಡಲ್ಪಡುತ್ತದೆ. ರಜೋಗುಣವನ್ನು ಅಧಿಕವಾಗುಳ್ಳವರು ಯಕ್ಷರಕ್ಷಸ್ಸುಗಳನ್ನು ಪೂಜಿಸುತ್ತಾರೆ. ದುಃಖದಿಂದ ಕೂಡಿದ ಅಲ್ಪಸುಖವನ್ನು ರಾಜಸಶ್ರದ್ಧೆಯು ಕೊಡುತ್ತದೆ, ದುಃಖಪ್ರಾಯಅತ್ಯಲ್ಪ ಸುಖವನ್ನು ಕೊಡುವ ತಾಮಸ ಶ್ರದ್ಧೆಯಿಂದ ಪ್ರೇತ ಭೂತಪಿಶಾಚಗಳನ್ನು ತಾಮಸ ಪ್ರಕೃತಿಗಳು ಪೂಜಿಸುತ್ತಾರೆ.

ವ್ಯವಚ್ಛೇದ ಶಕ್ತಿ —ಇತರ ವ್ಯಾವರ್ತನಸಾಮರ್ಥ್ಯ ಈ ಶಕ್ತಿಯಿಂದ ವ್ಯಾವರ್ತ್ಯಮಾನವಾದ (ಬೇರೆ ಯಾಗಿ ಮಾಡಲ್ಪಟ್ಟ) ಇತರ ಪದಾರ್ಥಗಳು ವಿರೋಧಿಗಳೆಂದು ತಿಳಿಯಬಹುದು. ಆದಾಗಿ ಪ್ರಣವದಲ್ಲಿಯ ಲುಪ್ತ ಚತುರ್ಥೀ ಯಿಂದ ಮಕಾರಾರ್ಥವು ಭಗವಚ್ಛೇಷತ್ವವೆಂದು ವಿಧಿಸಲ್ಪಡುತ್ತದೆ. ಭಗವದನ್ಯಶೇಷತ್ವವೂ, ಭಗವಂತನಿಗೆ ಶೇಷ ಭೂತವಲ್ಲವೆಂಬುದೂ ಈ ವಿಧಿಯಿಂದ ವ್ಯವಚ್ಛೇದಿಸಲ್ಪಡುತ್ತದೆ ಅಂದರೆ ಬೇರೆ ಮಾಡಲ್ಪಡುತ್ತದೆ ಹಾಗೆ ವ್ಯವಚ್ಛೇದ್ಯ ವಾದದ್ದು, ಅಶೇಷತ್ವ ಅನ್ಯಶೇಷತ್ವಗಳು. ತತ್ಸಂಬಂಧವಾದ ಜ್ಞಾನವೆಂದರ್ಥ ಅದಾಗಿ ಅನ್ಯಶೇಷತ್ವ ಜ್ಞಾನವೂ ಸ್ವತಂತ್ರಾತ್ಮ ಜ್ಞಾನವೂ ವಿರೋಧಿ ರೂಪವಾದ ಅವಿದ್ಯೆ. **'ಮ'** ಕಾರದಲ್ಲಿ ಮನ ಜ್ಞಾನೇ "ಎಂಬ ಧಾತು ನಿಷ್ಪನ್ನವಾದ ಅರ್ಥದಿಂದ, ಜೀವನಿಗೆ ಜಡತ್ವವು ವ್ಯವಚ್ಛೇದಿಸಲ್ಪಡುತ್ತದೆ ವ್ಯವಚ್ಛೇದ್ಯ ಜ್ಞಾನವು — ಜಡವಾದ ದೇಹವೇ ಆತ್ಮ - ಎಂಬ ಜ್ಞಾನ—ಇದು ವಿರೋಧಿರೂಪ ಅವಿದ್ಯೆ. ಹೀಗೆಯೇ **ನರ** ಶಬ್ದದಲ್ಲಿ ರಿಙ್ ಕ್ಷಯೇ ಎಂಬ ಧಾತುವಿನಿಂದ, ನರಿಷ್ಯತಿ, ಎಂದು ಪದವಿಭಾಗಮಾಡಿದರೆ ನಿರ್ವಿಕಾರತ್ವವು ತಿಳಿಸಲ್ಪಡುತ್ತದೆ. ಇದರಿಂದ ವ್ಯಾವರ್ತ್ಯಮಾನವಾದ ಕ್ಷಯಿತ್ವ — ವಿಕಾರತ್ವ ಜ್ಞಾನವು ವಿರೋಧಿ. ಕ್ಷಯಿಷ್ಣುವಾದ ದೇಹವೇ ಆತ್ಮಾ ಎಂಬ ಜ್ಞಾನವೂ ವಿರೋಧಿ ರೂಪವಾದ ಅವಿದ್ಯೆ ಆತ್ಮಾ ದೇಹಕ್ಕಿಂತ ಬೇರೆ ಯಲ್ಲನು, ನಾಶಸ್ವಭಾವನು ಎಂಬ ಅವಿದ್ಯೆಯು ಪಾರಲೌಕಿಕ ಶ್ರೇಯಸ್ಸಂಪಾದನೆಗೆ ವಿರೋಧವಾದದ್ದು. "ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂಕುತಃ | ತಸ್ಮಾತ್ಸರ್ವ ಪ್ರಯತ್ನೇನ ಋಣಂ ಕೃತ್ವಾ ಘೃತಂಪಿಬ ||" ಎಂಬ ಚಾರ್ವಾಕಮತಕ್ಕೆ ದೇಹಾತ್ಮ ಭ್ರಮ ಜ್ಞಾನವು ಸಾಧಕ ಇದರಿಂದ ಬಂಧವು ನಿಶ್ಚಯ ಆದ್ದರಿಂದ ಅಷ್ಟಾಕ್ಷರ ದ್ವಯಮಂತ್ರಗಳಲ್ಲಿಯ **ನಮಃ** ಶಬ್ದದಲ್ಲಿರುವ **ಮ ಕಾರವು ಮಮ** ಎಂದು ಅರ್ಥವಾಗಿ ಸ್ವತಂತ್ರಾತ್ಮ ಭ್ರಮವನ್ನುಂಟುಮಾಡಿ ತನ್ಮೂಲಕ ಬಂಧಕವು. ಇದೂ ವಿರೋಧಿ ರೂಪವಾದ ಅವಿದ್ಯಾ ಜ್ಞಾನ ಚರಮಶ್ಲೋಕದಲ್ಲಿಯ **'ಸರ್ವಪಾಪ'** ಶಬ್ದವು ವಿರೋಧಿ ರೂಪವಾದ ಅವಿದ್ಯೆ ಯನ್ನು ಸ್ಪಷ್ಟೀಕರಿಸುತ್ತದೆ. ಹೀಗೆ ವಿರೋಧಿವರ್ಗಾನುಸಂಧಾನಕ್ಕೆ, ಸಂಸಾರ ನಿವರ್ತನೋಪಾಯವಾದ ಭಕ್ತಿಪ್ರಪತ್ತಿ ಗಳಲ್ಲಿ ತ್ವರೆಯಿಂದ ಪ್ರವರ್ತಿಸುವುದೇ ಫಲ.

ಈ ಸಂದರ್ಭದಲ್ಲಿ ಇತರರ ಅರ್ಥ ಪಂಚಕವೆಂಬ ಗ್ರಂಥದಲ್ಲಿ, ಪರವ್ಯೂಹ ವಿಭವ ಹಾರ್ದಾರ್ಚಾರೂಪವಾಗಿ ಪ್ರಾಪ್ಯ ಪಂಚಕವೂ, ಬದ್ಧ, ಮುಕ್ತ, ನಿತ್ಯ, ಕೇವಲ, ಮುಮುಕ್ಷು ಭೇದವೆಂದು ಪ್ರಾಪ್ತೃ ಪಂಚಕವೂ ಕರ್ಮಜ್ಞಾನ, ಭಕ್ತಿ, ಪ್ರಪತ್ತಿ, ಆಚಾರ್ಯಾಭಿಮಾನವೆಂದು ಉಪಾಯಪಂಚಕವೂ, ಇವುಗಳಿಗೆ ವಿರೋಧವಾದ ವಿರೋಧಿಪಂಚಕವೂ ಧರ್ಮಾರ್ಥ ಕಾಮ ಮೋಕ್ಷ ಕೈವಲ್ಯವೆಂಬ ಪುರುಷಾರ್ಥ ಪಂಚಕವೂ, ನಿರೂಪಿಸಲ್ಪಟ್ಟಿವೆ. ಸಮಸ್ತಗುಣ ವಿಗ್ರಹ ವಿಭೂತಿ ವ್ಯಾಪಾರ ವಿಶಿಷ್ಟತಯಾ ಪರಮಪ್ರಾಪ್ಯವೂ ಒಂದಾಗಿರುವಾಗ, ಪ್ರಾಪ್ಯಪಂಚಕವೆಂಬ ನಿರೂಪಣವು ಅಪರಾಮರ್ಶ ಮೂಲವಾದದ್ದು. ಪ್ರಾಪ್ಯ ಪ್ರತಿ ಸಂಬಂಧಿಯಾದ ಜೀವನನ್ನು ಐದು ವಿಭಾಗ ಮಾಡುವುದೂ ದುರ್ವ ಚವು. ಜ್ಞಾನಕರ್ಮಯೋಗಗಳು ಭಕ್ತಿಯೋಗದ ಅಂಗಗಳು. ಸಾಕ್ಷಾದುಪಾಯವಲ್ಲದಿರುವಾಗ ಅವುಗಳನ್ನು ಸಾಕ್ಷಾದುಪಾಯದ ಜತೆಗೆ ಪರಿಗಣಿಸುವುದೂ, ಹಾಗೆಯೇ ಆಚಾರ್ಯಾಭಿಮಾನವು ಆಚಾರ್ಯನಿಷ್ಠೆಯೆಂಬ ಪ್ರಪತ್ತಿ ಶಾಸ್ತ್ರದ ಅವಾಂತರ ಭೇದವಾಗಿರುವಾಗ ಅದನ್ನು ಉಪಾಯಾಂತರವೆಂದು ಪರಿಗಣಿಸುವುದೂ ಅನಿರೂಪಣ ಮೂಲಕೃತ್ಯ. ಸರ್ವತ್ರ ಬ್ರಹ್ಮಪ್ರಾಪ್ತಿಯು ವಿವಕ್ಷಿತವಾಗಿರುವಾಗ, ಧರ್ಮ, ಅರ್ಥ, ಕಾಮ, ಕೈವಲ್ಯಗಳನ್ನು ಅದಕ್ಕೆ ಸಮಾನವಾಗಿ ವಿವಕ್ಷಿಸುವುದೂ ಅನುಪಪನ್ನ. ಪರತ್ವ ವಿರೋಧಿಯಾದ ವಿರೋಧಿ ಪಂಚಕ ಕಲ್ಪನವೂ ಅತ್ಯಂತ ಪರಿಹಾಸ್ಯವಾದದ್ದು, ಎಂಬುದು ಆಚಾರ್ಯರ ಹೃದಯ

ಶರೀರವಿಲ್ಲದೆ ಆತ್ಮನು ಯಾವ ಕೆಲಸವನ್ನೂ ಮಾಡಲಾರನಾದ್ದರಿಂದ ಸಕಲ ಪುರುಷಾರ್ಥಕ್ಕೂ ಸಾಧನವಾದದ್ದು ಶರೀರ ಅದಕ್ಕಿಂತಲೂ ಸರ್ವಾಂತರ್ಯಾಮಿಯಾದ ಪರಮ ಪುರುಷನು ಪ್ರಧಾನನು ಆತ್ಮಪರ್ಯಂತವಾದ ಸರ್ವವೂ ಅವನ ಸಂಕಲ್ಪಾಧೀನವಾಗಿದೆ ಯಾದ್ದರಿಂದ ಅವನು ಪ್ರಧಾನನು. ಅವನನ್ನು ವಶ ಪಡಿಸಿ ಕೊಂಡರೆ, ಸರ್ವವೂ ವಶವಾಗುತ್ತದೆ. ಅವನನ್ನು ವಶಪಡಿಸಿಕೊಳ್ಳಬೇಕಾದರೆ ಅವನ ಕಾಲಲ್ಲಿಬಿದ್ದು ಶರಣಾಗತಿ ಮಾಡುವುದು ಮಾರ್ಗ

ಪ್ರಾ.ತಿ ಸೋ॰

ಪೊರುಳೊನ್ರೆನ ನಿನ್ರಪೂಮಗಳ್ನಾತನವನಡಿ ಶೇರ್ನ್ದು ।
ಅರುಳೊನ್ರು ಮನ್ನವನ್ ಕೊಳುಪಾಯ ಮನ್ನೈನ್ದ್ಪಯನ್ ॥
ಮರುಳೊನ್ರಿಯ ವಿನೈವಲ್ ವಿಲಙ್ಗಿನ್ರಿವೈಯೈನ್ದರಿವಾರ್ ।
ಇರುಳೊನ್ರಿಲಾವಹೈ ಎಮ್ಮನಸ್ತೇರವಿಯಮ್ಬಿನರೇ ॥೧೧॥

ಅನಂತರ ತಾವು ನಿರೂಪಿಸಿದ ಅಧಿಕಾರಾರ್ಥವನ್ನು **ಪೊರುಳೊನ್ರೆನನಿನ್ರ ಎಂಬ**— ಪಾಶುರದಿಂದ ವ್ಯಕ್ತಪಡಿಸುತ್ತಾರೆ-

ಪೊರುಳೊನೆನಿನ್ರ ಪೂಮಹಳ್ನಾದನ್ — ಪ್ರಧಾನಪ್ರಾಪ್ಯವಾದ ಪದಾರ್ಥವು ಹೂವಿನಲ್ಲಿ ಅವತರಿಸಿದ್ದ ಲಕ್ಷ್ಮಿಗೆ ನಾಥನು ಇದರಿಂದ ಪ್ರಾಪ್ಯಪಂಚಕವೆಂಬ ಭೇದವನ್ನು ಕಲ್ಪಿಸುವುದು ಅಸನ್ಯಾಯವ ಆಲ ಮೇಲೂ ಲಕ್ಷ್ಮಿ ವಿಶೇಷಣವಿಶಿಷ್ಟನಾದ ತತ್ತ್ವವು ಒಂದೇ. ಲಕ್ಷ್ಮಿ ಮತ್ತು ಅವಳ ವಲ್ಲಭನಿಗೆ ಬ್ರಹ್ಮಭಾವನನ್ನು ಹೇಳುವುದರಿಂದ ಅದ್ವಿತೀಯ ಶ್ರುತಿಗೆ ವಿರೋಧವಿಲ್ಲ ವಿಶಿಷ್ಟ ವೇಷಣ ತತ್ತ್ವವು ಒಂದೇ

ತಾವಿಮಾವೇಕಧೈವೋಕ್ತೌ ಭೇದ್ಯ ಭೇದಕ ಭಾವತಃ ॥
ಅಪೃಥಗ್ಭೂತ ಶಕ್ತಿತ್ವಾತ್ ಬ್ರಹ್ಮಾದ್ವೈತಂ ತದುಚ್ಯತೇ ॥

ಇತ್ಯಾದಿ ಭಗವಚ್ಛಾಸ್ತ್ರ ವಚನಗಳಿಂದ ತತ್ತ್ವವು ವಿಶಿಷ್ಟ ವೇಷಣ ಒಂದು ಎಂಬುದೇ, ಅದ್ವಿತೀಯ ಶ್ರುತಿಗೆ ತಾತ್ಪರ್ಯವೆಂಬುದು ನಿರ್ವಹಿಸಲ್ಪಡುತ್ತದೆ

ಪೂಮಹಳ್ನಾದನ್ — ಎಂದು ಹೇಳಿರುವುದರಿಂದ ಕೇವಲ ನಾರಾಯಣನು ಪರಮ ಪ್ರಾಪ್ಯವೆಂಬುದೂ ನಿರೂಪಿಸಲ್ಪಟ್ಟಿತು. **ಅವನಡಿ ಶೇರ್ನ್ದು** ಅವನ ಪಾದಾರವಿಂದಗಳನ್ನು ಆಶ್ರಯಿಸಿ. ಅವನ ಎಂದು ಏಕವಚನವು ಪುರುಷ ಪ್ರಾಧಾನ್ಯದಿಂದಹೇಳಲ್ಪಟ್ಟಿದೆ ವಸ್ತುತಃಲಕ್ಷ್ಮೀ ವಿಶಿಷ್ಟನಾಗಿ ಅವನು ಉಪಾಯ ಭೂತನು ಉಪಾಯವು ದ್ವಿನಿಷ್ಠ **ಅರುಳ್ ಒನ್ರುಮ ನ್ನನ್** — ಅವನ ನಿತ್ಯ ಕೈಂಕರ್ಯವನ್ನು ಮಾಡಬಲ್ಲ ಕೃಪೆಯನ್ನು ಪಡೆದ, ಭಕ್ತಿಯಿಂದ ಕೂಡಿದ ಜೀವನು (ಪ್ರಾಪ್ತಾ) **ಆವನ್ಕೊಳ್ ಉಪಾಯಮ್** ಆ ಜೀವನು ಪರಿಗ್ರಹಿಸುವ ಭಕ್ತಿಪ್ರಪತ್ತಿರೂಪವಾದ ಉಪಾಯ, [ಪ್ರಾಪ್ತ್ಯುಪಾಯ] **ಅನ್ನೈನ್ದ ಪಯನ್** — ಜೀವನ ಶೇಷತ್ವ ಸ್ವರೂಪಕ್ಕೆ ಸರಿಯಾದ ಫಲ ಮೋಕ್ಷಾನಂದ **ಮರುಳೊನ್ರಿಯವಿನೈ** — ಅವಿದ್ಯೆಯಿಂದ ಕೂಡಿದ ಪಾಪಗಳೆಂಬ **ವಲ್ ವಿಲಂಗು** — ಬಲಿಷ್ಠವಾದ ನಿಗಳನ, [ಪ್ರಾಪ್ತಿವಿರೋಧಿ] **ಎನ್ರಿವೈ ಯೈಂದು** — ಎಂಬ ಈ ಐದು — [ಅರ್ಥಪಂಚಕ] **ಅರಿವಾರ್** ಅರ್ಥಗಳನ್ನು ಯಥಾವಸ್ಥಿತವಾಗಿ ತಿಳಿದ ನಮ್ಮ ಆಚಾರ್ಯರುಗಳು.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವಚ । ಬುದ್ಧಿಂತುಸಾರಥಿಂ ವಿದ್ಧಿ ಮನಃ ಪ್ರಗ್ರಹ ಮೇವಚ । ಇಂದ್ರಿಯಾಣಿಹಯಾ ನ್ಯಾಹು ವಿಷಯಾಂ ಸ್ತೇಷು ಗೋಚರಾನ್–ಎಂಬ ಶ್ರುತಿಯ ಪ್ರಕಾರ ಶರೀರವೆಂಬ ರಥದಲ್ಲಿ ಜೀವನು ಕುಳಿತಿರುವ ರಥಿ ಬುದ್ಧಿಯು ಸಾರಥಿ ಮನಸ್ಸು ಕಡಿವಾಣ ಇಂದ್ರಿಯಗಳು ವಿಷಯ ಸುಖವೆಂಬ ಪ್ರದೇಶಗಳಲ್ಲಿ ಓಡುವಕುದುರೆಗಳು ಈ ಇಂದ್ರಿಯಗಳು ಪ್ರಾಕೃತಸುಖಗಳಲ್ಲಿ ಲೀನವಾಗದ ಹಾಗೆ ಮನಸ್ಸೆಂಬ ಕಡಿವಾಣದಿಂದ, ಶರೀರವೆಂಬರಥದಲ್ಲಿ ಕುಳಿತಿರುವ ಜೀವನು ತನ್ನ ಬುದ್ಧಿಯನ್ನು ಉಪಯೋಗಿಸಿ, ಇಂದ್ರಿಯಗಳನ್ನು ಸನ್ಮಾರ್ಗದಲ್ಲಿ ನಡೆಸಬೇಕು ಹೀಗೆ ಸನ್ಮಾರ್ಗದಲ್ಲಿ ಬುದ್ಧಿಯ ಪ್ರವರ್ತಿಸಲು ಭಗವಂತನ ಪಾದಗಳಲ್ಲಿ ಬಿದ್ದು ಮೊರೆಯಿಟ್ಟರೆ ಇಂದ್ರಿಯ ಜಯವು ಏರ್ಪಟ್ಟು ಆತ್ಮಕ್ಷೇಮವು ಉಂಟಾಗುತ್ತದೆ

ಯಚ್ಛೇತ್ ವಾಙ್ಮನಸೀ ಪ್ರಾಜ್ಞಃ ತ್ಯದಚ್ಛೇತ್ ಜ್ಞಾನ ಆತ್ಮನಿ ।
ಜ್ಞಾನಮಾತ್ಮನಿ ಮಹತಿನಿಯಚ್ಛೇತ್ ತದ್ಯಚ್ಛೇತ್ ಶಾಂತ ಆತ್ಮನಿ ॥
ಜ್ಞಾನಕರ್ಮೇಂದ್ರಿಯಗಳನ್ನು ಮನಸ್ಸಿನಲ್ಲಿ ಅಡಗಿಸಬೇಕು, ಮನಸ್ಸು ಇಂದ್ರಿಯ ಪ್ರವಣವಾಗದೆ ಅಡಗಿಸಲ್ಪಡ ಬೇಕೆಂದರ್ಥ

ಪ್ರಾಪ್ಯಂ ಬ್ರಹ್ಮ ಸಮಸ್ತ ಶೇಷಿ ಪರಮಂ ಪ್ರಾಪ್ತಾऽಹ ಮಸ್ಯೋಚಿತಃ
ಪ್ರಾಪ್ತಿರ್ದಾಯಧನ ಕ್ರಮಾದಿಹ ಮಮಪ್ರಾಪ್ತಾ ಸ್ವತಸ್ಸೂರಿವತ್ ।
ಹಂತೈನಾಮತಿ ವೃತ್ತವಾನಹ ಮಹಂಮತ್ಯಾ ವಿಮತ್ಯಾಶ್ರಯಃ
ಸೇತು ಸ್ಸಂಪ್ರತಿ ಶೇಷಿದಂಪತಿ ಭರನ್ಯಾಸಸ್ತ್ವಮೇ ಶಿಷ್ಯತೇ ॥ 13 ॥
ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ ಶ್ರೀಮದ್ವೇಂಕಟನಾಥಸ್ಯ ವೇದಾಂತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಅರ್ಥಪಞ್ಚಕಾಧಿಕಾರಶ್ಚತುರ್ಥಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯನಮಃ

ಇರುಳ್–ಅಜ್ಞಾನ, ಸಂಶಯ, ವಿಪರ್ಯಯ (ವ್ಯತ್ಯಾಸವಾಗಿ ತಿಳಿಯುವುದು) ಇವುಗಳಲ್ಲಿ **ಒನ್ರು ಇಲಾವಹೈ**–ಒಂದೂ ಇಲ್ಲದೆ ಹೋಗುವಂತೆ, **ಎನ್ ಮನಮ್**–ಅತಿಮಂದ ಬುದ್ಧಿಯಿಂದ ಕೂಡಿದ ನನ್ನ ಮನಸ್ಸನ್ನು **ತೇರ**-ನಿಶ್ಚಯ ಜ್ಞಾನವನ್ನು ಹೊಂದುವಂತೆ, **ಇಯಂಬಿನರೇ**–ಉಪದೇಶಿಸಿದರು

ಲಕ್ಷ್ಮೀನಾಥನೇ ಪ್ರಾಪ್ಯನಾದ ಬ್ರಹ್ಮ ಅವನ ಪಾದಗಳಲ್ಲಿ ಶರಣ ಹೊಂದಿ ಅವನ ಕೃಪೆಯನ್ನೇ ಅವಲಂಬಿಸಿರುವವನು ಜೀವಾತ್ಮಾ ಆ ಜೀವನು ಪರಿಗ್ರಹಿಸಬೇಕಾದ ಉಪಾಯ ಭಕ್ತಿ, ಪ್ರಪತ್ತಿಗಳಲ್ಲೊಂದು. ಅದರಿಂದ ಲಭಿಸುವುದು ಮೋಕ್ಷಾಖ್ಯ ಪುರುಷಾರ್ಥ ಇದಕ್ಕೆ ವಿರೋಧವಾದದ್ದು ಅನಾದಿಯಾದ ಅವಿದ್ಯಾ ರೂಪವಾದ ಸಂಸಾರವೆಂಬ ಬಂಧನ ಈ ಐದು ಅರ್ಥಗಳನ್ನು ಆಚಾರ್ಯರು ನಮಗೆ ಉಪದೇಶಿಸಿದ್ದಾರೆ

ಈ ರೀತಿಯಾದ ಅರ್ಥ ಪಂಚಕ ಜ್ಞಾನಕ್ಕೆ ಮೋಕ್ಷೋಪಾಯವನ್ನು ಅವಲಂಭಿಸುವುದೇ ಫಲವೆಂಬುದನ್ನು **ಪ್ರಾಪ್ಯಂ ಬ್ರಹ್ಮ ಸಮಸ್ತ ಶೇಷಿ** ಎಂದು ಆಚಾರ್ಯರು ನಿಗಮಿಸುತ್ತಾರೆ. **ಪ್ರಾಪ್ಯಂ**–ಪ್ರಾಪ್ಯನಾದ–ನಮ್ಮಿಂದ ಹೊಂದಲ್ಪಡತಕ್ಕವನು. **ಬ್ರಹ್ಮ**-ಸ್ವಭಾವದಿಂದಲೇ ಸಕಲದೋಷ ರಹಿತನಾಗಿ ಎಲ್ಲೆಯಿಲ್ಲದ ಹಾಗೂ ಲೆಖ್ಖವಿಲ್ಲದ ಕಲ್ಯಾಣ ಗುಣ ಪೂರಿತನಾಗಿ ನಿರತಿಶಯ ಬೃಹತ್ ಸ್ವರೂಪನು. **ಸಮಸ್ತ ಶೇಷಿ**–ನಿರುಪಾಧಿಕವಾಗಿ(ಕಾರಣವಿಲ್ಲದೆ) ಎಲ್ಲರಿಗೂ ಸ್ವಾಮಿಯಾದವನು. **ಪರಮಂ**–ಹೇಯ ಗುಣವಿಲ್ಲದೆ ಇರುವುದರಿಂದಲೂ, ಮಂಗಳ ಗುಣಗಳಿಂದ ಕೂಡಿದವನಾಗಿ ಎಲ್ಲರಿಗೂ ಶೇಷಿಯಾಗಿರುವುದರಿರದಲೂ, ಇವನಿಗಿಂತ ಉತ್ಕೃಷ್ಟನಾದವನಾರೂ ಇಲ್ಲದ ಹಾಗೆ ಸರ್ವೋತ್ಕೃಷ್ಟನು. ಇದರಿಂದ ಪಾಪ್ತಿಗೆ ಅಂದರೆ ಭಗವಂತ ತನ್ನನ್ನು ಜೀವರಾಶಿಗಳು ಪಡೆಯಲು ಅತ್ಯಂತ ಅನುಕೂಲನಾಗಿದ್ದಾನೆಂಬುದು **ಭಾವ.**

ಪ್ರಾಪ್ತಾ–ಈ ಬ್ರಹ್ಮವನ್ನು ಹೊಂದಲು, **ಅಹಂ**–ನಾನು **ಅಸ್ಯ**–ಈ ಬ್ರಹ್ಮಕ್ಕೆ **ಉಚಿತಃ**-ಅರ್ಹನು, ಜ್ಞಾನಾನಂದತ್ವಾಮಲತ್ವ ನಿರುಪಾಧಿಕ ದಾಸತ್ವಗಳಿಂದ ಕೂಡಿದ ನಾನು ಅತ್ಯಂತ ಉಚಿತನು. **ಪ್ರಾಪ್ತಿ**–ಭಗವದನುಭವ ಪರಿವಾಹ ಕೈಂಕರ್ಯ ರೂಪ ಪ್ರಾಪ್ತಿಯು **ಇಹ**-ಈ ಲೋಕದಲ್ಲಿ, **ಮಮ**–ನಿರುಪಾಧಿಕ ದಾಸನಾದ ನನಗೆ **ದಾಯಧನಕ್ರಮಾತ್**–ತನ್ನ ಪ್ರಯತ್ನವಿಲ್ಲದೇನೆ - ತಂದೆಗೆ ಮಗನಾಗಿ ಹುಟ್ಟಿದ ಮಾತ್ರದಿಂದಲೇ ತಂದೆಯ ಆಸ್ತಿಯು ಮಗನಿಗೇ ಸೇರುವುದು ದಾಯ ಪ್ರಾಪ್ತ – ಆ ರೀತಿಯಲ್ಲಿ ಭಗವತ್ಕೈಂಕರ್ಯ ಪ್ರಾಪ್ತಿಯು ಜೀವನಿಗೆ ಸೇರಿದ್ದುದ್ದು. **ಸೂರಿವತ್**–ನಿತ್ಯ ಸೂರಿಗಳಿಗೆ ಹೇಗೋ ಹಾಗೆ, **ಸ್ವತಃ ಪ್ರಾಪ್ತಾ**–ತಾನಾಗಿಯೇ ಸೇರಿದ್ದುದ್ದು ಭಗವತ್ಪ್ರಾಪ್ತಿಯು ಜೀವನ ಹಕ್ಕು ಎಂದರ್ಥ. **ಹಂತ**–ವಸ್ತು ಸ್ಥಿತಿಯು ಹೀಗೆ ಇರುವಾಗ ಇದನ್ನು ಇಷ್ಟು ಕಾಲ ಪಡೆಯದೆ ಇರುವುದು ನನ್ನ ದುರದೃಷ್ಟವೆಂದು **ಖೇದೋಕ್ತಿ. ಏನಾಂ**–ನಮಗೆ ಸ್ವಾಮಿಯಾದ, ನಿತ್ಯ ಸೂರಿಗಳಿಂದ ಅನಾದಿಕಾಲದಿಂದ ಅನುಭವಿಸಿ **ಬರುವ, ಈ** ಭಗವತ್ಪ್ರಾಪ್ತಿಯನ್ನು. **ಅಹಂಮತ್ಯಾ**–**ಸ್ವಾತಂತ್ರ್ಯ** ರೂಪ ದುರಭಿಮಾನದಿಂದ **ವಿಮತ್ಯಾಶ್ರಯಃ**–ಇವುಗಳೆಲ್ಲಾ ನನಗೆ ಶೇಷಭೂತಗಳೆಂಬ ವಿಪರೀತ ಬುದ್ಧಿಯನ್ನು ಹೊಂದಿ, **ಅತಿವೃತ್ತವಾನ್**–ಅತಿಕ್ರಮಿಸಿದ್ದೇನೆ. ನಾನು ಸ್ವತಂತ್ರನು, ಬಾಕಿ ಎಲ್ಲಕ್ಕೂ ನಾನೇ ಸ್ವಾಮಿ

ಎಂಬ ದುರಭಿಮಾನವೇ ಇದಕ್ಕೆ ಕಾರಣ. **ಸಂಪ್ರತಿ**–ಆಚಾರ್ಯನಿಂದ ಕಟಾಕ್ಷಿಸಲ್ಪಟ್ಟು, ಅರ್ಥ ಪಂಚಕ ಜ್ಞಾನವನ್ನು ಪಡೆದ ನಂತರ, **ಮೇ**–ಅಪರಾಧಿಯಾಗಿ ಸಂಸಾರ ಜಲಧಿ ಮಗ್ನನಾದ ನನಗೆ, **ಶೇಷಿ ದಂಪತಿ ಭರನ್ಯಾಸಸ್ಸೇತುಸ್ತು**–ಸ್ವಾಮಿಗಳಾದ ದಿವ್ಯ ದಂಪತಿಗಳಲ್ಲಿ ಭರಸಮರ್ಪಣ ರೂಪವಾದ ಉಪಾಯವೊಂದೇ **ಶಿಷ್ಯತೇ**-ಉಳಿದಿದೆ. **ಶೇಷಿ ದಂಪತಿ ಭರನ್ಯಾಸಸ್ತು** ಎಂಬುದರಿಂದ ಶೇಷಿದಂಪತಿಗಳಿಬ್ಬರೂ ಸೇರಿ ಪ್ರಪತ್ತಿ ಪ್ರಸಾದ್ಯರೆಂಬುದು ವ್ಯಕ್ತ. ಕೇವಲ ನಾರಾಯಣನು ಉಪಾಯನಲ್ಲ. ಇಬ್ಬರೂ ಸೇರಿ ಉಪಾಯ ಭೂತರು.

"**ದೀಪಸ್ತ್ವಮೇವಜಗತಾಂದಯಿತಾರುಚಿಸ್ತೇ** ದೀರ್ಘಂತಮಃ ಪ್ರತಿನಿವರ್ತ್ಯಮಿದಂ ಯುವಾಭ್ಯಾಂ"–ಎಂಬ ಶರಣಾಗತಿ ದೀಪಿಕಾ ಶ್ರೀ ಸೂಕ್ತಿಯು ಇಲ್ಲಿ ಅನುಸಂಧೇಯ ಅರ್ಥ–ಜಗತ್ತಿಗೆ ಭಗವಂತನೇ ದೀಪದಂತೆ ಪ್ರಕಾಶಕನು ಅವನ ಪ್ರಾಣವಲ್ಲಭೆಯು, ದೀಪದಕಾಂತಿ(ರುಚಿ)ಯ ಹಾಗೆ ದೀಪವನ್ನು ಕಾಂತಿಯು ಬಿಟ್ಟಿರಲಾರದು. ಅಪೃಥಗ್ಭೂತವಾದುದು. ಈ ಎರಡು ತತ್ವಗಳೂ ಹೀಗೆ **ವಿಶೇಷಣ** ವಿಶಿಷ್ಟ ರೂಪದಲ್ಲಿ ಏಕ ತತ್ತ್ವದಂತೆ ಲೋಕಕ್ಕೆ ಪ್ರಕಾಶವನ್ನು ಕೊಡುವವರು. ಈ ಸಂಸಾರವೆಂಬ ಅನಾದಿಯಾದ ಕತ್ತಲೆಯು ಈ ನಿಮ್ಮಿಂಬ್ಬರಿಂದಲೇ ಹೋಗಲಾಡಿಸಲ್ಪಡತಕ್ಕದ್ದು. ನೀವಿಬ್ಬರೇ ಉಪಾಯಭೂತರು ಎಂದರ್ಥ

अमृतस्यैष सेतु : ಎಂಬ ಶ್ರುತ್ಯರ್ಥವು ಇಲ್ಲಿ ದ್ಯೋತಿತ.

ತಾತ್ಪರ್ಯ : ಬ್ರಹ್ಮ ಶಬ್ದ ವಾಚ್ಯನಾದ ಶ್ರಿಯಃ ಪತಿಯಾದ ನಾರಾಯಣನೇ ಪ್ರಾಪ್ಯನು, ಸಂಸಾರಿ ಜೀವನು ಈ ಬ್ರಹ್ಮವನ್ನು ಹೊಂದತಕ್ಕವನು ಪಿತ್ರಾರ್ಜಿತವಾದ ಸೊತ್ತಿನಂತೆ, ಭಗವತ್ಪ್ರಾಪ್ತಿಯು ಜೀವನ ಹಕ್ಕು. ನಿತ್ಯಸೂರಿಗಳು ಭಗವಂತನನ್ನು ಅನುಭವಿಸುವಂತೆ ಬದ್ಧರೂ ಅನುಭವಿಸಲು ಯೋಗ್ಯರು. ಇಷ್ಟುಕಾಲ ಆ ಭಗವಂತನನ್ನು ತಿಳಿದುಕೊಳ್ಳದೆ, ನಮ್ಮ ಹಕ್ಕೇನೆಂಬುದನ್ನೂ ತಿಳಿದು ಕೊಳ್ಳದೆ ಇರುವುದಕ್ಕೆ ನಮ್ಮ ದುರಭಿಮಾನವೇ ಕಾರಣ. ದೇಹವೇ ಆತ್ಮಾ, ನಾನು ಸ್ವತಂತ್ರನೆಂಬುದೇ ದುರಾಭಿಮಾನ ಇನ್ನು ಮೇಲಾದರೂ ಆ ಶೇಷಿ ದಂಪತಿಗಳನ್ನು ಪಡೆಯಲು ಯತ್ನಿಸಿ, ಅವರ ಪಾದಾರವಿಂದಗಳಲ್ಲಿ ಮರೆಹೋಗುವುದೊಂದೇ ಬಾಕಿ. ಹಾಗೆ ಮರೆಹೊಕ್ಕರೆ ಅವರು ನಮ್ಮನ್ನು ಸಂಸಾರದಿಂದ ದಾಟಿಸಬಲ್ಲರು.

ಶ್ರೀಮತೇನಿಗಮಾಂತಮಹಾದೇಶಿಕಾಯನಮಃ

ಅರ್ಥಪಂಚಕಾಧಿಕಾರಕ್ಕೆ ಸಾರಚಂದ್ರಿಕಾ ವ್ಯಾಖ್ಯಾನವು ಮುಗಿಯಿತು.

ಶ್ರೀಯೈನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ

ಶ್ರೀಮನ್ನಿಗಮಾಂತ ಮಹಾದೇಶಿಕ ವಿರಚಿತ ಶ್ರೀಮದ್ರಹಸ್ಯತ್ರಯಸಾರೇ

ತತ್ವತ್ರಯಾಧಿಕಾರಃ

ಪ್ರಕೃತ್ಯಾತ್ಮ ಭ್ರಾಂತಿರ್ಗಳತಿ ಚಿದ ಚಿಲ್ಲಕ್ಷಣ ಧಿಯಾ
ತಥಾಜೀವೇಶೈಕ್ಯ ಪ್ರಭೃತಿ ಕಲಹ ಸ್ತದ್ವಿಭಜನಾತ್ ।
ಅತೋ ಭೋಕ್ತಾ ಭೋಗ್ಯಂ ತದುಭಯ ನಿಯಂತೇತಿ ನಿಗಮೈ
ರ್ವಿಭಕ್ತಂ ನಸ್ತತ್ವತ್ರಯ ಮುಪದಿಶಂ ತ್ಯಕ್ಷತಧಿಯಃ ॥ 14 ॥

ತತ್ವತ್ರಯಜ್ಞಾನ ಪ್ರಯೋಜನ

ಸಂಬಂಧಮುಮ್ ಅರ್ಥಪಞ್ಚಕಮುಞ್ಗಡ ಅರ್ಥಮರಿಯವೇಣ್ಡಿಯಿರುಕ್ಕ ಇವ್ಱ್ಱಿಲೇಕದೇಶಮಾನತತ್ವತ್ರಯತ್ತೈ ಮುಮುಕ್ಷುವುಕ್ಕು ವಿಶೇಷಿತ್ತರಿಯವೇಣುಮೆನ್ರು ಆಚಾರ್ಯರ್‌ಹಳುಪದೇಶಿತ್ತು ಪ್ಪೋರಹೈಕ್ಕಡಿ ಎನ್ಎನ್ನಿಲ್? ಅದುಕ್ಕಡಿ ಪ್ರಕೃತ್ಯಾತ್ಮಭ್ರಮುಮುಮ್, ಸ್ವತನ್ತ್ರಾತ್ಮಭ್ರ ಮಮುಮ್, ಇದಕ್ಕು ನಿದಾನಮಾನವನೀಶ್ವರವಾದ ರುಚಿಯು ಮಾಹಿರ ಮಹಾವಿರೋಧಿಹಳೈಯುರ್ಪಡಕ್ಕ್ಱಿಕ್ಕಪ್ಪ್ರಾಪ್ತಮಾಹೈ. ಇತ್ತೈನಿನೈತ್ತು, ಭೋಕ್ತೃ, ಭೋಗ್ಯ, ನಿಯನ್ತೃ ರೂಪತ್ತಾಲೇ, ಶಾಸ್ತ್ರಙ್ಗಳಿಲೇ ತತ್ವವಿವೇಕಂ ಪಣ್ಣಿಹಿರದು.

ಶ್ರೀಮನಿಗಮಾಂತ ಮಹಾದೇಶಿಕ ವಿರಚಿತ

ತತ್ವತ್ರಯಾಧಿಕಾರ ಸಾರಚಂದ್ರಿಕಾ ವ್ಯಾಖ್ಯಾ

ಮುಮುಕ್ಷುವಿಗೆ ವಿಶೇಷವಾಗಿ ತಿಳಿಯಬೇಕಾದ, ಪ್ರಧಾನಪ್ರತಿತಂತ್ರವಾದ ಶರೀರಾತ್ಮಭಾವ ಸಂಬಂಧವನ್ನೂ, ಅರ್ಥಪಂಚಕಗಳನ್ನೂ ನಿರೂಪಿಸಿಯಾಯಿತು. ಈಗ ತತ್ವತ್ರಯಗಳ ಸ್ವರೂಪವನ್ನೂ ಈ ಅಧಿಕಾರದಲ್ಲಿ ನಿರೂಪಿಸುವವರಾಗಿ **ಪ್ರಕೃತ್ಯಾತ್ಮ ಭ್ರಾಂತಿಃ**, ಎಂದಾರಂಭಿಸುತ್ತಾರೆ ಈ ತತ್ವತ್ರಯಗಳು ಅರ್ಥಪಂಚಕಗಳಲ್ಲಿ ಅಡಗಿದ್ದಾಗ್ಯೂ "ಭೋಕ್ತಾಭೋಗ್ಯಂ ಪ್ರೇರಿತಾರಂಚಮತ್ವಾ, ಜುಷ್ಟಸ್ತತಸ್ತೇನಾಽ ಮೃತತ್ವಮೇತಿ" ಎಬ ಶ್ರುತಿಯ ಪ್ರಕಾರ, ಜೀವಾತ್ಮ ಪರಮಾತ್ಮರ ಮತ್ತು ಅಚೇತನದ ಸ್ವರೂಪವೈಲಕ್ಷಣ್ಯಗಳನ್ನು ಚನ್ನಾಗಿ ತಿಳಿದುಕೊಂಡರೇನೇ, ದೇಹಾತ್ಮ ಭ್ರಮವೂ ಸ್ವತಂತ್ರಾತ್ಮಭ್ರಮವೂ ತೊಲಗುತ್ತದೆ. ಆಗತಾನೇ ಮೋಕ್ಷಾರ್ಥದಲ್ಲಿ ಅಭಿರುಚಿಯೂ ಹುಟ್ಟುತ್ತದೆ ಎಂಬುದು ಅಭಿಪ್ರಾಯ. ಇದನ್ನು ಆಚಾರ್ಯವರ್ಯರು "**ಪ್ರಕೃತ್ಯಾತ್ಮಭ್ರಾಂತಿಃ**" ಎಂದಾರಂಭಿಸಿ ತಾವೇ ವಿವರಿಸುತ್ತಾರೆ.

ಪ್ರಕೃತ್ಯಾತ್ಮ ಭ್ರಾಂತಿ :- ಚೇತನವಾದ ಪ್ರಕೃತಿ ಪರಿಣಾಮವಾದ ದೇಹ; ಇಂದ್ರಿಯ, ಮನ, ಪ್ರಾಣಗಳಲ್ಲಿ, ದೇವೋಽಹಮ್ ಇತ್ಯಾದಿ ಭ್ರಮವು, **ಚಿದಚಿಲ್ಲಕ್ಷಣಧಿಯಾ–** ಚೇತನಾ ಚೇತನಗಳ ಲಕ್ಷಣಜ್ಞಾನದಿಂದ- **ಗಳತಿ**-ತಾನಾಗಿಯೇ ಜಾರಿಗೊಳ್ಳುತ್ತದೆ. **ತಥಾ**-ಹಾಗೆಯೇ, **ಜೀವೇಶೈಕ್ಯ ಪ್ರಭೃತಿ ಕಲಹಃ–** ಜೀವನೂ, ಈಶ್ವರನೂ ಒಂದೇ ಎಂಬ ಸ್ವತಂತ್ರಾತ್ಮಭ್ರಮ ಮೂಲವಾದ ನಿರೀಶ್ವರತ್ವ, ನಿರ್ಜೀವತ್ವ ಕಲಹವೂ, **ತದ್ವಿಭಜನಾತ್**–ಅವುಗಳ ಲಕ್ಷಣದಿಂದ, ಅದಾಗಿ ಅಣುತ್ವೇಸತಿ ಚೇತನತ್ವಮ್,–ಜೀವಲಕ್ಷಣ, ವಿಭುತ್ವೇಸತಿ ಚೇತನತ್ವಮ್–ಈಶ್ವರಲಕ್ಷಣ, ವೆಂದು ಹೇಳಿ ಜೀವೇಶ್ವರರುಗಳು ಬೇರೆ ಬೇರೆ ಎಂದು ನಿರೂಪಿಸಿದರೆ, ಇಬ್ಬರೂ ಒಂದೇ

ತ್ರಿವಿಧಮಾನ ಅಚೇತನ ಸ್ವರೂಪ ಸ್ವಭಾವಾದಿ ಕಥನಮ್

ಇವಟ್ರೈಲ್ ವೈತ್ತುಕೊಣ್ಣು (1) "ಅಚೇತನಾ ಪರಾರ್ಥ್ಯಾಚ ನಿತ್ಯಾಸತತವಿಕ್ರಿಯಾ ।
ತ್ರಿಗುಣಾ ಕರ್ಮಿಣಾಂ ಕ್ಷೇತ್ರಂ ಪ್ರಕೃತೇ ರೂಪ ಮುಚ್ಯತೇ ॥"
(2) "ಅನಾದಿ ರ್ಭಗವಾನ್ ಕಾಲೋ ನಾಂತೋಽಸ್ಯ ದ್ವಿಜವಿದ್ಯತೇ", (3) "ಕಲಾಮುಹೂರ್ತಾದಿ ಮಯಶ್ಚ ಕಾಲೋ ನಯದ್ವಿಭೂತೇಃ ಪರಿಣಾಮ ಹೇತುಃ," (4) "ಜ್ಞಾನಾನಂದ ಮಯಾ ಲೋಕಾಃ,"

ಎಂಬ ಕಲಹವು ಶಾಂತವಾಗುತ್ತದೆಯಲ್ಲವೆ ಜೀವನೇ ಇರುವುದು, ಈಶ್ವರನಿಲ್ಲ ಜೀವನು ಸ್ವತಂತ್ರ, (ನಿರೀಶ್ವರ ಮೀಮಾಂಸಕ, ನಿರೀಶ್ವರ ಸಾಂಖ್ಯರ ಮಾತು) ಈಶ್ವರನೇ ಇರುವುದು, ಜೀವನಿಲ್ಲ (ಇದು ಶಾಂಕರ ಭಾಸ್ಕರರ ಮಾತು) ಎಂಬ ಕಲಹವೂ **ಗಳತಿ**–ಪಾಮರರ ದೇಹಾತ್ಮ ಭ್ರಮದ ಹಾಗೆ ಸುಲಭವಾಗಿ **ಹೋಗಿಬಿಡುತ್ತದೆ. ಅತಃ**– ಹೀಗೆ ದೇಹಾತ್ಮ, ಸ್ವತಂತ್ರಾತ್ಮ ಭ್ರಮಗಳ ನಿವೃತ್ತಿಗೋಸ್ಕರ **ನಿಗಮೈಃ**–ಶ್ವೇತಾಶ್ವತರಾದಿ ವೇದಗಳಿಂದ, **ಭೋಕ್ತಾ ಭೋಗ್ಯಂ ತದುಭಯ ನಿಯಂತಾ, ಇತಿ**– ಭೋಕ್ತಾ-ಭೋಗವನ್ನು ಅನುಭವಿಸುವವನು (ಜೀವಾತ್ಮ), ಭೋಗ್ಯಂ ಭುಜಿಸಲ್ಪಡತಕ್ಕದ್ದು-ಅಚೇತನ ಪದಾರ್ಥ, ಇವೆರಡನ್ನೂ ನಿಯಮಿಸುವವನು ಪರಮಾತ್ಮಾ, ಎಂದು **ವಿಭಕ್ತಂ ತತ್ವತ್ರಯಂ**–ವಿಭಾಗಿಸಲ್ಪಟ್ಟ ಮೂರು ತತ್ವಗಳನ್ನು, **ನಃ**–ನಮಗೆ, **ಅಕ್ಷತಧಿಯಃ**–ಮೇಲೆ ಹೇಳಲ್ಪಟ್ಟ ಭ್ರಮಗಳಿಲ್ಲದ ಜ್ಞಾನವನ್ನುಳ್ಳಂಥ ನಮ್ಮ ಆಚಾರ್ಯರು, **ಉಪದಿಶಂತಿ** – ಶ್ರುತಿಯಲ್ಲಿ ಹೇಳಲ್ಪಟ್ಟ ರೀತಿಯಲ್ಲಿ ಅರ್ಥಗಳನ್ನು ಉಪದೇಶಿಸುತ್ತಾರೆ. ಇದರಿಂದ ಶ್ರುತಿ ಪ್ರಾಮಾಣ್ಯವೂ ಸಂಪ್ರದಾಯ ಪ್ರಾಮಾಣ್ಯವೂ ಹೇಳಲ್ಪಟ್ಟಿತು ತಾತ್ಪರ್ಯ, ದೇಹಾತ್ಮಭ್ರಮವು ಚಿತ್, ಅಚಿತ್ ಇವುಗಳ ಲಕ್ಷಣ ಜ್ಞಾನದಿಂದ ತೊಲಗುತ್ತದೆ. ಹಾಗೆಯೇ ಜೀವನೇ ಈಶ್ವರನು, ಎಂಬ ಕಲಹವೂ ಅವರವರ ಲಕ್ಷಣ ವಿಭಾಗದಿಂದ ತೊಲಗುತ್ತದೆ. ಆದ್ದರಿಂದ ಭೋಕ್ತಾ ಭೋಗ್ಯಂ, ಅವರುಗಳ ನಿಯಂತಾವಾದ ಈಶ್ವರನೆಂದು ವಿಭಕ್ತವಾದ ತತ್ವತ್ರಯಗಳನ್ನು ನಮ್ಮ ಆಚಾರ್ಯರು ನಮಗೆ ಉಪದೇಶಿಸಿದ್ದಾರೆ.

ತತ್ವತ್ರಯವನ್ನು ವಿಶೇಷಿಸಿ ತಿಳಿಯಬೇಕಾದ ಪ್ರಯೋಜನವೇನೆಂಬುದನ್ನು **ಸಂಬಂಧಮುಮ್ ಅರ್ಥಪಂಚಕಮುಮ್** ಎಂದಾರಂಭಿಸಿ ಆಚಾರ್ಯರು ತಿಳಿಸುತ್ತಾರೆ **ಅದಾಗಿ** ಶರೀರಾತ್ಮಭಾವ ಸಂಬಂಧವೂ, ಅರ್ಥಪಂಚಕವೂ ಸೇರಿ ಆರು ಅರ್ಥಗಳನ್ನು ತಿಳಿದುಕೊಳ್ಳಬೇಕಾಗಿರುವಾಗ, ಇವುಗಳಲ್ಲಿ ಏಕ ದೇಶವಾದ ತತ್ತ್ವ ತ್ರಯವನ್ನು ಮೋಕ್ಷದಲ್ಲಿ ಅಭಿಲಾಷೆಯುಳ್ಳವನು ವಿಶೇಷವಾಗಿ ತಿಳಿದುಕೊಳ್ಳಬೇಕೆಂದು ಆಚಾರ್ಯರುಗಳು ಉಪದೇಶಿಸಿರುತ್ತಾರೆ. ಇದಕ್ಕೆ ಕಾರಣವೇನೆಂದರೆ, ಪ್ರಕೃತ್ಯಾತ್ಮ ಭ್ರಮ (ಪ್ರಕೃತಿ ಪರಿಣಾಮವಾದ, ದೇಹ, ಇಂದ್ರಿಯ, ಮನಸ್ಸು, ಪ್ರಾಣ ಇವುಗಳಲ್ಲೊಂದು ಆತ್ಮಾವೆಂಬ ಭ್ರಮವೂ) ಸ್ವತಂತ್ರಾತ್ಮ ಭ್ರಮ (ಆತ್ಮಾಸ್ವತಂತ್ರನು ಈಶ್ವರನೊಬ್ಬನಿಲ್ಲ ಎಂಬುದು) ಇದಕ್ಕೆ ಕಾರಣವಾದ ಈಶ್ವರನಿಲ್ಲವೆಂಬವಾದದಲ್ಲಿ ರುಚಿ, ಎಂಬ ಮಹಾವಿರೋಧಿಗಳನ್ನು ಮೊಟ್ಟ ಮೊದಲು ನಿವೃತ್ತಿಮಾಡಿಕೊಳ್ಳಬೇಕು. ಈ ಭ್ರಮ ನಿವೃತ್ತಿಯು, ಹೋಗ ಬೇಕಾದದು ಅವಶ್ಯವೆಂದು ಭೋಕ್ತಾ, ಭೋಗ್ಯಂ, ನಿಯಂತಾ ಎಂಬ ರೀತಿಯಲ್ಲಿ ಶ್ವೇತಾಶ್ವತರ ಉಪನಿಷದಾದಿ ಶಾಸ್ತ್ರಗಳು, ತತ್ವಗಳ ಸ್ವರೂಪಗಳನ್ನು ಬೇರೆ ಬೇರೆಯಾಗಿ ತಿಳಿಸುತ್ತವೆ.

ತ್ರಿವಿಧ ಅಚೇತನ ವಿಭಾಗ

ಇವಟ್ರೈಲ್ ವೈತ್ತು ಕೊಂಡು ಇತ್ಯಾದಿ ಈ ತತ್ವತ್ರಯದಲ್ಲಿ ಅಡಗಿರುವ ಅಚೇತನ ತತ್ವವು **ಅಚೇತನಾ ಪರಾರ್ಥ್ಯಾಚ** ಇತ್ಯಾದಿಯಾಗಿ, ತ್ರಿಗುಣ, ಕಾಲ, ಶುದ್ಧಸತ್ವ ಎಂದು ಮೂರು ವಿಧವಾಗಿದೆ. ಇವುಗಳ ಸ್ವಭಾವಗಳೂ, ಈ ಶ್ಲೋಕಗಳಲ್ಲಿ ಹೇಳಲ್ಪಟ್ಟಿವೆ.

---

(1). (2). (3). (4) ವಿ. ತಿ. ನೋ.

(5) "ಕಾಲಂಸಪಚತೇ ತತ್ರನ ಕಾಲಸ್ತತ್ರವೈಪ್ರಭುಃ," ಇತ್ಯಾದಿಹಳಿಲೇ ತ್ರಿಗುಣ, ಕಾಲ, ಶುದ್ಧ ಸತ್ತ್ವ ರೂಪಙ್ಗಳಾನ ತ್ರಿವಿಧಾಚೇತನಙ್ಗಳುಡೈಯ ಸ್ವಭಾವಂ ಶೊಲ್ಲಿತ್ತು.

ತ್ರಿವಿಧ ಜೀವ ಪ್ರಕಾರಃ

(6) "ಪುಮಾನ್ನದೇವೋನನರಃ," (7) "ನಾಯಂದೇವೋ ನಮರ್ತ್ಯೋವಾ," (8) "ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ," (9) "ಯದ್ವೈಪಶ್ಯನ್ತಿ ಸೂರಯಃ," ಇತ್ಯಾದಿಗಳಿಲೇ ತ್ರಿವಿಧ ಜೀವರ್‌ಹಳುಡೈಯ ಪ್ರಕಾರಂ ವಿವೇಕಿಕ್ಕಪ್ಪಟ್ಟದು.

ತ್ರಿವಿಧ ಜೀವ ಪ್ರಕಾರ ·

ಪುಮಾನ್‌ನದೇವೋ, ಇತ್ಯಾದಿ ಪ್ರಮಾಣಗಳಿಂದ ಬದ್ಧ, ಮುಕ್ತ, ನಿತ್ಯರೆಂಬ ಮೂರು ವಿಧವಾದ ಜೀವರುಗಳ ಪ್ರಕಾರವು ಬೇರೆ ಬೇರೆಯಾಗಿ ಹೇಳಲ್ಪಟ್ಟಿದೆ.

---

1) ಪರಮ ಸಂಹಿತೆ–ಪ್ರಕೃತಿಯು ಜ್ಞಾನವಿಲ್ಲದದು ಇತರರ ಪ್ರಯೋಜನಕ್ಕಾಗಿಯೇ ಇದೆ. ಸ್ವರೂಪವು. ನಿತ್ಯವು ಅದರೂ ಸತತವಾಗಿ (ಯಾವಾಗಲೂ) ಬೇರೆ ಬೇರೆ ರೂಪವನ್ನು ಹೊಂದತಕ್ಕದು ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳಿಂದ. ಕೂಡಿರುವುದು ಪುಣ್ಯ ಪಾಪ ರೂಪ ಕರ್ಮಗಳನ್ನು ಮಾಡಿದವರಿಗೆ ಶರೀರವಾಗಿದೆ, ಹೀಗೆ ಈ ಪ್ರಕೃತಿಯ ಸ್ವರೂಪವು ಹೇಳಲ್ಪಟ್ಟಿದೆ

2) ಅನಾದಿರ್ಭಗವಾನ್‌ಕಾಲೋ ನಾಂತೋಽಸ್ಯ ದ್ವಿಜ ವಿದ್ಯತೇ ।
ಅವ್ಯುಚ್ಛಿನ್ನಾಸ್ತತಸ್ತ್ವೇತೇ ಸರ್ಗ ಸ್ಥಿತ್ಯಂತ ಸಂಯಮಾಃ ॥ (ವಿ. ಪು 1-2-26)
ಮೈತ್ರೇಯರೇ! ಭಗವಂತನ ರೂಪವಾದ (ಶರೀರವಾದ) ಕಾಲವು ಅನಾದಿ ಇದಕ್ಕೆ ಅಂತ್ಯವಿಲ್ಲ ಸೃಷ್ಟಿ, ಸ್ಥಿತಿ, ಸಂಹಾರಗಳು ಕಾಲದಿಂದ ವ್ಯವಸ್ಥಿತಗಳು. ಸೃಷ್ಟಿಕಾಲ, ಸ್ಥಿತಿಕಾಲ, ಸಂಹಾರಕಾಲವೆಂದು ಕಾಲದ ನಿರೂಢವು (ವ್ಯವಸ್ಥಿತಿಯು) ಅವ್ಯುಚ್ಛಿನ್ನವು-ಬೇರೆ ಬೇರೆಯಲ್ಲ ಒಂದೇ

3) ಕಲಾಮುಹೂರ್ತಾದಿಮಯಶ್ಚಕಾಲೋ ನಯದ್ವಿಭೂತೇಃ ಪರಿಣಾಮ ಹೇತುಃ
ಅಜನ್ಮನಾಶಸ್ಯಸದೇಕ ಮೂರ್ತೇರನಾಮ ರೂಪಸ್ಯಸನಾತನಸ್ಯ॥
(ವಿ ಪು 4-1-34)

ಕಲಾ–ವಿಘಳಿಗೆ, ಮೂಹೂರ್ತ–2 ಘಳಿಗೆಗಳಿಂದ ಕೂಡಿದ ಕಾಲವು ಕರ್ಮ ನಿಮಿತ್ತವಾದ ಜನ್ಮ ನಾಶವಿಲ್ಲದೆ, ಸದಾ ಏಕ ರೂಪವಾದ, ಕರ್ಮದಿಂದ ಉಂಟಾದ ದೇವಾದಿ ನಾಮ ರೂಪವಿಲ್ಲದ ಬ್ರಹ್ಮನು ಸನಾತನನು ಅವನ ನಿತ್ಯ ವಿಭೂತಿಯ ಪರಿಣಾಮಕ್ಕೆ ಕಾಲವು ಕಾರಣವಾಗಲಾರದು ಪ್ರಾಕೃತ ವಿಭೂತಿಯಲ್ಲಿ ವಸ್ತುಗಳಿಗೆ ಕಾಲದಿಂದ ಪರಿಣಾಮವುಂಟು ಆದರೆ ನಿತ್ಯ ವಿಭೂತಿಯಲ್ಲಿ (ವೈಕುಂಠ ಲೋಕದಲ್ಲಿ)ರುವ ಭಗವಂತನ ಅಪ್ರಾಕೃತ ಶರೀರ, ಮಂಟಪ ಗೋಪುರಾದಿ ನಿತ್ಯ ಲೋಕದಲ್ಲಿ-ರುವ ಅಚೇತನ ವಸ್ತುಗಳಿಗೆ ಕಾಲಪರಿಣಾಮವಿಲ್ಲ ಅಲ್ಲಿಯ ಪರಿಣಾಮಗಳೆಲ್ಲಾ ಭಗವಂತನ ಸಂಕಲ್ಪ ಮಾತ್ರದಿಂದಲೇ ಉಂಟಾಗುತ್ತವೆ

4) ಪಾಂಚರಾತ್ರ - ಶುದ್ಧ ಸತ್ತ್ವ ರೂಪವಾದ ಅಚೇತನ ದ್ರವ್ಯಗಳಿಗೆ ಪ್ರಮಾಣವಿದು ಜ್ಞಾನಾನಂದಮಯಾ ಲೋಕಾಃ ಎಂಬುವು ಪ್ರಾಕೃತ ಲೋಕದಲ್ಲಿರುವ ಅಚೇತನಗಳು ಜಡ ದ್ರವ್ಯಗಳು, ನಿತ್ಯ ವಿಭೂತಿಯಲ್ಲಿರುವ ಅಚೇತನ ದ್ರವ್ಯಗಳು, ಜ್ಞಾನಾನಂದ ಸ್ವರೂಪಗಳು. ಜ್ಞಾನ ಎಂದರೆ ಸ್ವಯಂ ಪ್ರಕಾಶವಾದವು ಜ್ಞಾನಮಯ ಎಂಬಲ್ಲಿ ಸ್ವಾರ್ಥೇ ಮಯಟ್ ಜ್ಞಾನದಿಂದ ಕೂಡಿದವು ಎಂದರ್ಥವಲ್ಲ ಹಾಗೆಯೇ ಆನಂದಮಯಾ ಎಂದರೆ ಆನಂದವಾಗಿರುವುವು, ನೋಡುವವರಿಗೆ, ಅನುಭವಿಸುವವರಿಗೆ ಆನಂದವನ್ನುಂಟು ಮಾಡತಕ್ಕವು. ಆನಂದದಿಂದ ಕೂಡಿರುವುವು ಎಂದರ್ಥವಲ್ಲ, ಜಡಪದಾರ್ಥಕ್ಕೆ ಜ್ಞಾನವೂ, ಆನಂದವೂ ಇಲ್ಲ

5) ಕಾಲಂಸಪಚತೇ ತತ್ರನ ಕಾಲಸ್ತತ್ರವೈಪ್ರಭುಃ ।
ಸಕಲಸ್ಯ ಪ್ರಭೂರಾಜನ್ ಸರ್ವಸ್ಯಾಪಿತಥೇಶ್ವರಃ ॥
(ಭಾ ಶಾಂತಿ 196-9) ಪು. ತಿ. ನೋ

ಈಶ್ವರ ತತ್ತ್ವಮ್

(10) "ಸರ್ವಜ್ಞ ಸ್ಸರ್ವದೃಕ್ಸರ್ವ ಶಕ್ತಿಜ್ಞಾನ ಬಲರ್ಧಿಮಾನ್। (11) ಕ್ಲಮ ತಂದ್ರೀ ಭಯ ಕ್ರೋಧ ಕಾಮಾದಿಭಿರ ಸಂಯುತಃ॥" ಇತ್ಯಾದಿಗಳಾಲೇ ಈಶ್ವರ ಸ್ವಭಾವ (ಸ್ವರೂಪ) ಮುಪದಿಷ್ಟಮಾಯಿತ್ತು. ಇಪ್ಪೀ ಶೇಶಿತವ್ಯರೂಪಮಾನ ತತ್ತ್ವತ್ರಯಮ್ ನಿರ್ಕ್ಕಂ ನಿಲೈಯೈ "ಸ್ವಾಧೀನ ತ್ರಿವಿಧ ಚೇತನಾ ಚೇತನ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಂ" ಎನ್ರು ಶುರುಜ್ಞವರುಳಿಚ್ಚೆಯ್‌ದಾರ್.

ಈಶ್ವರ ಸ್ವಭಾವ

ಸರ್ವಜ್ಞ : ಇತ್ಯಾದಿ ಕಲ್ಯಾಣ ಗುಣಗಳಿಂದ ಕೂಡಿದವನಾಗಿಯೂ, **ಕ್ಲಮ**–ಶ್ರಮ, **ತಂದ್ರೀ**-ಸೋಮಾರಿತನ ಇತ್ಯಾದಿ ಹೇಯ ಗುಣಗಳಿಲ್ಲದವನಾಗಿಯೂ ಇರುವ ಈಶ್ವರ ಸ್ವಭಾವವು ಉಪದಿಷ್ಟವಾಯಿತು. ಪೂರ್ವದಲ್ಲಿ "ತ್ರಿವಿಧ ಜೀವರ ಪ್ರಕಾರವು ವಿವೇಕಿಸಲ್ಪಟ್ಟಿತು"ಎಂಬಲ್ಲಿ ಪ್ರಕಾರವೆಂದು ಹೇಳಿರುವುದು ಬದ್ಧ ದಶೆಯು ಸ್ವರೂಪಾನುಬಂಧಿ ಧರ್ಮವಲ್ಲವೆಂಬುದನ್ನು ತಿಳಿಯಪಡಿಸುತ್ತದೆ. ಮೊದಲು ಅಚೇತನ ಸ್ವಭಾವವೆಂದು ಹೇಳಿ, ನಂತರ ಜೀವನ ಪ್ರಕಾರವೆಂದು ಹೇಳಿ, ಅನಂತರ ಈಶ್ವರ ಸ್ವಭಾವವೆಂದು ಹೇಳಿರುವುದು ಉತ್ತರೋತ್ತರ ಉತ್ಕರ್ಷ ಸೂಚಕ ಹೀಗೆ ಅಚೇತನ ತತ್ತ್ವ ಮೂರು ವಿಧ, ಚೇತನತತ್ವ ಮೂರು ವಿಧ, ಈಶ್ವರನು (ನಿಯಂತಾ) ಒಬ್ಬನು ಎಂದು, ನಿರೂಪಿಸಿರುವುದಕ್ಕೆ **'ಸ್ವಾಧೀನ ತ್ರಿವಿಧ ಚೇತನಾ ಚೇತನ"** ಎಂದು ಶ್ರೀ ಭಾಷ್ಯಕಾರರ ಶ್ರೀ ಸೂಕ್ತಿಯನ್ನು ಪ್ರಮಾಣೀಕರಿಸುತ್ತಾರೆ.

ಆ ನಿತ್ಯ ವಿಭೂತಿಯಲ್ಲಿ ಕಾಲಕ್ಕೆ ಪರಿಣಾಮವಿಲ್ಲ ಏತಕ್ಕೆಂದರೆ ಅದಕ್ಕೆ ಪ್ರಭುತ್ವವಿಲ್ಲ. ಎಲ್ಲವಕ್ಕೂ ಭಗವಂತನೇ ಪ್ರಭು ಅವನೇ ನಿಯಾಮಕನು, ನಿತ್ಯವಿಭೂತಿಯಲ್ಲಿ ಭಗವಂತನೇ ಕಾಲ ನಿಯಾಮಕನು.

6) ಪುಮಾನ್‌ನದೇವೋನನರಃ ನಪಶುಃ ನಚಪಾದಪಃ ।
ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ॥

ಪುಮಾನ್-ಜೀವನು, ದೇವನಲ್ಲ, ಮನುಷ್ಯನಲ್ಲ, ಪಶುವಲ್ಲ ವೃಕ್ಷವಲ್ಲ ದೇವ ಮನುಷ್ಯಾದಿ ರೂಪಗಳು ಜೀವನ ಪುಣ್ಯಪಾಪ ರೂಪಕರ್ಮಗಳಿಂದ ಉಂಟಾಗಿವೆ

7) ನಾಯಂದೇವೋನಮರ್ತ್ಯೋವಾ ನತಿರ್ಯಕ್‌ಸ್ಥಾವರೋಪಿವಾ ।
ಜ್ಞಾನಾನಂದ ಮಯಸ್ತ್ವಾತ್ಮಾ ಶೇಷೋಹಿಪರಮಾತ್ಮನಃ ॥

ಈ ಜೀವನು ದೇವನಲ್ಲ, ಮರ್ತ್ಯನಲ್ಲ, ತಿರ್ಯಕ್‌ಪ್ರಾಣಿಯಲ್ಲ ಸ್ಥಾವರವೂ ಅಲ್ಲ ಇವುಗಳು ಕರ್ಮ ಸಂಬಂಧದಿಂದ ಉಂಟಾದ ಶರೀರಗಳು. ಆತ್ಮಾ ಜ್ಞಾನಾನಂದ ಸ್ವರೂಪನು ಜ್ಞಾನಾನಂದ ಗುಣಗಳಿಂದ ಕೂಡಿದವನು ಪರಮಾತ್ಮನಿಗೆ ಶೇಷಭೂತನೆಂಬುದು ಇವನ ಸ್ವರೂಪ ಈ ವಾಕ್ಯವು ಮುಕ್ತಾತ್ಮರಿದ್ದಾರೆ ಎಂಬುದಕ್ಕೆ ಪ್ರಮಾಣ

8) ದ್ವಾವಿಮೌಪುರುಷೌಲೋಕೇಕ್ಷರಶ್ಚಾಕ್ಷರ ಏವಚ ।
ಕ್ಷರಸ್ಸರ್ವಾಣಿಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ (ಗೀತೆ 15–16)

ಲೋಕದಲ್ಲಿ ಕ್ಷರನೆಂದೂ ಅಕ್ಷರನೆಂದೂ ಎರಡು ವಿಧವಾದ ಪುರುಷರಿದ್ದಾರೆ ಬ್ರಹ್ಮಾದಿಸ್ಥಾವರಾಂತವಾದ ಪ್ರಾಣಿಗಳು ಕ್ಷರ ಶಬ್ದದಿಂದ ಹೇಳಲ್ಪಡುವವರು ಇವರು ಬದ್ಧರು ಕೂಟಸ್ಥಃ–ಕಾಯಿಸಿದ ಕಬ್ಬಿಣವನ್ನು ಬಡಿಯಲು ಆಧಾರವಾದ ಕಬ್ಬಿಣದ ಗೂಟವು ಪರಿಣಾಮವನ್ನು ಹೊಂದದೆ ಇರುವಂತೆ, ದೇಹ ಪರಿಣಾಮಾದಿಗಳಿಲ್ಲದೆ ಇರುವ ಮುಕ್ತನು–ಅಕ್ಷರನೆಂದು ಹೇಳಲ್ಪಡುತ್ತಾನೆ

9) ಏಕಾಂತಿನಸ್ಸದಾ ಬ್ರಹ್ಮಧ್ಯಾಯಿನೋಯೋಗಿನೋಹಿಯೇ ।
ತೇಷಾಂತತ್ಪರಮಂಸ್ಥಾನಂ ಯದ್ವೈಪಶ್ಯಂತಿಸೂರಯಃ ॥ (ವಿ ಪು. 1-6-39)

ಬ್ರಹ್ಮನಲ್ಲಿಯೇ ಲಕ್ಷ್ಯವನ್ನಿಟ್ಟು, ಸದಾ ಬ್ರಹ್ಮವನ್ನೇ ಧ್ಯಾನ ಮಾಡುವ ಯೋಗಿಗಳು, ಯಾರೋ ಅವರು ಆ ಉತ್ತಮ ಸ್ಥಾನವನ್ನು ಹೊಂದುವವರು, ಅವರಿಗೆ ಶ್ರೀ ವೈಕುಂಠವು ವಾಸಸ್ಥಾನ. ನಿತ್ಯ ಸೂರಿಗಳು ಆ ಪರಮ ಪದದಲ್ಲಿ ಭಗವಂತನನ್ನು ಸದಾ ದರ್ಶನ ಮಾಡುತ್ತಿರುತ್ತಾರೆ. "ಸದಾಪಶ್ಯಂತಿಸೂರಯಃ", ಎಂಬ ಶ್ರುತಿವಾಕ್ಯಕ್ಕೆ ಪ್ರತ್ಯಭಿ ಜ್ಞಾಪಕವಾದ ವಾಕ್ಯವಿದು ನಿತ್ಯಸೂರಿಗಳು ಉಂಟು, ಎಂಬುದಕ್ಕೆ ಪ್ರಮಾಣ ವಚನವಿದು.

"ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ, ಜುಷ್ಟ ಸ್ತತಸ್ತೇನಾಮೃತತ್ವ ಮೇತಿ", ಎಂದು ತತ್ವತ್ರಯ ವಿವೇಕಕ್ಕೆ ಮೋಕ್ಷವು ಪ್ರಯೋಜನ (ಫಲ) ವೆಂದು ಹೇಳಿ ಇತರರು ತತ್ವತ್ರಯ ನಿರೂಪಣವನ್ನು ತಮ್ಮ ಗ್ರಂಥಗಳಲ್ಲಿ ಮಾಡಿರುವುದು ಅನಿರೂಪಣ ಮೂಲ. ತತ್ವತ್ರಯವು ಸಾಕ್ಷಾತ್ತಾಗಿ ಮೋಕ್ಷವನ್ನು ಕೊಡುವುದಿಲ್ಲ.

ಅಮೃತತ್ವಮೇತಿ ಎಂದು **ಹೇಳಿದೆಯಲ್ಲಾ**, ಎಂದು ಕೇಳುವವರಿಗೆ ಬದಲು– ಶ್ರುತಿಯ ತಾತ್ಪರ್ಯಗತಿ ಪ್ರಕಾರ ವನ್ನು ಪರೀಕ್ಷಿಸಬೇಕು, ಎಂಬುದು. ಆದಾಗಿ ತತ್ತ್ವತ್ರಯ ವಿವೇಕ ಪೂರ್ವಕವಾಗಿ ಬ್ರಹ್ಮವಿದ್ಯಾ ವಿಶೇಷವು ಅಮೃತತ್ವವನ್ನು-ಮೋಕ್ಷವನ್ನು, ಕೊಡುತ್ತದೆ, ಎಂಬುದೇ ಶ್ರುತಿಯ ತಾತ್ಪರ್ಯ. ತತ್ತ್ವತ್ರಯವಿವೇಕವು ಸಾಕ್ಷಾತ್ತಾಗಿ ದೇಹಾತ್ಮಭ್ರಾಮ, ಸ್ವತಂತ್ರಾತ್ಮಭ್ರಮವೆಂಬ ಪ್ರಧಾನ ವಿರೋಧಿಗಳನ್ನು ನಿರ್ಮೂಲಗೊಳಿಸಿ ತನ್ಮೂಲಕ ವಿದ್ಯಾ ವಿಶೇಷ ನಿಷ್ಪತ್ತಿಯನ್ನುಂಟುಮಾಡುತ್ತದೆ ಯೆಂಬುದು ಶ್ರುತಿಯ ತಾತ್ಪರ್ಯ. "ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ, ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ", ಇತ್ಯಾದಿ **ಉಪನಿಷ** ದ್ವಾಕ್ಯಗಳಲ್ಲಿ ತತ್ವತ್ರಯ ಮನನವು ಅಮೃತ-ಮೋಕ್ಷೋಪಾಯವೆಂದು ಹೇಳಿದೆಯಲ್ಲಾ ಎಂದು ಕೇಳಬಹುದು ಇಲ್ಲಿ ಭೋಕ್ತೃತ್ವ ಭೋಗ್ಯತ್ವ ಜ್ಞಾನವು, ಅಚೇತನ ಚೇತನರ, ನಿರೂಪಣೆಯನ್ನು ಮಾಡಿ, ತನ್ಮೂಲಕವಾಗಿ, ಇವರಿಗಿಂತ ಮೇಲಾದ ಮತ್ತು ಬೇರೆಯಾದ ಸರ್ವೇಶ್ವರ ತತ್ತ್ವವನ್ನು ನಿರೂಪಿಸುತ್ತದೆ. ಸರ್ವೇಶ್ವರ ತತ್ವಜ್ಞಾನವನ್ನು ವಿವಿಚ್ಯ-ಚೇತನಾ ಚೇತನಗಳಿಂತ ಬೇರೆಯೆಂದು ತಿಳಿದು ಉಪಾಸನೆ ಮಾಡಿದರೆ ಮೋಕ್ಷವು ಲಭಿಸುತ್ತದೆಯೆಂಬುದು ಶ್ರುತಿಯ ಮಾರ್ಗ. ಅದರಿಂದಲೇ ಆಳವಂದಾರ್, ಶ್ರೀ ಭಾಷ್ಯಕಾರರು, "ಸ್ವಾಧೀನ ತ್ರಿವಿಧ ಚೇತನಾಚೇತನ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಂ, ಎಂದು, ಚೇತನಾ ಚೇತನ ಗಳ ಜ್ಞಾನವು ಈಶ್ವರ ಜ್ಞಾನಕ್ಕೆ ಅಂತರಂಗ ಸಹಕಾರಿಗಳೆಂಬ ಅಭಿಪ್ರಾಯದಿಂದ ನಿರೂಪಿಸಿರುತ್ತಾರೆ. ಆದ್ದರಿಂದ ಚಿದಚಿತ್ತತ್ವ ಜ್ಞಾನವು ಮೇಲೆ ನಿರೂಪಿಸಿದ ರೀತಿಯಲ್ಲಿ ಮೋಕ್ಷ ಪ್ರಾಪ್ತಿಗೆ ಉಪಕರಿಸುತ್ತದೆಯೇ ಹೊರತು, ಅದೇ ಮೋಕ್ಷವನ್ನು ಕೊಡಲಾರದು ಎಂದು ಅಭಿಪ್ರಾಯಪಟ್ಟು **ಆಚಾರ್ಯವರ್ಯರು ಇನ್ನೀಶೇಶಿತವ್ಯರೂಪಮಾನ** ಎಂದಾರಂಭಿಸಿ **ಅರುಳಿಚ್ಚೆಯ್ದಾರ್** ಎಂದು ನಿಗಮಿಸಿದ್ದಾರೆ.

ಸೇಶ್ವರ**ಸಾಂಖ್ಯ**ನು ತತ್ವತ್ರಯವನ್ನು ಒಪ್ಪಿದ್ದರೂ, ಎಲ್ಲವೂ ಸ್ವತಂತ್ರವೆಂದು ಹೇಳುತ್ತಾನೆ ಅದು ಸರಿಯಲ್ಲ ವೆಂದು ತಿಳಿಯಪಡಿಸಲು, **ಈಶೇಶಿತವ್ಯರೂಪಮಾನ** ಎಂದು ಈಶ್ವರನಿಂದ ನಿಯಮಿಸಲ್ಪಡುವ ಚೇತನಾ ಚೇತನಗಳು ಎಂದು ಚೇತನಾಚೇತನಗಳ ಈಶ್ವರ ಪಾರತಂತ್ರ್ಯವನ್ನು ತಿಳಿಸುತ್ತಾರೆ **ನಿರ್ಕುಂನಿಲೈಯ್ಮ್** ಇವುಗಳ ಪರಸ್ಪರ ವಿಲಕ್ಷಣವಾದ ಸ್ವರೂಪ ಸ್ಥಿತಿ ಪ್ರವೃತ್ತಿಗಳು. ಹೀಗೆ ಈಶೇಶಿತವ್ಯ ರೂಪವಾದ ತತ್ವತ್ರಯಗಳ ಸ್ಥಿತಿಯನ್ನು "ಸ್ವಾಧೀನ ತ್ರಿವಿಧ ಚೇತನಾಚೇತನ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಮ್" ಎಂದು ಶ್ರೀ ಭಾಷ್ಯಕಾರರು ಗದ್ಯ ತ್ರಯದಲ್ಲಿ ಕೃಪೆಮಾಡಿ ತಿಳಿಸಿರುತ್ತಾರೆ ಚೇತನಾಶ್ಚ ಅಚೇತನಾಶ್ಚ–ಚೇತನಾ ಚೇತನಾಃ-ತ್ರಿವಿಧಾಶ್ಚತೇ ಚೇತನಾ ಚೇತನಾಃ-ತ್ರಿವಿಧ ಚೇತನಾಚೇತನಾಃ ತಾಸಾಂ, ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಾಃ, ಸ್ವಾಧೀನಾಃ ತ್ರಿವಿಧ ಚೇತನಾ ಚೇತನ ಸ್ವರೂಪ ಸ್ಥಿತಿ ಪ್ರವೃತಿ ಭೇದಾಃ ಯಸ್ಯಸಃ ತಂ ಎಂದು ವಿಗ್ರಹ ಇದನ್ನು ಆಚಾರ್ಯರು

---

10) ವ್ಯಕ್ತಾವ್ಯಕ್ತ ಸ್ವರೂಪಸ್ತ್ವಂ ಸಮಷ್ಟಿವ್ಯಷ್ಟಿ ರೂಪವಾನ್ ।
ಸರ್ವಜ್ಞಃ ಸರ್ವದೃಕ್ ಸರ್ವಶಕ್ತಿ ಜ್ಞಾನ ಬಲರ್ದ್ಧಿಮಾನ್ ॥ (ವಿ ಪು. 5-1-47)

ಚೇತನಾ ಚೇತನಗಳ ಕಾರ್ಯ ಕಾರಣ ಭಾವಾವಸ್ಥಾದ್ವಯರೂಪನು-ಕಾರ್ಯಭಾವ ಸೃಷ್ಟಿರೂಪ. ಕಾರಣಭಾವ–ಪ್ರಳಯದಲ್ಲಿರುವ ಸೂಕ್ಷ್ಮಭಾವ, ಸಮಷ್ಟಿ ಸೃಷ್ಟಿ ಮತ್ತು ವ್ಯಷ್ಟಿ ಸೃಷ್ಟಿ ರೂಪಗಳನ್ನುಳ್ಳವನು ಸರ್ವಶ್ಚಾಸೌಜ್ಞಶ್ಚ ಸರ್ವಜ್ಞಃ, ಸರ್ವ ಶರೀರಕನು. ಜ್ಞಾನವುಳ್ಳವನು ಅದಾಗಿ ಸರ್ವವನ್ನೂ ಸಾಕ್ಷಾತ್ಕರಿಸತಕ್ಕವನು. ಸರ್ವಶಕ್ತನು ಸರ್ವಜ್ಞನು, ಸರ್ವಬಲ, ಸರ್ವೈಶ್ವರ್ಯ ಯುಕ್ತನು.

11) ಅನ್ಯೂನಶ್ಚಾಪ್ಯವೃದ್ಧಿಶ್ಚ ಸ್ವಾಧೀನೋಽನಾದಿಮಾನ್‌ವಶೀ ।
ಕ್ಲಮ ತಂದ್ರೀಭಯ ಕ್ರೋಧ ಕಾಮಾದಿಭಿರಸಂಯುತಃ ॥

(ವಿ. ಪು. 5-1-48)

ವೃದಿಹ್ರಾಸಗಳಿಲ್ಲದವನು, ಸರ್ವವನ್ನೂ ತನ್ನ ವಶದಲ್ಲಿಟ್ಟು ಕೊಂಡಿರುವವನು ಶ್ರಮ, ಸೋಮಾರಿತನ, ಭಯ, ಕೋಪ, ಕಾಮ ಮೊದಲಾದ ಹೇಯ ಗುಣಗಳಿಲ್ಲದವನು.

ತ್ರಿವಿಧ ಚೇತನರೆನ್ರದು, ಬದ್ಧರ್ಕೈಯುಮ್, ಮುಕ್ತರ್ಕೈಯುಮ್, ನಿತ್ಯರ್ಕೈಯುಮ್ ತ್ರಿವಿಧಾ ಚೇತನನೆನ್ರದು, ತ್ರಿಗುಣ ದ್ರವ್ಯತ್ತೈಯುಮ್; ಕಾಲತ್ತೈಯುಮ್, ಶುದ್ಧಸತ್ತ್ವ ಮಾನ ದ್ರವ್ಯತ್ತೈಯುಮ್ ಸ್ವರೂಪ ಮೆನ್ರದು. ಸ್ವಾಸಾಧಾರಣ ಧರ್ಮತ್ತಾಲೇ ನಿರೂಪಿತಮಾನ ಧರ್ಮಿಯ್ಯ. ಸ್ಥಿತಿಯಾವದು:— ಇದಿನುಡೈಯ ಕಾಲಾನ್ತರಾನುವೃತ್ತಿ. ಇದು ತಾನ್ ನಿತ್ಯವಸ್ತುಹಳುಕ್ಕು ನಿತ್ಯೈಯಾಯಿರುಕ್ಕುಮ್ ಅನಿತ್ಯ ವಸ್ತುಕ್ಕಳುಕ್ಕು ಈಶ್ವರ ಸಙ್ಕಲ್ಪತ್ತುಕ್ಕೀಡಾಹ ಏರಿಯುಮ್ ಕುರುಙ್ಗಿಯುಮ್ ಇರುಕ್ಕುಮ್. ಇಙ್ಗ ಪ್ರವೃತ್ತಿಯಾವದು.—ಪ್ರವೃತ್ತಿ ನಿವೃತ್ತಿ ರೂಪಮಾನ ವ್ಯಾಪಾರಮ್. ಇವೈಯೆಲ್ಲಾಮ್, ವಸ್ತುಕ್ಕಳ್ ತೋರುಮ್ ಪ್ರಮಾಣ ಪ್ರತಿನಿಯತಮಾಯಿರುಕ್ಕುಮ್. ಇಪ್ರಮಾಣಙ್ಗಳ್ ವಸ್ತುಕ್ಕಳೈಕ್ಕಾಟ್ಟುಮ್ ಪೋದವ್ವೋ ವಸ್ತುಕ್ಕಳಿನ್ ಸ್ವರೂಪತ್ತೈಯುಮ್, ಸ್ವರೂಪ ನಿರೂಪಕ ಧರ್ಮಙ್ಗಳೈಯುಮ್, ನಿರೂಪಿತ ಸ್ವರೂಪ ವಿಶೇಷಣಙ್ಗಳೈಯುಮ್, ವ್ಯಾಪಾರಙ್ಗಳೈಯುಮ್, ಕಾಟ್ಟುಮ್. ಆದಿಲ್ ಸ್ವರೂಪತ್ತೈ ಸ್ವರೂಪ ನಿರೂಪಕ ಧರ್ಮಙ್ಗಳಾಲೇ ವಿಶಿಷ್ಟ ಮಾಹವೇಕಾಟ್ಟುಮ್. ಅನ್ದ ಸ್ವರೂಪತ್ತೈ ಚೊಲ್ಲುಮ್ ಪೋದು ಅವ್ವೋಧರ್ಮಙ್ಗಳೈಯಿಟ್ಟಲ್ಲದು ಚೊಲ್ಲವೊಣ್ಣಾದು. ಅವತ್ತೈಕ್ಕಳಿತ್ತು ಪ್ಪಾರ್ಕಿಲ್ ಶಶವಿಷಾಣ ತುಲ್ಯಮಾಮ್

ತಾವೇ ವಿವರಿಸುತ್ತಾರೆ ತ್ರಿವಿಧ ಚೇತನರು–ಬದ್ಧ, ಮುಕ್ತ, ನಿತ್ಯರು ತ್ರಿವಿಧ ಅಚೇತನಗಳು–ಸತ್ವ, ರಜಸ್ತಮೋ ಗುಣಾತ್ಮಕವಾದ ಪ್ರಕೃತಿ ದ್ರವ್ಯ, ಕಾಲ, ಶುದ್ಧ ಸತ್ವ ದ್ರವ್ಯವೆಂಬುವು - ಪ್ರಕೃತಿ ಮಂಡಲದಲ್ಲಿರುವ ಅಚೇತನ ದ್ರವ್ಯವು ಅಪರ ವಿಕಾರಗಳಾದ ಮಹದಹಂಕಾರ, ಏಕಾದಶೇಂದ್ರಿಯ, ಪಂಚಭೂತಗಳೆಂದು ಇಪ್ಪತ್ತನಾಲ್ಕು ವಿಭಾಗವಾಗಿದೆ ಶುದ್ಧ ಸತ್ವವೆಂಬ ತತ್ವವು ಅಪ್ರಾಕೃತಲೋಕವಾದ ಶ್ರೀ ವೈಕುಂಠದಲ್ಲಿ ಮಂಟಪ, ಗೋಪುರ ರೂಪವಾಗಿಯೂ ಜೀವೇಶ್ವರರ ಶರೀರಗಳಾಗಿಯೂ ಪರಿಣಮಿಸಿರುವ ಅಚೇತನ ದ್ರವ್ಯವು ಇದು ಸ್ವಯಂ ಪ್ರಕಾಶವಾಗಿದೆ. ಜೀವನ ಧರ್ಮ ಭೂತ ಜ್ಞಾನವು ಅಚೇತನವಾದರೂ, ಚೇತನ ಶಬ್ದವು ಚೈತನ್ಯ ವಿಶಿಷ್ಟನನ್ನು ತಿಳಿಸುವುದರಿಂದ, ಅಲ್ಲಿ ಸೇರಿದೆ ತ್ರಿವಿಧ ಅಚೇತನತತ್ವದಲ್ಲಿ ಅದು ಸೇರಿಸಲ್ಪಡಲಿಲ್ಲ. ಹಾಗೆಯೇ ಈಶ್ವರನೂ ಚೇತನನಾಗಿದ್ದರೂ, ಚೇತನಾಚೇತನಗಳನ್ನು ಸ್ವಾಧೀನವಾಗಿ ಉಳ್ಳವನೆಂಬ ಸ್ವಾಧೀನ ತ್ರಿವಿಧ ಭೇದಮ್ ಎಂಬ ಬಹುವ್ರೀಹಿ ಸಮಾಸದಿಂದ ಅನ್ಯಪದಾರ್ಥವಾಗಿ ಹೇಳಲ್ಪಟ್ಟಿರುವುದರಿಂದ ತ್ರಿವಿಧ ಚೇತನರಲ್ಲಿ ಪರಿಗಣಿಸಲ್ಪಡಲಿಲ್ಲ.

ಸ್ವರೂಪವೆಂದು ಹೇಳಿರುವುದ ತನಗೆ ಅಸಾಧಾರಣವಾದ ಧರ್ಮದಿಂದ ಕೂಡಿದ ಧರ್ಮಿ. ನಮ್ಮ ಸಿದ್ಧಾಂತದಲ್ಲಿ **ನಿರ್ವಿಶೇಷ** ವಸ್ತು ಪ್ರತೀತಿಯಿಲ್ಲ ನಿರ್ವಿಶೇಷವಾದ ವಸ್ತುವು ತೋರದು ಅದನ್ನು ಶಬ್ದದಿಂದಲೂ ಹೇಳಲಾಗುವುದಿಲ್ಲ ಆದ್ದರಿಂದ ಸ್ವಾಸಾಧಾರಣವಾದ ಸ್ವರೂಪ ನಿರೂಪಕ ಧರ್ಮದಿಂದಲೆ, ವಿಶಿಷ್ಟವಾದ ಧರ್ಮಿಯು ಸ್ಫುರಿಸುತ್ತದೆ ಘಟವೆಂದರೆ ಘಟತ್ವರೂಪಧರ್ಮ ವಿಶಿಷ್ಟವಾದ ಧರ್ಮಿಯು ಗ್ರಾಹ್ಯ. ಹಾಗೆಯೇ ಚೇತನವೆಂದರೆ ಚೈತನ್ಯ ವಿಶಿಷ್ಟವಾದ ಧರ್ಮಿಯು ಬೋಧವಾಗುತ್ತದೆ ಚೈತನ್ಯವೆಂಬ ಧರ್ಮವಿಲ್ಲದ ಕೇವಲ ಧರ್ಮಿಯು ಶಶ ವಿಷಾಣತುಲ್ಯವು ಸ್ಥಿತಿಯೆಂಬುದು ಈ ಸ್ವರೂಪದ ಕಾಲಾಂತರಾನುವೃತ್ತಿ ಉತ್ತರಕಾಲ ಸಂಬಂಧಿ ಎಂದರ್ಥ ಇದು **ಅನಿತ್ಯ** ವಸ್ತುಗಳಿಗೆ ಈಶ್ವರ ಸಂಕಲ್ಪಾನುಸಾರ ಹೆಚ್ಚು ಕಡಿಮೆಯಾಗಿರುತ್ತೆ ಅಪ್ರಮೇಯೋ, ಅನಿಯೋಜ್ಯಶ್ಚ ಎಂಬಂತೆ, ಅನಿಯಾಮ್ಯನಾದ (ಸ್ವೇಚ್ಛೆಯಿಂದ ಕೂಡಿದ) ಭಗವಂತನ ಸಂಕಲ್ಪವು ಹೇಗೋ ಹಾಗೆ ವಸ್ತುಗಳ ಸ್ಥಿತಿಯಿರುತ್ತೆ. ಇಲ್ಲಿ **ಪ್ರವೃತ್ತಿ** ಎಂಬುದು ಪ್ರವೃತ್ತಿ ನಿವೃತ್ತಿ ರೂಪವಾದ ವ್ಯಾಪಾರ. ನಿವೃತ್ತಿಯೂ ಅಕರಣ ಸಂಕಲ್ಪ ರೂಪವಾದ ಪ್ರವೃತ್ತಿ ವಿಶೇಷವಾದ್ದರಿಂದ ಪ್ರತ್ಯೇಕವಾಗಿ **ಪ್ರವೃತ್ತಿ ನಿವೃತ್ತಿ** ಎಂದು ಹೇಳಲಿಲ್ಲ **ಪ್ರವೃತ್ತಿ** ಶಬ್ದದಲ್ಲೇ ಅಂತರ್ಗತವೆಂದು ಆಚಾರ್ಯರು ತಿಳಿಸುತ್ತಾರೆ. **ಇವೈಯೆಲ್ಲಾಮ್**–ಸ್ವರೂಪ ಸ್ಥಿತಿ ಪ್ರವೃತ್ತಿ ರೂಪವಾದ ಈ ವ್ಯಾಪಾರಗಳೆಲ್ಲಾ, ಒಂದೊಂದು ವಸ್ತುಗಳಲ್ಲೂ ಪ್ರತ್ಯಕ್ಷಾದಿ ಪ್ರಮಾಣಗಳು ತೋರಿಸುವಂತೆ ವ್ಯವಸ್ಥಿತವಾಗಿರುವುವು. ಈ ಪ್ರತ್ಯಕ್ಷಾದಿ ಪ್ರಮಾಣಗಳು ವಸ್ತುಗಳನ್ನು ತಿಳಿಸುವಾಗ, ಆಯಾಯಾ ವಸ್ತುಗಳ

ಜೀವಸ್ವರೂಪ ಕಥನಮ್

ಆಹೈಯಾಲ್ ಜೀವಸ್ವರೂಪತ್ತೈ ಜ್ಞಾನತ್ವ ಮಾನನ್ದತ್ವ ಮಮಲತ್ವ ಮಣುತ್ವ ಮಿತ್ಯಾದಿಹಳಾನ ನಿರೂಪಕಧರ್ಮಙ್ಗಳೈಯಿಟ್ಟು ನಿರೂಪಿತ್ತು, ಜ್ಞಾನಮಾನಂದಮಮಲ ಮಣುವೆನ್ರು, ಇಪ್ಪಡಿಕ್ಕಳಾಲೇ ಶೊಲ್ಲಕ್ಕಡವದು.

ಜೀವಾತ್ಮನಃ ಭಗವತಃ ಶೇಷತ್ವಂ

ಇಜ್ಜೀವತತ್ವಂ ಸರ್ವೇಶ್ವರನುಕ್ಕು ಶೇಷಮಾಯೇ ಇರುಕ್ಕುಮೆನ್ರುಮ್, ಅವನುಕ್ಕೇ ನಿರುಪಾಧಿಕ ಶೇಷಮೆನ್ರುಮ್, ಅಯೋಗಾನ್ಯಯೋಗ ವ್ಯವಚ್ಛೇದಙ್ಗಳಾಲೇ ಪ್ರಥಮಪದತ್ತಿಲ್ ತೋತ್ತಿನ ವಿಶೇಷತ್ವಮ್ ಸಂಬಂಧರೂಪಮಾಹೈಯಾಲೇ ಸಂಬಂಧಿಸ್ವರೂಪಂ ನಿರೂಪಿತಮಾನಾಲಲ್ಲದು ಅರಿಯವೊಣ್ಣಾದ್ವೈಯಾಲೇ ಜೀವನುಕ್ಕು ಇದು ನಿರೂಪಿತ ಸ್ವರೂಪ ವಿಶೇಷಣಮೆನ್ನಲಾವಮ್.

ಅಣುತ್ವೇಸತಿ ಚೇತನತ್ವಂಪೋಲೇ, ಸ್ವತಶ್ಶೇಷತ್ವೇಸತಿ ಚೇತನತ್ವಮುಮ್ ಜೀವಲಕ್ಷಣಮಾಹವಟ್ರಾಹೈಯಾಲೇ ಇಶ್ಶೇಷತ್ವಂ ಜೀವನುಕ್ಕು ಸ್ವರೂಪನಿರೂಪಕ ಮೆನ್ನವುಮಾಮ್.

ಸ್ವರೂಪವನ್ನೂ, ಸ್ವರೂಪ ನಿರೂಪಕ ಧರ್ಮಗಳನ್ನೂ ನಿರೂಪಿತ ಸ್ವರೂಪ ವಿಶೇಷಣ ಧರ್ಮಗಳನ್ನೂ ವ್ಯಾಪಾರಗಳನ್ನೂ ಒಂದು ಗೂಡಿಸಿಯೇ ತೋರಿಸುತ್ತವೆ **ಅದಿಲ್**–ಅವುಗಳಲ್ಲಿ ಸ್ವರೂಪವನ್ನು ಸ್ವರೂಪ ನಿರೂಪಕ ಧರ್ಮಗಳಿಂದ ಕೂಡಿದ ಹಾಗೆಯೇ ತೋರಿಸುತ್ತದೆ. ಆ ಸ್ವರೂಪವನ್ನು, ಆಯಾಯಾ ಧರ್ಮಗಳನ್ನು ಹೇಳದೆ ಹೇಳಲಾಗುವುದಿಲ್ಲ ಆಯಾಯಾ ಧರ್ಮಗಳನ್ನು ಬಿಟ್ಟು ಹೇಳುವುದು, ಶಶವಿಷಾಣಕ್ಕೆ ಸಮ. ಮೊಲಕ್ಕೆ ಕೊಂಬಿಲ್ಲ. ಮೊಲದ ಕೋಂಬನ್ನು ಹೇಗೆ ನಿರೂಪಿಸಲಾಗುವುದಿಲ್ಲವೋ ಹಾಗೆ ಸ್ವರೂಪ ನಿರೂಪಕ ಧರ್ಮಗಳನ್ನು ಬಿಟ್ಟು ಸ್ವರೂಪವನ್ನು ನಿರೂಪಿಸಲಾಗುವುದಿಲ್ಲವೆಂದರ್ಥ.

ಜೀವಸ್ವರೂಪ ಕಥನಮ್

ಆದ್ದರಿಂದ ಜೀವಸ್ವರೂಪವನ್ನು ಜ್ಞಾನತ್ವ, ಆನಂದತ್ವ, ಅಮಲತ್ವ, ಅಣುತ್ವ ಎಂಬೀ ಮೊದಲಾದ ಸ್ವರೂಪ ನಿರೂಪಕ ಧರ್ಮಗಳನ್ನಿಟ್ಟು ರೂಪಿಸಿ, ಜ್ಞಾನ, ಆನಂದ, ಅಮಲ, ಅಣು ಎಂದು ಈ ಪ್ರಕಾರ ಹೇಳತಕ್ಕದ್ದು. **ಅಣುತ್ವಮಿತ್ಯಾದಿಹಳಾನ** ಎಂಬಲ್ಲಿ ಆದಿಶಬ್ದವು ಪ್ರತ್ಯಕ್ತ್ವವನ್ನು ವಿವಕ್ಷಿಸುತ್ತದ.

ಜೀವನು ಭಗವಚ್ಛೇಷ ಭೂತನು

ಈ ಜೀವತತ್ವವು ಸರ್ವೇಶ್ವರನಿಗೆ ಶೇಷಭೂತವಾಗಿಯೇ ಇರುತ್ತದೆ ಇದು ಅಯೋಗ ವ್ಯವಚ್ಛೇದ. ಅಯೋಗ - ಸಂಬಂಧವಲ್ಲದಿರುವುದನ್ನು, ವ್ಯವಚ್ಛೇದ —ತಡೆಯುವುದು, ಆದಾಗಿ ಶೇಷಭೂತವೆಂಬ ಸಂಬಂಧವನ್ನು ನಿಬಂಧಿಸುತ್ತದೆ. ಅವನಿಗೇ ನಿರುಪಾಧಿಕಶೇಷವೆಂದು ಅನ್ಯರಿಗೆ ಇಲ್ಲವೆಂದು ಹೇಳಿ ಅನ್ಯಯೋಗವನ್ನು–ಅನ್ಯರಿಗೆ ಸಂಬಂಧವನ್ನು ವ್ಯವಚ್ಛೇದಿಸುತ್ತದೆ.— ತಡೆಯುತ್ತದೆ. ಶಂಖಃ ಪಾಂಡರ ಏವ ಎಂಬಲ್ಲಿ ಶಂಖಕ್ಕೆ ವಿಶೇಷಣವಾದ ಪಾಂಡರ (ಬಿಳಿಪು) ಶಬ್ದದೊಡನೆ ಸೇರಿದ ಏವಕಾರವು ಅಂದರೆ ವಿಶೇಷಣ ಸಂಬಂಧ ಏವಕಾರವು ಅಯೋಗ ವ್ಯವಚ್ಛೇದಕ ಶಂಖಕ್ಕೆ ಬಿಳಿಪು ಸಂಬಂಧದ ಅಭಾವಕ್ಕೆ ಅಭಾವವನ್ನು ತಿಳಿಸುತ್ತದೆ. ಪಾರ್ಥ ಏವ ಧನುರ್ಧರಃ ಎಂಬಲ್ಲಿ ವಿಶೇಷ್ಯದೊಡನೆ ಕೂಡಿದ ಏವಕಾರವು, ಧನುರ್ಧರತ್ವ ಸಂಬಂಧವನ್ನು ಪಾರ್ಥನನ್ನು ಬಿಟ್ಟು ಅನ್ಯರಲ್ಲಿ ವ್ಯವಚ್ಛೇದಿಸುತ್ತದೆ– ಅಭಾವವನ್ನು ಹೇಳುತ್ತದೆ. ಇದು ಅನ್ಯಯೋಗ (ಅನ್ಯರಿಗೆ ಸಂಬಂಧದ) ವ್ಯವಚ್ಛೇದ (ಅಭಾವ). ಪ್ರಣವವು, ಅ, ಉ, ಮ್ ಎಂಬ ಮೂರು ಅಕ್ಷರಗಳಿಂದ ಕೂಡಿದೆ ಆಕಾರವು ಲಕ್ಷ್ಮೀ ವಿಶಿಷ್ಟ ನಾರಾಯಣವಾಚಕ, ಉಕಾರವು ಏವಕಾರಾರ್ಥ, ಮಕಾರವು ಪಂಚವಿಂಶತಿ

ತತ್ತ್ವವಾದ ಜೀವವಾಚಕ, ಅಂ ಮ್ ಎಂಬಲ್ಲಿ ಅಕಾರವು ವಿಶೇಷ್ಯ. ಮಕಾರವು ವಿಶೇಷಣ. ಅಯ ಏವ ಮ್ ಎಂಬುದು ಅನ್ಯಯೋಗ ವ್ಯವಚ್ಛೇದ. ಜೀವನು ಅಕಾರ ವಾಚ್ಯನಾದ ಭಗವಂತನಿಗೇ ಶೇಷಭೂತನು ಮತ್ತವರಿಗಲ್ಲ ಅಯ ಮ್ ಅಕಾರವಾಚ್ಯನಾದ ಭಗವಂತನಿಗೆ ಜೀವನು ದಾಸಎಂಬಲ್ಲಿ ಉಪಾಧಿಯಿಲ್ಲದಿರುವುದು ಅಯೋಗ ವ್ಯವಚ್ಛೇದಕ. ಈ ಶೇಷತ್ವವು ಜೀವನಿಗೆ ನಿರೂಪಿತ ಸ್ವರೂಪ ವಿಶೇಷಣವೆಂದು ಹೇಳಬಹುದು ಏಕೆಂದರೆ ಅಷ್ಟಾಕ್ಷರ ಪ್ರಥಮ ಪದದಲ್ಲಿ ಅಂದರೆ ಪ್ರಣವದಲ್ಲಿ ತೋರುವ ಶೇಷತ್ವವು ಸಂಬಂಧ ರೂಪವಾಗಿರುವುದ ರಿಂದ ಸಂಬಂಧಿ (ಶೇಷಿಯಾದ ಭಗವಂತ) ಯ ಸ್ವರೂಪವನ್ನು ರೂಪಿಸದೆ ತಿಳಿಯಲಾಗದು. ಆದ್ದರಿಂದ ಜೀವನಿಗೆ ಶೇಷತ್ವವು ನಿರೂಪಿತ ಸ್ವರೂಪ ವಿಶೇಷಣವೆಂದು ಹೇಳಬಹುದು **ಅಣುತ್ವೇಸತಿ** ಚೇತನತ್ವ ಎಂಬುದು ಜೀವಲಕ್ಷಣ. ಅಣುತ್ವೇ ಎಂಬುದರಿಂದ ವಿಭುವಾದ ಈಶ್ವರನನ್ನು ವ್ಯಾವರ್ತಿಸುತ್ತದೆ. ಚೇತನತ್ವ ಎಂಬುದು ಜಡವಾದ ಅಚೇತನ ಪದಾರ್ಥವನ್ನು ವ್ಯಾವರ್ತಿಸುತ್ತದೆ—ತಡೆಯುತ್ತದೆ ಎಂದರ್ಥ. ಅದರಿಂದ ಈಶ್ವರನಿಗಿಂತಲೂ, ಅಚೇತನ ಕ್ಕಿಂತಲೂ ಜೀವನು ಬೇರೆಯಾದವನು ಎಂದು ಸಿದ್ಧಿಸುತ್ತದೆ. ಹಾಗೆಯೇ "**ಸ್ವತಃಶೇಷತ್ವೇಸತಿಚೇತನತ್ವ**"ವೂ ಜೀವಲಕ್ಷಣವಾಗಲು ಸಾಧ್ಯವಾದ್ದರಿಂದ **ಶೇಷತ್ವವನ್ನು** ಸ್ವರೂಪ ನಿರೂಪಕ ಧರ್ಮವೆಂದೂ ಹೇಳಬಹುದು. ಸ್ವತಃ–ಸ್ವೇಚ್ಛಾಽನಧೀನ ಶೇಷತ್ವವು ವಿವಕ್ಷಿತ. ಜೀವನು ಭಗವಂತನಿಗೆ ನಿರುಪಾಧಿಕಶೇಷನು ಲಕ್ಷ್ಮಿಯು ಭಗವಂತನಿಗೆ ಸ್ವೇಚ್ಛೆಯಿಂದ ಶೇಷಭೂತಳು. 1) "ಯುವತ್ವಾದೌತುಲ್ಯೇಪಿ" ಎಂಬ ಪರಾಶರ ಭಟ್ಟರ ಶ್ಲೋಕದಲ್ಲಿ, ಪತಿ ಪಾರಾರ್ಥ್ಯವನ್ನು ತನ್ನಿಚ್ಛೆಯಿಂದ ವಿಭಾಗಿಸಿ ಇಟ್ಟು ಕೊಂಡಿದ್ದಾಳೆಂದು ನಿರೂಪಿಸಲ್ಪಟ್ಟಿದೆಯಲ್ಲವೆ. ಹಾಗೆಯೇ (2) 'ಸ್ವತಃ ಶ್ರೀ ಸ್ತ್ವಂವಿಷ್ಣೋಸ್ಸ್ವಮಸಿ' ಎಂಬಲ್ಲಿಯೂ ಸ್ವತಃ ಪದವು ಕರ್ಮಾದ್ಯುಪಾಧಿಗಳಿಲ್ಲದೆ, ತನ್ನಿಷ್ಟ ದಂತೆ ಭಗವಂತನಿಗೆ ಶೇಷಭೂತಳು ಎಂದು ನಿರೂಪಿಸಲ್ಪಟ್ಟಿರುವುದರಿಂದ ಸ್ವೇಚ್ಛಾಧೀನ ಶೇಷತ್ವವು ಲಕ್ಷ್ಮಿಯದು. ಜೀವನದು ಸ್ವೇಚ್ಛಾಽನಧೀನ ಶೇಷತ್ವವು ಆದ್ದರಿಂದ ಈ ಲಕ್ಷಣಕ್ಕೆ ಲಕ್ಷ್ಮಿಯಲ್ಲಿ ಅತಿವ್ಯಾಪ್ತಿಯಿಲ್ಲ. ಭಗವಂತನು ದಶರಥ ವಸುದೇವಾದಿಗಳಿಗೆ ಸ್ವೇಚ್ಛೆಯಿಂದ ಶೇಷನಾದ್ದರಿಂದ ಅವನಲ್ಲಿಯೂ ಈ ಲಕ್ಷಣಕ್ಕೆ ಅತಿವ್ಯಾಪ್ತಿಯಿಲ್ಲ.

---

1 ಯುವತ್ವಾದೌತುಲ್ಯೇಪ್ಯಪರವಶತಾ ಶತ್ರು ಶಮನ
ಸ್ಥಿರತ್ವಾದೀನ್ ಕೃತ್ವಾ ಭಗವತಿಗುಣಾನ್ಪುಂಸ್ತ್ವ ಸುಲಭಾನ್ ।
ತ್ವಯಿಸ್ತ್ರೀತ್ವೈಕಾಂತಾನ್ಮದಿಮ್ರುಪತಿಪಾರಾರ್ಥ್ಯ ಕರುಣಾ
ಕ್ಷಮಾದೀನ್ವಾಭೋಕ್ತುಂ ಭವತಿ ಯುವಯೋರಾತ್ಮನಿಭಿದಾ ॥

(ಶ್ರೀ ಗುಣರತ್ನಕೋಶ)

ಲಕ್ಷ್ಮಿನಾರಾಯಣರಿಬ್ಬರಿಗೂ ಯುವತ್ವವು ಸಮಾನವಾಗಿದ್ದರೂ ಪರವಶತೆ ಇಲ್ಲದಿರುವುದು, ಶತ್ರುಶಮನ, ಸ್ಥಿರತ್ವ ಮೊದಲಾದ ಪುರುಷನಿಗೆ ಬೇಕಾದ ಗುಣಗಳನ್ನು ಭಗವಂತನು ತಾನಿಟ್ಟುಕೊಂಡನು. ಲಕ್ಷ್ಮಿಯು ಸ್ತ್ರೀತ್ವಕ್ಕೇ ಏಕಾಂತವಾದ, ಮೃದುಸ್ವಭಾವ, ಪತಿಗೆ ಅಧೀನವಾಗಿರುವುದು, ಕರುಣೆ, ಕ್ಷಮೆ ಎಂಬ ಗುಣಗಳನ್ನು ತಾನಿಟ್ಟುಕೊಂಡಳು ಪತಿಪಾರಾರ್ಥ್ಯವು ಅವಳು ತನ್ನಿಚ್ಛೆಯಿಂದ ಇಟ್ಟುಕೊಂಡ ಗುಣ.

2 ಸ್ವತಃ ಶ್ರೀಸ್ತ್ವಂ ವಿಷ್ಣೋಃ ಸ್ವಮಸಿ ತತಏವೈಷ ಭಗವಾನ್
ತ್ವದಾಯತ್ತರ್ಧಿತ್ವೇಽಪ್ಯಭವದಪರಾಧೀನ ವಿಭವಃ ।
ಸ್ವಯಾದೀಪ್ತ್ಯಾರತ್ನಂ ಭವದಪಿಮಹಾರ್ಘಂನವಿಗುಣಂ
ನಕುಂಠ ಸ್ವಾತಂತ್ರ್ಯಂ ಭವತಿಚನಚಾನ್ಯಾಹಿತಗುಣಮ್ ॥

ಎಲೈ ಶ್ರೀಯೇ ನೀನು ಸ್ವತಃ ಲೌಕಿಕ ದಂಪತಿಗಳ ಹಾಗೆ ಉಪಾಧಿಯಿಲ್ಲದೆ ವಿಷ್ಣುವಿಗೆ ಸೊತ್ತು ಅವನ ಅಧೀನಳು ಭಗವಂತನು ನಿನ್ನಅಧೀನವಾದ ಋದ್ಧಿ-ಸಮೃದ್ಧಿಯುಳ್ಳವನು ಹಾಗಾದರೆ ಅವನ ಐಶ್ವರ್ಯವು ಪರಾಧೀನವೇ ಎಂದರೆ ಅಲ್ಲ ರತ್ನಕ್ಕೆ ತನ್ನ ಕಾಂತಿ ಯಿಂದ ಬೆಲೆ ಅಧಿಕವಾದ ಮಾತ್ರಕ್ಕೆ ರತ್ನಕ್ಕೆ ಕುಂದುಕವೇನೂ ಇಲ್ಲ. ಅದರ ಹಿರಿಮೆ ಕಡಿಮೆಯಾಗಲಿಲ್ಲ. ಇದರಿಂದ ಅದಕ್ಕೆ ಅನ್ಯಾಧೀನ ಗುಣವೇನೂ ಇಲ್ಲವಲ್ಲ ಹಾಗೆಯೇ ಲಕ್ಷ್ಮಿಯ ಹಿರಿಮೆಯಿಂದ ಭಗವಂತನಿಗೆ ಹಿರಿಮೆಯು ಹೆಚ್ಚಾಗುತ್ತದೆಯೇ ವಿನಹ ಕಡಿಮೆಯಾಗ ಲಾರದು. ಅನ್ಯರಿಂದ ಬಂದ ಗುಣವಲ್ಲ ಎಂಬುದು ಭಾವ.

ಈಶ್ವರಲಕ್ಷಣಮ್

ಇಪ್ಪಡಿವಿಭುತ್ವೇಸತಿ ಚೇತನತ್ವಮುಮ್, ಅನನ್ಯಾಧೀನತ್ವ ನಿರುಪಾಧಿಕ ಶೇಷಿತ್ವಾದಿಹಳುಮ್ ಈಶ್ವರ ಲಕ್ಷಣಙ್ಗಳ್.

ಜೀವೇಶ್ವರ ಸಾಮಾನ್ಯ ಲಕ್ಷಣಮ್

ಜೀವೇಶ್ವರರೂಪಮಾನ ಆತ್ಮವರ್ಗತ್ತುಕ್ಕೆಲ್ಲಾಮ್ ಪೊದುವಾನ ಲಕ್ಷಣಮ್ ಚೇತನತ್ವಮುಮ್, ಪ್ರತ್ಯಕ್ತ್ವಮುಮ್. ಚೇತನತ್ವಮಾವದು? ಜ್ಞಾನಾಶ್ರಯಮಾಹೈ.. ಪ್ರತ್ಯಕ್ತ್ವಮಾವದು ? ತನಕ್ಕು ತ್ತಾನ್‌ತೋತ್ತುಹೈ. ಅಪ್ಪೋದುಧರ್ಮಭೂತಜ್ಞಾನ ನಿರಪೇಕ್ಷಮಾಹ, ನಾನೆನ್ರು ತೋತ್ತುಮ್. ಇಪ್ಪಡಿ ಚೇತನತ್ವಾದಿಹಳ್ ಈಶರನುಕ್ಕುಮ್ ಜೀವನುಕ್ಕುಮ್ ಪೊದುವಾಹೈಯಾಲೇ ಅವನಿಲ್ ಕಾಟ್ಟಿಲ್ ವ್ಯಾವೃತ್ತಿ ತೋತ್ತುಹೈಕ್ಕಾಹ ಜೀವಲಕ್ಷಣತ್ತಿಲ್ ಸ್ವತಶ್ಶೇಷತ್ವಾದಿಹಳ್ ಶೊಲ್ಲುಹಿರದು.

ಅಯೋಗಾನ್ಯಯೋಗವ್ಯವಚ್ಛೇದಾರ್ಥ ನಿರೂಪಣಮ್.

ಪ್ರಥಮಾಕ್ಷರತ್ತಿಲ್ ಚತುರ್ಥಿಯಿಲ್ ತೋತ್ತಿನ ತಾದರ್ಥ್ಯತ್ತುಕ್ಕು ಉಪಾಧಿಯಿಲ್ಲಾಮೈಯಾಲೇ, ಸರ್ವರಕ್ಷಕನಾನ ಶ್ರಿಯಃ ಪತಿಕ್ಕು ಜೀವಾತ್ಮಾ ನಿರುಪಾಧಿಕ ಶೇಷಮಾಯೇಯಿರಕ್ಕುಮೆನ್ರು, ಇಪ್ಪಡಿ ಯಾವತ್ಸ್ವರೂಪಂ ಸಂಬಂಧಂ ಶೊಲ್ಲುಹೈ ಅಯೋಗವ್ಯವಚ್ಛೇದಮ್. ಮಧ್ಯಮಾಕ್ಷರತ್ತಿಲ್ ಅವಧಾರಣ ಸಾಮರ್ಥ್ಯತ್ತಾಲೇ ಯವನುಕ್ಕೇ ನಿರುಪಾಧಿಕಶೇಷಂ ವೇರೊರುತ್ತರುಕ್ಕು ನಿರುಪಾಧಿಕ ಶೇಷಮನ್ರೆನ್ಗೈ ಅನ್ಯಯೋಗ ವ್ಯವಚ್ಛೇದಮ್. ಇಶ್ಶೇಷತ್ವಮ್ ಭಾಗವತಶೇಷತ್ವ ಪರ್ಯಂತಮಾಹ ವಳರುಮ್ಪಡಿ ಮೇಲೇ ಶೊಲ್ಲಕ್ಕಡವೋಮ್

ಈಶ್ವರ ಲಕ್ಷಣ

ಹೀಗೆ ವಿಭುತ್ವದಿಂದ ಕೂಡಿದ ಚೇತನತ್ವವೂ, **ಅನನ್ಯಾಧೀನತ್ವ**–ಅನ್ಯರಿಗೆ ಅಧೀನವಿಲ್ಲದಿರುವುದು, **ನಿರುಪಾಧಿಕಶೇಷಿತ್ವಾದಿಗಳೂ** ನಿಷ್ಕಾರಣವಾಗಿ ಸ್ವಾಮಿಯಾಗಿರುವುದೂ, **ಆದಿ** ಶಬ್ದದಿಂದ, ನಿರುಪಾಧಿಕ ನಿಯಂತೃತ್ವಾದಿಗಳೂ ಈಶ್ವರ ಲಕ್ಷಣಗಳು **ವಿಭುತ್ವೇಸತಿಚೇತನತ್ವಂ** ಎಂಬ ಈಶ್ವರ ಲಕ್ಷಣದಲ್ಲಿ ವಿಭುತ್ವೇ ಎಂಬುದರಿಂದ ಅಣುವಾದ ಜೀವನು ವ್ಯಾವರ್ತಿಸಲ್ಪಡುತ್ತಾನೆ ಪೃಥಕ್ಕರಿಸಲ್ಪಡುತ್ತಾನೆಂದರ್ಥ ಹಾಗೆಯೇ ಚೇತನತ್ವಂ ಎಂಬುದರಿಂದ ಅಚೇತನವಾದ ಪ್ರಕೃತಿಯು ಬೇರೆಮಾಡಲ್ಪಡುತ್ತದೆಯಾದ್ದರಿಂದ **ಈ** ಲಕ್ಷಣವು ಚೇತನಾಚೇತನಗಳಿಂದ ಬೇರೆಯಾದ ಈಶ್ವರನನ್ನು ತಿಳಿಯಪಡಿಸುತ್ತದೆ

ಜೀವೇಶ್ವರ ಸಾಮಾನ್ಯಲಕ್ಷಣ:–

ಜೀವೇಶ್ವರ ರೂಪವಾದ ಆತ್ಮವರ್ಗಕ್ಕೆಲ್ಲಾ ಸಾಮಾನ್ಯಲಕ್ಷಣವು ಚೇತನತ್ವವೂ ಪ್ರತ್ಯಕ್ತ್ವವೂ. ಚೇತನತ್ವವೆಂದರೆ ಜ್ಞಾನಕ್ಕೆ ಆಶ್ರಯವಾಗಿರುವುದು. ಪ್ರತ್ಯಕ್ತ್ವವೆಂದರೆ ತನಗೆ ತಾನೇ ತೋಚುವುದು. ಆವಾಗ ಧರ್ಮಭೂತ ಜ್ಞಾನ ನಿರಪೇಕ್ಷವಾಗಿ **"ನಾನು"** ಎಂದು ತೋಚುತ್ತದೆ. **"ಅಪ್ರಭೋದಾತ್ ಅಹಮಿತ್ಯೇಕಾಕಾರೇಣಸ್ಫುರಣಾತ್"** ಎಂಬ ಭಾಷ್ಯವನ್ನು ಅನುಸರಿಸಿ ಸ್ವರೂಪವು ಅಹಂತ್ವ ಪ್ರಕಾರಕವಾಗಿ ಅಹಂ ಎಂದು ತೋಚುವುದು ಇಲ್ಲದಿದ್ದರೆ ನಿರ್ವಿಶೇಷವಸ್ತು ಪ್ರತೀತಿಯನ್ನು ಒಪ್ಪಬೇಕು. ಇದು ನಮಗೆ ಇಷ್ಟವಿಲ್ಲ. ಹೀಗೆ ಚೇತನತ್ವಾದಿಗಳು **ಈಶ್ವರನಿಗೂ** ಜೀವನಿಗೂ ಸಾಮಾನ್ಯವಾಗಿರುವುದರಿಂದ ಈಶ್ವರನಿಗಿಂತ ಜೀವನಿಗೆ **ವ್ಯಾವೃತ್ತಿಯು** (ಭೇದವು) ತೋಚಲು ಜೀವಲಕ್ಷಣದಲ್ಲಿ ಸ್ವತಶ್ಶೇಷತ್ವಾದಿಗಳು ಹೇಳಲ್ಪಡುತ್ತವೆ.

ಅಯೋಗಾನ್ಯಯೋಗ ವ್ಯವಚ್ಛೇದ:–

ಪ್ರಥಮಾಕ್ಷರದ **'ಅಯ'** ಎಂಬಲ್ಲಿಯ ಚತುರ್ಥಿಯಲ್ಲಿ ತೋರುವ ತಾದರ್ಥ್ಯಕ್ಕೆ **ಉಪಾಧಿ (ಕಾರಣ)** ಯಿಲ್ಲದೆ ಇರುವುದರಿಂದ ಸರ್ವರಕ್ಷಕನಾದ **ಲಕ್ಷ್ಮೀಪತಿಗೆ ಜೀವಾತ್ಮಾ** ನಿರುಪಾಧಿಕ ಶೇಷನಾಗಿಯೇ ಇರುತ್ತಾನೆಂಬು–

ಜೀವಾತ್ಮ ಪ್ರವೃತ್ತಿ ನಿರೂಪಣಮ್.

ಇಪ್ಪಡಿ ಯಿರುಕ್ಕಿರ ಚೇತನರುಡೈಯ ಪ್ರವೃತ್ತಿ ಯಾವದು ಪರಾಧೀನಮುಮಾಯ್ ಪರಾರ್ಥಮು ಮಾನಕರ್ತೃತ್ವಮುಮ್, ಭೋಕ್ತೃತ್ವಮುಮ್. ಈಶ್ವರರ್ ತಮ್ ಭೋಕ್ತೃತ್ವಾರ್ಥಮಾಹ ಇವರ್‌ಹಳುಕ್ಕು ಕರ್ತೃತ್ವಭೋಕ್ತೃತ್ವಂಗಳೈ ಯುಂಡಾಕ್ಕುಹೈಯಾಲಿವೈ ಪರಾರ್ಥಙ್ಗಳ್.

ಬದ್ಧಮುಕ್ತನಿತ್ಯಾನಾಂ ಸ್ವರೂಪಸ್ಥಿತಿ ಪ್ರವೃತ್ತಿ ಭೇದ ಕಥನಂ

ಬದ್ಧಚೇತನರುಕ್ಕು ನೀಕ್ಕಿಯುಳ್ಳಾರಿಲ್ ಭೇದಮ್ –. ಅವಿದ್ಯಾಕರ್ಮ ವಾಸನಾರುಚಿ ಪ್ರಕೃತಿ ಸಂಬಂಧ ಯುಕ್ತರಾಯಿರುಕ್ಕೈ. ಇವರ್‌ಹಳುಕ್ಕು ಅನ್ಯೋನ್ಯಂವರುಮ್ ಜ್ಞಾನಸುಖಾದಿಭೇದತ್ತೈ ಬ್ರಹ್ಮಾದಿಸ್ತಂಬ ಪರ್ಯನ್ತಗಳಾನ ವಹುಪ್ಪುಹಳಲೇ ಕಣ್ಣುಕೊಳ್ವದು. ಇಬ್ಬದ್ಧಚೇತನರ್ ತನ್ನಾತ್ಮಾವುಕ್ಕು ಕರ್ಮಾನ್ರೂಪಮಾಹ ಶರಣ್ಯನಡೈತ್ತ ಶರೀರಂಗಳೈ ಧರ್ಮಿಸ್ವರೂಪತ್ತಾಲುಮ್, ಧರ್ಮಭೂತಜ್ಞಾನತ್ತಾಲುಮ್, ಧರಿಯಾನಿರ್ಪರ್‌ಹಳ್. ಧರ್ಮಿಯಾಲ್ ವರುಹಿರಧಾರಣಂ ಶರೀರತ್ತಿನುಡೈಯ ಸತ್ತೈಕ್ಕು ಪ್ರಯೋಜಕ ಮಾಯಿರುಕ್ಕುಮ್ ಜಾಗ್ರದಾದ್ಯವಸ್ಥೈಯಿಲ್ ಧರ್ಮಭೂತಜ್ಞಾನತ್ತಾಲೇ ವರುಹಿರ ಶರೀರಧಾರಣಮ್

ಹೀಗೆ ಯಾವಸ್ವರೂಪ ಸಂಬಂಧವನ್ನು ಹೇಳುವುದು ಅಯೋಗ ವ್ಯವಚ್ಛೇದ. ಮಧ್ಯಮಾಕ್ಷರವಾದ, "ಉ" ಏವ–ಅವನಿಗೇ ಎಂಬ **ಅವಧಾರಣಾರ್ಥ**ವನ್ನು ಕೊಡುತ್ತದೆ ಈ **ಅವಧಾರಣ** ಸಾಮರ್ಥ್ಯದಿಂದ ಜೀವನು ಅಕಾರವಾಚ್ಯನಾದ ಈಶ್ವರನಿಗ (ಲಕ್ಷ್ಮೀವಿಶಿಷ್ಟನಿಗೆ) **ನಿರುಪಾಧಿಕ ಶೇಷ**–ಯಾವ ಕಾರಣವೂ ಇಲ್ಲದೆ ಶೇಷ ಭೂತನು. ಬೇರೆಯಾರಿಗೂ ಹಾಗೆ ನಿರುಪಾಧಿಕ ಶೇಷಭೂತನಲ್ಲ ಎಂಬುದು ಅನ್ಯಯೋಗ ವ್ಯವಚ್ಛೇದ ಆದಾಗಿ ಇತರರಿಗೆ **ಯೋಗ**–ಸಂಬಂಧವನ್ನು ವ್ಯವಚ್ಛೇದಿಸುವುದು–ಇಲ್ಲವೆಂದು ಹೇಳುವುದು **ಸರ್ವರಕ್ಷಕನಾದ ಶ್ರಿಯಃ ಪತಿಕ್ಕು**– 'ಅ' ಎಂಬ ಪ್ರಥಮಾಕ್ಷರದಲ್ಲಿ ರೂಢಿಯಿಂದ ಶೇಷಿತ್ವವು ಶ್ರೀ ವಿಶಿಷ್ಟನಿಗೆ, ಎಂಬುದು ಹೃದಯ. ಅವರಕ್ಷಣೇ, ಎಂಬ ಧಾತುವಿನ ಪ್ರಕಾರ, ರಕ್ಷಣ ವ್ಯಾಪಾರವೂ ಶ್ರೀ ವಿಶಿಷ್ಟನಾದ ಪರಬ್ರಹ್ಮನಿಗೆ ಅನ್ವಯಿಸುತ್ತದೆ. ಇದರಿಂದ ಶೇಷತ್ವ ಪ್ರತಿಸಂಬಂಧಿತ್ವವೂ ಶ್ರೀ ವಿಶಿಷ್ಟನಿಗೇನೆ ಏರ್ಪಡುತ್ತದೆ. ಈ ಶೇಷತ್ವವು ನಿರುಪಾಧಿಕವೆಂದು ನಿರ್ದೇಶಿಸಿರುವುದರಿಂದ ಅಯೋಗ ವ್ಯವಚ್ಛೇದವು ಸಿದ್ಧಿಸಿ, ನಿಯತ ಶೇಷಶೇಷಿಭಾವವು ದ್ಯೋತವಾಗುತ್ತದೆ. ಇದರಿಂದ "ಆಧೇಯತ್ವ ಪ್ರಭೃತಿ ನಿಯಮೈರಾದಿಕರ್ತುಶ್ಶರೀರಂ" ಎಂಬ ಶ್ರೀ ಸೂಕ್ತಿಯ ಪ್ರಕಾರ ಶರೀರಾತ್ಮ ಭಾವವು ಹೇಳಲ್ಪಟ್ಟು, **ಶ್ರೀ ವಿಶಿಷ್ಟ ಪರತತ್ವಕ್ಕೆ ಸರ್ವಶರೀರಿತ್ವವು** ನಿರೂಪಿಸಲ್ಪಡುತ್ತದೆ

ಈ ಶೇಷತ್ವವು ಭಾಗವತ ಶೇಷತ್ವ ಪರ್ಯಂತವಾಗಿ ಬೆಳೆಯುತ್ತದೆ, ಎಂಬುದನ್ನು ಆಚಾರ್ಯರು ಮುಂದೆ ಪುರುಷಾರ್ಥಕಾಷ್ಠಾಧಿಕಾರದಲ್ಲಿ ನಿರೂಪಿಸುತ್ತಾರೆ.

ಜೀವಾತ್ಮ ಪ್ರವೃತ್ತಿ ನಿರೂಪಣೆ–ಹೀಗೆ ಚೈತನ್ಯ ಸ್ವರೂಪರಾದ ಚೇತನರ ಪ್ರವೃತ್ತಿಯು ಏನೆಂದರೆ ಪರಾಧೀನವೂ, ಪರಪ್ರಯೋಜನವೂ ಆದ ಕರ್ತೃತ್ವ ಭೋಕ್ತೃತ್ವಗಳು. **ಈಶ್ವರನು** ತನ್ನ ಭೋಕ್ತೃತ್ವಕ್ಕಾಗಿ ಈ ಚೇತನರಿಗೆ ಕರ್ತೃತ್ವ ಭೋಕ್ತೃತ್ವಗಳನ್ನು **ಉಂಟುಮಾಡುವುದರಿಂದ ಇವು** ಪರಾರ್ಥಗಳು ಅಂದರೆ ಜೀವನ ಕರ್ತೃತ್ವ ಭೋಕ್ತೃತ್ವಗಳಿಂದ ಭಗವಂತನಿಗೆ **ಲೀಲಾ**ರಸಾನುಭವವೂ ಭೋಗರಸಾನುಭವವೂ ಉಂಟಾಗುವುದರಿಂದ ಇವು ಈಶ್ವರನ ಭೋಕ್ತೃತ್ವಗಳು.

ಬದ್ಧಮುಕ್ತ ನಿತ್ಯರ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಗಳು :–

ಬದ್ಧಚೇತನರುಕ್ಕು ಇತ್ಯಾದಿ–ಬದ್ಧಚೇತನರಿಗೆ ಮುಕ್ತ ನಿತ್ಯರಿಗಿಂತ ಭೇದಕಾಕಾರವು ಅವಿದ್ಯಾಕರ್ಮವಾಸನಾ ರುಚಿ ಪ್ರಕೃತಿಸಂಬಂಧದಿಂದ ಕೂಡಿರುವುದು **ಅವಿದ್ಯಾ**– ದೇಹವೇ ಆತ್ಮಾ ಎಂಬ ಬುದ್ಧಿಯೂ ಆತ್ಮಾಸ್ವತಂತ್ರನು ಎಂಬ ಬುದ್ಧಿಯೂ **ಕರ್ಮ**–ಪುಣ್ಯಪಾಪರೂಪವಾದದ್ದೂ **ವಾಸನಾ**–ಪುಣ್ಯ ಪಾಪದಿಂದ ಉಂಟಾದ ಸಂಸ್ಕಾರ–ಪ್ರವಾ

ಪುರುಷಾರ್ಥ ತದುಪಾಯಾನುಷ್ಠಾನಙ್ಗಳುಕ್ಕುಮ್, ಕೃತೋಪಾಯನಾನ ಪರನ್ಯೈಕಾನ್ತಿಕ್ಕು ಭಗವದನುಭವ ಕೈಙ್ಕರ್ಯಙ್ಗಳುಕ್ಕುಮ್ ಉಪಯುಕ್ತಮಾಯಿರುಕ್ಕುಮ್. ಪಾಪಕೃತ್ತುಕ್ಕಳುಕ್ಕು ಇಚ್ಚರೀರಧಾರಣಮ್ ವಿಪರೀತಫಲತ್ತುಕ್ಕು ಹೇತುವಾಯಿರುಕ್ಕುಮ್. ಇಜ್ಜೀವರ್‌ಹಳ್ ಇಶ್ಶರೀರತ್ತೈ ವಿಟ್ಟಾಲ್ ಇದಿನ್ ಸಂಘಾತಂ ಕುಲೈಯುಮಿತ್ತನೈ. ಶರೀರತ್ತುಕ್ಕುಪಾದಾನಮಾನ ದ್ರವ್ಯಙ್ಗಳ್ ಈಶ್ವರಶರೀರಮಾಯ್‌ಕ್ಕೊಂಡು ಕಿಡಕ್ಕುಮ್.

ಬದ್ಧಾನಾಂ ನಿತ್ಯಮುಕ್ತೇಭ್ಯಃ ಸ್ಥಿತಿ ಪ್ರವೃತ್ತಿ ಭೇದ ಕಥನಂ

ಬದ್ಧ ಚೇತನರುಕ್ಕು ಇತರರಿಲ್ ಕಾಟ್ಟಿಲ್ ಸ್ಥಿತಿಭೇದಮ್:—ಸಂಸಾರಸಂಬಂಧಮ್ ಯಾವನ್ಮೋಕ್ಷಮನುವರ್ತಿಕ್ಕೈ. ಪ್ರವೃತ್ತಿಭೇದಮ್:....ಪುಣ್ಯಪಾಪಾನುಭಯರೂಪಙ್ಗಳಾನ ತ್ರಿವಿಧ ಪ್ರವೃತ್ತಿಹಳುಮ್.

ಪೂರ್ವಜನ್ಮ ಪುಣ್ಯಪಾಪಗಳ ದೆಸೆಯಿಂದ ಮುಂದಿನ ಜನ್ಮಗಳಲ್ಲಿ ಅದಕ್ಕೆ ಸದೃಶವಾದ ಕಾರ್ಯಗಳಲ್ಲಿ ಪ್ರವೃತ್ತಿ ಯುಂಟಾಗುವಂತೆ ಬುದ್ಧಿಯು ಉಂಟಾಗುತ್ತೆ. ಇದೇಕರ್ಮವಾಸನೆ, **ರುಚಿ**- ತದನುಗುಣವಾದ ಪ್ರೀತಿ. **ಪ್ರಕೃತಿಸಂಬಂಧ**;- ಆಯಾಯಾ ಕರ್ಮಾನುಗುಣವಾದ ಶರೀರಸಂಬಂಧ ಇವು ಬದ್ಧರಿಗೆ ಚಕ್ರದಹಾಗೆ ಪರಿವರ್ತಿಸುತ್ತಿರುತ್ತದೆ. ನಿತ್ಯಮುಕ್ತರಿಗೆ ಇವು ಇಲ್ಲ **ಇವರ್‌ಹಳುಕ್ಕು**-ಈಬದ್ಧ ಜೀವರಿಗೆ ಅನ್ಯೋನ್ಯ ಭೇದವು ಅವರವರ ಜ್ಞಾನಸುಖಾದ್ಯನುಭವದಿಂದ ಚತುರ್ಮುಖಬ್ರಹ್ಮನಿಂದ ಆರಂಭಿಸಿ ಸ್ತಂಭ (ಸ್ಥಾವರ) ಪರ್ಯಂತಗಳಾದ(**ವಹುಪ್ಪು**)ವಿಭಾಗಗಳಿಂದ ತಿಳಿಯತಕ್ಕದ್ದು. ಈ ಬದ್ಧ ಚೇತನರು ತಮತಮಗೆ ಕರ್ಮಾನುರೂಪವಾಗಿ ಈಶ್ವರನು ಕೊಟ್ಟ ಶರೀರಗಳನ್ನು ಧರ್ಮಿ ಸ್ವರೂಪದಿಂದಲೂ ಧರ್ಮ ಭೂತ ಜ್ಞಾನದಿಂದಲೂ ಧರಿಸುತ್ತಿರುತ್ತಾರೆ. **ಕರ್ಮಾನು ರೂಪ ಮಾಹ ಈಶ್ವರನಕೈತ್ತ ಶರೀರಂಗಳೈ**- "ರಮಣೀಯ ಚರಣಾಃ ರಮಣೀಯೂಂ ಯೋನಿಮಾಪದ್ಯೇರನ್ ಬ್ರಾಹ್ಮಣ ಯೋನಿಂವಾ ಕ್ಷತ್ರಿಯ ಯೋನಿಂವಾ ವೈಶ್ಯ ಯೋನಿಂವಾ" ಎಂಬ ಶ್ರುತಿಯಪ್ರಕಾರ ಪುಣ್ಯ ಕರ್ಮಗಳಿಂದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶರೀರಗಳು ಉಂಟಾಗುತ್ತವೆ. ವೇದಾಧ್ಯಯನ ಯಜ್ಞಯಾಗಗಳಲ್ಲಿ ಅಧಿಕಾರವು ಬ್ರಾಹ್ಮಣಕ್ಷತ್ರಿಯರಿಗೆಉಂಟು. ವೈಶ್ಯರಿಗೆವೇದಾಧ್ಯಯನದಲ್ಲಿ ಮಾತ್ರ ಅಧಿಕಾರ. ಇವು ರಮಣೀಯ-ಉತ್ಕೃಷ್ಟಜನ್ಮಗಳು. "ಅಧಯಇಹ ಕಪೂಯ ಚರಣಾ ಕಪೂಯೂಂ ಯೋನಿಮಾ ಪದ್ಯೇರನ್‌ಶ್ವ ಯೋನಿಂವಾ ಸೂಕರ ಯೋನಿಂವಾ ಚಂಡಾಲ ಯೋನಿಂವಾ" ಎಂಬ ಶ್ರುತಿಯಪ್ರಕಾರ ಕುತ್ಸಿತವಾದ(**ಕಪೂಯ**)ಕರ್ಮ(**ಚರಣ**)ಗಳನ್ನು ಮಾಡಿದವರು ನಾಯಿ,ಹಂದಿ,ಚಂಡಾಲಾದಿ ಕುತ್ಸಿತವಾದ(ಜುಗುಪ್ಸಾವಹವಾದ) ಶರೀರಗಳನ್ನು ಹೊಂದುವರು. **ಧರ್ಮಿಯಾಲ್ ವರುಹಿರ ಧಾರಣಮ್** ಇತ್ಯಾದಿ ಜೀವನ ಧರ್ಮಿಸ್ವರೂಪದಿಂದ ಶರೀರ ಧಾರಣವು ಶರೀರದ ಇರುವಿಕೆಗೆ (**ಸತ್ತೆ**) ಪ್ರಯೋಜಕ. ಇದನ್ನು ಸುಷುಪ್ತಿ ಮೂರ್ಛಾವಸ್ಥೆಗಳಲ್ಲಿ ಶರೀರಧಾರಣದಿಂದ ತಿಳಿಯಬಹುದು. **ಜಾಗ್ರದಾದ್ಯವಸ್ಥೆ**- ಜ್ಞಾನಪ್ರಸರಣಾವಸ್ಥೆಯಲ್ಲಿ ಧರ್ಮಭೂತ ಜ್ಞಾನದಿಂದ ಶರೀರಧಾರಣವು ಏರ್ಪಟ್ಟು ಪುರುಷಾರ್ಥತದುಪಾಯಗಳನ್ನು- ಅಂದರೆ ಸುಖದುಃಖಾನುಭವ ರೂಪ ಆತ್ಮಪ್ರಯೋಜನಾದಿ ಕರ್ಮಾನುಷ್ಠಾನಗಳನ್ನು ಮಾಡಲು ಉಪಯುಕ್ತವಾಗುತ್ತದೆ. **ಕೃತೋಪಾಯನಾದ** ಇತ್ಯಾದಿ-ಮೋಕ್ಷಾರ್ಥವಾಗಿ ಭಕ್ತಿಪ್ರಪತ್ತಿರೂಪ ಉಪಾಯಾನುಷ್ಠಾನ ಮಾಡಿದ ಪರನ್ಯೈಕಾಂತಿಗೆ ಭಗವತ್ಕೈಂಕರ್ಯಗಳನ್ನು ಅನುಷ್ಠಿಸಲು ಉಪಯುಕ್ತವಾಗುತ್ತದೆ. **ಪಾಪಕೃತ್ತುಕ್ಕಳುಕ್ಕು**- ಪಾಪಮಾಡುವವರಿಗೆ, ಈ ಶರೀರಧಾರಣವು ವಿಷಮಿಶ್ರವಾದ ಅನ್ನ ಭೋಜನದ ಹಾಗೆ ವಿಪರೀತಫಲಕ್ಕೆ ಕಾರಣವಾಗಿರುವುದು. ಈ ಜೀವರುಗಳು ಈ ಶರೀರವನ್ನು ಬಿಟ್ಟರೆ ಈ ಶರೀರದ **ಸಂಘಾತ**-ಅವಯವ ಸಂಬಧ ವಿಶೇಷವು **ಕುಲೈಯುಮ್**-ಶಿಥಿಲವಾಗುತ್ತದೆ. ದ್ರವ್ಯಸ್ವರೂಪವು ನಿತ್ಯವಾದ್ದರಿಂದ ಅದರ ಅವಸ್ಥೆಗೆ ನಾಶವೇಹೊರತ್ತು ನೈಯಾಯಿಕನು ಹೇಳುವಂತೆ ನಿರನ್ವಯವಿನಾಶವಿಲ್ಲ. ಸತ್ಕಾರ್ಯವಾದಿಗಳಾದ ನಮಗೆ ಅವಸ್ಥೆಗೆ ಮಾರ್ಪಾಡು ಏರ್ಪಡುತ್ತದೆ. **ಶರೀರಕ್ಕೆ** ಉಪದಾನವಾದ ದ್ರವ್ಯಗಳು ಅಂದರೆ ಶರೀರಾಂಶ ಭೂತದ್ರವ್ಯಗಳು ಈಶ್ವರ ಶರೀರವಾಗಿರುವುವು. ಅಣುವಾದ ಜೀವನು ಶರೀರಾಂಶಗಳಿಗೆ ಧಾರಕನಾಗಿಲ್ಲದೆ ಹೋದರೂ, ವಿಭುವಾದ ಈಶ್ವರನು ಈ ಶರೀರಾಂಶಗಳನ್ನು ಧರಿಸಿಕೊಂಡಿರುವುದರಿಂದ ಅವನಿಗೆ ಶರೀರವಾಗಿ ಇರುತ್ತವೆ ಎಂದು ಅರ್ಥ.

ಮುಕ್ತಾನಾಂ ಇತರೇಭ್ಯಃ ಸ್ವರೂಪಾದಿ ಭೇದ ಕಥನಮ್

ಮುಕ್ತರುಕ್ಕು ನೀಕ್ಕಿಯುಳ್ಳಾರಿಲ್ ಭೇದಮ್:—ಪ್ರತಿಬಂಧಕ ನಿವೃತ್ತಿಯಾಲೇ ಆವಿರ್ಭೂತಸ್ವರೂಪ ರಾಯಿರುಕ್ಕೈ. ಸ್ಥಿತಿಭೇದಂ:—ಪೂರ್ವಾವಧಿಯುಣ್ಡಾನ ವಾವಿರ್ಭಾವತ್ತುಕ್ಕುತ್ತರಾವಧಿಯನ್ರಿಕ್ಕೇಯಿರುಕ್ಕೈ.

ಇವರ್‌ಹಳಕ್ಕನ್ಯೋನ್ಯಂ ಸ್ಥಿತಿ ಭೇದಮಾವಿರ್ಭಾವತ್ತಿಲ್ ಮುರ್ಪಾಡು ಪಿರ್ಪಾಡುಹಳಾಲುಣ್ಡಾನ ಮುನ್ಪುತ್ತವೇತ್ತ ಚ್ಚುರುಕ್ಕುಮ್.

ಪ್ರವೃತ್ತಿ ಭೇದಮ್ :—ಅನಾದಿ ಕಾಲ ಮಿಟ್ರನ್ದು ಪೆತ್ತ ಪರಿಪೂರ್ಣ ಭಗವದನುಭವಜನಿತ ಪ್ರೀತಿ ಕಾರಿತಮಾನ ಯಥಾಭಿಮತ ಕೈಙ್ಕರ್ಯ ತದ್ವಿಶೇಷಙ್ಗಳ್.

ನಿತ್ಯಾನಾಂ ಸ್ವರೂಪ ಸ್ಥಿತಿಪ್ರವೃತ್ತಿ ಭೇದಕಥನಂ

ನಿತ್ಯರುಕ್ಕು ನೀಕ್ಕಿಯುಳ್ಳಾರಿಲ್ ಭೇದಮ್ :— ಅನಾದ್ಯಾವಿರ್ಭೂತ ಸ್ವರೂಪರಾಯ್ ಪರತಂತ್ರ ರಾಯಿರುಕ್ಕೈ ಇವರ್‌ಹಳುಕ್ಕು ನೀಕ್ಕಿಯುಳ್ಳಾರಿಲ್ ಕಾಟ್ಟಿಲ್ ಸ್ಥಿತಿಭೇದಂ—ಅನಾದ್ಯನುವೃತ್ತಮಾನ ಶೇಷಿತತ್ವಾನುಭವಮ್. ಇದು ನಿತ್ಯರುಕ್ಕೆಲ್ಲಾಮ್ ಪೊದುವಾನಪಡಿಯಾಲೇ ಇವರ್‌ಹಳುಕ್ಕನ್ಯೋನ್ಯಮ್ ಸ್ಥಿತಿಯಿಲ್ ವೈಷಮ್ಯಮಿಲ್ಲೈ ಇವರ್‌ಹಳುಕ್ಕು ಪ್ರವೃತ್ತಿಭೇದಂ—ಅನಾದಿಪ್ರವಾಹ ನಿತ್ಯಙ್ಗಳಾನ ಕೈಙ್ಕರ್ಯ ವಿಶೇಷಙ್ಗಳ್.

ನಿತ್ಯಮುಕ್ತಾನಾಂ ಸರ್ವವಿಧ ಕೈಂಕರ್ಯ ಸಿದ್ಧಿಃ.

ಅನನ್ತ ಗರುಡಾದಿಹಳುಕ್ಕಧಿಕಾರವಿಶೇಷಙ್ಗಳುಮ್ ತದುಚಿತಕೈಙ್ಕರ್ಯಂಗಳುಮ್, ವ್ಯವಸ್ಥಿತಂಗ ಳಾಯಿರುಕ್ಕ

ಬದ್ಧ ಮುಕ್ತ ನಿತ್ಯರ ಸ್ಥಿತಿ ಪ್ರವೃತ್ತಿ ಭೇದ–

ಬದ್ಧಚೇತನರಿಗೆ ಇತರರಿಗಿಂತ ಸ್ಥಿತಿ ಬೇದವು ಮೋಕ್ಷವನ್ನು ಪಡೆಯುವವರಗೆ ಸಂಸಾರಬಂಧವು ಅನುವರ್ತಿಸಿರುವುದೇ. ಪ್ರವೃತ್ತಿಭೇದವು ಪುಣ್ಯಪಾಪ ಅವೆರಡೂ ಇಲ್ಲದಿರುವ (ಅನ ಭಯ) ವ ೂರುವಿಧ ಪ್ರವೃತ್ತಿಗಳು. ಮುಕ್ತರಿಗೆ **ನೀಕ್ಕಿಯುಳ್ಳಾರಿಲ್**-ಬದ್ಧನಿತ್ಯರಹಾಗಿಲ್ಲದ ಪ್ರತಿಬಂಧಕ ನಿವೃತ್ತಿಯು ಏರ್ಪಟ್ಟು ಅದರಿಂದ ಅಪಹತಪಾಪ್ಮತ್ವಾದಿಗಳಿಂದ ಕೂಡಿದ ಸ್ವರೂಪಾವಿರ್ಭಾವ ಇವರ ಸ್ಥಿತಿಭೇದವು ಪೂರ್ವಾವಧಿಯುಂಟಾದ ಆವಿರ್ಭಾವಕ್ಕೆ ಉತ್ತರಾವಧಿಯಿಲ್ಲದಿರು ವುದು ಸ್ವಸ್ವರೂಪಾವಿರ್ಭಾವವು ಮುಕ್ತನಾಗಿ ಹೋದನಂತರ ಏರ್ಪಡುವುದರಿಂದ ಅದಕ್ಕೆ ಪೂರ್ವಾವಧಿಯುಂಟು. ಅನಂತರ ಆಸ್ವರೂಪಕ್ಕೆ ಯಾವ ತಿರೋಭಾವವೂ ಉಂಟಾಗದೆ ಇರುವುದರಿಂದ ಉತ್ತರಾವಧಿಯಿಲ್ಲ ಈ ಮುಕ್ತರಿಗೆ ಸ್ಥಿತಿಭೇದವು ಮೋಕ್ಷವುಲಭಿಸಿದ್ದುದು ಮುಂದೆ ಹಿಂದೆ ಎಂಬ ಪರಸ್ಪರ ಕಾಲವ್ಯತ್ಯಾಸವೇ **ಪ್ರವೃತ್ತಿಭೇದವು** ಅನಾದಿಕಾಲ ಲಭಿಸದೆ ಈಗ ಲಭಿಸಿದ ಪರಿಪೂರ್ಣ ಭಗವದನುಭವದಿಂದ ಉಂಟಾದ ಪ್ರೀತಿಯಿಂದ ಮಾಡುವ ಯಥಾಭಿಮತ ಕೈಂಕರ್ಯ ವಿಶೇಷಗಳು. **ನಿತ್ಯರುಕ್ಕು** ಇತ್ಯಾದಿ – ನಿತ್ಯರಿಗೆ **ನೀಕ್ಕಿಯುಳ್ಳಾರಿಲ್** ಬದ್ಧಮುಕ್ತರಿಗಿಂತ ಭೇದವು ಅನಾದಿಕಾಲದಿಂದ ಇರುವ ಸ್ವರೂಪಾ ವಿರ್ಭಾವದಿಂದ ಕೂಡಿದವರಾಗಿ ಭಗವಂತನಿಗೆ ಪರತಂತ್ರರಾಗಿರುವುದು ಇವರಿಗೆ ಬಾಕಿಯವರಿಗಿಂತ ಸ್ಥಿತಿಯಲ್ಲಿ ಭೇದವು ಅನಾದಿಯಾಗಿ ಅನುವರ್ತಿಸಿಬರುವ ಶೇಷಿಯಾದ ಭಗವಂತನ ಅನುಭವ ಈ ಅನುಭವವು ನಿತ್ಯಾತ್ಮರಿಗೆಲ್ಲಾ ಸಮಾನವಾದ್ದರಿಂದ ಇವರಿಗೆ ಸ್ಥಿತಿಯಲ್ಲಿ ಅನ್ಯೋನ್ಯ ಭೇದವಿಲ್ಲ. ಇವರುಗಳಿಗೆ ಪ್ರವೃತ್ತಿಭೇದವು ಅನಾದಿ ಪ್ರವಾಹನಿತ್ಯವಾದ ಕೈಂಕರ್ಯ ವಿಶೇಷಗಳು

ನಿತ್ಯಮುಕ್ತರಿಗೆ ಸರ್ವವಿಧ ಕೈಂಕರ್ಯ ಸಿದ್ಧಿ

ಅನಂತಗರುಡ ವಿಷ್ವಕ್ಸೇನರೇ ಮೊದಲಾದ ನಿತ್ಯರಿಗೆ ಅಧಿಕಾರ ವಿಶೇಷಗಳುಯಾವುವು ಅಂದರೆ ಅನಂತ-ಆದಿಶೇಷನು ಭಗವಂತನಿಗೆ ಆಸನ, ಹಾಸಿಗೆ, ಪಾದುಕಾ ಮೊದಲಾದ ರೂಪದಲ್ಲಿದ್ದು ಕೈಂಕರ್ಯ ಮಾಡುವುದು. ಗರುಡನು

ನಿತ್ಯರುಕ್ಕುಮ್ ಮುಕ್ತರುಕ್ಕುಮ್ ಸರ್ವವಿಧಕೈಙ್ಕರ್ಯಸಿದ್ಧಿಯುಣ್ಡೆನ್ಗಿರ ವರ್ಥಮ್ ಕೂಡುಮೋ ವೆನ್ನಿಲ್ ? ಸ್ವಾಮಿಯಿನುಡೈಯ ಅಭಿಪ್ರಾಯತುಕ್ಕೀಡಾಹತ್ತನಕ್ಕಭಿಮತಂಗಳಾನ ಕೈಙ್ಕರ್ಯಂಗಳಿಲೇ ಕಿಡೆಯಾದವೆ ಯೊನ್ರುಮಿಲ್ಲಾಮೈಯಾಲುಮ್, ಓರೋರುತ್ತರುಕ್ಕು ವ್ಯವಸ್ಥಿತಙ್ಗಳಾನ ಕೈಙ್ಕರ್ಯಙ್ಗಳೈತ್ತಾಂಗಳನುಷ್ಠಿಕ ವೇಣುಮೆನ್‌ಹಿರವಭಿಸನ್ಧಿ ವೇರೋರುತ್ತರುಕ್ಕು ಪ್ಪಿರವಾಮೈಯಾಲುಮ್, ಅರೇನುಮೊರುವರನುಷ್ಠಿಕ್ಕುಮ್ ಕೈಙ್ಕರ್ಯಮುಮ್ ಸ್ವಾಮಿಕ್ಕು ಪ್ರಿಯಮಾನ ಪಡಿಯಾಲೇ, ತದುಚಿತ ಕೈಙ್ಕರ್ಯಙ್ಗಳುಮ್ ಸರ್ವರುಕ್ಕುಮ್ ಪ್ರಿಯಮಾಯ್ ಕೈಙ್ಕರ್ಯಫಲಮಾನ ಪ್ರೀತಿಯಿಲ್ ವಾಶಿಯಿಲ್ಲಾಮೈಯಾಲುಮ್ ಸರ್ವರುಕ್ಕುಮ್ ಸರ್ವವಿಧಕೈಙ್ಕರ್ಯಸಿದ್ಧಿಯುಣ್ಡೆನ್ಗೈಯಿಲ್ ವಿರೋಧಮಿಲ್ಲೈ.

ಧರ್ಮಭೂತಜ್ಞಾನ ನಿರೂಪಣಮ್

ಇವ್ವಾತ್ಮಾಕ್ಕಳೆಲ್ಲಾರುಕ್ಕುಮ್ ಧರ್ಮಿಸ್ವರೂಪಮ್ಪೋಲೇ ಧರ್ಮಭೂತ ಜ್ಞಾನಮುಮ್ ದ್ರವ್ಯಮಾಯಿರುಕ್ಕ, ಇದಿನ್ ಸ್ವರೂಪತ್ತೈತ್ತನಿತ್ತಿಙ್ಗರುಳಿಚ್ಚೆಯ್ಯಾದೊ಴ಿನ್ದದು, ಚೇತನರೆನ್ರೆಡುತ್ತ ವಿಶಿಷ್ಟತ್ತಿಲೇ ವಿಶೇಷಣಮಾಯ್ ಚ್ಚೊರುಹಿ ನಿರ್ಕೈಯಡಿಯಾಹ.

ಇದ್ಧರ್ಮಭೂತಜ್ಞಾನಮ್ ವಿಷಯಪ್ರಕಾಶನ ದಶೈಯಿಲೇ ಸ್ವಾಶ್ರಯತ್ತುಕ್ಕು ಸ್ವಯಂಪ್ರಕಾಶಮಾಯಿರುಕ್ಕುಮ್. ಇದು ಈಶ್ವರನುಕ್ಕುಮ್, ನಿತ್ಯರ್ಕ್ಕುಮ್ ನಿತ್ಯವಿಭುವಾಯಿರುಕ್ಕುಮ್,

ಮಱ್ಱುಳ್ಳಾರ್ಕ್ಕು ಸಂಸಾರಾವಸ್ಥೈಯಿಲ್ ಕರ್ಮಾನುರೂಪಮಾಹ ಬಹುವಿಧಸಙ್ಕೋಚ ವಿಕಾಸವತ್ತಾಯ್ ಮುಕ್ತಾವಸ್ಥೈಯಲೇ ನೈಜವಿಕಾಸತ್ತಾಲೆ ಪಿನ್ಪು ಯಾವತ್ಕಾಲಮ್ ವಿಭುವಾಯಿರುಕ್ಕುಮ್:

ಭಗವಂತನಿಗೆ ವಾಹನವಾಗಿರುವುದು, ವಿಷ್ವಕ್ಸೇನರು ಸೇನಾನಾಯಕರಾಗಿದ್ದು ಭಗವದಾಜ್ಞಾ ಪಾಲಕರಾಗಿರುವುದು. ಈ ಅಧಿಕಾರಗಳೂ ಕೈಂಕರ್ಯಗಳೂ ಇವರುಗಳಿಗೆ ವ್ಯವಸ್ಥಿತವಾಗಿರುವಾಗ, ನಿತ್ಯರಿಗೂ ಮುಕ್ತರಿಗೂ ಸರ್ವವಿಧ ಕೈಂಕರ್ಯ ಸಿದ್ಧಿ ಉಂಟೆಂದು ಹೇಳುವ ಅರ್ಥವು ಸರಿಯೇ ಎಂದರೆ, ಸರಿಯೆಂದು ಆಚಾರ್ಯರು ನಿರೂಪಿಸುತ್ತಾರೆ. ಹೇಗೆಂದರೆ ಸ್ವಾಮಿಯಾದ ಭಗವಂತನ ಅಭಿಪ್ರಾಯಾನುಸಾರವಾಗಿ ತನ್ನಭಿಮತವಿರುವದು ದಾಸನ ಸ್ವಭಾವ. ಆ ರೀತಿಯಾದ ಅಭಿಮತಕ್ಕನುಸಾರವಾದ ಕೈಂಕರ್ಯಗಳಲ್ಲಿ ತನಗೆ ಲಭಿಸದೇ ಇರುವುದು ಯಾವುದೂ ಇಲ್ಲವು. ಒಬ್ಬೊಬ್ಬರಿಗೆ ವ್ಯವಸ್ಥಿತಗಳಾದ ಕೈಂಕರ್ಯಗಳನ್ನು ತಾವು ಅನುಷ್ಠಿಸಬೇಕೆಂಬ ಅಭಿಸಂಧಿಯು—ಅಭಿಲಾಷೆಯು, ಇನ್ನೊಬ್ಬರಿಗೆ ಉಂಟಾಗದು. ಏಕೆಂದರೆ ಶ್ರೀ ವೈಕುಂಠದಲ್ಲಿ "ನಿತ್ಯಾಭಿವಾಂಛಿತ ಪರಸ್ಪರ ನೀಚಭಾವೈಃ" ಎಂಬ ಶ್ರೀ ಸೂಕ್ತಿಯ ಪ್ರಕಾರ ಪರಸ್ಪರ ದಾಸಭಾವವು ಇರುವುದರಿಂದಲೂ ಸ್ವಾಮ್ಯನಭಿಮತವು ತಮಗೆ ಇಷ್ಟವಲ್ಲವಾದ್ದರಿಂದಲೂ ಒಬ್ಬರ ಮೇಲೆ ಮತ್ತೊಬ್ಬರಿಗೆ ಪೋಟಿಯಿರುವುದಿಲ್ಲ. ಯಾರೊಬ್ಬರು ಅನುಷ್ಠಿಸುವ ಕೈಂಕರ್ಯವು ಸ್ವಾಮಿಗೆ ಪ್ರಿಯವಾಗಿರುವುದರಿಂದ, ತದುಚಿತ ಕೈಂಕರ್ಯಗಳು ಸರ್ವರಿಗೂ ಪ್ರಿಯವಾಗಿ ಕೈಂಕರ್ಯ ಫಲವಾದ ಪ್ರೀತಿಯಲ್ಲಿ ತಾರತಮ್ಯವಿಲ್ಲದಿರುವುದರಿಂದ, ಸರ್ವರಿಗೂ ಸರ್ವವಿಧ ಕೈಂಕರ್ಯ ಸಿದ್ಧಿಯುಂಟೆಂಬುದರಲ್ಲಿ ವಿರೋಧವಿಲ್ಲ.

ಧರ್ಮಭೂತಜ್ಞಾನ ನಿರೂಪಣೆ

ಈ ಎಲ್ಲಾ ಆತ್ಮರಿಗೂ ಧರ್ಮಿ ಸ್ವರೂಪದ ಹಾಗೆ ಧರ್ಮಭೂತ ಜ್ಞಾನವೂ ದ್ರವ್ಯವಾಗಿರುವಾಗ, ಇದರ ಸ್ವರೂಪವನ್ನು "ತ್ರಿವಿಧ ಅಚೇತನವೆಂಬಲ್ಲಿ ಪ್ರತ್ಯೇಕವಾಗಿ" ಚತುರ್ವಿಧ ಅಚೇತನ"ಗಳೆಂದು, ಭಾಷ್ಯಕಾರರು ನಿರೂಪಿಸದೆ ಇರುವುದಕ್ಕೆ ಕಾರಣವೇನೆಂದರೆ, "ತ್ರಿವಿಧ ಚೇತನ"ರೆಂದು ಹೇಳಿರುವ ಚೇತನ ಶಬ್ದದಲ್ಲಿ ವಿಶೇಷಣ ವಿಶಿಷ್ಟವಾಗಿ ಸೇರಿರುವುದೇ, ಚೇತನಾ—ಬುದ್ಧಿಯೇಷಾಂಅಸ್ತೀತಿ ಚೇತನಾಃ-ಮತ್ವರ್ಥೀಯ ಅಚ್‌ಪ್ರತ್ಯಯಾಂತ ಚೇತನಾ ಶಬ್ದಾರ್ಥದಲ್ಲಿ ಎಂದರ್ಥ. ಚೇತನಾವಿಶಿಷ್ಟ ಚೇತನನಿಗೆ ಭಗವದಧೀನತ್ವವನ್ನು ಹೇಳಿರುವುದರಿಂದ. ಚೇತನಾ—ಧರ್ಮಭೂತ ಜ್ಞಾನವೆಂಬ ವಿಶೇಷಣಕ್ಕೂ ಭಗವದಧೀನತ್ವವು ಹೇಳಲ್ಪಟ್ಟಿತು.

ಹೀಗೆ ವಿಶೇಷಣ ಭೂತವಾದ ಧರ್ಮಭೂತ ಜ್ಞಾನಕ್ಕೆ ಭಗವದಧೀನತ್ವವನ್ನು ಹೇಳಿದರೆ ಸ್ವರೂಪ ಸ್ಥಿತಿ ಪ್ರವೃತ್ತಿಗಳನ್ನು ನಿರೂಪಿಸಬೇಡವೇ ಎಂದರೆ, ಅದನ್ನು ನಿರೂಪಿಸುತ್ತಾರೆ.

ಧರ್ಮಭೂತ ಜ್ಞಾನತ್ತಿನುಡೈಯ ಪ್ರವೃತ್ತಿ.

ಇದುಕ್ಕು ಪ್ರವೃತ್ತಿಯಾವದು (1) ವಿಷಯಙ್ಗಳೈ ಪ್ರಕಾಶಿಪ್ಪಿಕ್ಕೈಯುಂ, (2) ಪ್ರಯತ್ನಾವಸ್ಥೈಯಿಲೇ ಶರೀರಾದಿಹಳೈ ಪ್ರೇರಿಕ್ಕೈಯುಂ, (3) ಬದ್ಧದಶೈಯಿಲ್ ಸಙ್ಕೋಚವಿಕಾಸಙ್ಗಳುಂ, (4) ಆನುಕೂಲ್ಯ ಪ್ರಾತಿಕೂಲ್ಯ ಪ್ರಕಾಶಮುಖತ್ತಾಲೇ ಭೋಗಮೆನ್‍ಹಿರವವಸ್ಥೈಯೈ ಯುಡೈತ್ತೈಯುಮ್.

ಸುಖ ದುಃಖ ವ್ಯವಹಾರಃ–ಅನುಕೂಲ ಪ್ರತಿಕೂಲ ವಿಭಾಗ

ಭೋಗಮಾವದು ? – ತನಕ್ಕನುಕೂಲಮಾಹವಾದಲ್ ಪ್ರತಿಕೂಲ ಮಾಹವಾದಲೊನ್ನೈಯನುಭವಿಕ್ಕೈ. ಈಶ್ವರವಿಭೂತಿಯಾನ ಸರ್ವವಸ್ತುಕ್ಕಳುಕ್ಕುಮ್ – ಆನುಕೂಲ್ಯಮ್ ಸ್ವಭಾವಮಾಯಿಪ್ಪಡಿ ಈಶ್ವರನುಮ್ ನಿತ್ಯರುಮ್ ಮುಕ್ತರು ಮನುಭವಿಯಾನಿರ್ಕ, ಸಂಸಾರಿಹಳುಕ್ಕು ಕಾಲಭೇದತ್ತಾಲುಮ್,

---

ಧರ್ಮಭೂತ ಜ್ಞಾನದ ಪ್ರವೃತಿ ನಿರೂಪಣೆ–

ಈ ಧರ್ಮಭೂತ ಜ್ಞಾನವು ವಿಷಯಗಳನ್ನು ಪ್ರಕಾಶಿಸುವ ವೇಳೆಯಲ್ಲಿ, ತನಗೆ ಆಶ್ರಯವಾದ ಆತ್ಮವಸ್ತುವಿಗೆ **ಸ್ವಯಂ**–ತಾನಾಗಿಯೇ ಪ್ರಕಾಶವಾಗಿರುವುದು.

ಘಟಾದಿಗಳು ಇತರರಿಗೆ ಪ್ರಕಾಶವಾಗುತ್ತವೆ.

"ಘಟ ಮಹಂ ಜಾನಾಮಿ" ಎಂಬಲ್ಲಿ ಘಟವು ಅಹಂಶಬ್ದ ವಾಚ್ಯನಾದ ಜೀವನಿಗೆ ತಿಳಿಯುತ್ತದೆಯೇ ಹೊರತು ತನ್ನನ್ನು ತಾನು ತಿಳಿಯುವುದಿಲ್ಲ ಧರ್ಮಭೂತ ಜ್ಞಾನವು ತನಗೆ ಆಶ್ರಯವಾದ ಜೀವನಿಗೆ ಘಟವನ್ನೂ ತಿಳಿಯಪಡಿಸುವಾಗ, ತನ್ನನ್ನು ತಾನೇ ತೋರಿಸುಕೊಡುತ್ತದೆ ಎಂಬುದು ತಾತ್ಪರ್ಯ ಈ ಧರ್ಮಭೂತ ಜ್ಞಾನವು ಈಶ್ವರನಿಗೂ, ನಿತ್ಯರಿಗೂ ನಿತ್ಯವಿಭುವಾಗಿರುತ್ತದೆ. ಬಾಕಿಯವರಿಗೆ ಸಂಸಾರಾವಸ್ಥೆಯಲ್ಲಿ ಕರ್ಮಾನು ರೂಪವಾಗಿ ಅನೇಕ ವಿಧವಾದ ಸಂಕೋಚ ವಿಕಾಸಗಳಿಂದ ಕೂಡಿದ್ದು **ಮುಕ್ತಾವಸ್ಥೆಯಲ್ಲಿ** ಮೋಕ್ಷವನ್ನು ಪಡೆದನಂತರ, **ನೈಜವಿಕಾಸತ್ತಾಲೇ**–ಸ್ವಾಭಾವಿಕವಾದ ವಿಕಾಸದಿಂದ **ಪಿನ್ಬು**–ಅನಂತರ ಕಾಲತತ್ವವು ಇರುವವರೆಗೆ ವಿಭುವಾಗಿರುತ್ತದೆ. ಇದರಿಂದ ಧರ್ಮಭೂತ ಜ್ಞಾನಕ್ಕೆ ಕಾಲ ಸಂಬಂಧದಿಂದ ಉಂಟಾದ ಸ್ಥಿತಿಯ ಹೇಳಲ್ಪಟ್ಟಿತು ಈ ಧರ್ಮಭೂತ ಜ್ಞಾನಕ್ಕೆ ಪ್ರವೃತ್ತಿಯು ವಿಷಯಗಳನ್ನು ಪ್ರಕಾಶಪಡಿಸುವುದೂ. ಪ್ರಯತ್ನಾವಸ್ಥೆಯಲ್ಲಿ (ಅಂದರೆ ಜಾನಾತಿ ಇಚ್ಛತಿ, ಯತತೇ, ಎಂಬಂತೆ ಮೊದಲು ತಿಳುವಳಿಕೆ, ಅನಂತರ ಆ ಕಾರ್ಯದಲ್ಲಿ ಇಚ್ಛೆ, ಅನಂತರ ಪ್ರಯತ್ನ) ಶರೀರಾದಿಗಳನ್ನು ಪ್ರೇರೇಪಿಸುವುದೂ, ಬದ್ಧದಶೆಯಲ್ಲಿ ಸಂಕೋಚ ವಿಕಾಸಗಳೂ, ಅನುಕೂಲ್ಯ ಪ್ರಾತಿಕೂಲ್ಯಗಳನ್ನು ಪ್ರಕಾಶಪಡಿಸುವುದರಿಂದ ಭೋಗವೆಂಬ ಅವಸ್ಥೆಯನ್ನು ಹೊಂದುವುದೂ ಸಹ.

ಸುಖದುಃಖ ವ್ಯವಹಾರ

ಭೋಗವೆಂಬುದು ತನಗೆ ಅನುಕೂಲವಾಗಿಯಾಗಲಿ ಪ್ರತಿಕೂಲವಾಗಿಯಾಗಲಿ ಇರುವ ಒಂದು ಸುಖ ಅಥವಾ ದುಃಖವನ್ನು ಅನುಭವಿಸುವುದು. ಆದಾಗಿ ಸುಖ ದುಃಖಗಳು ಜ್ಞಾನದ ಪ್ರವೃತ್ತಿ ವಿಶೇಷಗಳೇ ಹೊರತು ಬೇರೆಯಿಲ್ಲ. ಒಂದು ವಸ್ತುವು ತನಗೆ ಅನುಕೂಲವಾಗಿ ಪ್ರಕಾಶಿಸುವುದೇ ಸುಖ. ಪ್ರತಿಕೂಲವಾಗಿ ಪ್ರಕಾಶಿಸುವುದೇ ದುಃಖ. **ತಾರ್ಕಿಕರು** ಚಂದನವನ್ನು ಮೈಗೆ ಹಚ್ಚಿಕೊಳ್ಳುವಾಗ, ಇದು ಅನುಕೂಲವೆಂಬ ಬುದ್ಧಿಯುಂಟಾಗುತ್ತದೆ. ನಂತರ ಸುಖವು ಉತ್ಪತ್ತಿಯಾಗುತ್ತದೆ, ಅನಂತರ ಅದರ ಅನುಭವ ಎನ್ನುವರು. **ವಿಶಿಷ್ಟಾದ್ವೈತಿ**ಗಳಾದ ನಾವು ಚಂದನವನ್ನು ಹಚ್ಚಿಕೊಳ್ಳುವಾಗ, ಇದು ಅನುಕೂಲವೆಂದು ಉಂಟಾಗುವ ಜ್ಞಾನವೇ ಸುಖ, ಬೇರೆಯಲ್ಲ ಎನ್ನುತ್ತೇವೆ.

ಪುರುಷಭೇದತ್ತಾಲುಂ, ದೇಶಭೇದತ್ತಾಲುಂ ಅಲ್ಪಾನುಕೂಲಮಾಯುಂ, ಪ್ರತಿಕೂಲಮಾಯುಂ, ಉದಾಸೀನಮಾಯುಂ, ಇರುಕ್ಕಿರ ಇವ್ವಿಭಾಗಙ್ಗಳೆಲ್ಲಾಂ ವಿವ್ವಸ್ತುಕ್ಕಳುಕ್ಕು ಸ್ವಭಾವ ಸಿದ್ಧಙ್ಗಳನ್ರು. ಇದು ಇವರ್ಹಳುಡೈಯ ಕರ್ಮಙ್ಗಳುಕ್ಕೀಡಾಹ ಸತ್ಯಸಙ್ಕಲ್ಪನಾನ ಈಶ್ವರನಿವರ್ಹಳುಕ್ಕು ಫಲ ಪ್ರದಾನಂ ಪಣ್ಣಿನ ಪ್ರಕಾರಂ.

ಕರ್ಮಫಲಾನುಭವ ಯೋಗ್ಯತಾ

ಇಕ್ಕರ್ಮ ಫಲಮನುಭವಿಕ್ಕೈಕ್ಕು ಬದ್ಧರುಕ್ಕು ಸ್ವರೂಪಯೋಗ್ಯತೈಯುಂ, ಸಹಕಾರಿಯೋಗ್ಯತೈಯುಮುಣ್ಡು. ಸ್ವರೂಪಯೋಗ್ಯತೈ ಪರತನ್ತ್ರ ಚೇತನತ್ವಂ ;

ಅನುಕೂಲ ಪ್ರತಿಕೂಲವಿಭಾಗ

ಈಶ್ವರ ವಿಭೂತಿಯಾನ ಇತ್ಯಾದಿ ಈಶ್ವರ ವಿಭೂತಿಯಾದ (ಲೀಲಾ, ನಿತ್ಯವಿಭೂತಿ) ಸರ್ವವಸ್ತುಗಳಿಗೂ ಅನುಕೂಲ್ಯವು ಸ್ವಾಭಾವಿಕವಾಗಿರುತ್ತದೆ ಈಶ್ವರನೂ ನಿತ್ಯ ಮುಕ್ತರೂ ಸರ್ವವಸ್ತುಗಳನ್ನೂ ತನಗೆ ಅನುಕೂಲ ವಾಗಿಯೇ ಅನುಭವಿಸುತ್ತಾರೆ ಆದರೆ ಸಂಸಾರಿಗಳಿಗೆ (ಕರ್ಮಾಧೀನರಿಗೆ) ಕಾಲಭೇದದಿಂದಲೂ, ಪುರುಷಬೇಧ ದಿಂದಲೂ, ದೇಶಭೇಧದಿಂದಲೂ, ಅಲ್ಪಾನುಕೂಲವಾಗಿಯೂ ಪ್ರತಿಕೂಲವಾಗಿಯೂ, ಉದಾಸೀನವಾಗಿಯೂ ಇರುವ ವಿಭಾಗಗಳೆಲ್ಲಾ, ಈ ವಸ್ತುಗಳಿಗೆ ಸ್ವಭಾವ ಸಿದ್ಧವಲ್ಲ. ಈ ವಿಭಾಗಗಳು **ಇವರ್ಹಳುಡೈಯ**– ಈ ಬದ್ಧಚೇತನರ ಪುಣ್ಯಪಾಪ ರೂಪ ಕರ್ಮಕ್ಕೆ ಅನುಸಾರವಾಗಿ, ಸತ್ಯಸಂಕಲ್ಪನಾದ ಈಶ್ವರನು ಇವರುಗಳಿಗೆ ಫಲಪ್ರದಾನವನ್ನು ಮಾಡಿದ ಪ್ರಕಾರ ಈಶ್ವರನಿಗೂ, ನಿತ್ಯ ಮುಕ್ತರಿಗೂ ಪುಣ್ಯಪಾಪ ರೂಪ ಕರ್ಮ ಸಂಬಂಧವಿಲ್ಲದಿರುವುದರಿಂದ ಸರ್ವ ವಸ್ತುಗಳೂ ಅವರುಗಳಿಗೆ ಅನುಕೂಲವಾಗಿಯೇ ಇರುತ್ತವೆ ಬದ್ಧರಿಗೂ ಕೆಲವು ಸಮಯಗಳಲ್ಲಿ ಅನುಕೂಲವಾಗಿಯೂ ಕೆಲವು ಸಮಯಗಳಲ್ಲಿ ಪ್ರತಿಕೂಲವಾಗಿಯೂ ಕೆಲವು ವಸ್ತುಗಳು ತೋರುತ್ತವೆಯಷ್ಟೆ ಆದ್ದರಿಂದ ಒಂದೇ ವಸ್ತುವಿಗೆ ಎರಡು ಸ್ವಭಾವವು ಸರಿಯಿಲ್ಲದಿರುವುದರಿಂದ **ಎಲ್ಲಾ** ವಸ್ತುಗಳಿಗೂ **ಅನುಕೂಲ್ಯವೇ** ಸ್ವಭಾವ. ಅನುಕೂಲ್ಯ ಪ್ರಾತಿಕೂಲ್ಯ ಜ್ಞಾನವೇ ಸುಖ ಮತ್ತು ದುಃಖ. **ಕಾಲಭೇದತ್ತಾಲುಂ**–ಶೀತಕಾಲದಲ್ಲಿ ಅಗ್ನಿಯು ಸುಖಾನುಭವವನ್ನುಂಟು ಮಾಡುತ್ತದೆ. ಉಷ್ಣಕಾಲದಲ್ಲಿ ಅದೇ ಅಗ್ನಿಯು ದುಃಖಾನುಭವವನ್ನು ಉಂಟುಮಾಡುತ್ತದೆ **ಪುರುಷಭೇದತ್ತಾಲುಂ**-ಒಂಟೆಗೆ ಬೇವಿನ ಸೊಪ್ಪು ಭೋಗ್ಯವಾಗಿರುತ್ತೆ ಹಸುವಿಗೆ ಹುಲ್ಲು ಭೋಗ್ಯವಾಗಿರುತ್ತದೆ **ಅನ್ನಂ**ಭೋಜ್ಯಂ ಮನುಷ್ಯಾಣಾಂ ಅಮೃತಂತು ದಿವೌಕಸಾಂ । ಶ್ವಪಶೂವಿಟ್‌ತೃಣ್‌ಹಾರೌ ಸಂತೋ ದಾಸ್ಯೈಕ ಜೀವನಾಃ॥, ಎಂಬಂತೆ ಮನುಷ್ಯರಿಗೆ ಅನ್ನವು ಭೋಗ್ಯ, ದೇವತೆಗಳಿಗೆ ಅಮೃತ, ನಾಯಿಗೆ ಅಮೇಧ್ಯ, ಪಶುವಿಗೆ ಹುಲ್ಲು, ಸತ್ಪುರುಷರಿಗೆ ಭಗವದ್ದಾಸ್ಯವು ಭೋಗ್ಯವು. **ದೇಶಭೇದತ್ತಾಲುಂ**–ಹುಣಸೆಹಣ್ಣು, ಮೆಣಸಿಕಾಯಿ ಮೊದಲಾದವು ಕೆಲವು ದೇಶಗಳಲ್ಲಿ ಅಧಿಕವಾಗಿ ಅಪೇಕ್ಷಿತವಾಗಿರುತ್ತವೆ ಕೆಲವು ದೇಶಗಳಲ್ಲಿ ಕಡಿಮೆಯಾಗಿ ಅಪೇಕ್ಷಿತವಾಗಿರುತ್ತವೆ ಆದ್ದರಿಂದ ಈ ಅನುಕೂಲ್ಯ ಪ್ರಾತಿಕೂಲ್ಯಗಳಿಗೆ ಔಪಾಧಿಕ ಕರ್ಮವೇ ಉಪಾಧಿ ಈ ಉಪಾಧಿಯ ಸಂಬಂಧದಿಂದ ಅನುಕೂಲಾನುಭವವೇ (ಜ್ಞಾನವೇ) ಸುಖ ಪ್ರತಿಕೂಲಾನುಭಾವವೇ (ಜ್ಞಾನವೇ) ದುಃಖ

ಕರ್ಮಫಲಾನುಭವಕ್ಕೆ ಯೋಗ್ಯತೆ

ಇಕ್ಕರ್ಮಫಲಂ ಅನುಭವಿಕ್ಕೈಕ್ಕು ಇತ್ಯಾದಿ -ಈ ಕರ್ಮಫಲವನ್ನು ಅನುಭವಿಸಲು ಬದ್ಧ ಚೇತನರಿಗೆ ಸ್ವರೂಪ ಯೋಗ್ಯತೆಯೂ ಸಹಕಾರಿ ಯೋಗ್ಯತೆಯೂ ಉಂಟು. ಸ್ವರೂಪ ಯೋಗ್ಯತೆಯು ಭಗವತ್ಪರತಂತ್ರರಾಗಿ ಚೈತನ್ಯ ಗುಣದಿಂದ ಕೂಡಿರುವುದು **ಸಹಕಾರಿಯೋಗ್ಯತೆ** ಎಂದರೆ ಅಪರಾಧದಿಂದ ಕೂಡಿರುವುದು. ನಿತ್ಯರಿಗೂ ಮುಕ್ತರಿಗೂ ಪರತಂತ್ರ ಚೇತನತ್ವವು ಇರುವುದರಿಂದ ಸ್ವರೂಪ ಯೋಗ್ಯತೆಉಂಟು ಆದರೆ ಈಶ್ವರನಿಗೆ ಅಭಿಮತ (ಇಷ್ಟ) ವಲ್ಲದ ವಿಪರೀತಾನುಷ್ಠಾನವನ್ನು ಇವರು ಮಾಡದೆ ಇರುವದರಿಂದ ಅಪರಾಧ ಪ್ರಸಕ್ತಿಯೇ ಇಲ್ಲದೆ,

ಸಹಕಾರಿ ಯೋಗ್ಯತೈ ಸಾಪರಾಧತ್ವಮ್. ನಿತ್ಯರುಕ್ಕುಮ್ ಮುಕ್ತರುಕ್ಕುಮ್ ಪರತನ್ತ್ರ ಚೇತನತ್ವೈ ಯಾಲೇ ಸ್ವರೂಪಯೋಗ್ಯತೆಯುಣ್ಡೇಯಾಕಿಲುಮ್ ಈಶ್ವರಾನಭಿಮತ ವಿಪರೀತಾನುಷ್ಠಾನಮಿಲ್ಲಾಮೈ ಯಾಲೇ ಸಹಕಾರಿಯೋಗ್ಯತೈಯಿಲ್ಲೈ. ಈಶ್ವರರ್ ಸರ್ವಪ್ರಶಾಸಿತಾವಾಯ್, ತಾನೊರುತ್ತರುಕ್ಕು ಶಾಸನೀಯನನ್ರಿಕ್ಕೇ ನಿರ್ಕೈಯಾಲೇ ಪರತನ್ತ್ರ ಚೇತನತ್ವಮಾಹಿರ ಸ್ವರೂಪಯೋಗ್ಯತೆಯುಮಿಲ್ಲೈ; ಸ್ವತನ್ತ್ರನಾಹೈಯಾಲೇ ಸ್ವತನ್ತ್ರಾಜ್ಞಾತಿಲಂಘನಮಾಹಿರ ಸಹಕಾರಿಯೋಗ್ಯತೆಯುಮಿಲ್ಲೈ.

ಸಹಕಾರಿಯೋಗ್ಯತೆ ಇಲ್ಲ **ಈಶ್ವರನ್**–ಈಶ್ವರನು **ಸರ್ವಪ್ರಶಾಸಿತಾವಾಯ್**–ಎಲ್ಲರನ್ನೂ ನಿಯಮಿಸುವವನಾಗಿ ತಾನು ಯಾರಿಂದಲೂ ನಿಯಮಿಸಲ್ಪಡದೇ ಇರುವುದರಿಂದ, ಇವನಿಗೆ ಪರತಂತ್ರ ಚೇತನತ್ವವೆಂಬ ಸ್ವರೂಪ ಯೋಗ್ಯತೆ ಇಲ್ಲ **ಸ್ವತಂತ್ರನ್**–ಸ್ವತಂತ್ರನಾಗಿರುವುದರಿಂದ, ಸ್ವತಂತ್ರಾಜ್ಞಾತಿಲಂಘನಕ್ಕೆ ಪ್ರಸಕ್ತಿಯಿಲ್ಲ ಆ ರೀತಿಯಾದ ಸ್ವತಂತ್ರಾಜ್ಞಾತಿಲಂಘನವೆಂಬ ಸಹಕಾರಿಯೋಗ್ಯತೆಯೂ ಇಲ್ಲ

ಈಶ್ವರ ವಿಭೂತಿಯಾನ ಎಂದಾರಂಭಿಸಿ, **ಸಹಕಾರಿಯೋಗ್ಯತೈಯುಮ್ ಇಲ್ಲೈ** ಎಂಬ ವಾಕ್ಯದ ಪರ್ಯಂತ, ಆಚಾರ್ಯರ ಅಭಿಪ್ರಾಯ ಪಡುವುದೇನೆಂದರೆ ಅನುಕೂಲತ್ವ, ಪ್ರತಿಕೂಲತ್ವವೆಂಬ ಈ ಎರಡೂ ವಸ್ತುವಿನ ಶಕ್ತಿ ವಿಶೇಷ, ಅನುಕೂಲತ್ವವು ನಿತ್ಯವಸ್ತುಗಳಿಗೆ ನಿತ್ಯವಾಗಿದೆ ಅನಿತ್ಯ ವಸ್ತುಗಳಿಗೆ ಯಾವದ್ಧರ್ಮಿಭಾವಿ ಅಂದರೆ ಧರ್ಮಿ ಸ್ವರೂಪವಿರುವವರೆಗೆ ಮಾತ್ರ ಬದ್ಧಜೀವಿಗೆ, ನಿತ್ಯಾನಿತ್ಯ ವಸ್ತುಗಳಲ್ಲಿ ಪರಿಮಿತ ಪುಣ್ಯವಶದಿಂದ, ಪ್ರಿಯತ್ವವು ಉಂಟಾದಾಗ ಆ ಫಲದಿಂದ ಕೂಡಿರುತ್ತದೆ ಫಲವೆಂಬುದು ಪ್ರೀತಿ ಅದೇ ಸುಖ ಪ್ರಾತಿಕೂಲ್ಯವಿಲ್ಲದೆ ಆನುಕೂಲ್ಯದಿಂದ ಕೂಡಿದ ವಸ್ತುವಿನಿಂದ ಉಂಟಾಗುವ ಅನುಭವವೇ ಸುಖ ಅದರಿಂದ ಉಂಟಾಗುವ ಬೇರೆಯೊಂದಲ್ಲ. ಯಾವಾಗ ಅದೇ ಪುರುಷನಿಗೆ ಪಾಪ ವಿಶೇಷದಿಂದ ಅದೇ ವಸ್ತುವಿನಲ್ಲಿ ಅಪ್ರಿಯತ್ವವು ಉಂಟಾಗುತ್ತದೆಯೋ, ಆವಾಗ ಆವಸ್ತುವಿನಲ್ಲಿ ಪ್ರತಿಕೂಲ ರೂಪವಾದ ಶಕ್ತಿ ವಿಶೇಷವು ಉಂಟಾಗುತ್ತದೆ ಆ ರೀತಿಯಾದ ಪ್ರತಿಕೂಲಾನುಭವವನ್ನು ಉಂಟುಮಾಡುವ ಕರ್ಮದಿಂದ ಅನುಕೂಲತಾ ರೂಪ ಶಕ್ತಿವಿಶೇಷವು, ಸ್ವಭಾವ ಸಿದ್ಧವಾಗಿದ್ದರೂ ತಡೆಯಲ್ಪಟ್ಟದ್ದಾಗಿ ಫಲದಾಯಕವಾಗುವುದಿಲ್ಲ ಆಗ ವಸ್ತುವಿನ ಪ್ರತಿಕೂಲಾನುಭವವು ಅಪ್ರೀತಿಕರ ರೂಪವಾದ ದುಃಖವನ್ನುಂಟು ಮಾಡುತ್ತದೆ ಆ ಅಪ್ರೀತಿಯೇ ದುಃಖಕರ ಎಂದರ್ಥ ಅದರಿಂದ ಉಂಟಾಗುವ ಬೇರೆ ಅನುಭವವಲ್ಲ ಹೀಗೆ ಒಬ್ಬನಿಗೆ ಪುಣ್ಯವಶದಿಂದ ವಸ್ತುವಿನಲ್ಲಿ ನಿತ್ಯಪ್ರಿಯತ್ವವೂ, ಪಾಪವಶದಿಂದ ನಿತ್ಯ ಅಪ್ರಿಯತ್ವವೂ ಉಂಟಾಗಿ ಮೇಲೆ ಹೇಳಿದ ರೀತಿಯಲ್ಲಿ ಸುಖದುಃಖ ವ್ಯವಸ್ಥೆಯನ್ನು ಉಂಟುಮಾಡುತ್ತದೆ ಅನುಕೂಲತ್ವ ಪ್ರತಿಕೂಲತ್ವವೆಂಬ ಎರಡೂ ಆಯಾಯಾ ಪುರುಷನ ಪ್ರತಿಸಂಬಂಧಿಕವು. ಹಾಗಿದ್ದಾಗ್ಯೂ ಸರ್ವಸುಹೃತ್ತಾದ ಸರ್ವೇಶ್ವರನ ಸಂಕಲ್ಪದಿಂದ ಚೇತನನ ಪುಣ್ಯ ನಿರಪೇಕ್ಷವಾಗಿ ನಿತ್ಯಾನಿತ್ಯ ವಸ್ತುಗಳಲ್ಲಿ ಅನುಕೂಲತ್ವವು ಉಂಟಾಗುತ್ತದೆ. ಅದರ ಫಲಲಾಭಕ್ಕೆ ಬದ್ಧಾವಸ್ಥೆಯಲ್ಲಿ ಜೀವರ ಪುಣ್ಯವು ಸಹಕರಿಸುತ್ತದೆ. ಯಾವ ಕಾರ್ಯಗಳಲ್ಲಿಯೂ ಪುಣ್ಯಾಪೇಕ್ಷೆಯಿಲ್ಲದ, ನಿತ್ಯರುಗಳಿಗೆ, ಸರ್ವಸುಹೃತ್ತಾದ ಭಗವಂತನ ಸಂಕಲ್ಪಾನುಗುಣವಾಗಿ, ಸರ್ವ ವಸ್ತುಗಳೂ ಅನುಕೂಲಸ್ವಭಾವಗಳಾಗಿ, ಫಲಕ್ಕೆ ತಡೆ ಯಾವುದೂ ಇಲ್ಲದೆ ಸುಖಾತ್ಮಕಾನುಭವಕ್ಕೆ ವಿಷಯವಾಗುತ್ತವೆ. ಸರ್ವೇಶ್ವರನಿಗೋ ಎಂದರೆ ಸ್ವತಃ ಅಪಹತಪಾಪ್ಮನಾದ್ದರಿಂದ, ತನ್ನ ಸಂಕಲ್ಪದಿಂದ ಸರ್ವವೂ ತನಗೆ ಅನುಕೂಲವಾಗಿರುವಂತೆ ವಿರಚಿಸಿರುವುದರಿಂದ ಸರ್ವವಸ್ತುಗಳೂ ತನಗೆ ವಿಭೂತಿಯಾಗಿ ಸರ್ವದಾ ಸುಖರೂಪಾನುಭವಕ್ಕೆ ವಿಷಯವಾಗಿಯೇ ಇರುತ್ತವೆ. ಪಾಪಿಗಳಿಗೆ ಆ ಪಾಪಕ್ಕೆ ಅನುಗುಣವಾಗಿ ಫಲಪ್ರದನಾದ ಸರ್ವೇಶ್ವರನ ಸಂಕಲ್ಪ ವಿಶೇಷದಿಂದ, ವಸ್ತುವು ಇರುವ ಪರ್ಯಂತ ಅಥವಾ ಸ್ವಲ್ಪಕಾಲ, ಆ ಪಾಪ ಕರ್ಮದಿಂದ ಅನುಕೂಲತ್ವವು ತಡೆಯಲ್ಪಟ್ಟು ಪ್ರತಿಕೂಲಾನುಭವಕ್ಕೆ ಕಾರಣವಾಗುತ್ತದೆ

ಧರ್ಮಧರ್ಮಿರೂಪ ಜ್ಞಾನಙ್ಗಳುಡೈಯ ಅಸಾಧಾರಣಾಕಾರಮ್.

ಜೀವೇಶ್ವರರೂಪರಾನ ವಾತ್ಮಾಕ್ಕಳೆಲ್ಲಾರುಡೈಯುವುಮ್ ಸ್ವರೂಪಂ, ಸ್ವಸ್ಮೈಸ್ವಯಂಪ್ರಕಾಶಮ್. ಇದ್ಧರ್ಮಿ ಸ್ವರೂಪ ಪ್ರಕಾಶತ್ತುಕ್ಕು ಬದ್ಧರುಕ್ಕು ಮುಳ್ಪಡ ವೊರುಕಾಲತ್ತಿಲುಮ್ ಸಙ್ಕೋಚವಿಕಾಸಙ್ಗಳಿಲ್ಲೈ. ಸರ್ವಾತ್ಮಾಕ್ಕಳುಡೈಯುವುಮ್ ಧರ್ಮಭೂತಜ್ಞಾನಮ್ ವಿಷಯಪ್ರಕಾಶನವೇಳೈಯಿಲೇ ಸ್ವಾಶ್ರಯತ್ತುಕ್ಕು ಸ್ವಯಂಪ್ರಕಾಶಮಾಯಿರುಕ್ಕುಮ್. ಜ್ಞಾನತ್ವಮುಮ್, ಸ್ವಯಂಪ್ರಕಾಶತ್ವಮುಮ್, ಧರ್ಮಧರ್ಮಿಕ್ಕಳುಕ್ಕು ಸಾಧಾರಣಮ್ ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಂ ಏತ್ತಮ್. ಧರ್ಮಿಯಾನವಾತ್ಮ ಸ್ವರೂಪತ್ತುಕ್ಕು ಪ್ರತ್ಯಕ್ತ್ವಂ ಏತ್ತಮ್.

ಧರ್ಮಧರ್ಮಿ ಜ್ಞಾನಗಳ ಅಸಾಧಾರಣಾಕಾರ

ಜೀವೇಶ್ವರ ರೂಪ ಇತ್ಯಾದಿ ಜೀವೇಶ್ವರ ರೂಪವಾದ ಆತ್ಮರುಗಳೆಲ್ಲರ ಸ್ವರೂಪವು ತನಗೆ ತಾನೇ ಪ್ರಕಾಶಿಸುತ್ತದೆ. (**ಸ್ವಸ್ಮೈಸ್ವಯಂ ಪ್ರಕಾಶಂ** ತನಗೆ ತಾನೇ ಪ್ರಕಾಶಿಸುತ್ತದೆ.) ಜೀವೇಶ್ವರರೆಲ್ಲರಿಗೂ ಬದ್ಧ ಜೀವರಿಗೂ ಸೇರಿ ಯಾವ ಕಾಲದಲ್ಲಿಯೂ (ಸುಷುಪ್ತಿ, ಮಹಾಪ್ರಳಯ ಕಾಲಗಳೂ ಸೇರಿ) ಸ್ವರೂಪಕ್ಕೆ ಸಂಕೋಚ ವಿಕಾಸಗಳಿಲ್ಲ ಕಾರಣ ಧರ್ಮಿ ಜ್ಞಾನವು ನಿತ್ಯ ತಥಾಚ ಸ್ವಸ್ಮೈಸ್ವಯಂ ಪ್ರಕಾಶತ್ವವೇ, ಸಮಾನ ಧರ್ಮವೆಂದು ಹೇಳಲ್ಪಡುತ್ತದೆ. ಸರ್ವಾತ್ಮರುಗಳ ಧರ್ಮ ಭೂತ ಜ್ಞಾನವು ವಿಷಯವನ್ನು ಪ್ರಕಾಶಪಡಿಸುವ ವೇಳೆಯಲ್ಲಿ **ಸ್ವಾಶ್ರಯತ್ತುಕ್ಕು**–ತನಗೆ ಆಶ್ರಯವಾದ ಧರ್ಮಿಜ್ಞಾನಕ್ಕೆ–ಸ್ವ**ಯಂ ಪ್ರಕಾಶಮ್**–ತಾನಾಗಿಯೇ ಪ್ರಕಾಶಿಸುತ್ತದೆ. ಅಂದರ ಬೇರೆ ಜ್ಞಾನದ ಅಪೇಕ್ಷೆಯಿಲ್ಲದೆ ತಿಳಿಯುತ್ತದೆ. ಜ್ಞಾನತ್ವವೂ ಸ್ವಯಂ ಪ್ರಕಾಶತ್ವವೂ ಧರ್ಮ ಧರ್ಮಿಗಳಿಗೆ ಸಾಧಾರಣ **ಧರ್ಮ ಭೂತ** ಜ್ಞಾನಕ್ಕೆ **ವಿಷಯಿತ್ವವು** (ವಿಷಯಗಳನ್ನು ತೋರಿಸಿ ಕೊಡುವುದು) ಅಧಿಕ (ಅಸಾಧಾರಣಾಕಾರ). ಧರ್ಮಿಯೂದ ಆತ್ಮ ಸ್ವರೂಪಕ್ಕೆ (ಜೀವೇಶ್ವರರಿಬ್ಬರ ರೂಪಕ್ಕೆ) **ಪ್ರತ್ಯಕ್ತ್ವವು** ಅಧಿಕ (ಅಸಾಧಾರಣಾಕಾರ).

ಜ್ಞಾನತ್ವವೆಂದರೆ **ಕಸ್ಯಚಿತ್ ಪ್ರಕಾಶಕತ್ವಮ್-ಕಿಂಚಿನ್ನಿಷ್ಠ ಪ್ರಕಾಶಕಾರಣತ್ವಮ್–ಕಿಂಚಿತ್** ಶಬ್ದವು ಆತ್ಮವಿಷಯವಾದರೆ ಆ ಆತ್ಮತತ್ತ್ವವನ್ನು ಪ್ರಕಾಶ ಪಡಿಸಲು ಕಾರಣ ಭೂತವೆಂದರ್ಥ. ಧರ್ಮಭೂತ ಜ್ಞಾನವನ್ನು **ಕಿಂಚಿತ್** ಶಬ್ದವು ತಿಳಿಸಿದರೆ, ಆ ಧರ್ಮ ಭೂತ ಜ್ಞಾನವು ಅದಕ್ಕೆ ವಿಷಯವಾದ (ಅದರಿಂದ ತಿಳಿಯಲ್ಪಡುವ) ವಸ್ತುಗಳನ್ನು ವಿಷಯೀಕರಿಸುತ್ತದೆ **ಅದಾವದು**-(ಅದಾಗಿ)ತನ್ನ ವಿಷಯವಾಗಿಯಾಗಲಿ, ಬೇರೆಯೊಂದರ ವಿಷಯವಾಗಿಯಾಗಲಿ, ಇವೆರಡರಲ್ಲಿ ಯಾವುದಾದರೂ ಒಂದರ **ವ್ಯವಹಾರಾನುಗುಣ್ಯವನ್ನು**–ಮಾಡುವುದು ವ್ಯವಹಾರಾನುಗುಣ್ಯವೆಂದರೆ ಜ್ಞಾನವು ಒಂದು ವಸ್ತುವನ್ನು ವಿಷಯೀಕರಿಸಿದರೆ ಆ ವಿಷಯವು ವ್ಯವಹಾರಾನುಗುಣವಾಗುತ್ತದೆ. ಜ್ಞಾನವಿಷಯಿತ್ವವೇ ವ್ಯವಹಾರಾನು ಗುಣ್ಯವೆಂದರ್ಥ ಒಂದು ಜ್ಞಾನವುಉಂಟಾದರೆ ಆಗ, ತನಗೋ ಬೆರೊಂದು ವಸ್ತುವಿಗೋ ವಿಷಯಿತ್ವವು ಉಂಟಾಗುತ್ತದೆ ತಥಾಚ "ಅಹಂ" ಎಂಬ ಧರ್ಮಿ ಜ್ಞಾನವು ತನ್ನ ವ್ಯವಹಾರಾನುಗುಣ್ಯತೆಯನ್ನು ತನ್ನಲ್ಲೇ ಉಂಟುಮಾಡುತ್ತದೆ "ಘಟಂಜಾನಾಮಿ" ಎಂಬ ಧರ್ಮ ಭೂತ ಜ್ಞಾನವು, ಘಟವನ್ನು ತನ್ನ ವ್ಯವಹಾರಕ್ಕೆ ಅನುಗುಣವಾಗಿ ತಿಳಿಯಪಡಿಸುತ್ತದೆ ಯಾದ್ದರಿಂದ ಧರ್ಮ ಧರ್ಮಿಜ್ಞಾನಗಳೆರಡಕ್ಕೂ ವ್ಯವಹಾರಾನುಗುಣ್ಯಾಪಾದಕತ್ವ ರೂಪಜ್ಞಾನತ್ವವು ಸಿದ್ಧ ವ್ಯವಹಾರಾನು ಗುಣ್ಯತ್ವ-ವ್ಯವಹರಿಸಲು ಅರ್ಹತೆ ಎಂದರ್ಥ

ಈ ಧರ್ಮ ಧರ್ಮಿಜ್ಞಾನಗಳಿಗೆ ಇರುವ ಸಾಧರ್ಮ್ಯವನ್ನು (ಸಮಾನಾಕರ) ಮಾತ್ರ ತಿಳಿದುಕೊಂಡು ಅವುಗಳ ವೈಧರ್ಮ್ಯವನ್ನು-(ವ್ಯತ್ಯಾಸವಾದ ಆಕಾರ) ತಿಳಿದುಕೊಳ್ಳದೆ ಮತಾಂತರಸ್ಥರು ಧರ್ಮಿಯಾದ ಆತ್ಮ ತತ್ತ್ವವನ್ನು ಧರ್ಮ ಜ್ಞಾನವೆಂದು ಭ್ರಮಿಸಿದ್ದಾರೆ ಎಂಬುದನ್ನು ತಿಳಿಯಪಡಿಸುವುದೇ ಆಚಾರ್ಯ ಸಾರ್ವಭೌಮರ ಹೃದಯ. ಹೇಗೆಂದರೆ,, ಜೀವ ಮತ್ತು ಈಶ್ವರ ರೂಪವಾದ ಆತ್ಮರುಗಳ ಸ್ವರೂಪವು ತನಗೆ ತಾನೇ

ತಿಳಿಯುತ್ತದೆ ಈ ಧರ್ಮಿರೂಪವಾದ ಜ್ಞಾನಕ್ಕೆ ಯಾರಿಗೂ ಬದ್ಧಜೀವಿಗಳಿಗೂ ಸೇರಿ ಯಾವ ಕಾಲದಲ್ಲಿಯೂ ಸಂಕೋಚ ವಿಕಾಸರೂಪವಾದ ವಿಕಾರಗಳಿಲ್ಲ ಸ್ವಪ್ರಕಾಶಕ್ಕೆ ತಾನು ಫಲಿಯಾಗಿರುವುದು ಧರ್ಮಿಜ್ಞಾನಕ್ಕೆ ಉಂಟು ಧರ್ಮ ಭೂತ ಜ್ಞಾನಕ್ಕೆ ಇಲ್ಲ. ಇದನ್ನು ತಿಳಿಯುತ್ತೇನೆ, ಇದನ್ನ ತಿಳಿಯಲಿಲ್ಲ, ಎಂಬ ರೀತಿಯಲ್ಲಿ ಕೆಲವು ಸಮಯ ಅನುಭವವೂ, ಇದಲ್ಲವನ್ನೂ ತಿಳಿಯುತ್ತೇನೆ ಎಂಬ ಕೆಲವು ಸಮಯಗಳಲ್ಲಿ ಅನುಭವವೂ ಉಂಟಾಗುವುದರಿಂದ ಧರ್ಮಭೂತಜ್ಞಾನಕ್ಕೆ ಸಂಕೋಚ ವಿಕಾಸ ರೂಪ ವಿಕಾರಗಳುಂಟು ಆತ್ಮ ಸ್ವರೂಪವು ಯಾವಾಗಲೂ ಒಂದೇ ರೂಪವಾಗಿರುತ್ತೆ ಹೀಗೆ ಸವಿಕಾರತ್ವ ನಿರ್ವಿಕಾರತ್ವಗಳಿಂದ ಉಭಯ ವಿಧವಾದ ಜ್ಞಾನಗಳು ಅಂದರೆ ಧರ್ಮಿಜ್ಞಾನ ಧರ್ಮಭೂತಜ್ಞಾನವೆಂಬ ಎರಡು ಜ್ಞಾನಗಳೂ ಉಂಟು ಎಂದು ಏರ್ಪಡುತ್ತದೆಯಲ್ಲವೇ ಧರ್ಮಭೂತ ಜ್ಞಾನವನ್ನು ಕೆಲವರು "ಕಾಮಃ ಸಂಕಲ್ಪಃ ಏತತ್ಸರ್ವಂ ಮನಏವ" ಎಂದು ಮನಸ್ಸಿನ ವೃತ್ತಿ ಎಂದು ಹೇಳುತ್ತಾರೆ. ಇದು ಸರಿಯಲ್ಲ. ಮನಸ್ಸು ಜ್ಞಾನಾತ್ಮಕ ವಲ್ಲವೇ "ಏತತ್ಸರ್ವಂಮನಏವ" ಎಂದು ಕಾರ್ಯ ಕಾರಣಗಳ ಅಭೇದೋಪಚಾರ ದಿಂದ ಹೀಗೆ ಪ್ರಯೋಗಿಸಿದೆಯೇ ಹೊರತು ಬೇರೆಯಲ್ಲ. ಹಾಗಾದರೆ ಧರ್ಮಭೂತಜ್ಞಾನ ಧರ್ಮಿಜ್ಞಾನ ಈ ಎರಡು ಜ್ಞಾನಗಳೂ ಇವೆಯೆಂಬುದಕ್ಕೆ ಏನು ಪ್ರಮಾಣವೆಂದು ಕೇಳಬಹುದು. ನಿದ್ರೆಮಾಡಿ ಎದ್ದವನು, "ಸುಖಮಹಮಸ್ವಾಪ್ಸಂ" "ಸುಖವಾಗಿ ನಿದ್ದೆಮಾಡಿದೆ" ಎಂದು ಹೇಳುವ ಸ್ವಾನುಭವವೇ ಪ್ರಮಾಣ. ಸುಷುಪ್ತಿ(ಗಾಢನಿದ್ರೆ) ಮಾಡುವ ಕಾಲದಲ್ಲಿ, ಈ ಅನುಭವವಿಲ್ಲ. ಎದ್ದನಂತರವೇ ಉಂಟಾಗುತ್ತದೆ ಸುಷುಪ್ತಿ ಕಾಲದಲ್ಲಿ ಇಂದ್ರಿಯಗಳಿಗೆ ವ್ಯಾಪಾರವಿಲ್ಲ. ಆದ್ದರಿಂದ ಆಗ ಧರ್ಮಭೂತಜ್ಞಾನಕ್ಕೆ ವಿಕಾಸವಿಲ್ಲ ಆದ ಕಾರಣ ಸ್ವರೂಪ ಸುಖವೇ 'ಅಹಂ', ಎಂದು ಎಚ್ಚರಗೊಳ್ಳುವವರೆಗೆ ಅನುಭವಿಸಲ್ಪಟ್ಟು ಎದ್ದನಂತರ ಧರ್ಮಭೂತ ಜ್ಞಾನದಿಂದ ಪ್ರತಿಸಂಧಾನ ಮಾಡಲ್ಪಡುತ್ತದೆ. ಆದ್ದರಿಂದ ಧರ್ಮವು ಜ್ಞಾನಾನಂದ ಸ್ವರೂಪವೆಂಬುದನ್ನು ತಿರಸ್ಕರಿಸಲಾಗುವುದಿಲ್ಲ, **ಅತ್ರಾಯಂ ಪುರುಷಃ ಸ್ವಯಂಜ್ಯೋತಿರ್ಭವತಿ (ಉಪನಿಷತ್). ಜ್ಞಾನಸ್ವರೂಪಮತ್ಯಂತ ನಿರ್ಮಲಂ ಪರಮಾರ್ಥತಃ (ವಿ ಪು)** ಎಂಬ ಪ್ರಮಾಣಗಳಿಂದ ಆತ್ಮ ಸ್ವರೂಪವು ಜ್ಞಾನಾಕಾರವೆಂಬುದು ಸಿದ್ಧ

"ಯಥಾ ಪ್ರಕಾಶಯ ತ್ಯೇಕಃ ಕೃತ್ಸ್ನಂ ಲೋಕಮಿಮಂರವಿಃ । (ಗೀತೆ)
ಕ್ಷೇತ್ರಂ-ಕ್ಷೇತ್ರೀ ತಥಾಕೃತ್ಸ್ನಂ ಪ್ರಕಾಶಯತಿಭಾರತ ॥ (ಗೀತೆ – 13-33)

ಸೂರ್ಯನು ಪ್ರಪಂಚವನ್ನೆಲ್ಲಾ ತನ್ನ ಪ್ರಕಾಶದಿಂದ ಪ್ರಕಾಶಪಡಿಸುವಂತೆ ಜೀವನು ಈ ಶರೀರವನ್ನು ತನ್ನ ಧರ್ಮ ಭೂತಜ್ಞಾನದಿಂದ ಪ್ರಕಾಶಪಡಿಸುತ್ತಾನೆ, ಎಂಬ ಪ್ರಮಾಣದಿಂದ ಧರ್ಮಧರ್ಮಿಜ್ಞಾನಗಳು ವಿಶೇಷಣ ವಿಶಿಷ್ಟವಾಗಿ ಸೂರ್ಯ ಅವನ ಪ್ರಕಾಶ ದೃಷ್ಟಾಂತದಿಂದ ವ್ಯಕ್ತವಾಗುತ್ತವೆ

ಮೇಲೂ ಧರ್ಮಭೂತ ಜ್ಞಾನವು ವಿಷಯಗಳನ್ನು ಪ್ರಕಾಶಪಡಿಸುವ ವೇಳೆಗಳಲ್ಲಿ ತನ್ನ ಆಶ್ರಯವಾದ ಧರ್ಮಿಗೆ ಸ್ವಯಂಪ್ರಕಾಶವಾಗಿರುವುದು ಧರ್ಮಿಜ್ಞಾನವು ನಿತ್ಯವೂ ಸ್ವಯಂಪ್ರಕಾಶವು ಧರ್ಮಭೂತಜ್ಞಾನವು ಸ್ವಪ್ರಕಾಶಕ್ಕೆ ತಾನೇ ಫಲಿಯು ಅಲ್ಲ. ಜಡತ್ವವು ಧರ್ಮಭೂತಜ್ಞಾನಕ್ಕೇನೆ ಆದ್ದರಿಂದ ಜ್ಞಾನಮಾತ್ರಾತ್ಮವಾದವು ಸರಿಯಲ್ಲ.

ಹಾಗಾದರೆ ವ್ಯವಸ್ಥಿತ ಸ್ವಭಾವಗಳಿಂದ ಧರ್ಮ ಧರ್ಮಿಜ್ಞಾನಗಳನ್ನು ಜ್ಞಾನವೆಂದು ಕರೆಯುವುದು ಹೇಗೆ ಸರಿ ಎಂದರೆ ಸೌಸಾದೃಶ್ಯಭಾವವನ್ನನುಸರಿಸಿ ಹಾಗೆ ವ್ಯಪದೇಶ ಜ್ಞಾನತ್ವವೂ ಸ್ವಯಂಪ್ರಕಾಶತ್ವವೂ ಧರ್ಮ ಧರ್ಮಿಗಳಿಗೆ ಸಾಧಾರಣವಾದ ಆಕಾರ. ಧರ್ಮಭೂತಜ್ಞಾನಕ್ಕೆ ವಿಷಯಿತ್ವವು (ವಿಷಯಗಳನ್ನು ತೋರಿಸಿ ಕೊಡುವುದು) ಅಸಾಧಾರಣವಾದ ಆಕಾರ ಧರ್ಮಿಜ್ಞಾನಕ್ಕೆ ಪ್ರತ್ಯಕ್ತ್ವವು (ತನಗೆ ತಾನೇ ತೋಚುವುದು) ಅಸಾಧಾರಣವಾದ ಆಕಾರ. ಪ್ರತ್ಯಕ್ತ್ವವೇ-ಅಹಂತ್ವ, ಧರ್ಮಿಸ್ವರೂಪಜ್ಞಾನವು ಪ್ರತ್ಯಕ್ತ್ವ, ಅನುಕೂಲತ್ವ ಏಕತ್ವ ವಿಶಿಷ್ಟವಾಗಿಯೇ ತೋಚುತ್ತದೆ, **"ಪ್ರತ್ಯಕ್ತ್ವ, ಅನುಕೂಲತ್ವ, ಏಕತ್ವ ವಿಶಿಷ್ಟ ತಯಾತುಸ್ವಪ್ರಕಾಶತಾಸ್ವಾತ್ಮನಾಮ್"** ಎಂಬುದು ನ್ಯಾಯಸಿದ್ಧಾಂಜನ ಶ್ರೀಸೂಕ್ತಿ, **"ಸ್ವಸ್ಯೈವಾತ್ಮಾನುಸಿದ್ಧಿಂ ಪ್ರತಿರನುಭವತಿ ಸ್ವಾನ್ಯಯೋಃ ಸಿದ್ಧಿಭಾವಂ"**, ಎಂಬ ತತ್ವಮುಕ್ತಾ ಕಲಾಪ ಶ್ರೀಸೂಕ್ತಿಗೆ ಆಚಾರ್ಯರು ತಾವೇ ಸರ್ವಾರ್ಥಸಿದ್ಧಿಯಲ್ಲಿ

1 ಜ್ಞಾನತ್ವಮಾವುದು ? ಕಸ್ಯ ಚಿತ್ಪ್ರಕಾಶಕತ್ವಮ್ ಅದಾವದು ? ತನ್ನುಡೈಯ ಮಾಹವ್ಪುಮಾಮ್, ಮೇರೊನ್ರಿನುಡೈಯ ಮಾಹವ್ಪುಮಾಮ್, ಏದೇನುಂ ಒನ್ರಿನುಡೈಯ ವ್ಯವಹಾರಾನುಗುಣ್ಯತ್ತೈ ಪ್ಪಣ್ಣುಹೈ.

2. ಸ್ವಯಂಪ್ರಕಾಶತ್ವಮಾವದು? ತನ್ನೈ ವಿಷಯೀಕರಿಪ್ಪದೊರು ಜ್ಞಾನಾಂತರತ್ತಾಲ ಪೇಕ್ಷೈಯುರ ತ್ತಾನೇಪ್ರಕಾಶಿಕ್ಕೈ.

3. ಧರ್ಮಭೂತಜ್ಞಾನತ್ತುಕ್ಕು ವಿಷಯಿತ್ವಮಾವದು ? ತನ್ನೈಯೊಳ್ಳಿಂದ ದೊನ್ರೈಕ್ಕಾಟ್ಟುಹೈ.

ವ್ಯಾಖ್ಯಾನ ಮಾಡುತ್ತಾ **"ಸ್ವಪದಂ ಸ್ವಾಸಾಧಾರಣ ಕಿಂಚಿದ್ಧರ್ಮವಿಶಿಷ್ಟ ಪರಮ್ । ಧರ್ಮಭೂತ ಜ್ಞಾನಸ್ಯತು ತಾವದಧಿಕ ಗ್ರಾಹಿತ್ವಂ ವಿಶೇಷ ಮಾಹ–ಮತಿರನು ಭವತಿ ಸ್ವಾನ್ಯಯೋಸ್ಸಿದ್ಧಿಭಾವ ಮಿತಿ"** ಎಂದು ಅನುಗ್ರಹಿಸಿರುತ್ತಾರೆ. ತಥಾಚ ಧರ್ಮಭೂತಜ್ಞಾನಕ್ಕೆ, ಸ್ವಾಸಾಧಾರಣವಾದ ಜ್ಞಾನತ್ವದಿಂದ ಕೂಡಿದ ಸ್ವಾವಗಾಹನ ಜ್ಞಾನವು, ಪ್ರತ್ಯಕ್ತ್ವ ಅನುಕೂಲತ್ವ ಏಕತ್ವವೆಂಬ ಸ್ವಾಸಾಧಾರಣ ಧರ್ಮವಿಶಿಷ್ಟ ಆತ್ಮಸ್ವರೂಪಾವಗಾಹಿಯಾದ ಜ್ಞಾನದೊಡನೆ ಸಮಾನವಾಗಿದ್ದರೂ ಅಧಿಕವಾದ ಅಂತರ ಬಾಹ್ಯ ಸಮಸ್ತವಿಷಯಗಳನ್ನು ಅವಗಾಹಿಸುವುದರಿಂದ (ತಿಳಿಯುವದರಿಂದ) ಧರ್ಮಭೂತಜ್ಞಾನಕ್ಕೆ ವಿಷಯಿತ್ವವು ಅಧಿಕ ಪ್ರತ್ಯಕ್ತ್ವಾನುಕೂಲತ್ವೈಕತ್ವರೂಪ ಸ್ವಾಸಾಧಾರಣ ಧರ್ಮತ್ರಯದಿಂದ ಕೂಡಿದ ಆತ್ಮಸ್ವರೂಪಕ್ಕೆ ಅನ್ಯವಸ್ತುಗಳನ್ನು ತೋರಿಸಿಕೊಡುವ ಶಕ್ತಿಯು ಇಲ್ಲ. ಧರ್ಮಭೂತಜ್ಞಾನಕ್ಕೆ ಸಂಕೋಚವಿಲ್ಲದ ಸರ್ವಾರ್ಥಗ್ರಾಹಕ ಶಕ್ತಿಯು ನಿತ್ಯವಾಗಿದೆ. ಧರ್ಮಿಜ್ಞಾನಕ್ಕೆಕಿಂಚಿದವಗಾಹನ ಶಕ್ತಿ. ಇವನ್ನು ನಿಮಿತ್ತವಾಗಿಟ್ಟುಕೊಂಡು ಜ್ಞಾನಪದ ಪ್ರವೃತ್ತಿಯು ಎರಡು ಜ್ಞಾನಗಳಲ್ಲಿಯೂ ಆಶ್ರಯಿಸಲ್ಪಡುತ್ತದೆ. ತಾವನ್ಮಾತ್ರ ಶಕ್ತಿಯು ಧರ್ಮಧರ್ಮಿಗಳೆರಡರಲ್ಲಿಯೂ ಇದೆ ಇದನ್ನು ಅಭಿಪ್ರಾಯದಲ್ಲಿಟ್ಟುಕೊಂಡು ಆಚಾರ್ಯರು **"ಜ್ಞಾನತ್ವಮಾವದು–ಏದೇನುಮೊನ್ರಿನುಡೈಯ ವ್ಯವಹಾರಾನುಗುಣ್ಯತ್ತೈಪ್ಪಣ್ಣುಹೈ"** ಎಂದು ಅನುಗ್ರಹಿಸಿರುತ್ತಾರೆ 'ಅಹಮ್' ಎಂಬ ಧರ್ಮಿಜ್ಞಾನವು ತನ್ನ ವ್ಯವಹಾರಾನುಗುಣ್ಯತೆಯನ್ನು (ಜ್ಞಾನ ವಿಷಯತ್ವವನ್ನು) ತನ್ನಲ್ಲೇ ಮಾಡುತ್ತದೆ "ಘಟಂಜಾನಾಮಿ" ಎಂಬ ಧರ್ಮಭೂತ ಜ್ಞಾನವು, ತನ್ನ ಮತ್ತು ಘಟ ವಿಷಯವಾದ ವ್ಯವಹಾರವನ್ನುಂಟು ಮಾಡುತ್ತದೆಯಾದ್ದರಿಂದ ವ್ಯವಹಾರಾನುಗುಣ್ಯಾಪಾದಕ ಜ್ಞಾನತ್ವವು, ಧರ್ಮಧರ್ಮಿಜ್ಞಾನಗಳಿಗೆ ಸಮಾನ ಸ್ವಯಂಪ್ರಕಾಶತ್ವವು ತನ್ನನ್ನು ತಾನೇ ಪ್ರಕಾಶಪಡಿಸುವುದು.

ಧರ್ಮಭೂತಜ್ಞಾನಕ್ಕೆ ವಿಷಯಿತ್ವವೆಂಬುದು, ತನ್ನನ್ನು ಬಿಟ್ಟು ಬೇರೊಂದು ವಿಷಯವನ್ನು ತೋರಿಸಿಕೊಡುವುದು. ಧರ್ಮಿಜ್ಞಾನವು ಪ್ರತ್ಯಕ್ತ್ವ ಅನುಕೂಲತ್ವ, ಏಕತ್ವವಿಶಿಷ್ಟವಾದ ತನ್ನನ್ನು ಬಿಟ್ಟು ಬೇರೆ ವಿಷಯಗಳನ್ನು ತಿಳಿಯಪಡಿಸುವುದಿಲ್ಲ ಕೆಲವರು ಧರ್ಮಿಸ್ವರೂಪವು ಪ್ರತ್ಯಕ್ತ್ವ, ಏಕತ್ವ, ಅನುಕೂಲತ್ವಗಳೊಡನೆ ಪ್ರಕಾಶಸುವುದಿಲ್ಲ. ಪ್ರತ್ಯಕ್ತ್ವಾದಿಗಳು ಸ್ವಯಂಪ್ರಕಾಶಗಳೆನ್ನುತ್ತಾರೆ ಇದು ಸರಿಯಲ್ಲ. ನಿರ್ಧರ್ಮಾತ್ಮಕವಾದ ಧರ್ಮಿಜ್ಞಾನವನ್ನು ವಿಶಿಷ್ಟಾದ್ವೈತಿಗಳು ಒಪ್ಪಿಲ್ಲ ಹಾಗೆ ಹೇಳುವುದು ಅಪರಾಮರ್ಶಮೂಲ ನಿರ್ವಿಶೇಷ ಚೈತನ್ಯವು ಒಂದೇ ಎಂಬುದು ಕುದೃಷ್ಟಿಗಳಮತ ಅದನ್ನು ವಿಶಿಷ್ಟಾದ್ವೈತಿಗಳಾದ ನಾವು ಖಂಡಿಸಿದ್ದೇವೆ ಹಾಗಿರುವಾಗ ಪ್ರತ್ಯಕ್ತ್ವ, ಅನುಕೂಲತ್ವ, ಏಕತ್ವಗಳು ಸ್ವಯಂಪ್ರಕಾಶ ವಸ್ತ್ವಂತರಗಳು ಎಂದು ಹೇಳಿ ಅನೇಕ ಜೀವಾತ್ಮರೂಪ ನಿರ್ಧರ್ಮಾತ್ಮಕ ಧರ್ಮಿಯನ್ನು ಒಪ್ಪಿ, ಅವುಗಳಿಗೆ ಧರ್ಮಭೂತ ಜ್ಞಾನವನ್ನು ಒಪ್ಪುವುದು ಅಪಹಾಸ್ಯಾಸ್ಪದ ಅದ್ವೈತಿಯು ಒಂದು ನಿರ್ಧರ್ಮಾತ್ಮಕ ತತ್ವವನ್ನು ಒಪ್ಪಿದ್ದಾನೆ ನೀವುಗಳು ಅನಂತಕೋಟಿ ನಿರ್ಧರ್ಮಾತ್ಮಕ ವಸ್ತುಗಳನ್ನು ಒಪ್ಪಿದಂತಾಗುತ್ತದೆ

ಅಚೇತನ ಪದಾರ್ಥಗಳು ಪ್ರಕೃತಿ, ಕಾಲ, ಶುದ್ಧಸತ್ವ ಮತ್ತು ಧರ್ಮಭೂತಜ್ಞಾನ, ಇಷ್ಟೇ ಇದಕ್ಕೆ ಮೇಲ್ಕಂಡ ಪ್ರತ್ಯಕ್ತ್ವ, ಅನುಕೂಲತ್ವ, ಏಕತ್ವವೆಂಬ ಸ್ವಯಂಪ್ರಕಾಶರೂಪ ಅಚೇತನ ತತ್ವಗಳನ್ನು ಶ್ರೀಭಾಷ್ಯಕಾರ

4. ಆತ್ಮಾಕ್ಕಳುಕ್ಕು ಪ್ರತ್ಯಕ್ತ್ವಮಾವದು ? — ಸ್ವಸ್ಮೈ ಭಾಸಮಾನತ್ವಂ, ಅದಾವದು ? ತನ್ ಪ್ರಕಾಶತ್ತುಕ್ಕುತ್ತಾನ್ ಫಲಿಯಾಯಿರುಕ್ಕೈ ಎನ್ರಪಡಿ.

ಏದೇನುಮ್ ಒರುವಸ್ತುವಿನ್ ಪ್ರಕಾಶತ್ತುಕ್ಕು ಫಲಿಎನ್ಗಿರ ಸಾಮಾನ್ಯಾಕಾರತ್ತೈ ತನ್‌ಪ್ರಕಾಶತ್ತುಕ್ಕು ತ್ತಾನ್ ಫಲಿ, ಎನ್ರು ವಿಶೇಷಿತ್ತವಾರೇ ಪ್ರತ್ಯಕ್ತ್ವಮಾವ್. ಇವ್ವಿಶೇಷ ಮಿಲ್ಲಾದವಸ್ತುವುಕ್ಕು ಇಸ್ಸಾಮಾನ್ಯಮುಮ್ ಇತ್ತೋಡು ವ್ಯಾಪ್ತಮಾನ ಚೇತನತ್ವಮುಮ್ ಇಲ್ಲೈ. ಇದ್ದರ್ಮಧರ್ಮಿಗಳಿರುಣ್ಡುಮ್ ಸ್ವಯಂ ಪ್ರಕಾಶಮಾಯಿರುನ್ದಾಲುಮ್, ನಿತ್ಯತ್ವಾದಿ ಧರ್ಮವಿಶೇಷವಿಶಿಷ್ಟ ರೂಪಙ್ಗಳಾಲೇ ಜ್ಞಾನಾನ್ತರವೇದ್ಯಙ್ಗಳುಮಾಮ್. ತನ್ನುಡೈಯ ಧರ್ಮಭೂತಜ್ಞಾನಂ ತನುಕ್ಕು ಜ್ಞಾನಾನ್ತರವೇದ್ಯ ಮಾವ್ವೋದು, ಪ್ರಸರಣ ಭೇದ ಮಾತ್ರತ್ತಾಲೇ ಜ್ಞಾನಾನ್ತರ ವ್ಯಪದೇಶಮ್.

ಸಂಪ್ರದಾಯದಲ್ಲಿ ಎಲ್ಲಿಯೂ ಹೇಳಿರುವುದು ಕಾಣೆವು ಪ್ರತ್ಯಕ್ತ್ವ, ಅನುಕೂಲತ್ವ, ಏಕತ್ವಗಳು ಗುಣಗಳೇ ಹೊರತು, ದ್ರವ್ಯಗಳಲ್ಲ. ಸ್ವಯಂಪ್ರಕಾಶಗಳೆಂದು ಹೇಳಿದರೆ ಧರ್ಮಭೂತ ಜ್ಞಾನಕ್ಕೆ ಸಮಾನವಾದ ಬೇರೆ ದ್ರವ್ಯವೆಂದು ಹೇಳಬೇಕಾಗುತ್ತೆ. ಹಾಗೆ ಆಚಾರ್ಯರು ಒಪ್ಪಿಲ್ಲ ಅದ್ರವ್ಯವೆಂದರೆ, ಅದ್ರವ್ಯಕ್ಕೆ ಸ್ವಯಂಪ್ರಕಾಶತ್ವವಿಲ್ಲ. ಉಂಟೆಂದರೆ **"ಬುದ್ಧಿಃ ದ್ರವ್ಯಂ ವಿಕಾರಾನ್ವಯಿತ ಇತರವತ್ ಬೋದ್ಧ್ಯವಚ್ಛಾ ಜಡತ್ವಾತ್"** ಎಂಬ ತತ್ತ್ವಮುಕ್ತಾ ಕಲಾಪ ಶ್ಲೋಕ ವ್ಯಾಖ್ಯಾನ ಸರ್ವಾರ್ಥಸಿದ್ಧಿಯಲ್ಲಿ 'ತದಯಂ ಪ್ರಯೋಗ — ಬುದ್ಧಿಃ ದ್ರವ್ಯಂ ಸ್ವಯಂಪ್ರಕಾಶತ್ವಾದಾತ್ಮವತ್" ಎಂಬ ಅನುಮಾನದಲ್ಲಿ ದ್ರವ್ಯತ್ವಾಭಾವವತ್ತುಗಳಾದ ಪ್ರತ್ಯಕ್ತ್ವಾದಿಗಳಾದ ಅದ್ರವ್ಯಗಳಲ್ಲಿ ಸ್ವಯಂ ಪ್ರಕಾಶತ್ವರೂಪ ಹೇತುವಿರುವುದರಿಂದ ಆ ಹೇತುವಿಗೆ ವ್ಯಭಿಚಾರ ದೋಷವುಂಟಾಗುತ್ತದೆ

ಆದ್ದರಿಂದ ಧರ್ಮಿಜ್ಞಾನವು ಪ್ರತ್ಯಕ್ತ್ವ (ಅಹಂತ್ವ) ಅನುಕೂಲತ್ವ ಏಕತ್ವ ವಿಶಿಷ್ಟವಾಗಿಯೇ ತನಗೆ ತಾನೇ ಸ್ಫುರಿಸುವುದು. ಧರ್ಮಭೂತ ಜ್ಞಾನವು ತನಗೆ ಆಶ್ರಯವಾದ ಧರ್ಮಿಜ್ಞಾನಕ್ಕೆ ಇತರ ವಿಷಯಗಳನ್ನೂ ತನ್ನನ್ನೂ ತೋರಿಕೊಡುವುದು. ಎಂಬುದೇ, ಆಚಾರ್ಯಾಭಿಮತ

ಆತ್ಮಾಕ್ಕಳುಕ್ಕು ಪ್ರತ್ಯಕ್ತ್ವಮಾವದು ಇತ್ಯಾದಿ ವೈಶೇಷಿಕಾದಿಗಳು ಜಡಾತ್ಮವಾದಿಗಳು ಚೇತನತ್ವಕ್ಕಿಂತ ಪ್ರತ್ಯಕ್ತ್ವ ಅಹಂತ್ವಗಳು ಬೇರೆಯಿಲ್ಲವೆನ್ನುತ್ತಾರೆ ಇದು ಸರಿಯಿಲ್ಲ ಏಕೆಂದರೆ ಚೇತನತ್ವವು ಸರ್ವಾತ್ಮ ಸಾಧಾರಣ ಆಯಾಯಾ ಆತ್ಮವಿಶ್ರಾಂತವಾದ ಅಹಂತ್ವವು ಅದಕ್ಕಿಂತ ಬೇರೆ. ಅದೇ ಇದು ಎಂದು ಹೇಳಿದರೆ ಒಂದೇ ಆತ್ಮ ಪ್ರತಿ ಶರೀರ ಭಿನ್ನವಲ್ಲವೆಂದು ಏರ್ಪಟ್ಟು, ಅಹಂ ಚೇತನಃ ಎಂಬ ಅನುಭವವು ಅನ್ಯರನ್ನು ತಿಳಿಸಿ, ಅನ್ಯ ಶರೀರದ ಜೀವನ ಸುಖದ ಖಾನುಭವವು ತನಗೂ ಉಂಟಾಗಬೇಕು. ಆದರೆ ಹಾಗೆ ಅನುಭವವಿಲ್ಲದುದರಿಂದ ಅಹಂತ್ವವೇ ಬೇರೆ. ಚೇತನತ್ವವೇ ಬೇರೆ ಅಹಂತ್ವವು ಪ್ರತಿಶರೀರ ಭಿನ್ನವಾದ ಆತ್ಮನಧರ್ಮ. ಅನೇಕಾತ್ಮವಾದವು ಆಚಾರ್ಯರ ಹೃದಯವೆಂಬ ದನ್ನು **ಆತ್ಮಾಕ್ಕಳುಕ್ಕು ಪ್ರತ್ಯಕ್ತ್ವಮಾವದು** ಎಂದು ಆರಂಭಿಸಿದ ಎರಡು ವಾಕ್ಯಗಳ ಹೃದಯ. ಆತ್ಮರುಗಳಿಗೆ ಪ್ರತ್ಯಕ್ತ್ವವೆಂಬುದು ತನಗೆ ಭಾಸವಾಗುವುದು ಅದಾಗಿ ತನ್ನ ಪ್ರಕಾಶಕ್ಕೆ ತಾನು ಫಲಿಯಾಗಿರುವುದು ಯಾವುದಾದರೂ ಒಂದು ವಸ್ತುವಿನ ಪ್ರಕಾಶಕ್ಕೆ **ಫಲಿ** ಎಂಬ ಸಾಮಾನ್ಯಾಕಾರವನ್ನು ತನ್ನ ಪ್ರಕಾಶಕ್ಕೆ ತಾನೇ ಫಲಿ ಎಂದು ವಿಶೇಷಿಸುವುದು ಪ್ರತ್ಯಕ್ತ್ವ **ಫಲಿ** — ಫಲ ಪ್ರಯೋಜನಕ್ಕೆ ಆಶ್ರಯಭೂತನು ಎಂದರ್ಥ ಹೀಗೆ ವಿಶೇಷವಾಗಿ **ಹೇಳದೆ**, ಸಾಮಾನ್ಯಧರ್ಮವನ್ನೇ ಪ್ರತ್ಯಕ್ತ್ವವೆಂದರೆ, ಅದಕ್ಕೆ ಅಹಂ ಬುದ್ಧಿ ವಿಷಯತ್ವವನ್ನು ಹೇಳಬೇಕಾಗಿ ಬರುತ್ತದೆ. ಆಗ ಯತ್ಕಿಂಚಿತ್ **ಫಲಿ**ಯಾದ ಒಬ್ಬ ಆತ್ಮಾ ಮತ್ತೊಬ್ಬ ಆತ್ಮನಿಗೆ ಅಹಂಬುದ್ಧಿ ವಿಷಯವಾಗಬೇಕಾದ ಪ್ರಸಂಗವು ಬರುತ್ತದೆ ಆದರೂ ಈ ಆತ್ಮರುಗಳಿಗೆ ಈ ವಿಶೇಷದ ಹಾಗೆ ಈ ಸಾಮಾನ್ಯವೂ, ಇದಕ್ಕೆ ವ್ಯಾಪ್ತವಾದ ಚೇತನತ್ವವೂ ಅಸಾಧಾರಣವಾಗಿರುವಾಗ, ಪ್ರತ್ಯಕ್ತ್ವವನ್ನು ಮಾತ್ರ ಅದಕ್ಕೆ ಹಿರಿಮೆ (**ಏಟ್ರಮ್**) ಅಸಾಧಾರಣವೆಂದು ಹೇಳುವುದಕ್ಕೆ ಅಭಿಪ್ರಾಯವೇನೆಂಬುದನ್ನು **ಇವ್ವಿಶೇಷ ಮಿಲ್ಲಾದ ವಸ್ತುವುಕ್ಕು ಇಸ್ಸಾಮಾನ್ಯಮುಮ್ ಇತ್ತೋಡು ವ್ಯಾಪ್ತಮಾನ ಚೇತನತ್ವಮುಮ್ ಇಲ್ಲೈ,**

ಎಂದು ಆಚಾರ್ಯರು ನಿರೂಪಿಸುತ್ತಾರೆ ಈ ಪ್ರತ್ಯಕ್ತ್ವವೆಂಬ ವಿಶೇಷವಿಲ್ಲದ ವಸ್ತುವಿಗೆ, ಯಾವುದಾದರೂ ಒಂದು ವಸ್ತುವಿನ ಪ್ರಕಾಶಕ್ಕೆ ಫಲಿತ್ವವೆಂಬ ಸಾಮಾನ್ಯಾಕಾರವೂ, ಇದರೊಡನೆ ವ್ಯಾಪ್ತವಾದ ಚೇತನತ್ವವೂ ಇಲ್ಲ, ಆದ್ದರಿಂದ ಈ ಸಾಮಾನ್ಯಾಕಾರವೂ, ಚೇತನತ್ವವೂ ಪ್ರತ್ಯಕ್ತ್ವಕ್ಕೆ ಅಧೀನಗಳು. ಸ್ವಪ್ರಕಾಶಫಲಿತ್ವರೂಪ ಪ್ರತ್ಯಕ್ತ್ವವು ಇಲ್ಲದ ಒಂದು ವಸ್ತುವಿಗೆ, ತದುಪಜೀವಕವಾದ "ಘಟಮಹಂಜಾನಾಮಿ" ಎಂಬ ವ್ಯವಹಾರಾಶ್ರಯತ್ವ ರೂಪ ಯತ್ಕಿಂಚಿತ್ ಪ್ರಕಾಶ ಫಲಿತ್ವವು ಘಟಿಸುವುದಿಲ್ಲ.

ವ್ಯಾಪ್ತಮಾನ ಚೇತನತ್ವಮ್ –

ತಥಾ ಚ ನಿಷ್ಪ್ರತಿ ಸಂಬಂಧಿಕವಾದ ಚೇತನತ್ವವು ಸರ್ವಾತ್ಮಸಾಧಾರಣವು. ಸ್ವಪ್ರಕಾಶಫಲಿತ್ವವಾದರೋ, ಆಯಾಯಾ ಆತ್ಮವ್ಯಕ್ತಿಗಳಿಗೆ ಪ್ರತ್ಯೇಕ ಅಸಾಧಾರಣವಾಗಿ, ಅಹಂತ್ವಾಪರಪರ್ಯಾಯವಾಗಿ ಬೇರೆ. ಆತ್ಮಶಬ್ದವು ಅಸ್ಮಚ್ಛಬ್ದ ಸ್ಥಾನದಲ್ಲಿಯೂ, ಚೇತನಮಾತ್ರದಲ್ಲಿಯೂ ಪ್ರಯೋಗಿಸಲ್ಪಟ್ಟರೂ ಚೇತನತ್ವ, ಪ್ರತ್ಯಕ್ತ್ವವೆಂಬುವ ವ್ಯವಹಾರಗಳು ಬೇರೆಬೇರೆಯಾಗಿ, ಯಥಾ ಪ್ರಯೋಗ ಅರ್ಥ.

ಅನಂತರ ಪ್ರಕೃತಾರ್ಥದಲ್ಲಿ ಬೇರೆ ಶಂಕೆಯನ್ನು ಪರಿಹರಿಸುವುದಾಗಿ ಆಚಾರ್ಯರು **ಇದ್ಧರ್ಮಧರ್ಮಿ ಹಳಿರಂಡುಮ್ ಇತ್ಯಾದಿ ಜ್ಞಾನಾಂತರ ವ್ಯಪದೇಶ್ಯಮ್,** ಎಂದು ಅನುಗ್ರಹಿಸುತ್ತಾರೆ

ಇಲ್ಲಿ ಜ್ಞಾನವು ಸ್ವಯಂಪ್ರಕಾಶವಾಗಿರುವಾಗ ಜ್ಞಾನಾಂತರದಿಂದ ತಿಳಿಯಪಡದು ಎಂದು ಶರ್ಯವಸಾನ ವಾಗುತ್ತದೆ. ಎಂಬ ಅರ್ಥವನ್ನು ಕುದೃಷ್ಟಿಗಳು ಹೇಳುತ್ತಾರೆ. ಇದು ಅಂಗೀಕರಿಸಲ್ಪಡುವುದಿಲ್ಲ. ತನ್ನ ಜ್ಞಾನವೂ ಅನ್ಯರಜ್ಞಾನವೂ ನಿತ್ಯತ್ವಾದ್ಯಾಕಾರಗಳಿಂದ ಶಾಸ್ತ್ರ ವೇದ್ಯವೆಂಬುದು ಅನುಭವ ಸಾಕ್ಷಿಕ

ಈ ಧರ್ಮಭೂತ ಜ್ಞಾನ, ಧರ್ಮಿಜ್ಞಾನಗಳೆರಡೂ ಸ್ವಯಂಪ್ರಕಾಶವಾದ್ದರಿಂದ ಜ್ಞಾನಾಂತರ ನಿರಪೇಕ್ಷವಾಗಿ ಪ್ರಕಾಶಿಸಿದರೂ, ಧರ್ಮಿಜ್ಞಾನದಲ್ಲಿ ಪ್ರತ್ಯಕ್ತ್ವ, ಅನುಕೂಲತ್ವ, ಏಕತ್ವಗಳು ಪ್ರಕಾಶಿಸಿದರೂ, ಧರ್ಮಭೂತ ಜ್ಞಾನದಲ್ಲಿ ಜ್ಞಾನತ್ವ ವಿಶಿಷ್ಟ ತತ್ಸ್ವರೂಪವು ಅನ್ಯಾನಪೇಕ್ಷವಾಗಿ ಪ್ರಕಾಶಿಸಿದರೂ, ಇವುಗಳ ನಿತ್ಯತ್ವ ವಿಭುತ್ವ ಅಣುತ್ವಾದಿ ಧರ್ಮಗಳು ವಿಶೇಷಣ ವಿಶಿಷ್ಟಗಳಾಗಿ ಜ್ಞಾನಾಂತರದಿಂದ ತಿಳಿಯಲ್ಪಡುತ್ತವೆ ಹಾಗಾದರೆ ಎರಡು ಧರ್ಮಭೂತಜ್ಞಾನವನ್ನು ಒಪ್ಪಿಕೊಳ್ಳುವಿರಾ ಎಂದು ಕೇಳಿದರೆ ಅದಕ್ಕೆ ಆಚಾರ್ಯರು, **ತನ್ನುಡೈಯ ಧರ್ಮಭೂತ ಜ್ಞಾನಮ್,** ಇತ್ಯಾದಿ ನಿರೂಪಿಸುತ್ತಾರೆ ಅದಾಗಿ ನೀಲವಾದ ಘಟವನ್ನು ನೋಡಿದೆನು, ಎಂದು ಜ್ಞಾಪಿಸಿಕೊಳ್ಳು ವಾಗ, ನೀಲಘಟ ದರ್ಶನ ಜ್ಞಾನವು, ಜ್ಞಾಪಿಸಿಕೊಳ್ಳುವುದೆಂಬ ಜ್ಞಾನಾಂತರದಿಂದ ತಿಳಿಯಲ್ಪಡುತ್ತದೆ. ಜ್ಞಾನಾಂತರವೂ ಮೊದಲನೆಯ ಜ್ಞಾನದ **ಪ್ರಸರಣ ಭೇದ** – ಅವಸ್ಥಾಭೇದ ಈ ಪ್ರಸರಣ ಭೇದ – ಅವಸ್ಥಾ ಭೇದ ಮಾತ್ರದಿಂದ ಜ್ಞಾನಾಂತರವೆಂದು ವ್ಯಪದೇಶಿಸುತ್ತಾರೆಯೇ ಹೊರತು ಎರಡೂ ಬೇರೆ ಬೇರೆ ಜ್ಞಾನವಲ್ಲ ಧರ್ಮ ಭೂತಜ್ಞಾನವು ಒಂದೇ ಅನೇಕ ವಸ್ತುಗಳನ್ನು ತಿಳಿದುಕೊಳ್ಳುವುದು ಅನೇಕ ಅವಸ್ಥಾ ಭೇದ ಹಾಗೆಯೇ ಒಂದು ವಸ್ತುವನ್ನು ನೋಡಿ ತಿಳಿದುಕೊಂಡು, ಅದನ್ನು ಪುನಃ ಜ್ಞಾಪಿಸಿಕೊಳುವುದು ಪ್ರಥಮ ಜ್ಞಾನದ ಅವಸ್ಥಾಭೇದ. ಆದ್ದರಿಂದ ಜ್ಞಾನಾಂತರವಿಲ್ಲದೆ ಧರ್ಮಿಸ್ವರೂಪವು ಪ್ರತ್ಯಕ್ತ್ವಾದಿಗಳಿಂದಲೂ, ಧರ್ಮಭೂತಜ್ಞಾನವು ಜ್ಞಾನತ್ವಾದಿ ಗಳಿಂದಲೂ ತಾನಾಗಿಯೇ ತಿಳಿಯಲ್ಪಡುತ್ತದೆ ಸ್ವಯಂಪ್ರಕಾಶ ಶಾಸ್ತ್ರವು ಇದರಿಂದ ಸವಸ್ವಿತಾರ್ಥವಾಗುತ್ತದೆ ಜ್ಞಾನ ನಿತ್ಯತ್ವ ಧರ್ಮಕ್ಕೂ ಲೋಪವಿಲ್ಲ

ಹೀಗೆ ಹೇಳಿದರೂ ನನಗೆ ಈಗ ಶಾಸ್ತ್ರಾರ್ಥಜ್ಞಾನವು ಉಂಟಾಯಿತು ಉಂಟಾದ ಜ್ಞಾನವು ಈಗ ನಷ್ಟ ವಾಯಿತು (ಮರೆತುಹೋಯಿತು) "ಎಂಬ ವ್ಯವಹಾರದಿಂದ ವೈಶೇಷಿಕಾದಿಗಳ ಹಾಗೆ ಅನೇಕ ಜ್ಞಾನವನ್ನು ಒಪ್ಪ ಬೇಕಲ್ಲವೆ, ಎಂದು ಕೇಳಬಹುದು, ಮೇಲೂ ಇದು ಹಿಂದೆಯೇ ನನಗೆ ಗೊತ್ತಿತ್ತು ಎಂದು ಪ್ರತಿ ಸಂಧಾನ ಜ್ಞಾನಕ ಉಂಟಾಗುತ್ತದೆ ಇದರಿಂದ ಪ್ರಮಾಣ ಪ್ರಮೇಯಗಳಿಗ ಭೇದವು ದುರ್ವಾರವು. ಆದ್ದರಿಂದ ನಿದ್ರಾದಿದಶಯಲ್ಲಿ

ತ್ರಿವಿಧ ಅಚೇತನ ನಿರೂಪಣಮ್

ತ್ರಿವಿಧಾಚೇತನಂಗಳುಮ್ ಪರರುಕ್ಕೇ ತೋನ್ರುಕ್ಕಡವನವಾಯಿರುಕ್ಕುಮ್. ಅಚೇತನತ್ವ ಮಾವದು ? ಜ್ಞಾನಾಶ್ರಯಮನ್ರಿಕ್ಕೇಯೊಳ್ರಿಹೈ. ಪಿರರುಕ್ಕೇತೋನ್ರುಹೈಯಾವುದು ? ತರ್ಪ್ರಕಾಶ ತ್ತುಕ್ಕುತ್ತಾನ್ ಫಲ ಯನ್ರಿಕ್ಕೇಯೊಳ್ರಿಹೈ, ಇವೈ ಇರಣ್ಡುಮ್ ಧರ್ಮಭೂತಜ್ಞಾನಾದಿಹಳುಕ್ಕುಮ್ ತುಲ್ಯಮ್. ತ್ರಿವಿಧಾ ಚೇತನಙ್ಗಳೆನ್ರಿಡುತ್ತ ವಱ್ಱಿಲ್ ಪ್ರಕೃತಿಯುಮ್ ಕಾಲಮುಮ್ ಜಡಂಗಳ್. ಶುದ್ಧಸತ್ವ ಮಾನ ದ್ರವ್ಯತ್ತೈ ಜಡಮೆನ್ರು ಶಿಲರ್ ಶೊಲ್ಲುವರ್‌ಹಳ್.

ಜಡತ್ವ ನಿರೂಪಣಮ್

ಜಡತ್ವಮಾವದು ? ಸ್ವಯಂಪ್ರಕಾಶಮನ್ರಿಕ್ಕೇಯಿರುಕ್ಕೈ. ಭಗವಚ್ಛಾಸ್ತ್ರಾದಿಪರಾಮರ್ಶಂ ಪಣ್ಣಿ ನವರ್‌ಹಳ್, ಜ್ಞಾನಾತ್ಮಕತ್ವಂ ಶಾಸ್ತ್ರಸಿದ್ಧ ಮಾಹೈಯಾಲೇ ಶುದ್ಧಸತ್ವದ್ರವ್ಯತ್ತೈ ಸ್ವಯಂಪ್ರಕಾಶ ಮೆನ್ಬರ್‌ಗಳ್.

ಧರ್ಮಭೂತಜ್ಞಾನಕ್ಕೆ ಸಂಕೋಚ, ಜಾಗರಾದಿದಶೆಯಲ್ಲಿ ವಿಕಾಸವೆಂದು ಹೇಳುವುದು ಸರಿಯಲ್ಲ, ಎಂಬ ಶಂಕೆಯನ್ನೂ **'ತನ್ನುಡೈಯ ಧರ್ಮಭೂತಜ್ಞಾನಮ್ ಪ್ರಸರಣ ಭೇದತ್ತಾಲೇ ಜ್ಞಾನಾಂತರ ವ್ಯಪದೇಶಮ್'** ಎಂಬ ವಾಕ್ಯದಿಂದ ನಿರಾಕರಿಸುತ್ತಾರೆ. ಇದರ ಭಾವವೇನೆಂದರೆ, "ನಹಿವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇ ನಿತ್ಯಾ ಏವಾತ್ಮನೋ ಹಿತೇ", ಇತ್ಯಾದಿ ಶ್ರುತಿ ಸ್ಮೃತಿಗಳಿಂದ, ಧರ್ಮಿಜ್ಞಾನದ ಹಾಗೆ ಧರ್ಮಭೂತ ಜ್ಞಾನವೂ ಅನಾದಿ, ಅವಿನಾಶಿ. ಅಂತಹ ಒಂದೇ ಜ್ಞಾನದಿಂದಲೇ ಎಲ್ಲಾ ವ್ಯವಹಾರಗಳೂ ಉಂಟಾಗುವಾಗ ಅನೇಕ ಜ್ಞಾನ ಗಳನ್ನು ಕಲ್ಪಿಸುವುದು ಸರಿಯಲ್ಲ. ಪ್ರಕೃತಿ ಪ್ರಾಕೃತ ವಸ್ತುಗಳಿಗ, ಆಯಾಯಾ ಪರಿಣಾಮ ಭೇದ ಮಾತ್ರದಿಂದಲೇ ಅವುಗಳ ಉತ್ಪತ್ತಿ ವಿನಾಶ ವ್ಯವಹಾರಗಳೂ, ಪರಸ್ಪರ ಉಪಕಾರ್ಯೋಪಕಾರಕ ಭಾವವೂ, ಯಥಾಪ್ರಮಾಣ ಉಪಪನ್ನವಾಗುವಂತೆ, ಜ್ಞಾನೈಕ್ಯದಲ್ಲಿಯೂ ತತ್ತದವಸ್ಥಾ ಭೇದದಿಂದ ಭಿನ್ನತ್ವವೂ, ಒಂದೇ ಉಪಾದಾನಕತ್ವದಿಂದ ವಿಷಯ ವಿಷಯಿ ಭಾವಾದಿ ಸರ್ವವೂ ಉಪಪನ್ನವಾಗುತ್ತದೆ. ಸುಷುಪ್ತಿಕಾಲದಲ್ಲಿ ಧರ್ಮಭೂತ ಜ್ಞಾನಕ್ಕೆ ಪ್ರಸರಣ ವಿಲ್ಲ, ಧರ್ಮಿಜ್ಞಾನದಿಂದಲೇ ಸುಪ್ತೋತ್ಥಿತನು "ಸುಖಮಹಮಸ್ವಾಪ್ಸಂ" ಎಂದು ಪ್ರತಿ ಸಂಧಾನ ಮಾಡುತ್ತಾನೆ.

ತ್ರಿವಿಧಾ ಚೇತನದ್ರವ್ಯ ನಿರೂಪಣೆ

ಅನಂತರ ಅಚೇತನ ದ್ರವ್ಯ ನಿರೂಪಣೆಯನ್ನು **"ತ್ರಿವಿಧಾಚೇತನಂಗಳ್"** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ. ಪ್ರಕೃತಿ, ಕಾಲ, ಶುದ್ಧ ಸತ್ತ್ವವೆಂಬ ಮೂರು ವಿಧವಾದ ಅಚೇತನಗಳೂ, ಧರ್ಮಭೂತ ಜ್ಞಾನದ ಹಾಗೆ ಇತರರಿಗೇನೆ ಪ್ರಕಾಶಿಸಲು ಯೋಗ್ಯವಾದವುಗಳು. ಅಚೇತನವೆಂದರೆ ಜ್ಞಾನಕ್ಕೆ ಆಶ್ರಯವಿಲ್ಲದೇ ಬೇರೆಯಾಗಿ ಇರುವುದು. ಪ್ರಳಯಕಾಲದಲ್ಲಿ ಚೇತನನು ಅತ್ಯಂತ ಸಂಕುಚಿತವಾದ ಜ್ಞಾನ ಪ್ರಸರಣವುಳ್ಳವನಾಗಿರು ತ್ತಾನೆಯೇ ಹೊರತು ಜ್ಞಾನಾಶ್ರಯವಿಲ್ಲದೇ ಇಲ್ಲ ಎಂಬುದು, **ಜ್ಞಾನಾಶ್ರಯ ಮನ್ರಿಕ್ಕೇ,** ಎಂದು ಜ್ಞಾನಾಂತರಾಭಾವವು ಅಚೇತನಕ್ಕೆ ತಿಳಿಸಲ್ಪಡುತ್ತದೆ. **ಪಿರರುಕ್ಕೇ ತೋನ್ರು ಹೈ** ಇತ್ಯಾದಿ. ಇತರರಿಗೆ ಮಾತ್ರವೇ ತೋರುವುದೆಂಬುದು, ತನ್ನ ಪ್ರಕಾಶಕ್ಕೆ ತಾನು ಫಲಿಯಲ್ಲವೆಂಬುದು. ಆದಾಗಿ ತನ್ನ ಪ್ರಕಾಶವನ್ನು ತಾನು ಅನುಭವಿಸದೇ ಇರುವುದು – ಪರಾಕ್ತ್ವವೆಂದರ್ಥ. ಇತರರಿಗೇನೆ ಭಾಸಮಾನವಾಗಿ ಅವರ ವ್ಯವಹಾರಕ್ಕೆ ಅನುಗುಣವಾಗಿರುವುದು. ಈ ಅಚೇತನತ್ವವೂ ಪರಾಕ್ತ್ವವೂ, ಧರ್ಮಭೂತಜ್ಞಾನ, ಶಬ್ದ ಗುಣಕ್ರಿಯಾದಿ ಅದ್ರವ್ಯಗಳಿಗೂ, ತುಲ್ಯ.

ಜಡ ದ್ರವ್ಯ ನಿರೂಪಣೆ

ತ್ರಿವಿಧಾಚೇತನಗಳೆಂದು ಹೇಳುವುದರಲ್ಲಿ ಪ್ರಕೃತಿಯೂ, ಕಾಲವೂ ಜಡಪದಾರ್ಥಗಳು.

ಶುದ್ಧಸತ್ವಸ್ಯ ಸ್ವಯಂಪ್ರಕಾಶತ್ವೋಪಪಾದನಮ್

ಇಪ್ಪಡಿ ಸ್ವಯಂಪ್ರಕಾಶಮಾಹಿಲ್, ಸಂಸಾರಿಹಳುಕ್ಕು ಶಾಸ್ತ್ರವೇದ್ಯಮಾಹ ವೇಣ್ಡಾದೇ, ತಾನೇ ತೋನ್ರ ವೇಣ್ಡಾವೋ ವೆನ್ನಿಲ್? ಸರ್ವಾತ್ಮಾಕ್ಕಳುಡೈಯವುಮ್ ಸ್ವರೂಪಮುಮ್ ಧರ್ಮಭೂತ ಜ್ಞಾನಮುಮ್ ಸ್ವಯಂಪ್ರಕಾಶಮಾಯಿರುಕ್ಕ, ಸ್ವರೂಪಮ್ ತನಕ್ಕೇ ಸ್ವಯಂಪ್ರಕಾಶಮಾಯ್ ವೇರಿಲಾರ್ಕ್ಕುಮ್ ಜ್ಞಾನಾನ್ತರ ವೇದ್ಯಮಾನಾರ್ಪ್ಪೋಲವುಮ್, ಧರ್ಮಭೂತಜ್ಞಾನಂ ಸ್ವಾಶ್ರಯುತ್ತುಕ್ಕು ಸ್ವಯಂಪ್ರಕಾಶಮಾಯ್, ಇತರರ್ಕ್ಕು ಸ್ವಯಂಪ್ರಕಾಶಮಲ್ಲಾದಾಪ್ಪೋಲವುಮ್, ಇದುವುಮ್ ನಿಯತವಿಷಯಮಾಹ ಸ್ವಯಂಪ್ರಕಾಶಮಾನಾಲ್ ವಿರೋಧಮಿಲ್ಲೈ.

ಯೋವೇತ್ತಿ ಯುಗಪತ್ಸರ್ವಂ ಪ್ರತ್ಯಕ್ಷೇಣ ಸದಾಸ್ವತಃ ।
ತಂಪ್ರಣಮ್ಯ ಹರಿಂ ಶಾಸ್ತ್ರಂ ನ್ಯಾಯತತ್ವಂ ಪ್ರಚಕ್ಷ್ಮಹೇ ॥

ಎನ್ಹಿರ ಪಡಿಯೇ ಧರ್ಮಭೂತಜ್ಞಾನತ್ತಾಲೇ ಸರ್ವತ್ತೈಯುಮ್ ಸಾಕ್ಷಾತ್ಕರಿತ್ತುಕ್ಕೊಂಡಿರುಕ್ಕಿರ ಈಶ್ವರನುಕ್ಕು ಶುದ್ಧ ಸತ್ವದ್ರವ್ಯಮ್ ಸ್ವಯಂಪ್ರಕಾಶಮಾಯಿರುಕ್ಕಿರ ಪಡಿಎಜ್ಞನೇಯೆನ್ನಿಲ್? ಇವನುಡೈಯ ಧರ್ಮಭೂತಜ್ಞಾನಮ್ ದಿವ್ಯಾತ್ಮಸ್ವರೂಪಮ್ ಮುದಲಾಹ ಸರ್ವತ್ತೈಯುಮ್ ವಿಷಯೀಕರಿಯಾನಿರ್ಕ್ಕ, ದಿವ್ಯಾತ್ಮಸ್ವರೂಪಮ್ ಸ್ವಯಂಪ್ರಕಾಶಮಾಹಿರಾಪ್ಪೋಲೇ ಇದುವುಮ್ ಸ್ವಯಂಪ್ರಕಾಶಮಾಯಿರುಕ್ಕಲಾಮ್. ಇಪ್ಪಡಿ ನಿತ್ಯರುಕ್ಕುಮ್ ತುಲ್ಯಮ್. ವಿಷಯಪ್ರಕಾಶಕಾಲತ್ತಿಲೇ ಧರ್ಮಭೂತಜ್ಞಾನಂ ಸ್ವಾಶ್ರಯತ್ತುಕ್ಕೇ ಸ್ವಯಂಪ್ರಕಾಶಮಾನಾರ್ಪ್ಪೋಲೇ ಮುಕ್ತರುಕ್ಕುಮುಪ್ಪವಸ್ಥೈಯಿಲೇ ಇದು ಸ್ವಯಂ ಪ್ರಕಾಶಮಾನಾಲ್ ವಿರೋಧಮಿಲ್ಲೈ.

ಶುದ್ಧ ಸತ್ವದ ಸ್ವಯಂಪ್ರಕಾಶ ನಿರೂಪಣೆ

ಶುದ್ಧ ಸತ್ವ ದ್ರವ್ಯವನ್ನು ಕೆಲವರು ಜಡ ಪದಾರ್ಥವೆಂದು ಹೇಳುತ್ತಾರೆ ಇದು ದೇಶಿಕರಿಗೆ ಅಭಿಮತವಲ್ಲ ಜಡತ್ವವೆಂದರೆ ಸ್ವಯಂಪ್ರಕಾಶವಲ್ಲದೇ ಇರುವುದು ಭಗವಚ್ಛಾಸ್ತ್ರಾದಿ ಗ್ರಂಥಗಳನ್ನು ಪರಾಮರ್ಶೆ ಮಾಡಿದವರು ಜ್ಞಾನಾತ್ಮಕತ್ವವು ಶಾಸ್ತ್ರ ಸಿದ್ಧವಾದ್ದರಿಂದ ಶುದ್ಧ ಸತ್ವ ದ್ರವ್ಯವು ಜ್ಞಾನಸ್ವರೂಪವು. ಆದ್ದರಿಂದ ಅದು ಸ್ವಯಂಪ್ರಕಾಶವೆನ್ನುತ್ತಾರೆ ಇದು ಶ್ರೀ ದೇಶಿಕರಿಗೆ ಅಭಿಮತ (ರಹಸ್ಯಾಮ್ನಾಯ) ಚಿನ್ಮಯೈಃ ಸಪ್ರಕಾಶೈಶ್ಚ । ಕಿಮಾತ್ಮಕೋ ಭಗವಾನ್ । ಕಿಮಾತ್ಮಿಕಾ ವ್ಯಕ್ತಿಃ । ಜ್ಞಾನಾತ್ಮಕೋ ಭಗವಾನ್ । ಜ್ಞಾನಾತ್ಮಿಕಾ ವ್ಯಕ್ತಿಃ । (ಅಥರ್ವಶಿಖೋಪನಿಷತ್ತು) ತದಿದಂಪರಂ ಪುಂಡರೀಕಂ ವಿಜ್ಞಾನ ಘನಂ । (ಪಂಚರಾತ್ರ ಸಂಹಿತೆ) ಜ್ಞಾನಾನಂದಮಯಾ ಲೋಕಾಃ । (ವ್ಯಕ್ತಿಃ–ದಿವ್ಯ ಮಂಗಳ ವಿಗ್ರಹಃ) ಆದಿಪದವು ರಹಸ್ಯಾಮ್ನಾಯ, ಇತಿಹಾಸ ಪುರಾಣಗಳನ್ನು ತಿಳಿಸುತ್ತದೆ ಈ ಪ್ರಮಾಣಗಳಿಂದ ಭಗವಂತನ ಭೂಷಣಾಯುಧಗಳು ದಿವ್ಯ ಮಂಗಳ ವಿಗ್ರಹಗಳು, ಶ್ರೀ ವೈಕುಂಠಲೋಕ, ಅಲ್ಲಿರುವ ಮಂಟಪ ಗೋಪುರಾದಿಗಳು ಎಲ್ಲಾ ಜ್ಞಾನಸ್ವರೂಪವಾದ ಸ್ವಯಂಪ್ರಕಾಶ ರೂಪ ಶುದ್ಧ ಸತ್ವ ದ್ರವ್ಯಗಳು, ಎಂಬುದು ವ್ಯಕ್ತವಾಗುತ್ತದೆ **ಇಪ್ಪಡಿ**–ಶುದ್ಧ ಸತ್ವ ದ್ರವ್ಯವು ಸ್ವಯಂಪ್ರಕಾಶವಾದರೆ, ಸಂಸಾರಿಗಳಿಗೆ ಶಾಸ್ತ್ರದಿಂದ ತಿಳಿಯಲ್ಪಡದೆ, ತಾನೇ ತಿಳಿಯಲ್ಪಡಬೇಕಲ್ಲವೇ, ಎಂದರೆ ಸರ್ವಾತ್ಮರುಗಳ ಸ್ವರೂಪವೂ, ಧರ್ಮಭೂತ ಜ್ಞಾನವೂ **ಮಾಹ** ಸ್ವಯಂ ಪ್ರಕಾಶವಾಗಿರುವಾಗ ಸ್ವರೂಪಕ್ಕೇ ಸ್ವಯಂ ಪ್ರಕಾಶವಾಗಿದ್ದು ಇತರರಿಗೆ ಸ್ವಯಂ ಪ್ರಕಾಶವಲ್ಲದೆ ಇರುವ ಹಾಗೆ, **ಇದುವುಮ್**–ಶುದ್ಧ ಸತ್ವವೂ ನಿಯತವಿಷಯವಾಗಿ ಸ್ವಯಂ ಪ್ರಕಾಶವಾದರೆ ವಿರೋಧವಿಲ್ಲ **ನಿಯತ ವಿಷಯ – ಸ್ವಯಂಪ್ರಕಾಶ ಮಾನಾಲ್**–ಇತ್ಯಾದಿ ಎಂದರೆ ಬದ್ಧ ಜೀವಿಯನ್ನು ಬಿಟ್ಟು ಸಸಂಬಂಧಿಗಳಾದ **ಈಶ್ವರ** ನಿತ್ಯಮುಕ್ತರುಗಳಿಗೆ ಸ್ವಯಂ ಪ್ರಕಾಶವಾಗಿ, ಶುದ್ಧ ಸತ್ವ ದ್ರವ್ಯವು ಇರುವುದು ಬಾಧಕ ವೇನೂ ಇಲ್ಲ. ಹಾಗಾದರೆ ಸ್ವರೇಶ್ವರನಿಗೂ, ನಿತ್ಯಮುಕ್ತರಿಗೂ, ಅವರವರ ಧರ್ಮ ಭೂತಜ್ಞಾನವು ಯಾವಾಗಲೂ ಯಾವ ಸಂಕೋಚವೂ ಇಲ್ಲದೆ ಪ್ರಕಾಶವಾಗಿರುವಾಗ, ಶುದ್ಧ ಸತ್ವ ದ್ರವ್ಯವನ್ನು ಧರ್ಮ ಭೂತಜ್ಞಾನವು ಸದಾ

ಧರ್ಮಭೂತಜ್ಞಾನತ್ತಿ ನುಡೈಯ ಸ್ವಾತ್ಮಪ್ರಕಾಶನ ಶಕ್ತಿಯಾನದು ವಿಷಯಪ್ರಕಾಶನಮಿಲ್ಲಾದ ಕಾಲತ್ತಿಲ್ ಕರ್ಮವಿಶೇಷಙ್ಗಳಾಲೇ ಪ್ರತಿಬದ್ಧೈಯಾನಾರ್ಪೋಲೇ ಶುದ್ಧಸತ್ತ್ವತ್ತಿನುಡೈಯ ಸ್ವಾತ್ಮ ಪ್ರಕಾಶನ ಶಕ್ತಿಯುಂವರ್ ಬದ್ಧ ದಶೈಯಿಲ್ ಪ್ರತಿಬದ್ಧೈ ಯಾಹೈಯಾಲೇ ಶುದ್ಧ ಸತ್ತ್ವಂ ಬದ್ಧರ್ಕ್ಕು ಪ್ರಕಾಶಿ ಯಾದೊೞಿಹಿರದು.

ಧಿಯಸ್ಸ್ವಯಂಪ್ರಕಾಶತ್ವಂ ಮುಕ್ತೌಸ್ವಾಭಾವಿಕಂ ಯಥಾ ।
ಬದ್ಧೇ ಕದಾಚಿತ್ಸಂರುದ್ಧಂ ತಥಾತ್ರಾಪಿ ನಿಯಮ್ಯತೇ ॥೧॥

ವಿಷಯೀಕರಿಸುತ್ತಿರುವಾಗ, ಶುದ್ಧ ಸತ್ತ್ವವು ಅವರುಗಳಿಗೆ ಸ್ವಯಂ ಪ್ರಕಾಶವಾಗುವ ಬಗೆ ಹೇಗೆ, ಎಂಬ ಸಂದೇಹವನ್ನು, **"ಯೋ ವೇತ್ತಿ ಯುಗ ಪತ್ಸರ್ವಂ"** ಎಂದಾರಂಭಿಸಿ ನಿವರ್ತಿಸುತ್ತಾರೆ. ಈ ಶ್ಲೋಕವು ಶ್ರೀಮನ್ನಾಥಮುನಿ ಗಳು ಅನುಗ್ರಹಿಸಿದ ನ್ಯಾಯ ತತ್ತ್ವ ವೆಂಬ ಗ್ರಂಥದ ಮಂಗಳ ಶ್ಲೋಕ **ಯಃ –** ಯಾವ ಹರಿಯು **ಯುಗಪತ್ –** ಏಕಕಾಲದಲ್ಲಿ (ಯೋಗಿಗಳಿಗೆ ಕ್ರಮೇಣ ಸರ್ವ ಪ್ರತ್ಯಕ್ಷ ಹಾಗಯೇ ಆತ್ಮರುಗಳಿಗೆ **ಯತ್ಕಿಂಚಿತ್ ವೇದನ,** ಅದೂ ಪರೋಕ್ಷವಾಗಿ), ಹಾಗಿಲ್ಲದೆ ಏಕಕಾಲದಲ್ಲಿ **ಸರ್ವಂ, ಪ್ರತ್ಯಕ್ಷೇಣ** ಸರ್ವವನ್ನು ಹರಿಯು ಪ್ರತ್ಯಕ್ಷಿಸಿಕೊಂಡಿರುವನು. **ಸದಾ** ಬದ್ಧ ಜೀವಿಗಳಿಗೆ ಬದ್ಧ ದಶೆಯಲ್ಲೇ ಸರ್ವಸಾಕ್ಷಾತ್ಕಾರವಿಲ್ಲ ಹಾಗಲ್ಲದೆ ಭಗವಂತನಿಗೆ ಸದಾ ಸರ್ವ ವಿಷಯ ಸಾಕ್ಷಾತ್ಕಾರ ನಿತ್ಯ ಸೂರಿಗಳಿಗೂ ಸದಾ ಸಾಕ್ಷಾತ್ಕಾರವಿದ್ದರೂ ಅದು **ಸ್ವತಃ** ಅಲ್ಲ ಭಗವದಧೀನ. ಭಗವಂತನಿಗೆ ಸ್ವಾಧೀನ – ಅನ್ಯಾಧೀನವಲ್ಲ, ಸ್ವಾಭಾವಿಕವೆಂದರ್ಥ ಇಂಥಹ ಹರಿಯನ್ನು ನಮಸ್ಕರಿಸಿ ನ್ಯಾಯ ತತ್ತ್ವವನ್ನು ಹೇಳುತ್ತೇನೆಂದು ಶ್ಲೋಕಾರ್ಥ. ಶ್ರುತ ಪ್ರಕಾಶಿಕೆಯಲ್ಲಿ ಸ್ವಯಂಪ್ರಕಾಶವಾದ ಧರ್ಮಿಸ್ವರೂಪವು ಧರ್ಮಭೂತ ಜ್ಞಾನದಿಂದ ಪ್ರಕಾಶಿಸುತ್ತದೆ ಎಂಬುದನ್ನು ಒಪ್ಪುಕೊಳ್ಳಕೂಡದು, ಎಂದು ಹೇಳಿರುವುದು, ಸಂಭವತ್ ಪರಕ್ಸಾಂತ ರೋದಾಹರಣವೆಂದು ಶ್ರೀ ಕರೂರು ಸ್ವಾಮಿಗಳುವರು ತಮ್ಮ ವ್ಯಾಖ್ಯಾನದಲ್ಲಿ ತಿಳಿಸಿರುತ್ತಾರೆ

ಬದ್ಧ ಜೀವಿಗಳಿಗ ಸ್ವಯಂಪ್ರಕಾಶವಾದ ಶುದ್ಧ ಸತ್ತ್ವ ದ್ರವ್ಯವು ಅದರ ಪರಿಣಾಮವಾದ ಶ್ರೀ ವೈಕುಂಠಾದಿ ಲೋಕಗಳೂ ಸಹ ಏಕೆ ಪ್ರಕಾಶಿಸುತ್ತಿಲ್ಲವೆಂದರೆ **ಧರ್ಮಭೂತ ಜ್ಞಾನತ್ತಿನುಡೈಯ,** ಎಂದಾರಂಭಿಸಿ ತಿಳಿಸು ತ್ತಾರೆ ಧರ್ಮಭೂತಜ್ಞಾನದ ಸ್ವಯಂಪ್ರಕಾಶನ ಶಕ್ತಿಯು, ವಿಷಯ ಸ್ಫುರಣವಿಲ್ಲದ ಕಾಲದಲ್ಲಿ, ಕರ್ಮವಿಶೇಷದಿಂದ ಪ್ರತಿಬದ್ಧವಾಗಿರುವಂತೆ, ಶುದ್ಧ ಸತ್ತ್ವದ್ರವ್ಯದ ಸ್ವಾತ್ಮ ಪ್ರಕಾಶನ ಶಕ್ತಿಯೂ ಸಹ, ಬದ್ಧದಶೆಯಲ್ಲಿ ಪ್ರತಿಬದ್ಧ ವಾಗಿರುತ್ತದೆ. ಆದ್ದರಿಂದ ಶುದ್ಧ ಸತ್ತ್ವದ್ರವ್ಯವೂ, ಅದರ ಪರಿಣಾಮವಾದ ಶ್ರೀ ವೈಕುಂಠಾದಿ ದಿವ್ಯ ಲೋಕಗಳೂ, ಕರ್ಮ ಬದ್ಧರಾದ ಚೇತನರಿಗೆ ಪ್ರಕಾಶಿಸುವುದಿಲ್ಲ ಏತಾವನ್ಮಾತ್ರೇಣ ನಾಸ್ತಿಕವಾದವು ಕೂಡದು ಎಂಬುದು ಭಾವ.

ಧರ್ಮಭೂತ ಜ್ಞಾನತ್ತಿನುಡೈಯ ಸ್ವಾತ್ಮ ಪ್ರಕಾಶನ ಶಕ್ತಿ ಇತ್ಯಾದಿಯಿಂದ ಧರ್ಮಭೂತ ಜ್ಞಾನಕ್ಕೆ ಸರ್ವ ವಸ್ತುಗಳನ್ನು ತಿಳಿಸುವ ಶಕ್ತಿ, ಸ್ವಯಂಪ್ರಕಾಶನ ಶಕ್ತಿ ಎಂದು ಎರಡು ಶಕ್ತಿಗಳಿವೆ. ಆತ್ಮ ಸ್ವರೂಪಕ್ಕೆ ಸ್ವಯಂಪ್ರಕಾಶನ ಶಕ್ತಿಮಾತ್ರ ಬಾಹ್ಯ ಪದಾರ್ಥಗಳನ್ನು ಪ್ರಕಾಶ ಪಡಿಸುವ ಶಕ್ತಿಯಿಲ್ಲ. ಆದ್ದರಿಂದಲೂ ಧರ್ಮ ಧರ್ಮಿ ಜ್ಞಾನಗಳ ವೈಲಕ್ಷಣ್ಯವು ತಿಳಿಸಲ್ಪಡುತ್ತದೆ.

ಕಾರಿಕೆ :– ಧಿಯಃ ಸ್ವಯಂಪ್ರಕಾಶತ್ವಂ, ಎಂಬ ಕಾರಿಕೆಯಿಂದ ಮೇಲೆ ಹೇಳಿದ ಅರ್ಥಗಳು ಸಂಗ್ರಹಿಸಲ್ಪಡುತ್ತವೆ. **ಯೋವೇತ್ತಿ ಯುಗಪತ್ ಸರ್ವಂ** ಇತ್ಯಾದಿ ಶ್ಲೋಕದಲ್ಲಿ ಹೇಳಿರುವಂತೆ, ಧರ್ಮಭೂತ ಜ್ಞಾನದಿಂದ ಸರ್ವ ವನ್ನೂ ಸಾಕ್ಷಾತ್ಕರಿಸಿಕೊಂಡಿರುವ ಈಶ್ವರನಿಗೆ ಶುದ್ಧ ಸತ್ತ್ವ ದ್ರವ್ಯವು ಸ್ವಯಂ ಪ್ರಕಾಶವಾಗಿರುವ ಪ್ರಕಾರವು

ಇವ್ವಳವು ಅವಸ್ಥಾಂತರಾಪತ್ತಿ ವಿಕಾರಿ ದ್ರವ್ಯತ್ತುಕ್ಕು ವಿರುದ್ಧಮನ್ರು. ಅಹೈಯಾಲೇ ಪ್ರಮಾಣ ಪ್ರತಿಪನ್ನಾರ್ಥತ್ತುಕ್ಕು ಯುಕ್ತಿ ವಿರೋಧಮ್ ಶೊಲ್ಲವೊಣ್ಣಾದಿಲ್ಲೈ. ಇಙ್ಗನನ್ರಿಕ್ಕೇ ಉಪಚಾರತ್ತಾಲೇ ನಿರ್ವಹಿಕ್ಕ ಪ್ಪಾರ್ಕಿಲ್, ಆತ್ಮಸ್ವರೂಪತ್ತಿಲುಮ್ ಜ್ಞಾನಾದಿ ಶಬ್ದಙ್ಗಳೈ ಉಪಚಾರತ್ತಾಲೇ ಅನ್ಯಪರ ಙ್ಗಳಾಕ್ಕಲಾಮ್.

ಹೇಗೆಂದರೆ, **ಇವನುಡೈಯ** ಇತ್ಯಾದಿಯಾಗಿ ತಿಳಿಸಿರುತ್ತಾರೆ **ಇವನುಡೈಯ** ಈ ಭಗವಂತನ ಧರ್ಮ ಭೂತಜ್ಞಾನವು ದಿವ್ಯಾತ್ಮ ಸ್ವರೂಪವೇ ಆದಿಯಾಗಿ ಎಲ್ಲವನ್ನೂ ವಿಷಯೀಕರಿಸುತ್ತಿರುವಾಗ, (ಪ್ರತ್ಯಕ್ಷವಾಗಿ ತಿಳಿಯು ತ್ತಿರುವಾಗ), ಈ ದಿವ್ಯಾತ್ಮ ಸ್ವರೂಪವು (ಭಗವಂತನ ಸ್ವರೂಪ) ಸ್ವಯಂ - ತಾನಾಗಿಯೇ ಪ್ರಕಾಶವಾಗುತ್ತಿರು ವಂತೆ, ಈ ಶುದ್ಧ ಸತ್ವ ದ್ರವ್ಯವೂ ಸ್ವಯಂಪ್ರಕಾಶವಾಗಿರಲು ಸಾಧ್ಯ ಹಾಗೆಯೇ **ಜ್ಞಾನಾನಂದಮಯಾ ಲೋಕಾಃ - ಜ್ಞಾನಾತ್ಮಿಕಾವ್ಯಕ್ತಿಃ** ಎಂಬ ಪ್ರಮಾಣಗಳನ್ನು ಅಪಲಾಪ ಮಾಡಲಾಗುವುದಿಲ್ಲ. ಹಾಗೆ ಮಾಡಿದರೆ, ಸತ್ಯಂ, ಜ್ಞಾನಂ ಎಂಬ ಸ್ವರೂಪ ನಿರೂಪಕ ಧರ್ಮವನ್ನು ತಿಳಿಸುವ, ಜ್ಞಾನ ಶಬ್ದಕ್ಕೂ ಅಪಲಾಪ ಮಾಡಬಹು ದಾಗುತ್ತದೆ. ಹಾಗೆ ನಯುಾಥ್ಯರೂ ಮಾಡದೆ ಧರ್ಮಿಜ್ಞಾನಕ್ಕೆ ಸ್ವಯಂಪ್ರಕಾಶತ್ವವನ್ನು ಒಪ್ಪಿದ್ದಾರೆಯಲ್ಲವೆ

ಈ ಪ್ರಕರಣದಲ್ಲಿ ಸ್ವಯಂಪ್ರಕಾಶವಾದ ದಿವ್ಯಾತ್ಮ ಸ್ವರೂಪವು ಧರ್ಮಭೂತ ಜ್ಞಾನದಿಂದಲೂ ನಿತ್ಯವೂ ಪ್ರಕಾಶಿ ಸುತ್ತದೆ ಎಂಬ ವಚನದಿಂದ, ಸ್ವಯಂಪ್ರಕಾಶವಾದ ಜೀವಾತ್ಮ ಸ್ವರೂಪವೂ, "ಇದಮಹಂ ವಿಜ್ಞಾನಾಮಿ" ಇತ್ಯಾದಿ ಸರ್ವಾನುಭವ ಸಾಕ್ಷಿಕವಾಗಿ ಧರ್ಮಭೂತ ಜ್ಞಾನದಿಂದಲೂ ಪ್ರಕಾಶಿಸುತ್ತದೆ.

ಧಿಯಃ—ಧರ್ಮಭೂತಜ್ಞಾನಕ್ಕೆ, **ಮುಕ್ತೌ** —ಮುಕ್ತಿದಶೆಯಲ್ಲಿ **ಸ್ವಾಭಾವಿಕಂ**—ಸ್ವಭಾವಸಿದ್ಧವಾದ, (ಕದಾಚಿದಪಿ)—ಯಾವಾಗಲಾದರೂ, ಒಂದು ಸಲವಾದರೂ (**ಅಸಂರುದ್ಧಂ**)—ತಿರೋಹಿತವಿಲ್ಲದ, **ಸ್ವಯಂ ಪ್ರಕಾಶತ್ವಂ**— **ಸ್ವ**ಯಂ ಪ್ರಕಾಶತ್ವವು, **ಯಥಾ**— ಹೇಗೆ, **ಬದ್ಧೇ ಕದಾಚಿತ್ ಸಂರುದ್ಧಂ**— ಬದ್ಧ ಜೀವಿಗೆ ವಿಷಯ ಪ್ರಕಾಶನವಿಲ್ಲದ ಸಮಯದಲ್ಲಿ, ಕರ್ಮದಿಂದ **ತಿರೋಹಿತ**ವಾಗಿದೆಯೋ, **ತಥಾ**— ಅನ್ಯಾಯ ದಂತೆ, **ಅತ್ರಾಪಿ ನಿಯಮ್ಯತೇ**—ಶುದ್ಧಸತ್ವವಿಷಯದಲ್ಲಿಯೂ, ಈ ವ್ಯವಸ್ಥೆಯೂ ಇದೆ ಆದಾಗಿ ಮುಕ್ತರ ವಿಷಯದಲ್ಲಿ ಶುದ್ಧಸತ್ವಕ್ಕೆ ಇರುವ ಸ್ವಯಂಪ್ರಕಾಶತ್ವವು ಬದ್ಧ ದಶೆಯಲ್ಲಿ ಕರ್ಮಗಳಿಂದ ಅವರಿಗೇನೆ ಪ್ರತಿಬದ್ಧ ವಾಗಿರುತ್ತದೆ ಎಂಬ ವ್ಯವಸ್ಥೆಯನ್ನು ಅಂಗೀಕರಿಸಿದರೆ, ಎಲ್ಲವೂ ಸಮಂಜಸವಾಗುತ್ತದೆ. ನಿತ್ಯಸೂರಿಗಳಿಗೂ, ಭಗ ವಂತನಿಗೂ ಸದಾಕಾಲವೂ ಯಾವ ಪ್ರತಿಬಂಧಕವೂ ಇಲ್ಲದೆ ಧರ್ಮಭೂತ ಜ್ಞಾನದಂತೆ, ಶುದ್ಧಸತ್ವದ್ರವ್ಯವೂ ಸ್ವಯಂ ಪ್ರಕಾಶವಾಗಿರುತ್ತದೆ

ಹೀಗೆ ಧರ್ಮಭೂತ ಜ್ಞಾನದೃಷ್ಟಾಂತದಿಂದ ಶುದ್ಧಸತ್ವಕ್ಕೆ ಸ್ವಯಂಪ್ರಕಾಶತ್ವ ತದಭಾವಗಳನ್ನು ಕಾಲ ಭೇದ ಪುರುಷಭೇದದಿಂದ ನಿರ್ವಹಿಸಲು ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿ, ಅನೇಕಾವಸ್ಥೆಗಳನ್ನು ಒಪ್ಪುವುದು ವಿರುದ್ಧವಲ್ಲವೆ ಎಂದರೆ, ಇವ್ವಳವು ಎಂದಾರಂಭಿಸಿ ಸಮಾಧಾನ ಹೇಳುತ್ತಾರೆ, ಅದಾಗಿ ಮೇಲೆ ನಿರೂಪಿಸಿದಂತೆ ಇಷ್ಟು ಅವಸ್ಥಾಂತರ ಹೊಂದುವಿಕೆಯು ವಿಕಾರದ್ರವ್ಯಗಳಿಗೆ ವಿರುದ್ಧವಲ್ಲ, **ಅಹೈಯಾಲೇ**— ಆದ್ದರಿಂದ ಪ್ರಮಾ ಣವಚನಗಳಿಂದ ಏರ್ಪಟ್ಟ ಅರ್ಥಕ್ಕೆ ಯುಕ್ತಿಯಿಂದ ವಿರೋಧವನ್ನು ಹೇಳುವುದು ಸರಿಯಲ್ಲ, **ಇಙ್ಗನನ್ರಿಕ್ಕೇ**— ಹೀಗಿಲ್ಲದೆ, **ಉಪಚಾರತ್ತಾಲೇ**—ಲಕ್ಷಣೆಯಿಂದ ನಿರ್ವಹಿಸಬೇಕೆಂದು ತೋರಿದರೆ, ಆತ್ಮಸ್ವರೂಪದಲ್ಲಿಯೂ ಜ್ಞಾನಾದಿ ಶಬ್ದಗಳನ್ನು ಲಕ್ಷಣೆಯಿಂದ, ಜ್ಞಾತಾಎಂಬೀ ಮೊದಲಾದ ರೀತಿಯಲ್ಲಿ ಅನ್ಯಾರ್ಥಗಳನ್ನು ತಿಳಿಸುವಂತೆ ನಿರ್ವಹಿಸ ಬಹುದು. ಆತ್ಮ ವಿಷಯದಲ್ಲಿ ಜ್ಞಾನಶಬ್ದಕ್ಕೆ ಮುಖ್ಯಾರ್ಥವನ್ನು ಬಿಟ್ಟರೂ, ತಾತ್ಪರ್ಯಾನುಪಪತ್ತಿಗಳಿಲ್ಲವೆಂದರೆ, ಶುದ್ಧಸತ್ವ ವಿಷಯದಲ್ಲೂ ಅದು ತುಲ್ಯ. ಆದ್ದರಿಂದ ಪ್ರಮಾಣ ಸಂಪ್ರತಿಪನ್ನವಾದ ಅರ್ಥಕ್ಕೆ ಯುಕ್ತಿಯಿಂದ ವಿರೋಧವನ್ನು ಹೇಳಲು ದಾರಿಯಿಲ್ಲ.

ಸ್ವಯಂಪ್ರಕಾಶತ್ತುಕ್ಕು ರೂಪರಸಾದಿ ಗುಣಙ್ಗಳುಮುಮ್ಮೈಯುಡಿಯಾಕ ವನ್ದಪೃಥಿವ್ಯಾದಿ ವಿಭಾಗಮುಮುಮ್, ಪರಿಣಾಮಾದಿಹಳುಮ್ ಕೂಡುಮೋ ವೆನ್ಱಿರಚೋದ್ಯಮುಮುಮ್ ಧರ್ಮ ಭೂತ ಜ್ಞಾನತ್ತುಕ್ಕುಮ್ ಧರ್ಮಿಜ್ಞಾನತ್ತುಕ್ಕು ಮುಂಡಾನ ವೈಷಮ್ಯಙ್ಗಳೈ ಪ್ರತಿಬಂದಿಯಾಹಕ್ಕೊಂಡು ಪ್ರಮಾಣ ಬಲತ್ತಾಲೇ ಪರಿಹೃತಮ್.

ಇಪ್ಪಡಿ ಸ್ವಯಂಪ್ರಕಾಶಮಾನ ಶುದ್ಧ ಸತ್ವದ್ರವ್ಯತ್ತೈ ಜ್ಞಾತೃತ್ವಮಿಲ್ಲಾಮೈಯಾಲೆ ತ್ರಿವಿಧಾ ಚೇತನಙ್ಗಳಿಲ್ ಶೇರಕ್ಕೊತ್ತದು. ಇವ್ವಚೇತನಙ್ಗಳ್ ಮೂನ್ಱುಕ್ಕುಮ್ ಪ್ರವೃತ್ತಿಯಾವುದು ? ಈಶ್ವರಸಙ್ಕಲ್ಪಾನುರೂಪಙ್ಗಳಾನ ವಿಚಿತ್ರಪರಿಣಾಮಾದಿಹಳ್

ಸ್ವಯಂಪ್ರಕಾಶತ್ತುಕ್ಕು—ಹೀಗೆ ಧರ್ಮಿಜ್ಞಾನವು ಸ್ವಯಂಪ್ರಕಾಶವಾಗಿಯೂ, ಧರ್ಮಭೂತಜ್ಞಾನವು ಸ್ವಾಶ್ರಯಕ್ಕೇ ಸ್ವಯಂಪ್ರಕಾಶವಾಗಿಯೂ ಇರುವುದನ್ನು ದೃಷ್ಟಾಂತವಾಗಿ ತೋರಿಸಿ ಶುದ್ಧಸತ್ವ ದ್ರವ್ಯವು ಸ್ವಸಂಬಂಧಿಗಳಿಗೇ ಸ್ವಯಂ ಪ್ರಕಾಶವಾಗಬಹುದು ಎಂದು ನಿಯತ ವಿಷಯತ್ವವನ್ನು ಅಂಗೀಕರಿಸಿದರೂ ಧರ್ಮಧರ್ಮಿಜ್ಞಾನಗಳಿಗೆ ಇಲ್ಲದ ರೂಪರಸಾದಿ ಗುಣಗಳೂ ಅದರ ಮೂಲಕ ಉಂಟಾದ ಪೃಥಿವೀ ಮೊದಲಾದ ವಿಭಾಗಗಳೂ ಸಏಕಧಾಭವತಿ, ಇತ್ಯಾದಿ ಶ್ರುತಿಸಿದ್ಧವಾದ, ಮುಕ್ತರುಗಳ ದೇಹೇಂದ್ರಿಯಾದಿ ಪರಿಣಾಮಗಳೂ, ಮಂಟಪ ಗೋಪುರಾದಿ ಅವಸ್ಥೆಗಳೂ ಸ್ವಯಂಪ್ರಕಾಶವಾದ ಶುದ್ಧಸತ್ವದ್ರವ್ಯಕ್ಕೆ ಉಂಟಾಗಬಹುದೇ ಎಂಬ ಚೋದ್ಯವನ್ನು ಅನುವಾದಮಾಡಿ ಸ್ವಯಂ ಪ್ರಕಾಶತ್ತುಕ್ಕು, ಎಂದಾರಂಭಿಸಿ ಪರಿಹರಿಸುತ್ತಾರೆ. ಸ್ವಯಂಪ್ರಕಾಶವಾದ ಶುದ್ಧಸತ್ವ ದ್ರವ್ಯಕ್ಕೆ ರೂಪರಸಾದಿಗುಣಗಳೂ ಪೃಥಿವೀ ಮೊದಲಾದ ವಿಭಾಗಗಳೂ, ಮಂಟಪಗೋಪುರಾದಿ ಪರಿಣಾಮಗಳೂ ಉಂಟಾಗುವುದರಲ್ಲಿ ಏನೂ ಬಾಧಕವಿಲ್ಲ. ಹೇಗೆಂದರೆ ಧರ್ಮಭೂತಜ್ಞಾನಕ್ಕೆ ವಿಷಯಿತ್ವವೂ, ಪರಾಕ್ತ್ವವೂ(ಪರಸ್ಮೈಭಾಸಮಾನತ್ವವೂ,) ಧರ್ಮಿ ಜ್ಞಾನಕ್ಕೆ ಪ್ರತ್ಯಕ್ತ್ವವೂ ಬೇರೆ ಬೇರೆಯಾಗಿವೆ. ಹಾಗೆಯೇ ಧರ್ಮಭೂತ ಜ್ಞಾನಕ್ಕೆ ಸಂಕೋಚ ವಿಕಾಸಗಳೂ, ಇಚ್ಛಾ ದ್ವೇಷ ಪ್ರಯತ್ನಾದ್ಯವಸ್ಥೆಗಳೂ ಇವೆ ಧರ್ಮಿಜ್ಞಾನಕ್ಕೆ ಅವು ಇಲ್ಲ, ಈ ರೀತಿಯಾಗಿ ಸ್ವಯಂಪ್ರಕಾಶವಾದ ಧರ್ಮ ಧರ್ಮಿಜ್ಞಾನಗಳಿಗೆ ಪ್ರಮಾಣಾನುಸಾರ ಭೇದಗಳನ್ನು ಒಪ್ಪುವಂತೆ, ಸ್ವಯಂಪ್ರಕಾಶವಾದ ಶುದ್ಧಸತ್ವದ್ರವ್ಯಕ್ಕೂ ರೂಪರ ಸಾದಿಗುಣಗಳನ್ನೂ ಪೃಥಿವ್ಯಾದಿ ವಿಭಾಗಗಳನ್ನೂ, ಮಂಟಪ ಗೋಪುರಾದ್ಯವಸ್ಥೆಗಳನ್ನೂ ಅಂಗೀಕರಿಸಿ, ಇಂಥಹ ವೈಷಮ್ಯವನ್ನು ಹೇಳುವುದು ಪ್ರಮಾಣಾನುಸಾರವಾಗಿದೆ ಎಂದು ಪ್ರತಿಬಂದಿಯಾಗಿ ಚೋದ್ಯವನ್ನು ಪರಿಹರಿಸುತ್ತಾರೆ.

ಇಪ್ಪಡಿ, ಇತ್ಯಾದಿ. ಹೀಗೆ ಸ್ವಯಂಪ್ರಕಾಶವಾದ ಶುದ್ಧಸತ್ವದ್ರವ್ಯಕ್ಕೆ ಜ್ಞಾತೃತ್ವವಿಲ್ಲದೆಯಿರುವುದರಿಂದ ಸ್ವಾಧೀನ ತ್ರಿವಿಧ ಚೇತನಾ ಚೇತನ ಸ್ವರೂಪಸ್ಥಿತಿ ಪ್ರವೃತ್ತಿ ಭೇದಂ ಎಂದು ತ್ರಿವಿಧ ಚೇತನಗಳೊಡನೆ ಸೇರಿಸಿ ಪರಿಗಣಿಸಿರು ತ್ತಾರೆ.

ಪ್ರಕೃತಿ, ಕಾಲ, ಶುದ್ಧಸತ್ವವೆಂಬ ಈ ಮೂರು ಅಚೇತನ ದ್ರವ್ಯಗಳಿಗೂ ಪ್ರವೃತ್ತಿಯಾವುದೆಂದರೆ, ಈಶ್ವರನ (ಲಕ್ಷ್ಮೀವಿಶಿಷ್ಟನಾರಾಯಣನ) ಸಂಕಲ್ಪಕ್ಕೆ ಅನುರೂಪವಾದ ವಿಚಿತ್ರವಾದ ಪರಿಣಾಮಾದಿಗಳು ಆದಿಪದದಿಂದ, ಅಪಕ್ಷಯ, ವಿನಾಶಗಳನ್ನು ಗ್ರಹಿಸಬೇಕು. ಈ ವಿಚಿತ್ರವಾದ ಅವಾಂತರ ಪರಿಣಾಮಗಳೇ ಪ್ರಕೃತಿತತ್ವಕ್ಕೆ, ಚತುರ್ದಶ ಭುವನಾತ್ಮಕವಾದ ಅಂಡ, ಅಂಡಾಂತರ್ವರ್ತಿನಿಯಾದ ಅಚೇತನ ಪದಾರ್ಥಜಾತ ರೂಪವಾದ ಪ್ರವೃತ್ತಿ ವಿಭುವಾದ ಕಾಲಕ್ಕೆ, ಕಲಾ ಮುಹೂರ್ತ, ಕಾಷ್ಠಾ, ಅಹೋರಾತ್ರಾದಿ ಭೇದಗಳು, "ಕಲಾ ಮುಹೂರ್ತಾಃ ಕಾಷ್ಠಾಶ್ಚಾ ಹೋರಾತ್ರಾಶ್ಚಸರ್ವಶಃ — ಕಾಲಂ ಸಪಚತೇತತ್ರ ನಕಾಲಸ್ತತ್ರವೈ ಪ್ರಭುಃ'' ಎಂಬ ಪ್ರಮಾಣಸಿದ್ಧಗಳು. ಶುದ್ಧಸತ್ವಕ್ಕೆ ಶ್ರೀ ವೈಕುಂಠದಲ್ಲಿರುವ ಪೃಥಿವೀ, ಜಲ ಮೊದಲಾದ ವಿಭಾಗಗಳೂ ಮಂಟಪ ಗೋಪುರಾದಿ ಪರಿಣಾಮ ಗಳೂ ಪ್ರವೃತ್ತಿ.

ತ್ರಿಗುಣದ್ರವ್ಯಸ್ಯ ಸ್ವರೂಪಭೇದ ಕಥನಮ್.

ಇವಟ್ರಿಲ್ ತ್ರಿಗುಣದ್ರವ್ಯತ್ತುಕ್ಕು ಸ್ವರೂಪಭೇದಂ ಗುಣತ್ರಯಾಶ್ರಯತ್ವಮ್. ಸತತಪರಿಣಾಮ ಶೀಲಮಾನ ಇದ್ದ್ರವ್ಯತ್ತುಕ್ಕು ಸತ್ವರಜಸ್ತಮಸ್ಸುಕ್ಕಳನ್ಯೋನ್ಯಂ ಸಮಮಾನಪೋದು ಮಹಾಪ್ರಳಯಮಾಮ್; ವಿಷಮಮಾನಪೋದು ಸೃಷ್ಟಿಸ್ಥಿತಿಹಳ್. ಗುಣವೈಷಮ್ಯಮುಳ್ಳ ಪ್ರದೇಶತ್ತಿಲೇ ಮಹದಾದಿ ವಿಕಾರಙ್ಗಳ್.

ಇದಿಲ್ ವಿಕೃತಮಲ್ಲಾದ ಪ್ರದೇಶತ್ತೈಯುಮ್, ವಿಕೃತಮಾನ ಪ್ರದೇಶತ್ತೈಯುಮ್, ಕೂಡ ಪ್ರಕೃತಿ ಮಹದಹಂಕಾರ ತನ್ಮಾತ್ರ ಭೂತೇಂದ್ರಿಯಙ್ಗಳೆನ್ರು ಇರುಪತ್ತುನಾಲು ತತ್ವಙ್ಗಳಾಕ ಶಾಸ್ತ್ರಙ್ಗಳ್ವಹುತ್ತು ಚೊಲ್ಲುಮ್.

ಶಿಲವಿವಕ್ಷಾ ವಿಶೇಷಙ್ಗಳಾಲೇ ಓರೋರು ವಿಡಙ್ಗಳಿಲೇ ತತ್ವಙ್ಗಳೈಯೇರವುಮ್ ಶುರಙ್ಗವುಮ್ ಶೊಲ್ಲಾನಿರ್ಕ್ಕುಮ್. ಇತ್ತತ್ವಙ್ಗಳಿಲ್ ಅವಾನ್ತರವಹುಪ್ಪುಕ್ಕಳುಮ್ ಅವಟ್ರಿಲ್ ಅಭಿಮಾನ ದೇವತೈಹಳುಂ ಮುಮ್ಮೋ ವುಪಾಸನಾಧಿಕಾರಿಹಳುಕ್ಕರಿಯ ವೇಣುಮ್. ಆತ್ಮಾಕ್ಕಳುಕ್ಕು ಅವತ್ತಿಲ್ ಕಾಟ್ಟಿಲ್ ವ್ಯಾವೃತ್ತಿಯರಿಹೈ ಇಙ್ಗೇ ನಮುಕ್ಕು ಪ್ರಧಾನಮ್.

ತ್ರಿಗುಣದ್ರವ್ಯ ನಿರೂಪಣೆ – ಇವಟ್ರಿಲ್ ಇತ್ಯಾದಿ–ಇವುಗಳಲ್ಲಿ ತ್ರಿಗುಣ ದ್ರವ್ಯಕ್ಕೆ (ಪ್ರಕೃತಿಗೆ) ಸ್ವರೂಪಭೇದವು ಸತ್ವರಜಸ್ತಮಸ್ಸೆಂಬ ಮೂರು ಗುಣಗಳಿಗೆ ಆಶ್ರಯವಾಗಿರುವುದು. ಸತತ—ಯಾವಾಗಲೂ ಪರಿಣಾಮವನ್ನು ಹೊಂದುವ ಸ್ವಭಾವವಾದ ಈ ಪ್ರಕೃತಿ ದ್ರವ್ಯಕ್ಕೆ ಸತ್ವ ರಜಸ್ತಮೋ ಗುಣಗಳು ಅನ್ಯೋನ್ಯ ಸಮವಾಗಿರುವಾಗ ಮಹಾಪ್ರಳಯ. ವೈಷಮ್ಯದಿಂದ ಕೂಡಿದಾಗ ಸೃಷ್ಟಿಸ್ಥಿತಿ ಕಾರ್ಯಗಳುಂಟಾಗುತ್ತವೆ. ಇದು ಸ್ಥಿತಿಭೇದ ಗುಣ ವೈಷಮ್ಯದಿಂದ ಕೂಡಿದ, ಪ್ರಕೃತಿಯ ಏಕಭಾಗದಲ್ಲಿ ಮಹತ್, ಅಹಂಕಾರ, ಇತ್ಯಾದಿ ವಿಭಾಗಗಳು. ಇವುಗಳಲ್ಲಿ **(ವಿಕೃತ ಮಲ್ಲಾದ ಪ್ರದೇಶ)** ವಿಕಾರವನ್ನು ಹೊಂದದೆ ಇರುವ ಪ್ರದೇಶ ಭಾಗವನ್ನೂ, ವಿಕಾರವನ್ನು ಹೊಂದಿರುವ ಭಾಗವನ್ನೂ ಸೇರಿಸಿ, ಪ್ರಕೃತಿ, ಮಹತ್, ಅಹಂಕಾರ, ತನ್ಮಾತ್ರ, ಪಂಚಭೂತಗಳು. ಇಂದ್ರಿಯಗ ಳೆಂದು ಇಪ್ಪತ್ತುನಾಲ್ಕು ತತ್ವಗಳಾಗಿ ಶಾಸ್ತ್ರಗಳು ವಿಭಾಗಮಾಡಿ ಹೇಳುತ್ತವೆ

ವಿಕೃತಮಲ್ಲಾದ ಪ್ರದೇಶಮ್ ಪ್ರಕೃತಿಯಲ್ಲಿ ಗುಣಸಾಮ್ಯವಿರುವ ಪ್ರದೇಶ. **ವಿಕೃತಮಾನ ಪ್ರದೇಶಮ್** ಪ್ರಕೃತಿಯಲ್ಲಿ ಗುಣ ವೈಷಮ್ಯ (ವ್ಯತ್ಯಾಸವಾಗಿರುವ) ಭಾಗ. ಪರಿಣಾಮವಿಲ್ಲದ ಗುಣಗಳಿಗೆ ಪರಿಣಾಮವನ್ನು ಹೇಳುವುದು ಹೇಗೆಂದರೆ—ಮಧುರ ರಸದಿಂದ ಕೂಡಿದ ಪದಾರ್ಥವನ್ನು, ಮಧುರತ್ವ, ಮಧುರತರತ್ವ, ಮಧುರತಮತ್ವ ವೆಂದು ವಿಭಾಗ ಹೇಳುವಂತೆ, ಸತ್ವರಜಸ್ತಮೋಗುಣಗಳಲ್ಲಿ, ಸಾಮ್ಯ, ಈಷತ್ವ, (ಸ್ವಲ್ಪ), ಅತಿಶಯತ್ವ, ಅತ್ಯಂತಾ ತಿಶಯತ್ವ, ಇತ್ಯಾದಿಯಾಗಿ ತಾರತಮ್ಯವುಂಟು. ಅದಾಗಿ ಈಷತ್ಸತ್ವವು, ಅತಿಶಯಿತರಜಸ್ಸು, ಅತ್ಯಂತಾಶಯಿತ ತಮಸ್ಸು, ಸೇರಿರುವಾಗಲೂ, ಹೀಗೆಯೇ ಅತಿಶಯಿತಸತ್ವವೂ, ಅತ್ಯಾಂತಾಶಯಿತರಜಸ್ಸೂ, ಈಷತ್ತಮಸ್ಸೂ, ಸೇರಿ ರುವಾಗಲೂ ಈಷದ್ರಜಸ್ಸೂ, ಅತಿಶಯಿತತಮಸ್ಸು ಅತ್ಯಂತಾತಿಶಯಿತಸತ್ವವೂ ಸೇರಿರುವಾಗಲೂ ಗುಣವೈಷಮ್ಯ ವುಂಟು. ಪ್ರಕೃತಿಯ ಏಕದೇಶದಲ್ಲಿ ಗುಣವೈಷಮ್ಯವುಂಟಾಗುವಾಗ ಆ ಭಾಗವನ್ನು ಮಹತ್ತತ್ವವೆನ್ನುತ್ತಾರೆ. ಹಾಗೆ ಯೇ ಆ ಮಹತ್ತತ್ವದ ಏಕಭಾಗವು ವಿಚಿತ್ರವಾದ ವಿಕಾರಹೊಂದಿ ಗುಣ ವೈಷಮ್ಯದಿಂದ ಅಹಂಕಾರತತ್ವವೆನಿಸುತ್ತದೆ ಹೀಗಯೇ ಇಪ್ಪತ್ತುನಾಲ್ಕು ತತ್ವಗಳಿಗೂ ಏಕದೇಶದಲ್ಲಿ ಸ್ಥಿತಿಯೂ ಏಕದೇಶದಲ್ಲಿ ಪರಿಣಾಮವೂ ಏರ್ಪಟ್ಟು, ಇಪ್ಪತ್ತುನಾಲ್ಕು ತತ್ವಗಳೆಂದು ಎಣಿಕೆಯುಂಟು. ಈ ತತ್ವಗಳಿಗೆ ಪರಿಣಾಮವು ಏಕಶರೀರದಲ್ಲಿಯೂ, ಏಕಕಾಲದ ಲ್ಲಿಯೂ ಉಂಟಾಗಬಹುದು. ಈ ತತ್ವಗಳು ಪ್ರಕೃತಿ, ಮಹತ್, ಅಹಂಕಾರ, ಪಂಚತನ್ಮಾತ್ರ, ಪಂಚಭೂತ, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಮನಸ್ಸು ಎಂದು ಇಪ್ಪತ್ತುನಾಲ್ಕು ತನ್ಮಾತ್ರಗಳು, ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನ್ಮಾತ್ರ, ಗಂಧತನ್ಮಾತ್ರವೆಂದು ಐದುವಿಧ. **ಶಬ್ದ ತನ್ಮಾತ್ರವೆಂದರೆ ಆಕಾಶದ ಸೂಕ್ಷ್ಮಾವಸ್ಥೆ, ಅದರಿಂದ ಆಕಾಶವು ಉಂಟಾಗುತ್ತದೆ,** ಸ್ಪರ್ಶತನ್ಮಾತ್ರ ವೆಂದರೆ ವಾಯುವಿನ ಸೂಕ್ಷ್ಮಾವಸ್ಥೆ, ಆದರಿಂದ ವಾಯುವು ಉಂಟಾಗುತ್ತದೆ ರೂಪತನ್ಮಾತ್ರವೆಂದರೆ ಅಗ್ನಿಯ

ಇವ್ವೈ ಯೆಲ್ಲಾಮ್ ಸರ್ವೇಶ್ವರನುಕ್ಕು ಅಸ್ತ್ರಭೂಷಣಾದಿ ರೂಪಙ್ಗಳಾಯ್ ನಿರ್ಕುಂ ನಿಲೆಯೈ.

ಪುರುಡರ್ಮಣಿವರಮಾಹ, ಪ್ಪೊನ್ನಾಮೂಲ ।
ಪಿರಕಿರುತಿ ಮರುವಾಹ, ಮರ್ರ ತಣ್ಡಾಹ ।
ತ್ತೆರುಣ್ ಮರುಳ್ ವಾಣ್ ಮರ್ರೈವಾಹ, ವಾಂಕಾರಙ್ಗಳ್ ।
ಶಾಙ್ಗಂ ಶಂಗಾಹ, ಮನಂ ತಿಹಿರಿಯಾಹ ।
ಇರುಡೀ ಹಙ್ಗಳೀರೈನ್ದುಂ ಶರಙ್ಗಳಾಹ ।
ವಿರುಪೂತಮಾಲೈ ವನಮಾಲೈ ಯಾಹ ।
ಕ್ಕರುಡ ನುರುವಾಮರ್ರೈಯಿರ್ ಪೊರುಳಾಂ ಕಣ್ಣರ್ ।
ಕರಿಗಿರಿ ಮೇಲ್ ನಿನ್ರನೈತ್ತುಂಕಾಕ್ಕಿನ್ರಾನೇ ॥

ಸೂಕ್ಷ್ಮಾವಸ್ಥೆ, ಅದರಿಂದ ಅಗ್ನಿಯು ಉಂಟಾಗುತ್ತದೆ. ರಸತನ್ಮಾತ್ರೆಯೆಂದರೆ. ರಸದ ಸೂಕ್ಷ್ಮಾವಸ್ಥೆ ಗಂಧತನ್ಮಾತ್ರೆಯೆಂದರೆ ಪೃಥಿವಿಯ ಸೂಕ್ಷ್ಮಾವಸ್ಥೆ ಆದರಿಂದ ಪೃಥಿವಿಯು ಉಂಟಾಗುತ್ತದೆ ಪಂಚಭೂತಗಳು ಪೃಥಿವಿ, ಜಲ, ಅಗ್ನಿ, ವಾಯು, ಆಕಾಶ. ಪಂಚಜ್ಞಾನೇಂದ್ರಿಯಗಳು ಮೂಗು, ನಾಲಿಗೆ, ಕಣ್ಣು, ಕಿವಿ, ತ್ವಕ್ (ಚರ್ಮ), ಪಂಚಕರ್ಮೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಮಲ ವಿಸರ್ಗ ಮಾಡುವುದು), ಉಪಸ್ಥ (ಆನಂದೇಂದ್ರಿಯ-ಜಲ ವಿಸರ್ಗ ಮಾಡುವುದು) ಮನಸ್ಸು ಸೇರಿ, ಹನ್ನೊಂದು ಇಂದ್ರಿಯಗಳು. ಶಿಲವಿವಕ್ಷಾವಿಶೇಷಂಗಳಾಲೇ ಇತ್ಯಾದಿ ಪ್ರಕೃತಿ, ಅವ್ಯಕ್ತ, ಅಕ್ಷರ, ತಮಸ್ಸು ಎಂದು ಸುಬಾಲೋಪನಿಷತ್ತಿನಲ್ಲಿ ಹೇಳಿರುವುದು ಮಹತ್ತತ್ವದ ಹಾಗೆ ಪರಸ್ಪರ ಅಧಿಕ ವ್ಯತ್ಯಾಸವಿಲ್ಲದ ಕಾರಣ ಪ್ರಕೃತಿ ಎಂಬ ತತ್ವದಲ್ಲಿಯೇ ಪರಿಗಣಿಸಲ್ಪಟ್ಟಿರುತ್ತವೆ, ಕ್ಷೀರವು ಮೊಸರಾಗಿ ಪರಿಣಮಿಸುವಾಗ, ಆರಂಭದಲ್ಲಿ ಸ್ವಲ್ಪ ಘನೀಭಾವ, ನಂತರ ಮಧ್ಯಸ್ಥ ಘನೀಭಾವ, ನಂತರ ಅತ್ಯಂತ ಘನೀಭಾವವನ್ನು ಹೊಂದುವಂತೆ ಪ್ರಕೃತಿ, ಅವ್ಯಕ್ತ, ಅಕ್ಷರ, ತಮಸ್ಸುಗಳು ಪರಸ್ಪರ ಅಧಿಕ ವ್ಯತ್ಯಾಸವಿಲ್ಲದೆ ಇರುತ್ತವೆ. ಹಾಗೆಯೇ ಮಹತ್ತತ್ವದಲ್ಲಿಯೂ ಸಾತ್ವಿಕ, ರಾಜಸ, ತಾಮಸವೆಂದು ಮೂರು ಬೇಧಗಳೂ, ಅಹಂಕಾರತತ್ವದಲ್ಲಿಯೂ ಸಾತ್ವಿಕ, ರಾಜಸ, ತಾಮಸವೆಂಬ ಮೂರು ಭೇದಗಳೂ ಇವೆ, ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು,'ಶಿಲವಿವಕ್ಷಾ ವಿಶೇಷಂಗಳಾಲೇ" ಎಂದಾರಂಭಿಸಿ ಕೆಲವು ವಿವಕ್ಷಾ ವಿಶೇಷಗಳಿಂದ ಓರೊರುವಿಡಂಗಳಿಲೇ ಉಪನಿಷತ್ತುಗಳಲ್ಲಿ ಒಂದೊಂದು ಸ್ಥಳದಲ್ಲಿ, ತತ್ವಗಳನ್ನು, ಏರವುಂ ಶುರುಂಗವುಂ, ಹೆಚ್ಚು ಕಡಿಮೆಯಾಗಿ ಹೇಳಿರುತ್ತದೆ ಈ ತತ್ವಗಳಲ್ಲ ಅವಾಂತರ ಭೇದಗಳೂ, ಅವುಗಳ ಅಭಿಮಾನಿ ದೇವತೆಗಳೂ ಆಯಾಯಾ ಪ್ರಕೃತ್ಯಾದಿ ಅಚೇತನ ತತ್ವಗಳನ್ನು ಉಪಾಸನೆ ಮಾಡುವವರಿಗೆ ತಿಳಿಯಬೇಕು ಈ ತತ್ವೋಪಾಸನೆಗಳು ಅಲ್ಪಫಲಗಳನ್ನು ಕೊಡತಕ್ಕವು. ಏಕಾಂತಿಗಳಿಗೆ ತಿಳಿಯಬೇಕಿಲ್ಲ ಆತ್ಮಾವೈಕಾಟ್ಟಲಿಮ್ ಇತ್ಯಾದಿ—ನಮಗೆ ಜೀವಾತ್ಮ ಅಚೇತನ ತತ್ವಗಳಿಂದ ವ್ಯಾವೃತ್ತಿ-ಬೇರುವಟ್ಟದ್ದು ಎಂದು ತಿಳಿಯುವುದು ಪ್ರಧಾನ. ದೇಹಾತ್ಮಭ್ರಾಂತಿಯು ಅಚೇತನಕ್ಕಿಂತ ಆತ್ಮಾ ಬೇರೆ ಎಂಬುದರಿಂದ ನಿವೃತ್ತವಾಗುತ್ತೆ

ಮೇಲೂ ಈ ತತ್ವಗಳೆಲ್ಲಾ ಸರ್ವೇಶ್ವರನಿಗೆ ಅಸ್ತ್ರಭೂಷಣ ರೂಪಗಳಾಗಿ ಇರುವ ನಿಲೆಯನ್ನು ಪುರಡನ್ಮಣಿವರಮಾಹ ಎಂಬ ಪಾಶುರದಲ್ಲಿ ತಿಳಿಸಿರುವ ರೀತಿಯಲ್ಲಿ ತಿಳಿಯುವುದು ಉಚಿತ

ವಿಷ್ಣು ಪುರಾಣದಲ್ಲಿ ಪ್ರಥಮಾಂಶದ ಕೊನೆ ಆಧ್ಯಾಯವಾದ ಅಸ್ತ್ರಭೂಷಣಾಧ್ಯಾಯದಲ್ಲಿ ಈ ವಿಷಯವನ್ನು ನಿರೂಪಿಸಿದೆ. "ನಿವೃತ್ತೇಃ ಕಿರೋಗಾಯತ್ರಂ ಚಕ್ಷುಃ" ಎಂದು ಹೇಳಿರುವಂತೆ. ಗರುಡನ್—ಗರುಡನ, ಉರುವಾಂ—ಶರೀರವಾಗಿರುವ, ಮರ್ರೈಯಿನ್—ವೇದಗಳಿಗೂ, ಪೊರುಳಾಂ ಕಣ್ಣನ್—ಪ್ರಧಾನಪ್ರತಿಪಾದ್ಯನಾಥ ಕೃಷ್ಣನು, ಕರಿಗಿರಿ ಮೇಲ್—ಹಸ್ತಗಿರಿಯಲ್ಲಿ, ಪುರುಡನ್ಮಣಿವರಮಾಹ ಇತ್ಯಾದಿ ನಿನ್ರು ಇದ್ದುಕೊಂಡು, ಅನೈತ್ತುಂಕಾಕ್ಕಿನ್ರಾನೇ— ಸರ್ವಲೋಕವನ್ನು ರಕ್ಷಿಸುತ್ತಾನೆಂದು ಅನ್ವಯ.

ಎನ್ಹಿರ ಕಟ್ಟೈಳೈಯಿಂಲೇ ಯರಿಹೈಯುಚಿತಂ. ಇರುಪತ್ತಿನ್ನಾಲು ತತ್ವಙ್ಗಳಿಕ್ಕು ಮನ್ಯೋನ್ಯಂ ಸ್ವರೂಪಭೇದ ಮುಮ್ಬೋ ಲಕ್ಷಣಂಗಳಾಲೇ ಸಿದ್ದಮ್. ಇವತ್ತಿಲ್ ಕಾರ್ಯಮಾನ ಇರಪತ್ತು ಮೂನು ತತ್ವಙ್ಗಳುಕ್ಕುಮ್ ಇವತ್ತಾಲಾರಬ್ಧಙ್ಗಳಾನವತ್ತುಕ್ಕುಮ್ ಸ್ಥಿತಿಯಿಲ್ವರುಮ್ ಏತ್ತ ಚ್ಚುರಕ್ಕಙ್ಗಳ್ ಪುರಾಣಙ್ಗಳಿಲೇ ಪ್ರಸಿದ್ಧಮಾನಪಡಿಯೇ ಕಣ್ಣುಕೊಳ್ವದು.

ಪುರುಡನ್ ಮಣಿವರಮಾಹ—ಜೀವಾತ್ಮರು ಶ್ರೀಕೌಸ್ತುಭವೆಂಬರತ್ನವಾಗಿ ಅದ್ದಾಗಿ ಕೌಸ್ತುಭರತ್ನವು ಜೀವರಿಗೆ ಅಧಿಷ್ಠಾನ ದೇವತೆಯಾಗಿ, ಜೀವವರ್ಗವು ಕೌಸ್ತುಭರತ್ನದಿಂದ ಅಧಿಷ್ಠೇಯರಾಗಿ, ಹಾಗೆಯೇ **ಪೊನ್ನಾ** ನಾಶವಿಲ್ಲದ **ಮೂಲಪ್ರಕೃತಿ**—ಮೂಲಪ್ರಕೃತಿಯು, **ಮರುವಾಹ**—ಶ್ರೀವತ್ಸವಾಗಿ—ಶ್ರೀವತ್ಸವು ಮೂಲಪ್ರಕೃತಿಗೆ ಅಧಿಷ್ಠಾನ ದೇವತೆ ಮೂಲಪ್ರಕೃತಿಯು, ಶ್ರೀವತ್ಸದಿಂದ ಅಧಿಷ್ಠೇಯವಾಗಿದೆ ಹೀಗೆಯೇ ಮೇಲೂ ತಿಳಿದುಕೊಳ್ಳುವುದು. **ಮಾನ್ ತಂಡಾಹ**— ಮಹತ್ತತ್ವವು, ಕೌಮೋದಕೀ ಎಂಬ ಗದೆಯಾಗಿ, **ತೆರುಳ್ ಮರುಳ್, ವಾಳ್ ಮರೈವಾಹ**—ಜ್ಞಾನ, ಅಜ್ಞಾನಗಳು, ನಂದಕವೆಂಬ ಖಡ್ಗವೂ, ಅದರ ಕವಚವೂ ಆಗಿ, **ಅಂಗಾರಂಗಳ್**,—ಸಾತ್ವಿಕಾಹಂಕಾರವೂ ತಾಮಸಾಹಂಕಾರವೂ **ಶಾಙ್ಗಂಶಂಗಾಹ**—ಯಥಾಕ್ರಮ ಶಾಙ್ಗವೆಂಬ ಧನುಸ್ಸಾಗಿಯೂ. ಪಾಂಚಜನ್ಯವೆಂಬ ಶಂಖವಾಗಿಯೂ, ಇಲ್ಲಿ ಸಾರದೀಪಿಕಾ ವ್ಯಾಖ್ಯಾನದಲ್ಲಿ ತಾಮಸಾಹಂಕಾರವು ಶಾಙ್ಗವಾಗಿಯೂ ಸಾತ್ವಿಕಾಹಂಕಾರವು ಶಂಖವಾಗಿಯೂ ಎಂದು ವ್ಯತ್ಯಾಸವಾಗಿ ಅಚ್ಚಿಡಲ್ಪಟ್ಟಿದೆ. ಇದು ಅಚ್ಚಿನ ದೋಷವಿರಬಹುದು. ಷೋಡಶಾಯುಧ ಸ್ತೋತ್ರದಲ್ಲಿ ಯಂಸಾತ್ವಿಕಮಹಂಕಾರಂ ಆಹು ಸಂಖ್ಯಕ್ಷಸಾಯಕಂ। ಅವ್ಯಾದ್ವಶ್ಶಾರ್ಙ್ಗಧನ್ವನಃ॥ ಎನ್ರು ಶ್ರೀ ಮನ್ನಿಗಮಾಂತ ಮಹಾದೇಶಿಕನ್‌ರವರೇ ಸ್ಪಷ್ಟವಾಗಿ ಸಾತ್ವಿಕಾಹಂಕಾರವು ಶಾರ್ಙ್ಗವೆಂಬ ಧನುಸ್ಸಾಗಿದೆಯೆಂದು ಅನುಗ್ರಹಿಸಿರುತ್ತಾರೆ **ಮನಂತಿಹಿರಿಯಾಹ**—ಮನಸ್ಸು ಚಕ್ರಾಯುಧವಾಗಿಯೂ, **ಇರುಡೀಕಂಗಳ್ ಈರೈನ್ದುಂಶರಂಗಳಾಹ**—ಹತ್ತು ಇಂದ್ರಿಯಗಳೂ, ಬಾಣಗಳಾಗಿಯೂ **ಇರು ಬೂತಮಾಲೈ ವನಮಾಲೈಯಾಹ** — ಎರಡು ಭಾಗವಾದ ಅಂದರೆ ಶಬ್ದಾದಿ ಪಂಚತನ್ಮಾತ್ರಗಳು, ಆಕಾಶಾದಿ ಪಂಚಭೂತಗಳ ಪಙ್ಕ್ತಿಗಳು, ವೈಜಯಂತಿ ಎಂಬ ಮಾಲೆಯಾಗಿಯೂ, ಸಿದ್ಧಾಂತದಲ್ಲಿ ತನ್ಮಾತ್ರದ್ರವ್ಯಗಳು ಪಂಚಭೂತಗಳ ಸೂಕ್ಷ್ಮಾವಸ್ಥೆಯೆಂದು, "ತನ್ಮಾತ್ರಾ ಭೂತಭೇದಃ ಕಲಲದಧಿನಯಾತ್ ಕಲ್ಪಿತಸ್ತತ್ವವಿದ್ಭಿಃ" ಎಂದು ಶ್ರೀ ದೇಶಿಕರು ತತ್ವ ಮುಕ್ತಾ ಕಲಾಪದಲ್ಲಿ ತಿಳಿಸಿರುತ್ತಾರೆ ಹಾಲಿಗೆ ಹೆಪ್ಪು ಹಾಕಿದ ತರುಣದಲ್ಲಿರುವ ಅವಸ್ಥೆ ಕಲಲ· ಅದೇ 1-2 ಯಾಮದ ನಂತರ ಘಟ್ಟಿಯಾಗಿ ಆಗುತ್ತದೆ. ಅದು ದಧಿ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಆ ರೀತಿಯಲ್ಲಿ ಪಂಚಭೂತಗಳ ಪರಿಣಾಮಾವಸ್ಥೆಗೆ ಮೊದಲು, ಅವು ಸೂಕ್ಷ್ಮವಾಗಿರುತ್ತವೆ ಅವನ್ನು ಶಬ್ದತನ್ಮಾತ್ರೆ, ಸ್ಪರ್ಶತನ್ಮಾತ್ರೆ, ರೂಪತನ್ಮಾತ್ರ, ರಸತನ್ಮಾತ್ರೆ, ಗಂಧತನ್ಮಾತ್ರೆಯೆಂದು ಕರೆಯುತ್ತೇವೆ. ಹೀಗೆ ಇಪ್ಪತ್ತನಾಲ್ಕು ತತ್ವಗಳು, ಭಗವಂತನಿಗೆ ಅಸ್ತ್ರಭೂಷಣ ರೂಪ ದೇವತಾಧಿಷ್ಠೇಯಗಳಾಗಿ, ಪ್ರಕಾಶಿಸುತ್ತವೆ ಇವುಗಳನ್ನು ಅಸ್ತ್ರ ಭೂಷಣಗಳಾಗಿ ಧರಿಸಿ ಭಗವಂತನು ಹಸ್ತಿಗಿರಿಯಲ್ಲಿ ನಿತ್ಯ ಸಾನ್ನಿಧ್ಯವನ್ನು ಮಾಡಿಕೊಂಡು, ಸರ್ವಲೋಕಗಳನ್ನು ಕಾಪಾಡಿಬರುತ್ತಾನೆ. **ಎನ್ಹಿರಕಟ್ಟೈಳೈಯಿಂಲೇ**—ಇತ್ಯಾದಿ ಎಂಬ ರೀತಿಯಲ್ಲಿ ತಿಳಿಯುವುದು. **ಇರುಪತ್ತು ನಾಲುತತ್ವಂಗೆಳುಕ್ಕುಂ** ಇತ್ಯಾದಿ, ಇಪ್ಪತ್ತುನಾಲ್ಕು ತತ್ವಗಳಿಗೂ ಅನ್ಯೋನ್ಯ ಸ್ವರೂಪಭೇದಗಳು ಆಯಾಯಾ ಲಕ್ಷಣಗಳಿಂದ ಸಿದ್ಧ· "ಸಮತ್ರೈಗುಣ್ಯಾ ಮೂಲ ಪ್ರಕೃತಿಃ. ಅವ್ಯಕ್ತಾಹಂಕಾರಾವಸ್ಥಾವ್ಯವಹಿತ ಉತ್ತರಪೂರ್ವಾವಸ್ಥಾ ವಿಶಿಷ್ಟ ತ್ರಿಗುಣಂ ಮಹಾನ್," ಇತ್ಯಾದಿ ಲಕ್ಷಣಗಳಿಂದ ತಿಳಿಯತಕ್ಕದ್ದು. ಇವುಗಳಲ್ಲಿ ಕಾರ್ಯವಾದ ಇಪ್ಪತ್ತುಮೂರು ತತ್ವಗಳಿಗೂ, ಇವುಗಳಿಂದ ಆರಬ್ಧವಾದ ಅಂಡಗಳಿಗೂ, ಅವುಗಳಲ್ಲಿ ಅಂತರ್ಗತವಾದ ಹದಿನಾಲ್ಕು ಲೋಕಗಳಿಗೂ, ಸ್ಥಿತಿಯಲ್ಲಿ ಉಂಟಾಗುವ **ಏಟ್ರುಚ್ಚುರುಕ್ಕಂಗಳ್**—ಉತ್ತರ ಕಾಲಾನುವೃತ್ತಿಯ ನ್ಯೂನಾಧಿಕ

ಶುದ್ಧಸತ್ತ್ವ ಪ್ರಕೃತ್ಯೋಃ ಭಿನ್ನತ್ವಮ್-ಪ್ರಕೃತೇರಾನನ್ತ್ಯಮ್

(1) "ಸ್ವಸತ್ತ್ವಾ ಭಾಸಕಂ ಸತ್ತ್ವಂ ಗುಣಸತ್ತ್ವಾದ್ವಿಲಕ್ಷಣಮ್", (2) ತಮಸಃ ಪರಮೋ ಧಾತಾ (3) "ಅಪ್ರಾಕೃತಂ ಸುರೈರ್ವಂದ್ಯಂ", ಇತ್ಯಾದಿಗಳಾಲೇ ತಮಸ್ಸುಕ್ಕು ಮೇಲಾನ ದೇಶವಿಶೇಷಂ ಸಿದ್ಧಿಕ್ಕೈಯಾಲೇ, (4) "ಅನನ್ತಸ್ಯ ನತಸ್ಯಾನ್ತ ಸ್ಸಂಖ್ಯಾನಂ ವಾಪಿವಿದ್ಯತೇ". (5) "ತದನನ್ತಮ ಸಂಖ್ಯಾತ ಪ್ರಮಾಣಂಚಾಪಿವೈಯತಃ" ಇತ್ಯಾದಿಗಳಲ್ ನಿತ್ಯವಿಭೂತಿಯಾಲೇ ಅವಚ್ಛಿನ್ನ ಮಲ್ಲಾದ ಪ್ರದೇಶತ್ತಾಲೇ ಮೂಲಪ್ರಕೃತಿಕ್ಕಾನನ್ತ್ಯಂ ಕೊಳ್ಳುಹಿನ್ರನ.

ಯುಗಗಳೂ ಪುರಾಣಗಳಲ್ಲಿ ಪ್ರಸಿದ್ಧವಾದ ರೀತಿಯಲ್ಲಿ ತಿಳಿದುಕೊಳ್ಳುವುದು. ಪ್ರತಿಯೊಂದು ಪುರಾಣವೂ ಸೃಷ್ಟಿ ಸ್ಥಿತಿ ಸಂಹಾರಗಳನ್ನು ನಿರೂಪಿಸಿರುತ್ತದೆಯಲ್ಲವೆ.

ಶುದ್ಧಸತ್ವವೂ ಪ್ರಕೃತಿಯೂ ಬೇರೆ ಬೇರೆತತ್ವಗಳು ಪ್ರಕೃತಿಯು ಅನಂತ

1) **ಸ್ವಸತ್ತ್ವಾಭಾಸಕಂ** 2) ತಮಸಃಪರಮೋಧಾತಾ, 3) ಅಪ್ರಾಕೃತಂ ಸುರೈರ್ವಂದ್ಯಮ್. ಇತ್ಯಾದಿ ಪ್ರಮಾಣಗಳಿಂದ, ತಮೋದ್ರವ್ಯವಾದ ಪ್ರಕೃತಿತತ್ವಕ್ಕೆ ಮೇಲೆ ಇರುವ ಶ್ರೀ ವೈಕುಂಠವೆಂಬ ದೇಶವಿಶೇಷವು ಸಿದ್ಧಿಸುತ್ತದೆ, ಆದ್ದರಿಂದ ಪ್ರಕೃತಿಯು ಬೇರೆ ಶುದ್ಧ ಸತ್ವದ್ರವ್ಯವು ಬೇರೆ ಶುದ್ಧ ಸತ್ವವು! ಪ್ರಕೃತಿಯ ಒಂದು ಭಾಗ ಇತ್ಯಾದಿ ಹೇಳುವುದು ಸರಿಯಲ್ಲವೆಂಬುದು ಆಚಾರ್ಯರಹೃದಯ. ಹಾಗಾದರೆ, ಅನಂತಸ್ಯನತಸ್ಯಾಂತಂ, ಇತ್ಯಾದಿ ಪ್ರಕೃತಿಯು ಅಂತವಿಲ್ಲದ್ದು, ಸಂಖ್ಯಾನವಿಲ್ಲದ್ದು ಎಂದು ಹೇಳುವ ವಚನಗಳಿಗೆ ತಾತ್ಪರ್ಯವೇನೆಂದರೆ, "ಅನಂತಸ್ಯನತಸ್ಯಾಂತಂ" ಇತ್ಯಾದಿವಚನಗಳು, ನಿತ್ಯವಿಭೂತಿಯಿಂದ **ಅವಚ್ಛಿನ್ನಮಲ್ಲಾದ**–ವ್ಯಾಪರಿಸಿಲ್ಲದ ಪ್ರದೇಶದಲ್ಲಿ ಮೂಲಪ್ರಕೃತಿಗೆ ಆನಂತ್ಯವನ್ನು ಹೇಳುತ್ತವೆ, ಆದಾಗಿ ಅನಂತಸ್ಯ ಶಾಸ್ತ್ರಗಳಲ್ಲಿ ಅನಂತವೆಂದು **ಹೇಳಿರುವ, ತಸ್ಯ** ಮೂಲಪ್ರಕೃತಿಗೆ, **ಅನಂತಂ** ಕಾಲ ಪರಿಚ್ಛೇದವಿಲ್ಲ **ಸಂಖ್ಯಾನಂ ವಾಪಿ (ನ)** ...ಇಷ್ಟು ಯೋಜನೆಯುಳ್ಳದ್ದು ಎಂಬ ಪರಿಮಿತಿಯೂ ಸಹ ಇಲ್ಲ **ತತ್ ಅನಂತಂ ಅಸಂಖ್ಯಾತ ಪ್ರಮಾಣಂ** ಇತ್ಯಾದಿ. ಆ ಪ್ರಕೃತಿಯು, **ಅನಂತಂ** ನಾಶರಹಿತವಾದದ್ದು, **ಅಸಂಖ್ಯಾತ ಪ್ರಮಾಣಂಚಾಪಿ** ಸಂಖ್ಯಾತೀತವಾದ ಪ್ರಮಾಣವುಳ್ಳದ್ದು **ಕೂಡ, ಎಂದು ಯತ:** ಶಾಸ್ತ್ರಗಳಲ್ಲಿ ಹೇಳಲ್ಪಡುತ್ತದೆ ಯಾದ್ದರಿಂದ ಅದಕ್ಕೆ ಪರಿಮಿತ ಕಾಲ ಪರಿಚ್ಛೇದವಿಲ್ಲವೆಂದರ್ಥ) "ಹೇತುಭೂತಮಶೇಷಸ್ಯ ಪ್ರಕೃತಿಸ್ಸಾಪರಾಮುನೇ" ಎಂಬುದು ಉತ್ತರಾರ್ಥ ಎಲೈ ಮುನಿಯೇ)ಮೈತ್ರೇಯರೇ) ಆ ಪ್ರಕೃತಿಯು, ಅಂಡಾದಿ ಲೋಕಗಳೆಲ್ಲಕ್ಕೂ ಕಾರಣ ಭೂತವಾದದ್ದು.(ವಿ.ಪು.2–7, 25;26), ಹೀಗೆ ಮೂಲಪ್ರಕೃತಿಗೆ ದೇಶಕಾಲ ಪರಿಚ್ಛೇದವಿಲ್ಲವೆಂದು ಹೇಳುವ ವಚನಗಳಿಗೆ ಬಾಧಕವಾಗಿ, ಶುದ್ಧ ಸತ್ವದ್ರವ್ಯದಿಂದ ವ್ಯಾಪರಿಸಿರುವ ಶ್ರೀ ವೈಕುಂಠ ಲೋಕಕ್ಕೆ ಕೆಳಭಾಗದಲ್ಲಿ ಅನಂತಾಯಾಮ ವಿಸ್ತೀರ್ಣವಾದದ್ದು ಪ್ರಕೃತಿ ಎಂದು ಹೇಳುವುದು ಸರಿಯೇ ಎಂದರೆ, ಸರಿಯೆಂದು ತಾತ್ಪರ್ಯ. ಏಕೆಂದರೆ, **ಸ್ವಸತ್ತ್ವಾ ಭಾಸಕಂ**

---

1) ಸರ್ವೇಷ್ವಪಿ ಭವಾಂತಸ್ಥಂ ತತ್ತ್ರಾಧಾರಾತ್ಮನಾ ವಿಭೋಃ ।
ಸ್ವಸತ್ತ್ವಾಭಾಸಕಂ ಸತ್ತ್ವಂ ಗುಣ ಸತ್ವಾದ್ವಿ ಲಕ್ಷಣಮ್ ॥ (ಪೌ ಸಂ. 25–43)
ಸ್ವಯಂಪ್ರಕಾಶವಾದ ಶುದ್ಧಸತ್ವ ದ್ರವ್ಯವು ಸತ್ವ ರಜಸ್ತಮೋ ರೂಪ ತ್ರಿಗುಣಾತ್ಮಕವಾದ ಪ್ರಕೃತಿ ತತ್ವಕ್ಕಿಂತ ಬೇರೆಯಾದದ್ದು

2) ತಮಸಃ ಪರಮೋ ಧಾತಾ ಶಂಖಚಕ್ರ ಗದಾಧರಃ ।
ಶ್ರೀವತ್ಸ ವಕ್ಷಾ ನಿತ್ಯಶ್ರೀಃ ಅಜಯ್ಯಶ್ಶಾಶ್ವತೋ ಧ್ರುವಃ ॥
ಶಂಖ ಚಕ್ರ ಗದಾಧಾರಿಯಾದ ಧಾತಾ-ಪರಮಾತ್ಮನು ತಮಶ್ಶಬ್ದವಾಚ್ಯವಾದ ಪ್ರಕೃತಿಗೆ, ಪರಮಃ - ಮೇಲಾದ ದೇಶದಲ್ಲಿರು ವವನು. ತಮಸಃ ಪರಸ್ತಾತ್, ಎಂಬ ಶ್ರುತಿವಾಕ್ಯಕ್ಕೆ ಏಕಕಂಠವಾದ ವಚನವಿದು

ಪು. ತಿ. ನೋಃ

ತ್ರಿಗುಣ ದ್ರವ್ಯಸ್ಯ ಪ್ರವೃತ್ತಿಭೇದಃ

ತ್ರಿಗುಣದ್ರವ್ಯತ್ತುಕ್ಕು ಪ್ರವೃತ್ತಿಭೇದಮ್, ಬದ್ಧಚೇತನರುಡೈಯ ಭೋಗಾಪವರ್ಗಙ್ಗಳುಕ್ಕುಮ್, ಈಶ್ವರನುಡೈಯ ಲೀಲಾರಸತ್ತುಕ್ಕುಮಾಹ ಸಮಮಾಯುಮಹವುಮ್ ವಿಷಮಮಾಹವುಮ್, ಪರಿಣಾಮ ಸನ್ತತಿಯೈಯುಡೈತ್ತಾಯ್, ದೇಹೇನ್ದ್ರಿಯಾದಿರೂಪತ್ತಾಲೇ ಅನ್ವೋ ವ್ಯಾಪಾರಂಗಳೈಯುಮ್ ಪಣ್ಣುಹೈ. ಇದು ರಜಸ್ತಮಸ್ಸುಕ್ಕಳೈಯಿಟ್ಟು ಬದ್ಧರ್ಕ್ಕು ತತ್ವಂಗಳಿಲುಣ್ಮೈಯೈ ಮರೈತ್ತು ವಿಪರೀತಜ್ಞಾನತ್ತೈಯುಣ್ಡಾಕ್ಕುಹಿರದು ಭೋಗಾರ್ಥಮಾಹ. ಇದುತಾನೇ ಯಪವರ್ಗಾರ್ಥಮಾಹ ಸತ್ವವಿವೃದ್ಧಿಯಾಲೇ ತತ್ವಙ್ಗಳೈಯ ಥಾವತ್ಪ್ರಕಾಶಿಪ್ಪಿಕ್ಕಿರದು. ಇವೈಯೆಲ್ಲಾ ಮೀಶ್ವರನುಕ್ಕು ಲೀಲಾರಸಾವಹಮಾಯಿರುಕ್ಕುಮ್.

ಇತ್ಯಾದಿ ವಚನಗಳನ್ನು ಅಪಲಪಿಸಲು ಆಗವುದಿಲ್ಲ, ಅನ್ಯಥಾನಯನಮಾಡಲೂ ಆಗದು. ಆದ್ದರಿಂದ ಈ ವಚನಗಳಿಗೆ ಬಾಧಕವಿಲ್ಲದೆ, "ಅನಂತಸ್ಯನತಸ್ಯಾಂತಃ," ಎಂಬ ವಚನಗಳಿಗೆ, ಶುದ್ಧಸತ್ವದ್ರವ್ಯಾತ್ಮಕವಾದ ಶ್ರೀ ವೈಕುಂಠಕ್ಕೆ ಕೀಳ್ಭಾಗದಲ್ಲಿ ಪ್ರಕೃತಿಗೆ ಅನಂತ್ಯವನ್ನು ಹೇಳಿ ಅನ್ಯಥಾನಯನ ಮಾಡಲು ಸಾಧ್ಯ ಎಂಬುದು ತಾತ್ಪರ್ಯ

ರಜಸ್ತಮೋ ಗುಣವಿಲ್ಲದ ಪ್ರಕೃತಿಯ ಕೇವಲ ಸತ್ತ್ವಗುಣಭಾಗವೇ ಶುದ್ಧಸತ್ವವೆಂದು ಹೇಳಿ, ಶುದ್ಧ ಸತ್ವವನ್ನು ಪ್ರಕೃತಿಯ ಏಕದೇಶವೆಂದು ಹೇಳಿದರೇನು–ಎಂಬ ಚೋದ್ಯಕ್ಕೂ ಸಮಾಧಾನವೇನೆಂದರೆ, ಶ್ರೀ ವೈಕುಂಠವು ನಿತ್ಯ, ಅಸ್ಥಿರವ ಸೂರಿಗಳೂ ನಿತ್ಯರು, ಶುದ್ಧ ಸತ್ವವು ಮಂಟಪ ಗೋಪುರಾದಿ ರೂಪವಲ್ಲಿಯೂ ಭಗವಂತನ ಶರೀರ ರೂಪದಲ್ಲಿಯೂ, ಪರಿಣಾಮವನ್ನು ಹೊಂದಿ ನಿತ್ಯವಾಗಿದೆ. ಅವುಗಳಿಗೆ ಸತತ ಪರಿಣಾಮವಿಲ್ಲ ಪ್ರಕೃತಿಯು ಸತತ ಪರಿಣಾಮಶಾಲಿ ಸತತವಾದ ವಿಕಾರವನ್ನು ಹೊಂದತಕ್ಕದ್ದು. **"ನಿತ್ಯಾ ಸತತ ವಿಕ್ರಿಯಾ,"** ಎಂಬುದು ಪ್ರಮಾಣವಚನ, ಆದ್ದರಿಂದ ಸತತ ವಿಕಾರಶಾಲಿಯಾದ ಪ್ರಕೃತಿಯ, ಏಕದೇಶವೇ ನತತವಿಕಾರವಿಲ್ಲದ ಶುದ್ಧ ಸತ್ವವೆಂದು ಹೇಳುವುದು ಸರಿಯಲ್ಲ ಆದ್ದರಿಂದ ಶ್ರೀ ವೈಕುಂಠಲೋಕವು ಪ್ರಾಕೃತ ಲೋಕಕ್ಕಿಂತ ಬೇರೆ ಪ್ರಾಕೃತ ಲೋಕಗಳಿಗೆಲ್ಲಾ ಮೇಲೆ ನಿತ್ಯವಾಗಿರುವ ಲೋಕವೆಂಬುದು ಅಪಲಪಿಸಲಾಗದ ಸಿದ್ಧಾಂತ.

ತ್ರಿಗುಣ ದ್ರವ್ಯಕ್ಕೆ ಪ್ರವೃತ್ತಿಭೇದ

ಅನಂತರ ತ್ರಿಗುಣ ದ್ರವ್ಯಕ್ಕೆ ಪ್ರವೃತ್ತಿಭೇದವನ್ನು **ತ್ರಿಗುಣದ್ರವ್ಯತ್ತುಕ್ಕು** ಎಂದಾರಂಭಿಸಿ ತಿಳಿಯಪಡಿಸುತ್ತಾರೆ ಅದಾಗಿ ತ್ರಿಗುಣಾತ್ಮಕವಾದ ಪ್ರಕೃತಿ ದ್ರವ್ಯಕ್ಕೆ ಪ್ರವೃತ್ತಿಭೇದವೇನೆಂದರೆ ಬದ್ಧ ಜೀವಿಗಳ ಸಾಂಸಾರಿಕ ಭೋಗ ಮತ್ತು ಸಂಸಾರ ನಿವೃತ್ತಿ ಪೂರ್ವಕಮೋಕ್ಷ (ಅಪವರ್ಗ)ವನ್ನು ಪಡೆಯುವುದಕ್ಕೆ ಸಾಧಕವಾಗಿ, ಹಾಗೆಯೇ **ಈಶ್ವರನುಡೈಯ** ಇತ್ಯಾದಿ ಭಗವಂತನಿಗೆ ಲೀಲಾರಸವನ್ನುಂಟು ಮಾಡಲು ಮಹಾಪ್ರಳಯದಲ್ಲಿ ಸತ್ವರಜಸ್ತಮಸ್ಸುಗಳು ಸಮವಾಗಿರುವ ಪ್ರಕೃತ್ಯವಸ್ಥೆಯಿಂದ ಕೂಡಿಯೂ, ಅನಂತರ ಸೃಷ್ಟಿಕಾಲದಲ್ಲಿ ಸತ್ವರಜಸ್ತಮೋಗುಣಗಳು ವಿಷಮವಾಗಿರುವ ಪ್ರಕೃತ್ಯವಸ್ಥೆಯಿಂದ ಕೂಡಿಯೂ, ಪರಿಣಾಮ ಪರಂಪರೆಯನ್ನು ಹೊಂದಿ, ದೇಹೇಂದ್ರಿಯಾದಿ ರೂಪವನ್ನು ಪಡೆದು ಅದಕ್ಕನುಗುಣವಾದ ವ್ಯಾಪಾರಗಳನ್ನು ಮಾಡುವುದು. ಒಂದೇ ಪ್ರಕೃತಿತತ್ವವು ಭೋಗಾಪವರ್ಗಸಾಧಕವಾಗಲು

---

3) ಅಪ್ರಾಕೃತಂ ಸುರೈರ್ವಂದ್ಯ ಮಯುತಾರ್ಕ ಸಮಪ್ರಭಮ್ । (ಬೃ·ತಂ ತಾ 2-21)
ಪ್ರಕೃಷ್ಟಸತ್ವರಾಶಿಂ ತಂ ಕದಾದ್ರಕ್ಷ್ಯಾಮಿ ಚಕ್ಷುಷಾ ॥
ಸುರೈರ್ವಂದ್ಯಂ - ನಿತ್ಯಸೂರಿಗಳಿಂದ ಪೂಜಿಸಲ್ಪಡುವುದು, ಅಯುತಾರ್ಕ ಸಮಪ್ರಭಂ - ಕೋಟಿ ಸೂರ್ಯ ಸಮವಾದ ಕಾಂತಿಯಿಂದ ಕೂಡಿರುವುದೂ, ಅಪ್ರಾಕೃತಂ - ಪ್ರಾಕೃತವಾದ ಲೋಕಕ್ಕಿಂತಲೂ ಬೇರೆಯಾದದ್ದೂ, ಪ್ರಕೃಷ್ಟ ಸತ್ವರಾಶಿಂತಂ – ಉತ್ಕಟ ಸತ್ವಗುಣ ಪೂರಿತವಾದ ಶುದ್ಧ ಸತ್ವಮಯವಾದ ಆ ಶ್ರೀ ವೈಕುಂಠಲೋಕವನ್ನು ಯಾವಾಗ ಕಣ್ಣಿಂದ ನೋಡುತ್ತೇನೆ

4) ಮಹಾಂತಂಚ ಸಮಾವೃತ್ಯ ಪ್ರಧಾನಂ ಸಮುಪಸ್ಥಿತಮ್ ।
ಅನಂತಸ್ಯನತಸ್ಯಾಂತಃ ಸಂಖ್ಯಾನಂಚಾಪಿ ವಿದ್ಯತೇ ॥

5) ತದನಂತ ಮಸಂಖ್ಯಾತ ಪ್ರಮಾಣಂ ಚಾಪಿ ವೈಯತಃ । (ವಿ·ಪು 2-7, 25 27)
ಹೇತುಭೂತ ಮಶೇಷಸ್ಯ ಪ್ರಕೃತಿಸ್ಸಾಪರಾಮುನೇ ॥

ಶುದ್ಧ ಸತ್ವತ್ತಿನ್ ಸ್ವರೂಪಸ್ಥಿತಿಪ್ರವೃತ್ತಿಹಳ್

ಶುದ್ಧ ಸತ್ವತ್ತುಕ್ಕು ಸ್ವರೂಪಭೇದಮ್ ರಜಸ್ತಮಸ್ಸುಕ್ಕಳೋಡು ಕಲಶಾದ ಸತ್ವಗುಣಾಶ್ರಯ ಮಾಯಿರುಕ್ಕೈ. ಇದಿಲ್ ಸ್ಥಿತಿ ಭೇದಮ್ ನಿತ್ಯಮಾನ ಮಂಟಪಗೋಪುರಾದಿಹಳಿಲುಮ್, ಈಶ್ವರನುಡೈಯುವುಮ್ ನಿತ್ಯರುಡೈಯುವುಮ್ ವಿಗ್ರಹ ವಿಶೇಷಙ್ಗಳಿಲುಮ್, ನಿತ್ಯಮಾಯಿರುಕ್ಕುಮ್. ನಿತ್ಯರುಡೈಯುವುಮ್, ಮುಕ್ತರುಡೈಯುವುಮ್, ಈಶ್ವರನುಡೈಯುವುಮ್, ಅನಿತ್ಯೇಚ್ಛೈಯಾಲೇ ವನ್ದ ವಿಗ್ರಹಾದಿಹಳಿಲ್ ಅನಿತ್ಯಮಾಯಿರುಕ್ಕುಮ್. ಇದಿಲ್ ಪ್ರವೃತ್ತಿ ಭೇದಮ್–ಇವರ್ಗಳುಡೈಯ ಇಚ್ಛೈಕ್ಕೀಡಾಹ ಪರಿಣಾಮಾದಿಹಳಾಲೇ ಶೇಷಿಕ್ಕು ಭೋಗೋಪಕರಣ ಮಾಯುಮ್, ಶೇಷಭೂತನುಕ್ಕು ಕೈಙ್ಕರ್ಯೋಪಕರಣ ಮಾಯುಮ್ ನಿಱ್ಕೈ.

ಸಾಧ್ಯವೇ ಎಂಬುದನ್ನು, **ಇದು ರಜಸ್ತಮಸ್ಸುಕ್ಕಳೈಯಿಟ್ಟು** ಇತ್ಯಾದಿಯಾಗಿ ವಿವರಿಸುತ್ತಾರೆ. ಈ ಪ್ರಕೃತಿಯು ಬದ್ಧ ಜೀವಿಗಳಿಗೆ ರಜೋಗುಣ ತಮೋಗುಣಗಳ ಉದ್ರೇಕದಿಂದ ತತ್ವಗಳ ನಿಜಸ್ವರೂಪವನ್ನು ಮರಸಿ ದೇಹಾತ್ಮಭ್ರಮ ಮತ್ತು ಸ್ವತಂತ್ರಾತ್ಮಭ್ರಮ ರೂಪ ವಿಪರೀತ ಜ್ಞಾನವನ್ನುಂಟುಮಾಡಿ ಪ್ರಾಕೃತ ಸುಖಗಳಲ್ಲಿ ಸಂಗವನ್ನುಂಟುಮಾಡಿ ಆ ಪ್ರಾಕೃತ ಸುಖಗಳನ್ನು ಭೋಗಾರ್ಥಕ್ಕಾಗಿ ಅನುಭವಿಸಲು ಅನುಗುಣವಾದ ಪ್ರವೃತ್ತಿಯನ್ನುಂಟು ಮಾಡುತ್ತದೆ. ಇದೇ ಪ್ರಕೃತಿಯು ಸತ್ತ್ವಗುಣವನ್ನು ಹೆಚ್ಚಿಸಿ, "ಸತ್ವಾತ್ ಸಂಜಾಯತೇ ಜ್ಞಾನಂ" ಎಂಬ ರೀತಿಯಲ್ಲಿ ತತ್ವಗಳ ಯಾಥಾತ್ಮ್ಯ (ನಿಜವಾದ) ಜ್ಞಾನವನ್ನುಂಟುಮಾಡಿ, ಮೋಕ್ಷವನ್ನು ಪಡೆಯಲು ಸಾಧಕವಾಗುತ್ತದೆ. ಹೀಗೆ ಜೀವನ ಭೋಗಾರ್ಥಕ್ಕಾಗಿಯೂ, ಮೋಕ್ಷಾರ್ಥಕ್ಕಾಗಿಯೂ, ಪ್ರಕೃತಿ ಪರಿಣಾಮಾತ್ಮಕವಾದ ಸರ್ವವಸ್ತುಗಳೂ ಈಶ್ವರನಿಗ (ಜಗದ್ವ್ಯಾಪಾರಾಸಕ್ತನಾದ ಲಕ್ಷ್ಮೀಪತಿಗೆ) ಲೀಲಾರಸವನ್ನುಂಟು ಮಾಡುವವುಗಳಾಗಿರುತ್ತವೆ

ಶುದ್ಧ ಸತ್ವದ್ರವ್ಯದ ಸ್ವರೂಪಸ್ಥಿತಿ ಪ್ರವೃತ್ತಿ ಭೇದ.

ಶುದ್ಧ ಸತ್ವದ್ರವ್ಯಕ್ಕೆ ಸ್ವರೂಪಭೇದವು ರಜೋಗುಣ ತಮೋಗುಣಗಳಿಂದ ಕೂಡಿಲ್ಲದ ಕೇವಲ ಸತ್ವಗುಣಕ್ಕೆ ಆಶ್ರಯವಾಗಿರುವುದು ಇದರ ಸ್ಥಿತಿಭೇದವು, ಶ್ರೀ ವೈಕುಂಠಲೋಕದಲ್ಲಿರುವ, ನಿತ್ಯವಾದ ಮಂಟಪ ಗೋಪುರಾದಿಗಳಲ್ಲಿಯೂ, ಈಶ್ವರ **ನುಡೈಯುವುಂ**–ಲಕ್ಷ್ಮೀ ವಿಶಿಷ್ಟನಾದ ಭಗವಂತನ ಮತ್ತು ನಿತ್ಯಸೂರಿಗಳ ವಿಗ್ರಹ ವಿಶೇಷಗಳಲ್ಲಿಯೂ ನಿತ್ಯವಾಗಿರುವುದು ಅಭಾಗಿ ಭಗವಂತನು ಬಿಜಯ ಮಾಡಿಸಿರುವ ದಿವ್ಯಶ್ರೀ ಮಣಿ ಮಂಟಪವೂ (ತಿರುಮಾಮಣಿ ಮಂಟಪ) ಗೋಪುರಗಳೂ ನಿತ್ಯಗಳು ಆದಿಶೇಷನ ಮಡಿಯಲ್ಲಿ, "ಸವ್ಯಂ ಪಾದಂ ಪ್ರಸಾರ್ಯ", ಎಂಬುವ ರೀತಿಯಲ್ಲಿರುವ ಪರವಾಸುದೇವನ ವಿಗ್ರಹವೂ "ನಿತ್ಯಾಲಿಂಗಾ ಸ್ವಭಾವ ಸಂಸಿದ್ಧಿಃ' ಎಂಬಂತೆ ನಿತ್ಯವಾಗಿಯೂ, ಅನಂತಗರುಡ ವಿಷ್ವಕ್ಸೇನ ದ್ವಾರಪಾಲಕರ ವಿಗ್ರಹಗಳೂ ನಿತ್ಯವಾಗಿಯೂ ಇರುತ್ತವೆ. ಇವೆಲ್ಲಾ ಶುದ್ಧ ಸತ್ವದ್ರವ್ಯದ ಅವಸ್ಥಾಭೇಧ (ಸ್ಥಿತಿಭೇದ)ಗಳು ನಿತ್ಯರ, ಮುಕ್ತರ ಮತ್ತು ಈಶ್ವರನ, ಅನಿತ್ಯೇಚ್ಛೆಯಿಂದ ಸಿದ್ಧವಾದ ವಿಗ್ರಹಾದಿಗಳಲ್ಲಿ, ಈ ಶುದ್ಧ ಸತ್ವ ದ್ರವ್ಯವು ಅನಿತ್ಯವಾಗಿರುತ್ತದೆ ಇವುಗಳ ಪ್ರವೃತ್ತಿಭೇದವು, ಈಶ್ವರ ಮತ್ತು ನಿತ್ಯಮುಕ್ತರ ಇಚ್ಛೆಗನುಗುಣವಾಗಿ ಪರಿಣಾಮವನ್ನು ಹೊಂದಿ ಶೇಷಿಯಾದ ಭಗವಂತನಿಗೆ ಭೋಗೋಪಕರಣವಾಗಿಯೂ ಶೇಷಭೂತರಾದ ನಿತ್ಯಮುಕ್ತರುಗಳಿಗೆ ಕೈಂಕರ್ಯ ಮಾಡಲು ಉಪಕರಣಗಳಾಗಿಯೂ, ಇರುವುದೇ ಅಂದರೆ ಶೇಷಭೂತನು ತಾಮರೆ, ಮಲ್ಲಿಗೆ, ಜಾಜಿ ಮೊದಲಾದ ಹೂವುಗಳಿಂದ ಭಗವಂತನನ್ನು ಪೂಜಿಸಲು ಇಚ್ಛಿಸಿದರೆ ಪನಸ, ಆಮ್ರ, ಕದಳೀ ಫಲಗಳನ್ನು ಸಮರ್ಪಿಸಲು ಇಚ್ಛಿಸಿದರೆ, ಹಾಗೆಯೇ ಚಂದನ ಕರ್ಪೂರಾದಿಗಳನ್ನು ಸಮರ್ಪಿಸಲು ಇಚ್ಛಿಸಿದರೆ, ಅವನ ಇಚ್ಛಾನುಗುಣವಾಗಿ ಶುದ್ಧ ಸತ್ವದ್ರವ್ಯವು ಪರಿಣಾಮವನ್ನು ಹೊಂದುವುದೇ ಪ್ರವೃತ್ತಿಭೇದ.

ಕಾಲ ನಿರೂಪಣಮ್

ಕಾಲತ್ತುಕ್ಕು ಸ್ವರೂಪ ಭೇದಮ್ ಜಡಮಾಯ್ ವಿಭುವಾಯಿರುಕ್ಕೈ. ಇದಿನ್ ಸ್ಥಿತಿ, ಕಾಲಾವಚ್ಛೇದ ಮಿಲ್ಲಾಮೈಯಾಲೇ ನಿತ್ಯೈಯಾಯಿರುಕ್ಕುಮ್. ಇದಿನ್ ಪ್ರವೃತ್ತಿಭೇದಮ್ ಕಲಾಕಾಷ್ಠಾದಿ ವಿಭಾಗತ್ತಾಲೇ ಸೃಷ್ಟ್ಯಾದಿಹಳುಕ್ಕು ಉಪಕರಣ ಮಾಯಿರುಕ್ಕಿರ ಪಡಿಯಿಲೇ ಕಣ್ಡುಕೊಳ್ವದು.

ದ್ರವ್ಯ ನಿತ್ಯತ್ವ ನಿರೂಪಣಮ್

ಇದ್ದ್ರವ್ಯಙ್ಗಳೆಲ್ಲಾಂ ಸ್ವರೂಪೇಣ, ನಿತ್ಯಙ್ಗಳಾಯಿರುಕ್ಕುಮ್. ನಾಮಾನ್ತರ ಭಜನಾರ್ಹಾವಸ್ಥಾ ವಿಶೇಷ ವಿಶಿಷ್ಟತಯೈಯಿಟ್ಟು ಶಿಲವತ್ತೈ ಅನಿತ್ಯಙ್ಗಳೆನ್ಹಿರದು. ಅಗ್ನಿನ್ದದೋಡು ಸಜಾತೀಯಙ್ಗಳಾನ ಅವಸ್ಥಾನ್ತರಙ್ಗಳ್ ಮೇಲುಮ್ ಮುಟ್ರುಕ್ಕವರುಹೈಯಾಲೇ ಪ್ರವಾಹನಿತ್ಯಙ್ಗಳೆನ್ರು ಶೊಲ್ಲುಹಿರದು.

ಕಾಲಕ್ಕೆ ಸ್ವರೂಪಸ್ಥಿತಿ ಪ್ರವೃತ್ತಿಭೇದಗಳು

(**ಕಾಲತ್ತುಕ್ಕು**) ಇತ್ಯಾದಿ–ಕಾಲಕ್ಕೆ ಸ್ವರೂಪಭೇದವು ಜಡವಾಗಿ ವಿಭುವಾಗಿರುವುದು ಜಡತ್ವಮಾತ್ರ ಹೇಳಿದರೆ ತ್ರಿಗುಣ ದ್ರವ್ಯಕ್ಕೆ ಅತಿವ್ಯಾಪ್ತಿ ವಿಭುತ್ವ ಮಾತ್ರ ಹೇಳಿದರೆ ಈಶ್ವರನಲ್ಲಿ ಅತಿವ್ಯಾಪ್ತಿ, ಆದ್ದರಿಂದ ಜಡವಾಗಿ ವಿಭುವಾಗಿರುವ ದ್ರವ್ಯ, ಕಾಲವೆಂದು ನಿರೂಪಿಸಲ್ಪಟ್ಟಿತು ಈ ಕಾಲ ದ್ರವ್ಯದ ಸ್ಥಿತಿಯು, ಕಾಲಕ್ಕೆ ಅವಚ್ಛೇದವಿಲ್ಲದಿರುವುದರಿಂದ ನಿತ್ಯವಾಗಿರುವುದೇ **ಪ್ರವೃತ್ತಿ ಭೇದಂ**— ಈ ಕಾಲ ದ್ರವ್ಯವು ಕಲಾಕಾಷ್ಠಾದಿ ವಿಭಾಗದಿಂದ ಸೃಷ್ಟ್ಯಾದಿಗಳಿಗೆ ಉಪಕರಣವಾಗಿರುವ ರೀತಿಯನ್ನು ಪುರಾಣಾದಿಗಳಿಂದ ತಿಳಿದುಕೊಳ್ಳುವುದು ನಿತ್ಯ ನೈಮಿತ್ತಿಕ ಪ್ರಾಕೃತ ಸೃಷ್ಟಿಗಳಲ್ಲಿ ಕಾಲಕ್ಕೆ ಉಪಕರಣತ್ವವು ಪುರಾಣಾದಿಗಳಲ್ಲಿ ಹೇಳಿದೆ ಸಕಲ ಕಾರ್ಯಗಳೂ ಕಾಲಾಧೀನವಾಗಿವೆಯೆಂಬುದು **ತಾತ್ಪರ್ಯ**. ಕಾಲವು ಕ್ಷಣಪರಿಣಾಮಿಯು. ಕ್ಷಣಗಳಿಂದ" (ಸೆಕೆಂಡ್, ಮಿನಿಟ್) ಗುಣಿಸಲ್ಪಟ್ಟು, ಪರಾದಿಕಾಲ ಪರ್ಯಂತವಾದ ಅಧಿಕಕಾಲಗಳಿಗೆ ವ್ಯವಹಾರವು ಉಂಟಾಗುತ್ತದೆ. ಕ್ಷಣಾದಿವಿಭಾಗವು ಔಪಾಧಿಕವೆಂದು ಹೇಳುವುದು ಆಚಾರ್ಯರಿಗೆ ಅಭಿಮತವಲ್ಲವೆಂಬುದು ನ್ಯಾಯಸಿದ್ಧಾಂಜನಾದಿ ಗ್ರಂಥಗಳಿಂದ ಸುವ್ಯಕ್ತ

ದ್ರವ್ಯ ನಿತ್ಯತ್ವ ನಿರೂಪಣೆ

ಇದ್ರವ್ಯಂಗಳೆಲ್ಲಾಂ, ಇತ್ಯಾದಿ— ಈ ದ್ರವ್ಯಗಳೆಲ್ಲಾ ಸ್ವರೂಪದಿಂದ ನಿತ್ಯವಾಗಿರುತ್ತವೆ ಹಾಗಾದರೆ ಒಂದು ಪದಾರ್ಥವು ನಾಶವನ್ನು ಹೊಂದಿತು. ಆ ಪದಾರ್ಥವು ಅನಿತ್ಯವು. ಎಂದು ಹೇಳುವ ಮಾತಿಗೆ ಏನರ್ಥವೆಂದರೆ, **ನಾಮಾಂತರಭಜನಾರ್ಹಾವಸ್ಥೆ**" ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ **ನಾಮಾಂತರಭಜನಾರ್ಹಾವಸ್ಥೆ** ಬೇರೆ ಹೆಸರನ್ನು ಪಡೆಯಲು ಯೋಗ್ಯವಾದ ಅವಸ್ಥೆ–ಅಂದರೆ ಮಡಕೆಯು ಒಡೆದುಹೋದರೆ, ಕಪಾಲ (ಹೋಳು) ಎಂಬ ಹೆಸರನ್ನು ಪಡೆಯುತ್ತದೆ ಮಡಕೆಯು ನಷ್ಟವಾಯಿತು ಹೋಳು ಜನಿಸಿತು ಮಡಕೆ ದ್ರವ್ಯವು ಹೋಳ ದ್ರವ್ಯವಾದ ಆ ಬೇರೆ ದಶೆಯನ್ನು ಹೊಂದಿತು ಅಷ್ಟೇವಿನಹ ದ್ರವ್ಯಕ್ಕೆ ನಾಶವಿಲ್ಲ ಆದ್ದರಿಂದ ಬೇರೆ ಹೆಸರನ್ನು ಪಡೆಯುವ ಅವಸ್ಥಾ ವಿಶೇಷದಿಂದ ಕೂಡಿರುವುದನ್ನು ಇಟ್ಟುಕೊಂಡು ಕೆಲವು ಪದಾರ್ಥಗಳನ್ನು ಅನಿತ್ಯವಾದುವು ಎಂದು ಹೇಳುತ್ತೇವೆ. ಆ **ಅವಸ್ಥಾ** ವಿಶೇಷಗಳು **ಸ**ಜಾತೀಯ ಮತ್ತು ವಿಜಾತೀಯ. **ಅಗ್ನಿಂದದೋಡು** ಇತ್ಯಾದಿ ನಷ್ಟವಾದ ಪದಾರ್ಥಕ್ಕೆ ಸಜಾತೀಯವಾದ ಅವಸ್ಥಾಂತರಗಳು ಮುಂದೆಯೂ ಪೂರ್ಣವಾಗಿ ಬರುವುದಾದರೆ, ಅದನ್ನು ಪ್ರವಾಹ ನಿತ್ಯವೆಂದು ಕರೆಯುತ್ತೇವೆ ನಷ್ಟವಾದ ಪದಾರ್ಥಕ್ಕೆ ವಿಜಾತೀಯವಾದ ಅವಸ್ಥೆಯು ಮೇಲೆ ಹೇಳಿದಂತೆ "ನಾಮಾಂತರ ಭಜನಾರ್ಹಾವಸ್ಥೆ". ಇದು ಪೂರ್ವಾವಸ್ಥೆಯಿಂದ **ಕೂ**ಡಿದ ಪದಾರ್ಥಕ್ಕೆ ಅನಿತ್ಯತ್ವ ವ್ಯವಹಾರಕ್ಕೆ ಹೇತುವಾಗುತ್ತದೆ

ದೀಪ ಜ್ವಾಲೆಯು ಪ್ರತಿಕ್ಷಣವೂ ಉತ್ಪನ್ನವಾಗಿ ನಷ್ಟವಾಗುತ್ತದೆ ಒಡನೆಯೇ ತತ್ಸಜಾತೀಯವಾದ ಬೇರೆ ದೀಪ ಜ್ವಾಲೆಯು ಉಂಟಾಗುತ್ತದೆ. ಕಾರಣ ಎಣ್ಣೆ ಮತ್ತು ಬತ್ತಿಗಳು ಮುಗಿದು ಹೋಗುವುದರಿಂದ ಬೇರ

ಸ್ವಾಧೀನ ಶಬ್ದಾರ್ಥನಿರೂಪಣಮ್

ಇಪ್ಪದಾರ್ಥಙ್ಗಳೆಲ್ಲಾ ವಟ್ರಿನುಡೈಯ ಸ್ವರೂಪಸ್ಥಿತಿ ಪ್ರವೃತ್ತಿ ಭೇದಙ್ಗಳ್ ಈಶ್ವರನುಕ್ಕು ಸ್ವಾಧೀನಙ್ಗಳಾಯಿರುಕ್ಕೈ ಯಾವದು? ಈಶ್ವರ ಸತ್ತೈಯೈಯುಮ್ ಈಶ್ವರೇಚ್ಛೈಯೈಯುಮ್ ಒೞಿಯ ಇವೈಗಳುಕ್ಕು ಸತ್ತಾದಿಹಳ್ ಕೂಡಾದೊೞಿಹೈ. ಅಹೈಯಾಲ್ ಸಮಸ್ತ ವಸ್ತುಹಳುಕ್ಕುಮ್ ಸ್ವಭಾವ ಸಿದ್ಧಾನುಕೂಲ್ಯಂ ಈಶ್ವರೇಚ್ಛಾಯತ್ತಮ್.

ಸರ್ವವಸ್ತೂನಾಂ ಆನುಕೂಲ್ಯೈಕ ಸ್ವಭಾವತ್ವಮ್

ಇತ್ತಾಲೇ ಈಶ್ವರನುಕ್ಕುಮ್, ನಿತ್ಯರುಕ್ಕುಮ್, ಮುಕ್ತರುಕ್ಕುಮ್, ಸರ್ವಮುಮ್ ಅನುಕೂಲಮಾಯಿರುಕ್ಕುಮ್. ಬದ್ಧರುಕ್ಕು ಕರ್ಮರೂಪಮಾಹ ಪುರುಷಭೇದತ್ತಾಲುಮ್, ಕಾಲಭೇದತ್ತಾಲುಮ್, ಇವತ್ತಿಲ್ ಪ್ರಾತಿಕೂಲ್ಯಙ್ಗಳುಮ್, ಆನುಕೂಲ್ಯಙ್ಗಳುಮ್, ನಡವಾನಿರ್ಕುಮ್.

ಇಬ್ಬದ್ಧರ್ಗಳುಕ್ಕುಮ್ ಸ್ವಾತ್ಮಸ್ವರೂಪಂ ಸರ್ವದಾ ಅನುಕೂಲಮಾಹ ಈಶ್ವರೇಚ್ಛಾಸಿದ್ಧಮ್. ಇಪ್ಪಡಿಯನುಕೂಲಮಾನ ಆತ್ಮಸ್ವರೂಪತ್ತೋಡೇ ಏಕತ್ವ ಭ್ರಮತ್ತಾಲುಮ್ ಕರ್ಮವಶತ್ತಾಲುಮ್ ನಿರೇ ಹೇಯಮಾನ ಶರೀರಂ ಜ್ಞಾನಹೀನರುಕ್ಕು ಅನುಕೂಲಮಾಯ್ ತೋತ್ತುಹಿರದು. ಇವತ್ತುಕ್ಕು ಕರ್ಮೋಪಾಧಿಕಮಾನ ಪ್ರತಿಕೂಲರೂಪತ್ತಾಲೇ ಮುಮುಕ್ಷುವೈಪ್ಪತ್ತ ತ್ಯಾಜ್ಯತ್ವಮ್; ಸ್ವಾಭಾವಿಕಮಾನ ಅನುಕೂಲ ಸ್ವರೂಪತ್ತಾಲೇ ಮುಕ್ತನೈಪ್ಪತ್ತ ಪವಿತ್ರಮುಕ್ಕ ಉಪಾದೇಯತ್ವಮ್. ಅಹಙ್ಕಾರ ಮಮಕಾರ ಯುಕ್ತನಾಯ್ಕೊಂಡು ತನಕ್ಕೆನ್ರು ಸ್ವೀಕರಿಕ್ಕುಮವೈಯೆಲ್ಲಾಮ್ ಪ್ರತಿಕೂಲಙ್ಗಳಾಮ್. ಸ್ವರೂಪ ಜ್ಞಾನಮ್ ಪಿರನ್ದು ಸ್ವವಿಶೇಷಮೆನ್ರು ಕಾಣಪ್ಪುಕ್ಕಾಲ್ ಯೆಲ್ಲಾಮ್ ಅನುಕೂಲಮ್. ಇವ್ವರ್ಥಂ ಪರಿಪೂರ್ಣಬ್ರಹ್ಮಾನುಭವಮ್ ಶೊಲ್ಲುಮಿಡತ್ತಿಲೇ ಪರಕ್ಕಚ್ಚೊಲ್ಲಕ್ಕಡವೋಮ್.

ಬೇರೆ ಜ್ವಾಲೆಗಳನ್ನು ಒಪ್ಪಬೇಕು. ಜ್ವಾಲೈಕ್ಯದಿಂದ ದೀಪಜ್ವಾಲೆಯು ಪ್ರವಾಹನಿತ್ಯವೆಂದು ವ್ಯವಹರಿಸಲ್ಪಡುತ್ತದೆ. ನದಿಯಲ್ಲಿ ಪ್ರವಾಹವು ಬಂದು ನೀರು ಹರಿದು ಹೋಗುತ್ತಿರುತ್ತದೆ. ತತ್ಸಜಾತೀಯವಾದ ಪ್ರವಾಹ–ನೀರು ಬರುತ್ತಿರುತ್ತದೆ ಇದು ಪ್ರವಾಹ ನಿತ್ಯವೆಂದು ಕರೆಯಲ್ಪಡುತ್ತದೆ

ವಿಶಿಷ್ಟಾದ್ವೈತಿಗಳಾದ ನಾವು ಭಾವಾಂತರಾಭಾವವಾದಿಗಳು ಒಂದು ವಸ್ತುವಿನ ಅಂದರೆ ಘಟದ ಅಭಾವವು ಇಲ್ಲದಿರುವುದು,) ಭಾವಾಂತರ-ಕಪಾಲ,ಹೋಳು ಎಂಬ ಬೇರ ವಸ್ತುವಾಗಿರುವುದೆಂಬ ವೇ ಸಿದ್ಧಾಂತ ಇದು ಪೂರ್ವ ವಸ್ತುವಿನ ನಾಶ ಅನಂತರ ವಸ್ತುವಿನ ಉತ್ಪತ್ತಿ ಆದ್ದರಿಂದ **ಸ್ವರೂಪೇಣ ನಿತ್ಯಂಗಳ್** ಎಂಬ ಶ್ರೀಸೂಕ್ತಿಗೆ ತ್ರಿಗುಣಾತ್ಮಕ ಪ್ರಕೃತಿತ್ವ, ಕಾಲತ್ವ, ಜ್ಞಾನತ್ವ ರೂಪದಿಂದ, ಪ್ರಕೃತಿ, ಕಾಲ ಶುದ್ಧ ಸತ್ವಗಳು ನಿತ್ಯವೆಂದರ್ಥ

ಸ್ವಾಧೀನ ಶಬ್ದಾರ್ಥ–ಸರ್ವವಸ್ತುಗಳ ಸ್ವರೂಪ ಸ್ಥಿತಿ ಪ್ರವೃತ್ತಿಗಳು ಈಶ್ವರೇಚ್ಛಾಧೀನ

"**ಸ್ವಾ**ಧೀನ ತ್ರಿವಿಧ ಚೇತನಾಚೇತನ ಸ್ವರೂಪಸ್ಥಿತಿ ಪ್ರವೃತ್ತಿ ಭೇದಂ" ಎಂಬ ಚೂರ್ಣಿಕೆಯಲ್ಲಿ, "ತ್ರಿವಿಧ ಚೇತನಾ ಚೇತನ",ಇತ್ಯಾದಿ ನಿರೂಪಣೆಯನ್ನು ಮಾಡಿಯಾಯಿತು ಇನ್ನು ಮುಂದೆ **ಸ್ವಾಧೀನ** ಶಬ್ದಾರ್ಥವನ್ನು **ಇಪ್ಪದಾರ್ಥಂಗಳೆಲ್ಲಾವಟ್ರಿನುಡೈಯವುಂ** ಎಂದಾರಂಭಿಸಿ ವಿವರಿಸುತ್ತಾರೆ ಅದಾಗಿ ಈ ಎಲ್ಲಾ ಪದಾರ್ಥಗಳ (ಚೇತನಾ ಚೇತನಗಳ) ಸ್ವರೂಪ (ಇರುವಿಕೆ) ಸ್ಥಿತಿ (ಕಾಲಾಂತರಾನುವೃತ್ತಿ) ಪ್ರವೃತ್ತಿ (ವ್ಯಾಪಾರ) ಭೇದಗಳು ಈಶ್ವರನಿಗೆ (ಲಕ್ಷ್ಮೀವಿಶಿಷ್ಟ ನಾರಾಯಣನಿಗೆ) ಸ್ವಾಧೀನವಾಗಿರುತ್ತವೆ. **ಸ್ವಾಧೀನ**— ಈಶ್ವರನ ಸತ್ತಾಧೀನ ಮತ್ತು ಸಂಕಲ್ಪಾಧೀನ ವೆಂದರ್ಥ ಅದಾಗಿ ಈಶ್ವರನ ಸತ್ತೆ–ಇರುವಿಕೆಯೂ, ಈಶ್ವರನ ಇಚ್ಛೆಯೂ ಇಲ್ಲದ ಇವುಗಳಿಗೆ ಸತ್ತಾಸ್ಥಿತಿ ಪ್ರವೃತ್ತಿಗಳು ಉಂಟಾಗಲಾರವು ಈಶ್ವರನ ಸತ್ತೆ ಮತ್ತು ಸಂಕಲ್ಪಗಳೇ ಇವುಗಳ ಸತ್ತಾ ಸ್ಥಿತಿ ಪ್ರವೃತ್ತಿಗಳಿಗೆ ಕಾರಣವಾದುವು ಎಂದು ತಾತ್ಪರ್ಯ.

ಈಶ್ವರತತ್ತ್ವ ನಿರೂಪಣಮ್

ಇಪ್ಪಡಿ ಸ್ವಾಧೀನ ಸರ್ವಸತ್ತಾದಿಹಳೈಯುಡೈವನಾಯಿರುಕ್ಕಿರ ಈಶ್ವರನುಡೈಯ ಸ್ವರೂಪಂ ಸತ್ಯತ್ವಾದಿಗಳಾಹಿರ ಸ್ವರೂಪನಿರೂಪಕ ಧರ್ಮಙ್ಗಳಾಲೇ ಸತ್ಯಮಾಯ್, ಜ್ಞಾನಮಾಯ್, ಅನನ್ತಮಾಯ್, ಆನನ್ದಮಾಯ್, ಅಮಲಮಾಯಿರುಕ್ಕುಮ್. ಇವ್ವರ್ಥತ್ತೈ (೧) "ನನ್ಱಾವಿಳಕ್ಕೇ ಯುಳತ್ತರ್ಕರಿಯಾಯ್" ಎನ್ಱುಮ್, (೨) "ಉಣರ್ ಮು಴ುನಲಂ" ಎನ್ಱುಮ್, (೩) "ಶೂழ்ನ್ದ ದನಿಱ್ಪೆರಿಯ ಶುಡರ್ ಜ್ಞಾನವಿನ್ಬಮೇ" ಯೆನ್ಱುಮ್. (೪) "ಅಮಲನ್" ಎನ್ಱುಮಿತ್ಯಾದಿಹಳಾಲೇ ಆೞ್ವಾರ್ಹಳನುಸನ್ಧಿತ್ತಾರ್ಹಳ್.

ಸರ್ವವಸ್ತುಗಳಿಗೂ ಅನುಕೂಲ್ಯವೇ ಸ್ವಭಾವ

ಆಹೈಯಾಲ್ ಇತ್ಯಾದಿ ಆದಕಾರಣ ಸಮಸ್ತ ವಸ್ತುಗಳಿಗೂ ಸ್ವಭಾವಸಿದ್ಧವಾದ ಆನುಕೂಲ್ಯವು ಈಶ್ವರನ ಇಚ್ಛಾಧೀನ ಭಗವಂತನಿಗೆ ಅಧೀನವಾದ ಸರ್ವ ವಸ್ತುಗಳಿಗೂ ಸ್ವಭಾವಸಿದ್ಧವಾದ ಅನುಕೂಲತ್ವವೇ ಅವನ ಸಂಕಲ್ಪಾಧೀನ. ಭಗವಂತನು ತನಗೆ ಪ್ರತಿಕೂಲವಾಗಿ ಒಂದು ವಸ್ತುವನ್ನೂ ಇರಬೇಕೆಂದು ಇಚ್ಛಿಸುವುದಿಲ್ಲ ಆದ್ದರಿಂದ ಸರ್ವವಸ್ತುಗಳೂ ಸದಾಕಾಲವಲ್ಲಿಯೂ ಈಶ್ವರನಿಗೂ ನಿತ್ಯಮುಕ್ತರಿಗೂ ಅನುಕೂಲವಾಗಿರುತ್ತವೆ ಇದು ಸ್ವಾಭಾವಿಕ. **ಬದ್ಧರುಕ್ಕು** ಇತ್ಯಾದಿ ಬದ್ಧಜೀವಿಗಳಿಗೆ ಕರ್ಮಾನುರೂಪವಾಗಿ ಪುರುಷ ಭೇದದಿಂದಲೂ ಕಾಲ ಭೇದದಿಂದಲೂ ಈ ಪದಾರ್ಥಗಳಲ್ಲಿ ಪ್ರಾತಿಕೂಲ್ಯಗಳೂ ಲ್ಪಾನುಕೂಲಗಳೂ ತೋರುತ್ತವೆ. ಪುರುಷಭೇದ-ಪ್ರತಿಯೊಂದು ಪುರುಷನಿಗೂ ಬೇರೆ ಬೇರೆಯಾದ ಅನುಭವ ಕಾಲಭೇದದಿಂದ ಒಬ್ಬನಿಗೇ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆಯಾದ ಅನುಭವ. ಈ ಬದ್ಧ ಚೇತನರಿಗೂ ಸ್ವಾತ್ಮಸ್ವರೂಪವು ಸರ್ವದಾ ಆನುಕೂಲವಾಗಿರುವುದು, ಈಶ್ವರನ (ಇಚ್ಛಾ) ಸಂಕಲ್ಪ ಸಿದ್ಧ. ಹಾಗಾದರೆ ದೇಹವೂ ಆನುಕೂಲವಾಗಿ ತೋರುವುದರಿಂದ ಅದಕ್ಕೂ ಈಶ್ವರನ ಸಂಕಲ್ಪವಿರುವಂತ ಕಲ್ಪಿಸಬಹುದೇ ಎಂದರೆ **ಇಪ್ಪಡಿ ಅನುಕೂಲಮಾನ**, ಎಂದಾರಂಭಿಸಿ ಪರಿಹರಿಸುತ್ತಾರೆ ಅದಾಗಿ ಹೀಗೆ ಅನುಕೂಲವಾಗಿ ತೋರುವ ಆತ್ಮಸ್ವರೂಪದೊಡನೆ ಏಕತ್ವಭ್ರಮದಿಂದಲೂ (ಕಾಯಿಸಿದ ಕಬ್ಬಿಣವನ್ನು ಅಗ್ನಿ ಎಂದು ಭ್ರಮಿಸುವಂತೆ ದೇಹವೇ ಆತ್ಮಾ ಎಂಬ ಭ್ರಮೆ) ಕರ್ಮ ಪಾರವಶ್ಯತೆಯಿಂದಲೂ, ಮಾಂಸ, ರಕ್ತ, ಪೂಯ, ವಿಟ್ ಮೂತ್ರಗಳಿಂದ ಕೂಡಿದ ಹೇಯವಾದ ಶರೀರವು ವಿವೇಚನಾ ರೂಪಜ್ಞಾನವಿಲ್ಲದವರಿಗೆ ಅನುಕೂಲವಾಗಿ ತೋರುತ್ತದೆ. ಮೋಕ್ಷದಲ್ಲಿ ಆಸೆಯುಳ್ಳವರಿಗೆ ಕರ್ಮನಿಮಿತ್ತವಾದ ಪ್ರತಿಕೂಲ ವೇಷದಿಂದ ಕೂಡಿದ ಈ ಶರೀರವು ತ್ಯಾಜ್ಯ ಮುಕ್ತನಿಗೆ ಸರ್ವವೂ ಸ್ವಾಭಾವಿಕವಾಗಿ ಅನುಕೂಲವಾಗಿರುವುದರಿಂದ, ಆ ಶರೀರಗಳಿಗೇ ಉಪಾದೇಯತ್ವವು ಅಹಂಕಾರ ಮಮಕಾರದಿಂದ ಕೂಡಿ, ತನಗೆಂದು ಸ್ವೀಕರಿಸುವುವೆಲ್ಲಾ ಪ್ರತಿಕೂಲಗಳು. ಸ್ವರೂಪಜ್ಞಾನವುಂಟಾಗಿ ಸ್ವಾಮಿ (ಭಗವತ್) ಶೇಷವೆಂದು ನೋಡಲು ಉಪಕ್ರಮಿಸಿದರೆ ಎಲ್ಲವೂ ಅನುಕೂಲಗಳು ಈ ಅರ್ಥವನ್ನು ಮುಂದೆ ಪರಿಪೂರ್ಣಬ್ರಹ್ಮಾನುಭವಾಧಿಕಾರದಲ್ಲಿ ಆಚಾರ್ಯರು ವಿಸ್ತರಿಸಿ ಹೇಳುತ್ತಾರೆ

ಈಶ್ವರತತ್ವ ನಿರೂಪಣೆ – ಸ್ವರೂಪ ನಿರೂಪಕ ಧರ್ಮಗಳು

ಹೀಗೆ ತನಗೆ ಅಧೀನವಾದ ಸತ್ತಾಸ್ಥಿತಿ ಪ್ರವೃತ್ತಿಗಳನ್ನುಳ್ಳವನಾದ ಈಶ್ವರನ (ಲಕ್ಷ್ಮೀವಿಶಿಷ್ಟನ) ಸ್ವರೂಪವು ಸತ್ಯತ್ವ ಜ್ಞಾನತ್ವ, ಅನಂತತ್ವ, ಆನಂದತ್ವ ಎಂಬ ಸ್ವರೂಪ ನಿರೂಪಕ ಧರ್ಮಗಳಿಂದ ಕೂಡಿ ಸತ್ಯವಾಗಿ ಅಂದರೆ (ಸತ್ಯಪದವಾಚ್ಯವಾಗಿ) ಸ್ವರೂಪಸ್ವಭಾವ ವಿಕಾರವಿಲ್ಲದ - ಜ್ಞಾನ ಸ್ವರೂಪವಾಗಿ, ಅನಂತ ಸ್ವರೂಪದಿಂದ ಕೂಡಿ ಆನಂದರೂಪಿಯಾಗಿ ಅಮಲ ಸ್ವಭಾವವಾಗಿರುತ್ತದೆ ಈಶ್ವರ ಶಬ್ದವು ಲಕ್ಷ್ಮೀನಾರಾಯಣರಿಬ್ಬರೂ ಸೇರಿದ ಮಿಥುನದಲ್ಲಿ ಅನ್ವಯಿಸುವುದರಿಂದ, ಸತ್ಯತ್ವ ಜ್ಞಾನತ್ವಾದಿ ಸ್ವರೂಪ ನಿರೂಪಕ ಧರ್ಮಗಳು ಇಬ್ಬರಲ್ಲಿಯೂ ಅನ್ವಯಿಸುತ್ತದೆ. ಇದರಿಂದ ಲಕ್ಷ್ಮಿಗೂ ಅನಂತತ್ವವೆಂಬ ಸ್ವರೂಪ ನಿರೂಪಕ ಧರ್ಮದಿಂದ, ವಿಭುತ್ವವು ಪ್ರತಿಪಾದಿಸಲ್ಪಡುತ್ತದೆ ಎಂಬುದು ಗಮನಾರ್ಹ

---

(೧) (೨) (೩) (೪) ಪು ತಿ ನೋ

ಈಶ್ವರ ನಿರೂಪಿತ ಸ್ವರೂಪ ವಿಶೇಷಣ ನಿ

ಮತ್ತೆಲ್ಲಾ ಗುಣಙ್ಗಳುಮ್ ದಿವ್ಯಮಙ್ಗಳ ವಿಗ್ರಹಾದಿಹಳುಮ್ ಎಲ್ಲಾಮ್ ಈಶ್ವರನುಕ್ಕು ನಿರೂಪಿತ ಸ್ವರೂಪ ವಿಶೇಷಣಙ್ಗಳಾಯಿರುಕ್ಕುಮ್. ಇಗ್ಗುಣಙ್ಗಳಿಲ್ ಜ್ಞಾನ ಬಲೈಶ್ವರ್ಯ ವೀರ್ಯ ಶಕ್ತಿ ತೇಜಸ್ಸುಕ್ಕಳೆನ್ನು ಆರು ಗುಣಙ್ಗಳ್ ಪರತ್ವೋಪಯುಕ್ತಙ್ಗಳಯಿರುಕ್ಕುಮ್ ಸೌಶೀಲ್ಯವಾತ್ಸಲ್ಯಾದಿಹಳ್ ಸೌಲಭ್ಯೋಪಯುಕ್ತಙ್ಗಳಾಯಿರುಕ್ಕುಮ್. ಇಗ್ಗುಣಙ್ಗಳೆಲ್ಲಾಮ್ ಸರ್ವಕಾಲತ್ತಿಲುಮ್ ಸ್ವರೂಪಾಶ್ರಿತಙ್ಗಳಾಯಿರುಕ್ಕುಮ್.

ಇದು ಸಂಪ್ರದಾಯ ಸಿದ್ಧಾರ್ಥವೆಂಬ ದನ್ನು ಇನ್ವರ್ಥತ್ತೈ ಎಂದಾರಂಭಿಸಿ ಆಚಾರ್ಯರ ನಿರೂಪಿಸುತ್ತಾರೆ ಮೇಲೆ ಹೇಳಿದ ಸತ್ಯತ್ವ ಜ್ಞಾನತ್ವಾದಿಸ್ವರೂಪ ನಿರೂಪಕ ಧರ್ಮಗಳನ್ನು, 1) **ನಂದಾವಿಳಕ್ಕೇ ಅಳತ್ತರ್ಕರಿಯಾಯ್** ನಂದಾ ನಾಶವಿಲ್ಲದ ವಿಕಾರವಿಲ್ಲದ ಇದು ಸತ್ಯ ಶಬ್ದಾರ್ಥ, ವಿಳಕ್ಕೇ--ಜ್ಯೋತಿಸ್ವರೂಪವೇ—ಜ್ಞಾನಶಬ್ದಾರ್ಥ ಅಳತ್ತರ್ಕರಿಯಾಯ್-ಅಳವಿಡಲು ಅಶಕ್ಯವೇ ದೇಶತಃ, ಕಾಲತಃ, ವಸ್ತುತಃ, ಅಳವುಪಡಿಸಲು ಸಾಧ್ಯವಿಲ್ಲದವನು— ಇದು ಅನಂತ ಶಬ್ದಾರ್ಥ, ಎಂದೂ 2) **ಉಣರ್ಮುಳುನಲಂ, ಮುಳುಉಣರ್, ಮುಳುನಲಂ** ಎಂದು ಮುಳು ಶಬ್ದವನ್ನು ಕಾಕಾಕ್ಷಿ ನ್ಯಾಯದಿಂದ ಎರಡುಕಡೆಗೂ ಅನ್ವಯಿಸಬೇಕು. ಆಗ ಮುಳುಉಣರ್—ಎಂಬ ಶಬ್ದದಿಂದ ಪರಿಪೂರ್ಣ ಜ್ಞಾನಸ್ವರೂಪನು, ಮುಳುನಲಮ್ ಪರಿಪೂರ್ಣವಾದ ಆನಂದ ಸ್ವರೂಪನು 3) ಶೂಳ್ನ್ದ **ದನಿಲ್ ಪೆರಿಯ ಶುಡರ್ ಜ್ಞಾನವಿನ್ಬಮ್** ಸರ್ವವಸ್ತುಗಳಲ್ಲಿಯೂ ವ್ಯಾಪಿಸಿ ಅದಕ್ಕಿಂತಲೂ (ಮೀಕ್ತಿತ್ತು) ಪೆರಿಯ —ದೊಡ್ಡದಾದ, ಶುಡರ್— ಧರ್ಮಭೂತಜ್ಞಾನ, ಜ್ಞಾನ--ಧರ್ಮಿಜ್ಞಾನ, ಇನ್ಬಮ್ . ಆನಂದ ಸ್ವರೂಪನು ಎಂದೂ, 4) **ಅಮಲನ್** ನಿರ್ಮಲ ಪ್ರತಿಭಟನು, ಇತ್ಯಾದಿಯಾಗಿ ಆಳ್ವಾರರುಗಳು ಅನುಸಂಧಾನ ಮಾಡಿರುತ್ತಾರೆ,

ಈಶ್ವರನ ನಿರೂಪಿತ ಸ್ವರೂಪ ವಿಶೇಷಣ ಧರ್ಮಗಳು

ಹೀಗೆ ಈಶ್ವರನ ಸ್ವರೂಪವನ್ನು ತಿಳಿದುಕೊಳ್ಳಲು ಬೇಕಾದ ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ ಅಮಲತ್ವವೆಂಬ ಸ್ವರೂಪ ನಿರೂಪಕ ಧರ್ಮಗಳನ್ನು ಹೇಳಿ, **ಅವುಗಳಿಂದ** ತಿಳಿಸಲ್ಪಟ್ಟ ಸ್ವರೂಪಕ್ಕೆ ವಿಶೇಷಣಗಳಾದ ಜ್ಞಾನ ಬಲೈಶ್ವರ್ಯಾದಿ ಗುಣಗಳು ನಿರೂಪಿತ ಸ್ವರೂಪ **ವಿಶೇಷಣ** ಗುಣಗಳೆಂದು **ಮಟ್ರೈಳ್ಳಗುಣಂಗಳು ಮಿತ್ಯಾದಿ ನಿರೂಪಿಸುತ್ತಾರೆ** ಅದಾಗಿ ಈಶ್ವರನ ಬಾಕಿ ಗುಣಗಳೂ ದಿವ್ಯ ಮಂಗಳ ವಿಗ್ರಹಗಳೂ, (ಆದಿ ಶಬ್ದದಿಂದ ವಿಭೂತಿಯು ಗ್ರಹಿಸಲ್ಪಡುತ್ತದೆ) ವಿಭೂತಿಗಳೆಲ್ಲವೂ ಅವನಿಗೆ ನಿರೂಪಿತ ಸ್ವರೂಪ ವಿಶೇಷಣಗಳಾಗಿವೆ ಈ ಗುಣಗಳಲ್ಲಿ "ಜ್ಞಾನ ಬಲೈಶ್ವರ್ಯ ವೀರ್ಯಶಕ್ತಿ ತೇಜಸ್ಸುಗಳೆಂಬ ಆರು ಗುಣಗಳು ಪರತ್ವಕ್ಕೆ ಉಪಯುಕ್ತವಾದವು ಜ್ಞಾನ–ಸರ್ವವನ್ನು ಸಾಕ್ಷಾತ್ಕರಿಸುವುದು, ಬಲ - ಉಭಯ ವಿಭೂತಿ ಧಾರಣ ಸಾಮರ್ಥ್ಯ, ಐಶ್ವರ್ಯ ನಿಯಮಿಸುವುದು, ವೀರ್ಯ–ಜಗತ್ತಿಗೆ ಉಪಾದಾನ ಕಾರಣವಾಗಿದ್ದರೂ ವಿಕಾರವಿಲ್ಲದಿರುವುದು. ಶಕ್ತಿ–ಅಘಟಿತ ಘಟನಾ ಸಾಮರ್ಥ್ಯ, ತೇಜಃ ಶತ್ರುಗಳನ್ನು ತಿರಸ್ಕರಿಸಲರ್ಹವಾದ ಸಾಮರ್ಥ್ಯ. ಸೌಶೀಲ್ಯವಾತ್ಸಲ್ಯಾದಿ ಗುಣಗಳು ಸೌಲಭ್ಯಕ್ಕೆ (ಸುಲಭವಾಗಿ ಭಗವಂತನನ್ನು ಪಡೆಯಲು) ಉಪಯುಕ್ತಗಳಾಗಿರುವುವು ಈ ಗುಣಗಳೆಲ್ಲಾ ಸರ್ವಕಾಲದಲ್ಲಿಯೂ ಭಗವಂತನ ಸ್ವರೂಪವನ್ನು ಆಶ್ರಯಿಸಿರುವುವು

---

1) ನಂದಾವಿಳಕ್ಕೇ ಅಳತ್ತರ್ಕರಿಯಾಯ್ ಃ (ಪೆ. ತಿರು 3-8-1) 2) ಉಣರ್ಮುಳುನಲಮ್ (ತಿ. ವೊ, 1-1-2)

3) ಶೂಳ್ನ್ದ ಹನ್ಪಾಳ್ ಶ್ನ್ದುಯರ್ನ್ದ ಮುಡಿವಿಲ್ ಪೆರುಂ ಪಾಳೇ ಯೋ·
ಶೂಳ್ನ್ದದನಿಲ್ ಪೆರಿಯ ಪರನನ್ ಮಲರ್ ಶೋದೀ ಯೋ ।
ಶೂಳ್ನ್ದದನಿಲ್ ಪೆರಿಯ ಶುಡರ್ ಜ್ಞಾನ ವಿನ್ಬಮೇಯೋ
ಶೂಳ್ನ್ದದನಿಲ್ ಪೆರಿಯ ಎನ್ನವಾವರ ಶೂಳ್ನ್ದಾಯೇ ॥ (ತಿರು 10-10-10)

4) (ಅಮಲನಾದಿ ಪಿರಾನ್ 1) – ದೋಷವಿಲ್ಲದ ಜಗತ್ಕಾರಣನಾದ ಉಪಕಾರಕನು. ಪು. ತಿ. ನೋ

ಪರವ್ಯೂಹಾದಿ ಪಞ್ಚವಿಧ ಭಗವದ್ರೂಪ ನಿರೂಪಣಮ್

ಪರವ್ಯೂಹಾದಿ ವಿಭಾಗಙ್ಗಳಿಲ್ ಗುಣ ನಿಯಮಮುಮ್ ಶೊಲ್ಲುಹಿರದೆಲ್ಲಾಮ್ ಅವ್ವೋರೂಪಙ್ಗಳೈ ಯಿಟ್ಟು ಅನುಸನ್ಧಿಪ್ಪಾರ್ಕ್ಕು ಸರ್ವೇಶ್ವರನ್ ಆವಿಷ್ಕರಿಕ್ಕುಮ್ ಗುಣವಿಶೇಷಙ್ಗಳ್ ಶೊಲ್ಲುಹೈಕ್ಕಾಹವತ್ತನ್ನೈ- ಔಪನಿಷದ ವಿದ್ಯಾವಿಶೇಷಙ್ಗಳ್‌ತೋರುಮ್ ಅನುಸನ್ಧೇಯಗುಣ ವಿಶೇಷಙ್ಗಳ್ ನಿಯತಙ್ಗಳಾ ನಾರ್ಪೋಲೇ ಭಗವಚ್ಛಾಸ್ತ್ರೋಕ್ತಮಾನ ರೂಪವಿಶೇಷಾನುಸನ್ಧಾನತ್ತುಕ್ಕುಂ ಗುಣವಿಶೇಷಙ್ಗಳ್ ನಿಯತಙ್ಗಳ್.

ಪರವ್ಯೂಹರೂಪಙ್ಗಳ್

ಅವ್ವಿಡತ್ತಿಲ್ ಪರರೂಪತ್ತಿಲ್ ಜ್ಞಾನಾದಿ ಗುಣಙ್ಗಳಾರುಮ್ ವೇದ್ಯಙ್ಗಳ್ ವ್ಯೂಹಙ್ಗಳ್ ನಾಲೆನ್ರುಮ್. ಮೂನ್ರೆನ್ರುಮ್, ಶಾಸ್ತ್ರಙ್ಗಳ್‌ಶೊಲ್ಲುಮ್. ನಾಲುವ್ಯೂಹಮುಣ್ಡಾಯಿರುಕ್ಕ, ವ್ಯೂಹ ವಾಸುದೇವ ರೂಪತ್ತುಕ್ಕು ಪರರೂಪತ್ತಿರ್ಕಾಟ್ಟಿಲ್ ಅನುಸನ್ಧೇಯ ಗುಣಭೇದಮಿಲ್ಲಾಮೈಯಾಲೇ

ಪರವ್ಯೂಹ ವಿಭವ ಹಾರ್ದಾರ್ಚಾರೂಪ ವಿಶೇಷಗಳು

ಹಾಗಾದರೆ ಪರವ್ಯೂಹಾದಿ ರೂಪಗಳಲ್ಲಿ ಕೆಲವು ಗುಣಗಳನ್ನು ಮಾತ್ರ ಹೇಳಿರುವುದೇಕೆಂದರೆ **ಪರವ್ಯೂಹಾದಿ ವಿಭಾಗಂಗಳಿಲ್** ಎಂದು ಆಚಾರ್ಯರು ವಿವರಿಸುತ್ತಾರೆ. ಅದಾಗಿ ಪರವ್ಯೂಹಾದ್ಯವಸ್ಥೆಗಳಲ್ಲಿ ಗುಣ ನಿಯಮವನ್ನು ಹೇಳುವುದೆಲ್ಲಾ ಆಯಾಯಾ ರೂಪಗಳನ್ನು ಅನುಸಂಧಾನ ಮಾಡುವವರಿಗೆ ಸರ್ವೇಶ್ವರನು (**ಅವಿಷ್ಕರಿಕ್ಕುಮ್**) ಯೋಗದಶೆಯಲ್ಲಿ ಅವರಿಗೆ ಸಾಕ್ಷಾತ್ಕಾರ ವಿಷಯವಾಗುವಂತೆ-ಯೋಗಚಕ್ಷುಸ್ಸಿಗೆ ಪ್ರಕಾಶಿಸುವಂತೆ ಮಾಡುವ ವಿಶೇಷ ಗುಣಗಳನ್ನು ಹೇಳುವುದಕ್ಕೆ ಮಾತ್ರ. ಇತರ ಗುಣಗಳನ್ನು ನಿಷೇಧಿಸುವುದಕ್ಕಲ್ಲ

ಹೀಗೆ ಎಲ್ಲಾ ಗುಣಗಳೂ ಭಗವಂತನ ಸ್ವರೂಪಾಶ್ರಿತವಾಗಿರುವಾಗ ಕೆಲವು ಗುಣಗಳನ್ನು ಮಾತ್ರ **ವ್ಯೂಹ** ರೂಪಗಳಲ್ಲಿ ಉಪಾಸಿಸಬೇಕೆಂದೂ ಯೋಗದಶೆಯಲ್ಲಿ ಆ ರೂಪಗಳೊಡನೆ ಆ ಗುಣಗಳು ಅವರಿಗೆ **ಪ್ರತ್ಯಕ್ಷ** ವಾಗುತ್ತವೆಯೆಂದೂ ನಿಷ್ಕರ್ಷಿಸಬಹುದೇ ಎಂದರೆ ಅದಕ್ಕೆ ದೃಷ್ಟಾಂತವನ್ನು ಆಚಾರ್ಯರು **ಔಪನಿಷದ ವಿದ್ಯಾ ವಿಶೇಷಂಗಳ್** ಎಂದು ಆರಂಭಿಸಿ ತಿಳಿಸುತ್ತಾರೆ. ಅದಾಗಿ ಉಪನಿಷತ್ತುಗಳಲ್ಲಿ ಹೇಳಿರುವ ದಹರ, ಶಾಂಡಿಲ್ಯ, ವೈಶ್ವಾನರಾದಿ ವಿದ್ಯೆಗಳಲ್ಲಿ, ಅನುಸಂಧೇಯವಾದ ಅಪಹತಪಾಪ್ಮತ್ವ, ಮನೋಮಯತ್ವಾದಿ ಗುಣಗಳು,ಆಯಾಯಾ ವಿದ್ಯೆಗಳಿಗೆ ನಿಯತಗಳಾಗಿರುವ ಹಾಗೆ, (ಈ ವಿದ್ಯೆಯಲ್ಲಿ ಈ ಗುಣಗಳನ್ನೇ ಉಪಾಸನೆ ಮಾಡಬೇಕು ಎಂದು ನಿರ್ಬಂಧ) ಭಗವಚ್ಛಾಸ್ತ್ರವಾದ ಪಾಂಚರಾತ್ರಾಗಮಗಳಲ್ಲಿ ಹೇಳಲ್ಪಟ್ಟ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಎಂಬ **ವ್ಯೂಹ** ರೂಪಗಳ ಉಪಾಸನೆಗಳಲ್ಲಿಯೂ ಮುಂದೆ ಹೇಳಲ್ಪಡುವ ಗುಣ ವಿಶೇಷಗಳು ನಿಯತಗಳು ಆ ಸಂದರ್ಭದಲ್ಲಿ, ಪರವಾಸುದೇವರೂಪದಲ್ಲಿ ಜ್ಞಾನಶಕ್ತಿ, ಬಲೈಶ್ವರ್ಯ, ವೀರ್ಯ ತೇಜಸ್ಸೆಂಬ ಆರುಗುಣಗಳೂ ಉಪಾಸಿಸಲ್ಪಡತಕ್ಕವು (**ವೇದ್ಯಂಗಳ್**).

ವ್ಯೂಹರೂಪಗಳು ನಾಲ್ಕು ಎಂದೂ, ಮೂರು ಎಂದೂ ಶಾಸ್ತ್ರಗಳು ಹೇಳುತ್ತವೆ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರೆಂಬ ನಾಲ್ಕು ವ್ಯೂಹ ರೂಪಗಳು ಇರುವಾಗ, ಮೂರು ವ್ಯೂಹ ರೂಪಗಳೆಂದು ಹೇಳುವುದಕ್ಕೆ ಕಾರಣವೇನೆಂದರೆ, ಪರವಾಸುದೇವ ರೂಪಕ್ಕೂ, ವ್ಯೂಹವಾಸುದೇವ ರೂಪಕ್ಕೂ ಅನುಸಂಧೇಯವಾದ ಗುಣಗಳಲ್ಲಿ ಭೇದವಿಲ್ಲದಿರುವುದರಿಂದ ವ್ಯೂಹ ವಾಸುದೇವ ರೂಪವನ್ನು ಪರರೂಪದೊಡನೆ ಸೇರಿಸಿ, ಬಾಕಿ ಮೂರು

ತ್ರಿವ್ಯೂಹನ್ಗಳೈನ್ಹಿರದು. ಇಪ್ಪಕ್ಷತ್ತೈ

"ಗುಣೈಷ್ಷಡ್ಭಿಸ್ತ್ವೇತೈಃ ಪ್ರಥಮತರ ಮೂರ್ತಿಸ್ತವ ಬಭೌ
ತತಸ್ತಿಸ್ರಸ್ತೇಷಾಂ ತ್ರಿಯುಗ ಯುಗಳೈರ್ಹಿ ತ್ರಿಭಿರಭೂಃ."

ಎನ್ಹಿರ ಶ್ಲೋಕತ್ತಿಲೇ ಸಙ್ಗ್ರಹಿತ್ತಾರ್ಹಳ್. ಇಪ್ಪರವ್ಯೂಹಙ್ಗಳಿಲ್ **ಗುಣಕ್ರಿಯಾ** ವಿಭಾಗಙ್ಗಳ್,

**ಷಾಡ್ಗುಣ್ಯಾದ್ವಾಸುದೇವಃ ಪರಇತಿ ಸ ಭವಾನ್ ಮುಕ್ತಭೋಗ್ಯೋ, ಬಲಾಢ್ಯಾತ್
ಬೋಧಾತ್ಸಂಕರ್ಷಣಸ್ತ್ವಂ ಹರಸಿ ವಿತನುಷೇ ಶಾಸ್ತ್ರ ಮೈಶ್ವರ್ಯ ವೀರ್ಯಾತ್ ।
ಪ್ರದ್ಯುಮ್ನ ಸ್ಸರ್ಗಧರ್ಮೌ ನಯಸಿಚ ಭಗವಾನ್, ಶಕ್ತಿ ತೇಜೋಽನಿರುದ್ಧೋ
ಬಿಭ್ರಾಣಃ ಪಾಸಿ ತತ್ತ್ವಂ ಗಮಯಸಿಚ ತಥಾವ್ಯೂಹ್ಯ ರಂಗಾಧಿರಾಜ ॥**

ಎನ್ಹಿರ ಶ್ಲೋಕತ್ತಿಲೇಸಙ್ಗ್ರಹಿಕ್ಕಪ್ಪಟ್ಟನ.

ವ್ಯೂಹ ರೂಪಗಳನ್ನು ಮಾತ್ರ ಹೇಳಿರುವುದು ಈ ಪಕ್ಷವನ್ನು [1] **ಗುಣೈಷ್ಷಡ್ಭಿಸ್ತ್ವೇತೈಃ ಪ್ರಥಮತರ ಮೂರ್ತಿಸ್ತವ ಬಭೌ ತತಸ್ತಿಸ್ರಸ್ತೇಷಾಂ ತ್ರಿಯುಗ ಯುಗಳೈರ್ಹಿಸ್ತ್ರಿಭಿರಭೂಃ**", ಎಂಬ ಶ್ಲೋಕದಲ್ಲಿ ಸಂಗ್ರಹಿಸಿರುತ್ತಾರೆ. ಇದು ತ್ರಿವ್ಯೂಹ ಪಕ್ಷಕ್ಕೆ ಪ್ರಮಾಣ ಪ್ರಥಮ ತರ ಮೂರ್ತಿ ಎಂಬುದು ವ್ಯೂಹ ವಾಸುದೇವನನ್ನು ನಿರ್ದೇಶಿಸುತ್ತದೆ, ಎಂದೂ ಕೆಲವು ಆಚಾರ್ಯರುಗಳು ಅಭಿಪ್ರಾಯ ಪಡುತ್ತಾರೆ ಹೀಗೆ ಚಾತುರ್ವ್ಯೂಹ ಪಕ್ಷಕ್ಕೆ ಪ್ರಮಾಣವಾಗುತ್ತದೆ ಈ ಪರವಾಸುದೇವ, ವ್ಯೂಹ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳಲ್ಲಿ, ಗುಣ ಮತ್ತು ಅವುಗಳ ಕಾರ್ಯಗಳು **ಷಾಡ್ಗುಣ್ಯಾದ್ವಾಸುದೇವಃ** (ಶ್ರೀರಂಗರಾಜಸ್ತವ **2,39**) ಎಂಬ ಶ್ಲೋಕದಲ್ಲಿ ಸಂಗ್ರಹಿಸಲ್ಪಟ್ಟವು. ಅದಾಗಿ ಷಾಡ್ಗುಣ್ಯಾತ್ ಆರು ಗುಣಗಳಿಂದ ಕೂಡಿದವನು ಪರವಾಸುದೇವನು ಎಂದು (**ಭವಾನ್**) ನೀನು, ಮುಕ್ತಭೋಗ್ಯಃ–ಮುಕ್ತರುಗಳಿಂದ ಅನುಭವಿಸಲ್ಪಡುತ್ತೀಯಾ, ತಥಾ ಹಾಗೆ ವ್ಯೂಹ್ಯ–ವ್ಯೂಹಾವತಾರ ಮಾಡಿ, ಬಲಾಢ್ಯಾತ್ ಬೋಧಾತ್–ಬಲದಿಂದ ಕೂಡಿದ ಜ್ಞಾನದಿಂದ, ಸಂಕರ್ಷಣಃತ್ವಂ ನೀನು ಸಂಕರ್ಷಣ ರೂಪವನ್ನು ತಾಳಿ ಹರಸಿವಿತನುಷೇ ಶಾಸ್ತ್ರ ಸಂಹಾರ ಮಾಡುತ್ತೀಯಾ ಹಾಗೆಯೇ ಶಾಸ್ತ್ರವನ್ನು ಪ್ರಚಾರ ಮಾಡುತ್ತೀಯಾ. ಪ್ರದ್ಯುಮ್ನಃ ಸರ್ಗಧರ್ಮೌನಯಸಿಚ ಭಗವನ್–ಪ್ರದ್ಯುಮ್ನ ರೂಪಿಯಾಗಿ ಸೃಷ್ಟಿಕಾರ್ಯವನ್ನು ಮಾಡಿ, ಧರ್ಮ ಪ್ರವರ್ತನವನ್ನು ಮಾಡುತ್ತೀಯಾ, ಶಕ್ತಿ ತೇಜೋಽನಿರುದ್ಧೋ ಬಿಭ್ರಾಣಃ ಪಾಸಿತತ್ತ್ವಂಗಮಯಸಿಚ–ಶಕ್ತಿ ತೇಜಸ್ಸುಗಳಿಂದ ಕೂಡಿದವನಾಗಿ, ಅನಿರುದ್ಧ ರೂಪವನ್ನು ತಾಳಿ, ಜಗದ್ರಕ್ಷಣೆ ಮಾಡುತ್ತೀಯಾ, ತತ್ತ್ವೋಪದೇಶವನ್ನು ಮಾಡುತ್ತೀಯಾ ಈ ಶ್ಲೋಕದಲ್ಲಿ ವಾಸುದೇವಃಪರಃ ಎಂದು ಪರವಾಸುದೇವನನ್ನು ಹೇಳಿ, ವ್ಯೂಹ್ಯ ಎಂದಾರಂಭಿಸಿ, ಮೂರು ವ್ಯೂಹ ರೂಪಗಳನ್ನು ಹೇಳಿರುವುದರಿಂದ, ಈ ಶ್ಲೋಕವು ತ್ರಿವ್ಯೂಹ ಪಕ್ಷಕ್ಕೆ ಪ್ರಮಾಣವಾಗಿದೆ ಎಂದು ಹೇಳಬಹುದು.

---

1) ಗುಣೈಷ್ಷಡ್ಭಿಸ್ತ್ವೇತೈಃ ಪ್ರಥಮತರ ಮೂರ್ತಿಸ್ತವ ಬಭೌ
ತತಸ್ತಿಸ್ರಸ್ತೇಷಾಂ ತ್ರಿಯುಗ ಯುಗಳೈರ್ಹಿ ತ್ರಿಭಿರಭೂಃ ।
ವ್ಯವಸ್ಥಾಯು ಚ್ಛೈಷಾ ನನು ವರದ ಸಾ ಆವಿಷ್ಕೃತಿವಶಾತ್
ಭವಾನ್ ಸರ್ವತ್ರೈವ ತ್ವಗಣಿತ ಮಹಾ ಮಂಗಳ ಗುಣಃ ॥ (ವರದರಾಜಸ್ತವ 16ಶ್ಲೋಕ)

ಈ, ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ ತೇಜಸ್ಸೆಂಬ ಆರುಗುಣಗಳಿಂದ, ತವ ನಿನ್ನ ಪ್ರಥಮತರ ಮೂರ್ತಿಃ-- ಪರವಾಸುದೇವ ರೂಪ ಮೂರ್ತಿಯು ಬಭೌ - ಪ್ರಕಾಶಿಸಿತು ಅನಂತರ ತೇಷಾಂತಿಸ್ರಃ ಅವುಗಳಲ್ಲಿ ಮೂರು ರೂಪಗಳು, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೆಂಬ, ಹೇತ್ರಿಯುಗ - ಷಾಡ್ಗುಣ್ಯ ಪರಿಪೂರ್ಣ, (ತ್ರೀಣಿಯುಗಾನಿ - ಜ್ಞಾನಬಲಾದಿ ದ್ವಂದ್ವಾನಿಯಸ್ಯಸ) ತ್ರಿಭಿ - ಯುಗಳೈರ್ಹಿ ಎರಡೆರಡು ಗುಣಗಳಿಂದ ಕೂಡಿದ, ಮೂರು ದ್ವಂದ್ವಗಳೆಂದರೆ – ಜ್ಞಾನಬಲ, ಐಶ್ವರ್ಯ ವೀರ್ಯ, ಶಕ್ತಿತೇಜಸ್ಸೆಂಬ ಗುಣಗಳಿಂದ ಕ್ರಮವಾಗಿ ಅಭೂ - ಪ್ರಕಾಶಿಸುತ್ತಿದ್ದುವು ಈ ವ್ಯವಸ್ಥೆಯು ಆಯಾಯಾಗುಣಗಳನ್ನೂ ಆಯಾಯಾರೂಪಗಳನ್ನೂ ಧ್ಯಾನ ಮಾಡುವವರಿಗೆ ಆವಿಷ್ಕರಿಸುತ್ತೀಯಾ ಎಂಬುದರಿಂದ ಮಾತ್ರ ಏರ್ಪಟ್ಟಿದೆ ಎಲೈವರದನೇ ವಸ್ತುಸ್ಥಿತಿಯಲ್ಲಿ ನೀನು ಎಲ್ಲೆಲ್ಲಿಯೂ ಎಲ್ಲಾ ಗುಣಗಳಿಂದ ಕೂಡಿದವನು

ಜಾಗ್ರದಾದಿ ಪದ ಭೇದಙ್ಗಳಿಲುಳ್ಳ ವಿಶೇಷಙ್ಗಳೆಲ್ಲಾಮ್
"ಜಾಗ್ರತ್ಸ್ವಪ್ನಾತ್ಯಲಸ ತುರೀಯ ಪ್ರಾಯಧ್ಯಾತೃ ಕ್ರಮವದುಪಾಸ್ಯಃ ।
ಸ್ವಾಮಿಂ ಸ್ತತ್ತದ್ಗುಣ ಪರಿಬರ್ಹಶ್ಚಾತುರ್ವ್ಯೂಹಂ ವಹಸಿ ಚತುರ್ಧಾ ॥"
ಎನ್ರು ಸಙ್ಗ್ರಹೀತಙ್ಗಳಾಯಿರುಗ್ಗ್ರು. ಕೇಶವಾದಿಹಳಾನ ಪನ್ನಿರಣ್ಡು ರೂಪಙ್ಗಳುಮ್ ವ್ಯೂಹಾನ್ತರಙ್ಗಳ್

ಅನಂತರ ಚತುರ್ವ್ಯೂಹ ಪಕ್ಷಕ್ಕೆ ಪ್ರಮಾಣವಾದ ಶ್ಲೋಕವನ್ನು ಉದಾಹರಿಸುತ್ತಾರೆ **ಜಾಗ್ರದಾದಿ ಭೇದಂಗಳಿಲುಳ್ಳ** ಎಂದಾರಂಭಿಸಿ ಜಾಗ್ರತ್‌ಪ್ರಾಯಾಃ — ಎಚ್ಚರದಿಂದ ಕೂಡಿದವರ ಹಾಗೆ, **ಸ್ವಪ್ನಪ್ರಾಯಾಃ**— ಸ್ವಪ್ನದಶೆಗೆ ಸದೃಶವಾಗಿರುವವರು, **ಅತ್ಯಲಸಪ್ರಾಯಾಃ**— ಸುಷುಪ್ತನ ಹಾಗೆ, ತುರೀಯಪ್ರಾಯಾಃ— ಮೂರ್ಛೆ ಹೊಂದಿದವರಿಗೆ ಸದೃಶರಾದವರು, ಎಂದು ಧ್ಯಾತೃ **ಕ್ರಮವತ್ ಧ್ಯಾನ ಮಾಡುವವರ** ಕ್ರಮದಂತೆ, ಉಪಾಸ್ಯನಾಗಿ ಸ್ವಾಮಿನ್, ತತ್ತದ್ಗುಣ ಪರಿಬರ್ಹ—ಆಯಾಯ ಗುಣಗಳನ್ನು (ಬಿಳಿಪು, ಕೆಂಪು ಮೊದಲಾದ ಬಣ್ಣಗಳು) **ಪರಿಬರ್ಹ** ಆಯುಧಗಳನ್ನು ಉಳ್ಳವನಾಗಿ **ಚಾತುರ್ವ್ಯೂಹಂ** ನಾಲ್ಕುವ್ಯೂಹಗಳನ್ನು **ಚತುರ್ಧಾ** ನಾಲ್ಕು ಪ್ರಕಾರವಾಗಿ **ವಹಸಿ**—ವಹಿಸಿರುತ್ತೀಯಾ ಹೀಗೆ ಜಾಗ್ರದಾದಿ ಭೇದಗಳಲ್ಲಿರುವ, ವಿಶೇಷಗಳು "ಜಾಗ್ರತ್ಸ್ವಪ್ನ" ಎಂದಾರಂಭಿಸುವ ಶ್ಲೋಕವಲ್ಲಿ ಸಂಗ್ರಹಿಸಲ್ಪಟ್ಟಿವೆ

ಗೀತೆಯಲ್ಲಿ ಪರಮಾತ್ಮನು ಯತಮಾನ ಸಂಜ್ಞಾ, ವ್ಯತಿರೇಕ ಸಂಜ್ಞಾ. ಏಕೇಂದ್ರಿಯ ಸಂಜ್ಞಾ, ವಶೀಕಾರಸಂಜ್ಞಾ ಎಂದು "ಪ್ರಜಹಾತಿ ಯದಾ ಕಾಮಾನ್", ಎಂದಾರಂಭಿಸುವ ನಾಲ್ಕು ಶ್ಲೋಕಗಳಲ್ಲಿ ವ್ಯುತ್ಕ್ರಮೇಣ, ಸ್ಥಿತಪ್ರಜ್ಞನಾದ ಯೋಗಿಯ ನಾಲ್ಕು ಅವಸ್ಥೆಗಳನ್ನು ವಿವರಿಸಿದ್ದಾನೆ. ಅದೇ ನ್ಯಾಯವನ್ನು ಅನುಸರಿಸಿ ಇಲ್ಲಿಯೂ ನಾಲ್ಕು ಅವಸ್ಥೆಗಳು ಹೇಳಲ್ಪಟ್ಟಿವೆ

ವಿಶಾಖಯೂಪ— ಅದಾಗಿ ಪರಮಪದದಲ್ಲಿ ಶುದ್ಧ ಸತ್ವದ್ರವ್ಯದ ಪರಿಣಾಮ ರೂಪವಾಗಿ ಕೈಕಾಲುಗಳಿಲ್ಲದೆ ಸ್ಥೂಲಾಕಾರವಾಗಿ ಬಹಳ ಅಗಲವಾಗಿಯೂ ಎತ್ತರವಾಗಿಯೂ ವಿಶಾಖಯೂಪವೆಂಬ ಸ್ತಂಭವಿದೆ. ಇದರ ಕೆಳಗೆ ಸುತ್ತ ನಾಲ್ಕು ಕಡೆಗಳಲ್ಲಿಯೂ ಜಾಗ್ರತ್ — ಜಾಗರಣದಿಂದ ಕೂಡಿದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳಿವೆ. ಅದಕ್ಕೆ ಸ್ವಲ್ಪ ಮೇಲುಗಡೆ, ನಾಲ್ಕು ಕಡೆಗಳಲ್ಲಿಯೂ ಸ್ವಪ್ನಾವಸ್ಥೆಯಿಂದ ಕೂಡಿದ ವಾಸುದೇವಾದಿ ನಾಲ್ಕುವ್ಯೂಹ ರೂಪಗಳಿವೆ. ಅದಕ್ಕೂ ಸ್ವಲ್ಪ ಮೇಲೆ, ನಾಲ್ಕು ಕಡೆಗಳಲ್ಲಿಯೂ ಅತ್ಯಲಸ ಸುಷುಪ್ತಿ ಅವಸ್ಥೆಯಿಂದ ಕೂಡಿದ ವಾಸುದೇವಾದಿ ನಾಲ್ಕುವ್ಯೂಹ ರೂಪಗಳಿವೆ ಹಾಗೆಯೇ ಇನ್ನು ಸ್ವಲ್ಪ ಮೇಲೆ ಅಗ್ರಭಾಗದಲ್ಲಿ ಮೂರ್ಛಿತಪ್ರಾಯವಾದ ಅವಸ್ಥೆಯಿಂದ ಕೂಡಿದ ವಾಸುದೇವಾದಿ ನಾಲ್ಕು ರೂಪಗಳು ಪ್ರಾಗಾದಿ ಕ್ರಮದಲ್ಲಿ ನಾಲ್ಕು ಕಡೆಗಳಲ್ಲಿಯೂ ಇವೆ

ಜಾಗ್ರದವಸ್ಥೆಯಿಂದ ಕೂಡಿದ ವಾಸುದೇವಾದಿ ನಾಲ್ಕುವ್ಯೂಹ ರೂಪಗಳು ವಿಶಾಖ ರೂಪಕ್ಕೆ ಕೊಂಬೆಗಳ ಹಾಗೆ ನಾಲ್ಕು ದಿಕ್ಕುಗಳಲ್ಲಿಯೂ ಇದ್ದು ಸೃಷ್ಟಿಸ್ಥಿತಿ ಸಂಹಾರರೂಪವಾದ ವ್ಯಾಪಾರಗಳಿಂದಲೂ, ಅತ್ಯುತ್ಕೃಷ್ಟವಾದ ಬಿಳಿಪು, ಕೆಂಪು ಮೊದಲಾದ ಬಣ್ಣಗಳಿಂದಲೂ ಎಲ್ಲಾ ಆಯುಧಗಳಿಂದಲೂ ಕೂಡಿಇವೆ ಸ್ವಪ್ನಸ್ಥಾನದಲ್ಲಿ, ಸ್ವಪ್ನಸಂಜ್ಞಕವಾದ ವ್ಯೂಹ ವಾಸುದೇವ ರೂಪ ಚತುಷ್ಟಯಗಳು, ಹಿಂದಿನ ಹಾಗೆಯೇ ವಿಶಾಖಯೂಪಕ್ಕೆ ಸ್ವಲ್ಪ ಮೇಲುಗಡೆ ನಾಲ್ಕು ದಿಕ್ಕುಗಳಲ್ಲಿಯೂ ಇವೆ. ಅವುಗಳಿಗೆ ಸೃಷ್ಟಿಸ್ಥಿತ್ಯಾದಿ ಇಚ್ಛಾಮಾತ್ರ ವ್ಯಾಪಾರವಿಲ್ಲ ಸುಷುಪ್ತಿ ಸ್ಥಾನದಲ್ಲಿ ಸುಷುಪ್ತಿ ಸಂಜ್ಞಕವಾದ ಹಿಂದಿನ ಹಾಗೆಯೇ ಇನ್ನು ಸ್ವಲ್ಪ ಮೇಲೆ ವಿಶಾಖಯೂಪದ ನಾಲ್ಕುಕಡೆಗಳಲ್ಲಿಯೂ ಇವೆ ಇವುಗಳಿಗೆ ಸೃಷ್ಟ್ಯಾದಿ ಇಚ್ಛೆಯೂ ಇಲ್ಲ. ಸ್ವಾನಂದಾನುಭವ ಮಾತ್ರ ಅದಕ್ಕೆ ಮೇಲೆ ಇರುವ ತುರೀಯ ಸ್ಥಾನದಲ್ಲಿ ತುರೀಯ ಸಂಜ್ಞಕವಾದ ವ್ಯೂಹ ಚತುಷ್ಟಯಕ್ಕೆ ಕೈ, ಕಾಲು ಮೊದಲಾದವುಗಳಿಂದ ಕೂಡಿದ ಶರೀರವಿಲ್ಲ. ಸುಷುಪ್ತಿ ವಾಸುದೇವನಿಗೆ ಸಮನಾಗಿ ಯೂಪದ ನಾಲ್ಕು ದಿಕ್ಕುಗಳಲ್ಲಿಯೂ

ವಿಭವಾವತಾರ ರೂಪ ಕಥನಮ್

ವಿಭವಙ್ಗಳಾವನ? ಪದ್ಮನಾಭಾದಿಹಳಾನ ಮುಪ್ಪತ್ತುಚ್ಚಿನ್ನ(ಚ್ಚಿಲ್ಲಾನ) ರೂಪಙ್ಗಳ್. ಇವಙ್ಗಳಿಲ್ ಮತ್ಸ್ಯಕೂರ್ಮಾದಿಹಳಾನ ಅವತಾರಙ್ಗಳ್ ಒರುಪ್ರಯೋಜನ ವಶತ್ತಾಲೆ ವಿಶೇಷಿತ್ತು ಚ್ಚೊಲ್ಲಪಟ್ಟನ. ಇವ್ವಿಭವಙ್ಗಳಿ ಲೀಶ್ವರನವ್ವೋ ಕಾರ್ಯವಿಶೇಷಙ್ಗಳು ಕ್ಕೀಡಾಹ ತ್ತಾನ್ವೇಣ್ಡಿನ ಗುಣಙ್ಗಳೈ ವೇಣ್ಡಿನ ಪೋದು ಮರೈತ್ತುಮ್, ವೇಣ್ಡಿನಪೋದು ಪ್ರಕಾಶಿಪ್ಪಿತ್ತುಮ್ ನಡತ್ತುಮ್. ಇವಙ್ಗಳಿಲ್ ಅವಾನ್ತರ ಭೇದಙ್ಗಳ್ "ಕೃಷ್ಣ ರೂಪಾಣ್ಯಸಂಖ್ಯಾನಿ" ಇತ್ಯಾದಿಹಳಿಲ್ ಪಡಿಯೇ ಯನನ್ತಙ್ಗಳ್

ಇಪ್ಪಡಿಯೇ ವಿಭವಾನ್ತರಙ್ಗಳುಮ್ ಕಣ್ಡುಕೊಳ್ವದು. ಶಿಲಜೀವರ್ಹಳೈ ವಿಗ್ರಹ ವಿಶೇಷತ್ತಾಲುಮ್, ಶಕ್ತಿ ವಿಶೇಷತ್ತಾಲುಮ್, ಅಧಿಷ್ಠಿತ್ತು ಅತಿಶಯಿತಕಾರ್ಯಙ್ಗಳೈ ನಡತ್ತುಹಿರದುಮ್ ವಿಭವಭೇದಮ್.

ನಾಲ್ಕು ಕೊಂಬೆಗಳ ಹಾಗೆ ಶರೀರ ಚೇತನವ್ಯಾಪಾರಗಳಿಲ್ಲ. ಇವರ ವಿಸ್ತಾರವನ್ನು ಲಕ್ಷ್ಮೀತಂತ್ರ, ಮತ್ತು ಸಾತ್ವತ ಸಂಹಿತೆಯಿಂದ ತಿಳಿಯ ಬಹುದು ಆಚಾರ್ಯರು ತಮ್ಮ ವರದರಾಜ ಪಂಚಾಶತ್ ಸ್ತೋತ್ರದಲ್ಲಿ ಈ ಕೆಳಗೆ ಕಂಡ ಶ್ಲೋಕದಲ್ಲಿ ಈ ವಿಶಾಖ ಸ್ತಂಭವನ್ನ ನಿರೂಪಿಸಿರುತ್ತಾರೆ

ರೂಢಸ್ಯ ಚಿನ್ಮಯತಯಾ ಹೃದಯೇ ಕರೀಶ
ಸ್ತಂಭಾನುಕಾರಿ ಪರಿಣಾಮ ವಿಶೇಷ ಭಾಜಃ।
ಸ್ಥಾನೇಷು ಜಾಗ್ರತಿ ಚತುರ್ಷ್ವಪಿ ಸತ್ವವಂತಃ
ಶಾಖಾವಿಭಾಗ ಚತುರೇ ತವ ಚಾತುರಾತ್ಮ್ಯೇ॥ (ವರದರಾಜ ಪಂಚಾಶತ್-19) ಹೇಕರೀಶ ಹಸ್ತಿಗಿರಿಯಲ್ಲಿರುವ ಸ್ವಾಮಿಯೇ, ಸತ್ವವಂತಃ-ಸಾತ್ವಿಕರಾದ ಮಹಾಪುರುಷರು, ಹೃದಯೇ - ಹೃದಯದಲ್ಲಿ ಚಿನ್ಮಯತಯಾ-ಜ್ಞಾನ ರೂಪದಿಂದ, ರೂಢಸ್ಯ-ಇರುವ, ಸ್ತಂಭಾನುಕಾರಿ-ಕೋರೆಹುಲ್ಲಿನ ಹಾಗೆ, ಪರಿಣಾಮ ವಿಶೇಷ ಭಾಜಃ – ಪರಿಣಾಮ ವಿಶೇಷವನ್ನು ಹೊಂದಿರುವ, ತವ-ನಿನ್ನ ಚತುರ್ಷುಸ್ಥಾನೇಷು ಅಪಿ-ನಾಲ್ಕುಸ್ಥಾನಗಳಲ್ಲಿಯೂ ಶಾಖಾ ವಿಭಾಗ ಚತುರೇ-ಕೊಂಬೆಗಳ ವಿಭಾಗದಿಂದ ಪ್ರಕಾಶಿಸುವ ಚಾತುರಾತ್ಮ್ಯೇ ನಾಲ್ಕುಮೂರ್ತಿಗಳನ್ನು ಜಾಗ್ರತಿ-ಉಪಾಸನೆ ಮಾಡುತ್ತಾರೆ. ಅದಾಗಿ ಶ್ರೀ ವೈಕುಂಠದಲ್ಲಿ ವಿಶಾಖಯೂಪವೆಂಬ ಒಂದು ದೊಡ್ಡ ಸ್ತಂಭವಿದೆ. ಅದರಲ್ಲಿ ಕೆಳಗಡೆ ಅದಕ್ಕೆ ಸ್ವಲ್ಪ ಮೇಲುಗಡೆ ಅದಕ್ಕೂ ಸ್ವಲ್ಪ ಮೇಲುಗಡೆ, ಅನಂತರ ತುದಿಯಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಕೊಂಬೆಗಳ ಹಾಗೆ ಭಗವಂತನ ವಿಗ್ರಹಗಳಿವೆ. ಅವುಗಳ ಪೈಕಿ ವಾಸುದೇವ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ನಾಲ್ಕು ರೂಪಗಳು ಬಾಹ್ಯೇಂದ್ರಿಯ ವ್ಯಾಪಾರಗಳುಳ್ಳವುಗಳಾಗಿ ಜಾಗ್ರದವಸ್ಥೆಯಿಂದ ಕೂಡಿವೆ ಅದಕ್ಕೆ ಸ್ವಲ್ಪ ಮೇಲೆ ನಾಲ್ಕು ದಿಕ್ಕುಗಳಲ್ಲಿಯೂ ಇರುವ ನಾಲ್ಕು ಮೂರ್ತಿಗಳು ಬಾಹ್ಯೇಂದ್ರಿಯ ವ್ಯಾಪಾರವಿಲ್ಲದೆ ಕೇವಲ ಮಾನಸ ವ್ಯಾಪಾರದಿಂದ ಸ್ವಪ್ನದ ಸ್ಥಿತಿಯ ಹಾಗೆ ಇವೆ ಅದಕ್ಕೆ ಮೇಲೆ ಇರುವ ನಾಲ್ಕು ಮೂರ್ತಿಗಳು ಮನೋ ವ್ಯಾಪಾರವೂ ಇಲ್ಲದೆ ಸುಷುಪ್ತಿ ದಶೆಯಲ್ಲಿವೆ ಅದಕ್ಕೆ ಮೇಲೆ ಇರುವ ನಾಲ್ಕು ಮೂರ್ತಿಗಳು ಮೂರ್ಛಾದಶೆಯಂತಿವೆ. ಇದೇ ತುರೀಯಾವಸ್ಥೆ. ಈ ರೀತಿಯ ನಾಲ್ಕು ಅವಸ್ಥೆಗಳಲ್ಲಿರುವ ನಾಲ್ಕು ವಿಧ ಮೂರ್ತಿಗಳನ್ನು ಯೋಗಿಯು ಯತಮಾನ, ವ್ಯತಿರೇಕ, ಏಕೇಂದ್ರಿಯ, ವಶೀಕಾರ ಸಂಜ್ಞಾರೀತಿಯಲ್ಲಿ ಧ್ಯಾನ ಮಾಡತಕ್ಕವನು. (**ಕೇಶವಾದಿಹಳಾನ**) ಕೇಶವ, ನಾರಾಯಣ, ಮಾಧವ ಇತ್ಯಾದಿಯಾದ ಹನ್ನೆರಡು ರೂಪಗಳೂ ವ್ಯೂಹಾಂತರಗಳು.

ವಿಭವಾವತಾರ

ವಿಭವಂಗಳಾವನ–ವಿಭವ ರೂಪಗಳು ಪದ್ಮನಾಭ, ಧ್ರುವ, ಅನಂತ, ಶಕ್ತಿ, ಮಧುಸೂದನಃ ಇತ್ಯಾದಿಯಾದ ಮೂವತ್ತುಕ್ಕೂ ಮೇಲಾದ ರೂಪಗಳು. ವಿಷ್ವಕ್ಸೇನ ಸಂಹಿತೆಯಲ್ಲಿ ಮೂವತ್ತಾರು ರೂಪಗಳೆಂದೂ ಅಹಿರ್ಬುಧ್ನ್ಯ ಸಂಹಿತೆ

ಯಲ್ಲಿ ಮೂವತ್ತೊಂಬತ್ತು ಎಂದೂ ಹೇಳಿರುವುದನ್ನು ವಸಿಸ್ಸಿನಲ್ಲಿಟ್ಟು ಕೊಂಡವರಾಗಿ ಮೂವತ್ತಿಗಿಂತ ಜಾಸ್ತಿ ನಲವತ್ತರ ಒಳಗೆ ಎಂಬ ಅರ್ಥದಲ್ಲಿ ಮೂವತ್ತು ಚ್ಚಿಲ್ಯಾನ ಎಂದು ಹೇಳಿದ್ದಾರೆ ಹಾಗಿದ್ದರೆ ದಶವತಾರವೆಂದು ಹತ್ತು ಅವತಾರಗಳನ್ನು ಮಾತ್ರ ಹೇಳುವುದಕ್ಕೆ ಕಾರಣವೇನೆಂದರೆ (**ಇವಟ್ರೈಲ್ ಮತ್ಸ್ಯಕೂರ್ಮಾದಿಹಳಾನ**) ಎಂದು ಆರಂಭಿಸಿ ವಿವರಿಸುತ್ತಾರೆ ಅದಾಗಿ ಮತ್ಸ್ಯಕೂರ್ಮಾದಿ ಅವತಾರಗಳು ಒಂದೊಂದು ಪ್ರಯೋಜನವನ್ನು ಉದ್ದೇಶಿಸಿ ವಿಶೇಷವಾಗಿ ಹೇಳಲ್ಪಟ್ಟಿವೆ ಅದಾಗಿ ವೇದಾಹರಣ, ಕ್ಷೀರಸಮುದ್ರ ಮಥನ ಇತ್ಯಾದಿ ಪ್ರಯೋಜನಗಳು–ಹಾಗಾದರೆ ರಾಮಕೃಷ್ಣಾ ದ್ಯವತಾರಗಳಲ್ಲಿ ಭಗವಂತನು ಕರ್ಮವಶ್ಯರ ಹಾಗೆ ಕಷ್ಟಗಳನ್ನು ಅನುಭವಿಸುವುದು ಸರಿಯೇ ಎಂದರೆ, ಇದು "ಮಾಯಾವಿಡಂಬನ ಮವೇಹಿ ಯಥಾನಟಸ್ಯ" ಎಂದು ಭಾಗವತದಲ್ಲಿ ಹೇಳಿರುವಂತೆ, ನಟನು ಅನೇಕ ವೇಷಗಳನ್ನು ಹಾಕಿಕೊಂಡು ರಂಗಸ್ಥಳದಲ್ಲಿ ನಟಿಸುವಂತೆ ಭಗವಂತನೂ ನಟಿಸುತ್ತಾನೆಂಬುದನ್ನು ಹೃದಯದಲ್ಲಿಟ್ಟುಕೊಂಡು, ಆಚಾರ್ಯರು **ಇವ್ವಿಭವಂಗಳಿಲ್** ಎಂದಾರಂಭಿಸಿ ಅನುಗ್ರಹಿಸುತ್ತಾರೆ

ಈ ವಿಭವಾವತಾರಗಳಲ್ಲಿ ಈಶ್ವರನು ಆಯಾಯಾ ಕಾರ್ಯವಿಶೇಷಗಳಿಗೆ ಅನುಗುಣವಾಗಿ ತನಗೆ ಬೇಕಾದಾಗ ಬೇಕಾದ ಗುಣಗಳನ್ನು ಮರೆಸಿ, ಬೇಕಾದಾಗ ಪ್ರಕಾಶಪಡಿಸಿ, ನಡೆಸುತ್ತಾನೆ. ಅಂದರೆ **ಆನ್ವೋಕಾಸ್ಯ ವಿಶೇಷಂಗಳುಕ್ಕೀಡಾಹ** ಅಸುರ ಪ್ರಕೃತಿಗಳನ್ನು ಮೋಹಗೊಳಿಸುವುದಕ್ಕೂ ಆಶ್ರಿತರನ್ನ ಸಂತೋಷಗೊಳಿಸುವುದಕ್ಕೂ ಇನ್ನೂ ಅನೇಕ ವಿಧವಾದ ವಿಚಿತ್ರ ಕಾರ್ಯಗಳನ್ನು ಮಾಡುವುದಕ್ಕೋಸ್ಕರವೂ **ತಾನ್ ವೇಂಡಿನ ಗುಣಂಗಳೈ ವೇಂಡಿನಪೋದು ಮರೈತ್ತುಮ್ ವೇಂಡಿನಪೋದು ಪ್ರಕಾಶಿಪ್ಪಿತ್ತುಂ**–ರಾಮಾವತಾರದಲ್ಲಿ ಪರತ್ವ ಸೂಚಕವಾದ ಗುಣಗಳನ್ನು ಪ್ರಾಯೇಣ ಮುಚ್ಚಿಟ್ಟನು ಆದರೂ ಜಟಾಯು ಮೋಕ್ಷ ಪ್ರದಾನ ಸಮುದ್ರದಲ್ಲಿ ಸೇತುಬಂಧನ, ವಿಭೀಷಣ ಶರಣಾಗತಿ, ತನ್ನ ಅವತಾರ ಸಮಾಪನ ಕಾಲದಲ್ಲಿ, ಅಯೋಧ್ಯೆಯಲ್ಲಿದ್ದ ಚರಾಚರ ಪ್ರಾಣಿಗಳನ್ನು ಮೋಕ್ಷಕ್ಕೆ ಕರೆದೊಯ್ದುದ್ದು, ಎಂಬೀ ಪ್ರಕರಣಗಳಲ್ಲಿ ತನ್ನ ಪರತ್ವವನ್ನು ಪ್ರಕಾಶಪಡಿಸಿದನು. ಹಾಗೆಯೇ ಕೃಷ್ಣಾವತಾರದಲ್ಲಿ ಜರಾಸಂಧಾದಿ ಯುದ್ಧಗಳಲ್ಲಿ ತನ್ನ ಪರತ್ವವನ್ನು ಮರೆಸಿ, ಅರ್ಜುನ ಯುದ್ಧ ಪ್ರೋತ್ಸಾಹನಾರ್ಥವಾಗಿ ಗೀತೆಯನ್ನು ಉಪದೇಶಿಸಿಯೂ, ವಿಶ್ವರೂಪ ದರ್ಶನಗಳನ್ನು ಮಾಡಿಯೂ ಗೋವರ್ಧನೋದ್ಧರಣಾದಿ ದಶೆಗಳಲ್ಲಿ ಆಶ್ರಿತ ಸಂರಕ್ಷಣಾದಿಗಳನ್ನು ಮಾಡಿಯೂ, ತನ್ನ ಪರತ್ವವನ್ನು ಪ್ರಕಟನೆ ಮಾಡಿದನಲ್ಲವೇ ಅವುಗಳು ಇಲ್ಲಿ ವಿವಕ್ಷಿತ.

ವ್ಯೂಹಾವತಾರಗಳ ಹಾಗೆ ಈ ವಿಭವಾವತಾರಗಳಲ್ಲಿಯೂ ಅವಾಂತರ ಭೇದಗಳು–**ಇವಟ್ರೈಲ್ ಅವಾಂತರ ಭೇದಂಗಳ್**–ಎಂದಾರಂಭಿಸಿ **ಉಂಟೆನ್ನು**ತ್ತಾರೆ. ಅದಾಗಿ ಈ ವಿಭವಾವತಾರಗಳಲ್ಲಿ ಅವಾಂತರ ಭೇದಗಳು (ಒಳಗೆ ಇರುವ ಭೇದಗಳು) ಕೃಷ್ಣರೂಪಾಣ್ಯಸಂಖ್ಯಾನಿ–ಕೃಷ್ಣನ ರೂಪಗಳು ಅನಂತಗಳು, ಎಂಬ ವಚನಗಳ ಪ್ರಕಾರ ಬಹುವಾಗಿವೆ ಮದನಗೋಪಾಲಕೃಷ್ಣ, ವೇಣುಗೋಪಾಲ, ಚತುರ್ಭುಜಗೋಪಾಲ, ಲಕ್ಷ್ಮೀನರಸಿಂಹ, ಯೋಗಾನಂದನೃಸಿಂಹ, ಚತುರ್ಭುಜ, ಅಷ್ಟಭುಜನರಸಿಂಹ ಇತ್ಯಾದಿ

ಇಪ್ಪಡಿಯೇ ಇತ್ಯಾದಿ ಹೀಗೆಯೇ ವಿಭವಾವತಾರಗಳಲ್ಲಿ ಅಸಂಖ್ಯಾತವಾದ ಅವತಾರಗಳನ್ನು ಸಾತ್ತ್ವತಾದಿ ಸಂಹಿತೆಗಳಿಂದ ತಿಳಿಯತಕ್ಕದ್ದು. ಅನಂತರ ಆವೇಶಾವತಾರ ಭೇದಗಳನ್ನು ತಿಳಿಸುತ್ತಾರೆ. **ಶಿಲಜೀವರ್ ಹಳೈ ಇತ್ಯಾದಿ.** ಕೆಲವು ಜೀವರುಗಳನ್ನು (ಹಿರಣ್ಯಗರ್ಭರುದ್ರಾದಿಗಳನ್ನು) ವಿಗ್ರಹ ವಿಶೇಷದಿಂದಲೂ, ಶಕ್ತಿ ವಿಶೇಷದಿಂದಲೂ, ಅಧಿಷ್ಠಿಸಿ (ಅಂತಃಪ್ರವೇಶಿಸಿ) ಅತಿಶಯವಾದ ಕೆಲಸಗಳನ್ನು ನಡೆಸಿಕೊಳ್ಳುವುದು ವಿಭವಭೇದ. ಸೃಷ್ಟಿಂತತ.ಕರಿಷ್ಯಾಮಿ ತ್ವಾಮಾವಿಶ್ಯ ಪ್ರಜಾಪತೇ, ಎಂದು ಚತುರ್ಮುಖನ ಶರೀರದಲ್ಲಿ ವಿಗ್ರಹರೂಪಿಯಾಗಿ ಪ್ರವೇಶಿಸಿ ಆ ಜೀವದ್ವಾರಾ ಸೃಷ್ಟಿಕಾರ್ಯವನ್ನು ನಡಸುವುದು, ಹಾಗೆಯೇ ರುದ್ರ ಶರೀರದಲ್ಲಿ ವಿಗ್ರಹದ್ವಾರಾ ಪ್ರವೇಶಿಸಿ

ಅರ್ಚಾವತಾರ ಸ್ವರೂಪಕಥನಮ್

ಪರವ್ಯೂಹಾದಿ ರೂಪಙ್ಗಳ್ ತಾನೇ ಆಶ್ರಿತರ್ಕ್ಕಾಹ ಅವರ್‌ಹಳ್ ಅಪೇಕ್ಷಿತ್ತಪಡಿಯಿಲೇ "ಬಿಂಬಾ ಕೃತ್ಯಾತ್ಮನಾ ಬಿಂಬೇ ಸಮಾಗತ್ಯಾವತಿಷ್ಠತೇ" ಎನ್ಹಿರ ಪಡಿಯೇ ನಿರ್ಕ್ಕಿರ ನಿಲೈ ಅರ್ಚಾವತಾರಮ್.

ಸಂಹಾರ ಕಾರ್ಯವನ್ನೂ ನಡೆಸುವುದು ಇಲ್ಲಿ **'ಶಿಲಜೀವರ್‌ಹಳ್ಳೈ'** ಎಂದಾರಂಭಿಸಿ ತಿಳಿಸುವುದರಿಂದ, ಈ ಅವತಾರಗಳು ಮುಮುಕ್ಷುಗಳಿಗೆ ಉಪಾಸ್ಯವಲ್ಲವೆಂದು ತಿಳಿಸುವುದೇಹೇಗೆ ಬಲರಾಮನು, ಅನಂತನೆಂಬ ನಿತ್ಯಸೂರಿಯಾದ ಜೀವನಲ್ಲಿ ಅಧಿಷ್ಠಾನ ಮಾಡಿದ ಅವತಾರವಾದ್ದರಿಂದ, ಮುಮುಕ್ಷುಗಳಿಗೆ ಅನುಪಾಸ್ಯನು. ಪ್ರಣಾಮಾದಿ ಆಚಾರಗಳಿಗೆ ಬಾಧಕವಿಲ್ಲ. ಭಾರ್ಗವರಾಮ, ಭಗವದ್ವ್ಯೈಪಾಯನ(ವ್ಯಾಸ)ರಲ್ಲಿ ವಿಗ್ರಹ ದ್ವಾರಾ ಅಧಿಷ್ಠಾನವು, ಆಯಾಯಾ ಅಧಿಕಾರಿಗಳಿಗೆ, ಪ್ರತಿಷ್ಠಾರ್ಚನಾದ್ಯನುಮತಿಯನ್ನು ಕೊಡುವುದಕ್ಕೋಸ್ಕರ ಅವರುಗಳು ಮುಮುಕ್ಷುಗಳಿಗೆ ಉಪಾಸ್ಯರಲ್ಲ. ಪಂಚರಾತ್ರಾಗಮಗಳಲ್ಲಿ ಯಾರಿಗೆ ಪ್ರತಿಷ್ಠಾರ್ಚನಾದಿಗಳನ್ನು ಮಾಡಲು ಅನುಮತಿ ನೀಡಿಲ್ಲವೋ, ಅವರಲ್ಲಿ ಶಕ್ತ್ಯಾವೇಶ ಮಾತ್ರ

ಅರ್ಚಾವತಾರ

ಪರವ್ಯೂಹಾದಿ ರೂಪಂಗಳ್‌ತಾನೇ ಇತ್ಯಾದಿ–ಪರರೂಪ, ವ್ಯೂಹರೂಪ, ವಿಭವರೂಪಗಳು, ಆಶ್ರಿತರಿಗೋಸ್ಕರ ಅವರ ಅಪೇಕ್ಷೆಯಂತೆ (1) "ಬಿಂಬಾಕೃತ್ಯಾತ್ಮನೇ ಬಿಂಬೇ ಸಮಾಗತ್ಯಾವತಿಷ್ಠತೇ" ಎಂದು ಹೇಳುವ ಪ್ರಕಾರ, ಶ್ರೀ ರಂಗಾದಿಕ್ಷೇತ್ರಗಳಲ್ಲಿ ಸ್ಥಿರಪ್ರತಿಷ್ಠಿತವಾಗಿರುವ ಸ್ವಭಾವದಿಂದ ಕೂಡಿರುವುದು ಅರ್ಚಾವತಾರ. ಅಂದರೆ ಭಕ್ತನು ತನ್ನ ಪ್ರೀತಿಯಿಂದ ಯಾವ ವಿಗ್ರಹ ರೂಪದಲ್ಲಿ ಭಗವಂತನನ್ನು ಆರಾಧಿಸಬೇಕೆನ್ನುತ್ತಾನೋ ಆ ಪ್ರಾಕೃತವಾದ ವಿಗ್ರಹ ರೂಪದಲ್ಲಿ, ಪರ, ವ್ಯೂಹ, ವಿಭವಗಳಲ್ಲೊಂದಾದ, ಅಂದರೆ ವೈಕುಂಠನಾಥ, ವ್ಯೂಹ ವಾಸುದೇವ, ವ್ಯೂಹಸಂಕರ್ಷಣ ರಾಮಕೃಷ್ಣಾದಿ ರೂಪಗಳಲ್ಲಿ ಒಂದಾದ, ಅಪ್ರಾಕೃತರೂಪವನ್ನು ಆ ವಿಗ್ರಹಕ್ಕೆ ಸರಿಯಾಗಿ, ಅದರಲ್ಲಿ ಹಾಲಿನಲ್ಲಿ ನೀರುಬೆರೆತಂತೆ ಪ್ರವೇಶಿಸಿ, ಆ ಭಕ್ತನು ಮಾಡುವ ಪೂಜಾದಿಗಳನ್ನು ಸ್ವೀಕರಿಸುತ್ತಾನೆ.

> ಸುರೂಪಾಂಪ್ರತಿಮಾಂ ವಿಷ್ಣೋಃ ಪ್ರಸನ್ನವದನೇಕ್ಷಣಾಮ್ ।
> ಕೃತ್ವಾತ್ಮನಃ ಪ್ರೀತಿಕರೀಂ ಸುವರ್ಣರಜತಾದಿಭಿಃ ॥
> ತಾಮರ್ಚಯೇತ್ ತಾಂಪ್ರಣಮೇತ್ ತಾಂಯಜೇತ್ ತಾಂವಿಚಿಂತಯೇತ್ ।
> ವಿಶತ್ಯಪಾಸ್ತ ದೋಷಸ್ತು ತಾಮೇವ ಬ್ರಹ್ಮರೂಪಿಣೀಮ್ ॥

ಎಂಬಂತೆ ಆ ವಿಗ್ರಹದಲ್ಲಿ ಸಾನ್ನಿಧ್ಯವನ್ನು ಮಾಡಿಕೊಂಡಿರುವ ಪರಬ್ರಹ್ಮನನ್ನು ಅರ್ಚಿಸಿ, ನಮಸ್ಕರಿಸಿ, ಧ್ಯಾನ ಮಾಡಿ, ಕೊನೆಗೆ ಸಕಲಪಾಪ ವಿನಿರ್ಮುಕ್ತನಾಗಿ ಆ ಭಗವಂತನನ್ನು ಪಡೆಯುತ್ತಾನೆ. ಹೀಗೆ ಪ್ರಾಕೃತವಿಗ್ರಹದಲ್ಲಿ ಅಪ್ರಾಕೃತರೂಪವನ್ನು ಬೆರೆಸಿಕೊಂಡು ಸಾನ್ನಿಧ್ಯಮಾಡಿಕೊಂಡಿರುವುದು ಅರ್ಚಾವತಾರ.

---

1) "ಬಿಂಬಾ ಕೃತ್ಯಾತ್ಮನಾ ಬಿಂಬೇ ಸಮಾಗತ್ಯಾವತಿಷ್ಠತೇ" ।
ಕರೋತ್ಯ ಮೂರ್ತಮಖಿಲಾಂ ಭೋಗಶಕ್ತಿಂತು ಚಾತ್ಮಸಾತ್ ॥ (ಸಾತ್ವ ಸಂ 6–22)

ಆಶ್ರಿತರು, ಶಿಲಾ, ದಾರು, ಲೋಹರೂಪದಲ್ಲಿ ಯಾವ ವಿಗ್ರಹವನ್ನು ಮಾಡಿರುತ್ತಾರೋ ಆ ವಿಗ್ರಹದಲ್ಲಿ ಅವರವರ ಅಪೇಕ್ಷೆಯ ಮೇರೆ, ಅದಕ್ಕೆ ಸದೃಶವಾದ ಅಪ್ರಾಕೃತ ಶುದ್ಧ ಸತ್ವರೂಪವನ್ನು ತಾಳಿ, ಅವರು ಮಾಡುವ ಸಂಹಿತಾ ಬೋಧಿತವಾದ ಶಾಸ್ತ್ರೀಯ ಆವಾಹನಾದಿ ಪ್ರತಿಷ್ಠಾದಿಗಳಿಂದ, ಆ ವಿಗ್ರಹಗಳಲ್ಲಿ ನೀರಕ್ಷೀರ ವಿಭಾಗವಿಲ್ಲದ ಹಾಗೆ ಪ್ರವೇಶಿಸಿ, ಅವರವರ ಇಷ್ಟಾರ್ಥಗಳನ್ನು ದಯಪಾಲಿಸಲು ಅವತಿಷ್ಠತೇ – ಮಾಂಸಚಕ್ಷುಸ್ಸಿಗೆ ಗೋಚರನಾಗಿ ಸಾನ್ನಿಧ್ಯಮಾಡಿಕೊಂಡಿರುತ್ತಾನೆ. (ಸಾತ್ವತ ಸಂಹಿತೆ 2-7-8)

ಹಾರ್ದ ಅಥವಾ ಅನ್ತರ್ಯಾಮಿರೂಪಮ್

ಸರ್ವರುಡೈಯವುಮ್ ಹೃದಯಙ್ಗಳಿಲೇ ಸೂಕ್ಷ್ಮಮಾಯಿರುಪ್ಪದೊರು ರೂಪ ವಿಶೇಷತ್ತೈಕ್ಕೊಣ್ಡು ನಿಶ್ಚಿರನಿಲೈ ಅನ್ತರ್ಯಾಮ್ಯವತಾರಮ್. ಇದು ಸರ್ವಾನ್ತರ್ಯಾಮಿಯಾನ ದಿವ್ಯಾತ್ಮಸ್ವರೂಪತ್ತೈಯನು ಸನ್ಧಿಕ್ಕ ಇಳಿವಾರ್ಕ್ಕುತ್ತುರೈಯಾಹ "ಅಷ್ಟಾಙ್ಗ ಯೋಗ ಸಿದ್ಧಾನಾಂಹೃದ್ಯಾಗ ನಿರತಾತ್ಮನಾಂ। ಯೋಗಿನಾಮಧಿಕಾರ ಸ್ಸ್ಯಾದೇ ಕಸ್ಮಿನ್ ಹೃದಯೇಶಯೇ" ಇತ್ಯಾದಿಹಳಿಲೇ ಶೊಲ್ಲುಹೈಯಾಲೇ ಅನ್ತರ್ಯಾಮಿ ರೂಪಮೆನ್ರು ಶೊಲ್ಲಪ್ಪಟ್ಟದು.

ಅಂತರ್ಯಾಮ್ಯವತಾರ

ಸರ್ವರುಡೈಯವುಮ್ ಇತ್ಯಾದಿ ಎಲ್ಲಾವ ಮನುಷ್ಯರ ಹೃದಯಗಳಲ್ಲಿ ಸೂಕ್ಷ್ಮವಾಗಿರುವ ರೂಪ ವಿಶೇಷವನ್ನು ತಾಳಿ ಸಾನ್ನಿಧ್ಯ ಮಾಡಿಕೊಂಡಿರುವುದು ಅಂತರ್ಯಾಮ್ಯವತಾರ. **ಸೂಕ್ಷ್ಮಮಾಯ್, ರೂಪವಿಶೇಷತ್ತೈಕ್ಕೊಂಡು** ಎಂಬ ಪದಗಳಿಂದ ಈ ಅಂತರ್ಯಾಮಿ ರೂಪವು, ವಿಭುವಾದ ಸ್ವರೂಪವಲ್ಲ **ನೀಲತೋಯದ ಮಧ್ಯಸ್ಥಾವಿದ್ಯುಲ್ಲೇ ಖೇವ ಭಾಸ್ವರಾ ॥ ನೀವಾರಶೂಕವತ್ತನ್ವೀ ಪೀತಾಭಾಸ್ಯಾತ್ತನೂಪಮಾ ॥ ತಸ್ಯಾಶ್ಶಿಖಾಯಾಮಧ್ಯೇಪರಮಾತ್ಮಾವ್ಯವಸ್ಥಿತಃ ॥** ಎಂಬ ಶ್ರುತಿಯು ಹೇಳುವಂತೆ, ಹೃದಯ ಪರಿಮಿತವಾಗಿ ನೀಲಮೇಘಶ್ಯಾಮಳವಾದ ಅಪ್ರಾಕೃತವಾದ ವಿಗ್ರಹ ಯುಕ್ತವಾಗಿ ಮಿಂಚಿನ ಹಾಗೆ ಪ್ರಕಾಶದಿಂದ ಕೂಡಿ, ನೀವಾರಧಾನ್ಯದ ಕಡ್ಡಿಯ ಹಾಗೆ, ಸೂಕ್ಷ್ಮವಾಗಿ, (ಹಳದಿ ಬಣ್ಣ) ಸ್ವರ್ಣಾಭೆಯಾದ ಲಕ್ಷ್ಮೀ ವಿಗ್ರಹ ವಿಶಿಷ್ಟವಾಗಿ ಜಾಠರಾಗ್ನಿಯ ಸೂಕ್ಷ್ಮವಾದ ಜ್ವಾಲೆಯ ಮಧ್ಯೆ, ಪರಮಾತ್ಮರೂಪವು ವಿರಾಜವಾಗಿದೆ ಇದು ಅಂತರ್ಯಾಮಿ ಸ್ವರೂಪ. "ಸರ್ವತ್ತಿನುಡೈಯವುಮ್", ಎಂದು ಹೇಳದೆ "ಸರ್ವರುಡೈಯವುಮ್" ಎಂದು ಆಚಾರ್ಯರು ಹೇಳಿರುವುದರಿಂದ, ಯೋಗವನ್ನು ಮಾಡಲು ಅಧಿಕಾರವಿಲ್ಲದೆ ಇರುವ ಮೃಗಾದಿ ಶರೀರಗಳಲ್ಲಿ ಈ ಅಂತರ್ಯಾಮಿ ರೂಪವಿಲ್ಲವೆಂಬುದು ಭಾವ. ಕೇವಲ ಮನುಷ್ಯ ಶರೀರಗಳಲ್ಲಿ ಮಾತ್ರ ಈ ಅಂತರ್ಯಾಮಿ ರೂಪವಿದೆ

ಹೀಗೆ, "ಯಃಪೃಥಿವ್ಯಾಂತಿಷ್ಠನ್, ಯ ಆತ್ಮನಿತಿಷ್ಠನ್——ಯ ಆತ್ಮಾನಮಂತರೋಯಮಯತಿ", ಎಂದು ಶ್ರುತಿಗಳು ದಿವ್ಯಾತ್ಮಸ್ವರೂಪವನ್ನು, ಸರ್ವಾಂತರ್ಯಾಮಿಯಾಗಿ ನಿರ್ಣಯಿಸಿರುವಾಗ, ಮನುಷ್ಯನ ಹೃದಯ ಪ್ರದೇಶದಲ್ಲಿ ಸೂಕ್ಷ್ಮವಿಗ್ರಹ ರೂಪದಿಂದ ಕೂಡಿದವನನ್ನು, ಅಂತರ್ಯಾಮಿ ಎಂದು ಹೇಳುವುದು ಹೇಗೆ ಎಂಬ ಆಕಾಂಕ್ಷೆಯನ್ನು ಆಚಾರ್ಯರು, **"ಇದು ಸರ್ವಾಂತರ್ಯಾಮಿಯಾನ"** ಎಂದಾರಂಭಿಸಿ ಪರಿಹರಿಸುತ್ತಾರೆ ಅದಾಗಿ ಈ ಹೃದಯವರ್ತಿ ದಿವ್ಯಮಂಗಳ ವಿಗ್ರಹ ವಿಶಿಷ್ಟವಾದ ರೂಪವು ಸರ್ವಾಂತರ್ಯಾಮಿಯಾದ ದಿವ್ಯಾತ್ಮ ಸ್ವರೂಪವನ್ನು ಅನುಸಂಧಾನ ಮಾಡಲು ತೊಡಗುವವರಿಗೆ, **(ತುರೈ)** ದ್ವಾರವಾಗಿ, (1) "ಅಷ್ಟಾಂಗಯೋಗ ಸಿದ್ಧಾನಾಂ ಹೃದ್ಯಾಗನಿರತಾತ್ಮನಾಮ್ । ಯೋಗಿನಾಮಧಿಕಾರ ಸ್ಯಾದೇಕಸ್ಮಿನ್ ಹೃದಯೇಶಯೇ ॥ 2)ಇತ್ಯಾದಿಗಳಲ್ಲಿ ಹೇಳುವುದರಿಂದ ಅಂತರ್ಯಾಮಿ ರೂಪವೆಂದು ಹೇಳಲ್ಪಟ್ಟಿದೆ ಅದಾಗಿ ಸರ್ವಾಂತರ್ಯಾಮಿಯಾದ ದಿವ್ಯಾತ್ಮ ಸ್ವರೂಪಚಿಂತನೆಗೆ ದಿವ್ಯ ಮಂಗಳ ವಿಗ್ರಹ ವಿಶಿಷ್ಟಹಾರ್ದಧ್ಯಾನವು **(ತುರೈ)**-ದ್ವಾರವೆಂದು ಹೇಳಲ್ಪಟ್ಟಿದೆ ಆಳವಾದ ತಟಾಕದಲ್ಲಿ ನೇರವಾಗಿ ಇಳಿಯಲಾಗುವುದಲ್ಲ ಆದಕ್ಕಾಗಿ, ಸೋಪಾನಗಳಲ್ಲಿಳಿದು ಸ್ನಾನಾದಿಗಳನ್ನು ಮಾಡುವ ಹಾಗೆ ನಿರಾಕಾರವಾದ ಭಗವತ್ಸ್ವರೂಪ ಚಿಂತನೆಯನ್ನು ಮಾಡಲು, ಮೊದಲು ವಿಗ್ರಹವಿಶಿಷ್ಟ ರೂಪವನ್ನು ಧ್ಯಾನಮಾಡಿ ಸಾಕ್ಷಾತ್ಕರಿಸಿನಂತರ ಸ್ವರೂಪೋಪಾಸನೆಯನ್ನು ಮಾಡಬೇಕು ಈ ವಿಷಯವನ್ನು ಶ್ರೀಮನ್ನಿಗಮಾಂತ ಮಹಾದೇಶಿಕರು ಶರಣಾಗತಿ ದೀಪಿಕೆಯಲ್ಲಿ (3) "ಪದ್ಮಾಭಿರಾಮಪದನೇಕ್ಷಣ, (4) ಮಾನಾತಿಲಂಘಿ ಸುಖಬೋಧ" ಎಂಬ ಎರಡು ಶ್ಲೋಕಗಳಲ್ಲಿ ವಿವರಿಸಿದ್ದಾರೆ.

---

1), 2), 3), 4), ಪ್ರ ತಿ ಸೂ

ಭಗವದ್ವಿಗ್ರಹಸ್ಯ ಶುದ್ಧ ಸತ್ವ ದ್ರವ್ಯತ್ವಮ್–ಭಗವದವತಾರ ರಹಸ್ಯಮ್

ಇಪ್ಪಡಿಯವತರಿಕ್ಕಿರ ರೂಪಙ್ಗಳಿಲ್ ವಹೈಹಳೆಲ್ಲಾಮ್ ಶುದ್ಧಸತ್ವ ದ್ರವ್ಯಮಯಙ್ಗಳಾಯ್ ಕರ್ಮತತ್ಫಲಙ್ಗಳೋಡು ತುವಕ್ಕರ ವರುಹೈಯಾಲೇ, ಶುದ್ಧಸೃಷ್ಟಿಎನ್ರು, ಪೇರ್ ಪೆತ್ತಿರುಕ್ಕುಮ್. ಇವ್ವವತಾರಙ್ಗಳೆಲ್ಲಾಮ್, ಸತ್ಯಙ್ಗಳೆನ್ರುಮ್, ಇವಱ್ಱಿಲ್ ಈಶ್ವರನುಕ್ಕು ಜ್ಞಾನಾದಿಸಙ್ಕೋಚಮಿಲ್ಲೈ ಯೆನ್ರುಮ್, ಇವ್ವಿಗ್ರಹಙ್ಗಳ್ ಶುದ್ಧಸತ್ವಮಯಙ್ಗಳೆನ್ರುಮ್, ಇವಱ್ಱುಕ್ಕು ಈಶ್ವರೇಚ್ಛಾ ಮಾತ್ರಮೇ ಕಾರಣಮೆನ್ರುಮ್, ಧರ್ಮರಕ್ಷಣಂಪಣ್ಣವೇಣ್ಡುಮ್ ಕಾಲಮೇ ಕಾಲಮೆನ್ರುಮ್, ಸಾಧುಪರಿತ್ರಾಣಾದಿಹಳೇ ಪ್ರಯೋಜನಙ್ಗಳೆನ್ರುಮ್, ಇವ್ವರ್ಥಂಗಳೈನ್ದು ಅನುಸನ್ಧಿಪ್ಪಾರ್ಕ್ಕು ಸ್ವಾಧಿಕಾರಾನುಗುಣ ಸಮಾಹಿತೋಪಾಯಪೂರ್ತಿಯಾಲೇ, ಜನ್ಮಾನ್ತರ ಮನುಭವಿಯಾದೇ ಮುಕ್ತರಾಹಲಾಮ್ ಎನ್ರುಮ್ "ಬಹೂನಿಮೇ ವ್ಯತೀತಾನಿ" ಎನ್ರು ತುಡಙ್ಗಿ ಅಞ್ಜು ಶ್ಲೋಕತ್ತಾಲೇ ಗೀತಾಚಾರ್ಯನ್ ಅರುಳಿಚ್ಚೆಯ್ದಾನ್.

ಶುದ್ಧ ಸೃಷ್ಟಿ –ಭಗವಂತನ ವಿಗ್ರಹವು ಶುದ್ಧಸತ್ವ ದ್ರವ್ಯಮಯ

ಹೀಗೆ ಭಗವಂತನು ಎತ್ತಿಕೊಳ್ಳುವ ವಿಗ್ರಹಗಳು ಪ್ರಾಕೃತರೂಪಗಳಂತೆ, ಹೇಯತ್ವ, ಜ್ಞಾನಸಂಕೋಚತ್ವ, ಕರ್ಮಮೂಲತ್ವ ಸುಖದುಃಖಾನುಭವ ಹೇತುತ್ವಗಳಿಂದ ಕೂಡಿದೆಯೋ ಎಂಬ ಸಂಶಯವನ್ನು **"ಇಪ್ಪಡಿಅವತರಿಕ್ಕಿರ ರೂಪಂಗಳಿಲ್"** ಎಂದು ಆರಂಭಿಸಿ ಆಚಾರ್ಯರು ಪರಿಹರಿಸುತ್ತಾರೆ. ಹೀಗೆ ಅವತಾರ ಮಾಡುವ ರೂಪಗಳಲ್ಲಿ **(ವಹೈಹಳ್)**–ಪ್ರಭೇದಗಳೆಲ್ಲಾ, ಶುದ್ಧ ಸತ್ವ-ದ್ರವ್ಯಮಯಗಳು ಪುಣ್ಯಪಾಪ ರೂಪ ಕರ್ಮ, ಅದರ ಫಲ, ಇವುಗಳ ಸಂಬಂಧವಿಲ್ಲದುದು. ಪ್ರಾಕೃತ ಶರೀರವು ಸಪ್ತಧಾತುಮಯತ್ವವಾಗಿ ಹೇಯ ಗುಣಾಸ್ಪದವಾಗಿದೆ ಶುದ್ಧ ಸತ್ವದ್ರವ್ಯಕ್ಕೆ ಅದಿಲ್ಲ ಪುಣ್ಯಪಾಪರೂಪ ಕರ್ಮ ಸಂಬಂಧವಿಲ್ಲದಿರುವುದರಿಂದ ಸುಖದುಃಖಾನುಭವಕ್ಕೆ ಪ್ರಸಕ್ತಿಯಿಲ್ಲ. ಆದ್ದರಿಂದ ಈ ಅವತಾರಗಳು ಶುದ್ಧ ಸೃಷ್ಟಿ ಎಂಬ ಹೆಸರನ್ನು ಪಡೆದಿವೆ. ಶುದ್ಧಸೃಷ್ಟಿ, ಮಿಶ್ರ ಸೃಷ್ಟಿ ಎಂದು ಅವತಾರವು ಎರಡು ವಿಧ. ಭಗವಂತನ ಅಂಶಾವತಾರಗಳಾದ ರಾಮಕೃಷ್ಣಾದ್ಯವತಾರಗಳು ಶುದ್ಧಸೃಷ್ಟಿ. ಇವುಗಳು ಮುಮುಕ್ಷೂಪಾಸ್ಯಗಳು. ಚತುರ್ಮುಖ ಬ್ರಹ್ಮ, ರುದ್ರ ಇವರುಗಳಲ್ಲಿ ವಿಗ್ರಹ ರೂಪವಾದ ಅನುಪ್ರವೇಶಾವತಾರವು ಮಿಶ್ರಸೃಷ್ಟಿ. ಇವುಗಳು ಮುಮುಕ್ಷೂಪಾಸ್ಯಗಳಲ್ಲವೆಂಬುದು ಇಲ್ಲಿಯ ತಾತ್ಪರ್ಯ.

---

1) ಅಷ್ಟಾಂಗ ಯೋಗ ಸಿದ್ಧಾನಾಂ - ಯಮನಿಯಮಾದ್ಯಷ್ಟಾಂಗ ಯೋಗದಿಂದ ಸಿದ್ಧಿಹೊಂದಿದ ಹೃದ್ಯಾಗನಿರತಾತ್ಮನಾಂ - ಮಾನಸ ಪೂಜಾದಿಗಳಲ್ಲಿ ಸರ್ವದಾ ಸಕ್ತರಾದ, ಯೋಗಿನಾಂ-ಏಕಸ್ಮಿನ್ ಹೃದಯೇಶಯೋ - ಯೋಗಿಗಳಿಗೆ ಸಾರ್ವಸಾದ ಹೃದಯ ಕಮಲದಲ್ಲಿ ಶಯನಿಸಿರುವ ಈ ಅಂತರ್ಯಾಮಿಯಲ್ಲಿ, ಅಧಿಕಾರಃ - ಉಪಾಸನೆ ಮಾಡಲು ಅಧಿಕಾರವು, ಸ್ಯಾತ್ – ಉಂಟಾಗುತ್ತದೆ

2) ಅದಿಶಬ್ದದಿಂದ, ಮಂತ್ರೈಃ ಸಮಾಧಿ ವಿಷಯೇ ನಾನಾ ಭೂಮಿ ಚಯೇಷು ಚ ।
ನಿರಾಕಾರೋ ನಿರಂಗಶ್ಚ ಸ್ಮರ್ತವ್ಯೋ ಬ್ರಹ್ಮಲಕ್ಷಣಃ ॥
ತತ್ಪ್ರಾಪ್ತ್ಯುಪಾಯೇ ಪ್ರಥಮೋ ಯಾಗ ಹೋಮ ವಿಶೇಷವಾನ್ ।
ಸಾಕಾರಂ ಸಂಸ್ಮರೇತ್, ಎಂದು ನಿರಾಕಾರ ಬ್ರಹ್ಮ (ಸ್ವರೂಪ) ಪ್ರಾಪ್ತ್ಯುಪಾಯ ವಿಷಯದಲ್ಲಿ ಸಾಕಾರ-
ಆದಾಗಿ ನಿತ್ಯಮಂಗಳವಿಗ್ರಹ ವಿಶಿಷ್ಟ ಸ್ಮಾರ್ದಸ್ಮರಣವು ದ್ವಾರವೆಂದು ಸ್ಪಷ್ಟೀಕರಿಸಿದೆ

3) ಪದ್ಮಾಭಿರಾಮವದನೇಕ್ಷಣಪಾಣಿಪಾದಂ ದಿವ್ಯಾಯುಧಾಭರಣ ಮಾಲ್ಯವಿಲೇಪಿನಂ ತ್ವಾಮ್ ।
ಯೋಗೇನ ನಾಥ ಶುಭಮಾಶ್ರಯ ಮಾತ್ಮವಂತಃ ಸಾಲಂಬನೇನ ಪರಿಚಿಂತ್ಯನ ಯಾಂತಿ ತೃಪ್ತಿಮ್ ॥

ಕೆಂಪು ತಾವರೆಯಹಾಗೆ ಸೊಗಸಾದ, ಬಾಯಿ, ಕಣ್ಣು, ಕೈ, ಪಾದಗಳಿಂದ ಕೂಡಿದ ಶರೀರದಿಂದ ಕೂಡಿದವನು ಭಗವಂತ ದಿವ್ಯವಾದ ಆಭರಣ, ಮಾಲೆ, ಚಂದನಾದಿಗಳನ್ನು ತನ್ನ ಶರೀರದಲ್ಲಿ ಧರಿಸಿರುವವನು, ಇಂಥಹ ಶುಭಾಶ್ರಯ ದಿವ್ಯ ಮಂಗಳವಿಗ್ರಹವಿಶಿಷ್ಟ ರೂಪವನ್ನು ಯೋಗಿಗಳು, ಯೋಗಾಭ್ಯಾಸಕಾಲದಲ್ಲಿ ಧ್ಯಾನಮಾಡಿ ಸಾಕ್ಷಾತ್ಕರಿಸಿ ತೃಪ್ತಿಯನ್ನು ಹೊಂದುವುದಿಲ್ಲ. ದಿವ್ಯ ಮಂಗಳವಿಗ್ರಹ ವಿಶಿಷ್ಟವಾದ ಭಗವಂತನ ಧ್ಯಾನವಿದು ಇದಕ್ಕೆ ಸಾಲಂಬನ ಯೋಗವೆಂದು ಹೆಸರು (ಶರಣಾಗತಿ ದೀಪಿಕೆ 22ನೇ ಶ್ಲೋಕ)

ಪು. ಶಿ. ನೋ

ಅವತಾರರಹಸ್ಯ

ಭಗವಂತನ ಅವತಾರಗಳಿಗೆ ಕಾರಣವೇನು? ಇವು ಕರ್ಮ ರೂಪವೋ? ಯಾವಾಗ? ಏನು ಫಲ? ಇತ್ಯಾದಿ ವಿಚಾರಗಳನ್ನು ಗೀತೆಯಲ್ಲಿ ಹೇಳಿರುವಂತೆ **ಇವ್ವವತಾರಂಗಳೆಲ್ಲಾಂ,** ಎಂದಾರಂಭಿಸಿ ತಿಳಿಸುತ್ತಾರೆ. ಈ ಭಗವಂತನ ಈ ಅವತಾರಗಳು ಇಂದ್ರಜಾಲವಿದ್ಯೆಯ ಹಾಗೆ ಸುಳ್ಳೇ **ಎಂದರೆ** ಅಲ್ಲ. ಸತ್ಯವಾದವು, ಇವುಗಳಲ್ಲಿ **ಈಶ್ವರನಿಗೆ** ಜ್ಞಾನಾದಿ ಸಂಕೋಚವಿಲ್ಲ. ಈ ಅವತಾರ ವಿಗ್ರಹಗಳು ಶುದ್ಧಸತ್ತ್ವದ್ರವ್ಯಮಯವಾದುವು. ಪ್ರಾಕೃತವಲ್ಲವೆಂದರ್ಥ. ಈಶ್ವರನ ಇಚ್ಛೆಯೇ ಇವುಗಳಿಗೆ ಕಾರಣ. ಯಾವಾಗ ಈ ಲೋಕದಲ್ಲಿ ಅವತರಿಸಬೇಕೆಂದು ಸಂಕಲ್ಪಿಸುತ್ತಾನೋ ಆವಾಗ **ಅವತರಿಸುತ್ತಾನೆಂದರ್ಥ.** ಧರ್ಮರಕ್ಷಣವನ್ನು **ಮಾಡಬೇಕೆಂಬ** ಕಾಲವೇ ಕಾಲ. **ಸಾಧುಗಳನ್ನು ಪರಿತ್ರಾಣ**– ತನ್ನ ದಿವ್ಯ ಮಂಗಳ ರೂಪವನ್ನು ತೋರಿಸಿ ಅವರ ಮನಸ್ಸಿಗೆ ಆಪ್ಯಾಯವನ್ನುಂಟು ಮಾಡಿ ಆನುಷಂಗಿಕವಾಗಿ ದುಷ್ಟ ಸಂಹಾರವನ್ನು ಮಾಡುವುದೇ ಪ್ರಯೋಜನ. ಈ ಅವತಾರರಹಸ್ಯವನ್ನು ತಿಳಿದು ಅನುಸಂಧಾನ ಮಾಡುವವನಿಗೆ ಏಕ ಜನ್ಮದಲ್ಲಿಯೇ, ತನ್ನ ಅಧಿಕಾರಾನುಗುಣವಾದ ಸಮೀಹಿತ ಉಪಾಯ ಪೂರ್ತಿಯಿಂದ ಅಂದರೆ ಸಕಿಂಚನಾಧಿಕಾರಿಗೆ ಭಕ್ತಿಯೋಗಾನುಷ್ಠಾನದಿಂದಲೂ, ಅಕಿಂಚನಾಧಿಕಾರಿಗೆ ಪ್ರಪತ್ತಿ ಯೋಗಾನುಷ್ಠಾನದಿಂದಲೂ ಜನ್ಮಾಂತರವನ್ನು ಹೊಂದದ ಆದೇಜನ್ಮದಲ್ಲಿ ಮೋಕ್ಷವು ಲಭಿಸುತ್ತದೆ. ಈ ಅರ್ಥಗಳನ್ನು (a) **ಬಹೂನಿಮೇವ್ಯತೀತಾನಿ** ಎಂದಾರಂಭಿಸಿ ಐದು ಶ್ಲೋಕಗಳಿಂದ ಗೀತಾಚಾರ್ಯನು ಅನುಗ್ರಹಿಸಿದ್ದಾನೆ. ಸಕಿಂಚನಾಧಿಕಾರಿಯಾದ ಭಕ್ತಿಯೋಗನಿಷ್ಠನಿಗೆ, ಪ್ರಾರಬ್ಧ ಕರ್ಮಾವಸಾನದಲ್ಲಿ ಮೋಕ್ಷವೆಂದು ಬ್ರಹ್ಮಸೂತ್ರಭಾಷ್ಯಗಳಲ್ಲಿ

---

4) ಮಾನಾತಿಲಂಘಿ ಸುಖಬೋಧ ಮಹಾಂಬುರಾಶೌ ಮಗ್ನಾ ಸ್ಥಿತಿಂ ಸೀಮರಹಿತೇ ಭವತಃ ಸ್ವರೂಪೇ ।
ತಾಪತ್ರಯೇಣವಿಹತಿಂ ನ ಭಜಂತಿ (ಭೂಯಃ) ಸಂತಃ ಸಂಸಾರ ಘರ್ಮಜನಿತೇನ ಸಮಾಧಿಮಂತಃ ॥ (ಶ. ದೀ 23)

ನಿರತಿಶಯಸುಖ ನಿರತಿಶಯಜ್ಞಾನ ರೂಪನಾದ ಮಹಾ ಸಮುದ್ರದಂತಿರುವ ಭಗವಂತನ ದೇಶಕಾಲ ವಸ್ತು ಪರಿಚ್ಛೇದ ರಹಿತವಾದ ಅನಂತ ಸ್ವರೂಪ ಧ್ಯಾನದಲ್ಲಿ ಮಗ್ನರಾದವರು, ಸಮಾಧಿ ದಶೆಯಲ್ಲಿ ಅವನ ಸಾಕ್ಷಾತ್ಕರವನ್ನು ಪಡೆದು ಸಂಸಾರವೆಂಬ ಬಿಸಿಲಿನ ತಾಪದಿಂದ ಬಳಲಿ ತಾಪತ್ರಯ ಪೀಡೆಯನ್ನು ಪಡೆಯುವುದಿಲ್ಲ. ಅಂದರೆ ಭಗವತ್ಸ್ವರೂಪ ಸಾಕ್ಷಾತ್ಕರವನ್ನು ಪಡೆದು ನಿರತಿಶಯ ಆನಂದದಲ್ಲಿ ಮುಳುಗಿರುತ್ತಾರೆಂದು ಅರ್ಥ. ಇದು ನಿರಾಲಂಬನ ಯೋಗ. ಸ್ವರೂಪನಿರೂಪಕ ಧರ್ಮ ವಿಶಿಷ್ಟನಾದ ಭಗವತ್ಸ್ವರೂಪ ಸಾಕ್ಷಾತ್ಕಾರವೆಂದರ್ಥ. ಗುಣವಲ್ಲದ, ನಿರ್ಗುಣ ಬ್ರಹ್ಮ ಸಾಕ್ಷಾತ್ಕಾರವಲ್ಲ. ಗುಣ, ದಿವ್ಯ ಮಂಗಳ ವಿಗ್ರಹವಿಶಿಷ್ಟವಾದ ಭಗವತ್‌ಸಾಕ್ಷಾತ್ಕಾರವು ಸಾಲಂಬನ ಯೋಗ. ಆ ವಿಗ್ರಹದಲ್ಲಿ ನೆಲೆಸಿರುವ ಭಗವತ್ಸ್ವರೂಪ ಸಾಕ್ಷಾತ್ಕಾರ, ನಿರಾಲಂಬನ ಯೋಗ.

(a) ಬಹೂನಿಮೇವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನತ್ವಂವೇತ್ಥ ಪರಂತಪ ॥ 1 ॥
ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥2॥
ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥3॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥4॥
ಜನ್ಮ ಕರ್ಮ ಚಮೇದಿವ್ಯಂ ಏವಂ ಯೋವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿಮಾ ಮೇತಿ ಸೋಽರ್ಜುನ ॥5॥

ಎಲೈ ಅರ್ಜುನನೇ ನಿನ್ನ ಜನ್ಮದಂತೆಯೇ ನನ್ನ ಜನ್ಮವೂ ಸತ್ಯ. ನಿನ್ನ ಹಾಗೆಯೇ ನನಗೂ ಅನೇಕ ಜನ್ಮಗಳು- ಅವತಾರಗಳು ಕಳೆದವು. ನೀನು ಎಷ್ಟು ಜನ್ಮ ತಾಳಿದ್ದೀಯೋ ಎಂಬುದನ್ನು ನೀನು ತಿಳಿಯೆ. ನನಗೆ ಗೊತ್ತು, ಕರ್ಮ ಸಂಬಂಧವಾದ ಜನ್ಮ ನಿನ್ನದು. ನನಗೆ ಕರ್ಮ ಸಂಬಂಧವಿಲ್ಲ (ಅಜಃ), ನನ್ನ ಜ್ಞಾನಕ್ಕೆ ಸಂಕೋಚ ವಿಕಾಸಗಳಿಲ್ಲ (ಅವ್ಯಯಃ), ಮೇಲೂ ಸರ್ವನಿಯಂತಾ (ಈಶ್ವರಃ)

ಇದು ಸ್ವತನ್ತ್ರಪ್ರಪತ್ತಿನಿಷ್ಠನುಕ್ಕು ಶರಣ್ಯಗುಣ ವಿಶೇಷಜ್ಞಾನಮುಂಖತ್ತಾಲೇ ಉಪಾಯಾನು ಷ್ಠಾನಕ್ಷಣತ್ತಿಲೇ ಮಹಾವಿಶ್ವಾಸಾದಿಹಳ್ಳೈ ಸ್ಥಿರೀಕರಿತ್ತು ಉಪಕಾರಕಮಾಮ್

ಹೇಳಿರುವುದು ಅವತಾರ ರಹಸ್ಯ ಚಿಂತನ ಮಾಡದ ಅಧಿಕಾರಿ ವಿಷಯ ಅವತಾರ ರಹಸ್ಯ ಚಿಂತನೆಯನ್ನು ಮಾಡುವ ಭಕ್ತಿಯೋಗ ನಿಷ್ಠನಿಗೆ "ತ್ಯಕ್ತ್ವಾದೇಹಂ ಪುನರ್ಜನ್ಮ ನೈತಿಮಾಮೇತಿಸೋಽರ್ಜುನ" ಎಂಬ ಗೀತಾ ವಾಕ್ಯದಿಂದ ಅದೇ ಜನ್ಮದಲ್ಲಿ ಪ್ರಾರಬ್ಧ ಕರ್ಮವೆಲ್ಲಾ ನಿಶ್ಶೇಷವಾಗಿ ಕಳೆದು ಮೋಕ್ಷವು ಪ್ರಾಪ್ತವಾಗುತ್ತದೆ

ಹೀಗೆ ಅಜನಾಗಿಯೇ ಅವ್ಯಯನಾಗಿಯೇ ಈಶ್ವರನಾಗಿಯೇ, (ಪ್ರಕೃತಿಂ ಸ್ವಾಮಧಿಷ್ಠಾಯ) ತನ್ನ ಈಶ್ವರತ್ವ ಸ್ವಭಾವಗಳಾವುದನ್ನೂ ಬಿಡದೇಯೇ (ಅಪಿ ಎಂಬ ಅವ್ಯಯಕ್ಕೆ ಏವ ಎಂದರ್ಥ) ಆತ್ಮ ಸಂಕಲ್ಪದಿಂದ (ಮಾಯಯಾ) ಸಂಭವಾಮಿ ಅವತರಿಸುತ್ತೇನೆ. ಅಧರ್ಮವು ಹೆಚ್ಚಿ ಲೋಕದಲ್ಲಿ ಧರ್ಮಕ್ಕೆ ಗ್ಲಾನಿ ಬಂದಾಗ ನನ್ನ ಅವತಾರ (ಆತ್ಮಾನಂಸೃಜಾಮಿ). ಸಾಧುಗಳ ಪರಿತ್ರಾಣವೇ ಪ್ರಧಾನ ಫಲ ಆ ಧರ್ಮಶೀಲರು ನನ್ನನ್ನು ನೋಡಬೇಕೆಂದು ಹಂಬಲಿಸುತ್ತಾರೆ ಅವರಿಗೆ ಆರಾಧ್ಯನಾದ ನನ್ನ ಶರೀರದ ಸೊಬಗನ್ನು ತೋರಿಸಿ ಅವರ ಮನಸ್ಸಿಗೆ ಶಾಂತಿಯನ್ನುಂಟು ಮಾಡಿ ಅವರಿಗೆ ನನ್ನ ವಿರಹವೇದನೆಯನ್ನು ಹೋಗಲಾಡಿಸುವುದೇ ಸಾಧು ಪರಿತ್ರಾಣ. ದುಷ್ಕೃತ್ತುಗಳನ್ನು ನಾಶಗೊಳಿಸುವುದು ಆನುಷಂಗಿಕವಾಗಿ ನನ್ನ ಅವತಾರ ಫಲ. ಧರ್ಮಸಂಸ್ಥಾಪನಾರ್ಥಾಯ– ಆರಾಧ್ಯನಾದ ನನ್ನನ್ನು ತೋರಿಸಿ ಭಕ್ತರಿಗೆ ಭಕ್ತಿ ವೃದ್ಧಿ ಮಾಡುವುದೇ ಪ್ರಯೋಜನ ಅದಕ್ಕಾಗಿ ಪ್ರತಿಯುಗ ದಲ್ಲಿಯೂ ಅವತರಿಸುತ್ತೇನೆ ನನ್ನ ಜನ್ಮ–ಅವತಾರವು ಕರ್ಮ-ವ್ಯಾಪಾರಗಳು ಪ್ರಾಕೃತಗಳೂ, ಪುಣ್ಯಪಾಪ ಫಲರೂಪವಾದವುಗಳೂ ಅಲ್ಲ ದಿವ್ಯಗಳು–ಜನ್ಮವು ಅಪ್ರಾಕೃತ ಶುದ್ಧ ಸತ್ವಮಯ ವಿಗ್ರಹ ವಿಶಿಷ್ಟವಾದವು. ಕರ್ಮವೂ-ವ್ಯಾಪಾರವೂ ಪುಣ್ಯ ಪಾಪ ರೂಪಕರ್ಮ ನಿಬಂಧನವಲ್ಲ. ದಿವ್ಯವಾದುವು ಹೀಗೆ ತಿಳಿದ ಭಕ್ತಿ ಯೋಗ, ಪ್ರಪತ್ತಿ ಯೋಗನಿಷ್ಠರು ಏಕ ಜನ್ಮದಲ್ಲೇ ಈ ಪ್ರಾಕೃತ ಶರೀರವನ್ನು ಬಿಟ್ಟು ಮೋಕ್ಷ ಹೊಂದುತ್ತಾರೆ.

ಈ ಅವತಾರ ರಹಸ್ಯವನ್ನು, ಕೆಳಗೆ ಕಂಡ ಕಾರಿಕೆಯಲ್ಲಿ ಆಚಾರ್ಯರು ಸಂಗ್ರಹಿಸಿದ್ದಾರೆ

ಅವತಾರಸ್ಯ ಸತ್ಯತ್ವಂ, ಅಜಹತ್ಸ್ವಸ್ವಭಾವತಾ ।
ಶುದ್ಧ ಸತ್ವಮಯತ್ವಂಚ, ಸ್ವೇಚ್ಛಾಮಾತ್ರನಿದಾನತಾ ॥
ಧರ್ಮ ಗ್ಲಾನೌ ಸಮುದಯ ಸ್ಸಾಧು ಸಂರಕ್ಷಣಾರ್ಥತಾ ।
ಇತಿ ಜನ್ಮರಹಸ್ಯಂ ಯೋ ವೇತ್ತಿ ನಾಸ್ಯ ಪುನರ್ಭವಃ ॥

ಭಗವಂತನ ಅವತಾರವು ಸತ್ಯ, ಇಂದ್ರಜಾಲ ವಿದ್ಯೆಯಂತೆ ಸುಳ್ಳಲ್ಲ ಭಗವಂತನು ತನ್ನ ಈಶ್ವರತ್ವ ಸ್ವಭಾವ ಗಳನ್ನು ಬಿಡದೇನೆ ಅವತರಿಸುತ್ತಾನೆ ಅವನ ವಿಗ್ರಹವು ಶುದ್ಧ ಸತ್ವಮಯವಾದದು-ಪ್ರಾಕೃತವಾದುದಲ್ಲ ತನ್ನ ಇಚ್ಛೆಯೇ ಅವತಾರಕ್ಕೆ ಕಾಲ. (ಬದ್ಧ ಜೀವಿಯ ಹಾಗೆ), ಪುಣ್ಯಪಾಪ ರೂಪ ಕರ್ಮಗಳಿಲ್ಲ ಧರ್ಮಕ್ಕೆ ಗ್ಲಾನಿಯು ಏರ್ಪಟ್ಟಾಗ ಅವತಾರ. ಸಾಧುಗಳ ಸಂರಕ್ಷಣವೇ ಪ್ರಯೋಜನ ಈ ರೀತಿಯಲ್ಲಿ ಭಗವಂತನ ಅವತಾರ ರಹಸ್ಯವನ್ನು ತಿಳಿದವನಿಗೆ ಪುನರ್ಜನ್ಮವಿಲ್ಲ ಅದೇ ಜನ್ಮದಲ್ಲೇ ಸ್ವಾಧಿಕಾರಾನುಗುಣವಾದ ಉಪಾಯ ಪೂರ್ತಿಯಿಂದ ಮೋಕ್ಷ ಭಕ್ತಿಯೋಗವನ್ನು ಅನುಷ್ಠಿಸುವವನಿಗೆ ಕರ್ಮಾವಸಾನದಲ್ಲಿ ಮೋಕ್ಷವೆಂದು "ಅನಾರಬ್ಧ ಕಾರ್ಯೇ ಏವತುಪೂರ್ವೇತದವಧೇಃ" ಎಂಬ ಬ್ರಹ್ಮಸೂತ್ರದಿಂದ ವ್ಯವಸ್ಥಿತವಾಗಿರುವಾಗ, ಅವತಾರ ರಹಸ್ಯಜ್ಞಾನದಿಂದ, ಅದೇ ಜನ್ಮದಲ್ಲಿ ಮೋಕ್ಷ, ಬೇರೆ ಜನ್ಮವಿಲ್ಲವೆಂದು, "ಪುನರ್ಜನ್ಮನೈತಿ, ಮಾಮೇತಿ" ಎಂದು ಗೀತೆಯಲ್ಲಿ ಹೇಳಿರುವುದು ಸರಿಯೇ ಎಂಬ ಸಂದೇಹವು ಉಂಟಾಗಬಹುದು ಇದನ್ನು ಪರಿಹರಿಸಿ, **"ಜನ್ಮಾಂತರ ಮನುಭವಿಯಾದೇ"** ಎಂದು ಆಚಾರ್ಯರು ಅದೇ ಜನ್ಮ ದಲ್ಲಿ ಮೋಕ್ಷವು ನಿಶ್ಚಯವೆನ್ನುತ್ತಾರೆ. ಅಂದರೆ ಅವತಾರ ರಹಸ್ಯಜ್ಞಾನವು ಪುಷ್ಕಲವಾದ ಭಕ್ತಿಯನ್ನುಂಟುಮಾಡಿ, ಜನ್ಮಾಂತರಾರಂಭಕ ಪಾಪಾಂಶವನ್ನು ಪ್ರಶಮನಮಾಡಿ ಅದೇಜನ್ಮದಲ್ಲಿ ಭಗವತ್ಪ್ರಾಪ್ತಿಯನ್ನುಂಟುಮಾಡುತ್ತದೆ.

ಅರ್ಚಾವತಾರರಸ್ಯ ಮೋಕ್ಷ ಪ್ರದತ್ವ ವರ್ಣನಮ್

ಇಪ್ಪಡಿಯೇ ಅರ್ಚಾವತಾರಮುಮ್ ನಿರುಕ್ಕರ ಮೋಕ್ಷತ್ತೈತ್ತರುಮೆನ್ರು ನಿಡತ್ತೈ

"ಸುರೂಪಾಂ ಪ್ರತಿಮಾಂ ವಿಷ್ಣೋಃ ಪ್ರಸನ್ನ ವದನೇಕ್ಷಣಾಂ ।
ಕೃತ್ವಾತ್ಮನಃ ಪ್ರೀತಿಕರೀಂ ಸುವರ್ಣ ರಜತಾದಿಭಿಃ ॥
ತಾಮರ್ಚಯೇತ್ತಾಂ ಪ್ರಣಮೇತ್ತಾಂ ಯಜೇತ್ತಾಂ ವಿಚಿನ್ತಯೇತ್ ।
ವಿಶತ್ಯಪಾಸ್ತ ದೋಷಸ್ತು ತಾಮೇವ ಬ್ರಹ್ಮರೂಪಿಣೀಮ್ ॥"

ಎನ್ರು, ಶ್ರೀ ಶೌನಕಭಗವಾನರುಳಿಚ್ಚೆಯ್‌ದಾನ್.

ಆೞ್ವಾರ್‌ಹಳುಮಿನ್ನವತಾರ ರಹಸ್ಯತ್ತೈಯುಮ್, ಅರ್ಚಾವತಾರ ವೈಲಕ್ಷಣ್ಯತ್ತೈಯುಮ್, ಪ್ರಚುರಮಾಹವನುಸನ್ಧಿತ್ತು ಇದರ್ಕು ಪೇರಣಿಯಾಹ ಪರತ್ವತ್ತೈಕ್ಕಣ್ಡು ಪೋನ್ದಾರ್‌ಹಳ್.

ಪ್ರಪತ್ತಿ ಯೋಗನಿಷ್ಠನಿಗೆ, "ತಾವದಾರ್ತಿಸ್ತಥಾವಾಂಛಾತಾವನ್ಮೋಹಸ್ತಥಾಽಸುಖಮ್। ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ ॥" ಎಂಬ ಶ್ಲೋಕದಲ್ಲಿ ತಾವತ್, ತಾವತ್, (ಅಲ್ಲಿಯವರಿಗೆ) ಎಂದೂ ಅಶೇಷಾಘ ನಾಶನಂ, ಎಂದೂ, ಹೇಳಿರುವುದರಿಂದ "ಉಪಕ್ಷಿಪ್ತ ಮಾಪ್ನೋತಿ ಮುಕ್ತನಾಕ್ಕುಮೇನ್" ಎಂಬಂತೆ ಪ್ರಪತ್ತಿಯೇ ಪ್ರಾರಬ್ಧ ಪಾಪವನ್ನೂ ನಾಶಮಾಡಿ ಇವನು ಅಪೇಕ್ಷಿಸುವ ಕಾಲದಲ್ಲಿ ಮೋಕ್ಷವನ್ನು ಕೊಡುತ್ತದೆ. ಅವತಾರ ರಹಸ್ಯ ಚಿಂತನವು ಉಪಯೋಗವಿಲ್ಲವೆಂಬ ಶಂಕೆಗೆ ಸಮಾಧಾನವಾಗಿ "ಇದು ಸ್ವತಂತ್ರ ಪ್ರಪತ್ತಿನಿಷ್ಠನುಕ್ಕು" ಎಂದಾರಂಭಿಸಿ ತಿಳಿಸುತ್ತಾರೆ. ಆದಾಗಿ ಸ್ವತಂತ್ರ ಪ್ರಪತ್ತಿನಿಷ್ಠನಿಗೆ ಈ ಅವತಾರ ರಹಸ್ಯಜ್ಞಾನವು ತಾನು ಅಪೇಕ್ಷಿಸುವ ಕಾಲದಲ್ಲಿಯೇ ಭಗವಂತನು ಫಲ ಪ್ರಧಾನ ಮಾಡುತ್ತಾನೆಂಬ ಮಹತ್ತರವಾದ ವಿಶ್ವಾಸವನ್ನುಂಟುಮಾಡಿ, ಶರಣ್ಯನಗುಣ ವಿಶೇಷ ಜ್ಞಾನದಿಂದ, ಉಪಾಯಾನುಷ್ಠಾನ ಕ್ಷಣದಲ್ಲಿ ಆ ಮಹಾವಿಶ್ವಾಸಾದಿಗಳನ್ನು ಸ್ಥಿರೀಕರಿಸಿ ಉಪಕಾರಕವಾಗುತ್ತದೆ "ಸ್ವತಂತ್ರಪ್ರಪತ್ತಿ ನಿಷ್ಠನುಕ್ಕು," ಎಂಬುದು ಉಪಲಕ್ಷಣ. ಅಂಗಪ್ರಪತ್ತಿನಿಷ್ಠನಿಗೂ ಇದೇ ರೀತಿಯಾದ ಮಹತ್ತರ ವಿಶ್ವಾಸವನ್ನುಂಟು ಮಾಡಿ ಭಕ್ತಿ ನಿಷ್ಪತ್ತಿಗೆ ವಿರೋಧಿಯಾದ ಪಾಪಗಳನ್ನು ಹೋಗಲಾಡಿಸುತ್ತದೆ.

ಅರ್ಚಾವತಾರವು ಮೋಕ್ಷಪ್ರದ

ಅವತಾರ ರಹಸ್ಯಜ್ಞಾನವು ಜನ್ಮಾಂತರವಿಲ್ಲದೆ ಅದೇ ಜನ್ಮದಲ್ಲಿ ಮೋಕ್ಷಕ್ಕೆ ಸಹಕಾರಿಯಾಗುವಂತೆ ಅರ್ಚಾವತಾರವೂ, ತನ್ನ ಧ್ಯಾನದಿಂದಲೂ, ಅರ್ಚನ ಪ್ರಣಾಮಾದಿಗಳಿಂದಲೂ ಪರವ್ಯೂಹಾದ್ಯಪೇಕ್ಷೆಯಿಲ್ಲದೆ ಮೋಕ್ಷ ಪ್ರದವೆಂಬುದನ್ನು **"ಇಪ್ಪಡಿಯೇ ಅರ್ಚಾವತಾರಮುಮ್"** ಎಂದಾರಂಭಿಸಿ ವಿವರಿಸುತ್ತಾರೆ ಅದಾಗಿ ಹೀಗೆಯೇ ಅರ್ಚಾವತಾರವೂ ನಿರಕ್ಕರ ಆಯಾಸವಿಲ್ಲದೆ ಮೋಕ್ಷವನ್ನು ಕೊಡುತ್ತದೆ, ಎಂದು, ಭಗವಾನ್ ಪರಮ ಪೂಜ್ಯರಾದ ಶ್ರೀ ಶೌನಕರು, 1) **ಸುರೂಪ ಪ್ರತಿಮಾಂ** ಎಂದಾರಂಭಿಸಿ ತಿಳಿಸಿದ್ದಾರೆ, ಆೞ್ವಾರವರುಗಳೂ ಈ ಅವತಾರ ರಹಸ್ಯವನ್ನೂ, ಅರ್ಚಾವತಾರ ವೈಲಕ್ಷಣ್ಯವನ್ನೂ **ಪ್ರಚುರಮಾಹ**–ಬಹಳವಾಗಿ ಅನುಸಂಧಾನಮಾಡಿ ಇದಕ್ಕೆ **ಪೇರಣಿಯಾಹ**– ಮೂಲಬಲವಾದ, **ಪರತ್ವತ್ತೈ**– ಪರರೂಪವನ್ನು "ಅಯರ್ವರುಮಮರರ್‌ಹಳಧಿಪತಿಯವನ್ ಅವನ್" ನಿತ್ಯಸೂರಿನಿರ್ವಾಹಕನು ಯಾರೋ ಅವನು ಎಂಬುದಾಗಿ ಸಾಕ್ಷಾತ್ಕರಿಸಿದರು

---

1) (ವಿಷ್ಣು ಧರ್ಮಮ್ 106–16) ಪ್ರಸನ್ನವಾದ, ಬಾಯಿ, ಕಣ್ಣುಗಳಿಂದ ಕೂಡಿ ಸೊಗಸಾದ ರೂಪದಿಂದ ಕೂಡಿದ ವಿಷ್ಣುವಿನ ಪ್ರತಿಮೆಯನ್ನು ತನಗೆ ಪ್ರಿಯವಾದ ರೀತಿಯಲ್ಲಿ ಅಂದರೆ, ರಾಮನಾಗಿಯೋ, ಹಯಗ್ರೀವನಾಗಿಯೋ, ಕೃಷ್ಣನಾಗಿಯೋ, ನೃಸಿಂಹನಾಗಿಯೋ, ಸುವರ್ಣ ಬೆಳ್ಳಿ ಮೊದಲಾದ ಲೋಹಗಳಿಂದ ಮಾಡಿ, ಆ ವಿಗ್ರಹವನ್ನು ಶಾಸ್ತ್ರೋಕ್ತವಾದ ಪ್ರತಿಷ್ಠೆಗಳಿಂದ ಪವಿತ್ರೀಕರಿಸಿದರೆ, ನೀರಲ್ಲಿ ಕ್ಷೀರವನ್ನು ಬೆರೆಸುವ ರೀತಿಯಲ್ಲಿ ಆ ವಿಗ್ರಹದಲ್ಲಿ ಭಗವಂತನು ಅಪ್ರಾಕೃತ ವಿಗ್ರಹ ರೂಪದಿಂದ ಸಾನ್ನಿಧ್ಯ ಮಾಡುತ್ತಾನೆ ಆ ವಿಗ್ರಹ ರೂಪಿಯಾದ ಭಗವಂತನನ್ನು ಅರ್ಚಿಸಿ, ನಮಸ್ಕರಿಸಿ, ಪೂಜಾದಿಗಳನ್ನೂ ಮಾಡಿ, ತನ್ನ ಪಾಪಗಳನ್ನೆಲ್ಲಾ ಕಳೆದು ಕೊಳ್ಳುತ್ತಾನೆ ಅನಂತರ ಆ ವಿಗ್ರಹ ರೂಪಿಯಾದ ಪರಬ್ರಹ್ಮನನ್ನು ಪಡೆಯುತ್ತಾನೆ.

ಈಶ್ವರಸ್ಯ ಪ್ರವೃತ್ತಯಃ

ಇಪ್ಪಡಿಯಿರುಕ್ಕಿರ ಈಶ್ವರನ್ ತನ್ನಾನಂದತ್ತುಕ್ಕು ಪರೀವಾಹಮಾಹ ಪಣ್ಣುಮ್ ವ್ಯಾಪಾರಙ್ಗಳ್ ಜಗತ್ಸೃಷ್ಟಿಸ್ಥಿತಿ ಸಂಹಾರಮೋಕ್ಷ ಪ್ರದತ್ವಾದಿಹಳ್.

ಈಶ್ವರನ್ ಸರ್ವಾವಸ್ಥೈಹಳಿಲುಮ್ ಲಕ್ಷ್ಮೀ ವಿಶಿಷ್ಟನ್

ಇವ್ವೀಶ್ವರನ್ (1) "ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ" ಇತ್ಯಾದಿಹಳಿಲ್ ಪಡಿಯೇ ಸರ್ವಾವಸ್ಥೈಯಿಲುಮ್ ಸಪತ್ನೀಕನಾಯ್ ಕೊಣ್ಡೇಯಿರುಕ್ಕುಮೆನ್ರು ಮಿಂಡತ್ತೈ (2) "ತತ್ವೇನ ಯಃ" (3) "ಮಾತಾಪಿತಾ" ಎನ್ಹಿರ ಶ್ಲೋಕಙ್ಗಳಿಲೇ ಉಪಕಾರ ವಿಶೇಷತ್ತಾಲೇ ಸಾದರಮಾಹ ವಿಶೇಷಿತ್ತು ಚೊಲ್ಲಪ್ಪಟ್ಟ ಪರಾಶರ ಪರಾಙ್ಕುಶ ಪ್ರಬನ್ಧಙ್ಗಳಿಲೇ ತೆಳಿನ್ದುಕೊಳ್ವದು.

ಈಶ್ವರನ ಪ್ರವೃತ್ತಿಭೇದಗಳು

ಹೀಗೆ ಸ್ವಾಧೀನವಾದ ತ್ರಿವಿಧ ಚೇತನಾ ಚೇತನನಾಗಿ, ಪರ ವ್ಯೂಹ ವಿಭವ ಹಾರ್ದಾಂತರ್ಯಾಮಿ ರೂಪ ಪಂಚಪ್ರಕಾರ ವಿಗ್ರಹವಿಶಿಷ್ಟನಾದ ಈಶ್ವರನ ಸ್ವರೂಪವನ್ನು ಸತ್ಯತ್ವಾದಿ ಸ್ವರೂಪ ನಿರೂಪಕ ಧರ್ಮವಿಶಿಷ್ಟವಾಗಿ ನಿರೂಪಿಸಿ, ನಿತ್ಯನಾದ ಅವನಿಗೆ ಸ್ಥಿತಿಭೇದವನ್ನು ಸಾಮಾನ್ಯವಾಗಿ ತಿಳಿಸಿ, ಅನಂತರ ಅವನ ಪ್ರವೃತ್ತಿ ಭೇದವನ್ನು **ಇಪ್ಪಡಿಯಿರುಕ್ಕಿರ** ಎಂದಾರಂಭಿಸಿ, ಆಚಾರ್ಯರು ನಿರೂಪಿಸುತ್ತಾರೆ. ಆದಾಗಿ ಹೀಗೆ ಅವಾಪ್ತಸಮಸ್ತಕಾಮನಾಗಿ, ಆನಂದ ಸ್ವರೂಪನಾದ ಈಶ್ವರನಿಗೆ ಒಂದು ವ್ಯಾಪಾರವು ಆವಶ್ಯಕವೇ ಎಂದರೆ, ಅವಶ್ಯವೆಂದು **ತನ್ ಆನಂದತ್ತುಕ್ಕು ಪರೀವಾಹಮಾಹಪ್ಪಣ್ಣುಮ್**– ಅಂದರೆ ತನ್ನ ಆನಂದಕ್ಕೆ ಪರೀವಾಹವಾಗಿ ಮಾಡುವ ವ್ಯಾಪಾರಗಳು ಸಕಲ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ಮೋಕ್ಷ ಪ್ರದತ್ವಾದಿಗಳು ಆದಿಶಬ್ದವು ಚೇತನಾಂತಃ ಪ್ರವಿಶ್ಯ ನಿಯಮನ ಮಾಡುವುದನ್ನು ತಿಳಿಸುತ್ತದೆ. ಇದರಿಂದ ಅವಾಪ್ತಸಮಸ್ತಕಾಮನಾಗಿ, ಆನಂದ ಸ್ವರೂಪನಾಗಿ ಇದ್ದರೂ "ಲೋಕವತ್ತು ಲೀಲಾ ಕೈವಲ್ಯಂ" ಎಂಬ ರೀತಿಯಲ್ಲಿ ಸಾರ್ವಭೌಮನಾದ ರಾಜನು ಚೆಂಡು ಮೊದಲಾದ ಸಾಧನಗಳನ್ನು ಇಟ್ಟುಕೊಂಡು ಕೇವಲ ಸಂತೋಷಕ್ಕಾಗಿ ಆಟವಾಡುವಂತೆ, ಈಶ್ವರನೂ (ಲಕ್ಷ್ಮೀವಿಶಿಷ್ಟನೂ) ತನ್ನ ಪರಿಪೂರ್ಣಾನಂದ ಪರೀವಾಹವಾದ ಜಗತ್ಸೃಷ್ಟ್ಯಾದಿ ಲೀಲಾವ್ಯಾಪಾರವನ್ನು ಮಾಡುತ್ತಾನೆಂಬುದು ತಾತ್ಪರ್ಯ

ಈಶ್ವರನು ಸರ್ವದಾ ಲಕ್ಷ್ಮೀವಿಶಿಷ್ಟನು

ಈ ಈಶ್ವರ ತತ್ವವು ಎಲ್ಲಾ ಅವಸ್ಥೆಗಳಲ್ಲಿಯೂ, ಅಂದರೆ ಜಗತ್‌ಸೃಷ್ಟಿ, ಸ್ಥಿತಿ, ಸಂಹಾರ, ಮೋಕ್ಷ ಪ್ರದತ್ವ, ಅಂತಃಪ್ರವಿಶ್ಯ ನಿಯಮನಾವಸ್ಥೆಗಳಲ್ಲಿ ಯಾವಾಗಲೂ ಲಕ್ಷ್ಮೀವಿಶಿಷ್ಟವು ಎಂದು, **ಇವ್ವೀಶ್ವರನ್** ಎಂದು ಆರಂಭಿಸಿ, **ಯಥಾಪ್ರಮಾಣಂ ತೆಳಿಯಪ್ಪಡುಮ್**, ಎಂಬುವ ಪರ್ಯಂತ, ನಿರೂಪಿಸುತ್ತಾರೆ ಶ್ರೀಭಾಷ್ಯಾದಿಗಳಲ್ಲಿ, ಕಂಠೋಕ್ತವಾಗಿ ಹೇಳದೆ, ಪರಮರಹಸ್ಯವಾಗಿ, ಕೇವಲ ಉಪದೇಶ ಪರಂಪರೆಯಲ್ಲಿ ಬಂದ ಅರ್ಥವಿಶೇಷವನ್ನು, ಇಲ್ಲಿ ರಹಸ್ಯತ್ರಯಸಾರೋಪದೇಶ ಸಂದರ್ಭದಲ್ಲಿ ಆಚಾರ್ಯರು ಕಂಠೋಕ್ತವಾಗಿ ಶಿಷ್ಯಜನಾನುಗ್ರಹ ಬುದ್ಧಿಯಿಂದ ತಿಳಿಯಪಡಿಸುತ್ತಾರೆ. ಚತುಶ್ಶ್ಲೋಕಿಭಾಷ್ಯದಲ್ಲಿ "ಪಂಚಸ್ವೇತೇಷುಪಕ್ಷೇಷು ಕಶ್ಚಿದೇಕಃ ಪ್ರಮಾಣವಾನ್" ಎಂಬ ತಮ್ಮಕಾರಿಕೆಯಲ್ಲಿ ಐದು ಪಕ್ಷಗಳಲ್ಲಿ ಒಂದು ಪಕ್ಷಮಾತ್ರ ಪ್ರಮಾಣವಾದದ್ದು ಎಂದು ಹೇಳಿ ಆ ಪಕ್ಷವನ್ನು ನಿರೂಪಿಸದೆ ಅಲ್ಲಿ ಬಿಟ್ಟದಕ್ಕೂ, ಇದು ಪರಮರಹಸ್ಯ, ಗೋಪನೀಯವಾದದ್ದು ಎಂಬುದೇ ತಾತ್ಪರ್ಯ ಅದನ್ನು ಇಲ್ಲಿ ಪರಮರಹಸ್ಯೋಪದೇಶಪ್ರಸಂಗದಲ್ಲಿ ಆಚಾರ್ಯರು ವಿವರಿಸುತ್ತಾರೆ. ಆದ್ದರಿಂದ ಇದನ್ನು ಪರಮರಹಸ್ಯವಾಗಿಯೇ ಇಡಬೇಕೆಂಬುದೂ ಅವರ ಹೃದಯ.

---

1), 2, 3,

ಪು. ತಿ. ನೋ.

ಇನ್ವೀಶ್ವರನ್ – ಸ್ವಾಧೀನ ತ್ರಿವಿಧ ಚೇತನಾ ಚೇತನಸ್ವರೂಪ ಸ್ಥಿತಿಪ್ರವೃತ್ತಿ ಎಂದಾರಂಭಿಸಿ, **ವ್ಯಾಪಾರಂಗಳ್ ಸಕಲ ಜಗತ್ಸೃಷ್ಟಿ ಸ್ಥಿತಿ ಸಂಹಾರಮೋಕ್ಷ ಪ್ರದತ್ವಾದಿಗಳ್,** ಎಂದು ವಿಸ್ತಾರವಾಗಿ ನಿರೂಪಿಸಿದ ಈಶ್ವರನು ಅವನು ಅಶೇಷಚಿದಚಿದ್ವಸ್ತು ಸ್ವರೂಪಸ್ಥಿತಿ ಪ್ರವೃತ್ತಿ ಭೇದಗಳನ್ನು ನಿರ್ವಹಿಸಲು ಬೇಕಾದ, ನಿರಂಕುಶ ಸರ್ವ ಸ್ವಾತಂತ್ರ್ಯದಿಂದ ಕೂಡಿದವನು ಆಯಾಯಾ ಕಾರ್ಯಗಳಿಗೆ ಅನುರೂಪವಾದ ಪರವ ಕರುಣೆಯಿಂದ ಎತ್ತಿದ ವ್ಯೂಹ, ವಿಭವ, ಅರ್ಚಾವತಾರಾದಿ ಅವತಾರಗಳೇನು, ತನ್ಮೂಲಕವಾಗಿ ಪ್ರವರ್ತಿಸಿದ ಸೃಷ್ಟ್ಯಾದಿ **ವ್ಯಾಪಾರಗಳೇನು,** ತನಗೆ **ಅ**ಸಾಧಾರಣವಾದ ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ, ಅಮೃತ್ವರೂಪ ಸ್ವರೂಪನಿರೂಪಕ ಧರ್ಮಗಳೇನು ನಿರೂಪಿತ ಸ್ವರೂಪ ವಿಶೇಷಣ ಧರ್ಮಗಳೇನು, ವಿಗ್ರಹ, ವಿಭೂತಿ ವ್ಯಾಪಾರಗಳೇನು ,ಇವುಗಳಿಂದ ಕೂಡಿದವನು, ಎಂಬುದು **ಇನ್ವೀಶ್ವರನ್** ಎಂಬಲ್ಲಿಯ, **"ಇಂದ"** ಪದದಿಂದ ತಿಳಿಸಲ್ಪಡುತ್ತದೆ **ಇಂದ + ಈಶ್ವರನ್ = ಇನ್ವೀಶ್ವರನ್** ಎಂಬುದು ಸಮಾಸ. ಈಶ್ವರನ ಸ್ವರೂಪಸ್ಥಿತಿ ಪ್ರವೃತ್ತಿ ಭೇದಗಳನ್ನೆಲ್ಲಾ ವರ್ಣಿಸಿ, **ಅನಂತರ "ಇನ್ವೀಶ್ವರನ್" ಈ** ಈಶ್ವರನು, ಎಂದು ನಿರ್ದೇಶಿಸಿದ, "ಇಂದ - ಈ" ಪದವು ಯಥೋಕ್ತಸರ್ವ ಪ್ರಕಾರ ಈಶ್ವರನನ್ನು ತಿಳಿಸುತ್ತದೆ ಎಂಬುದು ಗಮನಾರ್ಹ.

ಈ ಈಶ್ವರನು, [1] **ನಿತ್ಯೈವೇಷಾ ಜಗನ್ಮಾತಾ,** ಇತ್ಯಾದಿ ಪ್ರಮಾಣಗಳಿಗೆ ಅನುಸಾರವಾಗಿ, ಸರ್ವಾವಸ್ಥೆಯಲ್ಲೂ ಅಂದರೆ ಸೃಷ್ಟಿ, ಸ್ಥಿತಿ, ಸಂಹಾರ, ಜ್ಞಾನಪ್ರದಾನ, ಶರಣವರಣ (ಮೋಕ್ಷ ಪ್ರದಾನ ಸಂಕಲ್ಪ – ಉಪಾಯ), **ಪ್ರಾಪ್ಯ** (ಕೈಂಕರ್ಯ ಪ್ರತಿಸಂಬಂಧಿ) ಅವಸ್ಥೆಗಳಲ್ಲಿ, ಸಪತ್ನೀಕನಾಗಿಯೇ ಇರತಕ್ಕವನೆಂಬುದನ್ನೂ, [2] ತತ್ತ್ವೇನಯಃ, [3] ಮಾತಾ ಪಿತಾ, ಎಂಬ ಶ್ಲೋಕಗಳಲ್ಲಿ ಉಪಕಾರವಿಶೇಷದಿಂದ ಸಾದರ **ಪೂರ್ವಕ** ವಿಶೇಷವಾಗಿ ಹೊಗಳಲ್ಪಟ್ಟ, ಪರಾಶರ ಪರಾಂಕುಶ ಪ್ರಬಂಧಗಳಲ್ಲಿ ತಿಳಿದುಕೊಳ್ಳತಕ್ಕದ್ದು "ನಿತ್ಯೈವೇಷಾ" ಎಂಬ ವಿಷ್ಣುಪುರಾಣ ಶ್ಲೋಕದಲ್ಲಿ ವಸಿಷ್ಠ ಪುಲಸ್ತ್ಯರ

1) ನಿತ್ಯೈವೇಷಾಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ ।
ಯಥಾಸರ್ವಗತೋ ವಿಷ್ಣುಃ ತಥೈವೇಯಂ ದ್ವಿಜೋತ್ತಮ ॥ (ವಿ ಪು 1–8–17)

ಈ ಲಕ್ಷ್ಮಿಯು ಜಗನ್ಮಾತಾ, ಸ್ವರೂಪ ನಿತ್ಯತ್ವವು ಸರ್ವಾತ್ಮ ಸಾಧಾರಣವಾದ್ದರಿಂದ, ಇಲ್ಲಿ "ನಿತ್ಯ" ಶಬ್ದವು, ವಿಷ್ಣು ವಕ್ಷ ಸ್ಥಲದಲ್ಲಿರುವ ನಿತ್ಯವಾದ ವಿಗ್ರಹವನ್ನು ತಿಳಿಯಪಡಿಸುತ್ತದೆ. ವಿಷ್ಣೋಃ ಶ್ರೀಃ ಎಂದು ಭಗವಂತನಿಗೂ "ತವಶ್ರಿಯಾ" ಎಂಬಂತೆ, ಲಕ್ಷ್ಮಿಯು ಸಂಪತ್ತು 'ಅನಪಾಯಿನೀ'–ಅವನನ್ನು ಯಾವಾಗಲೂ ಅಗಲದೇ ಇರುವವಳು ವಿಷ್ಣುವು ಸರ್ವವ್ಯಾಪೀ. ಸರ್ವಚೇತನಗಳನ್ನೂ ಅಂತಃ ಪ್ರವೇಶಿಸಿ ನಿಯಮಿಸುವವನು. ವಿಷ್ಣು ಶಬ್ದವು "ವಿಶಪ್ರವೇಶನೇ", ವಿಷಲ್‌ವ್ಯಾಪ್ತೌ, ಇಷು ಇಚ್ಛಾಯಾಂ, ವಶಕಾಂತೌ ಇತ್ಯಾದಿ ಅಂತಃ ಪ್ರವೇಶ, ಸರ್ವವ್ಯಾಪಿತ್ವ ಮೊದಲಾದ ಅನೇಕಾರ್ಥಗಳಿಂದ ಕೂಡಿದುದು. ಹಾಗೆಯೇ ಶ್ರೀ ಶಬ್ದವೂ ಶ್ರೀಯತೇ, ಶ್ರಯತೇ, ಶೃಣಾತಿ, ಶ್ರೀಣಾತಿ ಶೃಣೋತಿ, ಶ್ರಾವಯತಿ, ಎಂದು ಆಶ್ರಿತರಿಂದ ಆಶ್ರಯಿಸಲ್ಪಡುವವಳು ಭಗವಂತನನ್ನು ಆಶ್ರಯಿಸುವವಳು, ಭಕ್ತರ ಆರ್ತನಾದವನ್ನು ಕೇಳಿ, ಭಗವಂತನಲ್ಲಿ ತಿಳಿಸುವವಳು (ಪುರುಷಕಾರತ್ವ), ಶೃಣಾತಿ ಭಕ್ತರ ಉಪಾಯ ವಿರೋಧಿ, ಪ್ರಾಪ್ತಿವಿರೋಧಿ ಪಾಪಗಳನ್ನೆಲ್ಲಾ ಹೋಗಲಾಡಿಸುವವಳು ಶ್ರೀಣಾತಿ–ತನ್ನ ಗುಣಗಳಿಂದ ಜನರನ್ನೆಲ್ಲಾ ರಕ್ಷಿಸುವವಳು ಶ್ರೀಯತೇ ಶ್ರಯತೇ ಎಂಬ ಧಾತುಗಳಿಂದ ಅಂತರ್ವ್ಯಾಪ್ತಿ, ಬಹಿರ್ವ್ಯಾಪ್ತಿಯೂ ಹೇಳಲ್ಪಡುತ್ತದೆ. ಇದರಿಂದ ಇವಳೂ ವಿಭು ಸ್ವರೂಪೆ.

2) ತತ್ತ್ವೇನಯಶ್ಚಿದಚಿದೀಶ್ವರ ತತ್ಸ್ವಭಾವ
ಭೋಗಾಪವರ್ಗ ತದುಪಾಯ ಗತೀರುದಾರಃ ।
ಸಂದರ್ಶಯನ್ನಿರಮಮೀತ ಪುರಾಣರತ್ನಂ ।
ತಸ್ಮೈನಮೋ ಮುನಿವರಾಯ ಪರಾಶರಾಯ ॥ (ಆಳ, ಸ್ತೋತ್ರ 4)

ಯಃ– ಯಾವ ಪರಾಶರರು ತತ್ವೇನ–ಯಥಾವಸ್ಥಿತವಾಗಿ, ಚಿತ್, ಅಚಿತ್, ಈಶ್ವರ, ಇವರುಗಳ ಸ್ವಭಾವ, ಭೋಗ–ಪ್ರಾಕೃತವಾದ ಸುಖ, ಅಪವರ್ಗ–ಮೋಕ್ಷ, ಇವುಗಳನ್ನು ಹೊಂದಲು ಉಪಾಯ, ಗತೀಃ– ಸ್ವರ್ಗ ನರಕಗಳಿಗೂ, ಹಾಗೆಯೇ ಮೋಕ್ಷಕ್ಕೆ ಹೋಗುವ ಮಾರ್ಗಗಳನ್ನು ಉದಾರ ಭಾವದಿಂದ ತೋರಿಸಿಕೊಟ್ಟು, ವಿಷ್ಣು ಪುರಾಣವೆಂಬ ಪುರಾಣ ರತ್ನವನ್ನು ನಿರ್ಮಿಸಿದರೋ, ತಸ್ಮೈ–ಆ ಮುನಿಶ್ರೇಷ್ಠರಾದ ಪರಾಶರರಿಗೆ ನಮಸ್ಕಾರ

ಪು ತಿ. ನೋ

ಪ್ರಸಾದದಿಂದ ಪಡೆದ ಪರದೇವತಾ ಪಾರಮಾರ್ಥ್ಯ ಜ್ಞಾನವುಳ್ಳ, ಪರಾಶರಬ್ರಹ್ಮರ್ಷಿಯು, ಈ ಜಗನ್ಮಾತೆಯಾದ ಲಕ್ಷ್ಮಿಯು ಮಹಾವಿಷ್ಣುವಿನೊಡನೆ ನಿತ್ಯಸಂಬಂಧವುಳ್ಳವಳು, ನಿತ್ಯಾನಪಾಯಿನೀ–ಯಾವಾಗಲೂ ಅಗಲದೆ ಇರುವವಳು, (ನಿತ್ಯಶಬ್ದವನ್ನು ಇಲ್ಲಿಯೂ ಸೇರಿಸಿಕೊಳ್ಳಬೇಕು) ಎಂದು ತಿಳಿಸಿದ್ದಾರೆ ಈ "ನಿತ್ಯೈವೇಷಾ", ಎಂಬ ಪ್ರಮಾಣವು ಆ ಪ್ರಕರಣದಲ್ಲಿ ಹೇಳಿದ ಲಕ್ಷ್ಮೀಪಾರಮ್ಯವನ್ನು ತಿಳಿಸುವ ಇತರ ಪ್ರಮಾಣ ವಚನಗಳಿಗೂ ಉಪಲಕ್ಷಣವಾದದ್ದು. ಆ ಇತರ ಪ್ರಮಾಣಗಳು ಯಾವವೆಂದರೆ, "1 ಯಥಾ ಸರ್ವಗತೋ ವಿಷ್ಣುಃ ತಥೈವೇಯಂದ್ವಿಜೋತ್ತಮ। 2 ನಾನಯೋ ರ್ವಿದ್ಯತೇ ಪರಮ್", **3 ತ್ವಯೈತದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಮ್, ಎಂಬುವು** 1 ವಿಷ್ಣುವು ಹೇಗೆ ವಿಭುಸ್ವರೂಪನಾಗಿದ್ದು ಸರ್ವವ್ಯಾಪಿಯೋ, ಹಾಗೆಯೇ ಇವಳೂ ಸಹ ವಿಭುಸ್ವರೂಪಿ ಸರ್ವವ್ಯಾಪಿನೀ ಎಂದರ್ಥ. ಯಥಾ, ತಥಾ ಎಂಬಲ್ಲಿ "ಪ್ರಕಾರ ವಚನೇಥಾಲ್" ಎಂಬ ಪ್ರತ್ಯಯದಿಂದ ವಿಷ್ಣುವು ಯಾವ ಪ್ರಕಾರದಿಂದ ಕೂಡಿದವನೋ, ಲಕ್ಷ್ಮಿಯೂ ಅದೇ ಪ್ರಕಾರದಿಂದ ಕೂಡಿದವಳು, ಎಂಬ ಅರ್ಥವು ಹೇಳಲ್ಪಡುತ್ತದೆ. ವಿಷ್ಣುವು ವಿಭು ಸ್ವರೂಪನು, ಲಕ್ಷ್ಮಿಯೂ ವಿಭು ಸ್ವರೂಪೆ. ವಿಷ್ಣುವಿಗೆ ಸ್ವರೂಪ ವಿಭುತ್ವ ಹೇಳಿ ಲಕ್ಷ್ಮಿಗೆ ಧರ್ಮಭೂತಜ್ಞಾನದಿಂದ ವಿಭುತ್ವವನ್ನು ಹೇಳುವುದು ಈ ಪ್ರಮಾಣ ವಚನಕ್ಕೆ ವಿರುದ್ಧ–ಸರಿಯಿಲ್ಲ 2 ಅನಯೋಃ ಪರಂ ನವಿದ್ಯತೇ – ಇವರಿಬ್ಬರನ್ನು ಬಿಟ್ಟರೆ, ಬೇರೆ ಯಾವುದೂ ಪರತತ್ವವಲ್ಲ **3 ನಿನ್ನಿಂದಲೂ ವಿಷ್ಣುವಿನಿಂದಲೂ ಚರ ಚರಾತ್ಮಕವಾದ ಪ್ರಪಂಚವು ವ್ಯಾಪರಿಸಲ್ಪಟ್ಟಿದೆ.** ಹಾಗಾದರೆ ಇಬ್ಬರು ಲೋಕನಾಯಕರು ಆದರೆ ದ್ವೈರಾಜ್ಯ ದೋಷ ಪ್ರಸಂಗವು ಬರುವುದಿಲ್ಲವೇ ಎಂದು ಕೇಳಬಹುದು ಅದಕ್ಕೆ ಸಮಾಧಾನ **"ಸಪತ್ನೀಕ ನಾಯಕ್‌ಕೊಂಡೇ" ಎಂಬುದು ಪರಸ್ಪರ ಪತಿಪತ್ನೀ ಭಾವದಿಂದ ಉಂಟಾದ ಐಕರಸ್ಯಭಾವದಿಂದ ಕೂಡಿದವರು.** ಪ್ರಮಾಣವಚನಗಳು ಲಕ್ಷ್ಮೀಯನ್ನು ವಿಶೇಷಣವಾಗಿಯೂ, ವಿಷ್ಣುವನ್ನು ವಿಶೇಷ್ಯವಾಗಿಯೂ ಹೇಳಿರುವುದರಿಂದ ಪತ್ನಿಯಿಂದ ಕೂಡಿದವನನ್ನು, ಏಕಃ ಈಶ್ವರಃ ಎಂದು ಪುರುಷ ಪ್ರಾಧಾನ್ಯ ವಿವಕ್ಷೆಯಿಂದ ಹೇಳಬಹುದು ಆದ್ದರಿಂದ ಸರ್ವಾವಸ್ಥೆಯಲ್ಲಿಯೂ, ಈಶ್ವರನು ಸಪತ್ನೀಕನಾಗಿಯೇ ಇದ್ದರೂ ಈಶ್ವರದ್ವಿತ್ವವು ಉಂಟಾಗಲಾರದು. ದ್ವೈರಾಜ್ಯ ದೋಷವೂಉಂಟಾಗಲಾರದು. ಇದು ಈ ವಚನಗಳಿಗೆ ಭಾವ. ಹೀಗೆಯೇ ನಮ್ಮಾಳ್ವಾರವರೂ, "ಒಂಡೊಡಿಯೊಳ್ ತಿರುಮಹಳುಂ ನೀಯುಮ್ ನಿಲಾನಿರ್ಪ" ಉಜ್ವಲವಾದ ಹಸ್ತಾಭರಣದಿಂದ ಕೂಡಿದ ಲಕ್ಷ್ಮಿಯೂ ನೀನೂ (ಮಹಾವಿಷ್ಣುವು) ಕೂಡಿ ಇರುವ ಈ ವೈಭವವನ್ನು, "ಕಂಡ ಶದಿರ್‌ಕಂಡೊಳಿಂದೇನ್, ಅಡೈಂದೇನ್ ಉನ್‌ತಿರುವಡಿಯೇ"– ಕಂಡು ಪ್ರಾಕೃತವಿಷಯಗಳಲ್ಲಿ ಆಸೆಯನ್ನು ತೊರೆದು, ಲಕ್ಷ್ಮೀವಿಶಿಷ್ಟನಾದ ನಿನ್ನ ಪಾದಗಳನ್ನು ಹೊಂದಿದೆನು ಇದು ಪ್ರಾಪ್ಯದಶೆಯಲ್ಲಿ ಇಬ್ಬರೂ ಉದ್ದೇಶ್ಯವೆಂಬುದಕ್ಕೆ ಪ್ರಮಾಣ ಹಾಗೆಯೇ "ಅಹಲಹಿಲ್ಲೇನ್ ಇರೈಯುಮೆನ್ರಲರ್‌ಮೇಲ್ ಮಂಗೈಯುರೈಮಾರ್ಬಾ.... ಅಡಿಕ್ಕೀ ಳ್ ಅಮರ್‌ನ್ದುಪುಹುಂದೇನೇ" ಎಂಬುದು ಉಪಾಯ ದಶೆಯಲ್ಲಿ (ಶರಣಾಗತಿ ಮಾಡುವಾಗ) ಇಬ್ಬರೂ ಉದ್ದೇಶ್ಯವೆಂಬುದಕ್ಕೆ ಪ್ರಮಾಣ

ಮೇಲೂ, **ನಿತ್ಯೈವೇಷಾ ಜಗನ್ಮಾತಾ** ಎಂಬ ಶ್ಲೋಕದಲ್ಲಿ ನಿತ್ಯಶಬ್ದವು ಭಗವಂತನ ವಕ್ಷಸ್ಥಲದಲ್ಲಿ ನಿತ್ಯವಾಗಿರುವ ರೂಪವನ್ನು ತಿಳಿಸಿ, ಭಗವದ್ದಿವ್ಯ ವಿಗ್ರಹ ವಿಶಿಷ್ಟವೇಷೇಣ ಇವಳು ನಿತ್ಯೆ ಎಂಬುದನ್ನೂ ತಿಳಿಸುತ್ತದೆ ಸ್ವರೂಪ ನಿತ್ಯತ್ವವು ಸರ್ವಾತ್ಮ ಸಾಧಾರಣವಾಗಿರುವುದರಿಂದ ಭಗವದ್ದಿವ್ಯ ವಿಗ್ರಹಗಳಲ್ಲಿ ಇವಳು ನಿತ್ಯ ಸಂಶ್ಲಿಷ್ಟಳಾಗಿದ್ದಾಳೆಂದು ಹೇಳುವುದು ಪ್ರಕರಣಾನುಗುಣ ಇದರಿಂದ 'ಕಾರಣಂತುಧ್ಯೇಯಃ' ಎಂದು ಹೇಳಲ್ಪಡುವ

3) ಮಾತಂಪಿತಾಯುವತಯಃ ತನಯಾ ವಿಭೂತಿಃ
ಸರ್ವಂಯದೇವ ನಿಯಮೇನ ಮದನ್ವಯಾನಾಮ್ ।
ಆದ್ಯಸ್ಯನಃ ಕುಲಪತೇರ್ವಕುಳಾಭಿರಾಮಂ
ಶ್ರೀಮತ್ತದಂಘ್ರಿಯುಗಳಂ ಪ್ರಣಮಾಮಿ ಮೂರ್ಧ್ನಾ ॥

ತಾಯಿ, ತಂದೆ, ಯುವತಿಗಳು, ಮಗಳು, ವಿಭೂತಿ-ಐಶ್ವರ್ಯ ಮೊದಲಾದ ಎಲ್ಲವೂ ಅಂದರೆ ಇವರುಗಳ ಹಾಗೆ ಉಪಕಾರಭೂತರಾದ ಆಳ್ವಾರವರು ನಮ್ಮ ಜ್ಞಾನಕುಲಕ್ಕೆ ಪತಿಯಾಗಿಯೂ, ವಕುಳಪುಷ್ಪದಿಂದ ಅಭಿರಾಮರಾಗಿಯೂ ಇರುವವರು ಆ ಆಳ್ವಾರವರ ಪಾದಪದ್ಮಗಳನ್ನು ತಲೆಯನ್ನು ಬಾಗಿಸಿ ನಮಸ್ಕರಿಸುತ್ತೇನೆ.

ಜಗತ್ಕಾರಣ ವಸ್ತುವು ಲಕ್ಷ್ಮೀವಿಶಿಷ್ಟವು. ವಿಷ್ಣುವಿನ ಹಾಗೆ ಇವಳೂ ಅವನ ಜತೆಯಲ್ಲೇ ಅವತಾರಗಳನ್ನೆತ್ತುವವಳು. ಭೃಗುವಿಗೆ ಮಗಳಾಗಿ ಖ್ಯಾತಿಯಲ್ಲಿ ಆವಿರ್ಭವಿಸಿದವಳು. ಅನಂತರ ಅಮೃತಮಥನದಲ್ಲಿ ಭಗವಂತನು ದೇವತೆಗಳಿಗೆ ಸಹಾಯವಾಗಿ ಅಮೃತಮಥನ ಮಾಡಲು, ಅವತಾರವನ್ನು ಎತ್ತಿದಾಗ, ತಾನೂ ಅವತಾರವನ್ನೆತ್ತಿ "ಪಶ್ಯತಾಂ ಸರ್ವದೇವಾನಾಂ ಯಯೌ ವಕ್ಷಸ್ಥಲಂ ಹರೇಃ" ಎಂಬ ವಚನದಂತೆ ಅವನ ಎದೆಯಲ್ಲಿ ಒಂದು ರೂಪವನ್ನು ತಾಳಿ ಸೇರಿಕೊಂಡಳು. ಪರರೂಪವಿಶಿಷ್ಟನಾದ ಭಗವಂತನೇ ಜಗತ್ಕಾರಣನೆಂಬುದು ಶ್ರುತಿ ತಾತ್ಪರ್ಯವೆಂದು ಮುಂದಿನ ಅಧಿಕಾರದಲ್ಲಿ ಆಚಾರ್ಯರು ತಿಳಿಯಪಡಿಸುತ್ತಾರೆ, ಲಕ್ಷ್ಮಿಯ ಪರರೂಪವು, "ಧತ್ತೇ ಶೋಭಾಂ ಹರಿಮರಕತೇ ತಾವಕೀ ಮೂರ್ತಿರಾದ್ಯಾ" ಎಂಬ ಶ್ರೀಸ್ತುತಿ (ಶ್ಲೋಕ- ||) ವಚನದಂತೆ ಆದ್ಯಾಮೂರ್ತಿಃ, ಎಂದು ಶ್ರೀ ವೈಕುಂಠದಲ್ಲಿರುವ ಭಗವಂತನ ಪರರೂಪದಲ್ಲಿ ಅವನ ಎದೆಯಲ್ಲಿರುವ ರೂಪವು ಎಂದು ಹೇಳಲ್ಪಟ್ಟಿದೆ. "ಯಸ್ಯಾಂಗಚ್ಛಂತ್ಯುದಯವಿಲಯೈಃ ನಿತ್ಯಮಾನಂದ ಸಿಂಧೌ, ಇಚ್ಛಾವೇಗೋಲ್ಲಸಿತ ಲಹರೀ ವಿಭ್ರಮ ವ್ಯಕ್ತಯಸ್ತೇ" (ಶ್ರೀಸ್ತುತಿ–||) ಎಂದು ಹೇಳಿರುವಂತೆ ಲಕ್ಷ್ಮಿಯ ಎಲ್ಲಾ ಅವತಾರಗಳಿಗೂ ಪರರೂಪಿಯಾದ ಭಗವಂತನ ಎದೆಯಲ್ಲಿರುವ ಲಕ್ಷ್ಮಿಯ ರೂಪವು, ಮೂಲಕಂದ – ಅಂದರೆ ಉಪಾದಾನಕಾರಣ. ಹಾಗಾದರೆ "ತಯಾಸಹಾಸೀನ ಮನಂತಭೋಗಿನಿ" ಎಂದು ಶ್ರೀ ವೈಕುಂಠದಲ್ಲಿ ಪರವಾಸು ದೇವನ ಪಕ್ಕದಲ್ಲಿ ಆದಿಶೇಷನಮಡಿಯಲ್ಲಿ ಕುಳಿತಿರುವ ಲಕ್ಷ್ಮಿಯ ನಿತ್ಯರೂಪವು ಮತ್ತೊಂದಿದೆಯಲ್ಲಾ ಆ ರೂಪಕ್ಕೆ ಏನು ಪ್ರಯೋಜನವೆಂದು ಕೇಳಬಹುದು. ಸಾರ್ವಭೌಮನ ಮಹಿಷಿಯ ಹಾಗೆ ಸರ್ವಲೋಕಸಾರ್ವಭೌಮನ ದಿವ್ಯ ಮಹಿಷಿಯಾಗಿ ಲಕ್ಷ್ಮಿಯು ಪಕ್ಕದಲ್ಲಿ ಕುಳಿತುಕೊಂಡು, ಜಗದ್ವಿಹಾರ ರಸವನ್ನು ಭಗವಂತನೊಡನೆ ಅನುಭವಿಸುತ್ತಾ, ವಾರುಣೀ, ಕಾಂತೀ, ರುದ್ರಾ, ಸುಕೀರ್ತಿ, ಸೂತ್ರವತ್ಯಾದಿ ಪರಿಚಾರಿಕೆಯರಂತೆ ಭಗವಂತನ ಪಾದಸಂವಾಹನಾದಿ ಸರ್ವವಿಧ ಕೈಂಕರ್ಯಗಳನ್ನೂ ಭಗವಂತನ ವಿಶೇಷ ಪ್ರವೃತ್ತಿಗಳಿಗೆ ಉಚಿತವಾದ ಪುರುಷಕಾರ ಕೃತ್ಯಗಳನ್ನೂ ಮಾಡುತ್ತಿರುವುದೇ ಪ್ರಯೋಜನ

[1]ಏಷಾ, ಭೃಗೋಃ ಖ್ಯಾತ್ಯಾಂ ಸಮುತ್ಪನ್ನಾ ಶ್ರೀಃ ಪೂರ್ವಮುದಧೇಃ ಪುನಃ"(ವಿ ಪು 1-8-16) ಎಂಬಂತೆ, ದಿವ್ಯ ಅವತಾರ ರಹಸ್ಯ ತತ್ವ ಯಾಥಾರ್ಥ್ಯವತೀ, 'ಜಗನ್ಮಾತಾ' - ಗೃಹಕ್ಷೇತ್ರಾರಾಮಾದಿಗಳಲ್ಲಿಯೂ ಪ್ರಜೆಗಳಲ್ಲಿಯೂ ಸ್ವಾಮಿತ್ವವು ಹೇಗೆ ಲೌಕಿಕ ದಂಪತಿಗಳಿಗೆ ಸೇರಿದೆಯೋ (ವ್ಯಾಸಜ್ಯವೃತ್ತಿತ್ವ) ಹಾಗೆ ದಿವ್ಯದಂಪತಿಗಳಿಬ್ಬರಿಗೂ, ಸರ್ವಜಗತ್ತಿನ ಸ್ವಾಮಿತ್ವವು ವ್ಯಾಸಜ್ಯವೃತ್ತಿಕವಾಗಿದೆ ಶ್ರೀಶಬ್ದದಿಂದ, ಸರ್ವ ಚಿದಚಿದ್ವಸ್ತುಗಳಿಂದ ಆಶ್ರಯಿಸಲ್ಪಟ್ಟಿದ್ದಾಳೆ (ಶ್ರೀಯತೇ- ಧಾರಕತ್ವ), ಸರ್ವವನ್ನೂ ತಾನು ಆಶ್ರಯಿಸಿದ್ದಾಳೆ (ಶ್ರಯತೇ–ವ್ಯಾಪಕತ್ವ) ಎಂಬವ್ಯುತ್ಪತ್ತಿಗಳಿಂದಲೂ, ಶೃಣಾತಿ ನಿಖಿಲಾನ್ ದೋಷಾನ್, ಶ್ರೀಣಾತಿ ಚ ಗುಣೈರ್ಜಗತ್, ಎಂಬ ನಿರ್ವಚನದಿಂದ ಪಾಪಗಳನ್ನು ಹೋಗಲಾಡಿಸಿ ಜಗತ್ತನ್ನು (ಚೇತನರನ್ನು) ಕಾಪಾಡುತ್ತಾಳೆ, ಎಂಬವ್ಯುತ್ಪತ್ತಿಗಳಿಂದಲೂ, ಧಾರಕತ್ವ; (ಜಗತ್ತನ್ನು ಧರಿಸಿರುವುದು) - ಬಹಿರ್ವ್ಯಾಪ್ತಿ ವ್ಯಾಪಕತ್ವ ಜಗತ್ತನ್ನು ವ್ಯಾಪಿಸಿರುವುದು - ಅಂತರ್ವ್ಯಾಪ್ತಿ, ಆದರಿಂದ ಏರ್ಪಟ್ಟ, ಸರ್ವಶರೀರತ್ವ, ಅಂದರೆ ಸರ್ವವನ್ನೂ ಧರಿಸಿ ನಿಯಮಿಸಿ ವ್ಯಾಪಿಸಿರುವುದು, ಆದರಕಾರಣವಾಗಿ ನಿಖಿಲ ಜಗತ್ತಿಗೂ ಅಭಿನ್ನ ನಿಮಿತ್ತೋಪಾದಾನತ್ವವು, ತಾನೇ ನಿಮಿತ್ತ, ತಾನೇ ಉಪಾದಾನಕಾರಣವೆಂಬುದು, ಪರತ್ವೋಪಯುಕ್ತ ಉಪಾಯತ್ವ, ಉಪೇಯತ್ವಗಳೂ ತದಾಕ್ಷಿಪ್ತವಾಗಿ ಪರತ್ವ ಸೌಲಭ್ಯ ಪರಮಕಾರುಣಿಕತ್ವಾದಿ ಗುಣಗಳೂ 'ಜಗನ್ಮಾತಾ' ಎಂಬ ಪದಗಳಿಂದ ಸಂಗ್ರಹಿಸಲ್ಪಡುತ್ತವೆ 'ನಾರಾಯಣ' ಶಬ್ದದಹಾಗೆ ಶ್ರೀಶಬ್ದವೂ, ಪರತ್ವ ಸೌಲಭ್ಯಗಳಿಗೆ ಉಪಯೋಗವಾದ ಸರ್ವ ಕಲ್ಯಾಣಗುಣ ಸಂಗ್ರಾಹಕವು.

'ವಿಷ್ಣೋಃ ಶ್ರೀರನಪಾಯಿನೀ' ಎಂಬಲ್ಲಿ, ವಿಷ್ಣು ಶಬ್ದವು, ವಿಶಲ್ ವ್ಯಾಪ್ತೌ, ಇಷು ಇಚ್ಛಾಯಾಂ, ವಶಕಾಂತೌ, ವಿಶಪ್ರವೇಶನೇ, ಎಂಬ ಧಾತುಗಳ ಮೂಲಕ ವಿಷ್ಣುವಿಗೆ ಸರ್ವವ್ಯಾಪ್ತಿ, ಸ್ವೇಚ್ಛಾಧೀನಸಂಕಲ್ಪ, ಚರಾಚರಗಳು ಅವನ ಅಧೀನ, ಸರ್ವವನ್ನೂ ಅಂತಃ ಪ್ರವೇಶಿಸಿ ನಿಯಮಿಸುವುದು, ಎಂಬುದೇ ಮೊದಲಾದ ಆಕಾರಗಳು (ಧರ್ಮಗಳು) ಇರುವಂತೆ, ಅವನನ್ನು ಅಗಲದಿರುವ ಲಕ್ಷ್ಮಿಗೆ, **ನಿತ್ಯಂತದ್ಧರ್ಮಧರ್ಮಿಣೀ** ಎಂದು

ಲಕ್ಷ್ಮೀನಾರಾಯಣರ್‌ಹಳ್ ಸ್ವೇಚ್ಛೈಯಿನಾಲ್ ವಿಭಾಗಂ ಶೆಯ್ದುಕೊಂಡಿರುಕ್ಕಿರ ವ್ಯಾಪಾರಂಗಳ್.

ಇವ್ವಿಡತ್ತಿಲ್ ದಣ್ಡಧರತ್ವಮುಮ್, ಪುರುಷಕಾರತ್ವಾದಿಹಳುಮ್, ಎಮ್ಬೆರುಮಾನುಕ್ಕುಮ್ ಪಿರಾಟ್ಟಿಕ್ಕುಮ್, ಕೂರಾಹ ವಿಭಜಿತ್ತ ವ್ಯಾಪಾರಙ್ಗಳ್.

ಅವನ ಧರ್ಮಗಳೆಲ್ಲಾ ಉಂಟು, ಯಾವ ಆಕಾರದಿಂದಲೂ, ಯಾವ ಅಂಶದಲ್ಲಿಯೂ ಇವಳಿಗೆ ವೈಕಲ್ಯವಿಲ್ಲವೆಂಬುದೂ ಏಪಡುತ್ತದೆ ಪುರುಷೋತ್ತಮನಿಗೆ 'ನಾರೀಣಾಮುತ್ತಮಾ' ಎಂದು ಹೊಗಳಲ್ಪಡುವ ಲಕ್ಷ್ಮಿಯ ಸರ್ವಾಕಾರ ಸಾಮರಸ್ಯವೇ ಸ್ವರೂಪ ನಿರೂಪಕ

ಭಗವಂತನೂ ಲಕ್ಷ್ಮಿಯೂ ಸ್ವೇಚ್ಛೆಯಿಂದ ವಿಭಾಗ ಮಾಡಿ ಕೊಂಡಿರುವ ವ್ಯಾಪಾರಗಳು—ಆಕ್ಷೇಪ ಸಮಾಧಾನಗಳು.

ಹಾಗಾದರೆ, ಲೋಕದಲ್ಲಿ ತಂದೆಯು ದಂಡ ಧರನಾಗಿಯೂ ಅಂದರೆ ಮಕ್ಕಳು ಮಾಡುವ ತಪ್ಪಿಗೆ ಶಿಕ್ಷಿಸುವವನಾಗಿಯೂ, ತಾಯಿಯು ಮಕ್ಕಳಲ್ಲಿರುವ ವಾತ್ಸಲ್ಯದಿಂದ ಪುರುಷಕಾರ ಭೂತೆಯಾಗಿಯೂ, ಅಂದರೆ ತಂದೆಯ ಕೋಪವನ್ನು ಹೋಗಲಾಡಿಸಿ ಮಕ್ಕಳ ವಿಷಯದಲ್ಲಿ ಆಭಿಮುಖ್ಯವನ್ನುಂಟು ಮಾಡುವವಳಾಗಿಯೂ, ಇರುವುದು ಸಹಜ. ಹಾಗಿರುವಾಗ, ದಿವ್ಯದಂಪತಿಗಳಿಗೆ ಪರಸ್ಪರ ಸರ್ವಾಕಾರ ಸಾಮರಸ್ಯವನ್ನು ಹೇಳಿದರೆ, ಲಕ್ಷ್ಮಿಗೆ ದಂಡ ಧರತ್ವವೂ—ಶಿಕ್ಷೆ ಮಾಡುವವಳಾಗಿಯೂ, ಭಗವಂತನಿಗೆ ಪುರುಷಕಾರತ್ವವೂ ಲಕ್ಷ್ಮಿಯನ್ನು ಸಮಾಧಾನ ಪಡಿಸುವುದೂ, ಇತ್ಯಾದಿ ವ್ಯಾಪಾರಗಳು ಪ್ರಸಕ್ತವಾಗಬಹುದಲ್ಲವೇ, ಎಂದರೆ **"ಇವ್ವಿಡತ್ತಿಲ್ ದಂಡಧರತ್ವಮುಮ್"** ಎಂದಾರಂಭಿಸಿ ಅನುಗ್ರಹಿಸುತ್ತಾರ ಅದಾಗಿ ಈ ಸಂದರ್ಭದಲ್ಲಿ ದಂಡ ಧರತ್ವವೂ ತಪ್ಪು ಮಾಡಿದವರನ್ನು ಶಿಕ್ಷಿಸುವುದೂ, **'ಉಮ್'** ಎಂಬುದರಿಂದ ಸ್ವಾತಂತ್ರ್ಯಾದಿಗಳೂ ಭಗವಂತನಿಗೂ, ಪುರುಷಕಾರತ್ವವೂ (ಭಗವಂತನನ್ನು ಸಮಾಧಾನ ಪಡಿಸಿ ಚೇತನ ವಿಷಯದಲ್ಲಿ ಆಭಿಮುಖ್ಯತೆಯನ್ನುಂಟು ಮಾಡುವುದು) **'ಆದಿ'** ಶಬ್ದದಿಂದ ಮೃದು ಸ್ವಭಾವವೂ ಪತಿ ಪಾರಾರ್ಥ್ಯವೂ(ಪತ್ಯಧೀನತೆ)ಲಕ್ಷ್ಮಿಗೂ **ಕೂರಾಹ**—ಬೇರೆ ಬೇರೆಯಾಗಿ ಪರಸ್ಪರ ಸ್ವೇಚ್ಛೆಯಿಂದ ವಿಭಾಗ ಮಾಡಿಕೊಂಡ ವ್ಯಾಪಾರಗಳು ಲಕ್ಷ್ಮಿಗೆ ದಂಡನ ಸಾಮರ್ಥ್ಯವಿದ್ದರೂ, **ನಿತ್ಯಮಜ್ಞಾತ ನಿಗ್ರಹಾಂ"** ಎಂದು ಹೇಳಲ್ಪಡುವಂತೆ ತನ್ನ ಮಕ್ಕಳಾದ ಚೇತನ ರಾಶಿಗಳಲ್ಲಿ ವಾತ್ಸಲ್ಯವು ಹೆಚ್ಚಾಗಿರುವುದರಿಂದ **ದಂಡನೆ ಮಾಡದಿರುವುದೇ** ಗುಣವಾಗಿ ಪರಿಣಮಿಸುತ್ತದೆ ಸಾಮರ್ಥ್ಯವಿಲ್ಲವೆಂಬುದಲ್ಲ. ಅಸಮರ್ಥನು ದಂಡನೆ ಮಾಡದಿರುವುದು ಗುಣವಾಗುವುದಿಲ್ಲವಲ್ಲವೇ. ಕೆಲವು ವ್ಯಾಪಾರಗಳಲ್ಲಿ, ಭಗವಂತನಾದ ಪತಿಯೂ ಪುರುಷಕಾರವನ್ನು ಅಪೇಕ್ಷಿಸದೆ ಸ್ವತಃ ಚೇತನನಿಗೆ ಅನುಗ್ರಹವನ್ನು ಮಾಡದೆ ಇರುವುದು, ಪರಮಕಾರುಣಿಕತ್ವ ಸರ್ವಶಕ್ತಿತ್ವಗಳಿಗೆ ಬಾಧಕವನ್ನುಂಟು ಮಾಡದಿರುವಂತೆ, ದಂಡ ಧಾರಣೆ—ಶಿಕ್ಷೆ ಮಾಡದಿರುವುದೂ ಲಕ್ಷ್ಮಿಯ ಶಕ್ತಿಗೆ ಕುಂದುಕವನ್ನುಂಟು ಮಾಡುವುದಿಲ್ಲ. **"ವಿಹರಣವಿರತಿಃ ಸ್ವೇಚ್ಛಯಾ ಕೋತ್ರ ದೋಷಃ** ಎಂದು ಜಗದ್ವ್ಯಾಪಾರವೆಂಬ **ಲೀಲೆಯನ್ನು** ಭಗವಂತನು ತನ್ನ ಇಚ್ಛೆಯಿಂದ ಒಂದಾನೊಂದು ದಿವಸ ಪೂರ್ತಿ ನಿಲ್ಲಿಸಿಬಿಟ್ಟರೆ ಏನು ತಪ್ಪಿದೆ ಆತನ ಶಕ್ತಿಗೆ ಭಂಗವುಂಟೇ—ಭಂಗವಿಲ್ಲವಲ್ಲವೇ. ಹಾಗೆಯೇ ಲಕ್ಷ್ಮಿಗೂ ಸ್ವೇಚ್ಛೆಯಿಂದ, ದಂಡ ಧರತ್ವವನ್ನು ಬಿಟ್ಟಿರುವುದೂ ಅವಳ ಈಶ್ವರತ್ವಕ್ಕೆ ಕುಂದುಕವನ್ನುಂಟು ಮಾಡಲಾರದು ಆದ್ದರಿಂದ ಪ್ರಮಾಣಗಳನ್ನನುಸರಿಸಿ ಇಬ್ಬರಲ್ಲಿಯೂ ಪಾರಸ್ಯಜ್ಯ ವೃತ್ತಿಕವಾಗಿರುವ ಈಶ್ವರತ್ವವನ್ನು ಅಪಲಪಿಸಬಾರದು ಲೋಕದಲ್ಲಿ ಸ್ವತ್ತುಗಳು ದಂಪತಿಗಳಿಬ್ಬರಿಗೂ ಸಮಾನವಾಗಿದ್ದರೂ ಕೆಲವು ಆಭರಣಗಳನ್ನು ಪತ್ನಿಯು ತನ್ನದಾಗಿಯೂ, ಕೆಲವನ್ನು ಪತಿಯು ತನ್ನಗಿದನ್ನಾಯೂ ವಿಭಾಗಮಾಡಿಕೊಳ್ಳುವಂತೆ, ಉಭಯ ವಿಭೂತಿನಾಯಕರೂ ಸರ್ವಕಾರ್ಯ ಸಮರ್ಥರೂ ಆದ ದಿವ್ಯ ದಂಪತಿಗಳು ಸ್ವೇಚ್ಛೆಯಿಂದ ಕೆಲವು ವ್ಯಾಪಾರಗಳನ್ನು ವಿಭಾಗಿಸಿ ಕೊಂಡಿರುವುದು, ಅವರ ಈಶ್ವರತ್ವಕ್ಕೆ ಭಂಗವಿಲ್ಲವಲ್ಲವೇ.

ಉಪದಿಶ್ಯಮಾನ ಧರ್ಮಧಾರತ್ತಿರ್ಕ್ಕಾಟ್ಟಿಲ್ ಅತಿದಿಶ್ಯಮಾನ ಧರ್ಮಧಾರತ್ತುಕ್ಕು ವಿಶೇಷಮ್ ಸ್ವತಃ ಪ್ರಾಪ್ತಮೆನ್ರು ಉಭರರುಳಿಚ್ಚೆಯ್‌ದದುಕ್ಕುಮ್ ಇಪ್ಪಡಿ ವಿಭಾಗತ್ತಾಲ್‌ವನ್ದ ವೈಷಮ್ಯತ್ತಿಲೇ ತಾತ್ಪರ್ಯಮ್.

ಹಾಗಾದರೂ, "ಸರ್ವೈಶ್ವರ್ಯ ಗುಣೋಪೇತಾ ನಿತ್ಯಂ ತದ್ಧರ್ಮಧರ್ಮಿಣೀ", ಎಂದು ಭಗವಂತನ ಗುಣಗಳನ್ನು ಲಕ್ಷ್ಮಿಯಲ್ಲಿ ಅತಿದೇಶಮಾಡಿರುವುದರಿಂದ, ಸರ್ವೇಶ್ವರ ತತ್ವೋಪದೇಶ ಪ್ರಸಂಗಗಳಲ್ಲಿ ಲಕ್ಷ್ಮಿಗೆ ಅನ್ವಯವಿಲ್ಲವೆಂದೇ ಹೇಳುವುದಿಲ್ಲವೇ. ಪ್ರಥಮ ಪ್ರತೀತಿಗೆ ಅಂದರೆ ಮೊದಲು ಹೇಳಿರುವ ಅರ್ಥಗಳಿಗೆ ಬಾಧಕವಿಲ್ಲದೆ, ಪ್ರಮಾಣಾಂತರಗಳಿಂದ ಬರತಕ್ಕ ಅರ್ಥಗಳನ್ನು ವ್ಯವಸ್ಥಾಪನೆ ಮಾಡಬೇಕು. ಆದ್ದರಿಂದ ಲಕ್ಷ್ಮಿಗೆ ಈಶ್ವರತ್ವವುಂಟೆಂದು ಹೇಳುವ ವಚನಗಳು ಸ್ವಾಭಾವಿಕವಲ್ಲ. ಪತಿಯಾದ ಭಗವಂತನ ಸಂಬಂಧದಿಂದ ಉಂಟಾದವು. ಸ್ವಾಭಾವಿಕವಾದ ಧರ್ಮಗಳಲ್ಲ. ಅವಳನ್ನು ಜೀವಕೋಟಿಗೆ ಸೇರಿದವಳೆಂದು ನಿರೂಪಿಸುತ್ತವೆ," ಎಂಬ ಶಂಕೆಯನ್ನು ಹೋಗಲಾಡಿಸಲು, "**ಉಪದಿಶ್ಯಮಾನ ಧರ್ಮಧಾರತ್ತಿಲ್ ಕಾಟ್ಟಿಲ್**" ಎ ದಾರಂಭಿಸಿ, ಆಚಾರ್ಯರು ಅನುಗ್ರಹಿಸುತ್ತಾರೆ. ಅದಾಗಿ **ಉಪದಿಶ್ಯಮಾನ ಧರ್ಮಧಾರಮ್**–ಕರ್ಮ ಮೀಮಾಂಸೆಯ ಪೂರ್ವಕಾಂಡದಲ್ಲಿ, ಪ್ರಥಮಷಟ್ಕದಲ್ಲಿ ಹೇಳಲ್ಪಟ್ಟ ಪ್ರಕೃತಿಯಾಗ **ಅತಿದಿಶ್ಯಮಾನ ಧರ್ಮಧಾರಮ್**–ಪ್ರಕೃತಿ ವದ್ವಿಕೃತಿಃಕರ್ತವ್ಯಾ," ಎಂದು ಅತಿ ದೇಶಮಾಡಿದ ಪ್ರಕೃತಿ ಯಾಗದ ಧರ್ಮಗಳನ್ನುಳ್ಳ ವಿಕೃತಿಯಾಗ. ಇವುಗಳಲ್ಲಿ ವಿಕೃತಿಯಾಗಕ್ಕೆ, ಪ್ರಕೃತಿಯಾಗದಲ್ಲಿ ಉಪದಿಷ್ಟವಾದ ಎಲ್ಲಾ ಧರ್ಮಗಳೂ ಅತಿದೇಶದಿಂದ ಸ್ವತಃ ಪ್ರಾಪ್ತವಾಗಿ, ವಿಕೃತಿಯಾಗದಲ್ಲಿ ಅಪೂರ್ವವಾಗಿ ಹೇಳಿರುವ ಕೆಲವು ಧರ್ಮಗಳೂ ಸ್ವತಃ ಪ್ರಾಪ್ತವಾಗಿವೆ. ಆ ರೀತಿಯಲ್ಲಿ ಪ್ರಕೃತಿ ಸ್ಥಾನೀಯನಾದ ಭಗವಂತನಿಗೆ ಹೇಳಲ್ಪಟ್ಟ ಎಲ್ಲಾ ಧರ್ಮಗಳೂ "ಸರ್ವೈಶ್ವರ್ಯ ಗುಣೋಪೇತಾ, ನಿತ್ಯಂತದ್ಧರ್ಮಧರ್ಮಿಣೀ" ಎಂಬ ಅತಿದೇಶದಿಂದ (ಅವನ ಗುಣಗಳನ್ನು ಇವಳೂ ಉಳ್ಳವಳು ಎಂಬುದು) ಲಕ್ಷ್ಮಿಗೆ ಪ್ರಾಪ್ತವಾಗಿ, ಮೇಲೂ ವಿಶೇಷವಾದ ಧರ್ಮಗಳು ಅವಳಿಗೆ ಸ್ವತಃ ಪ್ರಾಪ್ತಗಳು, ಎಂದು (**ಉಭರ್**–ಮಧ್ಯಸ್ಥರು) ಮಧ್ಯಸ್ಥರು ಹೇಳಿರುವುದಕ್ಕೂ, ಹೀಗೆ ಅವರವರ ಸ್ವೇಚ್ಛೆಯಿಂದ ಮಾಡಿಕೊಂಡ ವೈಷಮ್ಯ ವಿಭಾಗದಲ್ಲಿ ತಾತ್ಪರ್ಯ. ಅಭಿಪ್ರಾಯ:– "ದಿವ್ಯ ಮಿಥುನವೇ ಸರ್ವೇಶ್ವರ ತತ್ವೋಪದೇಶ ತಾತ್ಪರ್ಯವೆಂಬುದು ಸಿದ್ಧವಾದರೂ, "(1) **ಪ್ರಾಯಶ್ಚಿತ್ತ ಪ್ರಸಂಗೇತು ಸರ್ವಪಾಪ ಸಮುದ್ಭವೇ । ಮಾಮೇಕಾಂ ದೇವದೇವಸ್ಯ ಮಹಿಷೀಂ ಶರಣಂ ಶ್ರಯೇತ್ ॥**" ಇತ್ಯಾದಿ ಪ್ರಮಾಣಗಳಿಂದಲೂ, '**ಶ್ರಾವಯತಿ**' ಇತ್ಯಾದಿ ವ್ಯುತ್ಪತ್ತಿ ಬಲದಿಂದಲೂ, ಲಕ್ಷ್ಮಿಗೆ ಪುರುಷಕಾರತ್ವ ಮಾತ್ರ ಏರ್ಪಡುತ್ತದೆ. ಫಲಪ್ರಧಾನ ಕೃತ್ಯವು, ಪತಿಯಾದ ಭಗವಂತನಿಗೇ ಏರ್ಪಡುತ್ತದೆ. ಲಕ್ಷ್ಮಿಗೆ ಘಟಕತ್ವ ಮಾತ್ರ. ಪತಿಯಲ್ಲಿ ಶಿಫಾರಸ್ ಮಾಡುವವಳಿಗೆ ಸಾಕ್ಷಾದುಪಾಯತ್ವವು ಹೇಗೆ ? ಆದ್ದರಿಂದ ಲಕ್ಷ್ಮಿಗೆ ಈಶ್ವರತ್ವವಿಲ್ಲ", ಎಂಬುದು ಪೂರ್ವ ಪಕ್ಷಿಯ ಅಭಿಪ್ರಾಯ. ಹೀಗೆ ಲಕ್ಷ್ಮಿಯ ಈಶ್ವರತ್ವಕ್ಕೆ ಸಂಕೋಚವನ್ನು ಹೇಳುವವರಿಗೆ ಪ್ರತ್ಯುತ್ತರವಾಗಿ ಹೇಳುವುದೇನೆಂದರೆ, ಹೀಗೆ ಸಂಕೋಚ ಮಾಡಲು ಶಕ್ಯವಿಲ್ಲ. ಪತಿಯ ಹಾಗೆ ಅಕುಂಠಿತಾಖಿಲ ವಿಧ ಸರ್ವೈಶ್ವರ್ಯವತಿಯಾದ ಲಕ್ಷ್ಮಿಯು ಸ್ವೇಚ್ಛೆಯಿಂದ ನಿತ್ಯಸಿದ್ಧವಾದ ಪುರುಷಕಾರ ಭಾವದಿಂದಲೂ ಕೂಡಿರುವುದು ವಿರೋಧವಿಲ್ಲ. **ಶೃಣಾತಿ ನಿಖಿಲಾನ್‌ದೋಷಾನ್**–ಭಕ್ತರ ಎಲ್ಲಾ ಪಾಪಗಳನ್ನೂ ಹೋಗಲಾಡಿಸುತ್ತಾಳೆ, ಎಂಬ ನಿರ್ವಚನದಲ್ಲಿ ನಿಖಿಲ ಶಬ್ದಕ್ಕೆ ಯಾವುದೂ ಬಾಕಿಯಿಲ್ಲವೆ ಸರ್ವಪಾಪ ನಿವಾರಣನನ್ನೇ ಹೇಳಬೇಕು. ಇದು ಸಾಕ್ಷಾದುಪಾಯತ್ವವನ್ನು ಹೇಳಿದರೇನೆ ಸಮಂಜಸವಾಗುತ್ತದೆ. ಆದ್ದರಿಂದ ಸಾಕ್ಷಾದುಪಾಯತ್ವದಿಂದ ಕೂಡಿದ ಈಶ್ವರ ಸ್ವಭಾವವು ದಿವ್ಯಮಿಥುನ ಸಾಧಾರಣವೆಂಬ ದನ್ನು ತಿಳಿಸಲು "ನಿತ್ಯಂ ತದ್ಧರ್ಮಧರ್ಮಿಣೀ" ಎಂಬ ಅತಿದೇಶ ಶಾಸ್ತ್ರವು ಪ್ರವರ್ತಿಸಿದೆ. ಹೀಗೆ ಅತಿದೇಶ ಶಾಸ್ತ್ರವು ಅನ್ಯಥಾಸಿದ್ಧವಾಗಿರುವುದರಿಂದ ಸರ್ವೇಶ್ವರ ತತ್ವೋಪದೇಶ ವಚನಗಳಲ್ಲಿ ಲಕ್ಷ್ಮಿಗೆ ಅನ್ವಯವು ಉಂಟೇ ಉಂಟು. ಆದ್ದರಿಂದ ಈಶ್ವರತ್ವವು ವಿಶಿಷ್ಟ ತತ್ವ ವಿಷಯ. ಉಪಾಯತ್ವವು ಇಬ್ಬರಿಗೂ ಉಂಟು

1) ಸರ್ವಪಾಪಕ್ಕೆ ಪ್ರಾಯಶ್ಚಿತ್ತ ರೂಪವಾದ ಮೋಕ್ಷಾರ್ಥ ಶರಣಾಗತಿಯನ್ನು ಅನುಷ್ಠಿಸುವ ಪ್ರಸಂಗದಲ್ಲಿ, ದೇವದೇವನ ಮಹಿಷಿಯಾದ ಮಹಾಲಕ್ಷ್ಮಿಯನ್ನೇ ಪುರುಷಕಾರ ಭೂತೆಯಾಗಿ ಮೊದಲು ಶರಣ ಹೊಂದಬೇಕು–ಎಂಬುದು ಶ್ಲೋಕ ತಾತ್ಪರ್ಯ.

ಇದು [1]"ಯುವತ್ವಾದೌ ತುಲ್ಯೇಪಿ" ಎನ್ಗಿರ ಶ್ಲೋಕತ್ತಿಲೇ ನಿರ್ಣೀತಮ್. [2]"ಇಱೈ ನಿಲೈ ಉಣರ್ವ ರಿದು" ಎನ್ರು ಆೞ್ವಾರರುಳಿಚ್ಚೆಯ್ದ ನಿಲತ್ತಿಲೇ ಏದೇನುಮೊರು ವೃಥಾ ನಿರ್ಬನ್ಧಮಾಹಾದು.

ಇಪ್ಪಡಿ ವಿಭಾಗತ್ತಾಲ್ವಂದ ವೈಷಮ್ಯತ್ತಿಲೇ ತಾತ್ಪರ್ಯಮ್–ಹೀಗೆ ಉಪದೇಶಾತಿದೇಶವಚನಗಳಿಗೆ ದಂಪತಿಗಳು ಸ್ವೇಚ್ಛೆಯಿಂದ ಮಾಡಿಕೊಂಡ ವಿಭಾಗ ವೈಷಮ್ಯವು ತಾತ್ಪರ್ಯ. **ವಿಶೇಷಮ್**–ವೈಷಮ್ಯಮ್ ಹೀಗೆ ವಿಭಾಗ ಮಾಡಿಕೊಂಡಿರುವುದಕ್ಕೆ ಸಂಪ್ರದಾಯ ವಚನವನ್ನು 1 "**ಇದು ಯೌವತ್ವಾದೌ**" ಎಂದಾರಂಭಿಸಿ ತೋರಿಸುತ್ತಾರೆ. ಈ ವಿಭಾಗವು, "ಯುವತ್ವಾದೌ" ಎಂದಾರಂಭಿಸುವ ಶ್ಲೋಕದಲ್ಲಿ ನಿರ್ಣಯಿಸಲ್ಪಟ್ಟಿದೆ

ಈಶ್ವರ ತತ್ವ ಜ್ಞಾನವು ಮಂದಮತಿಗಳಿಗೆ ತಿಳಿಯಲಶಕ್ಯ.

(2) ಇಱೈನಿಲೈಯುಣರ್ವರಿದು ಇತ್ಯಾದಿ -ಹೀಗೆ **ಉಪಪತ್ತಿ**ಯಿಂದ ಕೂಡಿದ **ಪ್ರಮಾಣ** ಸಿದ್ಧಾರ್ಥದಲ್ಲಿ ವ್ಯತ್ಯಾಸ ಬುದ್ಧಿಯುಳ್ಳ ಕೃಪಣರಿಗೆ ಅನರ್ಥ ಪ್ರಸಂಗ ಉಂಟಾಗುತ್ತದೆ, ಎಂಬ ಅಭಿಪ್ರಾಯದಿಂದ, **ಇಱೈನಿಲೈ**–**ಈಶ್ವರತತ್ವದ** ಸ್ಥಿತಿಯು ಮಂದಮತಿಗಳಾದ ನಮಗೆ ದುರ್ಜ್ಞೇಯವು ಸುಲಭವಾಗಿ **ತಿಳಿಯತಕ್ಕದಲ್ಲ, ಎಂದು** ಆಳ್ವಾರವರು ಕೃಪೆ ಮಾಡಿರುವ **ನಿಲತ್ತಿಲೇ**–ಈಶ್ವರತತ್ವ ವಿಷಯದಲ್ಲಿ, **ಏದೇನುಮೊರು ವೃಥಾನಿರ್ಬಂಧಮಾಹಾದು**–ಯಾವುದಾದರೂ ಆದ ಒಂದು ವ್ಯರ್ಥವಾದ ನಿರ್ಬಂಧವು ಕೂಡದು. ಅದಾಗಿ ಈಶ್ವರದ್ವಿತ್ವವನ್ನು ಹೇಳಿ ಅದು ವಿಶೇಷಣ ವಿಶಿಷ್ಟವಾದ ಏಕತತ್ವದ ಹಾಗೆಂದೂ, ಯುಕ್ತಿಗಳಿಗೆ ವಿರುದ್ಧವೆಂದೂ, ನಮ್ಮ ಪೂರ್ವಾಚಾರ್ಯರು ಲಕ್ಷ್ಮಿಯು ಈಶ್ವರ ಕೋಟಿಗೆ ಸೇರಿದವಳೆಂದು ಹೇಳಲಿಲ್ಲವೆಂದೂ, ಯಾವ ಸಿದ್ಧಾಂತಿಗಳೂ ಹೇಳಲಿಲ್ಲವೆಂದೂ, ಪ್ರಯೋಜನವಿಲ್ಲದ ಮಾತನ್ನು ಆಡಬಾರದು, ಎಂಬುದು ತಾತ್ಪರ್ಯ "ಅಸ್ಯೇಶಾನಾಜಗತಃ, ಈಶ್ವರೀಂ ಸರ್ವಭೂತಾನಾಂ" ಇತ್ಯಾದಿ ಶ್ರುತಿಗಳೂ "ನಿತ್ಯಂ ತದ್ಧರ್ಮಧರ್ಮಿಣೀ" ಇತ್ಯಾದಿ ಸ್ಮೃತಿಗಳೂ, ಲಕ್ಷ್ಮಿಗೆ ಈಶ್ವರತ್ವವನ್ನೂ ಸ್ಪಷ್ಟವಾಗಿ ಹೇಳಿವೆ. ಈಶಾನಾ, ಈಶ್ವರೀಂ ಎಂಬ ಪ್ರಯೋಗಗಳು ವ್ಯಾಕರಣವ್ಯುತ್ಪತ್ತಿಯಿಂದ ಸ್ವತಃ ಈಶ್ವರತ್ವವನ್ನು ಲಕ್ಷ್ಮಿಗೆ ಬೋಧಿಸುತ್ತವೆ ವಿಷ್ಣುವಿಗೆ ಪತ್ನಿ, ಎಂಬ ಆಕಾರದಿಂದಲ್ಲ ಇವರ ವಿಸ್ತಾರವನ್ನು ನಂಜೀಯರ್ ಶ್ರೀ ಸೂಕ್ತ ಭಾಷ್ಯದಲ್ಲಿ ತಿಳಿಯುವುದು.

---

1) ಯುವತ್ವಾದೌತುಲ್ಯೇಪ್ಯಪರವಶತಾ ಶತ್ರು ಶಮನಸ್ಥಿರತ್ವಾದೀನ್
ಕೃತ್ವಾಭಗವತಿಗುಣಾನ್ ಪುಂಸ್ತ್ವಸುಲಭಾನ್ ।
ತ್ವಯಿಸ್ತ್ರೀತ್ವೈಕಾಂತಾನ್ ಮೃದಿಮ ಪತಿಪಾರಾರ್ಥ್ಯಕರುಣಾ
ಕ್ಷಮಾದೀನ್ ವಾಭೋಕ್ತುಂ ಭವತಿ ಯುವಯೋರಾತ್ಮನಿಭಿದಾ ॥

(ಶ್ರೀ ಗುಣ ರತ್ನಕೋಶ-14)

ಎಲೈ ರಂಗನಾಯಕಿಯೇ ! ಯೌವನ, ಆದಿಶಬ್ದದಿಂದ–ಸೌಂದರ್ಯ, ಲಾವಣ್ಯ, ಜ್ಞಾನ ಶಕ್ತ್ಯಾದಿ ಗುಣಗಳು ನಿನಗೂ ರಂಗನಾಥನಿಗೂ ಸಮವಾಗಿದ್ದರೂ, ಪರವಶವಿಲ್ಲದಿರುವುದು, ಶತ್ರುನಿರಸನ, ಸ್ಥಿರತ್ವ-ದೃಢತ್ವ, ಆದಿಶಬ್ದದಿಂದ ದಂಡಧರತ್ವ (ತಪ್ಪು ಮಾಡುವವರನ್ನು ಶಿಕ್ಷಿಸುವುದು), ಇದೇ ಮೊದಲಾದ ಪುರುಷರಿಗೆ ಸುಲಭವಾದ ಗುಣಗಳನ್ನು ಭಗವಂತನಿಗೆ ವಿಭಾಗ ಮಾಡಿಕೊಟ್ಟು ನಿನ್ನಲ್ಲಿ ಸ್ತ್ರೀತ್ವಕ್ಕೇ ಏಕಾಂತವಾದ, ಮೃದು ಸ್ವಭಾವ, ಪತಿಗೆ ಅಧೀನವಾಗಿರುವುದು, ಕರುಣೆ, ಕ್ಷಮೆ, ಆದಿಶಬ್ದದಿಂದ ಪುರುಷಕಾರತ್ವ ಮೊದಲಾದವನ್ನು ವಿಭಾಗ ಮಾಡಿಟ್ಟುಕೊಂಡು, ನೀವುಗಳಿಬ್ಬರೂ ಲೀಲಾರಸ ಭೋಗವನ್ನು ಅನುಭವಿಸುತ್ತಿದ್ದೀರಿ

ಉಣರ್ನ್ದುಣರ್ನ್ದಿೞಿಂದಹನ್ರು ಉಯರ್ನ್ದುರುವಿಯನ್ದ ಇನ್ನಿಲೈಮೈ
ಉಣರ್ನ್ದುಣರ್ನ್ದುಣರಿಲುಂ ಇಱೈನಿಲೈಉಣರ್ವರಿದುಯಿರ್ಗಾಳ್ ।
ಉಣರ್ನ್ದುಣರ್ನ್ದುರೈತ್ತುರೈತ್ತು ಅರಿ, ಅಯನ್, ಅರನೆನ್ರುಮಿವರೈ,
ಉಣರ್ನ್ದುಣರ್ನ್ದುರೈತ್ತುರೈತ್ತು ಇಱೈಂಜುಮಿನ್ ಮನಪ್ಪಟ್ಟದೊನ್ರೇ ॥

(ತಿರುವಾಯ್ಮೊೞಿ 1-3-6)

1. ಸ್ವಾಮಿಯಾದ ಈಶ್ವರ ತತ್ವದ ಸ್ಥಿತಿಯು ಸುಲಭವಾಗಿ ತಿಳಿಯಲು ಶಕ್ಯವಿಲ್ಲ.

[1] "ಕೃಶಾನರ್ಥಾಂ ಸ್ತತಃ ಕೇಚಿದ ಕೃಶಾಂ ಸ್ತತ್ರ ಕುರ್ವತೇ" ಎನ್ಗಿರ ಪಡಿಯೇ, ತರ್ಕ ಪಾಣ್ಡಿತ್ಯತ್ತಾಲೇ ನಿನೈತ್ತದೆಲ್ಲಾವತ್ ಸಾಧಿಕ್ಕಲಾ ಯಿರುಕ್ಕ ಚ್ಚೆಯ್ದೇಯಿರೇ ನಾಮ್ ಪ್ರಮಾಣ ಶರಣರಾಯ್ ಪ್ಪೋರುಹಿರದು.

ಆಹೈಯಾಲಿವ್ವೀಶ್ವರ ತತ್ತ್ವತ್ತೈಯುಮ್, ಈಶಿತವ್ಯ ತತ್ತ್ವಙ್ಗಳೈಯುಮ್ ಯಥಾಪ್ರಮಾಣ ನ್ತೆಳಿಯಪ್ಪ್ರಾಪ್ತಂ. ಇವ್ವಿಡತ್ತಿಲ್ ಸರ್ವಜ್ಞನಾಹವುಮ್ ವೇಣ್ಡಾ. ಅತ್ಯನ್ತಾನುಪಯುಕ್ತಙ್ಗಳ್ಪೋಲೇ ಸ್ವಲ್ಪೋಪಯುಕ್ತಙ್ಗಳಾನವಱ್ಱಿಲಭಿಸನ್ಧಿ ಪಣ್ಣವುಮ್ ವೇಣ್ಡಾ. ಅಪರಿಚ್ಛೇದ್ಯಮಾನ ಕಡಲಿಲೇ ಪಡಹೋಡುವಾರ್ ವಱ್ಱು ಮುದಲಾಹ ವೇಣ್ಡುವನ ತೆಳಿಯುಮಾಪ್ಪೋಲೇ ಇವ್ವಳವು ವಿವೇಕಿಕ್ಕೈ ಅವಶ್ಯಾಪೇಕ್ಷಿತಮ್. ಇದು ಪ್ರತಿಷ್ಠಿತಮಾಹೈಕ್ಕಾಕ ಇವಱ್ಱಿನ್ ವಿರಿವುಹಳ್ ಎಣ್ಣುಹಿರದು.

ಪ್ರಮಾಣಾಧೀನತ್ವ

ಹೀಗೆ ಪ್ರಮಾಣಗಳಿದ್ದರೂ ಯುಕ್ತಿಗೆ ವಿರೋಧವಾದರೆ, ಅದನ್ನು ತರ್ಕಪಾಂಡಿತ್ಯದಿಂದ ಅನ್ಯಪರವಾಗಿ ಹೇಳಲಿಕ್ಕಿಲ್ಲವೇ, ಎಂದರೆ [1] **'ಕೃಶಾನರ್ಥಾನ್'** ಇತ್ಯಾದಿ ಅನುಗ್ರಹಿಸುತ್ತಾರೆ ಧರ್ಮರಾಜನ ರಾಜಸೂಯ ಯಾಗದಲ್ಲಿ ಕೆಲವರು ಚಿಕ್ಕ ವಿಷಯವನ್ನು ದೊಡ್ಡದನ್ನಾಗಿಯೂ, ದೊಡ್ಡ ವಿಷಯವನ್ನು ಚಿಕ್ಕದನ್ನಾಗಿಯೂ ಜಲ್ಪ ವಿತಂಡಾವಾದಗಳನ್ನವಲಂಬಿಸಿ ಮಾಡುತ್ತಿದ್ದರು, ಎಂದು ಹೇಳುವ ಪ್ರಕರಣ ತರ್ಕ ಪಾಂಡಿತ್ಯದಿಂದ ಮನಸ್ಸಿಗೆ ತೋರಿದ ವಿಷಯವನ್ನೆಲ್ಲಾ ಸಾಧಿಸಲು **ಸಾಮರ್ಥ್ಯವಿದ್ದರೂ ಅಂದರೆ** ಇರುವುದನ್ನು ಇಲ್ಲವೆಂದೂ, ಇಲ್ಲದುದನ್ನೂ ಇದೆಯೆಂದೂ, **ಈಶ್ವರನು** ಮಾತ್ರ ಉಂಟು **ಈಶಿತವ್ಯಗಳು** ಇಲ್ಲವೆಂದೂ, **ಈಶಿತವ್ಯಗಳು** ಮಾತ್ರ ಉಂಟು ಈಶ್ವರನಿಲ್ಲವೆಂದೂ, ತರ್ಕ ಜ್ಞಾನದಿಂದ ಯುಕ್ತಿಗಳನ್ನು ಹೇಳಿ ಸಾಧಿಸಲು ಶಕ್ಯವಾದರೂ ಎಂದರ್ಥ. ನಾಥಮುನಿಗಳು, ಆಳವಂದಾರ್, ಭಗವದ್ರಾಮಾನುಜ ಮುನಿಗಳ ಜ್ಞಾನ ಪರಂಪರೆಯಲ್ಲಿ ಬಂದ ನಾವುಗಳು ಪ್ರಮಾಣಕ್ಕೆ ಕಟ್ಟುಬಿದ್ದು ಅದಕ್ಕೆ ಅಧೀನರಾಗಿ ಅರ್ಥಮಾಡುತ್ತೇವೆ ಆದ್ದರಿಂದ ಈಶ್ವರ ತತ್ತ್ವವನ್ನೂ ಈಶಿತವ್ಯ (ಅವನಿಂದ ನಿಯಮಿಸಿ ರಕ್ಷಿಸಲ್ಪಡುವ) ತತ್ತ್ವವನ್ನೂ ಯಥಾಪ್ರಮಾಣ ತಿಳಿಯಲು ಶಕ್ಯ. **ಪ್ರಮಾಣಶರಣರಾಯ್**– ಅರ್ಥಸಾಧನದಲ್ಲಿ ಪ್ರಮಾಣವನ್ನೇ ಉಪಾಯವಾಗಿ ಅವಲಂಬಿಸುತ್ತೇವೆ ನಮ್ಮ ಪ್ರಾಚೀನರಾದ ನಾಥಮುನಿಗಳು ಆಳವಂದಾರ್, ಭಗವದ್ರಾಮಾನುಜರು ಮತ್ತು ನಾವೂ ಸಹ, ತರ್ಕ ಪಾಂಡಿತ್ಯವಿಲ್ಲದೆ ಇರುವುದರಿಂದ ಪ್ರಮಾಣವನ್ನು ಅವಲಂಬಿಸಿದ್ದೇವೆಯೆಂದಲ್ಲ. ತರ್ಕ ಪಾಂಡಿತ್ಯವನ್ನು ವಿರುದ್ಧಾರ್ಥ ಸಾಧನಕ್ಕೆ ಉಪಯೋಗಿಸದೆ, ಈಶ್ವರ ತತ್ತ್ವವನ್ನು **ಈಶಿತವ್ಯಗಳಾದ** ಚಿತ್, ಅಚಿತ್ತತ್ತ್ವಗಳನ್ನೂ ಯಥಾಪ್ರಮಾಣ ಅಂಗೀಕರಿಸಿರುವಂತೆ, ಮಹಾಲಕ್ಷ್ಮಿಯನ್ನೂ ಪ್ರಮಾಣಗಳು ತಿಳಿಸುವ ರೀತಿಯಲ್ಲಿ ಈಶ್ವರಕೋಟಿಯಲ್ಲಿ ಸೇರಿಸಿ ಲಕ್ಷ್ಮೀವಿಶಿಷ್ಟ ನಾರಾಯಣನು **ಈಶ್ವರನೆಂದು** ಅಂಗೀಕರಿಸಿದ್ದೇವೆಯೇ ಹೊರತು, ಕೇವಲ ನಾರಾಯಣನನ್ನಲ್ಲ-ಇತರರು ಹೇಳುವ ಯುಕ್ತಿವಾದಗಳನ್ನು ತಿಳಿಯದೆ ಅಲ್ಲ, ಎಂದರ್ಥ. **ಆಹೈಯಾಲ್ ಈಶ್ವರ ತತ್ತ್ವತ್ತೈಯುಮ್,** ಇತ್ಯಾದಿ. ಆದ್ದರಿಂದ ಈಶ್ವರ ತತ್ತ್ವವನ್ನೂ ಈಶಿತವ್ಯ ತತ್ತ್ವಗಳನ್ನೂ **ಯಥಾಪ್ರಮಾಣಂ**–ಪ್ರಮಾಣವನ್ನು ಅನುಸರಿಸಿ, **ತೆಳಿಯ**– ಅಸಂಕೀರ್ಣವಾಗಿ ತಿಳುವಾಗಿ-ಅರಿತುಕೊಳ್ಳ ಬೇಕಾದದು ಪ್ರಾಪ್ತವು.

---

1) ಕೃಶಾನರ್ಥಾನ್ ತತಃಕೇಚಿತ್ ಅಕೃಶಾಂಸ್ತತ್ರಕುರ್ವತೇ |
ಅಕೃಶಾಂಶ್ಚ ಕೃಶಾಂಶ್ಚಕ್ರುಃ ಹೇತುಭಿಃ ಶಾಸ್ತ್ರ ನಿಶ್ಚಯೈಃ ||

ಯುಧಿಷ್ಠಿರನ ರಾಜಸೂಯ ಯಾಗದ, ಸಭೆಯಲ್ಲಿ, ಕೆಲವರು ಜಲ್ಪ ವಿತಂಡಾವಾದಗಳಿಂದ, ಚಿಕ್ಕ ವಿಷಯಗಳನ್ನು ದೊಡ್ಡದಾಗಿಯೂ, ದೊಡ್ಡ ವಿಷಯವನ್ನು ಚಿಕ್ಕದಾಗಿಯೂ, ತರ್ಕಶಾಸ್ತ್ರದ ಹೇತುಗಳನ್ನೂ ಆಧಾರವಾಗಿಟ್ಟುಕೊಂಡು ಮಾಡಿದರು. ಜಲ್ಪ-ಪ್ರತಿಪಕ್ಷವನ್ನು ಸೋಲಿಸಬೇಕೆಂದು ತನ್ನ ಪಕ್ಷದಲ್ಲಿ ಸಾಧನಗಳನ್ನೂ ಪ್ರತಿಪಕ್ಷದಲ್ಲಿ ದೋಷಗಳನ್ನೂ ಎತ್ತಿ ಹೇಳುವುದು. ವಿತಂಡಾವಾದ–ತನ್ನ ಪಕ್ಷವನ್ನು ಸ್ಥಾಪಿಸದೆ ಎದುರು ಪಕ್ಷವನ್ನು ಖಂಡನೆ ಮಾಡುವುದು ವಿತಂಡಾವಾದ.

ತತ್ತ್ವವಿಭಾಗ ಸಂಖ್ಯಾಭೇದಾಃ

ಇಪ್ಪಡಿ ಮೂನ್ರು ತತ್ತ್ವಙ್ಗಳಾಕ ವಹುತ್ತು ಚಿನ್ತಿತ್ತಾರ್ ಪೋಲೇ ಸರ್ವವಿಶಿಷ್ಟ ನೇಷತ್ತಾಲೇ ಈಶ್ವರ ನೇಕತತ್ತ್ವಮಾಹ ವನುಸನ್ಧಿಪ್ಪಾರ್ಕಳುಮ್, ಈಶೇಶಿತವ್ಯಙ್ಗಳ್, ಆತ್ಮಾನಾತ್ಮಾಕ್ಕಳ್, ಉಪಾಯೋಪೇಯಙ್ಗಳ್, ಎನ್ರಾರ್ ಪೋಲೇ ಇರಣ್ಡರ್ಥಮ್ ಜ್ಞಾತವ್ಯಮಾಹ ವಹುಪ್ಪಾರ್ಕ್ಕುಮ್, ರಕ್ಷ್ಯಂ ರಕ್ಷಕಂ, ಹೇಯ ಮುಪಾದೇಯ ಮೆನ್ರಿಪ್ಪಡೈಹಳಿಲೇ ಅರ್ಥಚತುಷ್ಟಯಮ್ ಜ್ಞಾತವ್ಯಮಾಹ ಸಂಗ್ರಹಿಪ್ಪಾರ್ಕ್ಕುಮ್, ಮುನ್ಬುಶೊನ್ನ ಪಡಿಯೇ ಅರ್ಥಪಞ್ಚಕಮ್ ಷಡರ್ಥಙ್ಗಳೆನ್ರು ವಿವೇಕಿಪ್ಪಾರ್ಕ್ಕುಮ್, ರಹಸ್ಯ ಶಾಸ್ತ್ರಙ್ಗಳಿಲ್ ಪಡಿಯೇ ಸಪ್ತಪದಾರ್ಥಚಿನ್ತಾದಿಹಳ್ ಪಣ್ಣುವಾರ್ಕ್ಕುಮ್, ಅವ್ವೋ ಜ್ಞಾನಾನುಷ್ಠಾನ ಪ್ರತಿಷ್ಠಾರೂಪಙ್ಗಳಾನ ಪ್ರಯೋಜನ ವಿಶೇಷಙ್ಗಳ್ ಕಣ್ಡುಕೊಳ್ವದು.

ಹಾಗಾದರೆ ಈಶೇಶಿತವ್ಯ ತತ್ತ್ವಗಳನ್ನು ಸರಿಯಾಗಿ ತಿಳಿಯಬೇಕಾದರೆ ಸರ್ವಜ್ಞನಾಗಿರಬೇಕಲ್ಲವೇ, ಎಂದರೆ ಅದಕ್ಕೆ **ಇವ್ವಿಡತ್ತಿಲ್ ಸರ್ವಜ್ಞನಾಹವುಂ ವೇಂಡಾ** ಎಂದಾರಂಭಿಸಿ ಅಧಿಕಾರದ ಶೇಷ ಭಾಗವನ್ನು ಅನುಗ್ರಹಿಸುತ್ತಾರೆ. ಅದಾಗಿ ಈ ಈಶೇಶಿತವ್ಯ ತತ್ತ್ವಗಳನ್ನು ತಿಳಿಯಲು ಸರ್ವಜ್ಞನಾಗಿರಬೇಕಿಲ್ಲ ಸರ್ವ ಪದಾರ್ಥ ಜ್ಞಾನವುಳ್ಳವನಾಗಿರಬೇಕಿಲ್ಲ ಅಜಡವಾದ ಆತ್ಮತತ್ತ್ವವು ಬೇರೆ, ಜಡವಾದ ಪ್ರಕೃತಿಯು ಬೇರೆ, ಎಂದು ತಿಳಿಯುವುದು ಮುಖ್ಯ. ಪ್ರಕೃತಿಗೆ ಸಾವಯವತ್ವ ನಿರವಯವತ್ವ ಜ್ಞಾನವು ಅತ್ಯಂತ ಉಪಯುಕ್ತವಲ್ಲ. ಹೀಗೆ ಅತ್ಯಂತ ಅನುಪಯುಕ್ತಗಳ ಹಾಗೆ, ಭುವನಕೋಶಾದಿ ಜ್ಞಾನವು ಅರ್ಚಿರಾದ ಮಾರ್ಗ ಚಿಂತನಕ್ಕೆ ಸ್ವಲ್ಪೋಪಯುಕ್ತವು–ಕಿಂಚಿದುಪಕಾರಕವು ಇತರ ವಿಷಯದಲ್ಲಿ ಹೆಚ್ಚು ಪರಿಶ್ರಮ ಪಡಬೇಕಿಲ್ಲ ಸಮುದ್ರದಲ್ಲಿ ಹಡಗನ್ನು ಸಂಚಾರ ಮಾಡಿಸುವ ನಾವಿಕನು, ಹೇಗೆ ಸಮುದ್ರದ ಯಾವ ಯಾವ ಭಾಗದಲ್ಲಿ ಆಳವಿದೆ, ಎಲ್ಲಿ ಆಳವಿಲ್ಲದೆ ಕಲ್ಲು ಬಂಡೆಗಳಿವೆ, ಆ ಕಲ್ಲು ಬಂಡೆಗಳು ತನ್ನ ಹಡಗಿಗೆ ತಗುಲದೆ ಯಾವ ದಾರಿಯಲ್ಲಿ ಪ್ರಯಾಣ ಮಾಡಬೇಕೆಂಬುದನ್ನು ತಿಳಿದು ಕೊಂಡು, ಸಮುದ್ರ ಪ್ರಯಾಣ ಮಾಡಿ ಕಾರ್ಯಸಿದ್ಧಿಯನ್ನು ಪಡೆಯುವಂತೆ, **ಇವ್ವಳವುವಿವೇಕಿಕ್ಕೈ**–ಈ ಅಧಿಕಾರದಲ್ಲಿ ಹೇಳಿರುವ ಪ್ರಕಾರ ಅವಶ್ಯಾಪೇಕ್ಷಿತವಾದ ತತ್ತ್ವ ಚಿಂತನವೇ ಸಾಕು. ಕಾರ್ಯಸಿದ್ಧಿಗೆ ಪರ್ಯಾಪ್ತವು ಎಂದರ್ಥ

ಶಾಸ್ತ್ರ ಪರಿಚಯದ ಆವಶ್ಯಕತೆ

ಹಾಗಾದರೆ, ನಾಥಮುನಿಪ್ರಭೃತಿಗಳು ನ್ಯಾಯತತ್ತ್ವ, ಸಿದ್ಧಿತ್ರಯ, ತತ್ತ್ವರತ್ನಾಕರ ಮೊದಲಾದ ಗ್ರಂಥಗಳನ್ನು ರಚಿಸಿದುದೇಕೆ. ಅದರಲ್ಲಿ ಪರಿಶ್ರಮಬೇಕಲ್ಲವೇ ಎಂದರೆ **“ಇದು ಪ್ರತಿಷ್ಠಿತ ಮಾಹೈಕ್ಕಾಹ”** ಎಂದಾರಂಭಿಸಿ ಆಚಾರ್ಯರು ಸಮಾಧಾನವನ್ನು ಹೇಳುತ್ತಾರೆ ಅಂದರೆ, ಪ್ರಬಲರಾದ ವಾದಿಗಳ ಕುಯುಕ್ತಿಗಳಿಂದ ಈ ತತ್ತ್ವ ಚಿಂತನಗಳಲ್ಲಿ ಸಂಶಯ, ವಿಪರ್ಯಯ – ವ್ಯತ್ಯಾಸಾದಿಗಳು ಉಂಟಾಗದಂತೆ, ದೃಢವಾದ ನಿಶ್ಚಯ ಜ್ಞಾನವುಂಟಾಗಿ, ಮೋಕ್ಷೋಪಾಯವನ್ನನುಷ್ಠಿಸಿ ಕಾರ್ಯಸಿದ್ಧಿಯನ್ನು ಹೊಂದಲು, ಬುದ್ಧಿವಂತರಿಗೆ ಈ ತತ್ತ್ವಗಳ ವಿಸ್ತಾರಬೋಧಕವಾದ ಆ ಗ್ರಂಥಗಳ ಪರಿಚಯವು ಅವಶ್ಯಕ

ತತ್ತ್ವಗಳನ್ನು ಬೇರೆ ಬೇರೆ ವಿಂಗಡಿಸಿರುವುದರ ಅಭಿಪ್ರಾಯ

ಹಾಗಾದರೂ ತತ್ತ್ವರತ್ನಾಕರಾದಿ ಗ್ರಂಥಗಳಲ್ಲಿ ತತ್ತ್ವಗಳನ್ನು ಒಂದಾಗಿಯೂ, ಎರಡು ಮೂರು ಇತ್ಯಾದಿಯಾಗಿಯೂ ವಿಂಗಡಿಸಿರುವುದರ ಅಭಿಪ್ರಾಯವೇನೆಂದರೆ, **ಇಪ್ಪಡಿಮೂನ್ರು ತತ್ತ್ವಂಗಳಾಹ** ಎಂದಾರಂಭಿಸಿ ಸಮಾಧಾನವನ್ನು ಹೇಳುತ್ತಾರೆ. ಹೀಗೆ ಮೂರು ತತ್ತ್ವಗಳೆಂದು ವಿಂಗಡಿಸಿ ಅನುಸಂಧಾನಮಾಡಿರುವಂತೆ, **ಸರ್ವವಿಶಿಷ್ಟನೇಷತ್ತಾಲೇ**–ಚೇತನಾಚೇತನ ವಿಶಿಷ್ಟರೂಪದಿಂದ ಈಶ್ವರನು ಒಂದೇ ತತ್ತ್ವವೆಂದು ಕೆಲವರು ಅನುಸಂಧಾನ ಮಾಡುತ್ತಾರೆ. ಕೆಲವರು **ಈಶೇಶಿತವ್ಯಂಗಳ್ – ಈಶ್ವರನು** ಒಂದು ಪಂಗಡ – **ಈಶಿತವ್ಯ**ಗಳು – ಚೇತನಾ ಚೇತನದ್ವಯಗಳು, ಒಂದು

ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇ ಶ್ಚಲನ ಕಾರಣಮ್ ।

ಉಪದೇಶಾ ದ್ಧರಿಂ ಬುದ್ಧ್ವಾ ವಿರಮೇ ತ್ಸರ್ವ ಕರ್ಮಸು ॥

ಎನ್ಗಿರದು ಉಪಯುಕ್ತ ತಮಮಾನ ಸಾರಾಂಶತ್ತೈ ಕ್ಕಡುಹಶ್ರವಣಮ್ ಪಣ್ಣಿ ಕೃಷಿಪಣ್ಣಾದೇ ಉಣ್ಣ ವಿರಹುಡೈಯವನ್ ಕೃಷಿಚಿನ್ತೈಯೈ ವಿಡುಮಾಪ್ಪೋಲೇ ವಿರಿವು ಕರ್ಕೈಕ್ಕೀಡಾನ ಶಾಸ್ತ್ರಾಭ್ಯಾಸಾದಿ ಕರ್ಮಙ್ಗಳಿಲ್ ಉಪರತನಾಯ್ಕ್ಕಡುಹ ಮೋಕ್ಷೋಪಾಯತ್ತಿಲೇ ಮೂಳ ಪ್ರಾಪ್ತಮೆನ್ರಪಡಿ.

ಉಪಯುಕ್ತೇಷು ವೈಶದ್ಯಂ ತ್ರಿವರ್ಗ ನಿರಪೇಕ್ಷತಾಮ್ ।

ಕರಣ ತ್ರಯ ಸಾರೂಪ್ಯ ಮಿತಿ ಸೌಖ್ಯ ರಸಾಯನಮ್ ॥ ೨ ॥

ಪಂಗಡ – ಹಾಗೆ ಎರಡು ಪಂಗಡಗಳು **ಆತ್ಮ** - ಜೀವೇಶ್ವರರಾದ ಇಬ್ಬರು ಒಂದು ಪಂಗಡ - **ಅನಾತ್ಮರು**ಗಳು, **ಅಚೇತನ** ಪ್ರಕೃತಿ ಅದರ ಪರಿಣಾಮಗಳು ಒಂದು ಪಂಗಡ, ಎಂದು ಎರಡು ಪಂಗಡಗಳು, **ಉಪಾಯ**– ಭಕ್ತಿ ಪ್ರಪತ್ತಿಗಳು ಒಂದು. **ಉಪೇಯ**–ಪ್ರಾಪ್ಯವಾದ ಈಶ್ವರನು ಒಬ್ಬ, ಹೀಗೆ ಎರಡು ಪಂಗಡಗಳಾಗಿ ವಿಭಾಗಿಸಿ, ಎರಡು ಅರ್ಥಗಳು ತಿಳಿಯಲ್ಪಡಬೇಕೆಂದು ವಿಂಗಡಿಸಿ ಹೇಳುವವರಿಗೂ **ರಕ್ಷ್ಯನ್**– ಜೀವ, **ರಕ್ಷಕನ್**– ಈಶ್ವರ, **ಹೇಯ**– ಹೇಯವಾದ ಪ್ರಕೃತಿ ಸಂಬಂಧ, **ಉಪಾದೇಯ**– ಪ್ರಾಪ್ತ್ಯರ್ಹವಾದ ಮೋಕ್ಷಸಾಮ್ರಾಜ್ಯ, ಇತ್ಯಾದಿಯಾಗಿ ನಾಲ್ಕು ಅರ್ಥಗಳು ತಿಳಿಯಲ್ಪಡತಕ್ಕವು ಎಂದು ಕೆಲವರು ಸಂಗ್ರಹಿಸುತ್ತಾರೆ ಹಿಂದೆ ಹೇಳಿದಂತೆ, ಅರ್ಥಪಂಚಕ, ಷಡರ್ಥಗಳು ಎಂದು ಕೆಲವರು ವಿಭಜಿಸಿದ್ದಾರೆ ರಹಸ್ಯ ಶಾಸ್ತ್ರಗಳಲ್ಲಿ, ಸಪ್ತ ಪದಾರ್ಥ ಚಿಂತನವನ್ನು ಮಾಡಿರುತ್ತಾರೆ. ಅದಾಗಿ, ಭಗವಂತ, ಅವಿದ್ಯೆ, ಕರ್ಮ, ಕಾಲ, ಕರ್ತವ್ಯತಾ, ಸಂಯಮ ಎಂಬುದಾಗಿ ಏಳು ಪದಾರ್ಥಗಳು **ಆದಿ** ಶಬ್ದದಿಂದ, ತತ್ವಗಳು, ಇಪ್ಪತ್ತಾರು, ಇಪ್ಪತ್ತೇಳು ಎಂದು ವಿಂಗಡಿಸಿರುತ್ತಾರೆ ಈ ವಿಭಾಗಗಳೆಲ್ಲಾ, ತತ್ವತ್ರಯಗಳನ್ನೇ ಮುಖಭೇದೇನ ಬೇರೆಬೇರೆಯಾಗಿ ವಿಂಗಡಿಸಿರುವುದೇ ವಿನಹ ಬೇರೆಯಲ್ಲ. ಈ ವಿಭಾಗಗಳಿಗೆ ಜ್ಞಾನಾನುಷ್ಠಾನಗಳು ಪ್ರತಿಷ್ಠಿತವಾಗಬೇಕೆಂಬುದು ತಿಳಿಯತಕ್ಕದ್ದು ಹೇಗೆಂದರೆ, ಚೇತನಾ ಚೇತನ ವಿಶಿಷ್ಟನಾದ ಈಶ್ವರನು ಒಬ್ಬನೆಂಬ ಉದ್ದೇಶ್ಯವೆಂದು ತತ್ವಚಿಂತನೆಯಿಂದ ಚೇತನಾಚೇತನಗಳಿಗೆ ಈಶ್ವರನೊಡನೆ ಅಪೃಥಕ್‌ಸಿದ್ಧ ವಿಶೇಷಣತ್ವವೂ, ಪ್ರತ್ಯೇಕವಾಗಿರಲು ಅನರ್ಹಗಳು ಎಂಬ ಜ್ಞಾನವೂ ನಿಶ್ಚಯಿಸಲ್ಪಡುತ್ತವೆ ಈಶೇಶಿತವ್ಯ ತತ್ವಗಳು - (ಜೀವನೂ, ಅಚೇತನವೂ) ಸ್ವಾತಂತ್ರ್ಯವಿಲ್ಲದಿರುವುದೆಂಬ ಜ್ಞಾನಕ್ಕೆ ಪ್ರತಿಷ್ಠಾಪಕಗಳು. ಹೀಗೆಯೇ ಬೇರೆಬೇರೆ ವಿಭಾಗಗಳಿಗೆ ಪ್ರಯೋಜನವನ್ನು ತಿಳಿಯತಕ್ಕದ್ದು

ಶಾಸ್ತ್ರಜ್ಞಾನವು ಕ್ಲೇಶಕರ

ಹೀಗೆ ಬುದ್ಧಿವಂತರ, ಶಾಸ್ತ್ರಜ್ಞಾನವನ್ನು ಸಂಪಾದಿಸಬೇಕೆಂಬ ನಿರ್ಬಂಧವುಂಟೇ ಶಾಸ್ತ್ರಜ್ಞಾನವು ಕ್ಲೇಶಕರ ಆದ್ದರಿಂದ ಕೇವಲ ಉಪದೇಶವೇ ಸಾಕೆಂಬ ವಚನ ತಾತ್ಪರ್ಯವೇನೆಂದರೆ **'ಶಾಸ್ತ್ರ ಜ್ಞಾನಂ'** ಎಂದಾರಂಭಿಸಿ ತಿಳಿಸುತ್ತಾರೆ. **ಅದಾಗಿ** ಶಾಸ್ತ್ರಜ್ಞಾನವು ಬಹುಕ್ಲೇಶಸಾಧ್ಯ ಗಹನವಾದ ಅನೇಕ ಯುಕ್ತಿಗಳೂ, ಅನುಮಾನಾದಿಗಳೂ, ತಿಳಿಯಬೇಕಾದವಾಗಿ, ಬುದ್ಧಿಯನ್ನು ಚಲಿಸುತ್ತದೆ ಆದ್ದರಿಂದ ಸುಲಭವಾದ ಆಚಾರ್ಯೋಪದೇಶದಿಂದ ಹರಿಯನ್ನು ತಿಳಿದುಕೊಂಡು, ವಿಸ್ತಾರವಾದ ಶಾಸ್ತ್ರಾಭ್ಯಾಸ ಕಾರ್ಯದಿಂದ ವಿರಾಮವನ್ನು ಹೊಂದುವುದೇ ಮೇಲು, ಎಂದು ಹೇಳುವುದರ ತಾತ್ಪರ್ಯವೇನೆಂದರೆ, ಉಪಯುಕ್ತವಾದ ಸಾರಾಂಶವನ್ನು, **ಕಡುಹ** – ಸ್ವಲ್ಪಕಾಲದಲ್ಲಿಯೇ, ಆಚಾರ್ಯರಿಂದ ಉಪದೇಶ ಮೂಲಕ ತಿಳಿದು ಕೊಳ್ಳಬೇಕೆಂಬುದು. ಶ್ರಮಸಾಧ್ಯವಾದ ಕೃಷಿ ವ್ಯಾಪಾರವನ್ನು ಮಾಡದೇನೆ ಊಟಮಾಡಲು ಉಪಾಯವನ್ನು ತಿಳಿದವನು, ಕೃಷಿ ವ್ಯಾಪಾರ ಚಿಂತೆಯನ್ನು ಬಿಡುವಂತೆ, ವಿಸ್ತಾರವಾಗಿ ತಿಳಿಯಲು ಅಪೇಕ್ಷಿತವಾದ ಶಾಸ್ತ್ರ ಚಿಂತನೆಯನ್ನು ಬಿಟ್ಟು, ಶೀಘ್ರವಾಗಿಯೇ ಮೋಕ್ಷೋಪಾಯದಲ್ಲಿ ಪ್ರವರ್ತಿಸುವುದು ಯುಕ್ತ, ಎಂಬದು ತಾತ್ಪರ್ಯ

ತೇರ ವಿಯಮ್ಬಿನರ್ ಶಿತ್ತು ಮಶಿತ್ತು ವಿರೈಯುಂ ವೆನ
ವೇರು ಪಡುಮ್ ವಿಯನ್ತತ್ತುವ ಮೂನ್ರುಮ್ ವಿನೈಯುಡಮ್ಬಿಲ್ ।
ಕೂರುಪಡುಙ್ಕೊಡು ಮೋಹಮುಮ್ ತಾನಿರೈಯಾಙ್ಕುರಿಪ್ಪುಮ್
ಮಾರ ನಿನೈನ್ದರುಳಾಲ್ ಮರೈನೂಲ್ ತನ್ದವಾದಿಯರೇ ॥೧೨॥
ಅವಾಪ್ತೋ ದ್ವಾಪತಸ್ಸ್ಯಾಃ ಕತಿಕತಿ ಕವಿಧೀ ಚಿತ್ರವತ್ತತ್ತದರ್ಥೇಷು,
ಅನನ್ತ್ಯಾದಸ್ತಿನಾಸ್ತ್ಯೋಃ ರನವಧಿ ಕುಹನಾಯುಕ್ತಿ ಕಾನ್ತಾಃ ಕೃತಾನ್ತಾಃ ।
ತತ್ವಾ ಲೋಕಸ್ತು ಲೋಪ್ತುಂ ಪ್ರಭವತಿ ಸಹಸಾ ನಿಸ್ಸಮುಸ್ತಾನ್ ಸಮುಸ್ತಾನ್
ಪುಂಸ್ತ್ವೇ ತತ್ವೇನ ದೃಷ್ಟೇ ಪುನರಪಿ ನಖಲು ಪ್ರಾಣಿತಾಸ್ಥಾಣುತಾದಿಃ (ಧೀಃ) ॥ ೧೩ ॥

ಇತಿ ಕವಿತಾರ್ಕಿಕ ಸಿಂಹಸ್ಯ, ಸರ್ವತಂತ್ರ ಸ್ವತಂತ್ರಸ್ಯ, ಶ್ರೀಮದ್ವೇಂಕಟನಾಥಸ್ಯ ವೇದಾಂತಾ ಚಾರಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ತತ್ವತ್ರಯಾಧಿಕಾರಃಪಂಚಮಃ.

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯನಮಃ

ಹೀಗೆ ಉಪದೇಶದ ಮೂಲಕ ಭಗವಂತನ ಸ್ವರೂಪ ಸ್ವಭಾವಗಳನ್ನು ತಿಳಿದುಕೊಂಡರೂ, ಶಾಸ್ತ್ರಜನ್ಯಜ್ಞಾನದ ಹಾಗೆ ಸ್ಥಿರ ಪ್ರತಿಷ್ಠಿತವಾಗಿರುವುದೇ, ಎಂದರೆ, **ಉಪಯುಕ್ತೇಷು** ಎಂಬ ಕಾರಿಕೆಯಿಂದ ವಿವರಿಸುತ್ತಾರೆ. ಅದಾಗಿ ಉಪಯುಕ್ತವಾದ ಭಾಗಗಳಲ್ಲಿ - ಅಂದರೆ ಉಪದೇಶದಿಂದ ಪಡೆದ ಅರ್ಥಗಳಲ್ಲಿಯೂ ಸಂಶಯ ವಿಪರ್ಯಯಾದಿಗಳು ಬಾರದಂತೆ ಶಾಸ್ತ್ರೋಪದೇಶದಿಂದ ವಿಸ್ತಾರವಾಗಿ ತಿಳಿಯುವುದು. **ತ್ರಿವರ್ಗನಿರಪೇಕ್ಷತಾ** — ಧರ್ಮಾರ್ಥಕಾಮಗಳಲ್ಲಿ ಸ್ಪೃಹೆಯಿಲ್ಲದಿರುವುದು, **ಕರಣತ್ರಯ ಸಾರೂಪ್ಯಂ**— ಮನಸ್ಸು, ವಾಕ್ಕು, ಶರೀರವೆಂಬ ಮೂರು ಕರಣಗಳೂ ಏಕ ರೂಪವಾಗಿ ನಿವೃತ್ತಿ ಧರ್ಮಗಳಲ್ಲಿ ಪ್ರವರ್ತಿಸುವುದು, **ಇತಿ ಸೌಖ್ಯ ರಸಾಯನವತ್**— ಹೀಗೆ ಇರುವುದು ಸುಖವಾಗಿರಲು, ರಸಾಯನ ಪಾನಮಾಡುವಂತೆ ಸಾಧಕಗಳು

ದೇಶಕಾಲಗಳು ಅನಂತವಾಗಿರುವುದರಿಂದಲೂ ಅವರವರ ಕರ್ಮಫಲವಾಗಿ ಬುದ್ಧಿಯು ವಿಚಿತ್ರವಾಗಿರುವುದರಿಂದಲೂ, ಪೂರ್ವಪಕ್ಷಗಳು ಅನಂತವಾಗಿರುವುದರಿಂದಲೂ, ಇವುಗಳನ್ನು ಪರಿಹರಿಸುವುದು ಹೇಗೆ ಎಂದು ಕಷ್ಟಪಡುವ **ಸಾತ್ವಿಕರಿಗೆ** ಪ್ರಯೋಜನವಾಗುವಂತೆ, ಅಧಿಕಾರದ ಅರ್ಥವನ್ನು ತಮಿಳು, ಸಂಸ್ಕೃತ ಶ್ಲೋಕಗಳಿಂದ, **ತೇರವಿಯಂಬಿನರ್**, **ಅವಾಪ್ತೋದ್ವಾಪತಃ**, ಎಂದಾರಂಭಿಸಿ ಸಂಗ್ರಹಿಸುತ್ತಾರೆ

ಮರೈನೂಲ್ ತನ್ದವಾದಿಯರೇ — ವೇದವೆಂಬ ಶಾಸ್ತ್ರವನ್ನು **ಉಪದೇಶಿಸಿದ** ನಮ್ಮ ಪೂರ್ವಾಚಾರ್ಯರುಗಳು **(ಆದಿಯರ್)**, **ಅರುಳಾಲ್**— ಕೃಪೆಯಿಂದ, (ಖ್ಯಾತಿಲಾಭ ಪೂಜಾ ನಿರಪೇಕ್ಷವಾಗಿ) **ವಿನೈಯುಡಂಬಿಲ್** — ಕರ್ಮದಿಂದ ಕೂಡಿದ ಈ ಶರೀರದಲ್ಲಿ, **ಕೂರುಪಡುಮ್** — ಸೇರಿಬರುವ, **ಕೊಡುಮೋಹಮುಮ್** — ನರಕಾವಹವಾದ ಅಜ್ಞಾನವೂ, **ತಾನಿರೈಯಾಮ್** - ತಾನೇ ಸ್ವಾಮಿಯೆಂಬ **ಕುರಿಪ್ಪುಮ್** — ಭಾವನೆಯೂ, ದೇಹಾತ್ಮ ಸ್ವತಂತ್ರಾತ್ಮಭ್ರಮಗಳು, ಎಂದರ್ಥ **ಮಾರನಿನೈಂದು** — ಇವುಗಳು ನಮಗೆ ತೊಲಗುವಂತೆ, ನೆನೆಸಿಕೊಂಡು **ಚಿತ್ತುಂ**— ಚೇತನ ತತ್ವವನ್ನೂ, **ಅಚಿತ್ತುಂ** ಅಚೇತನ ತತ್ವವನ್ನೂ, **ಇರೈಯುಂ**-ಈಶ್ವರ ತತ್ವವನ್ನೂ, **ಎನ**— ಎಂದು, **ವೇರುಪಡುಂ**—ಬೇರೆಬೇರೆಯಾದ, **ವಿಯನ್ತತ್ತುವ ಮೂನ್ರುಂ**—ವಿಸ್ಮಯನೀಯವಾದ ಮೂರು ತತ್ವಗಳನ್ನು, **ತೇರ** — ಮಂದಮತಿಗಳಾದ ನಾವು ಸಂಶಯ ವಿಪರ್ಯಯಗಳಿಲ್ಲದೆ ತಿಳಿದುಕೊಳ್ಳುವಂತೆ, **ಇಯಂಬಿನರ್** — ಉಪದೇಶಿಸಿದರು.

ವ ಹಾರ್ಜ್ಞಾನಿಗಳಾದ ನಮ್ಮ ಪೂರ್ವಾಚಾರ್ಯರುಗಳು, ನಮ್ಮ ದೇಹವೇ ಆತ್ಮಾ, ಆತ್ಮಾ ಸ್ವತಂತ್ರನು ಎಂಬ **ಅಹಂಕಾರ** ಮಮಕಾರಗಳು ತೊಲಗ ವಂತೆ, ದೇಹವು ಅಚೇತನ, ಆತ್ಮಾ ಚೇತನ ಭಗವದಧೀನನು, ಈಶ್ವರನು - ಸರ್ವ ನಿಯಂತಾ, ಎಂದು ಅವ್ರಗಳು ಲಕ್ಷಣ ಜ್ಞಾನಪೂರ್ವಕ ಉಪದೇಶಿಸಿದ್ದಾರ ಶಿಷ್ಯರ ಬುದ್ಧಿ ಸೌಕರ್ಯಕ್ಕಾಗಿ ಈ ಅಧಿಕಾರ ದಲ್ಲಿ ಹೇಳಿದ ಅರ್ಥಗಳನ್ನು **ಆವಾಪೋದ್ವಾಪತಃ** ಎಂದಾರಂಭಿಸಿ ಸಂಗ್ರಹಿಸುತ್ತಾರೆ **ತತ್ತದರ್ಥೇಷು** – ಆಯಾಯಾ ಪದಾರ್ಥಗಳ ವಿಷಯದಲ್ಲಿ **ಅಸ್ತಿನಾಸ್ತ್ಯೋಃ** - ಅಸ್ತಿ-ಇದೆ ನಾಸ್ತಿ-ಇಲ್ಲ ಎಂಬ ವ್ಯವಹಾರಗಳಿಗೆ **ಆನಂತ್ಯಾತ್** – ಅನಂತತ್ವವು ಉಂಟಾಗಿರುವುದರಿಂದ, **ಆವಾಪ** - ಅಂಗೀಕರಿಸುವುದು, ಉ**ದ್ವಾಪ** :– ಬಿಡುವುದು, ಇವುಗಳ ದೆಸೆ ಯಿಂದಾಗಿ ಅದಾಗಿ ನೈಯಾಯಿಕನು ಸಮವಾಯ ಕಾರಣವನ್ನು ಅಂಗೀಕರಿಸಿದ್ದಾನೆ ವೇದಾಂತಿಗಳಾದ ನಾವು ಅದನ್ನು ಬಿಟ್ಟಿದ್ದೇವೆ. ವೇದಾಂತಿಗಳು ಸತ್ವರಜಸ್ತಮಸ್ಸುಗಳು ಗುಣವೆಂದು ಅಂಗೀಕರಿಸಿದ್ದಾರೆ ನೈಯಾಯಿಕರು ಅದನ್ನು ತ್ಯಜಿಸಿದ್ದಾರೆ. ಹೀಗೆ ಅಂಗೀಕಾರಾನಂಗೀಕಾರಗಳಿಂದ, **ಕವಿಧೀಚಿತ್ರವತ್** – ಕವಿಯ ಬುದ್ಧ್ಯನುಸಾರ ಮಾಡಲ್ಪಟ್ಟ ಚಿತ್ರವಿಚಿತ್ರವಾದ ಕಾವ್ಯಗಳಹಾಗೆ, **ಕತಿ ಕತಿ ಕೃತಾಂತಾಃ** – ಅನೇಕ ವಿಧವಾದ ಸಿದ್ಧಾಂತಗಳು, **ಸ್ಯುಃ** – ಉಂಟಾಗ ತಕ್ಕವು ಅವುಗಳು, **ಅನವಧಿಕುಹನಾ ಯುಕ್ತಿಕಾಂತಾಃ** – ಎಲ್ಲೆ ಇಲ್ಲದ ವಂಚನಾರೂಪದ ಯುಕ್ತಿಗಳಿಂದ ರಮ್ಯ ವಾಗಿವೆ ಆಪಾತತಃ ರಮಣೀಯಗಳಾಗಿವೆ ಆದರೆ ತತ್ವವಿತ್ತುಗಳು ಅದನ್ನು ಆದರಿಸುವುದಿಲ್ಲವೆಂದು **ತತ್ವಾಲೋಕಸ್ತು** ಎಂದು "ತು' ಶಬ್ದದಿಂದ ಅವುಗಳನ್ನು ವ್ಯವಚ್ಛೇದಿಸುತ್ತಾರೆ. **ತತ್ವಾಲೋಕಃ** – ಭೋಕ್ತಾ ಭೋಗ್ಯಂ ಪ್ರೇರಿತಾರಂ ಚಮತ್ವಾ ಎಂಬ ಶ್ರುತಿಯಿಂದ ಉಂಟಾಗುವ ತತ್ವವಿಷಯವಾದ ಯಥಾರ್ಥ ಜ್ಞಾನವು, **ತಾನ್ ಸಮಸ್ತಾನ್ ಲೋಪ್ತುಂ ಪ್ರಭವತಿ** – ಆ ಅಪಸಿದ್ಧಾಂತಗಳೆಲ್ಲವನ್ನೂ ಹೋಗಲಾಡಿಸಲು ಸಮರ್ಥವಾಗುತ್ತದೆ. **ಪುಂಸ್ತ್ವೇ ತತ್ವೇನದೃಷ್ಟೇ** – ಪುರುಷನನ್ನು ಸಾಕ್ಷಾತ್ಕರಿಸಿದರೆ, ಸ್ಥಾಣುರ್ವಾ ಪುರುಷೋವಾ – **ಸ್ಥಾಣುವೋ** – ಕಂಬವೋ, ಮನುಷ್ಯನೋ ಎಂಬ ಶಂಕೆಯು, **ಸ್ಥಾಣುತಾಧೀಃ**– ಕಂಬವೆಂಬ ಬುದ್ಧಿಯು **ಸ್ಥಾಣುತಾದಿಃ** – ಎಂಬ ಪಾಠವಾದರೆ ಕಂಬವೋ ಬೇರೆಯಾವುದೂ (ಶಿಲೆ ಇತ್ಯಾದಿ) ಎಂಬುದು, **ಪುನರಪಿ ನಪ್ರಾಣಿತಾ ಖಲು** ತಿರುಗಿ ಉಂಟಾಗುವುದಿಲ್ಲ ವಲ್ಲವೇ ನಪ್ರಾಣಿತಾ – ಜೀವಿಸುವುದಿಲ್ಲವೆಂದೂ ಅರ್ಥ. **ಪುಂಸ್ತ್ವವು** – ಪುರುಷ ಶಬ್ದವಾಚ್ಯನಾದ ಶ್ರಿಯಃ ಪತಿಯ ಜಗತ್ಕಾರಣತ್ವಾದಿ ಲಕ್ಷಣಗಳು ಯಥಾರ್ಥವಾಗಿ ತಿಳಿದರೆ, ಸ್ಥಾಣುತಾದಿ,– ಪರದೇವತೆಯು ರುದ್ರನೋ ಬ್ರಹ್ಮನೋ ಎಂಬ ಸಂಶಯವು ಉಂಟಾಗುವುದಿಲ್ಲವೆಂಬುದು ತಾತ್ಪರ್ಯ. ಇದು ಮುಂದಿನ ಅಧಿಕಾರದಲ್ಲಿ ಮಾಡುವ ಅರ್ಥ ನಿರ್ಣಯ ಸೂಚಕ. "ಅಂಕಾಂತಪಾತ್ರ್ಯ ರಂಕಾಸ್ಯ ಮುತ್ತರಾಂಕಾರ್ಥ ಸೂಚಕಂ" ಎಂಬುದು ಕವಿ ಸಮಯ.

ತತ್ವತ್ರಯಾಧಿಕಾರಕ್ಕೆ ಸಾರ ಚಂದ್ರಿಕೆಯೆಂಬ ವ್ಯಾಖ್ಯಾನವು ಸಮಾಪ್ತವು.

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ.

ಶ್ರಿಯೈ ನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ



ಪರದೇವತಾ ಪಾರಮಾರ್ಥ್ಯಾಧಿಕಾರಃ

ಆತ್ಮೈಕ್ಯಂ ದೇವತೈಕ್ಯಂ ತ್ರಿಕಸಮಧಿಗತಾ (ಕತಾ) ತುಲ್ಯತೈಕ್ಯಂ ತ್ರಯಾಣಾಂ ।
ಅನ್ಯತ್ರೈಶ್ವರ್ಯ ಮಿತ್ಯಾದ್ಯನಿಪುಣ ಫಣಿತೀ ರಾದ್ರಿಯನ್ತೇ ನಸನ್ತಃ ॥

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಶ್ರೀಮದ್ರಹಸ್ಯತ್ರಯ ಸಾರೇ ಪರದೇವತಾ ಪಾರಮಾರ್ಥ್ಯಾಧಿಕಾರಸ್ಯ ಸಾರಚಂದ್ರಿಕಾ ವ್ಯಾಖ್ಯಾ

ಹೀಗೆ ತತ್ತ್ವ ತ್ರಯಾಧಿಕಾರದಲ್ಲಿ, ಪರತತ್ತ್ವವು "ವಿಭುತ್ವೇ ಸತಿಚೇತನತ್ವಂ" ಎಂಬ ಲಕ್ಷಣದಿಂದ ಹೇಳಲ್ಪಟ್ಟು, ಆ ಅಧಿಕಾರದ ಕೊನೆಯಲ್ಲಿ "ಪುಂಸ್ತ್ವೇ ತತ್ತ್ವೇನದೃಷ್ಟೇ" ಎಂದು ಪುರುಷ ಶಬ್ದವಾಚ್ಯನು ಅವನು, ಎಂದು ಸೂಚಿಸಿ, ಈ ಅಧಿಕಾರದಲ್ಲಿ ಪರದೇವತಾ ಪಾರಮಾರ್ಥ್ಯವನ್ನು ನಿರ್ಣಯಿಸಿ ಹೇಳುವವರಾಗಿ, ಮತಾಂತರ ನಿರಸನ ಪೂರ್ವಕವಾಗಿ **'ಆತ್ಮೈಕ್ಯಂ ದೇವತೈಕ್ಯಂ'** ಎಂದಾರಂಭಿಸುತ್ತಾರೆ. **ಆತ್ಮೈಕ್ಯಂ–** ಇಲ್ಲಿ ಆತ್ಮ ಶಬ್ದವು ಪರಮಾತ್ಮ ಪರ, ಎಲ್ಲಾ ಆತ್ಮತತ್ತ್ವಗಳೂ ಒಂದೇ, ಜೀವೇಶ್ವರ ಭೇದವಿಲ್ಲ ಇದು ಯಾದವ ಪ್ರಕಾಶ ಮತ, ಅವರು ಸದ್ಬ್ರಹ್ಮ ಶಬ್ದವಾಚ್ಯನಾದ ಪರಮಾತ್ಮಾ ಚೇತನಾಚೇತನಾತ್ಮಕವಾದ ಪ್ರಪಂಚ ರೂಪವಾಗಿ ಪರಿಣಾಮವನ್ನು ಹೊಂದಿದ್ದಾನೆಂದು ಹೇಳುತ್ತಾರೆ. ಹಾಗೆಯೇ **ದೇವತೈಕ್ಯಂ –** ಆತ್ಮವು ಒಂದೇ ಜೀವಾತ್ಮ ಪರಮಾತ್ಮ ಭೇದವಿಲ್ಲವೆಂಬುದು ಅದ್ವೈತ ಮತ. ಉಪಾಧಿ ವಿಶಿಷ್ಟ ಬ್ರಹ್ಮವೇ ಜೀವ, ಬೇರೆಯಲ್ಲವೆಂಬುದು ಭಾಸ್ಕರ ಮತ. ಬ್ರಹ್ಮರುದ್ರಾದಿ ದೇವತೆಗಳಿಗೆ ಸರ್ವಾಂತರ್ಯಾಮಿಯಾದ ಈಶ್ವರನೊಡನೆ ಭೇದವಿಲ್ಲ, ಐಕ್ಯವೇ–ಶರೀರ ಭೇದವೇ ವಿನಹ, ಆ ದೇವತಾ ಸ್ವರೂಪದಲ್ಲಿ ಭೇದವಿಲ್ಲವೆಂಬುದು ಮತ್ತೊಂದು ಮತ. ಇದೂ ಮಾಯಾವಾದಿಗಳ ಮತ

ತ್ರಿಕಸಮಧಿಗತಾ ತುಲ್ಯತಾ – ಬ್ರಹ್ಮ ವಿಷ್ಣು ರುದ್ರನೆಂಬ ಮೂರ್ತಿತ್ರಯವನ್ನು ಆಶ್ರಯಿಸಿರುವ **(ಸಮಧಿಕತಾ), ತುಲ್ಯತಾ–** ಜ್ಞಾನಶಕ್ತ್ಯಾದಿಸಾಮ್ಯ, **ತ್ರಯಾಣಾಂ ಐಕ್ಯಂ–** ಬ್ರಹ್ಮ ವಿಷ್ಣು ರುದ್ರರೆಂಬ ಮೂರ್ತಿತ್ರಯವು ಸ್ವರೂಪದಲ್ಲಿ ಪರಸ್ಪರ ಸಮ, ಶರೀರ ಭೇದವೇ ವಿನಹ ಸ್ವರೂಪದಲ್ಲಿ ಯಾವ ಭೇದವೂ ಇಲ್ಲವೆಂಬುದು, **ಅನ್ಯತ್ರೈಶ್ವರ್ಯಂ–** ಈ ಮೂರು ದೇವತಗಳನ್ನೂ ಬಿಟ್ಟು, ಇವರಿಗಿಂತ ಮೇಲಾದವನೊಬ್ಬನು, ಸದಾಶಿವ, ಪರಾಶಕ್ತಿ ಎಂದು ಹೇಳಲ್ಪಡುವವನು ಈಶ್ವರನು, ಎಂಬ ಉತ್ತೀರ್ಣಬ್ರಹ್ಮವಾದ, **ಇತ್ಯಾದ್ಯನಿಪುಣ ಫಣಿತೀಃ–** ಹೀಗೆ ಹೇಳಲ್ಪಡುವ ಅನಿಪುಣವಾದ ಮಾತುಗಳನ್ನು, ಇಲ್ಲಿ **'ಆದಿ'** ಶಬ್ದದಿಂದ, ಕೇವಲ ನಾರಾಯಣನೇ ಪರದೇವತೆ, ಲಕ್ಷ್ಮಿವಿಶಿಷ್ಟನಲ್ಲ ಎಂಬ ನಿಶ್ಶ್ರೀಕ ಬ್ರಹ್ಮವಾದ ಮತವು ಸಂಗ್ರಹಿಸಲ್ಪಡುತ್ತದೆ ಮೇಲೆ ಶ್ರೀಮನ್ನಾರಾಯಣಃ ನಃ ಪತಿಃ ಎಂದು ಹೇಳಿರುವುದರಿಂದ ನಿಶ್ಶ್ರೀಕ ಬ್ರಹ್ಮವಾದವೂ ನಿರಸ್ಯತ್ವ ಮತಗಳಲ್ಲಿ ಸೇರಿದೆ ಆತ್ಮೈಕ್ಯಂ, ದೇವತೈಕ್ಯಂ, ತ್ರಿಕಸಮಧಿಗತಾ, ತುಲ್ಯತಾ, ಅನ್ಯತ್ರೈಶ್ವರ್ಯಂ, ಇತ್ಯಾದಯಶ್ಚತಾಃ ಅನಿಪುಣಫಣಿತಯಃ ಎಂದು ಕರ್ಮಧಾರಯ. ಅನಿಪುಣಾಶ್ಚತೇ ಫಣಿತಯಶ್ಚ – **ಅನಿಪುಣಫಣಿತಯಃ** ಸಮೀಚೀನ ನ್ಯಾಯ ನಿರೂಪಣಾ ಸಮರ್ಥಗಳಾದ ಮಾತುಗಳು. ಇವನ್ನು **ಸಂತಃ**–ಸಾರಾಸಾರ ವಿವೇಕ ಚತುರರಾದ ಸತ್ಪುರುಷರು, **ನಾದ್ರಿಯಂತೇ –** ಆದರಿಸುವುದಿಲ್ಲ. ಹಾಗಾದರೆ ಪರತತ್ತ್ವವು ಯಾವುದು ಎಂದರೆ ಆಚಾರ್ಯರು ನಿರೂಪಣೆ ಮಾಡುತ್ತಾರೆ. **ತ್ರಯ್ಯಂತೈರೇಕ ಕಂಠೈಃ –** ಉಪನಿಷತ್ತುಗಳು ಏಕಕಂಠದಿಂದ

ತ್ರಯ್ಯನ್ತೈ ರೇಕಕಣ್ಠ್ಯೈ ಸ್ತದನುಗುಣ ಮನುವ್ಯಾಸ ಮುಖ್ಯೋಕ್ತಿಭಿಶ್ಚ ।
ಶ್ರೀಮಾ ನ್ನಾರ ಯಣೋ ನಃ ಪತಿ ರಖಿಲ ತನುರ್ಮುಕ್ತಿದೋ ಮುಕ್ತಭೋಗ್ಯಃ ॥೧೬॥

ಪರದೇವತಾ ನಿರ್ಣಯ ಪ್ರಯೋಜನ ಕಥನಂ

ಉಕ್ತವೈಧರ್ಮ್ಯಙ್ಗಳಾಲೇ ಪೊದುವಿಲೇ ಪ್ರಕೃತಿ ಪುರುಷೇಶ್ವರ ವಿವೇಕಂ ಪಣ್ಣಿನಾಲುಮ್ 1) "ಒನ್ರುನ್ದೇವುಮ್",ಇತ್ಯಾದಿಗಳಿಲ್ ಪಡಿಯೇ ಪರದೇವತಾ ವಿಶೇಷ ನಿಶ್ಚಯಮಿಲ್ಲಾದಪೋದು, "ಉನ್ನಿತ್ತುಮತ್ತೊರು ದೈಯ್ವಂ ತೊಳ್ಳಾಳವನ್ನೈಯಲ್ಲಾಲ್" ಎನ್ಗಿರ ಪರಮೈಕಾನ್ತಿತ್ವಙ್ಗೂಡಾಮೈಯಾ ಲುಮ್, ಪರಮೈಕಾನ್ತಿಕ್ಕಲ್ಲದು ವ್ಯವಧಾನ ರಹಿತಮಾಹ ಮೋಕ್ಷಙ್ಕಿಡೈಯಾಮೈಯಾಲು ಮೀಶ್ವರ ನಿನ್ನ ದೇವತಾವಿಶೇಷ ಮೆನ್ರು ನಿಷ್ಕರ್ಷಿಕ್ಕವೇಣುಮ್.

ಅದಾಗಿ ಸದೇವ ಸೋಮ್ಯೇದಮಗ್ರ ಆಸೀತ್, ಬ್ರಹ್ಮವಾಇದಮಗ್ರ ಆಸೀತ್, ಆತ್ಮಾವಾ ಇದಮಗ್ರ ಆಸೀತ್, ಏಕೋ ಹವೈನಾರಾಯಣ ಆಸೀತ್, ಇತ್ಯಾದಿ ಕಾರಣ ವಾಕ್ಯಗಳು ಭಿನ್ನ ಭಿನ್ನ ಶಬ್ದಗಳಿಂದ ಪರದೇವತೆಯನ್ನು ಹೇಳಿದರೂ, ಪ್ರಕರಣಾನುಗುಣ್ಯಾದಿಂದಲೂ, ಸಾಮಾನ್ಯ ವಿಶೇಷ ನ್ಯಾಯದಿಂದಲೂ, ಉಪನಿಷತ್ತುಗಳು ಏಕಕಂಠದಿಂದ **ತದನುಗುಣಮನುವ್ಯಾಸಮುಖ್ಯೋಕ್ತಿಭಿಶ್ಚ** – ಆ ಉಪನಿಷದ್ವಾಕ್ಯಗಳಿಗೆ ಅನುಗುಣವಾದ, ಮನು, ವ್ಯಾಸರ ಮುಖ್ಯವಾದ ಶ್ರೀಸೂಕ್ತಿಗಳಿಂದ "ಯದ್ವೈಕಿಂಚ ಮನುರವದತ್ ತದ್ಭೇಷಜಂ, ಸಹೋವಾಚವ್ಯಾಸಃ ಪಾರಾಶರ್ಯಃ" ಎಂದು ವೇದ ಪ್ರಸಿದ್ಧವಾದ ಆಪ್ತತಮತ್ವವು ಅವರುಗಳಿಗೆ ಸೂಚಿಸಲ್ಪಡುತ್ತದೆ. ಇದರಿಂದಾಗಿ ಶೈವಾಗಮಾದಿಗಳು ಶ್ರುತಿ ವಿರುದ್ಧವಾದ ಅರ್ಥಗಳನ್ನು ಹೇಳುವುದರಿಂದ "ವಿರೋಧೇತ್ವನಪೇಕ್ಷ್ಯಂಸ್ಯಾತ್" ಎಂಬ ವಿರೋಧಾಧಿಕರಣ ನ್ಯಾಯ (ಪೂರ್ವಮೀಮಾಂಸ) ವನ್ನವಲಂಬಿಸಿ, ಅವುಗಳು ಆಪ್ತವಾದುವುಗಳಲ್ಲವೆಂಬುದು ಸೂಚಿತ. **ಮುಖ್ಯೋಕ್ತಿಭಿಶ್ಚ** ಮನು, ವ್ಯಾಸರ ಮುಖ್ಯೋಕ್ತಿಗಳಿಂದ 'ಮಾನುಸ್ಮೃತಿ, ಮೊದಲಾದ **ಸಾತ್ವಿಕ** ಉಪಬ್ರಂಹಣಗಳಿಗೆ ಪ್ರಾಶಸ್ತ್ಯ. **ಶ್ರೀಮಾನ್ನಾರಾಯಣೋ ನಃ ಪತಿಃ** – ಶ್ರೀ ವಿಶಿಷ್ಟನಾರಾಯಣನು, ನಮಗೆ ಸ್ವಾಮಿಯು. ಕೇವಲ ನಾರಾಯಣನಲ್ಲ **ನಃ** – ಎಂದು ಜೀವರ ಪರಸ್ಪರ ಭೇದವು ಸೂಚಿತ. **ಅಖಿಲತನುಃ** – ಸರ್ವಶರೀರಕನು. ಇದರಿಂದಾಗಿ ರುದ್ರೇಂದ್ರಪ್ರಾಣಾದಿ ಶಬ್ದಗಳು ತತ್ತದಂತರ್ಯಾಮಿಯಾದ ಪರಮಾತ್ಮಪರ್ಯಂತ ವಾಚಕಗಳು ಎಂಬುದು ತಿಳಿಸಲ್ಪಡುತ್ತದೆ. **ಮುಕ್ತಿದಃ** –ಮೋಕ್ಷಪ್ರದನು ಇದರಿಂದ ಪರದೇವತಾತತ್ವವು ಹೇಳಲ್ಪಟ್ಟಿತು. ಶ್ರೀ ವಿಶಿಷ್ಟನೇ ಪ್ರಾಪಕನೂ (ಉಪಾಯು) ಪ್ರಾಪ್ಯವೂ ಎಂದು ನಿಗಮಿಸಲ್ಪಟ್ಟಿತು ಎಂದರ್ಥ

ಪರದೇವತಾ ನಿಶ್ಚಯ ಪ್ರಯೋಜನ

ಈ ಅಧಿಕಾರದಲ್ಲಿ ಪರದೇವತೆಯ ನಿಷ್ಕರ್ಷವನ್ನು ಮಾಡಲು, **ಉಕ್ತವೈಧರ್ಮ್ಯಂಗಳಾಲೇ** ಎಂದಾರಂಭಿಸುತ್ತಾರೆ. ಹಿಂದಿನ ಅಧಿಕಾರದಲ್ಲಿ, ಭೋಕ್ತಾ ಭೋಗ್ಯಂ, ಪ್ರೇರಿತಾ ಎಂದು ಮೂರು ತತ್ವಗಳನ್ನು ನಿರೂಪಿಸಿ, ಅವುಗಳಿಗೆ ಪರಸ್ಪರ ವೈಧರ್ಮ್ಯವನ್ನು ಅದಾಗಿ ಗುಣತ್ರಯಾಶ್ರಯತ್ವ, ಅಣುತ್ವೇಸತಿ ಚೇತನತ್ವ, ವಿಭುತ್ವೇ ಸತಿಚೇತನತ್ವವೆಂಬ ಚೇತನಾಚೇತನಗಳಿಗೂ ಈಶ್ವರನಿಗೂ ಇರುವ ಪರಸ್ಪರ ವಿಲಕ್ಷಣ ಧರ್ಮಗಳನ್ನು ನಿರೂಪಿಸಿದ್ದಾರೆ. ಈ ವಿಲಕ್ಷಣವಾದ ಧರ್ಮಗಳಿಂದ, ಪ್ರಕೃತಿ–ಭೋಗ್ಯ, ಪುರುಷ–ಜೀವ (ಭೋಕ್ತಾ), ಈಶ್ವರ–ಪ್ರೇರಿತಾ ಎಂಬ ಮೂರು ತತ್ವಗಳೂ ಪರಸ್ಪರ ಬೇರೆ ಬೇರೆಯಾದವು ಎಂದು ತಿಳಿದಿದ್ದರೂ, [1] ಒನ್ರುಂತೇವುಂ ಇತ್ಯಾದಿ ಆಳ್ವಾರ್ ಶ್ರೀ ಸೂಕ್ತಿಗಳಲ್ಲಿ (ಅದಿ

---

1) ಒನ್ರೇಂತೇವು ಮುಲಕಮುಯಿರುಂ ಮತ್ತುಂಯಾದು ಮಿಲ್ಲಾವನ್ರು
ನಾನ್ಮುಕನ್ ತನ್ನೊಡು ತೇವರು ಲಕೋಡುಯಿರ್ಪಡೈತ್ತಾನ್–
ಕುನ್ರಂ ಶೇರ್ ಮಣಿಮಾಡ ನೀಡು ತಿರುಕ್ಕುರು ಹೂರದನುಳ್–
ನಿನ್ರವಾದಿಪ್ಪಿರಾನ್ ನಿರ್ಕ ಮತ್ತೈ ತ್ತೈವಂ ನಾಡುದಿರೇ ॥ (ತಿರುವಾಯ್ಮೊಳಿ 4-1)

ಪು. ತಿ. ನೋ.

ಆತ್ಮೈಕ್ಯ ಪಕ್ಷ ನಿರಾಕರಣಂ

ಅಪ್ಪಿಡತ್ತಿಲ್ ಚೇತನಾ ಚೇತನಙ್ಗಳುಡೈಯ ವತ್ಯನ್ತ ಭೇದಮ್ ಪ್ರಮಾಣ ಸಿದ್ಧ ಮಾಹೈಯಾಲೇ, ಎಲ್ಲಾಮ್ ಪರದೇವತೈಯಾಯಿರುಕ್ಕಿರ ಬ್ರಹ್ಮ ದ್ರವ್ಯ ಮೆನಿಹಿರ ಪಕ್ಷಮ್ ಘಟಿಯಾದು.

ದೇವತೈಕ್ಯಪಕ್ಷ ನಿರಾಕರಣಂ

ಸ್ವಭಾವ ಸಿದ್ಧಮಾನ ಜೀವೇಶ್ವರ ಭೇದಮುಮ್ ಅ(ಇ)ಪ್ಪಡಿಯೇ ದೇವಾದಿ ರೂಪರಾನ ಜೀವರ್ಗಳುಡೈಯ ಅನ್ಯೋನ್ಯ ಭೇದಮುಮ್ ಸುಖದುಃಖಾದಿ ವ್ಯವಸ್ಥೈಯಾಲೇ ಪ್ರಾಮಾಣಿಕ ಮಾಹೈಯಾಲೇ ಸರ್ವಾನ್ತರ್ಯಾಮಿ ಒರುವನೇ ಯಾಹಿಲುಮ್ ಬ್ರಹ್ಮ ರುದ್ರೇಂದ್ರಾದಿ ಸರ್ವ ದೇವತೈಹಳುಮ್ ಈಶ್ವರನೋಡುಮ್ ತನ್ನಿಲ್ ತಾನುಮ್ ಅಭಿನ್ನರೆನ್ನಿರ ಪಕ್ಷಮುಮ್ ಕೂಡಾದು.

ಶಬ್ದದಿಂದ "ತಿಣ್ಣನ್ವೀಡು" ಎಂಬ ದಶಕವೂ ಸೂಚಕ) ಹೇಳಿರುವಂತೆ ಪರದೇವತಾ ವಿಶೇಷ ನಿಷ್ಕರ್ಷವಿಲ್ಲದಿದ್ದರೆ, ಉನ್ನಿತ್ತು ಮತ್ತೋರು ದೈವಂತೊಳ್ಳಾಳ್ **ಅವನ್ನೈಯಲ್ಲಾಲ್**" ಎಂಬ ಪರಮೈಕಾಂತಿತ್ವವು ಉಂಟಾಗಲಾರದು. **ಪರಮೈಕಾಂತಿಗಲ್ಲದೆ** ವ್ಯವಧಾನವಿಲ್ಲದೆ (ಸಾಕ್ಷಾತ್ತಾಗಿ – ನೇರವಾಗಿ ಎಂಪರ್ಥ) ಮೋಕ್ಷವು ಲಭಿಸಲಾರದು ಆದ್ದರಿಂದ **ಈಶ್ವರನು** ಇಂಥಹ ಶ್ರಿಯಃ ಪತಿ ನಾರಾಯಣನೆಂಬ ದೇವತಾರೂಪನು, ಎಂದು ನಿಷ್ಕರ್ಷಿಸಬೇಕಾದುದು ಅವಶ್ಯ. **ಪರಮೈಕಾಂತಿ**– ಏಕಸ್ಮಿನ್ನೇವ ಅಂತಃ – ನಿಶ್ಚಯಃ ಏಕಾಂತಃ. ಏಕಾಂತಃ ಅಸ್ಯ ಅಸ್ತೀತಿ ಏಕಾಂತೀ ಪರಮಶ್ಚಾಸೌ ಏಕಾಂತೀಚ ಪರಮೈಕಾಂತಿ ಒಬ್ಬನಲ್ಲೇ ಪರತ್ವ ಉಪಾಯತ್ವ ಪ್ರಾಪ್ಯತ್ವ ನಿಶ್ಚಯವುಳ್ಳವನ್ನು ಏಕಾಂತೀ. ಉತ್ಕೃಷ್ಟವಾದ ಏಕಾಂತಿಯು ಪರಮೈಕಾಂತಿ. ಪರದೇವತಾ ನಿಶ್ಚಯವಿಲ್ಲದೆ ಪಾರಮೈಕಾಂತ್ಯವು ಸಿದ್ಧಿಸಲಾರದು "ಪೇಶ **ನಿನ್ರ** ಶಿವನುಕ್ಕುಂ ಪಿರಮಂತನಕ್ಕುಂ ಪಿರರ್ಕ್ಕುಮ್ ನಾಯಕನವನೇ" – ಪರದೇವತೆಯೆಂದು ಇತರರಿಂದ ಹೇಳಲ್ಪಡುವ ಪರಮಶಿವನಿಗೂ, ಬ್ರಹ್ಮದೇವನಿಗೂ ಇಂದ್ರಾದಿ ಇತರ ದೇವತೆಗಳಿಗೂ ನಾರಾಯಣನೇ ನಾಯಕನು, ಎಂಬ ನಾರಾಯಣ ಪರತ್ವ ನಿಶ್ಚಯವಿಲ್ಲದೆ, "ಉನ್ನಿತ್ತುಮತ್ತೋರು ದೈವಂ ತೊಳ್ಳಾಳ್ ಅವನ್ನೈಯಲ್ಲಾಲ್" ಭಗವಂತನಲ್ಲದೆ ಬೇರೆ ದೇವತೆಯನ್ನು, ಉನ್ನಿತ್ತು - ಪರದೇವತೆ ಎಂದು ಭಾವಿಸಿ ನಮಸ್ಕಾರ ಮಾಡಳು, ಎಂಬ ಪಾರಮೈಕಾಂತ್ಯವು ಘಟಿಸುವುದಿಲ್ಲವೆಂಬುದು ತಾತ್ಪರ್ಯ

ಇತರ ದೇವತೆಗಳು ಪರದೇವತೆ ಎಂಬ ಭಾವನೆಯಿಲ್ಲದೆ ಶ್ರಿಯಃ ಪತಿಯಾದ ನಾರಾಯಣನೇ ಪರದೇವತೆ **ಎಂಬ ಭಾವನೆ ಇರುವ** ಪರಮೈಕಾಂತಿಗೆ ವಿನಹ ಬೇರೆ ಯಾರಿಗೂ ಸಾಕ್ಷಾತ್ತಾಗಿ ಮೋಕ್ಷವು ಲಭಿಸಲಾರದು "ಶಂಕರಸ್ಯ ತು ಯೋ ಭಕ್ತಃ ಸಪ್ತ ಜನ್ಮಾಂತರಂ ನರಃ । ತಸ್ಯೈವತು ಪ್ರಸಾದೇನ ವಿಷ್ಣು ಭಕ್ತಶ್ಚಜಾಯತೇ ॥" ಎಂದು ಶಂಕರನ ಭಕ್ತನು ಅವನ ಅನುಗ್ರಹದಿಂದ ವಿಷ್ಣು ಭಕ್ತನಾಗುತ್ತಾನೆಂಬುದು ವ್ಯವಧಾನ ಸಹಿತವಾದ ವಿಷ್ಣು ಭಕ್ತಿ.

ಆತ್ಮೈಕ್ಯ ದೇವತೈಕ್ಯ ಪಕ್ಷ ನಿರಾಕರಣಮ್

ಅಪ್ಪಿಡತ್ತಿಲ್– ಇತ್ಯಾದಿ ಹೀಗೆ ದೇವತಾ ವಿಶೇಷವನ್ನು ನಿಷ್ಕರ್ಷೆ ಮಾಡುವ ವಿಷಯದಲ್ಲಿ, ಚೇತನಾ ಚೇತನಗಳ ಅತ್ಯಂತ ಭೇದವು ಪ್ರಮಾಣ ಸಿದ್ಧವಾದುದರಿಂದ, ಎಲ್ಲವೂ ಪರದೇವತೆಯಾದ ಬ್ರಹ್ಮದ್ರವ್ಯವೆಂಬ ಯಾದವ ಮತದವರ ಪಕ್ಷವು ಸಿದ್ಧಿಸಲಾರದು. **ಆತ್ಮೈಕ್ಯಂ** ಎಂಬ ಪಕ್ಷವು ಇದರಿಂದ ನಿರಸ್ತವಾಯಿತು. ಸ್ವಾಭಾವಿಕವಾದ ಜೀವೇಶ್ವರ ಭೇದವೂ (ಇದರಿಂದ ಔಪಾಧಿಕ ಭೇದ ವಾದ ನಿರಾಸವು ಏರ್ಪಡುತ್ತದೆ. ಇದು ಭಾಸ್ಕರ ಮತ), ಜೀವರುಗಳ ಅನ್ಯೋನ್ಯ ಭೇದವೂ ಪರಸ್ಪರ ಸುಖದುಃಖಗಳ ವ್ಯವಸ್ಥೆಯಿಂದ (ಅಂದರೆ ಪ್ರತಿಯೊಬ್ಬನಿಗೂ ಸುಖದುಃಖಗಳು

ಯಾವ ದೇವತೆಯೂ, ಜೀವರಾಶಿಗಳೂ, ಅಚೇತನ ಪದಾರ್ಥಗಳೂ ಇಲ್ಲದಿರುವ ಪ್ರಳಯಕಾಲದಲ್ಲಿ, ಚತುರ್ಮುಖನೊಡನೆ, ದೇವಲೋಕವನ್ನೂ ಜೀವರಾಶಿಗಳನ್ನೂ ಸೃಷ್ಟಿಸಿದ ಆದಿಕಾರಣ ಭೂತನು, ದೊಡ್ಡ ಭವನಗಳಿಂದ ಕೂಡಿದ ತಿರುಕ್ಕುರುಹೂರ್‌ನಗರದಲ್ಲಿ ನಿತ್ಯ ಸಾನ್ನಿಧ್ಯವನ್ನು ಮಾಡಿಕೊಂಡಿರುವಾಗ, ಬೇರೆ ಯಾರನ್ನು ಪರದೇವತೆಯೆಂದು ಹುಡುಕುತ್ತೀರಿ ಬೇರೆ ಯಾರೂ ಅಲ್ಲ ಅವನೇ ಪರದೇವತೆ ಎಂದು ತಾತ್ಪರ್ಯ.

ತ್ರಿಮೂರ್ತಿ ಸಮತಾದಿ ಪಕ್ಷ ನಿರಾಕರಣಂ

ಇದ್ದೇವತೈಹಳಿಲ್ ಪ್ರಧಾನರಾಹ ಚ್ಚೊಲ್ಲುಹಿರ ಬ್ರಹ್ಮ ರುದ್ರೇಂದ್ರಾದಿಹಳುಕ್ಕು ಕಾರ್ಯತ್ವ ಕರ್ಮವಶ್ಯತ್ವಙ್ಗಳ್ ಪ್ರಾಮಾಣಿಕಙ್ಗಳಾಹೈಯಾಲುಮ್.

೧ "ಆಭೂತ ಸಂಪ್ಲವೇ ಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹ॥ ।
ಏಕಸ್ತಿಷ್ಠತಿ ವಿಶ್ವಾತ್ಮಾ ಸತು ನಾರಾಯಣಃ ಪ್ರಭುಃ ॥

೨ "ಆದ್ಯೋ ನಾರಾಯಣೋದೇವಸ್ತಸ್ಮಾದ್ಬ್ರಹ್ಮಾ ತತೋಭವಃ ।"

೩ "ಪರೋ ನಾರಾಯಣೋ ದೇವಸ್ತಸ್ಮಾಜ್ಜಾತಶ್ಚತುರ್ಮುಖಃ ।
ತಸ್ಮಾದ್ರುದ್ರೋ ಭವದ್ದೇವಿ" ॥ ಇತ್ಯಾದಿಹಳಿಲೇ,

೪ "ತತಸ್ತ್ವಮಪಿದುರ್ಧರ್ಷಸ್ತಸ್ಮಾದ್ಭಾವಾತ್ಸನಾತನಾತ್ ।
ರಕ್ಷಾರ್ಥಂ ಸರ್ವಭೂತಾನಾಂ ವಿಷ್ಣುತ್ವಮುಪಜಗ್ಮಿವಾನ್ ॥"

ಬೇರೆ ಬೇರೆಯಾಗಿರುವುದರಿಂದ) ಪ್ರಾಮಾಣಿಕ ಆದ್ದರಿಂದ ದೇವತೆಗಳು ಬೇರೆಬೇರೆ, ಜೀವರುಗಳು ಬೇರಬೇರ ಆದ್ದರಿಂದ ಸರ್ವಾಂತರ್ಯಾಮಿಯು ಒಬ್ಬನೇ ಆದರೂ ಬ್ರಹ್ಮ ರುದ್ರಾದಿ ಸರ್ವದೇವತೆಗಳೂ ಪರಸ್ಪರ ಬೇರ ಬೇರೆಯಾದವರು. ಅವರುಗಳೂ ಈಶ್ವರನೂ ಬೇರೆ ಬೇರೆ, ಅವರುಗಳೂ ಈಶ್ವರನೂ ಅಭಿನ್ನರೆಂಬ ಪಕ್ಷವು ಸರಿಯಲ್ಲ. ಸುಖ ದುಃಖ ವ್ಯವಸ್ಥೆಯೇ ಇದಕ್ಕೆ ಕಾರಣವೆಂಬುದು ತಾತ್ಪರ್ಯ. ಇದರಿಂದ **ದೇವತೈಕ್ಯಂ,** ಎಂಬ ಮತವು ನಿರಸ್ತವಾಯಿತು.

ತ್ರಿಮೂರ್ತಿಸಾಮ್ಯ ನಿರಾಕರಣ

ಇದ್ದೇವತೈ ಹಳಿಲ್– ಇತ್ಯಾದಿ - ಈ ದೇವತೆಗಳಲ್ಲಿ ಪ್ರಧಾನರಾಗಿ ಹೇಳಲ್ಪಡುವ ಬ್ರಹ್ಮರುದ್ರೇಂದ್ರಾದಿಗಳಿಗೆ (ಬ್ರಹ್ಮ ವಿಷ್ಣು ರುದ್ರೇಂದ್ರಾಃ ಎಂಬ ವಚನವು ಇಲ್ಲಿ ಅಭಿಪ್ರೇತ) ಕಾರ್ಯತ್ವವೂ ಕರ್ಮಪರವಶತೆಯೂ ಅಂದರೆ ಈಶ್ವರನಿಂದ ಸೃಷ್ಟಿಸಲ್ಪಟ್ಟವರು, ಪುಣ್ಯಪಾಪರೂಪ ಕರ್ಮಾಧೀನರು ಎಂಬುವು ಪ್ರಾಮಾಣಿಕವಾಗಿರುವಾಗ ಅವರುಗಳು ಜಗತ್ಕಾರಣ ಭೂತರಲ್ಲವೆಂಬುದು ಏರ್ಪಡುತ್ತದೆ ಬ್ರಹ್ಮ ರುದ್ರರೊಡನೆ ಇಂದ್ರನನ್ನು ಸೇರಿಸಿ ಹೇಳಿರುವುದು, ಇಂದ್ರನು ಪರವಶನೆಂಬ ಪ್ರಸಿದ್ಧಿ ಇರುವುದರಿಂದ ಅವನ ಹಾಗೆಯೇ ಬ್ರಹ್ಮ ರುದ್ರರೂ ಪರವಶರೆಂಬ ದೃಷ್ಟಾಂತಾರ್ಥ. ಇದಕ್ಕೆ [1]**ಆಭೂತ ಸಂಪ್ಲವೇ** ಇತ್ಯಾದಿ ಪ್ರಮಾಣ ವಚನಗಳನ್ನು ಉದಾಹರಿಸುತ್ತಾರೆ. ಇಲ್ಲಿ ವ್ಯಷ್ಟಿ ಸೃಷ್ಟಿಗೆ ಕಾರ್ಯಭೂತರಾದ ದೇವತೆಗಳಿಗೆ ಲಯವನ್ನು ಹೇಳಿ, ಸಮಷ್ಟಿ ಸೃಷ್ಟಿಗೂ ಲಯವನ್ನು ಹೇಳಿ, ಉಳಿಯುವವನು ನಾರಾಯಣನೊಬ್ಬನೇ ಎಂದು ನಿಗಮಿಸುತ್ತಾರೆ. ಅವನೇ ಜಗತ್ಕಾರಣ ಭೂತನು ಎಂದು ಏರ್ಪಡುತ್ತದೆ [2]**ಆದ್ಯೋನಾರಾಯಣೋ ದೇವ** - ಇಲ್ಲಿ ನಾರಾಯಣನು ಆದ್ಯನು ಎಂದು ಹೇಳಿರುವುದರಿಂದ ಅವನು ಜಗತ್ಕಾರಣನು **ದೇವ**ಶಬ್ದದಿಂದ ಅವನು

---

೧) ಪಂಚಭೂತಗಳೂ ಸಹ (ಅಹಂಕಾರದಲ್ಲಿ) ಲಯವನ್ನು ಹೊಂದಿ, ಅಹಂಕಾರ ತತ್ತ್ವವು ಮಹತ್ತತ್ತ್ವದಲ್ಲಿ ಲಯ ಹೊಂದಿ, ಪ್ರಕೃತಿಯಲ್ಲಿ ಮಹತ್ತತ್ತ್ವವೂ ಲಯಹೊಂದಿ, ಆ ಪ್ರಕೃತಿಯು ಬಗವಂತನಲ್ಲಿ ಲಯಹೊಂದಿದ ಮೇಲೆ, ಸೂಕ್ಷ್ಮವಾದ ಚೇತನಾ ಚೇತನಗಳಿಗೆ ಆತ್ಮನಾದ ಒಬ್ಬನಿರುತ್ತಾನೆ, ಅವನೇ ಪ್ರಭುವಾದ ನಾರಾಯಣನು (ಭಾರ ಶಾಂತಿ 21೧-24)

೨) ಆದ್ಯೋ ನಾರಾಯಣೋದೇವಃ ತಸ್ಮಾದ್ಬ್ರಹ್ಮಾ ತತೋಭವಃ ।
ಅತಃ ಸ್ವಯಂ ಭುವಶ್ಚಾನ್ಯೇಮರೀಚ್ಯಾದ್ಯರ್ಕಸಂಭವಾಃ ॥ (ವರಾಹ ಪು. 25-೧)

ನಾರಾಯಣನು ಆದ್ಯನು, ಅವನು ದೇವನು- ಶ್ರದ್ಧಯಾ ದೇವೋ ದೇವತ್ವಮಶ್ನುತೇ, ಎಂಬ ಶ್ರುತಿಯ ಪ್ರಕಾರ ಲಕ್ಷ್ಮೀವಿಶಿಷ್ಟನು ಅವನಿಂದ ಬ್ರಹ್ಮದೇವನೂ, ಬ್ರಹ್ಮದೇವನಿಂದ ಭವನೂ-ರುದ್ರನೂ ಹುಟ್ಟಿದರು ಸ್ವಯಂ ಭವನಾದ ಬ್ರಹ್ಮದೇವನಿಂದ ಮರೀಚಿ ಮೊದಲಾದವರು ಉಂಟಾದರು

೩) ಪರೋ ನಾರಾಯಣೋ ದೇವಸ್ತಸ್ಮಾಜ್ಜಾತಶ್ಚತುರ್ಮುಖಃ ।
ತಸ್ಮಾದ್ರುದ್ರೋ ಭವದ್ದೇವಿ ಸಚ ಸರ್ವಜ್ಞತಾಂಗತಃ ॥ (ವ. ಪು. 90-3)

ನಾರಾಯಣೋದೇವ – ಲಕ್ಷ್ಮೀವಿಶಿಷ್ಟ ನಾರಾಯಣನು ಪರನು–ಸರ್ವೋತ್ಕೃಷ್ಟನು, ಅವನಿಂದ ಚತುರ್ಮುಖನು ಅವನಿಂದ ರುದ್ರನು ಉಂಟಾದರು ಎಲೈ ಭೂ ದೇವಿಯೇ ಆ ರುದ್ರನು ಸರ್ವವನ್ನೂ ತಿಳಿಯುವಂಥಹ ಜ್ಞಾನವನ್ನು ಪಡೆದನು ಪು. ತಿ. ನೋ

ಎನ್ಱಿರಪಡಿಯೇ ಸ್ವೇಚ್ಛಾವತೀರ್ಣನಾಯ್ ತ್ರಿಮೂರ್ತ್ತಿ ಮಧ್ಯಸ್ಥನಾನ ವಿಷ್ಣು ನಾರಾಯಣಶಬ್ದವಾಚ್ಯನ್ ತಾನೇ ತನ್ನುಡೈಯ ಪೂರ್ವಾವಸ್ಥೈಯಾಲೇ ಸ್ವರ ಜಗತ್ತುಕ್ಕುಮ್ ಕಾರಣಮೆನ್ಱೈಯಾಲುಮ್,

ಱ "ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರ ಜಙ್ಗಮಮ್ ।
ಋತೇ ತಮೇಕಂ ಪುರುಷಂ ವಾಸುದೇವಂ ಸನಾತನಂ ॥"

ಎನ್ಱಿರಪಡಿಯೇ, ಅವನೇ ನಿತ್ಯನೆನ್ಱೈಯಾಲುಮ್, ತ್ರಿಮೂರ್ತ್ತಿಹಳುಮ್ ಸಮರೆನ್ಱುಮ್, ತ್ರಿಮೂರ್ತ್ತಿಹಳ್ ಏಕತತ್ವಮೆನ್ಱುಮ್, ತ್ರಿಮೂರ್ತ್ಯುತ್ತೀರ್ಣ್ಣನ್ ಈಶ್ವರನೆನ್ಱುಮ್, ತ್ರಿಮೂರ್ತ್ತಿಹಳುಕ್ಕುಳ್ಳೇ ಬ್ರಹ್ಮಾವಾದಲ್ ರುದ್ರನಾದಲ್ ಈಶ್ವರನೆನ್ಱುಮ್ ಶೊಲ್ಲುಹಿರ ಸಾಮ್ಯೈಕ್ಯೋತ್ತೀರ್ಣವ್ಯಕ್ತ್ಯನ್ತರಪಕ್ಷಙ್ಗಳ್ ಘಟಿಯಾದು.

ಲಕ್ಷ್ಮೀವಿಶಿಷ್ಟನೆಂಬುದು 'ಶ್ರದ್ಧಯಾದೇವೋ ದೇವತ್ವಮಶ್ನುತೇ' ಎಂಬ ಶ್ರುತಿಯ ಪ್ರಕಾರ. ಹೇಳಲ್ಪಡುತ್ತದೆ ಆದ್ದರಿಂದ ಜಗತ್ಕಾರಣವು ಲಕ್ಷ್ಮೀನಾರಾಯಣರಿಬ್ಬರಲ್ಲಿಯೂ ಅನ್ವಯಿಸುತ್ತದೆ, ಬ್ರಹ್ಮರುದ್ರಾದಿಗಳು **ಕಾರ್ಯ** ಭೂತರು **ತತೋಽಭವತ್** ಎಂದು ಬ್ರಹ್ಮನಿಂದ ರುದ್ರನು ಸೃಷ್ಟಿಸಲ್ಪಟ್ಟನು ಎಂದು ಹೇಳಿರುವುದರಿಂದ ರುದ್ರನಿಗೆ ಅತ್ಯಂತ ಅವರತ್ವವು ಸೂಚಿತ "ಬ್ರಹ್ಮ ವಿಷ್ಣುರುದ್ರೇಂದ್ರಾಃ ತೇಸರ್ವೇ ಸಂಪ್ರಸೂಯಂತೇ" ಎಂಬ ವಚನದ ಪ್ರಕಾರ ಬ್ರಹ್ಮ ರುದ್ರ ಇಂದ್ರರ ಹಾಗೆ ವಿಷ್ಣುವೂ ಕರ್ಮಪರವಶನಾಗಿ ಹುಟ್ಟುತ್ತಾನೆಯಲ್ಲವೆ ಆದ್ದರಿಂದ ಅವನು ಜಗತ್ಕಾರಣನೆಂದು ಹೇಳುವುದು ಹೇಗೆ ಎಂಬ ಸಂಶಯಕ್ಕೆ ಸಮಾಧಾನವಾಗಿ, ಳ) **ತತಸ್ತ್ವಮಪಿದುರ್ಧರ್ಷಃ** -ಎಂಬ ವಾಕ್ಯದಿಂದ, ಬ್ರಹ್ಮರುದ್ರೇಂದ್ರಾದಿಗಳ ಮಧ್ಯೆ ಮಹಾವಿಷ್ಣುವೂ ಅವತಾರವನ್ನೆತ್ತುತ್ತಾನೆ ಕರ್ಮಪಾರವಶ್ಯದಿಂದ ಹುಟ್ಟುವುದಿಲ್ಲವೆಂದು ಸಮಾಧಾನ ಹೇಳುತ್ತಾರೆ. ತನ್ನ ಸನಾತನವಾದ ಪರರೂಪದಿಂದ ಸರ್ವಭೂತಗಳನ್ನು ರಕ್ಷಿಸಲು ವಿಷ್ಣುವು ಅವತಾರವನ್ನೆತ್ತುತ್ತಾನೆಂಬುದು ತಾತ್ಪರ್ಯ. ದುರ್ಧರ್ಷಃ – **ಅಕರ್ಮವಶ್ಯಃ** – ವಿಷ್ಣುತ್ವಂ – **ಅವತಾರ** ವಿಗ್ರಹವನ್ನು ಉಪಜಗ್ಮಿವಾ**ನ್** – ಹೊಂದಿದ್ದೀಯಾ **ಎಂ**ಬುದು ಅರ್ಥ **ಎನ್‌ಹಿರಪಡಿಯೇ** – ಎಂದು ಹೇಳುವ ಪ್ರಕಾರ. ಸ್ವೇಚ್ಛೆಯಿಂದ **ಅವತಾರ**ವನ್ನೆತ್ತಿ ತ್ರಿಮೂರ್ತಿಗಳ ಮಧ್ಯದಲ್ಲಿ ವಿಷ್ಣು ನಾರಾಯಣ ಶಬ್ದ ವಾಚ್ಯನಾಗಿ, ತನ್ನ **ಪೂರ್ವಾವಸ್ಥೆ**ಯಲ್ಲಿ - **ಅಂ**ದರೆ ಪರರೂಪದಲ್ಲಿ ಸರ್ವಜಗತ್ಕಾರಣ ಭೂತನೆಂದು ಹೇಳುವುದರಿಂದಲೂ, ಅವನೇ ಜಗತ್ಕಾರಣಭೂತನು ಽ **ನಿತ್ಯಂ ಹಿ,** ಎಂದು ಹೇಳುವ ಪ್ರಕಾರ ಅವನೇ **ನಿತ್ಯ**ನೆಂದು ಹೇಳಲ್ಪಡುವುದರಿಂದ**ಲೂ,** ತ್ರಿಮೂರ್ತಿಗಳೂ ಸಮರು, ತ್ರಿಮೂರ್ತಿಗಳೂ ಸೇರಿ ಒಂದೇ ತತ್ವ, ತ್ರಿಮೂರ್ತಿಗಳಿಗಿಂತ ಬೇರೆಯಾದವನು ಈಶ್ವರನೊಬ್ಬನು. ತ್ರಿಮೂರ್ತಿಗಳ ಮಧ್ಯ ವಿಷ್ಣುವಾಗಲಿ, ಬ್ರಹ್ಮನಾಗಲಿ, ರುದ್ರನಾಗಲಿ, ಈಶ್ವರನಾಗಿ**ರ**ಬಹುದು ಎಂದು ಹೇಳತಕ್ಕಂಥ ಸಾಮ್ಯ, ಐಕ್ಯ, ಉತ್ತೀರ್ಣ (ಬೇರೆ), ವ್ಯಕ್ತ್ಯಂತರ (ಮೂವರಲ್ಲೊಬ್ಬ) ಪಕ್ಷಗಳು ಸರಿಯಲ್ಲ

ಳ) ರಾಮಾ (7-101-25)

ಬ್ರಹ್ಮದೇವನು ಶ್ರೀರಾಮಚಂದ್ರನಲ್ಲಿ ವಿಜ್ಞಾಪಿಸುವ ವಚನವಿದು. ಇದಕ್ಕೆ ಪೂರ್ವಭಾವಿಯಾದ ವಚನವು.

'ಪದ್ಮೇ ದಿವ್ಯೇಽರ್ಕಸಂಕಾಶೇ ನಾಭ್ಯಾಮುತ್ಪಾದ್ಯ ಮಾಮಪಿ ।
ಪ್ರಾಜಾಪತ್ಯಂ ತ್ವಯಾಕರ್ಮ ಸರ್ವಂಮಯಿ ನಿವೇಶಿತಮ್ ॥
ಸೋಽಹಂ ಹಂಸನ್ಯಸ್ತ ಭಾರೋ ಹಿ ತಾಮುಪಾಸೇ ಜಗತ್ಪತಿಮ್ ॥'

ಎಂಬುದು ಆದಾಗಿ ನಿನ್ನ (ನಾರಾಯಣನ) ನಾಭಿಕಮಲದಿಂದ ನನ್ನನ್ನು ಸೃಷ್ಟಿಸಿ ನನ್ನಲ್ಲಿ (ಬ್ರಹ್ಮದೇವನಲ್ಲಿ) ಪ್ರಜಾಸೃಷ್ಟಿಕಾರ್ಯವನ್ನು ವಹಿಸಿದೆ ಆ ದೊಡ್ಡ ಭಾರವನ್ನು ವಹಿಸಲು ಬೇಕಾದ ಜ್ಞಾನ ಶಕ್ತಿಗೋಸ್ಕರ ನಾನು ನಿನ್ನನ್ನು ಉಪಾಸನೆ ಮಾಡಿದೆನು ತತ :– ಆ ಉಪಾಸನೆಯ ನಂತರ. ತ್ವಮಪಿ– ಜಗತ್ಕಾರಣನಾದ ನೀನೂ, ದುರ್ಧರ್ಷಃ-ಅಪಿ ಶಬ್ದವನ್ನು ಇಲ್ಲಿಯೂ ಅನ್ವಯಿಸಬೇಕು ಕರ್ಮಪರವಶನಲ್ಲದಿದ್ದರೂ, ನಿನ್ನ ತಸ್ಮಾದ್ಭಾವಾತ್ ಸನಾತನಾತ್-- ಆ ಸನಾತನವಾದ ಪರರೂಪದಿಂದ, ಸರ್ವಭೂತಾನಾಂ ರಕ್ಷಾರ್ಥಂ-- ಸರ್ವಭೂತಗಳನ್ನು ರಕ್ಷಿಸಲು, ವಿಷ್ಣುತ್ವಂ-- ವಿಷ್ಣುವಾಗಿ ಅವತಾರವನ್ನು ಉಪಜಗ್ಮಿವಾನ್-- ಹೊಂದಿದ್ದೀಯೆ (ಆ ವಿಷ್ಣುವೇ ನೀನು ಎಂದು ಭಾವ).

ಪು ತಿ ನೊ.

ಬ್ರಹ್ಮರುದ್ರಾದಿಹಳ್ ಸರ್ವೇಶ್ವರ ಕಾರ್ಯಭೂತತ್ವಕಥನಂ

ಬ್ರಹ್ಮರುದ್ರಾದಿಹಳ್ ಸರ್ವೇಶ್ವರನುಕ್ಕು ಕಾರ್ಯಭೂತರೆನ್ನುಮಿಡವ್,
[2] "ತದ್ವಿಸೃಷ್ಟಸ್ಸಪುರುಷೋ ಲೋಕೇ ಬ್ರಹ್ಮೇತಿ ಕೀರ್ತ್ಯತೇ ।" ಇತ್ಯಾದಿಹಳಾಲುವ್,
[3] "ಸಂಕ್ಷಿಪ್ಯಚ ಪುರಾಲೋಕಾನ್ಮಾಯಯಾ ಸ್ವಯಮೇವಹಿ ।
ಮಹಾರ್ಣವೇ ಶಯಾನೋಽಪ್ಸುಮಾಂತ್ವಂ ಪೂರ್ವಮಜೀಜನಃ ॥"
4 "ಕ ಇತಿ ಬ್ರಹ್ಮಣೋ ನಾಮ ಈಶೋಽಹಂ ಸರ್ವದೇಹಿನಾಂ ।
ಆವಾಂ ತವಾಙ್ಗೇ ಸಂಭೂತೌ ತಸ್ಮಾತ್ಕೇಶವ ನಾಮವಾ ॥"
5 "ಅಹಂ ಪ್ರಸಾದಜಸ್ತಸ್ಯ ಕಸ್ಮಿಂಶ್ಚಿತ್ ಕಾರಣಾನ್ತರೇ ।
ತ್ವಂಚೈವ ಕ್ರೋಧಜಸ್ತಾತ ಪೂರ್ವಸರ್ಗೇ ಸನಾತನೇ (ನಃ) ॥"
ಎನ್ರೈದಿರಿ ಕೈಯಾಲೇ ವಿಡುತೀಟ್ಟಾನ ಪಡಿಯೇ ಅವರ್‌ಹಳ್ ತಙ್ಗಳ್ ಪಾಶುರಙ್ಗಳಾಲೇ ಸಿದ್ಧವ್.

ಇವರ್‌ಹಳ್ ಕರ್ಮವಶ್ಯರಾಯ್ ಶಿಲಕರ್ಮ ವಿಶೇಷಂಗಳಾಲೇ ಸರ್ವೇಶ್ವರನ್ನೈ ಆರಾಧಿತ್ತು ತಂತಾಮ್ ಪದಂಗಳ್ ಪೆಟ್ರಾರ್‌ಹಳೆನ್ನುಮಿಡಂ (6) "ಸರ್ವೇ ದೇವಾ ವಾಸುದೇವಂ ಯಜಂತೇ ।
ಸರ್ವೇ ದೇವಾವಾಸುದೇವಂ ನಮನ್ತೇ॥"

ಬ್ರಹ್ಮರುದ್ರಾದಿಗಳ ಕಾರ್ಯತ್ವ ಕರ್ಮವಶ್ಯತ್ವ ಕಥನ

ಬ್ರಹ್ಮರುದ್ರರುಗಳಿಗೆ ಕಾರ್ಯತ್ವವನ್ನು ತಿಳಿಸುವ ಪ್ರಮಾಣಗಳನ್ನು, **ಬ್ರಹ್ಮರುದ್ರಾದಿಗಳ್** ಎಂದಾರಂಭಿಸಿ ತಿಳಿಸುತ್ತಾರ. ಅದಾಗಿ ಬ್ರಹ್ಮರುದ್ರೇಂದ್ರಾದಿಗಳು ಸರ್ವೇಶ್ವರನಿಗೆ ಕಾರ್ಯಭೂತರು ಅವನಿಂದ ಸೃಷ್ಟಿಸಲ್ಪಟ್ಟವರು, ಎಂಬುವುದು, [2]"**ತದ್ವಿಸೃಷ್ಟಸ್ಸ** ಇತ್ಯಾದಿ ತಟಸ್ಥ ವಾಕ್ಯಗಳಿಂದ ಸ್ಪಷ್ಟ. ತದ್ವಿಸೃಷ್ಟಃ – ಆ ಭಗವಂತನಿಂದ ಸೃಷ್ಟಿಸಲ್ಪಟ್ಟವನು ಲೋಕದಲ್ಲಿ ಬ್ರಹ್ಮನೆಂದು ಹೇಳಲ್ಪಡುತ್ತಾನೆ, ಇತ್ಯಾದಿ ವಾಕ್ಯಗಳು [3]**ಸಂಕ್ಷಿಪ್ಯಚ ಇತ್ಯಾದಿ**– ಪುರಾ–ಆರಂಭದಲ್ಲಿ ಲೋಕಗಳನ್ನೆಲ್ಲಾ **ಮಾಯಯಾ** – ತನ್ನ ಸಂಕಲ್ಪರೂಪಜ್ಞಾನದಿಂದ ತನ್ನಲ್ಲಿ ಅಡಗಿಸಿಕೊಂಡು ಮಹಾರ್ಣವದ ನೀರಲ್ಲಿ ಮಲಗಿದವನಾಗಿ ನನ್ನನ್ನು ನೀನು ಮೊದಲು ಸೃಷ್ಟಿಸಿದೆ, ಎಂದು ಚತುರ್ಮುಖನು ತಾನೇ ಮಹಾ ವಿಷ್ಣು ರೂಪಿಯಾದ ರಾಮಚಂದ್ರನಲ್ಲಿ ಹೇಳುತ್ತಾನೆ, ([4])**ಕಇತಿ ಬ್ರಹ್ಮಣೋನಾಮ**–ಇತ್ಯಾದಿ **ಕಃ** ಎಂಬುದು ಚತುರ್ಮುಖನನ್ನು ಹೇಳುತ್ತದೆ **ಈಶೋಽಹಂಸರ್ವದೇಹಿನಾಮ್** – ಎಂದು ಸರ್ವಪ್ರಾಣಿಗಳಿಗೂ ನಾನು ಈಶ್ವರನು - **ಆವಾಂ ತವಾಂಗೇ ಸಂಭೂತೌ** – ನಾವಿಬ್ಬರೂ ನಿನ್ನ ಶರೀರದಿಂದ ಉಂಟಾದವರು, **ತಸ್ಮಾತ್ ಕೇಶವ ನಾಮವಾನ್** – ಆದ್ದರಿಂದ ನೀನು ಕೇಶವನೆಂಬ ಹೆಸರುಳ್ಳವನೆಂದು, ರುದ್ರನೇ ಹೇಳುವ ಮಾತು. [5] **ಅಹಂ ಪ್ರಸಾದ ಜಃ** ಇತ್ಯಾದಿ–ನಾನು (ಬ್ರಹ್ಮದೇವನು) ಒಂದು ಕಾರಣಾಂತರದಿಂದ ಅವನ (ಭಗವಂತನ) ಅನುಗ್ರಹದಿಂದ ಹುಟ್ಟಿದವನು. ನೀನು (ರುದ್ರನು) ಪೂರ್ವ ಸೃಷ್ಟಿಯಲ್ಲಿ ಆ ಸನಾತನನಾದ ಭಗವಂತನ ಕೋಪದಿಂದ ಹುಟ್ಟಿದವನು. ಈ ಎರಡು ವಾಕ್ಯಗಳೂ **ಎದಿರಿ ಕೈಯಾಲೇ**– ಮಹಾವಿಷ್ಣುವಿನೊಡನೆ ಪರತ್ವಕ್ಕೆ ವಾದ ಮಾಡುವ ಪ್ರತಿವಾದಿಗಳಾದ ಬ್ರಹ್ಮರುದ್ರರ ಕೈಯಿಂದಲೇ **ವಿಡುತ್ತೀಟ್ಟಾನಪಡಿಯೇ**– ಪ್ರತಿವಾದಿಯು ಬರೆದು ಕೊಡಲ್ಪಟ್ಟ **ಸಾಲದಿಂದ** ಬಿಡಿಸಿ ಕೊಳ್ಳುವ ಚೀಟಿಯ ಹಾಗೆ, ಅವರುಗಳ ಮಾತಿನಿಂದಲೂ ಅವರು ಕಾರ್ಯಭೂತರೆಂಬುದು ಸಿದ್ಧವಾಯಿತು. **ಇವರ್ ಹಳ್‌ಕರ್ಮವಶ್ಯರಾಯ್** – ಇವರುಗಳು ಕರ್ಮಪರವಶರಾಗಿ ಕೆಲವು ಕರ್ಮವಿಶೇಷಗಳಿಂದ ಸರ್ವೇಶ್ವರನನ್ನು ಆರಾಧಿಸಿ ತಮ್ಮ ತಮ್ಮ ಪದವಿಗಳನ್ನು ಹೊಂದಿದರೆಂಬುದು, [6] **ಸರ್ವೇದೇವಾ–ಇತ್ಯಾದಿ** ವಚನಗಳಿಂದ ಪ್ರಸಿದ್ಧ

---

೫) ತಂ-ನಿತ್ಯ ದಿವ್ಯಮಂಗಳ ವಿಗ್ರಹದಿಂದ ಕೂಡಿದವನಾಗಿ ಪ್ರಸಿದ್ಧನಾದ, ಸನಾತನಂ-ಸರ್ವಜಗತ್ಕಾರಣ ಭೂತನಾದ, ವಾಸುದೇವಂ ಋತೇ-ವಾಸುದೇವನನ್ನು ಬಿಟ್ಟು, ಜಗತಿ ಲೋಕದಲ್ಲಿ, ಸ್ಥಾವರ ಜಗಮಂ ಭೂತಂ-ಸ್ಥಾವರ ಜಗಮಾತ್ಮಕವಾದ ಭೂತಗಳು, ನಿತ್ಯಂ ನಾಸ್ತಿಹಿ ನಿತ್ಯವಾಗಿಲ್ಲ ಅನಿತ್ಯಗಳು, ಇದರಿಂದಾಗಿ ಅವು ಸೃಷ್ಟಿಸಲ್ಪಡತಕ್ಕವು ಎಂದರ್ಥ,

2) ಮನುಸ್ಮೃತಿ 1-11' (3) ರಾಮಾ ಉತ್ತ. (7-104-14).
4) ಹರಿವಂಶ 3-131-48 (5) ಭಾ, ಶಾ. 352-62

2) ಸ ಬ್ರಹ್ಮಕಾಸ್ಸರುದ್ರಾಶ್ಚ ಸೇಂದ್ರಾ ದೇವಾ ಮಹರ್ಷಯಃ ।
ಅರ್ಚಯಂತಿ ಸುರಶ್ರೇಷ್ಠಂ ದೇವಂ ನಾರಾಯಣಂ ಹರಿಮ್ ॥

3) ಚಿಂತಯಂತೋಹಿ ಯಂ ನಿತ್ಯಂ ಬ್ರಹ್ಮೇಶಾನಾದಯಃ ಪ್ರಭುಮ್ ।
ನಿಶ್ಚಯಂ ನಾಧಿಗಚ್ಛಂತಿ ತಮಸ್ಮಿ ಶರಣಂ ಗತಃ ॥

4) ಪದ್ಮೇ ದಿವ್ಯೇಽರ್ಕಸಂಕಾಶೇ ನಾಭ್ಯಾಮುತ್ಪಾದ್ಯ ಮಾಮಪಿ ।
ಪ್ರಾಜಾಪತ್ಯಂ ತ್ವಯಾಕರ್ಮ ಸರ್ವಂ ಮಯಿ ನಿವೇಶಿತಂ ॥
ಸೋಹಂ ಸನ್ನ್ಯಸ್ತ ಭಾರೋಹಿ ತ್ವಾಮುಪಾಸೇ ಜಗತ್ಪತಿಂ ॥

5) ಯುಗ ಕೋಟಿ ಸಹಸ್ರಾಣಿ ವಿಷ್ಣು ಮಾರಾಧ್ಯ ಪದ್ಮಭೂಃ॥
ಪುನಸ್ತ್ರೈ ಲೋಕ್ಯ ಧಾತೃತ್ವಂ ಪ್ರಾಪ್ತವಾನಿತಿ ಶುಶ್ರುಮ॥

ಅದಾಗಿ 1) ಎಲ್ಲಾದೇವತೆಗಳೂ ವಾಸುದೇವನನ್ನು ಪೂಜಿಸುತ್ತಾರೆ, ವಾಸುದೇವನನ್ನು ನಮಸ್ಕರಿಸುತ್ತಾರೆ **ಸರ್ವೇದೇವಾ ವಾಸುದೇವಾತ್ಪ್ರಸೂತಾಃ ಸರ್ವೇಷಾಂವ್ವೈ ವಾಸುದೇವೋಽಧಿದೈವಮ್** ॥ ಇದು ಉತ್ತರಾರ್ಧ. ಎಲ್ಲಾ ದೇವತೆಗಳೂ ವಾಸುದೇವನಿಂದ ಉಂಟಾದವರು. ಎಲ್ಲರಿಗೂ ವಾಸುದೇವನೇ ದೇವರು. ಇಲ್ಲಿ ಸರ್ವ ಶಬ್ದವು ವಾಸುದೇವನನ್ನು ಬಿಟ್ಟು ಬ್ರಹ್ಮ ಮೊದಲಾದ ಎಲ್ಲಾ ದೇವತೆಗಳನ್ನೂ ತಿಳಿಸುತ್ತದೆ ಇದರಿಂದ ಬ್ರಹ್ಮರುದ್ರಾದಿಗಳೂ ವಾಸುದೇವನಿಂದ ಉಂಟಾದವರು ಎಂಬುದು ವ್ಯಕ್ತ 2) **ಸ ಬ್ರಹ್ಮಕಾಃ**–ಬ್ರಹ್ಮ, ರುದ್ರ, ಇಂದ್ರ, ದೇವತೆಗಳೂ, ಮಹರ್ಷಿಗಳೂ ಸುರಶ್ರೇಷ್ಠರೂ, ದೇವನೂ ಆದ(ಲಕ್ಷ್ಮೀವಿಶಿಷ್ಟನಾದ) ನಾರಾಯಣನೆಂಬ ಹರಿಯನ್ನು ಅರ್ಚಿಸುತ್ತಾರೆ ದೇವತೆಗಳ ಹಾಗೆ ಬ್ರಹ್ಮರುದ್ರಾದಿಗಳೂ ಶ್ರೀಹರಿಯನ್ನು ಪೂಜಿಸುತ್ತಾರೆಂಬುದು ತಾತ್ಪರ್ಯ 3) ಬ್ರಹ್ಮ, ರುದ್ರ, ಮೊದಲಾದವರು ಯಾವ ಪ್ರಭುವಾದ ನಾರಾಯಣನನ್ನು ನಿತ್ಯವೂ ಧ್ಯಾನ ಮಾಡಿಕೊಂಡಿದ್ದರೋ, ಅವನ ಸ್ವರೂಪ ಸ್ವಭಾವಗಳು ಇಂಥಹವು ಎಂಬ ನಿಶ್ಚಯವನ್ನು ಹೊಂದಲಿಲ್ಲವೊ, ಅಂಥಹ ಭಗವಂತನನ್ನು ನಾನು ಶರಣು ಹೊಂದುತ್ತೇನೆ. ಇದರಿಂದ ಬ್ರಹ್ಮರುದ್ರಾದಿಗಳೂ **ನಿತ್ಯವೂ** ಭಗವಧ್ಯಾನ ರೂಪ ಕರ್ಮಾನುಷ್ಠಾನ ಪರರು. "**ನಿಶ್ಚಯಂ** ನಾಧಿಗಚ್ಛಂತಿ", ಎಂಬ ವಚನದಿಂದ ಪರಿಪೂರ್ಣ ಜ್ಞಾನ ವಿರೋಧಿ ಪಾಪವು ತೊಲಗಲಿಲ್ಲ, ಕರ್ಮಪರವಶರು ಎಂಬುದು ವ್ಯಕ್ತ 4) ಪದ್ಮೇದಿವ್ಯೇಽರ್ಕಸಂಕಾಶೇ- ಎಲೈ ರಾಮಚಂದ್ರನೇ ನಿನ್ನ ನಾಭೀಕಮಲದಿಂದ ಉಂಟಾದ, ನಿತ್ಯವಾದ ಮತ್ತು ಸೂರ್ಯನ ಕಾಂತಿಗೆ ಸದೃಶವಾದ ಪದ್ಮದಲ್ಲಿ ನನ್ನನ್ನೂ (ಬ್ರಹ್ಮದೇವನನ್ನು) ಸೃಷ್ಟಿ ಮಾಡಿ ಪ್ರಜಾಪತಿಯು ಮಾಡಲರ್ಹವಾದ ಕಾರ್ಯವೆಲ್ಲವನ್ನೂ ನನ್ನಲ್ಲಿ ವಹಿಸಿದೆ ಅಂಥಹ ನಾನು ಆ **ಪ್ರಾಜಾಪತ್ಯ**ಕರ್ಮಭಾರವನ್ನು ವಹಿಸಿ, ಜಗತ್ಪತಿಯಾದ ನಿನ್ನನ್ನು **ಉಪಾಸನೆ** ಮಾಡುತ್ತೇನೆ ಇದು ಶ್ರೀರಾಮಚಂದ್ರನಲ್ಲಿ ಬ್ರಹ್ಮದೇವನು ಹೇಳುವ ಮಾತು. ಇದರಿಂದ ಬ್ರಹ್ಮದೇವನು **ಕಾರ್ಯಭೂತನು** "ಸೋಽಹಂ ಸನ್ನ್ಯಸ್ತಭಾರೋಹಿ ತ್ವಾಮುಪಾಸೇ", **ಎಂಬುದರಿಂದ ಕರ್ಮಪರ**ವಶನುಎಂಬುದು ದ್ಯೋತಿತ 5) **ಪದ್ಮ**ದಲ್ಲಿ ಉಂಟಾದ ಬ್ರಹ್ಮದೇವನು ಕೋಟಿಯುಗಕಾಲ ವಿಷ್ಣುವನ್ನು ಆರಾಧನೆ ಮಾಡಿ ತಿರುಗಿಯೂ ಮೂರುಲೋಕವನ್ನೂ ಸೃಷ್ಟಿಸುವ **ಅಧಿಕಾರವನ್ನೂ** ಹೊಂದಿದನು ಇದರಿಂದ ಒಬ್ಬ ಬ್ರಹ್ಮದೇವನು ಮೋಕ್ಷದಲ್ಲಿ ಅಭಿಲಾಷೆಯಿಲ್ಲದೆ ಸ್ವಸ್ಥಾನದಲ್ಲೇ ರೂಢನಾಗಿರಬೇಕೆಂಬ ಆಸೆಯಿಂದ ತಪಸ್ಸುಮಾಡಿ ಅದನ್ನೇ ಪಡೆದನು ಎಂದು ಹೇಳುವುದರಿಂದ ಪ್ರಕೃತಿ ಪ್ರಾಕೃತ ವಸ್ತುಗಳಲ್ಲಿರುವ ವ್ಯಾಮೋಹವು ಬಿಡದೆ ಇರುವ ಮೋಕ್ಷ ವಿರೋಧಿಪಾಪವು ಆ ಬ್ರಹ್ಮನಲ್ಲಿತ್ತು ಎಂದು ಹೇಳಲ್ಪಡುತ್ತದೆ ವಸುಪದವನ್ನು ಹೊಂದಿದವನೊಬ್ಬನು ಪುನಃ ಅಲ್ಲಿಯೇ ಇರಬೇಕೆಂಬ ಆಸೆಯಿಂದ ಮಧು ವಿದ್ಯೆಯನ್ನು ಅನುಷ್ಠಿಸಬಹುದೆಂದು ಹೇಳುವ "ಮಧು ವಿದ್ಯಾಧಿಕರಣ" ನ್ಯಾಯವು ಇಲ್ಲಿಯೂ **ಸಂಗತ.**

---

(1) ಭಾ ಶಾ 350–30 (2) ಭಾ ಶಾ 210–33
(3) ರಾಮಾ. 7-104-7, 8 (4) ಭಾರ. ಕುಂಡ ಧರ್ಮೋಪಾಖ್ಯಾನಮ್

1) ವಿಶ್ವರೂಪೋ ಮಹಾದೇವ ಸ್ಸರ್ವಮೇಧೇ ಮಹಾಕ್ರತೌ ।
ಜುಹಾವ ಸರ್ವಭೂತಾನಿ ಸ್ವಯಮಾತ್ಮಾನಮಾತ್ಮನಾ ॥
2) ಮಹಾದೇವಸ್ಸರ್ವಮೇಧೇ ಮಹಾತ್ಮಾ ।
ಹುತ್ವಾತ್ಮಾನಂ ದೇವದೇವೋ ಬಭೂವ ॥
ವಿಶ್ವಾನ್ ಲೋಕಾನ್ ವ್ಯಾಪ್ಯ ವಿಷ್ಟಭ್ಯಕೀರ್ತ್ಯಾ ।
ವಿರಾಜತೇ ದ್ಯುತಿಮಾನ್ ಕೃತ್ತಿವಾಸಾಃ ॥
3) ಯೋ ಮೇ ಯಥಾ ಕಲ್ಪಿತವಾನ್ ಭಾಗಮಸ್ಮಿನ್ ಮಹಾಕ್ರತೌ ।
ಸ ತಥಾ ಯಜ್ಞಭಾಗಾರ್ಹೋ ವೇದಸೂತ್ರೇ ಮಯಾಕೃತಃ ॥ ಇತ್ಯಾದಿಹಳಿಲೇ ಪ್ರಸಿದ್ಧಮ್.

ಬ್ರಹ್ಮರುದ್ರಾದೀನಾಂ ಭಗವನ್ಮಾಯಾ ಪಾರತನ್ತ್ರ್ಯಾದಿ ಕಥನಮ್

ಇವರ್ಗಳ್ ಭಗವನ್ಮಾಯಾಪರತನ್ತ್ರರಾಯ್, ಗುಣವಶ್ಯರಾಯ್, ಜ್ಞಾನಸಙ್ಕೋಚವಿಕಾಸವಾನ್ಗಳಾಯ್ ಇರುಪ್ಪಾರ್‌ಹಳೆನ್ನುಮಿಡಂ, ವೇದಾಪಹಾರಾದಿ ವೃತಾಂತಂಗಳಿಲುಮ್,

4) ಬ್ರಹ್ಮಾದ್ಯಾಸ್ಸಕಲಾ ದೇವಾ ಮನುಷ್ಯಾಃ ಪಶವಸ್ತಥಾ ।
ವಿಷ್ಣು ಮಾಯಾ ಮಹಾವರ್ತ ಮೋಹಾ ನ್ಧ ತಮಸಾವೃತಾಃ ॥
5) ಬ್ರಹ್ಮಾ ವಿಶ್ವಸೃಜೋ ಧರ್ಮೋ ಮಹಾನವ್ಯಕ್ತಮೇವಚ ।
ಉತ್ತಮಾಂ ಸಾತ್ತ್ವಿಕೀಮೇತಾಂ ಗತಿಮಾಹುರ್ಮನೀಷಿಣಃ ॥, ಇತ್ಯಾದಿಹಳಿಲುಮ್ ಸುವ್ಯಕ್ತಮ್.

---

1) ವಿಶ್ವರೂಪನಾದ ಮಹಾದೇವನು (ರುದ್ರನು)ಸರ್ವಮೇಧವೆಂಬಯಾಗದಲ್ಲಿ ಸರ್ವವನ್ನೂ ಹೋಮಮಾಡಿ ತನ್ನನ್ನೂ ಹೋಮ ಮಾಡಿಕೊಂಡನು. ಹಾಗೆ ಮಾಡಿಕೊಂಡಿದ್ದರಿಂದ ದೇವ ದೇವ (ಕೈಲಾಸಾಧಿಪತಿ) ನಾದನು. 2) **ವಿಶ್ವಾನ್ ಲೋಕಾನ್ ವ್ಯಾಪ್ಯ** – ಅಂಡಾಂತರ್ವರ್ತಿಯಾದ ಎಲ್ಲಾ ಲೋಕಗಳನ್ನೂ ತನ್ನ ಧರ್ಮಭೂತಜ್ಞಾನದಿಂದ ವ್ಯಾಪಿಸಿ **ದ್ಯುತಿಮಾನ್** ಕಾಂತಿಯುಕ್ತನಾಗಿ **ಕೃತ್ತಿವಾಸಾಃ** ಆನೆಯ ಚರ್ಮವನ್ನು ಹೊಂದಿದವನಾಗಿ, **ವಿರಾಜತೇ** ಪ್ರಕಾಶಿಸುತ್ತಾನೆ ಇದರಿಂದಾಗಿ ವಿಚಿತ್ರ ಕರ್ಮಾನುಷ್ಠಾನಕ್ಕೆ ಹೇತುವಾದ ಕರ್ಮವಶ್ಯತ್ವವು ಹಾಗೆಯೇ ಸ್ಥಾನಪ್ರಾಪ್ತಿಯೂ ಹೇಳಲ್ಪಟ್ಟಿತು 3) **ಯೋಮೇ** – ಇತ್ಯಾದಿ–ಬ್ರಹ್ಮಾದಿಗಳಿಂದ ಅನುಷ್ಠಿಸಲ್ಪಡುವ ಯಾಗಗಳಿಂದ ಪ್ರೀತನಾದ ಭಗವಂತನು ಆಯಾಯಾ ದೇವತೆಗಳಿಗೆ ವರಪ್ರದಾನ ಮಾಡಿರುದು ಈ ವಚನದಿಂದ ಹೇಳಲ್ಪಡುತ್ತದೆ. ಅದಾಗಿ **ಅಸ್ಮಿನ್ ಮಹಾಕ್ರತೌ**–ಈ ದೊಡ್ಡಯಾಗದಲ್ಲಿ **ಮೇ ಭಾಗಂ, ಯಃ ಯಥಾ ಕಲ್ಪಿತವಾನ್**–ನನಗೆ ಭಾಗವನ್ನು ಯಾವನು ಯಾವ ಮಂತ್ರ ದ್ರವ್ಯಾಂಗಾದಿಗಳೊಡನೆ ಮಾಡಿದನೋ-ಅಂದರೆ ಕೊಟ್ಟನೋ ಎಂದರ್ಥ, **ಸ ತಥಾ ಯಜ್ಞಾ ಭಾಗಾರ್ಹಃ** –ತಾದೃಶ ಮಂತ್ರ ದ್ರವ್ಯಾಂಗಗಳೊಡನೆ ಯಜ್ಞದಲ್ಲಿ ಹವಿರ್ಭಾಗವನ್ನು ಪಡೆಯಲು ಅರ್ಹನಾಗುತ್ತಾನೆಂದು **ವೇದಸೂತ್ರೇ** – ವೇದಗಳಲ್ಲಿಯೂ ಆಪಸ್ತಂಬಾದಿ ಸೂತ್ರಗಳಲ್ಲಿಯೂ ವೇದೇ, ಸೂತ್ರೇಚ ಎಂದು ದ್ವಂದ್ವೈಕವದ್ಭಾವ ಸಮಾಸ. **ಮಯಾ ಕೃತಃ** ನನ್ನಿಂದ ಆಜ್ಞಪ್ತನು. ಇದರಿಂದ ಸರ್ವ ದೇವತೆಗಳಿಗೂ ಯಜ್ಞದಲ್ಲಿ ಹವಿರ್ಭಾಗವನ್ನು ಪಡೆಯುವ ಯೋಗ್ಯತೆಯು ಭಗವಂತನಿಂದಲೇ ಕೊಡಲ್ಪಟ್ಟಿತು ಎಂಬುದು ಪ್ರಸಿದ್ಧವಾಯಿತು

ಬ್ರಹ್ಮ ರುದ್ರಾದಿಗಳು ಭಗವಂತನ ಮಾಯಾ ಪರತಂತ್ರರು, ಗುಣವಶ್ಯರು ಜ್ಞಾನಸಂಕೋಚ ವಿಕಾಸ ಯುಕ್ತರು.

ಇವರ್‌ಹಳ್ ಭಗವನ್ಮಾಯಾ –ಇತ್ಯಾದಿ ಈ ಬ್ರಹ್ಮರುದ್ರೇಂದ್ರಾದಿಗಳು ಭಗವಂತನ ಮಾಯೆಗೆ ಪರತಂತ್ರರೂ, ಗುಣವಶ್ಯರೂ ಜ್ಞಾನ ಸಂಕೋಚ ವಿಕಾಸವಂತರೂ ಆಗಿರುತ್ತಾರೆಂಬುದು, ವೇದಾ ಪಹಾರಾದಿ ಆದಿ ಶಬ್ದದಿಂದ ಗುರುಪಾತಕ, ವೃತ್ತಾಂತಗಳಿಂದ ವ್ಯಕ್ತವು ಹಾಗೆಯೇ 4) **ಬ್ರಹ್ಮಾದ್ಯಾಸ್ಸಕಲಾ ದೇವಾಃ**, 5) **ಬ್ರಹ್ಮಾವಿಶ್ವಸೃಜಃ ಧರ್ಮಃ** ಇತ್ಯಾದಿ ವಚನಗಳಿಂದಲೂ ಪ್ರಸಿದ್ಧ.

---

(1) ಭಾರ. ಶಾಂತಿ 8-37 2) ಭಾರ ಶಾಂತಿ 20–12 3) ಭಾರತ ಶಾಂತಿ 349-61 ಪು. ತಿ. ನೋ.

ವೇದಾಪಹಾರ ವೃತ್ತಾಂತವು ಮಹಾಭಾರತ ಶಾಂತಿ ಪರ್ವದಲ್ಲಿ ತಿರುನಾರಾಯಣೀಯದಲ್ಲಿ ಹೇಳಲ್ಪಟ್ಟಿದೆ ಅದಾಗಿ ಬ್ರಹ್ಮದೇವನು ಭಗವಂತನ ನಾಭಿಕಮಲದಲ್ಲಿ ನಾಲ್ಕು ವೇದಗಳನ್ನೂ ಹೇಳುತ್ತಿರುವಾಗ ವಿಗ್ರಹರೂಪದಲ್ಲಿರುವ ಆ ವೇದಗಳನ್ನು, ರಜಸ್ತಮೋಗುಣ ವಿಶಿಷ್ಟರಾದ ಮಧುಕೈಟಭರೆಂಬ ಅಸುರರು ಅಪಹರಿಸಲು, ಬ್ರಹ್ಮದೇವನು ಭಗವಂತನನ್ನು ಪ್ರಾರ್ಥಿಸಲು, ಭಗವಂತನು ಹಯಗ್ರೀವ ರೂಪವನ್ನು ತಾಳಿ ಆ ಅಸುರರನ್ನು ಸಂಹರಿಸಿ ಪುನಃ ಬ್ರಹ್ಮದೇವನಿಗ ವೇದಗಳನ್ನು ತಂದು ಕೊಟ್ಟನೆಂಬ ವೃತ್ತಾಂತ "ವೇದಾಮೇಪರಮಂಚಕ್ಷುಃ, ವೇದಾಮೇಪರವಂಧನಂ, ಅಂಧಕಾರಾ ಇಮೇಲೋಕಾಃ ಜಾತಾ ವೇದೈರ್ವಿವರ್ಜಿತಾಃ" ಎಂದು, ವೇದಗಳೇ ನನಗೆ ಉತ್ಕೃಷ್ಟವಾದ ಧನ, ವೇದವಿಲ್ಲದೆ ಈ ಲೋಕಗಳೆಲ್ಲಾ ಅಂಧಕಾರ ಮಯವಾಗಿವೆ, ಎಂಬ ಬ್ರಹ್ಮದೇವನ ವಾಕ್ಯಗಳಿಂದ ಅವನಿಗೆ ಜ್ಞಾನ ಸಂಕೋಚ ವಿಕಾಸಗಳಿಗೆ ಕಾರಣ ಭೂತವಾದ ಕರ್ಮವಶ್ಯತ್ವವು ಹೇಳಲ್ಪಟ್ಟಿತು.

ಗುರುಪಾತಕ ವೃತ್ತಾಂತ (ಮಾತ್ಸ್ಯಪುರಾಣದಲ್ಲಿದೆ)—ಅದಾಗಿ

ರುದ್ರ ತತಃಕ್ರೋಧಪರೀತೇನ ಸಂರಕ್ತನಯನೇನಚ ।
ವಾಮಾಂಗುಷ್ಠನಖಾಗ್ರೇಣ ಛಿನ್ನಂತಸ್ಯಶಿರೋಮಯಾ ॥

ಬ್ರಹ್ಮಾ : ಯಸ್ಮಾದನಪರಾಧಸ್ಯ ಶಿರಚ್ಛಿನ್ನಂ ತ್ವಯಾಮಮ ।
ತಸ್ಮಾ ಚ್ಛಾಪ ಸಮಾಯುಕ್ತಃ ಕಪಾಲೀ ತ್ವಂ ಭವಿಷ್ಯಸಿ ॥

ರುದ್ರ · ಬ್ರಹ್ಮಹಾ ಕುಲಿತೋ ಭೂತ್ವಾಚರನ್ ತೀರ್ಥಾನಿ ಭೂತಲೇ ।

ಪರಮಶಿವನು ಒಂದಾನೊಂದು ಸಂದರ್ಭದಲ್ಲಿ ಕೋಪದಿಂದ ಬ್ರಹ್ಮದೇವನ ತಲೆಯನ್ನು ತನ್ನ ಎಡಗೈ ಅಂಗುಷ್ಠದಿಂದ ಕತ್ತರಿಸಿದನು. ಆಗ ಬ್ರಹ್ಮದೇವನು "ಅಪರಾಧಿಯಲ್ಲದ ನನ್ನ ತಲೆಯನ್ನು ನೀನು ಕತ್ತರಿಸಿದ್ದರಿಂದ ಬ್ರಹ್ಮಹತ್ಯಾದಿ ದೋಷದಿಂದ ಕೂಡಿದವನಾಗಿ ಕಪಾಲವನ್ನು ಕೈಯಲ್ಲಿ ಹಿಡಿದವನಾಗಿರು, (ಅಂದರೆ ಆ ಬ್ರಹ್ಮ ಕಪಾಲವು (ತಲೆ ಹೋಳು) ರುದ್ರನ ಕೈಯ್ಯನ್ನು ಅಂಟಿ ಕೊಂಡಿತು) ಎಂದು ಶಪಿಸಿದನು ರುದ್ರನು ಆ ಅವಸ್ಥೆಯಲ್ಲಿ ಎಲ್ಲಾ ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡಿಯೂ ಅನೇಕ ಸಾವಿರ ವರ್ಷಗಳ ಕಾಲ ಆ ಪಾಪವು ತೊಲಗದೆ, ಕೊನೆಯಲ್ಲಿ ಪಾರ್ವತಿಯು ಹೇಳಿಕೊಟ್ಟ ರೀತಿಯಲಿ ಬದರಿಕಾಶ್ರಮದಲ್ಲಿ ತಪಸ್ಸು ಮಾಡುತ್ತಿರುವ ಶ್ರೀಮನ್ನಾರಾಯಣನನ್ನು ಶರಣಹೊಂದಿ ಪ್ರಾಣ ಭಿಕ್ಷೆಯನ್ನು ಬೇಡಿಕೊಳ್ಳಲು ಆ ಭಗವಂತನು ರುದ್ರನ ಕೈಯ್ಯಲ್ಲಿದ್ದ ಕಪಾಲವನ್ನು ಬಿಡಿಸಿ ಅವನ ಪ್ರಾಣವನ್ನುಳಿಸಿ ಕೊಟ್ಟನು

ತತ್ರನಾರಾಯಣ ಶ್ರೀಮಾ ಮಯಾಭಿಕ್ಷಾಂ ಪ್ರಯಾಚಿತಃ ।
ಕಪಾಲಂ ಶತಧಾಭಿತ್ವಾ ಕಥಂಚಿದಹಮಾಗತಃ ॥

ಎಂಬುದು ರುದ್ರನ ವಾಕ್ಯ. ಇದರಿಂದಾಗಿ ಬ್ರಹ್ಮ ರುದ್ರಾದಿಗಳು ಕಾಮಕ್ರೋಧ ಪರವಶರು, ಕರ್ಮ ಪರವಶರು, ಜ್ಞಾನಸಂಕೋಚ ವಿಕಾಸದಿಂದ ಕೂಡಿದವರು, ಎಂಬುದು ಸುವ್ಯಕ್ತ.

---

4) ವಿ ಪು 5-30-17 ಬ್ರಹ್ಮನೇ ಆದಿಯಾದ ಎಲ್ಲಾ ದೇವತೆಗಳೂ ಮನುಷ್ಯರೂ ಪಶುಪ್ರಾಣಿಗಳೂ ಮಹಾವಿಷ್ಣುವಿನ ಮಾಯಾ ರೂಪದ ದೊಡ್ಡಸುಳಿಯೆಂಬ ಹಳ್ಳರೂಪವಾದ ಅಂಧ ತಮಸ್ಸಿನಿಂದ ಕೂಡಿದವರು

5) ಮನುಸ್ಮೃತಿ 12-50 ಬ್ರಹ್ಮ, ವಿಶ್ವಸೃಜಃ-ನವ ಪ್ರಜಾಪತಿಗಳು, ಧರ್ಮ ದೇವತೆ, ಮಹತ್ ತತ್ತ್ವ-ಅವ್ಯಕ್ತ ತತ್ತ್ವಗಳಿಗೆ ಅಧಿಷ್ಠಾನ ದೇವತೆಗಳು, ಉತ್ತಮವಾದ ಸಾತ್ವಿಕ ಸ್ಥಾನಗಳೆಂದೂ ಉತ್ಕೃಷ್ಟವಾದ ಪುಣ್ಯವನ್ನು ಮಾಡಿದವರಿಗೆ ಈ ಬ್ರಹ್ಮಾದಿ ಶರೀರಗಳು ಜನ್ಮಾಂತರದಲ್ಲಿ ಲಭಿಸುತ್ತವೆ, ಎಂದೂ ವಿದ್ವಾಂಸರು ಹೇಳುತ್ತಾರೆ

ಬ್ರಹ್ಮರುದ್ರೌ ಶ್ರೀಮಹಾವಿಷ್ಣು ಕಿಙ್ಕರೌ

ಇವರ್ಗಳ್ ತಙ್ಗಳುಕ್ಕು ಅನ್ತರಾತ್ಮಾವಾನ ಅವನ್ಕೊಡುತ್ತ ಜ್ಞಾನಾದಿಹಳೈ ಕ್ಕೊಣ್ಡು ಅವನುಕ್ಕು ಏವಲ್ ತೇವೃ ಶೆಯ್ಗಿಂರಾರೆನ್ನುಮಿಡಮ್

1. ಏತೌದ್ವೌ ವಿಬುಧಶ್ರೇಷ್ಠೌ ಪ್ರಸಾದ ಕ್ರೋಧಜೌ ಸ್ಮೃತೌ ।
ತದಾದರ್ಶಿತ ಪನ್ಥಾನೌ ಸೃಷ್ಟಿ ಸಂಹಾರಕಾರಕೌ ॥ ಎನ್ರು ಶೊಲ್ಲಪ್ಪಟ್ಟದು.

ತಯೋಃ ಶುಭಾಶ್ರಯರಾಹಿತ್ಯಂ

ಇವರ್ಗಳುಕ್ಕು ಶುಭಾಶ್ರಯತ್ವಮಿಲ್ಲೈ ಎನ್ನುಮಿಡತ್ತೈ,
2 ಹಿರಣ್ಯಗರ್ಭೋ ಭಗವಾನ್ ವಾಸವೋಽಥ ಪ್ರಜಾಪತಿಃ ಎನ್ರುತುಡಙ್ಗಿ,
ಅಶುದ್ಧಾಸ್ತೇ ಸಮಸ್ತಾಸ್ತು ದೇಹಾದ್ಯಾಃ ಕರ್ಮಯೋನಯಃ ಎನ್ರುಮ್,
3 ಆಬ್ರಹ್ಮಸ್ತಂಬಪರ್ಯನ್ತಾ ಜಗದನ್ತರ್ವ್ಯವಸ್ಥಿತಾಃ ।
ಪ್ರಾಣಿನಃ ಕರ್ಮಜನಿತ ಸಂಸಾರವಶವರ್ತಿನಃ ॥ ಎನ್ರುಮ್,
4 ಕರ್ಮಣಾಂ ಪರಿಪಾಕತ್ವಾದಾವಿರಿಞ್ಚಾದಮಙ್ಗಳಮ್ ।
ಇತಿ ಮತ್ವಾ ವಿರಕ್ತಸ್ಯ ವಾಸುದೇವಃ ಪರಾಗತಿಃ ॥
ಎನ್ರುಮ್, ಪರಾಶರ ಶೌನಕ ಶುಕಾದಿಹಳ್ ಪ್ರತಿಪಾದಿತ್ತಾರ್ಹಳ್.

ಬ್ರಹ್ಮರುದ್ರಾದಿಗಳಿಗೆ ಅಂತರಾತ್ಮನಾದ ಪರಮಾತ್ಮನೇ ಸೃಷ್ಟಿ ಸಂಹಾರ ಕರ್ತಾ.

ಹಾಗಾದರೆ ಕರ್ಮ ಪರವಶರೂ ಜ್ಞಾನ ಸಂಕೋಚ ವಿಕಾಸಗಳಿಂದ ಕೂಡಿದವರೂ ಆದ ಬ್ರಹ್ಮರುದ್ರರು ಸೃಷ್ಟಿ ಸಂಹಾರ ಕಾರ್ಯಗಳಿಗೆ ಅಧಿಪತಿಗಳೆಂಬುದು ಹೇಗೆ ಎಂಬುದನ್ನು **ಇವರ್ಹಳ್ತಂಗಳುಕ್ಕು** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ. ಅದಾಗಿ ಈ ಬ್ರಹ್ಮರುದ್ರರಿಗೆ ಅಂತರಾತ್ಮನಾದ, ಪರಮಾತ್ಮನು ಕೊಟ್ಟ ಜ್ಞಾನಬಲ ಐಶ್ವರ್ಯಗಳನ್ನು ಪಡೆದು, ಆ ಪರಮಾತ್ಮನ ಆಜ್ಞಾ ರೂಪವಾದ ಸೃಷ್ಟಿ ಸಂಹಾರ ಕಾರ್ಯ ರೂಪವಾದ **ಏವಲ್‌ತೇವೈ**–ಕೈಂಕರ್ಯವನ್ನು, ರಾಜಭೃತ್ಯ ನ್ಯಾಯ ದ ರೀತಿಯಲ್ಲಿ ಮಾಡುತ್ತಾರೆ. **ಅಂತರಾತ್ಮಾವಾಯ್** ಪರಮಾತ್ಮನು ಅಂತರಾತ್ಮನಾಗಿ ಸೃಷ್ಟಿ ಸಂಹಾರಕಾರ್ಯವನ್ನು ಮಾಡುತ್ತಾನೆಂಬುದರಿಂದ, ಸಾಕ್ಷಾತ್ಕರ್ತೃತ್ವವು ಪರಮಾತ್ಮನಿಗೇನೆ ಇವರುಗಳಿಗೆ ಪ್ರಯೋಜ್ಯಕರ್ತೃತ್ವ ಮಾತ್ರ. **ಅವನ್‌ಕೊಡುತ್ತ ಜ್ಞಾನಾದಿಹಳೈಕ್ಕೊಂಡು** ಎಂಬುದರಿಂದ ಬ್ರಹ್ಮರುದ್ರರಿಗೆ ಜ್ಞಾನಾದಿ ಸಂಕೋಚವು ಇದ್ದೂ ಪರಮಾತ್ಮನು ಕೊಟ್ಟ ಜ್ಞಾನಶಕ್ತ್ಯಾದಿಗಳಿಂದ ಸೃಷ್ಟಿ ಸಂಹಾರ ಕಾರ್ಯವನ್ನು ಮಾಡುತ್ತಾರಯೇ ಹೊರತು ಸ್ವತಂತ್ರರಾಗಿಲ್ಲ. **ಏವಲ್‌ತೇವೈ**–ಕಿಂಕರತ್ವ ರಾಜ ಭೃತ್ಯರು ರಾಜನ ಆಜ್ಞಾನುಸಾರವಾಗಿ ನಡೆಯುವಂತೆ, ಬ್ರಹ್ಮ ರುದ್ರರೂ ಪರಮಾತ್ಮನ ಆಜ್ಞಾನುಸಾರ ಅವನಿಗೆ ಕಿಂಕರರಾಗಿ ಸೃಷ್ಟಿ **ಸಂಹಾರ** ಕಾರ್ಯಗಳನ್ನು ಮಾಡುತ್ತಾರೆಂದರ್ಥ. **ಈ ಅರ್ಥವು** [1] **ಏತೌದ್ವೌವಿಬುಧ ಶ್ರೇಷ್ಠೌ** ಎಂಬ ವಚನದಿಂದ ಹೇಳಲ್ಪಟ್ಟಿದೆ

ಬ್ರಹ್ಮ ರುದ್ರೇಂದ್ರಾಗಳಿಗೆ ಶುಭಾಶ್ರಯತ್ವವಿಲ್ಲ

ಅನಂತರ ಇವರುಗಳಿಗೆ ಶುಭಾಶ್ರಯತ್ವವಿಲ್ಲವೆಂದು **ಇವರ್ಹಳುಕ್ಕು** ಎಂದಾರಂಭಿಸಿ ಹೇಳುತ್ತಾರೆ. ಶುಭತ್ವವೆಂದರೆ ಸಂಸಾರ ನಿವರ್ತಕತ್ವ, ಆಶ್ರಯತ್ವವೆಂದರೆ ಯೋಗ ಯುಕ್ತನ ಚಿತ್ತಾಲಂಬನತ್ವವು ಇವರುಗಳಿಗೆ(ಬ್ರಹ್ಮರುದ್ರಾದಿಗಳಿಗೆ) ಶುಭಾಶ್ರಯ ತ್ವವಿಲ್ಲವೆಂಬುದನ್ನು [2] **ಹಿರಣ್ಯಗರ್ಭೋಭಗವಾನ್**, ಎಂದೂ, [3] **ಪ್ರಾಣಿನಃ ಕರ್ಮಜನಿತ** ಎಂದೂ, [4] **ಕರ್ಮಣಾಂ ಪರಿಪಾಕತ್ವಾತ್** ಎಂದೂ ಪರಾಶರ ಶುಕ ಶೌನಕಾದಿಗಳು ಪ್ರತಿಪಾದಿಸಿದ್ದಾರೆ

---

1) ಮಹಾಭಾರತ ಶಾಂತಿ (350-19) ಭಗವಂತನ ಸಂತೋಷದಿಂದಲೂ ಅವನ ಕೋಪದಿಂದಲೂ ಹುಟ್ಟಿದ ಈ ದೇವಶ್ರೇಷ್ಠರಾದ ಬ್ರಹ್ಮರುದ್ರರು ಆ ಭಗವಂತನು ತೋರಿಸಿಕೊಟ್ಟ (ಅವನು ಕೊಟ್ಟ ಜ್ಞಾನ ಶಕ್ತಿಗಳಿಂದ) ರೀತಿಯಲ್ಲಿ ಸೃಷ್ಟಿ ಸಂಹಾರಗಳನ್ನು ಮಾಡುತ್ತಾರೆ **ಷ. ತಿ. ನೋ**

ಬ್ರಹ್ಮರುದ್ರಯೋಃ ಭಗವದಾಶ್ರಿತತ್ವ ಕಥನಮ್

ಇವರ್‌ಹಳುಕ್ಕು ಭಗವಾನಾಶ್ರಯಣೀಯನೆನ್ನುಮಿಡತ್ತೈಯುಮ್ ಭಗವಾನುಕ್ಕೋರಾಶ್ರಯಣೀಯರಿಲ್ಲೈಯೆನ್ನುಮಿಡತ್ತೈಯುಮ್,

೧ ರುದ್ರಂ ಸಮಾಶ್ರಿತಾದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ
ಬ್ರಹ್ಮಾ ಮಾಮಾಶ್ರಿತೋ ರಾಜನ್ನಾಹಂ ಕಞ್ಚಿದುಪಾಶ್ರಿತಃ ॥
ಮಮಾಶ್ರಯೋ ನ ಕಶ್ಚಿತ್ತು ಸರ್ವೇಷಾಮಾಶ್ರಯೋಹ್ಯಹಮ್ ।

ಎನ್ರು ತಾನೇ ಯರುಳಿಚ್ಚೆಯ್ದಾನ್.

ಬ್ರಹ್ಮರುದ್ರಯೋಃ ಭಗವದ್ವಿಭೂತಿತ್ವವರ್ಣನಮ್

ಇವರ್ಹಳ್ ಉಭಯ ವಿಭೂತಿ ನಾಥನಾನ ಸರ್ವೇಶ್ವರನುಕ್ಕು ವಿಭೂತಿಭೂತರೆನ್ನುಮಿಡಂ, ೨) "ಬ್ರಹ್ಮಾದಕ್ಷಾದಯಃ ಕಾಲಃ" ೩, "ರುದ್ರಃಕಾಲಾಂತಕಾದ್ಯಾಶ್ಚ" ಇತ್ಯಾದಿಹಳಿಲೇ, ಮತ್ತುಳ್ಳಾರೋಡು ತುಲ್ಯಮಾಹ ಚೊಲ್ಲಪ್ಪಟ್ಟದು.

ಬ್ರಹ್ಮರುದ್ರಾದಿಗಳು ಭಗವಂತನನ್ನು ಆಶ್ರಯಿಸಿರುವವರು. ಇವರುಗಳಿಗೆ ಭಗವಂತನೇ ಆಶ್ರಯಣೀಯನೆಂಬುದನ್ನೂ, ಭಗವಂತನಿಗೆ ಆಶ್ರಯಣೀಯರಿಲ್ಲವೆಂಬುದನ್ನೂ [1] **ರುದ್ರಂಸಮಾಶ್ರಿತಾದೇವಾಃ** ಎಂದಾರಂಭಿಸಿ ಭಗವಂತನು ತಾನೇ ಕೃಪೆ ಮಾಡಿ ಹೇಳುತ್ತಾನೆ

ಬ್ರಹ್ಮ ರುದ್ರಾದಿಗಳು ಭಗವಂತನ ವಿಭೂತಿ

ಇವರ್‌ಹಳ್ ಇತ್ಯಾದಿ–ಬ್ರಹ್ಮ ರುದ್ರಾದಿಗಳು ಉಭಯ ವಿಭೂತಿನಾಥನಾದ ಸರ್ವೇಶ್ವರನಿಗೆ ವಿಭೂತಿಭೂತರು. ಅವನ ಐಶ್ವರ್ಯ, ಸ್ವತ್ತು ಎಂದರ್ಥ. [2] **ಬ್ರಹ್ಮಾದಕ್ಷಾದಯಃ ಕಾಲ ,** [3] **ರುದ್ರಃಕಾಲಾಂತಕಾದ್ಯಾಶ್ಚ** ಇತ್ಯಾದಿಗಳಲ್ಲಿ ಬ್ರಹ್ಮ ರುದ್ರರುಗಳು ಇತರರೊಡನೆ ಸಮಾನರಾಗಿ ಹೇಳಲ್ಪಟ್ಟಿದ್ದಾರೆ.

ಮುಂದುವರಿದಿದೆ

2) ಭಗವಂತನಾದ ಹಿರಣ್ಯಗರ್ಭನು-ಪೂಜ್ಯ ಗುಣಗಳಿಂದ ಕೂಡಿದ ಚತುರ್ಮುಖನು, ಇಂದ್ರನು, ನವ ಪ್ರಜಾಪತಿಗಳು ಮೊದಲಾದ ದೇವತೆಗಳೆಲ್ಲಾ ಪುಣ್ಯ ಪಾಪ ರೂಪ ಕರ್ಮದಿಂದ ಜನಿಸಿದವರು ಆದ್ದರಿಂದ ಅವರೆಲ್ಲರೂ ಅಶುದ್ಧರು (ವಿ. ಪು. 6-7-56-77)

3) ಬ್ರಹ್ಮ ದೇವನೇ ಆದಿಯಾಗಿ ಚಿಕ್ಕಹುಳ (ಸ್ತಂಬ) ಪರ್ಯಂತ ಜಗತ್ತಿನಲ್ಲಿರುವ ಸರ್ವಪ್ರಾಣಿಗಳೂ ಕರ್ಮದಿಂದ ಉಂಟಾದ ಸಂಸಾರದಲ್ಲಿರುವವರು (ವಿ ಧ 104–23)

4) ಪುಣ್ಯಪಾಪ ರೂಪ ಕರ್ಮ ಪರಿಪಾಕದಿಂದ ಕೂಡಿರುವುದರಿಂದ ಬ್ರಹ್ಮನೇ ಮೊದಲಾಗಿ, ಅಥವಾ ಬ್ರಹ್ಮ ದೇವನ ಪರ್ಯಂತವೆಲ್ಲರೂ ಅಮಂಗಳರು ಎಂದರೆ ಅವರನ್ನು ಧ್ಯಾನಮಾಡುವವರ ಪಾಪಗಳನ್ನು ಹೋಗಲಾಡಿಸತಕ್ಕ ಸಾಮರ್ಥ್ಯವಿಲ್ಲದವರೆಂಬುದು ತಾತ್ಪರ್ಯಾರ್ಥ. ಹೀಗೆ ತಿಳಿದು ಅವರಲ್ಲಿ ಆಸೆಯಿಲ್ಲದವನಿಗೆ, ವಾಸುದೇವನೇ ಉತ್ಕೃಷ್ಟವಾದ ಪ್ರಾಪ್ಯನು (ವಿ ಧ 104-23)

1 ಭಾರ ಆಶ್ವ (118-37, 38) ದೇವತೆಗಳು ರುದ್ರನನ್ನು ಆಶ್ರಯಿಸಿದ್ದಾರೆ ರುದ್ರನು ಬ್ರಹ್ಮ ದೇವನನ್ನು ಆಶ್ರಯಿಸಿದ್ದಾನೆ ಬ್ರಹ್ಮನು ನನ್ನನ್ನು (ಕೃಷ್ಣ ಪರಮಾತ್ಮನನ್ನು) ಆಶ್ರಯಿಸಿದ್ದಾನೆ ನಾನು ಯಾರನ್ನೂ ಆಶ್ರಯಿಸಿಲ್ಲ. ನನಗೆ ಯಾವುದೂ ಆಶ್ರಯವಿಲ್ಲ. ನಾನು ಎಲ್ಲರಿಗೂ ಆಶ್ರಯ ಭೂತನು

2. ಬ್ರಹ್ಮಾದಕ್ಷಾದಯಃ ಕಾಲಃ ತಥೈವಾಖಿಲಜಂತವಃ ।
ವಿಭೂತಯೋ ಹರೇರೇತಾಃ ಜಗತಸೃಷ್ಟಿಹೇತವಃ ॥ (ವಿ. ಪು 1-22-31)

ಚತುರ್ಮುಖ – ಬ್ರಹ್ಮದೇವನೂ, ದಕ್ಷಪ್ರಜಾಪತಿಗಳು–ಓಂ ಸತ್ತು ಜನರು, ಕಾಲವೂ, ಹಾಗೆಯೇ ಸಮಸ್ತ ಪ್ರಾಣಿಗಳೂ ಸಹ ಭಗವಂತನ ವಿಭೂತಿಗಳಾಗಿ, ಪ್ರಪಂಚಕ್ಕೆ ಸೃಷ್ಟಿಕಾರಣರು

3 ರುದ್ರಃಕಾಲಾಂತಕಾದ್ಯಾಶ್ಚ ಸಮಸ್ತಾಶ್ಚೈವಜಂತವಃ ।
ಚತುರ್ಧಾ-ಪ್ರಲಯಾಯೈತಾ ಜನಾರ್ದನವಿಭೂತಯಃ ॥ (ವಿ. ಪು 1-21-33.)

ರುದ್ರನು, ಕಾಲ, ಯಮ ಮೊದಲಾದ ಸಮಸ್ತ ಪ್ರಾಣಿಗಳೂ ನಾಲ್ಕು ವಿಧವಾದ ಪ್ರಳಯಕ್ಕೆ ಕಾರಣ ಭೂತರಾಗಿ ಜನಾರ್ದನನ ವಿಭೂತಿಗಳು.

ಇಪ್ಪಡಿ ವಸ್ತ್ವನ್ತರಙ್ಗಳ್‌ಪ್ಪೋಲೇ ಇವರ್ಗ್ಗಳುಮ್ ಸರ್ವಶರೀರಿಯಾನ ಸರ್ವೇಶ್ವರನುಕ್ಕು ಪ್ರಕಾರ ಭೂತರೆನ್ನು ಮಿಡಂ, ವಸ್ತ್ವನ್ತರಙ್ಗಳುಕ್ಕುಮ್ ಇವರ್‌ಹಳುಕ್ಕುಮ್ ಶೇರ ನಾರಾಯಣಾದಿ ಶಬ್ದ ಸಾಮಾನಾಧಿಕರಣ್ಯತ್ತಾಲೇ ಸಿದ್ಧಮ್.

ಬ್ರಹ್ಮ ರುದ್ರಾದಿಹಳ್ ಭಗವಾನುಕ್ಕು ಶರೀರಮ್-ಭಗವಾನ್ ಆತ್ಮಾ

ಇವರ್ಗ್ಗಳ್ ಶರೀರಮಾಯವನಾತ್ಮಾವಾಯಿರುಕ್ಕಿರಪಡಿಯೈ,

1) "ತವಾನ್ತರಾತ್ಮಾ ಮಮಚ ಯೇಚಾನ್ಯೇ ದೇಹಿ ಸಂಜ್ಞಿತಾಃ

ಸರ್ವೇಷಾಂ ಸಾಕ್ಷಿಭೂತೋಽಸೌ ನಗ್ರಾಹ್ಯಃ ಕೇನಚಿತ್ಕ್ವಚಿತ್", ಎನ್ರು ಬ್ರಹ್ಮಾರುದ್ರನೈಕ್ಕುರಿತ್ತು ಚೊನ್ನಾನ್.

ಇಪ್ಪಡಿವಸ್ತ್ವಂತರಂಗಳ್‌ಪ್ಪೋಲೇ ಇತ್ಯಾದಿ ಹೀಗೆ ದಿಕ್ಪಾಲೇಂದ್ರಾದಿಗಳ ಹೀಗೆ, ಬ್ರಹ್ಮ ರುದ್ರಾದಿಗಳೂ ಸರ್ವ ಶರೀರಿಯಾದ ಸರ್ವೇಶ್ವರನಿಗೆ ಪ್ರಕಾರ ಭೂತರು ಅಪೃಥಕ್ ಸಿದ್ಧ ವಿಶೇಷಣ ಭೂತರು – ಅಂದರೆ ಪ್ರತ್ಯೇಕವಾಗಿ ಇಲ್ಲದವರಾಗಿ ಭಗವಂತನಿಗೆ ಶರೀರ ಭೂತರು ಅವನಿಂದ ಧಾರ್ಯರಾಗಿ ನಿಯಾಮ್ಯರಾಗಿ ಅವನಿಗೇ ಶೇಷ ಭೂತರು ಎಂದರ್ಥ. ಈ ಅರ್ಥವು ವಸ್ತ್ವಂತರಗಳಿಗೂ ಇವರುಗಳಿಗೂ ಸೇರಿಸಿ, ನಾರಾಯಣ, ವಿಶ್ವ ಶಬ್ದಗಳ ಸಾಮಾನಾಧಿ ಕರಣ್ಯದಿಂದ ಸಿದ್ಧಿಸುತ್ತದೆ. ಅದಾಗಿ ವಿಶ್ವಂ ನಾರಾಯಣಂ ದೇವಂ, ವಿಶ್ವಮೇವೇದಂ ಪುರುಷಃ, ಸಬ್ರಹ್ಮಾಸಶಿವ ಸ್ಸೇಂದ್ರಃ, ಬ್ರಹ್ಮಾನಾರಾಯಣಃ, ಶಿವಶ್ಚನಾರಾಯಣಃ ಶಕ್ರಶ್ಚನಾರಾಯಣಃ,ದಿಶಶ್ಚನಾರಾಯಣಃ, ಕಾಲಶ್ಚನಾರಾಯಣಃ ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುಃ ಇತ್ಯಾದಿ ಪ್ರಮಾಣವಾಕ್ಯಗಳಲ್ಲಿ ಬ್ರಹ್ಮರುದ್ರೇಂದ್ರಾದಿಗಳಿಗೂನಾರಾಯಣನಿಗೂ ಸಾಮಾನಾಧಿಕರಣ್ಯವು, ಅಂದರೆ ಅವನೇ ಇವನು ಎಂದು ಹೇಳುವುದರಿಂದ ಸಿದಿಸುತ್ತದೆ ಇದರಿಂದ ಬ್ರಹ್ಮ ಶರೀರಕ ನಾರಾಯಣಃ, ಶಿವಶರೀರಕ ನಾರಾಯಣಃ, ಎಂಬ ಅರ್ಥವು ಸಿದ್ಧಿಸುತ್ತದೆ. ಆದಾಗಿ ಬ್ರಹ್ಮನಿಗೆ ಅಂತರ್ಯಾಮಿ ನಾರಾಯಣನು ಇತ್ಯಾದಿ

ಬ್ರಹ್ಮ ರುದ್ರಾದಿಗಳು ಭಗವಂತನ ಶರೀರ. ಭಗವಂತನು ಆತ್ಮಾ–ಅಂತರ್ಯಾಮಿ

ಇದನ್ನು **ಇವರ್‌ಹಳ್ ಶರೀರಮಾಯ್ ಅವನ್ ಆತ್ಮಾವಾಯ್** ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾಗಿ **ಇವರ್‌ಹಳ್**–ಬ್ರಹ್ಮ ರುದ್ರಾದಿಗಳು ಶರೀರವಾಗಿ, ಭಗವಂತನು ಆತ್ಮಾವಾಗಿ ಅಂದರೆ ಅಂತರ್ಯಾಮಿ ಯಾಗಿರುವ ರೀತಿಯನ್ನು, [1] **ತವಾಂತರಾತ್ಮಾಮಮಚ,** ಇತ್ಯಾದಿ ವಾಕ್ಯಗಳಿಂದ ಬ್ರಹ್ಮದೇವನು ರುದ್ರನನ್ನು ಕುರಿತು ಹೇಳಿದನು.

---

1) ಭಾರತ ಶಾಂತಿಪರ್ವ (361–4) ನಿನಗೆ (ರುದ್ರನಿಗೆ) ಆತ್ಮಾ, ನನಗೂ (ಬ್ರಹ್ಮ) ಸಹ ಆ ಭಗವಂತನು ಆತ್ಮಾ, ದೇಹವನ್ನು ಪಡೆದಿರುವ ಎಲ್ಲರಿಗೂ ಆತ್ಮಾ ಎಲ್ಲರಿಗೂ ಸಾಕ್ಷಿಭೂತನು. ಅಂದರೆ ಎಲ್ಲರ ವ್ಯಾಪಾರಗಳನ್ನೂ ನೋಡಿಕೊಂಡಿರುವವನು ಯಾರಿಂದಲೂ, ಯಾವಾಗಲೂ, ತಿಳಿಯಲಾಗದವನು ಇದು ರುದ್ರನನ್ನು ಕುರಿತು ಬ್ರಹ್ಮನು ಹೇಳಿದ ವಚನ ಇಲ್ಲಿ ಅಸೌ ಎಂದು ನಾರಾಯಣನನ್ನು ಹೇಳುತ್ತದೆ. ಹೇಗೆಂದರೆ, ಮೇಲೆ

ತತ್ರಯಃ ಪರಮಾತ್ಮಾತು ಸನಿತ್ಯೋ ನಿರ್ಗುಣಃಸ್ಮೃತಃ ।
ಸಹಿ ನಾರಾಯಣೋಜ್ಞೇಯಃಸ ಆತ್ಮಾಪುರುಷೋಹಿಸಃ ॥ ಎಂದು ಹೇಳಿದ್ದಾರೆ.

ಬ್ರಹ್ಮರುದ್ರಯೋಃ ಶ್ರೀಮನ್ನಾರಾಯಣ ಶೇಷತ್ವಂ

ಇವರ್‌ಹಳ್ ಶೇಷಭೂತರ್, ಅವರ್ ಶೇಷಿ ಎನ್ನುಮಿಡತ್ತೈ,

1) "ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ ।
ಅತೋಽಹಮಪಿತೇ ದಾಸ ಇತಿ ಮತ್ವಾ ನಮಾಮ್ಯಹಮ್ ॥"

ಎನ್ರು ಮನ್ತ್ರರಾಜ ಪದಸ್ತೋತ್ರತ್ತಿಲೇ ಸರ್ವಜ್ಞನಾನ ರುದ್ರನ್ ತಾನೇ ಶೊನ್ನಾನ್.

ನಾರಾಯಣಸ್ಯ ನಿಸ್ಸಮಾಭ್ಯಧಿಕತ್ವವರ್ಣನಮ್

ಇಪ್ಪಡಿ ಸರ್ವಪ್ರಕಾರತ್ತಾಲುಮ್ ನಾರಾಯಣನ್ ಸಮಾಧಿಕದರಿದ್ರನೆನ್ನುಮಿಡತ್ತೈ

2 "ನಪರಂ ಪುಂಡರೀಕಾಕ್ಷಾದ್ದೃಶ್ಯತೇ ಪುರುಷರ್ಷಭ"

3 "ಪರಂ ಹಿ ಪುಂಡರೀಕಾಕ್ಷಾನ್ನಭೂತಂ ನ ಭವಿಷ್ಯತಿ"

4 "ನ ವಿಷ್ಣೋಃ ಪರಮೋ ದೇವೋ ವಿದ್ಯತೇ ನೃಪಸತ್ತಮ"

5 "ನ ವಾಸುದೇವಾತ್ಪರಮಸ್ತಿ ಮಂಗಳಂ ।
ನ ವಾಸುದೇವಾತ್ಪರಮಸ್ತಿ ಪಾವನಂ ॥
ನ ವಾಸುದೇವಾತ್ಪರಮಸ್ತಿ ದೈವತಂ ।
ನ ವಾಸುದೇವಂ ಪ್ರಣಿಪತ್ಯ ಸೀದತಿ ॥"

6 "ತ್ರೈಲೋಕ್ಯೇ ತಾದೃಶಃ ಕಶ್ಚಿನ್ನಜಾತೋ ನ ಜನಿಷ್ಯತೇ" 7 "ನ ದೈವಂ ಕೇಶವಾತ್ಪರಂ"

8 ರಾಜಾಧಿರಾಜಸ್ಸರ್ವೇಷಾಂ ವಿಷ್ಣುರ್ಬ್ರಹ್ಮಮಯೋಮಹಾನ್ ।
ಈಶ್ವರಂ ತಂವಿಜಾನೀಮಸ್ಸಪಿತಾ ಸಪ್ರಜಾಪತಿಃ ॥

ಇತ್ಯಾದಿಹಳಾಲೇ ಪಲಪಡಿಯುಮ್ ಶೊನ್ನಾರ್‌ಹಳ್

ಶೇಷ ಶೇಷಿಭಾವ

ಇವರ್‌ಹಳ್—ಇತ್ಯಾದಿ ಈ ಬ್ರಹ್ಮ ರುದ್ರಾದಿಗಳು ಭಗವಂತನಿಗೆ ಶೇಷಭೂತರು ಅವನು ಶೇಷಿ ಎಂಬುವುದನ್ನು (1) **ದಾಸಭೂತಾಃಸ್ವತಸ್ಸರ್ವೇ**—ಎಂದಾರಂಭಿಸಿ, ಮಂತ್ರರಾಜಪದಸ್ತೋತ್ರದಲ್ಲಿ ಸರ್ವಜ್ಞನಾದ ರುದ್ರನು ತಾನೇ ಹೇಳಿದನು **ಮಂತ್ರರಾಜ**—ನೃಸಿಂಹಾನುಷ್ಟುಪ್ ಮಂತ್ರ. ಇದರ ಪ್ರತಿಪದಗಳಿಗೂ ಒಂದೊಂದು ಶ್ಲೋಕವನ್ನು, "ವೃತ್ತೋತ್ಫುಲ್ಲವಿಶಾಲಾಕ್ಷಂ" **ಎಂದಾರಂಭಿಸಿ** ಪರಮಶಿವನು ಅನುಸಂಧಾನ ಮಾಡಿರುತ್ತಾನೆ. **"ಸರ್ವಜ್ಞನಾನ"** ಎಂದು ಹೇಳುವುದರಿಂದ, ವಿಷ್ಣುಪುರಾಣ, ಮಹಾಭಾರತ ವಚನಗಳ ಹಾಗೆ ಇದವೂ ಆಪ್ತತಮ ಪ್ರಣೀತವಾದ್ದರಿಂದ ವಿಶ್ವಸನೀಯ **ರುದ್ರನ್ ತಾನೇ ಶೊನ್ನಾನ್**, ಎಂದು **ಹೇಳಿರುವುದರಿಂದ**, ವಿವಾದ ವಿಷಯನಾದ ರುದ್ರನೇ ಬರೆದುಕೊಟ್ಟ 'ಬಿಡುಗಡೆ ಚೀಟಿ' ಎಂದು ಜ್ಞಾಪಿಸಲ್ಪಡುತ್ತದೆ **ಸರ್ವಪ್ರಕಾರತ್ತಾಲುಂ**,—ಸರ್ವಜಗತ್ಕಾರಣತ್ವ, ನಿತ್ಯವಿಗ್ರಹ ವಿಶಿಷ್ಟತ್ವ, ಬ್ರಹ್ಮ ರುದ್ರಜನಕತ್ವ, ತತ್ಪದ ಪ್ರಷ್ಟ, [illegible] ಮೋಕ್ಷಪ್ರದತ್ವ, ಇದೇ ಮೊದಲಾದ ರೀತಿಗಳು ವಿವಕ್ಷಿತ

ನಾರಾಯಣನು ಸಮಾಧಿಕ ದರಿದ್ರನು

ಹೀಗೆ ಸರ್ವಪ್ರಕಾರದಿಂದಲೂ ನಾರಾಯಣನು **ಸಮಾಧಿಕದರಿದ್ರನ್**—ತನಗೆ ಸಮರೂ ಮೇಲಾದವರೂ ಇಲ್ಲದೆ ಇರುವವನು ಎಂಬುವುದನ್ನು (2) **ನಪರಂಪುಂಡರೀಕಾಕ್ಷಾತ್** (5) **ನವಾಸುದೇವಾತ್ಪರಮಸ್ತಿ** **6) ತ್ರೈಲೋಕ್ಯೇತಾದೃಶೋಕಶ್ಚಿತ್, 7)ನ ದೈವಂ ಕೇಶವಾತ್ಪರಂ ಇತ್ಯಾದಿ 8)ರಾಜಾಧಿರಾಜಸ್ಸರ್ವೇಷಾಂ**

---

1) ಮಂತ್ರರಾಜಪದಸ್ತೋತ್ರ, ಎಲ್ಲಾ ಆತ್ಮರುಗಳು ಪರಮಾತ್ಮನಿಗೆ ಸ್ವತಃ – ಸ್ವೇಚ್ಛೆಯಿಂದಿಲ್ಲದೆ ಸ್ವರೂಪದಿಂದಲೇ, ದಾಸಭೂತರು, ಆದ್ದರಿಂದ ನಾನೂ ನಿನಗೆ ದಾಸಭೂತನು. ಹೀಗೆ ತಿಳಿದುಕೊಂಡು ನಿನ್ನ ಪಾದಗಳಲ್ಲಿ (ನಮಾಮಿ) ಶರಣು ಹೊಂದುತ್ತೇನೆ

ಪು. ತಿ ನೋ

ಜನನ ಕಾಲತ್ತಿಲ್, ಭಗವತ್ಕಟಾಕ್ಷಂ ಮೋಕ್ಷಸಾಧಕಂ, ಬ್ರಹ್ಮರುದ್ರ ಕಟಾಕ್ಷಂ ಬನ್ಧನತ್ತಿರ್ಕ್ಕು ಕ್ಕಾರಣಮ್

ಕರುವಿಲೇ ತಿರುವುಡೈಯಾರ್‌ಹಳಾಯ್ ಜಾಯಮಾನ ದಶೈಯಿಲೇ ರಜಸ್ತಮಃ ಪ್ರಶಮ ಹೇತುವಾನ ಮಧುಸೂದನ ನುಡೈಯ ಕಟಾಕ್ಷಮುಡೈಯವರ್ಗಳ್ ಮುಮುಕ್ಷುಕ್ಕಳಾವಾರ್ಗಳೆನ್ನುಮಿಡಮುಮ್, ಬ್ರಹ್ಮರುದ್ರ ದೃಷ್ಟರಾನವರ್ಗಳ್ ರಜಸ್ತಮಃ ಪರತನ್ತ್ರರಾವರ್‌ಹಳೆನ್ನು ಮಿಡಮುಮ್,

9 "ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ವಿಕಸ್ಸತು ವಿಜ್ಞೇಯಃ ಸವೈ ಮೋಕ್ಷಾರ್ಥಚಿನ್ತಕಃ ॥
ಪಶ್ಯತ್ಯೇನಂ ಜಾಯಮಾನಂ ಬ್ರಹ್ಮಾರುದ್ರೋಽಥವಾ ಪುನಃ
ರಜಸಾ ತಮಸಾ ಚೈವ ಮಾನಸಂಸಮಭಿಪ್ಲುತಂ ॥ ಎನ್ರು ವಿಭಜಿಕ್ಕಪ್ಪಟ್ಟದು.

ಎಂದಾರಂಭಿಸುವ ಶ್ಲೋಕಗಳಲ್ಲಿ ಭಗವಂತನು ನಿಸ್ಸಮಾಭ್ಯಧಿಕನೆಂದೂ, ಭೂತಭವಿಷ್ಯತ್ ವರ್ತಮಾನಕಾಲಗಳಲ್ಲಿಯೂ ಪುಂಡರೀಕಾಕ್ಷನಾದ ನಾರಾಯಣನಿಗೆ ಮೇಲಾದವನು ಯಾರೂ ಇಲ್ಲವೆಂದೂ, ವಾಸುದೇವನಿಗಿಂತ ಮಂಗಳಕರನೂ, ಪಾವನನೂ ಯಾರೂ ಇಲ್ಲವೆಂದೂ, ವಾಸುದೇವನನ್ನು ಆಶ್ರಯಿಸಿ ಯಾರೂ ನಶಿಸಿ ಹೋಗುವುದಿಲ್ಲವೆಂದೂ, ಮೂರು ಲೋಕಗಳಲ್ಲಿಯೂ ಭಗವಂತನಾದ ನಾರಾಯಣನ ಹಾಗೆ ಯಾರೂ ಇಲ್ಲವೆಂದೂ, ಕೇಶವನಿಗಿಂತ ಮೇಲಾದ ದೇವತೆ ಇಲ್ಲವೆಂದೂ, **ಬ್ರಹ್ಮಮಯ** -ಪರಬ್ರಹ್ಮಸ್ವರೂಪಿಯಾದ ವಿಷ್ಣುವು ಎಲ್ಲರಿಗೂ ರಾಜಾಧಿರಾಜನು ಅವನೇ ನಿಯಾಮಕನು, ಪ್ರಜೆಗಳೆಲ್ಲರಿಗೂ ಪತಿಯು, ಇತ್ಯಾದಿಯಾಗಿ ಋಷಿಗಳು ಅನೇಕ ಪ್ರಕಾರವಾಗಿ ಹೇಳಿರುತ್ತಾರೆ. ವಾಸುದೇವ, ವಿಷ್ಣು, ಕೇಶವ ಇತ್ಯಾದಿಗಳು ನಾರಾಯಣನ ಪರ್ಯಾಯ ಶಬ್ದಗಳು

ಜಾಯಮಾನ ದಶೆಯಲ್ಲಿ ಭಗವಂತನ ಕಟಾಕ್ಷ

ಅನಂತರ ಜೀವನು ತಾಯಿಯ ಗರ್ಭದಿಂದ ಹುಟ್ಟುವ ದಶೆಯಲ್ಲಿ ಭಗವತ್ಕಟಾಕ್ಷವು ಏರ್ಪಟ್ಟರೆ ಅದು ಮೋಕ್ಷ ಹೇತು, ಆ ಜಾಯಮಾನ ದಶೆಯಲ್ಲಿ ಬ್ರಹ್ಮ ರುದ್ರರ ದೃಷ್ಟಿ ಪಾತವು ಸಂಸಾರ ಬಂಧನಕ್ಕೆ ಕಾರಣವೆಂಬುದನ್ನು **ಕರುವಿಲೇತಿರುವುಡೈಯರಾಯ್** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ. ಅದಾಗಿ **ಕರುವಿಲೇ**–ಗರ್ಭದಶೆ ಆರಂಭಿಸಿ **ತಿರುವುಡೈಯಾರ್‌ಹಳಾಯ್**–ಶ್ರೀಮಂತರಾಗಿ ಅಂದರೆ ಲಕ್ಷ್ಮೀನಾರಾಯಣ ಕಟಾಕ್ಷವೆಂಬ ಸಂಪತ್ತನ್ನು ಪಡೆದವರಾಗಿ ರಜೋಗುಣ ತಮೋಗುಣ ಪ್ರಶಮ ಹೇತುವಾದ ಲಕ್ಷ್ಮೀ ವಿಶಿಷ್ಟ ಮಧುಸೂದನನ ಕಟಾಕ್ಷವನ್ನು ಹೊಂದಿದವರು, ಮೋಕ್ಷದಲ್ಲಿ [illegible]ನಯುಳ್ಳವರಾಗುತ್ತಾರೆಂದೂ, ಬ್ರಹ್ಮರುದ್ರರಿಂದ ನೋಡಲ್ಪಟ್ಟವರು ರಜೋಗುಣ ತಮೋಗುಣಗಳಿಗೆ ಪರತಂತ್ರರಾಗುತ್ತಾರೆಂದೂ 9 **ಜಾಯಮಾನಂಹಿ ಪುರುಷಂ** ಎಂದಾರಂಭಿಸಿ ವಿಭಾಗಿಸಲ್ಪಟ್ಟಿದೆ. ಇಲ್ಲಿ "ಶ್ರಿಯಾಮಯಾಜೀವಾಸ್ಸಮೀಕ್ಷ್ಯಂತೇ"ಎಂಬ ವಚನದಿಂದ ಲಕ್ಷ್ಮೀಕಟಾಕ್ಷವೂ ಜಾಯಮಾನ ದಶೆಯಲ್ಲಿ ಅಭಿಪ್ರೇತ.

---

2) ವಾಸುದೇವೋ ಮಹದ್ಭೂತಂ ಸರ್ವದೈವತ ದೈವತಮ್ ।
ನಪರಂ ಪುಂಡರೀಕಾಕ್ಷಾತ್ ದೃಶ್ಯತೇ ಪುರಷರ್ಷಭ ॥ (ಭಾರ. ಭೀಷ್ಮ ಪರ್ವ 67–2)

ವಾಸುದೇವನು ದೊಡ್ಡವನು ಎಲ್ಲಾ ದೇವತೆಗಳಿಗೂ ದೇವರು ಪುಂಡರೀಕಾಕ್ಷನಾದ ಅವನಿಗಿಂತ ಮೇಲಾದವನು ಕಾಣಲ್ಪಡಲಿಲ್ಲ

3) ಏಷಧಾತಾ ವಿಧಾತಾಚ ಸರ್ವೇಷಾಂ ಪ್ರಾಣಿನಾಂ ಪ್ರಭುಃ ।
ಪರಂಹಿ ಪುಂಡರೀಕಾಕ್ಷಾತ್ ನ ಭೂತಂ ನ ಭವಿಷ್ಯತಿ ॥ (ಭಾರ ಭೀಷ್ಮ ಪರ್ವ 67-17)

ಏಷಃ– ಈ ಕೃಷ್ಣ ಪರಮಾತ್ಮನು ಎಲ್ಲಾ ಪ್ರಾಣಿಗಳನ್ನೂ ಧಾತಾ– ಸೃಷ್ಟಿಸುವವನು, ಧರಿಸುವವನು, ಪೋಷಿಸುವವನು, ವಿಧಾತಾ–(ಅವರುಗಳಿಗೆ) ಕರ್ಮ ಫಲವನ್ನು ಕೊಡುವವನು ಪ್ರಭು –ಸಮರ್ಥನು ಈ ಪುಂಡರೀಕಾಕ್ಷನಿಗಿಂತ ಮೇಲಾದವನು ಇಲ್ಲ ಮುಂದೆಯೂ ಇರುವುದಿಲ್ಲ

4) ನವಿಷ್ಣೋಃ ಪರಮೋದೇವೋ ವಿದ್ಯತೇ ನೃಪಸತ್ತಮ ।
ವಿಷ್ಣುರೇವ ಸದಾಽಽರಾಧ್ಯ ಸರ್ವದೇವೈರಪಿಪ್ರಭೋ ॥

ರಾಜಶ್ರೇಷ್ಠನೇ (ಧರ್ಮರಾಜ) ವಿಷ್ಣುವಿಗಿಂತ ಮೇಲಾದ ದೇವರು ಇಲ್ಲ ವಿಷ್ಣುವೇ ಎಲ್ಲಾ ದೇವತೆಗಳಿಂದಲೂ ಯಾವಾಗಲೂ– ಆರಾಧಿಸಲ್ಪಡುವವನು. ವಿ. ತಿ. ಮೋ.

ಮುಮುಕ್ಷುವುಕ್ಕು ಬ್ರಹ್ಮರುದ್ರರ್ ಅನುಪಾಸ್ಯರ್, ಶ್ರಿಯಃಪತಿಯೇ ಉಪಾಸ್ಯನ್

ಇವರ್ಗಳ್ ಮುಮುಕ್ಷುವುಕ್ಕು ಅನುಪಾಸ್ಯರೆನ್ರುಮಿಡಮುಮ್ ಇವರ್ಹಳುಕ್ಕು ಕಾರಣಭೂತನಾನ ಸರ್ವೇಶ್ವರನ್ ಇವರ್ಹಳುಕ್ಕುಮ್ ಮಱ್ಱುಮುಳ್ಳ ಮುಮುಕ್ಷುಕ್ಕಳುಕ್ಕುಮ್ ಉಪಾಸ್ಯನೆನ್ನುಮಿಡಮುಮ್.

2 ಸಂಸಾರಾರ್ಣವ ಮಗ್ನಾನಾಂ ವಿಷಯಾಕ್ರಾಂತ ಚೇತಸಾಂ ।
ವಿಷ್ಣು ಪೋತಂ ವಿನಾ ನಾನ್ಯತ್ಕಿಞ್ಚಿದಸ್ತಿ ಪರಾಯಣಂ ॥, ಎನ್ನುಂ

3 ಬ್ರಹ್ಮಾಣಂ ಶಿತಿಕಣ್ಠಂಚ ಯಾಶ್ಚಾನ್ಯಾ ದೇವತಾಃಸ್ಮೃತಾಃ ।
ಪ್ರತಿಬುದ್ಧಾ ನ ಸೇವನ್ತೇ ಯಸ್ಮಾತ್ಪರಿಮಿತಂ ಫಲಂ ॥ ಎನ್ರುಮ್,

4 ಹರಿರೇಕ ಸ್ಸದಾ ಧ್ಯೇಯೋ ಭವದ್ಭಿ ಸ್ಸತ್ವಸಂಸ್ಥಿತೈಃ ॥

5 ಉಪಾಸ್ಯೋಽಯಂ ಸದಾ ವಿಪ್ರಾ ಉಪಾಯೋಽಸ್ಮಿ ಹರೇಃಸ್ಮೃತೌ ॥ ಎನ್ರುಮ್ ಶೊಲ್ಲಪ್ಪಟ್ಟದು,

---

ಬ್ರಹ್ಮ ರುದ್ರಾದಿಗಳು ಮುಮುಕ್ಷುಗಳಿಂದ ಉಪಾಸ್ಯರಲ್ಲ

ಇವರ್ಹಳ್–ಇತ್ಯಾದಿ ಬ್ರಹ್ಮ ರುದ್ರಾದಿಗಳು, ಮೋಕ್ಷದಲ್ಲಿ ಅಭಿಲಾಷೆಯುಳ್ಳವರಿಗೆ ಅನುಪಾಸ್ಯರು–ಧ್ಯಾನ ಮಾಡತಕ್ಕವರಲ್ಲ ಎಂಬುದೂ, ಇವರಿಗೆ ಕಾರಣಭೂತನಾದ ಸರ್ವೇಶ್ವರನೇ ಇವರಿಗೂ, ಬೇರೆಯಾದ ಮುಮುಕ್ಷುಗಳಿಗೂ ಉಪಾಸ್ಯನು, ಎಂಬ ವುದೂ [2] **ಸಂಸಾರಾರ್ಣವಮಗ್ನಾನಾಂ** ಎಂಬ ಶ್ಲೋಕದಲ್ಲಿಯೂ, [3] **ಬ್ರಹ್ಮಾಣಂ ಶಿತಿಕಂಠಂಚ,** ಎಂಬ ಶ್ಲೋಕದಲ್ಲಿಯೂ, [4] **ಹರಿರೇಕಸ್ಸದಾಧ್ಯೇಯಃ,** [5] **ಉಪಾಸ್ಯೋಽಯಂ ಸದಾವಿಪ್ರಾಃ,** ಎಂದೂ ಹೇಳಲ್ಪಟ್ಟಿದೆ. ಹರಿರೇಕಸ್ಸದಾಧ್ಯೇಯಃ, ಉಪಾಸ್ಯೋಽಯಂ ಸದಾವಿಪ್ರಾಃ, ಎಂಬ ವಚನಗಳು ಪರಮಶಿವನು ಹೇಳುವುವು

---

5) ವಾಸುದೇವನಿಗಿಂತ ಮೇಲಾದ ಮಂಗಳಕರನಿಲ್ಲ ವಾಸುದೇವನಿಗಿಂತ ಮೇಲಾದ ಪಾವನವಾದ ವಸ್ತುವಿಲ್ಲ ವಾಸುದೇವನಿಗಿಂತ ಮೇಲಾದ ದೇವರಿಲ್ಲ ವಾಸುದೇವನನ್ನು ನಮಸ್ಕರಿಸಿ ಯಾರೂ ನಶಿಸಿ ಹೋಗುವುದಿಲ್ಲ

6) ಮೂರು ಲೋಕಗಳಲ್ಲಿಯೂ ವಾಸುದೇವನಂಥಹವನು ಯಾವನೂ ಹುಟ್ಟಿಲ್ಲ ಹುಟ್ಟುವುದೂ ಇಲ್ಲ.

7) ಸತ್ಯಂ ಸತ್ಯಂ ಪುನಸ್ಸತ್ಯಂ ಉದ್ಧೃತ್ಯ ಭುಜ ಮುಚ್ಯತೇ ।
ವೇದಾಚ್ಛಾಸ್ತ್ರಂ ಪರಂ ನಾಸ್ತಿ ನ ದೈವಂ ಕೇಶವಾತ್ಪರಮ್ ॥ ನೃಸಿಂಹಪುರಾಣಂ 18-33

8) ಈ ಕೃಷ್ಣ ಪರಮಾತ್ಮನು, ಎಲ್ಲರಿಗೂ ರಾಜನಾದ ಬ್ರಹ್ಮ ದೇವನಿಗೂ ಮೇಲಾದ ರಾಜನು, ಮಹಾ ವಿಷ್ಣುವು ಪರಬ್ರಹ್ಮ ಸ್ವರೂಪಿಯು. ಅವನೇ ಸರ್ವನಿಯಾಮಕನು–ಪಾಲಕನು ಅವನೇ ತಂದೆ ಪ್ರಜೆಗಳೆಲ್ಲರಿಗೂ ಸ್ವಾಮಿ

9) ಭಾರ. ಶಾಂತಿ 3?8–73–77 ತಾಯಿಯ ಗರ್ಭದಿಂದ ಹುಟ್ಟುವ ತರುಣದಲ್ಲಿ ಯಾವ ಪುರುಷನನ್ನು ಮಧುಸೂದನನು ಕಟಾಕ್ಷಿಸುತ್ತಾನೋ, ಅವನು ಸಾತ್ವಿಕನಾಗುತ್ತಾನೆಂದು ತಿಳಿಯಬೇಕು, ಅವನೇ ಮೋಕ್ಷವನ್ನು ಪಡೆಯಲು ಬೇಕಾದ ಉಪಾಯವನ್ನು ಚಿಂತಿಸ ತಕ್ಕವನು . ಯಾವ ಪುರುಷನನ್ನು ಹುಟ್ಟುವ ತರುಣದಲ್ಲಿ ಬ್ರಹ್ಮನೋ ರುದ್ರನೋ ನೋಡುತ್ತಾನೆಯೋ ಅವನ ಮನಸ್ಸು ರಜೋಗುಣ ತಮೋಗುಣಗಳಲ್ಲಿ ಮುಳುಗಿ ಇರುತ್ತದೆ ರಜೋಗುಣ ತಮೋಗುಣಗಳು ಕಾಮಕ್ರೋಧ, ನಿದ್ರೆ, ಸೋಮಾರಿತನಗಳಿಗೆ ಕಾರಣವಾಗಿ ಹುಟ್ಟುವ ಪುರುಷನನ್ನು ಸಂಸಾರದಲ್ಲಿಯೇ ಬಂಧಿಸುತ್ತದೆ ಎಂದರ್ಥ

2) ಸಂಸಾರ ಸಾಗರದಲ್ಲಿ ಮುಳುಗಿ ವಿಷಯ ಸುಖಗಳಲ್ಲಿ–ಪ್ರಾಕೃತ ಭೋಗಗಳಲ್ಲಿ ಆಕ್ರಾಂತವಾದ ಮನಸ್ಸುಳ್ಳವರಿಗೆ ವಿಷ್ಣುವೆಂಬ ದೋಣಿ ವಿನಹ ಬೇರೆ ಯಾವುದೂ ಪರಾಯಣವಲ್ಲ-ಶ್ರೇಷ್ಠವಾದ ಉಪಾಯವಿಲ್ಲ

3) ಬ್ರಹ್ಮ, ಶಿತಿಕಂಠ-ರುದ್ರ, ಬಾಕಿ ದೇವತೆಗಳನ್ನು ಪ್ರತಿಬುದ್ಧರು–ಜ್ಞಾನಿಗಳು ಮೋಕ್ಷದಲ್ಲಿ ಆಸೆಯುಳ್ಳವರು, ಉಪಾಸಿಸುವುದಿಲ್ಲ ಏಕೆಂದರೆ ಅವರುಗಳಿಂದ ಫಲವು ಪರಿಮಿತ–ಅಲ್ಪವಾದದ್ದು ಶಾಶ್ವತವಾದ ಮೋಕ್ಷವನ್ನು ಅವರುಗಳು ಕೊಡಲಾರರು ಎಂದರ್ಥ

4) ಏವಮೇವವಿಜಾನೀತ ನಾತ್ರಕಾರ್ಯಾ ವಿಚಾರಣಾ ।
ಹರಿರೇಕಸ್ಸದಾಧ್ಯೇಯೋ ಭವದ್ಭಿಃಸತ್ವಸಂಸ್ಥಿತೈಃ ॥
ನಾನ್ಯೋ ಜಗತಿದೇವೋಽಸ್ತಿ ವಿಷ್ಣೋರ್ನಾರಾಯಣಾತ್ಪರಃ । ಹರಿವಂಶೆ (2-132-8)
ಹೀಗೆಯೇ ತಿಳಿದುಕೊಳ್ಳಿ ವಿಚಾರಣೆಯೇ ಮಾಡಬೇಕಾಗಿಲ್ಲ, ಪು ತಿ, ನೋ

ಇತ್ತಾಲೇ ಇವರ್‌ಹಳ್ಕೆ ಮೋಕ್ಷೋಪಕಾರಕರಾಹಚ್ಚೊನ್ನ ವಿಡಙ್ಗಳುಮ್ ಆಚಾರ್ಯಾದಿಹಳ್ಳೈ ಪ್ಪೋಲೇ ಜ್ಞಾನಾದಿ ಹೇತುಕ್ಕಳಾಹೈಯಾಲೇಯೆನ್ರು ನಿರ್ಣೀತಮ್. ಇವ್ವರ್ಥಂ,

"ಸೂರ್ಯಸ್ಯೈವತು ಯೋ ಭಕ್ತಸ್ಸಪ್ತ ಜನ್ಮಾನ್ತರ ನರಃ ।
ತಸ್ಯೈವತು ಪ್ರಸಾದೇನ ರುದ್ರಭಕ್ತಃ ಪ್ರಜಾಯತೇ ॥
ಶಙ್ಕರಸ್ಯತು ಯೋ ಭಕ್ತಸ್ಸಪ್ತ ಜನ್ಮಾನ್ತರಂ ನರಃ ।
ತಸ್ಯೈವತು ಪ್ರಸಾದೇನ ವಿಷ್ಣು ಭಕ್ತಃ ಪ್ರಜಾಯತೇ ॥
ವಾಸುದೇವಸ್ಯಯೋ ಭಕ್ತ ಸ್ಸಪ್ತಜನ್ಮಾನ್ತರಂ ನರ ।
ತಸ್ಯೈವತು ಪ್ರಸಾದೇನ ವಾಸುದೇವೇ ಪ್ರಲೀಯತೇ ॥" ಎನ್ಗಿರವಿಡತ್ತಿಲುಮ್ ವಿವಕ್ಷಿತಮ್.

ಇಪ್ಪಡಿ, ಸೂರ್ಯಭಕ್ತ್ಯಾದಿಹಳ್ ಪರಂಪರಯಾ ಭಗವದ್ಭಕ್ತ್ಯಾದಿಹಳಿಲೇ ಮೂಟ್ಟುವದುಮ್. ಪರಾವರ ತತ್ವಙ್ಗಳಿಲ್ ಐಕ್ಯಬುದ್ಧಿಯುಮ್ ವ್ಯತ್ಯಯಬುದ್ಧಿಯುಮ್ ಸಮತ್ವಬುದ್ಧಿಯುಂ ಮನ್ರಿಪ್ಪಿಡೈಹಳಿಲೇವರುಮ್ ಮತಿಮಯಕ್ಕುಹಳುಮ್, ಅಸುರ ಸ್ವಭಾವತ್ತಾಲೇ ಯೊರುವಿಷಯತ್ತಿಲ್ ಪ್ರದ್ವೇಷಾದಿಹಳು ಮನ್ರಿಕ್ಕೇ ಸೂರ್ಯಾದಿಹಳ್ಳೈಪ್ಪತ್ತಿ ಮವರ್ಗಳುಕ್ಕೇ ಎನ್ನುಮಿಡತ್ತಿಲ್.

ಬ್ರಹ್ಮರುದ್ರಾದಿಗಳು ಮೋಕ್ಷೋಪಕಾರರೆಂಬ ವಚನಗಳಿಗೆ ಆಚಾರ್ಯರ ಹಾಗೆ ಎಂದರ್ಥ,

ಇತ್ತಾಲೇ ಇತ್ಯಾದಿ– ಈ ವಚನಗಳಿಂದ ಬ್ರಹ್ಮರುದ್ರಾದಿಗಳನ್ನು ಮೋಕ್ಷಕ್ಕೆ ಉಪಕಾರರೆಂದು ಪುರಾಣಗಳಲ್ಲಿ ಹೇಳಿರುವುದು ಆಚಾರ್ಯಾದಿಗಳ ಹಾಗೆ ಜ್ಞಾನೋಪದೇಶಮಾಡಿ ಮೋಕ್ಷೋಪಾಯವಾದ ಉಪಾಸನಾದಿಗಳನ್ನು ಇವರುಗಳು ತಮ್ಮನ್ನು ಆಶ್ರಯಿಸಿದವನಿಗೆ ಉಪದೇಶಿಸುತ್ತಾರೆಂಬುದು ತಾತ್ಪರ್ಯವೆಂದು ನಿರ್ಣೀತ ಇವರುಗಳು, ಸಾಕ್ಷಾನ್ಮೋಕ್ಷ ಪ್ರದರಲ್ಲ. ಈ ಅರ್ಥವೇ **ಸೂರ್ಯಸ್ಯೈವತು** ಎಂದಾರಂಭಿಸುವ ಶ್ಲೋಕಗಳಿಗೂ ತಾತ್ಪರ್ಯ ಸೂರ್ಯನಲ್ಲಿ ಭಕ್ತಿ ಇಟ್ಟು ಏಳುಜನ್ಮ ಅವನನ್ನು ಉಪಾಸನೆ ಮಾಡುವವನು ಆ ಸೂರ್ಯನ ಅನುಗ್ರಹದಿಂದ ರುದ್ರ ಭಕ್ತನಾಗಿ ಹುಟ್ಟುತ್ತಾನೆ. **ಶಂಕರಸ್ಯತು**,– ಶಂಕರನ ಭಕ್ತನು ಏಳು ಜನ್ಮಗಳಲ್ಲಿ ಅವನನ್ನು ಉಪಾಸನೆ ಮಾಡಿ ನಂತರ ಅವನ ಅನುಗ್ರಹದಿಂದ ವಿಷ್ಣು ಭಕ್ತನಾಗುತ್ತಾನೆ ಹಾಗೆಯೇ **ವಾಸುದೇವಸ್ಯ ಇತ್ಯಾದಿ**– ವಾಸುದೇವನ ಭಕ್ತನು ಏಳು ಜನ್ಮ ವಾಸುದೇವನ ಉಪಾಸನೆಯನ್ನು ಮಾಡಿ, ಅವನ ಅನುಗ್ರಹದಿಂದ ವಾಸುದೇವನ ಪದಸಾಯುಜ್ಯವನ್ನು ಹೊಂದುತ್ತಾನೆಂಬುದು ಅರ್ಥ. **ಇಪ್ಪಡಿ ಸೂರ್ಯ ಭಕ್ತ್ಯಾದಿಹಳ್** ಇತ್ಯಾದಿ. ಹೀಗೆ ಸೂರ್ಯ ಭಕ್ತ್ಯಾದಿಗಳು, ಪರಂಪರಯಾಗಿ ಭಗವದ್ಭಕ್ತಿಯನ್ನುಂಟು ಮಾಡುತ್ತವೆ. ಈ ಭಕ್ತಿಯು, ಪರತತ್ವ ಅವರತತ್ವಗಳಲ್ಲಿ ಐಕ್ಯಬುದ್ಧಿಯೂ, ವ್ಯತ್ಯಾಸವಾದ ಬುದ್ಧಿಯೂ ಅಂದರೆ ಶಿವನೇ ಹೆಚ್ಚು, ವಿಷ್ಣುವು ಅವನಿಗಿಂತ ಕೀಳಾದವನು ಇತ್ಯಾದಿ ವ್ಯತ್ಯಾಸ ಬುದ್ಧಿಯೂ, ಇಬ್ಬರೂ ಸಮರೆಂಬ ಬುದ್ಧಿಯೂ ಹಾಗೆಯೇ ಈ ರೀತಿಯುಂಟಾಗುವ ಬುದ್ಧಿ ಭ್ರಮಣಗಳೂ ಇವರಿಗಿಂತ ಮೇಲಾದವನೊಬ್ಬ ನಿದ್ದಾನೆಂಬುದು) ಅಸುರ ಸ್ವಭಾವದಿಂದ ಪರತತ್ವ ವಿಷಯದಲ್ಲಿಯೋ ಅವರ ತತ್ವ ವಿಷಯದಲ್ಲಿಯೋ, ಪ್ರದ್ವೇಷ ಮತ್ತು **ಆದಿ** ಶಬ್ದದಿಂದ ಅವರ ಕಾರ್ಯಗಳು

ಉತ್ಕಟ ಸತ್ವಗುಣವುಳ್ಳ ನಿಮ್ಮಿಂದ ಹರಿಯೇ ಯಾವಾಗಲೂ ಧ್ಯಾನಮಾಡಲ್ಪಡತಕ್ಕವನು. ವಿಷ್ಣು- ವ್ಯಾಪನಶೀಲನಾದ ನಾರಾಯಣನಿಗಿಂತ ಉತ್ಕೃಷ್ಟನಾದ ಬೇರೆ ದೇವರು ಲೋಕದಲ್ಲಿಲ್ಲ

5) ಧ್ಯಾತ್ವಾಮಾಂ ಸರ್ವಯತ್ನೇನ ತತೋ ಜಾನೀತ ಕೇಶವಮ್ ।
ಉಪಾಸ್ಯೋಽಯಂ ಸದಾವಿಪ್ರಾ ಉಪಾಯೋಽಸ್ಮಿ ಹರೇಃಸ್ಮೃತೌ ॥

ಹರಿವಂಶ (2-132-14) ಪರಮಶಿವನು ಹೇಳುವ ಮಾತು ಅದಾಗಿ ನನ್ನನ್ನು ಸರ್ವಪ್ರಯತ್ನದಿಂದಲೂ ಧ್ಯಾನ ಮಾಡಿ, ಅನಂತರ ಕೇಶವನನ್ನು ಧ್ಯಾನಮಾಡಿ ಈ ಕೇಶವನೇ ಯಾವಾಗಲೂ ಉಪಾಸ್ಯನು ಆ ರೀತಿಯ ಧ್ಯಾನಕ್ಕೆ ನಾನು (ಶಿವನು) ಉಪಾಯಭೂತನು ಆಚಾರ್ಯರ ಹಾಗೆ ಉಪಕಾರಕನು ಎಂದು ಭಾವ.

"ಯೇ ತು ಸಾಮಾನ್ಯಭಾವೇನ ಮನ್ಯಂತೇ ಪುರುಷೋತ್ತಮಮ್ ।
ತೇವೈ ಪಾಷಂಡಿನೋ ಜ್ಞೇಯಾ ಸ್ಸರ್ವಕರ್ಮಬಹಿಷ್ಕೃತಾಃ ॥" ಇತ್ಯಾದಿಹಳಿಲೇ ಕಣ್ಡು ಕೊಳ್ವದು.
ಇಪ್ಪಡಿ ಜ್ಞಾನಾದಿಹಳಿಲ್ ಮಾರಾಟ್ಟ ಮುಂಡೈಯಾರ್‌ಕ್ಕು ದೇವತಾನ್ತರಭಕ್ತಿಯುಂಡ್ಡೇಯಾಹಿಲುಂ ಭಗವನ್ನಿಗ್ರಹತ್ತಾಲೇ ಪ್ರತ್ಯವಾಯಮೇ ಫಲಿಕ್ಕುಮ್. ಅಪ್ಪೈಯಾಲೇ
) **"ತ್ವಂ ಹಿ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ।**
ದರ್ಶಯಿತ್ವಾಲ್ಪಮಾಯಾಸಂ ಫಲಂ ಶೀಘ್ರಂ ಪ್ರದರ್ಶಯ ॥"
ಎನ್‌ಹಿರಪಡಿಯೇ, ಮೋಹನ ಶಾಸ್ತ್ರಙ್ಗಳಿಲೇ ದೃಷ್ಟಫಲ ಸಿದ್ಧಿಯುಣ್ಡಾಕ್ಕಿನದುವುಮ್, ಅವತ್ತೈಯಿಟ್ಟು ಮೋಹಿಪ್ಪಿತ್ತು ನರಕತ್ತಿಲೇ ವಿಥ್ರವಿಡುಹೈಕ್ಕಾಹವತ್ತನೈ

ಅಂದರೆ ಆ ದೇವತೆಗಳನ್ನು ದೂಷಿಸುವುದು, ಅವರ ದೇವಸ್ಥಾನಗಳಲ್ಲಿ ಪೂಜೆಗಳನ್ನು ನಿಲ್ಲಿಸುವುದು, ಅಥವಾ ಆ ಆಲಯಗಳನ್ನು ಒಡೆಯುವುದು ಇತ್ಯಾದಿ- ಇವುಗಳು ಇಲ್ಲದೆ, ಸೂರ್ಯಾದಿಗಳನ್ನು ಆಶ್ರಯಿಸುವವರಿಗೇನೆ ಉಂಟಾಗುತ್ತವೆ, ಎಂಬುದು ಪ್ರಮಾಣಾಂತರಗಳಿಂದ ತಿಳಿಯಲ್ಪಡುತ್ತವೆ ಆ ಪ್ರಮಾಣಗಳು ಯಾವುವೆಂದರೆ, **ಯೇತು ಸಾಮಾನ್ಯ ಭಾವೇನ** ಎಂದಾರಂಬಿಸಿ ತಿಳಿಸುತ್ತಾರೆ. ಅದಾಗಿ ಯಾರು ಪುರುಷೋತ್ತಮನನ್ನು **ಸಾಮಾನ್ಯ ಭಾವೇನ**-ಇತರ ದೇವತೆಗಳಿಗೆ ಸಮನಾಗಿ, ತಿಳಿಯುತ್ತಾರೋ, ಅವರುಗಳು ಪಾಷಂಡಿಗಳು- ಸರ್ವಕರ್ಮ ಬಹಿಷ್ಕೃತರು, ಅಂದರೆ ಯಾವ ಕರ್ಮವನ್ನೂ ಮಾಡಲನರ್ಹರು, ಎಂದು ಅವರುಗಳನ್ನು ನಿಂದಿಸಿರುವುದರಿಂದ ವಿಷ್ಣು ದ್ವೇಷವಿಲ್ಲದೇನೆ ಸೂರ್ಯ ಶಂಕರರುಗಳನ್ನು ಆಶ್ರಯಿಸುವವರಿಗೆ ಆ ಸೂರ್ಯ, ಶಂಕರರು ಪರಂಪರೆಯಾಗಿ ಮೋಕ್ಷೋಪಕಾರರಾಗುತ್ತಾರೆ.

ಹಾಗೆಯೇ ಭಗವತ್ಪಾರಮ್ಯಾದಿಗಳಲ್ಲಿ ಧೃಡವಾದ ಅಧ್ಯವಸಾಯವುಳ್ಳ ಮಹಾತ್ಮರೂ ಭಗವಂತನಿಗೆ ಅಭಿಮತರಾಗಿ ತಮ್ಮ ತಮ್ಮ ಅಧಿಕಾರವನ್ನು ನಿರ್ವಹಿಸಿ ಬರುವ ಬ್ರಹ್ಮ ರುದ್ರಾದಿಗಳನ್ನು ನಿಂದನೆ ಮಾಡಬಾರದು "ಪ್ರತಿ ಬುದ್ಧ ವರ್ಜಂಸೇವ್ಯಂ"-"ಜ್ಞಾನಿಗಳಿಗೆ ಬ್ರಹ್ಮರುದ್ರಾದಿಗಳು ಸೇವ್ಯರಲ್ಲ" ಎಂದು ಹೇಳಿರುವುದೂ ನಿಂದನಾದಿಗಳಿಗೆ ಅವಕಾಶ ನೀಡುವುದಿಲ್ಲ. ಬ್ರಹ್ಮ ರುದ್ರಾದಿಗಳಿಗೆ ಪಾರಮ್ಯವಿಲ್ಲ, ಮೋಕ್ಷ ಪ್ರದತ್ವ ಶಕ್ತಿಯಿಲ್ಲವೆಂದು ಹೇಳಿವುದು ನಿಂದೆಯಾಗಲಾರದು ಆ ಬ್ರಹ್ಮ ರುದ್ರರ ಪೂಜಾದಿಗಳಲ್ಲಿ ಅಧಿಕೃತರಾದವರಿಗೆ ಅವರವರ ಪೂಜಾದಿಗಳನ್ನು ಉಪದೇಶಿಸುವುದೂ ತನ್ನ ಭಗವತ್ಪಾರ್ಯಮ್ಯವನ್ನು ಹೋಗಲಾಡಿಸುವುದಲ್ಲ. ಅದ್ದರಿಂದಲೇ ಪರಮೈಕಾಂತಿಗಳಾದ ವ್ಯಾಸಾದಿಗಳೂ ಮಹಾಭಾರತಾದಿ ಗ್ರಂಥಗಳಲ್ಲಿ ಬ್ರಹ್ಮ ರುದ್ರೇಂದ್ರಾದಿ ದೇವತಾಂತರಗಳ ಯೋಗ್ಯತೆಗೆ ತಕ್ಕ ಹಾಗೆ ಅವರವರ ಮಾಹಾತ್ಮ್ಯಗಳನ್ನು ವರ್ಣಿಸಿರುವುದು. ಎಂಬುದು **ಒರು ವಿಷಯತ್ತಿಲ್ ಪ್ರದ್ವೇಷಾದಿಹಳುಮನ್ರಿಕ್ಕೇ** ಎಂಬ ಶ್ರೀ ಸೂಕ್ತಿಯ ಅಭಿಪ್ರಾಯವೆಂಬುದು ಶ್ರೀ ದೇಶಿಕರ ಹೃದಯ

ಇಪ್ಪಡಿ ಜ್ಞಾನಾದಿಹಳಿಲ್ ಇತ್ಯಾದಿ-ಹೀಗೆ ಪರಾವರತತ್ವಗಳಲ್ಲಿ ಬುದ್ಧಿ ವ್ಯತ್ಯಾಸದಿಂದ್ಲಲೂ-ಅಂದರೆ ಅವರ ತತ್ವವನ್ನು ಪರ ತತ್ವವೆಂದು ತಿಳಿಯುವುದು, ಪರತತ್ವವನ್ನು ಅವರ ತತ್ವವೆಂದು ತಿಳಿಯುವುದು- ಪರದೇವತೆಯಾದ ಶ್ರೀಮನ್ನಾರಾಯಣನಲ್ಲಿ ಪ್ರದ್ವೇಷದಿಂದಲೂ, ರುದ್ರಾದಿಗಳನ್ನು ಪೂಜಿಸುವವರಿಗೆ ಆ ರುದ್ರಾದಿಗಳಲ್ಲಿ ಭಕ್ತಿಯುಂಟಾದರೂ "ತೇವೈ ಪಾಷಂಡಿನೋಜ್ಞೇಯಾಃ ಸರ್ವ ಕರ್ಮಬಹಿಷ್ಕೃತಾಃ", ಎಂದು ಭಗವನ್ನಿಗ್ರಹಕ್ಕೆ ಪಾತ್ರರಾಗಿ **ಪ್ರತ್ಯವಾಯಮೇ ಫಲಿಕ್ಕುಮ್**- ಆ ರುದ್ರ ಭಕ್ತಿಯು ಕಾರ್ಯಕಾರಿಯಾಗದೆ ನರಕಪತನಾದಿಗಳಿಗೆ ಹೇತುವಾಗಿ ಕಡುಕನ್ನೇ ಉಂಟುಮಾಡುತ್ತದೆ.

ಹಾಗಾದರೆ ಪಾಶುಪತಾದಿ ಶಾಸ್ತ್ರಗಳಲ್ಲಿ ರುದ್ರ ಭಕ್ತನಿಗೆ ರುದ್ರನೇ ಫಲಪ್ರದನೆಂದು ಹೇಳಿರುವುದು ಸರಿಯಲ್ಲವೇ ಎಂದರೆ **ಅಪ್ಪೈಯಾಲ್** ಎಂದಾರಂಭಿಸಿ ಆಚಾರ್ಯರು ಸಮಾಧಾನವನ್ನು ಅನುಗ್ರಹಿಸುತ್ತಾರೆ ಅದಾಗಿ ವೈದಿಕ ಕರ್ಮಗಳಿಗೆ ಅನರ್ಹರಾಗಿರುವ ಈ ಪಾಷಂಡಿಗಳು ಆ ವೈದಿಕ ಕರ್ಮಗಳನ್ನು ಅನುಷ್ಠಿಸಿ "ಅನಧಿಕಾರಿಣಾ

ಭಗವನ್ನಿಗ್ರಹಾಧೀನನೈ ಬ್ರಹ್ಮರುದ್ರರ್ ರಕ್ಷಿಕ್ಕ ಅಶಕ್ತರ್

ಸತ್ಯಸಙ್ಕಲ್ಪನಾನ ಭಗವಾನೊರುವನೈ ನಿಗ್ರಾಹ್ಯನಾಕ ಕ್ಕೊಳ್ಳಿಲಿನಾಲ್,

೧ "ಬ್ರಹ್ಮಾ ಸ್ವಯಮ್ಭೂಶ್ಚತುರಾನನೋವಾ
ರುದ್ರಸ್ತ್ರಿನೇತ್ರ ಸ್ತ್ರಿಪುರಾಂತಕೋವಾ ।
ಇನ್ದ್ರೋ ಮಹೇನ್ದ್ರ ಸ್ಸುರನಾಯಕೋ ವಾ
ತ್ರಾತುಂ ನ ಶಕ್ತಾಯುಧಿ ರಾಮವಧ್ಯಂ ॥"
ಎನ್ಱಿರಪಡಿಯೇ ದೇವತಾನ್ತರಙ್ಗಳ್ ರಕ್ಷಿಕ್ಕ ಶಕ್ತರಲ್ಲರ್‌ಗಳ್.

ಭಗವದನುಗ್ರಹಪಾತ್ರನೈ ಹಿಂಸಿಕ್ಕ ಬ್ರಹ್ಮ ರುದ್ರಾದಿ ಸರ್ವರುಂ ಅಶಕ್ತರ್

ಸರ್ವದೇವತೈಹಳುಮ್ ಶ್ರೀಸುಗ್ರೀವ ಮಹಾರಾಜಾದಿಹಳೈ ಪ್ಪೋಲೇ ತನಕ್ಕನ್ತರಙ್ಗರಾಯಿರುಪ್ಪಾರುಮ್ ತನ್ನೈಯುಡೈಯಾನೊರುವನೈ ನಲಿಯನಿನೈತ್ತಾಲ್

ಕೃತ ಮಕೃತಂ" ವೈದಿಕ ಕರ್ಮಗಳಲ್ಲಿ ಅಧಿಕಾರವಿಲ್ಲದವನು ಆ ವೈದಿಕ ಕರ್ಮಗಳನ್ನು ಅನುಷ್ಠಿಸಿದರೆ, ಅದು ಕಾರ್ಯಕಾರಿಯಾಗುವುದಿಲ್ಲವೆಂಬ ವಚನದ ಪ್ರಕಾರ, ಭಗವನ್ನಿಗ್ರಹವನ್ನೂ ತನ್ಮೂಲಕ ಪಾಪವನ್ನೂ ಸಂಪಾದಿಸಿ ಕೊಳ್ಳುವಂತೆ ಅವರಿಗೆ ಮೋಹವನ್ನುಂಟು ಮಾಡುತ್ತಾನೆಂದು 1) **ತ್ವಂಹಿರುದ್ರಮಹಾಬಾಹೋ–** ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ ಅದಾಗಿ ಎಲೈ ರುದ್ರನೇ **ನೀನು** ಅಲ್ಪಾಯಾಸದಿಂದ ಶೀಘ್ರವಾಗಿ ಕ್ಷುದ್ರ ಫಲಗಳು ಲಭಿಸುವ ರೀತಿಯಲ್ಲಿ ಮೋಹನ ಶಾಸ್ತ್ರಗಳನ್ನು ರಚಿಸು, ಎಂದು ಭಗವಂತನಾದ ವರಾಹ ಮೂರ್ತಿಯು ವರ ದಾನ ಸಮಯದಲ್ಲಿ ರುದ್ರನಿಗೆ ಹೇಳಿದನು. ಅದೇ ರೀತಿಯಲ್ಲಿ ಪಾಪಿಗಳಿಗೆ ಮೋಹನ ಶಾಸ್ತ್ರಗಳಲ್ಲಿ (ಪಾಶು ಪತ ಮತದಲ್ಲಿ) ದೃಷ್ಟ ಫಲಸಿದ್ಧಿಯನ್ನು ಉಂಟು ಮಾಡಿ ಅವುಗಳ ಮೂಲಕ ಮೋಹವನ್ನುಂಟು ಮಾಡಿರು ವುದೂ ನರಕದಲ್ಲಿ ಬೀಳುವಂತೆ ಮಾಡುವುದಕ್ಕೋಸ್ಕರವೇ ಹೊರತು ಬೇರೆಯಲ್ಲ. ಇಲ್ಲಿ ರುದ್ರನು ಫಲಪ್ರದನಾ ಗಿರುವಾಗ ಭಗವಂತನು ಫಲಪ್ರದನೆಂದು ಹೇಳುವುದಿಲ್ಲ. **ಭಗವನ್ನಿಗ್ರಾಹ್ಯನನ್ನು** ಬ್ರಹ್ಮರುದ್ರಾದಿಗಳೂ ರಕ್ಷಿಸಲಾರರು. ಆ ರುದ್ರನು ತನ್ನನ್ನು ಪೂಜಿಸುವ ಭಕ್ತರ ಅಭೀಷ್ಟಗಳನ್ನು ಕೊಡುವಾಗ, ಭಗವಂತನು **ಅವರನ್ನು** ಹೇಗೆ ನರಕದಲ್ಲಿ ಬೀಳಿಸಬಹುದು. ರುದ್ರನು ತನ್ನ ಭಕ್ತನನ್ನು ರಕ್ಷಿಸಲು ತಡೆಯಲಾರನೇ ಎಂಬ ಶಂಕೆಗೆ **ಸತ್ಯಸಂಕಲ್ಪನಾನ ಭಗವಾನ್** ಎಂದಾರಂಭಿಸಿ ಸಮಾಧಾನವನ್ನು ಆಚಾರ್ಯರು ಹೇಳುತ್ತಾರೆ. ಅದಾಗಿ ಸತ್ಯ ಸಂಕಲ್ಪನಾದ ಭಗವಂತನು ಪಾಪಿ ಗಳನ್ನು ಶಿಕ್ಷಿಸಲು ಮೋಹನಶಾಸ್ತ್ರಗಳನ್ನು ಕಲ್ಪಿಸಿ, ತನ್ಮೂಲಕ ಅವರುಗಳು ಮಾಡುವ ಪಾಪಗಳಿಗೆ ಶಿಕ್ಷೆಯನ್ನು ಕೊಡಲು ಸಂಕಲ್ಪಿಸಿದರೆ ಬ್ರಹ್ಮರುದ್ರ ಮೊದಲಾದವರೂ ಯಾರೂ ತಡೆಯಲಾರರು: ಸತ್ಯ ಸಂಕಲ್ಪನಾದ ಭಗವಂತನು ಒಬ್ಬನನ್ನು **ನಿಗ್ರಾಹ್ಯನಾಹ** ಶಿಕ್ಷಿಸಲ್ಪಡತಕ್ಕವನ, ಎಂದು ಅಭಿಪ್ರಾಯ ಪಟ್ಟರೆ, ೨) **ಬ್ರಹ್ಮಾಸ್ವಯಂಭೂ** ಎಂಬ ಶ್ಲೋಕದಲ್ಲಿ ಹೇಳಿರುವಂತೆ **ದೇವತಾಂತರಗಳು** ರಕ್ಷಿಸಲು ಶಕ್ತರಲ್ಲರು: ಬ್ರಹ್ಮರುದ್ರೇಂದ್ರಾದಿಗಳೇ ಅಶಕ್ತರಾಗಿರುವಾಗ,

---

1) ವರಾ. ಪು (79-26) ನೀಳವಾದ ಕೈಗಳನ್ನುಳ್ಳ ರುದ್ರನೇ, (ಇದರಿಂದ ಪರಾಕ್ರಮ ಶಾಲಿತ್ವವು ಹೇಳಲ್ಪಡುತ್ತದೆ) ನೀನು ಜನ ರಿಗೆ ಮೋಹವು ಉಂಟಾಗುವಂತೆ ಅಂದರೆ ನೀನೇ ಪರದೇವತೆ, ನಿನಗೆ ಅಂತರ್ಯಾಮಿಯೊಬ್ಬನಿದ್ದಾನೆಂಬುದನ್ನು ಮರೆಸಿ, ಮೋಹನ ಶಾಸ್ತ್ರಗಳನ್ನು ರಚಿಸು. ಅಲ್ಪಶ್ರಮದಿಂದ ಶೀಘ್ರವಾಗಿ ಫಲವನ್ನು ಹೊಂದುವಂತೆ ದಾರಿ ತೋರಿಸು

ರಾಮ ಚಂದ್ರನು ಒಬ್ಬನನ್ನು ವಧಿಸಬೇಕೆಂದು ಸಂಕಲ್ಪಿಸಿದರೆ, ಸ್ವಯಂ ಉದ್ಭವಿಸಿದವನೂ, ಚತುರಾನನೂ ಆದ ಬ್ರಹ್ಮದೇವನೂ, ತ್ರಿಣೇತ್ರನೂ, ತ್ರಿಪುರಾಂತಕನೂ ಆದ ರುದ್ರನೂ, ದೇವೇಂದ್ರನೂ ಸುರನಾಯಕನೂ ಆದ ಇಂದ್ರನೂ ಆ ವಧ್ಯನನ್ನು ರಕ್ಷಿಸಲು ಅಶಕ್ತರು. ಸ್ವಯಂಭೂ, ಚತುರಾನನ, ತ್ರಿಣೇತ್ರಃ ತ್ರಿಪುರಾಂತಕಃ ರಾ ಮೊ ಸುಂದ 51-45.

ಇಂದ್ರಃ ಮಹೇಂದ್ರಃ, ಸುರ ನಾಯಕಃ ಎಂಬ ವಿಶೇಷಣಗಳು ಬ್ರಹ್ಮರುದ್ರೇಂದ್ರಾದಿಗಳ ಪ್ರಭಾವಗಳನ್ನು ತಿಳಿಸುತ್ತವೆ. ಅಷ್ಟೇ ಪ್ರಭಾವವಂತರಾಗಿದ್ದರೂ ಅವರು ಭಗವಂತನ ನಿಗ್ರಹದಿಂದ ಒಬ್ಬ ಜೀವಿಯನ್ನು ರಕ್ಷಿಸಲು ಅಶಕ್ತರು ಎಂಬುದು ಭಾವ.

"ಸಕೃದೇವಪ್ರಪನ್ನಾಯ" ಎನ್‌ಹಿರಪಡಿಯೇ, ಸತ್ಯಪ್ರತಿಜ್ಞನಾನ ತನ್ವ್ರತಂ ಕುಲೈಯಾ ವ್ಯೈಕ್ಕಾಹ ರಾವಣಾದಿಹಳ್ಳೈ ಪ್ಪೋಲೇ ದೃಷ್ಟಕೃತಿಹಳಾಯ್ ನಿರಾಕರಿಕ್ಕವೇಣ್ಡುವಾರ್ರೈ ನಿರಾಕರಿತ್ತುಂ. ಶ್ರೀ ವಾನರ ವೀರರ್ಹಳ್ಳೈ ಪ್ಪೋಲೇ ಸತ್ಕೃತಿಹಳಾಯ್ ಅನುಕ್ಕೂಲಿಪ್ಪಿಕ್ಕ ವೇಣ್ಡುವಾರ್ರೈ ಅನುಕ್ಕೂಲಿಪ್ಪಿತ್ತುಮ್ ಸರ್ವೇಶ್ವರನ್ ರಕ್ಷಿಕ್ಕುಮ್. ದೇವತಾನ್ತರಙ್ಗಳ್ ಪಕ್ಕಲ್

1 ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜನ್ತ ಇಹದೇವತಾಃ ।
ಕ್ಷಿಪ್ರಂಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥

ಎನ್ಗಿರಪಡಿಯೇ ವಿಷಮಧು ತುಲ್ಯಙ್ಗಳಾನ ಕ್ಷುದ್ರ ಫಲಙ್ಗಳ್ ಕಡುಹ ಸಿದ್ಧಿಕ್ಕುಮ್.

ಬ್ರಹ್ಮರುದ್ರಯೋಃಕ್ಷುದ್ರ ಫಲಪ್ರದತ್ವಸ್ಯಾಪಿ ಭಗವದಧೀನತ್ವಮ್

ಅನ್ನೈತಾನುಮ್, 2) ಲಭತೇ ಚತತಃ ಕಾಮಾನ್ ಮಯೈವ ವಿಹಿತಾನ್‌ಹಿತಾನ್
3) ವಿಷಮಾತಾ ಪಿತಾಚಾಪಿ ಯುಷ್ಮಾಕಂಚ ಪಿತಾಮಹಃ ।
ಮಯಾನುಶಿಷ್ಟೋ ಭವಿತಾ ಸರ್ವಭೂತ ವರಪ್ರದಃ ॥
ಅಸ್ಯ ಚೈವಾನುಜೋ ರುದ್ರೋ ಲಲಾಟಾದ್ಯಸ್ಸಮುತ್ಥಿತಃ ।
ಮಯಾನುಶಿಷ್ಟೋ ಭವಿತಾ ಸರ್ವಸತ್ವ ವರಪ್ರದಃ ॥

ಇತ್ಯಾದಿಹಳಿರ್ಪಡಿಯೇ ಭಗವದಧೀನಙ್ಗಳ್.

ಇತರ ದೇವತೆಗಳು ಕೈಮುತಿಕ ನ್ಯಾಯದಿಂದ ಶಕ್ತರಲ್ಲರು ಎಂದು ತಾತ್ಪರ್ಯ ಭಗವದನುಗ್ರಾಹ್ಯನನ್ನು ಬ್ರಹ್ಮರುದ್ರಾದಿಗಳು ರಕ್ಷಿಸಲಾರರು ಹಾಗೆಯೇ ದೇವತಾಂತರಗಳು ತಮ್ಮನ್ನು ಪೂಜಿಸುತ್ತಿದ್ದ ಒಬ್ಬನು, ತಮ್ಮನ್ನು ಬಿಟ್ಟು ಮಹಾವಿಷ್ಣುವನ್ನು ಆಶ್ರಯಿಸಿದರೆ ಕೋಪಗೊಂಡು ಅವನನ್ನು ಶಿಕ್ಷಿಸಲಾರರೇ ಎಂದರೆ ಅದಕ್ಕೆ ಸಮಾಧಾನವನ್ನು **ಸರ್ವದೇವತೆಗೇಊ** ಎಂದಾರಂಭಿಸಿ ತಿಳಿಸುತ್ತಾರೆ. ಅದಾಗಿ ಸರ್ವದೇವತೆಗಳೂ, ಸುಗ್ರೀವ ಮಹಾರಾಜಾದಿಗಳ ಹಾಗೆ ತನಗೆ ಅಂತರಂಗರಾಗಿರುವ (ತನಗೆ ಬೇಕಾದವರು ಎಂದರ್ಥ)ಮತ್ತು ತನ್ನನ್ನು ಆಶ್ರಯಿಸಿದ ಒಬ್ಬನನ್ನು ಹಿಂಸಿಸಲು ನೆನೆದರೆ, **"ಸಕೃದೇವಪ್ರಪನ್ನಾಯ"** ಎಂಬಂತೆ ಸತ್ಯಪ್ರತಿಜ್ಞನಾದ ಸರ್ವೇಶ್ವರನು ತನ್ನ ವ್ರತವು ಅಂದರೆ ಶರಣಾಗತರಕ್ಷಣ ವ್ರತವು **ಕುಲೈಯಾವ್ವೈಕ್ಕಾಹ–** ಬಾಧಿಸಲ್ಪಡದೆ ಇರಲು, ರಾವಣಾದಿಗಳ ಹಾಗೆ ದೃಷ್ಟಕೃತಿಗಳಾಗಿ, ನಿರಾಕರಿಸಲ್ಪಡುವವರನ್ನು ನಿರಾಕರಿಸಿಯೂ, ಶ್ರೀವಾನರ ವೀರರಂತೆ ಸತ್ಕೃತಿಗಳಾಗಿ ಅನುಕೂಲರನ್ನಾಗಿ ಮಾಡಿಕೊಳ್ಳಬೇಕಾದವರನ್ನು ಅನುಕೂಲರನ್ನಾಗಿ ಮಾಡಿಕೊಂಡೂ ರಕ್ಷಿಸುವನು.

ದೇವತಾಂತರಗಳು ವಿಷ ಮಧು ತುಲ್ಯವಾದ ಅಲ್ಪ ಫಲಪ್ರದರು

ಹಾಗಾದರ ಸರ್ವರಕ್ಷಣ ಸಮರ್ಥನಾದ ಸರ್ವೇಶ್ವರನಿರುವಾಗ ಲೋಕದಲ್ಲಿ ದೇವತಾಂತರಗಳನ್ನು (ಅನೇಕ ಬೇರೆ ಬೇರೆ ದೇವತೆಗಳನ್ನು) ಕೆಲವರು ಏಕೆ ಆಶ್ರಯಿಸುತ್ತಾರೆಂದರೆ **ದೇವತಾಂತರಂಗಳ್ ಪಕ್ಕಲ್** ಎಂದಾರಂಭಿಸಿ ಆಚಾರ್ಯರು ಸಮಾಧಾನವನ್ನು ಹೇಳುತ್ತಾರೆ. ಅದಾಗಿ ದೇವತಾಂತರಗಳನ್ನು ಆಶ್ರಯಿಸಿರುವುದರಿಂದ, **1) ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ,** ಎಂಬಂತೆ ವಿಷದಿಂದ ಕೂಡಿದ ಜೇನುತುಪ್ಪಕ್ಕೆ ತುಲ್ಯವಾದ ಅಲ್ಪ ಫಲಗಳು ಶೀಘ್ರವಾಗಿ ಸಿದ್ಧಿಸುತ್ತವೆ. ಆ ಫಲಗಳೂ ಕೂಡ 2) **ಲಭತೇಚತತಃ ಕಾಮಾನ್,** 3) **ವಿಷಮಾತಾಪಿತಾಚಾಪಿ,** ಎಂಬವೇ ಮೊದಲಾದ ಪ್ರಮಾಣಗಳಿಗನುಸಾರವಾಗಿ ಭಗವದಧೀನಗಳು ಅಂದರೆ ಆಯಾಯಾ ದೇವತೆಗಳಿಗೆ ವರಪ್ರದತ್ವ ಶಕ್ತಿಯನ್ನು ಭಗವಂತನೇ ಕೊಟ್ಟಿರುತ್ತಾನೆಂದರ್ಥ **ಮಯಾನುಶಿಷ್ಟೋಭವಿತಾ**

1] ಭಗವದ್ಗೀತೆ 4-12 ತಾವು ಮಾಡತಕ್ಕ ಕರ್ಮಗಳಿಗೆ ಶೀಘ್ರವಾಗಿ ಈ ಲೋಕದಲ್ಲೇ ಫಲವು ಸಿದ್ಧಿಸಬೇಕೆಂದು' ಕೆಲವರು ದೇವತಾಂತರಗಳನ್ನು ಪೂಜಿಸುತ್ತಾರೆ, ಅದರಿಂದಾಗಿ ಅವರುಗಳಿಗೆ ಈ ಮನುಷ್ಯ ಲೋಕದಲ್ಲಿ ಕ್ಷಿಪ್ರವಾಗಿ ಫಲವು ಲಭಿಸುತ್ತದೆ

ಪು ತಿ. ನೋ.

ಬ್ರಹ್ಮರುದ್ರಾದೀನಾಂ ಮೋಕ್ಷಪ್ರದತ್ವಯೋಗ್ಯತಾನಾಸ್ತಿ

4) **"ಯಸ್ಮಾತ್ಪರಿಮಿತಂಫಲಂ"**

5) **"ಸಾತ್ವಿಕೇಷುತು ಕಲ್ಪೇಷು ಮಾಹಾತ್ಮ್ಯ ಮಧಿಕಂಹರೇಃ |
ತೇಷ್ವೇವ ಯೋಗಸಂಸಿದ್ಧಾಗಮಿಷ್ಯಂತಿ ಪರಾಂಗತಿಂ" ||**

ಎನ್ಱೈಯಾಲವರ್ಗ್ಗಳ್‌ಪಕ್ಕಲ್ ಮೋಕ್ಷಮ್ ವಿಳಂಬಿತ್ತುಂಕಿಡೈಯಾದು.

ಸರ್ವಭೂತವರಪ್ರದಃ - ಎಂಬ ವಚನದಿಂದ ಬ್ರಹ್ಮಾದಿಗಳ ವರ ಪ್ರದತ್ವವು ಭಗವದಧೀನವೆಂಬುದು ಸ್ಪಷ್ಟ. **ಬ್ರಹ್ಮರುದ್ರಾದಿಗಳುಮೋಕ್ಷವನ್ನು ಕೊಡಲು ಶಕ್ತರಲ್ಲರು**

ಬ್ರಹ್ಮಾದಿ ದೇವತೆಗಳಿಗೆ ಸಾಂಸಾರಿಕ ಫಲವನ್ನು ಕೊಡುವ ಶಕ್ತಿಯು ಭಗವದಧೀನವೆಂದರೆ, ಹಾಗೆಯೇ ಭಗವದಧೀನರಾಗಿ ಮೋಕ್ಷವನ್ನು ಕೊಡಲು ಶಕ್ತರೇ ಎಂದರೆ ಶಕ್ತರಲ್ಲರೆನ್ನುತ್ತಾರೆ. 4) **ಯಸ್ಮಾತ್ ಪರಿಮಿತಂ ಫಲಂ, 5) ಸ್ವಾತಿಕೇಷುತು,** ಎಂಬ ಪ್ರಮಾಣಾನುಸಾರ, ದೇವತಾಂತರಗಳ ಸಕಾಶದಿಂದ ಮೋಕ್ಷವು ವಿಳಂಬಿಸಿಯೂ ಸಿಗಬಾರದು.

ಸಾತ್ವಿಕ ಕಲ್ಪಗಳಲ್ಲಿ ಬ್ರಹ್ಮದೇವನಿಗೆ ಸತ್ವಗುಣವು ಅಧಿಕ, ರಾಜಸಕಲ್ಪಗಳಲ್ಲಿ ರಜೋಗುಣವೂ ತಾಮಸಕಲ್ಪಗಳಲ್ಲಿ ತಮೋಗುಣವೂ ಅಧಿಕ ಸಾತ್ವಿಕ ಕಲ್ಪಗಳಲ್ಲಿ ಬ್ರಹ್ಮದೇವನು ಹೇಳಿರುವ ಪುರಾಣಗಳಲ್ಲಿ ವಿಷ್ಣು ಪಾರಮ್ಯವು ಹೆಚ್ಚು. ಸಾತ್ವಿಕ ಕಲ್ಪಗಳಲ್ಲಿ ಬ್ರಹ್ಮದೇವನಿಗೆ ಯಥಾವಸ್ಥಿತವಾದ ಜ್ಞಾನಕ್ಕೆ ಕಾರಣವಾದ ಸತ್ವಗುಣವು ಅಧಿಕವಾಗಿರುವುದರಿಂದ, ಆ ಕಲ್ಪಗಳಲ್ಲಿ ಅವನಿಂದ ಹೇಳಲ್ಪಟ್ಟ ಪುರಾಣಗಳಿಗೆ ವಕ್ತೃದೋಷವಿಲ್ಲ. ಆದ್ದರಿಂದ ಆ ಪುರಾಣಗಳೇ ಪ್ರಾಮಾಣಿಕವೆಂದು, ಅಂಗೀಕರಿಸಲ್ಪಡತಕ್ಕವು ಆದರಿಂದಾಗಿ ಆ ಪುರಾಣಗಳಲ್ಲಿ ಹೇಳಿರುವ ವಿಷ್ಣು ಪಾರಮ್ಯವು ಯಥಾರ್ಥವಾದದ್ದು ಪ್ರಾಮಾಣಿಕವೂ ಕೂಡ **ತೇಷ್ವೇವ ಯೋಗ ಸಂಸಿದ್ಧಾಃ ಗಮಿಷ್ಯಂತಿ ಪರಾಂಗತಿಮ್,** ಎಂದು ಸಾತ್ವಿಕ ಕಲ್ಪಗಳಲ್ಲಿ ಪ್ರಣೀತವಾದ ಪುರಾಣಗಳಿಂದ ಪರದೇವತೆಯಲ್ಲಿ ಅನನ್ಯ ಯೋಗ ನಿಷ್ಪತ್ತಿಯುಳ್ಳವರಾಗಿ ಮೋಕ್ಷವನ್ನು ಪಡೆಯುತ್ತಾರೆಯಾದ್ದರಿಂದ ದೇವತಾಂತರಗಳು ಮೋಕ್ಷವನ್ನು ಕೊಡಲನರ್ಹರು ಎಂಬುದು ಸಿದ್ಧ, **ಯೋಗಸಂಸಿದ್ಧಾಃ**-ಸಂಸಿದ್ಧ ಯೋಗಾಃ–ಆಹಿತಾಗ್ನಿವತ್ ಸಮಾಸಃ.

2] ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ |
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವವಿದಧಾಮ್ಯಹಮ್ ||
ಸತಯಾ ಶ್ರದ್ಧಯಾ ಯುಕ್ತಃ ತಸ್ಯಾರಾಧನ ಮೀಹತೇ ||
ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್ || ಭಾಗ ಗೀತ [21-27]

ಯಾರು ಯಾರು ನನ್ನ ಶರೀರ ಭೂತರಾದ ದೇವತೆಗಳನ್ನು ಶ್ರದ್ಧೆಯಿಂದ ಅರ್ಚಿಸಲು ಅಪೇಕ್ಷಿಸುತ್ತಾರೆಯೋ ಅವರವರಿಗೆ ಆ ಅಚಲವಾದ ಶ್ರದ್ಧೆಯನ್ನು ನಾನೇ ಕೊಡುತ್ತೇನೆ, ಆ ಶ್ರದ್ಧೆಯಿಂದ ಕೂಡಿದವರಾಗಿ ಅವರು ಆ ದೇವತೆಗಳ ಪೂಜಿಸಲು ಉದ್ಯುಕ್ತರಾಗುತ್ತಾರೆ ಆ ದೇವತಾಂತರ ಪೂಜೆಯಿಂದ, ಅವರು ಫಲಗಳನ್ನು ಪಡೆಯುತ್ತಾರೆ ಆ ಫಲಗಳನ್ನು ನಾನೇ ವಿಧಾಯಿಸಿರುವವನು

3] ಮಹಾ. ಭಾ 342-76–77 ದೇವತೆಗಳನ್ನು ಕುರಿತು ಭಗವಂತನು ಹೇಳುವುದೇನೆಂದರೆ –ಈ ಬ್ರಹ್ಮದೇವನೇ ನಿಮಗೆ ತಾಯಿ ಮತ್ತು ತಂದೆ, ಅವರ ಹಾಗೆ ಪೋಷಕನು ಸರ್ವ ಪ್ರಾಣಿಗಳಿಗೂ ಅವರವರ ವರಗಳಿಗೆ ಫಲವನ್ನು ಕೊಡುವಂತೆ, ನಾನೇ ಈ ಬ್ರಹ್ಮದೇವನನ್ನು ನಿಯಮಿಸಿದ್ದೇನೆ ಈ ಬ್ರಹ್ಮದೇವನ ತಮ್ಮನೇ ರುದ್ರನು ವಿರಾಟ್ ಪುರುಷನ ಹಣೆಯಿಂದ ಉಂಟಾದವನು ಬ್ರಹ್ಮದೇವನಿಂದ ನಿಯಮಿಸಲ್ಪಟ್ಟವನಾಗಿ ಎಲ್ಲರಿಗೂ ವರ ಪ್ರದಾನ ಮಾಡುತ್ತಾನೆ. [ಒಂದು ಕಲ್ಪದಲ್ಲಿ ರುದ್ರನು ಬ್ರಹ್ಮನ ತಮ್ಮನಾಗಿಯೂ ಮತ್ತೊಂದರಲ್ಲಿ ಮಗನಾಗಿಯೂ ಹುಟ್ಟಿರುತ್ತಾನೆ.]

(4) , (5) ಪು ತಿ. ಸೋ.

ಭಗವಾನೇವ ಸರ್ವಫಲಪ್ರದಃ

ಸರ್ವೇಶ್ವರನ್ ಪಕ್ಕಲ್ "ಯುಗಕೋಟಿ ಸಹಸ್ರಾಣಿ ವಿಷ್ಣುಮಾರಾಧ್ಯ ಪದ್ಮಭೂಃ" ಇತ್ಯಾದಿಹಳಿಲ್ ಪಡಿಯೇ ಅತಿಶಯಿತಮಾನ ಐಶ್ವರ್ಯಾದಿಹಳುಮ್‌ವರುಮ್. ಪಿನ್ಪು, ವಿಡಾಯ್ ತೀರ ಗಂಗಾಸ್ನಾನಂ ಪಣ್ಣ, ಪಾಪಂ ಪೋಮಾಪ್ಪೋಲೇ ವಿಷಯ ಸ್ವಭಾವತ್ತಾಲೇಯಾನುಷಙ್ಗಿಕಮಾಹ ಪಾಪಕ್ಷಯಮ್‌ಪಿರನ್ದು-ರಜಸ್ತಮಸ್ಸುಕ್ಕಳ್-ತಲೈ ಶಾಯ್‌ನ್ದು ಸತ್ತ್ವೋನ್ಮೇಷ ಮುಣ್ಡಾಯ್ ಜನಕಾಂಬರೀಷ ಕೇಕಯಾದಿಹಳುಕ್ಕುಪ್ಪೋಲೇ ಕ್ರಮೇಣ ಮೋಕ್ಷಪರ್ಯನ್ತಮಾಯ್ ವಿಡುಮ್

ಭಗವಂತನು ಸರ್ವ ಫಲ ಪ್ರದನು.

ಭಗವಂತನು ಮೋಕ್ಷ ಫಲವನ್ನು ಕೊಡುತ್ತಾನೆಯಾದರೆ, ಇತರ ಐಹಿಕ ಫಲಗಳನ್ನು ಕೊಡಬಲ್ಲನೇ ಅಥವಾ ಆ ಫಲಗಳಿಗಾಗಿಯಾದರೂ ದೇವತಾಂತರಗಳನ್ನೇ ಆಶ್ರಯಿಸಬಹುದೇ ಎಂಬ ಶಂಕೆಗೆ **"ಸರ್ವೇಶ್ವರನ್ ಪಕ್ಕಲ್"** ಎಂದಾರಂಭಿಸಿ ಸಮಾಧಾನವನ್ನು ಹೇಳುತ್ತಾರೆ **ಆದಾಗಿ** ಸರ್ವೇಶ್ವರನ ಸಕಾಶದಿಂದ **"ಯುಗಕೋಟಿ ಸಹಸ್ರಾಣಿ** ಇತ್ಯಾದಿಗಳಲ್ಲಿ ಹೇಳಿರುವ ಪ್ರಕಾರ ಅತಿಶಯವಾದ ಐಶ್ವರ್ಯಾದಿ ಪುರುಷಾರ್ಥಗಳೂ ಲಭಿಸುತ್ತವೆ ಬ್ರಹ್ಮರುದ್ರಾದಿ ಉತ್ತಮ ಸ್ಥಾನವನ್ನೇ ಭಗವಂತನು ಕೊಡುತ್ತಾನೆಂದರೆ, ಲೋಕದಲ್ಲಿ ಇತರ ಸಾಮಾನ್ಯ ಐಶ್ವರ್ಯವೂ ಅತನಿಂದ ಲಭ್ಯವೆಂಬುದು ಅರ್ಥಾತ್ ಸಿದ್ಧ **"ಐಶ್ವರ್ಯಾದಿ"** ಎಂಬಲ್ಲಿ ಆದಿಶಬ್ದವು ಕೈವಲ್ಯವನ್ನು ಸೂಚಿಸುತ್ತದೆ

ಭಗವಂತನನ್ನು ಐಶ್ವರ್ಯಾದಿ ಪುರುಷಾರ್ಥಗಳಿಗೆ ಆಶ್ರಯಿಸಿದರೆ ಆಯಾಯಾ ಪುರುಷಾರ್ಥಗಳು ಲಭಿಸುವುದಲ್ಲದೆ, ವಿಷಯ ಸ್ವಭಾವದಿಂದ ಮೋಕ್ಷಾಂತವಾದ ಐಶ್ವರ್ಯವೂ ಕ್ರಮೇಣ ಲಭಿಸುತ್ತದೆ ಎಂಬುದನ್ನು ಸದೃಷ್ಟಾಂತವಾಗಿ **ಪಿನ್ಪುವಿಡಾಯ್ ತೀರ** ಎಂದಾರಂಭಿಸಿ ಉಪಪಾದಿಸುತ್ತಾರೆ ಆದಾಗಿ **ಪಿನ್ಪು**–ಐಹಿಕ ಫಲಸಿದ್ಧಿಯುಂಟಾದ ನಂತರ, ಗಂಗಾಸ್ನಾನ ಮಾಡಿದರೆ ದಾಹಶಮನವಾಗುವುದಲ್ಲದೆ, ಗಂಗಾಸ್ನಾನ ಫಲವೂ ಲಭಿಸಿ ಪಾಪವೂ ಕಳೆಯುವಂತೆ ಐಹಿಕ ಫಲ ಸಿದ್ಧಿ ನಿಮಿತ್ತವಾಗಿ ಮಾಡುವ ಭಗವತ್ಸಮಾಶ್ರಯಣವು ವಿಷಯ ಸ್ವಭಾವದಿಂದ ಆನುಷಂಗಿಕವಾಗಿ (ಭಗವತ್ಸಮಾಶ್ರಯಣವೆಂಬ ಸಂಬಂಧದಿಂದ) ಪಾಪಕ್ಷಯವನ್ನುಂಟು ಮಾಡಿ ರಜೋಗುಣ ತಮೋಗುಣಗಳನ್ನು ಕಡಿಮೆ ಮಾಡಿ ಸತ್ತ್ವ ಗುಣವನ್ನು ಹೆಚ್ಚಿಸಿ ಜನಕಾಂಬರೀಷ ಕೇಕಯ ರಾಜರುಗಳಿಗೆ ಹೇಗೋ ಹಾಗೆ ಕ್ರಮವಾಗಿ ಮೋಕ್ಷಪರ್ಯಂತ ಫಲವನ್ನು ಕೊಡುತ್ತದೆ. ಇದರಿಂದ ದೇವತಾಂತರಗಳ ಸಮಾಶ್ರಯಣವು ವಿಳಂಬಿಸಿಯೂ ಮೋಕ್ಷವನ್ನು ಕೊಡಲಾರದೆಂಬುದು ಹೇಳಲ್ಪಟ್ಟು, ಆ ದೇವತಾಂತರಗಳಿಗೂ ಭಗವಂತನಿಗೂ ಸಾಮ್ಯವಾಗಲಿ ಐಕ್ಯವಾಗಲಿ ಸುತರಾಂ ಘಟಿಸುವುದಿಲ್ಲವೆಂಬುದು ತಿಳಿಸಲ್ಪಟ್ಟಿತು.

4] ಬ್ರಹ್ಮಾಣಂ ಶಿತಿಕಂಠಂಚ ಯಾಶ್ಚಾನ್ಯಾ ದೇವತಾಃ ಸ್ಮೃತಾಃ ।
ಪ್ರತಿಬುದ್ಧಾ ನ ಸೇವಂತೇ ಯಸ್ಮಾತ್ ಪರಿಮಿತಂ ಫಲಮ್ ॥ (ಭಾರತ ಶಾಂತಿಪರ್ವ 250–26)

ಬ್ರಹ್ಮ ರುದ್ರ ಮೊದಲಾದ ದೇವತೆಗಳನ್ನು ಜ್ಞಾನಿಗಳು ಉಪಾಸನೆ ಮಾಡುವುದಿಲ್ಲ ಏಕೆಂದರೆ ಅವರುಗಳಿಂದ ಉಂಟಾಗುವ ಫಲವು ಅಲ್ಪವಾದದ್ದು ಶಾಶ್ವತವಾದ ಮೋಕ್ಷ ಫಲವು ಸಿಗಲಾರದು 5) ಮಾತ್ಸ್ಯ ಪುರಾಣ 290-16 ಸಾತ್ತ್ವಿಕ ಕಲ್ಪಗಳಲ್ಲಿ ಬ್ರಹ್ಮದೇವನಿಗೆ ಸತ್ತ್ವಗುಣವು ಹೆಚ್ಚಿರುತ್ತದೆ ಆಗ ಹರಿಯ ಮಹಾತ್ಮ್ಯವನ್ನು ವಿಶೇಷವಾಗಿ ತಿಳಿಸುತ್ತಾನೆ ಆ ಕಲ್ಪಗಳಲ್ಲಿಯೇ ಯೋಗಸಿದ್ಧಿಯನ್ನು ಪಡೆದವರು ಮೋಕ್ಷಕ್ಕೆ ಹೋಗುತ್ತಾರೆ

1 ಯುಗಕೋಟಿ ಸಹಸ್ರಾಣಿ ವಿಷ್ಣು ಮಾರಾಧ್ಯ ಪದ್ಮ ಭೂಃ ।
ಪುನಸ್ತ್ರೈಲೋಕ್ಯ ಧಾತೃತ್ವಂ ಪ್ರಾಪ್ತವಾನಿತಿ ಶುಶ್ರುಮ ॥ (ಭಾರತ ಕುಂಡ ಧರೋಪಾಖ್ಯಾನ)

ಬ್ರಹ್ಮದೇವನು ಕೋಟಿ ಯುಗಗಳ ಕಾಲ ಮಹಾ ವಿಷ್ಣುವನ್ನು ಆರಾಧಿಸಿ ತಿರುಗಿಯೂ ಮೂರು ಲೋಕಗಳಿಗೂ 'ಧಾತಾ" ಎಂಬ ಪದವಿಯನ್ನು ಪಡೆದನೆಂದು ಕೇಳುತ್ತೇವೆ.

ಮೋಕ್ಷೋಪಾಯನಿಷ್ಠಾನಾಮ್ ಪ್ರೋದು,

೧ ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।

೨ ಯೇ ಜನ್ಮಕೋಟಿಭಿಸ್ಸಿದ್ಧಾ ಸ್ತೇಷಾಮಂತ್ರೇತ್ರ ಸಂಸ್ಥಿತಿಃ ।

೩ ಜನ್ಮಾಂತರ ಸಹಸ್ರೇಷು ತಪೋಧ್ಯಾನ ಸಮಾಧಿಭಿಃ ।
ನರಾಣಾಂ ಕ್ಷೀಣಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ ।

ಎನ್‌ಹಿರಪಡಿಯೇ ವಿಳಮ್ಬಮುಣ್ಡು, ಮೋಕ್ಷರುಚಿ ಪಿರನ್ದು ವಲ್ಲದೊರು ಉಪಾಯತ್ತಿಲೇ ಮೂಣ್ಡಾಲ್,

೪ ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್ ।
ಭವಾಮಿ ನ ಚಿರಾತ್ಪಾರ್ಥ ಮಯ್ಯಾವೇಶಿತ ಚೇತಸಾಮ್ ॥

ಹೀಗೆ ಐಶ್ವರ್ಯಾರ್ಥಿಯು ಐಶ್ವರ್ಯವನ್ನು ಅನುಭವಿಸಿ ಅದರಲ್ಲಿ ವೈರಾಗ್ಯವುಂಟಾಗಿ ಅನಂತರ ಮೋಕ್ಷದಲ್ಲಿ ರುಚಿಯುಂಟಾಗಿ ಅದಕ್ಕಾಗಿ ಭಕ್ತಿಯೋಗಾದಿಗಳಲ್ಲಿ ಪ್ರವರ್ತಿಸುತ್ತಾನೆ. ಇದಕ್ಕೆ ಬಹು ಕಾಲವಿಳಂಬ ವುಂಟಾಗುತ್ತದೆ ಎಂಬುದನ್ನು **ಮೋಕ್ಷೋಪಾಯನಿಷ್ಠನಾಂಪ್ರೋದು** ಎಂದಾರಂಭಿಸಿ ವಿವರಿಸುತ್ತಾರೆ. **ಮೋಕ್ಷೋ** ಪಾಯ ನಿಷ್ಠನಾಂ ಪ್ರೋದು—ಭಗವತ್ಸಮಾಶ್ರಯಣದಿಂದ ಲಭಿಸಿದ ಐಶ್ವರ್ಯ ಕೈವಲ್ಯ ಪುರುಷಾರ್ಥಗಳನ್ನು ಅನು ಭವಿಸಿ ಅದರಲ್ಲಿ ವೈರಾಗ್ಯವುಂಟಾಗಿ ಮೋಕ್ಷದಲ್ಲಿ ಅಭಿರುಚಿಯುಂಟಾಗಿ ಮೋಕ್ಷೋಪಾಯದಲ್ಲಿ ನಿಷ್ಠೆಯುಳ್ಳವ ನಾದಾಗ, 1 **ಬಹೂನಾಂ ಜನ್ಮನಾಂ 2. ಯೇಜನ್ಮಕೋಟಿಭಿಃ 3. ಜನ್ಮಾಂತರ ಸಹಸ್ರೇಷು** ಎಂಬ ವಚನಗಳ ಪ್ರಕಾರ ವಿಳಂಬವು ಉಂಟು

ಹೀಗೆ ಬಹು ಪುಣ್ಯಜನ್ಮಗಳ ನಂತರ ಭಗವಂತನಲ್ಲಿ ಅನನ್ಯ ಭಕ್ತಿಯುಂಟಾಗುವುದು ವಿಳಂಬವೆಂಬುದನ್ನು ಹೇಳಿ ಯಾಯ್ತು. ಆರಂಭದಲ್ಲಿಯೇ ಉತ್ಕಟ ಸುಕೃತ ವಶದಿಂದ ಐಶ್ವರ್ಯಾದಿಗಳಲ್ಲಿ ಆಸೆಪಡದೆ, ಮೋಕ್ಷದಲ್ಲಿ ಆಸೆಯುಳ್ಳವರಿಗೆ, ಮೋಕ್ಷ ಸಿದ್ಧಿಯಲ್ಲಿ ವಿಳಂಬವಿಲ್ಲವೆಂದು **ಮೋಕ್ಷರುಚಿಪಿರಂದು** ಎಂದಾರಂಭಿಸಿ ಆಚಾರ್ಯರು ನಿಗಮಿಸುತ್ತಾರೆ ಅದಾಗಿ ಆರಂಭದಲ್ಲಿಯೇ ಮೋಕ್ಷದಲ್ಲಿ ರುಚಿಯುಂಟಾಗಿ, ಶಾಸ್ತ್ರ ಚೋದಿತವಾದ ಭಕ್ತಿ ಪ್ರಪತ್ತಿರೂಪ ಉಪಾಯಗಳ ಲ್ಲೊಂದನ್ನು ಅನುಷ್ಠಿಸಿದರ,**"ತೇಷಾಂ ಅಹಂ ಸಮುದ್ಧರ್ತಾ"4.** ಎಂಬ ರೀತಿಯಲ್ಲಿ ಮೋಕ್ಷವು ಸಿದ್ಧಿಸಲು ವಿಳಂಬವಿಲ್ಲ. **ಸ್ವತಂತ್ರ ಪ್ರಪತ್ತಿ ನಿಷ್ಠನುಕ್ಕು**—ಇತ್ಯಾದಿ. ಭಕ್ತಿಯೋಗವು ಫಲಕಾರಿಯಾಗಲು ಅದಕ್ಕೆ ವಿರೋಧಿ

1] ಗೀತ 7-19 ವಾಸುದೇವಸ್ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥ ಎಂಬುದು ಉತ್ತರಾರ್ಧ ಅನೇಕ ಪುಣ್ಯ ಜನ್ಮಗಳ ನಂತರ ವಾಸುದೇವನೇ ಸಮಸ್ತ ಪ್ರಪಂಚಾತ್ಮಕನು, ಪ್ರಾಪಕನೂ ಪ್ರಾಪ್ಯನೂ ಎಂಬ ಜ್ಞಾನವನ್ನು ಪಡೆದು ನನ್ನನ್ನು [ಕೃಷ್ಣಪದ ಮಾತ್ರನನ್ನು] ಶರಣಹೊಂದುತ್ತಾನೆ ಅಂಥವ ಮಹಾತ್ಮ ಸುದುರ್ಲಭನು ಜೀವನು ಅನಾದಿಯಾದ್ದರಿಂದ ಅನೇಕ ಜನ್ಮಗಳು ಸಿದ್ಧ ವಾಗಿರುತ್ತವೆ ಅದು ಮೇಲೆ ಹೇಳಿದ ಜ್ಞಾನಕ್ಕೆ ಕಾರಣವಾಗಲಾರದು ಆದ್ದರಿಂದ ಅನೇಕ ಪುಣ್ಯ ಜನ್ಮಗಳ ದೆಸೆಯಿಂದಾಗಿ ಪಾಪ ಕ್ಷಯವು ಏರ್ಪಟ್ಟು ಸಾತ್ವಿಕ ಬುದ್ಧಿಯು ಬೆಳ್ದು ಜ್ಞಾನವನ್ನು ಪಡೆಯಲು ಕಾರಣವಾಗುತ್ತದೆಯಾದ್ದರಿಂದ, ಬಹೂನಾಂ ಜನ್ಮನಾಂ ಎಂಬುದಕ್ಕೆ ಅನೇಕ ಪುಣ್ಯ ಜನ್ಮಗಳೆಂದು ನಮ್ಮ ಪೂರ್ವಾಚಾರ್ಯರುಗಳು ವ್ಯಾಖ್ಯಾನ ಮಾಡಿರುತ್ತಾರೆ

2] ಸೇತಿ ಹಾಸಪುರಾಣೈಸ್ತು ವೇದೈರ್ವೇದಾಂತ ಸಂಯುತೈಃ॥
ಯೇ ಜನ್ಮಕೋಟಿಭಿ ಸ್ಸಿದ್ಧಾಃ ತೇಷಾಮಂತ ತ್ರ ಸಂಸ್ಥಿತಿಃ॥ ಪಾ ಸಂ [38-205

ಅನೇಕ ಕೋಟಿ ಜನ್ಮಗಳಲ್ಲಿ ಭಗವಂತನನ್ನು ಆಶ್ರಯಿಸಿ ಐಶ್ವರ್ಯಾದಿಗಳನ್ನು ಪಡೆದವರು, ಅವುಗಳಲ್ಲಿ ವೈರಾಗ್ಯವನ್ನು ಪಡೆದವರಾಗಿ ಇತಿಹಾಸಪುರಾಣ, ವೇದ ವೇದಾಂತ ಕಾಲಕ್ಷೇಪವನ್ನು ಮಾಡಿ ಭಗವಂತನಲ್ಲಿ ಅನನ್ಯ ಪ್ರಯೋಜನವಾದ ಭಕ್ತಿಯುತರಾಗಿ ಅತ್ರ-ಭಕ್ತಿ ಪ್ರಪತ್ತಿಗಳೆಂಬ ಉಪಾಯಗಳಲ್ಲಿ ಸಂಸ್ಥಿತಿಃ-ಸಮ್ಯಕ್ ಸ್ಥಿತಿ -ಸಮಾಚೀನವಾದ ನಿಷ್ಠೆಯು ಉಂಟಾಗಿ ಅವುಗಳ ಲ್ಲೊಂದನ್ನು ಅನುಷ್ಠಿಸುತ್ತಾರೆ

3] ಪಾಂಚರಾತ್ರ - ಸಾವಿರಾರು ಜನ್ಮಗಳಲ್ಲಿ ಮಾಡಿದ ಫಲಾಂತರ ಪ್ರಯೋಜನವಾದ ತಪಸ್ಸು, ಧ್ಯಾನ, ಸಮಾಧಿಗಳಿಂದ, ನರಾಣಾಂ ಕ್ಷೀಣಪಾಪಾನಾಂ-ಆನುಷಂಗಿಕವಾದ ಪಾಪಕ್ಷಯವು ಉಂಟಾದ ಜನರಿಗೆ, ಕೃಷ್ಣನಲ್ಲಿ ಅನನ್ಯಪರವಾದ ಭಕ್ತಿಯು ಉಂಟಾಗುತ್ತದೆ, ಅಂದರೆ ಐಶ್ವರ್ಯಾದಿ ಫಲಗಳಲ್ಲಿ ಜಿಹಾಸೆಯುಂಟಾಗಿ "ಮಯಿಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ' ಎಂಬ ಅನನ್ಯ ಭಕ್ತಿಯು ಉಂಟಾ ಗುತ್ತದೆಯೆಂದರ್ಥ.

ಪು.ತಿ ನೊ

ಎನ್ನಿರಪಡಿಯೇ ಮೋಕ್ಷಸಿದ್ಧಿಕ್ಕು ವಿಳಂಬಮಿಲ್ಲೈ. ಸ್ವತನ್ತ್ರಪ್ರಪತ್ತಿನಿಷ್ಠನುಕ್ಕು ತಾನ್ಕೋಲಿನದೇ ಯುಳವು, ವೇರು ವಿಳಮ್ಬಾವಿಳಮ್ಬಙ್ಗಳುಕ್ಕುಕ್ಕರಿಯಿಲ್ಲೈ. ಇನ್ನಿಯಮಙ್ಗಳೆಲ್ಲಾಮ್, (೧) "ಸ್ವಾತನ್ತ್ರ್ಯಮೈಶ್ವರಮಪರ್ಯನುಯೋಜ್ಯಮಾಹುಃ" ಎನ್ಹಿರ ನಿರಙ್ಕುಶ ಸ್ವಚ್ಛನ್ದತ್ತೈಯಾಲೇ ಸಿದ್ಧಙ್ಗಳೆನ್ರು ಪ್ರಮಾಣಪರತನ್ತ್ರರುಕ್ಕು ಸಿದ್ಧಮ್.

ದೇವತಾನ್ತರಭಜನಂ ಮುಮುಕ್ಷೋಃ ತ್ಯಾಜ್ಯಮ್

ಇವ್ವರ್ಥಙ್ಗಳಿಪ್ಪಡಿ ತ್ತೆಳಿಯಾದಾರ್ಕ್ಕೇ ದೇವತಾನ್ತರಙ್ಗಳ್ ಸೇವ್ಯಙ್ಗಳೆನ್ರು ಪಿಂಡಮ್ "ಪ್ರತಿಬುದ್ಧವರ್ಜಂ ಸೇವ್ಯನ್ತು" ಎನ್ರು ವ್ಯವಸ್ಥೈ ಪಣ್ಣಪ್ಪಟ್ಟದು.

ರ್ಧಾದ ಪಾಪಗಳನ್ನು ನೀಗಿಸಲು ಮಾಡುವ ಪ್ರಪತ್ತಿಗೆ ಅಂಗಪ್ರಪತ್ತಿ ಎಂಬ ಹೆಸರು ಭಕ್ತಿಯೋಗವನ್ನು ಮಾಡಲು ಜ್ಞಾನ ಶಕ್ತಿಯಿಲ್ಲದವರೂ, ವಿಳಂಬವನ್ನು ಸಹಿಸಲಾರದವರೂ ಸಾಕ್ಷಾತ್ತಾಗಿಯೇ ಮೋಕ್ಷಫಲದಲ್ಲಿ ಆಶೆಯಿಂದ ಮಾಡುವ ಪ್ರಪತ್ತಿ, ಸ್ವತಂತ್ರ ಪ್ರಪತ್ತಿ ಈ ಪ್ರಪತ್ತಿಯು ಭಕ್ತಿಯೋಗವನ್ನು ಅನುಷ್ಠಿಸದೆಯೇ, ಆ ಭಕ್ತಿಯೋಗವನ್ನು ಅನುಷ್ಠಿಸಿದರೆ ಕೊಡುವ ಫಲವನ್ನು ತಾನೇ ಕೊಡುತ್ತದೆಯಾದ್ದರಿಂದ ಇದನ್ನು **ಸ್ವತಂತ್ರ ಪ್ರಪತ್ತಿ** ಎಂದು ವ್ಯವಹರಿಸುತ್ತಾರೆ ಅಂಥವ ಸ್ವತಂತ್ರ ಪ್ರಪತ್ತಿ ನಿಷ್ಠನಿಗೆ, ತಾನು ಅಪೇಕ್ಷಿಸುವ ಕ್ಷಣಾಂತರ, ದಿವಸಾಂತರ, ದೇಹಾವಸಾನ ಕಾಲವೇ ಮೋಕ್ಷವನ್ನು ಪಡೆಯಲು ಅವಧಿ ಬೇರೆ ವಿಳಂಬಕ್ಕೂ ವಿಳಂಬವಿಲ್ಲದೆ ಇರುವುದಕ್ಕೂ ಕಾರಣವಿಲ್ಲ. **ಇನ್ನಿಯಮಂಗಳೆಲ್ಲಾಮ್** ಇತ್ಯಾದಿ–ಇಂಥವರ ದೇವತಾಂತರ ಭಕ್ತಿಯುಳ್ಳವರಿಗೆ ನರಕಾದಿಗಳು, ಐಶ್ವರ್ಯ ಕೈವಲ್ಯ ಪುರುಷಾರ್ಥಗಳಲ್ಲಿ ಆಸೆಪಟ್ಟು ಭಗವಂತನನ್ನು ಆಶ್ರಯಿಸುವವರಿಗೆ ಆ ಪುರುಷಾರ್ಥಗಳಲ್ಲ ಕ್ರಮೇಣ ಜಿಹಾಸೆಯುಂಟಾಗಿ ಅನೇಕ ಪುಣ್ಯಜನ್ಮಗಳ ನಂತರ ಭಕ್ತಿ ಪ್ರಪತ್ತಿಗಳಲ್ಲೊಂದನ್ನು ಅನುಷ್ಠಿಸುವಂತ ಜ್ಞಾನವು ಉಂಟಾಗಿ ನಂತರ ಮೋಕ್ಷಸಿದ್ಧಿ ಎಂಬುದೂ, ಭಕ್ತಿಯೋಗ ನಿಷ್ಠನಿಗೆ ಕರ್ಮಾವಸಾನದಲ್ಲಿ ಮೋಕ್ಷವೆಂದೂ ಸ್ವತಂತ್ರ ಪ್ರಪತ್ತಿ ನಿಷ್ಠನಿಗೆ ತಾನು ಅಪೇಕ್ಷಿಸುವ ಕಾಲದಲ್ಲೇ ಸರ್ವಕರ್ಮಕ್ಷಯವು ಏರ್ಪಟ್ಟು ಮೋಕ್ಷವು ಲಭಿಸುತ್ತದೆ, ಎಂಬ ಈ ನಿಯಮಗಳೆಲ್ಲಾ – **ಸ್ವಾತಂತ್ರ್ಯಮೈಶ್ವರಂ,** ಇತ್ಯಾದಿ ಹೇಳುವ ರೀತಿಯಲ್ಲಿ ಭಗವಂತನ ನಿರಂಕುಶಸ್ವಾತಂತ್ರ್ಯಾಧೀನ. ಇದನ್ನು ಪ್ರಶ್ನಿಸಲು ಯಾರಿಗೂ ಅಧಿಕಾರವಿಲ್ಲವೆಂಬುದು ಪ್ರಮಾಣ ವಚನಗಳಿಗೆ ಅಧೀನರಾದವರಿಗೆ ತಿಳಿಯುತ್ತದೆ. **ಪರ್ಯನುಯೋಗ:** –ಪ್ರಶ್ನೆ.

ಮುಮುಕ್ಷುವಿಗೆ ದೇವತಾಂತರ ಭಜನವು ತ್ಯಾಜ್ಯ

ಇವ್ವರ್ಥಂಗಳಿಪ್ಪಡಿ ಇತ್ಯಾದಿ ಸರ್ವೇಶ್ವರನಿಗೂ ದೇವತಾಂತರಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಯದವರಿಗೆ ದೇವತಾಂತರಗಳು ಸೇವ್ಯರೆಂಬುದು, **"ಪ್ರತಿಬುದ್ಧವರ್ಜ್ಯಂ ಸೇವ್ಯಂತು"** – "ಜ್ಞಾನಿಗಳಲ್ಲದವರಿಗೇನೆ ದೇವತಾಂತರಗಳು ಸೇವ್ಯರು," ಎಂದು ವ್ಯವಸ್ಥೆ ಮಾಡಲ್ಪಟ್ಟಿದೆ. ಇದರಿಂದ "ಸೂರ್ಯಸ್ಯೈವತು ಯೋ ಭಕ್ತಃ" ಇತ್ಯಾದಿ ಆರಂಭಿಸಿ ಹಿಂದೆ ಹೇಳಲ್ಪಟ್ಟ, ಸೂರ್ಯ, ರುದ್ರ ಇವರಗಳನ್ನು ಉಪಾಸನೆ ಮಾಡುವವರು ಪ್ರತಿಬುದ್ಧರಲ್ಲರೆಂಬುದು ವ್ಯಕ್ತ

ಪ್ರತಿಬುದ್ಧರಿಗೂ ಇತರರಿಗೂ ಫಲದಲ್ಲಿ ತಾರತಮ್ಯ.

ಇದ್ದೇವತಾಂತರಂಗಳೈ ಇತ್ಯಾದಿ. ಈ ದೇವತಾಂತರಗಳನ್ನು ಭಗವಂತನ ಶರೀರವೆಂದು ತಿಳಿಯದೆ ಆಶ್ರಯಿಸುವವರಿಗೆ ಚಾರ್ವಾಕನಾಗಿರುವ – (ನಾಸ್ತಿಕನು – ದೇಹವನ್ನೇ ಆತ್ಮಾವೆಂದು ಹೇಳುವವನು) ಒಬ್ಬ ರಾಜಸೇವಕನು ರಾಜನ ದೇಹದಲ್ಲಿ ಚಂದನ ಪುಷ್ಪಗಳನ್ನು ಹಚ್ಚಿದರೆ, ರಾಜಶರೀರದಲ್ಲಿರುವ ಆತ್ಮಾ ಪ್ರೀತನಾಗುವಂತೆ,

---

4] ಗೀತೆ 12-7 ಭಗವಂತನಲ್ಲೇ ನೆಟ್ಟ ಮನಸ್ಕರಾದವರನ್ನು, ಮೃತ್ಯುರೂಪವಾದ ಸಂಸಾರ ಸಾಗರದಿಂದ, ವಿಳಂಬವಿಲ್ಲದೇನೆ ನಾನೇ ಎತ್ತಿ ಬಿಡುತ್ತೇನೆ ಅಂದರೆ ಅವರ ಅನಾದಿಯಾದ ಸಂಸಾರ ಕ್ಲೇಶವನ್ನು ಹೋಗಲಾಡಿಸುತ್ತೇನೆಂದರ್ಥ

1) ವೈಕುಂಠಸ್ತವ (55) –

(ಪ್ರ ತಿ ಸೂ)

ದೇವತಾನ್ತರಯೋಃ ಫಲಪ್ರಾಪ್ತೌ ತಾರತಮ್ಯವರ್ಣನಮ್

ಇದ್ದೇವತಾನ್ತರಙ್ಗಳ್ಕ್ಕೆ ಭಗವಚ್ಛರೀರ ಮೆನ್ರರಿಯಾದೇ ಪತ್ತಿನಾರ್ಕ್ಕು, ಚಾರ್ವಾಕನಾಯಿರುಪ್ಪಾನೊರು ಸೇವಕರ್ಕ್ಕ ರಾಜಾವಿನುಡಮ್ಬಿಲೇ ಚನ್ದನಾದಿಹಳ್ಳೈ ಪ್ರಯೋಗಿಕ್ಕ ರಾಜಶರೀರತ್ತಿಲಾತ್ಮಾ ಪ್ರೀತನಾಮಾಪ್ಪೋಲೇ, ವಸ್ತುವೃತ್ತಿಯಿಲ್ ಸರ್ವೇಶ್ವರನೇ ಯಾರಾಧ್ಯನಾನಾಲುಮ್,

2) "ಯೇತ್ವನ್ಯದೇವತಾ ಭಕ್ತಾ ಯಜನ್ತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜನ್ತ್ಯವಿಧಿಪೂರ್ವಕಮ್ ॥"

ಎನ್ಹಿರಪಡಿಯೇ ಶಾಸ್ತ್ರಾರ್ಥವೈಕಲ್ಯಮುಂಡಾನಪಡಿಯಾಲೇ ಯವರ್ಙ್ಗಳುಕ್ಕು ಫಲಂ ವಿಕಲಮಾಮ್.

ಭಗವಚ್ಛರೀರಙ್ಗಳೆನ್ರರಿನ್ದು ಕ್ಷುದ್ರಫಲಙ್ಗಳೈಕ್ಕಡುಹ ಪ್ಪೆರವೇಣುಮೆನ್ನಿರ ರಾಗ ವಿಶೇಷತ್ತಾಲೇಯವರ್ಙ್ಗಳೈ ಯುಪಾಸಿಪ್ಪಾರ್ಕ್ಕು ಅವ್ವೋಫಲಙ್ಗಳ್ ಪೂರ್ಣಙ್ಗಳಾಮ್. ಇಪ್ಪಡಿ ಯರಿನ್ದಾಲ್ ಭಗವಾನ್ ತನ್ನೈಯೇ 3) "ಆರ್ತೋಜಿಜ್ಞಾಸುರರ್ಥಾರ್ಥೀ" ಎನ್ಹಿರ ಪಡಿಯೇ ಫಲಾನ್ತರಙ್ಗಳುಕ್ಕಾಹವುಮ್ ಪಱ್ಱಿನಾಲನ್ದಫಲಙ್ಗಳ್ ಅತಿಶಯಿತಙ್ಗಳಾಮ್.

ವಸ್ತುತಃ ಆ ದೇವತಾಂತರಗಳಿಗೆ ಅಂತರ್ಯಾಮಿಯಾದ ಭಗವಂತನೇ ಪ್ರೀತನಾಗುತ್ತಾನೆ ಆ ಚಾರ್ವಾಕನಿಗೆ ರಾಜನ ಶರೀರದಲ್ಲಿರುವ ಆತ್ಮಾ ಪ್ರೀತನಾಗುತ್ತಾನೆಂಬ ಜ್ಞಾನವಿಲ್ಲ ಅಚೇತನವಾದ ಶರೀರವು ವಸ್ತುವೃತ್ತಿಯಲ್ಲಿ ಪ್ರೀತಿ ಹೊಂದುವುದಿಲ್ಲವೆಂಬ ಜ್ಞಾನವೂ ಅವನಿಗಿಲ್ಲ ಆ ರೀತಿಯಲ್ಲಿ 2) **ಯೇತ್ವನ್ಯ ದೇವತಾ ಭಕ್ತಾಃ** ಇತ್ಯಾದಿಗಳಲ್ಲಿ ಹೇಳಿರುವಂತೆ ಅಂತರ್ಯಾಮಿಯಾದ ಭಗವಂತನೇ ಪ್ರೀತನಾದರೂ, ದೇವತಾಂತರ ಭಕ್ತರಿಗೆ ಆ ಜ್ಞಾನವಿಲ್ಲದಿರುವುದರಿಂದ, ಶಾಸ್ತ್ರಾರ್ಥಕ್ಕೆ **ವೈಕಲ್ಯ** – ಕುಂದುಕವು ಉಂಟಾದ್ದರಿಂದ ಆ **ದೇವತಾಂತರ** ಭಜನದಿಂದ ಉಂಟಾಗುವ ಫಲವು ವಿಕಲವು– ಪೂರ್ಣವಲ್ಲ.

ಭಗವಚ್ಛರೀರಂಗಳೆನ್ರರಿಂದು – "ಯೋ ಯೋ ಯಾಂ ಯಾಂ ತನುಂ ಭಕ್ತಃ" ಎಂದು ಗೀತೆಯಲ್ಲೇ ಎಲ್ಲಾ ದೇವತೆಗಳೂ ಭಗವಂತನ ಶರೀರಗಳು ಎಂದು ಹೇಳಲ್ಪಟ್ಟ ರೀತಿಯಲ್ಲಿ – ಅಂದರೆ ಎಲ್ಲಾ ದೇವತೆಗಳೂ ಭಗವಂತನಿಗೆ ಅಪೃಥಕ್‌ಸಿದ್ಧ ವಿಶೇಷಣಭೂತರು – ಅವನು ಅಂತರ್ಯಾಮಿಯಾಗಿದ್ದು ಅವನ ನಿಯಮನಕ್ಕೆ ಒಳಪಟ್ಟು ಅವನ ಅಪ್ಪಣೆಯ ಪ್ರಕಾರ ನಡೆದು ಕೊಳ್ಳುವವರು, ಎಂದು ತಿಳಿದುಕೊಂಡು, ಅಲ್ಪಫಲಗಳನ್ನು ಶೀಘ್ರವಾಗಿ ಪಡೆಯಬೇಕೆಂಬ ರಾಗ ವಿಶೇಷದಿಂದ (ವಿಶೇಷವಾದ ಆಸೆ) ಆ ದೇವತೆಗಳನ್ನು ಉಪಾಸನೆ ಮಾಡುವವರಿಗೆ ಆಯಾಯಾ ಫಲಗಳು ಪೂರ್ಣಗಳು. ದೇವತಾಂತರಗಳು ಭಗವಂತನ ಶರೀರವೆಂದು ತಿಳಿದ ತತ್ವಜ್ಞಾನಿಯೂ ಆ ದೇವತಾಂತರಗಳನ್ನು ಆಶ್ರಯಿಸುವುದಕ್ಕೆ ಕಾರಣವೇನೆಂದರೆ ಕ್ಷುದ್ರಫಲಗಳನ್ನು ಶೀಘ್ರವಾಗಿ ಪಡೆಯಬೇಕೆಂಬ ಆಸೆ. ಪ್ರಾರಬ್ಧ ಕರ್ಮಕ್ಕೆ ಪರವಶವಾಗಿರುವುದೇ ಇದಕ್ಕೆ ಕಾರಣ. **ಇಪ್ಪಡಿಯರಿಂದಾಲ್** ಹೀಗೆ ದೇವತಾಂತರಗಳು

---

1) ರೂಪ ಪ್ರಕಾರ ಪರಿಣಾಮ ಕೃತವ್ಯವಸ್ಥಂ ವಿಶ್ವಂ ವಿಪರ್ಯಸಿತು ಮನ್ಯದಸಚ್ಚ ಕರ್ತುಮ್ ॥
ಕ್ಷಾಮ್ಯಸ್ ಸ್ವಭಾವ ನಿಯಮಂ ಕಿಮುದೀಕ್ಷಸೇ ತ್ವಂ ಸ್ವಾತಂತ್ರ್ಯ ಮೈಶ್ವರಮಪರ್ಯನುಯೋಜ್ಯಮಾಹುಃ ॥
ವೈಕುಂಠ ಸ್ತವ-55 ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರ ಲೀಲೆಗಳಲ್ಲಿ ವ್ಯವಸ್ಥೆಯನ್ನು ಮಾಡುವುದು, ಅದನ್ನು ತಲೆಕೆಳಕು ಮಾಡುವುದು, ಪ್ರಪಂಚವೇ ಇಲ್ಲದ್ದು ಹಾಗೆ ಮಾಡುವುದು ಈ ಸ್ವಭಾವ ನಿಯಮವನ್ನು ಕ್ಷಮಿಸಲು ಏನನ್ನು ಅಪೇಕ್ಷಿಸುತ್ತೀಯೊ ? ನಿನ್ನ ಸ್ವಾತಂತ್ರ್ಯವೇ ಎಲ್ಲಾ ವ್ಯವಸ್ಥೆಗಳಿಗೂ ಕಾರಣ ಅಂಥಹ ನಿರಂಕುಶ ಸ್ವಚ್ಛಂದತೆಯನು ಇದು ಹೇಗೆ ಏಕೆ, ಹೀಗೆ ಏಕಿಲ್ಲ ಇತ್ಯಾದಿ ಪ್ರಶ್ನಿಸಲು ಯಾರಿಗೂ ಅಧಿಕಾರವಿಲ್ಲ.

2] ಭಗ ಗೀತೆ [9-23] ಅನ್ಯ ದೇವತೆಗಳಲ್ಲಿ ಭಕ್ತಿಯುಳ್ಳವರು ಆ ದೇವತೆಗಳನ್ನು ಶ್ರದ್ಧೆಯಿಂದ ಪೂಜಿಸಿದರೂ, ಅವರುಗಳೂ ಅಂತರ್ಯಾಮಿಯಾದ ನನ್ನನ್ನೇ ವಸ್ತುವೃತ್ತಿಯಲ್ಲಿ ಪೂಜಿಸುತ್ತಾರೆ. ಆದರೆ ಅಂತರ್ಯಾಮಿಯು ಪೂಜಿಸಲ್ಪಡುತ್ತಾನೆಂಬ ಜ್ಞಾನವು ಅವರಿಗಿಲ್ಲ. ಆದ್ದರಿಂದ ಅವರುಗಳ ಪೂಜೆಯು ಶಾಸ್ತ್ರೀಯವಾದ ವಿಧಿ ಪೂರ್ವಕವಾದುದಲ್ಲ

3), ಪು ತಿ. ನೂ,

ಅನನ್ಯ ಪ್ರಯೋಜನರಾಯ್ ಪತ್ತಿನಾರ್ಕ್ಕುವ್,

4) "ಶರೀರಾರೋಗ್ಯ ಮರ್ಥಾಂಶ್ಚ ಭೋಗಾಂ ಶ್ಚೈವಾನುಷಂಗಿಕಾನ್ ।
ದದಾತಿ ಧ್ಯಾಯಿನಾಂ ನಿತ್ಯಮಪವರ್ಗಪ್ರದೋ ಹರಿಃ ॥
ಎನ್‌ಹಿರಪಡಿಯೇ ಫಲಾನ್ತರಙ್ಗಳ್ ಆನುಷಙ್ಗಿಕಮಾಹವರುಮ್.

ಇವ್ವರ್ಥತ್ತೈ ಆನುಷಙ್ಗಿಕ ಸಿದ್ಧೈಶ್ವರ್ಯರಾನ ಶ್ರೀಕುಲಶೇಖರ ಪ್ಪೆರುಮಾಳುಮ್ 5) "ನಿನ್ನೈಯೇ ತಾನ್ವೇಣ್ಡಿ ನೀಳ್ ಶೆಲ್ವಂವೇಣ್ಡಾದಾನ್‌ತನ್ನೈಯೇ ತಾನ್ ವೇಣ್ಡುಂ ಶೆಲ್ವಮ್ಪೋಲ್" ಎನ್ರು ಅರುಳಿಚ್ಚೆಯ್‌ದಾರ್. 6) "ಅಭಿಲಷಿತದುರಾಪಾ ಯೇ ಪುರಾ ಕಾಮಭೋಗಾ ಜಲಧಿಮಿವ ಜಲೌಘಾಸ್ತೇ ವಿಶನ್ತಿ ಸ್ವಯಂ ನಃ" ಎನ್ರು ಈಶಾಣ್ಡಾನುಮ್ ತಾಮರುಳಿಚ್ಚೆಯ್ದ ಸ್ತೋತ್ರತ್ತಿಲೇ ನಿಬನ್ಧಿತ್ತಾರ್. ಇದು ವಿದ್ಯಾವಿಶೇಷರಾಗ ವಿಶೇಷಾದಿನಿಯತಮ್.

ಅಲ್ಪ ಫಲಪ್ರದಗಳು, ತಚ್ಛರೀರಿಯಾದವನು ಭಗವಂತನು ಪೂರ್ಣ ಫಲಪ್ರದನು, ಎಂದು ತಿಳಿದು, ಸಾಕ್ಷಾತ್ತಾಗಿ ಭಗವಂತನನ್ನೇ [1] **"ಆರ್ತೋರ್ಥೀ ಜಿಜ್ಞಾಸು ರರ್ಥಾರ್ಥೀ"** ಎಂಬ ರೀತಿಯಲ್ಲಿ, ಫಲಾಂತರಗಳಿಗಾಗಿಯೂ – ಅಂದರೆ ಐಹಿಕಾಮುಷ್ಮಿಕ ಸ್ವರ್ಗಾದ್ಯೈಶ್ವರ್ಯಗಳಿಗೂ ಕೈವಲ್ಯ ಪುರುಷಾರ್ಥಕ್ಕಾಗಿಯೂ, ಆಶ್ರಯಿಸಿದರೆ (ಉಪಾಸನೆ ಮಾಡಿದರೆ) ಆ ಫಲಗಳು ಅತಿಶಯಿತಗಳು – ಬ್ರಹ್ಮಾದಿಗಳ ಐಶ್ವರ್ಯಗಳಿಗಿಂತ ಮೇಲಾದವು ಸಾರಾಸ್ವಾದಿನೀವ್ಯಾಖ್ಯಾನದಲ್ಲಿ, ವಿಕಲ, ಪೂರ್ಣ, ಅತಿಶಯಿತ ಎಂಬ ಪ್ರಯೋಗಗಳಿಗೆ ವಿಕಲ - ಶಾಸ್ತ್ರಗಳಲ್ಲಿಹೇಳಲ್ಪಟ್ಟ ಫಲವು ಕಡಿಮೆಯಾಗಿ ಲಭಿಸುವುದು. ಪೂರ್ಣ - ಕಡಿಮೆಯಿಲ್ಲದೆ ಪೂರ್ತಿ ಲಭಿಸುವುದು ಅತಿಶಯಿತ – ಉತ್ಕೃಷ್ಟವಾದದು ಅಥವಾ ವಿಕಲವೆಂದರೆ ಆನುಷಂಗಿಕವಾಗಿ ಪಾಪಕ್ಷಯವು ಉಂಟಾಗಿ ಮೋಕ್ಷ ಪರ್ಯನ್ತವಾಗದೆ ಇರುವುದು ಪೂರ್ಣವೆಂದರೆ ಆನುಷಂಗಿಕ ಪಾಪಕ್ಷಯ ದ್ವಾರಾ ಮೋಕ್ಷ ಪರ್ಯಂತವಾಗುವುದು ಅತಿಶಯಿತವೆಂದರೆ ಮೋಕ್ಷಪರ್ಯಂ ವಾಗಿ ಸ್ವರೂಪತಃ ಉತ್ಕೃಷ್ಟವೂ ಆಗಿರುವುದು ಎಂದು ವ್ಯಾಖ್ಯಾನಮಾಡಿರುತ್ತಾರೆ ಇದ್ವಿತೀಯ ಯೋಜನೆಯು ಗೀತಾಭಾಷ್ಯ ತಾತ್ಪರ್ಯ ಚಂದ್ರಿಕಾದಿಗಳಿಗೆ ಅನುಗುಣವಾದದ್ದು

ಈ ಪ್ರಕರಣದಲ್ಲಿ ಹೇಳಿರುವ ವಿಷಯವೇನೆಂದರೆ, a) ಜ್ಞಾನಿಯಲ್ಲದವನು ದೇವತಾಂತರಗಳನ್ನು ಪೂಜಿಸಿ ಅಲ್ಪ ಫಲಗಳನ್ನು ಪಡೆಯಬಹುದು. b) ಪ್ರತಿಬುದ್ಧನು ಕ್ಷುದ್ರಫಲಗಳಿಗ ಆಸೆಪಟ್ಟು ಅವು ಶೀಘ್ರವಾಗಿ ಸಿಗುತ್ತವೆಯೆಂದು, ದೇವತಾಂತರಗಳನ್ನು ಭಗವಂತನ ಶರೀರವೆಂದು ತಿಳಿದು, ಆಶ್ರಯಿಸುವವನು. ಅವನಿಗೆ ಆ ಫಲಗಳು ಪೂರ್ಣವಾಗಿ ಸಿಗುತ್ತವೆ c) ಈ ಪ್ರತಿಬುದ್ಧನೇ ಸಾಕ್ಷಾತ್ತಾಗಿ ಭಗವಂತನನ್ನೇ ಆಶ್ರಯಿಸಿ, ಐಶ್ವರ್ಯ ಕೈವಲ್ಯಾದಿ ಫಲಗಳನ್ನು ಪಡೆಯಬಹುದು ಈ ಫಲಗಳು ಬ್ರಹ್ಮಾದ್ಯೈಶ್ವರ್ಯಗಳಿಗಿಂತ ಮೇಲಾದವು

ಅನನ್ಯ ಪ್ರಯೋಜನರಾಯ್ – ಇತ್ಯಾದಿ ಪ್ರಯೋಜನಾಂತರಗಳಲ್ಲಿ ಆಸೆಯಿಲ್ಲದೆ ಅನನ್ಯ ಪ್ರಯೋಜನರಾಗಿ ಭಗವಂತನನ್ನೇ ಪಡೆಯಬೇಕೆಂದು ಉಪಾಸನ ಮಾಡುವವರಿಗೂ, 4) **ಶರೀರಾರೋಗ್ಯಮರ್ಥಾಂಶ್ಚ** ಇತ್ಯಾದಿ ಹೇಳಿದಂತೆ ಆ ಪ್ರಯೋಜನಾಂತರಗಳು ಅನುಷಂಗಿಕವಾಗಿ ಸಿದ್ಧಿಸುವುವು, ಈ ಅರ್ಥವನ್ನು ಅನುಷಂಗಿಕವಾಗಿ ಸಿದ್ಧಿಸಿದ ಐಶ್ವರ್ಯವನ್ನುಳ್ಳ "ಕುಲಶೇಖರ ಪೆರುಮಾಳ್"ರವರೂ 5) **ನಿನ್ನೈಯೇತಾನ್‌ವೇಂಡಿ** ಎಂಬ

3] ಚತುರ್ವಿಧಾ ಭಜಂತೇ ಮಾಂ ಜನಾಃಸ್ಸುಕೃತಿನೋಽರ್ಜುನ ।
ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ॥ ಗೀತ 7-16

ಎಲೈ ಅರ್ಜುನನೇ ದೇವತಾಂತರಗಳನ್ನು ಆಶ್ರಯಿಸದೆ ನನ್ನನ್ನು ಪೂಜಿಸುವವರು ಸುಕೃತಿಗಳು ಅವರುಗಳು ನಾಲ್ಕು ವಿಧ 1 ನೂತನವಾದ ಐಶ್ವರ್ಯಾಪೇಕ್ಷಿ-ಅರ್ಥಾರ್ಥಿ, 2 ಭ್ರಷ್ಟ-ನಾಶವಾದ ಐಶ್ವರ್ಯವನ್ನು ಪುನಃ ಹೊಂದಲೆಣಿಸುವವನು - ಆರ್ತಃ, 3 ಜೀವಾತ್ಮ ಸಾಕ್ಷಾತ್ಕಾರವನ್ನು ಪಡೆಯಲೆಣಿಸುವವನು – ಜಿಜ್ಞಾಸು 4. ಪರಮಾತ್ಮನಾದ ನನ್ನನ್ನೇ ಪಡೆಯಲೆಣಿಸುವವನು - ಜ್ಞಾನಿ,

4), 5), 6), ಪು ತಿ ನೋ

ಪಾಶುರದಲ್ಲಿ, ಕೃಪೆಮಾಡಿ ಹೇಳಿರುತ್ತಾರೆ 6) **ಅಭಿಲಷಿತದುರಾಪಾ,** ಎಂದಾರಂಭಿಸಿ ಈಶಾಂಡಾನ್ ಎಂಬುವರು ತಾವು ಕೃಪೆಯಿಂದ ಹೇಳಿರುವ ಸ್ತೋತ್ರದಲ್ಲಿ, ಈ ವಿಷಯವನ್ನು ತಿಳಿಸಿರುತ್ತಾರೆ **ಇದು ವಿದ್ಯಾ ವಿಶೇಷ** ಇತ್ಯಾದಿ. ಈ ಐಹಿಕ ಭೋಗಗಳು ಉಪಕೋಸಲಾದಿ ವಿದ್ಯೆಗಳಲ್ಲಿ ನಿಯತವಾಗಿ ಲಭಿಸುತ್ತವೆ, ಆ ವಿದ್ಯೆಗಳಲ್ಲಿ ಸರ್ವಮಾಯುರೇತಿ, ಜ್ಯೋಕ್ ಜೀವತಿ, ನಾಸ್ಯಾವರಪ್ರುರುಷಾಃ ಕ್ಷೀಯಂತೇ. ಅನ್ನವಾನನ್ನಾದೋ ಭವತಿ, ಭಾತಿಚ ತಪತಿಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ, ಎಂದು ಆನುಷಂಗಿಕ ಫಲಗಳ ಸಿದ್ಧಿಗಳು ನಿಯತಗಳು. ಎಂದು ಹೇಳಲ್ಪಟ್ಟಿವೆ ಅಂದರೆ ಸರ್ವಮಾಯುರೇತಿ – ಪೂರ್ಣಾಯುಸ್ಸಾಗಿರುತ್ತಾನೆ, ಜ್ಯೋಗ್ಜೀವತಿ – ಆರೋಗ್ಯದಿಂದ ಕೂಡಿ ಇರುತ್ತಾನ ಇವನ ಸಂತತಿಯು ಕ್ಷೀಣಿಸುವುದಿಲ್ಲ ಬಹುವಾದ ಅನ್ನ ಸಂಪತ್ತಿನಿಂದ ಕೂಡಿರುತ್ತಾನೆ ಯಶಸ್ಸು ಬ್ರಹ್ಮತೇಜಸ್ಸು, ಕೀರ್ತಿ ಇವುಗಳಿಂದ ಪ್ರಕಾಶಿಸುತ್ತಾನೆಂದರ್ಥ

ಇಲ್ಲಿ ವಿದ್ಯಾವಿಶೇಷ ರಾಗವಿಶೇಷ ನಿಯತವತ್ ಎಂಬ ಶ್ರೀದೇಶಿಕರ ಶ್ರೀಸೂಕ್ತಿಗೆ ಕರೂರು ಸ್ವಾಮಿಗಳವರ ಸಾರಕೌಮುದೀ ವ್ಯಾಖ್ಯಾನವು ಹೀಗಿದೆ, ಅದಾಗಿ – "ಪ್ರಸನ್ನರಿಗೆ ಅನುಷಂಗಿಕವಾದ ಐಶ್ವರ್ಯ ಪ್ರಾಪ್ತಿಯು ಅನಿಯಿತ. ಕುಲಶೇಖರಾಳ್ವಾರ್ರವರು ಭಗವದ್ಭಕ್ತಿಯಲ್ಲಿಯೂ ಭಾಗವತ ಭಕ್ತಿಯಲ್ಲಿಯೂ ವಿಶೇಷವಾದ ಆಸಕ್ತಿಯುಳ್ಳವರಾಗಿದ್ದರು. ಅವರಿಗೆ ಐಶ್ವರ್ಯದಲ್ಲಿ ಅಪೇಕ್ಷೆಯು ಇರಲಿಲ್ಲ ಆದರೂ ಪರಮಕಾರುಣಿಕನಾದ ಸರ್ವೇಶ್ವರನು ತಾನಾಗಿಯೇ ಅವರಿಗ ಆ ಐಶ್ವರ್ಯ ಸಂಪತ್ತನ್ನು ಭಗವದ್ಭಾಗವತ ಪೂಜಾದಿಗಳಿಗೆ ಉಪಯೋಗಿಸಲು ಕೊಟ್ಟನು. ಈ ಐಶ್ವರ್ಯ ಸಂಪತ್ತು ಮಧುವಿದ್ಯಾದಿಗಳನ್ನು ಅನುಷ್ಠಿಸುವವರಿಗೆ ನಿಯತ. ದಹರಾದ್ಯುಪಸಾನೆ ಮಾಡುವವರಿಗೂ ಅಣಿಮಾದ್ಯಷ್ಟೈಶ್ವರ್ಯ ಸಿದ್ಧಿಯು ಲಭಿಸುತ್ತದೆ ಬಾಕಿಯವರಿಗೆ ಅನಿಯತವು ಆದ್ದರಿಂದಲೇ ಭಕ್ತಿಯೋಗನಿಷ್ಠರಾದ ರೈಕ್ವರು ಕಾರ್ಪಣ್ಯದಿಂದ (ಬಡತನ) ಕೂಡಿದ್ದರು ಇಲ್ಲಿ ಮಧುವಿದ್ಯೆಯಲ್ಲಿ ಇಹಲೋಕ ಐಶ್ವರ್ಯವು ನಿಯತವಿಲ್ಲ ಮಧುವಿದ್ಯೆಯಲ್ಲಿ ಹೇಳುವ ಐಶ್ವರ್ಯವು ಪಾರಲೌಕಿಕವಾದದ್ದು ನಿಯತವೆಂದು ಆದ್ದರಿಂದ ಲಕ್ಷ್ಮೀತಂತ್ರಾದಿಗಳಲ್ಲಿ ಹೇಳಲ್ಪಡುವ ವಿದ್ಯಾವಿಶೇಷಗಳಿಂದ ಐಹಲೌಕಿಕವಾದ ಐಶ್ವರ್ಯಗಳು ನಿಯತವಾದುವು ಈ ವಿದ್ಯೆಗಳು ಯಾವುವೆಂದರೆ- ತಾರಿಕಾ ಅನ. ತಾರಿಕಾ ಎಂಬ ಮಂತ್ರಾಂತರಗಳು, ವಿಷ್ಣುಪತ್ನಿಯೆಂದು ಲಕ್ಷ್ಮಿಯನ್ನು ವಿಶೇಷ್ಯಭೂತಳನಾಗಿ ನಿರ್ದೇಶಿಸುತ್ತವೆ ಆ ಮಂತ್ರಗಳಲ್ಲಿ ಪತಿಯಾದ ವಿಷ್ಣುವು ಪ್ರಕಾರಭೂತನು ಲಕ್ಷ್ಮಿಯು ಪ್ರಕಾರಿಣಿ ಅಂತಹ ಮಂತ್ರ ವಿಶೇಷಗಳನ್ನು ಕರಣಮಂತ್ರಗಳನ್ನಾಗಿ ಅನುಸಂಧಿಸಿ ಮೋಕ್ಷಾರ್ಥೋಪಾಸನವೂ ಪ್ರಪತ್ತಿಯೂ ವಿಹಿತವಾಗಿವೆ ವಿಶೇಷಣ ವಿಶೇಷ್ಯಭಾವ

4 ವಿಷ್ಣುಧರ್ಮ (74–43) ಭಗವಂತನನ್ನೇ ನಿತ್ಯವಾಗಿ ಧ್ಯಾನಮಾಡುವವರಿಗೆ, ಮೋಕ್ಷವನ್ನು ಕೊಡಲೆಣಿಸುವ ಆ ಭಗವಂತನು, ಶರೀರಾರೋಗ್ಯ, ಹಣಕಾಸುಗಳು, ಐಹಿಕವಾದ ಭೋಗಗಳನ್ನೂ ಸಹ ಅನುಷಂಗಿಕವಾಗಿ ಅಂದರೆ ಇವರುಗಳ ಅಪೇಕ್ಷೆಯಿಲ್ಲದೆ ತಾನಾಗಿಯೇ ಕೊಡುತ್ತಾನೆ.

5. ನಿನ್ನೈಯೇ ತಾನ್ ವೇಂಡಿ ನೀಳ್ ಶೆಲ್ವಂವೇಂಡಾದಾನ್ ತನ್ನೈಯೇ ತಾನ್‌ವೇಂಡುಮ್ ಶೆಲ್ವಂ ಪೋಲ್ ಮಾಯತ್ತಾಲ್,
ಮಿನ್ನೈಯೇ ಶೇರ್ ತಿಹರಿ ವಿತ್ತುವ ಕೋಟ್ಟಮ್ಮಾ ನಿನ್ನೈಯೇ ತಾನ್‌ವೇಂಡಿ ನಿರ್ಪನಡಿಯೇ ನೇ
–(ಪೆರುಮಾಳ್ ತಿರು 5-9)

ವಿತ್ತುವಕ್ಕೋಟ್ಟಿನಲ್ಲಿ ಬಿಜಯು ಮಾಡಿಸಿರುವ ಸ್ವಾಮಿಯೇ ! ಬಹಳ ದೀರ್ಘಕಾಲವಿರುವ ಬ್ರಹ್ಮಾದಿಗಳ ಐಶ್ವರ್ಯವೂ ತನಗೆ ಬೇಡವೆಂದು ನಿನ್ನನ್ನೇ ಆಸೆಪಟ್ಟು ಉಪಾಸನೆ ಮಾಡುವವರಿಗೆ, ಆ ಐಶ್ವರ್ಯಗಳು ತಾವಾಗಿಯೇ ಲಭಿಸುವಂತೆ, ಬಹಳ ಪ್ರಕಾಶದಿಂದ ಕೂಡಿದ ಚಕ್ರಾಯುಧವನ್ನು ಕೈಯ್ಯಲ್ಲಿ ಧರಿಸಿರುವ ನಿನ್ನನ್ನೇ ನಾನು ಅಪೇಕ್ಷಿಸುತ್ತಿರುತ್ತೇನೆ

6 ಯಾವ ಕಾಮಭೋಗಗಳು ಒಂದಾನೊಂದು ಕಾಲದಲ್ಲಿ ಆಸೆಪಟ್ಟೂ ಸಿಗಲಿಲ್ಲವೋ, ಅವುಗಳು ಈಗ, ನೀರಿನ ಪ್ರವಾಹಗಳು ತಾವಾಗಿಯೇ ಸಮುದ್ರವನ್ನು ಪ್ರವೇಶಿಸುವಂತೆ, - ಅನನ್ಯ ಪ್ರಯೋಜನರಾಗಿ ಭಗವಂತನನ್ನೇ ಆಶ್ರಯಿಸಿರುವ ನಮ್ಮನ್ನು ಆಶ್ರಯಿಸುತ್ತವೆ. ತಾವಾಗಿ ಭಗವತ್ಸಮಾಶ್ರಯಣದ ಫಲವಾಗಿ ತಾವಾಗಿಯೇ ಆ ಐಹಿಕ ಫಲಗಳು ಲಭಿಸುತ್ತವೆ ಎಂದರ್ಥ.

ವ್ಯತ್ಯಾಸವಿದ್ದರೂ, ವಿಷ್ಣುಪತ್ನೀ ಎಂಬ ಆಕಾರಗಳಲ್ಲಿ ವಿಷ್ಣುವಿನ ಉಪಾಸನವೂ ಅಂತರ್ಹಿತ. ಪಂಚಾಗ್ನಿ ವಿದ್ಯೆಯಲ್ಲಿ, ಸ್ವಾತ್ಮ ಪ್ರಕಾರಕ ಪರಮಾತ್ಮೋಪಾಸನದಂತೆ, ಪರಮಾತ್ಮ ಪ್ರಕಾರಕ ಸ್ವಾತ್ಮೋಪಾಸನವೂ ಮೋಕ್ಷಪ್ರದವು ಆದರೆ ಕೈವಲ್ಯ ಪೂರ್ವಕವಾಗಿಯೇ ಮೋಕ್ಷವು ಫಲವಾಗಿ ಲಭಿಸುತ್ತದೆ. ಆ ರೀತಿಯಲ್ಲಿ ತಾರಿಕಾನುತಾರಿಕಾದಿ ಶ್ರೀಮಂತ್ರಕರಣಕ ಭಕ್ತಿ ಪ್ರಪತ್ತಿ ರೂಪ ಬ್ರಹ್ಮವಿದ್ಯೆಗಳಲ್ಲಿ ದಿವ್ಯದಂಪತಿಗಳಿಬ್ಬರೂ ಸಿದ್ಧೋಪಾಯ ರೂಪದಲ್ಲಿ ಪರೀಕಾರ್ಯರು ಅವರ ಅನುಗ್ರಹವು ಸಮಾನ. ಇಬ್ಬರೂ ಅನುಗ್ರಾಹಕರು ಆದರ ಶ್ರೀಮಂತ್ರವು ಕರಣಮಾತ್ರವಾಗಿ ಅನುಸಂಧಿಸಲ್ಪಡುವುದರಿಂದ ಐಹಿಕ ಸಂಪತ್ಸಮೃದ್ಧಿ ಪೂರ್ವಕವಾಗಿಯೇ ಮೋಕ್ಷವು ನಿಯತ ಅಷ್ಟಾಕ್ಷರ ದ್ವಯಾದಿ ಭಗವನ್ಮಂತ್ರಗಳನ್ನು ಕರಣಮಂತ್ರಗಳನ್ನಾಗಿ ಬಳಸಿ ಉಪಾಸನೆ ಅಥವಾ ಪ್ರಪತ್ತಿ ಮಾಡುವ ಮುಮುಕ್ಷುಗಳಿಗೆ ಐಹಿಕ ಭೋಗವು ನಿಯತವಲ್ಲ. ಈ ವ್ಯವಸ್ಥೆಯು ಲಕ್ಷ್ಮೀತಂತ್ರದಲ್ಲಿ ಹೇಳಲ್ಪಟ್ಟಿದೆ ಹೀಗೆ ವಿಶೇಷಣ ವಿಶೇಷ್ಯ ಭಾವಗಳ ವ್ಯತ್ಯಾಸ ಮಾತ್ರವನ್ನು ಅಭಿಪ್ರಾಯವಾಗಿಟ್ಟುಕೊಂಡು "ಶ್ರಿಯಂಮಾವಾ ಪ್ರಪದ್ಯೇತ ದೇವಂವಾಪುರುಷೋತ್ತಮಮ್", ಎಂಬ ವಚನವು ಮೋಕ್ಷಾರ್ಥಿಯು ಲಕ್ಷ್ಮಿಯನ್ನಾಗಲಿ, ಪುರುಷೋತ್ತಮನನ್ನಾಗಲಿ ಶರಣಹೊಂದಬಹುದು ಎಂದು ಹೇಳುತ್ತದೆ. ಶ್ರಿಯಂ ಎಂಬುದು "ವಿಷ್ಣುಪತ್ನಿ" ಎಂಬ ಆಕಾರದಲ್ಲಿ ಹೇಳಲ್ಪಡುತ್ತದೆ. ದೇವಂ ಪುರುಷೋತ್ತಮಂ, ಎಂಬುದು ಲಕ್ಷ್ಮೀಪತಿ ಎಂಬ ಆಕಾರದಲ್ಲಿ ಹೇಳಲ್ಪಡುತ್ತದೆ ವಿಷ್ಣುಪತ್ನೀ ಎಂದು ವಿಷ್ಣುವಿಗೆ ಪ್ರಕಾರತ್ವವನ್ನೂ ಲಕ್ಷ್ಮಿಗೆ ಪ್ರಕಾರಿತ್ವವನ್ನು ಹೇಳಿದ ಮಾತ್ರಕ್ಕೆ ಲಕ್ಷ್ಮಿಯ ಸ್ವತಶ್ಶೇಷತ್ವಕ್ಕೂ, ವಿಷ್ಣುವಿನ ಪತಿಪಾರವಶ್ಯಕ್ಕೂ ಕುಂದುಕ ಬರುವುದಲ್ಲ ಪಂಚಾಗ್ನಿ ವಿದ್ಯೆಯಲ್ಲಿ ಪರಮಾತ್ಮಾತ್ಮಕಸ್ವಾತ್ಮೋಪಾಸನೆಯನ್ನು ವಿಧಿಸಿರುವುದರಿಂದ, ಜೀವಾತ್ಮನ ಭಗವಚ್ಛೇಷತ್ವಕ್ಕೆ ಕುಂದುಕವೇನೂ ಬರಲಾರದಲ್ಲವೇ. ಹೀಗೆ ದಿವ್ಯ ದಂಪತಿಗಳಿಗೆ ಸಿದ್ಧೋಪಾಯತ್ವಾಂಶದಲ್ಲಿ ವಿಕಲ್ಪವಿರುವುದನ್ನು ನೋಡಿ ಕೆಲವರು ಲಕ್ಷ್ಮೀತಂತ್ರವು ಅನಾದರಣೀಯವೆನ್ನುತ್ತಾರೆ ಇದು ಸರಿಯಲ್ಲ, ಲಕ್ಷ್ಮೀ ತಂತ್ರಗಳಲ್ಲಿ ಲಕ್ಷ್ಮಿಯ ಪಾರಮ್ಯವನ್ನು ವಿಶೇಷವಾಗಿ ಹೇಳಿರುವುದನ್ನು ಸಹಿಸದೆ ಆ ತಂತ್ರವನ್ನು ಅಪ್ರಮಾಣಿಕವೆಂದು ಹೇಳಿ ತಮ್ಮ ಅಭೀಷ್ಟವನ್ನು ಸಾಧಿಸಲು ಹೇಳುವ ಮಾತು. ವೇದಕ್ಕೆ ಸಮಾನವಾದ ಪ್ರಾಮಾಣ್ಯವನ್ನು ಭಗವಚ್ಛಾಸ್ತ್ರಗಳಿಗೂ ಶ್ರೀ ಭಾಷ್ಯಕಾರರೂ ಆಳವಂದಾರ್ರವರೂ ಕೊಟ್ಟಿರುವಾಗ ಅದನ್ನು ಅಲ್ಲಗಳೆಯುವುದು ಪ್ರಾಮಾಣಿಕವಲ್ಲ ಮೇಲೂ ತಾರಿಕಾ, ಅನುತಾರಿಕಾ, ಎಂಬ ಶ್ರೀಮಂತ್ರ ನಿಷ್ಠರನ್ನು ಕುರಿತು ಶ್ರೀಮನ್ನಿಗಮಾಂತ ಮಹಾದೇಶಿಕರೂ ಶ್ರೀ ಸ್ತುತಿಯಲ್ಲಿ

1. ಅಸ್ಯೇಶಾನಾತ್ವಮಸಿ ಜಗತಃ ಸಂಶ್ರಯಂತೀ ಮುಕುಂದಂ,
ಲಕ್ಷ್ಮೀಃ ಪದ್ಮಾ ಜಲಧಿ ತನಯಾ ವಿಷ್ಣು ಪತ್ನೀಂದಿರೇತಿ।
ಯನ್ನಾಮಾನಿ ಶ್ರುತಿ ಪರಿಪಣಾನ್ಯೇವಮಾವರ್ತಯಂತಃ
ನಾವರ್ತಂತೇ ದುರಿತ ಪವನ ಪ್ರೇರಿತೇ ಜನ್ಮ ಚಕ್ರೇ॥ ಎಂದು ಪುನಃ ಜನ್ಮ ಪರಂಪರೆಯಲ್ಲಿ ಸುತ್ತುವುದಿಲ್ಲ ಅಂದರೆ ಮೋಕ್ಷವನ್ನು ಹೊಂದುತ್ತಾರೆಂದು ಹೇಳಿರುವುದು, ಲಕ್ಷ್ಮಿಯನ್ನು "ವಿಷ್ಣು ಪತ್ನೀ" ಎಂಬ ಆಕಾರದಲ್ಲಿ ಉಪಾಸನೆ ಮಾಡುವವರ ವಿಷಯವೆಂಬ ಅಭಿಪ್ರಾಯದಿಂದ, ಎಂಬುದು ಸ್ಪಷ್ಟ. ಆದ್ದರಿಂದ "ವಿದ್ಯಾವಿಶೇಷರಾಗ ವಿಶೇಷ ನಿಯತ" ಎಂಬ ಶ್ರೀ ಸೂಕ್ತಿಗ ಇದೇ ತಾತ್ಪರ್ಯವೆಂಬುದು ಆಚಾರ್ಯಹೃದಯ.

ರಾಗ ವಿಶೇಷಾದಿ ಎಂಬಲ್ಲಿಯ **"ಆದಿ"** ಶಬ್ದವು ರಾಗ ವಿಶೇಷ ಹೇತು ಭೂತವಾದ ಕರ್ಮವನ್ನು ತಿಳಿಸುತ್ತದೆ.

---

1) ಎಲೈ ಮಾತೆಯೇ ನೀನು ಈ ಪ್ರಪಂಚಕ್ಕೆ ಈಶಾನೆ ಅಧಿಪಳು, ಮುಕುಂದನನ್ನು ಆಶ್ರಯಿಸಿರುವೆ ಲಕ್ಷ್ಮೀ, ಪದ್ಮಾ, ಜಲಧಿ ತನಯೆ, ವಿಷ್ಣು ಪತ್ನಿ, ಇಂದಿರಾ ಎಂದು ಶ್ರುತಿ ಪ್ರಸಿದ್ಧವಾದ ಈ ನಾಮಗಳನ್ನು ಉಪಾಸನೆ ಮಾಡುವವರು ಪುಣ್ಯಪಾಪ ರೂಪವೆಂಬ ಗಾಳಿಯಿಂದ ಪ್ರೇರಿತರಾಗಿ ಜನ್ಮ ಪರಂಪರೆಗಳಲ್ಲಿ ಸುತ್ತುವುದಿಲ್ಲ ಅಂದರೆ ಸಂಸಾರ ಪರಿಭ್ರಮಣವಿಲ್ಲದೆ ಅದೇ ಜನ್ಮದಲ್ಲಿ ಮೋಕ್ಷವನ್ನು ಹೊಂದುತ್ತಾರೆಂದು ತಾತ್ಪರ್ಯ ಶ್ರೀಸ್ತುತಿ (ಶ್ಲೋ 8)

ಉಕ್ತಾರ್ಥೇಷು ದ್ರಾವಿಡ ಪ್ರಮಾಣಾನಿ

ಇಪ್ಪಡಿ ಸರ್ವೇಶ್ವರನುಕ್ಕುಮ್ ಬ್ರಹ್ಮರುದ್ರಾದಿಹಳುಕ್ಕು ಮುಣ್ಡಾನ ವಿಶೇಷಙ್ಗಳೈ (೧) "ಎನ್ಬೆರು ಮಾನುಣ್ಡು ಮಿೞ್ನ್ದವೆಚ್ಚಿಲ್ ದೇವರಲ್ಲಾದಾರ್ ತಾಮುಳರೇ?" ಎನ್ರುಮ್, (೨) "ನಾನ್ಮುಹನೈ ನಾರಾಯಣನ್ ಪಡೈತ್ತಾನ್ ನಾನ್ಮುಹನುಮ್ ತಾನ್ಮುಹಮಾಯ್ ಶಙ್ಕರನೈ ತ್ತಾನ್ಪಡೈತ್ತಾನೆನ್ರುಮ್" (೩) "ಮೇವಿತ್ತೊೞುಮ್ ಪಿರಮನ್‌ಶಿವನಿನ್ದಿರನಾದಿಕ್ಕೆಲ್ಲಾಮ್ ನಾಭಿಕ್ಕಮಲಮುದರ್ ಕಿೞಙ್ಗೇ" ಎನ್ರುಮ್ (೪) "ತೀರ್ತ್ತನುಲಕಳನ್ದ ಶೇವಡಿ ಮೇಲ್ ಪೂನ್ದಾಮಮ್, ಶೇರ್ತ್ತಿಯವೈಯೇ ಶಿವನ್ಮುಡಿ ಮೇಲ್‌ತಾನ್ಕಣ್ಡು । ಪಾರ್ತ್ತನ್ ತೆಳಿನ್ದೊೞಿನ್ದಪೈನ್ದುೞಾಯಾನ್ ಪೆರುಮೈ" ಎನ್ರುಮ್, (೫) ವಾನವರ್ ತಮ್ಮೈಯಾಳುಮವನುಮ್, ನಾನ್ಮುಹನುಮ್ ಶಡೈಮುಡಿಯಣ್ಣಲುಮ್ । ಶೆಮ್ಮೈಯಾಲವನ್ಪಾದಪಙ್ಕಯಙ್ಙಿನ್ದಿತ್ತೇತ್ತಿತ್ತಿರಿವರೇ" ಎನ್ರುಮ್. (೬) "ಪೇಶನಿನ್ರಶಿವನುಕ್ಕುಮ್ ಪಿರಮನ್ತನಕ್ಕುಮ್ ಪಿರರ್ಕ್ಕುಮ್ ನಾಯಕನವನೇ" ಎನ್ರುಮ್, (೭) "ಒತ್ತೈವಿಡೈಯನುಮ್ ನಾನ್ಮುಕನುಮುನ್ನೈಯರಿಯಾ ಪ್ಪೆರುಮೈಯೋನೇ" ಎನ್ರುಮ್. (೮) "ಎರುತ್ತುಕ್ಕೊಡಿಯುಡೈಯಾನುಮ್ ಪಿರಮನುಮಿನ್ದಿರನುಮ್ ಮಱ್ಱುಮೊರುತ್ತರುಮಿಪ್ಪಿರವಿ ಎನ್ನುಮ್ ನೋಯ್‌ಕ್ಕುಮರುನ್ದರಿವಾರುಮಿಲ್ಲೈ" ಎನ್ರುಮ್ ಫಲಮುಕಙ್ಗಳಾಲೇ ಅರುಳಿಚ್ಚೆಯ್ದಾರ್‌ಹಳ್.

ಪರದೇವತಾ ಪಾರಮಾರ್ಥ್ಯ – ಆೞ್ವಾರುಗಳು ಅನು ಸಂಧಾನ ಮಾಡಿರುವ ಕ್ರಮ.

ಅನಂತರ ಸರ್ವೇಶ್ವರನಿಗೂ, ಬ್ರಹ್ಮರುದ್ರಾದಿಗಳಿಗೂ ಇರುವ ತಾರತಮ್ಯಗಳನ್ನು, ಆಳ್ವಾರುಗಳು ತಿಳಿಸಿರುವ ಪಾಶುರಗಳಿಂದ **"ಇಪ್ಪಡಿ ಸರ್ವೇಶ್ವರ ನುಕ್ಕುಮ್"** ಎಂದಾರಂಭಿಸಿ ಹೀಗೆ ಸರ್ವೇಶ್ವರನಿಗೂ ಬ್ರಹ್ಮರುದ್ರಾದಿಗಳಿಗೂ ಉಂಟಾದ ವಿಶೇಷಗಳನ್ನು—ವ್ಯತ್ಯಾಸಗಳನ್ನು, 1) **ಎಂಬೆರು ಮಾನುಂಡು ಮಿೞ್ನ್ದ**, ಭಗವಂತನು ಪ್ರಳಯದಲ್ಲಿ ನುಂಗಿ ಕಾಪಾಡಿ ಪುನಃ ಸೃಷ್ಟಿಸಿದ 2) **ನಾನ್ಮುಹನೈ ನಾರಾಯಣನ್ ಪಡೈತ್ತಾನ್** ಇತ್ಯಾದಿ ಯಾಗಿಯೂ 3) **ಮೇವಿತ್ತೊೞುಮ್ ಪಿರುಮನ್ ಶಿವನ್** ಇತ್ಯಾದಿ, ಯಾಗಿಯೂ 4) **ತೀರ್ಥನುಲ ಹಳನ್ದ ಶೇವಡಿ** ಇತ್ಯಾದಿಯಾಗಿಯೂ, 5) **ವಾನವರ್ ತಮ್ಮೈಯಾಳುಮವನುಂ** ಇತ್ಯಾದಿಯಾಗಿಯೂ 6) **ಪೇಶನಿನ್ರ ಶಿವನುಕ್ಕುಂ** ಇತಾದಿಯಾಗಿಯೂ, 7) **ಒಟ್ರೈವಿ ಡೈಯನುಂ ನಾನ್ಮುಹನುಂ** ಇತ್ಯಾದಿ ಯಾಗಿಯೂ 8) **ಎರುತ್ತುಕ್ಕೊಡಿಯುಡೈಯಾನುಂ** ಇತ್ಯಾದಿಯಾಗಿಯೂ, ಅನೇಕ ಪ್ರಕಾರವಾಗಿ ಕೃಪ ಮಾಡಿ ಹೇಳಿರುತ್ತಾರೆ

---

1) ನಿಲ್ಲಾದ ಪೆರುವೆಳ್ಳಂ ನೆಡುವಿಶುಂಬಿನ್ ಮೀಡೋಡಿ ಎರ್ನ್ದ ಕಾಲಮ್
ಮಲ್ಲಾಂಡ ತಡಕ್ಕೈಯಾಲ್ ಬಹಿರಂಡ ಮಹಪ್ಪಡುತ್ತ ಕಾಲತ್ತು ॥
ಆನ್ರು ಎಲ್ಲಾರು ಪುರಿಯಾರೋ ಎಂಬೆರುಮಾನುಂಡುಮಿೞ್ನ್ದ ಎಚ್ಚಿಲ್ ದೇವರ್
ಅಲ್ಲಾದಾರ್ ತಾಮುಳರೇ ಅವನರುಳೇ ಉಲಕಾವದರಿಯೀರ್‌ಹಳೇ ॥

ಪೆರಿಯಾೞ್ವಾರ್ ತಿರು (11-6-2)

ಮಹಾ ಪ್ರಳಯದಲ್ಲಿ ಅಂಡಗಳೆಲ್ಲಾ ಭಗವತ್ಸ್ವರೂಪದಲ್ಲಿ ಅಡಗಿ ಹೋಗಿದ್ದಾಗ ಭಗವಂತನು ಪುನಃ ಪ್ರಪಂಚಗಳನ್ನು ಸೃಷ್ಟಿಸಿದನು. ಅವನಿಂದ ಸೃಷ್ಟಿಸಲ್ಪಡದೆ ಇರತಕ್ಕ ದೇವತೆಗಳುಂಟೇ. ಪ್ರಳಯದಲ್ಲಿ ಎಲ್ಲರನ್ನೂ ನುಂಗಿ ಪುನಃ ಸೃಷ್ಟಿಯಲ್ಲಿ ಎಲ್ಲರನೂ ಉಗುಳಿದನು ಇದು ಎಲ್ಲರಿಗೂ ತಿಳಿದ ವಿಷಯ ಈ ಪ್ರಪಂಚವನ್ನು ಕೃಪೆಯಿಂದ ಸೃಷ್ಟಿಸಿದವನು ಅವನೇ ಇದನ್ನು ತಿಳಿಯದೆ ಇರುವುದೇ

2) ರಿಂದ 8) ಪ್ರ. ತಿ. ನೋ.

2) ನಾನ್ಮುಹನ್ನೈ ನಾರಾಯಣನ್ ಪಡೈತ್ತಾನ್ ನಾನ್ಮುಹನುವ್
ತಾನ್ಮುಹಮಾಯ್ ಶಂಕರನೈತ್ತಾನ್ ಪಡೈತ್ತಾನ್ ಯಾನ್ಮುಹಮಾಯ್
ಅಂದಾದಿ ಮೇಲಿಟ್ಟು ಅರಿವಿತ್ತೇನಾಳ್ಪೊರುಳೈ
ಶಿಂದಾಮಲ್ ಕೊಳ್ಳೈನೀರ್ ತೇರ್ನ್ದು (ನಾನ್ಮು. ತಿರು. 1)

ಚತುರ್ಮುಖನನ್ನು ನಾರಾಯಣನು ಸೃಷ್ಟಿಸಿದನು, ಆ ಚತುರ್ಮುಖನು ತಾನು ದ್ವಾರಭೂತನಾಗಿ ಅಂದರೆ ತನಗೆ ಅಂತರ್ಯಾಮಿ ಯಾದ ಭಗವಂತನ ಮೂಲಕ ಶಂಕರನನ್ನು ಸೃಷ್ಟಿಸಿದನು ಆ ಭಗವಂತನ ಮುಖವಾಗಿ, (ಅವನು ಅಂತರ್ಯಾಮಿಯಾಗಿರಲು)ಅಂದಾದಿಯಾದ ಈ ಪಾಶುರಗಳಿಂದ ಆ ಮಾದ ಅರ್ಥಗಳನ್ನು ತಿಳಿಸಿದ್ದೇನೆ ಇದನ್ನು ಸಾರಾ ಸಾರ ವಿವೇಕ ಪೂರ್ವಕವಾಗಿ. ಅಸುರ ಪ್ರಕೃತಿಗಳಿಗೆ ತಿಳಿಸದೆ ಅಂಗೀಕರಿಸಿ

3) ಕೂವಿಕ್ಕೊಳ್ಳಾಯ್‌ವಂದಂದೋ ಎನ್ ಪೊಲ್ಲಾಕ್ಕರುಮಾಣಿಕ್ಕಮೇ
ಆವಿಕ್ಕೋರ್ ಪತ್ತುಕ್ಕೊಂಬು ನಿನ್ನಲಾಲ್ ಅರಿಹಿನ್ರಿಲೇನ್ ನಾನ್.
ಮೇವಿತ್ತೊಳ್ಳುಮ್ ಪಿರಮನ್ ಶಿವನ್ ಇಂದಿರನಾದಿಕ್ಕೆಲ್ಲಾವರ್
ನಾವಿಕ್ಕಮಲಮುದರ್ ಕಿಳ್ಳಂಗೇ ಉಂಬರಂದದುವೇ ॥
(ತಿರುವಾಯ್ 10-10-3)

ಸ್ಪೃಹಣೀಯವಾದ ನೀಲಮಾಣಿಕ್ಯದಂತೆ ನನಗೆ ಸ್ಪೃಹಣೀಯವಾದವನೇ ಈ ನನ್ನ ಆತ್ಮಾವಿಗೆ ಊರು ಕೋಲು ನೀನಲ್ಲದೆ ಬೇರೆ ಯಾರೂ ಇಲ್ಲ ನೀನೇ ಆಶ್ರಯ ಭೂತನು; ಭಗವಂತನನ್ನು ಆಶ್ರಯಿಸಿ ಪೂಜಿಸುವ ಬ್ರಹ್ಮದೇವ, ಶಿವ, ಇಂದ್ರ ಮೊದಲಾದವರ ಉತ್ಪತ್ತಿಗೆ ಕಾರಣ ಭೂತವಾದ ನಾಭಿ ಕಮಲಕ್ಕೆ ಮೂಲ ಗೆಡ್ಡೆಯಾದವನೇ-ಉಪಾದಾನ ಕಾರಣ ಭೂತನೇ ಎಂದರ್ಥ ಹಾಗೆಯೇ ಇತರ ಸೂರಿಗಳ ಸತ್ತಾಸ್ಥಿತಿಗಳಿಗೆ ಕಾರಣ ಭೂತನೇ-ಆದಾಗಿ ಸಮಸ್ತಚೇತನಾ ಚೇತನಗಳ ನಿಯಾಮಕನೇ ನನ್ನನ್ನು ನಿನ್ನಲ್ಲಿಗೆ ಬರ ಮಾಡಿಕೋ ನೀನೇ ಬಂದು ಕರೆದುಕೊಂಡು ಹೋಗು

4) ತೀರ್ಥನುಲಹಳಂಡ ಶೇವಡಿ ಮೇಲ್ ಪೂಂದಾಮಮ್
ಶೇರ್ತ್ತಿಯವೈಯೇ ಶಿವನ್ ಮುಡಿ ಮೇಲ್ ತಾನ್ ಕಂಡು।
ಪಾರ್ಥನ್ ತೆಳಿಂದೊಳ್ಳಿಂದ ಪೈಂದುಳ್ಳಾ ಯಾನ್ ಪೆರುಮೈ
ಪೇರ್ತುಂ ಮೊರುವರಾಲ್ ಪೇಶಕ್ಕಿಡಂದದೇ ॥
(ತಿರುವಾಯ್ 2-8-6)

ಬಹಳ ಸಂಕುಲವಾದ ಮಹಾಭಾರತ ಯುದ್ಧದ ನಡುವೆ ಅರ್ಜುನನು ಊಟ ಮಾಡುವುದಕ್ಕೆ ಮೊದಲು ಶಿವ ಪೂಜೆ ಮಾಡ ಬೇಕೆಂದು ಶ್ರೀ ಕೃಷ್ಣ ಪರಮಾತ್ಮನಿಗೆ ಹೇಳಲು, ಈ ಮಧ್ಯೆ ಶಿಬಿರಕ್ಕೆ ಹೋಗಲಾಗುವುದಿಲ್ಲ, ನನ್ನ ಕಾಲುಗಳಲ್ಲಿಯೇ ಪುಷ್ಪದಿಂದ ಅರ್ಚಿಸು ಎನ್ನಲು ಅರ್ಜುನನು ಮೂರು ಲೋಕಗಳನ್ನು ತನ್ನ ಪಾದಗಳಿಂದ ಅಳೆದು ಉಪಕರಿಸಿದ ಪವಿತ್ರವಾದ ಕೃಷ್ಣಪರಮಾತ್ಮನ ಪಾದಗಳನ್ನು ಹೂವುಗಳಿಂದ ಅರ್ಚಿಸಿದನು ಸಾಯಂಕಾಲ ಯುದ್ಧವನ್ನು ಮುಗಿಸಿಕೊಂಡು ಅರ್ಜುನನು ತನ್ನ ಶಿಬಿರಕ್ಕೆ ಹೋದಾಗ ತಾನು ಮಧ್ಯಾಹ್ನ ರಣರಂಗದಲ್ಲಿ ಶ್ರೀ ಕೃಷ್ಣಪರಮಾತ್ಮನ ಪಾದಗಳಲ್ಲಿ ಅರ್ಚಿಸಿದ ಹೂವುಗಳನ್ನೇ ಶಿವನ ತಲೆಯಲ್ಲಿ ನೋಡಿದನು ಆಗ ಅವನಿಗೆ ತುಳಸೀಮಾಲಾಧಾರಿಯಾದ ಶ್ರೀ ಕೃಷ್ಣ ಪರಮಾತ್ಮನೇ ಎಲ್ಲರಿಗಿಂತಲೂ ಮೇಲಾದವನು ಎಂಬುದು ನಿಶ್ಚಯವಾಯಿತು ಅಂಥವ ಭಗವಂತನ ಹಿರಿಮೆಯನ್ನು ತಿರುಗಿ ಬೇರೆಯಾರಿಂದ ನಿಶ್ಚಯಿಸಲ್ಪಡಬೇಕು,

5) ವೈಮ್ಮಿಲ್ ನುಮ್ಮುನತ್ತೈನ್ನು ಯಾನುರೈಕ್ಕಿನ್ರ ಮಾಯವನ್ ಶೀರ್ ವೈಯೈಮ್ಮೈ
ಎಮ್ಮನೋರ್‌ಹಳ್ ಉರೈಪ್ಪದೆನ್ ಅದು ನಿರ್ಕನಾಳ್ ತೊರುಮ್
ವಾನವರ್ ತಮ್ಮೈ ಯಾಳುಮವನುಂ, ನಾನ್ಮುಹನುಂ, ಶಡೈಮುಡಿಯಣ್ಣಲುಂ
ಶೆಮ್ಮೈಯಾಲ್ ಅವನ್ ಪಾದ ಪಂಗಯಂ ಶಿಂದಿತ್ತೇತ್ತಿತ್ತಿರಿವರೇ ॥
ತಿರುವಾಯ್(3-6-4)

ನಾನು ಹೇಳುವ ಆಶ್ಚರ್ಯ ಭೂತನಾದ ಆ ಭಗವಂತನ ಕಲ್ಯಾಣಗುಣಗಳನ್ನು ನಿಮ್ಮ ಮನಸ್ಸಿನಲ್ಲಿಟ್ಟು ಧ್ಯಾನಮಾಡಿ ಇದನ್ನು ನನ್ನಂಥವರು ಹೇಳಬೇಕಾದ್ದೇನಿದೆ ಅದಿರಲಿ ದೇವತೆಗಳಿಗೆ ಅಧಿಪನಾದ ಇಂದ್ರನೂ, ಚತುರ್ಮುಖನೂ ಜಟಾಧಾರಿಯಾದ ಶಿವನೂ, ಪ್ರತಿದಿನವೂ ಋಜುವಾದ ಅಂದರೆ ಅವನೇ ಪರದೇವತೆ ಯೆಂಬ ಬುದ್ಧಿಯಿಂದ ಆ ಭಗವಂತನ ಪಾದಪದ್ಮಗಳನ್ನು ಧ್ಯಾನಿಸಿ, ಸ್ತೋತ್ರ ಮಾಡಿಕೊಂಡಿರುತ್ತಾರೆ

1) ಅದಾಗಿ ಭಗವಂತನು ಪ್ರಳಯದಲ್ಲಿ ಚೇತನಾಚೇತನಾತ್ಮಕವಾದ ಪ್ರಪಂಚವನ್ನು ತನ್ನಲ್ಲಿ ಅಡಗಿಸಿಕೊಂಡು ಸೃಷ್ಟಿಕಾಲದಲ್ಲಿ ಅವುಗಳನ್ನೆಲ್ಲಾ ಸೃಷ್ಟಿಸಿದನು. ಹಾಗೆ ಅವನು ನುಂಗಿ, ಪುನಃ ಹೊರಗೆ ಕಕ್ಕಿದ ಎಂಜಲು ಾದ ದೇವತೆಗಳು ವಿನಹ ಬೇರೆಯಾರಿದ್ದಾರೆ ಎಂದು ಹೇಳುವ ಮಾತು ರೂಪಕ ಅವನಿಂದ ಸೃಷ್ಟಿಸಲ್ಪಟ್ಟವ . 2) ಚತುರ್ಮುಖನನ್ನು ನಾರಾಯಣನು ಸೃಷ್ಟಿಸಿದನು. ಆ ಚತುರ್ಮುಖನು ಭಗವಂತನ ತಾರ ರೂಪಿಯಾಗಿ ಶಂಕರನನ್ನು ಸೃಷ್ಟಿಸಿದನು 3) ಭಗವಂತನು ತ್ರಿವಿಕ್ರಮನಾಗಿ ಲೋಕಗಳನ್ನು ತನ್ನ ರ ಅಳೆದನು. ಆಗ್ಗೆ ಬ್ರಹ್ಮದೇವನು ಆ ಪಾದಕ್ಕೆ ಅಭಿಷೇಕ ಮಾಡಿ, ಆ ಅಭಿಷೇಕ ತೀರ್ಥವನ್ನು ಶಿವನ ತಲೆ ೇರಿಸಲು, ಶಿವನು ಮಂಗಳಕರನಾದನೆಂದು, "ಯಚ್ಛೌಚನಿಸ್ಸೃತ ಸರಿತ್ಪ್ರವರೋದಕೇನ ತೀರ್ಥೇನಮೂರ್ಧ್ನಿ ನ ಶಿವಶ್ಶಿವೋಽಭೂತ್" ಎಂದು ಭಾಗವತದಲ್ಲಿ ಶುಕರು ಹೇಳಿದ್ದಾರೆ. 4) ಪರದೇವತೆಗಳೆಂದು ಹೇಳಿಕೊಳ್ಳುವ ೂ, ಬ್ರಹ್ಮನಿಗೂ ಇತರರಿಗೂ ಭಗವಂತನೇ ನಾಯಕನು ಅವರುಗಳು ಆ ಭಗವಂತನ ಹಿರಿಮೆಯನ್ನು ು. ವೃಷಭಧ್ವಜನೂ ಬ್ರಹ್ಮದೇವನೂ, ಇತರರೂ ಸಹ ಸಂಸಾರವೆಂಬವ್ಯಾಧಿಗೆ ಏನು ಔಷಧಿಯೆಂಬುದನ್ನು ು-ಅಂದರೆ ಮೋಕ್ಷವನ್ನು ಕೊಡುವ ಸಾಮರ್ಥ್ಯವನ್ನು ಉಳ್ಳವರಲ್ಲ. 5) ಸ್ವರ್ಗಲೋಕದಲ್ಲಿ ದೇವತೆಗಳನ್ನು ಇಂದ್ರನೂ, ಚತುರ್ಮುಖನೂ, ಜಟೆಯನ್ನು ಧರಿಸಿರುವ ರುದ್ರನೂ, ಋಜುವಾಗಿ ಅಂದರೆ ತಾವು ತನಿಗೆ ದಾಸ ಭೂತರು, ಅವನೇ ಎಲ್ಲರಿಗಿಂತಲೂ ಮೇಲಾದವನು ಎಂದು ತಿಳಿದು ಆ ಭಗವಂತನ ಪಾದಪದ್ಮ ಧ್ಯಾನಿಸಿ, ಸ್ತೋತ್ರಮಾಡಿಕೊಂಡು ಸಂಚಾರ ಮಾಡುತ್ತಿರುತ್ತಾರೆ 6) ಪರತತ್ವವೆಂದು ಇತರರಿಂದ ಹೇಳ ಶಿವನಿಗೂ, ಬ್ರಹ್ಮನಿಗೂ ಅವನೇ ನಾಯಕನು 7) ವೃಷಭವಾಹನನೂ, ಚತುರ್ಮುಖನೂ ನಿನ್ನನ್ನು ತಿಳಿ ರಿಮೆಯುಳ್ಳವನೇ 8) ವೃಷಭಧ್ವಜನೂ, ಬ್ರಹ್ಮನೂ, ಇಂದ್ರನೂ ಬೇರೆ ಯಾರೂ ಈ ಸಂಸಾರ ವ್ಯಾಧಿಗೆ ುನ್ನು ತಿಳಿಯರು,

---

•ಶನಿನ್ರ ಶಿವನುಕ್ಕುಂಪಿರಮನ್ ತನಕ್ಕುಂ ಪಿರರ್‌ಕುಂ
ಿ.ಕನವನೇ ಕಪಾಲನನ್ ಮೋಕ್ಕತ್ತುಕ್ಕಂಡು ಕೊಳ್‌ಮಿನ್ |
ಶಮಾಮದಿಳ್ ಶೂಲ್ಪನ್ಧ್ರಕಾಯ ತಿರುಕ್ಕುರುಹೊರದನುಳ್
ಶಸ್ ಪಾಲೊರವಂ ಪರೈದಲ್ ಏನ್ನಾವದು ಇಲಂಗಿಯಕ್ಕೇ ॥

ತಿರುವಾಯ್ (4-10-4)

ರನಿವನೇ ಎಂದು ಕೆಲವರಿಂದ ಸ್ತುತಿಸಿ ಹೇಳಲ್ಪಡುವ ಶಿವನಿಗೂ, ಬ್ರಹ್ಮದೇವನಿಗೂ, ಇತರರಿಗೂ ಆ ರಕ್ಷಿಪತಿಯೇ ು, ಬ್ರಹ್ಮಕಪಾಲ ಮೋಕ್ಷ ವೃತ್ತಾಂತದಿಂದ ತಿಳಿದುಕೊಳ್ಳಿ ಅದಾಗಿ ರುದ್ರನು ಬ್ರಹ್ಮದೇವನ ತಲೆಯೊಂದನ್ನು ಕೋಪದಿಂದ ಕಲು ಆ ತಲೆಯು ರುದ್ರನ ಕೈಯ್ಯನ್ನು ಕಚ್ಚಿಕೊಂಡು ಅವನ ರಕ್ತವನ್ನೆಲ್ಲಾ ಹೀರತೊಡಗಿತು, ಅದರಿಂದಾಗಿ ಶಿವನು ಸಾವಿ ರ್ಷ ಬಹಳ ಕಷ್ಟಪಟ್ಟು, ಪಾರ್ವತಿಯ ಮಾತಿನ ಪ್ರಕಾರ, ಬದರಿಕಾಶ್ರಮದಲ್ಲಿ ಶ್ರೀಮನ್ನಾರಾಯಣನ ಕಾಲಿಗೆ ಬಿದ್ದು ಕ್ಷೆಯನ್ನು ಬೇಡಲು ಶ್ರೀಮನ್ನಾರಾಯಣನು ಪಾಂಪಲವಾದ ತನ್ನ ಕೈಯ್ಯನ್ನು ಕಚ್ಚಿಕೊಳ್ಳುವಂತೆ ತೋರಿಸಿ ಬ್ರಹ್ಮಕಪಾಲ ರಿತು ಹೇಳಿದನು ಆ ಬ್ರಹ್ಮಕಪಾಲವು ಶಿವನ ಕೈಯನ್ನು ಬಿಟ್ಟು ನಾರಾಯಣನ ಕೈಯನ್ನು ಕಚ್ಚಿಕೊಳ್ಳಲು ಬರುವ ವಲ್ಲಿ ನಾರಾಯಣನು ಅಂತರ್ಧಾನ ಮಾಡಿದನು. ಶಿವನೂ ತಪ್ಪಿಸಿಕೊಂಡು ಹೋದನು ಈ ವೃತ್ತಾಂತದಿಂದ, ಶಿವನೂ ಕಾಮ ಕ್ರೋಧ ಪರವಶರಾಗಿ ಪುಣ್ಯಪಾಪಗಳಿಂದ ಕೂಡಿದವರು ನಾರಾಯಣನೇ ಅವರಿಗೂ ರಕ್ಷಕನು ಎಂಬುದು ಸ್ಪಷ್ಟ

ಟ್ಟಿವಿ ಪೈಯನುಂ ನಾನ್ಮುಹನುಂ ಉನ್ನೈಯರಿಯಾ ಪ್ಪೆರುಮೈಯೋನೇ
ುಟ್ರುಉಲ ಹೆಲ್ಲಾಂ ನೀಯೇಯೊಹಿ ಮೂನ್ರೆ ಮುಂತ್ತಾಯ ಮುದಲ್ವನೇಯೋ ॥
ಿದು ವಾಣಾಳ್ ಇವರ್ಕ್ಕನ್ರೆಣ್ಣಿ ಅಂಜನಮನ್ ತಮರ್ ಪಟ್ರುಲುತ್ತ
ಕ್ಕೈಕ್ಕು ನೀ ಎನ್ನೈಕ್ಕಾಕ್ಕ ವೇಂಡುಮ್ ಅರಂಗತ್ತರವರಣೈಪ್ಪಳ್ಳಿಯಾನೇ ॥

8) ಪು. ತಿ. ನೂ.

ರಹಸ್ಯತ್ರಯತ್ತಿಲ್ ಪರದೇವತಾ ಪಾರಮಾರ್ಥ್ಯಾನುಸಂಧಾನ ಸ್ಥಲಂಗಳ್

ಇಪ್ಪರದೇವತಾಪಾರಮಾರ್ಥ್ಯಮುಮ್ ತಿರುಮನ್ತ್ರತ್ತಿಲ್ ಪ್ರಥಮಾಕ್ಷರತ್ತಿಲುಮ್ ನಾರಾಯಣ ಶಬ್ದತ್ತಿಲುಮ್, ದ್ವಯತ್ತಿಲ್ ಸವಿಶೇಷಣಙ್ಗಳಾನ ನಾರಾಯಣ ಶಬ್ದಙ್ಗಳಿಲುಮ್, ಚರಮಶ್ಲೋಕತ್ತಿಲ್ "ಮಾಂ" "ಅಹಂ" ಎನ್ಗಿರ ಶಬ್ದಙ್ಗಳಿಲುಮ್ ಅನುಸನ್ಧೇಯಮ್.

ಪರದೇವತಾ ನಿಶ್ಚಯಮುಮ್ – ಅನನ್ಯ ಶರಣತ್ವಮುಮ್

ಇಷ್ಟದೇವತಾ ವಿಶೇಷ ನಿಶ್ಚಯಮುಡೈಯವನಕ್ಕಲ್ಲದು (೧) "ಕಣ್ಣನ್ ಕಣ್ಣಲ್ಲದಿಲ್ಲೈ ಯೋರ್ ಕಣ್ಣೇ" ಎನ್ರುಮ್, (೨) "ಕಳೈವಾಯ್ ತುನ್ಬಮ್ ಕಳೈಯಾದೊಳಿವಾಯ್ ಕಳೈ ಕಣ್ಮತ್ತಿಲೇನ್" ಎನ್ರುಮ್, (೩) "ಅವಿಕ್ಕೋರ್ ಪತ್ತುಕ್ಕೊಮ್ಬು ನಿನ್ನಲಾಲರಿ ಹಿನ್ರಿಲೇನಯಾನ್" ಎನ್ರುಮ್, (೪) "ತರು ತುಯರಮ್ ತಡಾಯೇಲುನ್ ಶರಣಲ್ಲಾಲ್ ಶರಣಿಲ್ಲೈ" ಎನ್ನಿರತಿರುವೊಳಿ ಮೊದಲಾನವತ್ತಿಲುಮ್ ಶೊಲ್ಲುಮ್ ಅನನ್ಯಶರಣತ್ವಾವಸ್ಥೈ ಕಿಡೈಯಾದು.

ರಹಸ್ಯತ್ರಯಗಳಲ್ಲಿ ಪರತತ್ವ ನಿರೂಪಣೆ

ಅನಂತರ ರಹಸ್ಯತ್ರಯಗಳಲ್ಲಿ ಈ ಪರದೇವತಾ ನಿರೂಪಣಸ್ಥಲಗಳನ್ನು, **ಇಪ್ಪರ ದೇವತಾ ಪಾರಮಾರ್ಥ್ಯಂ,** ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾಗಿ ಈ ಪರದೇವತಾ ಪಾರಮಾರ್ಥ್ಯವು ಅಷ್ಟಾಕ್ಷರದಲ್ಲಿ ಪ್ರಣವದಲ್ಲಿಯ ಮೊದಲನೆ ಅಕ್ಷರವಾದ **"ಅ'** ಕಾರದಲ್ಲಿಯೂ, **'ನಾರಾಯಣ'** ಶಬ್ದದಲ್ಲಿಯೂ ದ್ವಯ ಮಂತ್ರದಲ್ಲಿ ಪೂರ್ವೋತ್ತರ ಖಂಡಗಳಲ್ಲಿ **"ಶ್ರೀಮನ್ನಾರಾಯಣ" "ಶ್ರೀಮತೇನಾರಾಯಣಾಯ"** ಎಂಬ ಶಬ್ದಗಳಲ್ಲಿಯೂ, ಚರಮ ಶ್ಲೋಕದಲ್ಲಿ **"ಮಾಂ", "ಅಹಂ"** ಎಂಬ ಶಬ್ದಗಳಲ್ಲಿಯೂ ಅನುಸಂಧೇಯ ದ್ವಯಮಂತ್ರದಲ್ಲಿ **"ಶ್ರೀವಿಶಿಷ್ಟ ನಾರಾಯಣ"** ನನ್ನು ಹೇಳಿರುವುದರಿಂದ, ಮೂರು ರಹಸ್ಯಗಳೂ ಏಕಾಭಿಪ್ರಾಯವುಳ್ಳವಾದ್ದರಿಂದ ಅಷ್ಟಾಕ್ಷರ ಚರಮ ಶ್ಲೋಕಗಳಲ್ಲಿ ಆಪಾತ ಪ್ರತೀತವಾಗಿ ಕೇವಲ ನಾರಾಯಣ, ಮಾಂ, ಅಹಂ ಎಂಬ ಪದಗಳಿಂದ ಹೇಳಲ್ಪಟ್ಟಿರುವ

ವೃಷಭವಾಹನನಾದ ರುದ್ರನೂ ಚತುರ್ಮುಖನೂ ನಿನ್ನನ್ನು ತಿಳಿದುಕೊಳ್ಳಲಾಗದ ಶ್ರೇಷ್ಠತೆಯನ್ನುಳ್ಳ ಭಗವಂತನೇ, ಎಲ್ಲಾ ಲೋಕಗಳನ್ನೂ ಸೃಷ್ಟಿಸಿದವನಾಗಿ ಮೂರು ಅಕ್ಷರಗಳಿಂದ ಕೂಡಿದ ಪ್ರಣವ ಪ್ರತಿಪಾದ್ಯನಾದ, ಜಗತ್ಕಾರಣ ಭೂತನೇ

ನನಗೆ ಜೀವಿತ ಕಾಲವು ಮುಗಿಯಿತು ಎಂದು ತಿಳಿದು, ಭಯಪಡುವಂತೆ ಇರುವ ಯಮಭಟರು ಹಿಡಿದು ಕೊಳ್ಳುವ ಆ ಕಾಲದಲ್ಲಿ, ಎಲೈ ಶ್ರೀ ರಂಗದಲ್ಲಿ ಆದಿಶೇಷನ ಮೇಲೆ ಮಲಗಿರುವ ರಂಗನಾಥನೇ ನನ್ನನ್ನು ಕಾಪಾಡು,

8) ಎರುತ್ತುಕ್ಕೊಡಿಯುಡೈಯಾನುಂ ಪಿರಮನುಂ ಇಂದಿರನುಂ, ಮಟ್ರುಮ್
ಒರುತ್ತರುಂ ಇಪ್ಪಿರವಿ ಎನ್ನುಂ ನೋಯ್ಕ್ಕುಮರುಂದರಿವಾರುಮಿಲ್ಲೈ ॥
ಮರುತ್ತುವನಾಯ್ ನಿನ್ರ ಮಾಮಣಿವಣ್ಣಾ ಮರುಪಿರವಿತವಿರ
ತ್ತಿರುತ್ತಿ ಉನ್ ಕೋಯಿಲ್ ಕಡೈಪ್ಪುಹಪ್ಪೆಯ್ ತಿರುಮಾಲಿರುಂಜೋಲೈ ಯೆಂದಾಯ್ ॥

ವೃಷಭ ಧ್ವಜನೂ, ಬ್ರಹ್ಮದೇವನೂ, ಬೇರೆ ಯಾರೂ ಸಹ ಈ ಸಂಸಾರದಲ್ಲಿ ಜನನವೆಂಬ ವ್ಯಾಧಿಗೆ ಔಷಧಿಯನ್ನು ತಿಳಿಯರು ಈ ವ್ಯಾಧಿಗೆ ಚಿಕಿತ್ಸೆ ಮಾಡುವ ವೈದ್ಯನಾಗಿ ಪ್ರಕಾಶಿಸುವವನೇ ರತ್ನದ ಹಾಗೇ ಪರಮ ಸುಲಭನೂ ಪ್ರಕಾಶಯುಕ್ತನೂ ಆದ ತಿರುಮಾಲಿರುಂಜೋಲೈಯಿನಲ್ಲಿ ಸಾನ್ನಿಧ್ಯ ಮಾಡಿಕೊಂಡಿರುವ ಸ್ವಾಮಿಯೇ ಪುನರ್ಜನ್ಮವನ್ನು ತಪ್ಪಿಸು, ನಿನ್ನ ಸನ್ನಿಧಾನದಲ್ಲಿ ವಾಸ ಮಾಡಿ ಕೊಂಡಿರುವಂತೆ ಅನುಗ್ರಹಿಸು

1) ತಿಣ್ಣನ್ ವೀಡು ಮುದಲ್ ಮುಟ್ರುಮಾಯ್
ಎಣ್ಣಿನ್ ಮೀದಿಯ ನೆಂಬೆರುಮಾನ್ ।
ಮಣ್ಣುಂವಿಣ್ಣುಮೆಲ್ಲಾ ಮುಡುನುಂಡ
ನಮ್, ಕಣ್ಣನ್‌ಕಣ್ ಅಲ್ಲದು ಇಲ್ಲೈಯೋರ್ ಕಣ್ಣೇ ॥ (ತಿರು 2-2-1)

ಮೋಕ್ಷವೇ ಮೊದಲಾದ ಸಕಲ ಪ್ರಯೋಜನಗಳಿಗೆ ನಿರ್ವಾಹಕನಾಗಿ, ಚಿಂತಾತೀತನಾಗಿ, ಭೂಮ್ಯಂತರಿಕ್ಷಾದಿ ಲೋಕಗಳೆಲ್ಲಾ ತಿಂದು ಪ್ರಳಯದಲ್ಲಿ ರಕ್ಷಿಸಿದ, ನಮ್ಮ ಕೃಷ್ಣನಲ್ಲದೆ ಬೇರೆ ರಕ್ಷಕರಿಲ್ಲ

(2), (3), (4) (ಪ್ರ ತಿ ನೂ)

ಭಗವತ್ಪಾರಮ್ಯವು ವಿಶಿಷ್ಟ ನಿಷ್ಟವೆಂದು ತಿಳಿಯಬೇಕೆಂಬುದು ಶ್ರೀ ಸೂಕ್ತಿಗಳ ತಾತ್ಪರ್ಯ ಇದರಿಂದಾಗಿ 'ಲಕ್ಷ್ಮೀ' ವಿಶೇಷಣ ರಹಿತವಾಗಿ ಶರಣ್ಯ ತತ್ವವನ್ನು ಅಂಗೀಕರಿಸುವವರಿಗೆ ಯಥಾಶಾಸ್ತ್ರ ಶರಣಾಗತಿಯು ನಿಷ್ಪನ್ನವಾಗದೆ ಪೂರ್ಣ ಶರಣಾಗತ್ಯಪೇಕ್ಷೆಯು ಏರ್ಪಟ್ಟು ಮೋಕ್ಷಸಿಗಂಬಲ್ಲಂಟು

ಪರದೇವತಾ ನಿಶ್ಚಯವಿಲ್ಲದವನಿಗೆ ಅನನ್ಯ ಶರಣತ್ವವಿಲ್ಲ

ಈ ಪರದೇವತಾ ನಿಶ್ಚಯ ಜ್ಞಾನವಿಲ್ಲದವನಿಗೆ [1] **ಕಣ್ಣನ್ ಕಣ್ಣಲ್ಲದು ಇಲ್ಲೈಯೋರ್ ಕಣ್ಣೇ**-ಕೃಷ್ಣನೇ ರಕ್ಷಕನು, ಅವನಲ್ಲದ ಬೇರ ರಕ್ಷಕರಿಲ್ಲ, [2] **ಕಳೈವಾಯ್ತುನ್ಬವುಮ್**-ಸಂಸಾರ ದುಃಖವನ್ನು ಹೋಗಲಾಡಿಸು, ಅಥವಾ ಹೋಗಲಾಡಿಸಬೇಡ, ನನಗ ಬೇರ ರಕ್ಷಕರಿಲ್ಲ ಬೇರ ಉಪಾಯವೂ ತಿಳಿಯದು, ಎಂದೂ, [3] **ಆವಿಕ್ಕೋರ್ಪತ್ತುಕ್ಕೊಂಬು**...ಸಂಸಾರಸಾಗರದಲ್ಲಿ ಮುಳುಗಿ ತೇಲುತ್ತಿರುವ ನನಗ ಹಿಡಿಕೋಲು ನೀನಲ್ಲದ ಬೇರ ಇಲ್ಲ ಎಂದೂ [4] **ತರು ತುಯರಂತ ಡಾಯೇಲ್** – ಬರುವ ದುಃಖವನ್ನು ಹೋಗಲಾಡಿಸದಿದ್ದರೂ ನೀನಲ್ಲದೆ ಬೇರ ರಕ್ಷಕರಿಲ್ಲ, ಇತ್ಯಾದಿಯಾದ ಹತ್ತು ಪಾಶುರಗಳಲ್ಲಿಯೂ ಆಳ್ವಾರುಗಳು ಕೃಪೆಮಾಡಿ ಹೇಳಿರುವ ಅನನ್ಯ ಶರಣತ್ವ ವ್ಯವಸ್ಥೆಯು ಉಂಟಾಗಲಾರದು **ಅನನ್ಯಶರಣತ್ವ** –ಬೇರ ರಕ್ಷಕರಿಲ್ಲದ ಇರುವಿಕ. "ಮುದಲಾನ" ಶಬ್ದದಿಂದ **"ಕೊಂಡಪೆಂಡೀರ್ ಮಕ್ಕಳ್"** ಎಂದು ಆರಂಭಿಸುವ ತಿರುವಾಯ್‌ಮೊಳಿ ಒಂಭತ್ತನೇ ಶತಕದ, ಮೊದಲನೇ ದಶಕದಲ್ಲಿಯೂ ಹೇಳಿರ್ಪವುದು ಸೂಚಿತ. ಈ ಪರದೇವತಾ ನಿಶ್ಚಯವಿಲ್ಲದವನಿಗೆ ಅನನ್ಯ ಶರಣತ್ವ – ಬೇರೆಯಾರೂ ರಕ್ಷಕರಿಲ್ಲವೆಂಬ ಅಧಿಕಾರವೇ ಸಿದ್ಧಿಸದೆ ಪ್ರಪತ್ತಿಯೋಗ್ಯತೆಯೇ ಉಂಟಾಗಲಾರದು.

---

2) ಕಳೈವಾಯ್ ತುನ್ಬಮ್ ಕಳೈಯಾದೊಳಿವಾಯ್ ಕಳೈಕಣ್‌ಮತ್ತಿಲೇನ್
ವಳೈವಾಯ್ ನೇಮಿ ಪ್ಪಡೈಯಾಯ್ ಕುಡಂದೈಕ್ಕಿಡಂದ ಮಾಮಾಯೋ ।
ತಳರಾವುಡಲ ಪೆನದಾವಿ ಪಿರಿಂದು ಪೋಂಪೋದು
ಇಳೈಯೊದು ನ ದಾಳ್ ಒರುಂಗಪ್ಪಿಡಿತ್ತು ಪ್ಪೋದವಿಶೈ ನೀಯೇ ॥ (ತಿರುವಾಯ್ 5-8-8)

ನನ್ನ ಕಷ್ಟಗಳನ್ನು ಹೋಗಲಾಡಿಸು, ಆಥವಾ ಬೇಡ, ನನಗಂತೂ ಬೇರೆ ಯಾರೂ ದಿಕ್ಕಿಲ್ಲ, ನೀನು ಗುಂಡಾಗಿ ಜೂಪಾಗಿರುವ ಚಕ್ರಾಯುಧವನ್ನು ಧರಿಸಿರುರುತ್ತೀಯೆ, ಆಶ್ರಿತ ಸಂರಕ್ಷಣಾರ್ಥವಾಗಿ ಕುಂಭಕೋಣದಲ್ಲಿ ಸನ್ನಿಹಿತನಾಗಿದ್ದೀಯೆ ಹಾಗೂ ಆಶ್ಚರ್ಯ ಗುಣ ಚೇಷ್ಟಿತನಾಗಿದ್ದೀಯೆ ನನ್ನನ್ನು ರಕ್ಷಿಸದೆ ಹೋದರೆ ಇವೆಲ್ಲಾ ವ್ಯರ್ಥವೆಂದು ಭಾವ ನನ್ನ ಈ ಶರೀರವನ್ನು ಬಿಟ್ಟು ಹೋಗುವಾಗ ನಿನ್ನ ಪಾದ ಪದ್ಮಗಳನ್ನು ನಾನು ಸೇರಿರುವಲ್ಲಿನ ಭದ್ರವಾಗಿ ಹಿಡಿದುಕೊಳ್ಳುವಂತೆ ನೀನು ಅನುಗ್ರಹಿಸು.

3) ಕೂವಿಕ್ಕೊಳ್ಳಾಯ್ ವಂದಂದೋ ಎನ್ ಪೊಲ್ಲಾಕ್ಕರುಮಾಣಿಕ್ಕಮೇ
ಆವಿಕ್ಕೋರ್ ಪತ್ತುಕ್ಕೊಂಬು ನಿನ್ನಲಾಲ್ ಅರಿಹಿನ್ರಿಲೇನ್ ಯಾನ್ ।
ಮೇವಿತ್ತೊಳ್ರುವಾನ್ ಪಿರಮನ್ ಶಿವನ್ ಇಂದಿರನಾದಿಕ್ಕೆಲ್ಲಾಮ್
ನಾವಿಕ್ಕಮಲಮುದಲ್ ಕಿಳಂಗೇ ಉಂಬತಂಪದುವೇ ॥ (ತಿರುವಾಯ್ 10–10–3)

ಬಹಳ ಸೊಗಸಾದ ನೀಲಮಣಿಯ ಕಾಂತಿಯ ಹಾಗೆ ಇರುವವನೇ, ಈ ಆತ್ಮಾವಿಗೆ ಊರುಕೋಲು - ರಕ್ಷಣಾರ್ಥವಾಗಿ ಆಶ್ರಯಿಸಲು ನೀನಲ್ಲದೆ ಬೇರೆ ಯಾರೂ ನನಗೆ ತಿಳಿಯದು ನಿನ್ನನ್ನು ಆಶ್ರಯಿಸಿ ಉಪಾಸನೆ ಮಾಡುವ, ಬ್ರಹ್ಮದೇವ, ಶಿವ ಇಂದ್ರ ಮೊದಲಾದವರಿಗೆ ನಾಭಿಕಮಲದ ಮೂಲ ಗೆಡ್ಡೆಯೇ-ಕಾರಣ ಭೂತನೇ ಎಂದರ್ಥ, ಹಾಗೆಯೇ ನಿತ್ಯಸೂರಿಗಳಿಗೂ ನಿರ್ವಾಹಕನೇ, ಬಂದು ಕರೆದುಕೊಂಡು ಹೋಗು ಎಂದು ಅನ್ವಯ, ಅಂದೋ ನೀನೇ ಮಾಡಬೇಕಾದ ಈ ಕೆಲಸವನ್ನು ನಾನು ಹೇಳಬೇಕೇ

4) ತರುತುಯರಂತಡಾಯೇಲ್ ಉನ್ ಶರಣಲ್ಲಾಲ್ ಶರಣಿಲ್ಲೈ
ವಿರೈಕುಳುವು ಮಲರ್ ಪೊಳ್ಗಿಲ್ ಶೂಳ್ವಿತ್ತುವಕ್ಕೋಟ್ಟಮ್ಮಾನೇ ।
ಅರಿಶಿನತ್ತಾಲ್ ಈನ್ರತಾಯ್ ಅಹಟ್ರಿಡಿನುಮ್ ಮತ್ತವಳ್‌ತನ್
ಅರುಳ್‌ನಿನೈಂದೇ ಅಳುಂಕುಳವಿಯದುವೇ ಪೋನ್ರಿರುಂದೇನೇ ॥ (ಪೆರುಮಾಳ್ ತಿರು 5–1)

ವು ಶಿ ನೋ.

ದೇವತಾಪಾರಮಾರ್ಥ್ಯ ಜ್ಞಾನಫಲ – ತದೀಯ ಪರ್ಯಂತ ದೇವತಾಂತರ ತ್ಯಾಗ ಜ್ಞಾನ

ಇನ್ದ ಪರದೇವತಾಪಾರಮಾರ್ಥ್ಯತ್ತೈತ್ತಿರುಮಂತ್ರತ್ತಿಲೇ ಕಣ್ಡು, ತದೀಯಪರ್ಯಂತಮಾಹ ಭಗವಚ್ಛೇಷತ್ವಮುಮ್, ಪ್ರತಿಷ್ಠಿತಮಾನ ಪಡಿಯೈ, "ಮಱ್ಱು ಮೋರ್‌ದೈವಮ್‌ಮ ಮುಳದೆನ್ರಿರುಪ್ಪಾರೋಡುಱ್ಱಿಲೇನುಱ್ಱದುಮುನ್ನಡಿಯಾರ್ಕಡಿಮೈ" ಎನ್‌ಹಿರ ಪಾಟ್ಟಿಲೇ ಸರ್ವೇಶ್ವರ್ರ ಪಕ್ಕಲಿಲೇ ಸರ್ವಾರ್ಥಗ್ರಹಣಮ್ಪಣ್ಣಿನಾಳ್ವಾರರುಳಿಚ್ಚೆಯ್‌ದಾರ್.

ಪರದೇವತಾ ಪಾರಮಾರ್ಥ್ಯಜ್ಞಾನಕ್ಕೆ ತದೀಯಪರ್ಯಂತದೇವತಾಂತರ ತ್ಯಾಗಜ್ಞಾನವು ಫಲ

ಇಂದ ಪರದೇವತಾ ಪಾರಮಾರ್ಥ್ಯತ್ತೈ ಇತ್ಯಾದಿ–ಈ ಪರದೇವತಾ ಪಾರಮಾರ್ಥ್ಯವನ್ನು- ಅಷ್ಟಾಕ್ಷರ ಮಂತ್ರದಿಂದ ತಿಳಿದುಕೊಂಡು. ಅದರ ಫಲವಾಗಿ ತದೀಯ ಪರ್ಯಂತ ದೇವತಾಂತರ ತ್ಯಾಗವೂ (ಅಂದರೆ ಇತರ ದೇವತೆಗಳನ್ನೂ ಆ ದೇವತೆಗಳನ್ನು ಪೂಜಿಸುವವರನ್ನೂ ಬಿಟ್ಟು) ತದೀಯ ಪರ್ಯಂತ ಭಗವಚ್ಛೇಷತ್ವವೂ ತಮಗೆ ಪ್ರತಿಷ್ಠಿತವಾದುದನ್ನು [1]**"ಮಟ್ರುಮೋರ್‌ದೈವಮ್"** ಎಂದಾರಂಭಿಸುವ ಪಾಶುರದಲ್ಲಿ ಸರ್ವೇಶ್ವರನ ಹತ್ತಿರ ಸರ್ವಾರ್ಥ ಗ್ರಹಣವನ್ನು ಮಾಡಿದ ತಿರುಮಂಗೈಯಾಳ್ವಾರ್ ಕೃಪೆಮಾಡಿ ಹೇಳಿರುತ್ತಾರ ತದೀಯ ಪರ್ಯಂತ **ದೇವತಾಂತರ ತ್ಯಾಗವು** ಪ್ರತಿಷ್ಠಿತವಾಗುವುದೆಂದರೆ – ಶೈವರು ಹೇಳುವ ರುದ್ರೋತ್ಕರ್ಷ ವಾದ, **ಪಾಶುಪತಾ**ಗಮಗಳಲ್ಲಿ **ಹೇಳಿರುವ** ಕ್ಷುದ್ರಫಲಗಳಲ್ಲಿ ಆಸೆ ಇತ್ಯಾದಿಗಳಿಂದ ಬಾಧೆಯು ಕೆಡದೆ ಯಾವುದಾಯುಷ ಇರುವುದು ತದೀಯಪರ್ಯಂತ ಭಗವಚ್ಛೇಷತ್ವವು ಪ್ರತಿಷ್ಠಿತವಾಗಿರುವುದೆಂದರೆ, ಸ್ವತಂತ್ರಾತ್ಮ ಜ್ಞಾನ, ಅನ್ಯಶೇಷತ್ವಜ್ಞಾನಗಳು ಬಾರ**ದೆ** ಭಾಗವತ ಶೇಷತ್ವದಲ್ಲೇ ಊರಿ ಇರುವುದು **ಸರ್ವೇಶ್ವರನ್ ಪಕ್ಕಲಿಲೇ ಸರ್ವಾರ್ಥಗ್ರಹಣಂ ಪಣ್ಣಿನ ಆಳ್ವಾರ್** – ತಿರುಮಂಗೈಯಾಳ್ವಾರ್ ಜ್ಞಾನೋದಯಕ್ಕೆ ಮೊದಲು, ಭಗವಂತನ ಸರ್ವಾಭರಣಗಳನ್ನು ಕಿತ್ತುಕೊಂಡರು ಜ್ಞಾನೋದಯವಾದ ನಂತರ ಅಷ್ಟಾಕ್ಷರ ಮಂತ್ರವನ್ನೂ ಅದರಲ್ಲಿ ಪ್ರತಿಪಾದಿಸಿರುವ ಸರ್ವಾರ್ಥಗಳನ್ನೂ ಉಪದೇಶಹೊಂದಿದರು ಎಂಬುದು **ಸರ್ವಾರ್ಥ ಗ್ರಹಣ** ಶಬ್ದದಿಂದ ಶ್ಲೇಷೆಯಾಗಿ ಹೇಳಲ್ಪಟ್ಟಿದೆ.

ಬರುತ್ತಿರುವ ಕಷ್ಟವನ್ನು ಹೋಗಲಾಡಿಸು, ಹೋಗಲಾಡಿಸದಿದ್ದರೂ ನೀನಲ್ಲದೆ ಬೇರೆ ರಕ್ಷಕರಿಲ್ಲ ವಾಸನೆ ಹೂವುಗಳನ್ನುಳ್ಳ ತೋಟಗಳಿಂದ ಕೂಡಿದ ವಿತ್ತುವಕ್ಕೋಡಿನಲ್ಲಿರುವ ಸ್ವಾಮಿಯೇ, ಒಪಳ ಕೋಪದಿಂದ ಹೆತ್ತ ತಾಯಿಯು ತನ್ನ ಮಗುವನ್ನು ದೂರ ತಳ್ಳಿದರೂ, ಆ ತಾಯಿಯನ್ನು ಬಿಡದೆ, ಅವಳ ವಾತ್ಸಲ್ಯವನೇ ನೆನೆಸಿಕೊಂಡು ಅವಳಲ್ಲಿಗೇನೇ ಬರುವ ಚಿಕ್ಕ ಮಗುವ ಹಾಗೆ, ನಾನೂ ನಿನ್ನನ್ನು ಬಿಟ್ಟಿರಲಾರೆ

1) ಮಟ್ರುಮೋರ್ ದೈವ ಮುಳದೆನ್ರಿರುಪ್ಪಾರೋಡುಟ್ರಿಲೇನ್
ಉಟ್ರುದು ಮುನ್ನಡಿಯಾರ್ಕಡಿಮೈ ।
ಮಟ್ರೆಲ್ಲಾಂ ಪೇಶಿಲುಂ ನಿನ್‌ತಿರುವೆಟ್ಟೆಳುತ್ತುಂಕಟ್ರು
ನಾನ್ ಕಣ್ಣಪುರುತ್ತುರೈಯ ಮ್ಮಾನೇ ॥

ತಿರುಕ್ಕಣ್ಣಪುರದಲ್ಲಿ ವಾಸವಾಗಿರುವ ಸ್ವಾಮಿಯೇ । ನಿನ್ನ ಅಷ್ಟಾಕ್ಷರ ಮಂತ್ರವನ್ನು ಕಲಿತು ತಿಳಿದು ಕೊಂಡಿರುವುದೇನೆಂದರೆ, ನೀನಲ್ಲದೆ, ಬೇರೆ ದೇವತೆಯು ಇದೆ ಎಂದು ಹೇಳುವವರೊಡನೆ ಅಂದರೆ ದೇವತಾಂತರ ಭಕ್ತರೊಡನೆ ಸಂಬಂಧವನ್ನು ಬೆಳೆಸೆನು. ಇದರಿಂದ ದೇವತಾಂತರ ಸಂಬಂಧ ವರ್ಜನವು ಕೈಮುತಿಕ ನ್ಯಾಯಸಿದ್ಧ, ದಾಸ ಭೂತನಾದ ನಾನು ಪ್ರಧಾನವಾಗ ನಿಶ್ಚಯಿಸಿರುವುದು, ನಿನಗೆ ಶೇಷ ಭೂತರಾದ ಭಾಗವತರಿಗೆ ಶೇಷ ಭೂತನಾಗಿರುವುದೇ ಶ್ರೀಮದಷ್ಟಾಕ್ಷರದಲ್ಲಿ ಅನೇಕಾರ್ಥಗಳು ಹೇಳಲ್ಪಟ್ಟಿದ್ದರೂ ಸಾರತಮವಾದವು – ದೇವತಾಂತರ ಸಂಬಂಧ ಮತ್ತು ದೇವತಾಂತರ ಭಕ್ತರ ಸಂಬಂಧ – ಇವೆರಡನ್ನೂ ಬಿಡುವುದು ಹಾಗೆಯೇ ಭಗವದ್ಭಕ್ತಿಯು ಭಾಗವತ ಭಕ್ತಿ ಪರ್ಯಂತ ಪ್ರವಹಿಸಿ ಅವರಿಗೆ ಕೈಂಕರ್ಯ ಮಾಡುವುದು, ಎಂಬುವು.

ಇಯಂತಾ ಪ್ರಬಂಧೇನ – ಈ ಅಧಿಕಾರದಲ್ಲಿ ಆಚಾರ್ಯರು ವೇದೋಪಬೃಂಹಣಗಳಾದ ಸ್ಮೃತೀತಿಹಾಸ ಪುರಾಣ ವಚನಗಳನ್ನೆತ್ತಿ ತೋರಿಸಿ ಪರದೇವತಾ ನಿಷ್ಕರ್ಷೆಯನ್ನು ಮಾಡಿರುತ್ತಾರೆ. ಸಾರಾಸ್ವಾದಿನೀ ಗ್ರಂಥದಲ್ಲಿ ಕರೂರು ಸ್ವಾಮಿಗಳು ಈ ವಚನಗಳ ತಾತ್ಪರ್ಯಗಳನ್ನು ಸಂಗ್ರಹಿಸಿರುತ್ತಾರೆ. ಅವುಗಳನ್ನು ಕೆಳಗೆ ನಿರೂಪಿಸಲಾಗಿದೆ. ಅದಾಗಿ –

ಈ ಅಧಿಕಾರ ನಿರೂಪಿತವಾದ ಪರದೇವತಾ ಪಾರಮಾರ್ಥ್ಯ ಜ್ಞಾನಕ್ಕೆ ಕಾರಣಗಳು

[1]ಪ್ರಾಕೃತಪ್ರಳಯದಲ್ಲಿ ಬ್ರಹ್ಮಾದಿಗಳೂ ಲಯ ಹೊಂದಲು, ಶ್ರೀಮನ್ನಾರಾಯಣನೇ ಸರ್ವಕಾಲದಲ್ಲಿಯೂ ಯಾವ ಉಪಪ್ಲವವೂ (ಬಾಧಕ) ಇಲ್ಲದ ವ್ಯವಸ್ಥೆ ಮಾಡಿರುತ್ತ [2]ಬ್ರಹ್ಮಾದಿಗಳು ತಮ್ಮ ತಮ್ಮ ಕಾರ್ಯಗಳಿಗೆ ಅನುಸಾರವಾಗಿ ಅವನ ಆರಾಧನೆಗೆ ಕಾರ್ಯಭೂತರು. [3]ಬ್ರಹ್ಮಾದಿಗಳು ಭಗವಂತನನ್ನು ಪೂಜಿಸಿ ತಮ್ಮ ತಮ್ಮ ಅಧಿಕಾರಗಳನ್ನು ಪಡೆದಿದ್ದಾರೆ. [4]ಬ್ರಹ್ಮಾದಿಗಳು ಭಗವಂತನ ಮಾಯಾ ಪರವಶರಾಗಿ ಪರಿಮಿತ ಜ್ಞಾನಶಕ್ತಿಯುಳ್ಳವರು. [5]ಬ್ರಹ್ಮಾದಿಗಳು ಸರ್ವಾಂತರಾತ್ಮಭೂತನಾದ ಭಗವಂತನಿಂದ ಪ್ರೇರಿತರಾಗಿ ಕಾರ್ಯಗಳನ್ನು ನಿರ್ವಹಿಸುತ್ತಾರೆ [6]ಬ್ರಹ್ಮಾದಿಗಳಿಗೆ ಅಶುಭಾಶ್ರಯತ್ವವ ಹೇಳಿದೆ [7]ಬ್ರಹ್ಮಾದಿಗಳಿಗೆ ಭಗವಂತನೇ ಆಶ್ರಯಣೀಯನು. ಭಗವಂತನಿಗ ಆಶ್ರಯಣೀಯರು ಯಾರೂ ಇಲ್ಲ [8]ಬ್ರಹ್ಮಾದಿಗಳು ಭಗವಂತನ ವಿಭೂತಿ – ಅವನಿಗೆ ಅಧೀನರು ಎಂದರ್ಥ [9]ಬ್ರಹ್ಮಾದಿಗಳು ಭಗವದಪೃಥಕ್ ಸಿದ್ಧಪ್ರಕಾರರು – ಪ್ರತ್ಯೇಕವಾಗಿರಲರ್ಹರಿಲ್ಲದೆ ಅವನಿಗೆ ವಿಶೇಷಣಭೂತರು. [10]ಭಗವಂತನು ಬ್ರಹ್ಮಾದಿಗಳಿಗೆ ಅಂತರಾತ್ಮಭೂತನು [11]ಬ್ರಹ್ಮಾದಿಗಳು ಭಗವಂತನಿಗೆ ಶರೀರಭೂತರು – ಅಂದರೆ ಅವನಿಂದ ಧರಿಸಲ್ಪಟ್ಟು, ಅವನಿಂದ ನಿಯಮಿಸಲ್ಪಟ್ಟು, ಅವನಿಗೆ ಶೇಷಭೂತರ. [12] ಭಗವಂತನು ಬ್ರಹ್ಮಾದಿ ಸರ್ವರಿಗೂ ಸ್ವಾಮಿ. [13]ಬ್ರಹ್ಮಾದಿಗಳು ಭಗವಂತನಿಗೆ ನಿರುಪಾಧಿಕದಾಸರು [14]ಭಗವಂತನಿಗೆ ಸಮರೂ ಇಲ್ಲ, ಮೇಲಾದವರೂ ಇಲ್ಲ. [15]ಜಾಯಮಾನ ಪುರುಷನಿಗೆ ತಾಯಿಯ ಗರ್ಭದಿಂದ ಹುಟ್ಟುವ ತರುಣದಲ್ಲಿ ಭಗವತ್ಕಟಾಕ್ಷವು ಏರ್ಪಟ್ಟರೇನೆ ಸತ್ವೋನ್ಮೇಷವು ಉಂಟಾಗಿ, ಮೋಕ್ಷದಲ್ಲಿ ಅಭಿಲಾಷೆಯು ಉಂಟಾಗುತ್ತದೆ [16]ಬ್ರಹ್ಮರುದ್ರಾದಿಗಳ ಕಟಾಕ್ಷವು ಜಾಯಮಾನದಶೆಯಲ್ಲಿ ಬಿದ್ದರೆ, ಅವನು ರಜೋಗುಣ ತಮೋಗುಣಗಳಿಂದ ಕೂಡಿದ ಸ್ವಭಾವನಾಗಿ ಸಂಸಾರದಲ್ಲಿಯೇ ಇರುತ್ತಾನೆ. [17]ಬ್ರಹ್ಮಾದಿಗಳು ಮುಮುಕ್ಷುಗಳಿಂದ ಪೂಜಿಸಲ್ಪಡತಕ್ಕವರಲ್ಲ. [18]ಚತುರ್ಮುಖ ಬ್ರಹ್ಮನೇ ಆದಿಯಾಗಿ ಎಲ್ಲಾ ಮುಮುಕ್ಷುಗಳಿಗೂ ಭಗವಂತನೇ ಉಪಾಸ್ಯನು ಎಂಬುದು ನಿಷ್ಕರ್ಷ. [19]ಬ್ರಹ್ಮಾದಿಗಳು ಮೋಕ್ಷಕ್ಕೆ ಕಾರಣರೆಂದು ಹೇಳಿರುವ ವಚನಗಳು ಆಚಾರ್ಯಾದಿಗಳ ಹಾಗೆ ಪರಂಪರೆಯಾಗಿ ಮೋಕ್ಷಕಾರಣರೆಂಬುದರಲ್ಲಿ ತಾತ್ಪರ್ಯ. [20]ದೇವತಾಂತರಗಳನ್ನು ಭಗವಂತನಿಗೆ ಸಮಾನರೆಂದು ಹೇಳುವವರು ಪಾಷಂಡಿಗಳು, ಸರ್ವಕರ್ಮಬಹಿಷ್ಕೃತರು, ಎಂದು ಹೇಳುವುದರಿಂದ ಆ ದೇವತಾಂತರಗಳು ಭಗವಂತನಿಗೆ ಸಮಾನರಲ್ಲ [21]ಆಸುರ ಪ್ರಕೃತಿಗಳಿಗ ಭಗವನ್ನಿಗ್ರಹದಿಂದ ಅನರ್ಥ ಪರಂಪರೆಯುಂಟಾಗುತ್ತದೆ [22]ದೇವತಾಂತರವು ಭಗವಂತನ ಅಪ್ಪಣೆಯಿಂದ ಮೋಹನ ಶಾಸ್ತ್ರವನ್ನು ಪ್ರವರ್ತಿಸುತ್ತದೆ. [23]ಆಯಾಯಾ ಮೋಹನ ಶಾಸ್ತ್ರಗಳನ್ನು ಅವಲಂಬಿಸಿದವರಿಗೆ ಲಭಿಸುವ ದೃಷ್ಟ ಫಲವೂ, "ಏಷ ಏವ ಅಸಾಧು ಕರ್ಮ ಕಾರಯತಿ ತಂ ಯಮಧೋನಿನೀಷತಿ"-(ಯಾರನ್ನು ಅವರ ಪಾಪಗಳ ದೆಸೆಯಿಂದಾಗಿ ನರಕಾದಿದುರ್ಗತಿಗಳಲ್ಲಿ ತಳ್ಳಲು ಅಭಿಪ್ರಾಯ ಪಡುತ್ತಾನೋ, ಅವರನ್ನು ಇವನೇ (ಭಗವಂತನೇ) ತಪ್ಪುಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಾನೆ) ಎಂದು ಹೇಳುವ ಪ್ರಕಾರ ಪಾಪಿಗಳನ್ನು ನರಕಾದ್ಯಧೋಲೋಕಗಳಲ್ಲಿ ನಯಿಸುವುದೂ ಭಗವಂತನಿಗೆ ಅಭಿಮತ [24]ಭಗವಂತನು ಯಾರನ್ನು ನಿಗ್ರಹಿಸಲು ಸಂಕಲ್ಪಿಸುತ್ತಾನೋ, ಅವನನ್ನು ರಕ್ಷಿಸಲು ಬ್ರಹ್ಮರುದ್ರಾದಿಗಳು ಶಕ್ತರಲ್ಲರು [25]ಭಗವಂತನು ಯಾರನ್ನು ಅನುಗ್ರಹಿಸಲು ಸಂಕಲ್ಪಿಸುತ್ತಾನೋ ಅದನ್ನು ತಡೆಯಲು ಬ್ರಹ್ಮಾದಿಗಳಿಗೆ ಸಾಮರ್ಥ್ಯವಿಲ್ಲ. [26]ಆಶ್ರಿತರನ್ನು ರಕ್ಷಿಸುವಾಗ ಅದಕ್ಕೆ ವಿರೋಧಿಸುವ ಸತ್ಪ್ರಕೃತಿಗಳನ್ನು ಅನುಕೂಲರನ್ನಾಗಿ ಮಾಡಿಯೂ ದುಷ್ಪ್ರಕೃತಿಗಳನ್ನು ನಿಗ್ರಹಿಸಿಯೂ ಸರ್ವ ಪ್ರಕಾರದಲ್ಲಿಯೂ ಭಗವಂತನ ರಕ್ಷಣ ಸಂರಂಭವು ಅವಶ್ಯವಾಗಿ ಫಲದಿಂದ ಕೂಡುತ್ತದ [27]ದೇವತಾಂತರಗಳು ವಿಷ ಮಧು ತುಲ್ಯವಾದ ಫಲಗಳನ್ನು ಕೊಡು

ವುದೂ ಭಗವಂತನು ಕೊಡುವ ಶಕ್ತಿಯಿಂದ ಕೂಡಿಯೇ ಕೊಡುತ್ತಾರೆ. [28]ದೃಷ್ಟ ಫಲದಲ್ಲಿ ಅಂದರೆ ಐಹಿಕವಾದ ಪುತ್ರ, ಪಶು, ಅನ್ನ ಮೊದಲಾದ ಐಶ್ವರ್ಯಗಳಲ್ಲಿ ಆಸೆಯಿಂದ ಭಗವಂತನನ್ನು ಆಶ್ರಯಿಸಿದರೂ "ತೃಷಿತ ಜನತಾ ತೀರ್ಥ ಸ್ನಾನ ಕ್ರಮ ಕ್ಷಪಿತೈನಸಾಂ" (ದಯಾ ಶತಕ)--ಬಾಯಾರಿಕೆಯಿಂದ ಕೂಡಿದವನು ಗಂಗಾಸ್ನಾನ ಮಾಡಿದರೆ ಬಾಯಾರಿಕೆ ಜತೆಗೆ ಪಾಪವೂ ಹೋಗುವಂತೆ, ಐಹಿಕ ಫಲಸಿದ್ಧಿಯುಂಟಾಗಿ ಮೋಕ್ಷಪರ್ಯಂತ ಫಲವು ಸಿದ್ಧಿಸುತ್ತದೆ [29]ಭಗವಂತನನ್ನು ಮೋಕ್ಷೇತರ ಫಲಗಳಿಗಾಗಿ ಆಶ್ರಯಿಸಿದವರಿಗೆ ಕ್ರಮವಾಗಿ ಪುಣ್ಯಪಾಪಗಳು ಕಳದು ಭಗವಂತನಲ್ಲಿ ಭಕ್ತಿ ಯುಂಟಾಗಿ ನಂತರ ಶೀಘ್ರದಲ್ಲೇ ಮೋಕ್ಷವು ಉಂಟಾಗುತ್ತದೆ [30]ಪ್ರಪನ್ನನು ಅಪೇಕ್ಷಿಸುವ ಕಾಲದಲ್ಲಿ ಭಗವಂತನು ಅನವಧಾನವಿಲ್ಲದ ಕಾಲವನ್ನು ಪ್ರತೀಕ್ಷಿಸಿಕೊಂಡು ಮೋಕ್ಷಕ್ಕೆ ಕರದೊಯ್ಯುತ್ತಾನೆ [31]ಈ ರೀತಿಯಾದ ವಿಚಿತ್ರವಾದ ಅನಂತ ವ್ಯವಸ್ಥೆಗಳು ಭಗವಂತನ ನಿರಂಕುಶ ಸ್ವಾತಂತ್ರ್ಯ ವಿಲಸಿತಗಳು. [32]ಯಥೋಕ್ತವಾದ ಭಗವತ್ತತ್ವ ಯಾಥಾತ್ಮ್ಯ ಜ್ಞಾನ ವಿಲ್ಲದವರಿಗೆ ದೇವತಾಂತರ ಸೇವ್ಯತ್ವವು ಯಾವುದಾದರೂ ಒಂದು ರೀತಿಯಲ್ಲಿ ಸನ್ಮಾರ್ಗದಲ್ಲಿ ಪ್ರವೇಶಿಸಲು ಉಪಯೋಗವಾಗುತ್ತದೆ. [33]ದೇವತಾಂತರಾರಾಧನ ಮಾತ್ರವೆಂಬ ಬುದ್ಧಿಯಿಂದ ಮಾಡುವ ಪೂಜಾದಿ ಸುಕೃತಗಳು, ವಸ್ತು ವೃತ್ತಿಯಲ್ಲಿ ಆ ದೇವತಾಂತರಗಳಿಗೆ ಅಂತರ್ಯಾಮಿಯಾದ ಭಗವದಾರಾಧನ ರೂಪಗಳು, ಆದರೆ ಆ ಜ್ಞಾನವಿಲ್ಲದಿರುವುದರಿಂದ ಫಲವು ಕಡಿಮೆ. ಹೇಗೆಂದರೆ ಚಾರ್ವಾಕ ಮತವನ್ನವಲಂಬಿಸಿದ ಭೃತ್ಯನು ರಾಜನ ಶರೀರವೇ ಆತ್ಮವೆಂದು ತಿಳಿದು ಆ ಶರೀರಕ್ಕೆ ಚಂದನವನ್ನು ಹಚ್ಚಿ ಹೂವುಗಳಿಂದ ಅಲಂಕರಿಸಿದರೂ ವಸ್ತು ವೃತ್ತಿಯಲ್ಲಿ ಆ ಶರೀರಾಂತರ್ವರ್ತಿಯಾದ ಆತ್ಮಾ ಪ್ರೀತನಾಗುವಂತೆ, ದೇವತಾಂತರಗಳು ಭಗವಚ್ಛರೀರಗಳಾಗಿರುವುದರಿಂದ ತಂದತವರ್ತಿ ಭಗವಂತನು ಪ್ರೀತನಾಗುತ್ತಾನೆ. ಆದರೆ ಅಂತರ್ಯಾಮಿ ಜ್ಞಾನವಿಲ್ಲದಿರುವುದರಿಂದ ಅವರಿಗೆ ಫಲವು ಪೂರ್ಣವಲ್ಲವೆಂದು ಶಾಸ್ತ್ರ ಸಮ್ಮತವಾದ ಮಾತು[34]ದೇವತಾಂತರಗಳು ಭಗವಚ್ಛರೀರವೆಂಬ ಯಥಾವಸ್ಥಿತ ಜ್ಞಾನದಿಂದ ದೇವತಾಂತರ ಶರೀರಿಕ ಭಗವಂತನನ್ನು ಆರಾಧಿಸುವವನಿಗೆ ಫಲವು ಪೂರ್ಣವಾಗಿ ಸಿದ್ಧಿಸುತ್ತದೆ. [35]"ಅಕಾಮ ಸ್ಸರ್ವಕಾಮೋವಾ ಯಜೇತ ಪುರುಷೋತ್ತಮಮ್" ಎಂಬ ವಚನದಂತೆ ಪುರುಷೋತ್ತಮನನ್ನು ಫಲಾಂತರಗಳಿಗಾಗಿ ಆರಾಧನೆ ಮಾಡುವವನಿಗೆ ಆ ಫಲಗಳು ಅತಿಶಯಿತಗಳಾಗಿ ಲಭಿಸುತ್ತವೆ [36]ಪರಮಪ್ರಾಪ್ಯನು ಅವನೇ-ನಮಗೆ ಅವನೇ ಬೇಕು, ಫಲಾಂತರಗಳು ಬೇಕಿಲ್ಲ, ಎಂಬ ರೀತಿಯಲ್ಲಿ ಅವನನ್ನೇ ಅವಲಂಭಿಸಿ ಅವನಲ್ಲಿ ಭಕ್ತಿ ಪ್ರಪತ್ತಿರೂಪ ಉಪಾಸನೆ ಮಾಡುವವರಿಗೆ, ಮೋಕ್ಷ ಫಲವನ್ನು ಕೊಡುವುದರ ಜತೆಗೆ ಐಹಿಕ ಫಲಗಳಲ್ಲಿ ಅವರಿಗೆ ಆಸೆಯಿಲ್ಲದಿದ್ದರೂ, ಭಗವದಾರಾಧನೋಪಯುಕ್ತವಾದ ಶರೀರಾರೋಗ್ಯಾದಿ ಸಂಪತ್ತುಗಳನ್ನು ಹಿತದೃಷ್ಟಿಯಿಂದ ಕೊಡುತ್ತಾನೆ, [37]ಹೀಗೆ ಆತ್ಮಗುಣ ಪರಿಪೂರ್ಣರಾದ ಕುಲಶೇಖರಾಳ್ವಾರ್ ಪ್ರಭೃತಿಗಳಿಗೆ ಆನುಷಂಗಿಕವಾಗಿ ಭಗವಂತನು ತಾನೇ ಫಲಪ್ರದಾನ ಮಾಡಿರುವಂತೆ, ಅವರವರ ಪ್ರಬಂಧಗಳಲ್ಲಿ ಹೇಳಕೊಂಡಿದ್ದಾರ, [38]ಭೋಗಪೂರ್ವಕವಾಗಿ ಮೋಕ್ಷವನ್ನು ಅಪೇಕ್ಷಿಸುವವರಿಗ ಎರಡು ಫಲಗಳೂ ನಿಶ್ಚಯವಾಗಿ ಲಭಿಸುತ್ತವೆ [39]ಹೀಗೆ ಸಂಸ್ಕೃತ ಉಪಬೃಂಹಣಗಳ ಹಾಗೆ ದ್ರಮಿಡೋಪಬೃಂಹಣಗಳಲ್ಲಿಯೂ (ಆಳ್ವಾರುಗಳ ಶ್ರೀ ಸೂಕ್ತಿಗಳಲ್ಲಿಯೂ) ಈ ವಿಷಯಗಳು ಹೇಳಿವೆ. ಅದಾಗಿ ಪರಮಪಾವನವಾದ ಗಂಗೆಯನ್ನು ಸೃಷ್ಟಿಸಿದ, ಮತ್ತು ಮೂರು ಲೋಕಗಳನ್ನೂ ಆಕ್ರಮಿಸಿದ ತ್ರಿವಿಕ್ರಮನ ದಿವ್ಯಪಾದ ಪದ್ಮದಲ್ಲಿ ಅರ್ಚಿಸಿದ ಹೂವುಗಳನ್ನು ಶಿವನ ತಲೆಯ ಮೇಲೆ ಕಂಡ ಅರ್ಜುನನು ಭಗವಂತನ ಪಾರಮ್ಯವನ್ನು ತಿಳಿದುಕೊಂಡನು. [40]ಭಗವಂತನು ತಿಂದು ಕಕ್ಕಿದ ರೀತಿಯಲ್ಲಿ ಪ್ರಳಯದಲ್ಲಿ ತನ್ನಲ್ಲಿ ಬ್ರಹ್ಮಾದಿ ಸರ್ವ ಚೇತನಗಳನ್ನೂ, ಅಚೇತನಗಳನ್ನೂ ಅಡಗಿಸಿಕೊಂಡು ಪುನಃ ಸೃಷ್ಟಿ ಕಾಲದಲ್ಲಿ ಸೃಷ್ಟಿಸಿದನು ಅದಕ್ಕೆ ಅಂತರ್ಗತರಲ್ಲದವರು ಯಾರೂ ಇಲ್ಲ. [41]ಭಗವಂತನಾದ ನಾರಾಯಣನಿಂದ ಚತುರ್ಮುಖನು ಉಂಟಾದನು, ಚತುರ್ಮುಖನಿಂದ ಶಂಕರನು ಉಂಟಾದನು, ಎಂಬ ವಚನದಿಂದ ಭಗವಂತನೇ ಸರ್ವಸ್ಮಾತ್ಪರನು. [42]ಬ್ರಹ್ಮ ಶಿವೇಂದ್ರಾದಿ ಸರ್ವಜಗತ್ತಿಗೂ ಉಪಾದಾನ ಕಾರಣ ಭೂತವಾದ ನಾಭೀ ಕಮಲವನ್ನುಳ್ಳವನು ಭಗವಂತ. [43]ದೇವೇಂದ್ರನು, ಚತುರ್ಮುಖನು ಮತ್ತು ತಪೋನಿಷ್ಠಯಿಂದ ಕೂಡಿದವನೆಂದು ಸೂಚಿಸುವ ಜಟಾಧಾರಿಯಾದ ಶಿವನೂ ಸಹ ಭಕ್ತಿ ಶ್ರದ್ಧೆಯಿಂದ

ಇವರ್ (1) ಆಳ್ವಾರ್ ನಿರ್ಧರಿಸಿದ ಪರತತ್ವ:- "ಪಾರುವಿಲ್ ನೀರೆರಿಕಾಲ್" ಎನ್ನಿರ ಪಾಟ್ಟಿಲೇ ಪರಿಶೇಷ ಕ್ರಮತ್ತಾಲೇ ವಿವಾದ ವಿಷಯಮಾನ ಮೂವರೈ ನಿರುತ್ತಿ ಅವರ್ಗಳ್ ಮೂವರಿಲುಮ್ ಪ್ರಮಾಣಾನುಸಂಧಾನತ್ತಾಲೇ ಇರುವರೈಕ್ಕಳಿತ್ತು ಪರಿಶೇಷಿತ್ತ ಪರಂಜ್ಯೋತಿಸ್ಸಾನ ಒರುವನೈ 'ಮುಗಿಲುರುವಮ್ ಎಮ್ಮಡಿಗಳುರುವ" ಮೆನ್ರು ನಿಷ್ಕರ್ಷಿತ್ತಾರ್,

---

ಭಗವಂತನ ಪಾದ ಪಂಕಜವನ್ನು ಸ್ತೋತ್ರಮಾಡಿ ಆತ್ಮರಕ್ಷಣೆಯನ್ನು ಹೊಂದುತ್ತಾನೆ. **44ಚತುರ್ಮುಖ, ಶಿವ** ಮತ್ತು ಇತರ ದೇವತೆಗಳಿಗೂ ಭಗವಂತನೇ ನಾಯಕನು. 45ವೃಷಭ ವಾಹನ ಮತ್ತು ಚತುರ್ಮುಖರುಗಳಿಂದಲೂ ತಿಳಿಯಲಶಕ್ಯವಾದ ಮಹಿಮೆಯುಳ್ಳವನು ಭಗವಂತ 46ವೃಷಭ ಧ್ವಜನಾಗಲಿ, ಬ್ರಹ್ಮದೇವನಾಗಲಿ ಇಂದ್ರನಾಗಲಿ ಬೇರೆ ಯಾರಾಗಲಿ ಸಂಸಾರವೆಂಬ ವ್ಯಾಧಿಗೆ ಏನು ಔಷಧಿ ಎಂದು ತಿಳಿಯರು. ಭಗವಂತನೊಬ್ಬನೇ ಸರ್ವರಿಗೂ ಹಿತವಾವುದು ಎಂಬುದನ್ನು ತಿಳಿದವನು-ಈ ರೀತಿಯಾಗಿ ನಲವತ್ತಾರು ಕಾರಣಗಳಿಂದ, ಪರಮ ಸಾತ್ವಿಕರಿಂದ ಪರಿಗೃಹೀತವಾದ ಪರಮಾಸ್ತಿಕ ಪ್ರಣೀತವಾದ ಮತ್ತು ಪ್ರಕೃಷ್ಟ ಸತ್ವ ಮೂಲಕವಾದ ಅನೇಕಗಳಾದ ಉಪಬೃಂಹಣಗಳಿಂದ ವಿಶದೀಕರಿಸಲ್ಪಟ್ಟ ಅರ್ಥಗಳನ್ನುಳ್ಳಂಥ ಉಪನಿಷತ್ತುಗಳು, ಶ್ರಿಯಃಪತಿಯೂ ಸಮಸ್ತ ಕಲ್ಯಾಣ ಗುಣಗಣ ಸಹಿತನೂ ಆದ ನಾರಾಯಣನೇ ಪರದೇವತೆ, ಬೇರೆ ಯಾರೂ ಅಲ್ಲವೆಂದು ಉದ್ಘೋಷಿಸುತ್ತವೆ, ಎಂಬ ಈ ಅರ್ಥಗಳನ್ನು ತಿರುಮಂಗೈಯಾಳ್ವಾರವರು ಸರ್ವೇಶ್ವರನಿಂದ ಸಾಕ್ಷಾತ್ತಾಗಿ ಸಾರ್ಥವಾಗಿ ಉಪದೇಶ ಹೊಂದಿದ ಅಷ್ಟಾಕ್ಷರದಿಂದ ತಿಳಿದು ಕೊಂಡರು, ಎಂಬ ದು ಶ್ರೀ ದೇಶಿಕರ ಆಶಯ.

ಆಳ್ವಾರ್ ನಿರ್ಧರಿಸಿದ ಪರತತ್ವ:- ಇವರ್ (1) **ಪಾರುರುವಿಲ್** ಇತ್ಯಾದಿ ಪಾಶುರದಲ್ಲಿ **ಪರಿಶೇಷಕ್ರಮತ್ತಾಲೇ** ಆರಾಧ್ಯರಾದ ದೇವರುಗಳಲ್ಲಿ ಇಂದ್ರಾದಿ ದೇವತೆಗಳನ್ನು ಬಿಟ್ಟು, ಸೃಷ್ಟಿ ಸ್ಥಿತಿ ಸಂಹಾರ ಕರ್ತೃಗಳೆಂದು ವಿವಾದ ವಿಷಯ ಭೂತರಾದ ಬ್ರಹ್ಮ ವಿಷ್ಣು ರುದ್ರರನ್ನು ನಿಲ್ಲಿಸಿ, ಅವರ ಪೈಕಿ **ಪ್ರಮಾಣಾನುಗುಣವಾಗಿ ಇಬ್ಬರನ್ನು** ಪರದೇವತೆಯಲ್ಲವೆಂದು ಬಿಟ್ಟು **ಪರಿಶೇಷಿತ್ತ**-ಉಳಿದ, ಪರಂಜ್ಯೋತಿಸ್ಸಾದ ಒಬ್ಬನನ್ನು **"ಮುಹಿಲುರುವಮ್ ಎಮ್ಮಡಿಹಳುರುವಮ್"** 'ಮೇಘ ಶ್ಯಾಮಳವಾದ ರೂಪವೇ ನಮ್ಮ ಸ್ವಾಮಿಗಳ ರೂಪವೆಂದು ನಿಷ್ಕರ್ಷಿಸಿದರು. ಈ ಪಾಶುರದ ವಿವರವೇನೆಂದರೆ .- "ತ್ರೀಣಿಶತಾ ತ್ರೀಷಹಸ್ರಾಣ್ಯಗ್ನಿಂ ತ್ರಿಂಶಚ್ಚದೇವಾ ನವಚಾಸಪರ್ಯನ್"

---

(1) ಪಾರುರುವಿಲ್ ನೀರ್ಎರಿಕಾಲ್ ವಿಶುಂಬು ಮಾಹಿ ಪಲ್ವೇರು ಶಮಯುಮು ಮಾಯ್ ಪರಂದು ನಿನ್ರ
ಏರುರುವಿಲ್ ಮೂವರುಮೇ ಎನನಿನ್ರ ಇಮೈಯವರ್ ತಮ್ ತಿರುವುರುವೇರೆಣ್ಣುಂ ಪೋದು ।
ಓರುರುವಂ ಪೊನ್ನುರುವಂ ಒನ್ರು ಶೆಂದೀ ಒನ್ರು ಮಾಕಡಲುರುವ ಮೊತ್ತು ನಿನ್ರ
ಮೂವುರುವಂ ಕಂಡ ಪೋದೊನ್ರಾಂಶೋದಿ ಮುಹಿಲುರುವಮೆಮ್ಮಡಿಹಳು ರುವಂ ತಾನೇ ॥

ಅಂಡಾಕಾರವಾದ ಪದಾರ್ಥಗಳಲ್ಲಿ, ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಇವುಗಳಿಗೆ ತಾನೇ ಉಪಾದಾನ ಕಾರಣವಾಗಿ, ಅನೇಕ ವಿಧವಾದ ಭೇದಗಳನ್ನುಳ್ಳಂಥ (ದೇವತೆ, ಮನುಷ್ಯ, ಮೃಗಪಕ್ಷಿ, ಗಿಡಮರಗಳು, ಇತ್ಯಾದಿ ಅವವುಗಳಿಗೆ ವ್ಯವಸ್ಥಿತವಾದ ಆಹಾರ ವಿಹಾರಗಳು) ವ್ಯಷ್ಟಿ ಸೃಷ್ಟಿಗೆ ಕರ್ತಾವಾಗಿ, ಸರ್ವತ್ರ ಆತ್ಮಾವಾಗಿ ವ್ಯಾಪಿಸಿರುವ ಭಗವಂತನ ರೂಪಗಳಲ್ಲಿ ಪ್ರಧಾನರಾಗಿ ಪರದೇವತೆಗಳೆಂದು ಪರಿಗಣಿತರಾದವರು ಬ್ರಹ್ಮ, ವಿಷ್ಣು, ರುದ್ರರೆಂಬ ಮೂವರು ಇವರುಗಳು ಅನಿಮಿಷರು. ಅಂದರೆ ದೇವತೆಗಳಿಗೆ ಗುರುತು ರೆಪ್ಪೆ ಹೊಡೆಯದೆ ಇರುವುದು ಅದನ್ನುಳ್ಳವರು ಇವರು. - ಇವರುಗಳ ತಿರುವುರು-ಶ್ಲಾಘ್ಯವಾದ ಸ್ವಭಾವಗಳನ್ನು ಬೇರೆ ಬೇರೆಯಾಗಿ ಅನುಸಂಧಾನ ಮಾಡಿದರೆ, ಬ್ರಹ್ಮದೇವನ ಸ್ವಭಾವ ಚಿನ್ನದಂತೆ-ಅದಾಗಿ ಚಿನ್ನವು ಅನೇಕ ಆಭರಣಾದಿಗಳನ್ನು ಮಾಡಲು ಯೋಗ್ಯವಾದದ್ದು ಹಾಗೆ ಬ್ರಹ್ಮದೇವನು ಸಕಲ ಚೇತನಾ ಚೇತನ ಸೃಷ್ಟಿಯೋಗ್ಯನು, ರುದ್ರನು ಅಗ್ನಿಯ ಹಾಗೆ ಸರ್ವಸಂಹಾರ ಯೋಗ್ಯವಾದವನು ಮಹಾವಿಷ್ಣುವು ದೊಡ್ಡ ಸಮುದ್ರದ ಹಾಗೆ ಶ್ರಮಹರನು, ಮತ್ತು ಸರ್ವವನ್ನೂ ತನ್ನಲ್ಲಿ ಅಡಗಿಸಿಕೊಂಡು ರಕ್ಷಿಸುವ ಸ್ವಭಾವನು. ಹೀಗೆ ಮೂವರ ಸ್ವಭಾವವನ್ನೂ ಪ್ರಮಾಣಾನುಗುಣ ಪರಿಶೀಲಿಸಿ ನೋಡಿದರೆ, ಜ್ಯೋತಿ ಸ್ವರೂಪನಾದ, ನೀಲಮೇಘ ಶ್ಯಾಮಳ ರೂಪದಿಂದ ಕೂಡಿದವನೇ ನಮ್ಮ ಸ್ವಾಮಿಯು

ಸರ್ವವೇದಸಾರಭೂತ ಪ್ರಣವಪ್ರತಿಪಾದ್ಯನು

ಇನ್ದ ರೂಪವಿಶೇಷತ್ತೈ ಉಡೈಯ ಪರಮ ಪುರುಷನೇ ಸರ್ವವೇದ ಪ್ರತಿಪಾದ್ಯನಾನ ಪರತತ್ತ್ವಮೆನ್ನುಮ್ ಇಡತ್ತೈ ಸರ್ವವೇದ ಸಾರಭೂತ ಪ್ರಣವ ಪ್ರತಿಪಾದ್ಯತ್ತೈಯಾಲೆ (1) "ಮೂಲಮಾಹಿಯ ಒತ್ತೈಯೆಳುತ್ತೈ ಮೂನ್ರು ಮಾತ್ತಿರೈ ಯುಳ್ಳೆಳ ವಾಙ್ಗಿ ವೇಲೈ ವಣ್ಣನೈ ಮೇವುದಿರಾಹಿಲ್" ಎನ್ರುಪೆರಿಯಾಳ್ವಾರರುಳಿಚ್ಚೆಯ್ದಾರ್.

ಆದಾಗಿ ಅಗ್ನಿಗೆ ಸುತ್ತಲೂ ಮೂರು ಸಾವಿರದ ಮುನ್ನೂರ ಮೂವತ್ತೊಂಭತ್ತು (3039) ದೇವತೆಗಳನ್ನು ಆಶ್ರಯಣೀಯರೆಂದು ಹೇಳಿದೆ, ಅವುಗಳಲ್ಲಿ "ಕಾರಣಂತುಧ್ಯೇಯಃ" ಎಂದು ಜಗತ್ಕಾರಣ ವಸ್ತುವೇ ಆಶ್ರಯಣೀಯನೆಂದು ಉಪನಿಷತ್ತು ಹೇಳುತ್ತದೆ ಆದ್ದರಿಂದ ಸೃಷ್ಟಿ, ಸ್ಥಿತಿ ಸಂಹಾರ, ಕಾರಣರಾದ ಬ್ರಹ್ಮ, ವಿಷ್ಣು, ರುದ್ರರುಗಳು, ಪರಿಶೇಷ ಕ್ರಮದಲ್ಲಿ ಅಂದರೆ ಉಳಿದವರಾಗಿ ವಿವಾದ ವಿಷಯ ಗ್ರಸ್ತರಾಗಿದ್ದಾರೆ ಈ ಮೂವರಲ್ಲಿ **ಪ್ರಮಾಣಾನುಸಂಧಾನತ್ತಾಲೇ** – ಅಂದರೆ "ನಾರಾಯಣಾದ್ಬ್ರಹ್ಮಾಜಾಯತೇ", ನಾರಾಯಣಾದ್ರುದ್ರೋ ಜಾಯತೇ", "ಸಬ್ರಹ್ಮಾ ಸ ಶಿವಃ" ಇತ್ಯಾದಿ ಪ್ರಮಾಣಗಳನ್ನು ಪರಿಶೀಲನೆ ಮಾಡಿ ಶರೀರಾತ್ಮಭಾವ ಸಂಬಂಧ ನಿಬಂಧನವಾದ ಸಾಮಾನಾಧಿಕರಣ್ಯ ಪ್ರಯೋಗವನ್ನು ಪರಿಶೀಲಿಸಿ ನೋಡಿದರೆ ಬ್ರಹ್ಮರುದ್ರರನ್ನು ಕಳೆದು ಮಿಕ್ಕ(**ಒನ್ರಾಂಶೋದಿ**) ಪರಂಜ್ಯೋತಿ ಶಬ್ದವಾಚ್ಯನಾದ ನೀಲಮೇಘಶ್ಯಾಮಳವಾದ ಶರೀರದಿಂದ ಕೂಡಿದ ನಾರಾಯಣನೇ, ಜಗತ್ಕಾರಣ ವಸ್ತುವೆಂದು ನಿಷ್ಕರ್ಷಿಸಿರುತ್ತಾರೆ

ಸರ್ವವೇದ ಸಾರಭೂತ ಪ್ರಣವ ಪ್ರತಿ ಪಾದ್ಯತೆ.

ನೀಲ ಮೇಘ ಶ್ಯಾಮಳವಾದ ರೂಪ (ಶರೀರ)ವನ್ನುಳ್ಳವನು ಪರದೇವತೆ ಎಂದು ಹೇಗೆ ಹೇಳಬಹುದು, ಅದು ವೇದ ಪ್ರತಿಪಾದ್ಯವೇ ಎಂಬ ಶಂಕೆಗೆ ಸಮಾಧಾನವಾಗಿ"**ಇಂದ ರೂಪ ವಿಶೇಷತ್ತೈಯುಡೈಯ ಪರಮ ಪುರುಷನೇ**" ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ ಅದಾಗಿ ಈ ಶ್ಯಾಮಳವಾದ ರೂಪ ವಿಶೇಷದಿಂದ ಕೂಡಿದ ಪರಮಪುರುಷನೇ ಸರ್ವವೇದ ಪ್ರತಿಪಾದ್ಯವಾದ ಪರತತ್ತ್ವ ಇದನ್ನು ಸರ್ವವೇದಸಾರ ಭೂತವಾದ ಪ್ರಣವವು ಪ್ರತಿಪಾದಿಸುತ್ತದೆ ಯಾದ್ದರಿಂದ ಸರ್ವವೇದಗಳೂ ಈ ಪರಮ ಪುರುಷನನ್ನೇ ಪ್ರತಿಪಾದಿಸುತ್ತವೆ ಎಂದು ಸಿದ್ಧಿಸುತ್ತದೆಯಲ್ಲವೇ ಪ್ರಣವವು ಎಲ್ಲಿ ಪ್ರತಿಪಾದಿಸಿದೆ ಎಂಬುದನ್ನು "1) **ಮೂಲಮಾಹಿಯ ಒತ್ತೈಎಳುತ್ತೈ** ಎಂದಾರಂಭಿಸಿ ತಿಳಿಸುತ್ತಾರೆ. ಅದಾಗಿ **ಮೂಲಮಾಹಿಯ** ಸಕಲವೇದಗಳಿಗೂ ಮೂಲವಾದ, **ಒಟ್ರೆಳುತ್ತೈನ್ನೈ** – "ಗಿರಾಮಸ್ಮ್ಯೇಕಮಕ್ಷರಂ" ಎಂಬ ಪ್ರಣವವನ್ನು. **ಮೂನ್ರು ಮಾತ್ತಿರೈ ಉಳ್ಳೆಳವಾಂಗಿ**"–ಯಃ ಪುನರೇತಂ ತ್ರಿಮಾತ್ರೇಣೋಮಿ ತ್ಯೇತೇನೈವಾಕ್ಷರೇಣಪರಂ ಪುರುಷಮಭಿಧ್ಯಾಯೀತ" ಎಂಬ ಶ್ರುತ್ಯುಕ್ತ ಪ್ರಕಾರವಾಗಿ, ಓಂ ಎಂಬ ತ್ರಿಮಾತ್ರ ಪ್ರಣವವನ್ನು ಉಪಾಂಶುವಾಗಿ ಉಚ್ಚರಿಸಿಕೊಂಡು, ಹೃದಯಕಮಲದಲ್ಲಿ ಆ ತ್ರಿಮಾತ್ರ ಪ್ರಣವ ಪ್ರತಿ ಪಾದ್ಯವಾದ **ವೇಲೈವಣ್ಣನೈ**–ಸಮುದ್ರದ ಹಾಗೆ ನೀಲವಾದ–ಅಂದರೆ ಶ್ಯಾಮಳ ರೂಪದಿಂದ ಕೂಡಿದ ಭಗವಂತನನ್ನು **ಮೇವುದಿರಾಹಿಲ್**–ಆದರ ಪೂರ್ವಕ ಧ್ಯಾನ ಮಾಡಿದರೆ, ಅವನನ್ನು **ವಿಣ್ಣಹತ್ತಿನಿಲ್ ಮೇವಲುಮಾಮೇ** ಎಂಬುದು **ಉತ್ತರಾರ್ಧ**–ಶ್ರೀ ವೈಕುಂಠದಲ್ಲಿ ಪಡೆಯಬಹುದು ಎಂದು ಪೆರಿಯಾಳ್ವಾರ್ **ಅವರು** ಅನುಗ್ರಹಿಸಿರುತ್ತಾರೆ "ಯಃ ಪುನರೇತಂ"ಇತ್ಯಾದಿ ಶ್ರುತಿ ವಾಕ್ಯಕ್ಕೆ "ಮೂಲ

---

1) ಮೇಲೆಳುನ್ದದೋರ್ ಪಾಯುಂಕ್ಕೈಳನ್ದು ಮೇಲ್ ಮಿಡಟ್ರಿನೈ ಉಳ್ಳೆಳವಾಂಗಿ
ಕಾಲುಂಕೈಯುಂವಿದಿರ್ ವಿದಿರ್ತ್ತೇರಿ ಕಣ್ಣುರಕ್ಕ ಮದಾಪದನ್ ಮುನ್ನಂ ।
ಮೂಲಮಾಹಿಯ ಒತ್ತೈ ಎಳುತ್ತೈ ಮೂನ್ರು ಮಾತ್ತಿರೈ ಉಳ್ಳೆಳವಾಂಗಿ
ವೇಲೈವಣ್ಣನೈ ಮೇವುದಿರಾಹಿಲ್ ವಿಣ್ಣಹತ್ತಿನಿಲ್ ಮೇವಲು ಮಾಮೇ ॥ ಪೆರಿಯಾಳ್ವಾರ್– ತಿರು (4-5-4

ಪ್ರಾಣಾಪದ್ದಶೆಯಲ್ಲಿ ಕೈಕಾಲುಗಳನ್ನು ಒದ್ದು ಕೊಂಡು ಕಣ್ಣುಮುಚ್ಚಿ ಕೊಳ್ಳುವುದರೊಳಗೆ, ಅಂದರೆ ಜೀವನ ಪ್ರಾಣವು ಹಾರಿ ಹೋಗುವುದಕ್ಕೆ ಮುಂಚೆ, ವೇದಗಳಿಗೆ ಮೂಲ ಭೂತವಾದ ಏಕಾಕ್ಷರವಾದ ಪ್ರಣವವನ್ನು ಮೂರು ಮಾತ್ರೆಯಾಗಿ ಉಪಾಂಶು ಸ್ವರದಲ್ಲಿ ಉಚ್ಚರಿಸಿ, ಆ ಪ್ರಣವ ಪ್ರತಿಪಾದ್ಯನಾದ ಸಮುದ್ರದ ಹಾಗೆ ನೀಲವಾದ ಅಂದರೆ ಶ್ಯಾಮಳವಾದ ಪರಮ ಪುರುಷನನ್ನು

ದಿವ್ಯದಂಪತಿಹಳೇ ಪ್ರಾಪ್ಯರುಮ್ ಶರಣ್ಯರುಮ್

ತೈತ್ತಿರೀಯತ್ತಿಲ್ ಶ್ರಿಯಃ ಪತಿತ್ವ ಚಿಹ್ನತ್ತಾಲೇ ಮಹಾಪುರುಷನುಕ್ಕು ವ್ಯಾವೃತ್ತಯೋದಿನ ಪಡಿಯೈ ನಿನೈತ್ತು (೧) "ತಿರುಕ್ಕಣ್ಡೇನ್ಪೊನ್ ಮೇನಿ ಕಣ್ಡೇನ್" ಎನ್ರುಪಕ್ರಮಿತ್ತು (೨."ಶಾರ್ವುನಮಕ್ಕು" ಎನ್ನಿರಪಾಟ್ಟಿಲೇ ಪ್ರತಿಬುದ್ಧರಾನ ನಮಕ್ಕುಪ್ಪೆರಿಯ ಪಿರಾಟ್ಟಿ ಯಾರುಡನೇ ಇರುಂದೆನ್ರುಮೊಕ್ಕಪ್ಪೆರಿಮಾರು ಹಿರ ನಿವನ್ನೈ ಯೊಳ್ಳಿಯ ಪ್ರಾಪ್ಯಾನ್ತರಮುಮ್ ಶರಣ್ಯಾನ್ತರ ಮುಮಿಲ್ಲೈ, ಇದ್ದಮ್ಪತಿಹಳೇ ಪ್ರಾಪ್ಯರುಮ್ ಶರಣ್ಯರುಮೆನ್ರು ನಿಗಮಿಕ್ಕಪ್ಪಟ್ಟದು.

ಮಾಹಿಯ" ಇತ್ಯಾದಿ ಆಳ್ವಾರ್ ಸೂಕ್ತಿಯೂ ಉಪಬೃಂಹಣ- ಆ ಶ್ರುತ್ಯರ್ಥವನ್ನು ವಿವರಿಸಿದೆ ಎಂದರ್ಥ ನೀಲ ಮೇಘ ಶ್ಯಾಮಳ ರೂಪನೂ, ಸಮುದ್ರದಂತೆ ಶ್ಯಾಮಳ ರೂಪನೂ ಒಬ್ಬನೇ ಎಂಬುದು ನಿರ್ವಿವಾದ. ಇದರಿಂದ **ಪಾರುರುವಿಲ್"** ಎಂಬ ಪಾಶುರದಲ್ಲಿ ಬ್ರಹ್ಮ ರುದ್ರಾದಿಸಕಲ ದೇವತೆಗಳನ್ನೂ ಕಳೆದು ನೀಲಮೇಘ ಶ್ಯಾಮಳ ರೂಪನೇ ಪರದೇವತೆ ಎಂದು ಸಿದ್ಧಿಕರಿಸಲ್ಪಟ್ಟಿತು.

ದಿವ್ಯ ದಂಪತಿಗಳೇ ಪ್ರಾಪ್ಯರೂ ಶರಣ್ಯರೂ

ಈ ಶ್ಯಾಮಳರೂಪನಾದ ಪರದೇವತೆಯು ಶ್ರಿಯಃ ಪತಿ **"ಪರಂ ಪುರುಷಮಭಿಧ್ಯಾಯೀತ** ಎಂಬ ಶ್ರುತಿಯಲ್ಲಿ ಹೇಳಿದ **"ಪುರುಷ"** ಶಬ್ದವಾಚ್ಯನು **"ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ** ಎಂಬ ಶ್ರುತಿಯು **ಈ ಪುರುಷ** ಶಬ್ದವಾಚ್ಯನೇ ಲಕ್ಷ್ಮೀಪತಿಯು ಎಂದು ಉತ್ತರನಾರಾಯಣಾನುವಾಕದಲ್ಲಿ ಹೇಳಿ ದೇವತಾಂತರ ವ್ಯಾವೃತ್ತಿಯನ್ನು ಮಾಡುತ್ತದೆಯಾದ್ದರಿಂದ ಪುರುಷ ಶಬ್ದವಾಚ್ಯನೂ, ನಾರಾಯಣ ಶಬ್ದವಾಚ್ಯನೂ ಲಕ್ಷ್ಮೀಪತಿ ಎಂಬುದು ಶ್ರುತಿಸಿದ್ಧ. ಇದನ್ನು ಆಚಾರ್ಯ ಸಾರ್ವಭೌಮರು **ತೈತ್ತಿರೀಯತ್ತಿಲ್** ಎಂದಾರಂಭಿಸಿ ತಿಳಿಸುತ್ತಾರೆ. ಅದಾಗಿ ತೈತ್ತಿರೀಯಾರಣ್ಯಕದಲ್ಲಿ "ಚಿತ್ತಿಸ್ಸ್ರುಕ್" ಎಂದಾರಂಭಿಸುವ ಮೂರನೇ ಪ್ರಶ್ನದಲ್ಲಿ ಪುರುಷ ಸೂಕ್ತವು ಪರಿ ವಾಗಿದೆ. **ಅಲ್ಲಿ "ವೇದಾಹಮೇತಂ** ಪುರುಷಂ ಮಹಾಂತಂ" ಎಂದು "ಮಹಾಪುರುಷ" ನನ್ನು ನಿರ್ದೇಶಿಸಿ, ಆ ಮಹಾಪುರುಷನು ಯಾರೆಂದರೆ "ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ" ಎಂದು ಶ್ರೀ ಭೂಮಿಗಳು ಅವನ ಪತ್ನಿಯರು ಎಂದು ನಿರ್ದೇಶಿಸಿರುವುದರಿಂದ, ದೇವತಾಂತರಗಳೋ ಎಂದು ಭ್ರಮಿಸದೇ ಇರುವಂತೆ, ಅವರುಗಳಿಗಿಂತ ಬೇರೆಯಾದ **(ವ್ಯಾವೃತ್ತಿ)** ಲಕ್ಷ್ಮೀಪತಿ ಎಂದು ತಿಳಿಸುತ್ತದೆ **ಹೀಗೆ** ತೈತ್ತಿರೀಯದಲ್ಲಿ ಶ್ರಿಯಃ ಪ್ರತಿತ್ವ ಚಿಹ್ನದಿಂದ, ಮಹಾಪುರುಷನಿಗೆ ದೇವತಾಂತರ ವ್ಯಾವೃತ್ತಿಯನ್ನು ಹೇಳಿರುವುದನ್ನು ನೆನೆದು ಕೊಂಡು 1) **ತಿರುಕ್ಕಂಡೇನ್ ಪೊನ್ ಮೇನಿ ಕಂಡೇನ್,** ಎಂದಾರಂಭಿಸಿ

ಹೃದಯ ಕಮಲದಲ್ಲಿ ಧ್ಯಾನ ಮಾಡಿದರೆ, ಶ್ರೀ ವೈಕುಂಠದಲ್ಲಿ ಅವನನ್ನು ಹೊಂದಬಹುದು, ಅಂದರೆ ಪರಮ ಪದ ಪ್ರಾಪ್ತಿಯುಂಟಾಗುತ್ತದೆ ಪ್ರಣವಕರಣಕ, ಉಪಾಸನೆ ಅಥವಾ ಪ್ರಪತ್ತಿಯು ಮೋಕ್ಷದಾಯಕವೆಂದು ತಾತ್ಪರ್ಯ

1) ತಿರುಕ್ಕಂಡೇನ್ ಪೊನ್ ಮೇನಿ ಕಂಡೇನ್, ತಿಹಳ್ಳುಮ್
ಅರುಕ್ಕನಣಿ ನಿರಮುಮ್ ಕಂಡೇನ್- ಶೆರುಕ್ಕಿಳರುಂ
ಪೊನ್ನಾಳಿ ಕಂಡೇನ್ ಪುರಿಶಂಗಂಕೈಕ್ಕಂಡೇನ್
ಎನ್ನಾಳಿ ವಣ್ಣನ್ ಪಾಲಿನ್ರು, (ಮೂನ್ರಾಂ ತಿರುವಂದಾದಿ-1)

ಈಗ, ಸಮುದ್ರದ ಹಾಗೆ ನೀಲ ಶ್ಯಾಮಳ ರೂಪವಾದ ಭಗವಂತನ ಎದೆಯಲ್ಲಿ ಮಹಾಲಕ್ಷ್ಮಿಯನ್ನು ಸೇವಿಸಿಕೊಂಡೆ ಚಿನ್ನದ ಹಾಗೆ ಸ್ಪೃಹಣೀಯವಾದ ದಿವ್ಯಮಂಗಳ ವಿಗ್ರಹವನ್ನು ಕಂಡೆ ಪ್ರಕಾಶಿಸುವ ಸೂರ್ಯನ ಜ್ಯೋತಿಸ್ಸಿನ ಹಾಗೆ ಜ್ಯೋತೀರೂಪವನ್ನು ಕಂಡೆ. ದುಷ್ಟ ನಿಗ್ರಹಕ್ಕೆ ಎದ್ದು ಬರುವಂತಿರುವ ಚಿನ್ನದ ಹಾಗೆ ಸ್ಪೃಹಣೀಯ ಕಾಂತಿಯುಕ್ತವಾದ ಚಕ್ರವನ್ನೂ, ತ್ರಿರೇಖೆಗಳಿಂದ ಕೂಡಿದ ಶಂಖವನ್ನೂ ಅಂಗೈಗಳಲ್ಲಿ ಕಂಡೆ- (2) ಪು ತಿ. ನೋ

ಶ್ರಿಯಃಪತಿರೇವ ಪರತತ್ವಮ್.

ಇವ್ವರ್ಥತ್ತೈ (a) "ದೇವತಾಪಾರಮಾರ್ಥ್ಯಂಚ ಯಥಾವದ್ವೇತ್ಸ್ಯತೇ ಭವ ನ್", (b) ಪುಲಸ್ತ್ಯೇನ

ಆಕಾರಿಣಸ್ತು ವಿಜ್ಞಾನಂ ಆಕಾರಜ್ಞಾನಪೂರ್ವಕಮ್ ।
ಕೇನಾಕಾರಂ ಶ್ರಿಯಂ ಜ್ಞಾತ್ವಾ ಸ್ಮರ್ತವ್ಯೋ ಭಗವಾನ್ ಹರಿಃ ॥

ಎಂಬಂತೆ ಸ್ವರೂಪ ನಿರೂಪಕ ಧರ್ಮಗಳಲ್ಲಿ ಪ್ರಧಾನೆಯಾದ **ಲಕ್ಷ್ಮಿಯನ್ನು** ಪ್ರತ್ಯಕ್ಷವಾಗಿ ನೋಡಿ ಅನಂತರ ಲಕ್ಷ್ಮೀ (ಆಕಾರ) ವಿಶಿಷ್ಟನಾದ (ಆಕಾರಿ) ಭಗವಂತನನ್ನು ತಿಳಿದುಕೊಂಡು ಅವನ ಸ್ವರೂಪಾದಿಗಳನ್ನು ವಿಸ್ತಾರವಾಗಿ ನಿರೂಪಿಸಿ ಉಪಸಂಹಾರದಲ್ಲಿ, 2 **ಶಾರ್ಙ್ಗನಮಕ್ಕೆನ್ರುಂ ಶಕ್ಕರತ್ತಾನ್...ಪೂಮೇಲ್ ತಿರು**, ಎಂಬ ಪಾಶುರದಲ್ಲಿ ಆ ದಿವ್ಯ ದಂಪತಿಗಳೇ ನಮಗೆ ಪ್ರಾಪ್ಯರೂ ಶರಣ್ಯರೂ ಎಂದು ನಿಗಮಿಸಿರುತ್ತಾರೆ ಪ್ರಾಪ್ಯ ಪ್ರಾಪಕತ್ವವು ಉಭಯ ನಿಷ್ಠ ಅಂದರೆ ಇಬ್ಬರಿಗೂ ಸಮ ಪ್ರಧಾನತೆ, ಇದನ್ನು ಆಚಾರ್ಯರು ಶರಣಾಗತಿ ದೀಪಿಕೆಯಲ್ಲಿ "ದೀಪಸ್ತ್ವಮೇವ ಜಗತಾಂ ದಯಿತಾರುಚಿಸ್ತೇ ದೀರ್ಘಂತಮಃ ಪ್ರತಿನಿವರ್ತ್ಯಮಿದಂ ಯುವಾಭ್ಯಾಮ್" ಜಗತ್ತಿಗೆ ಭಗವಂತನು ದೀಪ, ಲಕ್ಷ್ಮಿಯು ಅದರ ಕಾಂತಿ, ಕತ್ತಲೆಯು ಕಾಂತಿಯಿಂದ ಕೂಡಿದ ದೀಪದಿಂದ ನೀಗುವಂತೆ ಸಂಸಾರವೆಂಬ ದೀರ್ಘವಾದ ಕತ್ತಲೆಯು ಲಕ್ಷ್ಮೀನಾರಾಯಣರಿಬ್ಬರಿಂದಲೂ ಹೋಗಲಾಡಿಸಲ್ಪಡುತ್ತದೆ. ಇಬ್ಬರೂ ಪ್ರಾಪಕರು, ಮತ್ತು ಪ್ರಾಪ್ಯರೂ ಎಂದರ್ಥ **'ಶಾರ್ಙ್ಗನಮಕ್ಕು'** ಎಂಬ ಪಾಶುರದಲ್ಲಿ ಪ್ರತಿಬುದ್ಧರಾದ ನಮಗೆ, **"ಪೇಯ ಪಿರಾಟ್ಟಿ"** ಎಂದು ವ್ಯಪದೇಶಿಸಲ್ಪಡುವ ಮಹಾಲಕ್ಷ್ಮಿಯೊಡಗೂಡಿ, ಯಾವಾಗಲೂ ಇಬ್ಬರೂ ಕೂಡಿಯೇ (**ಒಕ್ಕ**) ಅನುಗ್ರಹಿಸುವ, ಈ ದಿವ್ಯ ದಂಪತಿಗಳನ್ನು ಬಿಟ್ಟರೆ ಬೇರೆ ಪ್ರಾಪ್ಯರೂ ಶರಣ್ಯರೂ-ರಕ್ಷಕರೂ ಇಲ್ಲ ಈ ದಂಪತಿಗಳೇ ಪ್ರಾಪ್ಯರೂ (ಉಪೇಯ) ಶರಣ್ಯರೂ (ಉಪಾಯ) ಎಂದು ಪೇಯಾಳ್ವಾರ್ ನಿಗಮಿಸಿದ್ದಾರೆ **ಪ್ರತಿಬುದ್ಧರಾನಮಕ್ಕು**, ಎಂದು ಪ್ರತಿಬುದ್ಧತ್ವ ವಿಶೇಷಣವು ಈ ಜ್ಞಾನವನ್ನುಳ್ಳವನನ್ನು ತಿಳಿಸುತ್ತದೆ

ಇದರಿಂದ ಪೆರಿಯಾಳ್ವಾರ್ರವರೂ, ತಿರುಮಂಗೈಯಾಳ್ವಾರ್ರವರೂ ಶ್ಯಾಮಳವಾದ ರೂಪದಿಂದ ಕೂಡಿದವನು ಪರದೇವತೆ ಎಂದು ನಿಷ್ಕರ್ಷಿಸಿರುವ ಹಾಗೆ, ಪೇಯಾಳ್ವಾರ್ರವರು ಈ ಶ್ಯಾಮಳ ರೂಪನೇ ಶ್ರಿಯಃ ಪತಿಯಾದ ಪರತತ್ವವೆಂದು ನಿಷ್ಕರ್ಷಿಸಿರುತ್ತಾರಾದ್ದರಿಂದ ಪುರುಷ ಸೂಕ್ತ ಪ್ರತಿಪಾದ್ಯ ಮಹಾಪುರುಷನೇ ನೀಲಮೇಘ ಶ್ಯಾಮಳ ರೂಪವಾದ ವಿಗ್ರಹ ವಿಶಿಷ್ಟನೂ ಲಕ್ಷ್ಮೀಪತಿಯೂ ಎಂದು ತೀರ್ಮಾನಿಸಲ್ಪಟ್ಟಿದೆ. "ಸಹಸ್ರಶೀರ್ಷಂ ದೇವಂ" ಎಂಬ ಅನುವಾಕದಲ್ಲಿ "ವಿಶ್ವಂ ನಾರಾಯಣಂ ದೇವಂ" ಎಂದು ಹೇಳಲ್ಪಟ್ಟ ನಾರಾಯಣನೇ "ವಿಶ್ವಮೇವೇದಂ ಪುರುಷಃ" ಪುರುಷ ಶಬ್ದವಾಚ್ಯನು ಎಂದು ಹೇಳಿರುವುದರಿಂದ, "ನಾರಾಯಣನೇ ಶ್ರಿಯಃ ಪತಿ" ಎಂಬ ಅರ್ಥವು ಪ್ರತಿಪಾದ್ಯವಾಗುತ್ತದೆ ಯಾದ್ದರಿಂದ "**ಶ್ರೀಮನ್ನಾರಾಯಣನೇ**" ಪರದೇವತೆಯೆಂಬುದು ಪುರುಷ ಸೂಕ್ತಪ್ರತಿಪಾದ್ಯ ಪುರುಷ ಶಬ್ದವಾಚ್ಯನೆಂದು ನಿಷ್ಕರ್ಷಿಸಲ್ಪಡುತ್ತದೆ. ಆಳ್ವಾರು ಸಾಕ್ಷಾತ್ಕರಿಸಿದ ಪರದೇವತೆಯೂ ಇವನೇ

ಶ್ರಿಯಃಪತಿಯೇ ಪರದೇವತೆ –

ಇವ್ವರ್ಥತ್ತೈ ಇತ್ಯಾದಿ – ಈ ದಿವ್ಯ ದಂಪತಿಗಳೇ ಪ್ರಾಪ್ಯರೂ ಶರಣ್ಯರೂ ಎಂಬ ಈ ಅರ್ಥವನ್ನು a)"ದೇವತಾ

---

1) ಶಾರ್ಙ್ಗ ನಮಕ್ಕೆನ್ರುಂ ಶಕ್ಕರತ್ತಾನ್, ತಣ್ತುಳಾಯ್
ತಾರ್ವಾಳ್ವರೈ ಮಾರ್ಬನ್ತಾನ್ ಮುಯಂಗುಮ್-ಕಾರಾರ್ನ್ದ
ವಾನಮರುಮಿನ್ನಿಮೈಕ್ಕುಮ್ ವಣ್ ತಾಮರೈ ನೆಡುಂಗಣ್
ತೇನಮರುಂ ಪೂಮೇಲ್ ತಿರು.

ನಮಗೆ ಇಹದಲ್ಲಿಯೂ ಪರದಲ್ಲಿಯೂ ಚಕ್ರಪಾಣಿಯೂ, ಶೀತಳವಾದ ತುಳಸೀಮಾಲೆಯನ್ನು ಎದೆಯಲ್ಲಿ ಧರಿಸಿರುವವನೂ, ಕಪ್ಪಾದ ಮೇಘಗಳ ಮಧ್ಯೆ ಪ್ರಕಾಶಿಸುವ ಹಾಗೆ, ತನ್ನ ನೀಲಮೇಘ ಶ್ಯಾಮಳವಾದ ದಿವ್ಯ ಮಂಗಳ ವಿಗ್ರಹದಲ್ಲಿ ಪ್ರಕಾಶಿಸುವ ಪಂಕಜ ವಾಸಿನಿಯಾದ ಮಹಾಲಕ್ಷ್ಮಿಯೊಡಗೂಡಿರುವ, ಪುಂಡರೀಕಾಕ್ಷನೇ ನಮಗೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಗತಿ-ಪ್ರಾಪ್ಯರೂ ಪ್ರಾಪಕರೂ ಆದಿವ್ಯ ದಂಪತಿಗಳೇ ಎಂದರ್ಥ (ಪ್ರಾಪ್ಯ – ಹೊಂದಲ್ಪಡುವವರು ಪ್ರಾಪಕ – ಹೊಂದಿಸುವವರು) a), b), c), ಪುಟ ತಿರುಗಿ ನೋಡಿ

ಯದುಕ್ತಂ ತ್ವತ್ತೇ ಸರ್ವಂ ಭವಿತ ದ್ಭವಿಷ್ಯತಿ” ಎನ್ರು ಪುಲಸ್ತ್ಯ ವಸಿಷ್ಠ ವರಪ್ರಸಾದತ್ತಾಲೇ ಪರದೇವತಾ ಪಾರಮಾರ್ಥ್ಯ ಜ್ಞಾನ ಮುಡೈಯನಾಯ್. ಪೆರಿಯ ಮುದಲಿಯಾರ್ c) “ತಸ್ಮೈ ನಮೋ ಮುನಿವರಾಯ ಪರಾಶರಾಯ” ಎನ್ರ್ರದರಿಕ್ಕುಮ್ಪಡಿಯಾನ ಶ್ರೀ ಪರಾಶರ ಬ್ರಹ್ಮರ್ಷಿ ಪರಕ್ಕಪ್ಪೇಶಿ, d)“ದೇವತಿರ್ಯಙ್ಮನುಷ್ಯೇಷುಪುನ್ನಾಮಾ ಭಗವಾನ್ ಹರಿಃ । ಸ್ತ್ರೀ ನಾಮ್ನೀ ಲಕ್ಷ್ಮೀರ್ಮೈತ್ರೇಯ ನಾನಯೋರ್ವಿದ್ಯತೇ ಪರಂ ॥” ಎನ್ರು ಪರಮರಹಸ್ಯಯೋಗ್ಯನಾನ ಶಿಷ್ಯನುಕ್ಕು ಪದೇಶಿತ್ತಾರ್.

ಪಾರಮಾರ್ಥ್ಯವನ್ನು ಯಥಾವತ್ತಾಗಿ ನೀನು ತಿಳಿಯುವವನಾಗುತ್ತೀಯೆ” ಎಂದು ಪುಲಸ್ತ್ಯರವರ ಪ್ರಸಾದವನ್ನೂ, “ಪುಲಸ್ತ್ಯರು ಹೇಳಿದುದು ಹಾಗೆಯೇ ಫಲಿಸಲಿ” ಎಂದು ವಸಿಷ್ಠರ ಪ್ರಸಾದವನ್ನೂ ಪಡೆದ ಪರಾಶರ ಬ್ರಹ್ಮರ್ಷಿಯು ಪರದೇವತಾ ಜ್ಞಾನವನ್ನು ಪಡೆದವರು ಯಾಮುನಾಚಾರ್ಯರೂ, “ತಸ್ಮೈನಮೋ ಮುನಿವರಾಯ ಪರಾಶರಾಯ” ಎಂದು ಇತ್ಯಾದರದಿಂದ, ಪರಾಶರ ಬ್ರಹ್ಮರ್ಷಿಯನ್ನು ಸ್ತೋತ್ರಮಾಡಿರತ್ತಾರೆ ಆದ್ದರಿಂದ, ಈ ಋಷಿಗಳ ವಚನ ಬಹಳ ಪ್ರಾಮಾಣಿಕ ಪರಾಶರರು ವಿಷ್ಣು ಪುರಾಣದಲ್ಲಿ ಪರದೇವತೆ ಯಾರು ಎಂಬುದನ್ನು **ಪರಕ್ಕಪ್ಪೇಶಿ–ವಿಸ್ತಾರವಾಗಿ** ನಿರೂಪಿಸಿರತ್ತಾರೆ **“ನಿತ್ಯೈವೇಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ”** (ವಿ.ಪು. 1-8–17) ಎಂದು ಪ್ರಾಪ್ಯ ಪ್ರಾಪಕ ದಶೆಗಳಲ್ಲಿ ಮಹಾಲಕ್ಷ್ಮಿಗೂ ಮಹಾವಿಷ್ಣುವಿಗೂ ಅನಪಾಯಿತ್ವ–ಪರಸ್ಪರ ಅಗಲದೆ ಇರುವಿಕೆಯನ್ನು ಹೇಳಿ **“ಯಥಾ ಸರ್ವಗತೋ ವಿಷ್ಣುಃ ತಥೈವೇಯಂ ದ್ವಿಜೋತ್ತಮ”** ಇತ್ಯಾದಿಯಾಗಿ ಇಬ್ಬರಿಗೂ ವಿಭುತ್ವವೇ ಮೊದಲಾದ ಸಮಾನಧರ್ಮತ್ವವನ್ನು ಉಪಪಾದನ ಮಾಡಿ, (d, **“ದೇವತಿರ್ಯಙ್ ಮನುಷ್ಯೇಷು”**(ವಿ. ಪು.1 8-35)ಎಂದಾರಂಭಿಸಿ, ಪ್ರಪಂಚದಲ್ಲಿ ದೇವ ವರ್ಗ ಮನುಷ್ಯ ವರ್ಗ ಪ್ರಾಣಿವರ್ಗಗಳಲ್ಲಿ, ಪುರುಷರೆಲ್ಲರೂ ವಿಷ್ಣುವಿನ ವಿಭೂತಿಯೆಂದೂ ಸ್ತ್ರೀಯರೆಲ್ಲರೂ ಲಕ್ಷ್ಮಿಯ ವಿಭೂತಿಯೆಂದೂ ಇವರನ್ನು ಬಿಟ್ಟು ಬೇರೆ ಯಾರಿಗೂ ಯಾವುದೂ ವಿಭೂತಿ – ಐಶ್ವರ್ಯವಲ್ಲವೆಂದು ಇವರಿಬ್ಬರೇ ಸರ್ವ ವಿಭೂತಿ ನಾಯಕರೆಂದೂ ಹೇಳಿರುವುದರಿಂದ ಇವರಿಬ್ಬರೇ ಎಲ್ಲರಿಗಿಂತಲೂ ಮೇಲಾದ ಪರದೇವತೆಗಳು, ಪ್ರಾಪ್ಯರೂ ಶರಣ್ಯರೂ, ಸಹ ಎಂಬ ಪರಮರಹಸ್ಯಾರ್ಥವನ್ನು ಸಚ್ಛಿಷ್ಯರಾದ ಮೈತ್ರೇಯರಿಗೆ ಉಪದೇಶಿಸಿರುತ್ತಾರೆ **ದೇವತಿರ್ಯಙ್ಮನುಷ್ಯೇಷು** ಎಂಬ ಶ್ಲೋಕದ **ತಾತ್ಪರ್ಯವೇನೆಂದರ** ಚೇತನಾಚೇತನಾತ್ಮಕವಾದ ಪ್ರಪಂಚವು ಇಬ್ಬರಿಗೂ ಸೇರಿದ್ದುದು ಆದರೂ ಸ್ವೇಚ್ಛೆಯಿಂದ ಪುರುಷ ವರ್ಗವನ್ನು ಭಗವಂತನು ತನ್ನ ವಿಭೂತಿಯನ್ನಾಗಿಯೂ, ಸ್ತ್ರೀವರ್ಗವನ್ನು ಲಕ್ಷ್ಮಿಯು ತನ್ನ ವಿಭೂತಿಯನ್ನಾಗಿಯೂ ಭಾಗಮಾಡಿಕೊಂಡಿದ್ದಾರ ಈ ಅರ್ಥವನ್ನು ಶ್ರೀಮತ್ಸಂಕಲ್ಪ ಸೂರ್ಯೋದಯದಲ್ಲಿ, ಆಚಾರ್ಯರು

“ಸಾಧಾರಣ್ಯೇ ಸತ್ಯಪಿಸ್ವೇಚ್ಛಯೈವ
ದ್ವೇಧಾಪಿಶ್ವಂ ಯದ್ವಿಭೂತಿರ್ವಿಭಾತಿ ।
ಚೂಡಾಭಾಗೇ ದೀವ್ಯಮಾನೌ ಶ್ರುತೀನಾಂ
ದಿವ್ಯಾವೇತೌ ದಂಪತೀ ಮೋದಯೇತಾಮ್ ॥ ಎಂದು **ಸ್ಪಷ್ಟೀಕರಿಸಿದ್ದಾರೆ**

---

a, b) ಪರಾಶರರು ತನ್ನ ತಂದೆಯಾದ ಶಕ್ತಿಯನ್ನು ಒಬ್ಬ ರಾಕ್ಷಸನು ತಿಂದನೆಂದು ವಸಿಷ್ಠರ ಮೂಲಕ ತಿಳಿದುಕೊಂಡು ಕೋಪದಿಂದ ಕೂಡಿದವರಾಗಿ, ರಾಕ್ಷಸ ವಂಶವನ್ನೇ ನಾಶಮಾಡಲು ಒಂದು ಯಾಗವನ್ನು ಆರಂಭಿಸಿದರು ಆಗ ವಸಿಷ್ಠರು ಓಡಿಬಂದು “ಅಪ್ಪಾ ಒಬ್ಬ ರಾಕ್ಷಸನು ಮಾಡಿದ ತಪ್ಪಿಗೋಸ್ಕರ ರಾಕ್ಷಸ ವಂಶವನ್ನೇ ನಾಶಮಾಡುವುದು ನಿನ್ನ ಸ್ವರೂಪಕ್ಕೆ ತಕ್ಕದುದಲ್ಲ” ಎಂದು ಹೇಳಲು ಪರಾಶರರು ಒಡನೇ ಆ ಯಾಗವನ್ನು ನಿಲ್ಲಿಸಿ ಬಿಟ್ಟರು, ಇದನ್ನು ತಿಳಿದು, ರಾಕ್ಷಸ ವಂಶ ಮೂಲ ಪುರುಷರಾದ ಪುಲಸ್ತ್ಯ ಮಹರ್ಷಿಯು ಸಂತೋಷಗೊಂಡು, ಪರಾಶರರಲ್ಲಿಗೆ ಬಂದು, ‘ಪುರಾಣ ಸಂಹಿತಾ ಕರ್ತಾ ಭವಾನ್ ವತ್ಸ ಭವಿಷ್ಯತಿ । ದೇವತಾ ಪಾರಮಾರ್ಥ್ಯಂಚ ಯಥಾವತ್ ವೇತ್ಸ್ಯತೇ ಭವಾನ್ ॥” (ವಿ ಪು. 1-1 26) ಅಪ್ಪಾ, ನೀನು ಪರದೇವತಾ ಪಾರಮಾರ್ಥ್ಯ ಜ್ಞಾನವನ್ನು ಹೊಂದುವವನಾಗು” ಎಂದು ಆಶೀರ್ವಾದ ಮಾಡಿದರು ಇದನ್ನು ತಿಳಿದು ಕೊಂಡ ವಸಿಷ್ಠರೂ

ತತಶ್ಚ ಪ್ರಾಹ ಭಗವಾನ್ ವಸಿಷ್ಠೋ ಮೇ ಪಿತಾಮಹಃ ।
ಪುಲಸ್ತ್ಯೇನಯದುಕ್ತಂತೇ ಸರ್ವಮೇತದ್ಭವಿಷ್ಯತಿ ॥ ಇದು ವಸಿಷ್ಠರ ವಚನ (ವಿ ಪು 1-1-28) (c) ಪು. ತಿ. ನೋ.

ಇತ್ತೈ "ಮಯರ್‌ವರಮತಿ ನಲಮರುಳಪ್ಪೆತ್ತು" "ಆದ್ಯಸ್ಯನಃ" ಎನ್ನಿರಪಡಿಯೇ ಪ್ರಪನ್ನ ಸಂತಾನ ಕೂಟಸ್ಥರಾನ ನಮ್ಮಾಳ್ವಾರುಮ್ (1) "ಒಣ್ಡೊಡಿಯಾಳ್ ತಿರುಮಹಳುಮ್ ನೀಯುಮೇ ನಿಲಾ ನಿರ್ಪ ಕಣ್ಡ ಶದಿರ್ ಕಣ್ಡು" ಎನ್ರರುಳಿಚ್ಚೆಯ್‌ದಾರ್

ಇವರ ಉಪದೇಶಗಳಿಗೆ ಬಹಳ ಪ್ರಾಮಾಣ್ಯವುಂಟು ಎಂಬುದನ್ನು ತಿಳಿಯ ಪಡಿಸಲು, **ಪೆರಿಯ ಮುದಲಿಯಾರ್** – ಆಳವಂದಾರವರು [1]**"ತಸ್ಮೈ ನಮೋ ಮುನಿವರಾಯ ಪರಾಶರಾಯ"** ಎಂದು ಪರಾಶರ ಮುನಿಗಳನ್ನು ಆದರ ಪೂರ್ವಕವಾಗಿ ಸ್ತೋತ್ರಮಾಡಿರತ್ತಾರೆಂದು, ಆಚಾರ್ಯರು ನಿರ್ದೇಶಿಸಿರುವುದರ ಭಾವ. ಲಕ್ಷ್ಮಿಗೆ, ಪತಿಗೆ ಸಮಾನವಾದ ಪಾರಮ್ಯವು ಉಂಟು ಎಂಬುದು ಇತರ ಪ್ರಬಂಧಗಳಲ್ಲಿಯೂ ಅಲ್ಲಲ್ಲೇ ಗೂಢವಾಗಿ ಹೇಳಲ್ಪಡುತ್ತ ಪರಾಶರ ಪರಾಂಕುಶ ಪ್ರಬಂಧಗಳಲ್ಲಿ ವಿಶದವಾಗಿಯೂ ಸ್ಪಷ್ಟವಾಗಿಯೂ ಹೇಳಲ್ಪಟ್ಟಿದೆ. ಇದನ್ನೇ **ಮಯರ್ವರಮದಿನಲ ಮರುಳಪ್ಪೆಟ್ರ** – ಅಜ್ಞಾನ ಸಂಶಯ ವಿಪರ್ಯಯಗಳಿಲ್ಲದಂತೆ ಭಗವಂತನಿಂದ ಅನುಗ್ರಹವನ್ನು ಹೊಂದಿದ (ಇದರಿಂದಾಗಿ ಇವರ ಪ್ರಬಂಧಗಳಿಗೂ ಪ್ರಾಮಾಣ್ಯಾತಿಶಯವು ದ್ಯೋತಿತ) ಪ್ರಪನ್ನ ಸಂತಾನಕ್ಕೆ ಕೂಟಸ್ಥರಾದ – ಅಂದರೆ ಶರಣಾಗತಿಯನ್ನು ಅನುಷ್ಠಿಸಿ ಮೋಕ್ಷವನ್ನು ಪಡೆಯುವ ಪ್ರಪನ್ನರ ಸಮೂಹಕ್ಕೆ ಮೂಲಪುರುಷರಾದ ನಮ್ಮಾಳ್ವಾರವರೂ (1) **ಒಂಡೊಡಿಯೊಳ್ ತಿರುಮಹಳುಮ್** ಎಂದಾರಂಭಿಸಿ ಮಹಾಲಕ್ಷ್ಮಿಯೂ ನೀನೂ ಅಂದರೆ ನೀವಿಬ್ಬರೂ ಈಶ್ವರರಾಗಿ ಪ್ರಾಪ್ಯ ಪ್ರಾಪಕರಾಗಿರುವ ಸ್ವಭಾವವನ್ನು ನಾನು ಪ್ರತ್ಯಕ್ಷಿಸಿ ಐಹಿಕ ವಿಷಯಗಳಲ್ಲಿ ಆಸೆಯನ್ನು ಬಿಟ್ಟನೆಂದು, ಅನುಗ್ರಹಿಸಿರುತ್ತಾರೆ.

"ಪುಲಸ್ತ್ಯರು ಹೇಳಿದಂತೆಯೇ ನಿನಗೆ ಸರ್ವವೂ ಸಿದ್ಧಿಸಲಿ' ಎಂದು ಆಶೀರ್ವದಿಸಿದರು, ಇದರಿಂದಾಗಿ ಪರಾಶರರಿಗೆ ಪರದೇವತೆಯು ಯಾರು ಎಂಬ ವಿಷಯದಲ್ಲಿ ಸಂಶಯ ವಿಪರ್ಯಯವಿಲ್ಲವೆ, ದಿವ್ಯಜ್ಞಾನವು ಒಂದು ಬ್ರಹ್ಮಸಾಕ್ಷಾತ್ಕಾರವು ಏರ್ಪಟ್ಟು ಬ್ರಹ್ಮರ್ಷಿಯಾದರು ಇದರಿಂದಾಗಿ ಇವರು ಅನುಗ್ರಹಿಸಿರುವ ವಿಷ್ಣು ಪುರಾಣವು ಪ್ರಾಮಾಣಿಕ ತಮವಾದ ಗ್ರಂಥವೆಂಬುದು ಇಲ್ಲಿಯ ಆಶಯ.

c) ತತ್ತ್ವೇನಯಶ್ಚಿದಚಿದೀಶ್ವರ ತತ್ಸ್ವಭಾವ
ಭೋಗಾಪವರ್ಗ ತದುಪಾಯ ಗತೀರುದಾರಃ ।
ಸಂದರ್ಶ ಯನ್ನಿರಮಿಮೀತ ಪುರಾಣರತ್ನಂ
ತಸ್ಮೈ ನಮೋ ಮುನಿವರಾಯ ಪರಾಶರಾಯ ॥ (ಸ್ತೋತ್ರ ರತ್ನ 3ನೇ ಶ್ಲೋಕ)

1) ಕಂಡುಕೇಟ್ಟುಟ್ರು ಮೋಂದುಂಡು ಉೞಲುಮ್ ಐಂಗರುವಿ
ಕಂಡವಿನ್ಬಮ್, ತೆರಿವರಿಯವಳವಿಲ್ಲಾ ಚ್ಚಿಟ್ರಿನ್ಬಮ್ ।
ಒಂಡೊಡಿಯೊಳ್ ತಿರುಮಹಳುಂ ನೀಯುಮೇನಿಲಾನಿರ್ಪ
ಕಂಡ ಶದಿರ್ ಕಂಡೊೞಿಂದೇನ್ ಅಡೈಂದೇನ್ ಉನ್ ತಿರುವಡಿಯೇ ॥

(ತಿರುವಾಯ್ 4-9-10)

ಉಜ್ವಲವಾದ ಹಸ್ತಾಭರಣಗಳನ್ನು ಧರಿಸಿರುವ ಮಹಾಲಕ್ಷ್ಮಿಯೂ ಭಗವಂತನಾದ ನೀನೂ, ನಿಲಾನಿರ್ಪ – ಈಶ್ವರರುಗಳಾಗಿ ನಿಂತಿರುವ, ಕಂಡ ಶದಿರ್ - — ಸಾಮರ್ಥ್ಯವನ್ನು, ಅದಾಗ ನಿತ್ಯಸೂರಿಗಳೊಡನ ಸಮಾನವಾದ ಅನುಭವಾನಂದವನ್ನು ಸರ್ವಾತ್ಮರೂ ಅನುಭವಿಸಲಿ ಎಂದು ನೀನು ಅನಾದಿಯಾಗಿ ಸಂಕಲ್ಪಮಾಡಿಟ್ಟಿರುವ ಪುರುಷಾರ್ಥವನ್ನು, ಕಂಡು ನಾನು ಸಾಕ್ಷಾತ್ಕರಿಸಿ, ಇದರಿಂದ ನೀವಿಬ್ಬರೇ ಈಶ್ವರ ಸ್ವಭಾವದಿಂದ ಕೂಡಿದವರೆಂಬುದನ್ನು ನೋಡಿ ನೀವಿಬ್ಬರೇ ಪ್ರಾಪ್ಯರು - ಪ್ರಪನ್ನರಿಗೆ ಮುಕ್ತಿದಶೆಯಲ್ಲಿ ಹೊಂದಲ್ಪಡತಕ್ಕವರು, ಶರಣ್ಯರು-ಉಪಾಯ ಭೂತರು ಎಂದು ನಿಷ್ಕರ್ಷೆ ಮಾಡಿ,ಪಂಚೇಂದ್ರಿಯಗಳಿಂದ ಅನುಭವಿಸಲ್ಪಡತಕ್ಕ ಶಬ್ದ ಸ್ಪರ್ಶ ರೂಪ ರಸಗಂಧ ಸುಖಗಳನ್ನೂ, ಕೈವಲ್ಯ ಲೋಕದಲ್ಲಿ ಕೇವಲ ಜೀವಾತ್ಮಾನುಭವರೂಪವಾದ ಆನಂದವನ್ನೂ, ಇವುಗಳು ಅಲ್ಪಾಸ್ಥಿರತ್ವಾದಿ ದೋಷ ಸಪ್ತಕಗಳಿಂದ ಕೂಡದುವೆಂದು ತೀರ್ಮಾನಿಸಿ, ಒೞಿಂದೇನ್–ಅವುಗಳನ್ನು ಸವಾಸನವಾಗಿ ಬಿಟ್ಟೆನು ಆ ಮೋಕ್ಷಾನಂದವನು ಹೊಂದಲು, ನಿನ್ನ ಪಾದಗಳನ್ನು ಆಶ್ರಯಿಸಿದ್ದೇನೆ

ಇನ್ವಿಷಯತ್ತಿಲ್ ವಕ್ತವ್ಯ ಮೆಲ್ಲಾಮ್ ಚತುಶ್ಲೋಕೀ ವ್ಯಾಖ್ಯಾನತ್ತಿಲೇ ಪರಪಕ್ಷಪ್ರತಿಕ್ಷೇಪ ಪೂರ್ವಕಮಾಹ, ಪರಕ್ಕಚ್ಚೊನ್ನೋಮ್, ಅಙ್ಗೇ ಕಣ್ಡುಕೊಳ್ವದು.

ಚತುಶ್ಲೋಕಿಯಲ್ಲಿ ಆಳವಂದಾರವರು ಅನುಗ್ರಹಿಸಿರುವ ಸಂಪ್ರದಾಯಾರ್ಥ

ಲಕ್ಷ್ಮೀ ನಾರಾಯಣರಿಬ್ಬರೂ ಕೂಡಿದ ತತ್ವವು ಪರದೇವತೆಗಳು, ಪ್ರಾಪ್ಯ ಪ್ರಾಪಕರು ಎಂಬುವುಗಳಿಗೆ ಮೇಲೆ ಹೇಳಿರುವ ಪ್ರಮಾಣ ವಚನಗಳು ಇರಲಿ ನಮ್ಮ ಪೂರ್ವಾಚಾರ್ಯರುಗಳಲ್ಲಿ ಪರಿಗಣಿತರಾದ ತೀರ್ಥಕರರು ಹೇಳಿರುವುದು ಸಿದ್ಧಾಂತಕ್ಕೆ ನಿರ್ಣಾಯಕವು. ಅದನ್ನು ಉಪಪತ್ತಿ ಪೂರ್ವಕವಾಗಿ ತಿಳಿಸಿರಿ ಎಂಬ ಶಿಷ್ಯ ಜಿಜ್ಞಾಸೆಯನ್ನು ದೃಢತರವಾದ ಪ್ರಮಾಣ ಪೂರ್ವಕವಾಗಿ **ಇನ್ವಿಷಯತ್ತಿಲ್ ವಕ್ತವ್ಯಮೆಲ್ಲಾಂ,** ಎಂದಾರಂಭಿಸಿ ಉಪಪಾದಿಸುತ್ತಾರೆ

ಅದಾಗಿ ಆಳವಂದಾರವರು "ಕಾಂತಸ್ತೇ" ಎಂದಾರಂಭಿಸುವ ತಮ್ಮ ಚತುಶ್ಲೋಕೀ ಪ್ರಬಂಧದಲ್ಲಿ ಈ ವಿಷಯಗಳನ್ನೆಲ್ಲಾ ಹೇಳಿರುತ್ತಾರೆ, ಆ ಪ್ರಬಂಧಕ್ಕೆ ವ್ಯಾಖ್ಯಾನ ರೂಪವಾಗಿ ಶ್ರೀ ದೇಶಿಕರು ಪರಪಕ್ಷ ಪ್ರತಿಕ್ಷೇಪ ಪೂರ್ವಕ ಸಿದ್ಧಾಂತ ಸ್ಥಾಪನೆ ಮಾಡಿರುತ್ತಾರೆ, ಅದನ್ನು ಓದುಗರು ಓದಿ ತಿಳಿದು ಕೊಳ್ಳಬಹುದು. ಎಂದು ಆಚಾರ್ಯರು **ಅಂಗೇ ಕಂಡುಕೊಳ್ವದು** ಎಂದು ನಿಗಮಿಸಿದ್ದಾರೆ.

ಚತುಶ್ಲೋಕೀ ಪ್ರಬಂಧದ ತಾತ್ಪರ್ಯವೇನೆಂಬುದನ್ನು ಸಾರ ಕೌಮುದಿ ಗ್ರಂಥಕಾರರು (ಕರೂರು ಸ್ವಾಮಿಗಳು) ನಿರೂಪಿಸಿರುತ್ತಾರೆ ಅದಾಗಿ–

ಶಾರೀರಕ ಚತುರಧ್ಯಾಯಗಳಲ್ಲಿ ಅಭಿಪ್ರಾಯಕವಾದ ಅಂಶಗಳನ್ನು ಯಥೋಕ್ತರು ವಿವರಿಸಲು ಭಗವದ್ಯಾಮುನಿಗಳು "ಚತುಶ್ಲೋಕೀ" ಪ್ರಬಂಧವನ್ನು ಅನುಗ್ರಹಿಸಿರುತ್ತಾರೆ. ಅದರ ವಿವರವನ್ನು ಶ್ರೀ ದೇಶಿಕರು ಚತುಶ್ಲೋಕೀ ವ್ಯಾಖ್ಯಾನದಲ್ಲಿ

ಸ್ವಶೇಷಾ ಶೇಷಾರ್ಥೋ ನಿರವಧಿಕನಿರ್ಬಾಧಮಹಿಮಾ
ಫಲಾನಾಂದಾತಾಯಃ ಫಲಮಪಿಚ ಶಾರೀರಕಮಿತಃ ॥
ಶ್ರಿಯಂತತ್ಸಧ್ರೀಚೀಂ ತದುಪಸದನತ್ರಾಸ ಶಮನೀಂ
ಅಭಿಷ್ಟೌತಿಸ್ತುತ್ಯಾಮವಿತಥ ಮತಿರ್ಯಾಮುನ ಮುನಿಃ ॥

ಎಂಬ ಶ್ಲೋಕದಲ್ಲಿ ನಿರೂಪಿಸಿದ್ದಾರೆ ಈ ಶ್ಲೋಕದ ಅರ್ಥವೇನೆಂದರೆ :-

ಭಗವಂತನು ಲೀಲಾವಿಭೂತಿ ನಿತ್ಯವಿಭೂತಿಗಳೆಂಬ ಅಶೇಷ ಪದಾರ್ಥಗಳನ್ನು ತನಗೆ ಶೇಷವಾಗಿ ಕೊಂಡಿದ್ದಾನೆ, ಚೇತನಾಚೇತನಾತ್ಮಕ ಉಭಯ ವಿಭೂತಿನಾಥನು ಎಂದರ್ಥ. ಈ ವಿಷಯದಲ್ಲಿ ಯಾವ ವಿಧವಾದ ಬಾಧಕವೂ ಇಲ್ಲದೆ, ನಿರವಧಿಕ ನಿರ್ಬಾಧ ಮಹಿಮನೂ ಫಲಪ್ರದನೂ (ಪ್ರಾಪಕನೂ) ಅವನೇ. ಶಾರೀರಕ ಚತುರಧ್ಯಾಯಗಳಲ್ಲಿ ಹೀಗೆ ನಿರೂಪಿಸಿಲ್ಪಟ್ಟಿದಾನೆ ಲಕ್ಷ್ಮಿಯು ಅವನಿಗೆ ಸಹಧರ್ಮಚಾರಿಣೀ ಸಹ–ಅಂಚತಿ ಅಂಚು.ಗತೌ–ಕ್ವಿನ್–ಸಹಸ್ಯ–ಸಧ್ರಿಃ–ಙೀಪ್. ಇದರಿಂದಾಗಿ ಸಧ್ರ್ಯಚ್ ಪದದ ನಿಷ್ಪತ್ತಿ ಅವನು ಮಾಡುವ ಚೇತನಾ ಚೇತನಾತ್ಮಕ ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರ ಮೋಕ್ಷ ಪ್ರದತ್ವಗಳಲ್ಲಿ ಸಹಧರ್ಮಚಾರಿಣೀ. ಇದರಲ್ಲಿ ಯಾವ ಆಕ್ಷೇಪಗಳೂ ಇಲ್ಲ ಫಲಪ್ರದಳು – ಪ್ರಾಪಕಳು, ಫಲಭೂತಳು ಪ್ರಾಪ್ಯಳು ಮೇಲೂ ಭಗವಂತನನ್ನು ಆಶ್ರಯಿಸುವುದಕ್ಕೋಸ್ಕರ ಬರುವವರ ಭಯವನ್ನು ಹೋಗಲಾಡಿಸುವವಳು ಪುರುಷಕಾರ ಭೂತೆ ಎಂದರ್ಥ. ಇಂಥಹ ಮಹಾಲಕ್ಷ್ಮಿಯನ್ನು ಪರಮ ಪ್ರಾಮಾಣ್ಯ ಬುದ್ಧಿಯಿಂದ ಕೂಡಿದ ಯಾಮುನ ಮುನಿಗಳು ಸ್ತೋತ್ರ ಮಾಡಿರುತ್ತಾರೆ

ಅದಾಗಿ "ಕಾಂತಸ್ತೇ" ಎಂಬ ಮೊದಲನೆಯ ಶ್ಲೋಕದಲ್ಲಿ, ಲಕ್ಷ್ಮೀ ನಾರಾಯಣರಿಬ್ಬರೂ ವಿಶೇಷಣ ವಿಶಿಷ್ಟ ವಾದ ದಂಪತಿ ರೂಪದಲ್ಲಿ ಒಂದೇ ತತ್ವವೆಂದು ಹೇಳಬಹುದಾದ ರೀತಿಯಲ್ಲಿ, ಪರಸ್ಪರ ಇಚ್ಛಾವಿಘಾತವಿಲ್ಲದೆ ದ್ವೈರಾಜ್ಯ ದೋಷ ಪ್ರಸಂಗವು ಬಾರದ ಹಾಗೆ, ಐಕರಸ್ಯಭಾವದಿಂದ ಕೂಡಿದವರಾಗಿ ಉಭಯ ವಿಭೂತಿಗೂ ಶೇಷಿಗಳು. ಉಭಯ ವಿಭೂತಿಗಳೂ ಅವರಿಗೆ ಅಧೀನವೆಂದರ್ಥ "ಫಣಿಪತಿಶ್ಶಯ್ಯಾಸನಂ ವಾಹನಂ ವೇದಾತ್ಮಾ ವಿಹಗೇಶ್ವರಃ" ಇತ್ಯಾದಿಂದಾಗಿ ಭೋಗ ವಿಭೂತಿಯು ಇಬ್ಬರಿಗೂ ಸಮಾನವೆಂದು ತಿಳಿಸಲ್ಪಟ್ಟಿದೆಯಲ್ಲವೆ

"ಯವನಿಕಾ ಮಾಯಾ ಜಗನ್ಮೋಹಿನಿ" ಎಂಬ ಪದಗಳಿಂದ "ತದ್ಧೇದಂತರ್ಹಿ ಅವ್ಯಾಕೃತ ಮಾಸೀತ್ ತನ್ನಾಮರೂಪಾಭ್ಯಾಂ ವ್ಯಾಕ್ರಿಯತ" ಎಂಬ ಶ್ರುತ್ಯುಕ್ತ ಪ್ರಕಾರ ಜಗದಾಕಾರವಾಗಿ ಪರಿಣಾಮವನ್ನು ಹೊಂದುವ ಸೂಕ್ಷ್ಮ ಚಿದಚಿದ್ವಸ್ತು ಶರೀರ ಕತ್ವವು ಸಂಗ್ರಹಿಸಲ್ಪಟ್ಟಿತು ಹೇಗೆಂದರೆ ಯವನಿಕಾ, ಮಾಯಾ, ಜಗನ್ಮೋಹಿನೀ ಎಂಬ ಮೂರು ಪದಗಳಿಂದ ಭಗವತ್ಸ್ವರೂಪವನ್ನು ಮರೆಸಿ, (ಯವನಿಕಾಶಬ್ದಾರ್ಥ) ವಿಚಿತ್ರವಾದ ಚೇತನಾ ಚೇತನಾತ್ಮಕ ಪ್ರಪಂಚ ರೂಪ ಅನಂತ ಪರಿಣಾಮಕ್ಕೆ ಆಶ್ರಯವಾಗಿ (ಮಾಯಾ ಶಬ್ದಾರ್ಥ) ಸ್ವವಿಷಯದಲ್ಲಿ – ಪ್ರಾಕೃತವಾದ ವಸ್ತುಗಳಲ್ಲಿ ಭೋಗ್ಯ ಬುದ್ಧಿಯನ್ನುಂಟು ಮಾಡುವ (ಜಗನ್ಮೋಹಿನೀ ಶಬ್ದಾರ್ಥ) ಪ್ರಕೃತಿಯು ಕಾರ್ಯವು ಲಕ್ಷ್ಮೀಸಂಕಲ್ಪಾಧೀನವೆಂದ ಹೇಳಿದೆ ಇದರಿಂದಾಗಿ ಪೂರ್ವಾರ್ಧದಲ್ಲಿ ಸಮಷ್ಟಿ ತತ್ವವು ಲಕ್ಷ್ಮೀ ವಿಭೂತಿಯೆಂದು ತಿಳಿಸಿದ್ದಾಯಿತು ಉತ್ತರಾರ್ಧದಲ್ಲಿ "ಬ್ರಹ್ಮೇಶಾದಿ" ಎಂದಾರಂಭಿಸಿ ವ್ಯಷ್ಟಿ ತತ್ವವು ಅವಳ ಅಧೀನವೆಂದು ಹೇಳಲ್ಪಡು ತ್ತದೆ. ಇದರಿಂದಾಗಿ ಶಾರೀರಕ ಪ್ರಥಮಾಧ್ಯಾಯವು, ಸ್ವಶೇಷಾ ಶೇಷಾರ್ಥಃ ಎಂಬ ಮೊದಲನೆಯ ಶ್ಲೋಕದಲ್ಲಿ ಸಂಗ್ರಹಿ ಸಲ್ಪಟ್ಟಿತು. ಇದಕ್ಕೆ ಪ್ರಮಾಣವೇನೆಂದರೆ – ಪುರುಷ ಸೂಕ್ತಾದಿಗಳ ಹಾಗೆ ಶ್ರೀಸೂಕ್ತವೂ ಪ್ರಾಮಾಣಿಕವು ಎಂಬು ದನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ವಪ್ರಮಾಣ ಸಾರಸಂಗ್ರಾಹಕವಾದ "ನಾರಾಯಣ" ಶಬ್ದದಂತೆ, "ಶ್ರೀಃ" ಎಂಬ ಶಬ್ದವೇ ಈ ವಿಷಯಗಳಲ್ಲಿ ಪ್ರಧಾನವಾದ ಪ್ರಮಾಣವೆಂದು "ಶ್ರೀರಿತ್ಯೇವಚ ನ ಮತೇ" ಎಂಬ ಶ್ರೀಸೂಕ್ತಿ ಯನ್ನು ಅನುಗ್ರಹಿಸಿರುವುದರ ಭಾವ ಶ್ರೀಯತೇ-ಸರ್ವತತ್ವಗಳಿಂದ ಆಶ್ರಯಿಸಲ್ಪಡುತ್ತಾಳೆ ಶ್ರಯತೇ – ಸರ್ವ ತತ್ವಗಳನ್ನು ತಾನು ಆಶ್ರಯಿಸುತ್ತಾಳೆ, ಇತ್ಯಾದಿ ಉತ್ಪತ್ತಿಗಳಿಂದ ಧಾರಕತ್ವ ವ್ಯಾಪಕತ್ವಾದಿ ಗುಣಗಳು ಪ್ರಕಾಶ ಪಡಿಸಲ್ಪಡುತ್ತವೆ. ಇದರಿಂದಾಗಿ ಭಗವಂತನ ಹಾಗೆ ಲಕ್ಷ್ಮಿಗೂ ಚೇತನಾ ಚೇತನಾತ್ಮಕ ಸರ್ವ ಪ್ರಪಂಚ ಶರೀರಾತ್ಮ ಭಾವ ಸಂಬಂಧವು ಹೇಳಲ್ಪಟ್ಟಿತು, "ತತ್ಸೃಷ್ಟ್ವಾ, ತದೇವಾನುಪ್ರಾವಿಶತ್, ತದನುಪ್ರವಿಶ್ಯ ಸಚ್ಚತ್ಯಚ್ಚಾ ಭವತ್ – ಹಂತಾಹಮಿಮಾ ಸ್ತಿಸ್ರೋ ದೇವತಾಃ ಅನೇನ ಜೀವೇನಾತ್ಮನಾ ಅನು ಪ್ರವಿಶ್ಯ ನಾಮ ರೂಪೇ ವ್ಯಾಕರವಾಣಿ, ಎಂಬ ಶ್ರುತ್ಯರ್ಥವು ಶ್ರೀ ಶಬ್ದದಲ್ಲಿಯೂ ಅಭಿಪ್ರೇತ ಶರಣಾಗತಿ ಗದ್ಯದಲ್ಲಿ "ಭಗವನ್ನಾರಾಯಣ" ಎಂಬಂತೆ "ಭಗವತೀಂ ಶ್ರಿಯಂ" ಎಂದು ಭಾಷ್ಯಕಾರರು ನಿರ್ದೇಶಿಸಿರುವುದು ಮೇಲೆ ಹೇಳಿರುವ ಅರ್ಥಗಳನ್ನು ಸಂಗ್ರಹಿಸುತ್ತದೆಯೆಂದು ದ್ವಯಾಧಿ ಕಾರದಲ್ಲಿ ಆಚಾರ್ಯರು ವ್ಯಕ್ತಪಡಿಸಿರುತ್ತಾರೆ. "ಭಗವತೀ" ಎಂಬ ಪದವು ಹೇಯಗುಣವಿಲ್ಲದೆ, ಸಮಸ್ತ ಕಲ್ಯಾಣ ಗುಣಗಳಿಂದ ಕೂಡಿರುವಳೆಂಬ ಉಭಯಲಿಂಗತ್ವವನ್ನು ಸೂಚಿಸುತ್ತದೆ ಪರತತ್ವ ಪ್ರತಿಪಾದಕವಾದ ಅಸಾಧಾರಣ ಲಕ್ಷಣವು, "ನ ಸ್ಥಾನತೋಽಪಿ ಪರಸ್ಯ ಉಭಯ ಲಿಂಗಂ ಸರ್ವತ್ರಹಿ" ಎಂಬ ಬ್ರಹ್ಮ ಸೂತ್ರದಿಂದ ಪ್ರತಿಪನ್ನವು. ಪರಾಶರ ಭಟ್ಟಾಚಾರ್ಯರೂ ಈ ಅಂಶವನ್ನು "ಪ್ರಶಕನಬಲ ಜ್ಯೋತಿ . ತವ ಭಗವತಚ್ಛೈತೇ ಸಾಧಾರಣಾಗುಣ ರಾಶಯಃ" ಎಂದು ನಿರೂಪಿಸಿರುವುದು ನಿರ್ಬಾಧವಾಗಿ ತಿಳಿಯತಕ್ಕದ್ದು

ಅನಂತರ ಶಾರೀರಕ ದ್ವಿತೀಯಾಧ್ಯಾಯ ದ ಪ್ರಮೇಯವು "ಬ್ರಹ್ಮವು ನಿರವಧಿಕ ನಿರ್ಬಾಧ ಮಹಿಮೆಯುಳ್ಳದ್ದು" ಎಂದು ಪರಪಕ್ಷ ನಿರಾಸನ ಪೂರ್ವಕವಾಗಿ ನಿರೂಪಿಸಲ್ಪಟ್ಟಿದೆ. ಈ ಅಂಶವನ್ನು "ಯಸ್ಯಾಸ್ತೇ ಮಹಿಮಾನ ಮಾತ್ಮನ ಇವತ್ವದ್ವಲ್ಲಭೋಪಿ ಪ್ರಭುಃ - ನಾಲಂ ಮಾತುಮಿಯತ್ತಯಾ ನಿರವಧಿಂ ನಿತ್ಯಾನುಕೂಲಂ ಸ್ವತಃ" ಎಂಬ ಶ್ಲೋಕದಲ್ಲಿ ನಿರೂಪಿಸಿರುತ್ತಾರೆ. ಅದಾಗಿ ನಿನ್ನ ಮಹಿಮೆಯನ್ನು, ತನ್ನ ಮಹಿಮೆಯಂತೆ ಇಷ್ಟು ಎಂದು ಅಳೆದು ಹೇಳಲು ಭಗ ವಂತನಿಗೂ ಸಾಧ್ಯವಿಲ್ಲ. ಅದ್ದರಿಂದ ನಿನ್ನ ಮಹಿಮೆಯು ಎಲ್ಲೆ ಇಲ್ಲದ್ದು, ನಿತ್ಯಾನುಕೂಲವಾದದ್ದು – ನಿರ್ಬಾಧ

ವಾದದ್ದು. ನಿನ್ನ ಮಹಿಮೆಯು ನಿನ್ನ ವಲ್ಲಭನ ಮಹಿಮೆಯಂತೆ ಸ್ವಾಭಾವಿಕವಾದದ್ದು. ಅನ್ಯೇಚ್ಛಾಧೀನವಲ್ಲವುದು ಎಂಬುದು "ಸ್ವತಃ" ಎಂಬ ಶಬ್ದದಿಂದ ದ್ಯೋತಿತ ಇದರಿಂದ ಪರಬ್ರಹ್ಮನ, "ಸ್ವಭಾವತಃ ಅನವಧಿಕಾತಿಶಯಾಸಂಖ್ಯೇಯ (ಎಲ್ಲೆಯಿಲ್ಲದ ಅತಿಶಯವಾದ, ಲೆಕ್ಕಿಸಲಾಗದ) ಕಲ್ಯಾಣಗುಣಗಳು ಭಾಷ್ಯಕಾರರಿಂದ ವರ್ಣಿಸಲ್ಪಟ್ಟಿರುವ ಹಾಗೆ ಅವುಗಳೇ ಲಕ್ಷ್ಮಿಗೂ ಇವೆ ಎಂಬುದು ಕಂಠೋಕ್ತ, "ದೇವಿತ್ವನ್ಮಹಿಮಾವಧಿರ್ನಹರಿಣಾನಾಪಿ ತ್ವಯಾಜ್ಞಾಯತೇ" ಎಂಬ ಶ್ರೀವತ್ಸಾಂಕ ಮಿಶ್ರರು ಹೇಳಿರುವುದೂ (ಎಲೈ ತಾಯೇ ನಿನ್ನ ಮಹಿಮೆಗಳ ಎಲ್ಲೆಯು ಹರಿಗೂ ತಿಳಿಯದು, ನಿನಗೂ ತಿಳಿಯದು ಎಂಬುದು) ಇಲ್ಲಿ ಅನುಸಂಧೇಯ ಹೀಗೆ ಶಾರೀರಕ ಮೀಮಾಂಸೆಯ ಮೊದಲೆರಡು ಅಧ್ಯಾಯಗಳಲ್ಲಿ ಹೇಳಿರುವ ಪ್ರಮೇಯವು

"ಅನನ್ಯಾಧೀನ ಕಲ್ಯಾಣಮನ್ಯ ಮಂಗಳ ಕಾರಣಮ್ ।
ಜಗನ್ನಿದಾನಮದ್ವಂದ್ವಂ ದ್ವಂದ್ವಂ ವಂದಾಮಹೇ ಮಹಃ ॥"

ಎಂದು ಅಭಿಯುಕ್ತರಿಂದ ಹೇಳಲ್ಪಟ್ಟಿದೆ ಅದಾಗಿ ಅನ್ಯರಿಗೆ ಅಧೀನವಲ್ಲದ ಕಲ್ಯಾಣ (ಮಂಗಳ) ಗುಣಗಳಿಂದ ಕೂಡಿದವರು ಅನ್ಯರಿಗೆ ಕ್ಷೇಮವನ್ನುಂಟು ಮಾಡಲು ಕಾರಣವಾದವರು, ಜಗತ್ಕಾರಣಭೂತರು. ಇವರಿಗೆ ಸಮಾನರಾರೂ ಇಲ್ಲ (ಅದ್ವಂದ್ವಮ್). ಇಂಥಹ ದ್ವಂದ್ವಂ - ಲಕ್ಷ್ಮೀನಾರಾಯಣಾತ್ಮಕರಾದ ಇಬ್ಬರು - ವಿಶೇಷಣವಿಶಿಷ್ಟರಾಗಿ ಏಕತತ್ತ್ವದ ಹಾಗಿರುವ, ಮಹಃ – ತೇಜಸ್ಸನ್ನು, ವಂದಾಮಹೇ–ನಮಸ್ಕರಿಸುತ್ತೇವೆ. ಇದರಿಂದ ದಿವ್ಯಮಿಥುನವು (ಇಬ್ಬರು) ಜಗತ್ಕಾರಣ ರೂಪ ಬ್ರಹ್ಮಲಕ್ಷಣದಿಂದ ಕೂಡಿದವರಾಗಿ, ಅದಕ್ಕೆ ಉಚಿತವಾದ ಸ್ವಾಭಾವಿಕಾನಂತ ಗುಣಗಣಯುಕ್ತರಾಗಿದ್ದಾರೆ. ಸವ ಚೇತನಾಚೇತನಗಳೂ ಪರಿಮಿತ ವ್ಯವಸ್ಥಿತ ಗುಣಗಳಿಂದ ಕೂಡಿದವರಾಗಿ ಅವರಿಗೆ ಅಧೀನರೆಂಬ ತತ್ವವು ತಿಳಿಸಲ್ಪಟ್ಟಿತು

ಅನಂತರ "ಉಷಸ್ತತ್ಕರುಣಾ ನಿರೀಕ್ಷಣಸುಧಾ" ಎಂಬ ಮೂರನೇ ಶ್ಲೋಕದಿಂದ ಶಾರೀರಕ ಮೂರನೇ ಅಧ್ಯಾಯದ ಅರ್ಥವು ಸಂಗ್ರಹೀತ ಪೂರ್ವಾರ್ಧವು ಸರ್ವರಕ್ಷಕತ್ವವನ್ನು ಉದಾಹರಣ ಪೂರ್ವಕ ನಿರೂಪಿಸುತ್ತದೆ ಅದಾಗಿ, ತ್ವಯಾದೇವಿ ಪರಿತ್ಯಕ್ತಂ ಸಕಲಂ ಭುವನತ್ರಯಮ್ । ವಿನಷ್ಟಪ್ರಾಯಮಭವತ್ ತ್ವಯ್ಯೇದಾನಿಂ ಸಮೇಧಿತಮ್ ॥ (ವಿ. ಪು. 1–9 123) ಎಂದು "ಲಕ್ಷ್ಮೀ ಕಟಾಕ್ಷವಿಲ್ಲದೆ ಅವಳಿಂದ ಬಿಡಲ್ಪಟ್ಟ ಪ್ರಪಂಚವು ನಿಶ್ಶ್ರೀಕವಾಗಿ ಸಂಪದ್ವಿಹೀನವಾಗಿ, ನಷ್ಟಪ್ರಾಯವಾಗಿತ್ತು. ಮಹಾಲಕ್ಷ್ಮಿಯ ಕಟಾಕ್ಷದಿಂದ ಸಂಪತ್ಸಮೃದ್ಧವಾಯಿತು," ಎಂದು ಮಹಾಲಕ್ಷ್ಮೀ ಕಟಾಕ್ಷದಿಂದ ಸಿದ್ಧೈಶ್ವರ್ಯನಾದ ಇಂದ್ರನು ಸ್ತೋತ್ರಮಾಡುತ್ತಾನೆಯಲ್ಲವೆ "ಶ್ರೇಯೋನಹ್ಯರವಿಂದ ಲೋಚನಮನಃ ಕಾಂತಾಪ್ರಸಾದಾದೃತೇ । ಸಂಸೃತ್ಯಕ್ಷರ ವೈಷ್ಣವಾಧ್ವಸುನೃಣಾಂ ಸಂಭಾವ್ಯತೇಕರ್ಹಿಚಿತ್ ॥ ಎಂಬ ಉತ್ತರಾರ್ಧದಿಂದ "ಫಲಮತ ಉಪಪತ್ತೇಃ" ಎಂಬ ಸೂತ್ರ ಸಂದರ್ಶಿತ ರೀತಿಯಲ್ಲಿ ಐಶ್ವರ್ಯ ಕೈವಲ್ಯ, ಮೋಕ್ಷಗಳು ಇವಳ ಅನುಗ್ರಹವಿಲ್ಲದೆ ಲಭಿಸುವುದಿಲ್ಲವೆಂದು ವ್ಯತಿರೇಕ ಮುಖೇನ ದೃಢೀಕೃತವು. ಇಲ್ಲಿ ವೈಷ್ಣವಾಧ್ವಃ ಶ್ರೇಯಸ್ಸೆಂಬುದು ಪರಮ ಪುರುಷಾರ್ಥವೆಂಬ ಮೋಕ್ಷ ಇದನ್ನೂ ಲಕ್ಷ್ಮಿಯು ಕೊಡಬಲ್ಲಳು, ಎಂಬುದರಿಂದ ಲಕ್ಷ್ಮಿಗೆ ಮೋಕ್ಷೋಪಾಯತ್ವವು ಸ್ಥಿರೀಕೃತ. ವೈಷ್ಣವಾಧ್ವ ಶ್ರೇಯಃ ಪ್ರದಾತೃತ್ವವು ಪುರುಷಕಾರತ್ವದಲ್ಲಿ ಮಾತ್ರ ಪರ್ಯವಸಾನವೆಂದು ಹೇಳುವುದು ಸರಿಯಿಲ್ಲ. ಹಾಗೆ ಅರ್ಥ ಮಾಡಿದರೆ, ಸಹಪಠಿತ ಸಂಸೃತಿ (ಸಂಸಾರ) ಅಕ್ಷರ (ಕೈವಲ್ಯ) ಗಳೆಂಬ ಶ್ರೇಯಸ್ಸುಗಳನ್ನು ಕೊಡುವುದಕ್ಕೂ ಪುರುಷಕಾರತ್ವವು ಅಪೇಕ್ಷಿತವೆಂಬ ಪ್ರಸಂಗವು ಬರುತ್ತದೆ. ಪೂರ್ವಾರ್ಧಕ್ಕೆ ವಿಪರೀತವಾದಂಥಾಗುತ್ತದೆ ಇದು ಇಷ್ಟಾಪತ್ತಿ ಎಂದು ಹೇಳಲಾಗುವುದಿಲ್ಲ. ಅನಂತ ಜನ್ಮಗಳಲ್ಲಿ ಸಂಪಾದಿಸಿರುವ ಸಮಸ್ತಾಪರಾಧಗಳನ್ನು ಹೋಗಲಾಡಿಸಿ ನಿರತಿಶಯವಾದ ಪುರುಷಾರ್ಥವಾದ ಮೋಕ್ಷವನ್ನು ಪಡೆಯಲು, ಪ್ರಾಯಶ್ಚಿತ್ತ ಪ್ರಸಂಗೇತು ಸರ್ವಪಾಪ ಸಮುದ್ಭವೇ । ಮಾಮೇಕಾಂ ದೇವ ದೇವಸ್ಯ ಮಹಿಷೀಂ ಶರಣಂ ಶ್ರಯೇತ್ ॥

ಇತ್ಯಾದಿಯಾದ ಪ್ರಮಾಣ ಬಲಗಳಿಂದ, ಭಗವದಾಭಿಮುಖ್ಯವು (ಅಭಿಗಂತವ್ಯತಾ) ಸಿದ್ಧಿಸಲು ಪುರುಷಕಾರವು ಬೇಕೇ

ಹೊರತು ಐಹಿಕ ಫಲಗಳಿಗೆ ಬೇಕಿಲ್ಲ

ಪಿತೇವತ್ವತ್ಪ್ರೇಯಾನ್ ಜನನಿ ಪರಿಪೂರ್ಣಾಗಸಿಜನೇ
ಹಿತಸ್ರೋತೋ ವೃತ್ಯಾ ಭವತಿಚ ಕದಾ ಚಿತ್ ಕಲುಷ ಧೀಃ
ಕಿಮೇತನ್ನಿ ರ್ದೋಷಃ ಕ ಇಹ ಜಗತೀತಿತ್ವ ಮುಚಿತೈಃ
ಉಪಾಯೈರ್ವಿಸ್ಮಾರ್ಯ ಸ್ವಜನಯಸಿ ಮಾತಾತದಸಿನಃ ||

ಎಲೈ ತಾಯಿಯೇ, ನಿನ್ನ ವಲ್ಲಭನು ಪಾಪಿಷ್ಠನಾದ ಪುರಷನಲ್ಲಿ ಹಿತದೃಷ್ಟಿಯಿಂದ ಕೋಪಗೊಂಡಿರುತ್ತಾನೆ ಲೋಕದಲ್ಲಿ ತಂದೆಯು ತನ್ನ ಮಗನನ್ನು ಹಿತದೃಷ್ಟಿಯಿಂದ ಶಿಕ್ಷಿಸುವಂತ ಶಿಕ್ಷಿಸುತ್ತಾನೆ ಆಗ ನೀನು ಅವನನ್ನು "ಲೋಕದಲ್ಲಿ ತಪ್ಪು ಮಾಡದವರು ಯಾರು" ಎಂದು ಉಪಾಯಗಳನ್ನು ಹೇಳಿ ಸಮಾಧಾನಪಡಿಸಿ, ಪಾಪಿಗಳಾದ ನಮ್ಮನ್ನು ನಿಮ್ಮಲ್ಲಿಗೆ ಬರಮಾಡಿಕೊಂಡು ಕಾಪಾಡುತ್ತೀಯೆ, ಈ ರೀತಿಯಾದ ಪುರಷಕಾರವು ದುಃಖ ಮಿಶ್ರಪರಿಮಿತ ಸುಖ ರೂಪವಾದ ಐಶ್ವರ್ಯ, ಕೈವಲ್ಯ ರೂಪವಾದ ಅಭೀಷ್ಟ ಫಲವನ್ನು ಕೊಡಿಸಲು ಬೇಕಿಲ್ಲ, ಅವರವರ ಕರ್ಮಾನುಗುಣವಾಗಿ ಈಶ್ವರನು ಆ ಫಲಗಳನ್ನು ಕೊಡುತ್ತಾನೆ ಆದ್ದರಿಂದ ಮೋಕ್ಷ ಫಲವನ್ನೂ ಐಹಿಕ ಫಲಗಳನ್ನೂ ಲಕ್ಷ್ಮಿಯು ಕೊಡಬಲ್ಲಳು ಎಂದು ಸೇರಿಸಿ ಹೇಳಿರುವುದು ಪುರುಷಕಾರತ್ವ ದೃಷ್ಟಿಯಿಂದ ಮಾತ್ರವೆಂಬುದು ಸರ್ವಪ್ರಮಾಣ ವಿರುದ್ಧ ಆದ್ದರಿಂದ ಮೂರನೇ ಅಧ್ಯಾಯದ ಸಾರಭೂತವಾದ "ಫಲಮತಉಪಪತ್ತೇಃ" ಎಂಬುದಾಗಿ ನಿರ್ಣಯಿಸಲ್ಪಟ್ಟ ಸರ್ವರಕ್ಷಕತ್ವ, ಮೋಕ್ಷ ಪ್ರದಾತೃತ್ವಗಳು ಭಗವಂತನ ಹಾಗೆ ಲಕ್ಷ್ಮಿಗೂ ಉಂಟು ಎಂದು ಅನ್ವಯ ವ್ಯತಿರೇಕ ರೂಪವಾಗಿ, ಈ ಮೂರನೇ ಶ್ಲೋಕದಲ್ಲಿ ವರ್ಣಿಸಲ್ಪಟ್ಟಿದೆ ಎಂದು ಹೇಳುವುದು ನ್ಯಾಯವಾದ ಮಾತು

"ಶಾಂತಾನಂತ ಮಹಾವಿಭೂತಿ" ಎಂದಾರಂಭಿಸುವ ನಾಲ್ಕನೆಯ ಶ್ಲೋಕದಲ್ಲಿ, ವಿಚಿತ್ರವಾದ ಅನಂತ ಗುಣ ವಿಭೂತಿ ವ್ಯಾಪಾರಗಳಿಂದ ಕೂಡಿದ, ಪರ, ವ್ಯೂಹ, ವಿಭವಾದಿ ಸರ್ವಾವಸ್ಥೆಗಳಲ್ಲಿ ಶುಭಾಶ್ರಯ ದಿವ್ಯ ಮಂಗಳ ವಿಗ್ರಹಗಳಿಂದ ಕೂಡಿದ ಪರಮ ಮಂಗಳಕರವಾದ ಭಗವದ್ದಿವ್ಯಾತ್ಮ ಸ್ವರೂಪವು, ತನಗೆ ಅನುರೂಪವಾಗಿ ಗುಣವಿಭೂತಿ ವ್ಯಾಪರಗಳಿಂದ ಕೂಡಿದ ಪರವ್ಯೂಹ ವಿಭವಾದಿ ಪಂಚ ಪ್ರಕಾರ ಶುಭಾಶ್ರಯ ದಿವ್ಯ ಮಂಗಳ ವಿಗ್ರಹ ವಿಶಿಷ್ಟಳಾದ ದಿವ್ಯ ಮಹಿಷಿಯಾದ ಮಹಾಲಕ್ಷ್ಮಿಯಿಂದ ಗಾಢೋಪಗೂಢವಾಗಿದೆ (ವಿಯೋಗಾನರ್ಹವಾಗಿ ಸಂಶ್ಲಿಷ್ಟವಾಗಿದೆ) ಹೀಗೆ ಪರಸ್ಪರ ಸಂಶ್ಲಿಷ್ಟವಾದ **ದಿವ್ಯಮಿಥುನವು ಪರಮ ಪ್ರಾಪ್ಯ**ವೆಂಬುದು ಹೇಳಲ್ಪಟ್ಟಿದೆ. ಇಲ್ಲಿ "ವ್ಯಾಪಕಾವತಿ ಸಂಶ್ಲೇಷಾದೇಕ ತತ್ವಮಿವೋದಿತೌ" ವಿಭುವಾದ ಸ್ವರೂಪಗಳಿಂದ ಪರಸ್ಪರ ಸಂಶ್ಲಿಷ್ಟರಾಗಿ ಒಂದೇ ತತ್ವವೆಂದು ಹೇಳುವಂತೆ ಇದ್ದಾರೆ, ಎಂಬುದೇ ಮೊದಲಾದ ವಚನಗಳು ಅನುಸಂಧೇಯಗಳು

ಭವಾನ್ನಾರಾಯಣೋದೇವಃ ಲಕ್ಷ್ಮೀ ರಂಗಂ ಪರಾಭವತ್ |
ಭವದ್ಭಾವಾತ್ಮಕಂ ಬ್ರಹ್ಮ ಲಕ್ಷ್ಮೀನಾರಾಯಣಾತ್ಮಕಮ್ ||

(ದೇವನಾದ, ನಾರಾಯಣನು ಭವಚ್ಛಬ್ದಾರ್ಥ ಅವನಿಗೆ ವಿಶೇಷಣ ಭೂತೆಯಾದ ಲಕ್ಷ್ಮಿಯು "ಭವತ್ ಶಬ್ದಾರ್ಥ. ಭವದ್ಭಾವಾತ್ಮಕವಾದ ಬ್ರಹ್ಮಶಬ್ದವು ಲಕ್ಷ್ಮೀನಾರಾಯಣರೊಡಗೂಡಿ) ಹೀಗೆ ಪರಮಾಪ್ತವಾದ ಉಪಬೃಂಹಣದಿಂದ ನಿರ್ಣೀತವಾದ ಈ ಅರ್ಥವನ್ನು, "ಶ್ರದ್ಧಯಾ ದೇವೋದೇವತ್ವಮಶ್ನುತೇ" ಎಂಬ ಶ್ರುತಿಯು ಒಳಗೊಂಡಿದೆ ಶ್ರದ್ಧಯಾ-ಲಕ್ಷ್ಮಿಯೊಡಗೂಡಿ, ದೇವಃ ಜಗದ್ವ್ಯಾಪಾರ ಲೀಲನು (ದಿವು ಕ್ರೀಡಾ ವಿಜಗೀಷಾ ಎಂಬುದು ಧಾತುವಿನ ಅರ್ಥ) ದೇವತ್ವ-ಜಗದ್ವ್ಯಾಪಾರ ಲೀಲೆಯನ್ನು ಅನುಭವಿಸುತ್ತಾನೆ "ಅನಯಾ ಶ್ರುತ್ಯಾ ಜಗದ್ವಿಹಾರೇ ದಿವ್ಯ ದಂಪತ್ಯೋಃ ಸಾನ್ನಿಧ್ಯಮುಚ್ಯತೇ" (ಈ ಶ್ರುತಿಯಿಂದ ಜಗದ್ವ್ಯಾಪಾರದಲ್ಲಿ ದಿವ್ಯ ದಂಪತಿಗಳ ಸಾನ್ನಿಧ್ಯವು ಹೇಳಲ್ಪಡುತ್ತದೆ) ಎಂದು ಚತುಶ್ಶ್ಲೋಕೀ ಭಾಷ್ಯದಲ್ಲಿ ಆಚಾರ್ಯರು ತಾವೇ ಹೇಳಿರುತ್ತಾರೆ

ವಾದಿಯರ್ ಮುನ್ನುನ್ತರುಕ್ಕಚ್ಚೆರುಕ್ಕಿನ್ ಮರೈಕುಲೈಯ ।
ಶಾದು ಜನಙ್ಗಳ ಡಙ್ಗ ನಡುಙ್ಗ ತನಿತ್ತನಿಯೋ ॥
ಆದಿ ಯನಾವಹೈಯರಣದೇಶಿಕರ್ ಶಾತ್ತಿನರ್ನಂ ।
ಪೋದಮರುಂ ತಿರುಮಾದುಡನ್ನಿನ್ನ ಪುರಾಣನೈಯೋ ॥೧೩॥

ಜನಪದಭುವನಾದಿಸ್ಥಾನ ಜೈತ್ರಾಸನಸ್ಥೇ
ಷ್ವನುಗತನಿಜವಾರ್ತ್ತಂ ನಶ್ವರೇಷ್ವೀಶ್ವರೇಷು ।
ಪರಿಚಿತನಿಗಮಾನ್ತಃ ಪಶ್ಯತಿ ಶ್ರೀ ಸಹಾಯಂ
ಜಗತಿ ಗತಿಮವಿದ್ಯಾದಂತುರೇ ಜನ್ತುರೇಕಃ ॥೧೭॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತನ್ತ್ರಸ್ವತಂತ್ರಸ್ಯ ಶ್ರೀ ಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು ಶ್ರೀ ಮದ್ರಹಸ್ಯತ್ರಯಸಾರೇ ಪರದೇವತಾ ಪಾರಮಾರ್ಥ್ಯಾಧಿಕಾರಷ್ಷಷ್ಠಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಪಶ್ಯಂತೀಷು ಶ್ರುತಿಷು ಪರಿತಃ ಸೂರಿ ಬೃಂದೇನ ಸಾರ್ಧಂ
ಮಧ್ಯೇ ಕೃತ್ಯತ್ರಿಗುಣಫಲಕಂ ನಿರ್ಮಿತಸ್ಥಾನ ಭೇದಮ್ ।
ವಿಶ್ವಾಧೀಶ ಪ್ರಣಯಿನಿ ಸದಾ ವಿಭ್ರಮದ್ಯೂತ ವೃತ್ತೌ
ಬ್ರಹ್ಮೇಶಾದ್ಯಾ ದಧತಿ ಯುವಯೋರಕ್ಷಶಾರ ಪ್ರಚಾರಮ್ ॥

ಎಂಬ ಶ್ರೀ ಸ್ತುತಿ ಶ್ರೀ ಸೂಕ್ತಿಯೂ "ಶ್ರದ್ಧಯಾದೇವೋ ದೇವತ್ವ ಮಶ್ನುತೇ" ಎಂಬ ಶ್ರುತಿಯ ತತ್ತ್ವರಹಸ್ಯವನ್ನು ತಿಳಿಸುತ್ತದೆ. ಈ ಅರ್ಥಗಳೆಲ್ಲಾ ಶ್ರೀ ಚತುಶ್ಶ್ಲೋಕೀಭಾಷ್ಯದಲ್ಲಿ ಚಿರಪರಿಚಯ ಮಾಡಿದವರಿಗೆ ಸುಗಮವೆಂಬುದು ಆಚಾರ್ಯ ಶ್ರೀ ಸೂಕ್ತಿಗಳ ಹೃದಯ ಸರ್ವಸ್ವ

ಅಧಿಕಾರದಸಾರಾರ್ಥ.

ಶ್ರಿಯಃ ಪತಿಯಾದ ನಾರಾಯಣನೇ ಪರ ದೇವತೆ ಎಂಬುದನ್ನು **"ವಾದಿಯರ್ ಮುನ್ನುಂ"** ಎಂಬ ಪಾಶುರದಿಂದ ಆಚಾರ್ಯರು ಸಂಗ್ರಹಿಸುತ್ತಾರೆ **ವಾದಿಯರ್**—ದುರ್ವಾದಿಗಳು **ಮುನ್ನುಂ ತರುಕ್ಕಚ್ಚೆರುಕ್ಕಿಲ್** ಸ್ಥಿರವಾದ ಅಂದರೆ ತಡೆಯಲಾಗದ ತರ್ಕ ಮೂಲವಾದ ಗರ್ವದಿಂದ (ತೃತೀಯಾರ್ಥೇಸಪ್ತಮೀ), **ಮರೈಕುಲೈಯ**– ವೇದಗಳು ನಶಿಸು ಹೋಗವಂತೆ, (ಸ್ವಾರ್ಥ ಸಮರ್ಥನಾಶಕ್ತಿ ಇಲ್ಲದೆ ಇರುವಂತೆ), **ಶಾದು ಜನಂಗಳ್**– ತರ್ಕ ಪರಿಶ್ರಮವಿಲ್ಲದ ಪರಮಾಸ್ತಿಕ ಭಗವದ್ಭಕ್ತರು **ಅಡಂಗ ನಡುಂಗ**–ಎಲ್ಲರೂ ಭಯದಿಂದ ನಡುಗುವಂತೆ,**ತನಿತ್ತನಿಯೋ ಆದಿ ಎನ ವಹೈ**–ಪರವಾದಿಗಳು, ಚತುರ್ಮುಖ ಬ್ರಹ್ಮನೇ ಜಗತ್ಕಾರಣನು, ರುದ್ರನೇ ಜಗತ್ಕಾರಣನು, ಇಂದ್ರನೇ ಜಗತ್ಕಾರಣನು ಇತ್ಯಾದಿಯಾಗಿ ಹೇಳದೆ ಇರುವಂತೆ **ಆರಣದೇಶಿಕರ್** ವೇದಾಂತೋಪದೇಶವನ್ನು ಮಾಡಿದ ನಮ್ಮ ಆಚಾರ್ಯರ ಗಳು, **ನಮ್** ನಮ್ಮ, (ಪರತತ್ತ್ವವೆಂದು ಸರ್ವ ಶಾಸ್ತ್ರ ಪ್ರಸಿದ್ಧವಾದ), **ಪೋದು**– ಪುಷ್ಪದಲ್ಲಿ (ತಾಮರೆಪುಷ್ಪದಲ್ಲಿ ಎಂದರ್ಥ) **ಅಮರುಮ್**–ನಿತ್ಯಸಾನಿಧ್ಯವನ್ನು ಮಾಡಿಕೊಂಡಿರುವ, **ತಿರು**–ಲಕ್ಷ್ಮಿಯಾದ, **ಮಾದುಡನ್**– ಯುವತಿಯೊಡಗೂಡಿದ ನಿತ್ಯ ಯೌವನ ಶಾಲಿನಿಯಾದ ಲಕ್ಷ್ಮೀಯಿಂದ ಕೂಡಿದ ವೆಂದರ್ಥ. **ನಿನ್ರ** – ಸರ್ವಕಾಲವಲ್ಲಿಯೂ ಸರ್ವರಿಗೂ ಪ್ರಾಪ್ಯರೂ ಶರಣ್ಯರೂ ಆಗಿರುವ **ಪುರಾಣ**

---

1) ಶ್ರೀ ಸ್ತುತಿ (ಶ್ಲೋಕ–7) ಭಗವಂತನು ಮಹಾಲಕ್ಷ್ಮಿಯೊಡನೆ ಪಗಡೆ ಯಾಡುತ್ತಿದ್ದಾನೆ ಆಗ ಅವರುಗಳ ಸುತ್ತಲೂ ನಿತ್ಯಸೂರಿಗಳ ಸಮೂಹದೊಡನೆ ವೇದಗಳೂ ಆಟವನ್ನು ನೋಡುತ್ತಿವೆ. ಪಗಡೆ ಯಾಟದ ಹಲಗೆಯಲ್ಲಿ ಬಿಳಿಪು, ಕೆಂಪು ಮತ್ತು ಕಪ್ಪು ಬಣ್ಣಗಳ ಕೂಡಿವೆ ಚತುರ್ಮುಖ ಬ್ರಹ್ಮ ರುದ್ರ ಇಂದ್ರ ಮೊದಲಾದವರು ಪಗಡೆ ಕಾಯಿಗಳು ಲಕ್ಷ್ಮೀ ನಾರಾಯಣ ಇವರಿಬ್ಬರೂ ಆ ಕಾಯಿಗಳನ್ನು ಆಯಾಯಾ ಘಟ್ಟಗಳಲ್ಲಿ ಆಟದ ನಿಯಮಗಳನ್ನನುಸರಿಸಿ ನಡೆಸುತ್ತಾರೆ ಇದು ವಿಭ್ರಮದ್ಯೂತ

ನೈಯೇ— ಬ್ರಹ್ಮಾದಿಗಳ ಹಾಗೆ ಸೃಷ್ಟಿಸಲ್ಪಡದವನಾಗಿ ಪುರಾತನನಾದ— ಅನಾದ್ಯನಂತ ಕಾಲಗಳಲ್ಲಿಯೂ ಯೌವನದಿಂದ ಕೂಡಿದ, "ತ್ವಮಾದಿ ದೇವಃ ಪುರುಷಃ ಪುರಾಣಃ" ಎಂದು ಹೇಳಲ್ಪಡುವ ಪುರಾಣ ಪುರುಷನನ್ನೇ **ಶಾಟ್ರೆನರ್**–ಜಗತ್ಕಾರಣವಾದ ಪರದೇವತೆಯೆಂದು,

ಸತ್ಯಂ ಸತ್ಯಂ ಪುನಸ್ಸತ್ಯಂ ಉದ್ಧೃತ್ಯ ಭುಜಮುಚ್ಯತೇ ।
ವೇದಾಚ್ಛಾಸ್ತ್ರಂ ಪರಂ ನಾಸ್ತಿ ನ ದೈವಂ ಕೇಶವಾತ್ಪರಮ್ ॥

ಎಂಬಂತೆ ಕೈಯೆತ್ತಿ ಪ್ರತಿಜ್ಞೆ ಮಾಡಿದ್ದಾರೆ ಬೇರೆ ಬೇರೆಯಾಗಿ ಬ್ರಹ್ಮರುದ್ರೇಂದ್ರಾದಿಗಳನ್ನು **'ಆದಿ'** ಜಗತ್ಕಾರಣವೆಂದು ಹೇಳದೆ ಲಕ್ಷ್ಮೀ ಪತಿಯಾಗಿ ಪ್ರಸಿದ್ಧಿ ಪಡೆದ ಪುರಾಣ ಪುರುಷನೇ "ಆದಿ" ಎಂದು ಹೇಳಿದ್ದಾರೆ ಆದಿಯಾದವನೇ ಪರದೇವತೆ ಎಂಬದು ಸರ್ವಸಿದ್ಧ.

ಈ ಪರದೇವತಾ ಪಾರಮಾರ್ಥ್ಯ ಜ್ಞಾನವು ಕೋಟಿಯಲ್ಲಿ ಒಬ್ಬನಿಗೆ ಬಂದರೂ ಸಾಕು. ನಮ್ಮ ಪರಿಶ್ರಮವು ಸಫಲವೆಂದು **ಜನಪದ ಭುವನಾದಿಸ್ಥಾನ**–ಎಂದಾರಂಭಿಸಿ ಅಧಿಕಾರಾರ್ಥವನ್ನು ಆಚಾರ್ಯರು ನಿಗಮಿಸುತ್ತಾರೆ. ಅದಾಗಿ **ಅವಿದ್ಯಾದಂತುರೇ** –ಅವಿದ್ಯೆಯಿಂದ ವಿಷಮಿತವಾದ **ಜಗತಿ**– ಈ ಲೋಕದಲ್ಲಿ, **ವಿಕಃ**– ಕೋಟಿಯಲ್ಲಿ ಒಬ್ಬ **ಜಂತುಃ**–ಪುಣ್ಯವಂತವಾದ ಜನ್ಮವನ್ನು, ಪಡೆದವನು **ಪರಿಚಿತನಿಗಮಾಂತಃ** – ಆಚಾರ್ಯಾನುಗ್ರಹದಿಂದ ವೇದಾಂತ ಜ್ಞಾನವನ್ನು ಪಡೆದು, ಅದರಲ್ಲಿ ಬಹು ಪರಿಶ್ರಮವುಳ್ಳವನಾಗಿ, **ಜನಪದಃ** –ದೇಶ, **ಭುವನ**–ಲೋಕ **ಆದಿ**–ಅಂಡಾದಿಗಳು, **ಸ್ಥಾನ**– (ದೇಶ, ಲೋಕ, ಅಂಡಾದಿಗಳು) ಮಾನಸ್ಥಾನಗಳಾಗಿ, ಅವುಗಳಲ್ಲಿ **ಜೈತ್ರಾಸನಸ್ಥೇಷು**–ಸಿಂಹಾಸನಗಳಲ್ಲಿರುವ **ಈಶ್ವರೇಷು**- ದೇಶಾಧಿಪ, ಲೋಕಾಧಿಪ, ಅಂಡಾಧಿಪತಿಗಳು, **ಅನುಗತನಿಜವಾರ್ತಂ ಯಥಾತಥಾ** ತಮ್ಮ ಚರಿತ್ರೆಗಳೂ ತಮ್ಮನ್ನು ಹಿಂಬಾಲಿಸಿ ನಷ್ಟವಾಗುವಂತೆ **ನಶ್ವರೇಷು (ಸತ್ಸು)**– ಮರಣ ಹೊಂದಲು, **ಶ್ರೀ ಸಹಾಯಂ**– ಲಕ್ಷ್ಮೀ ಸಹಾಯನಾದ ನಾರಾಯಣನನ್ನು, **ಗತಿಂ**- ಪ್ರಾಪ್ಯನನ್ನಾಗಿಯೂ ಪ್ರಾಪಕನನ್ನಾಗಿಯೂ **ಪಶ್ಯತಿ**– ಸಾಕ್ಷಾತ್ಕರಿಸುತ್ತಾನೆ ಅಂದರೆ **ಲೋಕಾಧಿಪತಿಗಳು**, ದೇಶಾಧಿಪತಿಗಳು ಬ್ರಹ್ಮ ರುದ್ರೇಂದ್ರಾದಿ ಅಂಡಾಧಿಪತಿಗಳು ಶಾಶ್ವತರಲ್ಲ ಎಲ್ಲರೂ ಒಂದಾನೊಂದು ಕಾಲದಲ್ಲಿ ನಷ್ಟರಾಗಿ ಹೋಗುತ್ತಾರೆ ನಿತ್ಯರಾದ ಲಕ್ಷ್ಮೀನಾರಾಯಣರೇ ನಮಗೆ ಪ್ರಾಪಕರು ಅಂದರೆ ಉಪಾಯ, ಮತ್ತು ಪ್ರಾಪ್ಯರು, **ಎಂಬ** ಈ ವಿಷಯಗಳನ್ನು ವೇದಾಂತ ಪರಿಶ್ರಮವುಳ್ಳ ಒಬ್ಬ ಮಹಾತ್ಮನು ತಿಳಿದುಕೊಳ್ಳುತ್ತಾನೆ

ಈ ಅಧಿಕಾರದಲ್ಲಿ ಲಕ್ಷ್ಮೀ ವಿಶಿಷ್ಟ ನಾರಾಯಣನೇ ಪರದೇವತೆ ಎಂಬದು ಪರಮತಾತ್ಪರ್ಯ. ಅದಾಗಿ ಆರಂಭದಲ್ಲಿ **'ಶ್ರೀಮನ್ನಾರಾಯಣೋನಃ ಪತಿಃ'** ಎಂದು ಆಚಾರ್ಯರು ಉಪಕ್ರಮಿಸಿದ್ದಾರೆ ಮಧ್ಯದಲ್ಲಿ ದ್ವಯ ಮಂತ್ರದಲ್ಲ ಸವಿಶೇಷಣ ನಾರಾಯಣ ಶಬ್ದದಿಂದ ಪರದೇವತಾ ಪಾರಮಾರ್ಥ್ಯವನ್ನು ನಿರ್ಣಯಿಸಿ, ಆ ನಿರ್ಣಯಕ್ಕನುಗುಣವಾಗಿ, ಪರಮಪುರುಷಾರ್ಥಾಪೇಕ್ಷೆಯುಳ್ಳವರಿಗೆ, ಪಾರಮೈಕಾಂತ್ಯವು ಪರಿಪಾಲಿಸಲ್ಪಡಬೇಕೆಂದು ಅನುಶಾಸನ ಮಾಡಿರುತ್ತಾರೆ. ಕೊನೆಯಲ್ಲಿ "ಶ್ವಾರುನಮುಕ್ಕ" ಇತ್ಯಾದಿ ದ್ರಮಿಡೋಪನಿಷತ ಪಾಶುರಗಳನ್ನು ಉದಾಹರಿಸಿ,

---

ಲೀಲಾ ರೂಪವಾದದ್ದು ಎಂದರ್ಥ ಇದರ ತಾತ್ಪರ್ಯವೆನೆಂದರೆ ಭಗವಂತನು ಮಹಾಲಕ್ಷ್ಮಿಯೊಡ ಗೂಡಿ ಲೀಲಾರೂಪವಾದ ಜಗದ್ವ್ಯಾಪಾರವನ್ನು ಮಾಡುತ್ತಾನೆ ಬ್ರಹ್ಮ ರುದ್ರೇಂದ್ರಾದಿ ದೇವ ವರ್ಗಗಳೂ, ಮನುಷ್ಯವರ್ಗವೂ, ತಿರ್ಯಕ್ ಸ್ಥಾವರಗಳೂ ಪ್ರಕೃತಿ ಪರವಶರಾಗಿ ಅವರವರ ಕರ್ಮಾನುಗುಣವಾಗಿ ಸತ್ವ ರಜಸ್ತಮೋಮಯಾತ್ಮಕವಾದ ಶರೀರೇಂದ್ರಿಯಗಳನ್ನು ಪಡೆದವರಾಗಿ ಸೃಷ್ಟ್ಯಾದಿ ವ್ಯಾಪಾರಕ್ಕೆ ವಿಷಯ ಭೂತರಾಗುತ್ತಾರೆ ಅಂದರೆ ಜೀವವರ್ಗಗಳಿಗೆ ಅವರವರ ಕರ್ಮಾನುಗುಣವಾದ ಶರೀರೇಂದ್ರಿಯಗಳನ್ನು ಕೊಟ್ಟು ಸೃಷ್ಟಿಸಿ ವೇದಶಾಸ್ತ್ರಗಳನ್ನು ಉಪದೇಶಿಸಿ ತನ್ಮೂಲಕ ಆತ್ಮ ಕ್ಷೇಮವನ್ನು ಸಂಪಾದಿಸಿಕೊಳ್ಳುವ ಮಾರ್ಗವನ್ನು ತೋರಿಸುತ್ತಾನೆಂಬುದು ತಾತ್ಪರ್ಯ. ಈ ವ್ಯಾಪರವನ್ನು ಲಕ್ಷ್ಮೀ ವಿಶಿಷ್ಟ ನಾರಾಯಣನು ನಡೆಸುತ್ತಾನೆ ಇಬ್ಬರಿಗೂ ಇದರಲ್ಲಿ ಅನ್ವಯವುಂಟು, ಎಂಬುದು ಘಟ್ಟಿ ತಾತ್ಪರ್ಯ.


"ಇದ್ದಂಪತಿಹಳೇ ಪ್ರಾಪ್ಯರುಮ್, ಶರಣ್ಯರುಮ್" ಎಂದು ಉಪಸಂಹಾರ ಮಾಡಿ, ಪೂರ್ವಾಧಿಕಾರದಲ್ಲಿ ಉದಾಹರಿಸಿದ ಪರಾಶರ ಪರಾಂಕುಶ ಪ್ರಬಂಧಗಳನ್ನು ಪುನಃ ಇಲ್ಲಿ ಉದಾಹರಿಸಿರುವುದರಿಂದ ಯಥೋಕ್ತ ಪರದೇವತಾ ಪಾರಮಾರ್ಥ್ಯವನ್ನು ದೃಢೀಕರಿಸಿದ್ದಾರೆ. "ಚತುಶ್ಶ್ಲೋಕೀ ಪ್ರಬಂಧದಲ್ಲಿ ಸಾಂಪ್ರದಾಯಿಕಾರ್ಥವನ್ನು ಪರಪಕ್ಷ ಪ್ರತಿಕ್ಷೇಪ ಪೂರ್ವಕವಾಗಿ ಎತ್ತಿ ತೋರಿಸಿ ಕೊನೆಯಲ್ಲಿ ಸಂಗ್ರಹ ಪಾಶುರದಲ್ಲಿ **"ತಿರುವಮಾದುಡನ್ ನಿನ್ರ ಪುರಾಣನ್"** ಎಂದು ಲಕ್ಷ್ಮೀ ವಿಶಿಷ್ಟನು ಆದಿ ಕಾರಣನೆಂದು ತಿಳಿಸಿ **"ಪರಿಚಿತನಿಗಮಾಂತಃ ಪಶ್ಯತಿ ಶ್ರೀ ಸಹಾಯಮ್"** ಇತ್ಯಾದಿಯಾಗಿ ಅದೇ ಅರ್ಥವನ್ನು ವೇದಾಂತದಲ್ಲಿ ಚಿರ ಪರಿಚಯಮಾಡಿದವರಿಗೆ ತಿಳಿಯುತ್ತದೆ ಎಂದು ಹೇಳಿರುವುದರಿಂದಲೂ "**ಶ್ರಿಯಃ ಪತಿಯಾದ ನಾರಾಯಣನೇ** ಪರದೇವತೆ ಎಂಬುದು ದೃಢೀಕೃತವು ಅಭಿನ್ನನಿಮಿತ್ತೋಪಾದನತ್ವವು–ಅಂದರೆ ನಿಮಿತ್ತವು, ಉಪಾದಾನವೂ ಒಂದೇ ಎಂಬ ಬ್ರಹ್ಮ ಲಕ್ಷಣವು ಲಕ್ಷ್ಮೀ ಸಾಧಾರಣ್ಯವೆಂಬ ಅಭಿಪ್ರಾಯವನ್ನು ಚತುಶ್ಶ್ಲೋಕಿಯಲ್ಲ ಉದಾಹರಿಸಿರತ್ತಾರೆ **"ತಿರುವಮಾದುಡನ್ ನಿನ್ರ ಪುರಾಣನ್ನೈಯೇ–ಆರಣದೇಶಿಕರ್ ಶಾಟ್ರಿನರ್"** ಎಂದೂ **ಪರಿಚಿತ ನಿಗಮಾಂತಃ ಪಶ್ಯತಿ ಶ್ರೀ ಸಹಾಯಮ್"** ಎಂದೂ "ಏಷಸರ್ವಭೂತಾಂತರಾತ್ಮಾ, ಅಪಹತಪಾಪ್ಮಾ ದಿವ್ಯೋದೇವ ಏಕೋನಾರಾಯಣಃ, ಕ್ಷರಾತ್ಮಾನಾವೀಶತೇ ದೇವ ಏಕಃ, ತಂಹದೇವಮಾತ್ಮ ಬುದ್ಧಿಪ್ರಸಾದಮ್ ಯೋದೇವಾದಾಂ ನಾಮಧಾ ದೇವ ಏಕಃ, ಇತ್ಯಾದಿ ಶ್ರುತಿಗಳಲ್ಲಿ ಹೇಳಿರುವ "ದೇವ" ಶಬ್ದಕ್ಕೆ "ಶ್ರದ್ಧಯಾ ದೇವೋ ದೇವತ್ವ ಮಶ್ನುತೇ" ಎಂದು, ಜಗದ್ವ್ಯಾಪಾರಲೀಲನಾದ ದೇವನು ಶ್ರದ್ಧಯಾ–ಲಕ್ಷ್ಮಿಯೊಡಗೂಡಿ ದೇವತ್ವ ಮಶ್ನುತೇ – ಜಗದ್ವ್ಯಾಪಾರ ಲೀಲೆಯನ್ನು ಅನುಭವಿಸುತ್ತಾನೆ. ದಿವು ಕ್ರೀಡಾವಿಜಿ ಗೀಷಾ ಎಂಬ ಧಾತುವಿನಿಂದ ದೇವಶಬ್ದಕ್ಕೆ ಜಗದ್ವ್ಯಾಪಾರ ಲೀಲೆಯು ಅರ್ಥ) ಲಕ್ಷ್ಮೀಸಹಾಯಕನೇ ಹೇಳಲ್ಪಡುತ್ತಾನೆಂಬ ಹೃದಯವು ತೋರಿಸಲ್ಪಟ್ಟಿತು "ಆನೀದವಾತಂ ಸ್ವಧಯಾತದೇಕಮ್" ಎಂಬಲ್ಲಿ ಸ್ವಧಾ ಶಬ್ದವಾಚ್ಯೆಯಾದ ಲಕ್ಷ್ಮಿಯೊಡಗೂಡಿದವನು ಪರಮ ಕಾರಣವೆಂದು ಹೇಳಲ್ಪಡುತ್ತದೆ ಎಂದು "ಶ್ರೀಷ್ಟಚ್ಚ"–ಎಂಬ ಬ್ರಹ್ಮ ಸೂತ್ರದ ಶ್ರುತ ಪ್ರಕಾಶಿಕ ವ್ಯಾಖ್ಯಾನದಲ್ಲಿ ಸ್ಪಷ್ಟ

ಇತಿ ಶ್ರೀ ನಿಗಮಾಂತಮಹಾದೇಶಿಕಾನುಗ್ರಹೀತವಾದ ಪರದೇವತಾ ಪಾರಮಾರ್ಥ್ಯಾಧಿಕಾರಕ್ಕೆ

"ಸಾರಚಂದ್ರಿಕಾ" ವ್ಯಾಖ್ಯಾನವು ಸಮಾಪ್ತ.

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರಿಯೈ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ



ಮುಮುಕ್ಷುತ್ವಾಧಿಕಾರಃ

**ಕಾಲಾವರ್ತಾನ್ ಪ್ರಕೃತಿವಿಕೃತೀಃ ಕಾಮಭೋಗೇಷು ದೋಷಾ
ನ್ನಾಲಾಗರ್ತ ಪ್ರತಿಮದುರಿತೋದರ್ಕದುಃಖಾನುಭೂತಿಂ||
ಯಾಥಾತಥ್ಯಂ ಸ್ವಪರನಿಯತಂ ಯಚ್ಚದಿವ್ಯಂ ಪದಂತ
ತ್ಕಾಂಕ್ಷಾಕಲ್ಪಂ ವಪುರಪಿ ವಿದನ್ಕಸ್ತಿತಿಕ್ಷೇತ ಬನ್ಧಮ್ ||೧೮||**

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ
ಸಾರಚಂದ್ರಿಕಾ ವ್ಯಾಖ್ಯಾನ

ಮುಮುಕ್ಷುತ್ವ – ಮೋಕ್ಷದಲ್ಲಿ ಆಸೆಯುಂಟಾಗುವುದಕ್ಕೆ ಹಂತಗಳು :–

ಹೀಗೆ ಬದ್ಧಜೀವಿಯು ಸ್ವಾಭಾವಿಕ ಸರ್ವವಿಧ ಬಂಧುವಾದ ಭಗವಂತನ ಪರಮಕಾರುಣ್ಯದಿಂದ, ಲಬ್ಧವಾದ ಸತ್ಸಂ ಸಮಯದಲ್ಲಿ ಯಾದೃಚ್ಛಿಕ ಸುಕೃತಗಳಿಂದ ಘಟಿತನಾಗಿ, ಜಾಯಮಾನ ಕಟಾಕ್ಷದಿಂದ ಸಂಪಾದಿಸಲ್ಪಟ್ಟ ಸತ್ಸಂ ಗಾದಿಗಳಿಂದುಂಟಾದ **ಸಾತ್ತ್ವಿಕ** ಬುದ್ಧಿಯನ್ನು ಹೊಂದಿ, ಮಹತ್ತರವಾದ ಆಚಾರ್ಯ ಕಟಾಕ್ಷರೂಪ ದಯಾ**ಮೃ**ತ ಪೂರಿತನಾಗಿ ಶಾರೀರಕ ನ್ಯಾಯಕಲಾಪಗಳಿಂದಲೂ ಉಪಬೃಂಹಣಗಳಿಂದಲೂ ಉಪನಿಷತ್ತುಗಳ ಪರಮ ತಾತ್ಪರ್ಯ ಗಳನ್ನು ನಿಷ್ಪ್ರಕಂಪ್ಯವಾಗಿ ತಿಳಿದುಕೊಳ್ಳುತ್ತಾನೆ. ಅನಂತರ ನ್ಯಾಸೋಪಾಸನಾತ್ಮಕ ಸ್ವಾಧಿಕಾರೋಚಿತವಾದ ಬ್ರಹ್ಮ ವಿದ್ಯೆಯನ್ನು ಅನುಷ್ಠಿಸಲು ಅಂತರಂಗ ಸಹಕಾರಿಯಾದ ಔಪದೇಶಿಕ ರಹಸ್ಯಸಾರಾರ್ಥ ನಿರ್ಣಯವನ್ನು ಅಪೇಕ್ಷಿಸು ಪವನಾಗಿ ಪರಮಕಾರುಣಿಕರಾದ ಸದಾಚಾರ್ಯರ ಕಟಾಕ್ಷಗಳಿಂದ ವೀಕ್ಷಿತನಾಗಿ ಆ ಆಚಾರ್ಯರಿಗೆ ಅನುಕೂಲ ನಾಗಿ ಅವರ ಚರಣಪರಿಚರ್ಯಾಪರಾಯಣನಾಗಿ, ಅವರ ಉಪದೇಶಗಳಿಂದ, ಇತರ ಎಲ್ಲಾ ರಹಸ್ಯಮಂತ್ರಗಳಿಗಿಂ ತಲೂ ಉತ್ಕೃಷ್ಟಗಳಾದ ರಹಸ್ಯತ್ರಯ ಸಾರಾರ್ಥಗಳನ್ನು ಪಡೆದುಕೊಳ್ಳುತ್ತಾನೆ ಹಾಗೆ ಅವರ ಉಪದೇಶಗಳಿಂದ ತಿಳಿಯಲ್ಪಟ್ಟ ಆರು ಅರ್ಥಗಳಲ್ಲಿ, ಪ್ರಧಾನ ಪ್ರತಿ ತಂತ್ರಾರ್ಥವಾದ ಜಗದೀಶ್ವರರ ಶರೀರಾತ್ಮಭಾವವನ್ನು ಮೊದಲು ತಿಳಿದುಕೊಂಡು, ಅದನ್ನು ಉಪಜೀವಿಸಿ ಬರುವ ಅರ್ಥಪಂಚಕವನ್ನು ರಹಸ್ಯತ್ರಯಗಳಲ್ಲಿ ಯಥಾಸ್ಥಾನ ತಿಳಿದು ಕೊಂಡು, ಅದರಲ್ಲಿಯೂ ಶಾರೀರಕಾದಿ ಗ್ರಂಥಗಳಲ್ಲಿ ಶಿಕ್ಷಿತವಾದ ತತ್ತ್ವತ್ರಯ ವಿವೇಕವನ್ನು ರಹಸ್ಯ ಗ್ರಂಥಗಳ ಮೂಲಕವಾಗಿಯೂ ಬಹಳ ಉಪಯೋಗವೆಂದು ತಿಳಿದು ನಿಶ್ಚಯಪಡಿಸಿಕೊಳ್ಳುತ್ತಾನೆ. ಅನಂತರ ಶಾರೀರಕ ಶಾಸ್ತ್ರಗಳಲ್ಲಿ ವ್ಯಕ್ತವಾಗಿ ಹೇಳದೆ ಕೇವಲ ಉಪದೇಶ ಮಾತ್ರದಿಂದ ತಿಳಿದುಕೊಳ್ಳಲ್ಪಡತಕ್ಕಂಥ, ಶ್ರೀ ಭಾಷ್ಯಕಾ ರರ ಸತ್ಸಂಪ್ರದಾಯದಿಂದ ಬಂದ **"ಲಕ್ಷ್ಮೀ ವಿಶಿಷ್ಟ ನಾರಾಯಣನೇ ನ್ಯಾಸೋಪಾಸನಾತ್ಮಕ ಅಶೇಷ ಬ್ರಹ್ಮವಿದ್ಯಾವೇದ್ಯನೆಂಬ** ಪರದೇವತಾ ಪಾರಮಾರ್ಥ್ಯಜ್ಞಾನವನ್ನು ರಹಸ್ಯತ್ರಯ ರೂಪಕ್ಷೀರ ಸಾಗರ ದಿಂದ ಜನಿಸಿದ ಅಮೃತವೆಂಬುದಾಗಿ ಪಡೆಯುವನು ಈ ದಿವ್ಯಾಮೃತ ರೂಪವಾದ ಪರದೇವತಾಪಾರಮಾರ್ಥ್ಯ

ಜ್ಞಾನವು ಭಗವದ್ಸ್ವತ್ವಕುಳಧರವಂಶ್ಯರಾದ ಅಂದರೆ ಆ ಆಚಾರ್ಯ ಪರಂಪರೆಗೆ ಸೇರಿದ ನಮಗೆ ಕುಲಧನವೆಂದು ತಿಳಿದು ಆ ವರದೇವತೆಯ ಅನುಭವ ಪರೀವಾಹವಾದ ಸರ್ವವಿಧ ಕೈಂಕರ್ಯಗಳು ಭೋಗ್ಯವಾದುವು ಮತ್ತು ಹೃದಯಂಗಮವಾದವು ಎಂದು ನಿಶ್ಚಯಿಸಿ ಅಂಥಹ ದಿವ್ಯನಿಧಿಯನದ ಪ್ರಸಾದನ ಪ್ರಧಾನವಾದ ಬ್ರಹ್ಮ ವಿದ್ಯೆಯನ್ನು (ನ್ಯಾಸೋಪಾಸನೆಗಳನ್ನು) ಅನುಷ್ಠಿಸಲು ತ್ವರೆಯುಳ್ಳವನಾಗುತ್ತಾನೆ. ಅನಂತರ ಸ್ವಾಧಿಕಾರೋಚಿತವಾದ ಆ ಬ್ರಹ್ಮ ವಿದ್ಯೆಯನ್ನು (ನ್ಯಾಸ ಅಥವಾ ಉಪಾಸನೆಯನ್ನು) ಅನುಷ್ಠಿಸಲು ಯಾವ ಅಡಚಣೆಗಳೂ ಬಾರದಂತೆ ಇರಲು, ಪ್ರವೃತ್ತಿ ಧರ್ಮಗಳಲ್ಲಿ ವಿರಕ್ತನಾಗಿ ನಿವೃತ್ತಿ ಧರ್ಮಗಳಲ್ಲಿ ಪ್ರವೃತ್ತನಾಗುತ್ತಾನೆ. ಆಗ ಪರಮಶೇಷಿ ಕೈಂಕರ್ಯ ರಸಿಕನಾದ ಈ ಬದ್ಧಜೀವಿಗೆ, ಪರಮ ಪುರುಷಾರ್ಥ ಕಲ್ಪತರುವಿಗೆ ಅಂಕುರ ರೂಪಗಳಾಗಿ ಈ ನಿವೃತ್ತಿ ಧರ್ಮಗಳು ಬ್ರಹ್ಮವಿದ್ಯೆಯನ್ನು ಅನುಷ್ಠಿಸಲು ಅಧಿಕಾರವನ್ನುಂಟು ಮಾಡುತ್ತವೆ. ಅಂದರೆ ಮುಮುಕ್ಷುತ್ವವನ್ನು ಸಂಪಾದಿಸಿಕೊಡುತ್ತವೆಯೆಂದರ್ಥ

ಸ್ವತಂತ್ರವಾದ ನ್ಯಾಸವಿದ್ಯೆಯನ್ನು ಅನುಷ್ಠಿಸಲು ಪ್ರವೃತ್ತನಾದವನಿಗೆ, ಆ ಅಧಿಕಾರವನ್ನು ಹೊಂದಲು ನಿವೃತ್ತಿ ಧರ್ಮಗಳನ್ನು ಅನುಷ್ಠಿಸಬೇಕೆಂದು ಹೇಳುವುದು ಸರಿಯೇ ? ಪುರುಷಕಾರ ಪ್ರಪತ್ತಿಯಿಂದಲೇ ಮೋಕ್ಷಾರ್ಥಶರಣಾಗತ್ಯನುಷ್ಠಾನಕ್ಕೆ ಅಧಿಕಾರವು ಲಭಿಸುತ್ತದಯಲ್ಲವೇ, ಹಾಗಿರುವಾಗ ನಿವೃತ್ತಿ ಧರ್ಮಾಚರಣೆಯು ಬೇಕೇ, ಎಂಬ ಸಂಶಯವು ಉದಯಿಸುತ್ತದೆ ಇದಕ್ಕೆ ಸಮಾಧಾನವೇನೆಂದರೆ ಅನಾದಿಯಾದ ಸಂಸಾರದಲ್ಲಿ ಪುರುಷಕಾರ ಪ್ರಪತ್ತಿಯನ್ನು ಅನುಷ್ಠಿಸಲು ಈ ಜನ್ಮದಲ್ಲಿ ಇಲ್ಲಿಯವರೆಗೆ ವಿಳಂಬವು ಏರ್ಪಟ್ಟಿರುವುದು ಪ್ರತ್ಯಕ್ಷ ಸಿದ್ಧ ಇದಕ್ಕೆ ಪ್ರತಿಕೂಲವಾದ ಪ್ರಕೃಷ್ಟಪಾಪವೇ ಕಾರಣ ಆ ಪಾಪದ ಪ್ರಶಮನವೂ "ಧರ್ಮೇಣ ಪಾಪಮಪನುದತಿ" ಧರ್ಮಾನುಷ್ಠಾನದಿಂದ ಪಾಪವನ್ನು ಹೋಗಲಾಡಿಸಿಕೊಳ್ಳುತ್ತಾನೆಂಬ ಶ್ರುತಿ ಪ್ರತಿಪನ್ನವಾದ ನಿವೃತ್ತಿ ಧರ್ಮಾಚರಣೆಯಿಂದಲೇ ಸಾಧ್ಯ ಇಯಾಂಸ್ತು ವಿಶೇಷಃ - ಉಪಾಸನಾಧಿಕಾರವು ಅನಭಿಸಂಹಿತಫಲ ಸಂಗಕರ್ತೃತ್ವಾದಿ ತ್ಯಾಗ ಪೂರ್ವಕವಾದ ಕರ್ಮಯೋಗ ಜ್ಞಾನಯೋಗಗಳಿಂದಲೇ ಸಂಪಾದ್ಯ - ನ್ಯಾಸವಿದ್ಯಾಧಿಕಾರವು - ಯಥಾಬಲ ಆತ್ಮವಂಚನೆ ಇಲ್ಲದೆ ಸರ್ವಶಾಸ್ತ್ರೀಯ ನಿಯಮಾನುವರ್ತನದಿಂದ ಕೂಡಿ, ಫಲಸಂಗ ಕರ್ತೃತ್ವಾದಿ ತ್ಯಾಗದಿಂದ ಕೂಡಿದ ವರ್ಣಾಶ್ರಮ ಧರ್ಮಾನುಷ್ಠಾನ ಪೂರ್ವಕ ಪರಮಶೇಷಿಚಿತ್ತರಂಜನ ಪ್ರದಕ್ಷಿಣ ಪ್ರಣಾಮ ಸಂಕೀರ್ತನ ಧ್ಯಾನಜಪಾದಿಗಳಿಂದ ಸಂಪಾದಿಸಲ್ಪಡುತ್ತದೆ. ಈ ಅಂಶವು ಶಾಸ್ತ್ರೀಯ ನಿಯಮನಾಧಿಕಾರದಲ್ಲಿ **"ಇಂದನಿಯಮಾನುವರ್ತನಂ, ಪೂರ್ಣೋಪಾಯರಲ್ಲಾದವಧಿಕಾರಿಹಳುಕ್ಕು ಉಪಾಯ ಪೂರ್ತಿ ವಿರೋಧಿಯೈ ಶಮಿಪ್ಪಿತ್ತುಕ್ಕೊಂಡು ಭಗವತ್ಪ್ರಸಾದನಮಾಯಿರುಕ್ಕುಮ್"** ಎಂದು ಸ್ಪಷ್ಟವಾಗಿ ಅನುಗ್ರಹಿಸಲ್ಪಟ್ಟಿದೆ. ಶಾಸ್ತ್ರೀಯ ನಿಯಮನಾಧಿಕಾರವು ಪ್ರಪನ್ನೈಕಾಂತ್ಯವೆಂಬುದು ನಂಶಯವಿಲ್ಲದುದು.

ವಸ್ತುತಃ ಪುರುಷಕಾರ ಪ್ರಪದನವು ಭಕ್ತಿ ಪ್ರಪತ್ತಿಎಂಬ ಎರಡು ವಿದ್ಯೆಗಳಿಗೂ ಅಧಿಕಾರವನ್ನು ಪೂರ್ತಿಗೊಳಿಸುತ್ತದೆ. ಭಕ್ತಿಯೋಗನಿಷ್ಠನು ಅಂಗ ಪ್ರಪತ್ತಿಯನ್ನು ಅನುಷ್ಠಿಸಬೇಕು. ಭಗವತ್ಪ್ರಪತ್ತಿಯನ್ನು ಅನುಷ್ಠಿಸಲು ತಡೆಯಾದ ಉಪಾಯವಿರೋಧಿ ಪಾಪವು ಪುರುಷಕಾರ ಪ್ರಪತ್ತಿಯಿಂದ ನಿವರ್ತಿಸಲ್ಪಡುತ್ತದೆ, "ಪ್ರಾಯಶ್ಚಿತ್ತ ಪ್ರಸಂಗೇತು ಸರ್ವಪಾಪ ಸಮುದ್ಭವೇ । ಮಾಮೇಕಾಂದೇವ ದೇವಸ್ಯ ಮಹಿಷೀಂ ಶ್ರಯಣಂ ಶ್ರಯೇತ್ ॥" "ಎಂಬ ವಚನವು ಸ್ವತಂತ್ರಾಂಗ ಪ್ರಪತ್ಯುಭಯಸಾಧಾರಣ " ಸರ್ವಪಾಪ ಪ್ರಾಯಶ್ಚಿತ್ತಗಳು ಭಕ್ತಿ ಪ್ರಪತ್ತಿಗಳೆಂದು ಭಾಷ್ಯಾದಿಗಳಲ್ಲಿ ನಿರ್ಣೀತ ತದನುಷ್ಠಾನ ಪ್ರಸಂಗದಲ್ಲಿ ಶ್ರೀ ಪ್ರಪತ್ತಿಯೂ ಸ್ವತಂತ್ರಾಂಗ ಪ್ರಪತ್ತಿಗಳಿಗೆ ಪೂರಕವೆಂಬುದು ಶ್ಲೋಕತಾತ್ಪರ್ಯ "ಆತ್ಮವಿದ್ಯಾಚದೇವಿತ್ವಂ ವಿಮುಕ್ತಿ ಫಲದಾಯಿನೀ", ಎಂಬಲ್ಲಿ ಈ ಅಂಶವು ಅಭಿಪ್ರೇತವಾಗಿದೆ. ಯಜ್ಞವಿದ್ಯಾ ಮಹಾವಿದ್ಯಾ ಗುಹ್ಯವಿದ್ಯಾ ಎಂದು ಎಲ್ಲಾ ವಿದ್ಯೆಗಳೂ ಲಕ್ಷ್ಮಿಗೆ ಅಧೀನ. ಅಂದರೆ ಅವಳ ಕಟಾಕ್ಷದಿಂದ ಲಭಿಸತಕ್ಕುವು. ಹಾಗೆಯೇ ತತ್ವಜ್ಞಾನ ಸಾಮಾನ್ಯವೂ ಲಕ್ಷ್ಮಿಯ ಅನುಗ್ರಹ

ದಿಂದಲೇ ಸಂಪಾದ್ಯವೆಂಬದು ನಿಶ್ಚಯಿಸಲ್ಪಡುತ್ತದೆ ಈ ಅಂಶವು ಸ್ಥಿರೀಕರಣ ಭಾಗೋಪಕ್ರಮದಲ್ಲಿ "**ಅಸ್ತುವೇ ಎನ್ನಪೇಕ್ಷಿತ್ತಾಲ್ ಅಸ್ತುತೇತಯ್ಯೇವ ಸರ್ವಂಸಂಪತ್ಸ್ಯತೇ, ಎನ್‌ಹಿರತಿರುವುಹಪ್ಪಾಶುರವ್**"ಎಂಬಶ್ರೀ ಸೂಕ್ತಿಯಲ್ಲಿ ವ್ಯಕ್ತವು ಶ್ರೀಮತ್ತತ್ವಮುಕ್ತಾಕಲಾಪದ ಆರಂಭದಲ್ಲಿಯೂ (1) **ಲಕ್ಷ್ಮೀ ನೇತ್ರೋತ್ಪಲಶ್ರೀ :** ಇತ್ಯಾದಿಗಳಲ್ಲಿ ಲಕ್ಷ್ಮಿಯು ಕೀರ್ತನವು ಸರ್ವವಿದ್ಯೆಗಳೂ ಅವಳ ಅಧೀನವೆಂಬ. ಅಭಿಪ್ರಾಯದಿಂದ ಆಚಾರ್ಯರಿಂದ ಅನುಷ್ಠಿಸಲ್ಪಟ್ಟಿದೆ. ತಥಾಚ, ಪುರುಷಕಾರ, ಪ್ರಪದನಾನಂತರ ಬ್ರಹ್ಮ ವಿದ್ಯಾವಿರೋಧಿ ಪಾಪಗಳನ್ನು **ಹೋಗಲಾಡಿಸಲು ಬೇರೆ** ಯಾವುದೂ ಅಪೇಕ್ಷೆಯಿಲ್ಲ ಸಪರಿಕರ ಪುರುಷಕಾರ ಪ್ರಪತ್ತಿಯು ನಿಷ್ಪತ್ತಿಗೂ (ಸಿದ್ಧಿಗೂ), ಅಕಿಂಚನಾಧಿಕಾರಿಗೂ ಸಹ ಸ್ವಾಧಿಕಾರೋಚಿತವಾದ ಪುರುಷಕಾರ ಪ್ರಪತ್ತಿ ವಿರೋಧಿಯಾದ ಭಗವನ್ನಿಗ್ರಹ ರೂಪಪಾಪವು• ಸದಾಚಾರ್ಯರ ಅನುಗ್ರಹದ ಹಾಗೆ ಪರಮೈಕಾಂತ್ಯನುರೂಪವಾದ ನಿವೃತ್ತಿ ಧರ್ಮಾನುಷ್ಠಾನದಿಂದಲೇ ಹೋಗುತ್ತದೆಯಾದ್ದರಿಂದ ಅಂತಹ ನಿವೃತ್ತಿ ಧರ್ಮಗಳನ್ನು ಅವಶ್ಯ ಅನುಷ್ಠಿಸಬೇಕೆಂದು ಆಚಾರ್ಯರ ಹೃದಯ ಎಲ್ಲಾ ನಿವೃತ್ತಿ ಧರ್ಮಗಳೂ ಶ್ರೀ ಮನ್ಮೂಲಮಂತ್ರದಿಂದ ನಿಶ್ಚಯವಾದ ಸ್ವರೂಪಯಾಥಾತ್ಮ್ಯಜ್ಞಾನನ್ನು ತಿಳಿದು ಅನುಷ್ಠಿಸಬೇಕೆಂದು ಹೇಳಿರುವುದರಿಂದ ರಹಸ್ಯತ್ರಯಾರ್ಥ ವ್ಯಾಖ್ಯಾನವನ್ನು ಆಚಾರ್ಯರು ಸಿಬಂಧಿಸಿರುವುದು ಈ ಅಧಿಕಾರಕ್ಕೆ ಸಂಗತವಾಗಿದೆ

ಈ ಅಭಿಪ್ರಾಯದಿಂದ ಆಚಾರ್ಯರು ಈ ಅಧಿಕಾರದಲ್ಲಿ **ಕಾಲಾವರ್ತಾನ್** ಎಂದಾರಂಭಿಸಿ ಅನುಗ್ರಹಿಸುತ್ತಾರೆ **ಕಾಲಾವರ್ತಾನ್**—ಕಾಲದ ಸುಳಿಗಳನ್ನು, ಅಂದರೆ, ಕ್ಷಣ, ದಿವಸ, ಪಕ್ಷ, ಮಾಸ, ಸಂವತ್ಸರ ಯುಗ ಕಲ್ಪಾದಿರೂಪಗಳಾದ ಸುಳಿಗಳು. ಮಹಾಪ್ರವಾಹದಲ್ಲಿ ಸುಳಿಗ ಸಿಕ್ಕಿದವನು ಹೇಗೆ ನೀರಿನಲ್ಲಿ ಮುಳುಗಿ, ತೇಲುತ್ತಾ ಸುತ್ತುತ್ತಿರುತ್ತಾನೋ, ಹಾಗೆ ಸಂಸಾರ ಸಾಗರದಲ್ಲಿ ಕಾಲರೂಪವಾದ ಸುಳಿಗಳಿಗೆ ಸಿಕ್ಕಿ ಗರ್ಭಜನ್ಮಜರಾಮರಣಾದಿ ಪರಿಭ್ರಮಣದಿಂದ ಅತಿದುಸ್ಸಹ ಅನುವರತ ಅತ್ಯಂತ ಪಾರವಶ್ಯತಾಪಾದಕ ಕ್ಲೇಶಗಳಿಂದ ಕೂಡಿ ಸ್ವಲ್ಪವೂ ವಿಶ್ರಾಂತಿಯಿಲ್ಲದೆ ಜೀವನು ಕಷ್ಟಪಡುತ್ತಿರುತ್ತಾನೆಂದು ಸೂಚಿತ. **ಪ್ರಕೃತಿ ವಿಕೃತೀ :**—ಮೂಲಪ್ರಕೃತಿಯೇನು ಅದರ ವಿಕಾರವಾದ ಮಹದಹಂಕಾರಾದಿಗಳೇನು, ಇವುಗಳನ್ನು **ವಿದನ್**—ತಿಳಿದವನಾಗಿ ಎಂಬುದರೊಡನೆ ಅನ್ವಯ **ಮೂಲ ಪ್ರಕೃತಿಯು** ಮಹಾಪ್ರಳಯದಲ್ಲಿ ಜೀವನಿಗೆ ಅತ್ಯಂತ ಜ್ಞಾನಸಂಕೋಚವನ್ನುಂಟು ಮಾಡುತ್ತದೆ. ಮಹದಾದಿಗಳು **ಸೃಷ್ಟಿದಶೆಯಲ್ಲಿ** ಶರೀರೇಂದ್ರಿಯ ಸಂಬಂಧದ್ವಾರಾ ದೇಹಾತ್ಮ ಭ್ರಮ, ಸ್ವತಂತ್ರಾತ್ಮ ಭ್ರಮಗಳನ್ನುಂಟು **ಮಾಡುತ್ತವೆ, ಎಂಬುದನ್ನು** ತಿಳಿದು ಎಂದನ್ವಯ, **ಕಾಮಭೋಗೇಷು**—ಕಾಮ್ಯಂತ ಇತಿಕಾಮಾಃ-ಆಸೆಪಡತಕ್ಕವು **ಐಹಿಕಾಮುಷ್ಮಿಕ ಶಬ್ದಾದಿ** ಜನ್ಮ ಸುಖ ವಿಶೇಷಗಳು, **ದೋಷಾನ್**—ಅಲ್ಪ ಅಸ್ಥಿರ ದುಃಖ ಮಿಶ್ರತ್ವಾದಿ **ದೋಷಗಳನ್ನು, ಜ್ವಾಲಾಗರ್ತ ಪ್ರತಿಮ** ಅಗ್ನಿ ಜ್ವಾಲಾರೂಪವಾದ ಹಳ್ಳಕ್ಕೆ ಸಮಾನವಾದ **ದುರಿತೋದರ್ಕ ದುಃಖಾನುಭೂತಿವ್** ಪಾಪಗಳಿಗ ಉತ್ತರಫಲಗಳಾದ ಕುಂಭೀಪಾಕಾದಿ ನರಕಾನುಭವಗಳನ್ನು—ಪಾಪಗಳನ್ನು **ಮಾಡುವ ಕಾಲದಲ್ಲಿ** ಸುಖವಾಗಿದ್ದರೂ ಫಲಗಳನ್ನು ಅನುಭವಿಸುವ ಕಾಲದಲ್ಲಿ ಬಹಳ ಕ್ಲೇಶವಾಗಿವೆ ಎಂಬುದು ಇಲ್ಲಿ ಭಾವ, **ಸ್ವಪರನಿಯುತಂ ಯಾಥಾತಥ್ಯಂ**—ತನಗೂ ಭಗವಂತನಿಗೂ ವ್ಯವಸ್ಥಿತವಾದ ಯಥಾವಸ್ಥಿತವಾದ ಸ್ವರೂಪ- ಆದಾಗಿ ಶೇಷ ಶೇಷಿಭಾವ ಸಂಬಂಧ **ಮಚ್ಚದ್ದಿವ್ಯಂ ಪದಂ, ತತ್**— ಯಾವ ಪರಮಪದವೂ—ಅಪ್ರಾ

1) ಲಕ್ಷ್ಮೀನೇತ್ರೋತ್ಪಲಶ್ರೀ ಸತತ ಪರಿಚಯಾ ದೇಶ ಸಂವರ್ಧಮಾನಃ
ನಾಭೀ ನಾಳೀಕ ರಿಂ ಖನ್ಮಧುಕರ ಪಟಲೀ ದತ್ತ ಹಸ್ತಾವಲಂಬಃ ।
ಅಸ್ಮಾಕಂ ಸಂಪದೋ ಘಾನವಿರಲ ತುಳಸೀ ದಾಮ ಸಂ ಜಾತ ಭೂಮಾ
ಕಾಳಿಂದೀ ಕಾಂತಿಹಾರೀ ಕಲಯತು ಕುಶಲಂ ಕಾಳ ಮಾ ಕೈಟಭಾರೇಃ ॥

(ತತ್ವಮುಕ್ತಾ ಕಲಾಪ ಮಂಗಳ ಶ್ಲೋಕ)

ಆತ್ಮಾ ದೇಹಕ್ಕಿಂತಲೂ ಈಶ್ವರನಿಗಿಂತಲೂ ಬೇರೆ

ಇಪ್ಪಡಿ ಇವ್ವರ್ಥಙ್ಗಳೈ ಅಧ್ಯಾತ್ಮ ಶಾಸ್ತ್ರಙ್ಗಳಾಲೇ ತೆಳಿನ್ದು ಸ್ವಯಂ ಪ್ರಕಾಶತ್ವ, ಜ್ಞಾತೃತ್ವ, ೃತ್ವ, ಭೋಕ್ತೃತ್ವ, ಶರೀರತ್ವ, ಅಣುತ್ವ, ನಿತ್ಯತ್ವ, ನಿರವಯುವತ್ವ, ಛೇದನ ದಹನ ಕ್ಲೇದನ ಶೋಷ ನ್ಯನರ್ಹತ್ವ, ವೃದ್ಧಿ ಹ್ರಾಸ ರಹಿತ ಸ್ವರೂಪತ್ವಾದಿಗಳಾಲೇ ಆತ್ಮಾವುಕ್ಕು ವಿಶೇಷಣೇ ಭೂತದೇಹೇ ್ರಯಾದಿ ವೈಲಕ್ಷಣ್ಯತ್ತೈಕ್ಕಣ್ಡು, ಇವನುಡೈಯ ಪರಲೋಕಗಮನ ದೇಹಾನ್ತರ ಪ್ರಾಪ್ತಿ

ಸ್ಥಾನ ವಿಶೇಷವೋ, ಅದನ್ನೂ ಸಹ–ಯತ್, ತತ್ ಎಂಬ ಶಬ್ದಗಳು ಪ್ರಸಿದ್ಧಿದ್ಯೋತಕ. ಅದಾಗಿ ಪರಿಪೂರ್ಣ ್ಮಾನುಭವ ಪ್ರಾಪ್ತಿಹೇತುವಾದ ಪರಮಪದಕ್ಕೆ ಪೂರ್ವೋಕ್ತಸಕಲದೋಷರಾಹಿತ್ಯವೂ, ನಿರತಿಶಯ ಸುಖಾವ ವೂ, ಪ್ರಮಾಣ ಪ್ರಸಿದ್ಧವೆಂಬುದು ತಾತ್ಪರ್ಯ. **ಕಾರಾಕಲ್ಪಂವಪುರಪಿ**–ಕಾರಾಗೃಹಕ್ಕೆ ಸದೃಶವಾದ ದೇಹ ್ನ–ರಾಜಕುಮಾರ ತುಲ್ಯನಾದ ತನಗ ನಿತ್ಯಸೂರಿ ಸದೃಶವಾದ ಭೋಗಾರ್ಹತೆ ಇರುವಾಗ ಅದಕ್ಕೆ ಪ್ರತಿ ನಕವಾಗಿ ಅತ್ಯಂತಾನುಚಿತ ಸ್ಥಾನವಾದ ಕಾರಗೃಹತುಲ್ಯವಾದ ಪ್ರಾಕೃತ ಶರೀರವನ್ನೂ, ಅದರಲ್ಲಿ ಬದ್ಧನಾ ವ ತನ್ನನ್ನೂ **ವಿದನ್**-ತತ್ವ ತ್ರಯಾಧಿಕಾರಾದಿಗಳಿಂದ ಚನ್ನಾಗಿ ತಿಳಿದುಕೊಂಡು **ಕಸ್ತಿತಿಕ್ಷೇತ ಬಂಧವತ್** ರುತಾನೇ ಕರ್ಮಕೃತವಾದ ಪ್ರಕೃತಿಸಂಬಂಧವನ್ನು ಸಹಿಸಿಕೊಳ್ಳುತ್ತಾನೆ. ಇತರ ಪ್ರಾಕೃತ ವಿಷಯಗಳಲ್ಲಿ ದೋಷಗಳನ್ನೂ, ಪರಮಪದದ ವೈಲಕ್ಷಣ್ಯವನ್ನೂ ತನಗೂ ಭಗವಂತನಿಗೂ ಇರುವ ಸ್ವಸ್ವಾಮಿಭಾವಾದಿ ಂಧಗಳನ್ನೂ ಅದರ ಮೂಲಕ ದಾಯ ಪ್ರಾಪ್ತವಾದ ಭಗವತ್ಪ್ರಾಪ್ತಿ ತತ್ಕೈಂಕರ್ಯರೂಪ ಧನವನ್ನೂ ಪಡೆಯಲು ಃ ಪ್ರವರ್ತಿಸುತ್ತಾನೆಂಬುದು ತಾತ್ಪರ್ಯ.

ತ್ಮಾ ದೇಹಕ್ಕಿಂತಲೂ ಈಶ್ವರನಿಗಿಂತಲೂ ಬೇರೆ

ಹೀಗೆ ಬಂಧವನ್ನು ಸಹಿಸದೆ ಮೋಕ್ಷದಲ್ಲಿ ಇಚ್ಛೆಯುಂಟಾಗುವ ರೀತಿಯನ್ನು ಕ್ರಮವಾಗಿ, **ಇಪ್ಪಡಿ ಇವ್ವ ಂಗಳೈ** ಎಂದಾರಂಭಿಸಿ ತಿಳಿಸುತ್ತಾರೆ. ಅದಾಗಿ ಪ್ರಧಾನ ಪ್ರತಿತಂತ್ರಾದ್ಯಧಿಕಾರ ಚತುಷ್ಟಯಗಳಲ್ಲಿ ಹೇಳಿರು ಶರೀರಾತ್ಮಭಾವ ಸಂಬಂಧ, ಅರ್ಥಪಂಚಕ, ತತ್ವತ್ರಯಗಳ ವಿವೇಕ, ಪರದೇವತಾ ಪಾರಮಾರ್ಥ್ಯ ವಿಷ ಗಳನ್ನು ಉಪನಿಷತ್ತುಗಳಿಂದಲೂ, ಸಾತ್ವಿಕ ಇತಿಹಾಸ ಪುರಾಣಗಳಿಂದಲೂ ಆಳ್ವಾರುಗಳ ಶ್ರೀಸೂಕ್ತಿಗಳಿಂದಲೂ ದು–ಸಂಶಯ ವಿಪರ್ಯಗಳಿಲ್ಲದೇ ತಿಳಿದುಕೊಂಡು, ಜೀವನು, ಸ್ವಯಂ ಪ್ರಕಾಶತ್ವ, ಜ್ಞಾತೃತ್ವ, ಕರ್ತೃತ್ವ, ೇಕ್ತೃತ್ವ, ಶರೀರತ್ವ, ಅಣುತ್ವ, ನಿತ್ಯತ್ವ, ನಿರವಯುವತ್ವ, ಛೇಧನ, ದಹನ, ಕ್ಲೇದನ, ಷಣಾದ್ಯನರ್ಹತ್ವ, ವೃದ್ಧಿ, (ದೊಡ್ಡದಾಗುವುದು), ಹ್ರಾಸ (ಚಿಕ್ಕದಾಗುವುದು) ರಹಿತವಾದ ಸ್ವರೂಪ ಕೂಡಿದವನಾಗಿ, ದೇಹೇಂದ್ರಿಯಗಳು ಈ ಗುಣಗಳಿಂದ ಬೇರೆಯಾಗಿವೆ, ಅಂದರೆ ಜಡತ್ವಾದಿಗುಣಗಳಿಂದ ್ಮವಿಗಿಂತ ಬೇರೆ, ಆತ್ಮಾ ದೇಹೇಂದ್ರಿಯ ವಿಲಕ್ಷಣನು ಅಂದರೆ ದೇಹಕ್ಕಿಂತಲೂ, ಇಂದ್ರಿಯಗಳಿಗಿಂತಲೂ ಆತ್ಮಾ ಯಾದವನು, ಎಂಬುದನ್ನು, ಮಮಶರೀರಂ, ಮಮೇಂದ್ರಿಯಂ, ಅಹಂಜಾನಾಮಿ, ಇತ್ಯಾದಿ ವ್ಯತಿರೇಕ ಪ್ರತ್ಯಕ್ಷ ನಗಳಿಂದ ತಿಳಿದುಕೊಳ್ಳುತ್ತಾನೆ. ಹೀಗೆ ತಿಳಿದುಕೊಳ್ಳುವುದರಿಂದ ತಾನು ಪರಲೋಕಗಳಿಗೆ ಹೋಗಿ ದೇಹಾಂತ ನ್ನು ಪಡೆಯಲು ಯೋಗ್ಯತೆಯುಳ್ಳವನೆಂಬುದನ್ನು ನಿಶ್ಚಯಿಸುತ್ತಾನೆ. ಇದರಿಂದಾಗಿ ಸ್ವರ್ಗಲೋಕಕ್ಕೆ ಹೋಗಿ ಾನುಭವ ಮಾಡಲು ಶಕ್ಯನು. ಹಾಗೆಯೇ ಮೋಕ್ಷವನ್ನು ಪಡೆದು ಮೋಕ್ಷಾನಂದವನ್ನು ಪಡೆಯಲೂ ೀಗ್ಯತೆಯುಳ್ಳವನೆಂದು ತಿಳಿದುಕೊಳ್ಳುತ್ತಾನೆ. ಇದರಿಂದಾಗಿ ಸಾಮಾನ್ಯವಾಗಿ ಲೋಕೋತ್ತೀರ್ಣ ಪುರುಷಾರ್ಥ ಪಡೆಯಲು ಯೋಗ್ಯವೆಂಬುದು ತಿಳಿಯುವಹಾಗೆ ಪಾಪಗಳಿಗೆ ಶಿಕ್ಷಾರೂಪದಲ್ಲಿ ನರಕದಲ್ಲಿ ಬೀಳುವಂತಹ ಂತ್ರತರ ಕೇಶಗಳು ಸಂಭವಿಸುತ್ತವೆಯೆಂದು ತಿಳಿದು ಅದಕ್ಕೆ ಹೆದರಿ ಆ ನರಕಪತನಾದಿಗಳಿಗೆ ಕಾರಣಗಳಾದ ಕರ್ಮಗಳನ್ನು ಮಾಡದೆ ನಿವೃತ್ತನಾಗಲು ಯತ್ನಿಸುತ್ತಾನೆ.

ಯೋಗ್ಯತ್ವ ನಿಶ್ಚಯತ್ತಾಲೇ ಸಾಮಾನ್ಯೇನ ಲೋಕೋತ್ತೀರ್ಣ ಪುರುಷಾರ್ಥಯೋಗ್ಯರಾಯ್ ನರಕ ಪತನಾದಿ ಜನ್ಮಾನ್ತರ ಕ್ಲೇಶಙ್ಗಳುಕ್ಕಞ್ಜಿ, ಅವತ್ತಿನ್ಕಾರಣಙ್ಗಳಿಲ್ ನಿನ್ರುಮ್ ನಿವೃತ್ತರಾಯ್, ಆಧೇಯತ್ವ, ವಿಧೇಯತ್ವ, ಶೇಷತ್ವಾಲ್ಪಶಕ್ತಿತ್ವಾಣುತ್ವ ಜ್ಞಾನ ಸಂಶಯ ವಿಪರ್ಯಯ ದುಃಖಾದಿ ಯೋಗ್ಯತ್ವಾ ಶುಭಾಶ್ರಯತ್ವಾದಿಕಳಾಲೇ ಯಜ್ಞಾನ ವಿಶೇಷ್ಯಭೂತೇಶ್ವರ ವ್ಯಾವೃತ್ತಿ ನಿಶ್ಚಯತ್ತಾಲೇ ಭಗವತ್ಕೈಙ್ಕರ್ಯ ರೂಪಮಾನ ಸ್ವರೂಪ ಪ್ರಾಪ್ತ ವೈಭವತ್ತೈ ಅಪೇಕ್ಷಿಕ್ಕಯೋಗ್ಯರಾಯ್ :

ಭಗವತ್ಕೈಂಕರ್ಯ ವಿರೋಧಿ ಅಹಂಕಾರ ಮಮಕಾರ ನಿರಸನಮ್

ಸರ್ವಾಪೇಕ್ಷಿತ ಸಙ್ಗ್ರಹಮಾನ ತಿರುಮನ್ತ್ರತ್ತೈ ಕ್ಕೊಣ್ಡು ಸಾರತಮಾರ್ಥಙ್ಗಳೈಯನುಸನ್ಧಿಕ್ಕುಮ್ಪೋದು- ಪ್ರಥಮ ಪದತ್ತಿಲ್ ತೃತೀಯಾಕ್ಷರತ್ತಾಲೇ ಪ್ರತಿಪನ್ನಮಾನ ಜ್ಞಾನತ್ವಾದ್ಯನು ಸಂಧಾನತ್ತಾಲೇ ದೇಹ ತದನುಬಂಧಿಕಳಿಲ್ ವರುಮ್ ಅಹಙ್ಕಾರ ಮಮಕಾರಙ್ಗಳೈಯುಮ್, ಪ್ರಥಮಾಕ್ಷರತ್ತಿಲ್ ಲುಪ್ತ ಚತುರ್ಥಿಯಾಲೇ ಪ್ರತಿಪನ್ನಮಾನ ತಾದರ್ಥ್ಯತ್ತಾಲೇ ದೇಹಾತಿರಿಕ್ತಾತ್ಮ ಸ್ವರೂಪತದ್ಗುಣಙ್ಗಳಿಲ್ (1) "ತ್ವಂ ಮೇಽಹಂ ಮೇ" ಎನ್ಗಿರ ಶ್ಲೋಕತ್ತಿಲ್ ಪಡಿಯೇ ತನಕ್ಕುರಿಮೈಯಾಙ್ಗಾಹ ನಿನೈಕ್ಕಿರ

ದೇಹಕ್ಕಿಂತಲೂ, ಈಶ್ವರನಿಗಿಂತಲೂ, ಜೀವಾತ್ಮಾ ಬೇರೆಯಾದವನೆಂಬ ಜ್ಞಾನದ ಫಲ—

ಆಧೇಯತ್ವ ಇತ್ಯಾದಿ ಅನಂತರ ಪ್ರಧಾನಪ್ರತಿತಂತ್ರಾಧಿಕಾರದಲ್ಲಿ ನಿರ್ಣೀತವಾದ ಪ್ರಕಾರ, ಜೀವನು ಆಧೇಯತ್ವ (ಧರಿಸಲ್ಪಡುವುದು) ವಿಧೇಯತ್ವ (ನಿಯಮನ) ಶೇಷತ್ವ (ಅಧೀನತೆ)ಗಳಿಂದಲೂ, ತತ್ವತ್ರಯಾಧಿಕಾರದಲ್ಲಿ ನಿರ್ಣೀತವಾದ ಪ್ರಕಾರ, ಅಣುತ್ವ, ವಿಪರ್ಯಯ (ವ್ಯತ್ಯಸ್ತ)ಜ್ಞಾನ ಸಂಶಯಗಳಿಂದ ಕೂಡಿರುವುದರಿಂದ ಕರ್ಮ ಸಂಬಂಧವಾದ ಜ್ಞಾನ ಸಂಕೋಚ ವಿಕಾಸಗಳುಳ್ಳವನೆಂದು ತಿಳಿದು, ಸಂಸಾರ ಬಂಧನದಿಂದ ದುಃಖಕ್ಕೆ ಆಶ್ರಯನಾಗಿರುವುದನ್ನು ತಿಳಿದು ಕೊಂಡು ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ ನಿರ್ಣೀತವಾದ ರೀತಿಯಲ್ಲಿ, ಪೂರ್ವೋಕ್ತವಾದ ಧರ್ಮಗಳಿಗೆ ವಿರುದ್ಧವಾದ ಧರ್ಮಗಳನ್ನುಳ್ಳ (**ಈಶ್ವರವ್ಯಾವೃತ್ತಿ ನಿಶ್ಚಯತ್ತಾಲೇ**) ಪ್ರಕಾರೀಭೂತನಾದ ಈಶ್ವರನಿಗಿಂತ (ಶ್ರಿಯಃಪತಿಗಿಂತ) ತಾನು ಬೇರೆಯಾದವನು ಎಂಬುದನ್ನು ತಿಳಿದು ಕೊಂಡು ವಿಶೇಷ್ಯಭೂತನಾದ (**ಭಗವತ್ಕೈಂಕರ್ಯ ರೂಪಮಾನ ಇತ್ಯಾದಿ**) ಭಗವಂತನಿಗೆ ಕೈಂಕರ್ಯ ಮಾಡುವುದೆಂಬ ಸ್ವರೂಪ ಪ್ರಾಪ್ತವಾದ ವೈಭವವನ್ನು ಅಪೇಕ್ಷಿಸಲು ಯೋಗ್ಯನಾಗುತ್ತಾನೆ. ಹೇಗೆಂದರೆ ಶೇಷತ್ವಾದಿ ಜ್ಞಾನವಿಲ್ಲವನಾದರೆ ಭಗವತ್ಕೈಂಕರ್ಯವು ಇವನಿಗೆ ಪುರುಷಾರ್ಥವೆಂದು ತಿಳಿಯಲಾರನು. ವಿಧೇಯತ್ವವೂ ಇದಕ್ಕೆ ಸಹಕಾರಿ. ಭಗವಂತನಿಗೆ ಅಪೃಥಗ್ಭೂತನು ಎಂದು ತಿಳಿದು ಸರ್ವದಾ ಆ ಕೈಂಕರ್ಯವನ್ನು ಅಪೇಕ್ಷಿಸಲು ಆಧೇಯತ್ವವು ಕಾರಣವಾಗುತ್ತದೆ. ತಾನು ಅಲ್ಪಶಕ್ತಿಯುಳ್ಳವನೆಂದು ತಿಳಿಯುವುದರಿಂದ ಸರ್ವಶಕ್ತನಾದ ಭಗವಂತನಿಗಿಂತ ಅನ್ಯನು (**ಈಶ್ವರವ್ಯಾವೃತ್ತಿ**)ಎಂಬ ನಿಶ್ಚಯವೂ ಸಹ ಸ್ವರೂಪ ಪ್ರಾಪ್ತವಾದ ಕೈಂಕರ್ಯವನ್ನು ಮಾಡಲು ಅಪೇಕ್ಷೆಯನ್ನುಂಟುಮಾಡುತ್ತದೆ. ಜೀವನು ತಾನು ಸರ್ವಶಕ್ತನು, ವಿಭುವು, ಅಜ್ಞಾನ ಸಂಶಯಾದಿ ದೋಷರಹಿತನು. ಶುಭಾಶ್ರಯವಾದ ಶರೀರದಿಂದ ಕೂಡಿದವನು ಎಂದು ತಿಳಿದರೆ ಅಂತರ್ನಿಷ್ಠ ಈಶ್ವರನಂದೇ ಭಾವಿಸಲು ಅವಕಾಶವೇರ್ಪಟ್ಟು ಈಶ್ವರ ಕೈಂಕರ್ಯಾಪೇಕ್ಷೆಯೇ ಇಲ್ಲದವನಾಗಿ ಆಗುತ್ತಾನಲ್ಲವೆ. ಆಗ ಈಶ್ವರ ಕೈಂಕರ್ಯಾಪೇಕ್ಷೆಯು ಘಟಿಸುವುದಿಲ್ಲವಲ್ಲವೇ.

ಭಗವತ್ಕೈಂಕರ್ಯ ವಿರೋಧಿಗಳಾದ ಅಹಂಕಾರ ಮಮಕಾರಗಳ ನಿರಸನ ಜ್ಞಾನ :—

ಅನಂತರ **ಅಷ್ಟಾಕ್ಷರದಲ್ಲಿ** ಕೈಂಕರ್ಯ ವಿರೋಧಿ ನಿರಸನ ಸ್ಥಲಗಳನ್ನು ಎತ್ತಿ ತೋರಿಸಿ ಅರ್ಥಪಂಚಕಾಧಿಕಾರದಲ್ಲಿ ಹೇಳಿರುವ ಜ್ಞಾನವೂ ಮುಮುಕ್ಷುತ್ವಸಾಧಕವೆಂದು **ಸರ್ವಾಪೇಕ್ಷಿತ ಸಂಗ್ರಹಮಾನ**ವೆಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ. ಆದಾಗಿ ಮುಮುಕ್ಷುವು ಭಗವತ್ಕೈಂಕರ್ಯಕ್ಕೆ ವಿರೋಧಿಗಳಾದ ಅಹಂಕಾರ ಮಮಕಾರಗಳನ್ನು ಸವಾಸನವಾಗಿ ಬಿಡಬೇಕು. ಸರ್ವಾಪೇಕ್ಷಿತಾರ್ಥಸಂಗ್ರಾಹಕವಾದ **ಅಷ್ಟಾಕ್ಷರದಲ್ಲಿ**, ಸಾರತಮವಾದ ಅರ್ಥಗಳನ್ನು

ಅಹಙ್ಕಾರ ಮಮಕಾರಙ್ಗಳೈಯುಮ್, ಮಧ್ಯಮಾಕ್ಷರತ್ತಿಲವಧಾರಣಾರ್ಥತ್ತಾಲೇ "ಅನ್ಯಶೇಷಭೂತೋಹಂ" ಎನ್ಗಿರ್ಮ್, "ನಮಮಾನ್ಯಶ್ಶೇಷೀ" ಎನ್ಗಿರ್ಮ್ ವರುಮ್ ಅಹಙ್ಕಾರಮಮಕಾರಙ್ಗಳೈಯುಮ್, ಮಧ್ಯಮಪದತ್ತಿಲ್ ಪ್ರತಿಪನ್ನಮಾನ ನಿಷೇಧ ವಿಶೇಷತ್ತಾಲೇ ಸ್ವರಕ್ಷಣ ವ್ಯಾಪಾರತ್ತೈಪ್ಪತ್ತ ವರುಮ್ ನಿರಪೇಕ್ಷ ಸ್ವಾಂತತ್ರ್ಯ ನಿರುಪಾಧಿಕ ಶೇಷಿತ್ವಾಭಿಮಾನ ರೂಪಙ್ಗಳಾನ ಅಹಙ್ಕಾರಮಮಕಾರಙ್ಗಳೈಯುಮ್, ಇಂದ ನಿಷೇಧ ಸಾಮರ್ಥ್ಯತ್ತಾಲೇ ತೃತೀಯಪದತ್ತಿಲ್ ಚತುರ್ಥಿಯಾಲಭಿಪ್ರೇತ

ಅನುಸಂಧಿಸುವಾಗ "ಓಂ" ಎಂಬ ಪ್ರಥಮ ಪದವನ್ನು ಅ—ಉ—ಮ್ ಎಂದು ವಿಭಜಿಸಿ ಅದರಲ್ಲಿ "ಮ್" ಎಂಬ ಮೂರನೇ ಅಕ್ಷರವು ಮನಜ್ಞಾನೇ, ಮನ ಅವಬೋಧನೇ ಎಂಬ ಧಾತುವಿನಿಂದ ಪ್ರತಿಪನ್ನವಾದ, ಜ್ಞಾನತ್ವಾದ್ಯನು ಸಂಧಾನದಿಂದ (ಆದಿಶಬ್ದದಿಂದ — ಅಣುಸ್ವರೂಪನು) ಜೀವನು ದೇಹ ಮತ್ತು ಅದನ್ನು ಅನುಬಂಧಿಸಿ ಬರುವ ಪುತ್ರಾದಿಗಳಲ್ಲಿ ಉಂಟಾಗುವ ಅಹಂಕಾರ ಮಮಕಾರಗಳನ್ನೂ (ದೇಹವೇ ಆತ್ಮಾ ಎಂಬುದು ಅಹಂಕಾರ, ನನ್ನ **ಮ**ಕ್ಕಳು ನನ್ನ ಸ್ವತ್ತು ಇತ್ಯಾದಿಗಳು ಮಮಕಾರ) ಆತ್ಮಾ ಜ್ಞಾನಸ್ವರೂಪನು ಜ್ಞಾನಗುಣಕನು ಎಂದು ತಿಳಿಯುವುದರಿಂದ ಜಡವಾದ ದೇಹಕ್ಕಿಂತ ತಾನು ಬೇರೆಯವನು ಎಂದೂ ತಿಳಿಯುತ್ತಾನೆ. ಇದರಿಂದಾಗಿ ಅಹಂಕಾರವು **ನಿ**ವೃತ್ತವಾಗುತ್ತದೆ. ಹಾಗೆಯೇ ಆಯ-**ಮ್** ಎಂಬ ಅನುಸಂಧಾನದಿಂದ ತಾನು ಪರತಂತ್ರನು ಎಂದು ತಿಳಿದು, ಅದರಿಂದಾಗಿ ಸ್ವತಂತ್ರಾತ್ಮ ಭ್ರಮವೆಂಬ ಮಮಕಾರವು ಬಿಡಲ್ಪಡುತ್ತದೆ. ಮುಂದೆ ಹೇಳುವ **ಆಡಿಯರುತ್ತು** ಎಂಬ ಶಬ್ದದೊಡನೆ ಅನ್ವಯಿಸಬೇಕು. ಓಂ ಎಂಬ ಪ್ರಥಮಾಕ್ಷರದಲ್ಲಿ ಆಯ ಎಂಬಲ್ಲಿಯ ಲುಪ್ತ ಚತುರ್ಥಿಯಿಂದ **ಪ್ರತಿಪನ್ನಮಾನ**—ತಿಳಿಯಲ್ಪಟ್ಟ ತಾದರ್ಥ್ಯದಿಂದ—ಅವನಿಗೇ ಸೇರಿದವನು ಎಂಬ ಜ್ಞಾನದಿಂದಾಗಿ ದೇಹಕ್ಕಿಂತಲೂ ಬೇರೆಯಾದ ಆತ್ಮ ಅದರ ಜ್ಞಾನಾದಿ ಗುಣಗಳಲ್ಲಿ 1)"ತ್ವಂ ಮೇ ಅಹಂ ಮೇ" ಎಂಬ ಶ್ಲೋಕದ ಪ್ರಕಾರ ತನಗೆ **ಸ್ವಾ**ತಂತ್ರ್ಯವುಂಟೆಂದು ತಿಳಿಯುವ ಅಹಂಕಾರ ಮಮಕಾರಗಳನ್ನು ಪ್ರಣವದಲ್ಲಿ ಮಧ್ಯಮಾಕ್ಷರವಾದ "ಉ" ಎಂಬ ಏವಕಾರರಾರ್ಥದಿಂದ, ಅನ್ಯಶೇಷಭೂತೋಹಂ—ಅನ್ಯ**ನಿ**ಗೆ ನಾನು ಶೇಷಭೂತನು ಎಂಬುದು ಅಹಂಕಾರದ ಮಾತು, ಮಮಾನ್ಯಶ್ಶೇಷೀ — ನನಗೆ ಅನ್ಯನು ಶೇಷ ಎಂಬುದು ಮಮಕಾರದ ಮಾತು, ಈ ರೀತಿಯಾದ ಅಹಂಕಾರ ಮಮಕಾರಗಳನ್ನೂ (ಬಿಡುವವನಾಗುತ್ತಾನ) **ಮಧ್ಯಮಪದತ್ತಿಲ್ ಪ್ರತಿಪನ್ನಮಾನ — ಮಧ್ಯಮಪದ** - ನಮಃ ಎಂಬುದು ನ, ಮಮ ಎಂದು ಎರಡು ಪದವಾಗುತ್ತದೆ ಇದರೊಡನೆ "**ಸ್ವಾ**ತಂತ್ರ್ಯಂ" ಎಂಬ ಪದವನ್ನೂ, "ಶೇಷಿತ್ವಂ" ಎಂಬ ಪದವನ್ನು ಸೇರಿಸಿಕೊಂಡರೆ "ನಮಮಸ್ವಾತಂತ್ರ್ಯಮ್", "ನಮಮ ಶೇಷಿತ್ವಮ್" ಎಂದಾಗುತ್ತದೆ ಇಲ್ಲಿ ನಿಷೇಧ್ಯವಾದದ್ದು, ಸ್ವಾತಂತ್ರ ಮತ್ತು ಶೇಷಿತ್ವ ಈ **ನಿ**ಷೇಧ ವಿಶೇಷದಿಂದ ಸ್ವರಕ್ಷಣ ಸ್ವವ್ಯಾಪಾರವನ್ನು ಉದ್ದೇಶಿಸಿಬರುವ ನಿರಪೇಕ್ಷ **ಸ್ವಾ**ತಂತ್ರ್ಯ, **ನಿ**ರುಪಾಧಿಕ ಶೇಷಿತ್ವವೆಂಬ ಅಂದರೆ ತನ್ನನ್ನು ರಕ್ಷಿಸಿಕೊಳ್ಳುವ ವ್ಯಾಪಾರದಲ್ಲಿ ಇತರಾಪೇಕ್ಷೆಯಿಲ್ಲದೆ ಶೇಷಿ (ಯಜಮಾನನು) ಅಹಂ—ನಾನು, ಎಂಬುದು ಅಹಂಕಾರ, ಸ್ವರಕ್ಷಣಾರ್ಥದ ವ್ಯಾಪಾರದಲ್ಲಿ ಮಮ—ನನಗೆ ನಿರಪೇಕ್ಷವಾದ ಸ್ವಾತಂತ್ರವಿದೆ ಮಮ—ನನಗೆ ನಿರಪೇಕ್ಷವಾದ ಶೇಷಿತ್ವವು ಇದೆ ಎಂಬುದು ಮಮಕಾರ, ಇವುಗಳನ್ನೂ ಬಿಡುವವನಾಗುತ್ತಾನೆ ಅನಂತರ **ಇನ್ನಿಷೇಧಸಾಮರ್ಥ್ಯತ್ತಾಲೇ**- ನಮಮಸ್ವಾತಂತ್ರಮ್—ನಮಮಶೇಷಿತ್ವಂ, ಎಂದು **ಸ್ವಾ**ತಂತ್ರ್ಯ ಶೇಷಿತ್ವಗಳನ್ನು ನಿಷೇಧಿಸುವ, ನಕಾರದ ನಿಷೇಧ ಸಾಮರ್ಥ್ಯದಿಂದ ಮೂರನೇ ಪದವಾದ "ನಾರಾಯಣಾಯ" ಎಂಬಲ್ಲಿ "ಆಯ" ಎಂಬ ಚತುರ್ಥೀವಿಭಕ್ತಿಯಲ್ಲಿ ಅಭಿಪ್ರೇತವಾದ **ಭಾವಿಯಾನ**-ಮೋಕ್ಷದಶೆಯಲ್ಲಿ ಉಂಟಾಗುವ, ಭಗವತ್ಕೈಂಕರ್ಯ ಪರ್ಯಂತಾನುಭವವಾದ—ಅಂದರೆ ಭಗವದನು

---

1) ಈ ಶ್ಲೋಕವನ್ನೂ ಇದರ ಅರ್ಥವನ್ನೂ 28ನೇ ಪುಟದಲ್ಲಿ ನೋಡಿ

ಮಾಯ್ ಭಾವಿಯಾನ ಕೈಙ್ಕರ್ಯ ಪರ್ಯನ್ತಾನುಭವ ಮಾಹಿರ ಫಲತ್ತೈ ಪ್ಪೆತ್ತವಿಪ್ಪೋದು ಫಲಾಂತರಾನುಭವ ನ್ಯಾಯತ್ತಾಲೇ ವರುಮ್, ಸ್ವಾಧೀನ ಕರ್ತೃತ್ವ ಭೋಕ್ತೃತ್ವ ಸ್ವಾರ್ಥ ಕರ್ತೃತ್ವ ಭೋಕ್ತೃತ್ವ ಭ್ರಮರೂಪಙ್ಗಳಾನ, ಅಹಙ್ಕಾರಮಮಕಾರಙ್ಗಳೈಯುಮ್ ಯಥಾಯೋಗ್ಯಂ, ಅರ್ಥಮಾಹವುಮ್, ಶಾಬ್ದಮಾಹವುಮ್, ಅಡಿಯರುತ್ತು ಇಪ್ಪಡಿ ಸ್ಥಿರಪ್ರತಿಷ್ಠಿತ ಜ್ಞಾನರಾಯ್.

ಶಬ್ದಾದಿ ವಿಷಯ ಕೈವಲ್ಯಾನು ಭವಂಗಳಿಲುಳ್ಳ ದೋಷಂಗಳುಂ, ಭಗವದನುಭವತ್ತಿನ್ ಮೇನ್ಮೈಯುಮ್

1) **"ಅರ್ಪಶಾರಙ್ಗಳವೈ ಶುವೈತ್ತಹನ್ರೊಳಿನ್ದೇನ್"**

2) **ಕಣ್ಡು ಕೇಟ್ಟುತ್ತು ಮೊನ್ದುಣ್ಡುಳಲುಂ ಮೈಙ್ಕರುವಿ ಕಣ್ಡವಿನ್ಬನ್ತೆರಿವರಿಯವಳ ವಿಲ್ಲಾಚಿಟ್ರಿನ್ಬಮ್**

ಭವವು ಪರಿವಹಿಸಿ ಕೈಂಕರ್ಯ ರೂಪ ಫಲವನ್ನು **ಇಪ್ಪೋದು** ಈ ಬದ್ಧ ದಶೆಯಲ್ಲಿ, ಫಲಾಂತರಗಳನ್ನು ಅನುಭವಿಸುವಾಗ ಉಂಟಾಗುವ ರೀತಿಯಲ್ಲಿ, **ಸ್ವಾಧೀನಕರ್ತೃತ್ವ ಭೋಕ್ತೃತ್ವ ಸ್ವಾರ್ಥ ಕತೃತ್ವ ಭೋಕ್ತೃತ್ವಭ್ರಮ ರೂಪಂಗಳಾನ**– ನಾನು (ಅಹಂ)ಕರ್ತಾ, ನಾನು)ಅಹಂ)ಭೋಕ್ತಾ, ನನಗೆ (ಮಮ) ಕರ್ತೃತ್ವ, ನನಗೆ (ಮಮ) ಭೋಕ್ತೃತ್ವ– ಸ್ವಾರ್ಥಕ್ಕಾಗಿ ಕೈಂಕರ್ಯವನ್ನು ಅಹಂ-ನಾನು ಮಾಡುತ್ತೇನೆ –ಸ್ವಾರ್ಥವಾಗಿ ಫಲವನ್ನು ಅಹಂ-ನಾನು ಭುಜಿಸುತ್ತೇನೆ ಎಂಬುದು ಅಹಂಕಾರದ ಮಾತು ಹಾಗೆಯೇ, ಮಮಸ್ವಾಧೀನಂ ಕರ್ತೃತ್ವಂ, ಮಮ–ನನಗೆ ಕರ್ತೃತ್ವವು ಆಧೀನ, ಮಮಸ್ವಾಧೀನಂ ಭೋಕ್ತೃತ್ವಂ, ನನಗೆ ಫಲಾನ ಭವವು ಆಧೀನವೆಂಬುದು ಮಮಕಾರದ ಮಾತು- ಈ ರೀತಿಯಾದ ಭ್ರಮರೂಪವಾದ ಅಹಂಕಾರ ಮಮಕಾರಗಳನ್ನು ಬಿಡುವವನಾಗುತ್ತಾನೆ, **ಯಥಾ ಯೋಗ್ಯಂ** ಇತ್ಯಾದಿ-ದೇಹ ಮತ್ತು ಅದನ್ನು ಅನುಸರಿಸಿ ಬರುವ ವಿಷಯಗಳಲ್ಲಿ ಉಂಟಾಗುವ ಅಹಂಕಾರ ಮಮಕಾರಗಳು, ಜೀವನು ಜ್ಞಾನಸ್ವರೂಪನು ಜ್ಞಾನ ಗುಣಕನು ಎಂದು ಅನುಸಂಧಾನ ಮಾಡುವುದರಿಂದ, ನಿವೃತ್ತಿಯುಂಟಾಗುತ್ತದೆ, ಎಂದು **ಅರ್ಥ** ಶೇಷತ್ವಾದ್ಯನು ಸಂಧಾನದಿಂದ ಸ್ವರೂಪತದನುಬಂಧಿಗಳಲ್ಲಿ ಉಂಟಾಗುವ, "ನಾನು ಸ್ವತಂತ್ರ" ಇತ್ಯಾದಿಗಳ **ನಿವೃತ್ತಿಯು** ಅರ್ಥ ಬಾಕಿಯವು ಇಂಥಹ ಅನುಸಂಧಾನವಿಲ್ಲದೆ ಉಂಟಾಗುವುವು ಶಾಬ್ದ. ಇಂತಹ ಅಹಂಕಾರ ಮಮಕಾರಗಳನ್ನೂ **ಅಡಿಯರುತ್ತು**-ಸವಾಸನವಾಗಿ ಛೇದಿಸುವವನಾಗಿ ಅಂದರೆ ಈ ರೀತಿಯಾದ ಎಲ್ಲಾ ಅಹಂಕಾರ ಮಮಕಾರಗಳನ್ನು ಸವಾಸನವಾಗಿ ತ್ಯಜಿಸುವಂತೆ, **ಸ್ಥಿರಪ್ರತಿಷ್ಠಿತ ಜ್ಞಾನರಾಯ್** ಸ್ಥಿರ ಅಚಂಚಲವಾಗಿ ದುರ್ವಾದಿಗಳಿಂದ ಛೇದಿಸಲು ಅಶಕ್ಯವಾದ ಜ್ಞಾನವನ್ನುಳ್ಳವನಾಗುತ್ತಾನೆ

ಶಬ್ದಾದಿ ವಿಷಯಂಗಳ ಮತ್ತು ಕೈವಲ್ಯಗಳ ದೋಷಗಳು ಭಗವದನುಭವದ ಶ್ರೇಷ್ಠತೆ

ಹೀಗೆ ಸ್ಥಿರ ಪ್ರತಿಷ್ಠಿತ ಜ್ಞಾನವು ಇದ್ದರೂ, ಕ್ಷುದ್ರ ಪುರುಷಾರ್ಥಗಳಲ್ಲಿ ಆಸೆಯುಂಟಾದರೆ ಮುಮುಕ್ಷುತ್ವವು ಉಂಟಾಗುವುದಿಲ್ಲವೆಂದು ಆಚಾರ್ಯರು **ಅಲ್ಪಸಾರಂಗಳವೈ** ಇತ್ಯಾದಿಯಾಗಿ ನಿರೂಪಿಸಿರುತ್ತಾರೆ **1) ಅರ್ಪಶಾರಂಗಳ್** ಇತ್ಯಾದಿ–ಅಲ್ಪಸಾರಗಳಾದ ವಿಷಯ ಸುಖಗಳನ್ನು **ಶುವೈತ್ತು**–ರುಚಿನೋಡಿ, **ಅಹನ್ರೊಳಿನ್ದೇನ್**– ಪ್ರಾಕೃತ ಸುಖಗಳಲ್ಲಿ ಆಸೆಯಿಂದ, ಭಗವಂತನನ್ನು ತ್ಯಜಿಸಿಬಿಟ್ಟೆ. (2) **ಕಂಡು ಕೇಟ್ಟುತ್ತು**ಇತ್ಯಾದಿ ಕಣ್ಡು,

---

1) ಕಿರ್ಪನ್ ಕಿಲ್ಲೇನ್ ಎನ್ರಿಲನ್ ಮುನನಾಳಾಲ್
ಅರ್ಪಶಾರಂಗಳವೈ ಶುವೈತ್ತಹನ್ರೊಳಿಂದೇನ್ ।
ಪರ್ಪಲ್ಲಾಯಿರಮ್ ಉಯಿರ್‌ಶೆಯ್‌ದ ಪರಮಾ, ನಿನ್
ನರ್ಪೊರ್ ಜೋದಿತ್ತಾಳ್ ನಣುಹುವುದು ಎಞಜಾನ್ರೇ ॥ (ತಿರುವಾಯ್ 3–2–6)

(2) ಪು. ತಿ. ನೋ.

3) "ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯ ಲಭ್ಯಂ ಧರ್ಮಾರ್ಥ ಕಾಮೈರಲಮಲ್ಪಕಾಸ್ತೇ"।
4) "ಅನ್ತವತ್ತು ಫಲಂ ತೇಷಾಂತದ್ಭವತ್ಯಲ್ಪಮೇಧಸಾಂ,"।

ಕಿವಿ, ತ್ವಕ್, ಮೂಗು, ನಾಲಿಗೆ, ಈ ಐದು ಜ್ಞಾನೇಂದ್ರಿಯಗಳ ಮೂಲಕ ಶಬ್ದ ಸ್ಪರ್ಶರೂಪ ರಸಗಂಧವೆಂಬ ವಿಷಯ ಸುಖಗಳನ್ನು ಅನುಭವಿಸಿ, **ತೆರಿವರಿಯ**– ಪಂಚೇಂದ್ರಿಯಗಳಿಗೆ ಗೋಚರವಾಗದ **ಅಳವಿಲ್ಲಾ** — ಇಂದ್ರಿಯಾನು ಭವಗಳಿಗಿಂತ ಮೇಲಾದ, **ಶಿಟ್ರಿನ್ಬಮ್**—ಭಗವದನುಭವಕ್ಕಿಂತ ಕೀಳಾದ ಅಲ್ಪಸುಖವಾದ ಆತ್ಮಾನುಭವರೂಪ ಕೈವಲ್ಯ.

3) **ತಸ್ಮಿನ್ ಪ್ರಸನ್ನೇ ಇತ್ಯಾದಿ**—ಆ ಭಗವಂತನು ಪ್ರಸನ್ನನಾದರೆ ನಮಗೆ ಸಿಗದೆ ಇರುವುದು ಏನು. **ಅಪರಿ** ಮಿತವಾದ ಮೋಕ್ಷವೂ ಸಿಗುತ್ತದೆ ಧರ್ಮಾರ್ಥಕಾಮಗಳು ಸಾಕು ಅವು ಅಲ್ಪಗಳು, ಬೇಕಿಲ್ಲ

4) **ಅಂತವತ್ತು ಫಲಂತೇಷಾಂ** ಇತ್ಯಾದಿ ಐಹಿಕ ಪುರುಷಾರ್ಥಗಳಲ್ಲಿ ಆಸೆಯುಳ್ಳ ಅಲ್ಪಬುದ್ಧಿಯುಳ್ಳ ವರಿಗೆ ಆ ಫಲಗಳು ಪರಿಮಿತಗಳು

ಪೂರ್ವಕಾಲಗಳಲ್ಲೆಲ್ಲಾ, ಶಾಸ್ತ್ರವಿಹಿತವಾದ ಕರ್ಮಗಳನ್ನು ಮಾಡಲು ಶಕ್ತನು, ನಿಷಿದ್ಧ ಕರ್ಮಗಳನ್ನು ಬಿಡಲು ಶಕ್ತನು, ಎಂದು ಯೋಚಿಸದೆ ಅಲ್ಪಸಾರಗಳಾದ ಪ್ರಾಕೃತ ವಿಷಯ ಭೋಗಗಳನ್ನು ಅನುಭವಿಸುತ್ತಾ, ಭಗವಂತನಾದ ನಿನ್ನನ್ನು ಬಿಟ್ಟೆ. ಅನೇಕಾನೇಕ ಸಾವಿರ ಜೀವರಾಶಿಗಳನ್ನು ಸೃಷ್ಟಿಸಿದ ಭಗವಂತನೇ, ನಿನ್ನ ಶುಭಾಶ್ರಯವಾದ ಜ್ಯೋತಿರೂಪವಾದ ಪಾದಪದ್ಮಗಳನ್ನು ನಾನು ಎಂದಿಗೆ ಹೊಂದಲಿ ನಿನ್ನ ಪಾದಗಳನ್ನು ಹೊಂದುವಂತೆ ನನಗೆ ಅನುಗ್ರಹಿಸುವುದು ನಿನಗೆ ದೊಡ್ಡ ಕೆಲಸವೇ

2) ಕಂಡು ಕೇಟ್ಟುಟ್ರು ಮೋಂದುಂಡ್ಯುಲುಮ್, ಐಂಗರುವಿ
ಕಂಡವಿನ್ಬಮ್ ತೆರಿವರಿಯ ಅಳವಿಲ್ಲಾಚ್ಚಿಟ್ರಿನ್ಬಮ್ ।
ಒಂಡೊಡಿಯಾಳ್ ತಿರುಮಹಳುಂ ನೀಯುಮೇ ನಿಲಾನಿರ್ಪ
ಕಂಡಶದಿರ್ ಕಂಡೊಳ್ಳಿಂದೇನ್ ಅಡೈಂದೇನ್ ಉನ್ ತಿರುವಡಿಯೇ ॥ (ತಿರುವಾಯ್ 4-6-10)

ಉಜ್ವಲವಾದ ಬಳೆಗಳನ್ನು ಧರಿಸಿರುವ ಮಹಾಲಕ್ಷ್ಮಿಯೂ ಮಹಾವಿಷ್ಣುವೂ ಆದ ನೀನೂ ಶ್ರೀವೈಕುಂಠದಲ್ಲಿ ಬಿಜಯ ಮಾಡಿಸಿರುವ ಚಾತುರ್ಯವನ್ನು ಸಾಕ್ಷಾತ್ಕರಿಸಿದನಂತರ ಪಂಚೇಂದ್ರಿಯಗಳಿಂದ ಅನುಭವಿಸಲ್ಪಡುವ ಪ್ರಾಕೃತ ಸುಖಗಳನ್ನೂ ಅವುಗಳಿಗಿಂತ ಮೇಲಾದ ಕೈವಲ್ಯ ಸುಖದನ್ನೂ–ಸವಾಸನವಾಗಿ ಬಿಟ್ಟೆ ನಿನ್ನ ಪಾದಪದ್ಮಗಳನ್ನು ಆಶ್ರಯಿಸಿದ್ದೇನೆ.

3) ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ ಧರ್ಮಾರ್ಥಕಾಮೈರಲಮಲ್ಪಕಾಸ್ತೇ ।
ಸಮಾಶ್ರಿತಾತ್ ಧರ್ಮತರೋರನಂತಾನ್ನಿಸ್ಸಂಶಯೋ ಮುಕ್ತಿ ಫಲ ಪ್ರಪಾತಃ ॥ ವಿ, ಪು. (1-17-91)

ಭಗವಂತನು ಪ್ರಸನ್ನನಾದರೆ ಸರ್ವವೂ ಲಭಿಸುತ್ತದೆ. ಐಹಿಕ ಪುರುಷಾರ್ಥಗಳು ಅಲ್ಪಗಳು ಅನಿತ್ಯ. ಅವುಬೇಕಿಲ್ಲ ಅನಂತವಾದ ಧರ್ಮ ವೃಕ್ಷವನ್ನು (ಭಗವಂತನನ್ನು) ಆಶ್ರಯಿಸುವುದರಿಂದ ಮೋಕ್ಷವೆಂಬ ಫಲವು (ನಮ್ಮ ಕೈಯಲ್ಲಿ ಬಂದು) ಬೀಳುವುದು ನಿಸ್ಸಂಶಯ.

4) ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪ ಮೇಧಸಾಮ್ ।
ದೇವಾನ್ ದೇವಯಜೋಯಾಂತಿ ಮದ್ಭಕ್ತಾಯಾಂತಿ ಮಾಮಪಿ ॥
ಗೀತೆ(7-2-3)

ಇಂದ್ರಾದಿಗಳನ್ನು ಮಾತ್ರ ಪೂಜಿಸುವ ಅಲ್ಪ ಬುದ್ಧಿಯುಳ್ಳವರಿಗೆ ಸಿಗುವ ಫಲವು ಅನಿತ್ಯವು. ದೇವತೆಗಳನ್ನು ಪೂಜಿಸುವವರು ದೇವತೆಗಳ ಸಾಯುಜ್ಯವನ್ನು ಹೊಂದುತ್ತಾರೆ ಅದೇ ಕರ್ಮಗಳು ನನ್ನ ಆರಾಧನ ರೂಪವಾಗುವು ಎಂದು ತಿಳಿದು ಫಲದಲ್ಲಿ ಆಸೆಯಿಲ್ಲದೆ ನನ್ನಲ್ಲೇ ಆಸೆಯುಳ್ಳ ಭಕ್ತರು ನನ್ನನ್ನೇ ಹೊಂದುತ್ತಾರೆ ಫಲದಲ್ಲಿ ಆಸೆಯುಳ್ಳವರು ಆ ಫಲಾನುಭವಗಳನ್ನು ಹೊಂದಿ ಕ್ರಮೇಣ ವೈರಾಗ್ಯವನ್ನು ಹೊಂದಿ ನನ್ನನ್ನು ಪಡೆಯುತ್ತಾರೆ.

5) "ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಂ" ।

6) "ಮಹಾಬಲಾನ್ಮಹಾವೀರ್ಯಾನನಂತಧನ ಸಂಚಯಾನ್ ।
ಗತಾನ್ಕಾಲೇನ ಮಹತಾ ಕಥಾ ಶೇಷಾನ್ನರಾಧಿಪಾನ್ ॥
ಶ್ರುತ್ವಾನ ಪುತ್ರ ದಾರಾದೌಗೃಹಕ್ಷೇತ್ರಾದಿಕೇಽಪಿ ವಾ ।
ದ್ರವ್ಯಾದೌವಾ ಕೃತಪ್ರಜ್ಞೋ ಮಮತ್ವಂಕುರುತೇ ನರಃ ॥"

7) "ಸರ್ವಂ ದುಃಖಮಯಂಜಗತ್."

8) "ಸ್ವರ್ಗೇಽಪಿಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ ।

---

5) **ಅನಿತ್ಯಮಸುಖಂ ಲೋಕಂ** ಇತ್ಯಾದಿ-ಅಸ್ಥಿರವೂ, ದುಃಖಃ ಮಿಶ್ರ ಸುಖವೂ ಆದ ಈ ಲೋಕವನ್ನು ಪಡೆದಿರುವ ನೀನು ಇದರಲ್ಲಿ ಆಸೆಯನ್ನು ಬಿಟ್ಟು ಶಾಶ್ವತವಾದ ಸುಖಪ್ರದನಾದ ನನ್ನನ್ನು (ಕೃಷ್ಣ ಪರಮಾತ್ಮನನ್ನು) ಆಶ್ರಯಿಸು.

6) **ಮಹಾಬಲಾನ್**-ಇತ್ಯಾದಿ ಮಹಾಪರಾಕ್ರಮ ಶಾಲಿಗಳಾದ ಮತ್ತು ಅನಂತೈಶ್ವರ್ಯಗಳಿಂದ ಕೂಡಿದ ರಾಜರುಗಳು ಬಹಳ ಕಾಲದ ನಂತರ ತಮ್ಮ ಚರಿತ್ರೆ ಮಾತ್ರ ಉಳಿಯುವಂತೆ ಹೋಗಿಬಿಟ್ಟರು. ಈ ಐಶ್ವರ್ಯಗಳು ಶಾಶ್ವತವಲ್ಲ ಆದ್ದರಿಂದ ಈ ಚರಿತ್ರೆಯನ್ನ ಕೇಳಿದ ಪಂಡಿತನು ಹೆಂಡತಿ ಮಕ್ಕಳು ಮನೆ ಮಠ ಹಣಕಾಸುಗಳಲ್ಲಿ ಮಮತ್ವ-ನನ್ನದು ಎಂಬ ಅಭಿಮಾನವನ್ನು ಇಡುವುದಿಲ್ಲ. ಎಲ್ಲವೂ ನಶ್ವರವಾದುವು ಎಂದರ್ಥ.

7) **ಸರ್ವಂದುಃಖಮಯಂ ಜಗತ್**-ಪ್ರಾಚುರ್ಯಾರ್ಥದಲ್ಲಿ ಮಯಟ್ ಪ್ರತ್ಯಯ. **ಪ್ರಾಕೃತವಾದ** ಎಲ್ಲಾ ಸುಖಗಳೂ ದುಃಖ ಪ್ರಚುರವಾ**ಗಿವೆ.**

8) **ಸ್ವರ್ಗೇಽಪಿ** ಇತ್ಯಾದಿ-ಸ್ವರ್ಗದಲ್ಲಿ ಸುಖವೇ ಅಲ್ಲವೇ ಎಂದರೆ ಮುಂದೆ ಅಂದರೆ ಸುಖನಿಮಿತ್ತವಾದ ಪುಣ್ಯವು ಮುಗಿದ ನಂತರ ಭೂಲೋಕಕ್ಕೆ ಬೀಳುತ್ತೇನೆಂಬ ಭಯವು ತನ್ನಿಮಿತ್ತವಾದ ದುಃಖವೂ ಜತೆಯಲ್ಲೇ ಇರುತ್ತವೆ. ಆದ್ದರಿಂದ ಸ್ವರ್ಗವಾಸಿಗೂ ಕ್ಷೇಮವಿಲ್ಲ.

---

5) ಕಿಂಪುನಃ ಬ್ರಾಹ್ಮಣಾಃ ಪುಣ್ಯಾಃ ಭಕ್ತಾರಾಜರ್ಷಯಸ್ತಥಾ।
ಅನಿತ್ಯಮ ಸುಖಂಲೋಕಮಿಮಂಪ್ರಾಪ್ಯ ಭಜಸ್ವಮಾಮ್ ॥ (ಗೀತೆ 9-33)

ಪಾಪಯೋನಿಗಳಾದ ಸ್ತ್ರೀ ಶೂದ್ರರೂ ನನ್ನನ್ನು ಆಶ್ರಯಿಸಿ ಮೋಕ್ಷವನ್ನು ಹೊಂದುತ್ತಾರೆ. ಹಾಗಿರುವಾಗ ಪುಣ್ಯ ಯೋನಿಗಳಾದ ಬ್ರಾಹ್ಮಣರೂ, ರಾಜರ್ಷಿಗಳೂ ನನ್ನಲ್ಲಿ ಭಕ್ತಿಯುಳ್ಳವರಾಗಿ ನನ್ನನ್ನು ಆಶ್ರಯಿಸಿದರೆ ಮೋಕ್ಷವನ್ನು ಹೊಂದುವುದರಲ್ಲಿ ಏನು ಸಂಶಯ ಎಲೈ ಅರ್ಜುನನೇ ಅನಿತ್ಯವೂ ಅಸುಖವೂ ಆದ ಈ ಲೋಕದಲ್ಲಿರುವ ನೀನು ಶಾಶ್ವತನೂ, ಆನಂದಮಯನೂ ಆದ ನನ್ನನ್ನು ಭಜಿಸಿ ನನ್ನಲ್ಲಿ ಭಕ್ತಿಯಿಡು

6) ವಿ. ಪು. 4-24-142, 143

7) ಗರ್ಭೇಚ ಸುಖಲೇಶೋಽಪಿ ಭವದ್ಭಿರನುಮೀಯತೇ ।
ಯದಿತತ್‌ಕಥ್ಯತಾಮೇವಂ ಸರ್ವಂ ದುಃಖಮಯಂ ಜಗತ್ ॥ (ವಿ ಪು. 1-17-69)

ತಾಯಿಯ ಗರ್ಭದಲ್ಲಿ ಜಂತುವು ಬಹಳ ಕ್ಲೇಶವನ್ನು ಅನುಭವಿಸುತ್ತದೆ ಅಲ್ಲಿ ಅಲ್ಪವಾದ ಸುಖವನ್ನು ನೀವು ಅನುಮಾನದಿಂದ ತಿಳಿಯುವುದಾದರೆ ತಿಳಿಸಿ ಪ್ರಪಂಚದಲ್ಲಿ ಸರ್ವವೂ ದುಃಖ ಪ್ರಚುರವು

8) ನ ಕೇವಲಂ ದ್ವಿಜ ಶ್ರೇಷ್ಠ ನರಕೇ ದುಃಖ ಪದ್ಧತಿಃ ।
ಸ್ವರ್ಗೇಽಪಿ ಪಾತ ಭೀತಸ್ಯಕ್ಷಯಿ ಷ್ಣೋರ್ನಾಸ್ತಿನಿರ್ವೃತಿಃ ॥ (ವಿ. ಪು. 6-5-50)

ಎಲೈ ಬ್ರಾಹ್ಮಣೋತ್ತಮನೇ ನರಕದಲ್ಲಿ ಮಾತ್ರ ದುಃಖವೆಂಬುದು ಅಲ್ಲ. ಸ್ವರ್ಗದಲ್ಲಿಯೂ ಪುಣ್ಯ ಕ್ಷಯದಿಂದ ಪತನ ಭಯವು ಇದ್ದೇ ಇದೆ. ಇದರಿಂದ ಸ್ವರ್ಗ ಲೋಕವಾಸಿಗೂ ಕ್ಷೇಮವಿಲ್ಲ.

9) "ರಾಜ್ಯೇಗೃಧ್ನಸ್ತ್ಯ ವಿದ್ವಾಂಸೋ ಮಮತ್ವಾಪಹೃತಚೇತಸಃ ।
ಅಹಂಮಾನ ಮಹಾಪಾನ ಮದಮತ್ತಾ ನ ಮಾದೃಶಾಃ ॥
10) "ಆಬ್ರಹ್ಮಭವನಾದೇತೇ ದೋಷಾಸ್ಸಂತಿ ಮಹಾಮುನೇ ।
ಅತ ಏವಹಿನೇಚ್ಛಂತಿ ಸ್ವರ್ಗಪ್ರಾಪ್ತಿಂ ಮನೀಷಿಣಃ," ।
11) "ಬ್ರಹ್ಮಣಸ್ಸದನಾದೂರ್ಧ್ವಂ ತದ್ವಿಷ್ಣೋಃ ಪರಮಂಪದಂ ।
ಶುದ್ಧಂ ಸನಾತನಂ ಜ್ಯೋತಿಃ ಪರಂಬ್ರಹ್ಮೇತಿ ತದ್ವಿದುಃ ।
ನತತ್ರ ಮೂಢಾ ಗಚ್ಛನ್ತಿ ಪುರುಷಾ ವಿಷಯಾತ್ಮಕಾಃ ।
ಡಂಭ ಲೋಭ ಮದಕ್ರೋಧ ದ್ರೋಹ ಮೋಹೈರಭಿದ್ರುತಾಃ ।
ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ಸ್ಸಂಯತೇಂದ್ರಿಯಾಃ
ಧ್ಯಾನಯೋಗ ರತಾಶ್ಚೈವ ತತ್ರ ಗಚ್ಛನ್ತಿ ಸಾಧವಃ," ।
12) "ರಮ್ಯಾಣಿ ಕಾಮಚಾರಾಣಿ ವಿಮಾನಾನಿ ಸಭಾಸ್ತಥಾ ।
ಆಕ್ರೀಡಾ ವಿವಿಧಾರಾಜನ್ ಪದ್ಮಿನ್ಯಶ್ಚಾ ಮಲೋದಕಾಃ" ।
13) "ಏತೇವೈ ನಿರಯಾಸ್ತಾತ ಸ್ಥಾನಸ್ಯಪರಮಾತ್ಮನಃ"

---

9) **ರಾಜ್ಯೇಗೃಧ್ನಂತಿ** ಇತ್ಯಾದಿ ಅಹಂಕಾರ ಮಮಕಾರಗಳಿಂದ ಕೂಡಿದವರು ರಾಜ್ಯದಲ್ಲಿ ಆಸೆಯುಳ್ಳವರು. ನನ್ನಂಥಹವರು (ಖಾಂಡಿಕ್ಯನು) ಹಾಗಲ್ಲ.

10) **ಆಬ್ರಹ್ಮಭವನಾದೇತಾಃ** ಇತ್ಯಾದಿ ಬ್ರಹ್ಮಲೋಕ ಪರ್ಯಂತ ಇಂಥಹ ಅಲ್ಪತ್ವಾಸ್ಥಿರತ್ವಾದಿ ದೋಷಗಳು ಉಂಟು ಎಲೈ ಮುನಿಯೇ ಆದ್ದರಿಂದ ಬುದ್ಧಿವಂತರಾದವರು ಸ್ವರ್ಗ ಪ್ರಾಪ್ತಿಗೆ ಆಸೆ ಪಡುವುದಿಲ್ಲ.

11) **ಬ್ರಹ್ಮಣಸ್ಸದನಾದೂರ್ಧ್ವಂ**– ಬ್ರಹ್ಮಲೋಕಕ್ಕೂ ಮೇಲೆ ಮಹಾವಿಷ್ಣುವಿನ ಆ ಪರಮ ಪದವು ಇದೆ. ಅದು ಶುದ್ಧವಾದದು ಸನಾತನ–ಯಾವಾಗಲೂ ಇರತಕ್ಕದ್ದು ಜ್ಯೋತಿರ್ಮಯವಾದ ಲೋಕ. ಪರಂಬ್ರಹ್ಮ ಶಬ್ದವಾಚ್ಯವು. ಮೂಢರು-ಅಂದರೆ ದೇಹವೇ ಆತ್ಮವೆಂಬುವರು, ವಿಷಯ ಸುಖಗಳಲ್ಲಿ ಆಸೆಯುಳ್ಳವರೂ ಡಂಭ, ಲೋಭ, ಮದ, ಕೋಪ, ದ್ರೋಹ, ಮೋಹಗಳಿಂದ ಕೂಡಿದವರು, ಆ ಪರಮ ಪದಕ್ಕೆ ಹೋಗಲಾರರು. ಅಹಂಕಾರ ಮಮಕಾರಗಳಿಲ್ಲದೆ, ಸುಖ ದುಃಖಗಳನ್ನು ಸಹಿಸಿಕೊಂಡು ಇಂದ್ರಿಯಗಳನ್ನು ಅಡಗಿಸಿಭಗವದ್ಧ್ಯಾನ ಯೋಗದಲ್ಲಿ ಪ್ರೀತಿಯುಳ್ಳ ಸಾಧುಗಳು ಆ ಪರಮ ಪದವನ್ನು ಪಡೆಯುತ್ತಾರೆ.

12) **ರಮ್ಯಾಣಿ ಕಾಮಚಾರಾಣಿ**-ಇತ್ಯಾದಿ ರಮ್ಯವಾಗಿಯೂ ಸ್ವೇಚ್ಛೆಯಿಂದ ಸುತ್ತಲರ್ಹವಾದ ವಿಮಾನಗಳೂ ರಮ್ಯವಾದ ಸಭಾಮಂಟಪಗಳೂ, ಹಾಗೆಯೇ ಉದ್ಯಾನವನಗಳೂ, ತಳುವಾದ ನೀರಿನಿಂದ ಕೂಡಿದ ಸರೋವರಗಳೂ ಆ ಪರಮ ಪದದಲ್ಲಿವೆ. ಇದರಿಂದ ಪರಮ ಪದವೂ ಅತಿರಮಣೀಯವಾಗಿದೆ ಎಂಬುದು ದ್ಯೋತಿತ.

13) **ಏತೇವೈ**–ಇತ್ಯಾದಿ. ಆ ಪರಮಪದಕ್ಕೆ ಹೋಲಿಸಿದರೆ, ಸ್ವರ್ಗಲೋಕಾದಿಗಳು ನರಕಪ್ರಾಯಗಳಾಗಿವೆ. **ಇತ್ಯಾದಿ ಪ್ರಮಾಣಂಗಳಾಲೇ** – ಮೇಲೆ ಹೇಳಿದ ಹನ್ನೊಂದು ಪ್ರಮಾಣಗಳೇ ಆದಿಯಾದ ಅನೇಕ ಪ್ರಮಾಣ ವಚನಗಳಿಂದ ಪ್ರಾಕೃತ ಭೋಗಗಳು–ಅಂದರೆ ಮನುಷ್ಯ ಲೋಕದಿಂದ ಹಿಡಿದು ಬ್ರಹ್ಮಲೋಕ ಪರ್ಯಂತ ಪ್ರಕೃತಿ

---

9) ವಿ. ಪು. (6-7-7) 10) ಇತಿ ಸಮು. (3-48) 11) ಭಾರ ವನಪರ್ವ (217-37, 38, 39)
12) ಭಾರ. ಶಾಂತಿ. (196-4) 13) ಪು ತಿ. ನೋ

ಇತ್ಯಾದಿ ಪ್ರಮಾಣಙ್ಗಳಾಲೇ ಅಲ್ಪತ್ವಾಽಸ್ಥಿರತ್ವ ದುಃಖಮೂಲತ್ವ, ದುಃಖಮಿಶ್ರತ್ವ ದುಃಖೋದರ್ಕತ್ವ ವಿಪರೀತಾಭಿಮಾನ ಮೂಲತ್ವ, ಸ್ವಾಭಾವಿಕಾನಂದ ವಿರುದ್ಧತ್ವಙ್ಗಳಾಹಿರ ದೋಷ ಸಪ್ತಕಙ್ಗಳೈಯುಮ್, ಇವತ್ತಿಲ್ ಯಥಾಸಮ್ಭವ ಮುಙ್ಗಾನ ಚೇತನಮಾತ್ರಾನುಭವ ದೋಷಙ್ಗಳೈಯುಮ್, ಇವ್ವನುಭವಙ್ಗಳುಕ್ಕೆದಿರ್‌ತಟ್ಟಾನ ಭಗವದನುಭವತ್ತಿನ್ವೈಲಕ್ಷಣ್ಯತ್ತೈಯುಮ್ ವಿಶದಮಾಹವನುಸನ್ಧಿತ್ತು, "ಪರಮಾತ್ಮನಿಯೋ ರಕ್ತೋ ವಿರಕ್ತೋಽಪರಮಾತ್ಮನಿ"ಎನ್ಗಿರ ವ್ಯವಸ್ಥೈಯುಡೈಯರಾಯ್,

---

ಮಂಡಲದೊಳಗೆ ಇರುವ ಲೋಕಗಳಲ್ಲಿ ಅನುಭವಿಸತಕ್ಕ ಸುಖಗಳು, **ಅಲ್ಪತ್ವ**–ಅಲ್ಪಗಳು, **ಅಸ್ಥಿರತ್ವ**–ಶಾಶ್ವತವಾದವಲ್ಲ. **ದುಃಖಮೂಲತ್ವ**–ಶರೀರೇಂದ್ರಿಯಗಳನ್ನು ಆಯಾಸಪಡಿಸಿ ಸಂಪಾದಿಸತಕ್ಕವಾದ್ದರಿಂದ ದುಃಖ ಮೂಲಗಳು, **ದುಃಖಮಿಶ್ರತ್ವ**–ಸುಖ ವಿರೋಧಿ ಭಯದಿಂದ ದುಃಖ ಮಿಶ್ರಿತವಾಗಿವೆ **ದುಃಖೋದರ್ಕತ್ವ** – ಸುಖವು ಕಳೆದುಹೋದರೆ ಉತ್ತರ ಕಾಲದಲ್ಲಿ ದುಃಖವು ಪ್ರಾಪ್ತವಾಗುತ್ತದೆ **ವಿಪರೀತಅಭಿಮಾನಮೂಲತ್ವ**–ಸ್ವಾಧೀನ ಕರ್ತೃತ್ವ ಭೋಕ್ತೃತ್ವ ರೂಪವಾದ ಭ್ರಮ ಮೂಲವಾದವು, **ಸ್ವಾಭಾವಿಕಾನಂದವಿರುದ್ಧತ್ವ** – ಭಗವದ್ದಾಸ್ಯ ವೃತ್ತಿಗೆ ತಕ್ಕಂಥ ಸ್ವಾಭಾವಿಕವಾದ ಭಗವದನುಭವಾನಂದಕ್ಕೆ ವಿರುದ್ಧಗಳು, ಈ ಭೋಗಗಳು ಯಾವುವು ಎಂದರೆ, **ಅಚಿದ್ವಿಷಯಾನುಭವ**–ಕಾಮಿನೀ, ಸ್ರಕ್ಚಂದನಾದ್ಯೈಶ್ವರ್ಯಾನುಭವಗಳು ಇವುಗಳು ಮೇಲೆ ಹೇಳಿದ ಏಳು ದೋಷಗಳಿಂದ ಕೂಡಿವೆ **ಇವಟ್ರಿಲ್ ಯಥಾಸಂಭವಮ್** ಇತ್ಯಾದಿ ಕೈವಲ್ಯಲೋಕದಲ್ಲಿ ಕೇವಲ ಆತ್ಮಾನುಭವವು ದುಃಖಮೂಲತ್ವವೆಂಬ ಕರಣ ಕಳೇಬರಗಳ ಪ್ರೇರಣಾರೂಪವಾಗಿಲ್ಲ, ದುಃಖಮಿಶ್ರತ್ವವಿಲ್ಲ ಆದರ ದುಃಖೋದರ್ಕತ್ವ–ಕೈವಲ್ಯ ಲೋಕದ ಸುಖಾನುಭವವು ಮುಗಿದರೆ ತಿರುಗಿ ಸಂಸಾರದಲ್ಲಿ ಹುಟ್ಟುವಂತಹ ಉತ್ತರ ಕಾಲಿಕ ದುಃಖವುಂಟು ಪಂಚಾಗ್ನಿ ವಿದ್ಯಾ ನಿಷ್ಠನಿಗೆ ದುಃಖೋದರ್ಕವಿಲ್ಲ. ಅವನು ಸ್ವಲ್ಪ ಕಾಲ ಕೈವಲ್ಯಾನಂದವನ್ನು ಅನುಭವಿಸಿ ಅನಂತರ ಮೋಕ್ಷವನ್ನು ಪಡೆಯುತ್ತಾನ. ಈ ಕೈವಲ್ಯಾನುಭವಕ್ಕೆ ಬಾಕಿ ದೋಷಗಳುಂಟು

ಇವ್ವನುಭವಂಗಳುಕ್ಕೆದಿರ್‌ತಟ್ಟಾನ–ಇತ್ಯಾದಿ ಈ ಐಶ್ವರ್ಯ ಕೈವಲ್ಯಾನುಭವಗಳಿಗೆ ವಿರೋಧವಾದ ಭಗವದನುಭವದ **ವೈಲಕ್ಷಣ್ಯತ್ತೈಯುಮ್**- ವಿಲಕ್ಷಣ ಸ್ವರೂಪವನ್ನು ಅಂದರೆ ಈ ಏಳು ದೋಷಗಳಾವುವೂ ಇಲ್ಲದೆ ಅಪ್ರಾಕೃತ ಸ್ಥಾನದಲ್ಲಿ ನಿರತಿಶಯಾನಂದ ರೂಪವಾದ ಭಗವತ್ಸ್ವರೂಪ ರೂಪಗುಣ ವಿಭವಗಳನ್ನು, ವಿಶದವಾಗಿ ಅನುಸಂಧಾನ ಮಾಡಿ. **ಪರಮಾತ್ಮನಿ** ಇತ್ಯಾದಿ–ಭಗವಂತನಲ್ಲಿ ಪ್ರೀತಿಯುಳ್ಳವನಾಗಿ, ಇತರ ವಿಷಯಗಳಲ್ಲಿ ಪ್ರೀತಿಯಿಲ್ಲದವನಾಗಿರುವಂಥಹ **ಅವಸ್ಥೆ**–ವೈರಾಗ್ಯ ದಶೆಯನ್ನು ಹೊಂದಿದವನಾಗಿ ಆಗುತ್ತಾನೆ ಪರಮಾತ್ಮನಲ್ಲಿ ಪ್ರೀತಿಯೆಂದರೇನು ಎಂಬುದನ್ನು ಗೀತಾರ್ಥಸಂಗ್ರಹದಲ್ಲಿ ಆಳವಂದಾರವರು ವರ್ಣಿಸಿದ್ದಾರೆ ಅಥಾಗಿ, ಜ್ಞಾನೀತು ಪರಮೈಕಾಂತೀ ಪರಾಯತ್ತಾತ್ಮ ಜೀವನಃ । ತತ್ಸಂಶ್ಲೇಷ ವಿಯೋಗೈಕ ಸುಖ ದುಃಖಸ್ತದೇಕಧೀಃ ॥

---

13) ರುದ್ರಾದಿತ್ಯವಸೂನಾಂಚ ತಥಾಽನ್ಯೇಷಾಂ ದಿವೌಕಸಾಮ್ ।
ಏತೇವೈನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ ॥ (ಭಾರ ಶಾಂತಿ 196-6)
ರುದ್ರ ಆದಿತ್ಯ ಮೊದಲಾದ ದೇವತೆಗಳ ಸ್ಥಾನಗಳು ಪರಮಾತ್ಮನ ಸ್ಥಾನಕ್ಕೆ ಹೋಲಿಸಿ ನೋಡಿದರೆ, ನರಕ ತುಲ್ಯಗಳು.

1) ಪರಮಾತ್ಮನಿಯೋ ರಕ್ತೋ ವಿರಕ್ತೋಽ ಪರಮಾತ್ಮನಿ ।
ಸರ್ವೇಷಣಾವಿನಿರ್ಮುಕ್ತಃ ಸಭೈಕ್ಷಂ ಭೋಕ್ತುಮರ್ಹತಿ ॥ (ಬಾರ್ಹಸ್ಪತ್ಯ ಸ್ಮೃತಿ)
ಭಗವಂತನಲ್ಲಿ ಪ್ರೀತಿಯುಳ್ಳವನಾಗಿ ಇತರ ವಿಷಯಗಳಲ್ಲಿ ವೈರಾಗ್ಯದಿಂದ ಕೂಡಿದವನು ಪ್ರಾಕೃತ ವಿಷಯವಾದ ಪುತ್ರದಾರ ಗೃಹಕ್ಷೇತ್ರ ವಿತ್ತೇಷಣೆ (ಆಸೆ) ಗಳನ್ನು ಬಿಟ್ಟು, ಭಿಕ್ಷೆಯಿಂದ ಜೀವಿಸತಕ್ಕವನು

ಪ್ರವೃತ್ತಿ ಧರ್ಮಂಗಳೈವಿಟ್ಟು ನಿವೃತ್ತಿಧರ್ಮಂಗಳೈ ಕೈಕ್ಕೊಳ್ಳುವರೇ ಮುಮುಕ್ಷುಕ್ಕಳ್.

1) "ಪ್ರವೃತ್ತಿ ಲಕ್ಷಣಂಧರ್ಮಂ ಪ್ರಜಾಪತಿರಥಾಬ್ರವೀತ್" ಎನ್ಗಿರಪ್ರವೃತ್ತಿ ಧರ್ಮಙ್ಗಳಿಲ್‌ನಿನ್ರುಮ್ ನಿವೃತ್ತರಾಯ್, 2) ನಿವೃತ್ತಿಲಕ್ಷಣಂ ಧರ್ಮ ಮೃಷಿರ್ನಾರಾಯಣೋಬ್ರವೀತ್" ಎನ್ಗಿರ ನಿವೃತ್ತಿ ಧರ್ಮಙ್ಗಳಿಲೇ ಪ್ರವೃತ್ತರಾನವರ್ಗಳ್ ಮುಮುಕ್ಷುಕ್ಕಳಾನ ವಧಿಕಾರಿಹಳ್.

ಪರಮಪುರುಷಾರ್ಥೋಪಾಯಾನುಷ್ಠಾನಮ್ ಆವಶ್ಯಕಮ್.

ಕೀಳ್ಚ್ಚೊನ್ನ ಪಡಿಯಿಲೇ ಪರಾವರಙ್ಗಳಾನ ತತ್ವಙ್ಗಳೈಯುಮ್, ಪುರುಷಾರ್ಥಂಗಳೈಯುಮ್ ತೆಳಿನ್ದಾಲುಮ್, ಇಪ್ಪಡಿ ವೈರಾಗ್ಯಪೂರ್ವಕಮಾಹ ಪರಮಪುರುಷಾರ್ಥೋಪಾಯಾನುಷ್ಠಾನತ್ತಿಲ್ ಪ್ರವೃತ್ತಿ

ಲಬ್ಧಾತ್ಮಾತದ್ಗತ ಪ್ರಾಣಃ ಮನೋ ಬುದ್ಧೀಂದ್ರಿಯ ಕ್ರಿಯಃ ||

ಎಂದು ಭಗವಂತನಲ್ಲಿಯೇ ನೆಟ್ಟ ಮನಸ್ಸನಾದವನು ತನ್ನ ಜೀವನವು ಭಗವದನುಭವಾಧೀನ ಇತರ ದೇವತೆಗಳಲ್ಲಿಯೂ ಇತರ ಪುರುಷಾರ್ಥಗಳಲ್ಲಿಯೂ ಆಸೆಯಿಲ್ಲದವನು. ಭಗವತ್ಸಂಶ್ಲೇಷವೇ–ಭಗವಂತನೊಡನೆ ಕೂಡಿ ಇರುವುದೇ ಸುಖ. ಭಗವಂತನ ಅಗಲಿಕೆಯೇ ದುಃಖ ಪ್ರಾಣ, ಮನಸ್ಸು, ಬುದ್ಧಿ, ಇಂದ್ರಿಯ ವ್ಯಾಪಾರಗಳೆಲ್ಲವೂ ಅವನಲ್ಲಿಯೇ ಇರುವುವು. ಆದರಿಂದಾಗಿ ಅವನ ಆತ್ಮಾ ಸತ್ತೆಯಿಂದ್ಲೂಕೂಡಿರುತ್ತದೆ ಪರಮಾತ್ಮನನ್ನು ಬಿಟ್ಟು ಇತರ ವಿಷಯಗಳಲ್ಲಿ ವಿರಕ್ತಿ ಎಂದರೆ, "ನದೇಹಂ ನಪ್ರಾಣಾನ್ನ ಚ ಸುಖಮಶೇಷಾಭಿಲಷಿತಂ ನಾಚಾತ್ಮಾನಂ ನಾನ್ಯತ್ ಕಿಮ ಪಿತವಶೇಷತ್ವವಿಭವಾತ್ ಬಹಿರ್ಭೂತಮ್||" ಎಂಬ ಆಳವಾಂದಾರ್ ಸ್ತೋತ್ರರತ್ನ (ಶ್ಲೋ57) ಶ್ರೀಸೂಕ್ತಿಯಲ್ಲಿ ಹೇಳಿರುವಂತ ಭಗವಂತನ ಕೈಂಕರ್ಯಕ್ಕೆ ಉಪಯೋಗಪಡದ ಶರೀರ, ಪ್ರಾಣೇಂದ್ರಿಯಗಳು, ಆತ್ಮಾ, ಐಶ್ವರ್ಯಾದಿಗಳು ನನಗೆ ಬೇಕಿಲ್ಲ ಅವುಗಳು ನೂರು ಚೂರಾಗಿ ಒಡೆದು ಹೋಗಿ ಹಾಳಾಗಿ ಹೋಗಲಿ ಎಂಬ ವೈರಾಗ್ಯಾವಸ್ಥ

ಪ್ರವೃತ್ತಿ ನಿವೃತ್ತಿ ಧರ್ಮ

ಇಂಥಹ ಅವಸ್ಥೆಯಿಂದ ಕೂಡಿದವನು 1) **ಪ್ರವೃತ್ತಿ ಲಕ್ಷಣಂ**–ಇತ್ಯಾದಿ ಹೇಳುವ ಪ್ರವೃತ್ತಿ ಧರ್ಮಗಳನ್ನು– ಧರ್ಮಾರ್ಥ ಕಾಮಗಳನ್ನು ಸಂಪಾದಿಸುವ ಕಾಮ ಕರ್ಮಗಳನ್ನು ಅನುಷ್ಠಿಸುವ ಪ್ರಯತ್ನದಿಂದ ನಿವೃತ್ತನಾಗಿ, 2) **ನಿವೃತ್ತಿ ಲಕ್ಷಣಂ**–ಇತ್ಯಾದಿ ನಿವೃತ್ತಿ ಧರ್ಮಗಳಲ್ಲಿ– ಮೋಕ್ಷ ಸಾಧಕವಾದ ವ್ಯಾಪಾರಗಳಲ್ಲಿ ಪ್ರವೃತ್ತಿಸುವವರು, ಮೋಕ್ಷವನ್ನು ಪಡೆಯಲು ಅಧಿಕಾರಿಗಳು

ವೈರಾಗ್ಯದಿಂದ ಮೋಕ್ಷೋಪಾಯದಲ್ಲಿ ಪ್ರವರ್ತಿಸದೆ ಇರುವವನ ಜ್ಞಾನವ್ಯರ್ಥ –

ಹೀಗೆ ಪರದೇವತಾ ಪಾರಮಾರ್ಥ್ಯಾಧಿಕಾರದಿಂದಾರಂಭಿಸಿ ಇಲ್ಲಿಯವರೆಗೆ ಹೇಳಿರುವ ವಿಷಯಗಳನ್ನು ತಿಳಿದುಕೊಂಡು ಮೋಕ್ಷೋಪಾಯದಲ್ಲಿ ಪ್ರವರ್ತಿಸದೇ ಇರುವವರ ಜ್ಞಾನವು ವ್ಯರ್ಥವೆಂದು **ಕೀಳ್ಚ್ಚೊನ್ನಪಡಿಯಿಲೇ** ಎಂದಾರಂಭಿಸಿ ಆಚಾರ್ಯರು ಉಪದೇಶಿಸುತ್ತಾರೆ – ಅದಾಗಿ ಪ್ರಧಾನ ಪ್ರತಿತಂತ್ರಾಧಿಕಾರದಲ್ಲಿ ಹೇಳಿರುವಂತೆ,

---

1) ಪ್ರವೃತ್ತಿ ಲಕ್ಷಣಂ ಧರ್ಮಂ ಪ್ರಜಾಪತಿ ರಥಾಬ್ರವೀತ್ |
ಪ್ರವೃತ್ತಿಃ ಪುನರಾವೃತ್ತಿಃ ನಿವೃತ್ತಿಃ ಪರಮಾಗತಿಃ || (ಭಾರ. ಶಾಂತಿ 219-4)

ಪ್ರವೃತ್ತಿ ಧರ್ಮಗಳನ್ನು ಬ್ರಹ್ಮ ದೇವನು ಹೇಳಿದನು. ಪ್ರವೃತ್ತಿ ಎಂದರೆ ಪುನರಾವೃತ್ತಿ-ಸ್ವರ್ಗಲೋಕಾದಿಗಳನ್ನು ಪಡೆದು ಪುನಃ ಭೂಲೋಕದಲ್ಲಿ ಹುಟ್ಟುವುದು ನಿವೃತ್ತಿ ಎಂದರ ಶಾಶ್ವತವಾದ ಪರಮ ಪದ ಸುಖ.

2) ಪು. ತಿ. ನೋಃ

ಯಾನಾಹಿಲ್, (3) "ಶೀಲವೃತ್ತ ಫಲಂಶ್ರುತಂ" 4) "ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ। ತಸ್ಮಾತ್ಸ ಸರ್ವಶಾಸ್ತ್ರಜ್ಞೋಯಸ್ಯ ಶಾನ್ತಂ ಮನಸ್ಸದಾ," ಎನ್ಗಿರ ಶ್ರುತ ಫಲತ್ತೈಯುಂಮ್ ಇಳಪ್ಪರ್ಗಳ್,

5) "ನಾಚ್ಛಾದಯತಿ ಕೌಪೀನಂ ನ ದಂಶಮಶಕಾಪಹಮ್ ।
ಶುನಃ ಪುಚ್ಛಮಿವಾನರ್ಥಂ ಪಾಂಡಿತ್ಯಂ ಧರ್ಮವರ್ಜಿತಮ್ ॥" ಎನ್ಗಿರಪಡಿಯೇ ಹಾಸ್ಯನಾವರ್, ಆಹೈಯಾಲ್

6) "ವಯಸಃ ಕರ್ಮಣೋರ್ಥಸ್ಯ ಶ್ರುತಸ್ಯಾಭಿಜನಸ್ಯಚ ।
ವೇಷವಾಗ್ವೃತ್ತಿ ಸಾರೂಪ್ಯಮಾಚರನ್ ವಿಚರೇದಿಹ ॥"

ಎನ್ಗಿರ ಪಡಿಯೇ ಶ್ರುತಾನು ರೂಪಮಾಹ ಸ್ವೋಚಿತಮಾನ ಪರಮ ಪುರುಷಾರ್ಥೋಪಾಯಾನುಷ್ಠಾನತ್ತಿಲೇ ತ್ವರಿಕ್ಕುಮವರ್ಗಳ್, ತನ್ಕರುಮಮ್ ಶೆಯ್ಯಪ್ಪಿರರುಹನ್ದಾರ್" ಎನ್ಗಿರಪಡಿಯೇ (7) "ತಂದೇವಾ ಬ್ರಾಹ್ಮಣಂ ವಿದುಃ," (8) "ಪ್ರಣಮಂತಿ ದೇವತಾಃ" ಇತ್ಯಾದಿಹಳಿಲ್ ಚೊಲ್ಲುಮೇತ್ತಮ್ ಪೆರುವರ್ಹಳ್.

ಪರಾವರಗಳಾನ ತತ್ವಂಗಳುಮ್–ಚಿದ ಚಿದೀಶ್ವರ ತತ್ವಗಳನ್ನೂ (**ಪರಾವರ**) **ಪುರುಷಾರ್ಥಂಗಳುಂ**–ಧರ್ಮಾರ್ಥ ಕಾಮಗಳನ್ನೂ, ಮೋಕ್ಷವನ್ನೂ, ತಿಳುವಾಗಿ ಅರಿತಿದ್ದರೂ, ಈ ಅಧಿಕಾರದಲ್ಲಿ ಹೇಳಿರುವ ರೀತಿಯಲ್ಲಿ ವೈರಾಗ್ಯ ಪೂರ್ವಕವಾಗಿ ಪರಮ ಪುರುಷಾರ್ಥೋಪಾಯವಾದ ಭಕ್ತಿ ಪ್ರಪತ್ತಿಗಳಲ್ಲೊಂದರಲ್ಲಿ ಪ್ರವರ್ತಿಸದೇ ಹೋದರೆ 3) **ಶೀಲವೃತ್ತ ಫಲಂ ಶ್ರುತಮ್**, 4) **ಶಮಾರ್ಥಂಸರ್ವಶಾಸ್ತ್ರಾಣಿ** ಎಂಬಂತೆ ಶೀಲ-ಆತ್ಮ ಗುಣ, ವೃತ್ತ–ಸದಾಚಾರ ಇವುಗಳು ಓದಿದಕ್ಕೆ ಫಲ, ಶಮಾದಿಗುಣಗಳನ್ನು ಸಂಪಾದಿಸಿಕೊಳ್ಳಲು ಎಲ್ಲಾ ಶಾಸ್ತ್ರಗಳೂ ವಿಹಿತಗಳಾಗಿವೆ, ಆದ್ದರಿಂದ ಯಾವನಮನಸ್ಸು ಅರ್ಥಕಾಮಪ್ರಾವಣ್ಯವಿಲ್ಲದೆ ಶಾಂತವಾಗಿದೆಯೋ – ವೈರಾಗ್ಯದಿಂದ ಕೂಡಿದೆಯೋ ಅವನೇ **ಸರ್ವಶಾಸ್ತ್ರಜ್ಞಃ**—ಎಲ್ಲಾ ಶಾಸ್ತ್ರಗಳನ್ನೂ ತಿಳಿದವನು, ಎಂದು ಹೇಳಿರುವ ಫಲವನ್ನು ಹೊಂದುವುದಿಲ್ಲ. ಮೇಲೂ 5) **ನಾಚ್ಛಾದಯತಿಕೌಪೀನಮ್**–ಎಂಬಂತೆ ನಾಯಿಯ ಬಾಲವು ಗುಹ್ಯ ಪ್ರದೇಶವನ್ನು ಮುಚ್ಚುವುದಿಲ್ಲ; ಕಡಿಯುವ ಸೊಳ್ಳೆಯನ್ನು ಹೋಗಲಾಡಿಸದು, ಆ ರೀತಿಯಲ್ಲಿ ಧರ್ಮಾನುಷ್ಠಾನದಲ್ಲಿ ಇಳಿಯದವನ ಪಾಂಡಿತ್ಯವು ಅನರ್ಥಕರ-ಸ್ವಲ್ಪ ಪ್ರಯೋಜನವನ್ನೂ ಉಂಟು ಮಾಡುವುದಿಲ್ಲ, ಎಂದು ಹೇಳಿರುವಂತೆ ಎಲ್ಲರಿಂದಲೂ ಪರಿಹಾಸ್ಯನಾಗುತ್ತಾನೆ **ಆಹೈಯಾಲೇ** ಇತ್ಯಾದಿ-ಆದ್ದರಿಂದ ಪರಮ ಪುರುಷಾರ್ಥೋಪಾಯಾನುಷ್ಠಾನದಲ್ಲಿ ಪ್ರವರ್ತಿಸದೆ ಹೋದರೆ ಪರಮಪುರುಷಾರ್ಥವು ಲಭಿಸದೆ, ಶೀಲವೃತ್ತ ಶಮಾದಿ ರೂಪಗಳಾದ ಫಲಗಳಿಗೆ ಹಾನಿಯುಂಟಾಗುವುದ

---

2) ವ್ಯಕ್ತಂ ಮೃತ್ಯುಮುಖಂ ವಿದ್ಯಾತ್ ಅವ್ಯಕ್ತ ಮಮೃತಂ ಪದಮ್ ।
ನಿವೃತ್ತಿ ಲಕ್ಷಣಂ ಧರ್ಮಂ ಋಷಿರ್ನಾರಾಯಣೋಽ ಬ್ರವೀತ್ ॥ ಭಾರ. ಶಾಂತಿ. (219-2)

ವ್ಯಕ್ತವೆಂದರೆ ಯಮನಬಾಯಿ. ಅವ್ಯಕ್ತವೆಂದರೆ ಅಮೃತ ಸ್ಥಾನ-ಪರಮಪದ ನಿವೃತ್ತಿಲಕ್ಷಣದಿಂದ ಕೂಡಿದ ಧರ್ಮವನ್ನು ಬದರಿಕಾಶ್ರಮವಾಸಿಯಾದ ನಾರಾಯಣನು ಹೇಳಿದನು. ಫಲದಲ್ಲಿ ಆಸೆಯಿಂದ ಅನುಷ್ಠಿಸುವ ಕರ್ಮಗಳಿಗೆ ಪ್ರವೃತ್ತಿ ಧರ್ಮಗಳೆಂದೂ, ಆಸೆಯಿಲ್ಲದೆ ಅನುಷ್ಠಿಸುವ ಕರ್ಮಗಳು ನಿವೃತ್ತಿ ಧರ್ಮಗಳೆಂದೂ ವ್ಯವಹಾರ.

3) ಅಗ್ನಿಹೋತ್ರ ಫಲಾವೇದಾಃ ಶೀಲವೃತ್ತ ಫಲಂ ಶ್ರುತಮ್ ।
ರತಿಪುತ್ರ ಫಲಾದಾರಾಃ ದತ್ತ ಭುಕ್ತಫಲಂ ಧನಮ್ ॥ ಭಾರ ಸಭಾ (5-117)

ವೇದಾಧ್ಯಯನ ಮಾಡುವುದು ಅಗ್ನಿಹೋತ್ರ ಮಾಡಲು ಉಪಯೋಗ ಓದಿದುದಕ್ಕೆ ಒಳ್ಳೆಯ ಸ್ವಭಾವ, ಸದ್ವೃತ್ತಿಗಳು ಫಲ ಹೆಂಡತಿಯು ರತಿ ಕ್ರಿಡೆಗೂ ಮಕ್ಕಳನ್ನು ಹೆಡೆಯುವುದಕ್ಕೂ ಫಲಭೂತಳು ಹಣಕ್ಕೆ ದಾನ, ಊಟ ಮಾಡುವುದು ಇತ್ಯಾದಿ ಫಲ

4) ಇತಿ. ಸಮು. (12-37)

5), 6),7), 8), ಪು. ತಿ. ನೋ.

ರಿಂದಲೂ, ಸನ್ಮಾರ್ಗದಲ್ಲಿರದ ಪಂಡಿತನನ್ನು ನೋಡಿ ಲೋಕದಲ್ಲಿ ಜನರು ಪರಿಹಾಸ್ಯಮಾಡುವುದರಿಂದಲೂ, **6) ವಯಸಃಕರ್ಮಣೋರ್ಥಸ್ಯ**-ಎಂಬಂತೆ ತನ್ನ ವಯಸ್ಸು ಕರ್ಮ, ಐಶ್ವರ್ಯ, ವಿದ್ಯೆ, ಸತ್ಕುಲ ಪ್ರಸೂತಿತ್ವ ಮೊದಲಾದವುಗಳಿಗೆ ಅನುಗುಣವಾಗಿ ವೇಷ, ಮಾತು, ನಡತೆಗಳು ಏಕರೂಪವಾಗಿದ್ದುಕೊಂಡು ನಡೆದುಕೊಳ್ಳಬೇಕು, ಎಂದು ಹೇಳಿರುವಂತೆ, ತಾನು ಓದಿ ತಿಳಿದಿರುವ ಶಾಸ್ತ್ರ ಜ್ಞಾನಕ್ಕೆ ಅನುರೂಪವಾಗಿ **ಸ್ವೋಚಿತವಾನ** – ತನ್ನ ಅಧಿಕಾರಕ್ಕೆ ತಕ್ಕ, ಪರಮ ಪುರುಷಾರ್ಥಕ್ಕೆ ಉಪಾಯಗಳಾದ ಭಕ್ತಿ ಪ್ರಪತ್ತಿಗಳೊಂದನ್ನು ಅನುಷ್ಠಿಸಲು ತ್ವರೆ ಪಡಬೇಕು. ಹೀಗೆ **ತನ್‌ಕರುಮಮ್‌ಶೆಯ್ಯ**-ತನಗೆ ಶಾಸ್ತ್ರವಿಹಿತವಾದ ಕರ್ಮಗಳನ್ನು ಅನುಷ್ಠಿಸಿದರೆ, **ಪಿರರ್**-ಹಾಗೆ ಅನುಷ್ಠಿಸಿ ಫಲವನ್ನು ಹೊಂದದ ಸತ್ಪುರುಷರು, **ಉಹಂದಾರ್**-"ಯಮಾರ್ಯಾಃ ಕ್ರಿಯಮಾಣಂ ಪ್ರಶಂಸಂತಿ ಸೋಧರ್ಮಃ"-ಎಂಬಂತೆ ಪ್ರಶಂಸಾಪೂರ್ವಕವಾಗಿ ಸಂತೋಷಪಡುತ್ತಾರೆ. **7) ತಂದೇವಾಃಬ್ರಾಹ್ಮಣಂವಿದುಃ** ಎಂಬಂತೆ ಹೀಗೆ ಕರ್ಮಾನುಷ್ಠಾನ ಮಾಡುವವನನ್ನು ದೇವತೆಗಳು ಬ್ರಹ್ಮಜ್ಞಾನಿ ಎಂದು ತಿಳಿದು ಶ್ಲಾಘಿಸುತ್ತಾರೆ. **8) ಪ್ರಣಮಂತಿ ದೇವತಾಃ** ಎಂಬುದೇ ಮೊದಲಾದ ವಾಕ್ಯಗಳಲ್ಲಿ ಹೇಳಿರುವಂತೆ ಎಲ್ಲರೂ ಗೌರವಿಸುವ ರೀತಿಯಲ್ಲಿ ಹಿರಿಮೆಯನ್ನು ಪಡೆಯುತ್ತಾನೆ. ಇವನು ಈ ಶ್ಲಾಘನೆಗಳಿಗೆ ಆಸೆಪಟ್ಟು ಮಾಡುತ್ತಾನೆಂದಲ್ಲ. ತಾನಾಗಿಯೇ ಎಲ್ಲರೂ ಇವನನ್ನು ಗೌರವಿಸುತ್ತಾರೆ ಎಂದರ್ಥ. ಇವನಿಗೆ ಆತ್ಮ ಪ್ರಶಂಸೆಯೂ ಕೂಡದು, ಎಂಬುದು ತಾತ್ಪರ್ಯ.

---

5) ಕೌಪೀನಂ-ಗುಹ್ಯ ಪ್ರದೇಶ ಪಾಂಡಿತ್ಯವನ್ನು ಸಂಪಾದಿಸಿ ಧರ್ಮಾನುಷ್ಠಾನ ಮಾಡದಿರುವುದು ಅನರ್ಥಕರ.

6) ಮನು ಸ್ಮೃತಿ. (4-18)

7) ಅಸಿತಂಸಿತಕರ್ಮಾಣಂ ಯಥಾದಾಂತಂತಪಸ್ವಿನಮ್ ।
ಚಂಡಾಲಮಪಿ ವೃತ್ತಸ್ಥಂ ತಂದೇವಾ ಬ್ರಾಹ್ಮಣಂವಿದುಃ ॥ (ಭಾರ ಶಾಂತಿ 118-11)

ಶುದ್ಧಸಮಾಚಾರನಾಗಿ ಇಂದ್ರಿಯಗಳನ್ನು ಅಡಗಿಸಿಕೊಂಡಿರುವ ತಪಸ್ವಿಯಾದ ಬ್ರಾಹ್ಮಣನಂತೆ, ತನ್ನವರ್ಣಾಶ್ರಮಗಳಿಗನು ಗುಣವಾದ ಒಳ್ಳೆಯ ನಡತೆಯುಳ್ಳವನು ಚಂಡಾಲನಾಗಿದ್ದರೂ, ಅವನನ್ನು ದೇವತೆಗಳಾದಿಯಾಗಿ ಎಲ್ಲರೂ ಗೌರವಿಸುತ್ತಾರೆ.

a) ಯೋಽಗ್ನಿಹೋತ್ರರತೋದಾಂತಃ ಸಂತೋಷನಿರತಃ ಶುಚಿಃ ।
ತಪಸ್ಸ್ವಾಧ್ಯಾಯ ಶೀಲಶ್ಚ ತಂದೇವಾಃ ಬ್ರಾಹ್ಮಣಂವಿದುಃ ॥

b) ಯೇನಕೇನ ಚಿದಾಚ್ಛನ್ನಃ ಯೇನಕೇನ ಚಿದಾಶಿತಃ ।
ಯತ್ರಕ್ವಚನ ಶಾಯೀಸ್ಯಾತ್‌ತಂದೇವಾಃ ಬ್ರಾಹ್ಮಣಂ ವಿದುಃ ॥

c) ಯೋಽಹೇರಿವಗಣಾದ್ಭೀತಃ ಸನ್ಮಾನಾನ್ಮರಣಾದಿವ ।
ಕುಣಪಾದಿವ ಯಸ್ತ್ರೀಭ್ಯಃ ತಂದೇವ ಬ್ರಾಹ್ಮಣಂವಿದುಃ ॥

d) ಕಾಮಕ್ರೋಧಾನೃತ ದ್ರೋಹ ಲೋಭ ಮೋಹ ಮದಾದಯಃ ।
ನಸಂತಿ ಯತ್ರರಾಜೇಂದ್ರ ತಂದೇವಾ ಬ್ರಾಹ್ಮಣಂವಿದುಃ ॥ ಇತಿ, ಸಮು. 28-88, 89, 92, 93)

a) ಅಗ್ನಿಹೋತ್ರ ಮಾಡುವವನು, ಇಂದ್ರಿಯಗಳನ್ನು ಅಡಗಿಸಿರುವವನು, ಅಲ್ಪತುಷ್ಟನು, ಶುಚಿಯಾಗಿರುವವನು, ತಪಸ್ಸು ವೇದಾಧ್ಯಯನ ಮೊದಲಾದವನ್ನು ಮಾಡುವ ಸ್ವಭಾವವುಳ್ಳವನು, ಬ್ರಾಹ್ಮಣನೆಂದು ದೇವತೆಗಳು ಗೌರವಿಸುತ್ತಾರೆ.

b) ಸಿಕ್ಕಿದುದನ್ನು ಉಟ್ಟು ಸಿಕ್ಕಿದುದನ್ನು ಊಟಮಾಡಿ, ಎಲ್ಲಿಯಾದರೂ ಒಂದು ಕಡೆ ಮಲಗಿಕೊಂಡಿರುವವನನ್ನು ಬ್ರಾಹ್ಮಣನನ್ನಾಗಿ ದೇವತೆಗಳು ಭಾವಿಸುತ್ತಾರೆ

c) ಹಾವನ್ನು ನೋಡಿ ಹೆದರುವಂತೆ, ಜನಸ್ತೋಮದಲ್ಲಿ ಅನ್ವಯಿಸದೆ ಇರಬೇಕು. ಸನ್ಮಾನವನ್ನು ಮರಣದ ಹಾಗೆ ತಿಳಿದು ತ್ಯಜಿಸಬೇಕು ಸ್ತ್ರೀಗಳನ್ನು ಶವದ ಹಾಗೆ ತಿಳಿದು ತ್ಯಜಿಸಬೇಕು. ಅಂಥವನನ್ನು ದೇವತೆಗಳು ಬ್ರಾಹ್ಮಣನಂತೆ ಗೌರವಿಸುತ್ತಾರೆ.

d) ಕಾಮ, ಕ್ರೋಧ, ಸುಳ್ಳು, ದ್ರೋಹ, ಲೋಭ, ಮೋಹ, ಮದ (ಗರ್ವ) ಮೊದಲಾದವು ಯಾವನಲ್ಲಿ ಇಲ್ಲವೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ

ಈ ವಾಕ್ಯಗಳಿಗೆ ಜಾತಿನಿಮಿತ್ತವಾದ ಬ್ರಾಹ್ಮಣ್ಯವನ್ನು ಹೊಂದುತ್ತಾರೆಂಬುದು ಅಭಿಪ್ರಾಯವಿಲ್ಲ. ಇಂದ್ರಿಯ ನಿಗ್ರಹರೂಪ ಗುಣನಿಮಿತ್ತವಾದ ಪ್ರಶಂಸೆ. ಬ್ರಾಹ್ಮಣನಲ್ಲಿರಬೇಕಾದ ಈ ಗುಣಗಳು ಯಾರಲ್ಲಿದ್ದರೂ ಅವನು ಪ್ರಶಂಸಾರ್ಹನು ಎಂದು ತಾತ್ಪರ್ಯ.

(8) ಪು. ತಿ. ನೋ.

ನಿನ್ರ ಪುರಾಣ ನಡಿಯಿಣ್ಣೈ ಯೇನ್ದು ನೆಡುಮ್ ಪಯನುಮ್ ।
ಪೊನ್ರುದಲೇ ನಿಲೈಯೆನ್ರಿಡ ಪ್ಪೊಙ್ಗುಮ್ ಪವಕ್ಕಡಲುಮ್ ॥
ನನ್ರಿದು ತೀಯದಿದೆನ್ರು ನವಿನ್ರವರ್ ನಲ್ಲರುಳಾಲ್ ।
ವೆನ್ರು ಪುಲನ್ಗಳೈ ವೀಡಿನೈ(ಡೈ) ವೇಣ್ದುಮ್ ಪೆರುಮ್ಪಯನೇ ॥೧೪॥
ವಿಷಮಧುಬಹಿಷ್ಕುರ್ವನ್ ಧೀರೋ ಬಹಿರ್ವಿಷಯಾತ್ಮಕಂ ।
ಪರಿಮಿತಸುಖಸ್ವಾತ್ಮ ಪ್ರಾಪ್ತಿ ಪ್ರಯಾಸಪರಾಙ್ಮುಖಃ ॥
ನಿರವಧಿಮಹಾನಂದ ಬ್ರಹ್ಮಾನುಭೂತಿ ಕುತೂಹಲೀ ।
ಜಗತಿ ಭವಿತಾ ದೈವಾತ್ಕಶ್ಚಿಜ್ಜಿಹಾಸಿತ ಸಂಸೃತಿ ॥೧೬॥

ಇತಿಕವಿತಾರ್ಕಿ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ ಶ್ರೀಮದ್ವೇಂಕಟನಾಥಸ್ಯ
ವೇದಾಂತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ
ಮುಮುಕ್ಷುತ್ವಾಧಿಕಾರಃ ಸಮಾಪ್ತಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಈ ಅಧಿಕಾರದಲ್ಲಿ ಹೇಳಿದ ಭಗವದನುಭವಪೂರ್ವಕವಾದ ಭಗವತ್ಕೈಂಕರ್ಯ ವೈಲಕ್ಷಣ್ಯವನ್ನೂ ಸಾಂಸಾರಿಕ ಫಲದ ಹೇಯತ್ವವನ್ನೂ ಉಪದೇಶಿಸಿದ ಆಚಾರ್ಯರ ಕೃಪಾವಿಶೇಷದಿಂದ ಇಂದ್ರಿಯಗಳನ್ನು ಜಯಿಸಿ, ಒಬ್ಬನು ಮೋಕ್ಷವನ್ನು ಹೊಂದಲು ಆಸೆಪಡುತ್ತಾನೆಂದು **ನಿನ್ರಪುರಾಣನ್** ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ. **ನಿನ್ರಪುರಾಣನ್**–ಮಹಾಲಕ್ಷ್ಮಿಯೊಡಗೂಡಿ ಸರ್ವಸ್ಮಾತ್ಪರನೆಂದು ಪ್ರಕಾಶಿಸುವ ಪುರಾಣ ಪುರುಷನಾದ ಮಹಾವಿಷ್ಣುವಿನ, **ಅಡಿಯಿಣ್ಣೈ**- ಪರಸ್ಪರ ಸದೃಶಗಳಾದ ಎರಡು ಪಾದಗಳನ್ನು **ಏಂದುಮ್**– ಶಿರಸಾ ಧರಿಸಿ ಕೈಂಕರ್ಯ ಮಾಡುವ **ನೆಡುಂಪಯನುಮ್**–ದೀರ್ಘಕಾಲ (ನಿತ್ಯ) ಪುರುಷಾರ್ಥವನ್ನೂ, **ಪೊನ್ರುದಲೇ ನಿ ಲೈಯೆನ್ರಿಡ**–ನಶಿಸಿ ಹೋಗುವುದೇ ಸ್ವಭಾವವಾದ, **ಪೊಂಗುಂಪವಕ್ಕಡಲುಂ**–ಅಭಿವೃದ್ಧವಾಗುತ್ತಿರುವ ಸಂಸಾರ ಸಾಗರವನ್ನೂ, **ನನ್ರಿದು**– ಇದು ಒಳ್ಳೆಯದು, **ತೀಯದು ಇದು**– ಇದು ಕೆಟ್ಟದು ಹೇಯವಾದದ್ದು **ಎನ್ರು ನವಿನ್ರವರ್**– ಎಂದು ಉಪದೇಶಿಸಿದ ಆಚಾರ್ಯರುಗಳ, **ನಲ್ಲರುಳಾಲ್**- ಒಳ್ಳೆಯ ಕೃಪೆಯಿಂದ, **ಪುಲನ್‌ಗಳೈವೆನ್ರು**- ಇಂದ್ರಿಯಗಳನ್ನು ಜಯಿಸಿ, **ಪೆರುಂಪಯನೇ** – ಪರಮ ಪುರುಷಾರ್ಥವಾದ **ವೀಡಿನೈ**–ಪರಮಪದವನ್ನು ಅಂದರೆ ಮೋಕ್ಷವನ್ನು, **ವೇಂಡುಮ್**– (ಮುಮುಕ್ಷುವಾದ ಒಬ್ಬ ಮಹಾತ್ಮಾ) **ಅಪೇಕ್ಷಿಸುತ್ತಾನೆ**,

---

8) ದ್ರವಂತಿ ದೈತ್ಯಾಃ ಪ್ರಣಮಂತಿ ದೇವತಾಃ
ನಶ್ಯಂತಿ ರಕ್ಷಾಂಸ್ಯ ಪಯಾಂತಿಚಾರಯಃ ।
ಯತ್ಕೀರ್ತನಾತ್ ಸೋऽದ್ಭುತ ರೂಪ ಕೇಸರೀ
ಮಮಾಸ್ತು ಮಾಂಗಲ್ಯ ವಿದರ್ಧಯೇ ಹರಿಃ ॥ (ಮಾಂಗಲ್ಯ ಸ್ತೋತ್ರ ವಿಷ್ಣು ಧರ್ಮ 43-28)

ಆದ್ಭುತ ರೂಪದಿಂದ ಕೂಡಿದ ಲಕ್ಷ್ಮೀನೃಸಿಂಹನನ್ನು ಸ್ತೋತ್ರ ಮಾಡಿದರೆ ದೈತ್ಯರು ನೀರಾಗಿ ಹೋಗುತ್ತಾರೆ. ದೇವತೆಗಳು ನಮಸ್ಕರಿಸುತ್ತಾರೆ. ರಾಕ್ಷಸರು ನಾಶ ಹೊಂದುತ್ತಾರೆ. ಶತ್ರುಗಳು ಓಡಿಹೋಗುತ್ತಾರೆ. ಅಂಥಹ ಹರಿಯು ನನಗೆ ಮಾಂಗಲ್ಯವನ್ನು ಅಭಿವೃದ್ಧಿಗೊಳಿಸಲಿ

ಕೋಟಿಯಲ್ಲೊಬ್ಬನು ಜನ್ಮಾಂತರಾರ್ಜಿತವಾದ ಅದೃಷ್ಟ ವಿಶೇಷದಿಂದ ಐಶ್ವರ್ಯ ಕೈವಲ್ಯಗಳಲ್ಲಿ ವಿರಕ್ತನಾಗಿ ಭಗವದನುಭವ ಕುತೂಹಲಿಯಾಗಿ ಮೋಕ್ಷದಲ್ಲಿ ಆಸೆಯುಳ್ಳವನಾಗುತ್ತಾನೆಂದು **'ವಿಷಮಧುಬಹಿಷ್ಕುರ್ವನ್'** ಎಂಬ ಶ್ಲೋಕದಿಂದ ಆಚಾರ್ಯ ಸಾರ್ವಭೌಮರು ಅನುಗ್ರಹಿಸುತ್ತಾರೆ. ಅದಾಗಿ **ಜಗತಿಕಶ್ಚಿತ್**-ಪ್ರಪಂಚದಲ್ಲಿ ಕೋಟಿಯಲ್ಲೊಬ್ಬನು, **ದೈವಾತ್**- ವಿಲಕ್ಷಣವಾದ ಅದೃಷ್ಟ ವಿಶೇಷದಿಂದ, **ಧೀರಸ್ಸನ್**- ಮನಸ್ಸನ್ನು ಕಲಗಿಸುವ ವಿಷಯಗಳಿಂದ ಕಲಗದವನಾಗಿ, **ಬಹಿರ್ವಿಷಯಯಾತ್ಮಕಂ**-ಶಬ್ದಾದಿ ಬಹಿರ್ವಿಷಯರೂಪವಾದ **ವಿಷಮಧು**- ವಿಷಮಿಶ್ರಿತವಾದ ಜೇನುತುಪ್ಪವನ್ನು-ಪ್ರಾಕೃತ ಶಬ್ದಾದಿ ಭೋಗಗಳು ಅನುಭವ ಸಮಯದಲ್ಲಿ ಭೋಗ್ಯವಾಗಿದ್ದರೂ, ಉತ್ತರ ಕಾಲದಲ್ಲಿ ದುಃಖದಿಂದ ಕೂಡಿ ಅನರ್ಥವನ್ನುಂಟುಮಾಡುತ್ತವೆಯೆಂಬುದು ತಾತ್ಪರ್ಯ **ಬಹಿಷ್ಕುರ್ವನ್**- ಪರಿತ್ಯಜಿಸಿ, **ಪರಿಮಿತರಸಸ್ವಾತ್ಮಪ್ರಾಪ್ತಿ**- ಭಗವದನುಭವಕ್ಕಿಂತ ಅತ್ಯಲ್ಪವಾದ, ಕೇವಲಸ್ವಾತ್ಮಾನುಭವ ಪ್ರಾಪ್ತಿಗೋಸ್ಕರ **ಪ್ರಯಾಸಪರಾಙ್ಮುಖಃ**- ಮಾಡುವ ಪ್ರಾಣಾದ್ಯುಪಾಸನ ಪ್ರಯಾಸದಿಂದ ಪರಾಙ್ಮುಖನಾಗಿ. ಅಂದರೆ ಆ ಪ್ರಯಾಸವನ್ನು ಬಿಟ್ಟವನಾಗಿ, **ನಿರವಧಿಮಹಾನಂದ ಬ್ರಹ್ಮಾನುಭೂತಿಕುತೂಹಲೀ**- ಎಲ್ಲೆ ಇಲ್ಲದೆ ಮಹಾನಂದ ರೂಪವಾದ ಬ್ರಹ್ಮಾನುಭವದಲ್ಲಿ ಕುತೂಹಲನಾಗಿ (ಪ್ರೀತಿಯುಕ್ತನಾಗಿ), **ಜಿಹಾಸಿತ ಸಂಸೃತಿಃ**- ಸಂಸಾರದಲ್ಲಿ ಜಿಹಾಸೆಯುಳ್ಳವನಾಗಿ (ಹಾತುಮಿಚ್ಛಾ ಜಿಹಾಸಾ) **ಭವಿತಾ**- ಆಗುತ್ತಾನೆ.

"ಕಶ್ಚಿನ್ಮಾಂ ವೇತ್ತಿ ತತ್ವತಃ"- ಎಂದು ಗೀತೆಯಲ್ಲಿ ಹೇಳಿರುವಂತೆ ಯಾವನೋ ಒಬ್ಬ ಅದೃಷ್ಟಶಾಲಿಯು ಸಂಸಾರದಲ್ಲಿ ವಿರಕ್ತಿಯಿಂದ, ಭಗವಂತನನ್ನು ಅನುಭವಿಸಿ ಆನಂದಪಟ್ಟು ತತ್ಪ್ರೀವಾಹವಾದ ಕೈಂಕರ್ಯವನ್ನು ಮಾಡಲು ಆಸೆಯುಳ್ಳವನಾಗುತ್ತಾನೆಂಬುದು ಭಾವ.

ಮುಮುಕ್ಷುತ್ವಾಧಿಕಾರಕ್ಕೆ ಸಾರ ಚಂದ್ರಿಕಾ ವ್ಯಾಖ್ಯಾನವು ಸಮಾಪ್ತ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಅಧಿಕಾರಿವಿಭಾಗಾಧಿಕಾರಃ

ಮುಮುಕ್ಷುತ್ವೇ ತುಲ್ಯೇ ಸತಿ ಚ ಮಧುವಿದ್ಯಾದಿಷು ಯಥಾ।
ವ್ಯವಸ್ಥಾ ಸಂಸಿದ್ಧತ್ಯಧಿಕೃತಿವಿಶೇಷೇಣ ವಿದುಷಾಂ ।
ವಿಕಲ್ಪ್ಯೇತ ನ್ಯಾಸೇ ಸ್ಥಿತಿರಿತರವಿದ್ಯಾಸು ಚ ತಥಾ ।
ನಿಯತ್ಯಾ ವೈಯಾತ್ಯಂ ನಿಯಮಯಿತುಮೇವಂ ಪ್ರಭವತಿ ॥೨೦॥

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಅಧಿಕಾರಿವಿಭಾಗಧಿಕಾರಕ್ಕೆ ಸಾರಚಂದ್ರಿಕಾ ವ್ಯಾಖ್ಯಾ

ಹಿಂದಿನ ಅಧಿಕಾರದಲ್ಲಿ ನಿವೃತ್ತಿ ಧರ್ಮಗಳಲ್ಲಿ ಪ್ರವರ್ತಿಸುವವರು ಮುಮುಕ್ಷು-ಮೋಕ್ಷದಲ್ಲಿ ಆಸೆಯುಳ್ಳ ಅಧಿಕಾರಿಗಳೆಂದು ಹೇಳಿ ಈ ಅಧಿಕಾರದಲ್ಲಿ, ಅವರುಗಳು ಭಕ್ತಿಪ್ರಪತ್ತಿಯೋಗನಿಷ್ಠರು ಎಂದು ಎರಡುವಿಧವಾದವರೆಂದು ಹೇಳುವವರಾಗಿ ಅಧಿಕಾರಾರ್ಥವನ್ನು **ಮುಮುಕ್ಷುತ್ವೇ ತುಲ್ಯೇ**-ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ. **ವಿದುಷಾಂ**-ಉಪಾಸಕರಿಗೆ, **ಮುಮುಕ್ಷುತ್ವೇ** ಮೋಕ್ಷ-ರೂಪ ಫಲದಲ್ಲಿ ಅರ್ಥಿತ್ವವು-ಆಸೆಯು **ತುಲ್ಯೇಸತಿಚ**-ಸಮಾನವಾಗಿದ್ದಾಗ್ಯೂ ಫಲವು ಒಂದೇ ಆಗಿದ್ದು ಅದರಲ್ಲಿ ಆಸೆಯೂ ಎಲ್ಲರಿಗೂ ಸಮವಾಗಿದ್ದಾಗ್ಯೂ, **ಮಧು ವಿದ್ಯಾದಿಷು**-ಮಧುವಿದ್ಯೆ, ಸದ್ವಿದ್ಯೆ, ದಹರವಿದ್ಯೆ, ಶಾಂಡಿಲ್ಯ ವಿದ್ಯೆ ಇತ್ಯಾದಿ ವಿದ್ಯೆಗಳಲ್ಲಿ, **ಅಧಿಕೃತಿ ವಿಶೇಷೇಣ** ಅವರವರ ಅಧಿಕಾರ ವಿಶೇಷದಿಂದ, ಅಂದರೆ ವಸುಲೋಕ ಪ್ರಾಪ್ತಿ ಪೂರ್ವಕ ಮೋಕ್ಷವನ್ನು ಪಡೆಯಬೇಕೆಂಬ ಆಸೆಯು ಒಬ್ಬನಿಗೆ (ಮಧುವಿದ್ಯಾನಿಷ್ಠನಿಗೆ) ಉಂಟಾಗುತ್ತದೆ ವ್ಯವಧಾನವಿಲ್ಲದೆ ನೇರಾಗಿ ಮೋಕ್ಷವನ್ನು ಪಡೆಯ ಬೇಕೆಂಬ ಆಸೆಯು ಮತ್ತೊಬ್ಬನಿಗೆ (ದಹರವಿದ್ಯಾನಿಷ್ಠನಿಗೆ), ಉಂಟಾಗುತ್ತದೆ **ಯಥಾವ್ಯವಸ್ಥಾ ಸಂಸಿಧ್ಯತಿ**-ಹೇಗೆ ವ್ಯವಸ್ಥೆಯು ಏರ್ಪಡುತ್ತದೆಯೋ **ತಥಾ**-ಹಾಗೆ **ನ್ಯಾಸೇ, ಇತರವಿದ್ಯಾಸುಚ**-ಪ್ರಪತ್ತಿಯಲ್ಲಿಯೂ, ಪ್ರಪತ್ತಿ ವ್ಯತಿರಿಕ್ತ ಸದ್ವಿದ್ಯಾದಿ ಭಕ್ತಿ ವಿದ್ಯೆಗಳಲ್ಲಿಯೂ **ಸ್ಥಿತಿಃ**- ಇರುವಿಕೆಯು ಅಂದರ ಆ ವಿದ್ಯೆಗಳನ್ನು ಅನುಷ್ಠಿಸುವ ಭಾಗ್ಯವು ಏರ್ಪಡುತ್ತದೆ. ವಿಳಂಬಕ್ಷಮತೆಯು ಉಂಟಾಗಿ ಪ್ರಾರಬ್ಧ ಕರ್ಮಾವಸಾನದಲ್ಲಿ ಮೋಕ್ಷವನ್ನು ಅಪೇಕ್ಷಿಸುವಂತೆ ಒಬ್ಬನಿಗ ಬುದ್ಧಿಯುಂಟಾಗುತ್ತದೆ. ಮತ್ತೊಬ್ಬನಿಗೆ ದೇಹಾವಸನದಲ್ಲಿಯೋ, ಅಥವಾ ತಾನು ಅಪೇಕ್ಷಿತ ಕಾಲದಲ್ಲಿಯೋ ಮೋಕ್ಷವನ್ನು ಪಡೆಯಬೇಕೆಂಬ ಆಸೆಯುಂಟಾಗುತ್ತದೆ ಇದಕ್ಕೆ ಕಾರಣ ಅವರವರ ಅದೃಷ್ಟವೇ ಎಂದು ಆಚಾರ್ಯರು ನಿಗಮಿಸುತ್ತಾರೆ, **ನಿಯತ್ಯಾಃ**-ಅದೃಷ್ಟ ವಿಶೇಷದ **ವೈಯಾತ್ಯಂ**-ಧಾರ್ಷ್ಟ್ಯವು ಧೃಷ್ಟ ಸ್ವಭಾವವು, **ಏವಂ ನಿಯಮಯಿತುಂ**-ಹೀಗೆ ವ್ಯವಸ್ಥಿತವಾದ ಇಚ್ಛೆಯನ್ನುಂಟು ಮಾಡಲು **ಪ್ರಭವತಿ**-ಶಕ್ತವಾಗುತ್ತದೆ ಎಲ್ಲರಿಗೂ ತತ್ವಜ್ಞಾನ ವೈರಾಗ್ಯಾದಿಗಳು ಸಮವಾಗಿದ್ದರೂ ಮೇಲೆ ಹೇಳಿದಂತೆ ಇಚ್ಛಾ ರೂಪ ಅಧಿಕಾರ ವೈಚಿತ್ರ್ಯವು-ವ್ಯತ್ಯಾಸವು-ಆಯಾಯಾ ಅಧಿಕಾರಿಗಳ ಅದೃಷ್ಟ ವಿಶೇಷದಿಂದ ಉಂಟಾಗುತ್ತದೆ, ಎಂಬುದು ತಾತ್ಪರ್ಯ. ಭಕ್ತಿ ಪ್ರಪತ್ತಿಗಳು ವ್ಯವಸ್ಥಿತ ವಿಕಲ್ಪಗಳು.

ಮೋಕ್ಷೋಪಾಯ ಅಧಿಕಾರಿಹಳ್

ಇಪ್ಪಡಿ ಪರಮ ಪುರುಷಾರ್ಥೋಪಾಯಙ್ಗಳಾನ ನಿವೃತ್ತಿ ಧರ್ಮಙ್ಗಳಿಲೇ ಪ್ರವೃತ್ತರಾನ ಅಧಿಕಾರಿಹಳ್ ಇರುವರ್. ಅವರ್ಹಳಾಹಿರಾರ್ :— ಅದ್ವಾರಕ ಪ್ರಪತ್ತಿ ನಿಷ್ಠನುಮ್, ಸದ್ವಾರಕ ಪ್ರಪತ್ತಿ ನಿಷ್ಠನುಮ್,

ಸ್ವತಂತ್ರಾಂಗಪ್ರಪತ್ತಿಭ್ಯಾಂ ಪ್ರಪನ್ನಾವತ್ರತಾವುಭೌ ।
ಫಲಸಾಧನ ಭಕ್ತಿಭ್ಯಾಂ ಭಕ್ತಾವಪಿ ಚ ದರ್ಶಿತೌ ॥೩॥

ಮೋಕ್ಷೋಪಾಯಾಧಿಕಾರಿಗಳು

ಆ ಅಧಿಕಾರಿಗಳು ಯಾರೆಂಬುದನ್ನು ವಿಭಾಗಮಾಡಿ **ಇಪ್ಪಡಿ ಪರಮ ಪುರುಷಾರ್ಥೋಪಾಯಂಗಳಾನ** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ. ಅದಾಗಿ ಹೀಗೆ ಪರಮ ಪುರುಷಾರ್ಥವನ್ನು ಹೊಂದಲು ಉಪಾಯಗಳಾದ ನಿವೃತ್ತಿ ಧರ್ಮಗಳಲ್ಲಿ ಪ್ರವೃತ್ತರಾದ ಅಧಿಕಾರಿಗಳು ಇಬ್ಬರು. ಅವರು ಯಾರೆಂದರೆ, ಅದ್ವಾರಕ ಪ್ರಪತ್ತಿ ನಿಷ್ಠನೂ, ಸದ್ವಾರಕ ಪ್ರಪತ್ತಿ ನಿಷ್ಠನೂ, ಅದ್ವಾರಕ ಪ್ರಪತ್ತಿ ನಿಷ್ಠನೆಂದರೆ ಮೋಕ್ಷಕ್ಕೆ ಸಾಕ್ಷಾದುಪಾಯವಾಗಿ ಪ್ರಪತ್ತಿಯನ್ನು ಅನುಷ್ಠಿಸುವವನು. ಸದ್ವಾರಕ ಪ್ರಪತ್ತಿನಿಷ್ಠನೆಂದರೆ ಭಕ್ತಿಯೋಗವನ್ನು ಅನುಷ್ಠಿಸುವವನು, ಅದಕ್ಕೆ ಅಂಗವಾಗಿ ಪ್ರಪತ್ತಿಯನ್ನು ಅನುಷ್ಠಿಸುವವನು ಇವನಿಗೆ ಭಕ್ತಿಯೋಗವೇ ಸಾಕ್ಷಾದುಪಾಯ, ಪ್ರಪತ್ತಿಯು ಭಕ್ತಿಯೋಗವನ್ನು ಅನುಷ್ಠಿಸಲು ವಿರೋಧಿಯಾದ ಪಾಪಗಳನ್ನು ತೊಲಗಿಸಿ ಸಹಕರಿಸುತ್ತದೆಯಾದ್ದರಿಂದ, ಭಕ್ತಿಯೋಗಕ್ಕೆ ಅಂಗವೆಂದು ಹೇಳಿ, ಇವನನ್ನು ಸದ್ವಾರಕ-ಭಕ್ತಿದ್ವಾರಕ ಪ್ರಪತ್ತಿ ನಿಷ್ಠನೆಂದು ವ್ಯವಹರಿಸುತ್ತಾರೆ. ಇಬ್ಬರೂ ಭಕ್ತರು ಮತ್ತು ಇಬ್ಬರೂ ಪ್ರಪನ್ನರು. ಹೇಗೆ ಎಂಬುದನ್ನು **ಸ್ವತಂತ್ರಾಂಗ ಪ್ರಪತ್ತಿಭ್ಯಾಂ** ಎಂಬ ಶ್ಲೋಕದಿಂದ ಆಚಾರ್ಯರು ನಿರೂಪಿಸಿರುತ್ತಾರೆ. ಸ್ವತಂತ್ರ ಪ್ರಪತ್ತಿ—ಸಾಕ್ಷಾನ್ಮೋಕ್ಷೋಪಾಯವಾಗಿ ಅನುಷ್ಠಿಸಲ್ಪಡುವ ಪ್ರಪತ್ತಿ. ಅಂಗ ಪ್ರಪತ್ತಿ—ಭಕ್ತಿಗೆ ಅಂಗವಾಗಿ ಅನುಷ್ಠಿಸಲ್ಪಡುವ ಪ್ರಪತ್ತಿ. ಹೀಗೆ ಎರಡು ವಿಧವಾಗಿ ಈ ಪ್ರಪತ್ತಿಗಳನ್ನು ಅನುಷ್ಠಿಸುವುದರಿಂದ ಇಬ್ಬರೂ ಪ್ರಪನ್ನರು. ಹಾಗೆಯೇ ಮೋಕ್ಷಾರ್ಥ ಪ್ರಪತ್ತಿಯು ಫಲ ರೂಪವಾದ ಭಕ್ತಿ, ಭಕ್ತಿಯೋಗವು ಸಾಧನ ರೂಪವಾದ ಭಕ್ತಿ. ಇವೆರಡುಗಳಿಂದ ಇಬ್ಬರೂ ಭಕ್ತರು ಎಂದು ಪ್ರಮಾಣಗಳು ಹೇಳುತ್ತವೆ. ಫಲರೂಪವಾದ ಭಕ್ತಿ ಎಂದರೆ ಶರಣಾಗತಿಯಿಂದ ಭಕ್ತಿಯೋಗವು ಉಂಟಾಗಿ ಭಕ್ತಿಯೋಗದಿಂದ ಮೋಕ್ಷವು ಸಿದ್ಧಿಸುತ್ತದೆ ಎಂದಲ್ಲ. ಶರಣಾಗತಿಗೆ ಮೋಕ್ಷವೇ ಫಲ. ಭಗವದನುಭವ ಪರೀವಾಹವಾದ ಕೈಂಕರ್ಯವು ಭಕ್ತಿ ಪುರಸ್ಕೃತವಾದದ್ದು. "ಪರಭಕ್ತಿ ಪರಜ್ಞಾನ ಪರಮ ಭಕ್ತಿಕೃತ ಪರಿಪೂರ್ಣ ಅನವರತ ನಿತ್ಯ ವಿಶದ ತಮಾನನ್ಯ ಪ್ರಯೋಜನಸ ಪ್ರಿಯ ಭಗವದನು ಭವ ಜನಿತ ಅನವಧಿಕಾತಿಶಯ ಪ್ರೀತಿಕಾರಿತ ಅಶೇಷಾವಸ್ಥೋಚಿತ ಅಶೇಷಶೇಷತೈಕರತಿ ರೂಪ ನಿತ್ಯ ಕೈಂಕರ್ಯ", ಎಂಬ ಶ್ರೀ ಭಾಷ್ಯಕಾರರ ಗದ್ಯ ಶ್ರೀ ಸೂಕ್ತಿ ಪ್ರಕಾರ, ಭಗವದನುಭವಪರಿವಾಹ ಕೈಂಕರ್ಯವು ಪರಭಕ್ತಿ ಪರಜ್ಞಾನ ಪರಮ ಭಕ್ತಿ ಪುರಸ್ಕೃತವಾದದ್ದು. ಈ ಪರ ಭಕ್ತ್ಯಾದಿಗಳು ಸ್ವತಂತ್ರ ಪ್ರಪತ್ತಿ ನಿಷ್ಠನಿಗೆ ಫಲಕೋಟಿ ನಿವಿಷ್ಟಗಳಾಗಿ ಪ್ರಾಪ್ತವಾಗುತ್ತವೆಯಾದ್ದರಿಂದ, ಸ್ವತಂತ್ರ ಪ್ರಪತ್ತಿಯನ್ನು "ಫಲಭಕ್ತಿ" ಎಂದು ವ್ಯವಹರಿಸುತ್ತೇವೆ.

ಇದರ ಮೇಲೆ ಕೆಲವು ಆಕ್ಷೇಪಗಳೂ ಅವುಗಳಿಗೆ ಸಮಾಧಾನವೂ ಬರೆಯಲ್ಪಡುತ್ತವೆ. ಆದಾಗಿ ಶ್ರೀ ಭಾಷ್ಯಕಾರರು "ತಸ್ಯವಶೀಕರಣಂ ತಚ್ಛರಣಾಗತಿರೇವ "ಎಂದು" ಭಗವಂತನನ್ನು ವಶೀಕರಿಸಿ ಕೊಳ್ಳುವುದಕ್ಕೆ ಅವನಲ್ಲಿ ಶರಣಾಗತಿ ಮಾಡುವುದರಿಂದಲೇ" ಎಂದು ಒತ್ತಿ ಹೇಳುವುದರಿಂದ ಭಕ್ತಿಯು ಮೋಕ್ಷೋಪಾಯವಲ್ಲವೆಂಬುದು "ಏವ" ಕಾರದಿಂದ ತಿಳಿಸಲ್ಪಡುತ್ತದೆ, ಎಂಬುದು ಆಕ್ಷೇಪ. ಅನ್ಯತ್ರ ಸಾಕ್ಷಾನ್ಮೋಕ್ಷ ಸಾಧನವಾಗಿ ಭಕ್ತಿಯನ್ನು ಭಾಷ್ಯಕಾರರವರೇ ಹೇಳಿದ್ದಾರೆಯಲ್ಲಾ, ಆದ್ದರಿಂದ ಭಕ್ತಿ, ಪ್ರಪತ್ತಿಗಳೆರಡೂ ಮೋಕ್ಷ ಸಾಧನಗಳೆಂಬುದು ಸಮಾಧಾನ.

ಹಾಗಾದರೆ, "ಶರಣಾಗತಿರೇವ" ಎಂಬಲ್ಲಿಯ ಏವಕಾರಕ್ಕೆ ಏನು ಅರ್ಥ ಎಂಬುದು ಪುನಃ ಪ್ರಶ್ನೆ.

ಇದಕ್ಕೆ ಸಮಾಧಾನವಾಗಿ ಶರಣಾಗತಿ ಶಬ್ದವೂ ಭಕ್ತಿ ಶಬ್ದವೂ ಪರಸ್ಪರ ಪರ್ಯಾಯವಾದುವು ಎಂದು ಹೇಳಬಹುದು. "ತ್ವಾಂ ಪ್ರಸನ್ನಾಯ ಭಕ್ತಾಯ ಗತಿಮಿಷ್ಟಾಂ ಜಿಗೀಷತೇ | ಯಚ್ಛ್ರೇಯಃ ಪುಂಡರೀಕಾಕ್ಷತದ್ಧ್ಯಾಯಸ್ವ ಸುರೋತ್ತಮ ||" (ಇಷ್ಟವಾದ ಗತಿಯನ್ನು ಹೊಂದಲು ಆಸೆಯಿಂದ ನಿನ್ನಲ್ಲಿ ಪ್ರಪನ್ನನಾದ ಭಕ್ತನಾದ ನನಗೆ ಯಾವುದು ಶ್ರೇಯಸ್ಸೋ ಅದನ್ನು ಸುರೋತ್ತಮನೇ ದಯಪಾಲಿಸು) ಎಂಬುದೇ ಮೊದಲಾದ ಪ್ರಮಾಣ ವಚನಗಳಲ್ಲಿ ಪ್ರಪನ್ನ, ಭಕ್ತ ಎಂಬ ಪದಗಳು ಪರಸ್ಪರ ಪರ್ಯಾಯವಾಗಿ ಬಳಸಲ್ಪಟ್ಟಿವೆಯಾದ್ದರಿಂದ ಭಕ್ತಿ, ಪ್ರಪತ್ತಿ ಶಬ್ದಗಳು ಒಂದೇ ಅರ್ಥವನ್ನು ಹೇಳುತ್ತವೆ ಎಂದು ನಿಗಮಿಸಿದರೆ, "ತಸ್ಯವಶೀಕರಣಂ ತಚ್ಛರಣಾಗತಿರೇವ ಎಂಬ ವಾಕ್ಯವು ಸರಿಹೋಗುತ್ತದೆಯಲ್ಲವೆ. ಇಲ್ಲದಿದ್ದರೆ ಭಕ್ತಿಯು ಬೇರೆ, ಪ್ರಪತ್ತಿಯು ಬೇರೆ ಎಂದು ಹೇಳಿದರೆ ಗುರು ಲಘು ವಿಕಲ್ಪ ಸಂಬಂಧವಾದ ದೋಷವೂ ಏರ್ಪಡುತ್ತದೆ. ಗುರೂಪಾಯವಾದ ಭಕ್ತಿಯೋಗದಿಂದ (ಗುರೂಪಾಯ-ಬಹಳ ಕಷ್ಟವಾದ-ಬಹುಕಾಲಸಾಧ್ಯವಾದ ಉಪಾಯ) ಸಾಧಿಸಲ್ಪಡುವ ಫಲವನ್ನು ಲಘುವಾದ (ಶ್ರಮವಿಲ್ಲದೆ ಅತ್ಯಲ್ಪಕಾಲ ಸಾಧ್ಯವಾದ) ಪ್ರಪತ್ತಿಯು ಸಾಧಿಸಿಕೊಡುತ್ತದೆ ಎಂಬುದು ಸಮರ್ಪಕವಲ್ಲವಲ್ಲವೇ ಆದ್ದರಿಂದ ಭಕ್ತಿ, ಪ್ರಪತ್ತಿ ಶಬ್ದಗಳು ಪರ್ಯಾಯ ಶಬ್ದಗಳು ಎಂದು ಹೇಳುವುದೇ ಮೇಲು ಎಂಬುದು ಒಂದು ಮತ ಮತ್ತೊಂದು ಭಕ್ತಿಯೋಗಕ್ಕೆ ಅಂಗವಾಗಿ ಪ್ರಪತ್ತಿಯನ್ನು ಮಾಡಬೇಕು ಪ್ರಪತ್ತಿಯೋಗದಿಂದ "ಪರಭಕ್ತಿಯುಕ್ತಂ ಮಾಂಕುರುಷ, ಪರಭಕ್ತಿ ಪರಜ್ಞಾನ ಪರಮ ಭಕ್ತ್ಯೈಕ ಸ್ವಭಾವಂ ಮಾಕುರುಷ್ವ" ಎಂದು ಶರಣಾಗತಿಗದ್ಯದಲ್ಲಿ ಕರ್ಮಯೋಗ, ಜ್ಞಾನಯೋಗ ಭಕ್ತಿಯೋಗ ರೂಪ ಉಪಾಯಾಂತರ ಸ್ಥಾನದಲ್ಲಿ ಶರಣಾಗತಿಯನ್ನು ಪ್ರಯೋಗಿಸಿರುವುದರಿಂದ ಶರಣಾಗತಿರೇವ ಎಂಬಲ್ಲಿ ಏವಕಾರವು ಶರಣಾಗತಿ ಪೂರ್ವಕವಾಗಿ ಭಕ್ತಿಯೋಗವು ಫಲವನ್ನು ಕೊಡುತ್ತದೆ ಎಂಬುದು ತಾತ್ಪರ್ಯ ಎಂದು.

ಇದಕ್ಕೆ ಸಮಾಧಾನವೇನೆಂದರೆ ಭಗವದ್ಭಾಷ್ಯಕಾರರಿಂದ "ತಸ್ಯ ವಶೀಕರಣಂ ತಚ್ಛರಣಾಗತಿರೇವ" ಎಂದು ಹೇಳಿರುವುದು ಉಪಪನ್ನವಾದದ್ದು ಮತ್ತು ಪಾರಮಾರ್ಥಿಕವು ಶರಣಾಗತಿಯು, ಅಂಗವಾಗಿ ಅನುಷ್ಠಿಸಲ್ಪಟ್ಟು, ವಿಳಂಬ ಕ್ಷಮನಾಗಿ ಜ್ಞಾನಶಕ್ತಿಯುಳ್ಳ ತ್ರೈವರ್ಣಿಕ ಸಮರ್ಥಾಧಿಕಾರಿ ವಿಷಯದಲ್ಲಿ ಭಕ್ತಿಯೋಗವನ್ನು ಪೂರ್ತಿಗೊಳಿಸಿ ಮೋಕ್ಷವನ್ನು ಕೊಡಿಸುತ್ತದೆ. ಈ ವಿಳಂಬವನ್ನು ಸಹಿಸಲಾರದೆ ತೀವ್ರವಾದ ಮುಕ್ತಿ ಕಾಮನ ವಿಷಯದಲ್ಲಿ ಅವನು ಸಂಕಲ್ಪಿಸಿದ ಸಮಯದಲ್ಲೇ ಪ್ರಪತ್ತಿಯು ಸಾಕ್ಷಾನ್ಮೋಕ್ಷ ಸಾಧನವಾಗಿಯೂ ಆಗುತ್ತದೆ ಮೇಲೂ ಗುರುಲಘುವಿಕಲ್ಪ ದೋಷವು ಬರುವುದಿಲ್ಲ ವಿಕಲ್ಪವು ಅಧಿಕಾರಿ ವ್ಯವಸ್ಥೆಯಿಂದಲೇ ಹೊರತು, ಬೇರೆಯಲ್ಲ. ಯಾರು ಯಾವುದನ್ನು ಬೇಕಾದರೂ ಅನುಷ್ಠಿಸಬಹುದೆಂದರೆ ತುಲ್ಯ ವಿಕಲ್ಪದಿಂದ ಲಘುಗುರು ವಿಕಲ್ಪಾದಿ ದೋಷಗಳು ಸಂಭವಿಸುತ್ತವೆ ಆದ್ದರಿಂದ ಅಧಿಕಾರಿಗೆ ತಕ್ಕಂತೆ ಗುರುಲಘೂಪಾಯಗಳು ವಿಧಿಸಲ್ಪಟ್ಟಿವೆ. ಹೀಗೆ ಉಪಪತ್ತಿ ಪೂರ್ವಕವಾಗಿ ಭಕ್ತಿ, ಪ್ರಪತ್ತಿಗಳಿಗೆ ಅವಿರೋಧವನ್ನು ಹೇಳಲು ಶಕ್ಯವಾಗಿರುವಾಗ, ಶರಣಾಗತಿಯನ್ನು ಮಾತ್ರ ಅವಲಂಬಿಸಿ ಭಕ್ತಿಯೋಗವನ್ನು ತಿರಸ್ಕರಿಸುವುದೋ, ಭಕ್ತಿಯೋಗವನ್ನು ಅವಲಂಬಿಸಿ ಶರಣಾಗತಿಯನ್ನು ತಿರಸ್ಕರಿಸುವುದೋ ಪ್ರಾಮಾಣಿಕರಿಗೆ ಹೃದಯಂಗಮವಿಲ್ಲ. ಐಕ್ಯಾರ್ಥ ಕಲ್ಪನವೂ ಸರಿಯಿಲ್ಲ. ಅಂಗ ಪ್ರಪತ್ತಿಯು ಗೀತಾಭಾಷ್ಯ ಚರಮಶ್ಲೋಕದಲ್ಲಿ ಆದರಿಸಲ್ಪಟ್ಟಿರುವುದು ಭಕ್ತಿ ಪ್ರಕರಣಕ್ಕೆ ಅನುಗುಣವಾದದ್ದು. ಸ್ವತಂತ್ರ ಪ್ರಪತ್ತಿಯನ್ನು ಭಗವದ್ಭಾಷ್ಯಕಾರರು ಆದರಿಸಿ ಶರಣಾಗತಿ ಗದ್ಯದಲ್ಲಿ ಸ್ವಾನುಷ್ಠಾನ ಮೂಲಕ ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಏವಕಾರವು ಸ್ವತಂತ್ರಾಂಗ ಪ್ರಪತ್ತಿ ಪೂರ್ವಕ ಮೋಕ್ಷವೆಂಬರ್ಥದಲ್ಲಿ ಚರಿತಾರ್ಥ. ಶರಣಾಗತಿ ಗದ್ಯದಲ್ಲಿ "ಪರಭಕ್ತಿ ಯುಕ್ತಂ ಮಾಂಕುರುಷ್ವ", ಪರಭಕ್ತಿ ಪರಜ್ಞಾನ ಪರಮ ಭಕ್ತಿ ಯುಕ್ತಂ ಮಾಂಕು

ಏಷ್ಟ" ಎಂದು ಪ್ರಾರ್ಥಿಸಿರುವುದು ಪ್ರಪತ್ತಿಯ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡುತ್ತದೆ ಎಂದು ಹೇಳಲಿಕ್ಕಿಲ್ಲ. ಶರಣಾಗತಿಯು ಸಾಕ್ಷಾನ್ಮೋಕ್ಷ ಸಾಧನವಾಗುವಾಗ, ಆ ಮೋಕ್ಷ ಫಲವು ಎಂತಹುದು ಎಂದರೆ, ಪರಭಕ್ತಿ ಪರ ಜ್ಞಾನ ಪರಮ ಭಕ್ತಿ ಪೂರ್ವಕ ಭಗವಂತನನ್ನು ಅನುಭವಿಸಿ, ಅನುಭವ ಪರೀವಾಹವಾದ ಪರಿಪೂರ್ಣ ನಿತ್ಯ ಕೈಂಕರ್ಯವನ್ನು ಮಾಡುವುದೇ ಎಂಬುದು ಅಂದರೆ ಶರಣಾಗತಿಯಿಂದ ಉಂಟಾಗುವ ಫಲಸ್ವರೂಪವು ಪರಭಕ್ತ್ಯಾದಿ ಪೂರ್ವಕ ಭಗವದನುಭವ ಪರೀವಾಹವಾದ ನಿತ್ಯ, ನಿರವದ್ಯ ಕೈಂಕರ್ಯವೆಂಬುದು "ದೈವೀಂಗುಣಮಯೀಂ ಮಾಯಾಂ ದಾಸಭೂತಶ್ಶರಣಾಗತೋಽಸ್ಮಿ ತವಾಸ್ಮಿದಾಸಃ ಇತಿವಕ್ತಾರಂ ಮಾಂತಾರಯ" ಇತಿರೀತ್ಯಾ ಶರಣಾಗತಿಂ... ಅವ್ಯವಧಾನವಾಗಿ ಅಂದರೆ ಭಕ್ತಿಯೋಗವನ್ನುಂಟು ಮಾಡಿ, ಎಂಬ ವ್ಯವಧಾನವಿಲ್ಲದೆ—ಸಾಕ್ಷಾತ್ತಾಗಿ ಪ್ರಕೃತಿ ತರಣೋಪಾಯವಾಗಿ ಹೇಳಲ್ಪಟ್ಟಿದೆ ಹೀಗೆಯೇ "ಶರೀರಪಾತಸಮಯೇತು ಕೇವಲಂ ಮದೀಯಯೈವ ದಯಯಾ ಅತಿಪ್ರಬುದ್ಧಃ" ಎಂಬ ರೀತಿಯಲ್ಲಿ ಭಕ್ತಿಯೋಗ ನಿಷ್ಠನಿಗೆ ಅವಶ್ಯಕವಾದ, ಸ್ವಯತ್ನ ಸಾಧ್ಯಾಂತಿಮ ಸ್ಮೃತಿಯಿಲ್ಲದೆ ತಾನೇ ಆ ಅಂತಿಮಸ್ಮೃತಿಯನ್ನುಂಟು ಮಾಡುವುದಾಗಿ ಹೇಳುವುದರಿಂದ ಗದ್ಯದಲ್ಲಿ ಅನುಸಂಧಾನ ಮಾಡಿರುವುದು "ಸ್ವತಂತ್ರ ಪ್ರಪತ್ತಿ" ಇದು ಭಕ್ತಿಯೂ ಅಲ್ಲ, ಅದಕ್ಕೆ ಅಂಗವಾದ ಅಂಗಪ್ರಪತ್ತಿಯೂ ಅಲ್ಲ, ಎಂಬುದು ನಿರ್ವಿವಾದ. "ದ್ವಯ ಮರ್ಥಾನು ಸಂಧಾನೇನ ಸಹ ಸದೈವಂವಕ್ತಾ" ಎಂಬ ವಾಕ್ಯದಿಂದ, "ಅಖಿಲಹೇಯ ಪ್ರತ್ಯನೀಕ" ಇತ್ಯಾದಿ ಆರಂಭಿಸಿ ಹೇಳಿರುವುದು. ಗದ್ಯವು ದ್ವಯ ವ್ಯಾಖ್ಯಾನ ರೂಪವೆಂಬುದನ್ನು ಕಂಠರೋಕ್ತವಾಗಿ ನಿಷ್ಕರ್ಷಿಸುತ್ತದೆ ದ್ವಯ ಮಂತ್ರದ ಪೂರ್ವಖಂಡದಲ್ಲಿ ಹೇಳಿರುವ ಶರಣಾಗತಿಗೆ ಫಲವೇನೆಂಬ ದನ್ನು ಉತ್ತರ ಖಂಡದಲ್ಲಿ ಸರ್ವ ವಿರೋಧಿ ನಿರಸನ ಪೂರ್ವಕ ಸಾಕ್ಷಾತ್ಪರಿ ಪೂರ್ಣ ಭಗವದನುಭವ ಪರೀವಾಹ ಭೂತವಾದ ನಿತ್ಯ, ನಿರವದ್ಯ ನಿರತಿಶಯ ಕೈಂಕರ್ಯವೆಂದು ನಿರೂಪಿಸಿರುವುದರಿಂದ ಶರಣಾಗತಿ ಗದ್ಯವು ಸ್ವತಂತ್ರ ಪ್ರಪತ್ತಿ ನಿರೂಪಕವೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ ಆದ್ದರಿಂದ ಭಕ್ತಿವಿದ್ಯೆಯು ಬೇರೆ ಶರಣಾಗತಿಯನ್ನು, ಭಕ್ತ್ಯಂಗಕವಾಗಿ ಗೀತಾ ಭಾಷ್ಯದಲ್ಲಿ ಪ್ರಕರಣಾನುಗುಣವಾಗಿ ವ್ಯಾಖ್ಯಾನಮಾಡಿರುವುದು, ಶರಣಾಗತಿಯ ಸ್ವಾತಂತ್ರ್ಯವನ್ನು ಭಂಗ ಮಾಡುವುದಿಲ್ಲ.

ಹಾಗೇಯೇ ಆಗಲಿ, ಶರಣಾಗತಿಯು ಸ್ವತಂತ್ರವಾಗಿ ಮೋಕ್ಷವನ್ನು ಕೊಡುತ್ತದೆ ಎಂಬುದಕ್ಕೆ ಪ್ರಮಾಣವೇನು ಎಂದು ಕೇಳಿದರೆ, "ಯದ್ಯೇನಕಾಮಕಾಮೇನ....ಪರಮಾತ್ಮಾಚತೇನೈವಸಾಧ್ಯತೇ ಪುರುಷೋತ್ತಮಃ" ಓಮಿತ್ಯಾತ್ಮಾನಂ ಯುಂಜೀತ,...ಬ್ರಹ್ಮಣೋಮಹಿಮಾನಮಾಪ್ನೋತಿ, ಇತ್ಯಾದಿ ಪ್ರಮಾಣಗಳು, ಮತ್ತು ತ್ವಮೇವೋಪಾಯಭೂತೋಮೇ ಭವ, ಅನನ್ಯಸಾಧ್ಯೇ....ತದೇಕೋಪಾಯತಾಯಾಂಚಾ, ಇತ್ಯಾದಿ ಪ್ರಪತ್ತಿ ಸ್ವರೂಪ ಲಕ್ಷಣವಾಕ್ಯಗಳು. "ಸ್ನೇಹ ಪೂರ್ವಮನುಧ್ಯಾನಂ ಭಕ್ತಿ,, ಎಂಬುದು ಭಕ್ತಿ ಸ್ವರೂಪ ಲಕ್ಷಣ ವಾಕ್ಯ ಇವುಗಳು, ಭಕ್ತಿಪ್ರಪತ್ತಿಗಳು ಸ್ವರೂಪತಃ ಪರಸ್ಪರ ಭಿನ್ನಗಳೆಂದು ತಿಳಿಸುತ್ತವೆಯಲ್ಲವೆ.

ಸರಿ ಹಾಗಾದರೂ "ನಾನ್ಯಃ ಪಂಥಾವಿದ್ಯತೇಽಯನಾಯ" ಎಂಬ ನಿಷೇಧ ಶ್ರುತಿ ವಾಕ್ಯವು ಮೋಕ್ಷಕ್ಕೆ ಭಕ್ತಿ ವಿನಹ ಬೇರೆ ಮಾರ್ಗವಿಲ್ಲವೆಂದು ಹೇಳುತ್ತದೆಯಲ್ಲವೇ. ಅದಾಗಿ "ವೇದಾಹಮೇತಂ ಪುರುಷಂ ಮಹಾಂತಮ್" ಇತ್ಯಾದಿ ಆರಂಭಿಸಿ "ತಮೇವಂ ವಿದ್ವಾನ್ ಅಮೃತ ಇಹಭವತಿ" ಎಂದು "ಏವಂವಿದ್ವಾನ್" ಎಂಬ ಶಬ್ದದಿಂದ ಭಕ್ತಿ ಯೋಗವನ್ನು ಸೂಚಿಸಿ, "ನಾನ್ಯಃ ಪಂಥಾವಿದ್ಯತೇ" ಎಂದು ಹೇಳಿರುವುದರಿಂದ ಬೇರೆ ಯಾವುದೂ ಉಪಾಯವಿಲ್ಲ ವೆಂದು ಹೇಳುತ್ತದೆಯಲ್ಲವೇ. ಹಾಗಿರುವಾಗ ಪ್ರಪತ್ತಿಯು ಹೇಗೆ ಸ್ವತಂತ್ರವಾಗಿ ಮೋಕ್ಷಸಾಧಕ ಎಂಬುದು ಪೂರ್ವ ಪಕ್ಷಿಯ ಭಾವ ಇದಕ್ಕೆ ಸಮಾಧಾನ —"ನಾನ್ಯಃ ಪಂಥಾವಿದ್ಯತೇಽಯನಾಯ" ಎಂಬ ಶ್ರುತ್ಯರ್ಥವನ್ನು "ನಾಹಂವೇದೈ ರ್ನ ತಪಸಾ ನದಾನೇನ ನಚೇಜ್ಯಯಾ। ಶಕ್ಯ ಏವಂ ವಿಧೋದ್ರಷ್ಟುಂ ದೃಷ್ಟವಾನಸಿ ಮಾಂಯಥಾ । ಭಕ್ತ್ಯಾತ್ವನನ್ಯಯಾ ಶಕ್ಯಃ ಅಹಮೇವಂ ವಿಧೋಽರ್ಜುನ ॥ ಜ್ಞಾತುಂದ್ರಷ್ಟುಂಚತತ್ವೇನ ಪ್ರವೇಷ್ಟುಂಚ ಪರಂತಪ ॥ ಎಂಬ ಗೀತೆಯು

ಶ್ಲೋಕವು ಉಪಬೃಂಹಿಸುತ್ತದೆ. ನಿಷೇಧ ಶ್ರುತಿಗೆ, ವೇದಾಧ್ಯಯನ, ತಪಸ್ಸು, ದಾನ, ಯಜ್ಞ ಮೊದಲಾದ ಪ್ರಪತ್ತ್ಯೇತರ ಧರ್ಮಗಳು ವಿಷಯವೇ ಹೊರತು ಪ್ರಪತ್ತಿಯಲ್ಲ. ಸಮರ್ಥಾಧಿಕಾರಿ ಪರವಾದ ಶ್ರುತಿಗೆ ಅಸಮರ್ಥಾಧಿಕಾರಿವಿಷಯದಲ್ಲಿ ಹೇಳಿರುವ ಪ್ರಪತ್ತಿರೂಪ ಉಪಾಯಾಂತರ ನಿಷೇಧದಲ್ಲಿ ತಾತ್ಪರ್ಯವಿಲ್ಲ. ಹಾಗೆ ಕಲ್ಪನೆಯು ನ್ಯಾಯವಲ್ಲ. ಆದ್ದರಿಂದ ಸ್ವತಂತ್ರ ಪ್ರಪತ್ತಿಯನ್ನು ನಿಷೇಧಿಸುವ ವಾಕ್ಯವು ಯಾವುದೂ ಇಲ್ಲ. ಭಕ್ತಿ ಪ್ರಪತ್ತಿಗಳು ಏಕಾರ್ಥಬೋಧಕಗಳೆಂಬುದು ಅವುಗಳ ಲಕ್ಷಣದಿಂದ, ಹಿಂದೆಯೇ ದೂರೋತ್ಸಾರಿತಗಳು.

ಆದ್ದರಿಂದ, "ಸ್ವತಂತ್ರಾಂಗ ಪ್ರಪತ್ತಿಭ್ಯಾಂ ಪ್ರಪನ್ನಾವತ್ರತಾವುಭೌ ।
ಫಲಸಾಧನ ಭಕ್ತಿಭ್ಯಾಂ ಭಕ್ತಾವಪಿಚದರ್ಶಿತೌ ॥

ಎಂಬ ಶ್ಲೋಕದ ಪ್ರಕಾರ ಮೋಕ್ಷಕ್ಕೆ ಇಬ್ಬರು ಅಧಿಕಾರಿಗಳು ಎಂಬುದು ಸುಗಮ. ಅವರುಗಳನ್ನು ಭಕ್ತರೆಂದೂ ಹೇಳಬಹುದು ಪ್ರಪನ್ನರೆಂದೂ ಹೇಳಬಹುದು. "ಫಲ ಭಕ್ತಿ" ಎಂಬ ಪದಕ್ಕೆ ಫಲಭೂತಾ ಭಕ್ತಿರ್ಯಸ್ಯಾಸ್ಸಾ ಫಲಭಕ್ತಿಃ—ಪ್ರಪತ್ತಿಃ ಎಂದು ಕೆಲವರು ವ್ಯಾಖ್ಯಾನ ಮಾಡುತ್ತಾರೆ. ಇದು ಸರಿಯಲ್ಲ. ಫಲರೂಪಾ ಭಕ್ತಿಃ-ಫಲಭಕ್ತಿಃ—ಪ್ರಪತ್ತಿಃ ಎಂದು ವಿಗ್ರಹ ಮಾಡುವುದು ಉಚಿತ. ಶ್ರೀಮನ್ನ್ಯಾಯ ಸಿದ್ಧಾಂಜನದಲ್ಲಿ, "ಪ್ರಪತ್ತೇರಪಿ ಭಕ್ತಿ ರೂಪತ್ವಂ ಘಟತ್ಯೇವ. ಪರಮ ಪ್ರಾಪ್ಯತ್ವ ಪ್ರಾಪಕತ್ವಾನುರೂಪ ದಿವ್ಯಾತ್ಮ ಸ್ವರೂಪಾನುಬಂಧಿ ಗುಣಾನಾಂ ಶುಭಾಶ್ರಯಗತ ದೃಷ್ಟಿ ಚಿತ್ತಾಪಹಾರಿ ಕಲ್ಯಾಣ ಗುಣಾನಾಮಪಿ ವೇದ್ಯಾಕಾರಾನು ಪ್ರವಿಷ್ಟಾನಾಮನು ಸಂಧಾನೇ ಪ್ರಕೃಷ್ಟ ಸತ್ತ್ವಮೂಲಕೇ ಜಾಯಮಾನೇ ತಸ್ಯಾನುಕೂಲಾನುಭವಸ್ಯ ಪ್ರೀತಿ ರೂಪತ್ವಾನಪಾಯಾತ್ । ದರ್ಶನ ಸಮಾನಾಕಾರಾತ್ಯರ್ಥ ಪ್ರೀತಿರೂಪತ್ವಂ ತು ಅನಭ್ಯಾಸಾನ್ನ ಸ್ಯಾತ್ । ಅತೋಭಕ್ತಿ ಶಬ್ದ ಸಂಗ್ರಾಹ್ಯತ್ವಂ ಪ್ರಪತ್ತೇರಪಿಸಾಧೀಯಃ । ಇದರ ಅರ್ಥವೇನೆಂದರೆ–ಪ್ರಪತ್ತಿಯೂ ಭಕ್ತಿರೂಪವಾದದ್ದು. ಪರಮ ಪ್ರಾಪ್ಯನೂ ಪ್ರಾಪಕನೂ ಆದ ಭಗವಂತನ ದಿವ್ಯಾತ್ಮ ಸ್ವರೂಪ ನಿರೂಪಕ ಗುಣಗಳನ್ನೂ, ಮನಸ್ಸು ದೃಷ್ಟಿ ಮೊದಲಾದವುಗಳನ್ನು ಅಪಹರಿಸುವ ಶುಭಾಶ್ರಯ ದಿವ್ಯ ಮಂಗಳ ವಿಗ್ರಹ, ತದನುಬಂಧಿ ನಿರೂಪಿತ ಸ್ವರೂಪ ವಿಶೇಷಗುಣಗಳನ್ನೂ ಪ್ರಕೃಷ್ಟ ಸತ್ತ್ವೋದ್ರೇಕದಿಂದ ಪ್ರೀತಿಪೂರ್ವಕ ಅನುಸಂಧಾನ ಮಾಡಿ, ಆ ಭಗವಂತನಲ್ಲಿ ಶರಣವರಣವನ್ನು ಮಾಡುವುದು ಶರಣಾಗತಿ ಸ್ವರೂಪ. ಆ ಕಾಲದಲ್ಲಿ ಅತ್ಯರ್ಥಪ್ರಿಯವಾದ ದರ್ಶನ ಸಮಾನಾಕಾರವಾದ ಸಾಕ್ಷಾತ್ಕಾರವು ಅಸಕೃದಾವೃತ್ತಿಯಿಲ್ಲದೆ ಉಂಟಾಗದೇ ಇದ್ದರೂ, ಪ್ರೀತಿ ವಿಶೇಷ ಪೂರ್ವಕ ಸಕೃದನು ಸಂಧಾನವಿರುವುದರಿಂದ, ಆ ಭಗವದನುಭವದಲ್ಲಿ ಪ್ರೀತ್ಯತಿಶಯವು ಇರುವುದರಿಂದ ಪ್ರಪತ್ತಿಗೂ ಭಕ್ತಿ ಶಬ್ದ ಸಂಗ್ರಾಹ್ಯತ್ವವು ಉಚಿತವಾದದ್ದು, ಹೀಗೆ ನಿಪುಣರಿಂದ ಅನುಷ್ಠಿಸಲ್ಪಡುವ ಸಾಧ್ಯೋಪಾಯವಾದ ಪ್ರಪತ್ತಿಯಲ್ಲಿ ಸಿದ್ಧೋಪಾಯನಾದ ಭಗವಂತನ ಕೃಪಾಫಲರೂಪವಾದ ಅನುಸಂಧಾನವು ಗರ್ಭಿತವಾಗಿದೆಯಾದ್ದರಿಂದ, ಪ್ರಪತ್ತಿಯನ್ನು ಫಲಭಕ್ತಿ ಎಂದು ವ್ಯವಹರಿಸುವುದು ಉಚಿತ. ಭಕ್ತಿಯೋಗವು ಸಾಧನಭಕ್ತಿ. ಉಪಾಯರೂಪವಾದ ಭಕ್ತಿ ಎಂದರ್ಥ.

ಅಜ್ಞಾತ ನಿರ್ಗಮಮನಾಗಮ ಮಾರ್ಗಮಾಸೀನಂ ಮಾಂ
ಅಂಧಂಸ ಕಿಂಚಿದವಲಂಬನಮಪ್ಯಜಾನನ್ ।
ಏತಾವತೀಂಗಮಯಿತುಃ ಪದವೀಂದಯಾಳೋಃ
ಶೇಷಾಧ್ವಲೇಶನಯನೇ ಕಇವಾತಿಭಾರಃ ॥

(ವರದರಾಜ ಪಂಚಾಶತ್ ಶ್ಲೋ....)

ಸಂಸಾರದಿಂದ ಬಿಡುಗಡೆ ಹೊಂದುವ ದಾರಿ ತಿಳಿಯದು. ಶೇಷಿಯನ್ನು ಅರಿಯುವ ಜ್ಞಾನ ಕುರುಡನು. ಸಂಸಾರ ಸಮುದ್ರವನ್ನು ದಾಟಲು ಅವಲಂಬನ–ದಾಟುವ ಕೋಲು ಯಾವುದೂ ಇಲ್ಲ. ಇಂಥಹ ನನ್ನನ್ನು ಅಜ್ಞಾತ ಸುಕೃತ ಮೂಲಕ, ಜಾಯಮಾನ ಕಟಾಕ್ಷ, ಸಾತ್ವಿಕ ಸಂಭಾಷಣೆ, ಸದಾಚಾರ್ಯ ಪ್ರಾಪ್ತಿ, ಜ್ಞಾನೋಪದೇಶ, ಉಪಾಯಾನುಷ್ಠಾನಗಳನ್ನು ಮಾಡಿಸಿ ಇಷ್ಟು ದೂರ ನಡೆಸಿಕೊಂಡು ಬಂದ ಎಲೈ ಕೃಪಾಳುವಾದ ವರದನೇ, ಇನ್ನು ಸ್ವಲ್ಪ

ಪ್ರಪತ್ತಿ ಭೇದಂಗಳ್

(1) "ಸ್ನಾನಂ ಸಪ್ತವಿಧಂ ಸ್ಮೃತಂ" ಎನ್ಗಿರಪಡಿಯೇ ಯಥಾಧಿಕಾರಮ್, ಮಾಂತ್ರಮಾನಸ ದಿವ್ಯ ವಾಯವ್ಯಾದಿಹಳುವ್ ತುಲ್ಯಫಲಙ್ಗಳಾನ ಸ್ನಾನ ಭೇದಙ್ಗಳಾನಾರ್ಪೋಲೇ ಉಕ್ತಿ ಆಚಾರ್ಯ ನಿಷ್ಠೈಯೆನ್ಗಿರ ವಿನ್ನೈಯುಮ್, ಪ್ರಪತ್ತಿಯಿಲ್ ಮುಖ ಭೇದಙ್ಗಳ್.

ಡೂರ ಅಂದರೆ ನಿರ್ದಿಷ್ಟಕಾಲದಲ್ಲಿ ಶರೀರದಿಂದ ಉತ್ಕ್ರಮಿಸಿ. ಮೋಕ್ಷಕ್ಕೆ ಕರೆದೊಯ್ಯುವುದು ನಿನಗೆ ಭಾರವೇ? ಭಾರವಲ್ಲ. ಅವಶ್ಯ ನಡೆಸಿಕೊಡುತ್ತೀಯೆ ಎಂದು ತಾತ್ಪರ್ಯ) ಈ ರೀತಿಯಾದ ಸ್ವನೈರ್ಭರ್ಯವು ಭಗವಂತನ ಕೃಪಾಫಲವೆಂಬುದು ಪ್ರಪತ್ತಿ ಕಾಲದಲ್ಲಿ ತನ್ನ ಬುದ್ಧಿಯಲ್ಲಿ ಆರೂಢವಾಗಿರುವುದರಿಂದ "ಫಲ ಭಕ್ತಿ" ಪದವು ಫಲರೂಪಾ ಭಕ್ತಿಃ ಎಂಬ ಸಾಮಾನಾಧಿಕರಣ್ಯ ವೃತ್ತಿಯಿಂದ ಪ್ರಪತ್ತಿ ಪರವೆಂಬುದು ಸಿದ್ಧ ಹೀಗೆ ಜೀವಾತ್ಮನ ಉಜ್ಜೀವನಕ್ಕೆ ಪ್ರಯತ್ನ ಮಾಡುವ ಭಗವಂತನು ಮುಖ್ಯೋಪಾಯವೆಂದು ನಿಶ್ಚಯಿಸಿ. ಅವನ ಕೃಪೆಯಿಂದ ಮಾಡಿಸಲ್ಪಟ್ಟ ಸಾಧ್ಯೋಪಾಯವು ಗೌಣ – ಅಪ್ರಧಾನವೆಂಬ ಅರ್ಥದಲ್ಲಿ "ಸ್ವಹೇತುತ್ವಧಿಯಂ ರುಂಧೇ" ಎಂದು ಆಚಾರ್ಯರು ಹೇಳಿರುವುದಾಗಿ ವಿಚಕ್ಷಣರು ತಿಳಿದಿದ್ದಾರೆ ಇದರಿಂದ ವಿಧಿವಿಹಿತವಾಗ ಪ್ರಪತ್ತಿಗು ಸ್ವರೂಪವನ್ನೇ ಅಲ್ಲಗಳೆಯುವುದು ಪಂಡಿತಕೃತ್ಯವಲ್ಲ.

ಏತಾವತಾ ಪ್ರಬಂಧೇನ, "ಭಕ್ತಿಯೇ ಮೋಕ್ಷಸಾಧಕ, ಪ್ರಪತ್ತಿ ಎಂಬ ಪದವು ಭಕ್ತಿಪರ್ಯಾಯವಾದದ್ದು. ಮುಖ್ಯೋಪಾಯವಾದ ಚಿರಕಾಲ ಸಾಧ್ಯವಾದ ಭಕ್ತಿ ಯೋಗಕ್ಕೆ ಬದಲಾಗಿ ಗೌಣವಾದ ಅತ್ಯಲ್ಪಕಾಲ ಸಾಧ್ಯವಾದ ಪ್ರಪತ್ತಿಯನ್ನು ಉಪಾಯವಾಗಿ ಹೇಳುವುದು ಸರಿಯಲ್ಲ ಗದ್ಯದಲ್ಲಿ ಹೇಳಿರುವುದು ಸ್ವತಂತ್ರೋಪಾಯವಾದ ಪ್ರಪತ್ತಿಯಲ್ಲ. ಭಕ್ತ್ಯಂಗಕವಾದ ಪ್ರಪತ್ತಿ" ಇತ್ಯಾದಿ ಪ್ರಪತ್ತಿ ಸ್ವರೂಪವನ್ನು ಭೇದಿಸುವ ಕುಯುಕ್ತಿವಾದಿಗಳಿಗೆ ಪ್ರತ್ಯುತ್ತರವಾಗಿ ಭಕ್ತಿ ಪ್ರಪತ್ತಿಗಳೆರಡೂ ಮೋಕ್ಷಸಾಧಕ ಭಕ್ತಿ, ಪ್ರಪತ್ತಿ ಎಂದು ವ್ಯವಹರಿಸುವುದಕ್ಕಿಂತ ಸದ್ವಾರಕ ಪ್ರಪತ್ತಿ, ಅದ್ವಾರಕ ಪ್ರಪತ್ತಿ ಎಂದು ವ್ಯವಹರಿಸುವುದೇ ಮೇಲು. ಅಂಗವಾಗಿಯೋ, ಸ್ವತಂತ್ರವಾಗಿಯೋ ಪ್ರಪತ್ತಿಯನ್ನು ಅನುಷ್ಠಿಸದೆ ಮೋಕ್ಷವು ದೊರೆಯಲಾರದು. "ತಸ್ಯವಶೀಕಾರಣಂ ತಚ್ಛರಣಾಗತಿರೇವ" ಎಂಬಲ್ಲಿಯು ಏವಕಾರಕ್ಕೆ ಇದೇ ತಾತ್ಪರ್ಯ, ಭಕ್ತಿ, ಪ್ರಪತ್ತಿಗಳು ವ್ಯವಸ್ಥಿತ ವಿಕಲ್ಪಗಳು, ಆದ್ದರಿಂದ ಗುರು ಲಘುವಿಕಲ್ಪ ದೋಷಗಳು ಬರುವುದಿಲ್ಲ. ಇತ್ಯಾದಿಗಳು ವಿವರಿಸಲ್ಪಟ್ಟುವು ಪ್ರಸಕ್ತಾನುಪ್ರಸಕ್ತವಾದ ವಿಷಯವನ್ನು ಇಲ್ಲಿಗೆ ನಿಲ್ಲಿಸಿ ಪ್ರಕೃತ ವಿಷಯವನ್ನು ಅನುಸರಿಸೋಣ

ಪ್ರಪತ್ತಿ ಭೇದಗಳು

ಮೋಕ್ಷೋಪಾಯಗಳು ಅದ್ವಾರಕ ಪ್ರಪತ್ತಿ, ಸದ್ವಾರಕ ಪ್ರತ್ತಿ ಎಂದು ಏರ್ಪಟ್ಟ ನಂತರ, ಅದ್ವಾರಕ ಪ್ರಪತ್ತಿ ನಿಷ್ಠರಲ್ಲಿ ಪ್ರಭೇದಗಳನ್ನು ತಿಳಿಸುತ್ತಾರೆ. ಅದಾಗಿ ಉಕ್ತಿ ನಿಷ್ಠೆ, ಆಚಾರ್ಯ ನಿಷ್ಠೆ ಎಂಬುವು ಸ್ವತಂತ್ರಪ್ರಪತ್ತಿಯ ಪ್ರಭೇದಗಳು (1) "ಸ್ನಾನಂ ಸಪ್ತವಿಧಮ್", ಎಂದು ಹೇಳುವ ರೀತಿಯಲ್ಲಿ ಯಥಾಧಿಕಾರ, ಮಾಂತ್ರ ಮಾನಸ ದಿವ್ಯ ವಾಯವ್ಯಾದಿಗಳು ತುಲ್ಯ ಫಲ ಪ್ರದಗಳಾದ ಸ್ನಾನ ಭೇದಗಳು. ಹಾಗೆಯೇ ಉಕ್ತ್ಯಾಚಾರ್ಯ ನಿಷ್ಠೆಗಳೂ ಪ್ರಪತ್ತಿಯ ಭೇದಗಳು.

---

1) ವಾರುಣಂ ದಿವ್ಯ ಮಾಗ್ನೇಯಂ ವಾಯವ್ಯಂ ಪಾರ್ಥಿವಂತಥಾ । ಮಾಂತ್ರಂ ಮಾನಸಮಿತ್ಯೇವಂ ಸ್ನಾನಂ ಸಪ್ತವಿಧಂ ಸ್ಮೃತಮ್ ॥
ಆಪೋಹಿಷ್ಠಾದಿಭಿ ರ್ಮಾಂತ್ರಂ ಮೃದಾಲಂಭಸ್ತು ಪಾರ್ಥಿವಮ್ ।ಆಗ್ನೇಯಂ ಭಸ್ಮನಾಸ್ನಾನಂ ವಾಯವ್ಯಂ ಗೋರಜಸ್ಸ್ಮೃತಮ್॥
ಯತ್ತುಸಾತಪವರ್ಷೇಣ ದಿವ್ಯಂತ ತ್ಸ್ನಾನಮುಚ್ಯತೇ । ವಾರುಣಂಚಾವಗಾಹಸ್ತು, ಮಾನಸಂ ವಿಷ್ಣು ಚಿಂತನಮ್ ॥
ಸ್ನಾನವು ಸಪ್ತವಿಧ. ವಾರುಣ, ದಿವ್ಯ, ಆಗ್ನೇಯ, ವಾಯವ್ಯ, ಪಾರ್ಥಿವ, ಮಾಂತ್ರ, ಮಾನಸ ಎಂಬುವು ಅವು.
ಪಾದಸಂಹಿತೆ [ಚರ್ಯಾ3-3]

ಉಕ್ತಿನಿಷ್ಠೈ

ಇವಟ್ರಿಲ್ ಉಕ್ತಿಯಾವದು ?–ಆನುಕೂಲ್ಯ ಸಙ್ಕಲ್ಪಾದ್ಯಙ್ಗಙ್ಗಳಿಲ್ ವೈಶದ್ಯ ನಿಲ್ಲಾದಾರ್ ಅವನ್ಗೆಯೊಳ್ಳಿಯ ಪ್ರೋಕ್ಕಟ್ರಿನಿರ್ಕ್ಕಿರ ವಧಿಕಾರಮುಮ್, ಅಪೇಕ್ಷಿತತ್ತಾಲ್ ರಕ್ಷಿಕ್ಕುಮೆನ್ನಿರ ವಿಶ್ವಾಸಮುಮುಡೈಯರಾಯ್‌ಕ್ಕೊಣ್ಣು, ಶರಣ್ಯನರಿಯ ಪೂರ್ಣಪ್ರಪತ್ತಿಗರ್ಭಮಾನ ಆಚಾರ್ಯೋಪದಿಷ್ಟ ವಾಕ್ಯತ್ತಾಲೇ ದಾದಿಮಾರ್ ಶೊನ್ನ ಪಾಶುರತ್ತೈಚ್ಚೊಲ್ಲಿ ಸಾರ್ವಭೌಮನೈ ಶರಣಂ ಪುಹುಮ್ ಮುಗ್ಧರಾನ ಸಾಮನ್ತ ಕುಮಾರರ್ಗಳೈಪ್ಪೋಲೇ ಯೆನ್ನುಡೈಯ ರಕ್ಷೈಯುನಕ್ಕೇ ಭರಮಾಹ ವೇರಿಟ್ಟುಕ್ಕೊಳ್ಳವೇಣುಮೆನ್ಗೈ.

ಉಕ್ತಿನಿಷ್ಠೆ

ಉಕ್ತ್ಯಾಚಾರ್ಯ ನಿಷ್ಠೆಗಳ ಸ್ವರೂಪವನ್ನು **ಇವಟ್ರಿಲ್ ಉಕ್ತಿಯಾವದು** ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾಗಿ-ಪ್ರಪತ್ತಿಗೆ ಅಂಗಗಳಾದ ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯವರ್ಜನ, ಮಹಾವಿಶ್ವಾಸ, ಗೋಪ್ತೃತ್ವವರಣ, ಕಾರ್ಪಣ್ಯವೆಂಬ ಐದು ಅಂಗಗಳಲ್ಲಿಯೂ, ಅಂಗಿಯಾದ ಭರಸಮರ್ಪಣದಲ್ಲಿಯೂ ವಿಶದ ಜ್ಞಾನವಿಲ್ಲದವರು–ಅಂದರೆ ಪ್ರಪತ್ತಿ ವಾಕ್ಯದಲ್ಲಿ ಅಂಗಾಂಗಿಗಳು ಪ್ರತಿಪಾದ್ಯಗಳಾಗಿವೆ ಎಂಬ ಸಾಮಾನ್ಯ ಜ್ಞಾನವಿದ್ದರೂ ಯಾವ ಯಾವ ಪದಗಳಲ್ಲಿ ಯಾವ ಯಾವ ಅಂಗಗಳೂ ಅಂಗಿಯೂ ನಿರೂಪಿತವಾಗಿವೆ ಎಂಬ ಜ್ಞಾನವಿಲ್ಲದವರೂ, ಅಂಗಗಳು ಹೇಗೆ ಉಪಕಾರಕಗಳು ಎಂಬ ಜ್ಞಾನವಿಲ್ಲದವರೂ, ಎಂದರ್ಥ–ಭಗವಂತನನ್ನು ಬೇರೆ ಗತಿಯಿಲ್ಲವೆಂಬ ಅನನ್ಯಗತಿತ್ವವೂ, ನಾವು ಪ್ರಾರ್ಥಿಸಿದರೆ ಅವಶ್ಯ ರಕ್ಷಿಸುತ್ತಾನೆಂಬ ಮಹಾವಿಶ್ವಾಸವೂ ಕೂಡಿಕೊಂಡಿದ್ದು, ಶರಣ್ಯನು ತಿಳಿಯುವಂತೆ ಪೂರ್ಣ ಪ್ರಪತ್ತಿ ಗರ್ಭವಾದ ಆಚಾರ್ಯೋಪದಿಷ್ಟ ವಾಕ್ಯವನ್ನು ಹೇಳಿ "ನನ್ನ ರಕ್ಷೆಯು ನಿನಗೇ ಭರವೆಂದು ಸ್ವೀಕರಿಸು, ಎಂದು ಭಗವಂತನಲ್ಲಿ ಮೊರೆಯಿಡುವುದು", ಉಕ್ತಿ ನಿಷ್ಠೆ **ದಾದಿಮಾರ್‌ಶೊನ್ನವಾಕ್ಯತ್ತಾಲೇ** ಇತ್ಯಾದಿ. ಇದು ಉಕ್ತಿನಿಷ್ಠೆಗೆ ದೃಷ್ಟಾಂತ **ದಾದಿಮಾರ್**–ಧಾತ್ರಿ–ಉಪಮಾತಾ, ಮಹಾರಾಜನೊಬ್ಬನು ಶತ್ರುರಾಜ್ಯಗಳ ಮೇಲೆ ಧಾಳಿ ನಡೆಸಿ ಆ ರಾಜ್ಯಗಳನ್ನು ವಶಪಡಿಸಿಕೊಂಡಿರುತ್ತಾನೆ. ಆ ಶತ್ರುರಾಜರು ನಷ್ಟರಾದರು. ಅವರ ಮಕ್ಕಳನ್ನು ಧಾತ್ರಿಗಳು ಪೋಷಿಸಿ ಬರುತ್ತಾರೆ ಆ ಸಾಮಂತ ರಾಜಕುಮಾರನನ್ನು ಧಾತ್ರಿಗಳು ಮಹಾರಾಜನಲ್ಲಿಗೆ ಹೋಗಿ "ನೀನೇ ನನಗೆ ಗತಿ ನನ್ನನ್ನು ಕಾಪಾಡು ಎಂದು ಪ್ರಾರ್ಥಿಸಿ ಕಾಲಿಗೆ ಬೀಳು" ಎಂದು ಉಪದೇಶಿಸಿ, ಮಹಾರಾಜನಲ್ಲಿಗೆ ಕರೆದು ಕೊಂಡು ಹೋಗಿ, ಹೇಳಿಸಿ ಕಾಲಿಗೆ ಬೀಳಿಸುತ್ತಾರೆ ಆ ರಾಜಕುಮಾರರು ತಾವು ಹೇಳುವ ಮಾತಿನ ಅರ್ಥವನ್ನು ನಿಶದವಾಗಿ ತಿಳಿಯದಿದ್ದರೂ ಸಮುದಾಯವಾದ ಜ್ಞಾನದಿಂದ ಕೂಡಿದವರಾಗಿ "ನನ್ನನ್ನು ಕಾಪಾಡುವ ಭರ ನಿಮಗೇ ಸೇರಿದ್ದು ನಿಮ್ಮನ್ನು ಶರಣಹೊಂದಿದ್ದೇನೆ". ಎಂದು ಹೇಳಿ ಮಹಾರಾಜನ ಕಾಲಿಗೆ ಬಿದ್ದು ತಮ್ಮ ಇಷ್ಟಾರ್ಥವನ್ನು ಹೊಂದುತ್ತಾರೆಂಬುದು ಲೋಕವಿದಿತ ಈ ದೃಷ್ಟಾಂತದ ಪ್ರಕಾರ ಉಕ್ತಿ ನಿಷ್ಠನೂ ಆಚಾರ್ಯನಿಂದ ಉಪದೇಶಿಸಲ್ಪಟ್ಟ ಅಂಗಾಂಗಿ ಗರ್ಭಿತವಾದ ಪ್ರಪತ್ತಿ ವಾಕ್ಯವನ್ನು ಸಮುದಾಯ ಜ್ಞಾನ ಪೂರ್ವಕವಾಗಿ, ತನ್ನ ಆ ಕಿಂಚಿನ್ಯಾನನ್ಯಗತಿತ್ವಗಳನ್ನು ತೋರಿಸಿ ಕೊಂಡು ಮಹಾವಿಶ್ವಾಸದಿಂದ ಭಗವಂತನಲ್ಲಿ ವಿಜ್ಞಾಪಿಸಿ, ಶರಣ ಹೊಂದಿದರೆ ಭಗವಂತನು ನಿಸ್ಸಂಶಯವಾಗಿ ರಕ್ಷಿಸುತ್ತಾನೆ

ಆಪೋಹಿಷ್ಠಾಮಯೋಭುವಃ !, ಎಂಬ ಒಂಬತ್ತು ಮಂತ್ರಗಳಿಂದ ತಲೆ, ಕಾಲು, ಎದೆಗಳಲ್ಲಿ ನೀರಿನಿಂದ ಪ್ರೋಕ್ಷಿಸಿಕೊಳ್ಳವುದು-ಮಂತ್ರ ಸ್ನಾನ. ಶುದ್ಧವಾದ ಮಣ್ಣನ್ನು ಶಾಸ್ತ್ರಚೋದಿತವಾದ ರೀತಿಯಲ್ಲಿ ಮೈ ಕೈ ಕಾಲುಗಳಿಗೆ ಹಚ್ಚಿಕೊಂಡು ಮಂತ್ರ ಪೂರ್ವಕ ಸ್ನಾನ ಮಾಡುವುದು ಮೃತ್ತಿಕಾಸ್ನಾನ ಅಗ್ನಿಯ ಭಸ್ಮವನ್ನು ಮೈ ಕೈ ಕಾಲುಗಳಿಗೆ ಹಚ್ಚಿಕೊಂಡು ಸ್ನಾನ ಮಾಡುವುದು ಆಗ್ನೇಯ ಸ್ನಾನ, ಹಸುವಿನ ಕಾಲು ಧೂಳುಗಳನ್ನು ಹಚ್ಚಿಕೊಂಡು ಸ್ನಾನ ಮಾಡುವುದು ಗೋರಜಸ್ನಾನ ಬಿಸಿಲಿರುವಾಗ ಬೀಳುವ ಮಳೆಯಲ್ಲಿ ಸ್ನಾನ ಮಾಡುವುದು ದಿವ್ಯಸ್ನಾನ. ಸ್ವರ್ಗಲೋಕದಲ್ಲಿರುವ ಗಂಗೆಯ ನೀರು ಬೀಳುವುದಾಗಿ ಪ್ರತೀತಿ ನೀರಿನಲ್ಲಿ ಮುಳುಗಿ ಸ್ನಾನ ಮಾಡುವುದು (ಅವಗಾಹನ) ವಾರುಣ ಸ್ನಾನ ವಿಷ್ಣು ಧ್ಯಾನ ಮಾಡುವುದು ಮಾನಸಿಕ ಸ್ನಾನ. ಆಯಾಯಾ ಅಧಿಕಾರಿಗಳಿಗೆ ಇವುಗಳು ಶರೀರ ಶುದ್ಧಿ ರೂಪವಾದ ಸಮವಾದ ಫಲವನ್ನು ಕೊಡುತ್ತವೆಯೇ ಹೊರತು ಎಲ್ಲರಿಗೂ ಇಲ್ಲ. ವ್ಯವಸ್ಥಿತ ವಿಕಲ್ಪಗಳು

ಪದವಾಕ್ಯಾದಿ ವೃತ್ತಾನ್ತಮರಿಯಾದ ಬಾಲನೊರುಕ್ಕಾಲ್, "ಭವತಿ ಭಿಕ್ಷಾಂ ದೇಹಿ" ಎನ್ರಾಲ್, ಆಢ್ಯರಾನ ಸತ್ತುಕ್ಕಳಹತ್ತಿಲೇ ಅಪ್ಪೋದೇ -ಅಪೇಕ್ಷಿತ ಸಿದ್ಧಿಯುಂಡಾವಾಪ್ಪೋಲೇ a) "ಕೊಳ್ಳಕ್ಕುರೈವಿಲನ್ವೇಣ್ಡಿತ್ತೆಲ್ಲಾಂ ತರುಮ್" ಎನ್ನುಮ್ಪಡಿಯಿರುಕ್ಕಿರ ಪರಿಪೂರ್ಣ ಪರಮೋದಾರ ವಿಷಯತ್ತಿಲ್, ಇವ್ವುಕ್ತಿಕ್ಕುಮ್ ಫಲಾವಿನಾಭಾವಮುಣ್ಡು.

ಅರಿವಿಲಿಹಳಾಯ್ ಇವ್ವುಕ್ತಿಮಾತ್ರಮೇ ಪ್ರಪನ್ನರಾನವರ್ಗಳ್ ತಿರತ್ತಿಲ್ 1) ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾತ್ವಂ" ಎನ್ರುಶೊಲ್ಲುಹಿರಪಡಿಯೇ ಇವ್ವುಕ್ತಿಮಾತ್ರಮುಮುಣ್ಡಾಹುಕ್ಕ ಮಾಟ್ಟಾದು ಶರಣ್ಯನ್ಪಕ್ಕೈ". 2) ಇವ್ವರ್ಥತ್ತೈ "ಪಾಪೀಯಸೋಽಪಿ ಶರಣಾಗತಿ ಶಬ್ದಭಾಜಃ" ಎನ್ರುಮ್ 3) "ಶರಣವರಣ ವಾಗಿಯಂ ಯೋದಿಶಾ ನಭವತಿ ಬತಸಾಪಿ ಧೀಪೂರ್ವಿಕಾ" ಎನ್ರುಮ್, 4) "ಪ್ರಪತ್ತಿ ವಾಚೈವ

ಇದಕ್ಕೆ ಮತ್ತೊಂದು ದೃಷ್ಟಾಂತವನ್ನೂ **ಪದವಾಕ್ಯ ವೃತ್ತಾಂತಮರಿಯಾದ** ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ ಅದಾಗಿ–ಬಾಲರು ಭಿಕ್ಷಾಮಂತ್ರದ ಪದಜ್ಞಾನವನ್ನೂ, ವಾಕ್ಯ ಜ್ಞಾನವನ್ನೂ ತಿಳಿಯದೇ ಇದ್ದರೂ, "ಭವತಿಭಿಕ್ಷಾಂದೇಹಿ" ಎಂದುಹೇಳಿದರೆ ಹಣವಂತರಾದ ಸತ್ಪುರುಷರು ಭಿಕ್ಷೆಯನ್ನು ಕೊಡುತ್ತಾರೆಂಬ ಸಾಮಾನ್ಯ ಜ್ಞಾನವನ್ನುಳ್ಳವರಾಗಿ, ಅವರುಗಳ ಮನೆ ಬಾಗಿಲಲ್ಲಿ "ಭವತಿಭಿಕ್ಷಾಂದೇಹಿ" ಎಂದು ಹೇಳಿ ಒಡನೇ ಭಿಕ್ಷೆಯನ್ನು ಪಡೆಯುವುದನ್ನು ನೋಡಿದ್ದೇವೆ. **ಆಢ್ಯರಾನ**–ಹಣವಂತರಾದ, **ಸತ್ತುಕ್ಕಳಹತ್ತಿಲೇ**-ಸತ್ಪುರುಷರ ಮನೆಯಲ್ಲಿ ಇವೆರಡೂ ದಾತಾವಿನ ಗುಣಗಳು. ಅಸತ್ಪುರುಷನೂ ದರಿದ್ರನೂ ಭಿಕ್ಷೆಯನ್ನು ಕೊಡಲಾರ ಸತ್ಪುರುಷನಾಗಿಯೂ, ಅಂದರೆ ಯಾಚಕನಿಗೆ ಭಿಕ್ಷೆಕೊಡಬೇಕಾದುದ್ದು ಧರ್ಮವೆಂದು ತಿಳಿದವನೂ, ದರಿದ್ರನು, ಭಿಕ್ಷೆ ಕೊಡಲು ಸಾಮರ್ಥ್ಯವಿಲ್ಲದವನಾದ್ದರಿಂದ ಹಣವಂತನಾಗಿಯೂ ಇರುವವನ ಮನೆ ಬಾಗಿಲಲ್ಲಿ ಬೇಡಿದರೆ ಭಿಕ್ಷೆಯು ಸಿಗುವುದರಲ್ಲಿ ಸಂಶಯವಿಲ್ಲವೆಂಬುದು, ಈ ಎರಡು ಪದಗಳ ತಾತ್ಪರ್ಯ. ಇದೇ ರೀತಿಯಲ್ಲಿ (a)**ಕೊಳ್ಳಕ್ಕುರೈವಿಲನ್**-ಯಾಚಕರು ತಮ್ಮ ಭಿಕ್ಷೆಯನ್ನು ಸ್ವೀಕರಿಸಿದರೆ ತನಗೆ ಯಾವ ಕೊರತೆಯೂ ಇಲ್ಲದ ಪರಿಪೂರ್ಣನೂ, **ವೇಂಡಿಟ್ರೆಲ್ಲಾಂತರುಂ**–ಯಾಚಕರುಗಳ ಅಪೇಕ್ಷೆಯನ್ನೆಲ್ಲಾ ಕೊಡುವವನಾಗಿ ಇರುವ ಪರಮೋದಾರನೂ, ಆದ ಭಗವಂತನ ವಿಷಯದಲ್ಲಿ ಈ ಉಕ್ತಿಗೂ ಫಲವು ಇಲ್ಲದೇ ಇಲ್ಲ. **ಪರಿಪೂರ್ಣಪರಮೋದಾರ ವಿಷಯತ್ತಿಲ್**, ಎಂದು ಸಾಧಾರಣವಾಗಿ ಹೇಳಿರುವುದು ಲೋಕದಲ್ಲಿಯೂ ಆಢ್ಯರೂ, ಉದಾರಿಗಳೂ ಆದ ಸತ್ಪುರುಷರಲ್ಲಿಯೂ ಇಂಥಹ ಪ್ರಾರ್ಥನಾ ರೂಪವಾದ ಉಕ್ತಿಗೆ ಫಲವು ಸಿಗದೇ ಇರುವುದಿಲ್ಲವೆಂಬುದು ದ್ಯೋತಿತ ಹಾಗಿರುವಾಗ ಪರಿಪೂರ್ಣ ಪರಮೋದಾರನಾದ ಭಗವಂತನಲ್ಲಿ ಫಲಾವಿನಾಭಾವವನ್ನು (ಫಲವಿಲ್ಲದೇ ಇರುವುದಿಲ್ಲವೆಂಬುದನ್ನು)ಹೇಳಬೇಕೇ. **ಇವ್ವುಕ್ತಿಕ್ಕುಮ್**–ಅಜ್ಞಾತ ಕರಣ ಮಂತ್ರಾರ್ಥನಾಗಿದ್ದರೂ, ಮಹಾವಿಶ್ವಾಸ ಶಾಲಿಯಾಗಿಯೂ ಆಕಿಂಚನನಾಗಿಯೂ ಇರುವ ಚೇತನನು ಹೇಳುವ ದ್ವಯಮಂತ್ರೋಚ್ಚಾರಣೆಗೆ, **ಫಲಾವಿನಾಭಾವಮುಂಡು**-ಸಮ್ಯಕ್ ಜ್ಞಾನವಿಲ್ಲದಿದ್ದರೂ, ಸರ್ವಜ್ಞನೂ ಸತ್ಪುರುಷನೂ ಪರಮೋದಾರನೂ ಆದ ಸರ್ವೇಶ್ವರನು ಈ ಉಕ್ತಿಯ ಅರ್ಥವನ್ನು ಚನ್ನಾಗಿ ತಿಳಿದುಕೊಂಡಿರುವುದರಿಂದ ಕೇವಲ ತನ್ನ ಔದಾರ್ಯಗಳಿಂದ ಮೋಕ್ಷಾಂತವಾದ ಐಶ್ವರ್ಯವನ್ನು ಕೊಡುವುದರಲ್ಲಿ ಸಂಶಯವಿಲ್ಲವೆಂಬುದು ತಾತ್ಪರ್ಯ. ಇಲ್ಲಿ ಮಹಾವಿಶ್ವಾಸ, ಆಕಿಂಚನ್ಯವೆಂಬ ಎರಡೇ ಅಂಗಗಳನ್ನು ಹೇಳಿರುತ್ತಾರೆಯಲ್ಲ ಬಾಕಿ ಅಂಗಗಳು ಬೇಡವೇ ಎಂದು ಕೇಳಬಹುದು. ಎಲ್ಲಾ ಅಂಗಗಳೂ ಬೇಕೇ ಬೇಕು. ಉಕ್ತಿ ನಿಷ್ಠನಿಗೆ ವಿಶದ ಜ್ಞಾನವಿಲ್ಲದ ಆಕಿಂಚನ್ಯವೂ, ವಿಶದ ಜ್ಞಾನವಿಲ್ಲದೆ ಸಮುದಾಯ ಜ್ಞಾನ ಪೂರ್ವಕ ಸಕೃದುಕ್ತಿಗೂ ಫಲವು ಅವಶ್ಯ ಉಂಟೆಂಬ ಅಂಶವೂ ಮಹಾವಿಶ್ವಾಸದಲ್ಲಿ ಸೇರಿರಬೇಕೆಂಬುದನ್ನು ತಿಳಿಸಲು, ಈ ಎರಡು ಅಂಗಗಳನ್ನು ವಿಶೇಷವಾಗಿ ಇಲ್ಲಿ ಎತ್ತಿ ಹೇಳಿರುವುದು ಎಂದು ತಿಳಿಯತಕ್ಕದ್ದು. **ಅರಿವಿಲಿಹಳಾಯ್** ಇತ್ಯಾದಿ–**ಅರಿವು**–ಪರಿಪೂರ್ಣಜ್ಞಾನ. ಅದಾಗಿ ಪರಿಪೂರ್ಣವಾದ ಜ್ಞಾನವಿಲ್ಲದಿದ್ದರೂ ಸಮುದಾಯ ಜ್ಞಾನ ಪೂರ್ವಕವಾಗಿ, **ಉಕ್ತಿ**

---

a) ತಿರುವಾಯ್ (3-9-5) 1), 2), 3), ಪು. ತಿ. ನೋ

ನಿರೀಕ್ಷಿತುಂ ವೃಣೇ" ಎನ್ರುವ್ ಅಭಿಯುಕ್ತರ್ ಪೇಶಿನಾರ್ಗಳ್. ಇವ್ವುಕ್ತಿ ಮಾತ್ರ ನಿಷ್ಠನುಡೈಯವುಮ್ ಆಚಾರ್ಯನಿಷ್ಠನುಡೈಯವುಮ್, ನಿಲೈಹಳಿರಣ್ಡೈಯುಮ್, 5) ತವಭರೋಹಮಕಾರಿಷಿ ಧಾರ್ಮಿಕೈಶ್ಶರಣ ಮಿತ್ಯಪಿ ವಾಚಮುದ್ಯೈರಿರಂ । ಇತಿ ಸಸಾಕ್ಷಕಯನ್ನಿದಮುದ್ಯಮಾಮ್ ಕುರು ಭರಂ ತವ ರಂಗಧುರಂಧರ" ಎನ್ರುಶೇರ್ತ್ತನುಸಂಧಿತ್ತಾರ್ಗಳ್. ಇದಿಲ್ ಮಿಹುದಿ ಕಾಟ್ಟುಹಿರ "ಅಪಿ" ಶಬ್ದತ್ತಾಲೇ ಓರೊನ್ರೇ ಯಮೈಯುಮೆನ್ರು ಸೂಚಿತಮಾಯಿರ್‌ರ್‌.

ಮಾತ್ರಮೋ–ದ್ವಯ ಮಂತ್ರವನ್ನು ಉಚ್ಚರಿಸುವುದನ್ನೇ–ಬಾಕಿ ಶರಣಾಗತಿ ಮಂತ್ರಗಳಿಗೆ ಈ ಪ್ರಭಾವವಿಲ್ಲದಿದ್ದರೂ, ಪರಿಪೂರ್ಣ ಪ್ರಪತ್ತಿ ಗರ್ಭಿತವಾದ ದ್ವಯ ಮಂತ್ರೋಕ್ತಿಯನ್ನೇ ಅವಲಂಬಿಸಿರುವವರ ವಿಷಯದಲ್ಲಿ, "ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾತ್ವಮ್" ಎಂದು ಶ್ರೀ ಭಾಷ್ಯಕಾರರು ಹೇಳಿರುವಂತೆ ಸಮುದಾಯ ಜ್ಞಾನ ಪೂರ್ವಕವಾದ ಸಕೃದುಕ್ತಿಯನ್ನು ಶರಣ್ಯನಾದ (ರಕ್ಷಕನಾದ) ಭಗವಂತನ ಕೃಪೆಯು ಭುಜಿಸಿ ಜೀರ್ಣಮಾಡಿಕೊಳ್ಳಲಾರದು (1) **ಯೇನಕೇನಾಪಿ ಪ್ರಕಾರೇಣ** ಇತ್ಯಾದಿ–ಆರ್ತನಾಗಿಯೋ, ದೃಪ್ತನಾಗಿಯೋ, ಪೂರ್ವದಲ್ಲಿ ಮಿತ್ರನಾಗಿಯೋ, ಶತ್ರುವಾಗಿಯೋ, ಅಂಗಾಂಗಿಗಳಲ್ಲಿ ವಿಶದ ಜ್ಞಾನವಿಲ್ಲದೆ, ಸಮುದಾಯ ಜ್ಞಾನಯುಕ್ತನಾಗಿಯೋ, ಎಂದರ್ಥ. **ಶರಣ್ಯನ್ ಕೃಪೈ**–ಶರಣೇಸಾಧುಃ-ಶರಣ್ಯಃ–ರಕ್ಷಣಸಮರ್ಥನಾದ ಭಗವಂತನ ಕೃಪೆ **ಇವ್ವರ್ಥತ್ತೈ**–ಎಂದಾರಂಭಿಸಿ, ಆಚಾರ್ಯವರ್ಯರು, ಈ ಅರ್ಥಕ್ಕೆ ಸಂಪ್ರದಾಯ ಶ್ರೀ ಸೂಕ್ತಿಗಳನ್ನು ಪ್ರಮಾಣೀಕರಿಸುತ್ತಾರೆ ಆದಾಗಿ ಮೇಲೆ ಹೇಳಿದ ಸಮುದಾಯ ಜ್ಞಾನ ಪೂರ್ವಕ ಯಾಂಚಾನ್ವಿತ ಭರನ್ಯಾಸಾತ್ಮಕ ಸಕೃದುಕ್ತಿ ಮಾತ್ರವೇ ಫಲಪ್ರದವೆಂಬ ಅರ್ಥವನ್ನು, (2) **ಪಾಪೀಯಸೋಪಿ ಶರಣಾಗತಿ ಶಬ್ದಭಾಜಃ**–ಮಹಾಪಾಪಿಯಾಗಿದ್ದಾಗ್ಯೂ ಶರಣಾಗ ನೆಂಬ ಶಬ್ದವನ್ನು ಪಡೆದವನು, ಎಂದೂ, (3) **ಶರಣವರಣವಾಗಿಯುಂ**–ಇತ್ಯಾದಿ ಶರಣಾಗತಿ ಪ್ರತಿಪಾದಕ ವಾಕ್ಯವು, ಸಮ್ಯಜ್ಞಾನಪೂರ್ವಕವಲ್ಲದಿದ್ದರೂ, ಎಂದೂ, (4) **ಪ್ರಪತ್ತಿವಾಚೈವ ನಿರೀಕ್ಷಿತುಂವೃಣೇ**–ಪರಿಪೂರ್ಣ ಜ್ಞಾನ ವಿಲ್ಲದಿದ್ದರೂ ಪ್ರಪತ್ತಿವಾಕ್ಯೋಚ್ಚಾರಣ ಮಾತ್ರದಿಂದಲೇ ನಿನ್ನನ್ನು ಕಟಾಕ್ಷಿಸಲು ಆಸೆಪಡುತ್ತೇನೆ, ಎಂದೂ **ಅಭಿಯುಕ್ತರ್** – ಭಗವತ್ಸ್ವರೂಪ ರೂಪ ಗುಣ ವಿಭೂತಿಗಳನ್ನು ಚನ್ನಾಗಿ ಅರಿತ ಕೂರತ್ತಾೞ್ವಾನ್‌ರವರು ಹೇಳಿರುತ್ತಾರೆ. ಅನಂತರ ಪರಾಶರ ಭಟ್ಟರ ಶ್ರೀ ಸೂಕ್ತಿಯನ್ನು ಉಕ್ತಿ ನಿಷ್ಠೆಗೆ ಪ್ರಮಾಣೀಕರಿಸುತ್ತಾರೆ. **ಇವ್ವುಕ್ತಿಮಾತ್ರ ನಿಷ್ಠನುಡೈಯವುಮ್**-ಇತ್ಯಾದಿ. ಆದಾಗಿ ಉಕ್ತಿನಿಷ್ಠನ ಮತ್ತು ಆಚಾರ್ಯ ನಿಷ್ಠನ ಸ್ಥಿತಿ, ಇವುಗಳೆರಡನ್ನೂ, (5) **ತವಭರೋಽಹಂ** ಇತ್ಯಾದಿ ಶ್ಲೋಕದಿಂದ ಒಂದು ಗೂಡಿಸಿ ಹೇಳಿರುತ್ತಾರೆ. ಅದಾಗಿ, ಎಲೈ ರಂಗನಾಥನೇ, ಲೋಕದ ಜನರು, "ನಿರ್ಹೇತುಕವಾಗಿ ಹೇಗೆ ನನ್ನನ್ನು ಸ್ವೀಕರಿಸುತ್ತೀಯೆ. ನಿನಗೆ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಅಂದರೆ ನಿರ್ಹೇತುಕವಾಗಿ ಒಬ್ಬನನ್ನು ಸ್ವೀಕರಿಸಿ ಮತ್ತೊಬ್ಬನನ್ನು ಸ್ವೀಕರಿಸದೆ ಹೋದರೆ ಒಬ್ಬನಲ್ಲಿ ಪಕ್ಷಪಾತ, ಮತ್ತೊಬ್ಬನಲ್ಲಿ ಕೃಪೆಯಿಲ್ಲದಿರುವುದೆಂಬ ದೋಷವು ಉಂಟಾಗುತ್ತದೆಯೆಂದು ಹೇಳಬಹುದು ಅದಕ್ಕೆ ಇವನು ಆಚಾರ್ಯರ ಮೂಲಕ ಶರಣಾಗತನಾಗಿದ್ದಾನೆ. (ಆಚಾರ್ಯ ನಿಷ್ಠೆ) ಇವನು "ನೀನೇ ಶರಣು", ಎಂಬ ವಾಕ್ಯವನ್ನು ಉಚ್ಚರಿಸಿದ್ದಾನೆ (ಉಕ್ತಿನಿಷ್ಠೆ) ಎಂಬ ವ್ಯಾಜಗಳನ್ನು ಅವರುಗಳಿಗೆ ಎತ್ತಿ ತೋರಿಸಿ ಆಕ್ಷೇಪಗಳಿಗೆ ಸಮಾಧಾನ ಹೇಳಿ, ನನ್ನನ್ನು ರಕ್ಷಿಸು. ನಿನ್ನ ಭರವಾಗಿ ಸ್ವೀಕರಿಸು", ಎಂದು ಉಕ್ತ್ಯಾಚಾರ್ಯ ನಿಷ್ಠೆಗಳ ಉಪಾಯತ್ವವನ್ನು ಒಂದೇ ಶ್ಲೋಕದಲ್ಲಿ ಕ್ರೋಡೀಕರಿಸಿದ್ದಾರೆ. ಈ ಶ್ಲೋಕದಲ್ಲಿ "ಅಪಿ" ಎಂಬ ಶಬ್ದವು ಎರಡು ನಿಷ್ಠೆಗಳನ್ನೂ ಮೋಕ್ಷಕ್ಕೆ ಅನುಷ್ಠಿಸಬೇಕಿಲ್ಲ. ಯಾವುದಾದರೂ ಒಂದೇ ಸಾಕು ಎಂಬ ಅರ್ಥವನ್ನು ತಿಳಿಯಪಡಿಸುತ್ತದೆ.

---

1) ಯೇನಕೇನಾಪಿ ಪ್ರಕಾರೇಣದ್ವಯವಕ್ತಾತ್ವಂ (ಶರಣಾಗತಿ ಗದ್ಯ)

2), 3), 4), 5), ಪ. ತಿ. ನೋ.

ಇಲ್ಲಿ ಕೆಲವು ಆಕ್ಷೇಪ ಸಮಾಧಾನಗಳು ತಿಳಿಸಲ್ಪಡುತ್ತವೆ. ಆದಾಗಿ ಈ ಅಧಿಕಾರದಲ್ಲಿ ಭಕ್ತಿಯೋಗನಿಷ್ಠೆ, ಶರಣಾಗತಿ ನಿಷ್ಠೆ ಎಂದು ಎರಡು ಅಧಿಕಾರಿಗಳನ್ನು ಹೇಳುವುದಾಗಿ ಪ್ರಸಂಗ, ಇದರ ಮಧ್ಯೆ ಉಕ್ತಿ ನಿಷ್ಠೆ, ಆಚಾರ್ಯ ನಿಷ್ಠೆ ಎಂದು ಆರಂಭಿಸಿ, ಹೇಳಿರುವುದರಿಂದ ಮೋಕ್ಷಕ್ಕೆ ಸಾಕ್ಷಾದುಪಾಯಗಳು ನಾಲ್ಕು ಎಂದು ಏರ್ಪಡುವುದಿಲ್ಲವೇ ಎಂಬ ಶಂಕೆಗೆ ಉಕ್ತ್ಯಾಚಾರ್ಯ ನಿಷ್ಠೆಗಳು ಪ್ರಪತ್ತಿಯ ಪ್ರಭೇದಗಳು ಎಂದು ಸಮಾಧಾನ ಹೇಳಿದ್ದಾರೆ ಹಾಗಾದರೂ ಪ್ರಪತ್ತಿಯು ಉಪಾಯಾಧ್ಯವಸಾಯ ರೂಪ ಉಕ್ತಿಯು ಹಾಗಲ್ಲವಾದದ್ದು ಆಚಾರ್ಯ ನಿಷ್ಠೆಯು, ಆಚಾರ್ಯನು ತನ್ನ ಧನಾದಿಗಳನ್ನು ರಕ್ಷಿಸುವಂತೆ ಶಿಷ್ಯ ರಕ್ಷಣೆಯು ತನ್ನದೆಂಬ ಅಭಿಮಾನದಿಂದ ಅವನ ರಕ್ಷಣಾ ಭಾರವನ್ನೂ ಭಗವಂತನಲ್ಲಿ ಸಮರ್ಪಿಸುವುದರಿಂದ ಆಚಾರ್ಯನನ್ನೇ ಪ್ರಪನ್ನನೆಂದು ಹೇಳಬೇಕೇ ವಿನಹ, ಶಿಷ್ಯನಿಗೆ ಆಚಾರ್ಯಧನಾದಿಗಳ ಹಾಗೆ ಪ್ರಪನ್ನತ್ವವೇ ಸಂಭವಿಸುವುದಿಲ್ಲ. ಹೀಗಿರುವಾಗ ಉಕ್ತ್ಯಾಚಾರ್ಯ ನಿಷ್ಠರನ್ನು ಪ್ರಪನ್ನರೆಂದು ಹೇಗೆ ವ್ಯವಹರಿಸುವುದು ಎಂಬುದು ಶಂಕೆ ಇದಕ್ಕೆ **"ಸ್ನಾನಂ ಸಪ್ತ ವಿಧಂ ಸ್ಮೃತಮ್"** ಎಂದಾರಂಭಿಸಿ ಆಚಾರ್ಯರು ಸಮಾಧಾನವನ್ನು ಹೇಳಿದ್ದಾರೆ

ಉಕ್ತ್ಯಾಚಾರ್ಯನಿಷ್ಠೆಗಳೂ ಪ್ರಪತ್ತಿರೂಪವಾದುವು ಎಂಬುವುದಕ್ಕೆ ಸ್ನಾನಂಸಪ್ತವಿಧಂ ಸ್ಮೃತಂ, ಎಂಬುದು ಉದಾಹರಣೆ. ಆದಾಗಿ, ಏಕಕಾಲದಲ್ಲಿ ಸರ್ವಾಂಗಗಳಲ್ಲಿಯೂ ನೀರನ್ನು ಸಂಯೋಗಿಸುವುದು ಸ್ನಾನ ಶಬ್ದಾರ್ಥ. ಅದು ಅಶುಚಿತ್ವವನ್ನು ಹೋಗಲಾಡಿಸುತ್ತದೆ ಮತ್ತು ಶುಚಿತ್ವವನ್ನುಂಟುಮಾಡುತ್ತದೆ. ಈ ವಿಲಕ್ಷಣ ಶುಚಿತ್ವ

---

2) ಪಾಪೀಯಸೋಽಪಿ ಶರಣಾಗತಿ ಶಬ್ದಭಾಜಃ ನೋಪೇಕ್ಷಿತುಂ ಮಮತವೋಚಿತಮೀಶ್ವರಸ್ಯ ।
ತ್ವದ್ಜ್ಞಾನಶಕ್ತಿಕರುಣಾಸುಸತೀಷು ನೈವ ಪಾಪಂ ಪರಾಕ್ರಮಿತು ಮರ್ಹತಿ ಮಾಮಕೀನಮ್ ॥ (ಅತಿಮಾನುಷಸ್ತವ-61)

ಮಹಾಪಾಪಿಯಾಗಿದ್ದಾಗ್ಯೂ ಶರಣಾಗತಿ ಶಬ್ದವನ್ನು ಅಂದರೆ, "ನಿನ್ನ ಪಾದಗಳಲ್ಲಿ ಶರಣಾಗತನಾಗಿದ್ದೇನೆಂಬ" ಶಬ್ದವನ್ನು ಹೇಳಿದ ನನ್ನನ್ನು ಸರ್ವೇಶ್ವರನಾದ ನೀನು ಉಪೇಕ್ಷಿಸಕೂಡದು, ನಿನ್ನ ಜ್ಞಾನಶಕ್ತಿ ಕರುಣೆಗಳು ಇರುವಾಗ, ನನ್ನ ಪಾಪಕ್ಕೆ ಪರಾಕ್ರಮಿಸಲು-ತನ್ನ ಪರಾಕ್ರಮವನ್ನು ತೋರಿಸಿ ಫಲವನ್ನು ಕೊಡದೆ ಇರುವಂತೆ ಮಾಡಲು - ಶಕ್ತಿಯಿಲ್ಲ.

3) ಶರಣವರಣವಾಗಿಯಂ ಯೋದಿತಾ ನಭವತಿ ಬತಸಾಪಿಧೀ ಪೂರ್ವಿಕಾ।
ಇತಿಯದಿ ದಯನೀಯತಾಮಯ್ಯಹೋ ವರದತವ ಭವೇತ್ತತಃ ಪ್ರಾಣಿಮಿ ॥ (ವರದ. ಸ್ತವ. 92)

ಹೇ ವರದ ಪ್ರಭೋ ನಿನ್ನ ಪಾದಗಳನ್ನು ಶರಣ ಹೊಂದಿದ್ದೇನೆ, ಎಂದು ಹೇಳಿದ ಮಾತೂ ವಿಶದ ಜ್ಞಾನಪೂರ್ವಕವಲ್ಲ ಹೀಗಿದ್ದಾಗ್ಯೂ ಈ ಮಾತನ್ನು ಕೇಳಿ ಇಷ್ಟಕ್ಕೇ ನನ್ನಲ್ಲಿ ಕೃಪೆ ಮಾಡಿದರೆ, ನಾನು ಬದುಕಿಕೊಳ್ಳುತ್ತೇನೆ ಇಲ್ಲದಿದ್ದರೆ ಇಲ್ಲ. ಅಹೋ ಎಂಬುದು ಕೃಪೋತ್ತಂಭಕ್ತದಾದ ಶಬ್ದ.

4) ಯಥಾಸಿಯಾವಾನಸಿಯೋಽಸಿ ಯದ್ಗುಣಃ ಕರೀಶಯಾದೃಗ್ವಿಭವೋಯದಿಂಗಿತಃ ।
ತಥಾವಿಧಂತ್ವಾಽಹಮಭಕ್ತದುರ್ಗ್ರಹಂ ಪ್ರಪತ್ತಿ ವಾಚೈವ ನಿರೀಕ್ಷಿತುಂ ವೃಣೇ ॥ (ವರದ ಸ್ತವ. 92)

ಎಲೈ ಕರೀಶನೇ, ನೀನು ಯಾವ ಪ್ರಕಾರಕನು, ಯಾವ ಮಹಿಮೆಯಿಂದ ಕೂಡಿದವನು, ನಿನ್ನ ಸ್ವರೂಪವೇನು, ನಿನ್ನ ಗುಣಗಳು ಯಾವುವು, ಐಶ್ವರ್ಯವು ಎಂತಹದು, ನಿನ್ನ ಇಂಗಿತವೇನು ಎಂಬುವು ಭಕ್ತರಲ್ಲದವರಿಗೆ ಸಾಕ್ಷಾತ್ಕರಿಸಲು ಅಶಕ್ಯಗಳು ಅಂಥಹ ನಿನ್ನನ್ನು ಶರಣಾಗತನಾಗಿದ್ದೇನೆಂದು ಹೇಳಿ ಆದರಿಂದಲೇ ಸಾಕ್ಷಾತ್ಕರಿಸಲು ಆಸೆಪಡುತ್ತೇನೆ

5) ಎಲೈ ರಂಗನಾಥನೇ ಧಾರ್ಮಿಕರಾದ ಆಚಾರ್ಯರುಗಳಿಂದ ನಾನು ನಿನಗೆ ಭರವಾಗಿ ಸಮರ್ಪಿಸಲ್ಪಟ್ಟಿದ್ದೇನೆ. (ಇದು ಆಚಾರ್ಯ ನಿಷ್ಠೆ) ಶರಣಾಗತನಾಗಿದ್ದೇನೆ ಎಂಬ ವಾಕ್ಯವನ್ನೂ ಹೇಳಿದ್ದೇನೆ (ಇದು ಉಕ್ತಿ ನಿಷ್ಠೆ). ಇವುಗಳನ್ನು ಸಾಕ್ಷಿಯಾಗಿಟ್ಟುಕೊಂಡು ನನ್ನನ್ನು ನಿನಗೇ ಭರವಾಗಿ ಈಗಲೇ ಸ್ವೀಕರಿಸು.

ಇಲ್ಲಿ 'ಅದ್ಯ' ಎಂಬ ಪದಸ್ವಾರಸ್ಯದಿಂದ, ಎರಡನೆಯ ಸಲ ಮಾಡಿದ ಪ್ರಪತ್ತಿ, ಆರ್ತಿ ಪ್ರಪತ್ತಿ ಎಂದು ಸಂಪ್ರದಾಯ ವೃದ್ಧರು ಹೇಳುವ ಮಾತು.

ಸಂಪಾದಕ ವ್ಯಾಪಾರವನ್ನು ನೆನೆಸಿಕೊಂಡು ಮಾನಸ ಭಗವಚ್ಚಿಂತನಾದಿ ವ್ಯಾಪರಗಳನ್ನೂ ಸ್ನಾನ ಪದಾರ್ಥದಲ್ಲಿ ಸಂಗ್ರಹಿಸಿ ಹೇಳುವುದು ಶಾಸ್ತ್ರಸಿದ್ಧ. ಹೀಗೆಯೇ ಉಕ್ತಿ ನಿಷ್ಠೆಯಿಂದಲೂ, ಆಚಾರ್ಯನಿಷ್ಠೆಯಿಂದಲೂ ಭಗವಂತನು ಆತ್ಮರಕ್ಷಾ ಭರವನ್ನು ಸ್ವೀಕರಿಸುತ್ತಾನೆ. ಈ ರೀತಿಯಾದ ಭರ ಸ್ವೀಕಾರದಲ್ಲಿ ಉಕ್ತಿ ನಿಷ್ಠ, ಆಚಾರ್ಯನಿಷ್ಠರಿಬ್ಬರೂ ವಿಷಯ ಭೂತರು. ರಕ್ಷಾಭರಸ್ವೀಕಾರವು ಸಾಕ್ಷಾತ್ತಾಗಿ ತಾನಾಗಿಯೇ ಯಥಾವಸ್ಥಿತವಾದ ಪ್ರಪತ್ತ್ಯನುಷ್ಠಾನಮಾಡು ವವನ ಹಾಗೆ, ಉಕ್ತಿನಿಷ್ಠನಲ್ಲಿಯೂ ಆಚಾರ್ಯ ನಿಷ್ಠನಲ್ಲಿಯೂ ಸಮ ಮೂವರಿಗೂ ಅಂದರೆ ಸ್ವನಿಷ್ಠೆ, ಉಕ್ತಿನಿಷ್ಠೆ ಆಚಾರ್ಯ ನಿಷ್ಠೆ ಎಂಬ ಮೂರು ನಿಷ್ಠೆಗಳಲ್ಲೊಂದನ್ನು ಅನುಷ್ಠಿಸಿದವರಿಗೂ, ನಾನೇ ಮೋಕ್ಷವನ್ನು ಕೊಡುತ್ತೇನೆ ಆ ವಿಷಯದಲ್ಲಿ ವ್ಯಾಪಾರಾಂತರಾಪೇಕ್ಷೆಯು ಬೇಡ, ಎಂಬ ಭಗವಂತನ ಪ್ರಸನ್ನತೆಯಲ್ಲಿ ವ್ಯತ್ಯಾಸವಿಲ್ಲ ಆದ್ದರಿಂದ ಉಕ್ತ್ಯಾಚಾರ್ಯ ನಿಷ್ಠೆಗಳೂ ಪ್ರಪತ್ತಿ ಶಬ್ದವಾಚ್ಯಗಳು ಅಂಥಹ "ಭರಸ್ವೀಕಾರ ವಿಷಯತ್ವಾಪಾದಕ ಯಾಂಚಾನ್ವಿತ ಭರನ್ಯಾಸಾತ್ಮಕ ಅಂಶದ ಜ್ಞಾನವಂತನಾದ ಉಕ್ತಿನಿಷ್ಠನು, ಅವರಿಂವಲೇ ಪ್ರಪನ್ನ ಶಬ್ದವಾಚ್ಯನು. ಆಚಾರ್ಯಾಭಿಮಾನವಂತನಾದ ಆಚಾರ್ಯನಿಷ್ಠನೂ. ಆಚಾರ್ಯನ ಆತ್ಮಾತ್ಮೀಯ ಭರಸ್ವೀಕಾರ ಹೇತುವಾದ ಪ್ರಪತ್ತಿಗೆ ವಿಷಯ ಭೂತನಾಗಿರುವುದರಿಂದ ಪ್ರಪನ್ನ ಶಬ್ದವಾಚ್ಯನು.

ಭಕ್ತಿ ಪ್ರಪತ್ತಿರಥವಾಭಗವಸ್ತ ದುಕ್ತಿಃ ತನ್ನಿಷ್ಠ ಸಂಶ್ರಯ, ಇತೀವ ವಿಕಲ್ಪ್ಯಮಾನವ್ |
ಯತ್ಕಿಂಚಿದೇಕಮುಪಪಾದಯತಾ ತ್ವಯೈವ ತ್ರಾತಾಸ್ತರಂತ್ಯವಸರೇ ಭವಿನೋಭವಾಬ್ಧಿಮ್ ||

ಎಂದು ಶ್ರೀದೇಶಿಕರು, ಶರಣಾಗತಿ ದೀಪಿಕೆಯ ಶ್ರೀ ಸೂಕ್ತಿಯಲ್ಲಿ ಭಕ್ತಿ ಪ್ರಪತ್ತಿ(ಸ್ವನಿಷ್ಠೆ)ಗಳ ಹಾಗೆ ಉಕ್ತಿನಿಷ್ಠೆ, ಆಚಾರ್ಯ ಸಂಶ್ರಯಣ (ಆಚಾರ್ಯ ನಿಷ್ಠೆ)ಎಂದು ಉಪಾಯಾಂತರಗಳನ್ನು ಹೇಳಿರುತ್ತಾರೆಯಲ್ಲವೆ. ಆದ್ದರಿಂದ ಉಪಾಯಗಳುನಾಲ್ಕು ವಿಧ ಎಂದು ಏರ್ಪಡುವುದಿಲ್ಲವೇ ಎಂದರೆ ಇದಕ್ಕೆ ಸಮಾಧಾನ, ತದುಕ್ತಿಃ ತನ್ನಿಷ್ಠ ಸಂಶ್ರಯಃ ಎಂದು ಅಲ್ಲಿನ ಶ್ರೀಸೂಕ್ತಿ. ತದುಕ್ತಿಃಪ್ರಪತ್ತಿ ಮಂತ್ರೋಕ್ತಿಃ ತನ್ನಿಷ್ಠ ಸಂಶ್ರಯಃ–ಸ್ವಾರ್ಥವಾಗಿ ಅನುಷ್ಠಿತ ಪ್ರಪದನನಾದಸದಾಚಾರ್ಯ ಸಮಾಶ್ರಯಣ"ಮದೀಯತ್ವೇನಾಭಿಮತೋಽಯಂ ಚೇತನಃ" ಎಂಬ ಅವನ ಅಭಿಮಾನಕ್ಕೆ ಲಕ್ಷ್ಯಭೂತನು, ಎಂದರ್ಥ ಇದರಿಂದ ಸಾಕ್ಷಾತ್ಪ್ರಪತ್ತಿಯ ಹಾಗೆ ಉಕ್ತಿ, ಆಚಾರ್ಯ ಸಮಾಶ್ರಯಣಗಳಿಗೂ, ಅವರವರ ಭರಸ್ವೀಕಾರ ಜನಕತ್ವವು ಉಂಟೆಂಬುದು ತಾತ್ಪರ್ಯ. ಇದರಿಂದ ಪ್ರಪತ್ತಿ ಪ್ರಭೇದಗಳಾದ ಉಕ್ತ್ಯಾಚಾರ್ಯ ನಿಷ್ಠೆಗಳೂ, ಸಾಕ್ಷಾನ್ಮೋಕ್ಷ ಫಲವನ್ನು ಕೊಡುವುವೆಂಬ ಭಾವನೆಯಿಂದ ಭಕ್ತಿ ಪ್ರಪತ್ತಿಗಳ ಹಾಗೆ ಪರಿಗಣಿಸಲ್ಪಟ್ಟವೆ

ಸರಿ, ಹಾಗಾದರೂ, ಭಕ್ತಿ ಪ್ರಪತ್ತಿಗಳಲ್ಲಿ ಅಧಿಕಾರವು ಯಾರು ಯಾರಿಗೆ ಎಂಬ ಅಧಿಕಾರ ವಿಭಾಗವು ಈ ಅಧಿಕಾರ ವಿಷಯ ಪ್ರಪತ್ತಿ ಸ್ವರೂಪ ಪರಿಶೋಧನೆಯು ಮುಂದಿನ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಮಾಡಲ್ಪಡುತ್ತವೆ. ಆದ್ದರಿಂದ ಉಕ್ತಿ ಆಚಾರ್ಯ ನಿಷ್ಠೆಗಳ ಸ್ವರೂಪಗಳು ಮುಂದಿನ ಅಧಿಕಾರದಲ್ಲೇ ಲಕ್ಷಣೀಯಗಳಲ್ಲವೇ ಎಂದರೆ, ಉಕ್ತಿ ಆಚಾರ್ಯನಿಷ್ಠೆಗಳ ಉಪಾಯತ್ವವನ್ನು ಸಿದ್ಧವತ್ಕರಿಸಿ, ಅವುಗಳು ಪ್ರಪತ್ತಿಯ ಪ್ರಭೇದಗಳೆಂದು ಮೇಲೆ ನಿರೂಪಿಸಿಯಾಯಿತು. ಈಗ ಉಕ್ತ್ಯಾಚಾರ್ಯ ನಿಷ್ಠೆಗಳಿಗೆ ಉಪಾಯತ್ವವು ಹೇಗ ಎಂಬುದನ್ನು ಸಪ್ರಮಾಣವಾಗಿ ಸಮರ್ಥಿಸಲು ಈ ಅಧಿಕಾರದಲ್ಲೇ ಅವುಗಳ ಸ್ವರೂಪ ಶೋಧನೆ ಮಾಡಬೇಕಾದ ಆವಶ್ಯಕತೆಯಿಂದ ಉಕ್ತ್ಯಾಚಾರ್ಯ ನಿಷ್ಠೆಗಳಿಗೆ ಫಲಾವಿನಾಭಾವವನ್ನು ಲೋಕವೇದಾನುಗುಣವಾಗಿ ದೃಷ್ಟಾಂತ ಪೂರ್ವಕ ಇವಟ್ರಲ್ **"ಉಕ್ತಿಯಾವುದು ... ಸರ್ವೇಶ್ವರನ್ ಪರಮ ಪುರುಷಾರ್ಥಂ ಕೂಡುಕ್ಕ ಇರಂಗಾನೆನ್ರದಾಯಿಟ್ರು"** ಎಂದು ಆಚಾರ್ಯರು ನಿರೂಪಿಸಿರುತ್ತಾರೆ. **"ಉನಕ್ಕೇ ಭರಮಾಹ ವಿರಿಟ್ಟು ಕ್ಕೊಳ್ಳ ವೇಣುಮ್"** ಎಂಬ ಶ್ರೀಸೂಕ್ತಿಯಿಂದ ಭರಸ್ವೀಕಾರ ಪ್ರಾರ್ಥನೆಯು ಅಂಗಿಸ್ವರೂಪ ವಿಶೇಷಣವೆಂಬುದು ತಿಳಿಸಲ್ಪಟ್ಟಿತು. **"ಯೇನ ಕೇನಾಪಿ ಪ್ರಕಾರೇಣ ದ್ವಯ ವಕ್ತಾ"** ಎಂಬ ಗದ್ಯ ಶ್ರೀಸೂಕ್ತಿಯ ಉದಾಹರಣೆಯಿಂದಲೂ ಉಕ್ತ್ಯಾಚಾರ್ಯ ನಿಷ್ಠೆಗಳಲ್ಲಿ

ಸರ್ವಸ್ಯ "ನಕೃದುಚ್ಚಾರಸ್ಸಂಸಾರತಾರಕಃ" ಎಂಬ ಶ್ರುತ್ಯಭಿಪ್ರಾಯವನ್ನನುಸರಿಸಿಯೂ "ದ್ವಯವಕ್ತಾ" ಎಂಬ ಶರಣ್ಯ ವಾಕ್ಯವನ್ನು ಪ್ರಮಾಣೀಕರಿಸಿಯೂ, "ದ್ವಯೋಕ್ತಿ"ಗೇನೆ ಫಲಾವಿನಾಭಾವವು (ಫಲಸಿದ್ಧಿ) ಹೇಳಲ್ಪಟ್ಟಿರುವುದರಿಂದ "ಉಕ್ತಿ" ಶಬ್ದವು ದ್ವಯೋಕ್ತಿ ವಿಶ್ರಾಂತವೆಂಬುದು ಗಮನಾರ್ಹ. ಮಂತ್ರಾಂತರಗಳು ಪೂರ್ಣಪ್ರಪತ್ತಿಯನ್ನು ಅನುಷ್ಠಾಪಿಸಿ ಕರಣಮಂತ್ರವಾಗಿದ್ದುಕೊಂಡು ಉಪಾಯಗಳು. ಅತ್ಯಂತ ಆಕಿಂಚನ್ಯಾನುಸಂಧಾನ, ವಿಳಂಬಾಕ್ಷಮತ್ವ, ಮಹಾವಿಶ್ವಾಸವೆಂಬ ಅಧಿಕಾರಗಳು ಪೂರ್ತಿಯಾಗಿದ್ದು ಸದಾಚಾರ್ಯ ಪ್ರಸಾದಲಬ್ಧ ಸಮುದಾಯ ಜ್ಞಾನಮಾತ್ರವಿದ್ದರೂ ಶ್ರುತ್ಯಾದಿ ಬಲದಿಂದ ದ್ವಯೋಕ್ತಿಯು ಪರಮಪುರುಷಾರ್ಥಕ್ಕೆ ಹೇತು ಭೂತವೆಂಬುದು ಹೃದಯ. ಇದರಿಂದ ಅಂಗಾಂಗಿ ರೂಪ ಪೂರ್ಣಪ್ರಪತ್ತಿಗರ್ಭವಾದ ದ್ವಯವಚನಕ್ಕೆ ಪ್ರಾಶಸ್ತ್ಯವು ಅಧಿಕ ಮುಗ್ಧ ಸಾಮಂತಕುಮಾರ ವಾಕ್ಯ, ಭವತಿಭಿಕ್ಷಾಂದೇಹಿ, ಇತ್ಯಾದಿ ದೃಷ್ಟಾಂತಗಳು, ದ್ವಯೋಕ್ತಿ ಮಾತ್ರಕ್ಕೆ ಉಪಾಯತ್ವವನ್ನು ತಿಳಿಸಲು ನಿರೂಪಿತಗಳು ಮಂತ್ರಾಂತರೋಕ್ತಿಗಳಲ್ಲಿ ಈ ವಿಷಯವಾದ ಅತಿ ಪ್ರಸಂಗಗಳನ್ನು ಮಾಡಬಾರದು ಈ ಅಂಶವು ಶ್ರೀಮದ್ವಯಾಧಿಕಾರದಲ್ಲಿ ವ್ಯಕ್ತವಾಗಿ ಹೇಳಲ್ಪಡುತ್ತದೆ.

ಮೇಲೂ "ಜ್ಞಾನಾನ್ಮೋಕ್ಷಃ" ಎಂಬ ಸಿದ್ಧಾಂತರೀತ್ಯಾ ಸಮುದಾಯ ಜ್ಞಾನ ಮಾತ್ರಕ್ಕೆ ಉಪಾಯತ್ವವನ್ನು ಹೇಳಬೇಕೇವಿನಹ, ಉಕ್ತಿಗೆ ಪ್ರಾಧ್ಯಾನತೆ ಹೇಗೆ ಎಂಬುದು ಶಂಕೆ. ಇದಕ್ಕೆ ಸಮಾಧಾನ ಕಠಶ್ರುತಿಯಲ್ಲಿ "ಸಕೃದುಚ್ಚಾರಸ್ಸಂಸಾರತಾರಕೋ ಭವತಿ" ಎಂದು ಉಚ್ಚಾರಣಕ್ಕೆ ಪ್ರಾಧಾನ್ಯವನ್ನು ಕೊಟ್ಟಿದೆ. "ಯೇನ ಕೇನಾಪಿ ಪ್ರಕಾರೇಣ ದ್ವಯವಕ್ತಾ" ಎಂದು ಶರಣಾಗತಿಗದ್ಯದಲ್ಲಿಯೂ ದ್ವಯೋಕ್ತಿಗೇನೆ ಪ್ರಾಧಾನ್ಯವನ್ನು ಕೊಟ್ಟಿರುವುದರಿಂದ ಪ್ರಮಾಣಶರಣರು ಅನ್ಯಥಾಕರಿಸಲಾಗದು, ಹಾಗಾದರೆ ಜ್ಞಾನವುಬೇಕಲ್ಲವೇ ಎಂದು ಕೇಳಬಹುದು. ಅದಕ್ಕೆ ಸಮಾಧಾನ, ಸಮುದಾಯ ಜ್ಞಾನವಾದರೂ ಅವಶ್ಯ ಇರಲೇಬೇಕು. ಸಮುದಾಯ ಜ್ಞಾನವಂತನಿಗೆ ದ್ವಯೋಕ್ತಿಯೇ ಉಪಾಯ, ಸಮುದಾಯ ಜ್ಞಾನವೂ ಇಲ್ಲದೆ ದ್ವಯೋಕ್ತಿಯು ಉಪಾಯವಾಗಲಾರದು, ಎಂಬುದು ತಾತ್ಪರ್ಯ,

ಇದು ಹೇಗೆ ಎಂದರೆ, ಪಂಚಾಗ್ನಿ ವಿದ್ಯೆಯಲ್ಲಿ ಪರಮಾತ್ಮ ಪ್ರಕಾರಕ ಸ್ವಾತ್ಮವಿಶೇಷ್ಯಕ ಚಿಂತನದಿಂದಲೂ ಶ್ರುತಿಬಲದಿಂದ ಮೋಕ್ಷಕಾರಣತ್ವವು ಹೇಳಲ್ಪಡುತ್ತದೆಯಾದರೂ, ಪ್ರಸನ್ನನಾದ ಪರಮಾತ್ಮನೇ ಸಿದ್ಧೋಪಾಯವೆಂಬುದು ವಿದ್ಯಾಂತರಗಳ ಹಾಗೆ ಅಂಗೀಕರಿಸಲ್ಪಡುತ್ತದೆ. ಅಂದರೆ, ಜೀವಾತ್ಮೋಪಾಸನೆಯು ಪ್ರಧಾನವಾಗಿದ್ದು ಪರಮಾತ್ಮೋಪಾಸನವು ಪ್ರಕಾರವಾಗಿದ್ದರೂ ಶ್ರುತಿಬಲದಿಂದ ಕೈವಲ್ಯ ಲೋಕದಲ್ಲಿ ಸ್ವಾತ್ಮಾನುಭವವನ್ನು ಮೊದಲು ಕೊಟ್ಟು ನಂತರ ಭಗವಂತನು (ಸಿದ್ಧೋಪಾಯನು) ಮೋಕ್ಷವನ್ನು ಕೊಡುತ್ತಾನೆ ಹೀಗೆಯೇ ಅಂಗಾಂಗಿಗಳ ಸ್ವರೂಪಾದಿಗಳಲ್ಲಿ ವೈಶದ್ಯವು ಇಲ್ಲದಿದ್ದರೂ ಸಮುದಾಯಜ್ಞಾನ ಪೂರ್ವಕ ಅಂಗಾಂಗಿ ಸ್ವರೂಪಾನುಷ್ಠಾನ ಗರ್ಭ ದ್ವಯೋಕ್ತಿಗೆ ಸಾಧ್ಯೋಪಾಯತ್ವವು ಅಂಗೀಕರಿಸಲ್ಪಟ್ಟಿದೆ. ತಥಾಚ ಜ್ಞಾನಾನ್ಮೋಕ್ಷವೆಂಬ ಸಾಧನಕೋಟಿಯಲ್ಲಿ ದ್ವಯೋಕ್ತಿಯು ಸಾಧನತಾವಚ್ಛೇದಕವಾಗಿ ಶ್ರುತ್ಯಾದಿ ಬಲದಿಂದ ನಿವೇಶಿಸಲ್ಪಡಬೇಕು. ಮಂತ್ರಾಂತರದಿಂದ ಪ್ರಪತ್ತಿ ಮಾಡುವಾಗ ಉಕ್ತಿ ಪ್ರಸಕ್ತಿಯಿಲ್ಲದೆ, ವಿಶದಜ್ಞಾನ ಪೂರ್ವಕ ಪ್ರಪತ್ತಿಯಿಂದಲೇ ಉಪಾಯತ್ವ. ವಿಶದ ಜ್ಞಾನವುಳ್ಳವನು ದ್ವಯಮಂತ್ರದಿಂದ ಪ್ರಪತ್ತಿಯನ್ನು ಅನುಷ್ಠಿಸಿದರೆ, ಯಥಾವಸ್ಥಿತ ಪ್ರಪತ್ತಿಯೇ ಉಪಾಯ. ನ್ಯಾಸ ವಿದ್ಯೆಯಲ್ಲಿ ಅತ್ಯಂತ ವೈಶದ್ಯವು ಇದ್ದರೂ ವಿಳಂಬಕ್ಷಮರಿಗೆ ಉಪಾಸದದಿಂದಲೇ ಮೋಕ್ಷ ವಿಶದತರ ಪ್ರಪತ್ತಿ ತತ್ತ್ವವಿತ್ತುಗಳಿಗೆ ಸಮುದಾಯಜ್ಞಾನವು ಇದ್ದರೂ, ವಿಶದತರ ಜ್ಞಾನಪೂರ್ವಕ ಯಥಾವಸ್ಥಿತ ಪ್ರಪತ್ತಿಯೇ ಉಪಾಯ ಶರಣ್ಯ ಕೃಪೋತ್ತಂಭಕ ಪರಮ ಕಾರ್ಪಣ್ಯ, ತೀವ್ರತರವಿಳಂಬಾ ಸಹಿಷ್ಣುತ್ವ, ಅವಿಕಲ ಮಹಾವಿಶ್ವಾಸ ಸಂಪತ್ತಿಯಿಂದ ಕೂಡಿರುವ ಮಂದಪ್ರಜ್ಞರಿಗೆ "ಯೇನ ಕೇನಾಪಿಪ್ರಕಾರೇಣ ದ್ವಯವಕ್ತಾ" ಎಂಬ ರೀತಿಯಲ್ಲಿ ಸಮುದಾಯ ಜ್ಞಾನದಿಂದ ಸಾಂಗಾನುಷ್ಠಾನ ಗರ್ಭ ದ್ವಯೋಕ್ತಿಯೇ ಉಪಾಯ. ಆರ್ತಪ್ರಪತ್ತಿಯ ಹಾಗೆ, ಉಕ್ತಿಪ್ರಪತ್ತಿ

ಆಚಾರ್ಯ ನಿಷ್ಠೈ

ಇವರ್ಹಳಿಲ್ ಆಚಾರ್ಯ ನಿಷ್ಠರ್ * "ಪುತ್ರಃ ಪ್ರೇಷ್ಯಸ್ತಥಾ ಶಿಷ್ಯಃ ಇತ್ಯೇವಂಚ ನಿವೇದಯೇತ್" ಎನ್ರು ಶಾಂಡಿಲ್ಯಸ್ಮೃತ್ಯಾದಿಹಳಿಲ್ ಶೊಲ್ಲುಹಿರಪಡಿಯೇ ಆಚಾರ್ಯನುಡೈಯ ಆತ್ಮಾತ್ಮೀಯ ಭರಸಮರ್ಪಣತ್ತಿಲೇ ತಾನುಮನ್ತರ್ಭೂತನ್.

***ಸಿದ್ಧಿರ್ಭವತಿ ವಾ ನೇತಿ ಸಂಶಯೋಽಚ್ಯುತಸೇವಿನಾಂ ।**
ನ ಸಂಶಯೋತ್ರ ತದ್ಭಕ್ತಪರಿಚರ್ಯಾ ರತಾತ್ಮನಾಮ್" ॥

ಎನ್ಗಿರಕಣಕ್ಕಿಲೇ ಆಚಾರ್ಯ ನಿಷ್ಠನುಕ್ಕು ಕೈಮುತಿಕನ್ಯಾಯತ್ತಾಲೇ ಫಲಸಿದ್ಧಿಯಿಲ್ ಸಂದೇಹಮಿಲ್ಲೈ.

ಯಲ್ಲಿಯೂ ದಾವಾನಲದಿಂದ ಬೆಂದುಹೋಗುವ ಜಂತುವಿನ ಹಾಗೆ ಸಂಸಾರಾಗ್ನಿದಾಹದಿಂದ ತೀವ್ರತರ ಶೋಕವು ವಿಶೇಷಾಧಿಕಾರ. "ಯೇನ ಕೇನಾಪಿ ಪ್ರಕಾರೇಣ ದ್ವಯವಕ್ತಾತ್ವಂ" ಎಂಬಲ್ಲಿ ತ್ವಂ-ನೀನು ಎಂಬ ಶಬ್ದವು ಈ ತೀವ್ರತರ ಶೋಕವನ್ನು ತಿಳಿಸುತ್ತದೆ, ಯಥಾವಸ್ಥಿತ **ಪ್ರಪತ್ತಿ** ತತ್ವವಿದಗ್ರೇಸರರಾದ ಭಗವದ್ಭಾಷ್ಯಕಾರರು, "ಯೇನಕೇನಾಪಿ ಪ್ರಕಾರೇಣ ದ್ವಯವಕ್ತಾ" ಎಂದು ಮಂದಾಧಿಕಾರಿಯಲ್ಲಿ ವಿಶೇಷ ಕಟಾಕ್ಷದಿಂದ, ಅವನಿಗೆ ಫಲವು ಅವಶ್ಯಲಭಿಸುತ್ತದೆ ಎಂದು ವಿಶ್ವಾಸವನ್ನುಂಟು ಮಾಡಲು ಹೀಗೆ ಅನುಗ್ರಹಿಸಿರುತ್ತಾರೆ. "ಪ್ರಪತ್ತೇರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನ ಮಸ್ತೀತಿಮನ್ವಾನಃ" ಎಂದು ವಿಶದಜ್ಞಾನವುಳ್ಳವನು ತಾನು ಅನುಷ್ಠಿಸುವ ಪ್ರಪತ್ತಿಯಲ್ಲಿ ಅನುಸಂಧಾನ ಮಾಡುವ ರೀತಿಯಲ್ಲಿ —ಸಮುದಾಯ ಜ್ಞಾನವುಳ್ಳ ಉಕ್ತಿ ನಿಷ್ಠನು "ಮಂದಪ್ರಜ್ಞಸ್ಯಮಮ ವಿಳಂಬಾಕ್ಷಮಸ್ಯ ದ್ವಯೋಕ್ತೇರನ್ಯತ್ ಕಲ್ಪಕೋಟಿ ಸಹಸ್ರೇಣಾಪಿ ಸಾಧನಂ ನಾಸ್ತೀತಿ"* ಕಾರ್ಪಣ್ಯಾನು ಸಂಧಾನದಲ್ಲಿ ವಿಶಿಷ್ಟತರವಾದ ಶೋಕವನ್ನು ತೋರಿಸಿಕೊಳ್ಳಬೇಕಾದುದು ಆವಶ್ಯಕವೆಂಬುದು ಸಾರವಾಗಿ ತಿಳಿಯತಕ್ಕದ್ದು

ಆಚಾರ್ಯನಿಷ್ಠಾವಿಚಾರ

ಅನಂತರ ಆಚಾರ್ಯ ನಿಷ್ಠೆಯ ಸ್ವರೂಪವನ್ನು **ಇವರ್ಹಳಿಲ್ ಆಚಾರ್ಯ ನಿಷ್ಠನ್** ಎಂದಾರಂಭಿಸಿ ಆಚಾರ್ಯರು ಉಪಪಾದಿಸುತ್ತಾರೆ **ಇವರ್ಹಳಿಲ್** ಪೂರ್ವೋಕ್ತ ರೀತಿಯಂತೆ ಮೂರು ವಿಧವಾದ ಪ್ರಪನ್ನರಲ್ಲಿ 1) **ಪುತ್ರಪ್ರೇಷ್ಯಸ್ತಥಾ ಶಿಷ್ಯ ಇತ್ಯೇವಂ ಚ ನಿವೇದ ಯೇತ್** ಎಂದು ಶಾಂಡಿಲ್ಯ ಸ್ಮೃತ್ಯಾದಿಗಳಲ್ಲಿ (3-‾‾) ಹೇಳಿ ವರೀತಿಯಲ್ಲಿ ಆಚಾರ್ಯನ ಆತ್ಮಾತ್ಮೀಯ ಭರಸಮರ್ಪಣದಲ್ಲಿ ಅಂತರ್ಭೂತನಾದವನು ಆಚಾರ್ಯ ನಿಷ್ಠನೆಂದು ಹೇಳಲ್ಪಡುತ್ತಾನೆ. ಈ ಪ್ರಕರಣವು ಯಾವುದೆಂದರೆ, "ಕುಟುಂಬಿ ನೋಪಿ ಕರ್ತವ್ಯಂ ಕರ್ಮ ಕುರ್ಯ್ಯಾದ ತಂದ್ರಿತಾಃ।" ಎಂದು ಸಾಮಾನ್ಯವಾಗಿ ಕುಟುಂಬಿಯಾದವನೂ ನಿತ್ಯನೈಮಿತ್ತಿಕ ಕರ್ಮಗಳನ್ನು ಬೇಸರಿಕೆಯಿಲ್ಲದೆ ಮಾಡಬೇಕು, ಎಂದು ಹೇಳಿ ನಂತರ

ಉತ್ಥಾಯ ಪೂರ್ವಂ ಗೃಹಿಣೀ ಸುಸ್ನಾತಾ ಯತ ಮಾನಸಾ ।
ಸ್ನಾಪಾದು ಹಿತ್ಯ ಪುತ್ರಾದ್ಯಾನ್ಯಥಾರ್ಹಂ ಶುಚಿತಾನ್ನಯೇತ್ ॥

ಎಂದು ಗೃಹಿಣಿಯಾದವಳು ಎಲ್ಲರಿಗಿಂತಲೂ ಮುಂಚೆ ಹಾಸಿಗೆಯಿಂದೆದ್ದು ಸ್ನಾನಾದಿಗಳನ್ನು ಮಾಡಿ, ಮಕ್ಕಳು ಸೊಸೆ ಮೊದಲಾದವರಿಗೂ ಅವರವರಿಗೆ ತಕ್ಕಂತೆ ಸ್ನಾನ ಮಾಡಿಸಿ ಶುಚಿತ್ವವನ್ನು ಉಂಟು ಮಾಡಿ, ಊರ್ಧ್ವಪುಂಡ್ರ ವಸ್ತ್ರ ಭೂಷಣಾದಿಗಳಿಂದ ಅಲಂಕರಿಸಬೇಕೆಂದು ಗೃಹಿಣಿಯ ವ್ಯಾಪಾರವನ್ನು ಹೇಳಿ ಸಂತತ

ಊರ್ಧ್ವಪುಂಡ್ರಧರಾಸ್ಸರ್ವೇ ವಸ್ತ್ರಾಭರಣ ಭೂಷಿತಾಃ ।
ಸ್ವಾಚಾಂತಾಃ ಪ್ರಯತಾದೇವಮಭಿಗಚ್ಛೇಯುರಾದೃತಾಃ ॥

ಎಂದು ವಸ್ತ್ರಾದಿಗಳಿಂದ ತಮ್ಮನ್ನು ಅಲಂಕರಿಸಿಕೊಂಡು ಎಲ್ಲರೂ ಮನೆಯಲ್ಲಿರುವ ದೇವರಸನ್ನಿಧಿಗೆ ಹೋಗಬೇಕು. ಎಂದು ಹೇಳಿ ಅನಂತರ

ತ್ರಿಸಂಧ್ಯಂ ಕಾರಯೇ ದ್ಬಾಲಾನ್ ವಂದನಂ ದೇವಪಾದಯೋಃ ।
ಪುತ್ರಃ ಪ್ರೇಷ್ಯಸ್ತಥಾ ಶಿಷ್ಯಃ ಇತ್ಯೇವಂಚನಿವೇದಯೇತ್ ॥

ಎಂದು ಮಕ್ಕಳನ್ನು ಬೆಳಿಗ್ಗೆ, ಮಧ್ಯಾಹ್ನ ಸಾಯಂಕಾಲವೆಂಬ ಮೂರು ವೇಳೆಗಳಲ್ಲಿಯೂ ದೇವರಿಗೆ ನಮಸ್ಕಾರ ಮಾಡಿಸಬೇಕು ಹಾಗೆಯೇ ತನಗೂ ಅವರಿಗೂ ಇರುವ ಸಂಬಂಧವನ್ನು ತಿಳಿಸಿ, ನಿರಪರಾಧಪಾಂಚಕಾಲಿಕ ಅಂದರೆ ಬೆಳಿಗ್ಗೆಯಿಂದ ಆರಂಭಿಸಿ ರಾತ್ರಿ ಪರ್ಯಂತ ಕೈಂಕರ್ಯ ಸಿಧ್ಯರ್ಥವಾಗಿ ಅಭಿಗಮನ ಕಾಲಿಕ ಪ್ರಪತ್ತಿಯನ್ನು ಮಾಡು ವಾಗ ಕುಟುಂಬಿಯಾದವನು ಪುತ್ರ, ಆಳು, ಶಿಷ್ಯ ಇತ್ಯಾದಿಯಾಗಿ ಅವರ ಭರವನ್ನೂ ತನ್ನ ಭರದೊಡನೆ ಸೇರಿಸಿ, ಭಗವಂತನಲ್ಲಿ ಸಮರ್ಪಿಸಬೇಕು. ಇದೇ ನ್ಯಾಯವನ್ನು ಅನುಸರಿಸಿ ಮೋಕ್ಷಾರ್ಥವಾಗಿ ಭರಸಮರ್ಪಣ ಮಾಡುವಾಗ ಆಚಾರ್ಯರ ಆತ್ಮಾತ್ಮೀಯಭರವನ್ನು ನನ್ನ ಮತ್ತು ತನ್ನ ಅಭಿಮಾನಕ್ಕೆ ವಿಷಯರಾದ ಪುತ್ರ ಪ್ರೇಷ್ಯ ಶಿಷ್ಯಾದಿಗಳಿಗೂ ಸೇರಿಸಿಮಾಡಬಹುದು ಎಂಬುದು ಘಟ್ಟ ತಾತ್ಪರ್ಯ. ಇದರಿಂದ ಆಚಾರ್ಯನ ಆತ್ಮಾತ್ಮೀಯ ಭರಸಮರ್ಪಣದಲ್ಲಿ ಆತ್ಮೀ ಯನಾಗಿ ಸೇರುವವನು ಆಚಾರ್ಯನಿಷ್ಠನು ಎಂದು **ಹೇಳಿದಂತಾಯ್ತು.** "ನಿವೇದಯತ ಮಾಂಕ್ಷಿಪ್ರಂ ವಿಭೀಷಣಮುಪ ಸ್ಥಿತಮ್", "ನಿವೇದಯೀತ ಸ್ವಾತ್ಮಾನಂ ವಿಷ್ಣಾವ ಮಲತೇಜಸಿ" ಎಂಬ ರೀತಿಯಲ್ಲಿ **"ನಿವೇದಯೇತ್"** ಎಂಬುದು ಸಮರ್ಪಣ ಪರ. ಈ ಸಮರ್ಪಣವು "ಯತ್ಸಂ ರಕ್ಷ್ಯತ ಯಾಪ್ಯರ್ಣತೇ" ಎಂಬಂತೆ ಅನನ್ಯ ರಕ್ಷತ್ವ ರೂಪವಾದದು. "ನಿವೇದಯ ಶಬ್ದಕ್ಕೆ ತಿಳಿಸು, ಎಂದು ಅರ್ಥವನ್ನು ಹೇಳುವುದು ಸಂದರ್ಭಕ್ಕೆ ಸೇರುವುದಿಲ್ಲ.

ಶಾಸ್ತ್ರ ಫಲಂ ಪ್ರಯೋಕ್ತರಿ "ಎಂಬ ನ್ಯಾಯದಂತೆ ಶಾಸ್ತ್ರಾನುಷ್ಠಾನದ ಫಲವು ಅನುಷ್ಠಿಸುವವನಿಗೆ ಮಾತ್ರ ವಲ್ಲವೇ ತಾನು ಮಾಡುವ ಯಾಗದಿಂದ ಅನ್ಯನಿಗೆ ಸ್ವರ್ಗವು ಸಿಗಲಾರದಲ್ಲವೇ. ಹಾಗೆಯೇ ಉಪಾಸನೆಯಿಂದ ಮೋಕ್ಷವು ಅನುಷ್ಠಿಸುವವನಿಗೇನೆ ವಿನಹ ಅನ್ಯನಿಗಿಲ್ಲ- ಹೀಗಿರುವಾಗ ತಾನು ಇನೊಬ್ಬನಿಗಾಗಿ ಶರಣಾಗತಿಯನ್ನು ಅನುಷ್ಠಿಸಿದರೆ ಅವನಿಗೆ ಫಲವು ಲಭಿಸುವುದು ಹೇಗೆ ಎಂಬ ಶಂಕೆಗೆ "ವಚನ ಬಲ" ವೆಂದು ಪ್ರತ್ಯುತ್ತರ. ಶರಣಾ ಗತಿಗೆ ಇರುವ ಇಂಥಹ ವಚನವು, ಭಕ್ತಿಗೆ ಇಲ್ಲ ತನಗೂ ತನ್ನನ್ನು ಆಶ್ರಯಿಸಿದ ಆತ್ಮೀಯರಾದ ಎಲ್ಲಾ ಅರ್ಥಿಗ ಳಿಗೂ ಸಹ ಸೇರಿಸಿ ಪ್ರಪದ ನಾನುಷ್ಠಾನವು ಉಹ ಪನ್ನವು ಎಂಬ ವಿಲಕ್ಷಣವಾದ ಈ ಪ್ರಪತ್ತಿಸಾಮರ್ಥ್ಯವನ್ನು ಅನುಸಂಧಾನ ಮಾಡಿ ಅದನ್ನು ಸೂಚಿಸಲು **"ಆತ್ಮಾತ್ಮೀಯ ಭರಸಮರ್ಪಣ"** ವೆಂದು ಆಚಾರ್ಯರು ಅನುಗ್ರಹಿ ಸಿರುತ್ತಾರೆಂದು, ಕರೂರು ಸ್ವಾಮಿಗಳು ತಮ್ಮ ಸಾರಕೌಮುದಿಯಲ್ಲಿ ನಿರೂಪಿಸಿರುತ್ತಾರೆ.

ಅನಂತರ **"ಸಿದ್ಧಿರ್ಭವತಿವಾನೇತಿ"** ಎಂದಾರಂಭಿಸಿ ಈ ಆಚಾರ್ಯ ನಿಷ್ಠನಿಗೆ ಫಲಸಿದ್ಧಿಯಲ್ಲಿ ಸಂದೇಹವಿಲ್ಲ ವೆನ್ನುತ್ತಾರೆ. ಈ ಶ್ಲೋಕವೂ ಶಾಂಡಿಲ್ಯ ಸ್ಮೃತಿಯಲ್ಲಿ (1-95) ಹೇಳಲ್ಪಟ್ಟಿದೆ. ಆದಾಗಿ ಅಚ್ಯುತನನ್ನು ಆಶ್ರ ಯಿಸಿದವರಿಗೆ ಫಲಸಿದ್ಧಿಯು ಉಂಟೋ ಇಲ್ಲವೋ, ಎಂಬ ಸಂದೇಹವು ಬರಬಹುದು. ವಸ್ತುಸ್ಥಿತಿಯಲ್ಲಿ ಸಂದೇಹವು ಬರಲಿಕ್ಕಿಲ್ಲ ಹಾಗೆ ಬಂದರೂ, ಅವನ ಭಕ್ತರ ಶುಶ್ರೂಷೆಯಲ್ಲಿ ಆಸೆಯುಳ್ಳವರಿಗೆ ಫಲ ಸಿದ್ಧಿಯಲ್ಲಿ ಸಂಶಯವೇ ಇಲ್ಲ. ಹೀಗೆ ಹೇಳುವ ರೀತಿಯಲ್ಲಿ ಆಚಾರ್ಯ ನಿಷ್ಠನಿಗೆ ಕೈಮುತಿಕ ನ್ಯಾಯದಿಂದ ಫಲ ಸಿದ್ಧಿಯಲ್ಲಿ ಸಂದೇಹವಿಲ್ಲ- ಇಲ್ಲಿ ಕೈಮುತಿಕ ನ್ಯಾಯವು ಹೇಗೆಂದರೆ, ಭಗವದ್ಭಕ್ತಪರಿಚರ್ಯೆಯಲ್ಲಿ ಆಸೆಯಿಲ್ಲದ ಅಚ್ಯುತ ಭಕ್ತರಿಗೇ ಫಲವು ಸಿದ್ಧಿಸುತ್ತದೆಯೆಂದರೆ, ಭಗವದ್ಭಕ್ತ ಪರಿಚ್ಛಾರ ಪರ್ಯಂತ ಭಗವತ್ಕೈಂಕರ್ಯವನ್ನು ಪುರುಷಾರ್ಥಕಾಷ್ಠೆಯೆಂದು ತಿಳಿದು

ಒರುಮಲೈಯಿಲ್ ನಿನ್ರುಮ್ ಒರುಮಲೈಯಿಲೇ ತಾವುಮ್ ಸಿಂಹ ಶರೀರತ್ತಿಲ್ ಜನ್ತುಕ್ಕಳೈಪ್ಪೋಲೇ ಭಾಷ್ಯಕಾರರ್ ಸಂಸಾರಾತಿಲಂಘನಂ ಪಣ್ಣ ಅವರೋಡುಣ್ಡಾನ ಕುಡಲ್‌ತುವಕ್ಕಾಲೇ ನಾಮುತ್ತೀರ್ಣರಾವುದೋ ವೆನ್ರು ಮುದಲಿಯಾಣ್ಡಾನರುಳಿಚ್ಚೆಯ್‌ದಸಾತುರಮ್.

ಯಾವ ಮಹಾತ್ಮರು ಆ ಪರಿಚರ್ಯೆಯಲ್ಲಿ ಆಸೆಯುಳ್ಳವರೋ ಅವರ ಗಳಿಗೆ ಫಲಸಿದ್ಧಿಯಲ್ಲಿ ಸಂಶಯವೇನಿದೆ ಭಾಗವತದಾಸ್ಯಪರ್ಯಂತ ಸ್ವರೂಪ ಜ್ಞಾನ ಪೂರ್ವಕವಾಗಿ ಸ್ವರೂಪೋಚಿತವಾದ ಭಗವದತ್ಯಂತಾಭಿಮತವಾದ ಭಾಗವತ ಕೈಂಕರ್ಯದಲ್ಲಿ ಪ್ರವರ್ತಿಸುವವರಿಗೆ, ಭಗವಂತನಲ್ಲಿ ಪರಿಪೂರ್ಣವಾದ ನಿತ್ಯಕೈಂಕರ್ಯ ಪ್ರವಾಹ ಪರ್ಯಂತಾನು ಭವಲಕ್ಷಣವಾದ ಪರಮ ಪುರುಷಾರ್ಥದಲ್ಲಿ ಸುದೃಢತರವಾದ ಅಭಿರುಚಿಯುಂಟಾಗುವುದರಿಂದ ಪೂರ್ಣಾಧಿಕಾರವು ಸಿದ್ಧ. ಇಂಥಹ ಮಹಾತ್ಮರ ವೃತ್ತಿಯನ್ನು ಪರಿಶೀಲಿಸಿದರೆ ಇವರೇ ಪರಮಪುರುಷಾರ್ಥಲಾಭಕ್ಕೆ ಉಚಿತರು, ಇತರರು ಇಲ್ಲ ಎಂದು "ನಹಿನಿಂದಾನ್ಯಾಯ"ವನ್ನು ಅವಲಂಬಿಸಿ, "ಸಿದ್ಧಿರ್ಭವತಿವಾನೇತಿ" ಇತ್ಯಾದಿಯು ಹೇಳಲ್ಪಡುತ್ತದೆ

ಇನ್ನೊಬ್ಬನಿಗಾಗಿ ಭಕ್ತಿಮಾಡಲು ಪ್ರಮಾಣವಚನವಿಲ್ಲ. **ಆತ್ಮಾತ್ಮೀಯ ಭರಸಮರ್ಪಣತ್ತಿಲೇ ತಾನುಮಂತ ಭರ್ಗತನ್**–ಕೆಲವರು ಆಚಾರ್ಯರು ತನಗೋಸ್ಕರ ಪ್ರಪತ್ತಿ ಮಾಡುವ ಸಮಯದಲ್ಲಿ ಮಾತ್ರ ಆತ್ಮೀಯನು (ಪುತ್ರ, ಶಿಷ್ಯ ಇತ್ಯಾದಿ) ಅಂತರ್ಭಾವ್ಯನು, ಬೇರೆ ಸಮಯದಲ್ಲಿ ಆತ್ಮೀಯನು ಆಚಾರ್ಯ ಶರಣಾಗತಿಯಲ್ಲಿ ಸೇರಿಕೊಳ್ಳಲಾಗುವುದಿಲ್ಲವೆಂದು ಶ್ರೀ ಸೂಕ್ತಿ ಸ್ವಾರಸ್ಯವನ್ನು ತಿಳಿಯದವರಾಗಿ ಮೋಹಗೊಂಡಿದ್ದಾರೆ ಇದು ಸರಿಯಲ್ಲ, **"ಪುತ್ರಃ ಪ್ರೇಷ್ಯಸ್ತಥಾ ಶಿಷ್ಯಃ ಇತ್ಯೇವಂಚನಿವೇದಯೇತ್"** ಎಂಬ ವಚನದಿಂದ **ಪಾರ್ಥಕ್ಯವು** (ಬೇರೆ ಬೇರೆಯೆಂಬುದು) ತಿಳಿಯುತ್ತದೆ ಪುತ್ರಾದಿಗಳೆಲ್ಲರಿಗೂ ಪ್ರಾಪ್ತವಾದ ಕಾಲದಲ್ಲಿ ಒಟ್ಟಿಗೇನೇ ತನ್ನೊಡನೆ ಒಂದೇ ಪ್ರಪತ್ತಿ ಸೇರಿಸಿಮಾಡಬಹುದು ಅಥವಾ ಅನಂತರವೂ ಪ್ರಾಪ್ತವಾದ ಕಾಲದಲ್ಲಿ ಅವರವರಿಗೆ ಪ್ರತ್ಯೇಕವಾಗಿಯೂ ಮಾಡಬಹುದು ಅನ್ಯನಿಗೆ ಪ್ರಪತ್ತಿ ಮಾಡುವ ಆಚಾರ್ಯನು ಮುಂಚಿತವಾಗಿಯೇ ಪ್ರಪನ್ನನಾಗಿರಬೇಕೆಂಬ ನಿರ್ಬಂಧವೂ ಇಲ್ಲ. ಅನ್ಯನಿಗೆ ಉಪನಯನಮಾಡುವ ಬ್ರಾಹ್ಮಣನು ತಾನು ಮೊದಲು ಉಪನೀತನಾಗಿಯೇ ಇರಬೇಕೆಂಬ ನಿರ್ಬಂಧವು ಇಲ್ಲಿಲ್ಲ ತನಗೂ ಆತ್ಮೀಯರಾದ ಎಲ್ಲಾ ಅರ್ಥಿಗಳೊಡನೆ ಸೇರಿಸಿ ಪ್ರಪದನವನ್ನು ಮಾಡಿಕೊಳ್ಳಬಹುದೆಂಬ ವಿಲಕ್ಷಣವಾದ ಪ್ರಪದನ ಸಾಮರ್ಥ್ಯವನ್ನು ಅನುಸಂಧಾನ ಮಾಡಿ, ಅದನ್ನು ಸೂಚಿಸಲು **"ಆತ್ಮಾತ್ಮೀಯ"** ಎಂಬ ಅಖಿಲೋಪಾದಾನವೆಂಬುದು ತತ್ವವಿತ್ತುಗಳ ಅಭಿಪ್ರಾಯವೆಂದು ಕರೂರುಸ್ವಾಮಿಗಳು ತಮ್ಮ ಗ್ರಂಥದಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ

ತದೀಯಪರ್ಯಂತದಾಸ್ಯವು ಮೂಲಮಂತ್ರಾದಿಗಳಲ್ಲಿ ಶಿಕ್ಷಿಸಲ್ಪಟ್ಟಿರುವುದನ್ನು, ಎಲ್ಲಾ ಮುಮುಕ್ಷುಗಳೂ ತಿಳಿದಿದ್ದರೂ, ಅವರವರ ಸುಕೃತ ತಾರತಮ್ಯದಿಂದ ಬದ್ಧದಶೆಯಲ್ಲಿ ಕೈಂಕರ್ಯಭೋಗ ತಾರತಮ್ಯವು ಇದ್ದೇ ಇದೆ. ಆದ್ದರಿಂದ ನಿರತಿಶಯ ಪರಮ ಭಾಗವತ ಶುಶ್ರೂಷೆಯೆಂಬ ಭೋಗ ಪರ್ಯಂತ ಭಗವಂತನಲ್ಲಿ ಶೇಷತ್ವ ಕಾಷ್ಠಾರಾಸಿಕ್ಯವು ಯಾರಿಗೆ ನಿಷ್ಪ್ರಕಂಪವಾಗಿ ಅನುವರ್ತಿಸುತ್ತದೆಯೋ, ಅವರಿಗಿಂತ ಕೇವಲ ಭಗವತ್ಕೈಂಕರ್ಯ ಮಾತ್ರ ಭೋಗದಲ್ಲಿ ಆಸಕ್ತಿಯುಳ್ಳವರು ಮಂದಾಧಿಕಾರಿಗಳು ಎಂಬುದೇ ಇಲ್ಲಿಯ ತತ್ವ. ಆದ್ದರಿಂದ ಆಚಾರ್ಯ ನಿಷ್ಠೆಯನ್ನು ಅವಲಂಬಿಸಿದ ಪ್ರಪನ್ನರು ನಿಪುಣಾಗ್ರೇಸರರು ಎಂಬುದು ಭಾವ.

ಆಚಾರ್ಯನಿಷ್ಠನಿಗೆ ಫಲಸಿದ್ಧಿ ಉಂಟೆಂಬುದಕ್ಕೆ ಸಂಪ್ರದಾಯಾನುಷ್ಠಾನವನ್ನು **"ಒರುಮಲೈಯಿನಿನ್ರುಮ್"** ಎಂದಾರಂಭಿಸಿ ನಿರೂಪಿಸಿರುತ್ತಾರೆ. ಅದಾಗಿ ಒಂದು ಬೆಟ್ಟದಿಂದ ಇನ್ನೊಂದು ಬೆಟ್ಟಕ್ಕೆ ಹಾರುವ ಸಿಂಹದ ಶರೀರದಲ್ಲಿರುವ ಜಂತುಗಳು ತಾವೂ ಆ ಸಿಂಹವನ್ನು ಆಶ್ರಯಿಸಿದ ಮಾತ್ರಕ್ಕೆ ಆಚೆ ಬೆಟ್ಟವನ್ನು ತಲುಪುವ ಹಾಗೆ

(೧) ಅಂಧೋನಂಧ ಗ್ರಹಣವಶಗೋ ಯಾತಿ ರಙ್ಕ್ತೀಶಯದ್ವತ್ ।
ಪಂಗುರ್ನೌಕಾ ಕುಹರ ನಿಹಿತೋ ನೀಯತೇ ನಾವಿಕೇನ ॥
ಭುಙ್ಕ್ತೇ ಭೋಗಾನವಿದಿತನೃಪಸ್ಸೇವಕಸ್ಯಾರ್ಭಕಾದಿಃ ।
ತ್ವತ್ಸಂಪ್ರಾಪ್ತೌ ಪ್ರಭವತಿ ತಥಾ ದೇಶಿಕೋ ಮೇ ದಯಾಳುಃ ॥ ಎನ್ರು ನ್ಯಾಸತಿಲಕತ್ತಿಲೇ ಶೊನ್ನೋಮ್

ಭಾಷ್ಯಕಾರರು ಸಂಸಾರಾತಿ ಲಂಘನೋಪಾಯವಾದ ಪ್ರಪತ್ತಿಯನ್ನು ಅನುಷ್ಠಿಸಿದಾಗ, ಅವರ ಆತ್ಮೀಯರೆಂದು ಆ ಕಾಲದಲ್ಲಿ ಸಂಬಂಧಪಟ್ಟ ನಾವೆಲ್ಲರೂ ಅವರ ಆತ್ಮಾತ್ಮೀಯ ಭರಸಮರ್ಪಣದಲ್ಲಿ ಅಂತರ್ಭೂತರಾಗಿ, ಉತ್ತೀರ್ಣರಾದೆವು" ಎಂದು ಮುದಲಿಯಾಂಡಾನ್ ಕೃಪೆ ಮಾಡಿ ಹೇಳಿದ ಮಾತು. **ಅವರೋಡುಂಡಾನ ಕುಡಲ್ ತುವಕ್ಕಾಲೇ** — ಕುಡಲ್ ತುವಕ್ಕು ಶರೀರಸಂಬಂಧ ಅವರ (ಭಾಷ್ಯಕಾರರ) ಆತ್ಮಾತ್ಮೀಯ ಭರಸಮರ್ಪಣದಲ್ಲಿ ಅಂತರ್ಭೂತರಾಗಿ ಎಂದರ್ಥ ಶಿಷ್ಯನು ಆತ್ಮೀಯನು. ಶಿಷ್ಯನು ಆಚಾರ್ಯನನ್ನು ಆಶ್ರಯಿಸಿ ಆಚಾರ್ಯನಿಷ್ಠೆಯಿಂದ ಮೋಕ್ಷವನ್ನು ಹೊಂದಬಹುದು, ಎಂಬುದಕ್ಕೆ ಶಿಷ್ಟಾನುಷ್ಠಾನ. ಇಲ್ಲಿ ಜ್ಞಾನಶಕ್ತ್ಯಾದಿಗಳಿಂದ ಕೂಡಿದವರೂ ಸಹ ಆಚಾರ್ಯನ ಮದೀಯತ್ವೇನಾಭಿಮಾನಿತರಾಗಿ ಆಚಾರ್ಯ ನಿಷ್ಠೆಯನ್ನು ಮಾಡಬಹುದು ಎಂಬುದು ತಿಳಿಸಲ್ಪಟ್ಟಿತು ಶಿಷ್ಯರು ಈವತ್ತಿಗೂ ಆಚಾರ್ಯ ನಿಷ್ಠೆಯನ್ನು ಅವಲಂಬಿಸುತ್ತಿದ್ದಾರೆ

ಅನಂತರ ಜ್ಞಾನಶಕ್ತ್ಯಾದಿಗಳಿಲ್ಲದವರೂ ಆಚಾರ್ಯನನ್ನು ಆಶ್ರಯಿಸಿ ಮೋಕ್ಷವನ್ನು ಪಡೆಯಬಹುದು, ಎಂಬ ಶಾಸ್ತ್ರಾರ್ಥವನ್ನು **ಅಂಧೋನಂಧಗ್ರಹಣವಶಗಃ** ಎಂದಾರಂಭಿಸುವ ಶ್ಲೋಕದಿಂದ ಆಚಾರ್ಯರು ನಿರೂಪಿಸಿರುತ್ತಾರೆ, ಆದಾಗಿ ಅಂಧೋನಂಧ ಗ್ರಹಣವಶಗಃ, ಇತ್ಯಾದಿ ಶ್ಲೋಕವನ್ನು ನ್ಯಾಸ ತಿಲಕದಲ್ಲಿ ಹೇಳಿರುತ್ತೇವೆ, ಎಂದು ಆಚಾರ್ಯರು ಅನುಗ್ರಹಿಸಿರುತ್ತಾರೆ ಇದರ ಅರ್ಥವೇನೆಂದರೆ ಕುರುಡನು ಕುರುಡನಲ್ಲದವನನ್ನು ಆಶ್ರಯಿಸಿ ಹೇಗೆ ನಡೆಯುತ್ತಾನೆಯೋ ಹಾಗೆ ಜ್ಞಾನವಿಲ್ಲದವನು ಜ್ಞಾನವುಳ್ಳ ಆಚಾರ್ಯನನ್ನು ಆಶ್ರಯಿಸಬಹುದು. ಹಾಗೆಯೇ ಕಾಲಿಲ್ಲದವನು ದೋಣಿಯಲ್ಲಿ ಎತ್ತಿಡಲ್ಪಟ್ಟು, ನಾವಿಕನಿಂದ ಆಚೆದಡಕ್ಕೆ ಒಯ್ಯಲ್ಪಡುತ್ತಾನೆ. ಅಂದರೆ ಶಕ್ತಿಯಿಲ್ಲದವನು ಶಕ್ತಿಯುಳ್ಳ ಆಚಾರ್ಯನನ್ನು ಆಶ್ರಯಿಸಬಹುದು. ಅನಂತರ ರಾಜನನ್ನು ಅರಿಯದೆ ಇರುವ, ರಾಜಸೇವಕನ ಮಕ್ಕಳು ಮತ್ತು ಭಾರ್ಯಾದಿಗಳು ರಾಜಸೇವಕನಿಂದ ಮನೆಗೆ ತರಲ್ಪಟ್ಟ ರಾಜ ಭೋಗ ರೂಪವಾದ ಶೇಷಾನ್ನ ವಸ್ತ್ರಾದಿಗಳನ್ನು ಹೇಗೆ ಭುಜಿಸಿ ಉಟ್ಟುಕೊಂಡು ಸಂತೋಷಪಡುತ್ತಾರೋ, ಹಾಗೆ ಜ್ಞಾನಶಕ್ತಿಗಳೆರಡೂ ಇಲ್ಲದವನೂ ಸದಾಚಾರ್ಯನನ್ನು ಆಶ್ರಯಿಸಿ ಭಗವಂತನನ್ನು ಪಡೆಯಬಹುದು, ಎಂಬುದು.

ಈ ಶ್ಲೋಕದಿಂದ ಜ್ಞಾನಶಕ್ತ್ಯಾದಿಗಳಿಲ್ಲದವನು ಸಂಸಾರ ನಿಸ್ತಾರಕ್ಕೆ ಉಪಾಯವಾಗಿ ಆಚಾರ್ಯನನ್ನು ಆಶ್ರಯಿಸಬಹುದು ಎಂದು ಅಯೋಗ ವ್ಯವಚ್ಛೇದವು ತಿಳಿಸಲ್ಪಡುತ್ತದೆಯೇ ವಿನಹ ಜ್ಞಾನಶಕ್ತ್ಯಾದಿಗಳಿಂದ ಕೂಡಿದವನು ಆಚಾರ್ಯನಿಷ್ಠೆಯನ್ನು ಅನುಷ್ಠಿಸಕೂಡದು ಎಂದು ಅನ್ಯಯೋಗ ವ್ಯವಚ್ಛೇದವು ತಿಳಿಸಲ್ಪಡುವುದಿಲ್ಲವೆಂಬುದು ಗಮನಿಸತಕ್ಕದ್ದು. "ಅಂಧೋನಂಧ ಗ್ರಹಣವಶಗ" ಎಂಬ ಶ್ಲೋಕಕ್ಕೆ ಕುಮಾರನಯಿನಾಚಾರ್ಯರು ವ್ಯಾಖ್ಯಾನ ಮಾಡಿರುತ್ತಾರೆ ಆ ವ್ಯಾಖ್ಯಾನದಲ್ಲಿ ಜ್ಞಾನಾಭಾವೇ ಪ್ರಥಮ :— ಶಕ್ತ್ಯಭಾವೇ ದ್ವಿತೀಯಃ— ಉಭಯಾಭಾವೇ ತೃತೀಯಃ ಎಂದು ಅನುಗ್ರಹಿಸಿರುತ್ತಾರೆ.

ಈ ಸಂದರ್ಭದಲ್ಲಿ ಹೇಳಿರುವ ವಾಕ್ಯಗಳಿಗೆ ತಾತ್ಪರ್ಯವೇನೆಂಬುದನ್ನು ಕರೂರುಸ್ವಾಮಿಗಳು ತಮ್ಮ ಪ್ರಬಂಧದಲ್ಲಿ ಈ ರೀತಿಯಲ್ಲಿ ತಿಳಿಸಿರುತ್ತಾರೆ. ಆದಾಗಿ "ಅಜ್ಞಾನಾಶಕ್ತಿಗಳಿಂದ ಸದಾಚಾರ್ಯರ ಮೂಲಕ ಭಗವಂತನಲ್ಲಿ ಪ್ರಪತ್ತಿ ಮಾಡುವವರು ಇರಲಿ. ಅವರಿಗೆ ಮೋಕ್ಷವು ಸಂಕಲ್ಪಿತಕಾಲದಲ್ಲಿ ಅವಶ್ಯವಾಗಿ ಲಭಿಸುತ್ತದೆ, ಎಂಬುದೂ ನಿಸ್ಸಂಶಯವಾಗಿರಲಿ. ಪ್ರಪತ್ತಿ ತತ್ವಯಾಥಾತ್ಮ್ಯ ಜ್ಞಾನವು ಪರಿಪೂರ್ಣವಾಗಿದ್ದರೂ ಆದನ್ನು ಪ್ರಯೋಗಿಸುವ

ಕೌಶಲ್ಯವೂ ಅತಿಶಯಿತವಾಗಿದ್ದರೂ ಸದಾಚಾರ್ಯ ಲಕ್ಷಣ ಪೌಷ್ಕಲ್ಯದಿಂದ ಭಗವಂತನ ದಿವ್ಯಾವತಾರದ ಹಾಗೆ, ಅವಿಕಲವಾದ ಅಖಿಲ ಕಲ್ಯಾಣ ಗುಣಗಳನ್ನುಳ್ಳ ಆಚಾರ್ಯರಲ್ಲಿ ಗುಣಕೃತದಾಸ್ಯತ್ವವನ್ನು ಹೊಂದಿದವರು ಮೋಕ್ಷದಲ್ಲಿಯೂ ತದೀಯರೆಂದು ವ್ಯಪದೇಶಿಸಲ್ಪಟ್ಟು, ಭಗವದಭಿಮತ ಕೈಂಕರ್ಯ ವರ್ಗದಲ್ಲಿ ನಿಯೋಗಿಸಲ್ಪಡಲು ಯೋಗ್ಯರಾಗಿ ಆ ಆಚಾರ್ಯರ ದಾಸ್ಯವನ್ನೇ ಸ್ವರೂಪ ನಿರೂಪಕವಾಗಿ ತಿಳಿದು, "ಸೇವಾಹ್ವಾನಂ ಸಪದಿ ಶೃಣುಯಾಂ ಪಾದುಕಾಸೇವಕೇತಿ" ಎಂಬ ರೀತಿಯಲ್ಲಿ ಪುರುಷಾರ್ಥಕಾಷ್ಠೆಯಲ್ಲಿ ಹೆಚ್ಚು ರಾಸಿಕ್ಯದಿಂದ ಆ ಸದಾಚಾರ್ಯಮುಖವಾಗಿ ಉಪಾಯವನ್ನು ಅವಲಂಬಿಸಿ, ಆಚಾರ್ಯ ನಿಷ್ಠರಾಗಿ ಅವರ ಪಾದ ಪದ್ಮಸೇವೆಯೇ ಪರಮ ಪದದಲ್ಲಿಯೂ ಪರಮ ಪ್ರಾಪ್ಯವೆಂದು ತಿಳಿದು ಅವರ ಸಂತೋಷಕ್ಕೋಸ್ಕರ ಭಗವಂತನ ಕೈಂಕರ್ಯ ವರ್ಗಗಳನ್ನೂ ಅವರ ಅಭಿಮತಕರಣ ಎಂಬ ಬುದ್ಧಿಯಿಂದ ಕೂಡಿ ಮಾಡಲು ಕೃತಾರ್ಥರಾಗುವ ಮನಸ್ಕರಾಗಿ ಅದರಿಂದಲೇ ಭಗವಂತನಿಗೂ ಅಭಿಮತತಮರಾಗುವವರು ಪ್ರಪನ್ನಾಗ್ರೇಸರು ಇಂಥಹ ಭಗವತ್ಕೃಪಾಪರಿಣಾಮವು ಯಾವ ಅಧಿಕಾರಿಗೆ ಲಬ್ಧವಾಗುತ್ತದೆಯೋ, ಆ ಮಹಾತ್ಮನು ಸುದುರ್ಲಭನು, ಎಂಬ ಈ ಅಧಿಕಾರಿ ವಿಶೇಷ ದೃಷ್ಟಿಯಿಂದ, ಶ್ರೀಮತ್ಸಾರ ಸಾರ ಗ್ರಂಥದಲ್ಲಿ ಇಂಥಹ ಆಚಾರ್ಯ ನಿಷ್ಠರು ನಿಪುಣರೆಂದು ಅನುಗ್ರಹಿಸಲ್ಪಟ್ಟಿದೆ

ತ್ವಯ್ಯಾಚಾರ್ಯೈರ್ವಿನಿಹಿತ ಭರಾಸ್ತಾವಕಾರಂಗನಾಥ
ತ್ವತ್ಕೈಂಕರ್ಯ ಪ್ರವಣಮನಸ ಸ್ತ್ವದ್ಗುಣಾಸ್ವಾದಮತ್ತಾಃ ।
ತ್ವಯ್ಯೇಕಸ್ಮಿನ್ನಪಿವಿಜಹತೋ ಮುಕ್ತವತ್ಸಾಧನತ್ವಂ
ತ್ವಚ್ಛೇಷತ್ವ ಸ್ವರಸರಸಿಕಾಸ್ಸೂರಯೋಮೇಸ್ವದಂತಾಮ್ ॥

ಎಂಬ ನ್ಯಾಸ ತಿಲಕ ಶ್ಲೋಕವು ಮೇಲೆ ಹೇಳಿದ ನಿಪುಣಾಚಾರ್ಯನಿಷ್ಠೆಯನ್ನು ತಿಳಿಸುತ್ತದೆ ಹೇಗೆಂದರೆ ಎಲೈ ರಂಗನಾಥನೇ, ನಿನ್ನಲ್ಲಿ ಆಚಾರ್ಯರ ಮೂಲಕ ತಮ್ಮ ಭರವನ್ನು ಸಮರ್ಪಿಸಿದ ಆಚಾರ್ಯನಿಷ್ಠರಾದ ನಿನ್ನವರು ನಿನ್ನ ಗುಣಗಳಿಗೆ ವಶಪಟ್ಟು ನಿನ್ನ ಕೈಂಕರ್ಯವನ್ನು ರಾಜಕುಮಾರನನ್ನು ಲಾಲಿಸುವ ಹಾಗೆ ನಿನ್ನವರಾದ ಭಾಗವತರ ಕೈಂಕರ್ಯ ಪರ್ಯಂತವಾಗಿ ಮಾಡುತ್ತಾರೆ. ಅವರು ಮುಕ್ತರ ಹಾಗೆ ನಿನ್ನಲ್ಲಿ ಉಪಾಯತ್ವಬುದ್ಧಿಯನ್ನು ಬಿಟ್ಟವರಾಗಿ, ಸದಾಚಾರ್ಯನಲ್ಲಿಯೇ ಉಪಾಯಾಧ್ಯವಸಾಯವನ್ನು ಮಾಡಿ, ನಿನ್ನಲ್ಲಿ ಪುರುಷಾರ್ಥ ಬುದ್ಧಿಯನ್ನು ಮಾತ್ರ ಮಾಡಿ, ನಿನ್ನ ಶೇಷತ್ವದಲ್ಲಿ ರಸಿಕರಾಗಿದ್ದಾರೆ ಅಂಥಹ ಸೂರಿಗಳು (ಪಂಡಿತರು) ನನಗೆ ರುಚಿಸಲಿ ಎಂಬುದು ಈ ಶ್ಲೋಕದ ಅರ್ಥ "ಅತ್ರಪರತ್ರಚಾಪಿ ನಿತ್ಯಂ ಯದೀಯಚರಣೌ ಶರಣಂ ಮದೀಯಮ್" ಎಂಬಂತೆ ಇಹಪರ ಎರಡು ಲೋಕಗಳಲ್ಲಿಯೂ ಆಚಾರ್ಯನ ಪಾದಗಳೇ ನನಗೆ ಶರಣು ಎಂಬ ಭಾವನೆಯು ದ್ಯೋತಿತ. "ತ್ವತ್ಕೈಂಕರ್ಯ ಪ್ರವಣ ಮನಸಃ ತ್ವದ್ಗುಣಾಸ್ವಾದಮತ್ತಾಃ" ಎಂಬ ವಾಕ್ಯಗಳಿಗೆ ರಾಜಕುಮಾರನನ್ನು ಲಾಲಿಸುವ ಹಾಗೆ, ತದೀಯರಾದ ಭಾಗವತರ ಕೈಂಕರ್ಯಗಳಲ್ಲಿಯೂ, ಭಗವದನುಗ್ರಹ ಮಹಿಮೆಯಿಂದ ಉದ್ಭವಿಸಿದ ಭಾಗವತ ಕಲ್ಯಾಣ ಗುಣಗಳಲ್ಲಿಯೂ ದೃಷ್ಟಿಯು ತಿಳಿಯತಕ್ಕದ್ದು. "ತ್ವಯೇಕಸ್ಮಿನ್ ವಿಜಹತೋ ಮುಕ್ತವತ್ಸಾಧನತ್ವಮ್" ಎಂಬಲ್ಲಿ ಸದಾಚಾರ್ಯನಲ್ಲೇ ಉಪಾಯತ್ವಾಧ್ಯವಸಾಯವನ್ನು ಇಟ್ಟು, ಭಗವಂತನಲ್ಲಿ ಕೇವಲ ಪುರುಷಾರ್ಥತಾ ಬುದ್ಧಿಯೇ ಸುದೃಢವೆಂಬುದು ಭಾವ" ಎಂಬುದು

ಶ್ರೀ ಮನ್ನಿಗಮಾಂತ ಮಹಾದೇಶಿಕರು ತಮ್ಮ ಅಡೈಕ್ಕಲಪ್ಪತ್ತು ಪ್ರಬಂಧದಲ್ಲಿ
"ಅಳವುಡೈಯಾರ್ ಅಡೈಂದಾರ್ಕಳ್, ಅದನುರೈಯೇಕೊಂಡವರ್ಕ್ಕುಮ್
ವಳವುರೈತಂದವನರುಳೇ ಮನ್ನಿಯಮಾದವತ್ತೋರ್ಕ್ಕುಮ್ ।

ಪ್ರಪತ್ತಿಂ ವಿನಾ ಭಗವತಃ ಮೋಕ್ಷಪ್ರದತ್ವಾಭಾವಃ,

ಏದೇನುಮೊರುಪ್ರಕಾರಮಾಹವುಮಾವ್. ಆರೇನುಮೊರುವರ್ ಅನುಷ್ಟಿಕ್ಕವುಮಾವ್, ಪ್ರಪತ್ತಿಕ್ಕಲ್ಲದು ಸರ್ವೇಶ್ವರ್ ಪರಮಪುರುಷಾರ್ಥಮ್ ಕೊಡುಕ್ಕವಿರಙ್ಗ ನೆನ್ರದಾಯಿತ್ತು.

ಕಳವೂಯ್ವಾರೆಮರೆನ್ನ ಇಶೈಂದವರ್ಕ್ಕುಮ್ ಕಾವಲಾವಾಮ್

ತುಳವಮುಡಿಅರುಳ್ ವರದನ್ ತುವಕ್ಕಿಲೆನೈವೈತ್ತೇನೇ ||"

ಎಂದು ಪ್ರಪನ್ನರನ್ನು ನಾಲ್ಕು ವಿಧವಾಗಿ ಹೇಳುತ್ತಾರೆ ಅದಾಗಿ ಪರಿಪೂರ್ಣಜ್ಞಾನವಂತರು ತಾವಾಗಿಯೇ ಅನುಷ್ಠಿಸುವುದು 1) ಸ್ವನಿಷ್ಠೆ- ಆ ಪ್ರಪತ್ತಿಯ ವಾಕ್ಯೋಚ್ಚಾರಣೆಯನ್ನು ಮಾಡುವುದು 2) ಉಕ್ತಿ ನಿಷ್ಠೆ ಮಂತ್ರ ಮಂತ್ರಾರ್ಥಗಳನ್ನು ಉಪದೇಶಿಸಿದ ಆಚಾರ್ಯನ ಕೃಪೆಯನ್ನೇ ಅವಲಂಬಿಸಿ ಅವನನ್ನು ಆಶ್ರಯಿಸುವುದು. 3) ಆಚಾರ್ಯನಿಷ್ಠೆ ಕೃಪಾಪ್ರಸನ್ನಾಚಾರ್ಯರು ನನ್ನವರು ತಮ್ಮ ಆತ್ಮಾಪಹಾರ ಚೌರ್ಯವನ್ನು ಬಿಡಲಿ ಎಂದು ತಾವಾಗಿಯೇ ಅವರಿಗೋಸ್ಕರ ಭಗವಂತನಲ್ಲಿ ಶರಣಾಗತಿ ಮಾಡುವುದೆಂಬ 4) ನಿಷ್ಠಾಂತರ, ಈ ರೀತಿಗಳಲ್ಲಿ ಶರಣಾಗತರನ್ನು ರಕ್ಷಿಸುವ, ತುಳಸಿಮಾಲೆಯನ್ನು ಧರಿಸಿದ, ದಯಾಮೂರ್ತಿಯಾದ ವರದನ ಕಟಾಕ್ಷದಲ್ಲಿ ನಾನು ನನ್ನನ್ನು ಸಮರ್ಪಿಸಿದ್ದೇನೆಂಬುದು ಪಾಶುರದ ತಾತ್ಪರ್ಯ

ಇಲ್ಲಿ ನಾಲ್ಕನೆಯ ನಿಷ್ಠೆಯನ್ನು ಕೆಲವರು ಭಾಗವತ ನಿಷ್ಠೆಯೆಂದು ಕರೆಯುತ್ತಾರೆ. ಇದಕ್ಕೆ ಪ್ರಮಾಣವಿಲ್ಲ. ಇದೂ ಆಚಾರ್ಯ ನಿಷ್ಠಾಭೇದವೇ. ಮೂರನೆಯದು ಪ್ರಾರ್ಥಿತ ಆಚಾರ್ಯ ನಿಷ್ಠೆ ನಾಲ್ಕನೆಯದು ಅಪ್ರಾರ್ಥಿತ ಆಚಾರ್ಯ ನಿಷ್ಠೆ ಸ್ವನಿಷ್ಠೆ, ಉಕ್ತಿ ನಿಷ್ಠೆ ಆಚಾರ್ಯ ನಿಷ್ಠೆ ಎಂಬುವೇ ಪ್ರಸಿದ್ಧವಾಗಿ ಆಚಾರ್ಯ ಶ್ರೀಸೂಕ್ತಿಗಳಲ್ಲಿ ಹೇಳಲ್ಪಟ್ಟಿವೆ ಕೈಮುತಿಕ ನ್ಯಾಯ ಪ್ರದರ್ಶನ ಸಮಯದಲ್ಲೂ ಭಾಗವತನಿಷ್ಠೆಯೆಂಬ ನಿಷ್ಠಾಂತರವು ಹೇಳಲ್ಪಡಲ್ಲಿಲ್ಲ. ಹಾಗಾದರೆ ಬ್ರಹ್ಮವಿದ್ಯೋಪದೇಶವನ್ನು ಮಾಡದೆ, ವಿಪತ್ಸಮಯದಲ್ಲಿ ಕೃಪಾತಿಶಯದಿಂದ ಶಿಷ್ಯೇತರರು ಆರ್ತರಾಗಿರುವಾಗ ಅವರಿಗೆ ಪ್ರಪತ್ತಿಯು ಅನುಷ್ಠಿಸಲ್ಪಡುತ್ತದೆ ಅವರಿಗೆ ಆಚಾರ್ಯಕವನ್ನು ಮಾಡದೆ ಇರುವಾಗ ಅವರು ಹೇಗೆ ಆಚಾರ್ಯ ನಿಷ್ಠರಾಗುತ್ತಾರೆ ಎಂಬುದು ಪ್ರಶ್ನೆ ಬ್ರಹ್ಮ ವಿದ್ಯೋಪದೇಶವಿಲ್ಲದೆ ಇರುವಾಗ ಅವರಿಗೆ ಆಚಾರ್ಯರಾಗುವ ಬಗೆ ಹೇಗೆ ಎಂದರೆ ಬ್ರಹ್ಮ ವಿದ್ಯಾನುಷ್ಠಾನವು ಅಂದರೆ ಪ್ರಪತ್ತಿಯು ಶಿಷ್ಯೇತರರಿಗಾಗಿ ಅನುಷ್ಠಿಸಲ್ಪಟ್ಟಿರುವುದರಿಂದ ಆ ಕಾರಣದಿಂದಲೇ ಅನುಷ್ಠಾತಾವಿಗೆ ಆಚಾರ್ಯರೆಂಬ ಶಬ್ದಪ್ರಯೋಗವು ಉಪಪನ್ನವಾಗುತ್ತದೆ. ಪ್ರಪತ್ತಿಪ್ರಯೋಗಾನಂತರ ಆ ಶಿಷ್ಯೇತರರಿಗೆ ಕೃಪಾ ಪ್ರಸನ್ನ ಆಚಾರ್ಯರು ಆಚಾರ್ಯರಾಗುತ್ತಾರೆ ಅದಕ್ಕೆ ಮೊದಲು ಆಚಾರ್ಯರಲ್ಲವಾದ್ದರಿಂದ ಆ ಶಿಷ್ಯೇತರರ ವಿಷಯವಾದಪ್ರಪತ್ತಿಗೆ ಭಾಗವತನಿಷ್ಠೆ ಎಂದುವ್ಯವಹಾರವೆಂಬುದು ಪುನಶ್ಚೋದ್ಯ ಇದು ಸರಿಯಲ್ಲ. ಹೇಗೆಂದರೆ "ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್", ಪಟೋ ನಿರ್ಮೀಯತೇ ಇತ್ಯಾದಿ ವ್ಯವಹಾರಗಳಲ್ಲಿ ಜ್ಞಾನ ಪ್ರಾಪ್ತ್ಯನಂತರ ಗುರುತ್ವವು ಸಿದ್ಧಿಸುತ್ತದೆಯಾದ್ದರೂ ಜ್ಞಾನಕ್ಕೋಸ್ಕರ ಆಶ್ರಯಿಸುವವರನ್ನು ಗುರುವೆಂದು ಕರೆಯುವುದೂ, ನೇಯ್ದ ಮೇಲೆ ಬಟ್ಟೆ ಎಂದು ವ್ಯವಹರಿಸುವುದು ಸೂಕ್ತವಾಗಿರುವಾಗ ನೇಯುವುದಕ್ಕೆ ಮೊದಲೇ ಬಟ್ಟೆಯು ನೇಯಲ್ಪಡುತ್ತದೆ ಎಂದು ವ್ಯವಹರಿಸುವುದೂ ಹೇಗೆ ಉಪಪನ್ನವೋ ಹಾಗೆಯೇ ಆಚಾರ್ಯನೆಂಬ ವ್ಯವಹಾರವೂ ಸಮಂಜಸವಾಗುತ್ತದೆ. ಇಲ್ಲದಿದ್ದರೆ ಅಗತಿಕ ಪ್ರಸಂಗವು ಬರುತ್ತದೆ. ಮೇಲೂ "ಪುತ್ರಃ ಪ್ರೇಷ್ಯಃ ತಥಾಶಿಷ್ಯಃ ಇತ್ಯೇವಂಚನಿವೇದಯೇತ್" ಎಂಬ ವಚನವು ಆಚಾರ್ಯ ನಿಷ್ಠೆಗೆ ಪ್ರಮಾಣವಾಗಿ ಹೇಳಲ್ಪಟ್ಟದೆ ಮೇಲೆ ಹೇಳಿದ ಪೂರ್ವಪಕ್ಷಿಯ ಅಭಿಪ್ರಾಯವನ್ನು ಅನುಸರಿಸುವುದಾದರೆ, ಪಿತೃನಿಷ್ಠಾ, ಪ್ರೇಷಕ ನಿಷ್ಠಾ, ಎಂಬ ವ್ಯವಹಾರಗಳೂ ಕಲ್ಪಿಸಲ್ಪಡಬೇಕಾಗಿ ಬರುತ್ತವೆ ಇದರಿಂದ ಪ್ರಪತ್ತಿ ಪ್ರಯೋಗೋಪದೇಶವು ಮಾತ್ರ ಆಚಾರ್ಯಕವನ್ನು ನಿರ್ವಹಿಸುತ್ತದೆ. ಎಂಬ ಚೋದ್ಯವೂನಿರಸ್ತ ಆದ್ದರಿಂದ ಹಿತೋಪದೇಶಕ್ಕಿಂತಲೂ ಹಿತಾನುಷ್ಠಾನವು ಆಚಾರ್ಯಕವನ್ನು ಅಧಿಕವಾಗಿ ಉಂಟು ಮಾಡುತ್ತದೆಯೆಂಬುದು ಸೂಕ್ತವಾದದ್ದು, ಎಂದು ಕರೂರು ಸ್ವಾಮಿಗಳು ನಿರ್ವಹಿಸಿದ್ದಾರೆ.

ಇಪ್ಪಡಿ, (1) ಪಶುರ್ಮನುಷ್ಯಃ ಪಕ್ಷೀವಾ ಯೇ ಚ ವೈಷ್ಣವ ಸಂಶ್ರಯಾಃ ।
ತೇನೈವ ತೇ ಪ್ರಯಾಸ್ಯನ್ತಿ ತದ್ವಿಷ್ಣೋಃಪರಮಂ ಪದಂ" ಎನ್ರುವರ್,
(2) "ತೇ ವಯಂ ಭವತಾ ರಕ್ಷ್ಯಾ ಭವದ್ವಿಷಯವಾಸಿನಃ ।
ನಗರಸ್ಥೋವನಸ್ಥೋವಾ ತ್ವಂ ನೋ ರಾಜಾ ಜನೇಶ್ವರ" ಎನ್ರುವರ್,
(3) "ನರ್ಪಾಲಯೊತ್ತಿಯಿಲ್ ವಾಳ್ರುವರ್ ಶರಾಶರಮುಱ್ಱವುವರ್ ।
ನರ್ಪಾಲುಕ್ಕುಯಿರ್ತ್ತನ್ನ" ಎನ್ರುವರ್,

ಪ್ರಪತ್ತಿ ಮಾಡದೆ ಮೋಕ್ಷವು ಸಿಗಲಾರದು

ಅನಂತರ ತಾವು ಮೇಲೆ ಹೇಳಿದ ಉಪಾಯಾನುಷ್ಠಾನ ಪ್ರಕಾರಗಳನ್ನು **ಏದೇನು ಮೊರು ಪ್ರಕಾರ ಮಾಹವು ಮಾಮ್** ಇತ್ಯಾದಿ ವಾಕ್ಯಗಳಿಂದ ಸಂಗ್ರಹಿಸುತ್ತಾರೆ ಅದಾಗಿ **ಏದೇನು ಮೊರು ಪ್ರಕಾರಮ್ ಆಹವುಮಾಮ್** ಯಾವುದಾದರೂ ಒಂದು ರೀತಿಯಲ್ಲಿ ಅಂದರೆ ಸ್ವತಂತ್ರ ಪ್ರಪತ್ತಿ ರೂಪವಾಗಿಯೋ ಅಂಗ ಪ್ರಪತ್ತಿರೂಪವಾಗಿಯೋ, ವಿಶದಾನುಸಂಧಾನ ರೂಪವಾಗಿಯೋ ಸಮುದಾಯ ಜ್ಞಾನಪೂರ್ವಕ ಸಕೃದುಕ್ತಿರೂಪ ವಾಗಿಯೋ, **ಆರೇನು ಮೊರುವರ್ ಅನುಷ್ಟಿಕ್ಕವುಮಾಮ್** ಯಾರಾದರೂ ಒಬ್ಬರು ಅನುಷ್ಠಿಸಬಹುದು. ಅಂದರ ತಾನು ಶಕ್ತನಾಗಿ ಪ್ರಾರ್ಥನಾನ್ವಿತ ವಿಶದ ಭರಸಮರ್ಪಣ ರೂಪವಾಗಿಯೋ, ಸಮುದಾಯ ಜ್ಞಾನ ಪೂರ್ವಕ ಪ್ರಾರ್ಥನಾನ್ವಿತ ಭರಸಮರ್ಪಣಾತ್ಮಕ ಸಕೃದುಕ್ತಿ ರೂಪವಾಗಿಯೋ, ತನಗಾಗಿ ಆಚಾರ್ಯರು ವಿಶದಭರಸಮರ್ಪಣ ರೂಪವಾಗಿಯೋ ಸಮುದಾಯ ಜ್ಞಾನಪೂರ್ವಕ ಸಕೃದುಕ್ತಿರೂಪವಾಗಿಯೋ, ಅನುಷ್ಠಿಸಬಹುದು ಎಂದರ್ಥ ಈ ರೀತಿಗಳಲ್ಲಿ ಅನುಷ್ಠಿಸಬಹುದಾದ ಪ್ರಪತ್ತಿಗಲ್ಲದೆ, **ಸರ್ವೇಶ್ವರನ್**–

ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾವಾಮಹಾಮತೇ ।
ಪ್ರಾಪ್ಯೋಹಂ ನಾನ್ಯಥಾ ಪ್ರಾಪ್ಯಃ ಮಮ ಕೈಂಕರ್ಯ ಲಿಪ್ಸುಭಿಃ ॥

ಎಂದು ಶಾಸನ ಮಾಡಿದ, ಸರ್ವೇಶ್ವರನು, ಪರಮಪುರುಷಾರ್ಥವನ್ನು ಅಂದರೆ ದೇಶ ವಿಶೇಷದಲ್ಲಿ ಭಗವದನುಭವ ಪರಿವಾಹ ರೂಪ ಭಗವತ್ಕೈಂಕರ್ಯವನ್ನು ಸಾಕ್ಷಾತ್ತಾಗಿ ಕೊಡಲು, **ಇರಂಗಾನ್**–ಕೃಪೆಮಾಡುವುದಿಲ್ಲವೆಂಬುದು ಏತಾವತ್ಪರ್ಯಂತ ಹೇಳಿದ ಶ್ರೀ ಸೂಕ್ತಿಗಳಿಂದ ನಿಷ್ಕರ್ಷಿಸಲ್ಪಟ್ಟಂತಾಯಿತು ನಿರ್ಹೇತುಕ ಕೃಪೆಯೋ, ಕೇವಲ ಸಿದ್ಧೋಪಾಯ ನಿಷ್ಠೆಯೋ, ಆಚಾರ್ಯಾಭಿಮಾನವೋ ಬೇರೆ ಯಾವುದಾದರೂ ಸರಿಯೇ ಸಾಕ್ಷಾತ್ತಾಗಿ ಮೋಕ್ಷ ವನ್ನು ಕೊಡಲಾರದು ವೈಷಮ್ಯ ನೈರ್ಘೃಣ್ಯ ದೋಷವೂ ಸರ್ವಮುಕ್ತಿ ಪ್ರಸಂಗವೂ ಬಾರದೇ ಇರುವುದಕ್ಕೆ ಭಗವಂತನು ಭಕ್ತಿ, ಪ್ರಪತ್ತಿಗಳಲ್ಲೊಂದನ್ನು ಅಪೇಕ್ಷಿಸುತ್ತಾನೆಂಬುದು ತೀರ್ಮಾನವಾದ ಅಭಿಪ್ರಾಯ. ಇದು ಅಪ ರ್ಯನುಯೋಜ್ಯವಾದ ನಿರಂಕುಶ ಸ್ವತಂತ್ರನಾದ ಈಶ್ವರನ ಸಂಕಲ್ಪ, ಇದನ್ನು ಕುಯುಕ್ತಿಗಳಿಂದ ಅನ್ಯಥಾಕರಿ ಸಲಾಗದು

ಭಾಗವತಾಭಿಮಾನ ಭಗವತ್ಕ್ಷೇತ್ರವಾಸ ಫಲ

ಅನಂತರ ಪ್ರಪತ್ತಿಯನ್ನು ದ್ವಾರವಾಗಿ ಕೊಳ್ಳದೆ ಇರುವ ವೈಷ್ಣವಾಭಿಮಾನಾದಿಗಳಿಗೆ ಮೋಕ್ಷೋಪಾಯವು ಉಂಟು ಎಂದು ಹೇಳುವ ಅತಿವಾದಿಗಳ ಉಕ್ತಿಗಳಿಗ ಮೋಕ್ಷೋಪಾಯ ಕೋಟಿಯಲ್ಲಿ ಪ್ರವೇಶಿಸಲು ಅರ್ಹತೆ ಯನ್ನುಂಟು ಮಾಡುವುದಾಗಿ 1)**ಇಪ್ಪಡಿ ಪಶುರ್ಮನುಷ್ಯಃ ಪಕ್ಷೀವಾ** ಎಂದಾರಂಭಿಸಿ **ಉಪಕಾರಕಂಗಳಾಮ್** ಎಂಬುವ ಪರ್ಯಂತ ಆಚಾರ್ಯರು ಅನುಗ್ರಹಿಸುತ್ತಾರೆ. ಅದಾಗಿ **ಇಪ್ಪಡಿ**–ಉಕ್ತಾಚಾರ್ಯ ನಿಷ್ಠೆಗಳಲ್ಲಿ ಮೇಳದ

---

1), 2), 3), ಪು. ತಿ. ನೋ

(4) "ವನ್ಮೈಯಾವದು ನಿನ್ನೋಯಿಲಿಲ್ ವಾೞ್ವಾರ್ ವೈಟ್ಟಿಬವ ನೆನ್ನುಂವನ್ಮೈ"

ಎನ್ರುಂವರ್ ಶೊಲ್ಲುಹಿರ ಭಾಗವತಾಭಿಮಾನ ಭಗವದ್ವಿಷಯ ವಾಸಾದಿಹಳುಕ್ಕುವರ್ ತನ್ಪಕ್ಕಲಿಲೇಯಾದಲ್, ಪಿರರ್‌ಪಕ್ಕಲಿಲೇಯಾದಲ್, ಮುನ್ಪೇಯಾದಲ್, ಪಿನ್ಪೇಯಾದಲ್, ಒರು ಉಪಾಯತ್ವಮಕ್ಕುಣ್ಡು. ಎಙ್ಗನೇಯೆನ್ನಿಲ್:- ಇವೈಯುಮುಪಾಸನತ್ತಿಲೇಯಾದಲ್, ಪ್ರಪತ್ತಿಯಿಲೇ ಯಾದಲ್, ಮೂಟ್ಟೈಯುಂವರ್. ಉತ್ಪನ್ನೋಪಾಸಕನುಕ್ಕು ಉತ್ತರೋತ್ತರೋಪಚಯತ್ತೈಪ್ಪಣ್ಣಿಯುಂವರ್, ಸ್ವತಂತ್ರ ಪ್ರಪತ್ತ್ಯನುಷ್ಠಾನವರ್ ಪಣ್ಣಿನವನುಕ್ಕು ಇಙ್ಗು ಕೈಙ್ಕರ್ಯಾಭಿವೃದ್ಧಿಯೈ ಯುಣ್ಡಾಕ್ಕಿಯುಂವರ್, ಭಗವತ್ಪ್ರಾಪ್ತಿಯಿಲೇ ತ್ವರೈಯೈಯುಣ್ಡಾಕ್ಕಿಯುಮುಪಕಾರಕಙ್ಗಳಾವರ್.

ಪ್ರಕಾರ ವೈಷ್ಣವರನ್ನು ಆಶ್ರಯಿಸಿ, ಅವರ ಅಭಿಮಾನಕ್ಕೆ ಪಾತ್ರರಾದ ಪಶು, ಮನುಷ್ಯ, ಪಕ್ಷೀ ಮೊದಲಾದವರು **ತೇನೈವ**–ಈ ವೈಷ್ಣವಸಮಾಶ್ರಯಣದಿಂದಲೇ ಪರಮಪದವನ್ನು ಹೊಂದುತ್ತಾರೆಂಬುದೂ 2) **ತೇವಯಂ** ಇತ್ಯಾದಿಯಾಗಿಯೂ 3) **ನರ್ಪಾಲಯೋತ್ತಿಯಿಲ್‌ವಾೞ್ವರ್** ಇತ್ಯಾದಿಯಾಗಿಯೂ 4) **ವನ್ಮೈಯಾವದು** ಇತ್ಯಾದಿಯಾಗಿಯೂ ಸಾಕ್ಷಾನ್ಮೋಕ್ಷ ಸಾಧನವಾಗಿ ಹೇಳುವ ಭಾಗವತಾಭಿಮಾನ ಅಂದರೆ ಭಾಗವತನು ನನ್ನವನು ಎಂದು ಅಭಿಮಾನಿಸುವುದಕ್ಕೂ, ಭಗವದ್ವಿಷಯವಾಸಾದಿಗಳಿಗೂ, ತನ್ನಲ್ಲಿಯಾಗಲಿ ಇತರರಲ್ಲಿಯಾಗಲಿ ಮುಂಚಿತವಾಗಿಯಾಗಲಿ, ಅನಂತರವಾಗಿಯಾಗಲಿ ಉಪಾಯ ಸಂಬಂಧವು ಉಂಟು. ತನ್ನಲ್ಲಿ ಇತರರಲ್ಲಿ ಉಂಟಾಗುವ ಉಪಾಯ ಸಂಬಂಧ ಪ್ರಪತ್ತಿ ವಿಷಯ ಮುಂಚಿತವಾಗಿಯಾಗಲಿ, ಅನಂತರವಾಗಿಯಾಗಲಿ ಉಂಟಾಗುವ ಉಪಾಯ ಸಂಬಂಧ ಭಕ್ತಿ ಪ್ರಪತ್ತಿ ವಿಷಯ. **ಎಙ್ಗನೇಯೆನ್ನಿಲ್** ಇತ್ಯಾದಿ ಈ ಭಾಗವತಾಭಿಮಾನ ಭಗದ್ವಿಷಯವಾಸಾದಿಗಳು, ಇವನ ಚಿತ್ತ ಕಾಲುಷ್ಯವನ್ನು ಹೋಗಲಾಡಿಸಿ, ಸಾತ್ವಿಕ ಬುದ್ಧಿಯನ್ನು ಹೆಚ್ಚಿಸಿ, ಉಪಾಸನೆ (ಭಕ್ತಿ) ಅಥವಾ ಪ್ರಪತ್ತಿಯನ್ನು ಅನುಷ್ಠಿಸುವಂತೆ ಮಾಡುತ್ತವೆ. ಹಾಗಯೇ ಉಪಾಸನೆಯನ್ನು ಆರಂಭಿಸಿ ಮಾಡುವವನಿಗೆ ಉತ್ತರೋತ್ತರ ವೃದ್ಧಿಯನ್ನುಂಟುಮಾಡಿ ಈ ಲೋಕದಲ್ಲಿ ಕೈಂಕರ್ಯಾಭಿವೃದ್ಧಿಯನ್ನುಂಟು ಮಾಡುತ್ತವೆ. ಮೇಲೂ ಇವು ಸ್ವತಂತ್ರ ಪ್ರಪತ್ತ್ಯನುಷ್ಠಾನವನ್ನು ಮಾಡಿರುವವನಿಗೆ, ಈ ಲೋಕದಲ್ಲಿ ಕೈಂಕರ್ಯಾಭಿವೃದ್ಧಿಯನ್ನುಂಟು ಮಾಡಿಯೂ, ಭಗವಂತನ ಪ್ರಾಪ್ತಿಯಲ್ಲಿ ತ್ವರೆಯನ್ನುಂಟು ಮಾಡಿಯೂ ಉಪಕಾರವನ್ನುಂಟು ಮಾಡುತ್ತವೆ

---

1) ಶಾಂಡಿಲ್ಯ ಸ್ಮೃತಿ 1-15

2) ರಾಮಾ (3-1-20) ಸ್ವಾಮಿ ರಾಮಚಂದ್ರನೇ ನಿನ್ನ ದೇಶದಲ್ಲಿರುವ ನಾವು ನಿನ್ನಿಂದ ರಕ್ಷಿಸಲ್ಪಡತಕ್ಕವರು. ನಾಡಿನಲ್ಲೋ ಕಾಡಿನಲ್ಲೋ, ಎಲ್ಲಿದ್ದರೂ ನೀನೇ ನಮಗೆ ರಾಜನು. (ಇದು ಋಷಿಗಳು ಹೇಳುವ ಮಾತು)

3) ಕರ್ಪಾರ್ ಇರಾಮ ಪಿರಾನೈಯಲ್ಲಾಲ್ ಮತ್ತುಂ ಕರ್ಪರೋ
ಪುರ್ಪಾಮುದಲಾಪ್ಪುಲ್ಲೆರುಂಬಾದಿ ಒನ್ರಿನ್ರಿಯೇ ।
ನರ್ಪಾಲಯೋತ್ತಿಯಿಲ್ ವಾೞ್ಂ ಚರಾಚರಂ ಮುತ್ತವುಮ್
ನರ್ಪಾಲುಕ್ಕುಯ್ತ್ತನನ್ ನಾನ್ಮುಹನಾರ್ ಪೆತ್ತನಾಟ್ಟುಳೇ ॥ ತಿರುವಾಯ್ [7-5-1]

ಉಪಾಸನೆ ಮಾಡುವವರು ಶ್ರೀ ರಾಮಚಂದ್ರನನ್ನು ಬಿಟ್ಟು ಬೇರೆ ಯಾರನ್ನು ಉಪಾಸನೆ ಮಾಡಿಯಾರು ಶ್ರೀರಾಮಚಂದ್ರನು ಅಯೋಧ್ಯೆಯಲ್ಲಿ ವಾಸ ಮಾಡುತ್ತಿದ್ದ, ಹುಲ್ಲು, ಕ್ರಿಮಿ, ಇರುವೆ ಮೊದಲಾದ ಎಲ್ಲಾ ಜಂತುಗಳನ್ನೂ ಸಾಂತಾನಿಕ ಲೋಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತನ್ನನ್ನು ಉಪಾಸನೆ ಮಾಡುವಂತೆ ಮಾಡಿಸಿ ನಂತರ ಮೋಕ್ಷಕ್ಕೆ ಕರೆದೊಯ್ದು ದೀನದಯಾಳು. ಅಯೋಧ್ಯೆಯಲ್ಲಿ ವಾಸ ಮಾಡುತ್ತಿದ್ದರೆಂಬ ವ್ಯಾಜದಿಂದ ಅಲ್ಲಿದ್ದ ಸ್ಥಾವರಜಂಗಮ ಜಂತುಗಳನ್ನೆಲ್ಲಾ ಬ್ರಹ್ಮಲೋಕಕ್ಕೆ ಸಮೀಪವಾದ, ಸಾಂತಾನಿಕ ಲೋಕಕ್ಕೆ ಕರೆದುಕೊಂಡುಹೋಗಿ ಅಲ್ಲ ಉಪಾಸನೆ ಮಾಡಿಸಿ ಮೋಕ್ಷಕ್ಕೆ ಕರೆದೊಯ್ದ ಮಹಾಕಾರುಣಿಕನು ಆವನು.

(4) ಪು. ತಿ. ನೋ.

ಭಕ್ತಿಪ್ರಪತ್ತಿಹಳಿಲ್ ಫಲೋತ್ಪತ್ತಿಯಿಲ್ ಪ್ರಕಾರಭೇದವುಮ್

ಇವರ್‌ಹಳಿಲ್ ವ್ಯಾಸಾದಿಹಳೈಪ್ಪೋಲೇ ಉಪಾಯಾನ್ತರ ಸಮರ್ಥನಾಹೈಯಾಲೇ ಅಕಿಞ್ಚನನು ಮನ್ರಿಕ್ಕೇ ವಿಳಂಬಕ್ಷಮನಾಹೈಯಾಲೇ ಅನನ್ಯಗತಿಯುಂ ಮನ್ರಿಕ್ಕೇ ಇರುಕ್ಕಿರ ಸದ್ವಾರಕ ಪ್ರಪತ್ತಿ ನಿಷ್ಠನುಕ್ಕು ಪ್ರಾರಬ್ಧಕರ್ಮ ಪರ್ಯವಸಾನಭಾವಿಯಾನ ಅನ್ತಿಮ ಪ್ರತ್ಯಯತ್ತೈಯವಧಿಯಾಹ ಉಡೈತ್ತಾನ ಉಪಾಸನ ರೂಪಾಂಗಿಯಿನುಡೈಯ ಯಥಾವನ್ನಿಷ್ಪತ್ತಿ ಪೂರ್ವಕಮಾನ ಮೋಕ್ಷಮುಮ್ ಫಲಮುಮ್.

ಸರ್ವಾಧಿಕಾರಮಾಯ್, ಸರ್ವಾನಿಷ್ಟನಿವರ್ತನ ಕ್ಷಮಮಾಯ್, ಸರ್ವೇಷ್ಟ ಸಾಧನಮಾಹವತ್ತಾಯೆರ್, ಸುಕರಮಾಯ್‌ಸಕೃತ್ಕರ್ತವ್ಯಮಾಯ್, ಆಶುಕಾರಿಯಾಯ್, ಪ್ರತಿಬನ್ಧಾನರ್ಹಮಾಯ್, ಬ್ರಹ್ಮಾಸ್ತ್ರ ಬನ್ಧಮ್ ಪೋಲೇ ಸ್ವಫಲತ್ತಿಲ್ ಉಪಾಯಾನ್ತರ ಪ್ರಯೋಗಾಸಹಮಾಯ್, ಇರುಕ್ಕುಳ್ಳ ಪ್ರಪತ್ತಿಯೈ ತನ್ನಧಿಕಾರಾನು ರೂಪಮಾಹ ಅದ್ವಾರಕಮಾಹ ಪ್ರಪತ್ತಿಪನ್ನವನುಕ್ಕು ಪರಿಪೂರ್ಣಾನುಭವತ್ತುಕ್ಕು ನೇರು ಪ್ರತಿ

ಭಕ್ತಿ ಪ್ರಪತ್ತಿನಿಷ್ಠರಿಗೆ ಮೋಕ್ಷವನ್ನು ಪಡೆಯುವ ಕಾಲ

ಹೀಗೆ ಪ್ರಸಕ್ತಾನುಪ್ರಸಕ್ತವಾಗಿ ಬಂದ ಸಂಶಯಗಳನ್ನು ಪರಿಹರಿಸಿ ಅಧಿಕಾರದ ಪ್ರಮೇಯವನ್ನು **ಇವರ್ ಹಳಿಲ್ ವ್ಯಾಸಾದಿ ಹಳೈಪ್ಪೋಲೇ,** ಎಂದಾರಂಭಿಸಿ, ಪರಿಷ್ಕರಿಸುತ್ತಾರೆ ಅದಾಗಿ **ಇವರ್‌ಹಳಿಲ್** ಈ ಸದ್ವಾರಕ ಅದ್ವಾರಕ ಪ್ರಪತ್ತಿನಿಷ್ಠರಲ್ಲಿ, ವ್ಯಾಸಾದಿಗಳ ಹಾಗೆ ಉಪಾಯಾಂತರವಾದ—ಕರ್ಮಯೋಗ ಜ್ಞಾನಯೋಗಾಂಗಕವಾದ ಭಕ್ತಿಯೋಗವನ್ನು ಅನುಷ್ಠಿಸಲು ಸಮರ್ಥನಾಗಿರುವುದರಿಂದ ಅಕಿಂಚನನಲ್ಲದೇ, ವಿಳಂಬವನ್ನು ಸಹಿಸಿಕೊಳ್ಳುವ ಸಾಮರ್ಥ್ಯದಿಂದ ಅನನ್ಯಗತಿಯುಲ್ಲದೇ ಇರುವ ಸದ್ವಾರಕ ಪ್ರಪತ್ತಿ ನಿಷ್ಠನಿಗೆ ಪ್ರಾರಬ್ಧ ಕರ್ಮಪರ್ಯವಸಾನ ಭಾವಿಯಾದ, ಅಂತಿಮ ಪ್ರತ್ಯಯವನ್ನು—ಅಂತಿಮ ಭಗವತ್ಸ್ಮರಣವನ್ನು, ಅವಧಿಯಾಗಿ-ಚರಮಾಂಗವಾಗಿ ಹೊಂದಿರುವ ಉಪಾಸನರೂಪ ಅಂಗಿಯನ್ನು ಪೂರ್ತಿಗೊಳಿಸಿ ತತ್ಪೂರ್ವಕವಾದ ಮೋಕ್ಷವು ಫಲ

ಸರ್ವಾಧಿಕಾರಮಾಯ್ ಇತ್ಯಾದಿ— ಭಕ್ತಿಯೋಗದಲ್ಲಿ ತ್ರೈವರ್ಣಿಕರಿಗೆ ಮಾತ್ರ ಅಧಿಕಾರ ತ್ರೈವರ್ಣಿಕರೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಇವರುಗಳಿಗೆ ವೇದಾಧ್ಯಯನದಲ್ಲಿ ಅಧಿಕಾರವಿರುವುದರಿಂದ, ಭಕ್ತಿಯೋಗದಲ್ಲಿ ಉಪಕ್ರಮೋಪಸಂಹಾರಗಳನ್ನು ವೇದ ಮಂತ್ರಗಳನ್ನು ಜಪಿಸಿ ಮಾಡಬೇಕಾಗಿರುವುದರಿಂದ ಭಕ್ತಿಯೋಗವು ತ್ರೈವರ್ಣಿಕಾಧಿಕಾರವೆಂದು ನಿಶ್ಚಿತ ಪ್ರಪತ್ತಿಯು ಹಾಗಲ್ಲ ಸರ್ವರಿಗೂ ಅಂದರೆ ಬ್ರಾಹ್ಮಣರೇ ಆದಿಯಾಗಿ ಚಂಡಾಲನ ಪರ್ಯಂತ, ಎಲ್ಲರಿಗೂ ಪ್ರಪತ್ತಿಯನ್ನು ಅನುಷ್ಠಿಸಲು ಅಧಿಕಾರವುಂಟು ಸರ್ವಾಧಿಕಾರವಾಗಿಯೂ, ಸರ್ವಾನಿಷ್ಟಗಳನ್ನೂ ಹೋಗಲಾಡಿಸ ಬಲ್ಲದಾಗಿಯೂ, (ಮೋಕ್ಷ ವಿರೋಧಿ ಸಕಲ ಪಾಪಗಳನ್ನೂ ಹೋಗಲಾಡಿಸುವುದು ಎಂದರ್ಥ) ಸರ್ವೇಷ್ಟಗಳನ್ನೂ ಸಾಧಿಸಿಕೊಡುವುದಾಗಿಯೂ (ಭಕ್ತಿಯನ್ನೂ ಸಾಧಿಸಿ ಕೊಡುವುದು, ಹಾಗೆಯೇ ನೇರವಾಗಿ ಮೋಕ್ಷವನ್ನೂ ಸಾಧಿಸಿಕೊಡುವುದು ಎಂದರ್ಥ) **ಸುಕರವಾಗಿಯೂ** (ಸುಲಭವಾಗಿ ಅನುಷ್ಠಿಸತಕ್ಕದಾಗಿಯೂ) ಒಂದೇ ಸಲ ಅನುಷ್ಠಿಸತಕ್ಕದಾಗಿಯೂ, **ಆಶುಕಾರಿಯಾಯ್**—ಭಕ್ತಿಯೋಗದ ಹಾಗೆ ವಿಳಂಬಿಸಿ ಫಲವನ್ನು ಕೊಡದೆ, ಕ್ಷಿಪ್ರದಲ್ಲಿಯೇ ಫಲಪ್ರದವಾಗಿಯೂ, **ಪ್ರತಿಬಂಧಾನರ್ಹಮಾಯ್**—ನಿರಂತರ ಸ್ಮೃತಿ ಸಂತತಿ ರೂಪಭಕ್ತಿಯಲ್ಲಿ ಮಧ್ಯೆ

4] ನನ್ಮೈತ್ತೀಮೈಹಳೊನ್ರುಮರಿಯೇನ್ ನಾರಣಾವೆನ್ನು ಮಿತ್ತನ್ನೈಯಲ್ಲಾಲ್
ಪುನ್ಮೈಯಾಲುನ್ನೈ ಪ್ಪುಳ್ಳುವಂ ಪೇಶಿ ಪ್ಪುಹಳ್ವಾನನ್ರು ಕಂಡಾಯ್ ತಿರುಮಾಲೇ ।
ಉನ್ನುಮಾರುನ್ನೈ ಒನ್ರುಮರಿಯೇನ್ ಓವಾದೇ ನಮೋನಾರಣಾವೆನ್ಬನ್
ವನ್ಮೈಯಾವದು ಉನ್ ಕೋಯಿಲಿಲ್‌ವಾಳ್ರುಮ್ ವೈಷ್ಣವನೆನ್ನುಮ್ ವನ್ಮೈ ಕಂಡಾಯೇ ॥ ಪೆರಿಯಾಳ್ವಾರ್ ತಿರು[5-1-3
ನನಗೆ ಬಲವು ನಿನ್ನ ಕ್ಷೇತ್ರದಲ್ಲಿ ವಾಸಮಾಡುವ ವೈಷ್ಣವನೆಂಬುದೇ.

ಬನ್ಧಕ ಮಿಲ್ಲಾದಪಡಿಯಾಲೇ ಪ್ರಪತ್ತಿಕ್ಷಣಂಮುದಲಾಹ, ೧) "ಇಙ್ಗೇತಿರಿನ್ದೇರ್ಕಿಳ್ಳುಕ್ಕುತ್ತೇ" ಎನ್ರುಮ್ ೨) "ಇಚ್ಚುವೈತವಿರಯಾನ್ಪೋಯಿನ್ದಿರ ಲೋಕಮಾಳು ಮಚ್ಚುವೈ ಪೆರಿನುಮ್ ವೇಂಡೇನ್" ಎನ್ರುಮ್, ೩) "ವಿರಾರ್ ಮುಯಲ್‌ವಿಟ್ಟುಕಾಕ್ಕೈ ಪ್ಪಿನ್ಪೋವದೇ" ಎನ್ರುಮ್, ೪) "ಸ್ನೇಹೋ ಮೇ ಪರಮೋ ರಾಜನ್ ತ್ವಯಿನಿತ್ಯಂ ಪ್ರತಿಷ್ಠಿತಃ। ಭಕ್ತಿಶ್ಚ ನಿಯತಾ ವೀರ ಭಾವೋನಾನ್ಯತ್ರಗಚ್ಛತಿ," ಎನ್ರುಮ್, ಶೊಲ್ಲುಹಿರಪಡಿಯೇ ಇಶ್ಶರೀರತ್ತೋಡೇಯಿರುನ್ದು ಕೈಙ್ಕರ್ಯಾದ್ಯನುಭವಂ ಪಣ್ಣವೇಣುಮೆನ್ಱಿರ ಅಭಿಸನ್ಧಿಕ್ಕು ಕ್ಕಾರಣಮಾನ ಅರ್ಚಾವತಾರಾದಿ ಸಙ್ಗಮಡಿಯಾಹ ವನ್ದಸ್ವಾನುಮತಿಯಾಲೇ ಸ್ಥಾಪಿತಮಾನ ಶರೀರತ್ತಿನ್ ಅವಸಾನತ್ತೈ ಎಲ್ಲೈಯಾಹ, ಉಙ್ಕೈತ್ತಾಯ್, ದೇಶಕಾಲ ಸ್ವರೂಪ ಪರಿಚ್ಛೇದವತ್ತಾಯ್ ಕ್ಕೊಣ್ಡು ಇಙ್ಗುತ್ತಾಮ್ ಕೈಙ್ಕರ್ಯ ಫಲೋದಗ್ಗಮತ್ತೈ ಮುದಲಾಹ ವುಙ್ಕೈತ್ತಾನ ಪರಿಪೂರ್ಣ ಕೈಙ್ಕರ್ಯ ಪರ್ಯನ್ತ ಮೋಕ್ಷಂ ಫಲಮ್.

ಪ್ರತಿಬಂಧಕಗಳು ಉಂಟಾಗುವ ಸಂಭಾವನೆಯುಂಟು, ಅದು ಇಲ್ಲದಿರುವುದಾಗಿಯೂ, ಬ್ರಹ್ಮಾಸ್ತ್ರ ಬಂಧದ ಹಾಗೆ ತಾನು ಕೋರುವ ಫಲಕ್ಕೆ ಬೇರೆ ಉಪಾಯಗಳನ್ನು ಅನುಷ್ಠಿಸಿದರೆ ಅದನ್ನು ಸಹಿಸಲಾರದುದಾಗಿಯೂ ಇರುವ ಪ್ರಪತ್ತಿಯನ್ನು ತನ್ನ ಆಕಿಂಚನ್ಯಾನನ್ಯಗತಿರೂಪ ಅಧಿಕಾರಕ್ಕೆ ತಕ್ಕಂತೆ, ಅದ್ವಾರಕವಾಗಿ ಅನುಷ್ಠಿಸುವವನಿಗೆ, ಪರಿಪೂರ್ಣ ಬ್ರಹ್ಮಾನುಭವಕ್ಕೆ ಬೇರೆ ಪ್ರತಿಬಂಧಕಗಳಿಲ್ಲ. ಪ್ರಪತ್ತಿಯನ್ನು ಅನುಷ್ಠಿಸಿದ ತರುವಾಯ, (1) **ಇಂಗೇತಿರಿಂದೇರ್ಕ್ಕಿ ಇರ್ರುಕ್ಕುತ್ತೇನ್**–ಈ ಲೋಕದಲ್ಲಿಯೇ ಅರ್ಚಾವತಾರಗಳನ್ನು ಅನುಭವಿಸುವವರಿಗೆ ಏನು ನಷ್ಟ, ಎಂದೂ (2) **ಇಚ್ಚುವೈತವಿರ** ಇತ್ಯಾದಿ–ಅರ್ಚಾನುಭವವನ್ನು ಬಿಟ್ಟು ಪರಮಪದ ನಾಥನ ಅನುಭವವೂ ಬೇಡ, ಎಂದೂ (3) **ವಿರಾರ್‌ಮುಯಲ್‌ವಿಟ್ಟುಕಾಕ್ಕೈಪ್ಪಿನ್ ಪೋವದೇ**-ಭೋಗ್ಯವಾದ ಮೊಲದ ಮಾಂಸವನ್ನು ಬಿಟ್ಟು ಆಕಾಶದಲ್ಲಿ ಸಂಚರಿಸುವ ಕಾಗೆಯ ಮಾಂಸಕ್ಕೆ ಆಸೆಪಡುವುದೇ, ಎಂದೂ ಅಂದರೆ ಅರ್ಚಾವತಾರದಲ್ಲಿ ಭೋಗ್ಯತಾತಿಶಯವು ಸನ್ನಿಹಿತವಾಗಿರುವಾಗ ಇದನ್ನು ಬಿಟ್ಟು ಪರಮಪದವು ಬೇಡ ಎಂದು ಅರ್ಥ (4) **ಸ್ನೇಹೋಮೇ ಪರಮೋರಾಜನ್**–ಎಲೈ ರಾಮಚಂದ್ರನೇ ನಿನ್ನಲ್ಲಿರುವ ಪ್ರೀತಿ ಭಕ್ತಿಗಳು ಬೇರೆ ಎಲ್ಲಿಯೂ ಇಲ್ಲ, ಎಂದು ಹನುಮಂತನು ಹೇಳಿದ ರೀತಿಯಲ್ಲಿ, ಈ ಶರೀರದಿಂದ ಕೂಡಿ ಇರುವ ಕಾಲ ಪರ್ಯಂತ, ಭಗವಂತನ ಕೈಂಕರ್ಯಗಳನ್ನೂ, ಅವನ ಶರೀರ ಸೌಂದರ್ಯಾದ್ಯನುಭವವನ್ನೂ ಮಾಡಬೇಕೆಂದು ಹಂಬಲಿಸಿ ಅದಕ್ಕೆ ಕಾರಣ ಭೂತವಾದ ಅರ್ಚಾವತಾರಸಂಗ, ವಿಭವಾವತಾರಗಳಲ್ಲಿ ಪ್ರೀತಿ, ಇವುಗಳನ್ನು ಹೊಂದಿ ತನ್ನ ಇಷ್ಟದಂತೆ ಈ ಶರೀರವನ್ನು ಸ್ವಲ್ಪ ಧರಿಸಿಕೊಂಡಿರುವನು. ಈ ರೀತಿಯಲ್ಲಿ ತನ್ನ ಇಷ್ಟ ಪ್ರಕಾರ ಸ್ಥಾಪಿತವಾದ ಶರೀರಾವಸಾನವನ್ನು ಎಲ್ಲೆಯಾಗಿ ಉಳ್ಳಂಥಾದ್ದಾಗಿಯೂ, **ದೇಶ ಕಾಲ** ಸ್ವರೂಪಗಳಿಂದ ಪರಿಚ್ಛಿನ್ನವಾಗಿಯೂ ಇರುವ (ಪರಿಚ್ಛಿನ್ನ–ಅಳತೆ, ಅಲ್ಪವಾದದ್ದು **ಎಂಬರ್ಥ**) ಈ ಲೋಕದಲ್ಲಿ ಉಂಟಾಗುವ ಕೈಂಕರ್ಯವು ಶ್ರೀ ವೈಕುಂಠದಲ್ಲಿ ಅನುಭವಿಸುವ ಕೈಂಕರ್ಯಕ್ಕೆ ಆರಂಭ ಈ ರೀತಿಯಾದ ಪರಿಪೂರ್ಣ ಕೈಂಕರ್ಯ ಪರ್ಯಂತವಾದ ಮೋಕ್ಷವು ಅದ್ವಾರಕ ಪ್ರಪತ್ತಿ ನಿಷ್ಠನಿಗೆ ಫಲ

---

1) ಇಂಗೇತಿರಿಂದೇರ್ಕ್ಕಿಳ್ಳುಕ್ಕುತ್ತೇನ್ ಇರುಮಾಲನಿಮುನ್ನುಂಡುಮಿಳ್ಳ್ನ್ದ
ಶಂಗೋಲತ್ತಪವಳವಾಯ್ ಶೆಂದಾಮರೈಕ್ಕಣ್ ವೆನ್ನಪ್ಪನ್ ।
ಪೊಂಗೇಳ್ಪುಹಳ್ಗಳ್ ವಾಯವಾಯ್ ಪುಲನ್‌ಗೊಳ್‌ವಡಿವೆನ್ಮನತ್ತದಾಯ್
ಅಂಗೇಮಲರ್‌ಗಳ್ ಕೈಯ್ಯವಾಯ್ ವಳ್ಳಿಪಟ್ಟೋಡವರ್ಕ್ಕೇ ॥ (ತಿರುವಾಯ್ 8-10-4)

ವಿಶಾಲವಾದ ಭೂಮಿಯನ್ನು ಪ್ರಳಯಕಾಲದಲ್ಲಿ ತನ್ನಲ್ಲಿ ಅಡಗಿಸಿಕೊಂಡು, ಅದನ್ನು ಸೃಷ್ಟಿಕಾಲದಲ್ಲಿ ಉದ್ಗಿರಣ ಮಾಡಿದನು ಭಗವಂತ, ಅವನ ಕೆಂಪಾದ, ಸೊಗಸಾದ ಹವಳದಂತಿರುವ ಬಾಯಿ, ಕೆಂದಾವರೆದಳದಂತಿರುವ ಕಣ್ಣು, ಈ ಸೊಬಗಿನಿಂದ ನನ್ನನ್ನು ವಶೀಕರಿಸಿದವನು ಅವನ, ಮೇಲೆ ಮೇಲೆ ಉಕ್ಕಿ ಬರುವ ಕಲ್ಯಾಣ ಗುಣಗಳನ್ನು ಬಾಯಲ್ಲಿ ಸ್ತೋತ್ರ ಮಾಡಿ, ಇಂದ್ರಿಯಗಳನ್ನು ಸೆರೆಪಡಿಸಿಕೊಳ್ಳುವ ರೂಪ ಲಾವಣ್ಯಗಳನ್ನು ನನ್ನ ಮನಸ್ಸಿನಿಂದ ಧ್ಯಾನ ಮಾಡಿಕೊಂಡು, ಅವನ ಪಾದ ಪದ್ಮಗಳನ್ನು ಪುಷ್ಪಗಳಿಂದ ಅರ್ಚಿಸಿ, ಈ ರೀತಿಯ ಸನ್ಮಾರ್ಗದಲ್ಲಿ ಕಾಲವನ್ನು ಕಳೆಯುವಂತೆ ಆ ಭಗವಂತನು ಅನುಗ್ರಹಿಸಿದರೆ, ಈ ಲೋಕದಲ್ಲಿಯೇ ಇರುವವರಿಗೆ ಏನು ನಷ್ಟ.

2) 3), ಪೂ. ತಿ. ನೋ.

ಭಕ್ತಿ ಪ್ರಪತ್ತ್ಯೋಸ್ಸರ್ವ ಫಲಸಾಧನತ್ವೇ ಪ್ರಮಾಣಾನಿ

5) "ವರಂ ವರಯ ತಸ್ಮಾತ್ತ್ವಂ ಯಥಾಭಿಮತಮಾತ್ಮನಃ ।
ಸರ್ವಂ ಸಮ್ಪತ್ಸ್ಯತೇ ಪುಂಸಾಂ ಮಯಿ ದೃಷ್ಟಿ ಪಥಂ ಗತೇ" ॥

6 "ಕಿಂ ವಾ ಸರ್ವ ಜಗತ್ಸ್ರಷ್ಟುಃ ಪ್ರಸನ್ನೇ ತ್ವಯಿ ದುರ್ಲಭಂ."

7) ತಸ್ಮಿನ್ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ,"

8 "ಕಿಂ ಲೋಕೇ ತದಿಹ ಪರತ್ರ ಚಾಸ್ತಿಪುಂಸಾಂ ಯದ್ವಿಷ್ಣು ಪ್ರವಣಧಿಯಾಂ ನ ದಾಲ್ಭ್ಯ ಸಾಧ್ಯಂ."

9 ಫಲಮತ ಉಪಪತ್ತೇಃ" ಎನ್ರುಮ್, ಶೊಲ್ಲುಹಿರಪಡಿಯೇ, ಸರ್ವೇಶ್ವರ್ರ ಸಕಲ ಫಲ ಪ್ರದನಾಹೈಯಾಲೇ ಅವನ್ ತಿರುವಡಿಹಳಿಲ್ ಪ್ರಪತ್ತಿ ಸಕಲ ಫಲ ಸಾಧನ ಮಾಹೈಯಾಲ್ ಇವ್ವಧಿಕಾರಿಹಳ್ ಇರುವರ್ಕ್ಕು ಮಿದು ಯಥಾಭಿಮತ ಫಲಹೇತು ವಾಯಿற்ற.

ಭಕ್ತಿಪ್ರಪತ್ತಿಗಳೆರಡೂ ಸಕಲ ಫಲ ಪ್ರದಗಳು

(5) **ವರಂವರಯ** ಇತ್ಯಾದಿ ಎಲೈ ಧ್ರುವನೇ ನಿನಗೆ ಇಷ್ಟವಾದ ವರಗಳನ್ನು ಕೇಳು. ನನ್ನನ್ನು ಸಾಕ್ಷಾತ್ಕರಿಸುವವರಿಗೆ ಎಲ್ಲವೂ ಸಿದ್ಧಿಸುತ್ತದ. (6) **ಕಿಂವಾಸರ್ವಜಗತ್ಸ್ರಷ್ಟುಃ** ಇತ್ಯಾದಿ-ಸರ್ವ ಜಗತ್ತಿಗೂ ಸೃಷ್ಟಿಕರನೇ ! ನೀನು ಪ್ರಸನ್ನನಾದರ ಯಾರಿಗೆ ಏನು ದುರ್ಲಭ. ಅವರವರ ಕೋರಿಕೆಯ ಪ್ರಕಾರ ಎಲ್ಲವೂ ಸಿದ್ಧಿಸುತ್ತದೆ. (7) **ತಸ್ಮಿನ್ಪ್ರಸನ್ನೇ** ಇತ್ಯಾದಿ-ಅವನು ಪ್ರಸನ್ನನಾದರ ಸಿದ್ಧಿಸದೆ ಇರುವುದು ಏನಿದ. ಎಲ್ಲಾ ಸಿದ್ಧಿಸುತ್ತದೆ ಎಂದರ್ಥ. (8) **ಕಿಂಲೋಕೇ** ಇತ್ಯಾದಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ

---

2) ಪಚ್ಚೈಮಾಮಲೈಪೋಲ್ಮೇನಿ ಪವಳವಾಯ್ ಕಮಲಚ್ಚೆಂಗಣ್
ಅಚ್ಚುದಾ ಅಮರರೇರೇ ಆಯರ್ತಮ್ ಕೊೞುಂದೇ ಎನ್ರುಮ್ ।
ಇಚ್ಚುವೈತವಿರಯಾನ್ ಪೋಯ್ ಇಂದಿರ ಲೋಕಮಾಳುಮ್
ಅಚ್ಚುವೈಪೆರಿನುವೇಂಡೇನ್ ಅರಂಗಮಾನಗರುಳಾನೇ ॥

ಎಳೆಹಸುರುಗಳಿಂದ ಕೂಡಿದ ಬೆಟ್ಟದ ಹಾಗೆ ದೇಹಕಾಂತಿ, ಕೆಂಪು ಹವಳದಂಥಹ ಬಾಯಿ, ಕೆಂಪಾದ ಕಮಲ ಪುಷ್ಪದಂತೆ ಕಣ್ಣುಗಳು, ಇಂಥಹ ಭಗವಂತನನ್ನು ಅಚ್ಯುತಾ-ಆಶ್ರಿತರನ್ನು ಕೈ ಬಿಡದವನೇ, ನಿತ್ಯಸೂರಿಗಳಿಗೆ ಸ್ವಾಮಿಯೇ, ಗೋಪಾಲರ ಮಗುವೇ, ಎಂದು ಅವನ ಸೌಂದರ್ಯ, ಸೌಶೀಲ್ಯ, ಸೌಲಭ್ಯ, ವಾತ್ಸಲ್ಯಗಳಿಗೆ ಮನಸೋತು ಸ್ತೋತ್ರ ಮಾಡುವ, ಈ ಭೋಗ್ಯವಾದ ರಸವನ್ನು ಬಿಟ್ಟು, ಪರಮ ಪದಕ್ಕೆ ಹೋಗಿ ಅಲ್ಲಿರುವ ಭಗವಂತನ (ರಸ -ಅನುಭವಾನಂದವನ್ನು ಪಡೆದರೂ, ಎಲೈ ರಂಗನಾಥನೇ ಅದು ನನಗೆ ಬೇಡ.

3) ಕಾರಾರ್ಪುರವಿಯೇೞ್ ಪೂಂಡತನಿಯಾೞಿ
ತೇರಾರ್ ನಿರೈಕದಿರೋನ್ ಮಂಡಲತ್ತೈಕ್ಕೀಂಡುಪುಕ್ಕು
ಆರಾವಮುದಮಂಗೆಯ್ದಿ, ಅದಿನಿನ್ರುಮ್
ವಾರಾದೊೞಿವದೊನ್ರುಂಡೇ, ಅದುನಿರ್ಕ
ಏರಾರ್ಮುಯಲ್ವಿಟ್ಟು ಕ್ಕಾಕ್ಕೈಪ್ಪಿನ್ಪೋವದೇ,

(ಶಿರಿಯತಿರುಮಡಲ್ 3, 4) ಸೂರ್ಯಮಂಡಲವನ್ನು ಭೇದಿಸಿಕೊಂಡು ಅಪರ್ಯಾಪ್ತಾಮೃತವಾದ ಪರಮ ಪದ ನಾಥನನ್ನು ಹೊಂದಿ, ಅಲ್ಲಿಂದ ತಿರುಗಿಯೂ ಈ ಸಂಸಾರಕ್ಕೆ ಹಿಂತಿರುಗುವುದಿಲ್ಲವೆಂಬ ಸಿದ್ಧಾಂತವು ಇರಲಿ. ಭೋಗ್ಯತೆಯು ಪೂರ್ಣವಾದ ಮೊಲದ ಮಾಂಸವನ್ನು ಬಿಟ್ಟು ಆಕಾಶದಲ್ಲಿ ಹಾರಿ ಹೋಗುವ ಕಾಗೆಯ ಮಾಂಸಕ್ಕೆ ಆಸೆಪಟ್ಟು ಹಿಂಬಾಲಿಸಿ ಪ್ರವರ್ತಿಸುವಂತೆ ಅರ್ಚಾವತಾರದಲ್ಲಿ ಭಗವಂತನನ್ನು ಅನುಭವಿಸದೆ ಶ್ರೀ ವೈಕುಂಠನಾಥನನ್ನು ಅನುಭವಿಸಲು ಹೋಗುವುದು ಏಂದು ಅರ್ಚಾವತಾರದ ಪ್ರಾಶಸ್ತ್ಯವನ್ನು ಹೇಳಿದ ಪಾಶುರ.

4). 5)। 6)। 7) ಪ. ತಿ. ಬೋ.

ಭಕ್ತೇಃ ಪ್ರಪತ್ತ್ಯತಿಶಯೇ ಪ್ರಮಾಣಾನಿ,

10) **"ಚತುರ್ವಿಧಾ ಭಜನ್ತೇ ಮಾಂ" ಎನ್ಗಿರಪಡಿಯೇ ಉಪಾಸನಮ್ ಯಾದೊರುಪಡಿ ಚತುರ್ವಿಧ ಫಲತ್ತುಕ್ಕುಮ್ ಸಾಧನಮಾಯಿರಕ್ಕಿರದು, ಅಪ್ಪಡಿಯೇ**

11) **"ತಾವದಾರ್ತಿ ಸ್ತಥಾವಾಂಛಾ ತಾವನ್ಮೋಹ ಸ್ತಥಾಽಸುಖಂ ।**
ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ"

ವಿಷ್ಣುನಿನಲ್ಲಿ ಭಕ್ತಿಯುಳ್ಳವರಿಗೆ ಯಾವುದು ಸಾಧಿಸಲಾಗ ವುದಿಲ್ಲ !. ಎಲ್ಲಾ ಪುರುಷಾರ್ಥಗಳೂ ಲಭಿಸುತ್ತವೆ ಎಂಪರ್ಥ (9) **ಫಲಮತ ಉಪಪತ್ತೇಃ**–ಸಕಲ ಫಲಗಳೂ ಬ್ರಹ್ಮದಿಂದಲೇ ಉಂಟಾಗುತ್ತವೆ ಅದೇ ಯುಕ್ತಿ ಯುಕ್ತವು, ಎಂದೂ, ಹೇಳುವಂತೆ ಸರ್ವೇಶ್ವರನು ಸಕಲ ಫಲಪ್ರದನಾದುದರಿಂದ ಅವನ ಪಾದಗಳಲ್ಲಿ ಪ್ರಪತ್ತಿಯು ಸಕಲ ಫಲಗಳಿಗೂ ಸಾಧನ ಆದ್ದರಿಂದ ಈ ಎರಡು ಅಧಿಕಾರಿಗಳಿಗೂ ಪ್ರಪತ್ತಿಯು **ಯಥಾಭಿಮತಫಲಹೇತು**– ಅವರು ಅಪೇಕ್ಷಿಸಿದ ಫಲಕ್ಕೆ ಕಾರಣವಾಗುತ್ತದೆ. (10) **ಚತುರ್ವಿಧಾಭಜಂತೇಮಾಂ,** ಎಂಬಂತೆ–ಉಪಾಸನವು ಯಾವ ರೀತಿಯಲ್ಲಿ ನಾಲ್ಕು ಫಲಗಳಿಗೂ (ನೂತನೈಶ್ವರ್ಯ, ಭ್ರಷ್ಟೈಶ್ವರ್ಯ, ಕೈವಲ್ಯ, ಮೋಕ್ಷ) ಸಾಧನವಾಗಿದಯೋ, ಹಾಗೆಯೇ ಪ್ರಪತ್ತಿಯೂ, (11) **ತಾವದಾರ್ತಿಸ್ತಥಾವಾಂಛಾ** ಎಂಬಂತೆ ನಾಲ್ಕು ವಿಧ ಫಲಗಳಿಗೂ ಸಾಧನ ವಾಗಿದೆಯೆಂದು ಮಹರ್ಷಿಗಳು ನಿಶ್ಚಯಿಸಿದ್ದಾರ

---

4) ರಾಮಾಯಣ (7-40-15) ಎಲೈ ರಾಜನೇ-ಶ್ರೀ ರಾಮಚಂದ್ರನೇ ನಿನ್ನಲ್ಲಿ ನನಗೆ ಪ್ರೀತಿಯು ನಿತ್ಯವಾದದ್ದು ಎಲೈ ವೀರನೇ ನಿನ್ನ ವೀರ್ಯ, ಸೌಂದರ್ಯ ಸೌಲಭ್ಯಾದಿ ಗುಣಗಳಿಂದ ಭಕ್ತಿಯೂ ನಿರಂತರವಾದದ್ದು ನನ್ನ ಮನಸ್ಸು ಅನ್ಯತ್ರ–ಶ್ರೀ ವೈಕುಂಠದಲ್ಲಿರುವ ಪರರೂಪದಲ್ಲಿ ಹೋಗುವುದಿಲ್ಲ

5) ವಿ ಪು 1-12-76

6) ಕಿಂವಾಸರ್ವಜಗತ್ಸ್ರಷ್ಟುಃ ಪ್ರಸನ್ನೇತ್ವಯಿದುರ್ಲಭಮ್ ॥
ತ್ವತ್ಪ್ರಸಾದಫಲಂ ಭುಂಕ್ತೇ ತ್ರೈಲೋಕ್ಯಂ ಮಘವಾನಪಿ ॥
(ವಿ. ಪು 1-12-79) ಎಲ್ಲಾ ಲೋಕಗಳನ್ನೂ ಪಡೆದವನೇ ನೀನು ಪ್ರಸನ್ನನಾದರೆ ಯಾರಿಗೆ ಯಾವ ಇಷ್ಟಾರ್ಥವು ಲಭಿಸ ಲಾರದು ಇಂದ್ರನು ಮೂರು ಲೋಕಗಳಿಗೂ ಸ್ವಾಮಿಯಾಗಿರುವುದೂ ನಿನ್ನ ಅನುಗ್ರಹದಿಂದಲೇ (7)

8) ಮಾಂಗಲ್ಯಂ ಪರಮಂ ಪದಂಸದಾರ್ಥಸಿದ್ಧಿಂ ನಿರ್ವಿಘ್ನಾಮಧಿಕಫಲಾಂ ಶ್ರಿಯಂದಧಾತಿ ।
ಕಿಂಲೋಕೇ ತದಿಹ ಪರತ್ರ ಚಾಸ್ತಿ ಪುಂಸಾಂಯದ್ವಿಷ್ಣು ಪ್ರಪಣಧಿಯಾಂ ಸದಾಲ್ಪಸಾಧ್ಯಮ್ ॥
(ವಿಷ್ಣು ಧರ್ಮ 43-46) ಎಲೈದಾಲ್ಭ್ಯನೇ ವಿಷ್ಣುವಿನಲ್ಲಿ ಪ್ರಾವಣ್ಯವುಳ್ಳವರಿಗೆ ಇಹಪರ ಎರಡು ಲೋಕಗಳಲ್ಲಿಯೂ ಲಭಿಸದೇ ಇರುವುದು ಏನಿದೆ ಮಂಗಳವು, ಪರಮ ಪದವು, ಎಲ್ಲಾ ಕಾರ್ಯಸಿದ್ಧಿಯೂ, ವಿಘ್ನವಿಲ್ಲದ ಅಧಿಕ ಫಲವಾದ ಸಂಪತ್ತು, ಮೊದಲಾದವೆಲ್ಲಾ ಸಿದ್ಧಿಸುತ್ತವೆ.

9) ಬ್ರಹ್ಮಸೂತ್ರ 3-2-37

10) ಚತುರ್ವಿಧಾ ಭಜಂತೇ ಮಾಂ ಜನಾಸ್ಸುಕೃತಿನೋಽರ್ಜುನ ।
ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ ॥ ಭ. ಗೀತೆ
ಆರ್ತ –ಐಶ್ವರ್ಯವನ್ನು ಕಳೆದುಕೊಂಡು ಅದಕ್ಕೆ ಆಸೆ ಪಡುವವನು, ಕೈವಲ್ಯಕ್ಕೆ ಆಸೆಪಡುವವನು, ನೂತನವಾಗಿ ಐಶ್ವರ್ಯವನ್ನು ಅಪೇಕ್ಷಿಸುವವನು. ಜ್ಞಾನೀ – ಮೋಕ್ಷವನ್ನು ಅಪೇಕ್ಷಿಸುವವನು ಈ ನಾಲ್ಕು ಪುಣ್ಯಶಾಲಿ ಜನರೂ ನನ್ನನ್ನು ಭಜಿಸುತ್ತಾರೆ.

11) ಸ್ವಾಮಿಯೇ ಆಯಾಯಾ ಫಲಪ್ರಾಪ್ತಿಗೆ ವಿರೋಧವಾದ ಪಾಪಗಳೆಲ್ಲವನ್ನೂ ನಾಶಮಾಡುವ ನಿನ್ನನ್ನು ಶರಣು ಹೊಂದದೆ ಇರುವವರೆಗೇನೆ, ಆರ್ತಿ–ನಷ್ಟವಾದ ಐಶ್ವರ್ಯವನ್ನು ಹೊಂದದೆ ಇರುತ್ತಾನೆ. ಅಲ್ಲಿಯವರೆಗೇನೆ, ನೂತನೈಶ್ವರ್ಯವನ್ನು ಪಡೆಯದೆ ಇರುವವನು, ಅಲ್ಲಿಯವರೆಗೇನೆ ಮೋಹವು–ಅಂದರೆ ಶರೀರಕ್ಕಿಂತ ಬೇರೆಯಾದ ಆತ್ಮ ಸಾಕ್ಷಾತ್ಕಾರ ಪಡೆದು ಸುಖವನ್ನು ಅನುಭವಿಸದೇ ಇರುತ್ತಾನೆ, ಅಲ್ಲಿಯವರೆಗೇನೆ ಅಸುಖವು–ಭಗವದನುಭವರೂಪವಾದ ಸುಖವಿಲ್ಲದಿರುವುದು, ಪ್ರಪತ್ತಿ ಮಾಡಿದರೆ ಈ ಚತುರ್ವಿಧ ಪುರುಷಾರ್ಥಗಳೂ ಲಭಿಸಲ್ಪಡುವುದೆಂದರ್ಥ.

ಎನ್ಗಿರ ಪಡಿಯೇ ಪ್ರಪತ್ತಿಯುಮ್ ಇಚ್ಚತುರ್ವಿಧ ಫಲತ್ತುಕ್ಕುಮ್ ಸಾಧನಮಾಹವಿರೇ ಮಹರ್ಷಿಹಳ್ ಅರುದಿಯಿಟ್ಟದು. ಇದಿಲ್ ಅಶೇಷಾಘನಾಶನಮೆನ್ಗೈಯಾಲುಮ್ ಆದರನ್ತೋற்ற "ತಾವತಾವತ್" ಎನ್ರು ಅಧಿಕಾರಮ್ ತೋರು ಮಾವರ್ತಿಕ್ಕೈಯಾಲುಮ್ ಇವನಪೇಕ್ಷಿತ್ತ ಫಲಮೆಲ್ಲಾಮ್ ತಾನ್ಗೊಲಿನ ಕಾಲತ್ತಿಲೇ ಯಥಾಮನೋರಥಮ್ ಸಿದ್ಧಿಕ್ಕುಮ್ ಇಪ್ಪಡಿಪ್ಪಟ್ಟ ಏற்றತ್ತೈ ನಿನೈತ್ತು,

12) "ಸತ್ಕರ್ಮನಿರತಾಶ್ಶುದ್ಧಾಸ್ಸಾಂಖ್ಯಯೋಗವಿದಸ್ತಥಾ ।
ನಾರ್ಹನ್ತಿ ಶರಣಸ್ಥಸ್ಯ ಕಲಾಂಕೋಟಿತಮಾಮಪಿ ॥" ಎನ್ರು ಶೊಲ್ಲುಹಿರದು.

ಇವನುಕ್ಕಿಙ್ಗಿರುನ್ದ ಕಾಲತ್ತಿಲ್ ಕೈಙ್ಕರ್ಯತ್ತಿಲ್ ವೈಷಮ್ಯಮ್ ತನ್ನೋಕ್ಕಮ್ರದಲಿಲ್ ವೈಷಮ್ಯತ್ತಾಲೇ ವನ್ದದು ; ಅದು ತನಕ್ಕಡಿ ಪ್ರಾರಬ್ಧ ಸುಕೃತ ವಿಶೇಷಮ್.

ಭಕ್ತಿಪ್ರಪತ್ತ್ಯೋಃ ಫಲಪ್ರಾಪ್ತಿಃ ; ಪಾರತನ್ತ್ರ್ಯಂಚ ಏಕರೂಪಮ್

ಅನ್ತಿಮಶರೀರಾನನ್ತರಂ ಪೆರುಮ್ ಪೇತ್ತಿಲ್ ಒರುವೈಷಮ್ಯಮಿಲ್ಲೈ ; ಪಾರತನ್ತ್ರ್ಯಮುಮ್ ಏಕರೂಪಮ್.

ಭಕ್ತಿಯೋಗಕ್ಕಿಂತಲೂ ಪ್ರಪತ್ತಿಯೋಗಕ್ಕೆ ಉತ್ಕರ್ಷ

ಇಲ್ಲಿ **"ಅಶೇಷಾಘನಾಶನಮ್"** ಎಂದು ಹೇಳಿರುವುದರಿಂದಲೂ, ಆದರವು ತೋರುವಂತೆ **"ತಾವತ್"** ಎಂದು ಪ್ರತಿ ಅಧಿಕಾರಕ್ಕೂ, ಆವರ್ತಿ ಮಾಡಿರುವುದರಿಂದಲೂ, ಇವನು ಅಪೇಕ್ಷಿಸುವ ಫಲವೆಲ್ಲಾ ಇವನು ಅಪೇಕ್ಷಿಸಿದ ಕಾಲದಲ್ಲೇ ಯಥಾಮನೋರಥ ಪ್ರಪತ್ತಿಯಿಂದಸಿದ್ಧಿಸುವುದು ಇಂತಹ ಉತ್ಕರ್ಷವನ್ನು ನೆನೆಸಿ (12) **ಸತ್ಕರ್ಮನಿರತಾಶ್ಶುದ್ಧಾಃ** ಎಂದು ಕರ್ಮಯೋಗ, ಜ್ಞಾನಯೋಗ ಭಕ್ತಿಯೋಗಗಳನ್ನು ಫಲಸಂಗಾದಿ ಆಸೆಯಿಲ್ಲದೆ ಅನುಷ್ಠಿಸಿ ಬರುವವರು, ಶರಣಾಗತನ ಕೋಟಿಯಲ್ಲಿ ಒಂದು ಅಂಶವನ್ನೂ ಹೊಂದಲಾರರು, ಎಂದು ಹೇಳಿರುವುದೂ ಆದ್ದರಿಂದ ಪ್ರಪತ್ತಿಯು ಪ್ರಾರಬ್ಧ ಕರ್ಮವನ್ನೂ ಹೋಗಲಾಡಿಸಿ ಅಪೇಕ್ಷಿತ ಕಾಲದಲ್ಲಿ ಫಲವನ್ನು ಕೊಡುವುದರಿಂದಲೂ ಇದಕ್ಕೆ ಉತ್ಕರ್ಷವನ್ನು, "ನಹಿನಿಂದಾನ್ಯಾಯ"ವನ್ನು ಅವಲಂಬಿಸಿ ಹೇಳಿದೆಯೇ ವಿನಹ, ಭಕ್ತಿ ಯೋಗಾದಿಗಳಿಗೆ ಸರ್ವಫಲಸಾಧಕತ್ವ ಮಹಿಮೆಯನ್ನು ಕಡಿಮೆ ಮಾಡಲು, ಅಲ್ಲ **ಇವನುಕ್ಕು**–ಈ ಪ್ರಪನ್ನನಿಗೆ, ಸಂಸಾರದಲ್ಲಿರುವ ಕಾಲದಲ್ಲಿ ಕೈಂಕರ್ಯದಲ್ಲಿ ವೈಷಮ್ಯವು ತನ್ನ ಅಪೇಕ್ಷೆಯ ವೈಷಮ್ಯದಿಂದ ಬರುವುದು, ವೈಷಮ್ಯವೆಂದರೆ ಹೆಚ್ಚು ಕಡಿಮೆ. ಅದಕ್ಕೆ ಕಾರಣ ಪ್ರಾರಬ್ಧ ಸುಕೃತ ವಿಶೇಷ ಈ ವೈಷಮ್ಯವು ಪರಮ ಪದದಲ್ಲಿಯೂ ಉಂಟೇ ಎಂದರೆ ಇಲ್ಲವೆಂದು **ಅಂತಿಮ ಶರೀರಾನಂತರಂ** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ.

ಭಕ್ತಿ ಪ್ರಪತ್ತಿಯೋಗ ನಿಷ್ಠರಿಗೆ ಮೋಕ್ಷವು ಫಲ, ಪಾರತಂತ್ರ್ಯವು ಏಕರೂಪ

ಆದಾಗಿ ಅಂತಿಮ ಶರೀರಾನಂತರ–ಪ್ರಾರಬ್ಧಾದಿ ಸರ್ವಕರ್ಮ ಕ್ಷಯ ಪೂರ್ವಕವಾದ ಚರಮ ಶರೀರದ ವಿಯೋಗಾನಂತರ, ಇವನು ಹೊಂದುವ ಪುರುಷಾರ್ಥ ರೂಪ ಕೈಂಕರ್ಯದಲ್ಲಿ ಯಾವ ನ್ಯೂನತೆಯೂ ಇಲ್ಲ. "ಸದಾಪಶ್ಯಂತಿ ಸೂರಯಃ" ಎಂಬಂತೆ ಪರಿಪೂರ್ಣ ಭಗವದನುಭವವೂ ತತ್ಪರೀವಾಹ ರೂಪ ಕೈಂಕರ್ಯ ರೂಪ ಪಾರತಂತ್ರ್ಯವೂ ಏಕರೂಪ.

---

12) ಲಕ್ಷ್ಮೀತಂತ್ರ (16-62) ನಿವೃತ್ತಿ ಧರ್ಮಗಳಾದ, ಕರ್ಮಜ್ಞಾನ ಭಕ್ತಿಯೋಗಗಳನ್ನು ಶುದ್ಧರಾಗಿ ಅಂದರೆ ಕರ್ತೃತ್ವ ತ್ಯಾಗ, ಮಮತಾ ತ್ಯಾಗ, ಫಲತ್ಯಾಗ, ಫಲೋಪಾಯತ್ವ ತ್ಯಾಗ ಪೂರ್ವಕವಾಗಿ ಅನುಷ್ಠಿಸುವವರಿಗಿಂತ, ನ್ಯಾಸವಿದ್ಯೆಯನ್ನು ಅವಲಂಬಿಸಿ ಭಗವಂತನಲ್ಲಿ ಶರಣಾಗತಿ ಮಾಡುವವರು ಉತ್ಕೃಷ್ಟರು ಇವರ ಮಹಿಮೆಯ ಕೋಟಿಯಲ್ಲಿ ಒಂದು ಭಾಗವನ್ನೂ ಅವರು(ಭಕ್ತರು) ಹೊಂದಲಾರರು. ಸರ್ವಫಲ ಸಾಧಕವಾದ ಭಕ್ತಿಯೋಗಕ್ಕೆ ದೋಷವನ್ನು ಹೇಳಲು ಬಂದ ವಚನವಲ್ಲ. ಪ್ರಪತ್ತಿಯು ಪ್ರಾರಬ್ಧ ಕರ್ಮವನ್ನೂ ಹೋಗಲಾಡಿಸಿ ಇವನು ಅಪೇಕ್ಷಿಸಿದ ಕಾಲದಲ್ಲಿ ಮೋಕ್ಷವನ್ನು ಕೊಡಬಲ್ಲದು ಎಂಬ ಉತ್ಕರ್ಷವನ್ನು ಹೇಳಲು ಈ ವಚನ ಹೊರಟಿದೆ

13) "ಪಾರತನ್ತ್ರ್ಯಂ ಪರೇ ಪುಂಸಿ ಪ್ರಾಪ್ಯ ನಿರ್ಗತಬನ್ಧನಃ
ಸ್ವಾತನ್ತ್ರ್ಯಮತುಲಂ ಪ್ರಾಪ್ಯ ತೇನೈವ ಸಹ ಮೋದತೇ ॥"

ಎನ್ರುಫಲದಶೆಯಿರ್ಕ್ಕುಮ್ಹಿರ ಸ್ವಾತನ್ತ್ರ್ಯಮುಮ್ ಕರ್ಮವಶ್ಯನನ್ರಿಕ್ಕೇ ಸರ್ವವಿಧ ಕೈಙ್ಕರ್ಯ ಯೋಗನಾಹ್ಯೈ, ಎನ್ರು ಫಲಪಾದತ್ತಿಲೇ ನಿರ್ಣೀತಮ್.

ಹೀಗೆ ಕೈಂಕರ್ಯದಲ್ಲಿ ವೈಷಮ್ಯ (ನ್ಯೂನತೆ, ವ್ಯತ್ಯಾಸ)ವಿಲ್ಲದಿದ್ದರೂ ಕೆಲವು ವಿದ್ಯಾನಿಷ್ಠರುಗಳಿಗೆ, "ಸಸ್ವರಾಡ್ಭವತಿ" ಎಂದು ಸ್ವಾತಂತ್ರ್ಯವನ್ನು ಹೇಳಿರುವುದರಿಂದ ಅವರಿಗೆ ಸ್ವಾತಂತ್ರ್ಯ ಪೂರ್ವಕವಾದ ಕೈಂಕರ್ಯವೂ ಅರ್ಥಾತ್, ಇತರ ವಿದ್ಯಾನಿಷ್ಠರುಗಳಿಗೆ ಪಾರತಂತ್ರ್ಯ ಪೂರ್ವಕ ಕೈಂಕರ್ಯವೂ ಲಭಿಸುತ್ತದೆಯಲ್ಲವೇ. ಹಾಗಾದರೆ ಪ್ರಕಾರಾಂತರದಿಂದ ಕೈಂಕರ್ಯದಲ್ಲಿ ವ್ಯತ್ಯಾಸವನ್ನು ಹೇಳಿದಂತೆಯಾಗುವುದಿಲ್ಲವೇ, ಎಂದರೆ ಪಾರತಂತ್ರ್ಯವು ಏಕರೂಪವೆಂಬುದನ್ನು (13) **ಪಾರತಂತ್ರ್ಯಂ ಪುರೇಪುಂಸಿ** ಎಂಬ ವಿಷ್ಣು ತತ್ತ್ವ ವಚನವನ್ನು ಪ್ರಮಾಣೀಕರಿಸಿ ನಿರೂಪಿಸುತ್ತಾರೆ. ಸಕಲ ಸಾಂಸಾರಿಕ ಬಂಧ ರೂಪವಾದ ಕರ್ಮವು ತೊಲಗುವುದರಿಂದ, ಎಲ್ಲಾ ವಿದ್ಯಾನಿಷ್ಠರಿಗೂ ಭಗವಂತನಲ್ಲಿ ಪಾರತಂತ್ರ್ಯವು ಒಂದೇ ರೂಪವಾಗಿರುತ್ತದೆ "ಸಸ್ವರಾಡ್ಭವತಿ" ಎಂಬ ಶ್ರುತಿಗೆ "ಅಕರ್ಮವಶ್ಯಃ" ಕರ್ಮ ಪರವಶನಲ್ಲ ಎಂದರ್ಥ. "ಸ್ವಾತಂತ್ರ್ಯ ಮತುಲಂಪ್ರಾಪ್ಯ" ಎಂಬ ವಚನಕ್ಕೂ ಇದೇ ಅರ್ಥ. ಹೀಗೆ, ಫಲದಶೆಯಲ್ಲಿ ಹೇಳುವ ಸ್ವಾತಂತ್ರ್ಯವನ್ನು, ಕರ್ಮ ಪರತಂತ್ರನಲ್ಲದೆ, ಸರ್ವವಿಧವಾದ ಕೈಂಕರ್ಯಕ್ಕೂ ಯೋಗ್ಯನಾಗುತ್ತಾನೆಂದು, ವಿವರಿಸಿ ಶಾರೀರಕ ಶಾಸ್ತ್ರ ಚತುರ್ಥಾಧ್ಯಾಯ ಚತುರ್ಥ ಪಾದದಲ್ಲಿ, "ಅತಏವಚಾನನ್ಯಾಧಿಪತಿಃ" ಎಂಬ ಸೂತ್ರ ಭಾಷ್ಯದಲ್ಲಿ ನಿರ್ಣಯಿಸಿರುತ್ತಾರೆ ಸಾಂಸಾರಿಕ ದಶೆಯಲ್ಲಿ ಕರ್ಮ ಪರತಂತ್ರನಾಗಿದ್ದರಿಂದ, ಮುಕ್ತ ದಶೆಯಲ್ಲಿ ಹೇಳುವ ಸ್ವಾತಂತ್ರ್ಯಕ್ಕೆ, ಕರ್ಮಪಾರತಂತ್ರ್ಯ ನಿವೃತ್ತಿಯನ್ನೇ ಹೇಳಬೇಕೇ ಹೊರತು ಬೇರೆಯಲ್ಲವೆಂಬುದು ಭಗವದ್ರಾಮಾನುಜರ ಅಭಿಪ್ರಾಯ. ಕೆಲವರು ಮೋಕ್ಷದಲ್ಲಿಯೂ ಭಕ್ತಿ, ಪ್ರಪತ್ತಿಗಳಿಗೆ ಫಲಭೇದವುಂಟು ಎಂದು ಹೇಳುತ್ತಾರೆ. ಇದಕ್ಕೆ ಸಾಧಕವಾಗಿ ಭಕ್ತನು, "ಸಸ್ವರಾಡ್ಭವತಿ", "ಪರಮಂ ಸಾಮ್ಯ ಮುಪೈತಿ" ಎಂಬ ವಚನದಿಂದಲೂ, ಸ್ವಾತಂತ್ರ್ಯಮತುಲಂ ಪ್ರಾಪ್ಯ ತೇನೈವ ಸಹಮೋದತೇ, ಎಂಬ ವಚನದಿಂದಲೂ ಪೂರ್ಣ ಸ್ವಾತಂತ್ರ್ಯವನ್ನೂ, ಪರಮ ಸಾಮ್ಯವನ್ನೂ ಹೊಂದುತ್ತಾನೆ. ಭಕ್ತನು ಧ್ಯಾನ ರೂಪವಾದ ಅನುಭವದಲ್ಲಿಳಿದಿರುವುದರಿಂದ ಅವನಿಗೆ ಭಗವದನುಭವದಲ್ಲಿ ದೃಷ್ಟಿ. ಪ್ರಪನ್ನನಿಗೆ "ತವಾಸ್ಮೀತಿಚಯಾಚತೇ" ಎಂದು ಭಗವಚ್ಛೇಷತ್ವ, ಪಾರತಂತ್ರ್ಯಗಳನ್ನು ಅಪೇಕ್ಷಿಸುವುದರಿಂದ ಇವನಿಗೆ ಕೈಂಕರ್ಯವೇ ಪುರುಷಾರ್ಥ. ಆದ್ದರಿಂದಲೇ

"ವೈಕುಂಠೇತು ಪರೇ ಲೋಕೇ ಶ್ರಿಯಾಸಾರ್ಧಂಜಗತ್ಪತಿಃ ।
ಆಸ್ತೇ ವಿಷ್ಣುರಚಿಂತ್ಯಾತ್ಮಾ ಭಕ್ತೈಃ ಭಾಗವತೈಸ್ಸಹ॥

ಎಂಬ ಶ್ಲೋಕದಲ್ಲಿ, ಶ್ರೀ ವೈಕುಂಠದಲ್ಲಿ ಭಕ್ತರು, ಮತ್ತು ಭಾಗವತರು, ಇವರುಗಳೊಡನೆ ಭಗವಂತನಿದ್ದಾನೆಂದು, ಶ್ರೀ ವೈಕುಂಠದಲ್ಲಿರುವವರನ್ನು ಎರಡು ಪಂಗಡವಾಗಿ ವಿಭಾಗಿಸಿರುತ್ತಾರೆಂದು ಹೇಳುವ ಈ ಮಾತುಗಳು ಅಪ್ರಾಮಾಣಿಕ. ಭಾಷ್ಯ ಪರಿಚಯವಿಲ್ಲದೇ ಹೇಳುವ ಮಾತು. ಇದಕ್ಕೆ ಸಮಾಧಾನವಾಗಿ ಆಚಾರ್ಯರು ಪಾರತಂತ್ರ್ಯಂ ಏಕರೂಪ –

---

13) (ವಿ. ತತ್ತ್ವ) ಪರಮ ಪುರುಷನಲ್ಲಿ ಪಾರತಂತ್ರ್ಯವನ್ನು ಅವಲಂಬಿಸಿ, ಭಕ್ತಿ ಪ್ರಪತ್ತಿಗಳಲ್ಲೊಂದನ್ನು ಅನುಷ್ಠಿಸಿ, ಸಾಂ... ಷ್ಟಣ್ಯಪಾಪ ರೂಪಕರ್ಮ ಬಂಧವನ್ನು ನೀಗಿಸಿಕೊಂಡು, ಅತುಲವಾದ ಸ್ವಾತಂತ್ರ್ಯವನ್ನು-ಅಂದರೆ ಕರ್ಮ ಪಾರವಶ್ಯ ನಾಶರೂಪವಾದ ಸ್ವಾತಂತ್ರ್ಯವನ್ನು ಹೊಂದಿ, ಅಕರ್ಮವಶ್ಯನಾಗಿ ಎಂದರ್ಥ. ಆ ಪರಮ ಪುರುಷನ ಜತೆಯಲ್ಲಿ, "[illegible] ಭವತಿ" ಎಂಬ ಶ್ರುತಿ ಪ್ರಕಾರ ಪರಮಾನಂದವನ್ನು ಹೊಂದಿ ಸಂತೋಷ ಪಡುತ್ತಾನೆ.

ವೇಣ್ಡು ಪ್ಪೆರುಮ್ಪಯನ್ ವೀಡೆನ್ರರಿನ್ದು ವಿದಿವಹೈಯಾಲ್ ।
ನೀಣ್ಡು ಕ್ಕುರುಹಿಯುಮ್ ನಿರ್ಕುಮ್‌ನಿಲೈಹಳುಕ್ಕೇರ್ಕ್ಕ ಮನ್ಬರ್ ॥
ಮೂಣ್ಡೊನ್ರಿಲ್ ಮೂಲವಿನೈ ಮಾತ್ತುದಲಿಲ್ ಮುಹುನ್ದನಡಿ ।
ಪೂಣ್ಡನ್ರಿ, ಮತ್ರೋರ್‌ಪುಹಲೊನ್ರಿಲ್ಲೈ ಎನ ನಿನ್ರನರೇ ॥೧೫॥

ಎಂದು ಹೇಳಿ, ಇದಕ್ಕೆ ಆಧಾರವಾಗಿ **ಪಾರತಂತ್ರ್ಯಂ ಪರೇಪುಂಸಿ ಇತ್ಯಾದಿ** ಶ್ಲೋಕವನ್ನು ಉದಾಹರಿಸಿರುತ್ತಾರೆ ಭಕ್ತ ಪ್ರಪನ್ನರಿಬ್ಬರಿಗೂ ಭಗವತ್ಪಾರತಂತ್ರ್ಯವು ಏಕರೂಪವಾದದ್ದು "ಸಸ್ವರಾಡ್ಭವತಿ" ಎಂಬ ಶ್ರುತಿಗೆ ಭೂಮಾಧಿಕರಣ ಭಾಷ್ಯದಲ್ಲಿ "ಅಕರ್ಮವಶ್ಯಃ" ಎಂದು ಭಗವದ್ರಾಮಾನುಜರು ವ್ಯಾಖ್ಯಾನ ಮಾಡಿರುತ್ತಾರೆ ಫಲಪಾದದಲ್ಲಿಯೂ "ಅತಏವಚ ಅನನ್ಯಾಧಿಪತಿಃ" ಎಂಬ ಸೂತ್ರ ಭಾಷ್ಯದಲ್ಲಿ, ಭಗವತ್ಪಾರತಂತ್ರ್ಯವೇ ಇದೆ ಅನ್ಯಪಾರತಂತ್ರ್ಯವಿಲ್ಲ. ಸಂಸಾರದಲ್ಲಿ ಕರ್ಮಾಧೀನನಾಗಿದ್ದಂತೆ ಇಲ್ಲ. ಕೇವಲ ಭಗವತ್ಪಾರತಂತ್ರ್ಯವೇ ಎಂದು ಅರ್ಥ ಮಾಡಿರುತ್ತಾರೆ ಆದ್ದರಿಂದ ಭಕ್ತ ಪ್ರಪನ್ನರಿಬ್ಬರಿಗೂ ಇದು ಸಮಾನ. ಮೋಕ್ಷದಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎಂಬುದು ಸಿದ್ಧಾಂತ "ಭಕ್ತ್ಯಾ ಭಾಗವತ್ಯೈಸ್ಸಹ" ಎಂಬ ವಚನಗಳಿಗೆ ಭಕ್ತರು ಬೇರೆ, ಭಾಗವತರು ಬೇರೆ ಎಂದರ್ಥವಲ್ಲ ಭಗವದ್ಭಕ್ತರೇ ಭಾಗವತ ಭಕ್ತಿ ಪರ್ಯಂತವಾದ ಭಗವದ್ಭಕ್ತಿಯುಳ್ಳವರು ಎಂದರ್ಥ.

ಮೇಲೂ "ವಚನಭೂಷಣ"ದಲ್ಲಿ, "ಉಪಾಯಾಂತರ ನಿಷ್ಠಾನಾಂ ಉಪೇಯೋ ಭಗವದನುಭವಃ", ಎಂದು ಭಕ್ತರಿಗೆ ಅನುಭವವು ಫಲ ಪ್ರಪನ್ನರಿಗೆ ಕೈಂಕರ್ಯವು ಫಲ, ಎಂದು ವಿಭಾಗ ಮಾಡಿರುವುದು ಸರಿಯೇ ಎಂದು ಮುಮುಕ್ಷುಪ್ಪಡಿ ವ್ಯಾಖ್ಯಾನಕಾರರು, ತಾತ್ಪರ್ಯ ದೀಪಿಕೆಯಲ್ಲಿ ಕೇಳಿಕೊಂಡು, "ಆ ಫಲ ವಿಭಾಗದಲ್ಲಿ ತಾತ್ಪರ್ಯವಿಲ್ಲ. ಕೈಂಕರ್ಯವು ಅನುಭವ ಪರಿವಾಹವಾದ್ದರಿಂದ ಭಕ್ತರಿಗೂ ಉಂಟು ಆದರಿಂದ ಪ್ರಪನ್ನರಿಗೂ ಅನುಭವವು ತುಲ್ಯ" ಎಂದು ವಚನಭೂಷಣಕಾರರ ಸಾಕ್ಷಾತ್ ಶಿಷ್ಯರೇ ಹೇಳಿರುವುದರಿಂದ ಈ ವಿಷಯದಲ್ಲಿ ಸಂಪ್ರದಾಯಭೇದವನ್ನು ಹೇಳುವುದು ಸರಿಯಲ್ಲ ಪ್ರಪತ್ತಿ ಮಾಡಿದವನಿಗೇ ಪಾರತಂತ್ರ್ಯಕಾಷ್ಠೆ, ಭಕ್ತನಿಗೆ ಅಹಂಕಾರ ಲೇಶವುಂಟು. ಆ ಅಹಂಕಾರ ಲೇಶದಿಂದ "ಸ್ವಾತಂತ್ರ್ಯಮತುಲಂ ಪ್ರಾಪ್ಯ," ಎಂದು ಮೋಕ್ಷದಲ್ಲಿ ಸ್ವಾತಂತ್ರ್ಯವನ್ನು ಹೇಳಿರುವುದರಿಂದ, ಅದನ್ನು ನೆನೆಸಿಕೊಂಡು ಇಲ್ಲಿಯೂ ಭಕ್ತನಿಗೆ ಅಸಂಭಾವವುಂಟು, ಇತ್ಯಾದಿ ಕಲ್ಪನೆಗಳೆಲ್ಲಾ ಅಪ್ರಾಮಾಣಿಕಗಳು ಅಪರಾಮರ್ಶಮೂಲ ಭಾಷ್ಯವಿರುದ್ಧ. ಮೇಲೂ ಪ್ರಪನ್ನ ಕೂಟಸ್ಥರಾದ ನಮ್ಮಾಳ್ವಾರವರ ಸಂಪ್ರದಾಯಾಗತವಾದ ಶರಣಾಗತಿ ವಿದ್ಯೆಯನ್ನು ಅನುಷ್ಠಿಸಿದ ಭಗವದ್ರಾಮಾನುಜರು ತಮ್ಮ ಶರಣಾಗತಿ ಗದ್ಯದಲ್ಲಿ, "ಪರಭಕ್ತಿ ಪರಜ್ಞಾನ ಪರಮ ಭಕ್ತಿಕೃತ ಪರಿಪೂರ್ಣಾನವರತ ನಿತ್ಯವಿಶದತಮಾನನ್ಯ ಪ್ರಯೋಜನಾನವಧಿಕಾತಿಶಯ ಪ್ರಿಯ ಭಗವದನುಭವಜನಿತ ಅನವಧಿಕಾತಿಶಯ ಪ್ರೀತಿಕಾರಿತಾಶೇಷಾವಸ್ಥೋಚಿತಾಶೇಷಶೇಷತೈಕ ರತಿರೂಪ ನಿತ್ಯಕಿಂಕರೋಭವಾನಿ" ಎಂದು ಪ್ರಾರ್ಥಿಸಿ ಆ ಪ್ರಾರ್ಥನಾಪ್ರಕಾರ, ಭಗವಂತನೂ, "ಮದನುಭವ ಜನಿತಾನವಧಿಕಾತಿಶಯ ಪ್ರೀತಿ ಕಾರಿತಾಶೇಷಾವಸ್ಥೋಚಿತಾಶೇಷಶೇಷತೈಕರತಿರೂಪ ನಿತ್ಯ ಕಿಂಕರೋಭವ", ಎಂದು ಪ್ರತ್ಯುತ್ತರ ಕೊಟ್ಟಿರುವುದೂ ಗಮನಾರ್ಹ ಇಲ್ಲಿ ಪ್ರಪನ್ನನಿಗೂ ಭಗವದನುಭವವು ಉಂಟೆಂಬುದೂ, ಕೈಂಕರ್ಯವು ತತ್ಪರೀವಾಹವಾದದು, ಎಂಬುದೂ ಸ್ಪಷ್ಟ ಹಾಗೆಯೇ ಭಕ್ತನಿಗೂ ಭಗವದನುಭವವು ಪರಿವಹಿಸಿ ಕೈಂಕರ್ಯ ಪರ್ಯಂತವಾಗುತ್ತದೆಯೆಂಬುದು ನಿರ್ವಿವಾದ. ಆದ್ದರಿಂದ ಪ್ರಮಾಣ ಸಂಪ್ರದಾಯಗಳಿಗೆ ವಿರುದ್ಧವಾದ ಅರ್ಥಗಳು ತಿರಸ್ಕಾರ್ಯಗಳು.

ಅನಂತರ ತಾವು ಮೇಲೆ ನಿರೂಪಿಸಿದ ಸದ್ವಾರಕಾದ್ವಾರಕ ಪ್ರಪತ್ತಿಗಳಲ್ಲದೆ ಸರ್ವೇಶ್ವರನು ಮೋಕ್ಷ ಸಾಮ್ರಾಜ್ಯವನ್ನು ಕೊಡುವುದಿಲ್ಲವೆಂಬ ಸಿದ್ಧಾಂತವನ್ನು ಪಾಶುರ ರೂಪದಲ್ಲಿ **ವೇಂಡುಮ್ ಪೆರುಂಪಯನ್** ಎಂದಾರಂಭಿಸಿ ಅನುಗ್ರಹಿಸುತ್ತಾರೆ. ಅದಾಗಿ **ವೇಂಡುಮ್ ಪೆರುಂಪಯನ್**—ಪ್ರಾರ್ಥನೀಯವಾದ ಮಹಾಫಲವು **ವೀಡೆನ್ರರಿನ್ದು**—ಮೋಕ್ಷವೆಂದು ಶಾಸ್ತ್ರಗಳಿಂದ ತಿಳಿದು, **ನೀಂಡುಂ ಕುರುಹಿಯುಂನಿರ್ಕುಂ**—ದೀರ್ಘಕಾಲ ಸಾಧ್ಯವಾಗಿಯೂ, ಕ್ಷಣ

ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುನ್ದೋ ನಿಜಪದಂ
ಪ್ರಪನ್ನಶ್ಚ ದ್ವೇಧಾ ಸುಚರಿತ ಪರಿಪಾಕಭಿದಯಾ ।
ವಿಳಂಬೇನ ಪ್ರಾಪ್ತಿರ್ಭಜನ ಸುಖಮೇಕಸ್ಯ ವಿಪುಲಂ
ಪರಸ್ಯಾಽಽಶು ಪ್ರಾಪ್ತಿಃ ಪರಿಮಿತರಸಾ ಜೀವಿತದಶಾ ॥೨೧॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ
ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಅಧಿಕಾರಿವಿಭಾಗಾಧಿಕಾರೋಽಷ್ಟಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಕಾಲ ಸಾಪೇಕ್ಷ್ಯವಾಗಿಯೂ ಇರುವ **ನಿಲೈಹಳುಕ್ಕು**–ಸದ್ವಾರಕ ಪ್ರಪತ್ತಿ, ಅದ್ವಾರಕ ಪ್ರಪತ್ತಿಯೆಂಬ ಭಕ್ತಿ ಪ್ರಪತ್ತಿ ರೂಪ ಉಪಾಯಗಳಿಗೆ **ವಿಧಿವಶೈಯಾಲ್ ವಿರ್ಕುಂ**–ಪೂರ್ವಸುಕೃತ ವಿಶೇಷದಿಂದ ಸಕಿಂಚನತ್ವ, ಅಕಿಂಚನತ್ವ ಗಳಿಂದ ಯೋಗ್ಯರಾದ **ಅನ್ಬರ್**–ಮುಮುಕ್ಷುಗಳು **ಒನ್ರಿಲ್‌ಮೂಂಡು** – ಒಂದು ಉಪಾಯವನ್ನು ಅನುಷ್ಠಿಸಿ **ಮೂಲವಿನೈ**–ಸಂಸಾರಾನುವೃತ್ತಿಗಳಿಗೆಲ್ಲಾ ಕಾರಣವಾದ ಪ್ರಾಚೀನ ಕರ್ಮಗಳನ್ನು-ಉಪಾಯ ವಿರೋಧಿಯಾಗಿಯೂ ಪ್ರಾಪ್ತಿ ವಿರೋಧಿಯಾಗಿಯೂ ಇರುವ ಪ್ರಾಚೀನ ಕರ್ಮಗಳನ್ನು **ಮಾಟ್ರುದಲಿಲ್** – ಹೋಗಲಾಡಿಸುವುದರಲ್ಲಿ **ಮುಕುಂದನಡಿಪೂಂಡನ್ರಿ**–ಭಗವತ್ಪಾದಾರವಿಂದ ಶರಣಾಗತಿಯನ್ನು ಮಾಡುವುದನ್ನು ಬಿಟ್ಟರೆ, **ಮಟ್ರೋರ್ ಪುಹಲ್** – ಬೇರೆ ಯಾವ ಉಪಾಯವು. **ಒನ್ರಿಲ್ಲೈ** – ಒಂದೂ ಇಲ್ಲ **ಎನನಿನ್ರನರೇ**–ಎನ್ನುವಂತೆ ನಿಂತಿದ್ದಾರೆ

ಅನಂತರ ಪ್ರಪತ್ತಿಗಲ್ಲದೆ ಸರ್ವೇಶ್ವರನು ಪರಮ ಪುರುಷಾರ್ಥವನ್ನು ಕೊಡುವುದಿಲ್ಲವೆಂಬ ಅಧಿಕಾರಾರ್ಥವನ್ನು **ಪ್ರಪನ್ನಾದನ್ಯೇಷಾಂ** ಎಂಬ ಶ್ಲೋಕದಿಂದ ಸ್ಥಾಪಿಸುತ್ತಾರೆ **ಪ್ರಪನ್ನಾದನ್ಯೇಷಾಂ**–ಹಿಂದೆ ಹೇಳಿದ ಸದ್ವಾರಕಾ ದ್ವಾರಕ ಪ್ರಪತ್ತಿ ನಿಷ್ಠರಿಗಿಂತ ಬೇರೆಯವರಿಗೆ **ಮುಕುಂದೋ ನಿಜಪದಂ ನದಿಶತಿ**–ಮುಕುಂದನು ತನ್ನ ಪಾದ ಗಳನ್ನು ಅಥವಾ ಪರಮ ಪದವನ್ನು ಕೊಡುವುದಿಲ್ಲ. ಪ್ರಪತ್ತಿಯೊಂದೇ ಮೋಕ್ಷವನ್ನು ಕೊಡುವುದಾದರೆ, ಭಕ್ತಿಯೋಗಕ್ಕೆ ಮೋಕ್ಷವಿಲ್ಲವೇ ಎಂಬ ಶಂಕೆಯನ್ನು **'ಚ'** ಕಾರದಿಂದ ಹೋಗಲಾಡಿಸಿ ಅಧಿಕಾರಿ ಭೇದವನ್ನು **"ಪ್ರಪನ್ನಶ್ಚದ್ವೇಧಾ"** ಎಂದು ನಿರೂಪಿಸುತ್ತಾರೆ **ಪ್ರಪನ್ನಶ್ಚ**–ಆ ಪ್ರಪನ್ನನೂ **ದ್ವೇಧಾ**-ಸಕಿಂಚನನು ಮತ್ತು ಅಕಿಂಚನನು ಎಂದು ಎರಡು ಬಗೆಯವನು ಸಕಿಂಚನನು, ಅಕಿಂಚನನು ಎಂಬ ಅಧಿಕಾರಿ ಭೇದದಿಂದ, ಸಕಿಂಚನನಿಗೆ ಪ್ರಪತ್ತಿ ಪೂರ್ವಕ ಭಕ್ತಿಯೋಗದಿಂದಲೂ, ಅಕಿಂಚನನಿಗೆ ಕೇವಲ ಪ್ರಪತ್ತಿ(ಅದ್ವಾರಕ ಪ್ರಪತ್ತಿ)ಯಿಂದಲೂ ಮೋಕ್ಷವೆಂಬುದನ್ನು ನಿರೂಪಿಸುತ್ತಾರೆ ಇದಕ್ಕೆ ಕಾರಣವೇನೆಂದರೆ **ಸುಚರಿತ ಪರಿಪಾಕಭಿದಯಾ**–ಅವರವರ ಸುಕೃತ ಕರ್ಮದ ಪರಿಣಾಮವೇ ಎಂದು ಅನುಗ್ರಹಿಸುತ್ತಾರೆ ಹೀಗೆ ಪರಸ್ಪರ ವಿಲಕ್ಷಣವಾದ ಸುಕೃತ ಕರ್ಮದ ಪರಿಣಾಮವೇ ಕಾರಣವೆಂದರೆ ಫಲದಲ್ಲಿಯೂ ವ್ಯತ್ಯಾಸವುಂಟೇ ಎಂದರೆ **ವಿಳಂಬೇನಪ್ರಾಪ್ತಿಃ** ಎಂದಾರಂಭಿಸಿ ನಿರೂಪಿಸುತ್ತಾರೆ **ಏಕಸ್ಯ**–ಭಕ್ತ ಪ್ರಪನ್ನರಿಬ್ಬರಲ್ಲಿ ಭಕ್ತನಿಗೆ–ಸದ್ವಾರಕ ಪ್ರಪತ್ತಿ ನಿಷ್ಠನಿಗೆ **ವಿಳಂಬೇನಪ್ರಾಪ್ತಿಃ**–ಮೋಕ್ಷವು ವಿಳಂಬಿಸುತ್ತದೆ–ಆದಾಗ್ಗಿ ಪ್ರಾರಬ್ಧ ಕರ್ಮಾವಸಾನದಲ್ಲಿ ಮೋಕ್ಷ ಪ್ರಾಪ್ತಿ ... **ಭಜನಸುಖಂ ವಿಪುಲಮ್**–ಈ ಲೋಕದಲ್ಲಿ ಭಗವದನುಭವ ರೂಪವಾದ ಆನಂದವು ವಿಸ್ತಾರವಾದದ್ದು. **ಪರಸ್ಯಾಶುಪ್ರಾಪ್ತಿಃ** ಇತರನಿಗೆ ಅಂದರೆ ಅದ್ವಾರಕ ಪ್ರಪತ್ತಿ ನಿಷ್ಠನಿಗೆ ಶೀಘ್ರದಲ್ಲೇ ಫಲವು ಲಭಿಸುತ್ತದೆ ಆದರೆ **ಪರಿಮಿತರಸಾ ಜೀವಿತಾದಶಾ**–ಜೀವಿಸಿರುವ ದಶೆಯು ಪರಿಮಿತವಾದ ಭಗವದನುಭವ ರೂಪವಾದ ಆನಂದವುಳ್ಳದ್ದು. ಅಂದರೆ ಜೀವಿತ ಕಾಲದಲ್ಲಿ ಭಗವಂತನ ಅನುಭವವು ಅವರವರ ಕರ್ಮಾನುಗುಣವಾದ ಭಕ್ತಿ ಶ್ರದ್ಧೆಗೆ ಅನುಗುಣವಾಗಿ ಪರಿಮಿತವಾದದ್ದು. ಭಕ್ತಿಯೋಗ ನಿಷ್ಠನಿಗೆ ಇರುವಂತೆ ಪ್ರೀತಿ ರೂಪವಾಗಿಯೂ, ತೈಲಧಾರೆಯಂತೆ ಅವಿಚ್ಛಿನ್ನ

ಸ್ಮೃತಿ ಸಂಗತಿ ರೂಪವಾಗಿಯೂ, ಆ ಪ್ರಯಾಣಾದನು ವರ್ಣಿಸುವುದೂ ಆದ ಭಗವಂತನ ಸಾಕ್ಷಾತ್ಕಾರವು ಪ್ರಪತ್ತಿಯೋಗ ನಿಷ್ಠನಿಗೆ ಇಲ್ಲದಿರುವುದರಿಂದ, ಈ ಲೋಕದಲ್ಲಿಯ ಭಗವದನುಭವ ಸುಖವು ಪ್ರಪನ್ನನಿಗೆ ಪರಿಮಿತ ವಾದದ್ದು. ನಮ್ಮಾಳ್ವಾರ್, ನಾಥಮುನಿಗಳಿಗೆ ಜನ್ಮಾಂತರ ಸುಕೃತ ಫಲ ನಿಮಿತ್ತವಾಗಿ ಇಹಲೋಕದಲ್ಲಿಯೂ ಭಗವ ತ್ಸಾಕ್ಷಾತ್ಕಾರಾದಿಗಳು ಪೂರ್ಣವಾಗಿತ್ತು.

ಹಾಗಾದರೆ ಮಹಾಜ್ಞಾನಿಗಳಾದ ವ್ಯಾಸಾದಿಗಳು ಏಕೆ ಪ್ರಪತ್ತಿಯನ್ನು ಅನುಷ್ಠಿಸಿ ಮೋಕ್ಷಕ್ಕೆ ಹೋಗಲಿಲ್ಲ, ಕಾಲಕ್ಷೇಪಾಕ್ಷಮತ್ವವೆಂಬ ತ್ವರೆಯು ಏಕೆ ಅವರಿಗೆ ಉಂಟಾಗಲಿಲ್ಲ ಹಾಗೆಯೇ ಮಹಾಜ್ಞಾನಿಗಳಾಗಿ ಯೋಗ ದಶೆಯಲ್ಲಿ ಭಗವಂತನ ಸಾಕ್ಷಾತ್ಕಾರ ಹೊಂದಿ ಈ ಲೋಕದಲ್ಲಿ ಭಗವತ್ಸಾಕ್ಷಾತ್ಕಾರ ರೂಪವಾದ ಆನಂದವು ಅಭಿಸಿದ್ಧರೂ, ನಮ್ಮಾಳ್ವಾರ್ರವರು ಏಕೆತ್ವರೆ ಪಡಬೇಕಾಗಿತ್ತು ಎಂಬ ಪ್ರಶ್ನೆಗಳಿಗೆ ಉತ್ತರವೇನೆಂದರೆ—

ವ್ಯಾಸಾದಿಗಳು **'ಅಮೃತತ್ವಂಚಾನುಪ್ರೋಷ್ಯ'** ಎಂದು ಹೇಳುವ ರೀತಿಯಲ್ಲಿ ಪರಿಪಕ್ವವಾದ ಭಗವದನ್ಭವವನ್ನು ಈ ಲೋಕದಲ್ಲಿಯೇ ಪಡೆಯುವ ಆಸೆಯಿಂದ ಭಕ್ತಿ ವಿದ್ಯೆಯನ್ನು ಕೈಗೊಂಡರು. ಅದ್ವಾರಕ ಪ್ರಪತ್ತಿ ಶಾಸ್ತ್ರದಲ್ಲಿ ವಿಶ್ವಾಸ ಮಾಂದ್ಯದಿಂದಲ್ಲ ದೃಪ್ತ ಪ್ರಪನ್ನರು—ಅಂದರೆ ಶರೀರಾವಸಾನದಲ್ಲಿ ಮೋಕ್ಷವನ್ನು ಬಯಸಿ ಶರಣಾಗತಿ ಮಾಡಿದವರು, ಇಹಲೋಕದಲ್ಲಿ ಅರ್ಚಾವತಾರಗಳಲ್ಲಿ ಭಗವದನುಭವವನ್ನು ಪಡೆಯುವ ಸಲುವಾಗಿಯೂ, ಅಧ್ಯಾತ್ಮ ಗ್ರಂಥ ನಿರ್ಮಾಣ ಮಾಡಿ, ಅನೇಕರಿಗೆ ಜ್ಞಾನೋಪದೇಶ ಮಾಡಬೇಕೆಂಬ ಅಭಿಲಾಷೆಯಿಂದಲೂ, ಕಾಲಯಾಪನೆ ಮಾಡಿಕೊಂಡಿರುವ ಅಭಿಲಾಷೆಯುಳ್ಳವರು. ಆದ್ದರಿಂದ ಶ್ರೀ ರಂಗಾದಿ ದಿವ್ಯಕ್ಷೇತ್ರಗಳಲ್ಲಿ ತನಗೆ ಕೈಂಕರ್ಯಗಳನ್ನು ಮಾಡುವಂತೆ ತನ್ನ ದಾಸನಾದ ಪ್ರಪನ್ನನನ್ನು ಇಹಲೋಕದಲ್ಲಿಯೇ ಸ್ವಲ್ಪಕಾಲ ಇರುವಂತಹ ಭಗವಂತನ ಸಂಕಲ್ಪವನ್ನು ಅನುಸರಿಸಿ ತದ್ದಾಸನಾಗಿ ಕಾಲವನ್ನು ಕಳೆಯಬೇಕೆಂಬ ಪಾರತಂತ್ರ್ಯಕಾಷ್ಠಾ ವಿಶೇಷವೇ ದೃಪ್ತ ಪ್ರಪತ್ತಿಗೆ ಕಾರಣವೆಂಬುದು ಆಚಾರ್ಯರ ಹೃದಯ

ನಮ್ಮಾಳ್ವಾರವರನ್ನು ಋಷಿಗಳಿಗೆ ಹೋಲಿಸಲಾಗದ ರೀತಿಯಲ್ಲಿ, ಅವರ ಭಕ್ತಿಯು ಅತ್ಯಂತ ಅತಿಶಯವಾಗಿತ್ತು. ಅವರಿಗೆ ಪ್ರಕೃತಿ ಸಂಬಂಧವು ಅತಿ ಹೇಯವಾಗಿತ್ತು, ಭಗವತ್ಸಾಕ್ಷಾತ್ಕಾರವು ಎಲ್ಲಿ ಭಗ್ನವಾಗುತ್ತದೆಯೋ ಎಂಬ ಭಯ ದಿಂದ ತ್ವರೆಪಡುತ್ತಿದ್ದರು ಆದರೆ ಲೋಕೋಜ್ಜೀವನಾರ್ಥವಾಗಿ ಭಗವಂತನು ನಿರ್ಬಂಧಿಸಿ ಅವರ ಮೂಲಕ ತಿರುವಾಯ್ ಮೊಳಿ ಪ್ರಬಂಧವನ್ನು ಪೂರ್ತಿಗೊಳಿಸಿ ಅವರನ್ನು ಮೋಕ್ಷಕ್ಕೆ ಕರೆದೊಯ್ದನು. ಭಗವಂತನ ಸ್ವಾತಂತ್ರ್ಯವು ಅಪರ್ಯನು ಯೋಜ್ಯವಾದದ್ದಲ್ಲವೇ. ಆಳ್ವಾರವರ ಭಾಗ್ಯವಿಶೇಷವೂ ಇದಕ್ಕೆ ಕಾರಣ.

ಇತಿ ಶ್ರೀಮನ್ನಿಗಮಾಂತ ಮಹಾದೇಶಿಕ ಪ್ರಣೀತವಾದ ರಹಸ್ಯತ್ರಯ ಸಾರದಲ್ಲಿ "ಅಧಿಕಾರಿವಿಭಾಗಾಧಿಕಾರಕ್ಕೆ" "ಸಾರಚಂದ್ರಿಕಾ" ವ್ಯಾಖ್ಯಾನವು ಸಮಾಪ್ತ,

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಉಪಾಯವಿಭಾಗಾಧಿಕಾರಃ

ಉಪಾಯಸ್ಸ್ವಪ್ರಾಪ್ತೇರುಪನಿಷದಧೀತ ಸ್ಸಭಗವಾನ್
ಪ್ರಸತ್ತ್ಯೈತಸ್ಯೋಕ್ತೇ ಪ್ರಪದನನಿಧಿಧ್ಯಾಸನಗ(ಸ್ಯ)ತೀ ।
ತದಾರೋಹಃ ಪುಂಸಸ್ಸುಕೃತಪರಿಪಾಕೇನ ಮಹತಾ
ನಿದಾನಂ ತತ್ರಾಪಿ ಸ್ವಯಮಖಿಲ ನಿರ್ಮಾಣ ನಿಪುಣಃ ॥ ೨೨ ॥

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರೀ ಮದ್ರಹಸ್ಯತ್ರಯಸಾರದ ಉಪಾಯ ವಿಭಾಗಾಧಿಕಾರಕ್ಕೆ "ಸಾರ ಚಂದ್ರಿಕಾ" ವ್ಯಾಖ್ಯಾ

ಹಿಂದಿನ ಅಧಿಕಾರದಲ್ಲಿ, ಭಕ್ತಿ, ಪ್ರಪತ್ತಿ ವಿದ್ಯೆಗಳಿಗೆ ಯಾರು ಯಾರು ಅಧಿಕಾರಿಗಳು ಎಂಬುದನ್ನು ವಿಭಾಗ ಮಾಡಿದರು ಈ ಅಧಿಕಾರದಲ್ಲಿ ಮೋಕ್ಷಕ್ಕೆ ಉಪಾಯವನ್ನು ವ್ಯವಸ್ಥೆ ಮಾಡುತ್ತಾರೆ ಆದಾಗಿ ಉಪಾಯವು ಎರಡು ವಿಧ. ಸಿದ್ಧೋಪಾಯ ಮತ್ತು ಸಾಧ್ಯೋಪಾಯ. ಸಾಧ್ಯೋಪಾಯವು ಎರಡು ವಿಧ. ಭಕ್ತಿ, ಪ್ರಪತ್ತಿ ಯೆಂಬುದು. **ಅರ್ಥ** ಪಂಚಕಾಧಿಕಾರದಲ್ಲಿ, "ಇಷ್ಟೋಪಾಯಂ ತ್ವಯನನಮನೋಃ" ಎಂದು ಅಯನ ಶಬ್ದದಿಂದ "ಸಿದ್ಧೋಪಾಯವೂ" ನಮಶ್ಶಬ್ದದಿಂದ ಸಾಧ್ಯೋಪಾಯವೂ ವಿವಕ್ಷಿತವೆಂದು ಅಭಿಪ್ರಾಯಪಟ್ಟು, ಆ ಅಧಿಕಾರದಲ್ಲಿ ಇದರ ಪರಿಶೋಧನೆಯನ್ನು ಪ್ರಾಪ್ತಸ್ಥಳದಲ್ಲಿ ಮಾಡುವೆ, ಎಂದು ಆಚಾರ್ಯರು ಪ್ರತಿಜ್ಞೆಮಾಡಿ, ಈ ಅಧಿಕಾರದಲ್ಲಿ ಆ ಪರಿಶೋಧನೆ ಮಾಡಲು **"ಉಪಾಯ ಸ್ವಪ್ರಾಪ್ತೇಃ"** ಎಂದಾರಂಭಿಸಿ ಅನುಗ್ರಹಿಸುತ್ತಾರೆ.

ಸಃ–ಶೇಷಿಯೂ, ಸಹಜಕಾರುಣ್ಯ ವಿಶಿಷ್ಟನೂ, ಆಗಿರುವುದರಿಂದ ಸರ್ವರಕ್ಷಕನಾಗಿ ಪ್ರಸಿದ್ಧನಾದ, **ಭಗವಾನ್** ರಕ್ಷಣೋಪಯುಕ್ತ ಷಾಡ್ಗುಣ್ಯ ಪರಿಪೂರ್ಣನಾದ ಭಗವಂತನು, **ಸ್ವಪ್ರಾಪ್ತೇಃ**–ತನ್ನನ್ನು ಪಡೆಯುವುದಕ್ಕೆ, ಸ್ವವಿಷಯವಾದ ಪರಿಪೂರ್ಣಾನುಭವವನ್ನು ಹೊಂದಲು ಎಂದರ್ಥ. **ಉಪಾಯಃ**–ತಾನೇ ಉಪಾಯವೆಂದು, **ಉಪನಿಷದಧೀತಃ**– "ಅಮೃತಸ್ಯೈಷಸೇತುಃ," ಯ ಆತ್ಮದಾ ಬಲದಾ, "ಯಮೇವೈಷವೃಣುತೇತೇನಲಭ್ಯಃ", ಧಾತುಃ ಪ್ರಸಾದಾನ್ಮಹಿಮಾನ ಮೀಶಮ್" ಇತ್ಯಾದಿ ಉಪನಿಷದ್ವಾಕ್ಯಗಳಲ್ಲಿ ಹೇಳಲ್ಪಟ್ಟವನಾಗಿದ್ದಾನೆ. ಹಾಗಾದರೆ ಭಕ್ತಿ, ಪ್ರಪತ್ತಿಗಳು ಉಪಾಯಗಳೆಂಬುದು ಹೇಗೆ ಎಂದರೆ, ಅದನ್ನು **ಪ್ರಸತ್ತ್ಯೈತಸ್ಯೋಕ್ತೇ** ಎಂದಾರಂಭಿಸಿ ವಿವರಿಸುತ್ತಾರೆ. **ತಸ್ಯ ಪ್ರಸತ್ತ್ಯೈ** ಅವನ ಪ್ರಸನ್ನತೆಗೋಸ್ಕರ–ಆದಾಗಿ ಜೀವರುಗಳು ಅನಾದಿಯಾಗಿ ಮಾಡಿರುವ ಭಗವದಾಜ್ಞಾತಿ ಲಂಘನ ರೂಪ ಅಪರಾಧಗಳಿಂದ ಭಗವಂತನು ಕಲುಷಿತನಾಗಿದ್ದಾನೆ. ಆ ಕಾಲುಷ್ಯ ನಿವೃತ್ತಿಗೋಸ್ಕರವೂ ಸರ್ವಮುಕ್ತಿ ಪ್ರಸಂಗವೂ, ವೈಷಮ್ಯ ನೈರ್ಘೃಣ್ಯಗಳೂ ತನಗೆ ಉಂಟಾಗದಿರಲೂ ಸಹ ಜೀವಕೃತ ವ್ಯಾಜ ರೂಪವಾದ ಉಪಾಯವನ್ನು ಅವಲಂಬಿಸಿಯೇ ಮೋಕ್ಷವನ್ನು ಕೊಡಲು ಇಚ್ಛಿಸುತ್ತಾನೆಯಾದ್ದರಿಂದ, ಅವನ ಪ್ರಸನ್ನತೆಗಾಗಿ **ಪ್ರಪದನನಿದಿ ಧ್ಯಾಸನಗತೀ**–ಪ್ರಪತ್ತಿ, ಭಕ್ತಿ, ಎಂಬ ಎರಡು ಮಾರ್ಗಗಳು, **ಉಕ್ತೇ**–ಹಿಂದಿ–

ಉಪಾಯೋಪೇಯಸ್ವರೂಪ ನಿರೂಪಣಮ್

ಇವರ್‌ಹಳುಕ್ಕು (ಇನ್ವಿರುವರ್‌ಕ್ಕುಂ) ಕರ್ತವ್ಯಮಾನ ಉಪಾಯಮಾವದು ? ಒರು ಜ್ಞಾನವಿಕಾಸವಿಶೇಷಮ್. ಇತ್ತಾಲೇ ಸಾಧ್ಯಮಾಯ್ ಪ್ರಾಪ್ತಿರೂಪಮಾನ ಉಪೇಯಮಾವದು ? ಒರು ಜ್ಞಾನವಿಕಾಸವಿಶೇಷಮ್.

ತ್ಯಾತ್ಮಾನಂಧ್ಯಾಯಥ, (ಉಪಾಸನೆ), ಓಮಿತ್ಯಾತ್ಮಾನಂಯುಂಜೀತ (ಶರಣಾಗತಿ) ಭಜಸ್ವಮಾಮ್ (ಉಪಾಸನೆ), ತಮೇವ ಶರಣಂಗಚ್ಛ (ಶರಣಾಗತಿ), ಮಾಮೇಕಂ ಶರಣಂವ್ರಜ, ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ (ಶರಣಾಗತಿ), ಇತ್ಯಾದಿ ಶ್ರುತಿ ಸ್ಮೃತಿಗಳಲ್ಲಿ ಹೇಳಲ್ಪಟ್ಟಿವೆ. ಆದಾಗಿ ಭಗವಂತನು ಸರ್ವಜ್ಞನಾಗಿಯೂ ಸರ್ವರಕ್ಷಕನಾಗಿಯೂ, ಪರಮ ಕಾರುಣಿಕನಾಗಿಯೂ ಸಿದ್ಧೋಪಾಯನಾಗಿಯೂ ಇದ್ದರೂ, ಜೀವರುಗಳು ಮಾಡಿರುವ ಅನಾದ್ಯಾಜ್ಞಾತಿಲಂಘನದಿಂದ ಕುಪಿತನಾಗಿದ್ದಾನೆ. ಆ ಕೋಪವು ತೀರಲು ಶಾಸ್ತ್ರಗಳಲ್ಲಿ ವಿಹಿತವಾದ ಭಕ್ತಿ ಪ್ರಪತ್ತಿರೂಪ ಸಾಧ್ಯೋಪಾಯಗಳಲ್ಲಿ ಒಂದನ್ನು ಅನುಷ್ಠಿಸಿಯೇ ತೀರಬೇಕು. ಇವು ವ್ಯವಹಿತೋಪಾಯಗಳು ಇವುಗಳನ್ನು ವ್ಯಾಜವಾಗಿಟ್ಟುಕೊಂಡೇ ಭಗವಂತನು ಬದ್ಧ ಜೀವನನ್ನು ರಕ್ಷಿಸುತ್ತಾನೆಂಬುದು ಅಪ್ರಕಂಪ್ಯವಾದ ಸಿದ್ಧಾಂತ

ಹಾಗಾದರೆ ಏಕೆ ಎಲ್ಲರೂ ಈ ಭಕ್ತಿ ಪ್ರಪತ್ತಿಗಳಲ್ಲೊಂದನ್ನು ಅನುಷ್ಠಿಸುತ್ತಿಲ್ಲವೆಂದರೆ **ತದಾರೋಹಃ ಪುಂಸಃ** ಎಂದಾರಂಭಿಸಿ ಸಮಾಧಾನ ಹೇಳುತ್ತಾರೆ. **ತದಾರೋಹಃ**–ಆ ಭಕ್ತಿ ಪ್ರಪತ್ತಿಗಳಲ್ಲೊಂದನ್ನು ಅನುಷ್ಠಿಸುವುದು **ಪುಂಸಃ, ಮಹತಾ ಸುಕೃತ ಪರಿಪಾಕೇನ**–ಬದ್ಧ ಜೀವಿಗೆ, ಅತಿ ದೊಡ್ಡದಾದ ಸುಕೃತ ಪರಿಪಾಕದಿಂದ ಉಂಟಾಗುತ್ತದೆ ಆದಾಗಿ ಅನಾದಿ ಚಿತ್ರ ಪ್ರವಾಹ ರೂಪವಾದ ಕರ್ಮ, ಅವಿದ್ಯಾರೂಪ ಚಕ್ರದಲ್ಲಿ ಸುತ್ತುತ್ತಿರುವ ಬದ್ಧ ಜೀವಿಗೆ ಯಾದೃಚ್ಛಿಕಾದಿ ಸುಕೃತ ಪರಂಪರಾ ಮೂಲವಾಗಿ ಸದಾಚಾರ್ಯ ಪ್ರಾಪ್ತಿಯು ಏರ್ಪಟ್ಟು ಭಕ್ತಿ ಪ್ರಪತ್ತಿಗಳಲ್ಲೊಂದನ್ನು ಅನುಷ್ಠಿಸುವ ಮಹಾಭಾಗ್ಯವು ದೊರಕುತ್ತದೆ ಎಂದರ್ಥ **ತತ್ರಾಪಿ**– ಭಕ್ತಿ ಪ್ರಪತ್ತಿಗಳಲ್ಲೊಂದನ್ನು ಅನುಷ್ಠಿಸುವುದರಲ್ಲೂ, **ಅದಕ್ಕೆ** ಕಾರಣವಾದ ಸುಕೃತ ಪರಿಪಾಕದಲ್ಲಿಯೂ, **ಅಖಿಲ ನಿರ್ಮಾಣ ನಿಪುಣಃ**–ಸಮಸ್ತ ಚೇತನಾ ಚೇತನಾತ್ಮಕ ಜಗತ್ಸೃಷ್ಟಿ ಸ್ಥಿತಿ ಸಂಹಾರ ಮೋಕ್ಷಪ್ರದ ಲೀಲೆಯಲ್ಲಿ ನಿಪುಣನಾದ ಭಗವಂತನು ಸಿದ್ಧೋಪಾಯನಾಗಿ **ಸ್ವಯಂ ನಿದಾನಮ್**–ತಾನೇ ಕಾರಣಭೂತನು, ಅಂದರೆ ಸ್ವಪ್ರಾಪ್ತಿಗೆ ತಾನೇ ಕಾರಣ ಭೂತನಾದಂತೆ, ಭಕ್ತಿ ಪ್ರಪತ್ತಿರೂಪ ಉಪಾಯಾನುಷ್ಠಾನಕ್ಕೆ ಪ್ರತಿಬಂಧಕಗಳಾದ ಸಕಲಪಾಪಗಳನ್ನೂ ತೊಲಗಿಸಿ ಕಾರಣ ಭೂತನಾಗಿದ್ದಾನೆಂದರ್ಥ ಇದರಿಂದ ಮೋಕ್ಷಕ್ಕೆ ಭಗವಂತನೇ ಅವ್ಯವಹಿತನಾದ ಸಿದ್ಧೋಪಾಯನು, ಆವನ ಸಾಂಕರಣಾರ್ಥವಾಗಿ ಸಾಧ್ಯಗಳಾದ ಭಕ್ತಿ ಪ್ರಪತ್ತಿಗಳು ವ್ಯವಹಿತೋಪಾಯಗಳು, ಎಂದು ನಿಗದಿಸಲ್ಪಟ್ಟಿತು.

ಉಪಾಯೋಪೇಯಗಳ ಸ್ವರೂಪ :

ಅನಂತರ ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳ ಸ್ವರೂಪವನ್ನು **ಇವರ್‌ಹಳುಕ್ಕು ಕರ್ತವ್ಯಮಾನ** ಎಂದಾರಂಭಿಸಿ ಆಚಾರ್ಯರು ಉಪಪಾದಿಸುತ್ತಾರೆ. **ಇವರ್‌ಹಳುಕ್ಕು**–ಹಿಂದಿನ ಅಧಿಕಾರದಲ್ಲಿ ಹೇಳಿದ ಸದ್ವಾರಕಾದ್ವಾರಕ ಪ್ರಪತ್ತಿ ನಿಷ್ಠರಿಗೆ, **ಕರ್ತವ್ಯ ಮಾನ**-ಮಾಡಬೇಕಾದುದಾಗಿ ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಉಪಾಯವು ಒಂದು ಜ್ಞಾನ ವಿಕಾಸ ವಿಶೇಷ. ಇದರಿಂದ ಸಾಧ್ಯವಾದ ಪ್ರಾಪ್ತಿರೂಪವಾದ ಉಪೇಯವು ಒಂದು ಜ್ಞಾನ ವಿಕಾಸ ವಿಶೇಷ, ಆದಾಗಿ ಉಪಾಯ ರೂಪ ಜ್ಞಾನ ವಿಕಾಸ ವಿಶೇಷವು, ಶಾರೀರಕ ಶಾಸ್ತ್ರದಲ್ಲಿ ಸರ್ವವಿದ್ಯಾನುಯಾಯಿಯಾಗಿ ನಿರ್ಣಯಿಸಲ್ಪಟ್ಟ, ಸತ್ಯ ಜ್ಞಾನಾನಂತ, ಅಮಲ, ಆನಂದಮಯ ಸ್ವರೂಪ ಗುಣಗಳಿಂದ ಕೂಡಿದ ಆಯಾಯಾ ವಿದ್ಯೆಗಳಿಗೆ ಪ್ರತಿನಿಯತವಾದ ಗುಣ ವಿಗ್ರಹಗಳಿಂದ ಕೂಡಿದ ಬ್ರಹ್ಮ ವಿಷಯಕವಾಗಿರುತ್ತದೆ. ಅಂದರೆ ಉಪಾಸನಾ

ಇವತ್ತಿಲ್ ಉಪಾಯುಮಾಹಿರಜ್ಞಾನವಿಕಾಸವಿಶೇಷಂ, ಕರಣಸಾಪೇಕ್ಷಮುಮಾಯ್ ಶಾಸ್ತ್ರವಿಹಿತಮುಮಾಯ್ ಸತ್ಯತ್ವಾದಿಹಳಾನ ಸ್ವರೂಪನಿರೂಪಕಧರ್ಮಙ್ಗಳ್ ಅಞ್ಜಿನ್ನೋಡೇ ಕೂಡಿನ ಅವ್ವೋ ವಿದ್ಯಾವಿಶೇಷ ಪ್ರತಿನಿಯತ ಗುಣಾದಿಹಳಿನಾಲೇ ನಿಯತ ಬ್ರಹ್ಮ ವಿಷಯುಮುಮಾಯಿರುಕ್ಕುಮ್. ಉಪೇಯುಮಾಹಿರ ಜ್ಞಾನ ವಿಕಾಸವಿಶೇಷಮ್ ಕರಣ ನಿರಪೇಕ್ಷಮುಮಾಯ್, ಸ್ವಭಾವ ಪ್ರಾಪ್ತಮುಮಾಯ್, ಗುಣವಿಭೂತ್ಯಾದಿಗಳೆಲ್ಲಾತ್ತಾಲುಮ್ ಪರಿಪೂರ್ಣಬ್ರಹ್ಮವಿಷಯುಮುಮಾಯಿರುಕ್ಕುಮ್

ತ್ಮಕವಾದ ಜ್ಞಾನವು ಸ್ವರೂಪ ನಿರೂಪಕ ಧರ್ಮಗಳಿಂದಲೂ ಕೂಡಿದ ಹಾಗೆಯೆ, ನಿರೂಪಿತ ಸ್ವರೂಪ ವಿಶೇಷಣಗಳಾದ ಆಯಾಯಾ ವಿದ್ಯಾನಿಯತಗಳಾದ ಕೆಲವು ಧರ್ಮಗಳಿಂದಲೂ, ಆಯಾಯಾ ವಿದ್ಯೆಗಳಲ್ಲಿ ಹೇಳಲ್ಪಟ್ಟ ವಿಗ್ರಹ ವಿಶಿಷ್ಟವಾಗಿಯೂ ಇರುವ ಪರಬ್ರಹ್ಮ ವಿಷಯವಾದದ್ದು, ಪ್ರಪತ್ತಿಯೂ ಸಕೃದುಪಾಸನ ರೂಪ ಜ್ಞಾನವು. ಅದೂ ಇಲ್ಲಿ ವಿವಕ್ಷಿತ ಈ ಉಪಾಸನಾತ್ಮಕ ಜ್ಞಾನದಿಂದ ಪ್ರಾಪಿಸಲ್ಪಡುವ ಉಪೇಯ ರೂಪವಾದ ಜ್ಞಾನವು ಜೀವಾತ್ಮನಿಗೆ ಮುಕ್ತಿ ದಶೆಯಲ್ಲಿ ವಿಕಾಸವಾಗಿ ಪ್ರಾಪ್ಯವಾದ ಸ್ವಸ್ವರೂಪಾವಿರ್ಭಾವ ವಿಶಿಷ್ಟ ಪರಮಾತ್ಮ ಸ್ವರೂಪ ಗುಣ ವಿಗ್ರಹ ವಿಭೂತಿ ವಿಶಿಷ್ಟವಾದ ಪರಬ್ರಹ್ಮ ವಿಷಯವಾದದ್ದು ಇವನ್ನು ಆಚಾರ್ಯರು **ಇವಟ್ರಿಲ್** ಎಂದಾರಂಭಿಸಿ ವಿವರಿಸುತ್ತಾರೆ ಆದಾಗಿ ಈ ಎರಡು ವಿಧ ಜ್ಞಾನಗಳಲ್ಲಿ ಉಪಾಯಾತ್ಮಕ ಜ್ಞಾನವಿಕಾಸ ವಿಶೇಷವು-ಭಕ್ತಿ ಪ್ರಪತ್ತಿ ರೂಪವಾದದ್ದು. **ಕರಣಸಾಪೇಕ್ಷಮುಮಾಯ್**-ನಿರೂಪಕ ಧರ್ಮಗಳೈದರೊಡನೆ ಕೂಡಿದ, ಮನೋರೂಪ ಕರಣಸಾಪೇಕ್ಷವಾಗಿಯೂ, **ಶಾಸ್ತ್ರವಿಹಿತಮಾಯ್**–ಓಮಿತ್ಯಾತ್ಮಾನಂಧ್ಯಾಯಥ, ಓಮಿತ್ಯಾತ್ಮಾನಂ ಯುಂಜೀತ, ಭಜಸ್ವಮಾಂ, ಮಾಮೇಕಂ ಶರಣಂವ್ರಜ ಇತ್ಯಾದಿ ಶಾಸ್ತ್ರಗಳಲ್ಲಿ ಕರ್ತವ್ಯವಾಗಿ ವಿಹಿತವಾದ, **ಸತ್ಯತ್ವಾದಿ ಸ್ವರೂಪ ನಿರೂಪಕ ಧರ್ಮಂಗಳ್ ಅಂಜೋಡೇಕೂಡಿನ** – ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ, ಅಮಲತ್ವ ರೂಪ ಐದು ಗುಣಗಳು ಸ್ವರೂಪ ನಿರೂಪಕಗಳು. ಬ್ರಹ್ಮ ಶಬ್ದಾರ್ಥವು ಲಕ್ಷ್ಮೀ ವಿಶಿಷ್ಟವು ಎಂಬುದನ್ನು ಸೂಚಿಸಲು ಇಬ್ಬರಿಗೂ ಸಮಾನವಾದ ಸ್ವರೂಪ ನಿರೂಪಕ ಧರ್ಮಗಳೈದನ್ನು ಮಾತ್ರ ಇಲ್ಲಿ ಆಚಾರ್ಯರು ಹೇಳಿರುತ್ತಾರೆ ಆ ಐದು ಗುಣಗಳಿಂದ ಕೂಡಿದ **ಅವ್ವೋವಿದ್ಯಾ ವಿಶೇಷ ಪ್ರತಿ ನಿಯತ ಗುಣಾದಿಹಳಿನಾಲೇ**–ಸದ್ವಿದ್ಯಾ, ದಹರ ವಿದ್ಯಾ, ಶಾಂಡಿಲ್ಯ ವಿದ್ಯಾ, ನ್ಯಾಸವಿದ್ಯಾದಿ ರೂಪ ವಿದ್ಯಾವಿಶೇಷಗಳಿಗೆ ವ್ಯವಸ್ಥಿತವಾದ ಗುಣಗಳು ಭಾಷ್ಯಾದಿಗಳಲ್ಲಿ ಹೇಳಲ್ಪಟ್ಟವೆ ಪ್ರಪತ್ತಿ ವಿದ್ಯೆಗೆ ನಿರಪೇಕ್ಷೋಪಾಯತ್ವವು ಪ್ರತಿ ನಿಯತವಾದ ಗುಣ. **ಗುಣಾದಿ**-ಎಂಬಲ್ಲಿ ಆದಿಪದವು ವಿಗ್ರಹಾದಿಗಳನ್ನು ತಿಳಿಸುತ್ತದೆ. ಈ ವ್ಯವಸ್ಥಿತ ಗುಣ ವಿಗ್ರಹಗಳಿಂದ, **ನಿಯತ**-ವ್ಯಾಪ್ತವಾದ **ಬ್ರಹ್ಮವಿಷಯುಮು ಮಾಯಿರುಕ್ಕುಮ್**-ಪರಬ್ರಹ್ಮ ವಿಷಯವಾಗಿರುತ್ತದೆ. ಆದಾಗಿ **ಭಕ್ತಿ ಪ್ರಪತ್ತಿ**ಗಳು ಶಾಸ್ತ್ರವಿಹಿತವಾಗಿ ಮನಸ್ಸೆಂಬ ಕರಣದಿಂದ ಪರಬ್ರಹ್ಮ ವಿಷಯವಾದ **ಧ್ಯಾನಾತ್ಮಕ** ರೂಪ **ಜ್ಞಾನ** ವಿಕಾಸ ವಿಶೇಷಗಳು ಎಂಬುದು ತಾತ್ಪರ್ಯ

"ಉಮ್" ಎಂಬುದು ಗುಣವಿಗ್ರಹಾದಿಗಳನ್ನು ತಿಳಿಸುತ್ತದೆ **ಉಪೇಯು ಮಾಹಿರ ಜ್ಞಾನ ವಿಕಾಸ ವಿಶೇಷಮ್** ಉಪಾಯ ಜ್ಞಾನಕ್ಕಿಂತ ಬೇರೆ ಎಂದು ನಿರೂಪಿಸುತ್ತಾರೆ. ಆದಾಗಿ ಉಪೇಯ ಜ್ಞಾನವಿಕಾಸ ವಿಶೇಷವು–ಉಪಾಯಾನುಷ್ಠಾನದಿಂದ ಹೊಂದಲ್ಪಡುವ ಜ್ಞಾನವಿಕಾಸ ವಿಶೇಷವು. **ಕರಣನಿರಪೇಕ್ಷಮುಮಾಯ್** ಮೋಕ್ಷದಲ್ಲಿ ಅಪ್ರಾಕೃತವಾದ ಚಕ್ಷುರಾದಿ ಕರಣಗಳಿದ್ದರೂ ಜ್ಞಾನವಿಕಾಸಕ್ಕೆ ಅವುಗಳ ಅಪೇಕ್ಷೆಯಿಲ್ಲ. ಅಲ್ಲಿ ಕೆಲವು ಮುಕ್ತರು ದೇಹವಿಲ್ಲದೇನೆ ಭಗವದನುಭವವನ್ನು ಮಾಡುವುದರಿಂದ, ಜ್ಞಾನವಿಕಾಸಕ್ಕೆ ಕರಣ ನಿರಪೇಕ್ಷತ್ವವನ್ನು ಒಪ್ಪಬೇಕು. ಆದ್ದರಿಂದ ಮುಕ್ತದಶೆಯಲ್ಲಿ ಉಂಟಾಗುವ ಉಪೇಯವಾದ ಜ್ಞಾನವಿಕಾಸ ವಿಶೇಷವು ಕರಣ ನಿರಪೇಕ್ಷವೂ ಆಹುದು. **ಸ್ವಭಾವಪ್ರಾಪ್ತಮುಮಾಯ್**–"ಯಥಾನಕ್ರಿಯತೇ ಜ್ಯೋತ್ಸ್ನಾ ಮಲಪ್ರಕ್ಷಾಳನಾನ್ಮಣೇಃ। ಹೇಯವನ್ನೀಯತೇ ವ್ಯಕ್ತಿಂ ಅಸತಃ ಸಂಭವಃ ಕುತಃ॥" ಎಂಬಂತೆ ರತ್ನವನ್ನು ತೊಳೆದರೆ ಅದರ ಸ್ವತಸ್ಸಿದ್ಧವಾದ ಪ್ರಕಾಶವು ಯಾವಾಗಲೋ ಪ್ರಕಾಶಿಸುತ್ತದೆ. ಹೊಂದಿ ಇಲ್ಲದಿರುವ ಪ್ರಕಾಶವು ಉಂಟಾಗುವುದಿಲ್ಲ.

ಉಪಾಸಿತ ಗುಣಾದೇರ್ಯಾ ಪ್ರಾಪ್ತಾವಪ್ಯಬಹಿಷ್ಕ್ರಿಯಾ ।
ಸಾ ತತ್ಕ್ರತುನಯಗ್ರಾಹ್ಯಾನಾಕಾರಾನ್ತರವರ್ಜನಮ್ ॥ ೪ ॥

ಪ್ರಾಪ್ತಿರೂಪಮಾನ ಇವ್ವನುಭವತ್ತಿನುಡೈಯ ಪರೀವಾಹಮಾಯ್‌ಕ್ಕೊಂಡು ಕೈಙ್ಕರ್ಯಮ್ ಉಪೇಯಮ್.

ರತ್ನವು ಮುಂಚೆ ಕೊಳೆಯಿಂದ ಮುಚ್ಚಲ್ಪಟ್ಟು ಸ್ವಲ್ಪ ಪ್ರಕಾಶದಿಂದ ಪ್ರಕಾಶಿಸುತ್ತಿತ್ತು. ತೊಳೆದ ನಂತರ ಕೊಳೆಯೆಲ್ಲಾ ಹೋಗಿ ಪೂರ್ಣವಾದ ಪ್ರಕಾಶದಿಂದ ಪ್ರಕಾಶಿಸುವಂತೆ, ಬದ್ಧದಶೆಯಲ್ಲಿ ಪುಣ್ಯ ಪಾಪ ರೂಪ ಅವಿದ್ಯೆಯಿಂದ ಅಪೂರ್ಣವಾಗಿ ಪ್ರಕಾಶಿಸುತ್ತಿದ್ದ ಜ್ಞಾನವು, ಆ ಅವಿದ್ಯೆಯು ಕಳೆದ ಮೇಲೆ ಮುಕ್ತದಶೆಯಲ್ಲಿ **ಸ್ವಭಾವ ಪ್ರಾಪ್ತ**ವಾದ ಆ ಜ್ಞಾನವು ಪೂರ್ಣ ಪ್ರಕಾಶದಿಂದ ಪ್ರಕಾಶಿಸುತ್ತದೆಯೆಂಬುದು ತಾತ್ಪರ್ಯ. **ಗುಣವಿಭೂತ್ಯಾದಿಹಳೆಲ್ಲಾತ್ತಾಲುಂ ಪರಿಪೂರ್ಣಬ್ರಹ್ಮ ವಿಷಯಮುಮಾಯಿರುಕ್ಕುಮ್**–ಮುಕ್ತಿ ದಶೆಯಲ್ಲಿ ಸರ್ವ ಪ್ರತಿಬಂಧಕಗಳೂ ನಿಃಶೇಷವಾಗಿ ತೊಲಗಿದ ಮೇಲೆ ಅಜ್ಞಾತಾಂಶಕ್ಕೆ ಪ್ರಸಕ್ತಿಯೇ ಇಲ್ಲ. ಆದರಿಂದ ಮುಕ್ತನ ಉಪೇಯವಾದ (ಪ್ರಾಪ್ಯವಾದ) ಜ್ಞಾನವಿಕಾಸ ವಿಶೇಷವು ಪರಿಪೂರ್ಣಬ್ರಹ್ಮವೇನು, ಅವನ ಗುಣ ವಿಭೂತಿಗಳೇನು, ಇವೆಲ್ಲವನ್ನೂ ಸಾಕ್ಷಾತ್ಕರಿಸಿ ಕೊಂಡಿರುವುದು ಎಂದರ್ಥ. **ವಿಷಯಮುಮಾಯ್** ಎಂಬಲ್ಲಿಯ "**ಉಮ್**" ಎಂಬ ಪದವು "ಚ" ಕಾರಾರ್ಥಕ. ಬ್ರಹ್ಮವನ್ನೂ ಅವನ ಗುಣವಿಭೂತ್ಯಾದಿ ವಿಶೇಷಣಗಳೆಲ್ಲವನ್ನೂ ಸಾಕ್ಷಾತ್ಕರಿಸುತ್ತದೆ ಎಂದರ್ಥ.

ಹಾಗಾದರೆ "ತಂಯಥಾಯಥೋಪಾಸತೇ, ತಥೈವಭವತಿ, ಯಥಾಕ್ರತುರಸ್ಮಿನ್ ಲೋಕೇ ಪುರುಷೋಭವತಿ । ತಥೇತಃ ಪ್ರೇತ್ಯಭವತಿ" ಯಾವ ರೀತಿಯಾದ ಉಪಾಸನೆಯೋ, ಆ ರೀತಿಯಾದ ಪ್ರಾಪ್ತಿ. ಉಪಾಸನಾಕಾಲದಲ್ಲಿ ಆಯಾಯಾ ವಿದ್ಯೆಗೆ ನಿಯತವಾದ ಕೆಲವೇ ಗುಣ, ವಿಗ್ರಹ ವಿಭೂತಿ ವಿಶಿಷ್ಟ ಭಗವದನುಭವವೋ, ಫಲದಶೆಯಲ್ಲಿಯೂ ಅದೇ ರೀತಿಯಾದ ನಿಯತವಾದ ಗುಣ ವಿಗ್ರಹ ವಿಭೂತಿ ವಿಶಿಷ್ಟವಾದ ಭಗವದನುಭವವು ಏರ್ಪಡುತ್ತದೆ ಎಂಬ ತತ್ಕ್ರತುನ್ಯಾಯಕ್ಕೆ ವಿರುದ್ಧವಾಗಿ ಫಲದಶೆಯಲ್ಲಿ (ಉಪೇಯ ದಶೆಯಲ್ಲಿ) ಗುಣ ವಿಗ್ರಹ ವಿಭೂತಿಗಳೆಲ್ಲದರಿಂದಲೂ ಪರಿಪೂರ್ಣವಾದ ಭಗವದನುಭವವು ಏರ್ಪಡುತ್ತದೆ ಎಂದು ಹೇಳುವುದು ಸರಿಯೇ ಎಂಬ ಶಂಕೆಗೆ ಸಮಾಧಾನವಾಗಿ **ಉಪಾಸಿತ ಗುಣಾದೇರ್ಯಾ** ಎಂದಾರಂಭಿಸಿ ತತ್ಕ್ರತುನ್ಯಾಯಕ್ಕೆ ಸರಿಯಾದ ಅರ್ಥವನ್ನು ಉಪಪಾದಿಸುತ್ತಾರೆ. ಅದಾಗಿ **ಉಪಾಸಿತ ಗುಣಾದೇಃ**–ಆಯಾಯಾ ವಿದ್ಯೆಗಳಲ್ಲಿ ಉಪಾಸನೆ ಮಾಡಲ್ಪಟ್ಟ ಪ್ರತಿನಿಯತಗಳಾದ ಗುಣ ವಿಗ್ರಹ ವಿಭೂತಿಗಳಿಗೆ (ಆದಿ ಶಬ್ದವು ವಿಗ್ರಹ ವಿಭೂತಿಗಳನ್ನು ತಿಳಿಸುತ್ತದೆ) **ಪ್ರಾಪ್ತಾವಪಿ**–ಪ್ರಾಪ್ತಿ ರೂಪವಾದ ಉಪೇಯ ಜ್ಞಾನದಲ್ಲಿಯೂ **ಅಬಹಿಷ್ಕ್ರಿಯಾ**–ಬಹಿಷ್ಕಾರವಿಲ್ಲ. ಆ ಗುಣ ವಿಭೂತ್ಯಾದಿಗಳು **ಪ್ರಕಾಶಿಸದೇ** ಇರುವುದಿಲ್ಲವೆಂದರ್ಥ. ಅಂದರೆ ಉಪಾಸನ ದಶೆಯಲ್ಲಿ ಪ್ರಕಾಶಿಸುತ್ತಿದ್ದ ಗುಣ ವಿಗ್ರಹ ವಿಭೂತ್ಯಾದಿಗಳು ಪ್ರಾಪ್ತಿ ರೂಪ ಅನುಭವ ದಶೆಯಲ್ಲೂ ಪ್ರಕಾಶಿಸಿಯೇ ತೀರುತ್ತವೆ. **ಸಾ**–ಆ ಅಬಹಿಷ್ಕಾರವು–ಆ ಗುಣಾದಿಗಳು ಪ್ರಕಾಶಿಸದೇ ಇರುವುದಿಲ್ಲವೆಂಬುದು, **ತತ್ಕ್ರತುನಯಗ್ರಾಹ್ಯಾ**–ತತ್ಕ್ರತುನ್ಯಾಯಕ್ಕೆ ಅರ್ಥವಾಗಿ ಗ್ರಹಿಸಬೇಕೇ ವಿನಹ, **ನಾಕಾರಾಂತರವರ್ಜನಂ**–ಉಪಾಸನೆಗೆ ವಿಷಯವಲ್ಲದ ಗುಣಾದಿಗಳು ಪ್ರಾಪ್ತಿ ದಶೆಯಲ್ಲಿಲ್ಲವೆಂಬುದು ಅರ್ಥವಲ್ಲ. ಇದನ್ನು ಒಪ್ಪದೆ ಹೋದರೆ, ಪ್ರತಿ ಬ್ರಹ್ಮ ವಿದ್ಯಾನಿಷ್ಠನಿಗೂ ಆಯಾಯಾ ಬ್ರಹ್ಮ ವಿದ್ಯಾ ಪ್ರತಿನಿಯತಗಳಾದ ಗುಣಾನುಭವ ಮಾತ್ರ ಮುಕ್ತಿ ದಶೆಯಲ್ಲಿ ಏರ್ಪಡುತ್ತದೆ ಎಂದಾಗಿ ಆನಂದ ತಾರತಮ್ಯವನ್ನು ಒಪ್ಪಿ, ಮಧ್ವಮತದಲ್ಲಿ ಪ್ರವೇಶಿಸಬೇಕಾಗುತ್ತದೆ. ಆಗ "ಸರ್ವಂಹಪಶ್ಯಃ ಪಶ್ಯತಿ, ನಿರಂಜನಃ ಪರಮಂ ಸಾಮ್ಯಮು...

ಭಗವತಃ ಉಪಾಯೋಪೇಯತ್ವಮ್

ಇವ್ವುಪಾಯರೂಪಮಾಯುಮ್, ಪ್ರಾಪ್ತಿರೂಪಮಾಯುಮ್, ಇರುಕ್ಕಿರ ಜ್ಞಾನತ್ತುಕ್ಕು ವಿಷಯಮಾಯ್ಕ್ಕೊಂಡು ಫಲಪ್ರದತ್ವ ಭೋಗ್ಯತ್ವಾದಿ ವೇಷತ್ತಾಲೇ ಈಶ್ವರನುಕ್ಕು ಉಪಾಯತ್ವಮುಮ್ ಉಪೇಯತ್ವಮುಮ್.

ಭಕ್ತಪ್ರಪನ್ನ ವಿಷಯೇ ಭಗವತಃ ಉಪಾಯತ್ವ ಪ್ರಕಾರಃ

ಇವ್ವೀಶ್ವರನುಡೈಯ ಉಪಾಯತ್ವಮ್ ಅದ್ವಾರಕ ಪ್ರಪತ್ತಿನಿಷ್ಠ ಪಕ್ಕಲ್ ಉಪಾಯಾನ್ತರ ಸ್ಥಾನ ನಿವೇಶತ್ತಾಲೇ ವಿಶಿಷ್ಟಮಾಯಿರುಕ್ಕುಮ್. ಮಱ್ಱ ಅಧಿಕಾರಿಕ್ಕುಮ್ ಕರ್ಮಯೋಗಾರಂಭಮ್ ಮುದಲಾಹ ಉಪಾಸನಪೂರ್ತಿಪರ್ಯನ್ತಮಾಹ ನಡುವುಳ್ಳ ಕರ್ತವ್ಯಙ್ಗಳಿಲ್ ಅತ್ಯನ್ತಾಶಕ್ಯಮಾನ ನೇರ್ಹಳಿಲ್ ಇಪ್ಪ್ರಪತ್ತಿವಶೀಕೃತನಾನವೀಶ್ವರನ್ಪಹುನ್ದು ನಿನ್ರು ಅನ್ದ ದುಷ್ಕರ ಕರ್ತವ್ಯಙ್ಗಳಾಲೇ ವರುಮ್ ಪಾಪನಿವೃತ್ತಿಯೈಯುಮ್, ಸತ್ವೋನ್ಮೇಷಾದಿಗಳೈಯುಮ್ ಮುಣ್ಡಾಕ್ಕಿಕ್ಕೊಡುತ್ತು ಅವ್ವುಪಾಸನಮಾಹಿರ ಉಪಾಯತ್ತೈ ಫಲಪರ್ಯನ್ತಮಾಕ್ಕಿಕ್ಕೊಡುಕ್ಕುಮ್.

ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ. ಅದಾಗಿ ಈ ಪ್ರಾಪ್ತಿ ರೂಪವಾದ ಜ್ಞಾನ ವಿಕಾಸ ವಿಶೇಷವು ನಿರತಿಶಯ ಭೋಗ್ಯವಸ್ತ್ವನುಭವವಾದ್ದರಿಂದ, ಕೈಂಕರ್ಯ ಪರ್ಯಂತ ಪರಿಣಮಿಸಿ ಕೊಂಡಲ್ಲದೆ ಇರುವುದಿಲ್ಲವಾದ್ದರಿಂದ ಕೈಂಕರ್ಯವೂ ಭಕ್ತಿ ಪ್ರಪತ್ತಿ ರೂಪ ಉಪಾಯ ಜ್ಞಾನ ಸಾಧ್ಯವಾಗಿ ಉಪೇಯವಾಗುತ್ತದೆ.

ಈಶ್ವರನ ಉಪಾಯತ್ವವೂ ಉಪೇಯತ್ವವೂ, ಅವು ಭಕ್ತಪ್ರಪನ್ನರಿಗೆ ಉಪಯೋಗವಾಗುವ ಪ್ರಕಾರ

ಹೀಗೆ ಸಾಧ್ಯವಾದ ಉಪಾಯೋಪೇಯಗಳು ಭಿನ್ನಗಳಾಗಿ ಪೂರ್ವೋತ್ತರ ಕಾಲವೃತ್ತಿಗಳಾಗಿರುವಂತೆ ಸಿದ್ಧೋಪಾಯೋಪೇಯಗಳೂ ಇವೆಯೇ ಎಂಬ ಶಂಕೆಗೆ ಪರಿಹಾರವಾಗಿ **ಇವ್ವುಪಾಯ ರೂಪಮಾಯುಮ್ ಪ್ರಾಪ್ತಿ ರೂಪಮಾಯುಮ್** ಇತ್ಯಾದಿ ಅನುಗ್ರಹಿಸುತ್ತಾರೆ ಈ ಉಪಾಯ ರೂಪವಾಗಿಯೂ ಪ್ರಾಪ್ತಿರೂಪವಾಗಿಯೂ ಇರುವ ಜ್ಞಾನಕ್ಕೆ ವಿಷಯವಾಗಿ, ಫಲವನ್ನು ಕೊಡುವವನು ಭೋಗ್ಯಭೂತನು, ಎಂಬ ದೇ ಮೊದಲಾದ ಆಕಾರದಿಂದ ಈಶ್ವರನು ಉಪಾಯಭೂತನೂ, ಉಪೇಯ ಭೂತನೂ ಆಗಿದ್ದಾನೆ ಫಲಪ್ರದತ್ವ ದಶೆಯಲ್ಲಿ ಸಿದ್ಧೋಪಾಯನಾದ ಭಗವಂತನು ಮೋಕ್ಷಯಿಷ್ಯಾಮಿ ಎಂದು ಸಂಕಲ್ಪ ಮಾಡುತ್ತಾನೆ ಅವನೇ ಉಪೇಯ ಜ್ಞಾನವಿಷಯನಾಗಿ "ರಸಗ್ಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ" ಎಂಬ ರೀತಿಯಲ್ಲಿ ಮುಕ್ತರಿಗೆ ಆನಂದ ರೂಪನಾಗಿ ಭೋಗ್ಯನಾಗಿರುತ್ತಾನೆ, ಈ ದಶೆಯಲ್ಲಿ ಭಗವಂತನನ್ನು ಸಿದ್ಧೋಪೇಯನೆಂದು ವ್ಯವಹರಿಸುತ್ತೇವೆ **ಭೋಗ್ಯತ್ವಾದಿ** ಎಂಬಲ್ಲಿಯ ಆದಿ ಶಬ್ದಕ್ಕೆ ಉಪಾಯದಶೆಯಲ್ಲಿ ಪ್ರತಿಬಂಧಕ ನಿವರ್ತಕನಾಗಿಯೂ, ಉಪೇಯದಶೆಯಲ್ಲಿ ಕೈಂಕರ್ಯ ಪ್ರತಿ ಸಂಬಂಧಿಯಾಗಿಯೂ ಇರುತ್ತಾನೆಂದರ್ಥ **ಈಶ್ವರನುಕ್ಕು** ಎಂಬಲ್ಲಿ ಈಶ್ವರಶಬ್ದವು ಲಕ್ಷ್ಮೀ ಮತ್ತು ತತ್ಪತಿಯಾದ ನಾರಾಯಣನನ್ನು ತಿಳಿಸುತ್ತದೆ. ಈಶ್ವರ ಶಬ್ದವು ವ್ಯಾಸಜ್ಯ ವೃತ್ತಿಯಿಂದ ದ್ವಿನಿಷ್ಠ. ಆದ್ದರಿಂದ ಉಪಾಯೋಪೇಯತ್ವಗಳು ಮೇಲೆ ಹೇಳಿದ ರೀತಿಯಲ್ಲಿ ಇಬ್ಬರಿಗೂ ಉಂಟು ಅಂದರೆ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಂಬ ಸಂಕಲ್ಪವೂ, ಕೈಂಕರ್ಯ ಪ್ರತಿ ಸಂಬಂಧಿತ್ವವೂ ಲಕ್ಷ್ಮೀನಾರಾಯಣರಿಬ್ಬರಲ್ಲಿಯೂ ಅನ್ವಯಿಸುತ್ತದೆ.

ಈಶ್ವರನ ಈ ಉಪಾಯತ್ವವು ಅದ್ವಾರಕ, ಸದ್ವಾರಕಪ್ರಪತ್ತಿ ನಿಷ್ಠರ ವಿಷಯದಲ್ಲಿ ಸಮವಾಗಿದೆಯೇ ಎಂಬ ಪ್ರಶ್ನೆಗೆ ಸಮಾಧಾನವನ್ನು **ಇವ್ವೀಶ್ವರನುಡೈಯ ಉಪಾಯತ್ವಮ್** ಎಂದಾರಂಭಿಸಿ ಅನುಗ್ರಹಿಸುತ್ತಾರೆ. ಅದಾಗಿ ಈ ಈಶ್ವರನ ಉಪಾಯತ್ವವು ಅದ್ವಾರಕ ಪ್ರಪತ್ತಿ ನಿಷ್ಠನ ವಿಷಯದಲ್ಲಿ ಉಪಾಯಾಂತರ ಸ್ಥಾನ ನಿವೇಶದಿಂದ

ವಿಶಿಷ್ಟವಾಗಿರುತ್ತದೆ. ಅಂದರೆ ಸದ್ವಾರಕ ಪ್ರಪತ್ತಿ ನಿಷ್ಠನು ಅಂಗಪ್ರಪತ್ತಿಯನ್ನು ಮಾಡಿ ನಂತರ ಭಕ್ತಿಯೋಗವನ್ನೂ ಅನುಷ್ಠಿಸಿದರೆ ಕೊಡುವ ಫಲವನ್ನು ಈಶ್ವರನು ಸ್ವತಂತ್ರ ಪ್ರಪತ್ತಿ ನಿಷ್ಠನಿಗೆ ಪ್ರಪತ್ತಿಯನ್ನು ಅನುಷ್ಠಿಸಿದ ನಂತರ, ಭಕ್ತಿಯೋಗವನ್ನು ಮಾಡದೇನೆ, ಆ ಭಕ್ತಿಯೋಗವೆಂಬ ಉಪಾಯಾಂತರ ಸ್ಥಾನದಲ್ಲಿ "ತ್ವಮೇವೋಪಾಯ ಭೂತೋಮೇಭವ" ಎಂಬ ಭರ ಸ್ವೀಕಾರ ಪ್ರಾರ್ಥನೆಯಿಂದ, ನಿವೇಶಿಸಲ್ಪಟ್ಟವನಾಗಿ, ನಿರಪೇಕ್ಷ ರಕ್ಷಕತ್ವ ವಿಶಿಷ್ಟನಾಗಿರುತ್ತಾನೆ ಶ್ರೀಮದ್ವಯಾಧಿಕಾರದಲ್ಲಿ, "ಉಪಾಯಾಂತರಸ್ಥಾನತ್ತಿಲೇ ನಿವೇಶಿಕ್ಕೈಯಾವುದು ಎಂದಾರಂಭಿಸಿ ಎನ್ ತಲೈಯಿಲ್ ಉಪಾಯಾಂತರತ್ತೈಚ್ಚುಮತ್ತಾದೇ, ಅವತ್ತೈಚ್ಚು ಮಂದಾಲ್ ಮೇಲ್‌ವರು ಮಭಿಮುಕ ಮೆಲ್ಲಾಂತರುಕ್ಕೈ ಸಮರ್ಥ ಕಾರುಣಿಕನಾನ ಉನಕ್ಕೇ ಭರಮಾಹ ವಿರಿಟ್ಟುಕ್ಕೊಳ್ಳವೇಣು ಮೆನ್ಹೈ", ಎಂದು ಆಚಾರ್ಯರು ತಾವೇ ಉಪಾಯಾಂತರ ಸ್ಥಾನ ನಿವೇಶಕ್ಕೆ ಭರಸ್ವೀಕಾರ ಪ್ರಾರ್ಥನಾಪರವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಆ ಪ್ರಾರ್ಥನೆಯು **"ಉಪಾಯಾಂತರ ಸ್ಥಾನ ನಿವೇಶ"** ಪದದಿಂದ ವಿವಕ್ಷಿತ **"ಉಪಾಯಾಂತರ ಸ್ಥಾನ ನಿವೇಶತ್ತಾಲೇ"** ಎಂಬಲ್ಲಿ ಕರಣೇ ತೃತೀಯಾ ವಿಭಕ್ತಿ. ಆದ್ದರಿಂದ ಶರಣ್ಯನಲ್ಲಿ ಭರಸ್ವೀಕಾರ ಪ್ರಾರ್ಥನಾ ವಿಶಿಷ್ಟ ಶರಣಾಗತಿಯು ವಿವಕ್ಷಿತ. **"ತ್ವಮೇವ"** ಎಂಬಲ್ಲಿ ಏವಕಾರವು ನನ್ನಲ್ಲಿ ಭರಾನ್ವಯವು ಇಲ್ಲದೆ. ಉಪಾಯಕೋಟಿಯಲ್ಲಿ ನನ್ನನ್ನೂ ಸೇರಿಸದೆ, ಸಮರ್ಥಕಾರುಣಿಕನಾದ ನೀನೇ ನನ್ನ ರಕ್ಷಣಭರವನ್ನು ಸ್ವೀಕರಿಸಿ ನನ್ನನ್ನು ನಿರ್ಭರನನ್ನಾಗಿ ಮಾಡಿ, ಫಲ ಪ್ರದಾನ ಮಾಡು ಎಂಬ ಪ್ರಾರ್ಥನಾಕಾರವು ಹೇಳಿದಂತಾಯಿತು. ಆದರಿಂದಾಗಿ ದಯನೀಯನಾದ ಅಕಿಂಚನನ ಪ್ರಾರ್ಥನಾನುಸಾರವಾಗಿ ಶರಣ್ಯನು ಅವನ ಸರ್ವಭರಗಳನ್ನೂ ಸ್ವೀಕರಿಸಿ ನಿರಪೇಕ್ಷ ರಕ್ಷಕನಾಗುತ್ತಾನೆಂಬುದ್ವ ಹೃದಯ. ಹೀಗೆ ಸರ್ವಾಧಿಕಾರಿ ಸಾಧಾರಣವಾದ ಉಪಾಯಕ್ಕಿಂತಲೂ ಪ್ರಪನ್ನನ ವಿಷಯದಲ್ಲಿ ಸರ್ವೇಶ್ವರನ ಉಪಾಯತ್ವವು ನಿರಪೇಕ್ಷರಕ್ಷಕ ವಿಶಿಷ್ಟವಾಗಿರುತ್ತದೆ. ಪ್ರಪನ್ನನಿಗೆ ಭಗವಂತನೇ ಉಪಾಯವೆಂಬ ಮಾತಿಗೆ ಇದೇ ಅರ್ಥವೇ ವಿನಹ, ಪ್ರಪನ್ನನು ಯಾವ ಪ್ರಾರ್ಥನೆಯನ್ನೂ ಮಾಡದೇ ಭಗವಂತನೇ ಉಪಾಯವಾಗುತ್ತಾನೆಂಬ ಅರ್ಥವಲ್ಲ.

ಅನಂತರ ಭಕ್ತರ ವಿಷಯದಲ್ಲಿ ಈಶ್ವರನ ಉಪಾಯತ್ವವು ಹೇಗೆ ಎಂಬುದನ್ನು **ಮಟ್ರ ಅಧಿಕಾರಿಕ್ಕುಂ**, ಎಂದಾರಂಭಿಸಿ ವಿವರಿಸುತ್ತಾರೆ, **ಮಟ್ರ ಅಧಿಕಾರಿ**–ಸದ್ವಾರಕ ಪ್ರಪತ್ತಿ ನಿಷ್ಠನು, ಭಕ್ತನು ಎಂದರ್ಥ. ಇವನಿಗೆ ಕರ್ಮಯೋಗಾರಂಭದಿಂದ ಉಪಾಸನೆಯು ಪೂರ್ತಿಯಾಗುವ ಪರ್ಯಂತ ಮಧ್ಯೆ ಮಾಡಬೇಕಾದ ಕರ್ತವ್ಯಾಂಶಗಳಲ್ಲಿ **ಅತ್ಯಂತಾಶಕ್ಯವಾದ ಕರ್ಮಗಳ ಸ್ಥಾನಗಳಲ್ಲಿ ಇಪ್ರಪತ್ತಿವಶೀಕೃತನಾನ ಈಶ್ವರನ್**– ದುಷ್ಕರ ಕರ್ಮಸ್ಥಾನದಲ್ಲಿ ನಿಂತು ಆಯಾಯಾ ಕರ್ಮಸಾಧ್ಯವಾದ ಫಲವನ್ನು ಕೊಡಬೇಕೆಂದು ಪ್ರಾರ್ಥನಾನ್ವಿತವಾದ ಅಂಗ ಪ್ರಪತ್ತಿಯಿಂದ ವಶೀಕೃತನಾದ ಈಶ್ವರನು **ಪುಹುಂದು ನಿನ್ರು** ಆಯಾಯಾ ಕರ್ಮಗಳ ಸ್ಥಾನದಲ್ಲಿದ್ದು ಆ ದುಷ್ಕರ ಕರ್ಮಗಳಿಂದ ಉಂಟಾಗುವ ಪಾಪನಿವೃತ್ತಿಯನ್ನೂ ಸತ್ವೋನ್ಮೇಷವನ್ನೂ ಆದಿ ಪದದಿಂದ ಉತ್ತರೋತ್ತರ ಜ್ಞಾನಾಭಿವೃದ್ಧಿಯನ್ನೂ ಉಂಟು ಮಾಡಿ ಕೊಟ್ಟು ಈ ಉಪಾಸನೆಯು ಸಿದ್ಧಿಸಲು ವಿರೋಧಿಗಳಾದ ಪಾಪಗಳನ್ನು ತೊಲಗಿಸಿ, ಆ ಉಪಾಸನಾತ್ಮಕ ಉಪಾಯವನ್ನು ಸಫಲಗೊಳಿಸುತ್ತಾನೆ. ಅಂದರೆ ಉಪಾಸನೆಯು ನಿಷ್ಪತ್ತಿಯಾಗಿ ಕೈಂಕರ್ಯ ಪರ್ಯಂತವಾದ ಭಗವದನುಭವವನ್ನು ಕೊಡುತ್ತಾನೆಂದರ್ಥ.

ಇದರಿಂದಾಗಿ ಸದ್ವಾರಕ ಪ್ರಪತ್ತಿ ನಿಷ್ಠನಿಗೂ, ಅಂಗ ಪ್ರಪತ್ತಿ ವಶೀಕೃತನಾದ ಸರ್ವೇಶ್ವರನು ಭಕ್ತಿ ಯೋಗದಲ್ಲಿ ದುಷ್ಕರವಾದ ಕರ್ಮಗಳನ್ನು ಮಾಡಬೇಕಾದ ಭರವನ್ನು ತಾನೇ ವಹಿಸಿಕೊಂಡು ಉಪಾಯಭೂತನಾಗುತ್ತಾನೆ. ಆದ್ದರಿಂದ ವಿಶಿಷ್ಟೋಪಾಯತ್ವವು ಭಗವಂತನಿಗೆ ಇಲ್ಲಿಯೂ ಉಂಟು ವೈಶಿಷ್ಟ್ಯಾಂಶದಲ್ಲಿ ಸ್ವಲ್ಪ ಭೇದ ಅಷ್ಟೇ. ಇದರಿಂದ ಅಂಗವಾಗಿಯಾದರೂ ಪ್ರಪತ್ತಿಯನ್ನು ಮಾಡದೇ ಮುಕ್ತಿಯು ಲಭಿಸಲಾರದು. "ತಮೇವ ಚಾದ್ಯಂ ಪುರುಷಂ ಪ್ರಪದ್ಯೇ ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ", "ಸ್ವನಿರೀಕ್ಷಣಂತಚ ಶರಣಾಗತಿರೇವ" ಎಂಬ ಗೀತೆ, ತದನುಸಾರವಾದ ಭಗವದ್ರಾಮಾನುಜರ ಶ್ರೀ ಸೂಕ್ತಿಗಳಿಂದ ಸರ್ವ ಮುಮುಕ್ಷುಗಳಿಗೂ ಪ್ರಪತ್ತಿಯು ಆವಶ್ಯವೆಂದು, ಮೇಲೆ ಹೇಳಿದ ರೀತಿಯಲ್ಲಿ ಇಬ್ಬರಲ್ಲಿಯೂ ಉಪಾಯವು ವಿಶಿಷ್ಟವಾದದ್ದು ಎಂದು ಅನುಗ್ರಹಿಸಲ್ಪಟ್ಟಿತು,

ಕರ್ಮಯೋಗಮ್

ಅಙ್ಗು ಕರ್ಮಯೋಗಮಾವದು ?–ಶಾಸ್ತ್ರತ್ತಾಲೇ ಜೀವ ಪರಮಾತ್ಮಯಾಥಾತ್ಮ್ಯ ಜ್ಞಾನಂ ಪಿರನ್ದಾಲ್, ತನಕ್ಕು ಶಕ್ಯಙ್ಗಳಾಯ್ ಫಲಸಙ್ಗಾದಿ ರಹಿತಙ್ಗಳಾನ ಕಾಮ್ಯಕರ್ಮಙ್ಗಳೋಡುಮ್ ನಿತ್ಯನೈಮಿತ್ತಿಕಙ್ಗಳೋಡುಮ್ ಕೂಡ ಸನಿಯಮಮಾಹ ಪರಿಗೃಹೀತಮಾಯಿರುಕ್ಕುಮ್ ಕರ್ಮವಿಶೇಷಮ್. ಅ(ಇ)ದಿಲ್ ಅವಾನ್ತರಭೇದಙ್ಗಳ್ (೧) "ದೈವಮೇವಾಪರೇ ಯಜ್ಞಂ" ಎನ್ರು ತುಡಙ್ಗಿ ಶೊಲ್ಲಪ್ಪಟ್ಟ ದೇವಾರ್ಚನ ತಪಸ್ತೀರ್ಥದಾನ ಯಜ್ಞಾದಿಹಳ್.

ಏಕದಶಿಗಳು, "ಲಕ್ಷ್ಮೀ ತಂತ್ರ ಪ್ರಪತ್ತ್ಯಧ್ಯಾಯಗಳಲ್ಲಿ "ಉಪಾಯಾಸ್ತೇ ಚ ಚತ್ವಾರಃ" ಎಂದು ಕರ್ಮಯೋಗ ಜ್ಞಾನಯೋಗ, ಭಕ್ತಿಯೋಗ ಪ್ರಪತ್ತಿಯೋಗವೆಂಬ ನಾಲ್ಕುಯೋಗಗಳೂ ಮೋಕ್ಷಕ್ಕೆ ಉಪಾಯವೆಂದು ಹೇಳಲ್ಪಡುತ್ತವೆ, "ಚತುರ್ಥೋಽಯಮುಪಾಯಸ್ತೇ ಪ್ರೋಕ್ತಃ ಶೀಘ್ರಫಲಪ್ರದಃ" ಎಂದು ಪ್ರಪತ್ತಿಯು ನಾಲ್ಕನೆಯ ಉಪಾಯವೆಂದೂ, "ಪೂರ್ವೋತ್ರಯ ಉಪಾಯಾಸ್ತೇ" ಎಂದೂ ಮೊದಲನ ಮೂರು ಉಪಾಯಗಳೆಂದೂ ವಿಶೇಷ ವಚನಗಳಿವೆ. ಆದ್ದರಿಂದ ಕರ್ಮ. ಜ್ಞಾನ, ಭಕ್ತಿ, ಪ್ರಪತ್ತಿ ಯೋಗಗಳು ನಾಲ್ಕೂ ಸಾಕ್ಷಾನ್ಮೋಕ್ಷೋಪಾಯಗಳು," ಎಂದು ಹೇಳುತ್ತಾರೆ. ಇದು ಸರಿಯಲ್ಲ. ಕರ್ಮ, ಜ್ಞಾನ ಯೋಗಗಳೇ ಭಕ್ತಿಯೋಗಕ್ಕೆ ಅಂಗಗಳೆಂದು ಗೀತಾ ಭಾಷ್ಯದಲ್ಲಿ ಭಗವದ್ರಾಮಾನುಜರು ಸ್ಪಷ್ಟೀಕರಿಸಿದ್ದಾರೆ. ಕರ್ಮ ಜ್ಞಾನ ಯೋಗಗಳು ಪರಂಪರೆಯಾಗಿ "ಅಧ್ಯಾತ್ಮ ಯೋಗಾಧಿಗಮೇನ ದೇವಂ ಮತ್ವಾಧೀರೋ ಹರ್ಷ ಶೋಕೌಜಹಾತಿ"–ಎಂಬ ಶ್ರುತಿಯಿಂದ ವ್ಯಕ್ತ. ದೇವಂ ಮತ್ವೇತಿ ವಿಧೇಯಮಾನ ಪರವಿದ್ಯಾಂಗತಯಾ ಅಧ್ಯಾತ್ಮಯೋಗಾಧಿಗಮೇನೇತಿ ಪ್ರತ್ಯಗಾತ್ಮ ಜ್ಞಾನಮಪಿ ವಿಧಾಯ (ರಾಮಾನುಜ ಭಾಷ್ಯ. ಗೀತೆ 3ನೇ ಅಧ್ಯಾಯದ ಅವತಾರಿಕೆ) ಆದಾಗಿ ಪರವಿದ್ಯೆಯಾದ ಭಕ್ತಿಯೋಗಕ್ಕೆ ಅಂಗವಾಗಿ ಜೀವಾತ್ಮ ಜ್ಞಾನ–ಅಂದರೆ ಜ್ಞಾನಯೋಗ ಸಾಧ್ಯ ಆತ್ಮಾವಲೋಕನ. ಜ್ಞಾನ ಯೋಗ ಶಬಳಿತ ಕರ್ಮಯೋಗವೂ ಆತ್ಮಾವಲೋಕನಕ್ಕೆ ಸಾಧನವೆಂಬುದೂ ಇಲ್ಲಿ ವಿವಕ್ಷಿತ.ಆದ್ದರಿಂದಪರಂಪರೋಪಾಯಗಳನ್ನೂ ಸಾಕ್ಷಾದುಪಾಯದೊಡನೆ ಸೇರಿಸಿ, "ಉಪಾಯಾಸ್ತೇಚತ್ವಾರಃ ಇತ್ಯಾದಿ ಲಕ್ಷ್ಮೀತಂತ್ರಗಳ ವಚನಗಳು ಹೊರಟಿವೆ ಎಂಬುದೇ ನಿರ್ಣಿತ. ಜೀವ ಸ್ವರೂಪ ಯಾಥಾತ್ಮ್ಯ ಜ್ಞಾನದಲ್ಲಿ ವಿಶ್ರಾಂತಿ ಹೊಂದಿದ ಕರ್ಮ ಜ್ಞಾನ ಯೋಗಗಳೇ ಈಶ್ವರ ಸಾಕ್ಷಾತ್ಕಾರವನ್ನು ಕೊಡುವುದಿಲ್ಲವಾದ್ದರಿಂದ, ಪರಂಪರಾಸಾಧನಗಳೇ ವಿನಹ ಸಾಕ್ಷಾನ್ಮುಕ್ತಿ ಸಾಧನವಲ್ಲ. ಭಕ್ತಿಯೋಗಕ್ಕೆ ಅಧಿಕಾರ ಸಂಪಾದಕಗಳು ಎಂಬ ಗೀತಾ ಭಾಷ್ಯ ಸಿದ್ಧಾಂತವನ್ನು ಅನುಸರಿಸಿ ಆಚಾರ್ಯರು **"ಅಂಗು ಕರ್ಮಯೋಗಮಾವದು"**ಎಂದಾರಂಭಿಸಿ ಕರ್ಮ ಜ್ಞಾನ ಭಕ್ತಿಯೋಗಗಳ ಸ್ವರೂಪವನ್ನು ಶೋಧಿಸುತ್ತಾರೆ.

ಕರ್ಮಯೋಗ ಸ್ವರೂಪ

ಅಂಗುಕರ್ಮಯೋಗಮಾವುದು ಇತ್ಯಾದಿ. **ಅಂಗು**–ಉಪಾಸಕನಿಗೆ ಕರ್ತವ್ಯವಾಗಿ ಶಾಸ್ತ್ರಗಳಲ್ಲಿ ವಿಹಿತಗಳಾದ ಕರ್ಮಗಳಲ್ಲಿ, ಎಂದರ್ಥ. ಕರ್ಮಯೋಗವು ಯಾವುದೆಂದರೆ.— ಜೀವನ ಮತ್ತು ಪರಮಾತ್ಮನ ಸ್ವರೂಪ ಯಾಥಾತ್ಮ್ಯ ಜ್ಞಾನವನ್ನು ಶಾಸ್ತ್ರದಿಂದ ಮೊದಲು ತಿಳಿದುಕೊಳ್ಳಬೇಕು. ಈ ಜ್ಞಾನವಿಲ್ಲದಿದ್ದರೆ ನಿವೃತ್ತಿ ಧರ್ಮಾನುಷ್ಠಾನಕ್ಕೆ ಅಧಿಕಾರಿಯಾಗುವುದಿಲ್ಲ. ನಿವೃತ್ತಿ ಧರ್ಮಗಳಲ್ಲಿ ಫಲಸಂಗಕರ್ತೃತ್ವಾದಿ ತ್ಯಾಗಗಳು ಅವಶ್ಯ. ಜೀವನು ಪರಮಾತ್ಮನಿಗೆ ಶೇಷಭೂತನು-ದಾಸಭೂತನು. ಈ ಜ್ಞಾನದಿಂದಾಗಿ ತಾನು ಮಾಡುವ ನಿತ್ಯ ನೈಮಿತ್ತಿಕ ವರ್ಣಾಶ್ರಮ ಧರ್ಮಗಳು ಮತ್ತು ಕರ್ಮಯೋಗಾನುಷ್ಠಾನ ದಶೆಯಲ್ಲಿ ಮಾಡುವ ಕಾಮ್ಯ ಕರ್ಮಗಳು ಸಾತ್ವಿಕ ತ್ಯಾಗ ಪುರಸ್ಸರವಾಗಿ ಭಗವದಾರಾಧನ ರೂಪಗಳೆಂದು ತಿಳಿದು ಮಾಡಬೇಕಾದ್ದರಿಂದ ಜೀವ ಪರಮಾತ್ಮ ಯಾಥಾರ್ಥ್ಯ ಜ್ಞಾನವು ಆವಶ್ಯಕ. ಈ ಜ್ಞಾನವು ಉಂಟಾದರೆ, ತನಗೆ ಮಾಡಲು ಶಕ್ಯಗಳಾದ ಫಲಸಂಗಾದಿ ರಹಿತಗಳಾದ ಕಾಮ್ಯ ಕರ್ಮಗಳೊಡನೆಯೂ ನಿತ್ಯನೈಮಿತ್ತಿಕ ಕರ್ಮಗಳೊಡನೆಯೂ ಸನಿಯಮವಾಗಿ ಪರಿಗ್ರಹಿಸಿ ಮಾಡಲ್ಪಡುವ ಕರ್ಮವಿಶೇಷವು, ಕರ್ಮಯೋಗವೆನಿಸುತ್ತದೆ. **ಅದಿಲ್ ಅವಾಂತರ ಭೇದಂಗಳಿತ್ಯಾದಿ** ಆ ಕರ್ಮ

ಅಧಿಕಾರಿ ಭೇದತ್ತಾಲೇ ಪ್ರಪತ್ತಿ ತಾನೇ, ಭಕ್ತಿಯೈಯಿಡೈಯಿಟ್ಟು ಇಡೈಯಿಡಾದೇಯುಮ್, ಮೋಕ್ಷಹೇತುವಾನಾರ್ಪೋಲೇ. ಇಕ್ಕರ್ಮಯೋಗಮ್, ಜ್ಞಾನಯೋಗತ್ತೈಯಿಡೈಯಿಟ್ಟುಮಿಡೈಯಿಡಾದೇಯುಮ್ ಸಪರಿಕರಮಾನ ಯೋಗತ್ತೈ ಕ್ಕೊಂಡು ಆತ್ಮಾವಲೋಕನ ಸಾಧನಮಾಮ್.

ಯೋಗದಲ್ಲಿ ಅವಾಂತರ ಭೇದಗಳು, (1) ದೈವಮೇವಾಪರೇಯಜ್ಞಂ ಎಂದಾರಂಭಿಸಿ ಹೇಳಲ್ಪಟ್ಟ ದೇವಾರ್ಚನ ತಪಸ್ತೀರ್ಥ ದಾನ ಯಜ್ಞಾದಿಗಳು "ಕರ್ಮಯೋಗಸ್ತಪಸ್ತೀರ್ಥ ದಾನ ಯಜ್ಞಾದಿ ಸೇವನಮ್" ಎಂಬ ಗೀತಾರ್ಥ ಸಂಗ್ರಹ ಶ್ಲೋಕದ ಪ್ರಕಾರ, ತಪಸ್ಸು–ಚಾಂದ್ರಾಯಣ ವ್ರತ, ತೀರ್ಥ–ಪುಣ್ಯ ತೀರ್ಥಸ್ನಾನ, ದಾನ, ಯಾಗಗಳು ಕರ್ಮಯೋಗದ ಭೇದಗಳು.

ಅನಂತರ ಕರ್ಮಯೋಗದ ಕಾರ್ಯವನ್ನು **ಅಧಿಕಾರಿ ಭೇದತ್ತಾಲೇ** ಎಂದಾರಂಭಿಸಿ ಅನುಗ್ರಹಿಸುತ್ತಾರೆ ಅದಾಗಿ ಸದ್ವಾರಕ ಪ್ರಪತ್ತಿ ನಿಷ್ಠನಿಗೆ ಸಕಿಂಚನನೆಂಬ ಅಧಿಕಾರಿ ಭೇದದಿಂದಲೂ, ಅದ್ವಾರಕ ಪ್ರಪತ್ತಿ ನಿಷ್ಠನಿಗೆ ಅಕಿಂಚನನೆಂಬ ಅಧಿಕಾರಿ ಭೇದದಿಂದಲೂ **ಪ್ರಪತ್ತಿತಾನೇ** ಒಂದೇ ಪ್ರಪತ್ತಿಯು **ಭಕ್ತಿಯೈಯಿಡೈಯಿಟ್ಟುಂ** ಸಕಿಂಚನನ ವಿಷಯದಲ್ಲಿ ಭಕ್ತಿದ್ವಾರಾ, **ಇಡೈಯಿಡಾದೇಯುಮ್**–ಅಕಿಂಚನನ ವಿಷಯದಲ್ಲಿ ಭಕ್ತಿ ದ್ವಾರವಿಲ್ಲದೆ ಸಾಕ್ಷಾತ್ತಾಗಿಯೂ ಮೋಕ್ಷ ರೂಪ ಫಲಕ್ಕೆ ಕಾರಣವಾಗುವಂತೆ, ಈ **ಕರ್ಮಯೋಗವು ಜ್ಞಾನಯೋಗತ್ತೈಯಿಡೈಯಿಟ್ಟುಮ್**–ದುಷ್ಕರವಾದ ಉಪಾಯವನ್ನು ನಿರ್ವಹಿಸಲು ಸಮರ್ಥನಾದವನು ಜ್ಞಾನ ಯೋಗ ದ್ವಾರಾ ಆತ್ಮಾವಲೋಕನ ಯೋಗವನ್ನು ಅನುಷ್ಠಿಸುತ್ತಾನೆ. **ಇಡೈಯಿಡಾದೇಯುಮ್**-ಶಿಷ್ಟ ತಯಾ ವ್ಯಪದೇಶ್ಯನಾಗಿಯೂ ನಿಷ್ಪ್ರಮಾದಸುಕರೋಪಾಯಾಭಿಲಾಷಿಯೂ ಆದವನು ಕರ್ಮಯೋಗಾನುಷ್ಠಾನ ದಶೆಯಲ್ಲೇ ಜ್ಞಾನಯೋಗವೂ–ತಾನುಭಗವಚ್ಛೇಷಭೂತನು–ದಾಸಭೂತನು ಎಂಬ ಜ್ಞಾನವು ಸಂಮಿಶ್ರಿತವಾಗಿ ಬರುವುದರಿಂದ ಆ ಜ್ಞಾನ ಯೋಗವನ್ನು ಪ್ರತ್ಯೇಕವಾಗಿ ಅನುಷ್ಠಿಸದೇನೆ, **ಸಪರಿಕಾರಮಾನ ಯೋಗತ್ತೈಕ್ಕೊಂಡು**-ಯಮ ನಿಯಮಾದಿ ಪರಿಕರಗಳಿಂದ ಕೂಡಿದ ಆತ್ಮಾವಲೋಕನ ಸಾಧನವಾದ ಚಿತ್ತವೃತ್ತಿನಿರೋಧನ ರೂಪ ವ್ಯಾಪಾರವನ್ನು ಅವಲಂಬಿಸಿ **ಆತ್ಮಾವಲೋಕನ ಸಾಧನಮಾಮ್**-ಜೀವಾತ್ಮ ಸಾಕ್ಷಾತ್ಕಾರಕ್ಕೆ ಸಾಧನವಾಗುತ್ತದೆ ತಥಾಚ, ಒಂದೇ ಪ್ರಪತ್ತಿಯು ಹೇಗೆ ಭಕ್ತಿಯೋಗ ದ್ವಾರವಾಗಿಯೂ, ದ್ವಾರವಿಲ್ಲದೆಯೂ, ಸಕಿಂಚನಾಕಿಂಚನ ಅಧಿಕಾರಿ ಭೇದದಿಂದ ಮೋಕ್ಷ ಸಾಧನವಾಗುತ್ತದೆಯೋ ಹಾಗೆಯೇ ಈ ಕರ್ಮಯೋಗವು, ಶಿಷ್ಟತಯಾ ವ್ಯಪದೇಶ್ಯನೂ ಶಕ್ತನೂ ಆದ ಅಧಿಕಾರಿ, ಅಶಕ್ತಾಧಿಕಾರಿ ಭೇದದಿಂದ ಜ್ಞಾನಯೋಗಾನುಷ್ಠಾನವಿಲ್ಲದೆಯೂ, ಜ್ಞಾನಯೋಗವನ್ನು ಅನುಷ್ಠಿಸಿಯೂ ಆತ್ಮಾವಲೋಕನಕ್ಕೆ ಸಾಧನವಾಗುತ್ತದೆ. ಜ್ಞಾನಯೋಗಕ್ಕೆ ಅಧಿಕಾರಿಯು ಶಿಷ್ಟತಯಾ ವ್ಯಪದೇಶ್ಯನೂ ಆದವನು, ಕರ್ಮಯೋಗವನ್ನು ಅನುಷ್ಠಿಸದೇನೆ, ಜ್ಞಾನ ಯೋಗವನ್ನು ಅನುಷ್ಠಿಸಲು ಹೋಗಬಾರದು. ಇವನನ್ನು ನೋಡಿ ಜ್ಞಾನ ಯೋಗಾಧಿಕಾರಿಯಲ್ಲದವನೂ, ಕರ್ಮ ಯೋಗವನ್ನು ಅನುಷ್ಠಿಸದೇನೇ ಜ್ಞಾನಯೋಗವನ್ನು ಮಾತ್ರ ಅನುಷ್ಠಿಸಿ, ಆತ್ಮಾವಲೋಕನ ಯೋಗವನ್ನು ಅನುಷ್ಠಿಸಲು ಪ್ರಯತ್ನಪಟ್ಟು, ಕರ್ಮಯೋಗಾನುಷ್ಠಾನ ವಿಲ್ಲದ್ದರಿಂದ ಮೃದಿತಕಷಾಯನಾಗದೆ ಅಂದರೆ ಚಿತ್ತಕಾಲುಷ್ಯ ಶಾಂತಿಯನ್ನು ಹೊಂದದೆ, ಆತ್ಮ ಸಾಕ್ಷಾತ್ಕಾರವನ್ನು ಪಡೆಯದೆ ನಷ್ಟನಾಗುತ್ತಾನೆ ಅದಕ್ಕಾಗಿ ಶಿಷ್ಟತಯಾ ವ್ಯಪದೇಶ್ಯನೂ ಕರ್ಮಯೋಗವನ್ನು ಅನುಷ್ಠಿಸಿಯೇ, ಆತ್ಮಾವಲೋಕನ ಯೋಗವನ್ನು ಆರಂಭಿಸಬೇಕೆಂಬುದು ತಾತ್ಪರ್ಯ.

---

1) ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ ॥ ಭ. ಗೀತೆ (4-25)

ಕೆಲವು ಯೋಗಿಗಳು ಭಗವದಾರಾಧನ ರೂಪವಾದ ಯಜ್ಞವನ್ನು ಅನುಷ್ಠಿಸುತ್ತಾರೆ, ಮತ್ತೆ ಕೆಲವರು ಅಗ್ನಿಯಲ್ಲಿ ಹೋಮ ರೂಪವಾದ ಯಾಗಗಳನ್ನು ಅನುಷ್ಠಿಸುತ್ತಾರೆ. ಬ್ರಹ್ಮಾಗ್ನೌ-ಬ್ರಹ್ಮರೂಪವಾದ ಅಗ್ನಿಯಲ್ಲಿ, ಯಜ್ಞಂ ಹೋಮ ರೂಪವಾದ ಯಾಗವನ್ನು, ಯಜ್ಞೇನೈವ-ಹವಿಸ್ಸು, ಸ್ರುಕ್, ಸ್ರುವಾದಿ ಯಜ್ಞ ಸಾಧನಗಳಿಂದ, ಉಪಜುಹ್ವತಿ-ಹೋಮ ಮಾಡುತ್ತಾರೆಂದರ್ಥ. "ಬ್ರಹ್ಮಾರ್ಪಣಂ ಬ್ರಹ್ಮಹವಿಃ" ಎಂಬ ನ್ಯಾಯದಿಂದ, ಯಾಗ ಹೋಮಗಳಲ್ಲಿ ಸರ್ವರೂ ಬ್ರಹ್ಮಮಯವೆಂಬ ನಿಷ್ಠೆಯನ್ನು ಅವಲಂಬಿಸುತ್ತಾರೆಂದರ್ಥ,

ಜ್ಞಾನಯೋಗವ್.

ಜ್ಞಾನಯೋಗಮಾವದು?—ಕರ್ಮಯೋಗತ್ತಾಲ್ ಅನ್ತಃಕರಣ ಜಯಮ್ಪಿರನ್ದವನುಕ್ಕು, ಪ್ರಕೃತ್ಯಾದಿ ವಿಲಕ್ಷಣಮಾಯ್, ಈಶ್ವರನೈಪ್ಪತ್ತ ಅಧೇಯತ್ವ, ವಿಧೇಯತ್ವ ಶೇಷತ್ವಙ್ಗಳಾಲೇ ಶರೀರತಯಾ ಪ್ರಕಾರಮಾನತ್ ಸ್ವರೂಪತ್ತೈ ನಿರನ್ತರ ಚಿನ್ತನವ್ ಪಣ್ಣುಹೈ

ಇಕ್ಕರ್ಮಯೋಗ ಜ್ಞಾನಯೋಗಙ್ಗಳಾಲೇ ಯೋಗಮುಖತ್ತಾಲೇ ಆತ್ಮಾವಲೋಕನಂ ಪಿರನ್ದಾಲ್, ವೈಷಯಿಕ ಸುಖವೈತೃಷ್ಣ್ಯಾವಹಮಾನ ಆತ್ಮಾನುಭವ ಸುಖಮಾಹಿರ ಆಕರ್ಷಕತ್ತಿಲ್ ಅಹಪ್ಪಟ್ಟಿಲ ನಾಹಿಲ್ ಪರಮ ಪುರುಷಾರ್ಥಮಾನ ಭಗವದನುಭವತ್ತುಕ್ಕು ಉಪಾಯಮಾನ ಭಕ್ತಿಯೋಗತ್ತಿಲೇ ಇಝಿಯುಮವ್ ಪೋದು. ಉಳ್ಳಿರುಕ್ಕಿರ ರತ್ನಂ ಕಾಣ್ಗೈಕ್ಕು ಕೈಝಿಚ್ಚೀರೈಕ್ಕಕ್ಕಾರ್ ಪೋಲೇ, ಅನ್ತರ್ಯಾಮಿಯೈ ಪ್ಪಾರ್ಕ್ಕವ್ ಪ್ಪೋದೈಕ್ಕು ಅವನುಡೈಯ ಶರೀರಭೂತನಾನ ಜೀವಾತ್ಮಾವಿನುಡೈಯದರ್ಶನವ್ ಉಪಯುಕ್ತಮಾಯ್‌ಕ್ಕೊಣ್ಡು ಭಕ್ತಿಯೋಗತ್ತುಕ್ಕು ಅಧಿಕಾರಕೋಟಿಯುಲೇ ಏರಿಟ್ಟುಕ್ಕಿಡಕ್ಕುವ್

ಜ್ಞಾನಯೋಗ ಸ್ವರೂಪ

ಜ್ಞಾನ ಯೋಗಮಾವದು -ಜ್ಞಾನಯೋಗವು ಯಾವುದೆಂದರೆ ಕರ್ಮಯೋಗದಿಂದ ಅಂತಃಕರಣ ಜಯವು ಉಂಟಾದವನಿಗೆ, (ಇದರಿಂದ ಕರ್ಮಯೋಗವು ಅತ್ಯಾವಶ್ಯಕವೆಂಬುದು ಸೂಚಿತ) ಪ್ರಕೃತಿಪರಿಣಾಮವಾದ ದೇಹಕ್ಕಿಂತಲೂ ಬೇರೆಯಾದವನೂ (ದೇಹಾತ್ಮ ಭ್ರಮವಿಲ್ಲದೆ) **ಅಧೇಯತ್ವ**-ಈಶ್ವರನಿಂದ ಧರಿಸಲ್ಪಟ್ಟವನಾಗಿಯೂ, **ವಿಧೇಯತ್ವ** ಅವನಿಂದ ನಿಯಮಿಸಲ್ಪಟ್ಟೂ, **ಶೇಷತ್ವ**-ಅವನಿಗೆ ಅಧೀನನಾಗಿಯೂ ಇರುವ ಕಾರಣ. ಈಶ್ವರನಿಗೆ ಶರೀರ ಭೂ ನಾಗಿ ಪ್ರಕಾರನಾದ (ಇದರಿಂದ ಈಶ್ವರನಿಗಿಂತ ಬೇರೆ ಸ್ವತಂತ್ರನು ಎಂಬ ಭ್ರಮವಿಲ್ಲದೆ ಎಂದರ್ಥಃ) **ತನ್ ಸ್ವರೂಪತ್ತೈ** ಜೀವಾತ್ಮ ಸ್ವರೂಪವನ್ನು ಅಂದರೆ ನಿತ್ಯತ್ವ ಜ್ಞಾನತ್ವ, ಆನಂದತ್ವ, ಅಣುತ್ವ, ಅಮಲತ್ವ, ಅಪಂತ್ವ ವಿಶಿಷ್ಟವಾದ ತನ್ನ ಸ್ವರೂಪವನ್ನು ಎಂದರ್ಥ, **ನಿರಂತರ ಚಿಂತನಂ ಪಣ್ಣುಹೈ**-ಎಡೆಬಿಡದೆ ಧ್ಯಾನ ಮಾಡುವುದು ಜ್ಞಾನಯೋಗ

ಏಕದೇಶಿಗಳು ತಮ್ಮ ಅರ್ಥಪಂಚಕ ಗ್ರಂಥದಲ್ಲಿ, ಜ್ಞಾನಯೋಗವೆಂಬುದು "ಹೃದಯ ಕಮಲಾದಿತ್ಯ ಮಂಡಲಾದಿ ಸ್ಥಾನ ವಿಶೇಷಗಳಲ್ಲಿ ಸನ್ನಿಹಿತನಾದ, ಭಗವಂತನನ್ನು ದಿವ್ಯಾಸ್ತ್ರಭೂಷಣ ಮಹಿಷೀ-ವಿಶಿಷ್ಟನಾಗಿ ಅನವರತ ಭಾವನೇ ಮಾಡುವುದೆಂದು" ನಿರೂಪಿಸಿದ್ದಾರೆ, ಇದು ಸರಿಯಲ್ಲ. ಜೀವಾತ್ಮ ತತ್ತ್ವಯಾಥಾತ್ಮ್ಯ ಜ್ಞಾನ ಚಿಂತನೆಯು ಜ್ಞಾನಯೋಗವೆಂಬುದು ಗೀತಾಭಾಷ್ಯದಲ್ಲಿ ನಿರೂಪಿಸಿರುವಾಗ ಅದಕ್ಕೆ ವಿರುದ್ಧವಾಗಿ ಭಗವಚ್ಚಿಂತನವು ಜ್ಞಾನಯೋಗವೆಂಬುದು ಅಪ್ರಾಮಾಣಿಕ ಕರ್ಮಯೋಗ ಜ್ಞಾನಯೋಗಾದಿಗಳನ್ನು ಮಾಡುವ ಸಮಯದಲ್ಲಿ "ತಾನಿಸರ್ವಾಣಿ ಸಂಯಮ್ಯಯುಕ್ತ ಆಸೀತಮತ್ಪರಃ" (ಗೀತೆ 2-61)

ಎಂಬ- ಗೀತೆಯ-ಪ್ರಕಾರ. ಶುಭಾಶ್ರಯ ಭೂತನಾದ ಭಗವಂತನಲ್ಲಿ ಮನಸ್ಸಿನ್ನಿಡಬೇಕು ಎಂದು ಕರ್ಮಯೋಗ

ಭಕ್ತಿಯೋಗಮ್

ಭಕ್ತಿಯೋಗಮಾವದು ? ಅನನ್ಯನಿಷ್ಠನಾಯ್, ಅನನ್ಯಾಧೀನನಾಯ್, ಅನನ್ಯಶೇಷಭೂತನಾನ ಭಗವಾನುಡೈಯ ಸ್ವರೂಪಾದಿಹಳೈ ವಿಷಯಮಾಹ ವುಡೈತ್ತಾಯ್, ನಿರತಿಶಯ ಪ್ರೀತಿರೂಪಮಾನ ಧ್ಯಾನವಿಶೇಷಮ್. ಅದುತಾನ್ ತೈಲಧಾರೈಯೈಪ್ಪೋಲೇ ನಿರನ್ತರಮಾನ ಸ್ಮೃತಿ ರೂಪಮಾಯ್, ಸಾಕ್ಷಾತ್ಕಾರ ತುಲ್ಯಮಾನ ವೈಶದ್ಯತ್ತೈ ಯುಡೈತ್ತಾಯ್ ಪರಮಪದತ್ತುಕ್ಕು ಪ್ರಯಾಣಮ್ ಪಣ್ಣುಮ್ ದಿವಸ ಮರುದಿಯಾಹ ನಾಳ್ ತೋರುಮ್ ಅನುಷ್ಠಿಕ್ಕ ವಳರ್ನ್ದು ವರುವದಾಯ್ ಅನ್ತಿಮಪ್ರತ್ಯಯಾವಧಿಯಾನ ಜ್ಞಾನಸನ್ತತಿ ವಿಶೇಷಮ್.

ಮಾಡುವ, ಅಂದರೆ ಪ್ರಾಕೃತ ಭೋಗಗಳಲ್ಲಿ ಆಸೆಯನ್ನು ನೀಗಿಸಿ, "ಯಂಲಬ್ಧ್ವಾ ಚಾಪರಂಲಾಭಂ ಮನ್ಯತೇ ನಾಧಿಕಂ ತತಃ" ಇತ್ಯಾದಿ ಗೀತೆಯಲ್ಲಿ (6- 2)ಹೇಳಿರುವಂತೆ, ಆತ್ಮಾನುಭವ ಸುಖಕ್ಕೆ ಮೇಲಾದ ಸುಖವಾವುದೂ ಇಲ್ಲವೆಂದು ಇದರಲ್ಲಿಯೇ ಮನಸ್ಸು ಎಳೆಯಲ್ಪಡುತ್ತದೆ. ಆ ರೀತಿಯಾದ **ಆತ್ಮಾನುಭವ ಸುಖಮೂನ ಆಕರ್ಷಕತ್ತಿಲ್**– ಆತ್ಮಾನುಭವ ಸುಖರೂಪವಾದ ಬಲೆಯಲ್ಲಿ **ಅಹಪ್ಪಟ್ಟಲನಾಹಿಲ್**-ಸಿಕ್ಕಿಕೊಳ್ಳದೆ ಇರುವ ಧೀರನು· **ಪರಮಪುರುಷಾರ್ಥಮಾನ ಭಗವದನು ಭವತ್ತುಕ್ಕು**–ಆ ಆತ್ಮಾನುಭವ ಸುಖಕ್ಕಿಂತಲೂ, ಉತ್ಕೃಷ್ಟವಾದ ಪುರುಷಾರ್ಥವಾದ ಭಗವದನುಭವಕ್ಕೆ ಉಪಾಯವಾದ **ಭಕ್ತಿಯೋಗತ್ತಿಲೇ–ಇಳಿಯುಮ್‌ಪೋದು**–ಭಕ್ತಿಯೋಗವನ್ನು ಮಾಡಲು ಉದ್ಯುಕ್ತನಾಗುವಾಗ **ಉಳ್ಳಿರುಕ್ಕಿರರತ್ನಂ ಕಾಣ್ಕೈಕ್ಕು**–ಇತ್ಯಾದಿ ಒಳಗ ಒಬ್ಬನು ಅಮೂಲ್ಯವಾದ ರತ್ನವನ್ನು ಒಂದು ವಸ್ತ್ರದಲ್ಲಿ ಸುತ್ತಿ ತನ್ನ ಮಡಿಯಲ್ಲಿಟ್ಟದ್ದು ಅದು ಕಳೆದುಹೋದಾಗ ಅದನ್ನು ಹುಡುಕಿ ಆ ವಸ್ತ್ರವನ್ನು ನೋಡಿದ ತಕ್ಷಣ ಬಹಳ ಸಂತೋಷಗೊಂಡು ಅದರೊಳಗೆ ಇರುವ ರತ್ನವನ್ನು ನೋಡಲು ಅಧಿಕಾರಿಯಾಗಿ ಉದ್ಯುಕ್ತನಾಗುತ್ತಾನೆ. ಆ ವಸ್ತ್ರವು ರತ್ನದರ್ಶನಕ್ಕೆ ಉಪಯುಕ್ತವಾಗುತ್ತದೆ. ಅದೇ ರೀತಿಯಲ್ಲಿ, ಜೀವತ್ಮಾಂತರ್ಯಾಮಿಯಾದ ಪರಮಾತ್ಮನನ್ನು ನೋಡುವ ಸಮಯಕ್ಕೆ, (ಜೀವಾತ್ಮಾ ವಸ್ತ್ರಸ್ಥಾನೀಯನು, ಅಂತರ್ಯಾಮಿಯು ರತ್ನ ಸ್ಥಾನೀಯನು) ಆ ಪರಮಾತ್ಮನ ಶರೀರ ಭೂತನಾದ ಜೀವಾತ್ಮದರ್ಶನವು ಉಪಯುಕ್ತವಾಗಿ **ಭಕ್ತಿಯೋಗತ್ತುಕ್ಕು ಅಧಿಕಾರಕೋಟಿಯಲೇ ಏರಿಟ್ಟುಕ್ಕಿಡಕ್ಕುಮ್**– ಭಕ್ತಿಯೋಗಕ್ಕೆ ಅಧಿಕಾರಸ್ಥಾನದಲ್ಲಿರುತ್ತದೆ. ಭಕ್ತಿಯೋಗದಲ್ಲಿ ಕೇವಲ ಪರಮಾತ್ಮ ಸ್ವರೂಪವಲ್ಲದೇ, ಜೀವಾತ್ಮಾಂತರ್ಯಾಮಿತತ್ವವೂ ಧ್ಯೇಯವಾದ್ದರಿಂದ ಅನ್ಯನಾದ ಜೀವಾತ್ಮನ ಸ್ವರೂಪವು ಅನ್ಯನಾದ ಪರಮಾತ್ಮ ಸ್ವರೂಪ ಧ್ಯಾನಕ್ಕೆ ಹೇಗೆ ಉಪಯುಕ್ತವಾಗುತ್ತದೆ, ಎಂಬ ಚೋದ್ಯಕ್ಕೆ ಅವಕಾಶವಿಲ್ಲ "ಆತ್ಮೇತೂಪ ಗಚ್ಛಂತಿಗ್ರಾಹಯಂತಿಚ" ಎಂಬ ಬ್ರಹ್ಮಸೂತ್ರದ ಪ್ರಕಾರ "ಅಹಂಬ್ರಹ್ಮಾಸ್ಮಿ" "ಮತ್ಪ್ರಕಾರಕಂ ಬ್ರಹ್ಮ"ಎಂದು ಉಪಾಸನೆ.

ಭಕ್ತಿಯೋಗದ ಸ್ವರೂಪ

ಭಕ್ತಿಯೋಗಮಾವದು-ಇತ್ಯಾದಿ , ಅನನ್ಯನಿಷ್ಠನಾಗಿ, ಅನನ್ಯಾಧೀನನಾಗಿ ಅನನ್ಯಶೇಷ ಭೂತನಾಗಿರುವ ಭಗವಂತನ ಸ್ವರೂಪಾದಿಗಳನ್ನು (ಆದಿ ಶಬ್ದದಿಂದ ಗುಣ ವಿಗ್ರಹಾದಿ ಸಂಗ್ರಹ) ವಿಷಯವಾಗಿ ಉಳ್ಳದಾಗಿ ಅಂದರೆ ಭಗವಂತನ ಸ್ವರೂಪ ರೂಪ ಗುಣ ವಿಭವಾದಿಗಳ ವಿಷಯವಾದ ನಿರತಿಶಯ ಪ್ರೀತಿ ರೂಪವಾದ ಧ್ಯಾನ ವಿಶೇಷ. ಈ ಧ್ಯಾನ ವಿಶೇಷವು ಹೇಗಿರುತ್ತದೆ ಎಂಬುದನ್ನು **ಅದುದಾನ್** ಎಂದಾರಂಭಿಸಿ ವಿವರಿಸುತ್ತಾರೆ, ಅದಾಗಿ ತೈಲಧಾರೆಯು ಸುರಿಯುವಾಗ, ಮಧ್ಯೆ ಮಧ್ಯೆ ಬೊಟ್ಟು ಬೊಟ್ಟಾಗಿ ಬೀಳದೇ ಹೇಗೆ ಒಂದೇ ಕಂಬಿಯ ಹಾಗೆ ಬೀಳುತ್ತದೆಯೋ ಅದೇ ರೀತಿಯಲ್ಲಿ, ಈ ಭಗವದ್ಧ್ಯಾನ ವಿಶೇಷವು ನಿರಂತರವಾದ (ಮಧ್ಯೆ ಮಧ್ಯೆ ವಿಚ್ಛೇದನವಿಲ್ಲದೆ ಅವಿಚ್ಛಿನ್ನವಾದ ಎಂದರ್ಥ) **ಸ್ಮೃತಿರೂಪಮಾಯ್**–ಸ್ಮರಣರೂಪವಾಗಿ **ಸಾಕ್ಷಾತ್ಕಾರ ತುಲ್ಯಮಾನ ವೈಶದ್ಯತ್ತೈಯುಡೈತ್ತಾಯ್**–ಪ್ರತ್ಯಕ್ಷವಾಗಿ ನೋಡುವುದಕ್ಕೆ ಸಮಾನವಾದ ವಿಶದವಾದ ಸ್ಮರಣ ಸಂತತಿ ರೂಪವಾಗಿರುತ್ತದೆ. **ಉಮಭಯದಿಂದ ಕೂಡಿದ ಮಾರೀಚನು**

ವೃಕ್ಷೇ ವೃಕ್ಷೇಚ ಪಶ್ಯಾಮಿ ಚೀರ ಕೃಷ್ಣಾಜಿನಾಂಬರಮ್
ಗೃಹೀತ ಧನುಷಂ ರಾಮಂ ಪಾಶಹಸ್ತಮಿವಾಂತಕಮ್ ॥

ಎಂದು ಹೇಳುವಂತೆ ಚೀರ ಕೃಷ್ಣಾಂಬರವನ್ನು ಉಟ್ಟು ಕೈಯಲ್ಲಿ ಯಮನಪಾಶದಂತೆ ಧನಸ್ಸನ್ನು ಹಿಡಿದು ಕೊಂಡಿರುವಂತೆ ರಾಮನನ್ನು ಮಾನಸಿಕವಾಗಿ ಸಾಕ್ಷಾತ್ಕರಿಸುತ್ತಿದ್ದನು ಇದು ಭಯದಿಂದ ನಿರಂತರವಾದ ಸ್ಮರಣೆ ಮಾಡುತ್ತಿದ್ದ ಮಾರೀಚನಿಗೆ ಉಂಟಾದ ಪ್ರತ್ಯಕ್ಷ ಸಮಾನವಾದ ಸಾಕ್ಷಾತ್ಕಾರ ಇದೇ ರೀತಿಯಲ್ಲಿ ಭಗವತ್ಸ್ವರೂಪ ರೂಪ ಗುಣವಿಭವೈಶ್ವರ್ಯಾದಿಗಳನ್ನು ಶಾಸ್ತ್ರ ಜ್ಞಾನ ಶ್ರವಣದಿಂದ ತಿಳಿದು ಮನನ ಮಾಡಿ ಆದರಿಂದ ಯೋಗ ದಶೆಯಲ್ಲಿ ಉಂಟಾದ ಅವಿಚ್ಛಿನ್ನವಾದ ಸ್ಮೃತಿ ಸಂತತಿ ವಿಶೇಷವು ಪ್ರತಿ ದಿನವೂ ಅಭ್ಯಾಸ ಮಾಡಲ್ಪಟ್ಟ ಭಾವನಾ ಪ್ರಕರ್ಷದಿಂದ ವಿಶದ, ವಿಶದತರ, ವಿಶದತಮವಾದ ಪ್ರತ್ಯಕ್ಷ ಸಮಾನಾಕಾರವಾದ ಮಾನಸಾನುಭವವನ್ನು ಉಂಟು ಮಾಡುತ್ತದೆ, ಇದು **ಪರಮಪದತ್ತುಕ್ಕು ಪ್ರಯಾಣಮ್ ಪಣ್ಣುಮ್ ದಿವಸಮರುದಿಯಾಹ** ಇತ್ಯಾದಿ ಶ್ರೀ ವೈಕುಂಠಕ್ಕೆ ಹೊರಡುವ ದಿವಸದ **ಅರುದಿ**-ಪರ್ಯಂತ, ಪ್ರತಿದಿನವೂ ಅನುಷ್ಠಿಸಿ ಬರತಕ್ಕದ್ದಾಗಿ, ಅದರಿಂದ **ವಳರ್ನ್ದು ವರುವದಾಯ್**-ಉತ್ತರೋತ್ತರ ದಿನಗಳಲ್ಲಿ ಪೂರ್ವ ಪೂರ್ವದಿನಾಪೇಕ್ಷೆಯಾ ಅಧಿಕ ಕಾಲಾನುವೃತ್ತವಾಗಿಯೂ, ವೈಶದ್ಯಾತಿಶಯವನ್ನುಳ್ಳದಾಗಿಯೂ **ಅಂತಿಮ ಪ್ರತ್ಯಯಾವಧಿಯಾನ**-ಚರಮ ಶರೀರ ವಿಯೋಗ ಕಾಲದಲ್ಲಿ ವ್ಯಾಪಾರವು ಸಂಪೂರ್ಣ ಹೋಗಿ ಮನೋವ್ಯಾಪಾರವೂ ನಿಂತು ಹೋಗುವ ಸಮಯದಲ್ಲಿ ಉಂಟಾಗುವ ಭಗವದ್ಧ್ಯಾನವೇ ಅಂತಿಮ ಪ್ರತ್ಯಯ-ಅದನ್ನು ಎಲ್ಲೆಯಾಗಿ ಉಳ್ಳದಾಗಿರುವ **ಜ್ಞಾನ ಸಂತತಿ ವಿಶೇಷ** – ಪ್ರೀತಿ ರೂಪ ಭಗವತ್ಸಾಕ್ಷಾತ್ಕಾರ ರೂಪ ಜ್ಞಾನ ಸಂತತಿ ತಥಾಚ ಶ್ರುತಿ ಸಿದ್ಧವಾದ ಈ ಭಕ್ತಿರೂಪೋಪಾಯವು ಸಾಕ್ಷಾತ್ಕಾರಕ್ಕೆ ಸಮಾನವಾದ ಸ್ಮೃತಿ ಸಂತತಿ ಮಾತ್ರವಲ್ಲದೆ, ಶ್ರೀ ವೈಕುಂಠಕ್ಕೆ ಪ್ರಯಾಣ ಬೆಳೆಸುವ ಪರ್ಯಂತ ಪ್ರತಿದಿನವೂ ಅಭ್ಯಾಸ - ಆವೃತ್ತಿ ಮಾಡಲ್ಪಟ್ಟು ದಿನ ದಿನಕ್ಕೂ ಬೆಳೆಯುತ್ತಾ, ಅಂತಿಮ ಶರೀರಾವಸಾನದಲ್ಲಿ ಅಂದರೆ ಮನಸ್ಸಿನಲ್ಲಿ ಇಂದ್ರಿಯಗಳೆಲ್ಲಾ ಉಪರತವಾಗಿ, ಆ ಮನಸ್ಸು ಪ್ರಾಣವಾಯುವಿನೊಡನೆ ಜೀವನಲ್ಲಿ ಸೇರುವ – ಉಪರತವಾಗುವ ಕಾಲದಲ್ಲಿ ಉಂಟಾಗುವ ಭಗವತ್ ಸ್ಮೃತಿ ಪರ್ಯಂತವಾದ ಜ್ಞಾನ ಸಂತತಿ ವಿಶೇಷ. "ಸಖಲ್ವೇವಂ ವರ್ತಯನ್ ಯಾವದಾಯುಷಂ", "ಆಪ್ರಯಾಣಾತ್ ತತ್ರಾಪಿ ಹಿದೃಷ್ಟಂ" ಎಂಬ ಶ್ರುತಿ ಸೂತ್ರಗಳು ಅಂತಿಮ ಶರೀರಾವಸಾನ ಪರ್ಯಂತ ಉಪಾಸನೆಯನ್ನು ಮಾಡಬೇಕೆಂಬುದಕ್ಕೆ ಪ್ರಮಾಣ ಉಪಾಯ ವಿಧಾಯಕ ವಾಕ್ಯಗಳಲ್ಲಿ, ತಮೇವ ವಿದಿತ್ವಾ, ತಮೇವಂವಿದ್ವಾನ್, ಧ್ಯಾಯೀತ, ಉಪಾಸೀತ ಇತ್ಯಾದಿ ಸಾಮಾನ್ಯ ಶಬ್ದಗಳು ಶ್ರುತಗಳಾದರೂ, "ಧ್ರುವಾಸ್ಮೃತಿಃ", "ಸ್ಮೃತಿಲಂಭೇ ಸರ್ವಗ್ರಂಥೀನಾಂ ವಿಪ್ರಮೋಕ್ಷಃ", ಎಂಬ ವಿಶೇಷ ವಿಧಿ ವಚನಗಳಿಂದ, ಸಾಮಾನ್ಯ ವಿಶೇಷ ನ್ಯಾಯವನ್ನವಲಂಬಿಸಿ, ವೇದನವು ಸ್ಮೃತ್ಯಾತ್ಮಕ ಜ್ಞಾನ ಸಂತತಿ ವಿಶೇಷದಲ್ಲಿ ಪರ್ಯವಸಾನ ಹೊಂದುತ್ತದೆಯೆಂಬುದೂ, ಹಾಗೆಯೇ ಅದು "ಯಮೇವೈಷ ವೃಣುತೇತೇನ ಲಭ್ಯಃ"-ಪ್ರಿಯತಮ ವಿಷಯಿವರಣೀಯೋ ಭವತಿ, "ಇತ್ಯಾದಿ ಶ್ರುತಿ ವಾಕ್ಯಗಳಿಂದ, ಪ್ರೀತಿ ರೂಪಾಪನ್ನವೆಂದೂ ನಿಷ್ಕರ್ಷಿಸಲ್ಪಟ್ಟು, "ಪ್ರೀತಿರೂಪ ಮನು ಧ್ಯಾನಂ ಭಕ್ತಿರಿತ್ಯಭಿಧೀಯತೇ", ಎಂಬ ವಚನದಿಂದ ಭಕ್ತಿರೂಪಾಪನ್ನವೆಂದು ನಿಗಮಿಸಲ್ಪಟ್ಟಿದೆ. ಇದರಿಂದಾಗಿ

ವೇದನಂ ಧ್ಯಾನ ವಿಶ್ರಾಂತಂ, ತದ್ವಿಶ್ರಾಂತಂ ಧ್ರುವಾಸ್ಮೃತೌ ।
ಸಾಚದೃಷ್ಟಿತ್ವಮಭ್ಯೇತಿ ದೃಷ್ಟಿರ್ಭಕ್ತಿತ್ವ ಮೃಚ್ಛತಿ ॥

ಎಂಬ ಕಾರಿಕೆಯಲ್ಲಿ ಹೇಳಿರುವಂತೆ, ಭಗವತ್ಸ್ವರೂಪ ರೂಪ ವಿಭವಾದಿ ವೇದನವು ಧ್ಯಾನದಲ್ಲಿ ಪರ್ಯವಸಾನ ಹೊಂದುತ್ತದೆ. ಆ ಧ್ಯಾನವು ನಿರಂತರ ಸ್ಮೃತಿ ರೂಪವಾದದ್ದು. ಆ ನಿರಂತರ ಸ್ಮೃತಿಯು ಸಾಕ್ಷಾತ್ಕಾರ ತುಲ್ಯವು ಮತ್ತು ಭಕ್ತಿರೂಪಾಪನ್ನ ಜ್ಞಾನವು.

ಭಕ್ತಿಯೋಗೇ ವರ್ಣಾಶ್ರಮಧರ್ಮಾಣಾಂ ಉಪಕಾರಪ್ರಕಾರಃ

ಇದುಕ್ಕು ವರ್ಣಾಶ್ರಮಧರ್ಮಙ್ಗಳ್ ಜ್ಞಾನವಿಕಾಸಹೇತುವಾನ ಸತ್ತ್ವವಿವೃದ್ಧಿಕ್ಕುಕ್ಕಳೈಯಾನ, ರಜಸ್ತ ಸ್ಸುಕ್ಕಳುಕ್ಕು ಮೂಲಮಾನ, ಪಾಪಙ್ಗಳೈಕ್ಕಳಿತ್ತುಕ್ಕೊಣ್ಡು, ಇತಿಕರ್ತವ್ಯತೈಯಾ ಯಿರುಕ್ಕುಮ...

ಭಕ್ತಿಯೋಗಕ್ಕೆ ವರ್ಣಾಶ್ರಮ ಧರ್ಮಗಳ ಆವಶ್ಯಕತೆ

ಈ ಭಕ್ತಿಯೋಗಕ್ಕೆ ವರ್ಣಾಶ್ರಮ ಧರ್ಮಗಳು ಅಂಗಗಳೆಂದು **ಇದುಕ್ಕು ವರ್ಣಾಶ್ರಮ ಧರ್ಮ...** ಎಂದಾರಂಭಿಸಿ ನಿರೂಪಿಸುತ್ತಾರೆ ಇಲ್ಲಿ ಭಕ್ತಿಯೋಗವು ನೆಲೆಸಿದ ಮೇಲೆ ವರ್ಣಾಶ್ರಮ ಧರ್ಮಗಳ ... ಇದೆಯೇ ಎಂಬುದು ಶಂಕೆ. ಇದೆ ಎಂಬುದು ಪ್ರತ್ಯುತ್ತರ ಉಪಾಯ ವಿರೋಧಿ ಪಾಪ ವಿಶೇಷವು ಪ್ರಪತ್ತಿಯಿಂದ ಕಳೆದರೂ, ಭಕ್ತಿಯೋಗಾನುಷ್ಠಾನ ದಶೆಯಲ್ಲಿ ಪ್ರತಿ ದಿನವೂ ಸಂಪಾದನೀಯವಾದ ಭಕ್ತಿ ಜ್ಞಾನ ವಿಕಾಸಕ್ಕೆ ವಿರೋಧಿಗಳಾದ ರಜೋಗುಣತಮೋಗುಣಗಳಿಗೆ ಕಾರಣವಾದ ಪಾಪ ವಿಶೇಷಗ... ವರ್ಣಾಶ್ರಮ ಧರ್ಮಗಳಿಂದ ಕಳೆಯ ಬೇಕು. ಅದು ಕಳೆದರೆ ಸತ್ತ್ವಗುಣವು ಹೆಚ್ಚಿ "ಸತ್ತ್ವಾತ್ ಸಂ... ಜ್ಞಾನಮ್" ಎಂಬಂತೆ ಜ್ಞಾನವು ದಿನೇ ದಿನೇಅಭಿವೃದ್ಧವಾಗುತ್ತದೆ **ಇದುಕ್ಕು ವರ್ಣಾಶ್ರಮ ಧರ್ಮ...** ಇತ್ಯಾದಿ ಈ ಭಕ್ತಿಯೋಗಕ್ಕೆ ವರ್ಣಾಶ್ರಮ ಧರ್ಮಗಳು ಜ್ಞಾನ ವಿಕಾಸ ಹೇತುವಾದ ಸತ್ತ್ವವಿವೃದ್ಧಿಗೆ **ಕಳೈ...** ಪ್ರತಿ ಬಂಧಕವಾದ ರಜೋಗುಣ ತಮೋಗುಣಗಳಿಗೆ ಮೂಲವಾದ ಪಾಪಗಳನ್ನು ಹೋಗಲಾಡಿಸಿ **ಇತಿಕ... ತೈಯಾಯಿರುಕ್ಕುಮ್**–ಅಂಗವಾಗಿರುತ್ತದೆ

ಇಲ್ಲಿ ವರ್ಣಾಶ್ರಮ ಧರ್ಮಗಳನ್ನೇ ಮಾಡಬೇಕೇ, ಕರ್ಮಯೋಗ ಕಾಲದಲ್ಲಿ ಮಾಡುವಂತೆ ಯಾವುದಾ... ಕಾಮ್ಯ ಕರ್ಮವನ್ನು ಸಾತ್ತ್ವಿಕ ತ್ಯಾಗ ಪುರಸ್ಸರವಾಗಿ ಮಾಡಬಾರದೇ ಎಂಬುದು ಅಧಿಕವಾದ ಆಶಂಕೆ ಸಮಾಧಾನವೇನೆಂದರೆ - ಕರ್ಮ ಯೋಗ ದಶೆಯಲ್ಲಿ ನಿತ್ಯ ನೈಮಿತ್ತಿಕಗಳೊಡನೆ ಕಾಮ್ಯ ಕರ್ಮಗಳನ್ನೂ ಸ... ತ್ಯಾಗ ಪುರಸ್ಸರವಾಗಿ ಮಾಡಬೇಕೆಂಬುದು ವಿಧಿಬಲ ಪ್ರಾಪ್ತ. ಭಕ್ತಿ ಯೋಗವನ್ನು ಆರಂಭಿಸಿ ಮಾಡು... ವರ್ಣಾಶ್ರಮ ಧರ್ಮಗಳಿಗಿಂತ ಬೇರೆಯಾದ ಕಾಮ್ಯ ಕರ್ಮಗಳನ್ನು ಸ್ವರೂಪತಃ ಪರಿಗ್ರಹಿಸಬಾರದು ಸ... ತ್ಯಾಗ ಪುರಸ್ಸರವಾಗಿಯೂ ಕಾಮ್ಯ ಕರ್ಮಗಳನ್ನೂ ಮಾಡಬಾರದೆಂದರ್ಥ. ನಿತ್ಯ ನೈಮಿತ್ತಿಕಾನುಷ್ಠಾನ ವಿನಹ ಬಾಕಿ ಕಾಲಗಳಲ್ಲಿ ಅವಕಾಶವಿದ್ದಾಗ ಸಾಕ್ಷಾದ್ಭಗವತ್ಪ್ರದಕ್ಷಿಣ ಪ್ರಣಾಮ ಮಾಲಾಕರಣ ದೀಪಾರೋ... ವ್ಯಾಪಕ ಭಗವನ್ಮಂತ್ರ ಜಪಧ್ಯಾನಾರ್ಚನ ವೇದಾಂತ ರಹಸ್ಯ ತತ್ತ್ವ ಚಿಂತನಾದಿಗಳನ್ನು ಮಾಡಬ... "ಅಭ್ಯಾಸೇಪ್ಯಸಮರ್ಥೋಸಿಮತ್ಕರ್ಮ ಪರಮೋಭವ" ಎಂಬ ಗೀತಾ (12-10) ವಚನದಲ್ಲಿ ಹೇಳಿರುವ, "ಮ... ಪರಮೋಭವ" ಎಂಬ ವಾಕ್ಯಕ್ಕೆ–ಭಗವದ್ರಾಮಾನುಜರು ಭಗವನ್ನಾಮ ಸಂಕೀರ್ತನ, ಪ್ರದಕ್ಷಿಣೆ ಸ್ತುತಿ ... ಸ್ಕಾರಾದಿಗಳು ಭಕ್ತಿಯೋಗ ನಿಷ್ಠನಿಗೆ ಭಕ್ತ್ಯಭಿವೃದ್ಧಿಗೆ ಸಹಾಯಕವೆಂದು ಭಾಷ್ಯದಲ್ಲಿ ಅನುಗ್ರಹಿಸಿರುವುದು ಗಮನಾರ್ಹ ವಿದ್ಯಾನುಪಯುಕ್ತಕಾರೀರ್ಯ್ಯಾದಿ ಸುಕೃತಗಳ ಅಷ್ಟವಾದವು ಭಾಷ್ಯಾದಿಗಳಲ್ಲಿ ಹೇಳಲ್ಪಟ್ಟಿರು... ಭಕ್ತಿಯೋಗಾನುಷ್ಠಾನ ದಶೆಯಲ್ಲಿ ಮಾಡಿರುವುದಲ್ಲ ಹಿಂದೆಯೇ ವಿದ್ಯಾನುಷ್ಠಾನಕ್ಕೆ ಪೂರ್ವ ಭಾವಿಯಾ... ಅನುಷ್ಠಿಸಲ್ಪಟ್ಟು ಫಲವನ್ನು ಕೊಡದೆ ಇದ್ದ ಸುಕೃತವು ಇದ್ದರೆ, ಅದರ ವಿಷಯವಾದುದೆಂದು ತಿಳಿಯ... ಏಕೆಂದರೆ ಭಕ್ತ ಪ್ರಪನ್ನರಿಬ್ಬರೂ ಪರಮೈಕಾಂತಿಗಳು ಅವರುಗಳಿಗೆ ವಿಹಿತ ಕರ್ಮಾನುಷ್ಠಾನದಲ್ಲಿಯೂ ಕರ್ಮಾನನುಷ್ಠಾನದಲ್ಲಿಯೂ ವ್ಯತ್ಯಾಸವಿಲ್ಲ ಪ್ರಾಯಶ್ಚಿತ್ತವೂ ಯಥಾಧಿಕಾರವೇ ಮಾಡತಕ್ಕದ್ದು. "... ಮಹಾಯಜ್ಞಾದ್ಯನುಷ್ಠಾನಂ ಶಕ್ತಿತಃ ಕ್ರಿಯಾ, ಅಹರಹರನುಷ್ಠೀಯಮಾನ ವರ್ಣಾಶ್ರಮ ಧರ್ಮಾನು... ಉಪಾಸನರೂಪತತ್ಸಮಾರಾಧನ ಪ್ರೀತಃ", ಎಂದು ಭಾಷ್ಯದಲ್ಲಿ ಭಕ್ತಿಯೋಗ ನಿಷ್ಠನಿಗೆ ವರ್ಣಾಶ್ರಮ ಧ... ನುಷ್ಠಾನವು ಅಂಗವಾಗಿ ವಿಧಿಸಲ್ಪಟ್ಟಿದೆ. "ಸಹಕಾರಿತ್ವೇನಚ, ವಿಹಿತತ್ವಾಚ್ಚ ಆಶ್ರಮ ಕರ್ಮಾಪಿ, ಅಗ್ನಿಹೋ... ಶುತತ್ಕಾರ್ಯಾಯೈವ, ಸರ್ವಾಪೇಕ್ಷಾಚ ಯಜ್ಞಾದಿ ಶ್ರುತೇರಶ್ವವತ್" ಇತ್ಯಾದಿ ಸೂತ್ರತದ್ಭಾಷ್ಯಗಳ...

ಈ ಭಕ್ತಿಯೋಗನ್ತಾನೇ *"ಪ್ರತ್ಯಯಾರ್ಥಂಚ ಮೋಕ್ಷಸ್ಯ ಸಿದ್ಧಯಸ್ಸಂಪ್ರಕೀರ್ತಿತಾಃ" ಎನ್ಗಿರಪಡಿಯೇ ಇಳನೆಞ್ಜರೈತ್ತೇತ್ತು ಹೈಕ್ಕಿಟ್ಟ ವಿರಗಾನ ವ್ಯಕ್ಷಯಿಲ್ ಕಾಮನಾ ಭೇದತ್ತಾಲೇ ಐಶ್ವರ್ಯಾದಿಹಳುಕ್ಕುಂ ಸಾಧನಮಾಮೆನ್ನುಮಿವ್ವರ್ಥಂ (') *"ಚತುರ್ವಿಧಾ ಭಜನ್ತೇ ಮಾಂ" ಎನ್ರುಶೊಲ್ಲಪ್ಪಟ್ಟದು.

ಜ್ಞಾನೀ ಸರ್ವಶ್ರೇಷ್ಠಃ

ಅವ್ವಿಡತ್ತಿಲ್, (2)"ಶೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ" ಎನ್ರು ತೊಡಙ್ಗಿಚ್ಚೊನ್ನ ಜ್ಞಾನಿಯಿನುಡೈಯ ಮೇತ್ತತ್ತೈ (3) ಚತುರ್ವಿಧಾ ಮನುಜನಾ ಭಕ್ತಾ ಏವಹಿತೇ ಸ್ಮೃತಾಃ। ತೇಷಾ ಮೇಕಾನ್ತಿನ ಶ್ರೇಷ್ಠಾ ಸ್ತೇಚೈವಾ ನನ್ಯದೇವತಾಃ। ಅಹಮೇವ ಗತಿಸ್ತೇಷಾಂ ನಿರಾಶೀಃ ಕರ್ಮಕಾರಿಣಾಂ। ಯೇತು ಶಿಷ್ಟಾಸ್ತ್ರಯೋ ಭಕ್ತಾಃ ಫಲಕಾಮಾಹಿ ತೇಮತಾಃ। ಸರ್ವೇ ಚ್ಯವನ ಧರ್ಮಾಣಃ ಪ್ರತಿಬುದ್ಧಸ್ತು ಮೋಕ್ಷಭಾಕ್" ಎನ್ರು ತಾನೇ ವೆಳಿಯಿಟ್ಟಾರ್

ಅಂಶವು ಸ್ಪಷ್ಟ. ಆದ್ದರಿಂದ ಭಕ್ತ ಪ್ರಪನ್ನರಿಗೆ ಕಾಮ್ಯ ಕರ್ಮ ಪರಿತ್ಯಾಗವು ಶಾಸ್ತ್ರೀಯವಾದದ್ದು. ಕರ್ಮ ಯೋಗದಲ್ಲಿ **ವಿಹಿತವಾದ್ದರಿಂದ** ಕಾಮ್ಯ ಕರ್ಮವು ಫಲಸಂಗಕರ್ತೃತ್ವಾದಿ ರಹಿತವಾಗಿ ಮಾಡಬೇಕಾದದ್ದು ಪಾರಮೈಕಾಂತ್ಯಕ್ಕೆ ಕುಂದುಕವನ್ನುಂಟು ಮಾಡುವುದಿಲ್ಲ ಧರ್ಮಾನುಷ್ಠಾನವು ವಿದ್ಯೆಗೆ ಸಹಕಾರಿಯೂ **ಆಗುತ್ತದೆ** ಎಂಬ ಬುದ್ಧಿಯು ಭಕ್ತನಿಗೆ ವಿಶೇಷವಾಗಿರುತ್ತದೆಯೆಂಬುದು ಇಲ್ಲಿಯ ತತ್ವವೆಂಬೀ ವಿಷಯಗಳನ್ನು ಕರೂರು ಸ್ವಾಮಿಗಳು ತಮ್ಮ ಗ್ರಂಥದಲ್ಲಿ ಅನುಗ್ರಹಿಸಿರುತ್ತಾರೆ

ಭಕ್ತಿಯೋಗವು ಐಶ್ವರ್ಯ ಕೈವಲ್ಯ ಸಾಧಕ

ಆನಂತರ ಈ ಭಕ್ತಿಯೋಗವೇ ಕಾಮನಾಭೇದದಿಂದ ಐಶ್ವರ್ಯ ಕೈವಲ್ಯಗಳಿಗೆ ಸಾಧಕವೆಂಬುದನ್ನು **ಇಭ್ಭಕ್ತಿಯೋಗಂತಾನೇ** ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ ಅದಾಗಿ ಈ ಭಕ್ತಿ ಯೋಗವು, ಪ್ರತ್ಯಯಾರ್ಥಂಚ ಮೋಕ್ಷಸ್ಯ ಸಿದ್ಧಯಃ ಸಂಪ್ರಕೀರ್ತಿತಾಃ—ಮೋಕ್ಷದಲ್ಲಿ ನಂಬಿಕೆಯನ್ನುಂಟು ಮಾಡಲು: ಸಿದ್ಧಯ:—**ಅಣಿಮಾದಿ** ಅಷ್ಟೈಶ್ವರ್ಯ ಸಿದ್ಧಿಗಳು, ಭಕ್ತಿಗೆ ಫಲವಾಗಿ ಹೇಳಲ್ಪಟ್ಟವೆ, ಎಂಬ **ಸಾತ್ವತ** ಸಂಹಿತಾವಚನದ ಪ್ರಕಾರ, **ಇಳೆನೆಂಜರೈ ತೇಟ್ರುಹೈಕ್ಕಾಕ**-ಮಂದ ವಿಶ್ವಾಸ ಶಾಲಿಗಳನ್ನು, ವೇದವಿಹಿತ ಶಾಸ್ತ್ರೀಯ ಕರ್ಮಾನುಷ್ಠಾನದಿಂದ ಮೋಕ್ಷವು ಲಭಿಸುತ್ತದೆ ಎಂಬ ಮಹಾ ವಿಶ್ವಾಸಶಾಲಿಗಳನ್ನಾಗಿ ಮಾಡಲು ಕಾಮನಾ ಭೇದದಿಂದ ಐಶ್ವರ್ಯ ಕೈವಲ್ಯಗಳನ್ನೂ ಸಾಧಿಸಿಕೊಡುತ್ತದೆ. ಈ ಅರ್ಥವು 1) ಚತುರ್ವಿಧಾ ಭಜಂತೇಮಾಂ, ಎಂದು ಗೀತೆಯಲ್ಲಿ ಹೇಳಲ್ಪಟ್ಟಿದೆ

ಜ್ಞಾನಿಯ ಉತ್ಕರ್ಷ

ಅವ್ವಿಡತ್ತಿಲ್ ಇತ್ಯಾದಿ— ಅವರುಗಳ ಮಧ್ಯೆ 2) "ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿ ರ್ವಿಶಿಷ್ಯತೇ।"ಎಂದಾರಂಭಿಸಿ ಜ್ಞಾನಿಯ ಉತ್ಕರ್ಷವನ್ನು 3) ಚತುರ್ವಿಧಾಮನುಜನಾಃ ಎಂದು ಮಹಾಭಾರತದಲ್ಲಿ

---

1) ಚತುರ್ವಿಧಾಭಜಂತೇಮಾಂ ಜನಾಸ್ಸುಕೃತಿನೋಽರ್ಜುನ।
ಆರ್ತೋರ್ಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ॥ (ಗೀತೆ 7-16)

ಎಲೈ ಅರ್ಜುನ, ಪುಣ್ಯಶಾಲಿಜನರು ನಾಲ್ಕು ವಿಧ, ಅವರು ನನ್ನನ್ನು ಪೂಜಿಸುತ್ತಾರೆ, ಅವರು ಯಾರೆಂದರೆ ಆರ್ತಃ—ಕಳೆದುಹೋದ ಐಶ್ವರ್ಯವನ್ನು ತಿರುಗಿಯೂ ಬೇಕೆಂದು ಹಂಬಲಿಸುವವನು, ಜಿಜ್ಞಾಸು - ಆತ್ಮಾನುಭವಸುಖದಲ್ಲಿ ಆಸೆಯುಳ್ಳವನು, ಅರ್ಥಾರ್ಥೀ-ನೂತನ ಐಶ್ವರ್ಯಕ್ಕೆ ಆಸೆಪಡುವವನು. ಜ್ಞಾನೀ -ಭಗವಂತನಾದ ನನ್ನನ್ನೇ ಬೇಕೆಂದು ಆಸೆಪಡುವವನು,

2), 3), ವಿ. ತಿ. ಮೋ.

ಪರಭಕ್ತಿ

ಇಪ್ಪಡಿ ಮೋಕ್ಷೋಪಾಯಮಾಹ ವಿಧಿತ್ತ ಭಕ್ತಿಯೋಗಮ್ ಪರಭಕ್ತಿ ಎನ್ರು ಪೇಶಪ್ಪಟ್ಟದು ಇದಿನುಡೈಯ ಹೇತುವಾಯ್, ಸಾತ್ವಿಕಪರಿಶೀಲನಾದಿಗಳಾಲೇ ವನ್ದ ಭಗವದ್ವಿಷಯತ್ತಿಲ್ ಪ್ರೀತಿವಿಶೇಷಮ್, ಸರ್ವೇಶ್ವರನೈತ್ತೆಳಿಯ ವರಿಯವೇಣು ಮೆನ್ನುಂ ಅಭಿನಿವೇಶತ್ತುಕ್ಕು ಕ್ಕಾರಣಮಾಯ್ ಭಕ್ತಿ ಎನ್ರುಪೇರ್ ಪೆತ್ತಿರುಕ್ಕುಮ್.

ಭಗವಂತನು ತಾನೇ ಪ್ರಕಾಶಪಡಿಸಿರುತ್ತಾನೆ ಅದಾಗಿ ಫಲಾಂತರಗಳಿಗ ಆಸಪಟ್ಟು ಭಗವಂತನನ್ನು ಧ್ಯಾನ ಮಾಡುವವರು ಆ ಫಲವು ಲಭಿಸಿದ ನಂತರ ಅದರ ಅನುಭವದಲ್ಲಿ ನಿರತರಾಗಿ ಭಗವಧ್ಯಾನವನ್ನು ಬಿಟ್ಟುಬಿಡುತ್ತಾರ ಜ್ಞಾನಿಯು ಉಪಾಯದಶಯಲ್ಲಿಯೂ ಫಲ ದಶಯಲ್ಲಿಯೂ ಭಗವಂತನನ್ನು ಬಿಡದೆ ಅವನಲ್ಲೇ ನೆಟ್ಟ ಮನಸ್ಸುಳ್ಳ ಅವನನ್ನೇ ಪಡೆಯುತ್ತಾನ ಮೊದಲು ಮೂರು ಪಂಗಡದವರು ಚ್ಯವನಧರ್ಮರ –ಅಂದರೆ ಸ್ವಲ್ಪಕಾಲ ಫಲವನ್ನು ಪಡೆದು ನಂತರ ಅದರ ವಿಯೋಗವನ್ನು ಹೊಂದುತ್ತಾರೆ ಜ್ಞಾನಿಯು ಹಾಗಲ್ಲ, ನಿರಂತರ ಭಗವತ್ಸಂಶ್ಲೇಷವುಳ್ಳವನು ಆದ್ದರಿಂದ ಅವನೇ ಶ್ರೇಷ್ಠನು.

ಪರಭಕ್ತಿ ಪರಜ್ಞಾನ ಪರಮ ಭಕ್ತಿಗಳ ಸ್ವರೂಪ,

ಭಕ್ತಿಯೋಗವೆಂಬುದನ್ನು ವಿವರಿಸಿದ್ದಾಯಿತು ಶಾಸ್ತ್ರಗಳಲ್ಲಿ ಪರಭಕ್ತಿ, ಪರಜ್ಞಾನ, ಪರಮಭಕ್ತಿ ಎಂದು ವ್ಯವಹರಿಸಿರುವುದು ಯಾವ ಭಕ್ತಿ ಎಂಬುದು ಶಂಕೆ. ಇದನ್ನು, **ಇಪ್ಪಡಿ ಮೋಕ್ಷೋಪಾಯ ಮಾಹ** ಎಂದಾರಂಭಿಸಿ ವಿವರಿಸುತ್ತಾರೆ. ಅದಾಗಿ ಹೀಗೆ ಮೋಕ್ಷೋಪಾಯವಾಗಿ ವಿಧಿಸಲ್ಪಟ್ಟ, "ಭಕ್ತಿಯೋಗಮಾವದು ಎಂದಾರಂಭಿಸಿ ಜ್ಞಾನಸಂತತಿ ವಿಶೇಷಮ್" ಎಂದು ನಿರೂಪಿಸಲ್ಪಟ್ಟ ಭಕ್ತಿಯೋಗವು ಪರಭಕ್ತಿ ಎಂದು ಹೇಳಲ್ಪಟ್ಟಿದೆ. "ಮದ್ಭಕ್ತಿಂಲಭತೇಪರಾಂ" ಎಂದು ಗೀತೆಯಲ್ಲಿ ಇದು ಹೇಳಲ್ಪಟ್ಟಿದೆ. ಈ ಪರಭಕ್ತಿಯು ಶಾಸ್ತ್ರಜನ್ಯಜ್ಞಾನದಿಂದ ಉಂಟಾಗುವ ಭಕ್ತಿಗಿಂತ ಬೇರೆ ಎಂಬುದನ್ನು **ಇದಿನುಡೈಯ ಹೇತುವಾಯ್** ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾ ಭಕ್ತಿ ಎಂದರೆ ಭಗವದ್ವಿಷಯದಲ್ಲಿ ಉಂಟಾಗುವ ಪ್ರೀತಿ. ಈ ಪ್ರೀತಿಗೆ ನಾಲ್ಕು ಅವಸ್ಥೆಗಳು ಮೊದಲನೆ ಅವಸ್ಥೆಯು ಎರಡನೆ ಅವಸ್ಥೆಗೆ ಕಾರಣವಾದದ್ದು ಎರಡನೆಯದು ಮೂರನೆ ಅವಸ್ಥೆಗೆ. ಹಾಗೆಯೇ ಮೂರನೇ ಅವಸ್ಥೆಯು ನಾಲ್ಕನೆ ಅವಸ್ಥೆಗೆ ಕಾರಣವಾದದ್ದು ಕೆಳಗೆ ಭಕ್ತಿಯೋಗ ಯಾವುದು ಎಂದು ವಿವರಿಸಿ ಇದು ಎರಡನೆಯ ಅವ

---

1) ಪ್ರಿಯೋಹಿ ಜ್ಞಾನಿನೋಽತ್ಯರ್ಥಂ ಅಹಂಸಚಮಮಪ್ರಿಯಃ । ಎಂಬುದು (ಉತ್ತರಾರ್ಧ ಗೀತೆ 7-17)

ಆ ನಾಲ್ವರಲ್ಲಿ ಭಗವದನು -ಭವವನ್ನು ಆಸೆ ಪಡುವ ಜ್ಞಾನೀಯಾದವನು, ನಿತ್ಯಯುಕ್ತಃ-ನನ್ನೊಡನೆ ನಿತ್ಯಯೋಗ (ಸಂಬಂಧ)ವನ್ನು ಆಸೆಪಡುವವನಾಗಿ (ಆಶಂಸಾಯಾಂ ಭೂತವಚ್ಚ ಇತಿಕ್ತಃ) ಅಂದರೆ ಐಶ್ವರ್ಯ ಕೈವಲ್ಯಾರ್ಥಿಗಳು ಉಪಾಸನ ಕಾಲದ ಮಾತ್ರ ಭಗವಂತನನ್ನು ಧ್ಯಾನ ಮಾಡಿ ಅವನೊಡನೆ ಸಂಬಂಧವನ್ನು ಅಪೇಕ್ಷಿಸುತ್ತಾರೆ, ಫಲಾನುಭವದಶೆಯಲಿಲ್ಲ, ಹಾಗೇ ಜ್ಞಾನಿಯು ಉಪಾಸನಾಕಾಲದಲ್ಲಿಯೂ ಫಲದಶೆಯಲ್ಲಿಯೂ ಭಗವಂತನೊಡನೆ ನಿತ್ಯ ಸಂಬಂಧವನ್ನು ಅಪೇಕ್ಷಿಸುತ್ತಾನೆ ಏಕಭಕ್ತಿ ನನ್ನಲ್ಲೇ ಪ್ರೀತಿಯುಳ್ಳವನು ಬೇರೆ ಯಾವುದರಲ್ಲಿಯೂ ಆಸೆ ಇಲ್ಲದವನು ಅಂದರೆ ಪ್ರಯೋಜನಾಂತರ ವಿಮುಖನು ವಿಶಿಷ್ಯತೇ-ಶ್ರೇಷ್ಠನು ಆ ಜ್ಞಾನಿಗೆ ನಾನು ಅತ್ಯಂತ ಪ್ರಿಯನು, ಆದ್ದರಿಂದ ಅವನು ನನಗೂ ಪ್ರಿಯನು

3) ಭಾರತ ಶಾಂತಿಪರ್ವ 350-33 35 ನನ್ನವರು ನಾಲ್ಕು ವಿಧವಾದವರು ಅವರೆಲ್ಲರೂ ಭಕ್ತರಂದೇ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ ಅವರುಗಳ ಮಧ್ಯೆ ಏಕಾಂತಿಗಳು ನನ್ನಲ್ಲೇ ಸಾಧನತ್ವಬುದ್ಧಿ ನಿಶ್ಚಯವುಳ್ಳವರು. ಅವರುಗಳು ಅನನ್ಯದೇವತಾ -ಪ್ರಾಪ್ಯ ದೇವತೆಯೂ, ಉಪಾಯಸಾಧನಾ ದೇವತೆಯೂ ಒಂದೇ ಎಂದು ತಿಳಿದವರು. ಅವರಿಗೆ ನಾನೇ ಗತಿಯು—ಬಾಕಿಯವರು ಐಶ್ವರ್ಯ ಕೈವಲ್ಯ ಪ್ರಾಪ್ತ್ಯನಂತರ ದೇವತಾಂತರಗಳನ್ನೂ ಭಜಿಸತಕ್ಕವರು ಏಕಾಂತಿಗಳು ಹಾಗಲ್ಲ, ನಿರಾಶೀಃ ಕರ್ಮಕಾರಿಣಾಂ- ಫಲ ಸಂಗಾದಿರಹಿತ ಕರ್ಮ-ಮಾಡುವವರಿಗೆ, ಅಹಮೇವಗತಿಃ-ನಾನೇ ಪ್ರಾಪ್ಯನು ಬಾಕಿ ಮೂರು ಭಕ್ತರು ಫಲದಲ್ಲಿ ಆಸೆಯುಳ್ಳವರು ಸರ್ವೇಚ್ಯವನ ಧರ್ಮಾಃ ಅವರಿಗೆ ಆ ಫಲಗಳು ಸ್ವಲ್ಪಕಾಲಾನಂತರ ನಶಿಸಿಹೋಗುತ್ತವೆ, (ಧರ್ಮ—ಫಲ) ಪ್ರತಿಬುದ್ಧನು- ಅಂದರೆ ಜ್ಞಾನಿಯು ಮೋಕ್ಷವ ಪಡೆಯುತ್ತಾನೆ.

ಪರಜ್ಞಾನಮ್

ಇತ್ತಾಲೇ (೧) "ಶುದ್ಧಭಾವಂ ಗತೋಭಕ್ತ್ಯಾ ಶಾಸ್ತ್ರಾದ್ವೇದ್ಮಿಜನಾರ್ದನಂ" ಎನ್ಗಿರಪಡಿಯೇ ಶಾಸ್ತ್ರಜನ್ಯ ತತ್ತ್ವಜ್ಞಾನ ಕರ್ಮಯೋಗಾದಿ ಪರಮ್ಪರೈಯಾಲೇ ಪಿರನ್ದ ಭಕ್ತಿಯಾನದು, ಸಾಕ್ಷಾತ್ತರಿಕ್ಕ ವೇಣುಮೆನ್ನುಮಭಿನಿವೇಶತ್ತೈಯುಣ್ಡಾಕ್ಕಿ, (೨) "ಯೋಗೇಶ್ವರತತೋಮೇತ್ವಂ ದರ್ಶಯಾತ್ಮಾನಮವ್ಯಯಂ" (೩) "ಕಾಣುಮಾರರುಳಾಯ್" (೪) "ಒರುನಾಳ್ ಕಾಣವಾರಾಯೇ" ಎನ್ರುವಿಲಪಿಕ್ಕುಮ್ಪಡಿಪ್ಪಣ್ಣಿಯಿಮ್ಮಪೇಕ್ಷಾ ಮಾತ್ರಮಡಿಯಾಹ ವನ್ದ ಭಗವತ್ಪ್ರಸಾದ ವಿಶೇಷತ್ತಾಲೇ ತತ್ಕಾಲನಿಯತಮಾನ ಪರಿಪೂರ್ಣ ಸಾಕ್ಷಾತ್ಕಾರತ್ತೈ ಯುಣ್ಡಾಕ್ಕುಮ್ ಇಸ್ಸಾಕ್ಷಾತ್ಕಾರಮ್ ಪರಜ್ಞಾನಮೆನ್ರು (ಶೊಲ್ಲ) ಪೇಶಪ್ಪಟ್ಟದು.

ಈ ಭಕ್ತಿಯೋಗಕ್ಕೆ ಕಾರಣವಾದದು **ಸಾತ್ವಿಕ ಪರಿಶೀಲನಾದಿಹಳಾಲೇ**–ಸತ್ಪುರುಷರಾದ ಜ್ಞಾನಿಗಳೊಡನೆ ಸಂಭಾಷಣೆ, ನಲ್ಲಾಪಾದಿಗಳಿಂದ ಅಂದರೆ ಸತ್ಸಂಗದಿಂದಲೂ **ಆದಿ** ಪದದಿಂದ ಇತಿಹಾಸಪುರಾಣ ಶ್ರವಣಗಳಿಂದಲೂ ಉಂಟಾದ ಭಗವದ್ವಿಷಯದ ಪ್ರೀತಿ ವಿಶೇಷವು ಸರ್ವೇಶ್ವರನನ್ನು **ತೆಳಿಯ ಅರಿಯವೇಣುಂ**–ಶಾಸ್ತ್ರಂಗಳನ್ನು ಅಭ್ಯಾಸಮಾಡಿ ಭಗವಂತನನ್ನು ವಿಶದವಾಗಿ ಸ್ವರೂಪ ರೂಪಗುಣ ವಿಭೂತಿಗಳೊಡನೆ ತಿಳಿದುಕೊಳ್ಳಬೇಕೆಂಬ **ಅಭಿನಿವೇಶತ್ತುಕ್ಕು** – ಇಚ್ಛಾವಿಶೇಷಕ್ಕೆ ತಿಳಿದುಕೊಂಡಲ್ಲದೆ ಧರಿಸಿರಲು ಅಶಕ್ಯವಾದ ಅವಸ್ಥಾಜನಕವಾದ ಆಸೆಗೆ, **ಕಾರಣಮಾಯ್**–ಕಾರಣವಾಗಿರುತ್ತದೆ ಆ ಆಸೆಯನ್ನುಂಟು ಮಾಡುತ್ತದೆ ಅಂದರೆ ವೇದಾಂತ ಶಾಸ್ತ್ರ ಪರಿಚಯದಿಂದ ಉಂಟಾದ ತತ್ತ್ವಜ್ಞಾನದಿಂದ ಭಗವಂತನಲ್ಲಿ ಉಂಟಾಗುವ ಪ್ರೀತಿ ವಿಶೇಷವು ಭಕ್ತಿ ಶಬ್ದವಾಚ್ಯವು ಇದರಿಂದ ಅವಿಧೇಯ ಜ್ಞಾನರೂಪವಾದ ಶಾಸ್ತ್ರಜನ್ಯ ಜ್ಞಾನಕ್ಕಿಂತ ಬೇರೆಯಾದದು ಉಪಾಯ ರೂಪವಾದ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟ ಭಕ್ತಿಯೋಗರೂಪ ಜ್ಞಾನ ವಿಶೇಷವು ಎಂದು ಸಿದ್ಧವಾಯಿತು ಅವಿಧೇಯ ಜ್ಞಾನದಿಂದ ಮೋಕ್ಷವೆಂಬ ಸಿದ್ಧಾಂತವು ಸರಿಯಲ್ಲವೆಂಬುದು ಭಾವ ಇದನ್ನು **ಶುದ್ಧಭಾವಂಗತೋಭಕ್ತ್ಯಾ** ಎಂದಾರಂಭಿಸಿ ವಿವರಿಸುತ್ತಾರೆ, **ಇತ್ತಾಲೇ** ಶಾಸ್ತ್ರಜನ್ಯ ಜ್ಞಾನದಿಂದ ಉಂಟಾದ ಪ್ರೇಮ-ಭಕ್ತಿಯಿಂದ 1) **ಶುದ್ಧಭಾವಂಗತೋ ಭಕ್ತ್ಯಾ** ಇತ್ಯಾದಿ ಹೇಳಿರುವ ರೀತಿಯಲ್ಲಿ ಶಾಸ್ತ್ರಜನ್ಯ ತತ್ತ್ವ ಜ್ಞಾನ, ಕರ್ಮಯೋಗ ಜ್ಞಾನಯೋಗಸಾಧ್ಯ ಆತ್ಮಾವಲೋಕನ ರೂಪ ಜ್ಞಾನ ಪರಂಪರೆಯಿಂದ ಉಂಟಾದ **ಪರಭಕ್ತಿಯಾನದು-ಭಕ್ತಿ**ಯೋಗವೆಂದು ನಿರೂಪಿಸಲ್ಪಟ್ಟ ಪರಭಕ್ತಿಯು **ಸಾಕ್ಷಾತ್ಕರಿಕ್ಕವೇಣುಮೆನ್ಗಿರ**–ಇತ್ಯಾದಿ ಭಗವಂತನನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಅಭಿನಿವೇಶ. ಪ್ರತ್ಯಕ್ಷವಾಗಿ **ನೋಡದೆ** ಇರಲಾಗದ ತ್ರೀವ್ರವಾದ ಆಸೆ ಅದನ್ನು ಉಂಟುಮಾಡಿ 2) **ಯೋಗೇಶ್ವರ ತತೋಮೇತ್ವಂ** 3) **ಕಾಣುಮಾರರುಳಾಯ್** 4) **ಒರುನಾಳ್ ಕಾಣವಾರಾಯೇ**

---

1) ವಿದ್ಯಾರಾಜನ್ನತೇ ವಿದ್ಯಾ ಮಮ ವಿದ್ಯಾಗರಿಯಸೀ ।
ಮಾಯಾಂನ ಸೇವೇ ಭದ್ರಂತೇ ನವ್ಯಥಾ ಧರ್ಮಮಾಚರೇ ॥
ಶುದ್ಧಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿಜನಾರ್ದನಮ್ ॥ (ಭಾರ ಉದ್ಯೋಗ 68-5)
ಸಂಜಯನು ಧೃತರಾಷ್ಟ್ರನಿಗೆ ಹೇಳುವ ಮಾತು ಎಲೈ ರಾಜನೇ ನೀನು ಗುರುವಿನಿಂದ ಉಪದೇಶ ಹೊಂದಿದ ವಿದ್ಯೆಯು ಸರಿಯಾಗಿ ಗ್ರಹಿಸದೇ ಇರುವುದು. ನಾನು ಗ್ರಹಿಸಿದ ವಿದ್ಯೆಯು ನಿನ್ನ ವಿದ್ಯೆಗಿಂತ ಶ್ರೇಷ್ಠವಾದದು ಕಾರಣ ನಾನು ಕಪಟಿಯಲ್ಲ ಸೀನು ಕಾಪಟ್ಯದಿಂದ ಮಾಡುವ ಧರ್ಮಾಚರಣೆ ವ್ಯರ್ಥ ನಾನು ಶುದ್ಧವಾದ ಧರ್ಮಾಚರಣೆ ಮಾಡುತ್ತೇನೆಂದು ನಟಿಸುವವನಲ್ಲ ನೀನು ಹಾಗಲ್ಲ. ಮನೋಭಾವದಿಂದ ಶಾಸ್ತ್ರಾಭ್ಯಾಸ ಮಾಡಿ ಭಕ್ತಿ ಪೂರ್ವಕವಾಗಿ ಭಗವಂತನ ಸ್ವರೂಪ ರೂಪಾದಿಗಳನ್ನು ತಿಳಿದಿದ್ದೇನೆ

2) ಮನ್ಯಸೇಯದಿತಚ್ಛಕ್ಯಂ ಮಯಾದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋಮೇತ್ವಂ ದರ್ಶಯಾತ್ಮಾನಮವ್ಯಯಮ್ ॥ (ಗೀತೆ. 11–4)
ನಾನು ನಿನ್ನನ್ನು ಸಾಕ್ಷಾತ್ಕರಿಸಲು ಶಕ್ಯವು ಎಂದು ತಿಳಿದಿದ್ದರೆ, ಎಲೈ ಪ್ರಭುವೇ । ಯೋಗೇಶ್ವರ । ನಿನ್ನ ಸ್ವರೂಪ ರೂಪ ಗುಣ ವಿಭವಗಳನ್ನು ಯಥಾವತ್ತಾಗಿ ತೋರಿಸು. ಪ್ರತ್ಯಕ್ಷವಾಗಿ ನಿನ್ನನ್ನು ನೋಡಬೇಕೆಂದು ಆಸೆ.

3), 4), ತಿ. ತಿ. ನೋ.

ಪರಮಭಕ್ತಿಯಿನುಡೈಯ ಸ್ವರೂಪಂ

ಇಪ್ಪಡಿ ನಿರತಿಶಯಭೋಗ್ಯಮಾನ ಭಗವತ್ಸ್ವರೂಪತ್ತೈ ಸಾಕ್ಷಾತ್ಕರಿತ್ತವಾರೇ ಪೆರುವಿಡಾಯ್ ಪ್ಪಟ್ಟವನ್ ತಟಾಕತ್ತೈ ಕ್ಕಣ್ಡಾರ್ ಪೋಲೇ ಪಿರನ್ದ ಪ್ರೀತ್ಯತಿಶಯಮ್ ಪರಮಭಕ್ತಿ. ಇದು (೧) "ಮುನಿಯೇ ನಾನ್ಮುಹನಿ"ರ್ಪಡಿಯೇ ಸಙ್ಶ್ಲೇಷದಶೈಯಿಲ್ ಅನುಭವಿತ್ತಲ್ಲದು ಧರಿಕ್ಕವೊಣ್ಣಾದ ಅಭಿನಿವೇಶತ್ತೈಯುಣ್ಡಾಕ್ಕಿ ಮರುಕ್ಕವೊಣ್ಣಾದ ತಿರುವಾಣೈಯಿಟ್ಟು, ವಳೈತ್ತು ಕೂಪ್ಪಿಡುಹೈಯಾಲೇ, ಇವನುಕ್ಕು ಕ್ಕಡುಹ ಪ್ರಾಪ್ತಿಯೈಕ್ಕೊಡುಕ್ಕುಮ್‌ಪಡಿ ಸರ್ವೇಶ್ವರನುಕ್ಕು ತ್ವರಾತಿಶಯತ್ತೈಯುಂಡಾಕ್ಕಿ, ಇವನೈ ಅಮಾನವನ್ನುವಿಡು ಪೆರಪ್ಪಣ್ಣುಮ್.

ಯೋಗೇಶ್ವರನೇ ನಿನ್ನನ್ನು ತೋರಿಸು, ನಿನ್ನನ್ನು ನೋಡುವಂತೆ ಅನುಗ್ರಹಿಸು, ಒಂದು ದಿವಸ ನಿನ್ನನ್ನು ನೋಡುವಂತೆ ಬಾ, ಎಂದು ಆಕ್ರಂದನವನ್ನುಂಟು ಮಾಡಿ, ಈ ಅಪೇಕ್ಷೆಯೇ ಕಾರಣವಾಗಿ ಉಂಟಾದ ಭಗವಂತನ ವಿಶೇಷಾನುಗ್ರಹದಿಂದ,-ಅಂದರೆ ಉಪಾಯ ನಿಷ್ಪತ್ತಿಯುಂಟಾದ ಮೇಲೆ ಶ್ರೀ ವೈಕುಂಠದಲ್ಲಿ ಉಂಟಾಗುವ ಪರಿಪೂರ್ಣ ಭಗವತ್ಸಾಕ್ಷಾತ್ಕಾರಕ್ಕೆ ಹೇತುವಾದ ಅನುಗ್ರಹಕ್ಕಿಂತ ಬೇರೆಯಾದ ವಿಶೇಷದಿಂದ ತತ್ಕಾಲನಿಯತವಾದ ಪರಿಪೂರ್ಣ ಸಾಕ್ಷಾತ್ಕಾರವನ್ನುಂಟು ಮಾಡುತ್ತದೆ. **ಇಸ್ಸಾಕ್ಷಾತ್ಕಾರಮ್** ಇತ್ಯಾದಿ – ಈ ಸಾಕ್ಷಾತ್ಕಾರವೇ ಪರಜ್ಞಾನ. "ಪರಜ್ಞಾನಂ ತು ತಸ್ಯೈವ ಸಾಕ್ಷಾತ್ಕಾರಃ ಪರಿಸ್ಫುಟಃ" ಪರಜ್ಞಾನವು–ಆ ಭಗವಂತನ ಪರಿಸ್ಫುಟವಾದ ಸಾಕ್ಷಾತ್ಕಾರವೆಂದು ಹೇಳಲ್ಪಟ್ಟಿದೆ. ಅನಂತರ ಪರಮಭಕ್ತಿಯನ್ನು **ಇಪ್ಪಡಿನಿರತಿಶಯ ಭೋಗ್ಯಮಾನ** ಎಂದಾರಂಭಿಸಿ ವಿವರಿಸುತ್ತಾರೆ. ಹೀಗೆ ನಿರತಿಶಯ ಭೋಗ್ಯವಾದ ಭಗವತ್ಸ್ವರೂಪವನ್ನು ಸಾಕ್ಷಾತ್ಕರಿಸಿದ ನಂತರ, **ಪೆರುವಿಡಾಯ್ ಪಟ್ಟವನ್**–ಬಹಳ ದಾಹದಿಂದ ಕೂಡಿದವನು ತಟಾಕವನ್ನು ನೋಡಿದಂತೆ ಉಂಟಾಗುವ ಪ್ರೀತ್ಯತಿಶಯವೇ ಪರಮಭಕ್ತಿ ಇದು ಸಾಕ್ಷಾದ್ಭಗವತ್ಪ್ರಾಪ್ತಿಗೆ ಕಾರಣವಾಗುತ್ತದೆ

ಪರಮ ಭಕ್ತಿಯು ಮೋಕ್ಷವನ್ನು ಹೊಂದಿಸುವ ಕ್ರಮ

ಅದರ ಪ್ರಕಾರವನ್ನು "**ಇದು (1) ಮುನಿಯೇನಾನ್ಮುಹನಿರಪ್ಪಡಿಯೇ**" ಎಂದಾರಂಭಿಸಿ ನಿರೂಪಿಸುತ್ತಾರೆ

---

3) ತೇವಿಮಾರಾವಾರ್ ತಿರುಮಹಳ್ ಭೂಮಿ ಏವಮತ್ತಮರರ್ ಆಳ್‌ಚೆಯ್ವಾರ್
ಮೇವಿಯ ಉಲಗಮ್ ಮೂನ್ರುಡೈಯಾಟ್ಚಿ ವೇಂಡು ವೇಂಡುರುವಂ ನಿನ್ನುರುವಂ, ।
ಪಾವಿಯೇನ್ ತನ್ನೈ ಅಡುಹಿನ್ರ ಕಮಲಕ್ಕಣ್ಣದು ಓರ್ ಪವಳವಾಯ್ ಮಣಿಯೇ
ಆವಿಯೇ ಅಮುದೇ ಅಲೈಕಡಲ್ ಕಡೈಂದ ಪಪ್ಪನೇ ಕಾಣವಾರರುಳಾಯ್ ॥ (ತಿರುವಾಯ್ 8 1-1)

ಶ್ರೀ ಭೂಮಿನಿಳಾ ಸಮೇತನಾಗಿ ಮೂರುಲೋಕಗಳನ್ನೂ ಆಳುವ ಸ್ವಾಮಿಯೇ ನೀನು ಭಕ್ತರಿಗೋಸ್ಕರ ಅನೇಕ ರೂಪಗಳನು ಧರಿಸುತ್ತೀಯೆ ಪಾಪಿಯಾದ ನನ್ನನ್ನು ವಿಶ್ಲೇಷದಲ್ಲಿ ಹಿಂಸಿಸುವ ಸೊಗಸಾದ ಕಣ್ಣುಗಳನ್ನೂ ಹವಳದಂಥಹ ಬಾಯಿ, ರತ್ನದಂಥಹ ಕಾಂತಿಯುಳ್ಳ, ನನ್ನ ಪ್ರಾಣನೇ, ಅಮೃತವೇ, ಸಮುದ್ರಮಥನ ಮಾಡಿದ ಸ್ವಾಮಿಯೇ ಸೌಂದರ್ಯ ಸೌಲಭ್ಯಾದಿಗಳಿಂದ ಕೂಡಿದ ನಿನ್ನನ್ನು ಪ್ರತ್ಯಕ್ಷವಾಗಿ ದರ್ಶಿಸುವಂತೆ ನನಗೆ ಅನುಗ್ರಹಿಸು

4 ಮಾಯಕ್ಕೂತ್ತಾ ವಾಮನಾ ವಿನೇಯನ್ ಕಣ್ಣಾ ಕಣ್‌ಕೈಕಾಲ್
ತೂಯ ಶೆಯ್ಯ ಮಲರ್‌ಹಳಾ ಶೋದಿಚ್ಚೆವ್ವಾಯ್ ಮುಹಿಲ್ದಾ ।
ಶಾಯಲ್ ಶಾಮತ್ತಿರು ಮೇನಿ ತಣ್‌ಪಾಶಡೈಯಾ ತಾಮರೈನೀಳ್
ವಾಶತ್ತಡಂ ಪೋಲ್ ವರುವಾನೇ ಓರುನಾಳ್ ಕಾಣವಾರಾಯೇ ॥ ತಿರುವಾಯ್ (8-5-1)

ಆಶ್ಚರ್ಯವಾದ ನೃತ್ಯವನ್ನು ಮಾಡುವವನೇ, ವಾಮನಾ ಪಾಪಿಯಾದ ನನ್ನ ಕಣ್ಣನೇ, ನಿನ್ನ ಕಣ್ಣು, ಕೈ ಕಾಲುಗಳೆಲ್ಲಾ ಪರಿಶುದ್ಧವಾದ ಕೆಂಪಾದ ಪುಷ್ಪದಂತೆ ವಿಕಸಿತವಾಗಿವೆ. ನಿನ್ನ ಶರೀರವು ಶ್ಯಾಮಲವರ್ಣದಿಂದ ಕೂಡಿದೆ. ನೀನು ನಡೆದು ಬಂದರೆ ವಿಕಸಿತವಾದ ತಾಮರೈ ಹೂವುಗಳಿಂದ ಕೂಡಿದ ತಟಾಕವೇ ನಡೆದು ಬರುವಂತಿದೆ, ಅಂಥಹ ನಿನ್ನನ್ನು ಪ್ರತ್ಯಕ್ಷವಾಗಿ ನೋಡುವಂತೆ ಒಂದು ದಿವಸ, ಬಾ

ಭಕ್ತಿಯೋಗಾನರ್ಹಾಣಾಂ ಅಶಕ್ತಾನಾಂ ಚ ಪ್ರಪತ್ತಿರೇವೋಪಾಯಃ

ಇಭ್ಭಕ್ತಿಯೋಗವ್, ತ್ರೈವರ್ಣಿಕರ್ಗೈಯೊೞಿನ್ದಾರ್ಕ್ಕುವ್, ತ್ರೈವರ್ಣಿಕರ್ ತಙ್ಗಳಿಲ್ ಜ್ಞಾನತ್ತಿಲೇಯಾದಲ್ ಶಕ್ತಿಯಿಲೇಯಾದಲ್ ಇರಣ್ಡಿಲುಮಾದಲ್ ಕುಱೈಯುಡೈಯಾರ್ಕ್ಕುವ್, ಫಲವಿಳಮ್ಬವ್ ಪೊಱುಕ್ಕ ವಿಶ್ಯಯಾದ ತೀವ್ರಸಂವೇಗ ಮುಡೈಯಾರ್ಕ್ಕುವ್, ಯೋಗ್ಯಮಲ್ಲಾಮೈಯಾಲೇ, ತಙ್ಗಳಳವು ಹಳೈತ್ತಿಳಿನ್ದು ಅದ್ವಾರಕಮಾಹ ಪ್ರಪತ್ತಿಯೈ ಮೋಕ್ಷೋಪಾಯಮಾಹಪ್ಪತ್ತುಮವರ್‌ಹಳುಕ್ಕು ಸರ್ವ ಫಲಸಾಧನಮಾನ ಪ್ರಪತ್ತಿ ತಾನೇ ಪರಭಕ್ತಿಸ್ಥಾನತ್ತಿಲೇ ಚೋದಿತ್ಯೈಯಾಹೈಯಾಲೇ ಉಪಾಸಕನುಕ್ಕು ಪರಭಕ್ತಿಕ್ಕು ಮೇಲ್ವರುಮ್ ಅವಸ್ಥೈಹಳ್‌ಪೋಲೇ, ಇಸ್ಸ್ವತನ್ತ್ರ ಪ್ರಪತ್ತಿನಿಷ್ಠನುಡೈಯ ಕೋಲುತಲುಕ್ಕೀಡಾಹ ಇಪ್ಪ್ರಪತ್ತಿಕ್ಕು ಮೇಲ್ವರುಮ್ ಅನುಕೂಲಾವಸ್ಥೈಹಳ್ ಇದಿನ್ ಫಲಮಾಯಿರುಕ್ಕುವ್.

ಈ ಪರಜ್ಞಾನವು ಮುನಿಯೇ ನಾನ್ಮುಹನೇ ಎಂದಾರಂಭಿಸುವ ತಿರುವಾಯ್‌ಮೊೞಿಯಲ್ಲಿ ಹೇಳಿರುವ ಪ್ರಕಾರ **ಸಂಕೋಚಮಱ**-ತಾತ್ಕಾಲನಿಯತವಾದ ಸಂಕೋಚವಿಲ್ಲದೆ, ಭಗವಂತನನ್ನು ನಿರಂತರ ಅನುಭವಿಸಿ ಅನುಭವ ಪರೀವಾಹವಾದ ಕೈಂಕರ್ಯವನ್ನು ಮಾಡಿಯಲ್ಲದೆ ತಾನು ಧರಿಸಲಾರದ ತೀವ್ರವಾದ ಆಸೆಯನ್ನುಂಟು ಮಾಡಿ, **ಮರುಕ್ಕವೊಣ್ಣಾದ ತಿರುವಾಣೈಯಿಟ್ಟು**-ಭಗವಂತನನ್ನು ಅತಿಕ್ರಮಿಸದೆ ಇರುವಂಥಹ ರೀತಿಯಲ್ಲಿ **ಉನ್ ತಿರು," ಮಾರ್ಪತ್ತು ಮಾಲೈ ನಂಗೈ ವಾಶಂಶೆಯ್ ಪೂಂಗುೞಲಾಳ್ ತಿರುವಾಣೈ ನಿನ್ನಾಣೈಕಂಡಾಯ್** ಎಂದು ನನ್ನನ್ನು ಮೋಸಗೊಳಿಸದೆ ನಿನ್ನ ನಿರಂತರ ಸೇವೆಯನ್ನು ಕೊಡು, ಇಲ್ಲದಿದ್ದರೆ ನಿನ್ನ ಎದೆಯಲ್ಲಿರುವ ಲಕ್ಷ್ಮೀ ಮೇಲೆ ಆಣೆ, ನಿನ್ನ ಮೇಲೆ ಆಣೆ ಎಂದು ಆಣೆ ಇಟ್ಟು "ಇನಿನಾನ್ ಪೋಹಲೊಟ್ಟೇನ್ ಒನ್ಱುಂ ಮಾಯಂ ಶೆಯ್ಯೇಲ್" ಇನ್ನು ನಿನ್ನನ್ನು ಬಿಟ್ಟಿರಲಾರೆ, ಮೋಸ ಮಾಡಬೇಡವೆಂದು ಭಗವಂತನನ್ನು ನಿರ್ಬಂಧಿಸಿ ಆಕ್ರಂದನ ವನ್ನು ಮಾಡಿಸುತ್ತದೆ. ಈ ಆಕ್ರಂದನವು ಭಗವಂತನಿಗೆ ಅತಿಶಯವಾದ ತ್ವರೆಯನ್ನು ಉಂಟುಮಾಡಿ, **ಇವನೈ ರಱಿವಾನಟ್ರು ವೀಡಪೆಱಪ್ಪಣ್ಣುಮ್**-ಪರಮ ಭಕ್ತಿಯುಕ್ತನಾದ ಇವನ ಮಹತ್ತರವಾದ ಆಸೆಯನ್ನು ನೀಗಿಸಿ, ಪರಮ ಪದವನ್ನು ಹೊಂದುವಂತೆ ಮಾಡುತ್ತದೆ

ಭಕ್ತಿಯೋಗದಲ್ಲಿ ಅಧಿಕಾರವಿಲ್ಲದವರಿಗೆ ಪ್ರಪತ್ತಿಯೇ ಫಲದಾಯಕ

ಅನಂತರ ಭಕ್ತಿಯೋಗಾನುಷ್ಠಾನಕ್ಕೆ ಅನಧಿಕಾರಿಯಾದ ಪ್ರಪತ್ತಿ ಯೋಗ ನಿಷ್ಠನಿಗೂ, ಪರಭಕ್ತಿ ಪರ ಜ್ಞಾನ ಪರಮ ಭಕ್ತಿಗಳು ಪ್ರಪತ್ತಿಗೆ ಫಲವಾಗಿ ಉಂಟಾಗುತ್ತವೆ ಎಂದು **ಇಭ್ಭಕ್ತಿಯೋಗವ್** ಎಂದಾರಂಭಿಸಿ ನಿರೂಪಿಸುತ್ತಾರೆ ಆದಾಗಿ ಈ ಭಕ್ತಿಯೋಗವು, **ತ್ರೈವರ್ಣಿಕರ್ಗೈ**-ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು, **ಒೞಿಂದಾರ್ಕ್ಕುವ್** ಅವರನ್ನು ಬಿಟ್ಟು ಇತರರಿಗೂ, ತ್ರೈವರ್ಣಿಕರಲ್ಲಿಯೂ, ಜ್ಞಾನದಿಂದಾಗಲಿ, ಶಕ್ತಿಯಿಂದಾಗಲಿ, ಜ್ಞಾನಶಕ್ತಿ ಗಳೆರಡರಲ್ಲಿಯಾಗಲಿ **ಕುಱೈಯುಡೈಯಾರ್ಕ್ಕುವ್** – ಪರಿಪೂರ್ಣವಾಗಿಲ್ಲದವರಿಗೂ, **ಫಲವಿಳಂಬವ್** ಇತ್ಯಾದಿ ತ್ರೈವರ್ಣಿಕರಾಗಿದ್ದು ಜ್ಞಾನ ಶಕ್ತಿಗಳೆರಡೂ ಪೂರ್ಣವಾಗಿದ್ದರೂ ಫಲವಿಳಂಬನನ್ನು ಸಹಿಸಲಾರದ ತೀವ್ರವಾದ ತ್ವರೆಯನ್ನುಳ್ಳವರಿಗೂ, ಅಂದರೆ ಭಕ್ತಿಯೋಗ ನಿಷ್ಠನಿಗೆ ಪ್ರಾರಬ್ಧ ಕರ್ಮಾವಸಾನದಲ್ಲಿ ಮೋಕ್ಷ, ತಾವತ್ಪರ್ಯಂತ ಈ ಸಂಸಾರದಲ್ಲಿರಲಾರದ ತ್ವರೆಯುಳ್ಳವರಿಗೂ, ಯೋಗ್ಯವಲ್ಲ ಅಂಥಹವರು **ತಂಗಳ್ ಅಳುವುಹಳೈ** ಇತ್ಯಾದಿ– ತಮ್ಮ ತಮ್ಮ ಸಾಮರ್ಥ್ಯದ ಅಳತೆಯನ್ನು ತಿಳಿದುಕೊಂಡು, ಅದ್ವಾರಕವಾಗಿ ಪ್ರಪತ್ತಿಯನ್ನು ಮೋಕ್ಷೋಪಾಯವಾಗಿ **ಪಟ್ರುಮವರ್ ಹಳುಕ್ಕು**–ಅವಲಂಬಿಸಬಹುದು. ಆ ಅಧಿಕಾರಿಗಳಿಗೆ, ಸರ್ವಫಲ ಸಾಧನವಾದ ಪ್ರಪತ್ತಿ ತಾನೇ **ಪರಭಕ್ತಿ ಸ್ಥಾನತ್ತಿಲೇ ಚೋದಿತ್ಯೈಯಾಹೈಯಾಲೇ**-ಪರಭಕ್ತಿ ಸ್ಥಾನದಲ್ಲಿ ಶಾಸ್ತ್ರಗಳಲ್ಲಿ, "ಯದ್ಯೇನ ಕಾಮ ಕಾಮೇನ ನಸಾಧ್ಯಂ ಸಾಧನಾಂತರೈಃ। ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚಭಕ್ತಿತಃ। ತೇನತೇನಾ ಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ॥" ಎಂದು (ಸಾಧಾನಂತರಗಳಿಂದ ಸಾಧಿಸಲಸಾಧ್ಯವಾದ ಅಭೀಷ್ಟವೂ

ಭಕ್ತಿಪ್ರಪತ್ತ್ಯೋಃ ತುಲ್ಯಫಲತ್ವಂ

ಇಪ್ಪಡಿ ಪ್ರಪತ್ತಿಕ್ಕುಮ್, ಭಕ್ತಿಕ್ಕುಮ್ ಅಧಿಕಾರಿವಿಶೇಷತ್ತಾಲೇ ಪ್ರವೃತ್ತಿ ತುಲ್ಯಫಲತ್ವಮುಣ್ಡಾಹೈಯಾಲೇ ವಿಕಲ್ಪಮಾಹಕ್ಕಡವದು. ಇವತ್ತುಕ್ಕು "ನಾನಾಶಬ್ದಾದಿಭೇದಾತ್" ಎನ್ನಿರ ಅಧಿಕರಣತ್ತಿಲೇ ಭೇದಮ್ ಸಿದ್ಧಮ್.

"ವಿಕಲ್ಪೋಽವಿಶಿಷ್ಟ ಫಲತ್ವಾತ್" ಎನ್ನಿರವಧಿಕರಣತ್ತಿಲೇ ವಿಕಲ್ಪಮುಮ್ ಸಿದ್ಧಮ್.

ಮೋಕ್ಷದಲ್ಲಿ ಆಸೆಯುಳ್ಳವನು ಕರ್ಮ ಯೋಗ ಜ್ಞಾನ ಯೋಗಾಂಗಕವಾದ ಭಕ್ತಿಯಿಂದ ಸಾಧಿಸಲು ಅಶಾಧ್ಯವಾದ ಮೋಕ್ಷವನ್ನೂ, ನ್ಯಾಸದಿಂದಲೇ-ಅಂದರೆ ಪ್ರಪತ್ತಿಯಿಂದಲೇ ಸಾಧಿಸಬಹುದು) ಚೋದಿತವಾಗಿದೆ. ಈ ಪ್ರಪತ್ತಿಯನ್ನು ಅನುಷ್ಠಿಸಿದವನಿಗೆ, **ಉಪಾಸಕನುಕ್ಕು ಪರಭಕ್ತಿಕ್ಕು ಮೇಲ್ವರುಂ** ಇತ್ಯಾದಿ, ಉಪಾಸಕನಿಗೆ ಪರಭಕ್ತಿಗೆ ನಂತರ ಉಂಟಾಗುವ ಪರಜ್ಞಾನ ಪರಮ ಭಕ್ತಿರೂಪ ಅವಸ್ಥೆಗಳು, ಈ ಸ್ವತಂತ್ರ ಪ್ರಪತ್ತಿ ನಿಷ್ಠನು ಪ್ರಪತ್ತಿ ಕಾಲದಲ್ಲಿ ಮಾಡುವ ಸಂಕಲ್ಪಾನುಸಾರ, ಈ ಪ್ರಪತ್ತಿಗೆ ಫಲವಾಗಿ ಉಂಟಾಗುತ್ತವೆ ಅಂದರೆ ಪ್ರಪತ್ತ್ಯನಂತರ ಉಂಟಾಗುವ ಪರಭಕ್ತ್ಯಾದ್ಯವಸ್ಥೆಗಳು ಪ್ರಪತ್ತಿಯ ಫಲವಾಗಿರುತ್ತವೆ **ಪ್ರಪತ್ತಿ ತಾನೇ ಪರಭಕ್ತಿಸ್ಥಾನತ್ತಿಲೇ ಚೋದಿತೈಯಾಹೈಯಾಲ್** ಎಂದು ಹೇಳಿರುವ ವಾಕ್ಯದಿಂದ ಭಕ್ತಿಯು ಹಾಗೆ ಪ್ರಪತ್ತಿಯೂ ಸಾಕ್ಷಾನ್ಮೋಕ್ಷ ಸಾಧನವಾಗಿ ಭಗವತ್ಪ್ರಸಾದಕ್ಕೆ ದ್ವಾರವೆಂಬುದು ತಪ್ಪು ಪ್ರಪತ್ತಿಯು ಭಕ್ತಿ ಸ್ಥಾನದಲ್ಲಿದ್ದು ಭಕ್ತಿಯೇ ಮೋಕ್ಷವನ್ನು ಕೊಡುತ್ತದೆ ಎಂದು ಹೇಳಿದರೆ, **ಮೇಲ್ವರುಂ ಅನುಕೂಲಾವಸ್ಥೈಹಳ್ ಇದಿನ್ ಫಲಮಾಯಿರುಕ್ಕುಮ್,** ಎಂದು ಪರ ಭಕ್ತ್ಯಾದಿ ಅನುಕೂಲಾವಸ್ಥೆಗಳು ಪ್ರಪತ್ತಿಯ ಫಲವಾಗಿರುತ್ತವೆ, **ಎಂಬ** ಶ್ರೀ ಸೂಕ್ತಿಗೆ ವಿರೋಧವಾಗುತ್ತದೆ. ಆದ್ದರಿಂದ ಪ್ರಪತ್ತಿಯೇ ಸಾಕ್ಷಾನ್ಮೋಕ್ಷ ಸಾಧಕವೆಂಬುದು ಶ್ರೀ ಸೂಕ್ತಿಯ ಹೃದಯ.

ಭಕ್ತಿಪ್ರಪತ್ತಿಗಳಿಗೆ ಫಲವು ಒಂದೇ

ಪ್ರಪತ್ತಿಯೂ ಭಕ್ತಿಯು ಹಾಗೆ ಸಾಕ್ಷಾನ್ಮೋಕ್ಷ ಸಾಧನವೆಂದರೆ, ಎಲ್ಲರೂ ಲಘುವಾದ ಪ್ರಪತ್ತಿಯನ್ನೇ ಅವಲಂಬಿಸಿ ಗುರುವಾದ ಭಕ್ತಿ ಯೋಗವನ್ನು ಕೈಬಿಡುವದಿಲ್ಲವೇ ಆದ್ದರಿಂದ ಭಕ್ತಿಯೇ ಮೋಕ್ಷ ಸಾಧಕವೆಂಬುದು ಚೋದ್ಯ ಇದಕ್ಕೆ ಸಮಾಧಾನವಾಗಿ **ಇಪ್ಪಡಿ ಪ್ರಪತ್ತಿಕ್ಕುಂ ಭಕ್ತಿಕ್ಕುಂ** ಎಂದಾರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ ಅದಾಗಿ ಹೀಗೆ ಪ್ರಪತ್ತಿಗೂ ಭಕ್ತಿಗೂ ಅಧಿಕಾರಿಗಳು ಬೇರೆ ಬೇರೆ ಅಕಿಂಚನ, ಸಕಿಂಚನಾಧಿಕಾರಿಗಳನ್ನು ದ್ದೇಶಿಸಿ ಪ್ರಪತ್ತಿಗೂ ಭಕ್ತಿಗೂ ಫಲವು ಸಮಾನವಾದ್ದರಿಂದ ವಿಕಲ್ಪವು ಹೇಳಲ್ಪಟ್ಟಿದೆ ಅಂದರೆ ಅಕಿಂಚನನು ಪ್ರಪತ್ತಿಯನ್ನು ಅನುಷ್ಠಿಸಬೇಕು ಸಕಿಂಚನನು ಭಕ್ತಿಯನ್ನು ಅನುಷ್ಠಿಸಬೇಕು ಇಬ್ಬರಿಗೂ ಮೋಕ್ಷವೆಂಬ ಫಲವು ಒಂದೇ. ಆದ್ದರಿಂದ ಎರಡರಲ್ಲಿ ಒಂದನ್ನು ಅನುಷ್ಠಿಸಿದರೆ ಸಾಕು ಹಾಗಾದರೂ ಸಮರ್ಥಾಧಿಕಾರಿಗೆ (ಸಕಿಂಚನ) ಭಕ್ತಿ. ಅಸಮರ್ಥಾಧಿಕಾರಿಗೂ (ಅಕಿಂಚನ), ಸಾಮರ್ಥ್ಯವಿದ್ದರೂ ವಿಳಂಬಾಕ್ಷಮರಿಗೂ ಪ್ರಪತ್ತಿ ಎಂದು ವ್ಯವಸ್ಥಿತವಾಗಿರುವಾಗ, ಒಂದೇ ಅಧಿಕಾರಿಗೆ ಎರಡರಲ್ಲೊಂದನ್ನು ಮಾಡಬಹುದೆಂದು ಹೇಳಿದರೆ ತಾನೆ ವಿಕಲ್ಪವು ಉಂಟಾಗುತ್ತದೆ ಭಕ್ತಿ ಪ್ರಪತ್ತಿಗಳಿಗೆ ವಿಕಲ್ಪವು ಹೇಗೆ ಎಂಬುದು ಶಂಕೆ ಇದಕ್ಕೆ ಸಮಾಧಾನವಾಗಿ ಫಲವು ಒಂದೇ ಆಗಿರುವುದರಿಂದ, ಭಕ್ತಿ ಪ್ರಪತ್ತಿಗಳು ಪರಸ್ಪರ ನಿರಪೇಕ್ಷ ಸಾಧನವಾಗಿರುವುದರಿಂದ, ವಿಕಲ್ಪವು ಹೇಳಲ್ಪಟ್ಟಿದೆ. ಸೂತ್ರಕಾರರೂ "ವಿಕಲ್ಪೋಽವಿಶಿಷ್ಟ ಫಲತ್ವಾತ್" ಎಂದು ಫಲವು ಒಂದೇ ಆಗಿರುವುದರಿಂದ ವಿಕಲ್ಪವನ್ನು ಸೂತ್ರಿಸಿದ್ದಾರೆ. ಹಾಗಾದರೆ ಭಕ್ತಿ ಪ್ರಪತ್ತಿಗಳು ಒಂದೇ ರೂಪವೇ ಎಂಬುದು ಪುನಶ್ಶಂಕೆ. ಅದಕ್ಕೆ ಪ್ರತ್ಯುತ್ತರವಾಗಿ **ಇವಟ್ರುಕ್ಕು, "ನಾನಾಶಬ್ದಾದಿಭೇದಾತ್",** ಎಂದಾರಂಭಿಸಿ ಸಮಾಧಾನವನ್ನು **ಹೇಳುತ್ತಾರೆ.**

ಉಪಾಸನವಿದ್ಯಾ ಪ್ರಕಾರಾ ಇವ ನ್ಯಾಸ ವಿದ್ಯಾ ಪ್ರಕಾರಾಃ

ಉಪಾಸನತ್ತಿಲ್ ವಿಶೇಷಙ್ಗಳ್ಪೋಲೇ, ಶಾಖಾಭೇದಙ್ಗಳಿಲುಂ ಭಗವಚ್ಛಾಸ್ತ್ರ ಸಂಹಿತಾಭೇದಙ್ಗಳಿಲುವರ್ ಶೊಲ್ಲು(ವ)ಹಿರ ನ್ಯಾಸವಿದ್ಯೈಯಿಲ್ ಮನ್ತ್ರಾದಿ ವಿಶೇಷಙ್ಗಳ್ ಕಣ್ಡುಕೊಳ್ವದು. ನಮಸ್ಕಾರಮ್ ವಾಚಿಕಂ, ಕಾಯಿಕಂ, ಮಾನಸಂ, ಎನ್ರು ಪಿರಿನ್ದಾಪ್ಪೋಲೇ, ಪ್ರಪತ್ತಿಯಿಲುಮೋರೊನ್ರೈಮುನ್ನಿಟ್ಟು ಇವ್ವಿಭಾಗಙ್ಗಳ್ ಶೊಲ್ಲಪ್ಪಟ್ಟದು. ಇವೈಮೂನ್ರುಮ್ ಪೊರುನ್ದಿನಪೋದು ಪೂರ್ಣ ನಮಸ್ಕಾರಮಾನಾಪ್ಪೋಲೇ, ಪೂರ್ಣ ಪ್ರಪತ್ತಿಯಾಹಕ್ಕಡವದೆನ್ರವರ್ಗಳ್ ಶಾಶುರಙ್ಗಳುಕ್ಕುಮ್, ವಾಚಿಕ ಕಾಯಿಕಙ್ಗಳಾನ ವ್ಯಾಪಾರವಿಶೇಷಙ್ಗಳ್ ಪರೀವಾಹಮಾಮ್ಪಡಿಯಾನ ಮಾನಸಪ್ರಪತ್ತಿಯಿನುಡೈಯ ಪೂರ್ತಿಯಿಲೇ ತಾತ್ಪರ್ಯಮಾಹಕ್ಕಡವದು. ಯಥಾಧಿಕಾರಮ್ ಇವೈಯೆಲ್ಲಾಮ್ ಫಲಪ್ರದಂಗಳೆನ್ರುವಿಡಂಮುನ್ಪೇ ಶೊನ್ನೋಮ್.

ಆದಾಗಿ ಭಕ್ತಿ, ಪ್ರಪತ್ತಿಗಳು ಬೇರೆ ಬೇರೆ ವಿದ್ಯೆಗಳು ಎಂಬುದು ನಾನಾ ಶಬ್ದಾತ್, ಎಂದಾರಂಭಿಸುವ ಅಧಿಕರಣದಿಂದ ಸಿದ್ಧ. ಹಾಗೆಯೇ "ವಿಕಲ್ಪೋಽ ವಿಶಿಷ್ಟ ಫಲತ್ವಾತ್" ಎಂಬ ಅಧಿಕರಣದ ಪ್ರಕಾರ ವಿಕಲ್ಪವೂ ಸಿದ್ಧ. ವಿಕಲ್ಪಃ – ವಿಭಿನ್ನಕಲ್ಪ ಏವ ನತು ಸಮುಚ್ಚಯಃ, ಕುತಃ–ಅವಿಶಿಷ್ಟ ಫಲತ್ವಾತ್ – ಪರಸ್ಪರ ಅಸಹಾಯೇನ ತುಲ್ಯ ಫಲ ಜನನಾತ್ ಎಂಬುದು, ಸೂತ್ರಾರ್ಥ.

"ಶಬ್ದಾದಿ ಭೇದಾತ್" ಎಂಬಲ್ಲಿ ಶಬ್ದ ಭೇದವು ಯಾವುದೆಂದರೆ, ಉಪಾಸೀತ, ಪ್ರಪದ್ಯೇತ, ಭಕ್ತಿಃ, ಪ್ರಪತ್ತಿಃ ಇತ್ಯಾದಿಗಳು, ಪರಸ್ಪರ ಭಿನ್ನ ಪ್ರವೃತ್ತಿ ನಿಮಿತ್ತಗಳನ್ನುಳ್ಳವು ಈ ಶಬ್ದಗಳು. ಸ್ನೇಹ ರೂಪತಾಪನ್ನ ಧ್ಯಾನ ಸಂತತಿತ್ವವು ಭಕ್ತಿ ಪದಕ್ಕೆ ಪ್ರವೃತ್ತಿ ನಿಮಿತ್ತ. ನಿರಪೇಕ್ಷೋಪಾಯತ್ವ ಪ್ರಾರ್ಥನಾನ್ವಿತ ಭರನ್ಯಾಸತ್ವವು ಪ್ರಪತ್ತಿ ಪದ ಪ್ರವೃತ್ತಿ ನಿಮಿತ್ತ. ಆದ್ದರಿಂದ ಶಬ್ದ ಭೇದವು ಏರ್ಪಡುವುದರಿಂದ ಕರ್ಮ ಭೇದವು ಸಿದ್ಧ.

ಪ್ರಪತ್ತಿಯಲ್ಲಿ ಅವಾಂತರ ಭೇದಗಳು ಉಪಾಸನ ವಿದ್ಯೆಯ ಹಾಗೆ

ಅನೇಕ ಕರಣ ಮಂತ್ರಗಳನ್ನು ಉಪಯೋಗಿಸಿ ನ್ಯಾಸ ವಿದ್ಯೆಯನ್ನು ಅನುಷ್ಠಿಸುವುದರಿಂದ ನ್ಯಾಸ ವಿದ್ಯೆಗಳು ಅನೇಕವೇ ಎಂಬುದು ಶಂಕೆ. ಇಲ್ಲವೆಂಬುದು ಸಿದ್ಧಾಂತ. ಹೇಗೆಂದರೆ, **ಉಪಾಸನತ್ತಿಲ್ ವಿಶೇಷಂಗಳ್ಪೋಲೇ**– ಉಪಾಸನ ರೂಪವಾದ ದಹರ ಶಾಂಡಿಲ್ಯಾದಿ ವಿದ್ಯೆಗಳ ಹಾಗೆ, **ಶಾಖಾಭೇದಂಗಳಿಲುಂ**, ತೈತ್ತಿರೀಯ, ಶ್ವೇತಾಶ್ವರಾದಿ ವೇದ ಶಾಖಾ ಭೇದಗಳಲ್ಲಿಯೂ **ಭಗವಚ್ಛಾಸ್ತ್ರಸಂಹಿತಾ ಭೇದಂಗಳಿಲುಮ್**–ಪಾಂಚರಾತ್ರ ಸಂಬಂಧಿಗಳಾದ ಲಕ್ಷ್ಮೀತಂತ್ರ, ಅಹಿರ್ಬುಧ್ನ್ಯಾದಿ ಸಂಹಿತೆಗಳಲ್ಲಿಯೂ **ಶೊಲ್ಲುಂನ್ಯಾಸ ವಿದ್ಯೈಯಿಲ್**–ಪ್ರತಿಪಾದ್ಯವಾದ ನ್ಯಾಸ ವಿದ್ಯೆಯಲ್ಲಿ **ಮಂತ್ರಾದಿ ವಿಶೇಷಂಗಳ್ ಕಂಡು ಕೊಳ್ವದು**–ಮಂತ್ರ ಕೃತ ಭೇದಗಳನ್ನು ತಿಳಿಯುವುದು ಆದಿ ಶಬ್ದದಿಂದ ಗುಣ ವಿಗ್ರಹ ಪರಿಗ್ರಹ. **ನಮಸ್ಕಾರಮ್** ಇತ್ಯಾದಿ–ನಮಸ್ಕಾರವು ವಾಚಿಕ, ಮಾನಸ, ಕಾಯಿಕವೆಂದು ಮೂರು ವಿಧ. ನಮಃ ಎಂದು ಹೇಳುವುದು ವಾಚಿಕ. ಉತ್ಕೃಷ್ಟನ ವಿಷಯದಲ್ಲಿ ಅಂದರೆ ಶೇಷಿ ವಿಷಯದಲ್ಲಿ ಅವನಿಗೆ ನಾನು ಶೇಷ ಭೂತನು ಎಂಬ ಅನುಸಂಧಾನವು ಮಾನಸಿಕವಾದ ನಮಸ್ಕಾರ ಕಾಯಿಕವೆಂಬುದು ಪ್ರಣಿಪತನ, ಅಂಜಲಿ ಬಂಧ ಇತ್ಯಾದಿಗಳು. ಅದೇ ರೀತಿಯಲ್ಲಿ ಪ್ರಪತ್ತಿಯಲ್ಲಿಯೂ ಮಾನಸ ವಾಚಿಕ ಕಾಯಿಕ ವ್ಯಾಪಾರಗಳಲ್ಲಿ ಒಂದನ್ನು ಮುಂದಿಟ್ಟುಕೊಂಡು ಈ ವಿಭಾಗಗಳನ್ನು ತಿಳಿಯತಕ್ಕದ್ದು. ಈ ಮೂರೂ ಸೇರಿದಾಗ ಪೂರ್ಣ ನಮಸ್ಕಾರವಾದಂತೆ, ವಾಚಿಕ ವ್ಯಾಪಾರ ಪರೀವಾಹವಾದ ಮಾನಸ ಪ್ರಪತ್ತಿಯು ಪೂರ್ಣ ಪ್ರಪತ್ತಿ. ಅವರವರ ಅಧಿಕಾರಾನುಗುಣ ಮಾನಸ, ವಾಚಿಕ ಪ್ರಪತ್ತಿಗಳು ಫಲಪ್ರದಗಳೆಂಬುದನ್ನು ಹಿಂದೆಯೇ ತಿಳಿಸಿರುತ್ತಾರೆ. ಅಂದರೆ ಸ್ವನಿಷ್ಠೆ, ಉಕ್ತಿನಿಷ್ಠೆ, ಆಚಾರ್ಯನಿಷ್ಠೆ ಎಂಬವು ಯಥಾಧಿಕಾರ ಫಲಪ್ರದಗಳು

ನಿನ್ರು ನಿಲೈಕ್ಕುರ ನಿರ್ಕುಮ್ ಕರುಮಮುಮ್ ಸೇರ್ಮದಿಯಾಲ್
ನನ್ರೆನ ನಾಡಿಯ ಜ್ಞಾನಮುಮ್ ನಲ್ಕು ಮುಳ್ ಕಣ್ಣುಡೈಯಾರ್ ।
ಒನ್ರಿಯ ಪತ್ತಿಯುಮ್ ಒನ್ರುಮಿಲಾ ವಿರೈವಾರ್ಕ್ಕರುಳಾಲ್
ಅನ್ರು ಪಯನ್ತರು ಮಾರು ಮರಿನ್ದವರನ್ದಣರೇ ॥೬॥

ಕರ್ಮಜ್ಞಾನಸಮುಪಾಸನಂಚ ಶರಣವ್ರಜ್ಯೇತಿ ಚಾವಸ್ಥಿತಾನ್
ಸನ್ಮಾರ್ಗಾನಪವರ್ಗಸಾಧನವಿಧೌ ಸದ್ವಾರಕಾದ್ವಾರಕಾನ್ ॥
ಏಕದ್ವ್ಯೇಕಕೃತಿ ಯೋಗಸಂಭೃತ ಪೃಥಗ್ಭಾವಾನುಭಾವಾನಿಮಾನ್ ।
ಸಮ್ಯಕ್ಪ್ರೇಕ್ಷ್ಯ ಶರಣ್ಯ ಸಾರಥಿ ಗಿರಾಮನ್ತೇ ರಮನ್ತೇಬುಧಾಃ ॥

ಇತಿ ಶ್ರೀ ಕವಿತಾರ್ಕಿಕಸಿಂಹಸ್ಯ ಸರ್ವತನ್ತ್ರಸ್ವತಂತ್ರಸ್ಯ ಶ್ರೀಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಉಪಾಯವಿಭಾಗಾಧಿಕಾರೋ ನವಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಅಧಿಕಾರಾರ್ಥ ಸಂಗ್ರಹಃ

ಅನಂತರ ಅಧಿಕಾರಾರ್ಥವನ್ನು **ನಿನ್ರುನಿಲೈಕ್ಕುರ** ಎಂಬ ಪಾಶರ ರೂಪದಲ್ಲಿ ಆಚಾರ್ಯರು ಅನುಗ್ರಹಿಸುತ್ತಾರೆ. **ನಿನ್ರುನಿಲೈಕ್ಕು**–ಚೇತನರು ಸ್ಥಿರವಾಗಿ ನಿಂತ ಸ್ಥಿತಿಗೆ **ಉರನಿಕ್ಕುಂ**–ಯೋಗ್ಯವಾಗಿರುವ, **ಕರುಮಮುಮ್**-ಕರ್ಮ ಯೋಗವನ್ನೂ, **ನೇರ್‌ಮದಿಯಾಲ್** – ಸೂಕ್ಷ್ಮವಾದ ಬುದ್ಧಿಯಿಂದ, ದುಷ್ಕರವಾದ ಜ್ಞಾನಯೋಗವನ್ನೂ ನಿಷ್ಪ್ರಮಾದವಾಗಿ ನಿರ್ವಹಿಸತಕ್ಕ ಸೂಕ್ಷ್ಮ ಬುದ್ಧಿಯಿಂದ, **ನನ್ರೆನನಾಡಿಯ ಜ್ಞಾನಮುಮ್** – ಒಳ್ಳೆಯದೆಂದು ಅಂಗೀಕರಿಸಿದ ಜ್ಞಾನಯೋಗವು. ಆದಾಗಿ ಕರ್ಮಯೋಗವು **ಲೌಕಿಕ ಕರ್ಮ** ಸಜಾತೀಯವಾದ್ದರಿಂದ **ನಿಷ್ಪ್ರಮಾದ** ವಾಗಿಯೂ ಸುಕರವಾಗಿಯೂ ಇರುತ್ತದೆ ಜ್ಞಾನಯೋಗವು ವಿಷಯ ವ್ಯಾಪಾರ ಶೂನ್ಯವಾಗಿರುವುದರಿಂದ ದುಷ್ಕರ ವಾದರೂ ಜ್ಞಾನತ್ವೇನ ಸಜಾತೀಯವಾಗಿದ್ದರೂ ಅಂತರಂಗವಾಗಿರುವುದರಿಂದಲೂ ಒಳ್ಳೆಯದೆಂದು ಆತ್ಮಾವಲೋಕನ ದಲ್ಲಿ ಇಚ್ಛೆಯುಳ್ಳವರಿಗೆ ಅಂಗೀಕೃತವು . **ನಲ್ಕುಮುಳ್ ಕಣ್ಣುಡೈಯಾರ್**– ಸ್ವ ಸ್ವರೂಪದಲ್ಲಿ ಸ್ನೇಹವುಳ್ಳ ಆತ್ಮಾ ವಲೋಕನವನ್ನುಳ್ಳವರ **ಒನ್ರಿಯ**-ಸ್ವೀಕರಿಸಿದ, **ಪತ್ತಿಯುಮ್**-ಭಕ್ತಿಯೋಗವನ್ನೂ, **ಒನ್ರುಮಿಲಾವಿರೈವಾರ್ಕ್ಕು**– ಕರ್ಮಯೋಗಾದಿಗಳಲ್ಲಿ ಒಂದರಲ್ಲಿಯೂ ಅಧಿಕಾರವಿಲ್ಲದವರೂ, ವಿಳಂಬಾಕ್ಷವರೂ ಆದವರಿಗೆ **ಅರುಳಾಲ್**– ಉಪಾಯಾಂತರ ಸ್ಥಾನಜನ್ಯ ಕೃಪೆಯಿಂದ **ಅನ್ರುಪಯಂತರುಂ**-ಭಗವತ್ಪ್ರಸಾದವನ್ನುಂಟುಮಾಡಿ ಇವನು ಇಚ್ಛಿಸಿದ ಕಾಲದಲ್ಲೇ ಫಲವನ್ನು ಕೊಡುವ **ಆರುಂ**–ಉಪಾಯವನ್ನೂ, ಅಂದರೆ ಪ್ರಪತ್ತಿಯನ್ನೂ, **ಅರಿಂದವರ್** - ತಿಳಿ ದವರು **ಅಂದಣರ್**-ಬ್ರಾಹ್ಮಣೋತ್ತಮರು ಬ್ರಹ್ಮಜ್ಞಾನಿಗಳು ವಂದರ್ಥ

ಅನಂತರ ಪ್ರಪತ್ತಿಯೇ ಸದ್ವಾರಕವಾಗಿಯೂ ಅದ್ವಾರಕವಾಗಿಯೂ ಮೋಕ್ಷ ಸಾಧಕವೆಂದು **ಕರ್ಮಜ್ಞಾನ ಸಮುಪಾಸನಂಚ** ಎಂದಾರಂಭಿಸಿ ಶ್ಲೋಕ ರೂಪವಾಗಿ ಆಚಾರ್ಯರು ಅನುಗ್ರಹಿಸುತ್ತಾರೆ **ಕರ್ಮ**-ಕರ್ಮಯೋಗ **ಜ್ಞಾನಮ್**–ಜ್ಞಾನಯೋಗ ಸಹಕೃತ, **ಉಪಾಸನಂಚ**-ಭಕ್ತಿಯೋಗವೂ, ಚಕಾರವು, ಇವು ಮೂರೂ ಒಂದು ರಾಶಿಗೆ ಸೇರಿದುವು ಎಂದು ತಿಳಿಸುತ್ತದೆ. **ಶರಣವ್ರಜ್ಯೇತಿಚ**-ಶರಣವರಣವೆಂದೂ, **ಚಕಾರವು** ಇದು ಸ್ವತಂತ್ರೋ ಪಾಯವೆಂಬುದನ್ನು ಸೂಚಿಸುತ್ತದೆ. **ಅಪವರ್ಗ ಸಾಧನ ವಿಧೌ**–ಮೋಕ್ಷವನ್ನು ಸಾಧಿಸಿ ಕೊಡುವವು ಎಂದು, ನಿಧ್ಯಾಯಕಗಳಾಗಿ **ಅವಸ್ಥಿತಾನ್ ಸನ್ಮಾರ್ಗಾನ್** – ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ವಿಧಿಸಲ್ಪಟ್ಟ, ಸಮೀಚೀನೋಪಾಯಗಳಾದ **ಸದ್ವಾರಕಾದ್ವಾರಕಾನ್** – ಸದ್ವಾರಕವಾಗಿಯೂ ಅದ್ವಾರಕವಾಗಿಯೂ ಇರುವ

ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಪ್ರಪತ್ತಿಯೋಗಗಳನ್ನು, ಕರ್ಮಯೋಗ ಜ್ಞಾನಯೋಗಗಳು ಭಕ್ತಿಯೋಗ ದ್ವಾರಾ ಮೋಕ್ಷಪ್ರದಗಳು, ಭಕ್ತಿಯೋಗವೂ, ಸ್ವತಂತ್ರ ಪ್ರಪತ್ತಿಯೋಗವೂ ಅದ್ವಾರಕವಾಗಿ ಸಾಕ್ಷಾತ್ತಾಗಿ ಮೋಕ್ಷಪ್ರದಗಳು; **ಏಕದ್ವ್ಯೃಕೃತಿಯೋಗ ಸಂಭೃತ ಪೃಥಗ್ಭಾವಾನುಭಾವಾನ್**-ಏಕದ್ವ್ಯೃಕೃತಿಯೋಗೇನ ಸಂಭೃತಃ ಪೃಥಗ್ಭಾವೂ ಯಸ್ಯಸಃ, ತಾದೃಶ ಅನುಭಾವಃ-ಪ್ರಭಾವಃ ಯೇಷಾಂತೇ ತಥೋಕ್ತಾಃ ಏಕಸ್ಯದ್ವ್ಯೃಕೃತಿಯೋಗಃ, ಕರ್ಮಜ್ಞಾನ ಉಪಾಸನ ಶರಣಾಗತಿ ಎಂಬ ನಾಲ್ಕು ಉಪಾಯಗಳಿಗೂ ಎರಡು ಆಕಾರಗಳಿವ. ಆದಾಗಿ ಕರ್ಮಯೋಗಕ್ಕ ಜ್ಞಾನಯೋಗ ದ್ವಾರಾ ಆತ್ಮಾವಲೋಕನವೂ, ಜ್ಞಾನಯೋಗ ದ್ವಾರವಿಲ್ಲದೆ ಸಾಕ್ಷಾತ್ತಾಗಿಯೇ ಆತ್ಮಾವಲೋಕನವೂ ಎಂಬ ಎರಡು ಆಕಾರಗಳಿವೆ. ಹಾಗಯೇ ಜ್ಞಾನಯೋಗಕ್ಕೆ ಭಕ್ತಿಯೋಗಾಧಿಕಾರ ಭೂತವಾದ ಆತ್ಮಾವಲೋಕನಕ್ಕೆ ಕಾರಣತ್ವವೂ, ಕೈವಲ್ಯಾಖ್ಯ ಭೋಗ ಹೇತುತ್ವವೆಂಬುದೂ, ಎರಡು ಆಕಾರಗಳು. ಹಾಗೆಯೇ ಭಕ್ತಿಯೋಗಕ್ಕೆ ಐಶ್ವರ್ಯಾದಿ ಪ್ರಾಪ್ತಿ ಹೇತುತ್ವ; ಸಾಕ್ಷಾನ್ಮೋಕ್ಷ ಪ್ರಾಪ್ತಿ ಹೇತುತ್ವವೆಂಬ ಎರಡು ಆಕಾರಗಳಿವೆ. ಶರಣಾಗತಿಗೂ, ಯಥೋಕ್ತ ಕರ್ಮ ಯೋಗಾದಿಗಳಲ್ಲಿ ಪ್ರವೃತ್ತರಾದ ಅಧಿಕಾರಿಗಳಿಗೆ ದುಷ್ಕರೋಪಾಯಾಂತರ ಸ್ಥಾನದಲ್ಲಿ ನಿಂತು ಸಂಪೂರ್ಣವಾದ ಭಕ್ತಿಯೋಗವನ್ನು ಯಾವ ಅಡ್ಡಿಯೂ ಇಲ್ಲದಂತೆ ನಡೆಸಿಕೊಡುವುದೆಂಬ ಅಂಗ ಪ್ರಪತ್ತಿ ರೂಪತ್ವವೂ, ತಾನೇ ಮೋಕ್ಷವನ್ನು ಸಾಧಿಸಿ ಕೊಡಬಲ್ಲ ಸ್ವತಂತ್ರ ಪ್ರಪತ್ತಿ ರೂಪವಾದ ಆಕಾರವೂ ಇದೆ. ಹೀಗೆ ಈ ಅಧಿಕಾರದಲ್ಲೇ ನಿರೂಪಿಸಿದ ಪ್ರಕಾರ, ಈ ನಾಲ್ಕು (ಗೌಣ ಮುಖ್ಯ) ಉಪಾಯಗಳಿಗೂ ನಾಲ್ಕು ವಿಧವಾದ ದ್ವ್ಯೃಕೃತಿ ಯೋಗತ್ವವು ಹೇಳಲ್ಪಟ್ಟಿದೆ ಈ ಯೋಗದಿಂದ ಕೂಡಿದ, ಪೃಥಕ್ ಪೃಥಕ್ ಪ್ರಭಾವಗಳನ್ನುಳ್ಳ ಈ ಯೋಗಾದಿಗಳನ್ನು **ಸಮ್ಯಕ್ಪ್ರೇಕ್ಷ್ಯ** ಚನ್ನಾಗಿ ಶ್ರುತಿ ಸ್ಮೃತಿಗಳ ಮೂಲಕ ನಿರೂಪಣೆ ಮಾಡಿ **ಶರಣ್ಯಸಾರಥಿಗಿರಾಂ**-ಶರಣ್ಯನೂ-ರಕ್ಷಕನೂ, ಅರ್ಜುನ ಸಾರಥಿಯೂ ಆದ ಸರ್ವೇಶ್ವರನ ಗೀತಾ ವಾಕ್ಯಗಳ, **ಅಂತೇ**-ಅಂತ್ಯದಲ್ಲಿರುವ ಚರಮ ಶ್ಲೋಕದಲ್ಲಿ, **ಬುಧಾಃ ರಮಂತೇ.** ಪಂಡಿತರು ರಮಿಸುತ್ತಾರೆ. ಚರಮ ಶ್ಲೋಕದಲ್ಲಿ ಹೇಳಿರುವ ಪ್ರಪತ್ತಿ ಶಾಸ್ತ್ರದಲ್ಲಿ ರಮಿಸುತ್ತಾರೆ. ಅಂಗ ಪ್ರಪತ್ತಿ ರೂಪವಾಗಿಯೂ ಸ್ವತಂತ್ರ ಪ್ರಪತ್ತಿ ರೂಪವಾಗಿಯೂ ಬಳಸುತ್ತಾರೆಂದರ್ಥ.


ಇತಿ ಶ್ರೀಮದ್ರಹಸ್ಯತ್ರಯಸಾರದ ಉಪಾಯವಿಭಾಗಾಧಿಕಾರಕ್ಕೆ ಸಾರಚಂದ್ರಿಕಾ ವ್ಯಾಖ್ಯಾನವು ಸಮಾಪ್ತ.

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ



ಪ್ರಪತ್ತಿಯೋಗ್ಯಾಧಿಕಾರಃ

ಆರ್ಥಿತ್ವೇನ ಸಮರ್ಥತಾ ತ್ರಿಕತನುಸ್ಸಂಪಿಂಡಿತಾಧಿಕ್ರಿಯಾ
ಸಾಕ್ಷಾತ್ಸಾಙ್ಗ ಷಡಙ್ಗಯೋಗ ನಿಯತಾವಸ್ಥಾ ವ್ಯವಸ್ಥಾಪಿತಾ ।
ಕ್ಷಾತ್ರೀ ಸರ್ವಶರಣ್ಯತಾ ಭಗವತಃಸ್ಮೃತ್ಯಾಪಿ ಸತ್ಯಾಪಿತಾ
ಸತ್ಯಾದಿಷ್ವಿವ ನೈಗಮೇಷ್ವಧಿಕೃತಿಸ್ಸರ್ವಾಸ್ಪದೇ ಸತ್ಪಥೇ ॥೨೪॥

ಶ್ರೀಮತೆ ನಿಗಮಾಂತ ಮಹಾದೇಶಿಕಾಯ ನಮಃ

ಶ್ರೀ ಮದ್ರಹಸ್ಯತ್ರಯಸಾರೇ **ಪ್ರಪತ್ತಿಯೋಗ್ಯಾಧಿಕಾರಕ್ಕೆ – "ಸಾರಚಂದ್ರಿಕಾ" ವ್ಯಾಖ್ಯಾ.**

ಪ್ರಪತ್ತಿಗೆ ಯೋಗ್ಯನಾದವನಿಗೆ ಇರಬೇಕಾದ ಅಧಿಕಾರ.

ಪೂರ್ವಾಧಿಕಾರದಲ್ಲಿ "ಭಕ್ತಿಯೋಗಮ್ ತ್ರೈವರ್ಣಿಕರ್ಯೋಗ್ಯಮಿಂದಾರ್ಕರ್ಮಮ್" ಎಂದಾರಂಭಿಸಿ ಉಪಕ್ಷಿಪ್ತವಾದ ಪ್ರಪತ್ತ್ಯಧಿಕಾರವನ್ನು, ಈ ಅಧಿಕಾರದಲ್ಲಿ ಆಚಾರ್ಯರು ನಿರೂಪಿಸುವವರಿಗಾಗಿ, **ಆರ್ಥಿತ್ವೇನ** ಎಂದಾರಂಭಿಸಿ ಅನುಗ್ರಹಿಸುತ್ತಾರೆ.

ಏಕದೇಶಿಗಳು ಉಪಾಯಾಂತರಗಳಲ್ಲಿ ಸ್ವರೂಪ ವಿರೋಧ ಜ್ಞಾನವು ಪ್ರಪತ್ತಿಗೆ ಅಧಿಕಾರ ಪ್ರಪತ್ತಿಯು ಸಿದ್ಧೋಪಾಯಾಧಿಕಾರಿ ವಿಶೇಷಣ ಮಾತ್ರ ಸ್ವರೂಪವಾದದ್ದು. ಹಾಗಿದ್ದರೂ ವಿಧೇಯತಯೂ ಇದಕ್ಕೆ ಉಪಪನ್ನವಾಗುತ್ತದೆ ಸಾಧ್ಯೋಪಾಯಾಧಿಕಾರಿಗಳಿಗೆ ವಿಧೇಯತ್ವವು ಇಲ್ಲದಿದ್ದರೂ, ಸಿದ್ಧೋಪಾಯಾಧಿಕಾರಕ್ಕೆ ವಿಧೇಯತ್ವವು ಯುಕ್ತವೆಂಬ **ಅಪ್ರಾಮಾಣಿಕವಾದಗಳನ್ನು** ಸ್ಥಿರೀಕರಣಭಾಗದಲ್ಲಿ ನಿರಾಕರಿಸುವವರಾಗಿ, ಸಂಗ್ರಹವಾಗಿ ಇಲ್ಲಿಯೂ ನಿರಾಕರಿಸುತ್ತಾರೆ ಉಪಾಯಾಂತರಗಳಲ್ಲಿ **ಅಜ್ಞಾನಾ** ಶಕ್ತಿ ವಿಳಂಬಾಕ್ಷಮತ್ವಾದಿಗಳಿಂದ ಉಂಟಾದ ನೈರಾಶ್ಯದಿಂದ ಕೂಡಿದ ಆಕಿಂಚನ್ಯವೇ ಪ್ರಪತ್ತಿಗೆ ಅಧಿಕಾರ. ಉಪಾಸನೆಯ ಹಾಗೆ ಪ್ರಪತ್ತಿಯೂ ಮೋಕ್ಷದಲ್ಲಿ ಆಸೆಯುಳ್ಳವನಿಗೆ ಕರ್ತವ್ಯವಾಗಿ ವಿಧಿಸಲ್ಪಟ್ಟಿರುವುದರಿಂದ ಅಧಿಕಾರಿ ವಿಶೇಷಣವಾಗಲಾರದು. ಉಪಾಸನೆಯ ಹಾಗೆ ಸಾಕ್ಷಾದುಪಾಯತ್ವವೇ ಪ್ರಪತ್ತಿಗೆ ಉಪಪನ್ನವು. ಸಿದ್ಧೋಪಾಯನಾದ ಭಗವಂತನು ಪ್ರಪತ್ತಿಗೆ ಪೂರ್ವಭಾವಿಯಾಗಿ ಭರಸ್ವೀಕಾರಕ್ಕೆ ಅನುಗುಣವಾದ ಸ್ವಾಭಾವಿಕ ಪರಮ ಕಾರಣ್ಯದಿಂದ ಕೂಡಿದ್ದರೂ ಪ್ರಪತ್ತಿಯಿಂದ**ಲೇ** ಭರವನ್ನು ಸ್ವೀಕರಿಸಿ ಫಲೋಪಹಿತವಾದ ಉಪಾಯನಾಗುತ್ತಾನೆ ಆದ್ದರಿಂದ ಉಪಾಸನೆಯ ಹಾಗೆ ಪ್ರಪತ್ತಿಯೂ ಭಗವಂತನ ನಿಗ್ರಹವನ್ನು ಶಮಿಸಿ ಅನುಗ್ರಹವನ್ನುಂಟುಮಾಡುತ್ತದೆ, **ಪ್ರಸನ್ನನಾದ ಭಗವಂತನು** ಸಿದ್ಧೋಪಾಯನು, ಎಂಬ ತತ್ತ್ವವನ್ನು ನಿರೂಪಿಸಿ ಮುಮುಕ್ಷುವಿಗೆ ಪ್ರಪತ್ತಿ ಯೋಗ್ಯತೆಯೇನೆಂಬುದನ್ನು ಈ ಅಧಿಕಾರದಲ್ಲಿ **ಅರ್ಥಿತ್ವೇನ ಸಮರ್ಥತಾ** ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾಗಿ **ತ್ರಿಕತನುಃ– ತ್ರಿಕಾತನುಃ–ಸ್ವರೂಪಂ**

ಅಧಿಕಾರಂ, ಉಪಾಯಂ, ಫಲನ್ ಇವಟ್ರಿನ್ ಲಕ್ಷಣಂಗಳ್

ಇಪ್ಪಡಿ ಅಭಿಮತ ಫಲತ್ತುಕ್ಕು ಉಪಾಯಾನ್ತರ ನಿಸ್ಪೃಹನಾಯ್ ನ್ಯಾಸವಿದ್ಯೈಯಿಲೇ ಇೞಿಯುಮವನುಕ್ಕು ಇವಿದ್ಯೈಕ್ಕು ಅಧಿಕಾರ ವಿಶೇಷಮ್ ಮುದಲಾನವೈ ಇರುಕ್ಕುಮ್‌ಪಡಿ ಅರಿಯವೇಣುಮ್.

ಯಸ್ಯಾಸ್ತ್ರಿಕತನ : ಮೂರು ವಿಧವಾದ ಸ್ವರೂಪದಿಂದ ಕೂಡಿದ **ಸಮರ್ಥತಾ** ಸಾಮರ್ಥ್ಯವು, **ಅರ್ಥಿತ್ವೇನ**–ಆಯಾಯಾ ಫಲಗಳನ್ನು ಅಪೇಕ್ಷಿಸುವುದರಿಂದ **ಸಂಪಿಂಡಿತಾ**-ಕೂಡಿದ್ದಾಗಿ **ಅಧಿಕ್ರಿಯಾ**– ಭವತಿ ಎಂಬುದು ಅಧ್ಯಾಹಾರ. ಆಯಾಯಾ ಕರ್ಮಗಳನ್ನು ಮಾಡಲು ಅಧಿಕಾರವಾಗುತ್ತದೆ. ಅದಾಗಿ ಶಾಸ್ತ್ರಾರ್ಥವನ್ನು ತಿಳಿಯುವುದು ಅದನ್ನು ತಿಳಿದಂತೆ ಅನುಷ್ಠಿಸಲು ಶಕ್ತನಾಗುವುದು, ಶಾಸ್ತ್ರಾನುಮತ ಜಾತಿಗುಣಾದಿ ಯೋಗ್ಯತೆಯಿಂದ ಕೂಡಿರುವುದು, ಎಂದು ಮೂರು ವಿಧವಾದ ಸ್ವರೂಪದಿಂದ ಕೂಡಿದುದ ಸಾಮರ್ಥ್ಯ. ಇದರಿಂದ ಈ ಮೂರರಲ್ಲೊಂದು ಇಲ್ಲದಿದ್ದರೂ ಅಧಿಕಾರಿಯಾಗಲಾರನು ಎಂಬುದು ಸೂಚಿತ. ಇದರ ಜತೆಗೆ ಈ ಸಾಮರ್ಥ್ಯವು ಫಲದಲ್ಲಿ ಆಸೆಯಿಂದ ಕೂಡಿಯೂ ಇರಬೇಕು. ಆಗತಾನೇ ಫಲವನ್ನು ಪಡೆಯಲು ಅಧಿಕಾರಿಯಾಗುತ್ತಾನೆ ಒಬ್ಬನಿಗೆ ಜ್ಞಾನಶಕ್ತಿ ಜಾತಿ ಗುಣಾದಿಯೋಗ್ಯತೆಯು ಪೂರ್ಣವಾಗಿ ಇದ್ದರೂ ಫಲದಲ್ಲಿ ಆಸೆ ಇಲ್ಲದಿದ್ದರೆ ಆಯಾಯಾ ಕರ್ಮಗಳನ್ನು ಅನುಷ್ಠಿಸುವುದಿಲ್ಲವಾದ್ದರಿಂದ ಫಲೇಚ್ಛೆಯಿಂದ ಕೂಡಿದ ಸಾಮರ್ಥ್ಯವೇ ಆಯಾಯಾ ಕರ್ಮಾನುಷ್ಠಾನದಲ್ಲಿ ಅಧಿಕಾರವೆಂಬುದು ತಿರ್ಮಾನವಾದ ಅರ್ಥ **ಸಾಚಾಷ್ಟಾಂಗ ಷಡಂಗಯೋಗ ನಿಯತಾವಸ್ಥಾ**–ಆ ಅಧಿಕಾರವೂ, ಅಷ್ಟಾಂಗಯೋಗ–ಭಕ್ತಿ, ಷಡಂಗಯೋಗ- ಪ್ರಪತ್ತಿ, ಇವುಗಳಲ್ಲಿ **ಪ್ರತಿ**ನಿಯತವಾದ ಸ್ಥಿತಿಯುಳ್ಳದ್ದಾ**ಗಿದೆ** ಅದಾಗಿ ಭಕ್ತನಿಗೆ ಸಾಂಗವಾದ ಭಕ್ತಿಯೋಗದಲ್ಲಿ ಪರಿಪೂರ್ಣ ಜ್ಞಾನಶಕ್ತಿ, ತ್ರೈವರ್ಣಿಕತ್ವಗುಣವೂ, ಪ್ರಪನ್ನನಿಗೆ ಸಾಂಗವಾದ ಪ್ರಪತ್ತಿ ಜ್ಞಾನವೂ, ಅನುಷ್ಠಿಸಲು ಶಕ್ತಿಯೂ, ಆಕಿಂಚನ್ಯಾನನ್ಯಗತಿತ್ವ ಗುಣಗಳೂ, ಪರಸ್ಪರ ಭಿನ್ನವಾದ ಸ್ಥಿತಿಗಳು, **ವ್ಯವಸ್ಥಾಪಿತಾ**–ಸಮೀಚೀನ ನ್ಯಾಯದಿಂದ ಕೂಡಿದ ಪ್ರಮಾಣ ಸಂಪ್ರದಾಯಗಳಿಂದ ನಿರೂಪಿಸಲ್ಪಟ್ಟವು. **ಅನಂತರ** ಪ್ರಪತ್ತಿಯು ಸರ್ವಾಧಿಕಾರವೆಂಬುದನ್ನು ನಿರೂಪಿಸುತ್ತಾರೆ **ಶ್ರೌತೀ**– "ಸರ್ವಸ್ಯ ಶರಣಂ ಸುಹೃತ್" ಎಂಬ ಶ್ವೇತಾಶ್ವತರೋಪನಿಷತ್ತು ಹೇಳುವಂತೆ, **ಭಗವತಃ ಸರ್ವಶರಣ್ಯತಾ** ಭಗವಂತನು ಸರ್ವರಿಗೂ ಶರಣ್ಯನು ಇದರಲ್ಲಿ ಜಾತ್ಯಾದಿ ವ್ಯತ್ಯಾಸಗಳಿಲ್ಲ,ಎಂಬ ಈ ಅಂಶವು **ಸ್ಮೃತ್ಯಾಪಿ**– "ಸರ್ವಲೋಕಶರಣ್ಯಾಯ" "ಸರ್ವಯೋಗ್ಯಮನಾಯಾಸಂ", ಇತ್ಯಾದಿ ಸ್ಮೃತಿಗಳಲ್ಲಿಯೂ **ಸತ್ಯಾಪಿತಾ**–ಸ್ಥಾಪಿಸಲ್ಪಟ್ಟಿದೆ ಹೀಗೆ ವೇದೋಕ್ತವಾದ ಕರ್ಮಗಳಲ್ಲಿ ತ್ರೈವರ್ಣಿಕರಲ್ಲದವರಿಗೆ ಅಧಿಕಾರವುಂಟೋ ಎಂದರೆ ಅದಕ್ಕೆ ದೃಷ್ಟಾಂತವನ್ನು **ತ್ಯಾದಿಷ್ವಿವ** ಎಂದಾರಂಭಿಸಿ ನಿರೂಪಿಸುತ್ತಾರೆ **ನೈಗಮೇಷು**–"ಸತ್ಯಂವದ," "ಧರ್ಮಂಚರ" ಇತ್ಯಾದಿ ನಿಗಮವಿಹಿತಗಳಾದ, **ಸತ್ಯಾದಿಷ್ವಿವ**-ಸತ್ಯವದನ, ಧರ್ಮದಾನಾದ್ಯನುಷ್ಠಾನಗಳ ಹಾಗೆ **ಸರ್ವಾಸ್ಪದೇ**–ಸರ್ವರಿಗೂ ಅನುಷ್ಠೇಯವಾಗಿ ಹೇಳಲ್ಪಟ್ಟ, **ಸತ್ಪಥೇ**–ಪ್ರಪತ್ತಿ ರೂಪ ಸನ್ಮಾರ್ಗದಲ್ಲಿ ಅಧಿಕಾರವುಂಟೆಂಬುದು ಸಿದ್ಧಾಂತ, ಸತ್ಪಥೇ ಎಂದು ಸಾಮಾನ್ಯವಾಗಿ ಹೇಳಿರುವುದು ವೈದಿಕವಾದ ನಾಮ ಸಂಕೀರ್ತನ, ಅರ್ಚನ, ಪ್ರಣಾಮಾದಿರೂಪ ಅಗ್ನಿವಿದ್ಯಾ ಸಾಧ್ಯವಲ್ಲದ ಸದ್ಧರ್ಮಗಳಲ್ಲಿ ಸರ್ವಾಧಿಕಾರತ್ವವು ಉಂಟೆಂಬುದು ಸೂಚಿತ.

ಅಧಿಕಾರ, ಉಪಾಯ,ಫಲಗಳ ಲಕ್ಷಣ.

ಶ್ಲೋಕಾರ್ಥವನ್ನು ಆಚಾರ್ಯರು ತಾವೇ **ಇಪ್ಪಡಿ ಅಭಿಮತ ಫಲತ್ತುಕ್ಕು** ಎಂದಾರಂಭಿಸಿ ವಿವರಿಸುತ್ತಾರೆ. ಅದಾಗಿ ಹೀಗೆ –ತಮ್ಮ ಯೋಗ್ಯತೆಯನ್ನು ತಿಳಿದು ಅದ್ವಾರಕವಾಗಿ ಪ್ರಪತ್ತಿಯನ್ನು ಮೋಕ್ಷೋಪಾಯವಾಗಿ ಅನುಷ್ಠಿಸುವವರಿಗೆ **ಅಭಿಮತ ಫಲತ್ತುಕ್ಕು**–ಮೋಕ್ಷಕ್ಕೆ **ಉಪಾಯಾಂತರ ನಿಸ್ಪೃಹನಾಯ್** ಕರ್ಮಯೋಗಾದ್ಯುಪಾಯಾಂತರಗಳಲ್ಲಿ ತನಗೆ **ಸಾಮರ್ಥ್ಯ**ವಿಲ್ಲದಿರುವುದನ್ನು ತಿಳಿದು **ಅವು**ಗಳಲ್ಲಿ ಆಸೆಯಿಲ್ಲದವನಾಗಿ **ನ್ಯಾಸವಿದ್ಯೈಯಿಲೇ ಇೞಿಯುಮವನುಕ್ಕು**–ಪ್ರಪತ್ತಿ ವಿದ್ಯೆಯನ್ನು ಅನುಷ್ಠಿಸಲು ಪ್ರವರ್ತಿಸುವವನಿಗೆ **ಅಧಿಕಾರಿ ವಿಶೇಷಮ್**

ಸಾಮಾನ್ಯತಃ ಅಧಿಕಾರಸ್ವರೂಪಂ

ಅಧಿಕಾರಮಾವದು ? ಅವ್ವೋ ಫಲೋಪಾಯಙ್ಗಳಿಲೇ ಪ್ರವೃತ್ತನಾವಾನ್ ಪುರುಷನುಕ್ಕು ಫಲತ್ತಿಲ್ ಅರ್ಥಿತ್ವಮುಮ್, ಉಪಾಯತ್ತಿಲ್ ಸಾಮರ್ಥ್ಯಮುಮ್. ಇವತ್ತಿಲ್ ಸಾಮರ್ಥ್ಯಮಾವದು ? ಶಾಸ್ತ್ರಾರ್ಥತ್ತೈಯರಿಹೈಯುಮ್, ಅರಿನ್ದಪಡಿ ಯನುಷ್ಠಿಕ್ಕವಲ್ಲ ನಾಹೈಯುಮ್, ಶಾಸ್ತ್ರಾನುಮತ ಜಾತಿಗುಣಾದಿ ಯೋಗ್ಯತೈಯುಮ್. ಇವ್ವಧಿಕಾರಮ್ ಮುನ್ಬೇ ಸಿದ್ಧಮಾಯಿರುಕ್ಕುಮ್. ಇದುಡೈಯವನುಕ್ಕು ಪ್ರಯೋಜನಮಾಯ್‌ಕ್ಕೊಣ್ಡು ಸಾಧ್ಯಮಾಹ ಅನುವದಿಕ್ಕ ಪ್ಪಡುಮದು ಫಲಮ್ ; ತದರ್ಥಮಾಹ ಸಾಧ್ಯಮಾಹ ವಿಧಿಕ್ಕಪ್ಪಡುಮದು ಉಪಾಯಮ್.

ಪ್ರಪತ್ತೇಃ ಅಧಿಕಾರ ವಿಶೇಷವರ್ಣನಂ

ಇಙ್ಙ ಮುಮುಕ್ಷುತ್ವಮುಣ್ಡಾಯ್ ಸ್ವತಂತ್ರ ಪ್ರಪತ್ತಿರೂಪ ಮೋಕ್ಷೋಪಾಯ ವಿಶೇಷನಿಷ್ಠನುಕ್ಕು ಶಾಸ್ತ್ರ ಜನ್ಯ ಸಮ್ಬನ್ಧ ಜ್ಞಾನಾದಿಹಳ್ ಉಪಾಸಕನೋಡು ಸಾಧಾರಣಮಾಯಿರುಕ್ಕ, ವಿಶೇಷಿತ್ತವಧಿಕಾರಮ್ ತನ್ನುಡೈಯ ಆಕಿಂಚನ್ಯಮುಮ್, ಅನನ್ಯಗತಿತ್ವಮುಮ್. ಅಕಿಂಚನ್ಯಮಾವದು ? ಉಪಾಯಾನ್ತರ ಸಾಮರ್ಥ್ಯಾಭಾವಮ್, ಅನನ್ಯಗತಿತ್ವಮಾವದು ? ಪ್ರಯೋಜನಾನ್ತರ ವೈಮುಖ್ಯಂ, ಶರಣ್ಯಾ

ಮುದಲಾನವೈಯಿರುಕ್ಕುಂಪಡಿ–ವಿಶೇಷವಾದ ಅಧಿಕಾರವೇನು, ಫಲ ಅಂಗಗಳು ಮೊದಲಾದವೇನು ಇವುಗಳು ಇರುವ ರೀತಿಯನ್ನು **ಅರಿಯವೇಣುಮ್**–ಅವಶ್ಯ ಜ್ಞಾತವ್ಯ **ಅಧಿಕಾರಮಾವದು** ಇತ್ಯಾದಿ - ಅಧಿಕಾರವು ಯಾವುದೆಂದರ, ಫಲವನ್ನು ಸಾಧಿಸಿಕೊಡುವ ಉಪಾಯಗಳಲ್ಲಿ ಪ್ರವರ್ತಿಸುವ ಪುರುಷನಿಗೆ ಫಲದಲ್ಲಿ ಅರ್ಥಿತ್ವವೂ ಉಪಾಯದಲ್ಲಿ ಸಾಮರ್ಥ್ಯವೂ ಅಧಿಕಾರ. ಇವುಗಳಲ್ಲಿ ಸಾಮರ್ಥ್ಯವು ಶಾಸ್ತ್ರದಲ್ಲಿ ಹೇಳಲ್ಪಟ್ಟ ಆಯಾಯಾ ಉಪಾಯಸ್ವರೂಪವನ್ನೂ ಅದರ ಅಂಗಗಳ ಸ್ವರೂಪವನ್ನೂ ಚನ್ನಾಗಿ ತಿಳಿಯುವುದು ತಿಳಿದಹಾಗೆ ಅನುಷ್ಠಿಸಲು ಶಕನಾಗುವುದು. ಶಾಸ್ತ್ರಾನು ಮತವಾದ ಬ್ರಾಹ್ಮಣತ್ವಾದಿ ಜಾತಿ– ಆಸ್ತಿಕ್ಯಾದಿಗುಣಗಳು ಆಚಾರಾದಿಗಳು ಇವುಗಳಿಂದ ಕೂಡಿರುವುದು **ಇವ್ವಧಿಕಾರಮ್** ಈ ಅಧಿಕಾರವು ಮುಂಚೆಯೇ ಸಿದ್ಧವಾಗಿರುವುದು, **ಇದುಡೈಯವನಕ್ಕು** ಇತ್ಯಾದಿ ಈ ಉಪಾಯವನ್ನು ಅನುಷ್ಠಿಸುವವನಿಗೆ ಪ್ರಯೋಜನವು ಉಪಾಯ ಸಾಧ್ಯವಾದ ಫಲ ಅಂದರೆ ಒಂದು ಫಲವನ್ನು ಸಾಧಿಸಲು ಅಧಿಕಾರಿಯಾದವನು ಮೊದಲು ಪ್ರಯತ್ನ ಪೂರ್ವಕ ಉಪಾಯವನ್ನು ಅನುಷ್ಠಿಸಬೇಕು, ಉಪಾಯಸಾಧ್ಯವಾದದು ಫಲ. ಅದು ಪ್ರಯೋಜನವಾದ್ದರಿಂದ ಅದನ್ನು ಉದ್ದೇಶಿಸಿ ಉಪಾಯ ಸಾಧ್ಯವು. **ತದರ್ಥಮಾಹ**–ಫಲಾರ್ಥವಾಗಿ ಸಾಧ್ಯವಾಗಿ ವಿಧಿಸಲ್ಪಡುವುದು ಉಪಾಯ. "ಯಜೇತಸ್ವರ್ಗಕಾಮಃ, ಅಗ್ನಿಹೋತ್ರಂ ಜುಹುಯಾತ್" ಇತ್ಯಾದಿ ಫಲಾರ್ಥವಾಗಿ ಅನುವಾದ ಮಾಡಲ್ಪಡುವದು ಫಲ. ಆ ಫಲವನ್ನು ಹೊಂದಲು ವಿಧಿಸಲ್ಪಡುವುದು ಉಪಾಯ.

ಮುಮುಕ್ಷುವಿಗೆ ವಿಶೇಷವಾದ ಅಧಿಕಾರ.

ಇಂಗು ಇತ್ಯಾದಿ, ಈ ಪ್ರಕರಣದಲ್ಲಿ ಮುಮುಕ್ಷುತ್ವವು ಮೋಕ್ಷದಲ್ಲಿ ಆಸೆಯು ಉಂಟಾಗಿ, ಸ್ವತಂತ್ರ ಪ್ರಪತ್ತಿ ರೂಪ ಮೋಕ್ಷೋಪಾಯದಲ್ಲಿ ನಿಷ್ಠನಾದವನಿಗೆ, ಶಾಸ್ತ್ರ ಜನ್ಯ ಸಂಬಂಧ ಜ್ಞಾನಾದಿಗಳು ಉಪಾಸಕನಿಗೂ ತನಗೂ ತುಲ್ಯವಾಗಿರುವಾಗ, ವಿಶೇಷವಾದ ಅಧಿಕಾರವು, ತನಗಿರುವ ಆಕಿಂಚನ್ಯ, ಅನನ್ಯಗತಿತ್ವಗಳು, ಈ ಎರಡೂ ಸೇರಿಯೇ ವಿಶೇಷಾಧಿಕಾರವಾಗುತ್ತದೆ. ಪ್ರಯೋಜನಾಂತರ ಪರನಿಗೆ ಅನನ್ಯಗತಿತ್ವವು ಸಂಭವಿಸುವುದಿಲ್ಲವಾದರೂ, ಮೋಕ್ಷೋಪಾಯ ನಿಷ್ಠನಾಗಿ ಪ್ರಪತ್ತಿಯನ್ನು ಮಾಡುವವನಿಗೆ ಆಕಿಂಚನ್ಯಾನನ್ಯಗತಿತ್ವಗಳೆರಡೂ ಸೇರಿಯೇ ಅಧಿಕಾರವಾಗುತ್ತವೆ ಯೆಂಬುದು ತಾತ್ಪರ್ಯ. **ಆಕಿಂಚನ್ಯಮಾವದು** ಇತ್ಯಾದಿ ಆಕಿಂಚನ್ಯವೆಂದರೆ ಉಪಾಯಾಂತರವಾದ ಭಕ್ತಿಯೋಗದಲ್ಲಿ, ಸಾಮರ್ಥ್ಯವಿಲ್ಲದಿರುವುದು. **ಅನನ್ಯಗತಿತ್ವಮಾವದು** ಇತ್ಯಾದಿ– ಅನನ್ಯಗತಿತ್ವವು

ನ್ತರ ವೈಮುಖ್ಯಮಾಹವುಮಾವ್. ಇದು ಪ್ರಯೋಜನಾನ್ತರ ವೈಮುಖ್ಯತ್ತಾಲುಮ್ ಅರ್ಥಸಿದ್ಧಮ್. ಇವ್ವರ್ಥಂ (1 "ಬ್ರಹ್ಮಾಣಂ ಶಿತಿಕಂಠಂಚ ಯಾಶ್ಚಾನ್ಯಾ ದೇವತಾಸ್ಮೃತಾಃ। ಪ್ರತಿಬುದ್ಧಾನ ಸೇವನ್ತೇ ಯಸ್ಮಾತ್ಪರಿಮಿತಂ ಫಲಂ" ಇತ್ಯಾದಿಹಳಿಲೇ ಕಣ್ಡುಕೊಳ್ವದು.

ದೃಪ್ತ ಪ್ರಪನ್ನನುಕ್ಕು ಮೋಕ್ಷತ್ತಿಲ್ ವಿಳಂಬಮ್.

ತೀವ್ರತಮಮಾನ ಮುಮುಕ್ಷುತ್ವಮಿನ್ರಿಕ್ಕೇ ದೇಹಾನುವೃತ್ಯಾದಿ ಪ್ರಯೋಜನಾನ್ತರ ಸಕ್ತನಾನವನ್ ಮೋಕ್ಷಾರ್ಥಮಾಹ ಪ್ರಪತ್ತಿಯೈಪ್ಪತ್ತಿನಾಲ್ ಅವ್ವೋಪ್ರಯೋಜನಾನ್ತರಙ್ಗಳಿಲ್ ಅಳವುಕ್ಕೇಡಾಹ ಮೋಕ್ಷಮ್ ವಿಳಂಬಿಕ್ಕುಮ್.

ಅಕಿಂಚನ್ಯಾನನ್ಯಗತಿಹಳುಕ್ಕುಕ್ಕಾರಣಮ್.

ಇವ್ವಾಕಿಂಚನ್ಯತ್ತುಕ್ಕುಮ್, ಅನನ್ಯಗತಿತ್ವತ್ತುಕ್ಕುಮ್ ನಿಬಂಧನಂ ಉಪಾಯಾನ್ತರಙ್ಗಳಿಲ್ ಇವ್ವಧಿಕಾರಿಯಿನುಡೈಯ ಅಜ್ಞಾನಾಶಕ್ತಿಹಳುಮ್, ಫಲವಿಳಂಬಾಸಹತ್ವಮುಮ್.

ಇದಿಲ್ ಶರಣ್ಯಾನ್ತರ ವೈಮುಖ್ಯತ್ತುಕ್ಕು ನಿಬಂಧನಂ-(2 "ಯಥಾವಾಯೋಸ್ತೃಣಾಗ್ರಾಣಿ ವಶಂ ಯಾಂತಿ ಬಲೀಯಸಃ। ಧಾತುರೇವಂ ವಶಂಯಾಂತಿ ಸರ್ವಭೂತಾನಿಭಾರತ॥"ಎನ್ಱಿರಪಡಿಯೇ ತನಕ್ಕುಮ್ ಪಿರರುಕ್ಕುಮ್ ಒತ್ತಿರುಕ್ಕಿರ ಭಗವದೇಕ ಪಾರತಂತ್ರ್ಯಾಧ್ಯವಸಾಯಮುಮ್ ಪ್ರಯೋಜನಾನ್ತರ ವೈಮುಖ್ಯಮುಮ್

ಏನೆಂಬರೆ **ಪ್ರಯೋಜನಾಂತರ**–ಮೋಕ್ಷೇತರ ಪುರುಷಾರ್ಥಗಳಲ್ಲಿ **ವೈಮುಖ್ಯಮ್**–ಆಸೆಯಿಲ್ಲದಿರುವುದು **ಶರಣ್ಯಾಂತರ ವೈಮುಖ್ಯಮಾಹವು ಮಾವ್**–ಬೇರೆಯವರು ತನಗೆ ರಕ್ಷಕರು ಎಂಬ ವಿಷಯದಲ್ಲಿ ವೈಮುಖ್ಯತೆ ಪ್ರಯೋಜನಾಂತರ ವೈಮುಖ್ಯತೆಯಿಂದಲೂ ಈ ಅರ್ಥವು ಸಿದ್ಧ ಪ್ರಯೋಜನಾಂತರಕ್ಕೆ ಶರಣ್ಯಾಂತರಾಶ್ರಯಣವೂ ಸಂಭಾವಿತ. ಪ್ರಯೋಜನಾಂತರದಲ್ಲಿ ಆಸೆಯಿಲ್ಲದವನಿಗೆ ಶರಣ್ಯಾಂತರಾಶ್ರಯಣವು ಅಸಂಭಾವಿತವೆಂಬುದು ತಾತ್ಪರ್ಯ ಇದಕ್ಕೆ **ಇವ್ವರ್ಥಮ್** ಎಂದಾರಂಭಿಸಿ ಪ್ರಮಾಣವನ್ನು ತಿಳಿಸುತ್ತಾರೆ ಅದಾಗಿ 1) **ಬ್ರಹ್ಮಾಣಮ್ ಶಿತಿಕಂಠ** ಇತ್ಯಾದಿ, ಬ್ರಹ್ಮದೇವನನ್ನೂ ವಿಷಕಂಠನಾದ ರುದ್ರನನ್ನೂ, ಹಾಗೆಯೇ ಬೇರೆ ದೇವತೆಗಳನ್ನೂ ಪ್ರತಿಬುದ್ಧರಾದ ಜ್ಞಾನಿಗಳು ಸೇವಿಸುವುದಿಲ್ಲ, ಇತ್ಯಾದಿ **ಪರದೇವತಾ** ಪಾರಮಾರ್ಥ್ಯಾದಿಕಾರದಲ್ಲಿ ಹೇಳಿರುವುದನ್ನು ಓದಿ ತಿಳಿಯುವುದು

ದೃಪ್ತ ಪ್ರಪನ್ನನಿಗೆ ಮೋಕ್ಷಕ್ಕೆ ವಿಳಂಬ

ತೀವ್ರತಮ ಮಾನ ಇತ್ಯಾದಿ. ಮೋಕ್ಷದಲ್ಲಿ ಆಸೆಯು ಬಹಳ ತೀವ್ರವಾಗಿಲ್ಲದೆ ದೇಹಾನುವೃತ್ತಿ,ಆದಿಶಬ್ದದಿಂದ ಅರ್ಚಾವತಾರ ಸೇವಾದಿ ಪ್ರಯೋಜನಾಂತರಗಳಲ್ಲಿ ಸಕ್ತನಾದವನು, ಮೋಕ್ಷಾರ್ಥವಾಗಿ ಪ್ರಪತ್ತಿಯನ್ನು ಅನುಷ್ಠಿಸಿದರೆ, ಆಯಾಯಾ ಪ್ರಯೋಜನಾಂತರಗಳಲ್ಲಿರುವ **ಅಳುವುಕ್ಕೇಡಾಹ**–ಪರಿಮಾಣಕ್ಕೆ ಅನುಗಣವಾಗಿ ಮೋಕ್ಷವು ವಿಳಂಬಿಸುತ್ತದೆ. ಅಂದರೆ **ದೇಹಾವಸಾನದಲ್ಲಿಯೋ**, ಕರ್ಮಾವಸಾನದಲ್ಲಿಯೋ **ಬೇರೆ** ಕಾಲವನ್ನು ನಿರ್ದೇಶಿಸಿದರೆ ಅದರ ಕೊನೆಯಲ್ಲಿಯೋ ಎಂದರ್ಥ. **ಇವ್ವಾಕಿಂಚನ್ಯತ್ತುಕ್ಕುಮ್** ಇತ್ಯಾದಿ–ಈ ಆಕಿಂಚನ್ಯಕ್ಕೂ ಅನನ್ಯಗತಿತ್ವಕ್ಕೂ ಕಾರಣವೇನೆಂದರೆ:–ಉಪಾಯಾಂತರಗಳಲ್ಲಿ ಈ ಅಧಿಕಾರಿಯು ಅಜ್ಞಾನಾ ಶಕ್ತಿಗಳೂ, ಫಲವಿಳಂಬವನ್ನು ಸಹಿಸದೆ ಇರುವಿಕೆಯೂ **ಕಾರಣ**. **ಇದಿಲ್ ಶರಣ್ಯಾಂತರ** ಇತ್ಯಾದಿ–ಇದರಲ್ಲಿ ಬೇರೆ ರಕ್ಷಕರಲ್ಲಿಯೋ ಫಲದಲ್ಲಿಯೋ ಆಸೆಯಿಲ್ಲದೆ ಇರುವುದಕ್ಕೆ ಕಾರಣ ಯಾವುವೆಂದರೆ, 1) **ಯಥಾವಾಯೋಸ್ತೃಣಾಗ್ರಾಣಿ**ಇತ್ಯಾದಿ ಹೇಳಿರುವಂತೆ, ಹುಲ್ಲಿನ ತುದಿಗಳು ಹೇಗೆ ಬಲಿಷ್ಠವಾದ ಗಾಳಿಗೆ ವಶಪಟ್ಟು ಆಡುತ್ತವೆಯೋ, ಹಾಗೆ ಸರ್ವಭೂತಗಳೂ ಧಾತುಃ–ಸರ್ವ ಸೃಷ್ಟಿಕರ್ತನಾದ ಭಗವಂತನಿಗೆ, ವಶವಾಗಿವೆ, ಎಂದು ಹೇಳುವಂತೆ ತನಗೂ ಇತರರಿಗೂ ಸಮಾನವಾದ ಭಗವದೇಕ ಪಾರತಂತ್ರ್ಯದಲ್ಲಿ ತೀರ್ಮಾನವಾದ ಬುದ್ಧಿಯೂ, ಪ್ರಯೋಜನಾಂತರಗಳಲ್ಲಿ ಆಸೆಯಿಲ್ಲದಿರುವುದೂ ಸಹ.

---

1) ಭಾರತ ಶಾಂತಿಪರ್ವ 350–33 2) ಭಾರತ ಆರಣ್ಯಪರ್ವ 39–29.

ಪ್ರಪತ್ತ್ಯಧಿಕಾರ ವಿಶೇಷೇ ಪ್ರಮಾಣಾನಿ

ಇಪ್ಪ್ರಪತ್ತ್ಯಧಿಕಾರ ವಿಶೇಷಮ್ 1) "ಸ ಪಿತ್ರಾಚ ಪರಿತ್ಯಕ್ತಸ್ಸುರೈಶ್ಚ ಸಮಹರ್ಷಿಭಿಃ । ತ್ರೀನ್ ಲೋಕಾನ್ ಸಂಪರಿಕ್ರಮ್ಯ ತಮೇವ ಶರಣಂಗತಃ" 2) "ಅಹಮಸ್ಮ್ಯಪರಾಧಾನಾ ಮಾಲಯೋಽಕಿಂಚನೋಽಗತಿಃ" 3) "ಅಕಿಂಚನೋಽನನ್ಯಗತಿಶ್ಶರಣ್ಯ" 4) "ಅನಾಗತಾನನ್ತಕಾಲ ಸಮೀಕ್ಷಯಾಪ್ಯದೃಷ್ಟಸನ್ತಾರೋಪಾಯಃ" 5) "ತತ್ಪ್ರಾಪ್ತಯೇಽಚ ತತ್ಪಾದಾಂಬುಜ ದ್ವಯ ಪ್ರಪತ್ತೇ ರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನ ಮಸ್ತೀತಿ ಮನ್ವಾನಃ" 6) "ಪುಕಲೊನ್ರಿಲ್ಲಾವಡಿಯೇನ್" ಎನ್ರು ಇವೈ ಮುದಲಾನ ಪ್ರಮಾಣ ಸಂಪ್ರದಾಯಙ್ಗಳಾಲೇ ಸಿದ್ಧಮ್.

ಪ್ರಪತ್ತಿಯ ಅಧಿಕಾರಗಳಿಗೆ ಪ್ರಮಾಣ ಸಂಪ್ರದಾಯಗಳು.

ಈ ಆಕಿಂಚನ್ಯಾನನ್ಯ ಗತಿತ್ವಗಳಿಗೆ ಪ್ರಮಾಣ ಸಂಪ್ರದಾಯಗಳನ್ನು **ಇಪ್ಪ್ರಪತ್ತ್ಯಧಿಕಾರವಿಶೇಷಮ್** ಎಂದಾರಂಭಿಸಿ ಆಚಾರ್ಯರು ತಿಳಿಸುತ್ತಾರೆ ಅದಾಗಿ ಈ ಪ್ರಪತ್ತಿಗೆ ಅಧಿಕಾರವಿಶೇಷವು 2) **ಸಪಿತ್ರಾಚ** ಇತ್ಯಾದಿ ಪೂರ್ವಾರ್ಧದಲ್ಲಿ ಪಿತ್ರಾದಿ ಸರ್ವರಿಂದಲೂ ಬಿಡಲ್ಪಟ್ಟವನಾಗಿದ್ದನು ಕಾಕಾಸುರ ಎಂದು ಹೇಳಿರುವುದರಿಂದ ಆಕಿಂಚನ್ಯವು ಸೂಚಿತ "ತಮೇವ ಶರಣಂಗತಃ" ಎಂಬಲ್ಲಿ ಏವಕಾರದಿಂದ ಶರಣ್ಯಾಂತರ ವೈಮುಖ್ಯರೂಪ ಅನನ್ಯ ಗತಿತ್ವವು ಸೂಚಿತ 3) **ಅಹಮಸ್ಮ್ಯಪರಾಧಾನಾಂ** ಇತ್ಯಾದಿ ನಾನು ಸರ್ವಾಪರಾಧಗಳಿಗೆ ಸ್ಥಾನ ಅಕಿಂಚನಃ—ಜ್ಞಾನಕರ್ಮಾದಿ ಸರ್ವಗುಣ ಶೂನ್ಯನು. ಅಗತಿ:—ಪ್ರಯೋಜನಾಂತರಗಳಲ್ಲಿ ಆಸೆಯಿಲ್ಲದವನು, ಆದರಿಂದಾಗಿ ಬೇರೆ ರಕ್ಷಕರಾರೂ ಇಲ್ಲದವನು 4) **ಅಕಿಂಚನೋಽನನ್ಯಗತಿಃ,** ಶರಣ್ಯತ್ವತ್ಪಾದಮೂಲಂ ಶರಣಂ ಪ್ರಪದ್ಯೇ", ಎಂಬುದು ಉತ್ತರಾರ್ಧ ಈ ಉತ್ತರಾರ್ಧ ದಲ್ಲಿ ಶರಣಾಗತಿ ಮಾಡುವುದರಿಂದ, ಆಕಿಂಚನ್ಯಾನನ್ಯ ಗತಿತ್ವಗಳು ಪ್ರಪತ್ತ್ಯಧಿಕಾರವೆಂಬುದ ಸೂಚಿತ. 5) **ಅನಾಗತಾನಂತಕಾಲ** ಇತ್ಯಾದಿ, ಅದೃಷ್ಟಸಂತಾರೋಪಾಯ ಎಂಬುದರಿಂದ ಆಕಿಂಚನ್ಯವೂ 6) **ತತ್ಪಾದಾಂಬುಜದ್ವಯ ಪ್ರಪತ್ತೇ :** ಇತ್ಯಾದಿಯಿಂದ ಅನನ್ಯಗತಿತ್ವವೂ ಹೇಳಲ್ಪಟ್ಟಿದೆ. 7) **ಪುಹಲೊನ್ರಿಲ್ಲಾವಡಿಯೇನ್**—ಇದರಿಂದ ಆಕಿಂಚನ್ಯವೂ, ಉನ್ನಡಿಕ್ಕೀೞ್ ಅಮರ್ನ್ದು ಪುಹುಂದೇನೇ—ಇಲ್ಲಿ ಅವಧಾರಣದಿಂದ ಅನನ್ಯಗತಿತ್ವವೂ ಇದೇ ಮೊದಲಾದ ಪ್ರಮಾಣ ಸಂಪ್ರದಾಯಗಳಿಂದ ಸಿದ್ಧ.

---

1) ರಾಮಾ ಸುಂ 33-33 ಆ ಕಾಕಾಸುರನು ತಂದೆಯಿಂದಲೂ, ಚಕಾರದಿಂದ ತಾಯಿಯಿಂದಲೂ ದೇವತೆಗಳಿಂದಲೂ, ಮಹರ್ಷಿಗಳಿಂದಲೂ ಬಿಡಲ್ಪಟ್ಟವನಾಗಿ, ಮೂರು ಲೋಕವನ್ನೂ ಸುತ್ತಿ ಸುತ್ತಿ ಎಲ್ಲಿಯೂ ತನಗೆ ಆಶ್ರಯವು ಸಿಗದೆ, ಆ ರಾಮಚಂದ್ರನ ಕಾಲುಗಳಲ್ಲಿಯೇ ಶರಣ ಹೊಂದಿದನು.

2) ಅಹಮಸ್ಮ್ಯಪರಾಧಾನಾಮಾಲಯೋಽಕಿಂಚನೋಽಗತಿಃ ।
ತ್ವಮೇವೋಪಾಯ ಭೂತೋಮೇ ಭವೇತಿ ಪ್ರಾರ್ಥನಾಮತಿಃ ॥
ಶರಣಾಗತಿ ರಿತ್ಯುಕ್ತಾಸಾದೇವೇಸ್ಮಿನ್ ಪ್ರಯುಜ್ಯತಾಮ್ ॥

ಅಹಿ (ಸಂ37-30) ನಾನು ಅಪರಾಧಗಳಿಗೆಲ್ಲಾ ಆಶ್ರಯ ಭೂತನು ನನ್ನನ್ನು ನಾನು ರಕ್ಷಿಸಿಕೊಳ್ಳಲು ಅಶಕ್ತನು, ನಿನ್ನನ್ನು ಬಿಟ್ಟರೆ ಬೇರೆ ರಕ್ಷಕರಿಲ್ಲದವನು ಅನನ್ಯಗತಿ ಎಂದರ್ಥ. ನೀನೇ ನನಗೆ ಉಪಾಯವಾಗಿರು, ಎಂಬ ಪ್ರಾರ್ಥನಾ ರೂಪ ಅಧ್ಯವಸಾಯವು ಶರಣಾಗತಿ ಆ ಶರಣಾಗತಿಯನ್ನು ಭಗವಂತನಲ್ಲಿ ಆಚರಿಸು

3) ನಧರ್ಮನಿಷ್ಠೋಽಸ್ಮಿನ ಚಾತ್ಮವೇದೀ ನಭಕ್ತಿಮಾನ್ ತ್ವ ಚ್ಚರಣಾರವಿಂದೇ ।
ಅಕಿಂಚನೋಽ ನನ್ಯಗತಿ ಶ್ಶರಣ್ಯ ತ್ವತ್ಪಾದಮೂಲಂ ಶರಣಂ ಪ್ರಪದ್ಯೇ ॥

ಆಳ-ಸ್ತೋತ್ರ 22, ಕರ್ಮಜ್ಞಾನ ಭಕ್ತಿಯೋಗಗಳನ್ನ ಮಾಡಲು ಬೇಕಾದ ಜ್ಞಾನಶಕ್ತಿಗಳಿಲ್ಲ, ಅಕಿಂಚನನು, ಅನನ್ಯಗತಿ-ರಕ್ಷಕಾಂತರವಿಲ್ಲದವನು ಶರಣ್ಯ ನಿನ್ನ ಪಾದಮೂಲವನ್ನು ಶರಣಹೊಂದಿದ್ದೇನೆ

4) 5), 6), ಸ್ಪ. ತಿ. ನೋಡಿ

ಪ್ರಪತ್ತೌ ಸರ್ವಾಧಿಕಾರತ್ವಂ

ಇವ್ವಳವಧಿಕಾರಮ್ ಪೆಟ್ರಲ್ ಪ್ರಪತ್ತಿಕ್ಕು ಜಾತ್ಯಾದಿ ನಿಯಮಮಿಲ್ಲಾಮೈಯಾಲೇ ಸರ್ವಾಧಿಕಾರತ್ವಂ ಸಿದ್ಧಮ್,

---

ಪ್ರಪತ್ತಿಗೆ ಸರ್ವಾಧಿಕಾರತ್ವ

ಇವ್ವಳವಧಿಕಾರಂಪೆಟ್ರಾಲ್ ಇತ್ಯಾದಿ. ಆಕಿಂಚನ್ಯಾನನ್ಯಗತಿತ್ವರೂಪ ಅಧಿಕಾರವನ್ನು ಹೊಂದಿದ್ದರೆ ಸಾಕು. ಪ್ರಪತ್ತಿಗೆ ಜಾತ್ಯಾದಿ ನಿಯಮವಿಲ್ಲದಿರುವುದರಿಂದ ಪ್ರಪತ್ತಿಯನ್ನು ಅನುಷ್ಠಿಸಲು ಸರ್ವರಿಗೂ ಅಧಿಕಾರವುಂಟು. ಭಕ್ತ್ಯಧಿಕಾರಿಗ ಆಕಿಂಚನ್ಯಾನಗತಿತ್ವವಿಲ್ಲವಾದ್ದರಿಂದ, ಅವನು ಪ್ರಪತ್ತಿಗೆ ಅಧಿಕಾರಿಯಾಗಲಾರನು ಉಪಾಸನಕ್ಕೆ ತ್ರೈವರ್ಣಿಕತ್ವಾದಿ ನಿಯಮವುಂಟು. ಅಪಶೂದ್ರಾಧಿಕರಣದಲ್ಲಿ ಅಗ್ನಿವಿದ್ಯಾ ಸಾಧ್ಯಗಳಾದ ವೈದಿಕ ಕರ್ಮೋಪಾಸನಗಳಲ್ಲಿ ಶೂದ್ರನಿಗೆ ಅಧಿಕಾರವುನಿಷಿದ್ಧವೆಂಬುದು ನಿರೂಪಿಸಲ್ಪಟ್ಟಿದೆ ಉಪಾಸನೆ ದಲ್ಲಿ ವೈದಿಕ ಮಂತ್ರಗಳಿಂದಲೇ ಉಪಕ್ರಮೋಪಸಂಹಾರಾದಿಗಳು ವಿದ್ಯೆಗಳಿಗೆ ಹೇಳಲ್ಪಟ್ಟಿರುವುದರಿಂದ, ಅತ್ರೈವರ್ಣಿಕರಿಗೆ ಇದರಲ್ಲಿ ಪ್ರವೇಶವಿಲ್ಲ ಪ್ರಪತ್ತಿಯಲ್ಲಿ ಅಂಥಹ ನಿರ್ಬಂಧಗಳಿಲ್ಲ. ಸರ್ವರಿಗೂ ಅಧಿಕಾರವಾದ ತಾಂತ್ರಿಕ ಮಂತ್ರಗಳಿಂದ ಪ್ರಪತ್ತಿಯನ್ನು ಅನುಷ್ಠಿಸಬಹುದು. "ನಮೋನಾರಾಯಣೇತ್ಯುಕ್ತ್ವಾ ಶ್ವಪಾಕಃ ಪುನರಾಗಮತ್" ಎಂದು ಶ್ವಪಾಕಾದಿಯಾಗಿ ಸರ್ವಾಧಿಕಾರತ್ವವು ಸೂಚಿತವಾದ್ದರಿಂದ ಮೇಲೆ ಹೇಳಿದ ಆಕಿಂಚನ್ಯಾನನ್ಯ ಗತಿತ್ವಗಳು ವಿನಹ ಜಾತ್ಯಾದಿ ನಿಯಮಗಳಿಲ್ಲವೆಂಬುದು ಭಾವ

---

4) ಅನಾಗತಾನಂತ ಕಾಲಸಮೀಕ್ಷಯೊಪ್ಯದೃಷ್ಟ ಸಂತಾರೋಪಾಯ, ನಿಖಿಲ ಜಂತು ಜಾತ ಶರಣ್ಯ ಶ್ರೀಮನ್ನಾರಾಯಣ ತವಚರಣಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ (ಶ್ರೀರಂಗಗದ್ಯ) ಭವಿಷ್ಯತ್ ಕಾಲದಲ್ಲೆಲ್ಲಾ ಸಂಸಾರವನ್ನು ದಾಟುವ ಮಾರ್ಗವನ್ನೆತ್ತಿಳಿಯದವನು, ಎಲ್ಲಾ ಪ್ರಾಣಿಗಳಿಗೂ ರಕ್ಷಕನೇ! ಶ್ರೀಮನ್ನಾರಾಯಣ! ನಿನ್ನ ಪಾದಾರವಿಂದಗಳನ್ನು ಶರಣಹೊಂದಿದ್ದೇನೆ.

5) ತತ್ಪ್ರಪ್ತ್ಯೈಚ ತತ್ಪಾದಾಂಬುಜದಯ ಪ್ರಪತ್ತೇ ರನ್ಯನ್ನಮೇ ಕಲ್ಪಕೋಟಿ ಸಹಸ್ರೇಣಾಪಿ ಸಾಧನಮ ಸ್ತೀತಿ ಮನ್ವಾನಃ–ಆ ಭಗವಂತನನ್ನು ಹೊಂದಲು ಅವನ ಪಾದಾರವಿಂದಗಳಲ್ಲಿ ಶರಣಾಗತಿ ವಿನಹ ಕೋಟಿ ಸಹಸ್ರ ಕಲ್ಪಗಳಲ್ಲಿಯೂ ಬೇರ ಉಪಾಯವಿಲ್ಲವೆಂಬುದನ್ನು ತಿಳಿದವನಾಗಿ (ವೈಕುಂಠ ಗದ್ಯ)

6) ಅಹಲಹಿಲ್ಲೇನಿರ್ರೈಯುಮೆನ್ರಲರ್ ಮೇಲ್ ಮಂಗೈಯುರೈಮಾರ್ಬಾ
ನಿಹರಿಲ್ ಪುಹಳ್ಳಾಯ್ ಉಲಮೂನ್ರುಡೈಯಾಯ್ ಎನ್ನೈಯಾಳ್ವಾನೇ।
ನಿಹರಿಲಮರರ್ ಮುನಿಕ್ಕಣಂಗಳ್ ವಿರುಂಬುಮ್ ತಿರು ವೇಂಗಡತ್ತಾನೇ
ಪುಹಲೊನ್ರಿಲ್ಲಾ ವಡಿಯೇನ್ ಉನ್ನಡಿಕ್ಕೀೞ್ಅಮರ್ನ್ದು ಪುಹುಂದೇನೇ॥ ತಿರುವಾಯ್ ಮೊೞಿ(6-10-10)

ಕ್ಷಣಕಾಲವೂ ನಿನ್ನನ್ನು ಬಿಟ್ಟಿರಲಾರೆ ಎಂದು ಹೇಳುವ ಲಕ್ಷ್ಮಿಯು ನಿತ್ಯ ವಾಸಮಾಡುವ ವಿಶಾಲವಾದ ಎದೆಯನ್ನುಳ್ಳವನೇ. ನಿನಗೆ ಸಮಾನವಿಲ್ಲದೆ ಇರುವ ಕೀರ್ತಿಯುಳ್ಳವನೇ, ಮೂರು ಲೋಕಕ್ಕೂ ಸ್ವಾಮಿಯೇ, ನನ್ನನ್ನು ರಕ್ಷಿಸುವವನೇ. ನಿನಗೆ ಸಮಾನರಿಲ್ಲದೆ ದೇವತೆಗಳೂ ಋಷಿಗಳೂ ಆಸೆಪಡುವ ತಿರುವೇಂಗಡನಾಥನೇ ಇದರಿಂದ ಸಮಸ್ತಕಲ್ಯಾಣ ಗುಣತ್ವ, ಸ್ವಾಮಿತ್ವ, ರಕ್ಷಕತ್ವ ಸೌಲಭ್ಯಾದಿ ಗುಣಗಳು ಹೇಳಲ್ಪಟ್ಟವು, ಉಪಾಯಾಂತರವೂ ರಕ್ಷಕಾಂತರವೂ ಇಲ್ಲದ ದಾಸಭೂತನಾದ ನಾನು ನಿನ್ನ ಪಾದಾರವಿಂದಗಳನ್ನು ಶರಣು ಹೊಂದಿದ್ದೇನೆ.

"ಅಹಲಹಿಲ್ಲೇ ನಿರ್ರೈಯುಮ್" ಇತ್ಯಾದಿಯಿಂದ ಮಹಾಲಕ್ಷ್ಮಿಯು ಪುರುಷಕಾರವೂ, ಅಲರ್ಮೇಲ್ ಮಂಗೈಯುರೈಮಾರ್ಬಾ, ಎಂದು ಲಕ್ಷ್ಮೀವಿಶಿಷ್ಟನಾದ ನಾರಾಯಣನು ಸಂಬೋಧಿಸಲ್ಪಟ್ಟು, ಉನ್ನಡಿಕ್ಕೀೞ್ ಅಮರ್ನ್ದು ಪುಹುಂದೇನೇ - ನಿಮ್ಮಿಬ್ಬರ ಪಾದಾರವಿಂದಗಳಲ್ಲಿ ಶರಣಾಗತನಾಗಿದ್ದೇನೆ, ಎಂದು ಹೇಳುವುದರಿಂದ ಲಕ್ಷ್ಮಿಯೂ ಉಪಾಯ ಭೂತಳು ಎಂದರ್ಥ ಉನ್ನಡಿಕ್ಕೀೞ್ ಎಂದೇಕವಚನವು ಪುರುಷ ಪ್ರಾಧಾನ್ಯ ವಿವಕ್ಷೆಯಾ ಹೇಳಿದೆ ಅಷ್ಟೇ

ಅನ್ದಣರನ್ದಿಯರೆಲ್ಲೈಯಿಲ್ ನಿನ್ರ ವನ್ಮೈತ್ತು ಲಹುವಮ್ ।
ನೊನ್ದವರೇ ಮುದಲಾಹ ನುಡಙ್ಗಿಯನನ್ನಿಯರಾಯ್ ।
ವನ್ದಡೈಯುಮ್ ವಹೈ ವಣ್ ತಹವೇನ್ದಿ ವರುನ್ದಿಯನವರ್ ।
ಅನ್ದಮಿಲಾದಿಯೈಯಡೈಯುಮ್ವಹೈ ಯನ್ಬರ ರಿನ್ದರಿವಿತ್ತನರೇ ॥೧೨॥

ಭಕ್ತ್ಯಾದೌ ಶಕ್ತ್ಯಭಾವಃ ಪ್ರಮಿತಿ ರಹಿತತಾ ಶಾಸ್ತ್ರತಃ ಪರ್ಯುದಾಸಃ
ಕಾಲಕ್ಷೇಪಾಕ್ಷಮತ್ವಂ ತ್ವಿತಿ ನಿಯತಿ ವಶಾದಾಪ ತದ್ಭಿಶ್ಚತುರ್ಭಿಃ ।
ಏಕದ್ವಿತ್ರ್ಯಾದಿ ಯೋಗ ವ್ಯತಿ ಭಿದುರ ನಿಜಾಧಿಕ್ರಿಯಾ ಸ್ಸಂಶ್ರಯನ್ತೇ ।
ಸನ್ತಸ್ಸ್ವೀಶಂ ಸ್ವತನ್ತ್ರ ಪ್ರಪದನ ವಿಧಿನಾ ಮುಕ್ತಯೇ ನಿರ್ವಿಶಙ್ಕಾಃ ॥೨೫॥

ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತನ್ತ್ರ ಸ್ವತಂತ್ರಸ್ಯ ಶ್ರೀ ಮದ್ವೇಙ್ಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು

ಶ್ರೀಮದ್ರಹಸ್ಯತ್ರಯಸಾರೇ ಪ್ರಪತ್ತಿಯೋಗ್ಯಾಧಿಕಾರೋ ದಶಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಈ ರೀತಿ ಸೂಪ ಸರ್ವಾಧಿಕಾರತ್ವವನ್ನು, "ಪೂರ್ವೇ ಪೂರ್ವೇಭ್ಯೋವಚ ಏತದೂಚುಃ ಎಂಬ ರೀತಿಯಲ್ಲಿ ನಮ್ಮ ಆಚಾರ್ಯರುಗಳು ಸ್ವಾಚಾರ್ಯರುಗಳಿಂದ ತಿಳಿದುಕೊಂಡು ಭಗವಂತನನ್ನು ಆಶ್ರಯಿಸುವ ಪ್ರಕಾರವನ್ನು ನಮಗೆ ಉಪದೇಶಿಸಿದ್ದಾರೆಂದು **"ಅಂದಣರಂದಿ ಯರ್"** ಎಂದಾರಂಭಿಸುವ ಪಾಶುರದಿಂದ ಆಚಾರ್ಯ ಸಾರ್ವಭೌಮರು ನಿರೂಪಿಸಿರುತ್ತಾರೆ

ಆದಾಗಿ **ಅಂದಣರ್**-ಬ್ರಾಹ್ಮಣರು, **ಅಂದಿಯರ್**-ಚಂಡಾಲರು, **ಎಲ್ಲೈಯಿಲ್ ನಿನ್ರ ವನ್ಮೈತ್ತುಲಗಮ್** ಈ ಎರಡು ಅವಧಿಗಳ ಮಧ್ಯ ಇರುವ **ಎಲ್ಲಾ** ಜಾತೀಯರೂ, **ನೊಂದವರೇಮುದಲಾಹ**, ಸಂಸಾರತಾಪಾಕ್ರಾಂತರಾಗಿರ ಪ್ರಾಣಾದಿಯಾಗಿ, **ನುಡಂಗಿ** ಅಕಿಂಚನರಾಗಿ **ಅನನ್ನಿಯರಾಯ್‌ವಂದು**-ಅನ್ಯಾಬದ್ಧವು ಪ್ರಯೋಜನಾಂತರವನ್ನೂ, ಉಪಾಯಾಂತರವನ್ನೂ ದೇವತಾಂತರವನ್ನೂ ಸೂಚಿಸುತ್ತಿರ ಅನನ್ಯರಾಗಿ ಎಂದರೆ ಇವು ಮೂರೂ ಇಲ್ಲದವರಾಗಿ ಎಂದರೆ ಅನನ್ಯೋಪಾಯರಾಗಿಯೂ, ಅನನ್ಯ ಪ್ರಯೋಜನರಾಗಿಯೂ, ಅನನ್ಯ ಶರಣರಾಗಿಯೂ, ಬಂದು, **ವನ್‌ತಹವೇಂದಿ ವರುಂದಿಯ**-ಬಲಿಷ್ಠವಾದ ಕೃಪೆಯನ್ನುಳ್ಳವನಾಗಿ ಶ್ರಮಪಡುವ ಅದಾಗಿ ಚೇತನರನ್ನು ಉಜ್ಜೀವಿಸಲು ಕೃಷಿ ಮಾಡುತ್ತಿರುವ **ನಮ್ ಅಂದಮಿಲಾದಿಯೈ**-ನಮಗೆ ಸ್ವಾಮಿಯಾಗಿ, ಅದ್ಯಂತರಹಿತನಾದ ತ್ರಿವಿಧ ಪರಿಚ್ಛೇದ ರಹಿತನಾದಸಂದರ್ಭ, ಜಗತ್ಕಾರಣ ರೂಪನಾದ ಭಗವಂತನನ್ನು, **ಅಡೈಯುಮ್‌ವಹೈ**-ಶರಣಾಗತಿ ಹೊಂದುವ ಪ್ರಕಾರವನ್ನು **ಅನ್ಬರ್ ಅರಿಂದು**-ನಮ್ಮಲ್ಲಿ ಪರಮ ಕೃಪೆಯನ್ನುಳ್ಳ ಆಚಾರ್ಯರುಗಳು ತಾವು ತಿಳಿದುಕೊಂಡು, **ಅರಿವಿತ್ತನರೇ**-ನಮಗೆ ಉಪದೇಶಿಸಿದ್ದಾರೆ

ಆದಾಗಿ ಈ ಅಧಿಕಾರದಲ್ಲಿ "ಪ್ರಪತ್ತಿಯು ಸರ್ವಾಧಿಕಾರವೆಂಬುದು" ಪ್ರಾಚೀನ ಸಂಪ್ರದಾಯ ಪರಂಪರೆಯಾಗಿ ನಿರ್ಣೀತವು ಎಂದು ಹೇಳಲ್ಪಟ್ಟಿತು

ಅನಂತರ ಉಪಾಯಾಂತರದಲ್ಲಿ ಸಾಮರ್ಥ್ಯವಿಲ್ಲದಿರುವ ಆಕಿಂಚನ್ಯವನ್ನು ಹದಿನೈದು ಪ್ರಕಾರವಾಗಿ ನಿರೂಪಿಸಿ ಈ ಹದಿನೈದು ಅಧಿಕಾರದಲ್ಲಿ ಯಾವುದಾದರೂ ಒಂದನ್ನುಳ್ಳವರು ಪ್ರಪತ್ತಿಯನ್ನಾಚರಿಸಬಹುದು ಹದಿನಾರನೇ ಅಧಿಕಾರವೇ ಭಕ್ತಿಯೋಗಕ್ಕೆ ಸಾಧಕವೆಂದು **ಭಕ್ತ್ಯಾದೌ ಶಕ್ತ್ಯಭಾವಃ** ಎಂದಾರಂಭಿಸುವ ಶ್ಲೋಕದಿಂದ ಆಚಾರ್ಯರು ನಿರೂಪಿಸುತ್ತಾರೆ ಅದಾಗಿ **ಭಕ್ತ್ಯಾದೌ**-ಭಕ್ತಿಯೋಗ, ಆದಿಪದದಿಂದ ಕರ್ಮಯೋಗ, ಜ್ಞಾನಯೋಗಗಳು ಹೇಳಲ್ಪಡುತ್ತವೆ. ಇವುಗಳಲ್ಲಿ, **ಶಕ್ತ್ಯಭಾವಃ**-ಶಕ್ತಿ ಇಲ್ಲದಿರುವುದು **ಪ್ರಮಿತಿರಹಿತತಾ**-ಜ್ಞಾನವಿಲ್ಲದಿರುವುದು

ಶಾಸ್ತ್ರತಃ ಪರ್ಯುದಾಸ*– ತ್ರೈವರ್ಣಿಕರಲ್ಲವೆಂಬ ಕಾರಣದಿಂದ ಶಾಸ್ತ್ರಮೂಲವಾದ ಬಹಿಷ್ಕೃತಿ–ಅಂದರೆ **ಶಾಸ್ತ್ರವು** ಅವಕಾಶಕೊಡದೆ ಇರುವುದು, **ಕಾಲಕ್ಷೇಪಾಕ್ಷಮತ್ವಂ**-ಕಾಲವಿಳಂಬವನ್ನು ಸಹಿಸದೇ ಇರುವುದು, **ಇತಿ-ಈ** ರೀತಿಯಾದ **ನಿಯತಿವಶಾತ್**-ಭಾಗ್ಯವಶದಿಂದ ಅಂದರೆ ಅವರವರ ಅದೃಷ್ಟವಶದಿಂದ **ಆಪತದ್ಭಿಃ ಚತುರ್ಭಿಃ**– ಪ್ರಾಪ್ತಗಳಾದ ನಾಲ್ಕು ಧರ್ಮಗಳಿಂದ **ಏಕದ್ವಿತ್ರ್ಯಾದಿಯೋಗ** ಒಂದೊಂದು, ಎರಡೆರಡು, ಮೂರು ಮೂರು ಇವುಗಳಿಂದ ಕೂಡಿದ ಚತುಧರ್ಮ ಘಟಿತ ಸಮುದಾಯದಿಂದ **ವ್ಯತಿಭಿದುರ**–ವಿವಿಧವಾಗಿ ಅತ್ಯಂತ ಭಿನ್ನಗಳಾದ **ನಿಜಾಧಿಕ್ರಿಯಾಃ**-ತಮ್ಮ ತಮ್ಮ ಅಧಿಕಾರವುಳ್ಳವರು, ಅದಾಗಿ 1) ಕರ್ಮಯೋಗ ಜ್ಞಾನಯೋಗಗಳಲ್ಲಿ ಶಕ್ತಿ ಇಲ್ಲದಿರುವುದು, 2) ಜ್ಞಾನವಿಲ್ಲದಿರುವುದು, 3) ಜಾತಿನಿಬಂಧನದಿಂದ ಶಾಸ್ತ್ರವು ಅವಕಾಶಕೊಡದೆ ಇರುವುದು 4) ಕಾಲವಿಳಂಬದಲ್ಲಿ ಸಹಿಷ್ಣುತೆ ಎಂಬ ನಾಲ್ಕು ಅಧಿಕಾರಗಳಲ್ಲಿ,

(a) (1), (2), (3), (4), ಇವುಗಳು ಒಂದೊಂದು ಇಲ್ಲದಿರುವುದು ನಾಲ್ಕು.

(b) 1 + 2, 1 + 3, 1 + 4, 2 + 3, 2 + 4, 3 + 4, ಎರಡೆರಡಿಲ್ಲದಿರುವುದು ಆರು ವಿಧ.

(c) 1 + 2 + 3, 1 + 3 + 4, 1 + 2 + 4, 2 + 3 + 4, ಈ ಮೂರು ಮೂರು ಇಲ್ಲದಿರುವುದು ನಾಲ್ಕು ವಿಧ

(d) 1 + 2 + 3 + 4, ಈ ನಾಲ್ಕೂ ಇಲ್ಲದಿರುವುದು – ಒಂದು ವಿಧ ಒಟ್ಟು 15 ವಿಧ ಈ ಹದಿನೈದು ಪಂಗಡಗಳಿಗೆ ಸೇರಿದವರೂ ಭಕ್ತಿಯೋಗಕ್ಕೆ ಅಧಿಕಾರಿಗಳಲ್ಲ. ಪ್ರಪತ್ತಿಯೋಗಕ್ಕೆ ಅಧಿಕಾರಿಗಳು

(e) 1 + 2 + 3 + 4 - ಈ ನಾಲ್ಕೂ ಉಳ್ಳವರು ಮಾತ್ರ ಭಕ್ತಿಯೋಗಕ್ಕೆ ಅಧಿಕಾರಿಗಳು.


ಹೀಗೆ 15 ವಿಧವಾದ ಅಧಿಕಾರವುಳ್ಳ **ಸಂತಃ**-ಸತ್ಪುರುಷರು, **ಶ್ರೀಶಂ**–ಲಕ್ಷ್ಮೀ ಪತಿಯನ್ನು, **ಸ್ವತಂತ್ರ ಪ್ರಪದನವಿಧಿನಾ**–ಸ್ವತಂತ್ರ ಪ್ರಪತ್ತಿಯಿಂದ, **ನಿರ್ವಿಶಂಕಾಃ**–ಮಹಾವಿಶ್ವಾಸ ಶಾಲಿಗಳಾಗಿ, **ಮುಕ್ತಯೇ**-**ಮೋಕ್ಷಕ್ಕೆ ಸಂಶ್ರಯಂತೇ** ಆಶ್ರಯಿಸುತ್ತಾರೆ. ವರ್ತಮಾನ ನಿರ್ದೇಶದಿಂದ ಈವತ್ತಿಗೂ ಈ ರೀತಿಯಾದ ಪ್ರಪತ್ತ್ಯಧಿಕಾರಿಗಳು ಪ್ರಪತ್ತಿಯನ್ನು ಅನುಷ್ಠಿಸಿ ಮೋಕ್ಷವನ್ನು ಹೊಂದುತಿದ್ದಾರೆಂಬುದು ಸೂಚಿತ " ಶ್ರೀಶಂ" ಎಂಬುದರಿಂದ ದಿವ್ಯದಂಪತಿಗಳಿಬ್ಬರೂ ಉಪಾಯವೆಂಬುದು ಭಾವ

ಶ್ರೀ ಮನ್ನಿಗಮಾಂತ ಮಹಾದೇಶಿಕ ವಿರಚಿತವಾದ ಪ್ರಪತ್ತ್ಯಧಿಕಾರಕ್ಕೆ "ಸಾರಚಂದ್ರಿಕಾ" ವ್ಯಾಖ್ಯಾನವು ಸಮಾಪ್ತ

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ



ಪರಿಕರವಿಭಾಗಾಧಿಕಾರಃ

ಇಯಾನಿತ್ಥಂ ಭೂತಸ್ಸಕೃದಯ ಮವಶ್ಯಂ ಭವನವಾ
ದಯಾ ದಿವ್ಯಾಂಭೋಧೌ ಜಗದಖಿಲಮನ್ತರ್ಯಮಯತಿ ।
ಭವಧ್ವಂಸೋದ್ಯುಕ್ತೇ ಭಗವತಿ ಭರನ್ಯಾಸವಪುಷಃ ।
ಪ್ರಪತ್ತೇರಾದಿಷ್ಟಃ ಪರಿಕರ ವಿಶೇಷಶ್ಶ್ರುತಿಮುಖ್ಯೈಃ ॥

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶ್ರೀಮದ್ರಹಸ್ಯತ್ರಯಸಾರದಲ್ಲಿ ಪರಿಕರವಿಭಾಗಾಧಿಕಾರಕ್ಕೆ ಸಾರಚಂದ್ರಿಕಾ ವ್ಯಾಖ್ಯಾ

ಪೂರ್ವಾಧಿಕಾರದ ಆರಂಭದಲ್ಲಿ "ನ್ಯಾಸವಿದ್ಯೆಯಲ್ಲಿ ಕ್ರಿಯಾಮವನಕ್ಕು ಅಧಿಕಾರ ವಿಶೇಷವಾ ಮುಡಲಾಸವ್ವೆ ಇರುಕ್ಕುಂಪಡಿ' ಎಂಬಲ್ಲಿ "ಸಂಭಾವನವೈ" ಎಂಬ ಪ್ರಸ್ತುತವಾದ ಪರಿಕರ-ಅಂಗ ವಿಶೇಷಗಳನ್ನು ಈ ಅಧಿಕಾರದಲ್ಲಿ ಆಚಾರ್ಯ ಸಾರ್ವಭೌಮರು. **"ಇಯಾನ್ ಇತ್ಥಂಭೂತಃ"** ಎಂದಾರಂಭಿಸಿ ನಿರೂಪಿಸುತ್ತಾರೆ

ಪ್ರಪತ್ತಿಯ ಅಂಗಾಂಗಿ ಸ್ವರೂಪಗಳೇನ್, ಅವುಗಳ ಉಪಕಾರ ಪ್ರಕಾರವೇನು, ಅವುಗಳ ಆವಶ್ಯಕತೆ, ಇಯತ್ತೆ, ಮೊದಲಾದವುಗಳನ್ನು ನಿರೂಪಿಸುವ ಪ್ರಮಾಣಗಳಲ್ಲಿ, ಹೇಳದೇ ಇರುವ ಸರ್ವ ಧರ್ಮ ಸ್ವರೂಪತ್ಯಾಗವೇ ಪ್ರಪತ್ತಿ. ನಿಯತವಾಗಿ ಹೇಳಲ್ಪಟ್ಟ ಆನುಕೂಲ್ಯ ಸಂಕಲ್ಪಾದ್ಯಂಗಗಳಲ್ಲಿ ಮಹಾವಿಶ್ವಾಸ ಮಾತ್ರವು ನಿಯತವಾಗಿದ್ದರೆ ಸಾಕು, ಬಾಕಿ ಅಂಗಗಳು ಸಂಭಾವಿತ ಸ್ವಭಾವಗಳ ಅಂದರೆ ಇದ್ದರೆ ಇರಬಹುದು, ಎಂಬಿವೇ ಮೊದಲಾದ ಅಪಾರ್ಥಗಳನ್ನು ನಿವಾರಣೆ ಮಾಡಿ, "ಪ್ರಪತ್ತಿಂತಾಂಪ್ರಯುಂಜೀತ ಸ್ವಾಂಗೈಃ ಪಂಚಭಿರಾವೃತಾಂ" ಇತ್ಯಾದಿ ಪ್ರಮಾಣಗಳನ್ನು ಅನುಸರಿಸಿ, ಅಂಗಪಂಚಕಗಳು ಸನ್ನಿಪತ್ಯೋಪಕಾರಕಗಳಾಗಿ, (ಒಂದು ಗೂಡಿ ಉಪಕಾರಗಳಾಗಿ, ಪ್ರಪತ್ತಿ) ಸ್ವರೂಪವನ್ನು ನಿಷ್ಪಾದನೆ ಮಾಡುತ್ತವೆ, ಆದರಿಂದ ಆವಶ್ಯಕಗಳು ಇತ್ಯಾದಿ ವಿಷಯಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ.

ದಯಾದಿವ್ಯಾಂಭೋಧೌ–ದಯೆಗೆ ದಿವ್ಯ ಸಮುದ್ರವಾದ-ಅಂದರೆ ದಯೆಗೆ ವೃದ್ಧಿಹ್ರಾಸಗಳಿಲ್ಲದೆ ಎಂದರ್ಥ, ಅನಾದಿ ಸಂತನ್ಯವಾದ ಮಹಾಪರಾಧಶಾಲಿಗೆ ಭಗವಂತನಲ್ಲಿ ಶರಣಾಗತಿಯು ಹೇಗೆ ಫಲವನ್ನು ಕೊಡುತ್ತದೆ ಎಂಬ ಶಂಕೆಗೆ ಪರಿಹಾರವಾಗಿ, ಪರಮದಯಾಳುವಾದ ಭಗವಂತನಲ್ಲಿ ಶರಣಾಗತಿಯು ಅವಶ್ಯ ಫಲಿಸುತ್ತದೆ, ಎಂಬುದು ಸೂಚಿತ. **ಜಗದಖಿಲಮಂತರ್ಯಮಯತಿ**–ಹೀಗೆ ಪರಮ ದಯಾಳುವಾದ್ದರಿಂದ ಅದಕ್ಕೆ ಅನುಗುಣವಾಗಿ ಚೇತನರಲ್ಲಿ ಅಂತಃ ಪ್ರವಿಷ್ಟನಾಗಿ ಅವರುಗಳನ್ನು ಸತ್ಕಾರ್ಯಗಳಲ್ಲಿ ಪ್ರವೃತ್ತಿಸುತ್ತಾನೆ. **ಭವಧ್ವಂಸೋದ್ಯುಕ್ತೇ** ಜೀವನು ಮಾಡಿದ ಯಾದೃಚ್ಛಿಕ ಸುಕೃತಾದಿ ಮೂಲವಾದ ವಿಶೇಷ ಸುಕೃತ ಪರಂಪರೆಗಳನ್ನು ವ್ಯಾಜವಾಗಿಟ್ಟುಕೊಂಡು, ಅವನ ಸಂಸಾರ ಬಂಧವನ್ನು ಭೇದಿಸಲು ಉದ್ಯುಕ್ತನಾದ **ಭಗವತಿ** – ಜ್ಞಾನಾದಿ ಷಾಡ್ಗುಣ್ಯ ಪರಿಪೂರ್ಣನಾದ ಭಗವಂತನಲ್ಲಿ–(ಈ ಗುಣ ವಿಶೇಷಗಳನ್ನು ಹೇಳುವುದರಿಂದ ಪ್ರಪತ್ತಿಯು ಅವಶ್ಯ ಫಲಿಸುತ್ತದೆಯೆಂಬುದು

ಸೂಚಿತ) – ಮಾಡಲ್ಪಡುವ **ಭರನ್ಯಾಸವಪುಷಃ**-ಭರಸಮರ್ಪಣ ಸ್ವರೂಪವಾದ, **ಪ್ರಪತ್ತೇಃ** – ನ್ಯಾಸವಿದ್ಯೆಯ, **ಪರಿಕರ ವಿಶೇಷಃ**–ಅಂಗ ವಿಶೇಷಗಳು, "ಪ್ರಪತ್ತೇಃ ಕ್ವಚಿದಪ್ಯೇವಂಪರಾಪೇಕ್ಷಾನವಿದ್ಯತೇ" ಎಂಬ ವಚನಕ್ಕೆ, ಮುಂದೆ ಹೇಳಲ್ಪಡುವ ಐದು ಅಂಗಗಳು ವಿನಹ ಬಾಕಿ ಅಪೇಕ್ಷೆಯಿಲ್ಲವೆಂದರ್ಥ, **ಶ್ರುತಿಮುಖ್ಯೈಃ**-ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಇತ್ಯಾದಿ ಶ್ವೇತಾಶ್ವರ ಶ್ರುತಿ, ಲಕ್ಷ್ಮೀತಂತ್ರ, ಅಹಿರ್ಬುಧ್ನ್ಯಾದಿ ಸಂಹಿತೆಗಳಿಂದ, **ಅಯಂ** – ಈ ಪರಿಕರ ವಿಶೇಷವು, **ಇಯಾನ್** – ಇಷ್ಟು ಸಂಖ್ಯೆಯಿಂದ ಕೂಡಿದುದು. **ಇತ್ಥಂಭೂತಃ – ಈ** ಪ್ರಕಾರವಾದದ್ದು, **ಸಕೃದ್ಭವನವಾನ್**–ಒಂದೇ ಸಲ **ಮಾಡಬೇಕಾದುದು, ಅವಶ್ಯಂಭವನವಾನ್**–ಸಂಭವಿಸಿದರೆ ಮಾಡಬಹುದು, ಎಂದಿಲ್ಲದೆ ಅವಶ್ಯ ಮಾಡಬೇಕಾದುದು ಎಂದು **ಆದಿಷ್ಟಃ**–ವಿಹಿತವಾದದ್ದು

ಭರನ್ಯಾಸ ವಪುಷಃ ಪ್ರಪತ್ತೇಃ ಎಂಬ ವಿಶೇಷಣ ವಿಶೇಷ್ಯ ಶಬ್ದಗಳಿಂದ ಅನುಕೂಲ್ಯ ಸಂಕಲ್ಪಾದ್ಯಂಗ ಪಂಚಕಗಳ ಆವಶ್ಯಕತೆಯು ಸೂಚಿತ ಪರಮಪದದಲ್ಲಿ ಆಸೆಯುಳ್ಳವನು ನೈರ್ಭರ್ಯಪರ್ಯಂತ ಭರಸಮರ್ಪಣವನ್ನು ಮಾಡುವಾಗ, "ಸಮರ್ಥಕಾರುಣಿಕನಾದ ಶರಣ್ಯನು ನನ್ನ ಭರವನ್ನು ಸ್ವೀಕರಿಸಿ ನನ್ನನ್ನು ಅವಶ್ಯರಕ್ಷಿಸುತ್ತಾನೆಂಬ", ದೃಢತರವಾದ ವಿಶ್ವಾಸವು ಅವಶ್ಯಾಪೇಕ್ಷಿತವು ಆದ್ದರಿಂದ ಮಹಾವಿಶ್ವಾಸಾಂಗವು ನಿಯತ. ಹೀಗೆಯೇ ತನ್ನ ರಕ್ಷಣೆಗ ಭಗವಂತನನ್ನು ಬಿಟ್ಟರೆ ಬೇರ ಉಪಾಯಗಳಿಲ್ಲ ಎಂಬುದನ್ನು ಪ್ರಕಾಶಪಡಿಸದೆ ಹೋದರೆ, "ಬೇರೆ ಮಾರ್ಗಗಳಿರಲಿ ಇವನು ಪ್ರಪತ್ತಿ-ಸಲಿ ಪ್ರಪತ್ತಿಯನ್ನು ಏಕೆ ಮಾಡಬೇಕು," ಎಂದು ಶರಣ್ಯನಿಗೆ ಅಭಿಪ್ರಾಯವುಂಟಾಗಬಹುದು; ಅದು ಉಂಟಾಗದಿರಲು ತನಗೆ ಬೇರೆ ಉಪಾಯಗಳಾಗಲಿ ರಕ್ಷಕರಾಗಲಿ ಇಲ್ಲವೆಂಬ ಕಾರ್ಪಣ್ಯವೆಂಬ ಅಂಗವು ಅವಶ್ಯಕ- ಹಾಗೆಯೇ ಗೋಪ್ತೃತ್ವವರಣವನ್ನು ಮಾಡದೆ ಹೋದರೆ "ಭೋಕ್ತಾವಾದ ಇವನಿಗೆ ಫಲಾಪೇಕ್ಷೆಯಿಲ್ಲದೆ ಇರುವಾಗ ಫಲವನ್ನು ಕೊಟ್ಟರೆ ಪುರುಷಾರ್ಥವಾಗಲಾರದು, ಕೊಟ್ಟರೂ ಇವನಿಗೆ ಅದರಲ್ಲಿ ಅನಾದರವು ಉಂಟಾದರೆ ದಾತಾವಿಗೆ ನಿರ್ವೇದವು ಏರ್ಪಡುತ್ತದೆ." ಎಂಬ ಅಭಿಪ್ರಾಯದಿಂದ ಅನಪೇಕ್ಷಿತವನ್ನು ಭಗವಂತನು ಕೊಡುವುದಿಲ್ಲ. ಆದ್ದರಿಂದ ಗೋಪ್ತೃತ್ವವರಣವೂ ಆವಶ್ಯಕ ಹಾಗೆಯೇ ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳನ್ನು ಕರ್ತಾ ಮಾಡದೆ ಹೋದರೆ, "ನನಗೆ ಅನನುಕೂಲನಿವನು, ಪ್ರತಿಕೂಲ (ವಿರೋಧಿ)ನಾಗಿದ್ದಾನೆ" ಎಂದು ಶರಣ್ಯನು ಇವನನ್ನು ರಕ್ಷಿಸಬೇಕಾಗಿಲ್ಲವೆಂದು ಉದಾಸೀನನಾಗುತ್ತಾನೆ ಅದ್ದರಿಂದ ಸಿದ್ಧೋಪಾಯನಾದ ಭಗವಂತನನ್ನು ವಶೀಕಾರಮಾಡಿಕೊಳ್ಳಲು ಸಾಧ್ಯೋಪಾಯವಾದ ಪ್ರಪತ್ತಿಯನ್ನು ಅನುಷ್ಠಿಸುವಾಗ ಐದು ಅಂಗಗಳೂ ಅವಶ್ಯಾಪೇಕ್ಷಿತಗಳು, ಆದ್ದರಿಂದ ಈ ಐದು ಅಂಗಗಳೂ ಪ್ರಪತ್ತಿ-ಭರನ್ಯಾಸಕ್ಕೆ ಸನ್ನಿಪತ್ಯೋಪಕಾರಗಳು ಅವಶ್ಯ ಒಂದುಗೂಡಿ ಸಹಾಯಕಗಳು ಎಂದರ್ಥ. ಹಾಗೆಯೇ ಕೇವಲ ಭರನ್ಯಾಸವು ಮಾತ್ರ ಸಾಧ್ಯೋಪಾಯವಾಗಲಾರದು, ಭರವನ್ನು ಮಾತ್ರ ಸಮರ್ಪಿಸಿದರೆ ಅದು ಕಾರ್ಯಕಾರಿಯಾಗಲಾರದು ವಿಶಿಷ್ಟವಾದ ಭರಸಮರ್ಪಣವನ್ನು ಮಾಡಬೇಕು, ಈ ಭರನ್ಯಾಸವು ಕೆಲವಡೆಗಳಲ್ಲಿ ಆಜ್ಞಾರೂಪವಾಗಿದೆ ಕೆಲವೆಡೆಗಳಲ್ಲಿ ದಕ್ಷಿಣಾ ಪೂರ್ವಕವಾಗಿದೆ. ಕೆಲವೆಡೆಗಳಲ್ಲಿ ಭರಸ್ವೀಕಾರ ಪ್ರಾರ್ಥನಾಪೂರ್ವಕವಾಗಿದೆ ಯಜಮಾನನು ಭೃತ್ಯನನ್ನು ಆಜ್ಞಾಪಿಸಿ ಕೆಲವು ವಸ್ತುಗಳನ್ನು ಅವನಲ್ಲಿ ನಿಕ್ಷೇಪಮಾಡಿ, ವಸ್ತು ಸಂರಕ್ಷಣೆಮಾಡಬೇಕೆಂದು ನಿರ್ಬಂಧಿಸುತ್ತಾನೆ ಇಲ್ಲಿ ಆನುಕೂಲ್ಯಸಂಕಲ್ಪಾದ್ಯಂಗಗಳ ಆವಶ್ಯಕತೆ ಇಲ್ಲ ವಸ್ತುಗಳನ್ನು ರಕ್ಷಿಸದೆ ಹೋದರೆ ದಂಡಿಸುತ್ತಾನೆಂಬ ಭಯದಿಂದ ಭೃತ್ಯನು ವಸ್ತು ಸಂರಕ್ಷಣೆ ಮಾಡುತ್ತಾನೆ. ಕೆಲವೆಡೆಗಳಲ್ಲಿ ಆಪ್ತರಿಗೆ ಹಣವನ್ನು ಕೊಟ್ಟು ವಸ್ತುಸಂರಕ್ಷಣೆ ಮಾಡುವಂತೆ ಏರ್ಪಾಡು ಮಾಡುತ್ತೇವೆ. ಇಲ್ಲಿಯೂ ಆನುಕೂಲ್ಯ ಸಂಕಲ್ಪಾದ್ಯಂಗಗಳ ಆವಶ್ಯಕತೆ ಇಲ್ಲ. ಈ ಆಜ್ಞಾದಕ್ಷಿಣಾಪೂರ್ವಕ ಭರನಿಕ್ಷೇಪವು ಪ್ರಪತ್ತಿ ಶಬ್ದಾರ್ಥವಾಗಲಾರದು. ಆದ್ದರಿಂದ ಭರವನ್ನು ಸ್ವೀಕರಿಸಿ ರಕ್ಷಿಸಬೇಕೆಂಬ ಪ್ರಾರ್ಥನಾ ಪೂರ್ವಕವಾಗಿ ಮಾಡುವ ಭರನ್ಯಾಸವೇ ಪ್ರಪತ್ತಿ ಶಬ್ದಾರ್ಥ. ಇದಕ್ಕೆ ಆನುಕೂಲ್ಯ ಸಂಕಲ್ಪಾದ್ಯಂಗಗಳ ಆವಶ್ಯಕತೆಯು ಅವಶ್ಯವೆಂಬುದನ್ನು ಮೇಲೆಯೇ ನಿರೂಪಿಸಿದೆ. ಭಗವಂತನಲ್ಲಿ ಆಜ್ಞಾದಕ್ಷಿಣಾಪೂರ್ವಕ ಭರನ್ಯಾಸಕ್ಕೆ ಅವಕಾಶವೇ ಇಲ್ಲ. ಪ್ರಾರ್ಥನೆಯನ್ನು ಮಾಡಿ ಭರಸಮರ್ಪಣ ಮಾಡದೇ ಹೋದರೆ ಭರವನ್ನು ಅಂಗೀಕರಿಸಲಾರನು. ಆದ್ದರಿಂದ ಪ್ರಪತ್ತಿಯು ಪ್ರಾರ್ಥನಾ ಪೂರ್ವಕ ಭರನ್ಯಾಸವಾದದ್ದು ಎಂಬುದು ಸಿದ್ಧಾಂತ.

ಪ್ರಪತ್ತೇಃ ಪರಿಕರ ನಿರೂಪಣಮ್

ಇನ್ವಿದ್ಯೈಕ್ಕು ಪರಿಕರಮಾವದು ? ಆನುಕೂಲ್ಯಸಙ್ಕಲ್ಪಮುಮ್ ಪ್ರಾತಿಕೂಲ್ಯವರ್ಜನಮುಮ್ ಕಾರ್ಪಣ್ಯಮುಮ್, ಮಹಾವಿಶ್ವಾಸಮುಮ್, ಗೋಪ್ತೃತ್ವವರಣಮುಮ್ ?

ಶ್ರುತಿಮುಖ್ಯೈಃ ಎಂಬುದರಿಂದ "ಷೋಢಾಹಿವೇದ ವಿದುಷೋ ವದಂತ್ಯೇನಂ ಮಹಾಮುನೇ । ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯವರ್ಜನಂ । ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವ ವರಣಂತಥಾ ॥ ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ, ಎಂದು ಭಗವಚ್ಛಾಸ್ತ್ರ (ಅಹಿರ್ಬುಧ್ನ್ಯಸಂಹಿತೆ 37-18)ದಲ್ಲಿ ಹೇಳಿರುವ ತಾಂತ್ರಿಕ ನ್ಯಾಸ ವಿದ್ಯೆಯು ವೇದವಿಹಿತವಾದದ್ದು, ವೈದಿಕವೂಅಹುದು ಎಂಬುದು ತಾತ್ಪರ್ಯ "ವೇದಗಳಲ್ಲಿ ವಿಹಿತವಾದ ನ್ಯಾಸ ವಿದ್ಯೆಯು ಬೇರೆ. ಅದು "ಪುರುಷವಿದ್ಯೆಗೆ" ಅಂಗವಾದದ್ದು, ತಾಂತ್ರಿಕವಾದ ನ್ಯಾಸ ವಿದ್ಯೆಯು ಬೇರೆ ಅಂದು ಐದು ಅಂಗಗಳಿಂದ ಕೂಡಿದುದು," ಎಂದು ಹೇಳುವ ಮಾತು ಸರಿಯಲ್ಲ ವೇದಗಳಲ್ಲಿ ಹೇಳಿರುವ ನ್ಯಾಸವಿದ್ಯೆಗೂ ಪರಮಾಪ್ತ ಭಗವಚ್ಛಾಸ್ತ್ರ (ಪಾಂಚರಾತ್ರಸಂಹಿತೆ)ಗಳಲ್ಲಿ ಹೇಳಿರುವ ನ್ಯಾಸ ವಿದ್ಯೆಗೂ ಭೇದವೇನೂ ಇಲ್ಲ, ನ್ಯಾಸಾಧ್ಯಾಯದಲ್ಲಿ.

"ಇದಂಮಹೋಪನಿಷದಂ ದೇವಾನಾಂ ಗುಹ್ಯಮುತ್ತಮಮ್ ।
ತೇಷಾಂತುತಪಸಾಂನ್ಯಾಸಮತಿರಿಕ್ತಂತಪಃ ಶ್ರುತಮ್ ॥

ಇತ್ಯಾದಿ ವಾಕ್ಯಗಳಿಂದ "ಓಮಿತ್ಯಾತ್ಮಾನಂ ಯುಂಜೀತ" ಎಂದು ಶ್ರುತಿವಿಹಿತವಾದ ಆತ್ಮನಿಕ್ಷೇಪವೇ ಈ ಭಗವಚ್ಛಾಸ್ತ್ರೋಕ್ತ ನ್ಯಾಸವಿದ್ಯೆಯೆಂಬುದು, ಶ್ರುತಿವಾಕ್ಯ ಪ್ರತ್ಯಭಿಜ್ಞಾಪಕ ಪೂರ್ವಕವಾಗಿ ನಿರೂಪಿಸಲ್ಪಟ್ಟಿದೆ ಆದ್ದರಿಂದ ತೈತ್ತಿರೀಯ ಶ್ರುತಿ ವಿಹಿತ ನ್ಯಾಸ ವಿದ್ಯೆಯು ಪರಮಾಪ್ತ ಭಗವಚ್ಛಾಸ್ತ್ರೋಕ್ತ ಬೃಂಹಿತವಾದದ್ದು. ನ್ಯಾಸವಿದ್ಯಾಸ್ವರೂಪವೂ ಒಂದೇ **ಶ್ರುತಿ ಮುಖ್ಯೈಃ** ಎಂದು ಈ ಐದು ಅಂಗಗಳು ಮಾತ್ರ ಶ್ರುತ್ಯಭಿಮತವೆಂಬುದು ತಾತ್ಪರ್ಯ. ವೈದಿಕವಾದ ನ್ಯಾಸವಿದ್ಯೆಯು ಬೇರೆ ಅದು ಪುರುಷವಿದ್ಯೆಗೆ ಅಂಗವು" ಎಂಬುದು ಪುನಶ್ಚೋದ್ಯ, "ಪುರುಷವಿದ್ಯಾಯಾಮಪಿ ಚೇತರೇಷಾಂ ಅನಾಮ್ನಾನಾತ್" ಎಂಬ ಬ್ರಹ್ಮಸೂತ್ರಭಾಷ್ಯದಲ್ಲಿ ಛಾಂದೋಗ್ಯ ಶ್ರುತಿಯಲ್ಲಿ ಹೇಳಿರುವ ಪುರುಷ ವಿದ್ಯೆಯು ದೃಷ್ಟ ಫಲವನ್ನು ಕೊಡುವ ವಿದ್ಯೆ. ತೈತ್ತಿರೀಯದಲ್ಲಿ ಹೇಳಿರುವ ನ್ಯಾಸವಿದ್ಯೆಗೆ ಮೋಕ್ಷವು ಫಲ. ಮೇಲೂ ತೈತ್ತಿರೀಯದಲ್ಲಿ "ತಸ್ಯೈವಂ ವಿದುಷಃ" ಎಂದಾರಂಭಿಸಿ ನಿರೂಪಿಸಿರುವ ಪುರುಷ ವಿದ್ಯೆಯು, ಪೂರ್ವಾನುವಾಕ್ಯದಲ್ಲಿ ಹೇಳಿರುವ ನ್ಯಾಸ ವಿದ್ಯೆಗೆ ಅರ್ಥರೂಪವಾದದ್ದು. ಅಂದರೆ ಆ ನ್ಯಾಸವಿದ್ಯೆಯನ್ನು ಯಾಗರೂಪವಾಗಿ ವಿವರಿಸಿದೆ ಪೂರ್ವಾನುವಾಕದಲ್ಲಿ ಹೇಳಿರುವ, "ಬ್ರಹ್ಮಣೋಮಹಿಮಾನಮಾಪ್ನೋತಿ" ಎಂಬ ಫಲವೂ, "ತಸ್ಯೈವಂ ವಿದುಷಃ," ಎಂಬ ಅನುವಾಕದಲ್ಲಿಯೂ ಹೇಳಿರುವುದರಿಂದ ಫಲೈಕ್ಯದಿಂದ ವಿದ್ಯೈಕ್ಯವನ್ನು ಪ್ರಾಮಾಣಿಕರು ಒಪ್ಪಬೇಕು ಆದ್ದರಿಂದ ವೇದವಿಹಿತವಾದ ನ್ಯಾಸವಿದ್ಯೆಯೂ ಭಗವಚ್ಛಾಸ್ತ್ರಗಳಲ್ಲಿ ಹೇಳಿರುವ ನ್ಯಾಸ ವಿದ್ಯೆಯೂ ಒಂದೇ, ಬೇರೆಯಿಲ್ಲವೆಂಬುದು ಸಿದ್ಧಾಂತವೆಂಬುದನ್ನು **ಶ್ರುತಿಮುಖ್ಯೈಃ**—ಶ್ರುತಿ ಭಗವಚ್ಛಾಸ್ತ್ರ ಸಂಪ್ರದಾಯಗಳಲ್ಲಿ ಎಂದು ಆಚಾರ್ಯ ಸಾರ್ವಭೌಮರು ಸೂಚಿಸಿದ್ದಾರೆ

ಪ್ರಪತ್ತಿಗೆ ಐದು ಅಂಗಗಳು

ಅನಂತರ ಪ್ರಪತ್ತಿ ಪರಿಕರಗಳನ್ನು ಕ್ರಮವಾಗಿ ನಿರೂಪಿಸುತ್ತಾರೆ **ಇವ್ವಿದ್ಯೈಕ್ಕು ಪರಿಕರಮಾವದು** ಇತ್ಯಾದಿ ಪ್ರಪತ್ತಿ ವಿದ್ಯೆಗೆ ಪರಿಕರಗಳು (ಅಂಗಗಳು) ಯಾವುವು ಎಂದರೆ, ಆನುಕೂಲ್ಯ ಸಂಕಲ್ಪವೂ, ಪ್ರಾತಿಕೂಲ್ಯ ವರ್ಜನವೂ, ಕಾರ್ಪಣ್ಯವೂ, ಮಹಾವಿಶ್ವಾಸವೂ, ಗೋಪ್ತೃತ್ವವರಣವೂ ಸೇರಿ ಐದು. ಆನುಕೂಲ್ಯ ಸಂಕಲ್ಪವೆಂದರೆ– ಇನ್ನು ಮುಂದೆ ನಿನಗೆ ಅನುಕೂಲನಾಗಿರುತ್ತೇನೆಂಬುದು ; ಪ್ರಾತಿಕೂಲ್ಯವರ್ಜನವೆಂದರೆ – ಪ್ರತಿಕೂಲನಾಗಿರುವುದನ್ನು ಬಿಡುವುದು. ಕಾರ್ಪಣ್ಯವೆಂದರೆ – ಕೃಪಣಭಾವ – ಅದಾಗಿ ಆಕಿಂಚನ್ಯಾನುಸಂಧಾನ. ಮಹಾವಿಶ್ವಾಸವೆಂದರೆ – ಭಗವಂತನು ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಅವಶ್ಯ ರಕ್ಷಿಸುತ್ತಾನೆಂಬುದು. ಗೋಪ್ತೃತ್ವವರಣವೆಂದರೆ, "ನೀನೇ ರಕ್ಷಕನಾಗಿರು" ಎಂಬ ಪ್ರಾರ್ಥನೆ.

"ಷಡ್ವಿಧಾಶರಣಾಗತಿ" ರಿತಿ ಪ್ರಮಾಣಸ್ಯ ತಾತ್ಪರ್ಯಮ್

ಇವ್ವಿಡತ್ತಿಲ್, (1) "ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸವರ್ಜನಮ್ ।
ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ ॥
ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ" ॥

ಇತ್ಯಾದಿಹಳಿಲ್ ಶೊಲ್ಲುಹಿರಷಾಡ್ವಿಧ್ಯಂ, ಅಷ್ಟಾಙ್ಗ ಯೋಗಮೆನ್ನು ಮಾಪ್ಪೋಲೇ ಅಂಗಾಂಗಿ ಸಮುಚ್ಚಯತ್ತಾಲೇ ಯಾಹಕ್ಕಡುವದೆನ್ನುಮಿಡಮುಮ್, ಇವಱ್ಱಿಲ್ ಇನ್ನದೊನ್ರುಮೇ ಅಂಗಿ, ಇತರಙ್ಗಳ್ ಅಙ್ಗಙ್ಗಳೆನ್ನುಮಿಡಮುಮ್,

(2) "ನಿಕ್ಷೇಪಾಪರಪರ್ಯಾಯೋನ್ಯಾಸಃ ಪಂಚಾಂಗಸಂಯುತಃ ।
ಸನ್ನ್ಯಾಸಸ್ತ್ಯಾಗ ಇತ್ಯುಕ್ತ ಶ್ಶರಣಾಗತಿರಿತ್ಯಪಿ ॥"

ಎನ್ಗಿರ ಶ್ಲೋಕತ್ತಾಲೇ ನ್ಯಾಯು ನಿರಪೇಕ್ಷಮಾಹ ಸಿದ್ಧಮ್.

ಇವ್ವಿಡತ್ತಿಲ್ (3) "ಶಾಶ್ವತೀಮಮ ಸಂಸಿದ್ಧಿರಿಯಂ ಪ್ರಹ್ವೀಭವಾಮಿಯತ್ ।
ಪುರುಷಂಪರಮುದ್ದಿಶ್ಯ ನಮೇಸಿದ್ಧಿರಿತೋನ್ಯಥಾ ।
ಇತ್ಯಂಗ ಮುದಿತಂ ಶ್ರೇಷ್ಠಂ ಫಲೇಪ್ಸಾತದ್ವಿರೋಧಿನೀ" ॥

ಪ್ರಪತ್ತಿಯ ಅಂಗಾಗಿ ನಿರೂಪಣೆ, ಷಡ್ವಿಧಾ ಶರಣಾಗತಿಃ, ಎಂಬುದಕ್ಕೆ ತಾತ್ಪರ್ಯ.

"ಷಡ್ವಿಧಾ ಶರಣಾಗತಿಃ" ಎಂದು ಆರು ಅಂಗಗಳನ್ನು ಹೇಳಿರುವಾಗ ಐದು ಅಂಗಗಳನ್ನು ಮಾತ್ರ ಹೇಳಿರುವುದು ಸರಿಯೇ ಎಂದರ **ಇವ್ವಿಡತ್ತಿಲ್, ಆನುಕೂಲ್ಯಸ್ಯ ಸಂಕಲ್ಪಃ** ಎಂದು ಆರಂಭಿಸಿ ನಿರೂಪಿಸುತ್ತಾರೆ ಅದಾಗಿ ಈ ಪ್ರಕರಣದಲ್ಲಿ 1) **ಆನುಕೂಲ್ಯಸ್ಯ ಸಂಕಲ್ಪಃ** (ಅಹಿ ಸಂ 37-28-29)ಇತ್ಯಾದಿ ವಾಕ್ಯಗಳಲ್ಲಿ ಹೇಳಿರುವ ಆರು ವಿಧವು, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನಗಳೆಂಬ ಏಳು ಅಂಗಗಳೂ, ಸಮಾಧಿ ಎಂಬ ಅಂಗಿಯೂಕೂಡಿ ಅಷ್ಟಾಂಗ ಯೋಗವೆಂದು ಭಕ್ತಿಯೋಗವನ್ನು ವ್ಯವಹರಿಸುವಂತೆ, ಪ್ರಪತ್ತಿ ಶಾಸ್ತ್ರದಲ್ಲಿಯೂ ಅಂಗಾಂಗಿಗಳನ್ನು ಸೇರಿಸಿ ಹೇಳಿರುತ್ತದೆಯಷ್ಟ ಇವುಗಳಲ್ಲಿ ನಿಕ್ಷೇಪವೆಂಬ ಇದು ಒಂದೇ ಅಂಗಿ, ಬೇರೆಯವು ಅಂಗಗಳೆಂಬುದನ್ನು, 2) **"ನಿಕ್ಷೇಪಾಪರ ಪರ್ಯಾಯಃ"**, (ಲಕ್ಷ್ಮೀತಂತ್ರ 17-74) ಎಂಬ ಶ್ಲೋಕದಲ್ಲಿ ನ್ಯಾಯ ನಿರಪೇಕ್ಷವಾಗಿ ಸಿದ್ಧ ಅದಾಗಿ, ನಿಕ್ಷೇಪ ಪರ್ಯಾಯವಾದ ನ್ಯಾಸವು ಐದು ಅಂಗಗಳಿಂದ ಕೂಡಿದೆ, ಅದೇ ನ್ಯಾಸ, **ತ್ಯಾಗ**, ಶರಣಾಗತಿ ಎಂದು ಹೇಳಲ್ಪಟ್ಟಿದೆ ಎಂಬುದು ಅರ್ಥ

"ನ್ಯಾಯು ನಿರಪೇಕ್ಷಮಾಹ ಸಿದ್ಧಮ್" ಎಂಬ ವಚನದಿಂದ, ಆನುಕೂಲ್ಯ ಸಂಕಲ್ಪಾದ್ಯಂಗಗಳಿಂದ ಕೂಡಿದ ನ್ಯಾಸವಿದ್ಯೆಯು ಬೇರೆ, ಸರ್ವಧರ್ಮ ಸ್ವರೂಪ **ತ್ಯಾಗಾಂಕವಾದ** ಶರಣಾಗತಿಯು ಬೇರ, ಎಂಬ ಕುದೃಷ್ಟಿ ಕಲ್ಪನವು, ನ್ಯಾಸ, ಶರಣಾಗತಿ, **ನಿಕ್ಷೇಪ** ಇವು ಪರ್ಯಾಯ ಶಬ್ದಗಳೆಂದು ವಿವರಿಸಿರುವುದರಿಂದ ಪ್ರತಿಕ್ಷಿಪ್ತವು ಪಂಚಾಂಗದಿಂದ ಕೂಡಿದ ನ್ಯಾಸವೇ ಶರಣಾಗತಿ ಎಂಬುದು ಸಿದ್ಧ. ಆನುಕೂಲ್ಯ ಸಂಕಲ್ಪಾದ್ಯಂಗ ಪಂಚಕಗಳಿಂದ ಬೇರೆಯಾದ ಸರ್ವಧರ್ಮ ಸ್ವರೂಪ **ತ್ಯಾಗವನ್ನೂ** ಸೇರಿಸಿದರೆ ಆರು ಅಂಗಗಳಾಗುತ್ತವೆ ಇದು "ಪಂಚಾಂಗ ಸಂಯುತಃ" ಎಂಬ ಆ ವಚನಕ್ಕೆ ವಿರೋಧ "ಷಡ್ವಿಧಾ ಶರಣಾಗತಿಃ" ಎಂದು ಆರು **ಅಂಗಗಳನ್ನು ಹೇಳಿದೆಯೆಲ್ಲಾ** ಎಂದರೆ, ಅಂಗಿಯನ್ನು ಸೇರಿಸಿ ಈ ವಚನದಲ್ಲಿ ಹೇಳಿದೆಯೆಂಬುದು ಮೇಲೆಯೇ ನಿರೂಪಿಸಲ್ಪಟ್ಟಿದೆ. ಆದ್ದರಿಂದ ನ್ಯಾಸ, ನಿಕ್ಷೇಪ, ಶರಣಾಗತಿ ಎಂಬ ಪದಗಳು ಪರ್ಯಾಯಾರ್ಥಕದ್ಯೋತಗಳು.

ಅಹಿರ್ಬುಧ್ನ್ಯಾದಿ ಸಂಹಿತೆಗಳಲ್ಲಿ "ಫಲತ್ಯಾಗರೂಪ"ವಾದ **ಅಂಗಾಂತರವು ಹೇಳಲ್ಪಟ್ಟಿದೆಯಲ್ಲಾ** ಅದೂ ಸೇರಿ ಪ್ರಪತ್ತಿಗೆ ಆರು ಅಂಗಗಳು ಹೇಳಲ್ಪಡಬೇಕಲ್ಲವೆ, ಎಂದರೆ ಆ ಅಂಗವು ಮೋಕ್ಷಾರ್ಥವಾದ ಶರಣಾಗತಿಯಲ್ಲಿ ನಿಯತವು. ಎಂಬುದನ್ನು **"ಇವ್ವಿಡತ್ತಿಲ್"** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ ಅದಾಗಿ **ಇವಿಡತ್ತಿಲ್** – ಈ

---

3) ಶ್ರೀ. ತ. ಸೋ.

ಎನ್ರು ಅಹಿರ್ಬುಧ್ನ್ಯೋಕ್ತಮಾನ ಫಲತ್ಯಾಗರೂಪಾಂಗಾಂತರಮ್ ಮೋಕ್ಷಾರ್ಥಮಾನ ಆತ್ಮನಿಕ್ಷೇಪತ್ತಿಲೇ ನಿಯತಮ್.

ಫಲಸಙ್ಗ ಕರ್ತೃತ್ವಾದಿ ತ್ಯಾಗಮ್, ಕರ್ಮಯೋಗಮ್ ಮುದಲಾನ ನಿವೃತ್ತಿಧರ್ಮಙ್ಗಳಿಲ್ಲಾತ್ತಿಲುಮ್ ವರುಹೈಯಾಲೇ, ಇವ್ವನುಸನ್ಧಾನಮ್ ಮುಮುಕ್ಷುವುಕ್ಕು ಸಾಙ್ಗಸಮರ್ಪಣ ದಶೈಯಿಲೇ ಕರ್ತವ್ಯಮ್.

ಅಙ್ಗಾನಾಂ ನಿಬಂಧನ ಪ್ರಯೋಜನಾನಿ – ಅನುಕೂಲ್ಯ ಸಂಕಲ್ಪ, ಪ್ರಾತಿಕೂಲ್ಯವರ್ಜನ

ಇಙ್ಗು ಪರಿಕರಂಗಳಾನವತ್ತಿಲ್ ಅನುಕೂಲ್ಯಸಂಕಲ್ಪತ್ತುಕ್ಕುಮ್ ಪ್ರಾತಿಕೂಲ್ಯವರ್ಜನತ್ತುಕ್ಕುಮ್ ನಿಬಂಧನಂ ಸರ್ವಶೇಷಿಯಾನ ಶ್ರಿಯಃ ಪತಿಯ್ಕ್ಕು ಪ್ಪತ್ತ ಪ್ರವೃತ್ತಿ ನಿವೃತ್ತಿಹಳಾಲೇ ಅಭಿಮತಾನುವರ್ತನಮ್ ಪಣ್ಣವೇಣ್ಡುಮ್ ಪಡಿ ಇವನುಕ್ಕುಣ್ಡಾನ ಪಾರಾರ್ಥ್ಯ ಜ್ಞಾನಮ್. 4)ಇತ್ತಾಲ್ "ಆನುಕೂಲ್ಯೇತರಾಭ್ಯಾನ್ತು ವಿನಿವೃತ್ತಿರಪಾಯತಃ" ಎನ್ಗಿರ ಪಡಿಯೇ ಅಪಾಯಪರಿಹಾರಮ್ ಸಿದ್ಧಮ್.

ಪ್ರಪತ್ತಿ ವಿಷಯದಲ್ಲಿ (3) **ಶಾಶ್ವತೀಮಮ**, ಇತ್ಯಾದಿಯಾಗಿ ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಹೇಳಿರುವ, ಫಲತ್ಯಾಗ ರೂಪವಾದ ಅಂಗಾಂತರವು (ಐದು ಅಂಗಗಳಿಗಿಂತ ಬೇರೆಯಾದದ್ದು) ಮೋಕ್ಷಾರ್ಥವಾಗಿ ಅನುಷ್ಠಿಸಲ್ಪಡುವ ಆತ್ಮ ನಿಕ್ಷೇಪದಲ್ಲಿ ನಿಯತವಾದದ್ದು. ಅಂದರೆ ಮೋಕ್ಷಾರ್ಥವಾಗಿ ಪ್ರಪತ್ತಿಗಳಲ್ಲಿ ಅವಶ್ಯ ಮಾಡಬೇಕಾದದ್ದು. ಇದರಿಂದ "ನ್ಯಾಸಃ ಪಂಚಾಂಗ ಸಂಯುತಃ" ಎಂಬ ವಚನವು ಪ್ರಪತ್ತಿ ಸಾಮಾನ್ಯಕ್ಕೆ ವಿಷಯ. ಪ್ರಪತ್ತಿ ಸಾಮಾನ್ಯ ವೆಂಬುದು ಐಶ್ವರ್ಯ ಕೈವಲ್ಯ ಮೋಕ್ಷಗಳನ್ನು ಕುರಿತು ಮಾಡುವುದು. ಐಶ್ವರ್ಯ, ಕೈವಲ್ಯಗಳನ್ನು ಫಲದಲ್ಲಿ ಆಸೆಯಿಂದ ಮಾಡುವುದರಿಂದ ಫಲತ್ಯಾಗರೂಪವಾದ ಅಂಗವು ಬರುವುದಿಲ್ಲ. ಮೋಕ್ಷಾರ್ಥ ಪ್ರಪತ್ತಿಯಲ್ಲಿ ಫಲತ್ಯಾಗವು ಅಪೇಕ್ಷಿತ ಏಕೆಂದರೆ **ಫಲಸಂಗಕರ್ತೃತ್ವಾದಿ**–ಎಂದಾರಂಭಿಸಿ ವಿವರಿಸುತ್ತಾರೆ ಫಲ–ಫಲದಲ್ಲಿ ಆಸೆ, ಸಂಗ–ಮಮತ್ವ–ನನ್ನದು ಎಂಬುದು, ಕರ್ತೃತ್ವ – ನಾನು ಕರ್ತೃ ಎಂಬುದು, ಆದಿಶಬ್ದದಿಂದ, ಫಲೋಪಾಯತ್ವ, ಅಂದರೆ ಫಲಕ್ಕೆ ಈ ಕರ್ಮವು ಉಪಾಯವೆಂಬುದು. ತಥಾಚ, ಫಲತ್ಯಾಗ, ಸಂಗ (ಮಮತ) ತ್ಯಾಗ, ಕರ್ತೃತ್ವತ್ಯಾಗ, ಫಲೋಪಾಯತ್ವತ್ಯಾಗ. ಇವು ನಾಲ್ಕೂ ಕರ್ಮಯೋಗವೇ ಆದಿಯಾಗಿ ಎಲ್ಲಾ ನಿವೃತ್ತಿ ಧರ್ಮಗಳಲ್ಲಿಯೂ ಮಾಡಲ್ಪಡಬೇಕಾದವು. ಆದ್ದರಿಂದ ಈ ಕರ್ತೃತ್ವ ತ್ಯಾಗ, ಮಮತಾ ತ್ಯಾಗ, ಫಲತ್ಯಾಗ, ಫಲೋಪಾಯತ್ವ ತ್ಯಾಗಗಳು ಎಲ್ಲಾ ನಿವೃತ್ತಿ ಧರ್ಮಗಳಲ್ಲಿಯೂ ಮಾಡಬೇಕಾದವು. ಈ ತ್ಯಾಗರೂಪ ಅನುಸಂಧಾನವು ಫಲಾಂತರಗಳಲ್ಲಿ ಆಸೆಯಿಲ್ಲದೆ ಮೋಕ್ಷದಲ್ಲೇ ಆಸೆಯುಳ್ಳವನಿಗೆ **ಸಾಂಗ ಭರಸಮರ್ಪಣ ದಶೆಯಿಲೇ** – ಅಂಗಪಂಚಕ ಸಂಪನ್ನವಾದ ಸ್ವರೂಪ ಭರ ಫಲ ಸಮರ್ಪಣ ಕಾಲ ದಲ್ಲಿ, ಸಂಕಲ್ಪಾನಂತರ ಸಾತ್ವಿಕ ತ್ಯಾಗರೂಪವಾಗಿ ಮಾಡಲ್ಪಡಬೇಕೆಂಬುದು ತಾತ್ಪರ್ಯ.

ಅಂಗಗಳಿಗೆ ಕಾರಣವೇನು, ಪ್ರಯೋಜನವೇನು ಎಂಬುದು–ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನ.

ಅನಂತರ ಅಂಗಗಳನ್ನು ಅನುಷ್ಠಿಸಲು ಕಾರಣವನ್ನು ಇಂಗು **ಪರಿಕರಂಗಳಾನ ವಟ್ರಿಲ್**, ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾಗಿ **ಇಂಗು – ಪ್ರಪತ್ತಿ ಪರಿಕರಂಗಳಾನ ವಟ್ರಿಲ್** – ಇತ್ಯಾದಿ ನ್ಯಾಸಃ ಪಂಚಾಂಗ ಸಂಯುತಃ, ಎಂದು ಹೇಳಲ್ಪಟ್ಟ ಐದು ಅಂಗಗಳಲ್ಲಿ, ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳಿಗೆ **ನಿಬಂಧನಂ**– ಕಾರಣವೇನೆಂದರೆ, ಸರ್ವಶೇಷಿಯಾದ ಲಕ್ಷ್ಮೀಪತಿಗೆ, ಶಾಸ್ತ್ರೀಯ ಮಾರ್ಗದಲ್ಲಿ ಪ್ರವೃತ್ತಿ, ಶಾಸ್ತ್ರ ವಿಹಿತವಲ್ಲಾದ ಮಾರ್ಗದಿಂದ ನಿವೃತ್ತಿ ಹೊಂದುವುದು. ಎಂಬ ರೀತಿಯಲ್ಲಿ ಅಭಿಮತವಾದ ಕಾರ್ಯಗಳನ್ನು ಮಾಡುವಂತೆ ಇವನಿಗೆ ಉಂಟಾದ ಪಾರಾರ್ಥ್ಯಜ್ಞಾನ ಭಗವಂತನಿಗೆ ಶೇಷ ಭೂತನೆಂಬ ಜ್ಞಾನ ಶೇಷ ಭೂತನು ಶೇಷಿಯ ಅಭಿಮತವನ್ನು ಮಾಡುವುದೂ, ಅನಭಿಮತವನ್ನು ಮಾಡದೇ ಇರುವುದೂ, ಸ್ವರೂಪವಾದ್ದರಿಂದ ಅನುಕೂಲ ಕೈಂಕರ್ಯಗಳಲ್ಲಿ ಪ್ರವೃತ್ತಿಯೂ, ನಿಷಿದ್ಧಗಳಲ್ಲಿ ನಿವೃತ್ತಿಯೂ ಹೇಳಿದೆ. ಇದರಿಂದಾಗಿ [1] **ಆನುಕೂಲ್ಯೇತರಾಭ್ಯಾಂತು** ಇತ್ಯಾದಿ,

---

3) ಅಹಿರ್ಬುಧ್ನ್ಯ ಸಂಹಿತೆ (52-13, 14) ಪರಮಪುರುಷನಲ್ಲಿ ಸ್ವಕ್ಷ್ಮೀಭಾವವು–ಅಂದರೆ ಅವನಿಗೆ ತಲೆ ಬಾಗಿರುವುದು– ನನಗೆ ಶಾಶ್ವತವಾದ ಸಿದ್ಧಿ–ಫಲ ಇದು ಮೋಕ್ಷಾರ್ಥ ಪ್ರಪತ್ತಿಗೆ ಶ್ರೇಷ್ಠವಾದ ಅಂಗ. ಫಲದಲ್ಲಿ ಆಸೆಯಿರುವುದೂ ಆ ಅಂಗಕ್ಕೆ ವಿರೋಧ.

4) ಪ್ರ.ತಿ.ನೋ.

ಕಾರ್ಪಣ್ಯಮ್

ಕಾರ್ಪಣ್ಯಮಾವದು ? ಮುನ್ಬು ಶೊನ್ನ ಆಕಿಂಚನ್ಯಾದಿಹಳುಡೈಯ ಅನುಸನ್ಧಾನಮಾದಲ್, [illegible] ಯೊಹ ವನ್ದ ಗರ್ವಹಾನಿಯಾದಲ್, ಕೃಪಾಜನಕ ಕೃಪಣವೃತ್ತಿಯಾದಲಾಯ್. ನಿನ್ರು ಶರಣ್ಯನುಡೈಯ ಕಾರುಣ್ಯೋತ್ತಂಭನಾರ್ಥಮುಮಾಯ್, 5) "ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿರಿಹೇರಿತಾ" ಎನ್ಗಿರ ಪಡಿಯೇ ಪಿನ್ಬು ಅನನ್ಯೋಪಾಯತ್ವತ್ತುಕ್ಕುಮ್ ಉಪಯುಕ್ತಮಾಯಿರುಕ್ಕುಮ್.

ಈ ಅನುಕೂಲಾಚರಣದಿಂದಲೂ ಪ್ರತಿಕೂಲಾಚರಣ ವರ್ಜನದಿಂದಲೂ ಅಪಾಯ (ಆಜ್ಞಾತಿಲಂಘನ) ಪರಿ[illegible] ಸಿದ್ಧ ಭಗವಂತನು ಸ್ವಾಮಿ, ನಾನು ಅವನಿಗೆ ದಾಸನೆಂಬ ಜ್ಞಾನವೇ ಅನುಕೂಲಾಚರಣ, ನಿಷಿದ್ಧ ವರ್ಜ[illegible] ಮೂಲ – ಕಾರಣ. ಈ ಶೇಷತ್ವ ಜ್ಞಾನ ನಿಬಂಧನವಾದ ಅನುಕೂಲಾಚರಣ, ಪ್ರಾತಿಕೂಲ್ಯ ವರ್ಜನವು, [illegible] ಯಲ್ಲಿಯೂ ಅವಳ ಪತಿಯಲ್ಲಿಯೂ ಇರಬೇಕೆಂಬುದು, **ಶ್ರಿಯಃಪತಿಯೈಪ್ಪಟ್ರಿ,** ಎಂಬ ಶಬ್ದದಿಂದ ತಿಳಿಸಲ್ಪಡು[illegible]

1) ಅಂತಃಸ್ಥಿತಾಹಂ ಸರ್ವೇಷಾಂ ಭಾವಾನಾಮಿತಿ ನಿಶ್ಚಯಾತ್
ಮಯೀವ ಸರ್ವ ಭೂತೇಷ್ವಪ್ಯಾನುಕೂಲ್ಯ ಸಮಾಚರೇತ್ ।
ತಥೈವ ಪ್ರಾತಿಕೂಲ್ಯಂಚ ಭೂತೇಷು ಪರಿವರ್ಜಯೇತ್ ॥
ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ ।
ಅತಸ್ತದಾನುಕೂಲ್ಯಂ ಮೇ ಕಾರ್ಯಮಿತ್ಯೇವ ನಿಶ್ಚಯಃ ॥ ಎಂಬ ಅಹಿರ್ಬುಧ್ನ್ಯ ವಿಷ್ವ[illegible]

ವಾಕ್ಯಗಳು ಇಲ್ಲಿ ಅಭಿಪ್ರೇತಗಳು ಸಕಲ ಜೀವರಾಶಿಗಳಿಗೂ ಭಗವಂತನೂ ಮಹಾಲಕ್ಷ್ಮಿಯೂ ಅಂತರಾ[illegible] ಆದ್ದರಿಂದ ಪ್ರಾಣಿಗಳನ್ನು ಹಿಂಸಿಸದೆ ಅವುಗಳಿಗೆ ಅನುಕೂಲವಾಗಿರುವುದೂ ಲಕ್ಷ್ಮೀ, ನಾರಾಯಣರಲ್ಲಿ ಅನು[illegible] ಚರಣೆ

ಕಾರ್ಪಣ್ಯ :–

ಅನಂತರ ಕಾರ್ಪಣ್ಯವೆಂಬ ಅಂಗವನ್ನು ನಿರೂಪಿಸುತ್ತಾರೆ. **ಕಾರ್ಪಣ್ಯಮಾವದು –** ಕಾರ್ಪಣ್ಯವು [illegible] ದೆಂದರೆ, ಹಿಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಹೇಳಿದ ಅಕಿಂಚನ್ಯ, ಅನನ್ಯ ಗತಿತ್ವಗಳ, ಅನುಸಂಧಾನ. [illegible] ಉಂಟಾದ ಗರ್ವಹಾನಿ "ತ್ಯಾಗೋಗರ್ವಸ್ಯ ಕಾರ್ಪಣ್ಯಂ" ಗರ್ವವನ್ನು ಬಿಡುವುದು ಕಾರ್ಪಣ್ಯ ಕೃಪಣ[illegible] ವೃತ್ತಿಯು ಅಂದರೆ "ಬದ್ಧಾಂಜಲಿಪುಟಂದೀನಂ" ಎಂಬಂತೆ ತನ್ನ ದೈನ್ಯವನ್ನು ಪ್ರಕಾಶಿಸಿ, ಕೈಮುಗಿದು ಕೊ[illegible] ಪುನಃ ಪುನಃ ನಮಸ್ಕರಿಸುವುದೂ, ದೈನ್ಯರೂಪವಾಗಿ ದಂತ ಪ್ರಕಟನಾದಿಗಳೂ, ಪ್ರಹ್ವೀಭಾವವೂ ಕಾರ್ಪಣ್ಯ ಸೂಚಕವು. ಇದು ಶರಣ್ಯನ ಕಾರುಣ್ಯವನ್ನು ಹೆಚ್ಚಿಸುತ್ತದೆ. **(5) ಕಾರ್ಪಣ್ಯೇನಾಪ್ಯುಪಾಯಾನಾಂ – ಇತ್ಯಾದಿ** ಇದರಿಂದಾಗಿ ಬೇರೆ ಉಪಾಯಗಳಲ್ಲಿ ಪ್ರವರ್ತಿಸದೆ ಇರುವುದೂ ಏರ್ಪಟ್ಟು, ಅನಂತರವೂ ಅನನ್ಯೋಪಾಯನಾಗಿರುವು ದಕ್ಕೆ ಉಪಕಾರವಾಗುತ್ತದೆ.

---

4) ಆನುಕೂಲ್ಯೇತರಾಭ್ಯಾಂತು ವಿನಿವೃತ್ತಿರಪಾಯತಃ ।

5) ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿರಿಹೇರಿತಾ ॥

(ಲಕ್ಷ್ಮೀತಂತ್ರ 17-76)

ಅನುಕೂಲ್ಯ ಸಂಕಲ್ಪದಿಂದಲೂ, ಇತರವಾದ ಪ್ರಾತಿಕೂಲ್ಯವರ್ಜನ ಸಂಕಲ್ಪದಿಂದಲೂ, ಅಪಾಯದಿಂದ (ಭಗವದಾಜ್ಞಾತಿ[illegible] ದಿಂದ) ವಿನಿವೃತ್ತಿಯೂ – ಅಂದರೆ ಅವನ ಆಜ್ಞೆಯನ್ನು ಮೀರದೆ ಇರುವುದು ಏರ್ಪಡುತ್ತದೆ. ಕಾರ್ಪಣ್ಯದಿಂದ ಬೇರೆ ಉಪಾಯಗಳನ್ನು ಅನುಷ್ಠಿಸದೆ ಇರುವುದು ಹೇಳಲ್ಪಟ್ಟಿತು.

ಮಹಾವಿಶ್ವಾಸಸ್ಯ ಸ್ವರೂಪಪ್ರಯೋಜನವ್

ಮಹಾವಿಶ್ವಾಸವ್, 1) "ರಕ್ಷಿಷ್ಯತೀತಿ ವಿಶ್ವಾಸಾದಭೀಷ್ಟೋಪಾಯಕಲ್ಪನಂ" ಎನ್ಗಿರಪಡಿಯೇ ಅಣಿಯಿಡಾದನನುಷ್ಠಾನ ಸಿಧ್ಯರ್ಥಮುಮಾಯ್ ಪಿನ್ಬುನಿರ್ಭರತೈಕ್ಕು ಮುರುಪ್ಪಾಯಿರುಕ್ಕುಮ್.

ಗೋಪ್ತೃತ್ವವರ್ಣನವ್

ಸ್ವರೂಪಾನುಚಿತ ಪುರುಷಾರ್ಥಙ್ಗಳ್‌ಪೋಲೇ ಸ್ವರೂಪಪ್ರಾಪ್ತಮಾನ ಅಪವರ್ಗಮುಮ್ ಪುರುಷಾರ್ಥಮಾಮ್‌ಪೋದು ಪುರುಷನರ್ಥಿಕ್ಕಕ್ಕೊಡುಕ್ಕವೇಣ್ಡುಹೈಯಾಲೇ ಇಙ್ಗು ಗೋಪ್ತೃತ್ವ ವರಣಮುಮಪೇಕ್ಷಿತಮ್. ಸನ್ಸ್ರಾಯಿರುಪ್ಪದೊನ್ರೈಯುಮ್ ಈಪ್ಪುರುಷನರ್ಥಿಕ್ಕ ಕ್ಕೊಡಾದಪೋದು ಪುರುಷಾರ್ಥಙ್ಗಳ್ಕೊಡುತ್ತಾನಾಹಾನಿರೇ.

ಅಹೈಯಾಲೇಯಿರೇ (2) "ಅಪ್ರಾರ್ಥಿತೋ ನ ಗೋಪಾಯೇತ್" ಎನ್ರುಮ್ (3) "ಗೋಪ್ತೃತ್ವ ವರಣಂ ನಾಮ ಸ್ವಾಭಿಪ್ರಾಯ ನಿವೇದನಂ" ಎನ್ರುಮ್ ಶೊಲ್ಲುಹಿರದು.

ಮಹಾವಿಶ್ವಾಸದ ಸ್ವರೂಪ ಮತ್ತು ಪ್ರಯೋಜನ.

ಅನಂತರ **ಮಹಾವಿಶ್ವಾಸವ್** ಎಂದಾರಂಭಿಸಿ ಅದರ ಸ್ವರೂಪ ಪ್ರಯೋಜನಗಳನ್ನು ಆಚಾರ್ಯರು ನಿರೂಪಿಸುತ್ತಾರೆ. ಅದಾಗಿ ಮಹಾವಿಶ್ವಾಸವೆಂಬುದು (1) **ರಕ್ಷಿಷ್ಯತೀತಿ** ಇತ್ಯಾದಿ ಹೇಳಿರುವಂತೆ **ಅಣಿಯಿಡಾದ**– ಸಂಶಯವಿಲ್ಲದ ರೀತಿಯಲ್ಲಿ ಶರಣಾಗತ್ಯನುಷ್ಠಾನ ಸಿದ್ಧಿಗಾಗಿಯೂ, ಶರಣಾಗತ್ಯನುಷ್ಠಾನಾನಂತರ, ಭಗವಂತನು ನಮ್ಮಭರವನ್ನು ಸ್ವೀಕರಿಸಿ ರಕ್ಷಿಸುತ್ತಾನೆಯೋ, ಇಲ್ಲವೋ ಎಂಬ ಸಂದೇಹವು ಉಂಟಾಗದೆ ಇರುವುದಕ್ಕೂ ಅವನು ನಮ್ಮ ಭರವನ್ನು ಸ್ವೀಕರಿಸಿ ರಕ್ಷಿಸುತ್ತಾನೆಂಬ ನಿರ್ಭರತೆಗೂ **ಉರುಪ್ಪು**– ಕಾರಣವಾಗಿರುತ್ತದೆ.

ಗೋಪ್ತೃತ್ವವರಣ

ಸ್ವರೂಪಾನುಚಿತವಾನ ಇತ್ಯಾದಿ ಸ್ವರೂಪಕ್ಕೆ ಉಚಿತವಲ್ಲದ ಪುರುಷಾರ್ಥಗಳು – ಧರ್ಮ, ಅರ್ಥ, ಕಾಮಗಳು ಭಗವಂತನು ಇವುಗಳನ್ನು ಪ್ರಾರ್ಥಿಸದೆ ಕೊಡನು ಇವುಗಳನ್ನು ಕೊಡದೆ ಇದ್ದರೂ ತನ್ನ ಶೇಷತ್ವ ಸ್ವರೂಪಕ್ಕೆ ಪ್ರಾಪ್ತವಾದ ಪುರುಷಾರ್ಥವನ್ನು ಭಗವಂತನು ತಾನೇ ಕೊಡಬೇಕಲ್ಲವೇ ಎಂದರೆ, **ಸ್ವರೂಪಪ್ರಾಪ್ತವಾದ** ಇತ್ಯಾದಿ– ಸ್ವರೂಪಕ್ಕೆ ಉಚಿತವಾದ ಮೋಕ್ಷವು ಪುರುಷಾರ್ಥವಾಗಬೇಕಾದರೆ, ಪುರುಷನು ಯಾಚಿಸಿದರೇನೆ ಕೊಡಬೇಕು ಆದ್ದರಿಂದ ಗೋಪ್ತೃತ್ವವರಣವೂ ಅಪೇಕ್ಷಿತ. ಇತರ ಪ್ರಯೋಜನಗಳು, ಪುರುಷನು ಯಾಚಿಸಿಕೊಟ್ಟರೇನೇ ಪುರುಷಾರ್ಥವಾಗುವಂತೆ, ಮೋಕ್ಷವನ್ನೂ ಶೇಷಭೂತನು ಯಾಚಿಸಿದ ನಂತರ ಕೊಟ್ಟರೇನೆ ಪುರುಷಾರ್ಥವಾಗುತ್ತದೆ ಇದನ್ನು ವ್ಯತಿರೇಕ ಮುಖೇನ **ಸನ್ಸ್ರಾಯಿರುಪ್ಪದೊನ್ರೈ** ಎಂದಾರಂಭಿಸಿ ದೃಢೀಕರಿಸುತ್ತಾರೆ. ಅದಾಗಿ ಒಳ್ಳೆಯ ವಸ್ತುವನ್ನೂ, ಈ ಪುರುಷನು ಯಾಚಿಸಿದಾಗ ಕೊಡದೇ, ಅವನು ಯಾಚಿಸದೆ ಇರುವಾಗ ಕೊಟ್ಟರೆ ಪುರುಷಾರ್ಥವನ್ನು ಕೊಟ್ಟವನಾಗುವುದಿಲ್ಲವಲ್ಲವೇ ಆದ್ದರಿಂದಲೇ (2) **ಅಪ್ರಾರ್ಥಿತೋನಗೋಪಾಯೇತ್**– ಪ್ರಾರ್ಥಿಸದೆ ಇರುವಾಗ ರಕ್ಷಿಸಬಾರದು, ಎಂದೂ (3) **ಗೋಪ್ತೃತ್ವ ವರಣಂ ನಾಮ,** ಇತ್ಯಾದಿ ಗೋಪ್ತೃತ್ವವರಣವೆಂದರೆ ಈ ಫಲವನ್ನು ಕೊಟ್ಟು ನನ್ನನ್ನು ಕಾಪಾಡು ಎಂಬ ಸ್ವಾಭಿಪ್ರಾಯವನ್ನು ತಿಳಿಸುವುದು.

---

1) ಲ. ತಂತ್ರ (17-77) ಈ ವಾಕ್ಯದಿಂದ ನಮ್ಮನ್ನು ಅವಶ್ಯ ರಕ್ಷಿಸುತಾನೆಂಬ ಮಹಾ ವಿಶ್ವಾಸ ಪೂರ್ವಕ ತನಗೆ ಇಷ್ಟವಾದ ಫಲಪನ್ನು ಕೊಡಲು ಭಗವಂತನೇ ಉಪಾಯವೆಂಬುದು ಏರ್ಪಡುತ್ತದೆ.

2), 3). ಪ. ತಿ. ಸೋ.

ನ್ಯಾಸಃ ಪಂಚಾಂಗಸಂಯುತಃ

ಇಪ್ಪಡಿ ಇನ್ವೈನ್ದ್ದವನ್ ಇವ್ವಿದ್ಯಾನುಷ್ಠಾನ ಕಾಲತ್ತಿಲ್ ಉಪಯುಕ್ತಙ್ಗಳಾಹೈಯಾಲ್, ಇವೈ ಇವ್ವಾತ್ಮನಿಕ್ಷೇಪತ್ತುಕ್ಕು ಅವಿನಾಭೂತ ಸ್ವಭಾವಂಗಳ್.

ತತ್ರ ತ್ರಿಜಟಾಶರಣಾಗತಿಪ್ರಕರಣಸ್ಥ ವಾಕ್ಯೋದಾಹರಣಂ

ಇವ್ವರ್ಥವ್ ಪಿರಾಟ್ಟಿಯ್ಯೈ ಶರಣಮಾಹಪ್ಪತ್ತ ವಾರುಙ್ಗೋಳೆನ್ರು ಸಾತ್ವಿಕ ಪ್ರಕೃತಿಯಾನ ತ್ರಿಜಟೈ ರಾಕ್ಷಸಿಹಳುಕ್ಕು ಚೊಲ್ಲುಗಿರ ವಾಕ್ಯತ್ತಿಲುಮ್ ಕಾಣಲಾಮ್.

(4) "ತದಲಂಕ್ರೂರವಾಕ್ಯೈರ್ವಃ" ಎನ್ಗೈಯಾಲೇ ಪ್ರಾತಿಕೂಲ್ಯವರ್ಜನಂ ಶೊಲ್ಲಪ್ಪಟ್ಟೈದು. (5) "ಸಾಂತ್ವಮೇವಾಭಿಧೀಯತಾಂ" ಎನ್ಗೈಯಾಲೇ ಮನಃಪೂರ್ವಕ ಮಾಹವಲ್ಲದು ವಾಕ್ಪ್ರವೃತ್ತಿಯಿಲ್ಲಾಮೈಯಾಲೇ ಆನುಕೂಲ್ಯ ಸಙ್ಕಲ್ಪಮಾಕೃಷ್ಟಮಾಯಿತ್ತು.

ಪಂಚಾಂಗಗಳು ಪ್ರಪತ್ತಿಗೆ ಅವಿನಾಭೂತ ಸ್ವಭಾವಗಳು :–

ಇಪ್ಪಡಿ ಇವ್ವೈಂದುಂ, ಇತ್ಯಾದಿ ಹೀಗೆ ಈ ಐದು ಅಂಗಗಳೂ ಪ್ರಪತ್ತಿರೂಪ ಮೋಕ್ಷಾರ್ಥ ವಿದ್ಯೆಯನ್ನು ಅನುಷ್ಠಿಸುವ ಕಾಲದಲ್ಲಿ, ಪ್ರಪತ್ತಿ ಸ್ವರೂಪ ನಿಷ್ಪತ್ತಿಗೆ ಉಪಯೋಗವಾಗುವುದರಿಂದ, ಇವು **ಆತ್ಮನಿಕ್ಷೇಪತ್ತುಕ್ಕು**–ಭರಸಮರ್ಪಣಕ್ಕೆ ಅವಿನಾಭೂತಸ್ವಭಾವಗಳು. ಅಂದರೆ ಇವುಗಳು ಇಲ್ಲದೆ ಭರ ಸಮರ್ಪಣವು ಸಿದ್ಧಿಸುವುದಿಲ್ಲವೆಂದರ್ಥ. ಇವುಗಳಲ್ಲಿ ಯಾವುದಾದರೂ ಒಂದು ಅಂಗವು ವಿಕಲವಾದರೂಅಂಗಿಸ್ವರೂಪವು ನಿಷ್ಪಾದನವಾಗುವುದಿಲ್ಲವೆಂದರ್ಥ

ತ್ರಿಜಟೆ ಶರಣಾಗತಿಯಲ್ಲಿ ಈ ಅರ್ಥಗಳ ನಿರೂಪಣೆ

ಈ ಅಂಗಗಳು ತ್ರಿಟಜಯ ಶರಣಾಗತಿ ಪ್ರಕರಣದಲ್ಲಿ ನಿರೂಪಿತವಾಗಿವೆಯೆಂದು ಆಚಾರ್ಯರು **ಇವ್ವರ್ಥವ್ ಪಿರಾಟ್ಟಿಯೈ** ಎಂದಾರಂಭಿಸಿ ಅನುಗ್ರಹಿಸುತ್ತಾರೆ. ಆದಾಗಿ **ಇವ್ವರ್ಥವ್** – ಅಂಗಿಯಾದ ಆತ್ಮನಿಕ್ಷೇಪಕ್ಕೆ ಈ ಐದು ಅಂಗಗಳೂ ಅವಿನಾಭೂತಗಳು – ಇಲ್ಲದೆ ಇರಲಾರವು ಎಂಬ ಅರ್ಥವನ್ನು, ಮಹಾಲಕ್ಷ್ಮಿಸ್ವರೂಪಳಾದ ಸೀತೆಯನ್ನು ಕುರಿತು ಶರಣ ವರಣ ಮಾಡಲು ಬನ್ನಿ, ಎಂದು ಸಾತ್ವಿಕ ಸ್ವರೂಪೆಯಾದ ತ್ರಿಜಟೆಯು ರಾಕ್ಷಸಿಗಳಿಗೆ ಹೇಳುವ ವಾಕ್ಯಗಳಲ್ಲಿ ನೋಡಬಹುದು ಹೇಗೆಂದರೆ (4) **ತದಲಂ ಕ್ರೂರವಾಕ್ಯೈರ್ವಃ** ಎಂದು ಪ್ರಾತಿಕೂಲ್ಯವರ್ಜನವು ಹೇಳಲ್ಪಟ್ಟಿತು. **ಸಾಂತ್ವಮೇವಾಭಿಧೀಯತಾಮ್** ಎಂದು ಹೇಳುವುದರಿಂದ ಅನುಕೂಲ್ಯ ಸಂಕಲ್ಪವು "ಮನಃಪೂರ್ವೋವಾಗುತ್ತರಃ," ಎಂಬ ನ್ಯಾಯದಂತೆ, ಮೊದಲು ಮನಸ್ಸಿನಲ್ಲಿ **ಉದಯಿಸಿ,**

---

2) ಅಪ್ರಾರ್ಥಿತೋ ನಗೋಪಾಯೇತ್ ಇತಿ ತತ್ಪ್ರಾರ್ಥನಾಮತಿಃ ।
ಗೋಪಾಯಿತಾ ಭವೇತ್ಯೇವಂ ಗೋಪ್ತೃತ್ವವರಣಂಸ್ಮೃತಮ್ ॥

ಲಕ್ಷ್ಮೀತಂತ್ರ (17--72) ಪ್ರಾರ್ಥಿಸದೆ ರಕ್ಷಿಸುವುದಿಲ್ಲವಾದ್ದರಿಂದ, ನನ್ನನ್ನು ಕಾಪಾಡು ಎಂಬ ಪ್ರಾರ್ಥನಾರೂಪ ಜ್ಞಾನವು ಗೋಪ್ತೃತ್ವವರಣ.

3) ಲ. ತಂತ್ರ [17--78] ಗೋಪ್ತೃತ್ವವರಣವೇನೆಂದರೆ ತನ್ನ ಅಭಿಪ್ರಾಯವನ್ನು ತಿಳಿಸುವುದು. ಅದಾಗಿ ಅಭೀಷ್ಟ ಫಲಪ್ರಧಾನ ಮಾಡಿ ನನ್ನನ್ನು ರಕ್ಷಿಸು ಎಂಬ ಪ್ರಾರ್ಥನೆ

4) ತದಲಂಕ್ರೂರವಾಕ್ಯೈರ್ವಃ ಸಾಂತ್ವ ಮೇವಾಭಿಧೀಯತಾಮ್ ।
ಅಭಿಯಾಚಾಮ ವೈದೇಹೀಂ ಏತದ್ಧಿ ಮಮರೋಚತೇ ॥ ರಾಮಾ. 5–37–42)

ನೀವು ಕ್ರೂರವಾಕ್ಯಗಳಿಂದ ಸೀತೆಯನ್ನು ಹಿಂಸಿಸುವುದನ್ನು ಸಾಕುಮಾಡಿ. ಸಮಾಧಾನವಾದ ಮಾತುಗಳನ್ನು ಹೇಳಿ. ಸೀತೆಯನ್ನು ನಾವು ನಮ್ಮ ರಕ್ಷಣೆಗೋಸ್ಕರ ಪ್ರಾರ್ಥಿಸೋಣ ಇದು ನನಗೆ ರುಚಿಸುತ್ತದೆ.

(1) "ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾಮುಪಸ್ಥಿತಂ" ಎನ್ರು ಪೋಕ್ಕಱ್ಱನಿಱ್ಕಿರ ನಿಲೈಯೈ ಚ್ಚೊಲ್ಲುಗೈಯಾಲೇ ಅಧಿಕಾರವಾನ ಆಕಿಂಚನ್ಯಮುಮ್, ಅದಿನುಡೈಯ ಅನುಸಂಧಾನ ಮುಖತ್ತಾಲೇ ವನ್ದ ಗರ್ವಹಾನ್ಯಾದಿರೂಪಮಾಯ್ ಅಙ್ಗಮಾನ ಕಾರ್ಪಣ್ಯಮುಮ್ ಶೊಲ್ಲಱ್ಱು ಯಿತ್ತು.

(2) "ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್" ಎನ್ಗೈಯಾಲುಮ್, ಇತ್ತೈ ವಿವರಿತ್ತುಕ್ಕೊಣ್ಡು (3) "ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಮ್ ಎನ್ರು ತಿರುವಡಿ ಅನುವದಿಕ್ಕೈಯಾಲುಮ್, ಪೆರುಮಾಳೊರುತ್ತನೈ ನಿಗ್ರಹಿಕ್ಕ ಪ್ಪಾರ್ಕ್ಕಿಲುಮ್ ಅವರ್ ಶೀತ್ತತ್ತೈ ಯಾತ್ತಿ, ಇವಳ್ ರಕ್ಷಿಕ್ಕ ವಲ್ಲವಳಾಕೈಯಾಲೇ ರಕ್ಷಿಷ್ಯತೀತಿ ವಿಶ್ವಾಸಮ್ ಶೊಲ್ಲಪ್ಪಟ್ಟದು.

ನಂತರ ವಾಕ್ಯಪ್ರವೃತ್ತಿಯು ಉಂಟಾಗುತ್ತದೆಯಾದ್ದರಿಂದ, ಆನುಕೂಲ್ಯ ಸಂಕಲ್ಪವು ಅರ್ಥತಃ ಸಿದ್ಧವಾಯಿತು ತ್ರಿಜಟೆಯು ಶರಣಾಗತಿಯನ್ನು ಮಾಡೋಣ ಬನ್ನಿ ಎಂದು ರಾಕ್ಷಸಿಗಳಿಗೆ ಉಪದೇಶಿಸುವ ಸಂದರ್ಭದಲ್ಲಿಯೇ ಐದು ಅಂಗಗಳೂ ಹೇಳಲ್ಪಟ್ಟಿರುವಾಗ, ತದನುಷ್ಠಾನ ಸಮಯದಲ್ಲಿ ಇದ್ದೇ ಇರುತ್ತೆ ಎಂಬುದು ಭಾವ (1) **ರಾಘವಾದ್ಧಿಭಯಂ ಘೋರಂ** ಇತ್ಯಾದಿ ಶ್ರೀರಾಮನಿಂದ ರಾಕ್ಷಸರಿಗೆ ಘೋರವಾದ ಭಯವು ಉಪಸ್ಥಿತವಾಗಿದೆ ಎಂದು ಹೇಳುವುದರಿಂದ **ಪೋಕ್ಕಟ್ರುನಿರ್ಕ್ಕಿರನಿಲೈ**–ಸೀತೆಯ ಕಾಲನ್ನು ಹಿಡಿದು ಶರಣಾಗತಿ ಮಾಡುವುದು ಬಿನಹ ಬೇರೆ ಮಾರ್ಗವಿಲ್ಲವೆಂಬುದು ಸೂಚಿತ ಇದರಿಂದ ತಮ್ಮ ಅಧಿಕಾರವಾದ ಆಕಿಂಚನ್ಯವೂ ಅದನ್ನು ಅನುಸಂಧಾನ ಮಾಡುವುದರಿಂದ ಉಂಟಾದ ಗರ್ವಹಾನಿ ರೂಪವಾದ **ಕಾರ್ಪಣ್ಯವೂ** ಹೇಳಲ್ಪಟ್ಟಿತು. (2) **ಅಲಮೇಷಾಪರಿತ್ರಾತುಂ** ಇತ್ಯಾದಿ, ಈ ಸೀತೆಯು ರಾಕ್ಷಸಿಗಳನ್ನು ಮಹಾಭಯದಿಂದ ರಕ್ಷಿಸಲು ಸಮರ್ಥೆ ಎಂದು ಹೇಳುವುದರಿಂದಲೂ, ಇದನ್ನು ವಿವರಿಸಿಕೊಂಡು ಹನುಮಂತನು ಶ್ರೀರಾಮಚಂದ್ರನಲ್ಲಿ ವಿಜ್ಞಾಪಿಸುವಾಗ (3) **ಅಲಮೇಷಾ . ರಾಘವಾದ್ರಾಕ್ಷಸೀಗಣಂ.** ಈ ಸೀತೆಯು ರಾಮನಿಂದ ಈ ರಾಕ್ಷಸಿಗಳನ್ನು ಕಾಪಾಡಲು ಸಮರ್ಥೆ, ಎಂದು **ತಿರುವಡಿ**–ಹನುಮತ್ಸ್ವಾಮಿಯು ಅನುವಾದ ಮಾಡುವುದರಿಂದಲೂ ಭಗವಂತನು ಒಬ್ಬನು ಮಾಡಿದ ಅಪರಾಧಗಳಿಗೋಸ್ಕರ ಅವನನ್ನು ನಿಗ್ರಹಿಸಲು ನೆನೆದರೂ, ಅವನ **ಶೀಟ್ರತ್ತೈ**–ಕೋಪವನ್ನು, ಹೋಗಲಾಡಿಸಿ–"ಕಿಮೇತನ್ನಿರ್ದೋಷಃ ಕಇಹಜಗತೀತ್ವಮುಚಿತೈರುಪಾಯೈರ್ವಿಸ್ಮಾರ್ಯ ಸ್ವಜನಯಸಿ" ಏತಕ್ಕೆ ಇಷ್ಟು ಕೋಪ ಈ **ಲೋಕದಲ್ಲಿ** ತಪ್ಪುಮಾಡದೆ ಇರುವವರು ಯಾರಿದ್ದಾರೆಂಬ ರೀತಿಯಾದ ಉಪಾಯಗಳಿಂದ ಅವನ ಕೋಪವನ್ನು ಹೋಗಲಾಡಿಸಿ ತನ್ನವರನ್ನಾಗಿ ಮಾಡುತ್ತಾಳೆಂದರ್ಥ. ಹೀಗೆ ರಕ್ಷಿಸಲು ಸಮರ್ಥೆಯಾಗಿರುವುದರಿಂದ, ರಕ್ಷಿಸುತ್ತಾಳೆಂಬ ವಿಶ್ವಾಸವು ಹೇಳಲ್ಪಟ್ಟಿತು ಶ್ರೀರಾಮಚಂದ್ರನ ಕೋಪಕ್ಕೆ ಮುಂದೆ ಯಾರೂ ನಿಲ್ಲಲಾಗದಿದ್ದರೂ, ಒಬ್ಬನನ್ನು ಅವನು ನಿಗ್ರಹಿಸಲು ನೆನೆದರೂ, "ತ್ರಾತುಂನಶಕ್ತಾ ಯುಧಿರಾಮವಧ್ಯಂ" ಎಂದು ರಾಮನಿಂದ ವಧಿಸಲ್ಪಡುವವನನ್ನು ರಕ್ಷಿಸಲು ಯಾರೂ ಸಮರ್ಥರಾಗಲಾರರು ಎಂದು **ಹೇಳಿದ್ದರೂ**- ಸೀತೆಯು ತನ್ನ ವಾತ್ಸಲ್ಯದಿಂದ

---

1. ಭರ್ತ್ಸಿತಾಮಪಿಯಾಚಧ್ವಂ ರಾಕ್ಷಸ್ಯಃ ಕಿಂವಿವಕ್ಷಯಾ ।
   ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾಮುಪಸ್ಥಿತಮ್ ॥ (ರಾಮಾ 5-27-44)

   ಎಲೈ ರಾಕ್ಷಸಿಗಳೇ ಸೀತೆಯನ್ನು ಹೆದರಿಸಿ ಹಿಂಸಿಸಿದ್ದರೂ ಬಾಧಕವಿಲ್ಲ, ಅವಳಲ್ಲಿ ಕ್ಷಮಾಪಣೆಯನ್ನು ಕೇಳಿಕೊಳ್ಳಿ, ಇದನ್ನು ಮಾಡಬಹುದೋ ಬೇಡವೇ ಎಂಬ ವಿವಕ್ಷೆಬೇಡ " ಶ್ರೀರಾಮಚಂದ್ರನಿಂದ ರಾಕ್ಷಸರಿಗೆ ಘೋರವಾದ ಭಯವು ಬಂದು ನಿಂತಿದೆ-ಇದು ಆಕಿಂಚನ್ಯಾನನ್ಯಗತಿತ್ವವನ್ನು ತಿಳಿಸುತ್ತದೆ

2) ಪ್ರಣಿಪಾತ ಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ ।
   ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್ ॥ (ರಾಮಾ 5-27-46)

   ಎಲೈ ರಾಕ್ಷಸಿಗಳೇ ಜನಕರ ಮಗಳಾದ ಮೈಥಿಲಿಯು ನಾವು ಮಾಡುವ ಶರಣಾಗತಿಯಿಂದ ಪ್ರಸನ್ನಳಾಗುತ್ತಾಳೆ, ಇವಳು ನಮ್ಮನ್ನು ದೊಡ್ಡದಾದ ಭಯದಿಂದ ರಕ್ಷಿಸಲು ಸಮರ್ಥಳು ಇದರಿಂದ ಮಹಾವಿಶ್ವಾಸವು ತಿಳಿಸಲ್ಪಡುತ್ತದೆ

3) ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಮ್ ॥
   ಸೀತೆಯು ಶ್ರೀರಾಮಚಂದ್ರನಿಂದ ರಾಕ್ಷಸಿಗಳ ಸಮೂಹವನ್ನು ರಕ್ಷಿಸಲು ಸಮರ್ಥೆ. (ರಾಮಾ 5-27-88)

(1) "ಅಭಿಯಾಚಾಮವೈದೇಹೀಮೇತದ್ಧಿ ಮಮ ರೋಚತೇ । ಭರ್ತ್ಸಿತಾಮಪಿ ಯಾಚಧ್ವಂ ರಾಕ್ಷಸ್ಯಃ ಕಿಂ ವಿವಕ್ಷಯಾ" ಎನ್ಗೈಯಾಲೇ ಗೋಪ್ತೃತ್ವವರಣಂ ಶೊಲ್ಲಿತ್ತಾಯಿತ್ತು.

ಇವೈ ಐನ್ದುಕ್ಕುಮ್ ಅಙ್ಗಿಯಾನ ವಾತ್ಮನಿಕ್ಷೇಪತ್ತೈ (೧) "ಪ್ರಣಿಪಾತಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ". ಎನ್ರು ಪ್ರಸಾದ ಕಾರಣ ವಿಶೇಷತ್ತೈ [illegible]ಹಿರ ಪ್ರಣಿಪಾತ ಶಬ್ದತ್ತಾಲೇ ವಿವಕ್ಷಿತ ಮಾಯಿತ್ತು. ಆಹೈಯಾಲ್ (೨) "ನ್ಯಾಸಃ ಪಂಚಾಂಗ ಸಂಯುತಃ" ಎನ್ಗಿರ ಶಾಸ್ತ್ರಾರ್ಥಮಿಙ್ಗೇ ಪೂರ್ಣಮ್. ಇಪ್ಪಡಿ ಉಪದೇಶಿಕ್ಕ ರಾಕ್ಷಸಿಗಳ್ ವಿಲಕ್ಕಾದ ಮಟ್ಟೇ ಪತ್ತಾಶಾಕಪ್ಪಿರಾಟ್ಟಿ ತನ್ವಾತ್ಸಲ್ಯಾತಿಶಯತ್ತಾಲೇ (೧) "ಭವೇಯಂ ಶರಣಂಹಿವಃ" ಎನ್ರರುಳಿಚ್ಚೆಯ್‌ದಾಳ್.

ಇಪ್ಪಾಶುರಮ್ ಸಹೃದಯಮಾಯ್ ಫಲಪರ್ಯನ್ತಮಾನ ಪಡಿಯೈ

ಅವನನ್ನು ಸಮಾಧಾನಗೊಳಿಸಿ ರಕ್ಷಿಸುತ್ತಾಳೆಂಬ ಮಹಾವಿಶ್ವಾಸವು ಇಲ್ಲಿ ಸೂಚಿತ ಅನಂತರ (1) **ಅಭಿಯಾಚಾಮವೈದೇಹೀಂ,** ಇತ್ಯಾದಿ ಹೇಳುವುದರಿಂದ ಗೋಪ್ತೃತ್ವವರಣವು ಹೇಳಲ್ಪಟ್ಟಿತು ಹೀಗೆ ಐದು ಅಂಗಗಳೂ ರೂಪಿತವಾಗಿವೆ ಅನಂತರ ಅಂಗಿಯಾದ ಆತ್ಮ ನಿಕ್ಷೇಪವನ್ನು **ಇವೈಯೆಂದುಕ್ಕುಂ ಅಂಗಿಯಾನ** ಎಂದಾರಂಭಿಸಿ ನಿರೂಪಿಸುತ್ತಾರೆ. ಅದಾಗಿ ಹಿಂದೆ ವಿವರಿಸಿದ ಈ ಐದು ಅಂಗಗಳಿಗೂ ಅಂಗಿಯಾದ ಆತ್ಮನಿಕ್ಷೇಪವು (3) **ಪ್ರಣಿಪಾತ ಪ್ರಸನ್ನಾಹಿ** ಇತ್ಯಾದಿ ವಾಕ್ಯದಿಂದ ಹೇಳಲ್ಪಟ್ಟಿದೆ. ಪ್ರಣಿಪಾತ ಶಬ್ದವು ಕಾಯಿಕವಾದ ದಂಡವತ್ ಪ್ರಣಾಮವನ್ನು ತಿಳಿಸಿದರೂ, ಇಲ್ಲಿ **ಪ್ರಸಾದ ಕರಣ ವಿಶೇಷ**–ಭಗವಂತನ ಅನುಗ್ರಹ ವಿಶೇಷವನ್ನು ತಿಳಿಸುವುದರಿಂದ ಈ ಪ್ರಣಿಪಾತ ಶಬ್ದಕ್ಕೆ ಆತ್ಮ ನಿಕ್ಷೇಪವು (ರಕ್ಷಾ ಭರಸಮರ್ಪಣವು) ವಿವಕ್ಷಿತ ಇದು ಮುಂದೆ "ಭವೇಯಂ ಶರಣಂಹಿವಃ" ಎಂಬ ಸೀತೆಯ ಭರಸ್ವೀಕಾರ ವಾಕ್ಯದಿಂದಲೂ ಸಿದ್ಧ

ಆಹೈಯಾಲ್ ಇತ್ಯಾದಿ-ಈ ಐದು ಅಂಗಗಳೂ ಅಂಗಿಯೂ ತಾತ್ಪರ್ಯ ವೃತ್ತ್ಯಾ ಇಲ್ಲಿ ಸೂಚಿತವಾದ್ದರಿಂದ, **ನ್ಯಾಸಃ ಪಂಚಾಂಗ ಸಂಯುತಃ** (ಲ ತಂತ್ರ 17-79) ಎಂಬ ಶಾಸ್ತ್ರಾರ್ಥವು ಪರಿಪೂರ್ಣವಾಗಿ ನಿರೂಪಿಸಲ್ಪಟ್ಟಿದೆ

ಇಪ್ಪಡಿ ಉಪದೇಶಿಕ್ಕ ಇತ್ಯಾದಿ-ಹೀಗ ತ್ರಿಜಟೆಯು ಉಪದೇಶ ಮಾಡಿದರೂ ರಾಕ್ಷಸಿಗಳು ಶರಣಾಗತಿ ಮಾಡಲಿಲ್ಲವಲ್ಲ. ಅವರಿಗೂ ಸೇರಿ ಸೀತೆಯು "ಭವೇಯಂ ಶರಣಂಹಿವಃ" ಎಂದು "ನಿಮಗೆಲ್ಲಾ ರಕ್ಷಕಿಯಾಗುತ್ತೇನೆಂದ " ಹೇಳಿದುದು ಸರಿಯೇ, ಎಂದರೆ ವಿವರಿಸುತ್ತಾರೆ ಹೀಗೆ ತ್ರಿಜಟೆಯು ಉಪದೇಶ ಮಾಡಲು, **ವಿಲಕ್ಕಾದ ಮಟ್ಟೇ ಪತ್ತಾಶಾಹ**–ತ್ರಿಜಟೆಯು ತನಗೂ ರಾಕ್ಷಸಿಗಳೂ ಸೇರಿ ಶರಣಾಗತಿಯನ್ನು ಮಾಡಲ , ಅದನ್ನು ರಾಕ್ಷಸಿಗಳು ನಿಷೇಧಿಸದೆ ಇದ್ದುದನ್ನೇ, "ಅಪ್ರತಿಷಿದ್ಧಮನುಮತಂ" "ನಿಷೇಧಿಸಲ್ಪಡದೆ ಇದ್ದರೆ ಅಂಗೀಕೃತವು" ಎಂಬ ನ್ಯಾಯವನ್ನವಲಂಬಿಸಿ, ಸೀತಾದೇವಿಯು ತನ್ನ ವಾತ್ಸಲ್ಯಾತಿಶಯದಿಂದ, "ಭವೇಯಂ ಶರಣಂಹಿವಃ"-ನಿಮಗೆಲ್ಲಾ ರಕ್ಷಕಿಯಾಗುತ್ತೇನೆಂದು ಕೃಪೆ ಮಾಡಿದಳು. ಇದರಿಂದ ಸ್ವಾಚಾರ್ಯನು ತನ್ನ ಶಿಷ್ಯನಿಗೆ ಕೇವಲ ಕೃಪೆಯಿಂದ ಮಾಡುವ ಶರಣಾಗತಿಯು ಫಲಿಸುತ್ತದೆ ಎಂಬುದು ದ್ಯೋತಿತ. "ಕಳವೊಳ್ಳಿವಾರ್ ಎಮರೆನ್ನ ಇಶೃಂದವರ್ಕ್ಕುಂ ಕಾವಲ್-ರಾವರ್" ಎಂಬ ಆದ್ಯೈಕ್ಕಲಪ್ಪತ್ತು ಪಾಶುರದಲ್ಲಿ ಈ ಅಂಶವು ಹೇಳಲ್ಪಟ್ಟಿದೆ ಈ ತ್ರಿಜಟಾ ಶರಣಾಗತಿಯು ಫಲ ಪರ್ಯಂತ ವಾಯಿತೆಂಬುದನ್ನು **ಇಪ್ಪಾಶುರಮ್ ಸಹೃದಯಮಾಯ್,** ಇತ್ಯಾದಿ ಅನುಗ್ರಹಿಸುತ್ತಾರೆ. **ಇಪ್ಪಾಶುರಮ್**– ಭರಸ್ವೀಕಾರ ಪ್ರತಿಪಾದಕವಾದ, "ಭವೇಯಂ ಶರಣಂಹಿವಃ" ಎಂಬ ವಚನವು, ರಾಕ್ಷಸಿಗಳ ರಕ್ಷಣಾ ರೂಪಫಲ

1) ರಾಮಾ. 5-27 43 ಸೀತೆಯ ಹತ್ತಿರ ನಾವು ಅಭಯವನ್ನು ಪ್ರಾರ್ಥಿಸೋಣ. ಇದು ನನಗೆ ಪ್ರಿಯವಾಗಿ ತೋರುತ್ತದೆ.

2) ಭರ್ತ್ಸಿತಾಮಪಿ - ಇತ್ಯಾದಿ ರಾಮಾ. (5-27-44) ನೀವು ಸೀತೆಯನ್ನು ಬೆದರಿಸಿ ಹೆದರಿಸಿದ್ದರೂ ಬಾಧಕವಿಲ್ಲ. ಅದಳನ್ನು ಭಯ ರಕ್ಷಣೆಗೋಸ್ಕರ ಯಾಚಿಸಿರಿ. ಸೀತೆಯು ರಕ್ಷಿಸುತ್ತಾಳೋ ಇಲ್ಲವೋ ಎಂಬ ಸಂದೇಹವು ಬೇಡ.

3) ರಾಮಾ (5-27-46) ಜನಕ ರಾಜನ ಮಗಳಾದ ಸೀತೆ ಸತ್ಕುಲ ಪ್ರಸೂತೆ. ಧರ್ಮ ಬುದ್ಧಿಯುಳ್ಳವಳು ಮಿಥಿಲಾನಗರದಲ್ಲಿ ಹುಟ್ಟಿದವಳು ದೇಶಮಾಹಾತ್ಮ್ಯವು, 'ಜನಕೋಹವೈದೇಹಃ" ಎಂಬ ಶ್ರುತಿ ಪ್ರಸಿದ್ಧವಾಗಿದೆ. ಅಂಥಹ ಜನಕನ ಮಗಳು 'ಹಿ' ಶಬ್ದದಿಂದ ಇವಳು ಸ್ವಭಾವತಃ ಮಹಾಕರುಣಾಶಾಲಿನಿ ನಾವು ಅವಳ ಕಾಲಿನಲ್ಲಿ ಬಿದ್ದು ಶರಣಾಗತಿ ಹೊಂದಿದರೆ ಪ್ರಸನ್ನಳಾಗಿ, ಅವಶ ರಕ್ಷಿಸುತ್ತಾಳೆ.

(೧) "ಮಾತರ್ಮೈಥಿಲಿರಾಕ್ಷಸೀಸ್ತ್ವಯಿ ತಥೈವಾದ್ರಾರ್ಪರಾಧಾಸ್ತ್ವಯಾ ।
ರಕ್ಷಂತ್ಯಾ ಪವನಾತ್ಮಜಾಲ್ಲಘುತರಾ ರಾಮಸ್ಯ ಗೋಷ್ಠೀಕೃತಾ ।"
ಎನ್ರಭಿಯುಕ್ತರ್ ವೆಳಿಯಿಟ್ಟಾರ್‌ಹಳ್.

ಆತ್ಮಭರಸಮರ್ಪಣೇ ಆತ್ಮೀಯಾ ಅನ್ತರ್ಭೂತಾಃ

ಇವ್ವಿಡತ್ತಿಲ್ ತ್ರಿಜಟೆಯುಡೈಯ ಆತ್ಮಾತ್ಮೀಯ ಭರಸಮರ್ಪಣತ್ತಿಲೇ ಅವ(ರ್‌ಗ)ಳುಕ್ಕು ಪಿರವಿ ತುವಕ್ಕಾಲೇ ನಮ್ಮವರ್‌ಗಳೆನ್ರು ಕಣ್ಣೋಟ್ಟಮ್ ಪಿರಕ್ಕುಮ್‌ರಾಕ್ಷಸಿಹಳುಮ್ ಅನ್ತರ್ಭೂತೈಹಳ್.

ಫಲವನ್ನು ಕೊಟ್ಟಿತು ಎಂಬುದನ್ನು 1) **ಮಾತ ರ್ಮೈಥಿಲಿ** ಇತ್ಯಾದಿಯಾಗಿ ಪರಾಶರ ಭಟ್ಟರು (ಅಭಿಯುಕ್ತರು) ಪ್ರಕಾಶಪಡಿಸಿದ್ದಾರೆ.

ಹಾಗಾದರೆ "ನಮ್ಮನ್ನು ಕಾಪಾಡು" ಎಂಬ ಉಕ್ತಿಯೂ ಇಲ್ಲದ ರಾಕ್ಷಸಿಗಳನ್ನು ಅವರುಗಳು ತಡೆಯದೆ ಇದ್ದುದನ್ನು ವ್ಯಾಜ್ಯವಾಗಿಟ್ಟುಕೊಂಡು ಸೀತೆಯು ಕಾಪಾಡಿದಳೆಂದರೆ ಶರಣಾಗತಿಯು ಬೇಕಿಲ್ಲವೆಂಬುದು ದ್ಯೋತಿತವಾಗುವುದಿಲ್ಲವೇ ಎಂದರೆ, ಅದಕ್ಕೆ ಸಮಾಧಾನವನ್ನು **ಇವ್ವಿಡತ್ತಿಲ್ ತ್ರಿಜಟೈಯುಡೈಯ** ಎಂದಾರಂಭಿಸಿ ಅನುಗ್ರಹಿಸುತ್ತಾರೆ. ಆದಾಗಿ ಈ ಪ್ರಕರಣದಲ್ಲಿ ತ್ರಿಜಟೆಯು ಮಾಡಿದ ಆತ್ಮಾತ್ಮೀಯ ಭರಸಮರ್ಪಣದಲ್ಲಿ, ಅವಳಿಗೆ ಜನ್ಮ ಸಂಬಂಧಿಗಳಾದ್ದರಿಂದ, ನಮ್ಮವರೆಂದು ಅಭಿಮಾನಿಸಲ್ಪಟ್ಟ ರಾಕ್ಷಸಿಗಳೂ ಸೇರಿಕೊಂಡಿದ್ದಾರೆ ಈ ಪ್ರಕರಣದಲ್ಲಿ ತ್ರಿಜಟೆಯು ಉಪದೇಶಿಸಿದ ಪ್ರಕಾರ ಶರಣಾಗತಿ ಮಾಡಿದಳೆಂಬ ವಾಕ್ಯಗಳು ಶ್ರೀ ಮದ್ರಾಮಾಯಣದಲ್ಲಿ ಸ್ಪಷ್ಟವಾಗಿ ಕಂಡುಬಾರದೇ ಇದ್ದರೂ, ತ್ರಿಜಟೆಯು "ಮ.ನಃ, ಪೂರ್ವೋವಾಗ ತ್ತರಃ" ಮೊದಲು ಮನಸ್ಸಿನಲ್ಲಿ ತೋರಿದನ್ನು ನಂತರ ವಾಚಾ ಹೇಳುತ್ತಾರೆಂಬ ನ್ಯಾಯವನ್ನುವಲಂಬಿಸಿ, "ಪ್ರಣಿಪಾತಪ್ರಸನ್ನಾಹಿ" ಎಂಬ ವಚನವು ಅವಳಬಾಯಿಂದ ಹೊರಟಿತು ಅದರ ಪ್ರಕಾರ ಅವಳು ಸೀತೆಯಲ್ಲಿ ಶರಣಾಗತಿ ಮಾಡಿದಳೆಂಬುದು ಊಹ್ಯ ಏಕೆಂದರೆ, ಸೀತೆಯು "ಭವೇಯಂ ಶರಣಂ ಹಿವಃ" "ನಿಮಗೂ ನಾನು ರಕ್ಷಕಳಾಗುತ್ತೇನೆ" ಎಂದು ಅಭಯ ಪ್ರದಾನ ಮಾಡಿದ್ದರಿಂದ ಈ ಅಂಶವು ಕಾರ್ಯಾತ್ ಕಾರಣಾನುಮಾನದಿಂದ ಸಿದ್ಧ.

ಹಾಗಾದರೆ ಶರಣಾಗತಿಗೆ ಉತ್ತರ ಕಾಲದಲ್ಲಿಯೂ ರಾಕ್ಷಸಿಗಳು ಸೀತೆಯನ್ನು ಹಿಂಸಿಸುತ್ತಿದ್ದರಲ್ಲಾ, ಅವರಿಗೆ ಹೇಗೆ ರಕ್ಷಣೆಯು ಲಭಿಸಿತು, ಎಂದರ ಹನುಮಂತನು ರಾಮ ವಿಜಯವನ್ನು ಸೀತೆಗೆ ಅರಿಕೆಮಾಡಿ, ಅವಕ್ಕೆ ಪಾರಿತೋಷಕವಾಗಿ, ಈ ರಾಕ್ಷಸಿಗಳನ್ನು ಕೊಲ್ಲಬೇಕೆಂದು ಪ್ರಾರ್ಥಿಸಿದನು. ಆಗ್ಯೆ ರಾಕ್ಷಸಿಗಳಿಗೆ ಮಹದ್ಭಯವು ಉಂಟಾಯಿತು ನಂತರ ರಕ್ಷಣೆಯು ಏರ್ಪಟ್ಟಿತು ಇಲ್ಲಿ ರಾಜಪುತ್ರಾಪರಾಧ ನ್ಯಾಯದಂತೆ, ಅವರಿಗೆ ಭಯೋತ್ಪಾದಕ ರೂಪವಾದ ದಂಡನೆಯು ವಿಧಿಸಲ್ಪಟ್ಟು ನಂತರ ರಕ್ಷೆಯು ಏರ್ಪಟ್ಟಿತಾದ್ದರಿಂದ ಶಾಸ್ತ್ರಾರ್ಥಕ್ಕೆ ಲೋಪವಿಲ್ಲ. ರಾಕ್ಷಸಿಗಳಿಗೆ ನಿರ್ಹೇತುಕವಾದ ರಕ್ಷೆಯು ಏರ್ಪಟ್ಟಿತಲ್ಲವೆ ಎಂಬುದು ಪುನಶ್ಚೋದ್ಯ. ಇದಕ್ಕೆ ಸಮಾಧಾನವನ್ನು ಆಚಾರ್ಯರೇ, "ವಿಲಕ್ಷ್ಯಾಮ್ಯೈಯೋ ಪಟ್ರಾಶಾಹ" ಎಂದು ಹೇಳುತ್ತಾರೆ. ಅವರುಗಳು ತಮಗೋಸ್ಕರ ತ್ರಿಜಟೆಯು ಶರಣಾಗತಿ ಮಾಡಿದ್ದನ್ನು ತಡೆಯಲಿಲ್ಲ. ಇದೇ ಅವರ ರಕ್ಷಣೆಗೆ ವ್ಯಾಜ. ಆದ್ದರಿಂದ ಅವರ ರಕ್ಷಣೆಯೂ ವ್ಯಾಜಸಾಕ್ಷೇಪವಾದದ್ದು. ನಿರ್ಹೇತುಕವಲ್ಲವೆಂಬುದು ಈ ಪ್ರಕರಣದಲ್ಲಿ ಸೂಚಿತ

---

1) ಕಾಕಂತಂಚ ವಿಭೀಷಣಂ ಶರಣಮಿತ್ಯುಕ್ತಿ ಕ್ಷಮೌರಕ್ಷತಃ।
ಜನಸ್ಸಾಽಧ್ರ ಮಹಾಗಸಸ್ಸುಖಯತು ಕ್ಷಾಂತಿಸ್ತವಾಕಸ್ಮಿಕೀ ॥ ಎಂಬುದು ಉತ್ತರಾರ್ಧ ಶ್ರೀ ಗುಣರತ್ನಕೋಶ-50

ಎಲೈ ತಾಯೇ ! ಮೈಥಿಲೀ ! ಅಶೋಕವನದಲ್ಲಿದ್ದ ರಾಕ್ಷಸಿಗಳು ಹಿಂದಿನಂತೆಯೇ ಮುಂದೆಯೂ ಅದ್ರಾಪರಾಧಿಗಳಾಗಿದ್ದರೂ, ಶರಣಾಗತರೆಂದು ಅವರುಗಳನ್ನು ಹಿಂಸಿಸಿಕೊಳ್ಳಬೇಕೆಂಬ ಅಭಿಪ್ರಾಯಪಟ್ಟ ಹನುಮಂತನಿಂದ ನೀನು ಅವರನ್ನುಕಾಪಾಡಿದೆ ಶ್ರೀರಾಮಚಂದ್ರನು ಕಾಕಾಸುರನನ್ನೂ, ವಿಭೀಷಣನನ್ನೂ, "ಶರಣು"ಎಂದು ಹೇಳಿದ ಮೇಲೆ ರಕ್ಷಿಸಿದನು, ಇದರಿಂದ ಶ್ರೀರಾಮಚಂದ್ರನಿಗಿಂತ ನಿನ್ನ ದಯೆಯು ಅಧಿಕ. ರಾಮಚಂದ್ರನ ಗೋಷ್ಠಿಯು ಅನಾದರ ವಿಷಯಕ್ಕೆ ಪಾತ್ರವಾಯಿತು ನಿನ್ನ ಆಕಸ್ಮಿಕವಾದ ದಯೆಯು ನಿಬಿಡವಾದ ಮಹಾಪರಾಧಗಳನ್ನು ಮಾಡುವ ನಮ್ಮನ್ನು ಕಾಪಾಡಲಿ.

ಅಪ್ಪಡಿಯೇ ಶ್ರೀವಿಭೀಷಣಾಳ್ವಾನೋಡು ಕೂಡವನ್ದ ನಾಲುರಾಕ್ಷಸರುಮ್ ಅವರುಡೈಯ ಉಪಾಯತ್ತಿಲೇ ಅನ್ತರ್ಭೂತರ್

ಶ್ರೀ ವಿಭೀಷಣ ಶರಣಾಗತೌ ಅಙ್ಗಾಙ್ಗಿ ಪ್ರದರ್ಶನಂ

ಅಙ್ಗುತ್ತ ವಭಯಪ್ರದಾನ ಪ್ರಕರಣತ್ತಿಲು ಮಿವ್ವಙ್ಗಾಙ್ಗಿ ವರ್ಗಮುಡೈಕ್ಕಲಾವ್; ಎಙ್ಗನೇಎನ್ನಿಲ್ ಪ್ರಾತಿಕೂಲ್ಯತ್ತಿಲೇ ವ್ಯವಸ್ಥಿತನಾನ ರಾವಣನುಕ್ಕುಮ್ ಕೂಡ (೧) "ಪ್ರದೀಯತಾಂ ದಾಶರಥಾಯ ಮೈಥಿಲೀ" (೨) ಸೀತಾಂ ಚ ರಾಮಾಯ ನಿವೇದ್ಯದೇವೀಂ ವಸೇಮ ರಾಜನ್ನಿಹ ವೀತಶೋಕಾಃ" ಎನ್ರು ಹಿತಮ್ ಶೊಲ್ಲುಗೈಯಾಲೇ ಆನುಕೂಲ್ಯಸಙ್ಕಲ್ಪಂ ತೋತ್ತಿತ್ತು ಇನ್ದ ಹಿತವಚನಂ ಪಿತ್ತೋಪಹತನುಕ್ಕು ಪಾಲ್ ಕೈಕ್ಕುಮಾಪ್ಪೋಲೇ ಯವನುಕ್ಕು ಉದ್ವೇಗಹೇತುವಾಯಿತ್ತು; (೩) "ತ್ವಾಂತುಧಿಕ್ಕುಲಪಾಂಸನಂ" ಎನ್ರುಧಿಕ್ಕಾರಮ್ ಪಣ್ಣಿನ ಪಿನ್ಬು, ಇನಿಇವನುಕ್ಕು ಉಪದೇಶಿಕ್ಕವು

ತ್ರಿಜಟೆಯು ಆತ್ಮಾತ್ಮೀಯ ಭರನಮರ್ಪಣದಲ್ಲಿ ರಾಕ್ಷಸಿಗಳು ಅಂತರ್ಭೂತಗಳಾಗಿ ರಕ್ಷಣವನ್ನು ಪಡೆದ ರೀತಿಯಲ್ಲಿ ವಿಭೀಷಣನ ಜತೆಯಲ್ಲಿ ಬಂದ ನಾಲ್ಕು ರಾಕ್ಷಸರೂ ವಿಭೀಷಣನು ಅನುಷ್ಠಿಸಿದ ಉಪಾಯದಲ್ಲಿ ಅಂತರ್ಭೂತರಾದರೆಂದು **ಅಪ್ಪಡಿಯೇ ಶ್ರೀ ವಿಭೀಷಣಾಳ್ವಾನೋಡು** ಎಂದು ಆರಂಭಿಸಿ ಆಚಾರ್ಯರು ಅನುಗ್ರಹಿಸುತ್ತಾರೆ. ಅದಾಗಿ ಶ್ರೀವಿಭೀಷಣಾಳ್ವಾನ್ ಜತೆಯಲ್ಲಿ, "ಉತ್ಪಪಾತಗದಾಪಾಣಿಃ ಚತುರ್ಭಿಃ ಸಹ ರಾಕ್ಷಸೈಃ ॥ (ರಾಮಾ, ಯುದ್ಧಕಾಂಡ)ಎಂಬಂತೆ ಬಂದ ನಾಲ್ಕು ರಾಕ್ಷಸರುಗಳೂ, ವಿಭೀಷಣಾಳ್ವಾನ್ ಅನುಷ್ಠಿಸಿದ ಉಪಾಯದಲ್ಲ ಸೇರಿದವರು, ಈ ಪ್ರಕರಣದಲ್ಲಿ "ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ । ನಿವೇದಯತಮಾಂ ಕ್ಷಿಪ್ರಂ ವಿಭೀಷಣ ಮುಪಸ್ಥಿತಮ್ ಎಂದು ವಿಭೀಷಣನು "ಮಾಂ" ಎಂದು ತನಗಾಗಿ ಶರಣಾಗತಿ ಮಾಡಿರುವುದು ಸ್ಪಷ್ಟವಾಗಿದೆ, ನಾಲ್ಕು ರಾಕ್ಷಸರುಗಳಿಗೂ ಸೇರಿಸಿ ಶರಣಾಗತಿ ಮಾಡಿರುವುದು ಸ್ಪಷ್ಟವಾಗಿಲ್ಲವಲ್ಲ, ಎಂದು ಕೇಳಿದರೆ "ಮಾಂ" ಎಂಬ ವಚನವು ತನ್ನ ಅನುಬಂಧಿಗಳನ್ನೂ ಸೇರಿಸಿಕೊಂಡದ್ದಾಗಿ ತಿಳಿಯಬೇಕು. ಏಕೆಂದರೆ ಅವರುಗಳಿಗೂ ರಕ್ಷಣೆಯು ದೊರೆತದ್ದರಿಂದ ಶ್ರೀ ವಿಭೀಷಣರ ಬುದ್ಧಿಸ್ಥವಾದ ಅವರ ಅನುಬಂಧಿಗಳ ರಕ್ಷಣಾ ಪ್ರಾರ್ಥನೆಯೂ, "ನಿವೇದಯತಮಾಂ", ಎಂಬಲ್ಲಿ ವಿಭೀಷಣ ರಕ್ಷಣೆ ಜತೆಗೆ ಸೇರಿಕೊಂಡಿದೆ ಎಂಬುದು ಭಾವ

ವಿಭೀಷಣ ಶರಣಾಗತಿ ವಿಚಾರ

ಅನಂತರ ಬುದ್ಧಿಸ್ಥವಾದ ವಿಭೀಷಣ ಶರಣಾಗತಿ ಪ್ರಕರಣದಲ್ಲಿಯೂ ಈ ಅಂಗಾಂಗಿಗಳನ್ನು **ಅಂಗುತ್ತ ಅಭಯಪ್ರದಾನ ಪ್ರಕರಣತ್ತಿಲುಮ್,** ಎಂದಾರಂಭಿಸಿ ಅನುಗ್ರಹಿಸುತ್ತಾರೆ ಅದಾಗಿ **ಅಂಗುತ್ತ**– ಶ್ರೀವಿಭೀಷಣಾಳ್ವಾನ್‌ರವರಿಗೆ ಅಭಯ ಪ್ರಧಾನ ಮಾಡಿದ ಪ್ರಕರಣದಲ್ಲಿಯೂ ಈ ಅಂಗಾಗಿಗಳನ್ನು ನಿರೂಪಿಸಬಹುದು. **ಎಂಗನೇಯೆನ್ನಿಲ್**-ಹೇಗೆಂದರೆ **ಪ್ರಾತಿಕೂಲ್ಯತ್ತಿಲ್** ಇತ್ಯಾದಿ–ಪ್ರತಿಕೂಲಾಚರಣೆಯಲ್ಲಿ ವ್ಯವಸ್ಥಿತನಾದ ರಾವಣನಿಗೂ 1) **ಪ್ರದೀಯತಾಂದಾಶರಥಾಯ** ಇತ್ಯಾದಿಯಾಗಿ "ದಶರಥನ ಪುತ್ರನಾದ ರಾಮಚಂದ್ರನಿಗೆ ಮೈಥಿಲಿಯನ್ನು ಸಮರ್ಪಿಸು, 2) **ಸೀತಾಂಚರಾಮಾಯ** ಇತ್ಯಾದಿ ಸೀತೆಯನ್ನು ಶ್ರೀ ರಾಮಚಂದ್ರನಿಗೆ ಸಮರ್ಪಿಸಿ ನಾವು ಕ್ಷೇಮದಿಂದಿರೋಣ," ಎಂದು ಶ್ರೀ ವಿಭೀಷಣನು ಹಿತವನ್ನು ಹೇಳುವುದರಿಂದ, ಆನುಕೂಲ್ಯ ಸಂಕಲ್ಪವೆಂಬ ಅಂಗವು ತಿಳಿಸಲ್ಪಟ್ಟಿತು. **ಇಂದ ಹಿತವಚನಮ್** ಈ ಹಿತವಚನವು ಪಿತ್ತದಿಂದ ಕೂಡಿದವನಿಗೆ ಹಾಲು ಕಹಿಯಾಗುವಂತೆ; ರಾವಣನಿಗೆ ಉದ್ವೇಗಕ್ಕೆ ಕಾರಣವಾಯಿತು. ಆದರಿಂದಾಗಿ 3) **ತ್ವಾಂತುಧಿಕ್ಕುಲಪಾಂಸನಮ್**,ಎಂದು

---

1. 1) ಪುರಾಶರತ್ಸೂರ್ಯಮರೀಚಿಸನ್ನಿಭಾನ್ ನವಾನ್ ಸುಪುಂಖಾನ್ ಸುದೃಢಾನ್ ನೃಪಾತ್ಮಜಃ ।
ಸೃಜತ್ಯಮೋಘಾನ್ ವಿಶಿಖಾನ್ ವಧಾಯತೇ ಪ್ರದೀಯತಾಂ ದಾಶರಥಾಯಮೈಥಿಲೀ ॥

2), 3), ಶ್ರೀ. ತಿ. ನೋ.

ವೊಹಾದು; ಇವನೋಡು ಅನುಬಂಧಿತ್ತ ವಿಭೂತಿಹಳುವೊಹಾದು; ಇವನಿರುನ್ದ ವಿಡತ್ತಿಲಿರುಕ್ಕವು ವೊಹಾದು; ಎನ್ರುದಿಯಿಟ್ಟು ೪)"ತ್ಯಕ್ತ್ವಾಪುತ್ರಾಂಶ್ಚದಾರಾಂಶ್ಚ" ೫) ಪರಿತ್ಯಕ್ತಾಮಯಾ ಲಂಕಾಮಿತ್ರಾಣಿಚ ಧನಾನಿಚ" ಎನ್ಗಿರ ಸ್ವವಾಕ್ಯತ್ತಿನ್ ಪಡಿಯೇ ಯಂಜ್ಙ ತುವಕ್ಕತ್ತುಪ್ಪೋರುಗ್ಯೆಯಾಲೇ ಪ್ರಾತಿಕೂಲ್ಯ ವರ್ಜ್ಜನಾಭಿಸಂಧಿತೋತ್ತಿತ್ತು.

ರಾವಣನು ಧಿಕ್ಕಾರವನ್ನು ಮಾಡಿದ ನಂತರ, ಇನ್ನು ಮೇಲೆ ಇವನಿಗೆ ಉಪದೇಶಕೂಡದು ಇವನ ಸಂಬಂಧ ಪಟ್ಟ ಐಶ್ವರ್ಯಾದಿಗಳೂ ಕೂಡದು ಇವನು ಇರುವ ಊರಿನಲ್ಲಿ ಇರಲೂ ಕೂಡದು, ಎಂದು ತೀರ್ಮಾನ ಮಾಡಿ **4) ತ್ಯಕ್ತ್ವಾಪುತ್ರಾಂಶ್ಚ 5) ಪರಿತ್ಯಕ್ತಾ ಮಯಾಲಂಕಾ** ಇತ್ಯಾದಿ ವಿಭೀಷಣನು ತಾನೇ ಹೇಳಿದ ಮಾತುಗಳ ಪ್ರಕಾರ ರಾವಣನ ರಾಜ್ಯವಾದ ಲಂಕೆ, ಪುತ್ರದಾರಾದಿಗಳ ವಿಷಯವಲ್ಲಿ ರಾವಣನಿಂದ ಲಬ್ಧವಾದ ಐಶ್ವರ್ಯಾದಿಗಳ (ಆದಿ ಶಬ್ದಾರ್ಥ) ಸಂಬಂಧವನ್ನು ಬಿಟ್ಟು ಬಂದದ್ದರಿಂದ ಪ್ರಾತಿಕೂಲ್ಯವರ್ಜನಗಳಲ್ಲಿ ಅಭಿಸಂಧಿಯು ಪ್ರಕಾಶವಾಯಿತು ರಾಮನಿಗೆ ವಿರೋಧವಾದ ರಾವಣ ಮತ್ತು ಅವನ ರಾಜ್ಯ ಸಂಬಂಧವೆಲ್ಲವನ್ನೂ ಬಿಟ್ಟು ಬಂದಿದ್ದರಿಂದ ಪ್ರಾತಿಕೂಲ್ಯ ವರ್ಜನವು ದ್ಯೋತಿತ.

---

ii) ತ್ಯಜಸ್ವಕೋಪಂ ಸುಖಧರ್ಮನಾಶನಂ ಭಜಸ್ವಧರ್ಮಂ ರತಿಕೀರ್ತಿವರ್ಧನಮ್ ।
ಪ್ರಸೀದ ಜೀವೇಮಸ ಬಾಂಧವಾಃ ಪಮೇ ಪ್ರದೀಯತಾಂ ದಾಶರಥಾಯ ಮೈಥಿಲೀ ।

iii) ಯಾವನ್ನ ಲಂಕಾಂ ಸಮಭಿದ್ರವಂತಿ ವಲೀಮುಖಾಃ ಪರ್ವತಕೂಟ ಮಾತ್ರಾಃ ।
ದಂಷ್ಟ್ರಾಯುಧಾ ಶ್ಚೈವ ನಖಾಯುಧಾಶ್ಚ ಪ್ರದೀಯತಾಂ ದಾಶರಥಾಯ ಮೈಥಿಲೀ ।

iv) ಯಾವನ್ನ ಗೃಹ್ಣಂತಿ ಶಿರಾಂಸಿಬಾಣಾ ರಾಮೇರಿತಾ ರಾಕ್ಷಸ ಪುಂಗವಾನಾಮ್ ।
ವಜ್ರೋಪಮಾ ವಾಯು ಸಮಾನ ವೇಗಾಃ ಪ್ರದೀಯತಾಂ ದಾಶರಥಾಯ ಮೈಥಿಲೀ ॥

i) ರಾಮಾ 6-9-22 ii) ರಾಮಾ, 6-9-23, iii) ರಾಮಾ 6-14-3 iv) ರಾಮಾ, 6-14-4

ಶ್ರೀ ರಾಮಚಂದ್ರನ ತೀಕ್ಷ್ಣವಾದ ಬಾಣಗಳು ನಿನ್ನನ್ನು ಕೊಲ್ಲಲುಬಿಡಲ್ಪಡುವುದಕ್ಕೆ ಮೊದಲು ಸೀತೆಯನ್ನು ರಾಮಚಂದ್ರನಲ್ಲಿ ಸಮರ್ಪಿಸು ಸುಖವನ್ನೂ ಧರ್ಮವನ್ನೂ ನಾಶಮಾಡುವ ಕೋಪವನ್ನು ಬಿಡು ಸಂತೋಷವನ್ನೂ, ಕೀರ್ತಿಯನ್ನೂ ಹೆಚ್ಚಿಸುವ ಧರ್ಮವನ್ನು ಕೈಗೊಳ್ಳುವವನಾಗು, ಪುತ್ರ ಬಂಧುಗಳೊಡನೆ ಸುಖವಾಗಿರಲು ಪ್ರಸನ್ನನಾಗು. ಸೀತೆಯನ್ನು ರಾಮಚಂದ್ರನಲ್ಲಿ ಸಮರ್ಪಿಸು, ಪರ್ವತದಂತೆ ಇರುವ ವಾನರರು ನಖ ದಂಷ್ಟ್ರಾಯುಧರಾಗಿ ಲಂಕೆಯನ್ನು ಮುತ್ತುವುದಕ್ಕೆ ಮೊದಲು ಸೀತೆಯನ್ನು ರಾಮಚಂದ್ರನಲ್ಲಿ ಸಮರ್ಪಿಸು ರಾಮನಿಂದ ಬಿಡಲ್ಪಟ್ಟ ಬಾಣಗಳು ವಜ್ರಾಯುಧಕ್ಕೆಸಮ ವಾಯುವೇಗದಿಂದ ಕೂಡಿವೆ ಅವು ರಾಕ್ಷಸ ಶ್ರೇಷ್ಠರ ತಲೆಗಳನ್ನು ಕತ್ತರಿಸುವುದಕ್ಕೆ ಮುಂಚೆಯೇ ಶ್ರೀ ರಾಮಚಂದ್ರನಿಗೆ ಸೀತೆಯನ್ನು ಸಮರ್ಪಿಸು.

2) ಧನಾನಿ ರತ್ನಾನಿ ವಿಭೂಷಣಾನಿ ವಾಸಾಂಸಿ ದಿವ್ಯಾನಿ ಮಣೀಂಶ್ಚ ಚಿತ್ರಾನ್ ।
ಸೀತಾಂ ಚ ರಾಮಾಯ ನಿವೇದ್ಯ ದೇವೀಂ ವಸೇಮರಾಜನ್ನಿಹ ವೀತ ಶೋಕಾಃ ॥ ರಾಮಾ, (6-15-14)

ಎಲೈ ರಾಜನೇ ! ನೀನು ಮಾಡಿದ ಅಪರಾಧವನ್ನು ಶ್ರೀ ರಾಮಚಂದ್ರನು ಕ್ಷಮಿಸಬೇಕಾದರೆ, ಬಹಳ ಧನವನ್ನೂ ರತ್ನಗಳನೂ ಭೂಷಣಗಳನ್ನೂ, ದಿವ್ಯವಾದ ವಸ್ತ್ರಗಳನ್ನೂ, ಮಣಿಗಳನ್ನೂ ಜತೆಗೆ ಎತ್ತಿಕೊಂಡು ಹೋಗಿ ಸೀತಾದೇವಿಯನ್ನು ಶ್ರೀ ರಾಮಚಂದ್ರನಲ್ಲಿ ಸಮರ್ಪಿಸಿ ನಾವು ನಿಶ್ಚಿಂತರಾಗಿ ಬಾಳೋಣ,

3) ಅನ್ಯಸ್ತ್ವೇವಂ ವಿಧಂಬ್ರೂಯಾತ್ ವಾಕ್ಯಮೇತನ್ನಿಶಾಚರ ।
ಅಸ್ಮಿನ್ ಮುಹೂರ್ತೇನಭವೇತ್ ತ್ವಾಂತು ಧಿಕ್ಕುಲಪಾಂಸನಮ್ ॥ ರಾ.ಮೊ. (6-16-15)

ಎಲೈ ನಿಶಾಚರನೇ (ವಿಭೀಷಣನೇ) ಬೇರೆ ಯಾರಾದರೂ ಈ ರೀತಿಯಲ್ಲಿ (ಮೇಲೆ ಹೇಳಿದ ರೀತಿಯಲ್ಲಿ)ಹೇಳಿದ್ದರೆ, ಈ ಕ್ಷಣದಲ್ಲೇ ಅವನು ಬದುಕಿರಲಾರನು ಕೊಂದು ಬಿಡುತ್ತಿದ್ದೆ ಎಂದರ್ಥ ನೀನು ನನಗೆ ತಮ್ಮನಾದ್ದರಿಂದ ನಿನ್ನನ್ನು ಕೊಲ್ಲಲಿಲ್ಲ ಎಂದು ಭಾವ ಆದರೆ ಕುಲವನ್ನು ನಾಶಮಾಡುವ ನಿನಗೆ ಧಿಕ್ಕಾರ,

4) ಸೋಹಂ ಪರುಷಿತಸ್ತೇನ ದಾಸವಚ್ಚಾವಮಾನಿತಃ ।
ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥ ರಾಮೊ, (6-17-14)ಪು. ತಿ. ನೋ

(೧) "ರಾವಣೋನಾಮದುರ್ವೃತ್ತಃ" ಎನ್ರು ತುಡಙ್ಗಿ ಸರ್ವ ಜಿತ್ತಾನ ರಾವಣನೋಟ್ಟೈ ವಿರೋಧತ್ತಾಲೆ ತಾವಳ್ ಪ್ರೋಕ್ಕತ್ತು ನಿರ್ಕಿರ ನಿಲೈಯೈ ಚ್ಚೊಲ್ಲುಹೈಯಾಲುಮ್, ಪಿನ್ಬುಂ "ಅನುಜೋ ರಾವಣಸ್ಯಾಹಂ ತೇನಚಾಸ್ಮ್ಯವಮಾನಿತಃ। ಭವಂತಂ ಸರ್ವಭೂತಾನಾಂ ಶರಣ್ಯಂ ಶರಣಂಗತಃ," ಎನ್ಗೈಯಾಲುಮ್, ಕಾರ್ಪಣ್ಯಂ ಶೊಲ್ಲಪ್ಪಟ್ಟದು.

(೪) ಅಂಜಾದೇವನ್ದು ಕಿಟ್ಟಿ (೧) "ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ"

ಅನಂತರ ಕಾರ್ಪಣ್ಯದ್ಯೋತಕ ವಚನಗಳನ್ನು "1) **ರಾವಣೋನಾಮ ದುರ್ವೃತ್ತಃ**" ಎಂಬಾರಂಭಿಸಿ ತಿಳಿಸುತ್ತಾರೆ ಅದಾಗಿ ರಾವಣನು ಕೆಟ್ಟನಡೆತೆಯುಳ್ಳವನು, ಇತ್ಯಾದಿ ಆರಂಭಿಸಿ, ದಿಕ್ಪಾಲಕರೇ ಆದಿಯಾಗಿ ಎಲ್ಲರನ್ನೂ ಜಯಿಸಿದ ರಾವಣನೊಡನೆ ವಿರೋಧವು ಏರ್ಪಟ್ಟದ್ದರಿಂದ ತನಗೆ ಗತ್ಯಂತರವಿಲ್ಲದ ಅವಸ್ಥೆಯು ಉಂಟಾಯಿತು. ಎಂದು ವಿಭೀಷಣನು ಹೇಳುವುದರಿಂದಲೂ, ಅನಂತರವೂ 2) **ಅನುಜೋರಾವಣಸ್ಯಾಹಂ** ಇತ್ಯಾದಿ ರಾವಣನ ತಮ್ಮ ನಾನು ಅವನಿಂದ ಅವಮಾನಿಸಲ್ಪಟ್ಟೆನು, ಸರ್ವಭೂತಗಳಿಗೂ ರಕ್ಷಕನಾದ ನಿನ್ನನ್ನು ಶರಣಹೊಂದಿದ್ದೇನೆ, ಎಂದು ಹೇಳುವುದರಿಂದಲೂ ಕಾರ್ಪಣ್ಯವೆಂಬ ಅಂಗವು ಹೇಳಲ್ಪಟ್ಟಿತು **ಅಂಜಾದೇವಂದು ಕಿಟ್ಟಿ**—ಅನಂತರ ರಾಮನು ಅಂಗೀಕರಿಸುತ್ತಾನೆಯೋ ಇಲ್ಲವೋ ಅವನ ಪರಿವಾರಗಳು ಹಿಂಸಿಸುತ್ತಾರೋ ಏನೋ, ಎಂಬ ಸಂಶಯ ಮತ್ತು ಹೆದರಿಕೆ ಇಲ್ಲದೆ ಧೈರ್ಯವಾಗಿ ಶ್ರೀ ರಾಮನಲ್ಲಿಗೆ ಬಂದು, 3) **ಸರ್ವಲೋಕ ಶರಣ್ಯಾಯ** ಇತ್ಯಾದಿ—ಸರ್ವಲೋಕಕ್ಕೂ ರಕ್ಷಕನಾದ, ಶರಣಾಗತ ರಕ್ಷಣ ದೀಕ್ಷಿತನಾದ ರಘುಕುಲದಲ್ಲಿ ಅವತರಿಸಿದ, ಪರಮೋದಾರ ಸ್ವಭಾವನು ರಾಮಚಂದ್ರನೆಂದು ಸಂಬೋಧನೆ ಮಾಡುವುದರಿಂದ ತನಗೆ ರಕ್ಷೆಯು ಲಭಿಸುತ್ತದೆ, ಎಂಬ ಮಹಾ ವಿಶ್ವಾಸವು 4) **ವಿಭೀಷಣೋ ಮಹಾಪ್ರಾಜ್ಞಃ** ಎಂಬ ಮಹಾಪ್ರಾಜ್ಞತೆಯ ಕಾರಣದಿಂದ ಹೇಳಲ್ಪಟ್ಟಿತು. ಪ್ರಾಜ್ಞತೆಯನ್ನು ಮಹತ್

ರಾವಣನಿಗೆ ಬುದ್ಧಿವಾದವನ್ನು ಹೇಳಿದ ನಾನು ಅವನಿಂದ ಕಠಿಣವಾದ ಮಾತುಗಳನ್ನಾಡಲ್ಪಟ್ಟು, ಸೇವಕನ ಹಾಗೆ ಅವಮಾನ ಮಾಡಲ್ಪಟ್ಟೆನು ಆದ್ದರಿಂದ ಅವನನ್ನೂ ಅವನ ರಾಜ್ಯವನ್ನೂ ಅವನ ಸಂಬಂಧಿಗಳಾದ ಪುತ್ರದಾರಾದಿಗಳನ್ನೂ ಬಿಟ್ಟು ಶ್ರೀ ರಾಘವನನ್ನು ಶರಣ ಹೊಂದಿದೆನು.

5) ಪರಿತ್ಯಕ್ತಾ ಮಯಾಲಂಕಾ ಮಿತ್ರಾಣಿಚ ಧನಾನಿಚ ।
ಭವದ್ಗತಂಮೇ ರಾಜ್ಯಂಚ ಜೀವತಂಚ ಸುಖಾನಿಚ ॥

ಲಂಕೆಯು ಸವಾಸನವಾಗಿ ಬಿಡಲ್ಪಟ್ಟಿತು, ಮಿತ್ರರೂ, ಧನವೂ ರಾವಣ ಸಂಬಂಧವಾದ ಸಕಲವೂ ಬಿಡಲ್ಪಟ್ಟಿತು ನನಗೆ ರಾಜ್ಯ, ಜೀವನ, ಸುಖವೆಲ್ಲವೂ ನೀನೇ ಆಗಿದ್ದೀಯೆ ನಿನ್ನ ಕೈಂಕರ್ಯಕ್ಕೆ ವಿರೋಧವಾದ ಸ್ವತ್ತು ಸಂಬಂಧಿಗಳಾರೂ ನನಗೆ ಬೇಡವೆಂಬುದು ತಾತ್ಪರ್ಯ ಇದರಿಂದ ಪ್ರಾತಿಕೂಲ್ಯವರ್ಜನವು ತಿಳಿಸಲ್ಪಟ್ಟಿತು

1] ರಾವಣೋನಾಮ ದುರ್ವೃತ್ತಃ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹಮನುಜೋಭ್ರಾತಾ ವಿಭೀಷಣ ಇತಿಶ್ರುತಃ ॥

ರಾಕ್ಷಸರಿಗೆಲ್ಲಾ ಸ್ವಾಮಿಯೂ ರಾವಣನೆಂದು ಪ್ರಸಿದ್ಧಿಯುಳ್ಳ ರಾಕ್ಷಸನು ಕೆಟ್ಟನಡತೆಯುಳ್ಳವನು, ನಾನು ಅವನ ತಮ್ಮ, ವಿಭೀಷಣನೆಂದು ಹೆಸರುಳ್ಳವನು

2) ರಾಮಾ, (6-19-4)

3) ನಿವೇದಯತ ಮಾಂಕ್ಷಿಪ್ರಂ ವಿಭೀಷಣ ಮುಪಸ್ಥಿತಮ್ ॥ ಉತ್ತರಾರ್ಧರಾಮಾ (6-17-15

ಶ್ರೀ ರಾಮಚಂದ್ರನು ಸರ್ವಲೋಕಕ್ಕೂ ರಕ್ಷಕನು ಆದ್ದರಿಂದ ನನಗೂ ರಕ್ಷಕನು. ಶರಣಾಗತ ರಕ್ಷಣ ತತ್ಪರನಾದ ರಘುವಂಶದಲ್ಲಿ ಹುಟ್ಟಿದವನು ಆಶ್ರಿತರನ್ನು ರಕ್ಷಿಸಬೇಕೆಂಬ ಪರಮೋದಾರ ಸ್ವಭಾವನು. ಅಂಥಹವನಲ್ಲಿ ಉಪಸ್ಥಿತನಾಗಿ ಬಂದ ವಿಭೀಷಣನಾದ ನನ್ನ ಮತ್ತು ನನ್ನ ಜತೆಗಾರರ ರಕ್ಷಾಭರವನ್ನು ಈ ಕ್ಷಣದಲ್ಲಿಯೇ ಸಮರ್ಪಿಸಿರಿ ನಿವೇದಯತ—ಸಮರ್ಪಿಸಿರಿ ಎಂದರ್ಥ.

ಎನ್ರು ಶೊಲ್ಲುವದ್‌ಪಡಿ ಪಣ್ಣಿನ ಮಹಾವಿಶ್ವಾಸಮ್ (೨) "ವಿಭೀಷಣೋ ಮಹಾಪ್ರಾಜ್ಞಃ" ಎನ್ರು ಕಾರಣಮುಖತ್ತಾಲೇ ಶೊಲ್ಲಪ್ಪಟ್ಟದು. ಪ್ರಾಜ್ಞತೆಯೈ ವಿಶೇಷಿಕ್ಕಿರ ಮಹಚ್ಛಬ್ದತ್ತಾಲೇ ವಿಶ್ವಾಸಾತಿಶಯನ್ದಾನೇ ವಿವಕ್ಷಿತಮಾಹವುಮಾಮ್. (೧) "ರಾಘವಂ ಶರಣಂಗತಃ" ಎನ್ಗೈಯಾಲೇ ಉಪಾಯವರಣಾನ್ತರ್ನೀತಮಾನ ಗೋಪ್ತೃತ್ವವರಣಂ ಶೊಲ್ಲಿತ್ತಾಯಿತ್ತು.

ಶಬ್ದದಿಂದ ವಿಶೇಷಿಸುವುದರಿಂದ, ಮಹಾವಿಶ್ವಾಸವು ವಿವಕ್ಷಿಸಲ್ಪಟ್ಟಿತೆಂದೂ ಹೇಳಬಹುದು. 1) **ರಾಘವಂಶರಣಂ ಗತಃ** ಎಂದು ಹೇಳುವುದರಿಂದ ಉಪಾಯವರಣ ಶಬ್ದದಲ್ಲಿ ಅಡಗಿರುವ ಗೋಪ್ತೃತ್ವವರಣವು ಹೇಳಲ್ಪಟ್ಟಿತು ಹೇಗೆಂದರೆ "ಶರಣಂಗತಃ" ಎಂಬಲ್ಲಿ ಶರಣಶಬ್ದವು ಉಪಾಯಪರ. ಗತಿಶಬ್ದವು ಬುದ್ಧ್ಯರ್ಥ ಬೋಧಕ. ಆದ್ದರಿಂದ ಶರಣಂಗತಃ-ಉಪಾಯವಾಗಿ ಅಧ್ಯವಸಾಯ ಮಾಡುತ್ತೇನೆಂಬ ಪ್ರಾರ್ಥನೆಯು ಇಲ್ಲಿ ವಿವಕ್ಷಿತ. ಆದಾಗಿ ಭಕ್ತಿಯೋಗವನ್ನು ಮಾಡಲು ಅಶಕ್ತ, ಆ ಭಕ್ತಿಯೋಗವೆಂಬ ಉಪಾಯವನ್ನು ಅನುಷ್ಠಿಸಿದರೆ ಕೊಡುವ ಫಲವನ್ನು, ಆ ಉಪಾಯಾಂತರ ಸ್ಥಾನದಲ್ಲಿ ನಿಂತು ನೀನೇ ನನಗೆ ದಯಪಾಲಿಸು, ಉಪಾಯಾಂತರ ನಿರಪೇಕ್ಷ ರಕ್ಷಕನಾಗು ಎಂಬ ಪ್ರಾರ್ಥನೆ. ಈ ನಿರಪೇಕ್ಷ ರಕ್ಷಕತ್ವ ಪ್ರಾರ್ಥನೆಯಲ್ಲಿ ರಕ್ಷಕತ್ವ ಪ್ರಾರ್ಥನಾರೂಪವಾದ – ರಕ್ಷಕನಾಗು ಎಂಬ ಗೋಪ್ತೃತ್ವವರಣವೂ ಅಡಗಿದೆಯಲ್ಲವೆ (ಗೋಪ್ತಾ–ರಕ್ಷಕ). ಹೀಗೆ ಐದು ಅಂಗಗಳೂ ಹೇಳಲ್ಪಟ್ಟ ನಂತರ ಆತ್ಮ ನಿಕ್ಷೇಪವನ್ನು (ಅಂಗಿ), **ಉಪಾಯವರಣ ಶಬ್ದತ್ತಾಲೇ** ಎಂದಾರಂಭಿಸಿ ಆಚಾರ್ಯರು ನಿರೂಪಿಸುತ್ತಾರೆ.

ಆದಾಗಿ 'ರಾಘವಂ ಶರಣಂಗತಃ" ಎಂಬಲ್ಲಿ ಹೇಳಲ್ಪಟ್ಟ ಉಪಾಯವರಣ ಶಬ್ದದಿಂದ, ಉಪಾಯಾಂತರ ರೂಪ ಭರವನ್ನು ಸ್ವೀಕರಿಸು ಎಂಬ ನಿರಪೇಕ್ಷ ರಕ್ಷಕತ್ವ ಪ್ರಾರ್ಥನೆಯು ಅಂಗಿ ವಿಶೇಷಣವಾಗಿ ತಿಳಿಸಲ್ಪಟ್ಟಿರುವುದರಿಂದ ಅಂಗಿ ಸ್ವರೂಪವಾದ ಭರಸಮರ್ಪಣವೂ ವ್ಯಂಜಿತ ಎಲ್ಲಿ ಉಪಾಯತ್ವ ಪ್ರಾರ್ಥನೆಯೋ ಅಲ್ಲಿ ಭರಸಮರ್ಪಣವೂ ನಿಯತವಾಗದು. ಆಕಿಂಚನ್ಯ ಭರನ್ಯಾಸೋಽಪಾಯತ್ವ ಪ್ರಾರ್ಥನಾತ್ಮನಾಮ್ |

ತ್ರಯಾಣಾಂ ಸೌಹೃದಂ ಸೂಕ್ಷ್ಮಂ ಯಃ ಪಶ್ಯತಿ, ಸಪಶ್ಯತಿ ||,

ಎಂಬ ಕಾರಿಕೆಯಲ್ಲಿ ಈ ಅಂಶವು ಸೂಚಿತ ಆದಾಗಿ ಭರ ಸ್ವೀಕಾರ ಪ್ರಾರ್ಥನಾ, ಭರಸಮರ್ಪಣ, ನೈರ್ಭರ್ಯ (ಆಕಿಂಚನ್ಯ) ಇವು ಮೂರೂ ಪರಸ್ಪರ ಸಾಕಾಂಕ್ಷಿಗಳಾಗಿವೆ ಇದನ್ನು ಸಾಧ್ಯೋಪಾಯ ಶೋಧನಾಧಿಕಾರದಲ್ಲಿ

---

4) ರಾಘವೇಣಾಭಯೇದತ್ತೇ ಸನ್ನತೋ ರಾವಣಾನುಜಃ।
ವಿಭೀಷಣೋ ಮಹಾ ಪ್ರಾಜ್ಞಃ ಭೂಮಿಂ ಸಮವ ಲೋಕಯನ್ ॥
ಖಾತ್ಪಪಾತಾವನಿಂ ಹೃಷ್ಟೋ ಭಕ್ತೈರನುಚರೈಸ್ಸಹ ॥

ರಾಮಾ, (6-19-1)

ಶ್ರೀ ರಾಮಚಂದ್ರನು ಅಭಯಪ್ರದಾನ ಮಾಡಲು, ರಾವಣನ ತಮ್ಮನಾದ, ಮತ್ತು ಮಹಾ ಪ್ರಾಜ್ಞನಾದ ವಿಭೀಷಣನು, ತಲೆ ಬಾಗಿದವನಾಗಿ, ತನ್ನ ಅನುಚರರೊಡನೆ ಸಂತೋಷದಿಂದ ಭೂಮಿಗೆ ಇಳಿದನು

1) ಸೋಽಹಂ ಪರುಷಿತಸ್ತೇನ ದಾಸವಚ್ಚಾವಮಾನಿತಃ ।
ತ್ಯಕ್ತ್ವಾ ಪುತ್ರಾಂಶ್ಚದಾರಾಂಶ್ಚ ರಾಘವಂ ಶರಣಂಗತಃ ॥

(ರಾಮಾ. 6-17-14)

ರಾವಣನಿಂದ ಪಾರುಷ್ಯವಾದ ಮಾತುಗಳಿಂದ ಬೈಯಲ್ಪಟ್ಟು, ದಾಸನ ಹಾಗೆ ಅವಮಾನ ಮಾಡಲ್ಪಟ್ಟೆನು. ಆದ್ದರಿಂದ ಹೆಂಡತಿ ಮಕ್ಕಳನ್ನೂ, ಎಲ್ಲವನ್ನೂ ಬಿಟ್ಟು, ರಾಘವನನ್ನು ಉಪಾಯವಾಗಿ – ಅಂದರೆ ನಿರಪೇಕ್ಷ ರಕ್ಷಕನಾಗಿ ಅಧ್ಯವಸಾಯ ಮಾಡಿ ಶರಣು ಹೊಂದಿದ್ದೇನೆ. ಉಪಾಯತ್ವ ಪ್ರಾರ್ಥನೆಯೂ, ಅದರ ಏಕದೇಶವಾದ ರಕ್ಷಕತ್ವ ಪ್ರಾರ್ಥನೆಯೂ ಶರಣ ಶಬ್ದದಿಂದ ಸೂಚಿತ.

ಉಪಾಯವರಣಶಬ್ದತ್ತಾಲೇ ವ್ಯಂಜಿತಮಾಹಿರವಳವನ್ರಿಕ್ಕೇ (೧) "ನಿವೇದಯತ ಮಾಂಕ್ಷಿಪ್ರಂ ವಿಭೀಷಣಮುಪಸ್ಥಿತಂ" ಎನ್ಗೈಯಾಲೇ ಘಟಕ ಪುರಸ್ಸರಮಾನ ಆತ್ಮನಿಕ್ಷೇಪಂ ಶೊಲ್ಲಿತ್ತು. ಇಪ್ಪ್ರಕರಣತ್ತಿಲ್ ನಿವೇದನಶಬ್ದಂ ವಿಜ್ಞಾಪನ ಮಾತ್ರ ಪರಮಾನಾಲ್ ನಿಷ್ಪ್ರಯೋಜನಮ್.

ವಿಸ್ತಾರವಾಗಿ ಆಚಾರ್ಯರು ನಿರೂಪಿಸುತ್ತಾರೆ ಅಲ್ಲಿ ನೋಡಿ ತಿಳಿಯುವುದು. ಹೀಗೆ ಉಪಾಯವರಣ ಶಬ್ದದಲ್ಲಿ ವ್ಯಂಜಿತವಾಗಿರುವುದಲ್ಲದೆ (1) **ನಿವೇದಯತ ಮಾಂಕ್ಷಿಪ್ರಂ** ಇತ್ಯಾದಿ ವಿಜ್ಞಾಪಿಸಿರುವುದರಿಂದ ಘಟಕ ಪುರಸ್ಸರವಾದ ಆತ್ಮ ನಿಕ್ಷೇಪವು ಹೇಳಲ್ಪಟ್ಟಿತು. "ರಾಘವಂ ಶರಣಂಗತಃ" ಎಂಬ ವಾಕ್ಯದಲ್ಲಿ "ಭರಸ್ವೀಕಾರ ಪ್ರಾರ್ಥನಾ ಪೂರ್ವಕ ಭರನ್ಯಾಸವು ಶಬ್ದ ಶಕ್ತಿಯಿಂದಲೇ ಹೇಳಲ್ಪಟ್ಟರೂ, ವಿಭೀಷಣ ಶರಣಾಗತಿಯು ಮೋಕ್ಷಾರ್ಥ ಶರಣಾಗತಿಯಾದ್ದರಿಂದ, ಸರ್ವಲೋಕ ಶರಣ್ಯಾಯ ... ನಿವೇದಯತ ಇತ್ಯಾದಿಯಿಂದ ಸ್ವರೂಪ ಭರ, ಫಲಸಮರ್ಪಣ ರೂಪ ಶರಣಾಗತಿಯು ವಿವಕ್ಷಿತ. ಹೇಗೆಂದರೆ "ರಾಘವಂ ಶರಣಂಗತಃ" ಎಂಬಲ್ಲಿ ಭರಸಮರ್ಪಣವು ಶಾಬ್ದವಾಗಿ, ಸ್ವರೂಪ ಫಲಸಮರ್ಪಣಗಳನ್ನು ಅರ್ಥವಾಗಿ ತಿಳಿಯಬೇಕು. ಈ ಯೋಜನಗಿಂತ ಸ್ವರೂಪ ಭರ, ಫಲ ಸಮರ್ಪಣಗಳಿಗೆ ಶಾಬ್ದತ್ವವು, "ನಿವೇದಯತ, ಮಾಂಕ್ಷಿಪ್ರಂ ವಿಭೀಷಣ ಮುಪಸ್ಥಿತಮ್" ಎಂಬಲ್ಲಿ ಲಭಿಸುವಾಗ ಅದೇ ಪರಿಗ್ರಾಹ್ಯವೆಂದು ಆಚಾರ್ಯರು ಅಭಿಪ್ರಾಯಪಡುತ್ತಾರೆ ಆದಾಗಿ **ಮಾಮ್** – ಎಂಬುದರಿಂದ ಸ್ವರೂಪ ಸಮರ್ಪಣವು ವಿವಕ್ಷಿತ. **ಉಪಸ್ಥಿತಂ** ಎಂಬುದರಿಂದ ಸ್ವಾಮಿ ಕೈಂಕರ್ಯ ರಸಿಕನಾಗಿ ಬಂದಿರುವೆ, ಎಂದು ಹೇಳುವುದರಿಂದ ಫಲಸಮರ್ಪಣವು ದರ್ಶಿತವು. **ವಿಭೀಷಣಂ ನಿವೇದಯತ** – ಎಂಬ ಪದಗಳಿಂದ, ಭರಸಮರ್ಪಣವು ವಿವಕ್ಷಿತ. ನಿವೇದನ ಶಬ್ದಕ್ಕೆ ಭರಸಮರ್ಪಣವು ಅರ್ಥವೆಂಬುದು "ಆತ್ಮಾನಂದೇವಾಯ ನಿವೇದಯೇತ್", "ನಿವೇದಯೀತ ಸ್ವಾತ್ಮಾನಂ" ಇತ್ಯಾದಿ ಪ್ರಯೋಗ ಪ್ರಾಚುರ್ಯದಿಂದ ತಿಳಿಯತಕ್ಕದ್ದು. ಆದ್ದರಿಂದ ವಿಭೀಷಣ ಶರಣಾಗತಿಯು ಮೋಕ್ಷಾರ್ಥವಾಗಿ ಮಾಡಲ್ಪಟ್ಟು ಅಂಗಪಂಚಕ ಸಂಪನ್ನವಾದದ್ದು. ತ್ರಿಜಟಾ ಶರಣಾಗತಿಯು ಪುರುಷಕಾರ ಶರಣಾಗತಿಯಲ್ಲ ಪ್ರಾಣ ಸಂರಕ್ಷಣಾರ್ಥವಾಗಿ ಸೀತಾದೇವಿಯಲ್ಲಿ ಮಾಡಲ್ಪಟ್ಟ ಸಾಕ್ಷಾತ್ ಶರಣಾಗತಿ. ಅಲ್ಲಿಯೂ ಅಂಗಾಗಿಗಳು ಯಥಾವಸ್ಥಿತವಾಗಿರಬೇಕೆಂದು ಹಿಂದೆಯೇ ನಿರೂಪಿಸಲ್ಪಟ್ಟಿದೆ.

ವಿಭೀಷಣನು ತಾನು ಮಾಡಿದ ಶರಣಾಗತಿಯನ್ನು, "ನಿವೇದಯಾಮಿ" ಎಂದು ಹೇಳದೆ, "ನಿವೇದಯತ" ಎಂದು ವಿಜ್ಞಾಪಿಸಿದುದರ ಅಭಿಪ್ರಾಯವೇನೆಂದರೆ, ಆಚಾರ್ಯ ಪುರಸ್ಸರವಾಗಿ ಅನುಷ್ಠಿಸುವಂತೆ, ಸುಗ್ರೀವಾದಿಗಳನ್ನು ಮುಂದಿಟ್ಟುಕೊಂಡು ಮಾಡಿದುದು ಉಚಿತವೆಂಬುದು ಸೂಚಿತ **ಇಪ್ಪ್ರಕರಣತ್ತಿಲ್** ಇತ್ಯಾದಿ- ಈ ವಿಭೀಷಣ ಶರಣಾಗತಿ ಪ್ರಕರಣದಲ್ಲಿ **ನಿವೇದನ** ಶಬ್ದವು ಕೇವಲ ವಿಜ್ಞಾಪನೆಮಾತ್ರವಾದ್ದಲ್ಲಿ ನಿಷ್ಪ್ರಯೋಜನ ಅಂಗಾಂಗಿಗಳ ವಿವಕ್ಷೆಯು ಉಚಿತವಾದ್ದರಿಂದ, ಮೇಲೆ ನಿರೂಪಿಸಿದಂತೆ ನಿವೇದನ ಶಬ್ದವು ಅಂಗಿಯಾದ ಭರಸಮರ್ಪಣವನ್ನು ನಿರೂಪಿಸುತ್ತದೆ ಎಂಬುದೇ ಆಚಾರ್ಯ ಸಾರ್ವಭೌಮರ ಹೃದಯ "ಸ್ವರೇಣ ಮಹತಾಮಹಾನ್", ಎಂಬ ವಾಕ್ಯದಿಂದ ಆರ್ತ್ಯತಿರೇಕವು ಸೂಚಿಸಲ್ಪಟ್ಟು "ಸರ್ವಲೋಕ ಶರಣ್ಯಾಯ........ನಿವೇದಯತ" ಎಂದು ಲೋಕಾಂತರ ವರ್ತಿಗಳಿಗೂ ಹೃದಯವು ಕರಗುವಂತೆಯೂ, ಘಟ್ಟಿಯಾಗಿ ಸರ್ವಲೋಕ ರಕ್ಷಕನು ನನಗೂ ರಕ್ಷಕನು, ಆದ್ದರಿಂದ ಅನನ್ಯ ರಕ್ಷ್ಯತ್ವೇನ ಅವನ ಪಾದಗಳಲ್ಲಿ ನನ್ನ ರಕ್ಷಾಭರವನ್ನು ಸಮರ್ಪಿಸಿರಿ, ಎಂದು ಹೇಳುವುದು ಉಚಿತವೇ ವಿನಹ, ನಿವೇದಯತ ಶಬ್ದಕ್ಕೆ ನನ್ನನ್ನು ತಿಳಿಸಿರಿ ಎಂಬ ರೀತಿಯ ವಿಜ್ಞಾಪನೆ ಮಾತ್ರ ಎಂದು ಹೇಳುವುದು ನಿಷ್ಪ್ರಯೋಜನ. ಶ್ರೀ ಮದಭಯಪ್ರದಾನಸಾರದಲ್ಲಿಯೂ ನಿವೇದಯತ ಶಬ್ದಕ್ಕೆ ಭರಸಮರ್ಪಣವು ಅರ್ಥವೆಂದು ಸುವ್ಯಕ್ತವಾಗಿ ಅನುಗ್ರಹಿಸಲ್ಪಟ್ಟಿದೆ.

1) ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ ।
ನಿವೇದಯತ ಮಾಂಕ್ಷಿಪ್ರಂ ವಿಭೀಷಣ ಮುಪಸ್ಥಿತಮ್ ॥ (ರಾಮಾ. (6-17-16)

ಪು.ತಿ ನೋ.

ಲೋಕದೃಷ್ಟಾನ್ತೇಷು ಅಙ್ಗಾಙ್ಗ್ಯವಿನಾಭೂತಪ್ರದರ್ಶನಮ್

ಇಪ್ಪಡಿ ಮತ್ತುಮುಳ್ಳ ಪ್ರಪತ್ತಿ ಪ್ರಕರಣಙ್ಗಳಿಲುಮ್, ಲೌಕಿಕ ದ್ರವ್ಯನಿಕ್ಷೇಪಙ್ಗಳಿಲುಮ್ ಸಂಕ್ಷೇಪವಿಸ್ತರ ಪ್ರಕ್ರಿಯೈಯಾಲೇ ಇವ್ವರ್ಥಙ್ಗಳ್ ಕಾಣಲಾಮ್. ತಾ‌ನ್ ರಕ್ಷಿಕ್ಕಮಾಟ್ಟಾದ ದೊರುವಸ್ತುವೈ ರಕ್ಷಿಕ್ಕವಲ್ಲನೊರುವ‌ನ್ ಪಕ್ಕಲಿಲೇ ಸಮರ್ಪಿಕ್ಕುಮ್ ಪೋದು, ತಾನವ‌ನ್ ತಿರತ್ತಿಲ್ ಅನುಕೂಲಾಭಿಸಂಧಿಯೈಯುಡೈಯನಾಯ್, ಪ್ರತಿಕೂಲಾಭಿಸಂಧಿಯೈತ್ತವಿರ್‌ನ್ದು, "ಅವ‌ನ್ ರಕ್ಷಿಕ್ಕವಲ್ಲನ್ ಅಪೇಕ್ಷಿತ್ತಾಲ್ ರಕ್ಷಿಪ್ಪದುಮ್ ಶೆಯ್ಯುಮ್" ಮೆನ್ರುತೇರಿ, ತಾ‌ನ್ ರಕ್ಷಿತ್ತುಕ್ಕೊಳ್ಳಮಾಟ್ಟಾಮೈಯೈಯರಿವಿತ್ತು, ನೀರಕ್ಷಿಕ್ಕವೇಣುಮೆನ್ರಪೇಕ್ಷಿತ್ತು, ರಕ್ಷ್ಯವಸ್ತುವೈ ಅವನ್‌ಪಕ್ಕಲಿಲೇ ಸಮರ್ಪಿತ್ತು, ತಾನ್ ನಿರ್ಭರನಾಯ್, ಭಯಮ್‌ಕೆಟ್ಟು, ಮಾರ್ಪಿಲೇ ಕೈವೈತ್ತುಕ್ಕೊಂಡು ಕಿಡನ್ದುರಙ್ಗಕ್ಕಾಣಾನಿನ್ರೋಮಿರೇ.

ದ್ವಯೇ ಅಙ್ಗಾಙ್ಗೀನಾಮನುಸನ್ಧಾನಪ್ರಕಾರಃ, ಶಂಕಾಪಂಚಕಂ, ತನ್ನಿವೃತ್ತಿ ಪ್ರಕಾರಶ್ಚ.

ಇಕ್ಕಟ್ಟಳೈಯೆಲ್ಲಾಮ್ ಕ್ರಿಯಮಾಣಾರ್ಥ ಪ್ರಕಾಶಕಮಾನ ದ್ವಯಾಖ್ಯಮನ್ತ್ರತ್ತಿಲೇ ಯನುಸನ್ಧಿಕ್ಕುಮ್‌ಪಡಿ ಎಙ್ಗನೇಯನ್ನಿಲ್ ? ಸಾರ್ವಜ್ಞ್ಯ ಸರ್ವಶಕ್ತಿಯುಕ್ತನಾಯ್, ಕರ್ಮಾನುರೂಪ ಫಲಪ್ರದನಾಯ್, ಸರ್ವೋಪಕಾರ ನಿರಪೇಕ್ಷನಾಯ್, ಕ್ಷುದ್ರ ದೇವತೆಹಳೈ ಪ್ಪೋಲೆಕ್ಷಿಪ್ರಕಾರಿಯನ್ರಿಕ್ಕೇ

ಲೋಕ ದೃಷ್ಟಾಂತದಲ್ಲಿಯೂ ಅಂಗಾಂಗಿಗಳ ಅವಿನಾಭೂತತ್ವ

ಇಪ್ಪಡಿಮಟ್ರುಮುಳ್ಳ ಇತ್ಯಾದಿ - ಹೀಗೆ ಕಾಕ, ಕಪೋತ, ಗಜೇಂದ್ರಾದಿಗಳು ಮಾಡಿದ ಶರಣಾಗತಿ ಪ್ರಕರಣಗಳಲ್ಲಿಯೂ ಲೌಕಿಕ ದ್ರವ್ಯಗಳನ್ನು ರಕ್ಷಿಸಲು ಮಿತ್ರರ ರಕ್ಷಣೆಗೋಸ್ಕರ ಇಡುವ ಸಂದರ್ಭಗಳಲ್ಲಿಯೂ, ಈ ಅಂಗಾಂಗಿಗಳ ಆವಶ್ಯಕತೆಯು ಸಂಕ್ಷೇಪ ವಿಸ್ತಾರ ರೂಪದಲ್ಲಿ ಕಾಣಬಹುದು ಹೇಗೆಂದರೆ **ತಾ‌ನ್ ರಕ್ಷಿಕ್ಕಮಾಟ್ಟಾದ ದೊರುವಸ್ತುವೈ** ಇತ್ಯಾದಿ – ತಾನು ರಕ್ಷಿಸಿಕೊಳ್ಳಲಾಗದ ಒಂದು ಪದಾರ್ಥವನ್ನು ರಕ್ಷಿಸಲು ಸಮರ್ಥನಾದವನಲ್ಲಿ ಸಮರ್ಪಿಸುವಾಗ, ಆ ರಕ್ಷಕನಲ್ಲಿ ಅನುಕೂಲಾಭಿಸಂಧಿಯುಳ್ಳವನಾಗಿ, (ಆನುಕೂಲ್ಯ ಸಂಕಲ್ಪ), ಪ್ರತಿಕೂಲಾಭಿಸಂಧಿಯನ್ನು ಬಿಟ್ಟು, (ಪ್ರಾತಿಕೂಲ್ಯವರ್ಜನ), ಇವನು ರಕ್ಷಿಸಲು ಸಮರ್ಥನು, ನಾವು ಪ್ರಾರ್ಥಿಸಿದರೆ ರಕ್ಷಿಸುವನು ಎಂದು ವಿಶ್ವಾಸ ಯುಕ್ತನಾಗಿ, ತಾನು ಈ ಪದಾರ್ಥವನ್ನು ರಕ್ಷಿಸಲು ಅಸಮರ್ಥನು ಎಂಬುದನ್ನು ತಿಳಿಸಿ (ಆಕಿಂಚನ್ಯ-ಕಾರ್ಪಣ್ಯ) ನೀನು ಈ ಪದಾರ್ಥವನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿ (ಗೋಪ್ತೃತ್ವವರಣ) ರಕ್ಷ್ಯ ವಸ್ತುವನ್ನು ಅವನಲ್ಲಿ ಸಮರ್ಪಿಸಿ (ಭರಸಮರ್ಪಣ) ತಾನು ನಿರ್ಭರನಾಗಿ ಭಯವಿಲ್ಲದೆ ಎದೆಯ ಮೇಲೆ ಕೈಯಿಟ್ಟು ಕೊಂಡ ಮಲಗಿ ನಿದ್ರಿಸುವುದನ್ನು ಲೋಕದಲ್ಲಿ ನೋಡುತ್ತೇವೆಯಲ್ಲವೇ. ಪದಾರ್ಥವು ತನ್ನಲ್ಲೇ ಇದ್ದರೆ ಅದನ್ನೇ ಹಿಡಿದು ಕೊಂಡು ಇರಬೇಕಾಗುತ್ತದೆ ಅನ್ಯರಲ್ಲಿ ಅದನ್ನು ಸಮರ್ಪಿಸಿದ ನಂತರ ನಿರ್ಭರನಾಗಿಯೂ ನಿರ್ಭಯನಾಗಿಯೂ ಸ್ವಚ್ಛಂದವಾಗಿ ಎದೆಯ ಮೇಲೆ ಕೈಯಿಟ್ಟುಕೊಂಡು ನಿದ್ರಿಸಬಹುದು, ಎಂಬುದು ಹೇಳಲ್ಪಟ್ಟಿತು ಹೀಗೆ ಲೌಕಿಕ ದ್ರವ್ಯ ಸಮರ್ಪಣಗಳಲ್ಲಿಯೂ ಈ ಅಂಗಾಂಗಿಗಳು ಆವಶ್ಯಕವೆಂಬುದು ನಿರೂಪಿಸಲ್ಪಟ್ಟಿತು ಈ ಐದು ಅಂಗಗಳೂ ಅಂಗಿನಿಷ್ಪತ್ತಿಗೆ ಸನ್ನಿಪತ್ಯೋಪಕಾರಕಗಳು-ಸಂಭಾವಿತ ಸ್ವಭಾವಗಳಲ್ಲ, ಎಂಬುದು ಹೃದಯ

ದ್ವಯ ಮಂತ್ರದಲ್ಲಿ ಅಂಗಾಂಗಿಗಳ ಅನುಸನ್ಧಾನ ಪ್ರಕಾರ – ಶಂಕಾಪಂಚಕಗಳ ನಿವೃತ್ತಿ ಪ್ರಕಾರ.

ಇಕ್ಕಟ್ಟಳೈಯೆಲ್ಲಾಂ–ಈ ಅಂಗಾಂಗಿಗಳನ್ನೆಲ್ಲಾ, **ಕ್ರಿಯಮಾಣಾರ್ಥ ಪ್ರಕಾಶಮಾನ** ಇತ್ಯಾದಿ-ಅನುಷ್ಠಿಸಿ ಬರುವ ಅರ್ಥವನ್ನು ಪ್ರಕಾಶಪಡಿಸುವ ದ್ವಯ ಮಂತ್ರದಲ್ಲಿ, ಅನುಸಂಧಿಸುವುದು ಹೇಗೆಂದರೆ. ಶ್ರೀಮಚ್ಛಬ್ದದಲ್ಲಿಯೂ ನಾರಾಯಣ ಶಬ್ದದಲ್ಲಿಯೂ ಅರ್ಥವಾಗಿ ಆನುಕೂಲ್ಯ ಸಂಕಲ್ಪವೂ ಪ್ರಾತಿಕೂಲ್ಯವರ್ಜನವೂ ಅನುಸಂಧೇಯ. ಬಾಕಿ ಅಂಗಗಳ ಅನುಸಂಧೇಯ ಸ್ಥಳಗಳನ್ನು ಮುಂದೆ ಹೇಳುವವರಾಗಿ, ಶ್ರೀಮಚ್ಛಬ್ದಕ್ಕೂ, ನಾರಾಯಣ ಶಬ್ದಕ್ಕೂ ಇರುವ ಮಹತ್ವವನ್ನು ತಿಳಿಸುತ್ತಾರೆ. ಅದಾಗಿ ಪ್ರಪತ್ತಿಯಿಂದ ಮೋಕ್ಷವು ಲಭಿಸುತ್ತದೆಯೇ ಎಂಬ

ಸರ್ವಲೋಕಗಳಿಗೂ ಶರಣ್ಯನಾಗಿ, ಮಹಾತ್ಮನಾದ ಶ್ರೀರಾಘವನಲ್ಲಿ ಮಾಂ–ನನ್ನನ್ನು–(ಸ್ವರೂಪ ಸಮರ್ಪಣ), ಉಪಸ್ಥಿತಮ್ ಕೈಂಕರ್ಯಕ್ಕಾಗಿ ಬಂದಿರುವ (ಫಲಸಮರ್ಪಣ), ವಿಭೀಷಣಂ ನಿವೇದಯತ. ವಿಭೀಷಣನಾದ ನನ್ನ ಭರವನ್ನು ಸಮರ್ಪಿಸಿರಿ (ಭರ ಸಮರ್ಪಣ)

ಯಿರುಪ್ಪಾನಾಯ್, ಸಮಾಧಿಕ ದರಿದ್ರನಾನ ಸರ್ವೇಶ್ವರ್ಗ, ಅನನ್ತಾಪರಾಧಙ್ಗಳೈಯುಡೈಯಾರ್ಕ್ಕು ಅಭಿಗಮ್ಯನಾಹೈಯುಮ್, ಪ್ರಾಪ್ತಿ ವಿರೋಧಿಯಾನ ಅನನ್ತಾಪರಾಧಙ್ಗಳೈಯುಡೈಯಾರ್ಕ್ಕಳವಿಲ್ಲಾದ ಫಲತ್ತೈ ತ್ತರುಹೈಯುಮ್, ಅಲ್ಪ ವ್ಯಾಪಾರತ್ತುಕ್ಕು ತ್ತರುಹೈಯುಮ್, ತ್ವರಿಯಾದೇ ತರುಹೈಯುಮ್ ತರಮ್ ಪಾರಾದೇ ತರುಹೈಯುಮ್, ಕೂಡುಮೋವೆನ್ನಿಂಗ ಶಙ್ಕೈಹಳುಕ್ಕು, ನಿವರ್ತ್ತಕಙ್ಗಳುಮಾಯ್ ಯಥಾಸಮ್ಭವಮುಪಾಯತ್ವ ಪ್ರಾಪ್ಯತ್ವೋಪಯುಕ್ತಙ್ಗಳುಮಾಯಿರುನ್ದುಳ್ಳ ಪುರುಷಕಾರಸಂಬಂಧ ಗುಣವ್ಯಾಪಾರ ಪ್ರಯೋಜನವಿಶೇಷಙ್ಗಳಾಹಿರ ಶೇಷಿಯನುಡೈಯ ಆಕಾರಙ್ಗಳೈಪ್ಪೊದಿನ್ದು ಕೊಂಡಿರುಕ್ಕಿರ ಶ್ರೀ ಮಚ್ಛಬ್ದತ್ತಿಲುಮ್ ನಾರಾಯಣ ಶಬ್ದತ್ತಿಲುಮ್ ಅರ್ಥಮಾಹ ಆನುಕೂಲ್ಯಸಙ್ಕಲ್ಪಮುಮ್ ಪ್ರಾತಿಕೂಲ್ಯವರ್ಜನಮುಮ್, ಅನುಸನ್ಧೇಯಮಾಹಕ್ಕಡವದು,

ಇಪ್ಪಡಿ ವಿಶಿಷ್ಟನಾನ ಸ್ವಾಮಿಯೈ ಕ್ಕಾಟ್ಟುಗಿರ ಶಬ್ದಙ್ಗಳ್ ಔಚಿತ್ಯತ್ತಾಲೇ ಯುವನ್ತಿರತ್ತಿಲ್ ಪ್ರಾಪ್ತಮಾನ ಅಭಿಮತಾನುವರ್ತನ ಸಙ್ಕಲ್ಪತ್ತೈಯುಮ್ ಅನಭಿಮತ ನಿವರ್ತನತ್ತೈಯುಮ್ ಪ್ರಕಾಶಿಪ್ಪಿಕ್ಕಿನ್ರನ.

ವಿಷಯದಲ್ಲಿ ಐದು ಶಂಕೆಗಳನ್ನು ಎತ್ತಿ ತೋರಿಸಿ, ಅವುಗಳಿಗೆ ಸಮಾಧಾನವನ್ನು ಹೇಳುವವರಾಗಿ ಶ್ರೀಮತ್ ಶಬ್ದದಲ್ಲಿಯೂ, ನಾರಾಯಣ ಶಬ್ದದಲ್ಲಿಯೂ ಅಡಗಿರುವ ಗುಣವಿಶೇಷಗಳನ್ನು ನಿರೂಪಿಸಲು **ಸಾರ್ವಜ್ಞ್ಯಸರ್ವಶಕ್ತಿಯುಕ್ತನಾಯ್** ಎಂದಾರಂಭಿಸಿ ಅನುಗ್ರಹಿಸುತ್ತಾರೆ.

ಶಂಕಾ ಪಂಚಕಗಳು :—

ಆದಾಗಿ (1) ಭಗವಂತನು ಸರ್ವಜ್ಞನು ಸರ್ವಶಕ್ತಿಯುಕ್ತನು ನಮ್ಮ ಅಪರಾಧಗಳನ್ನೆಲ್ಲಾ ತಿಳಿಯ ತಕ್ಕವನು ಅವುಗಳಿಗೆ ತಕ್ಕ ಶಿಕ್ಷೆಯನ್ನು ಕೊಡಲು ಅರ್ಹನು ಹಾಗಿರುವಾಗ ನಮಗೆ ಹೇಗೆ ಅಭಿಗಮ್ಯನಾಗುತ್ತಾನೆ. ನಮ್ಮಲ್ಲಿ ಬಹಳ ಆಗ್ರಹವಿರುವುದರಿಂದ ನಮ್ಮನ್ನು ಹತ್ತಿರಕ್ಕೆ ಬರಲು ಅನುಮತಿಸುತ್ತಾನೆಯೇ ಎಂಬುದು,

(2) ಅವನು ಕರ್ಮಾನುರೂಪವಾಗಿ ಫಲಪ್ರದನು. ಹಾಗಿರುವಾಗ ಆಯಾಯಾ ಕರ್ಮಗಳಿಗೆ ತಕ್ಕ ಫಲವನ್ನು ಕೊಡದೆ, (ಪುಣ್ಯ ಕರ್ಮಗಳಿಗೆ ಸ್ವರ್ಗಾದಿ ಸುಖ, ಪಾಪ ಕರ್ಮಗಳಿಗೆ ನರಕಾದಿಶಿಕ್ಷೆ) ಪ್ರಾಪ್ತಿ ವಿರೋಧಿಯಾದ ಅನಂತಾಪರಾಧಗಳನ್ನು ಕ್ಷಮಿಸಿ (ಸ್ವರ್ಗ ಸುಖವೂ ಮೋಕ್ಷ ವಿರೋಧಿಯಾದ್ದರಿಂದ ಪಾಪರೂಪವಾದದ್ದು) ಹೇಗೆ ಎಲ್ಲೆ ಇಲ್ಲದ ಮೋಕ್ಷ ಫಲವನ್ನು ಕೊಡುತ್ತಾನೆ.

(3) ಅವನು ಅವಾಪ್ತ ಸಮಸ್ತ ಕಾಮನಾದ್ದರಿಂದ ಸರ್ವೋಪಕಾರ ನಿರಪೇಕ್ಷನು. ಹಾಗಿರುವಾಗ ನಾವು ಮಾಡುವ ಅಲ್ಪ ವ್ಯಾಪಾರದಿಂದ ಅವನಿಗೆ ಉಂಟಾಗುವ ಪ್ರಯೋಜನವೇನು. ಈ ಅಲ್ಪವ್ಯಾಪಾರಕ್ಕೆ ಅನಂತಫಲ ರೂಪವಾದ ಮೋಕ್ಷವನ್ನು ಕೊಡುವುದು ಹೇಗೆ.

(4) ಕ್ಷುದ್ರ ದೇವತೆಗಳು ಶೀಘ್ರಫಲಪ್ರದಗಳು. ಭಗವಂತನು **ಕ್ಷಿಪ್ರಕಾರಿಯನ್ರಿಕ್ಕೇ**-ಶೀಘ್ರವಾಗಿ ಫಲವನ್ನು ಕೊಡುವವನಲ್ಲ. ಹಾಗಿರುವಾಗ ನಾವು ಅಪೇಕ್ಷಿಸುವ ಫಲವನ್ನು **ತ್ವರಿಯಾದೇ**–ವಿಳಂಬಿಸದೇ ಹೇಗೆ ಕೊಟ್ಟಾನು.

(5) ಸಮಾಧಿಕ ದರಿದ್ರನಾದ – ಅಂದರೆ ತನಗೆ ಸಮರೂ ಮೇಲಾದವರೂ ಯಾರೂ ಇಲ್ಲದೆ ಇರುವ ಭಗವಂತನು, ಅನಂತಾಪರಾಧಗಳನ್ನು ಮಾಡಿದ ನಮಗೆ ಹೇಗೆ **ತರಂಪಾರಾದೇ**–ತಾರತಮ್ಯವಿಲ್ಲದೆ ಫಲವನ್ನು ಕೊಟ್ಟಾನು. (317–318ನೇ ಪುಟಗಳಲ್ಲಿ ಇವುಗಳಿಗೆ ಸಮಾಧಾನವನ್ನು ಹೇಳಿರುತ್ತದೆ.)

ಕೂಡುಮೋವೆನ್ನಿಂಗ ಶಂಕೈಹಳುಕ್ಕು–ಇವುಗಳು ಸಂಭಾವಿತವೇ ಎಂಬ ಸಂದೇಹಗಳಿಗೆ, ಪರಿಹಾರ ರೂಪಗಳಾಗಿರುವ–ಯಥಾಸಂಭವ ಉಪಾಯತ್ವ, ಪ್ರಾಪ್ಯತ್ವೋಪಯುಕ್ತಗಳಾದ-ಪುರುಷಕಾರವು ಉಪಾಯತ್ವಕ್ಕೆ ಉಪ

ಯುಕ್ತವಾದದು. ಸಂಬಂಧ ಗುಣಗಳು ಉಪಾಯತ್ವ ಪ್ರಾಪ್ಯತ್ವೋಪಯುಕ್ತಗಳು. ಪುರುಷಕಾರ, ಸಂಬಂಧ, ಗುಣ, ವ್ಯಾಪಾರ ಪ್ರಯೋಜನ ವಿಶೇಷಗಳಾದ, ಶೇಷಿ ದಂಪತಿಗಳ ಆಕಾರಗಳನ್ನು ಶ್ರೀಮಚ್ಛಬ್ದ ನಾರಾಯಣ ಶಬ್ದಗಳು ತನ್ನಲ್ಲಿ ಅಡಗಿಸಿಕೊಂಡಿರುವುವು.

ಅನುಕೂಲ್ಯಸಂಕಲ್ಪ ಪ್ರಾತಿಕೂಲ್ಯ ವರ್ಜನ ಅನುಸಂಧಾನ ಸ್ಥಳ

ಶ್ರೀಮಚ್ಛಬ್ದತ್ತಿಲುಮ್ ನಾರಾಯಣ ಶಬ್ದತ್ತಿಲುಮ್ – ಇತ್ಯಾದಿ ಶ್ರೀಮಚ್ಛಬ್ದದಲ್ಲಿಯೂ, ನಾರಾಯಣ ಶಬ್ದದಲ್ಲಿಯೂ ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳನ್ನು **ಅರ್ಥಮಾಹ**-ಅರ್ಥದಿಂದ ಉಂಟಾಗುವುದಾಗಿ ಅನುಸಂಧಾನ ಮಾಡಬೇಕು. **ಇಪ್ಪಡಿ ವಿಶಿಷ್ಟನಾನ** ಇತ್ಯಾದಿ - ಹೀಗೆ ಲಕ್ಷ್ಮೀ ವಿಶಿಷ್ಟನಾದ ಮತ್ತು ಪುರುಷಕಾರ ಸಂಬಂಧ ಗುಣ ವ್ಯಾಪಾರ ಪ್ರಯೋಜನಗಳಿಂದ ಕೂಡಿದ ಸ್ವಾಮಿಯಾದ ನಾರಾಯಣನನ್ನು ತೋರಿಸುವ ಶ್ರೀಮತ್ ಶಬ್ದ, ನಾರಾಯಣ ಶಬ್ದಗಳು **ಔಚಿತ್ಯತ್ತಾಲೇ**–ಸ್ವಾಮಿಯ ವಿಷಯದಲ್ಲಿ ದಾಸನಾದ ಜೀವನು ನಡೆದುಕೊಳ್ಳಬೇಕಾದದು ಉಚಿತವಾದ್ದರಿಂದ, **ಅವನ್‌ತಿರತ್ತಿಲ್**-ಅವನ ವಿಷಯದಲ್ಲಿ ಪ್ರಾಪ್ಯವಾದ, **ಅಭಿಮತಾನುವರ್ತನ ಸಂಕಲ್ಪ**–ಇಷ್ಟಾನುಸಾರ ನಡೆಯುವೆನೆಂಬ ಆನುಕೂಲ್ಯ ಸಂಕಲ್ಪವನ್ನೂ, ಮತ್ತು **ಅನಭಿಮತನಿವರ್ತನ**-ಪ್ರಾತಿಕೂಲ್ಯ ವರ್ಜನವನ್ನೂ, ಪ್ರಕಾಶಪಡಿಸುತ್ತವೆ.

ಪುರುಷಕಾರ ಸಂಬಂಧಗುಣ ವ್ಯಾಪಾರ ಪ್ರಯೋಜನ ವಿಶೇಷಂಗಳಾಹಿರ ಶೇಷಿಯಿನುಡೈಯ ಆಕಾರಂಗಳೈಪ್ಪೊದಿಂದು ಕೊಂಡಿರುಕ್ಕಿರ ಶ್ರೀಮಚ್ಛಬ್ದತ್ತಿಲುಮ್ ನಾರಾಯಣ ಶಬ್ದತ್ತಿಲುಮ್ ಇತಿ –

ಇಲ್ಲಿ ಪುರುಷಕಾರ ಸಂಬಧಗುಣ ವ್ಯಾಪಾರ ಪ್ರಯೋಜನವೆಂಬುದು ದ್ವಂದ್ವ ಸಮಾಸಪದ. ಇದರ ಕೊನೆಯಲ್ಲಿ ಹೇಳಿರುವ ವಿಶೇಷ ಶಬ್ದವು, ಒಂದೊಂದರಲ್ಲಿಯೂ ಅನ್ವಯಿಸುತ್ತದೆ ಅಂದರೆ ಪುರುಷಕಾರ ವಿಶೇಷ, ಸಂಬಂಧ ವಿಶೇಷ, ಗುಣ ವಿಶೇಷ, ವ್ಯಾಪಾರ ವಿಶೇಷ, ಪ್ರಯೋಜನ ವಿಶೇಷವೆಂದರ್ಥ ಇವುಗಳನ್ನು ಆಚಾರ್ಯರು ತಾವೇ ವ್ಯಾಖ್ಯಾನ ಮಾಡುವವರಿದ್ದಾರೆ.

ಇಲ್ಲಿ ಶ್ರೀ ಶಬ್ದ ನಾರಾಯಣ ಶಬ್ದಗಳೆರಡರಲ್ಲಿಯೂ ಶಂಕಾ ಪಂಚಕ ನಿವರ್ತಕವಾದ ಮಹಾವಿಶ್ವಾಸಕ್ಕೆ ಕಾರಣಗಳಾದ ಪ್ರಾಪಕತ್ವ ಪ್ರಾಪ್ಯತ್ವೋಪಯುಕ್ತಗಳಾದ, ಪರಮ ಶೇಷಿಯ ಎಲ್ಲಾ ಆಕಾರಗಳೂ ಅಡಗಿವೆ. ಈ ಆಕಾರಗಳು ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳಿಗೆ ಕಾರಣ ಭೂತಗಳು. ಶ್ರೀ, ನಾರಾಯಣರಿಬ್ಬರಲ್ಲಿಯೂ ಈ ಗುಣಗಳಿವೆ ಎಂಬುದನ್ನು ತಿಳಿಯಪಡಿಸಲು ದಿವ್ಯದಂಪತಿ ಸಾಧಾರಣವಾದ **"ಶೇಷಿ"** ಶಬ್ದದಿಂದ ಶರಣ್ಯ ತತ್ವವು ಅನುಗ್ರಹಿಸಲ್ಪಟ್ಟಿದೆ. ಪುರುಷಕಾರ ವಿಶೇಷವು ಶ್ರೀ ಶಬ್ದದಲ್ಲಿ ಮಾತ್ರಗರ್ಭಿತವು. ಸಂಬಂಧ, ಗುಣ, ವ್ಯಾಪಾರ, ಪ್ರಯೋಜನ ವಿಶೇಷಗಳು, ಶ್ರೀಮನ್ನಾರಾಯಣ ಶಬ್ದಗಳೆರಡರಲ್ಲಿಯೂ ಸಮಾನವಾಗಿ ಅನುಸಂಧೇಯಗಳೆಂಬುದು ಆಚಾರ್ಯರ ಹೃದಯ ಆದ್ದರಿಂದಲೇ ಅನಂತರ **ಇಪ್ಪಡಿ ವಿಶಿಷ್ಟನಾದ ಸ್ವಾಮಿಯೈಕ್ಕಾಟ್ಟುಹಿರ ಶಬ್ದಂಗಳ್**– ಎಂದು ಅನುವಾದ ಮಾಡಲ್ಪಟ್ಟಿದೆ **ಶಬ್ದಂಗಳ್**– ಶ್ರೀ, ಮತ್ತು ನಾರಾಯಣ ಶಬ್ದಗಳು. "ವಿಶಿಷ್ಟಾಳಾನ ಸ್ವಾಮಿಗಳೈ," ಎಂದು ಹೇಳಬೇಕಲ್ಲವೇ, **ವಿಶಿಷ್ಟನಾದ ಸ್ವಾಮಿಯೈ** ಎಂದು ಹೇಳಿರುವುದು ಸರಿಯೇ ಎಂದರೆ, ಶೇಷಿತತ್ವವು ವಿಶಿಷ್ಟವೇಷಣ ಒಂದೇ ಎಂಬುದನ್ನು ತಿಳಿಸಲು, ಸ್ವಾಮಿಯೈ – ಶೇಷಿಯೈ ಎಂದು ಏಕವಚನ. **"ಶಬ್ದಂಗಳ್"** ಎಂಬ ದ್ವಿವಚನವು ತತ್ವಗಳು ಎರಡು ಎಂಬುದನ್ನು ತೋರಿಸುತ್ತದೆ. ಶೇಷಿತ್ವಾಕಾರೇಣ ವಿಶೇಷಣ ವಿಶಿಷ್ಟವಾಗಿ ಒಂದು ಎಂಬುದು ತಾತ್ಪರ್ಯ. **ಇಪ್ಪಡಿವಿಶಿಷ್ಟನಾನ** – ಮೇಲೆ ಹೇಳಿದ ಪುರುಷಕಾರ ಸಂಬಂಧ ಗುಣ ವ್ಯಾಪಾರ ಪ್ರಯೋಜನ ವಿಶೇಷಗಳೂ, ಪ್ರಾಪಕತ್ವ, ಪ್ರಾಪ್ಯತ್ವಗಳಿಗೆ ಉಪಯುಕ್ತಗಳಾದ ಸರ್ವಜ್ಞತ್ವ, ಸರ್ವಶಕ್ತಿತ್ವ, ಪರಮ ಕಾರುಣಿಕತ್ವ ವಾತ್ಸಲ್ಯಾದಿಗಳೂ ವಿವಕ್ಷಿತ. **ಅವನ್‌ತಿರತ್ತಿಲ್** ಇತ್ಯಾದಿ ಅವನ್‌ತಿರತ್ತಿಲ್ – ಲಕ್ಷ್ಮೀವಿಶಿಷ್ಟನಲ್ಲಿ – **ಅಭಿಮತಾನುವರ್ತನ ಸಂಕಲ್ಪತ್ತೈಯುಮ್** – ಆನುಕೂಲ್ಯ ಸಂಕಲ್ಪವನ್ನು **ಅನಭಿಮತನಿವರ್ತನತ್ತೈ**

ಯುವನ್ – ಪ್ರಾತಿಕೂಲ್ಯ ವರ್ಜನವನ್ನು ಪ್ರಕಾಶಪಡಿಸುತ್ತವೆ. ಇದು ಉಚಿತವಾದದ್ದು. ಇಲ್ಲಿ ಶಬ್ದಂಗಳ್ ಎಂದು ದ್ವಿವಚನವು ಹೇಳಿರುವುದರಿಂದ ಈ ಅನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳು ಲಕ್ಷ್ಮೀನಾರಾಯಣ ರಿಬ್ಬರಲ್ಲಿಯೂ ವಿವಕ್ಷಿತ. ಇದಕ್ಕೆ ನಿಬಂಧನಗಳಾದ, ಸಂಬಂಧ ಗುಣ ವ್ಯಾಪಾರ ಪ್ರಯೋಜನ ವಿಶೇಷಗಳು ಲಕ್ಷ್ಮೀ ನಾರಾಯಣರಿಬ್ಬರಲ್ಲಿಯೂ ಇವೆ.

ಹಾಗಾದರೆ "ನಾರಾಯಣ" ಶಬ್ದದಲ್ಲಿ ಯಥಾಪೇಕ್ಷಿತವಾಗಿ ಪ್ರಾಪಕತ್ವ, ಪ್ರಾಪ್ಯತ್ವಾದಿಗುಣಗಳೂ ಅನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನ ಮಹಾವಿಶ್ವಾಸಾದಿಗಳಿಗೆ ನಿಬಂಧನಗಳಾದ ಆಕಾರಗಳೂ ಗರ್ಭಿತವಾಗಿವೆಯೆಂದು ಹೇಳ ಬಹುದಾದ ರೀತಿಯಲ್ಲಿ, ಶಂಕಾಪಂಚಕಗಳನ್ನು ನಿವರ್ತಿಸುವ, ಮತ್ತು ಮಹಾವಿಶ್ವಾಸಾದಿಗಳಿಗೆ ಪ್ರಯೋಜಕಗಳಾದ ಅನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳಿಗೆ ಕಾರಣಗಳಾದ, ಪ್ರಾಪಕತ್ವ, ಪ್ರಾಪ್ಯತ್ವಗಳಿಗೆ ಉಪಯುಕ್ತಗಳಾದ ಆಕಾರಗಳು ಶ್ರೀ ಶಬ್ದದಲ್ಲಿಯೂ ಗರ್ಭಿತವಾಗಿಯೇ ಎಂದರೆ ಇವೆ ಹೇಗೆಂದರೆ, ಶ್ರೀಯತೇ, ಶ್ರಯತೇ ಎಂಬ ವ್ಯುತ್ಪತ್ತಿಗಳಿಂದ ಧಾರಕತ್ವ, ವ್ಯಾಪಕತ್ವಗಳು ಲಭ್ಯವಾಗುತ್ತವೆ, "ಶ್ರೀಯತೇ"– ಎಲ್ಲಾ ಚೇತನಾ ಚೇತನಗಳಿಂದ ಆಶ್ರಯಿಸಲ್ಪಟ್ಟವಳಾಗಿ ಅವುಗಳನ್ನು ಧರಿಸಿದ್ದಾಳೆಂದು ಧಾರಕತ್ವವು ಸಿದ್ಧ. "ಶ್ರಯತೇ" ಎಲ್ಲಾ ಚೇತನಾ ಚೇತನ ಗಳಲ್ಲಿಯೂ ಅಂತಃಪ್ರವಿಷ್ಟಳಾಗಿದ್ದಾಳೆಂದು ವ್ಯಾಪಕತ್ವವು ಲಭ್ಯ. ಇವುಗಳಿಂದಾಗಿ ಶರೀರಾತ್ಮಭಾವವು ತಿಳಿಯುತ್ತದೆ. "ಶೃಣಾತಿ", ಶ್ರೀಣಾತಿ" ಎಂಬ ಎರಡು ಶಬ್ದಗಳಲ್ಲಿ, "ಶೃಣಾತಿ" – ಸರ್ವಾನಿಷ್ಟಗಳನ್ನೂ ನಿವಾರಿಸುತ್ತಾಳೆ ಶ್ರೀಣಾತಿ– ಪರಮ ಪುರುಷಾರ್ಥವನ್ನು ಕೊಟ್ಟು, ರಕ್ಷಿಸುತ್ತಾಳೆ, ತನ್ನ ಮತ್ತು ತನ್ನ ವಲ್ಲಭನ ಸೇವೆಯಲ್ಲಿ ತೊಡಗಿಸು ವುದರಿಂದ, ಶ್ರೀ ಶಬ್ದವು ನಾರಾಯಣ ಶಬ್ದ ಸಮಾನಾರ್ಥಕ

ಇಲ್ಲಿಯ ರಹಸ್ಯವೇನೆಂದರೆ, ಶ್ರೀ ವಿಶಿಷ್ಟನೇ ಮೋಕ್ಷಕ್ಕೆ ಉಪಾಯಭೂತನು, ಕೇವಲ ನಾರಾಯಣನಲ್ಲ ಆದ್ದರಿಂದ ಭರಸ್ವೀಕಾರ ಪ್ರಾರ್ಥನಾನ್ವಿತವಾದ ಭರನ್ಯಾಸವು ಅಂಗಿ ಭೂತವಾಗಿದ್ದು ದಿವ್ಯ ಮಿಥುನ ಪ್ರತಿಸಂಬಂಧಿಕವು. ಅಂದರೆ ಲಕ್ಷ್ಮೀನಾರಾಯಣಾತ್ಮಕ, ವಿಶಿಷ್ಟವಾದ ದಂಪತಿಗಳನ್ನು ಉದ್ದೇಶಿಸಿ ಭರ ಸಮರ್ಪಣವನ್ನು ಮಾಡಬೇಕು. ಇಲ್ಲದಿದ್ದರೆ ಲಕ್ಷ್ಮಿಗೆ ಉಪಾಯತ್ವವು ಅನುಸಂಹಿತವಾಗುವುದಿಲ್ಲ, ಹಾಗೆಯೇ ಸ್ವರೂಪ ಸಮರ್ಪಣವೂ ಲಕ್ಷ್ಮೀ ನಾರಾಯಣರಿಬ್ಬರನ್ನೂ ಉದ್ದೇಶಿಸಿ ಮಾಡಬೇಕಾದದ್ದು. "ಅಸ್ಯಾ ಮಮಚ ಶೇಷಂ ಹಿ ವಿಭೂತಿರುಭಯಾತ್ಮಿಕಾ", "ಮಕಾರಸ್ತು ತಯೋರ್ದಾಸಃ," "ಉಭಯಾಧಿಷ್ಠಾನಂಚೈಕಂ ಶೇಷಿತ್ವಂ" ಎಂಬ ಪ್ರಮಾಣ ಸಂಪ್ರದಾಯ ವಚನಗಳು ಇಲ್ಲಿ ವಿವಕ್ಷಿತಗಳು. ಫಲಸಮರ್ಪಣವೂ ಸಹ ನಿರುಪಾಧಿಕ ಪರಮ ಶೇಷಿತ್ವ ಜ್ಞಾನ ಪ್ರಯೋಜ್ಯವಾಗಿ, ದಿವ್ಯದಂಪತಿ ಗಳನ್ನು ಉದ್ದೇಶಿಸಿಯೇ ಮಾಡಬೇಕು. ಹೀಗೆ ಪಾರಮಾರ್ಥಿಕವೂ ಯಥಾವಸ್ಥಿತವೂ ಆದ ಅಂಗಿ ಸ್ವರೂಪವು ವಿಶಿಷ್ಟ ಪರತತ್ವ ಭೂತ ಶರಣ್ಯದಂಪತಿಗಳನ್ನು ಪ್ರತಿಸಂಬಂಧಿಕವಾಗಿ (ಉದ್ದೇಶ್ಯವಾಗಿ) ಉಳ್ಳದ್ದಾಗಿರುವುದರಿಂದ, ಸನ್ನಿಪತ್ಯೋಪಕಾರಕಗಳಾದ – ಒಟ್ಟುಗೂಡಿ ಉಪಕಾರಕಗಳಾದ – ಅಂಗಗಳು ವಿಶಿಷ್ಟ ಪರತತ್ವ ಭೂತರಾದ ಶರಣ್ಯ ದಂಪತಿಗಳನ್ನೂ ಉದ್ದೇಶಿಸಿಯೇ ಅನುಷ್ಠಿಸಬೇಕಾದವು. ಇದಕ್ಕೆ ವಚನಗಳ ಬೆಂಬಲವೂ ಇದೆ ಯಾವುವೆಂದರೆ, "ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ । ಅತಸ್ತದಾನುಕೂಲ್ಯಂ ಮೇ ಕಾರ್ಯ ಮಿತ್ಯೇವ ನಿಶ್ಚಯಃ ॥ ಸ್ವಸ್ಯ ಸ್ವಾಮಿನಿ ವೃತ್ತಿರ್ಯಾ ಪ್ರಾತಿಕೂಲ್ಯಸ್ಯ ವರ್ಜನಮ್", ಎಂಬವು. ಚರಾಚರಾತ್ಮಕವಾದ ಪ್ರಾಣಿಗಳೆಲ್ಲವೂ ಭಗವಂತನಿಗೆ ಶರೀರಗಳು. ಆದ್ದರಿಂದ ಅವುಗಳಲ್ಲಿ ಅನುಕೂಲ ವೃತ್ತಿಯಿಂದರಬೇಕು. ಸ್ವಾಮಿಯಲ್ಲಿ ಅನುಕೂಲತ್ವ ವೃತ್ತಿಯೂ ಅದೇ. ಸ್ವಾಮಿಯಲ್ಲಿ ಪ್ರಾತಿಕೂಲ್ಯವರ್ಜನವೂ ತನ್ನ ವೃತ್ತಿ. ಇಲ್ಲಿ ಲಕ್ಷ್ಮೀ ವಿಶಿಷ್ಟ ಭಗವಂತನು ಉದ್ದೇಶ್ಯ. ಇದಕ್ಕೆ ವಚನಾಂತರವು ಸಹಕಾರಿ,

"ಅಂತಸ್ಥಿತಾಽಹಂ ಸರ್ವೇಷಾಂ ಭಾವಾನಾಮಿತಿ ನಿಶ್ಚಯಾತ್ ।

ಮಯೀವ ಸರ್ವಭೂತೇಷ್ವ ಪ್ಯಾನುಕೂಲ್ಯಂ ಸಮಾಚರೇತ್ ॥" ಎಂದು ಲಕ್ಷ್ಮೀ ತಂತ್ರದಲ್ಲಿ ಪ್ರಪತ್ತ್ಯ

ಶಙ್ಕಾ ಪಂಚಕ ನಿವೃತ್ತಿಪ್ರಕಾರ ಕಥನಂ.

ಇಪ್ಪುರುಷಕಾರಾದಿಹಳ್ಕೈನ್ದುಕ್ಕುಮ್, ವಿಶೇಷಙ್ಗಳಾವನ ? ಮರುಕ್ಕವೊಣ್ಣಾಮೈಯುಮ್ ಒಳ್ಗ್ರಿಕ್ಕವೊ (ಣ್ಣಾಮೈ)ಗ್ರಿಯಾಮೈಯುಮ್, ನಿರುಪಾಧಿಕ ಮಾಹೈಯುಮ್, ಸಹಕಾರಿಯೈಪ್ಪಾರ್ತ್ತಿರುಕ್ಕವೇಣ್ಡಾಮೈಯುಮ್, ತಣ್ಣಿಯರಾನ ಪಿರರುಡೈಯ ಪೇರೇತನ್ ಪೇರಾಹೈಯುಮ್. ಇವ್ವಿಶೇಷಂಗಳೈನ್ದಾಲುಮ್ ಶಂಕಾ ಪರಿಹಾರಮ್ ಪಿರನ್ದಪಡಿ ಎಙ್ಙನೇ ಎನ್ನಿಲ್,

---

ಧ್ಯಾಯದಲ್ಲ ಹೇಳಿದೆ ಆದಾಗಿ ನಾನು (ಲಕ್ಷ್ಮಿಯು) ಸರ್ವ ಪ್ರಾಣಿಗಳಲ್ಲಿಯೂ ಅಂತಪ್ರವಿಷ್ಟಳಾಗಿರುವುದರಿಂದ, ನನ್ನಲ್ಲಿಯೂ ನನಗೆ ಶರೀರಗಳಾದ ಪ್ರಾಣಿ ವರ್ಗಗಳಲ್ಲಿಯೂ ಅನುಕೂಲಾಚರಣವನ್ನು ಮಾಡಬೇಕು. ಶರೀರಕ್ಕೆ ಹಿಂಸೆಯು ಏರ್ಪಟ್ಟರೆ ಶರೀರಿ (ಆತ್ಮ)ಗೂ ಹಿಂಸೆಯಾಗುತ್ತದೆಯಾದ್ದರಿಂದ ಲಕ್ಷ್ಮಿಯನ್ನೂ ಅವಳ ಶರೀರ ಭೂತರಾದ ಪ್ರಾಣಿವರ್ಗಗಳನ್ನು ಹಿಂಸಿಸಬಾರದು ಎಂಬುದು ತಾತ್ಪರ್ಯ ಭಗವಂತನಿಗೆ ಪ್ರಕಾರ (ವಿಶೇಷಣ) ಭೂತೆಯಾದ ಲಕ್ಷ್ಮಿಯಲ್ಲಿ ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳನ್ನು ಹೇಳಿರುವುದರಿಂದ ಪ್ರಕಾರಿ(ವಿಶೇಷ್ಯ)ಯಾದ ಭಗವಂತನಲ್ಲಿಯೂ ಹಾಗೆಯೇ ವರ್ತಿಸಬೇಕೆಂಬುದು ವ್ಯಕ್ತ ಮುಂದೆಯೂ "ಪ್ರಿಯಾಯ ಮಮ ವಿಷ್ಣೋಶ್ಚ ದೇವದೇವಸ್ಯ ಶಾರ್ಙ್ಗಿಣಃ। ಉಪಸೀಷೀ ವೈದಿಕಾ ಚಾರಂ ಮನಸಾಪಿ ನಲಂಘಯೇತ್ ॥" ಎಂದು ನನ್ನ ಮತ್ತು ನನ್ನ ಪ್ರಿಯನಾದ ವಿಷ್ಣುವಿನ ಪ್ರೀತಿಗೋಸ್ಕರ ಬುದ್ಧಿವಂತನು ಮಾನಸಿಕವಾಗಿಯೂ ವೇದೋಕ್ತ ಆಚಾರಗಳನ್ನು ಅತಿಕ್ರಮಿಸಬಾರದು, ಎಂದು ಲಕ್ಷ್ಮೀನಾರಾಯಣರಿಬ್ಬರ ಪ್ರೀತಿಯನ್ನುದ್ದೇಶಿಸಿ ಹೇಳಿದೆ. ಆದ್ದರಿಂದ ಆನುಕೂಲ್ಯ ಸಂಕಲ್ಪವೂ ಪ್ರಾತಿಕೂಲ್ಯ ವರ್ಜನವೂ ಲಕ್ಷ್ಮೀನಾರಾಯಣರಿಬ್ಬರನ್ನೂ ಉದ್ದೇಶಿಸಿ ಅನುಷ್ಠಿಸಬೇಕಾದದ್ದು. "ಏವಂ ವಿಲಂಘಯನ್ ಮರ್ತ್ಯೋ ಮರ್ಯಾದಾಂ ವೇದನಿರ್ಮಿತಾಂ। ಪ್ರಿಯೋಽಪಿ ನಪ್ರಿಯೋಽಸೌ ಮೇ ಮದಾಜ್ಞಾವ್ಯತಿ ವರ್ತನಾತ್" ಎಂದು ಪ್ರಾತಿಕೂಲ್ಯ ವರ್ಜನವನ್ನು ಲಕ್ಷ್ಮಿಯಲ್ಲಿಯೂ ಮಾಡಬೇಕೆಂಬುದುಸ್ಪಷ್ಟ- "ವೇದ ನಿರ್ಮಿತವಾದ ಆಜ್ಞೆಯನ್ನು ಅತಿಕ್ರಮಿಸುವವನು ನನಗೆ ಪ್ರಿಯನಾಗುವುದಿಲ್ಲ"ವೆಂಬುದು ಅರ್ಥ. ಇದು (ಲಕ್ಷ್ಮೀತಂತ್ರದಲ್ಲಿ) ಲಕ್ಷ್ಮಿಯ ವಚನ ಹೀಗೆಯೇ ಲಕ್ಷ್ಮೀತಂತ್ರದಲ್ಲಿ ಅಧ್ಯಾಯಾಂತರ ಪ್ರಪತ್ತಿ ಪ್ರಕರಣದಲ್ಲಿ "ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯ ರೂಪಯಾ। ರಕ್ಷಕಸ್ಸರ್ವಸಿದ್ಧಾಂತೇ ವೇದಾಂತೇಷುಚ ಗೀಯತೇ ॥ ಎಂದು ಮಹಾವಿಶ್ವಾಸ ರೂಪವಾದ ಪ್ರಪತ್ತ್ಯಂಗವನ್ನು ಲಕ್ಷ್ಮೀವಿಶಿಷ್ಟನಾದ ಹೃಷೀಕೇಶನಲ್ಲಿ ಅನುಷ್ಠಿಸಬೇಕೆಂದು ಹೇಳಿದೆ. ಹೀಗೆ ಸಾಂಗ ಪ್ರಪದನಾನುಷ್ಠಾನಕ್ಕೆ ವಿಶಿಷ್ಟನಾದ ಶರಣ್ಯ ತತ್ವವು ಉದ್ದೇಶ್ಯ ಇವುಗಳನ್ನೆಲ್ಲಾ ಅಭಿಪ್ರಾಯದಲ್ಲಿಟ್ಟುಕೊಂಡೇ ಆರಂಭದಲ್ಲಿಯೇ, **"ಆನುಕೂಲ್ಯ ಸಂಕಲ್ಪತ್ತುಕ್ಕುಮ್ ಪ್ರಾತಿಕೂಲ್ಯ ವರ್ಜನತ್ತುಕ್ಕುಮ್ ನಿಬಂಧನಂ ಶ್ರಿಯಃಪತಿಯಾನ ಸರ್ವೇಶ್ವರನ್ನೈಪ್ಪಟ್ರ್"** ಎಂದು ಆಚಾರ್ಯರು ಅನುಗ್ರಹಿಸಿದ್ದಾರೆ. ಅಂಗಿಯ ಹಾಗೆ ಅಂಗಗಳ ಅನುಷ್ಠಾನದಲ್ಲಿಯೂ ಶ್ರೀ ವಿಶಿಷ್ಟ ನಾರಾಯಣನು ಉದ್ದೇಶ್ಯವೆಂಬುದು ತಾತ್ಪರ್ಯ,

ಶಂಕಾ ಪಂಚಕ ನಿವೃತ್ತಿ ಪ್ರಕಾರ

ಇಪ್ಪುರುಷಕಾರದಿಗಳ್ಕೈಂದುಕ್ಕುಮ್ ಇತ್ಯಾದಿ ಈ ಪುರುಷಕಾರಾದಿ ಐದು ಆಕಾರಗಳಿಗೆ ಏನು ವಿಶೇಷವೆಂದರೆ, ಸಾಪರಾಧಿಯಾದ ಚೇತನನು ಅಭಿಮುಖನಾಗಿ ನಿಂತುಕೊಂಡಾಗ, ಲಕ್ಷ್ಮಿಯ ಪುರುಷಕಾರದಿಂದ ಅವನನ್ನು ತಿರಸ್ಕರಿಸಲಾಗದಿರುವುದೂ, ಶೇಷ ಶೇಷಿಭಾವ **ಸಂಬಂಧ** ಮೂಲವಾದ ಸ್ವಾಭಾವಿಕವಾದ ಸ್ವಾಮಿದಾಸ **ಸಂಬಂಧ**ವನ್ನು ಕಳೆಯಬೇಕೆಂದರೂ ಕಳೆಯಲಾಗದಿರುವುದೂ, ಭಗವಂತನ ದಯಾವಾತ್ಸಲ್ಯಾದಿ ಗುಣಗಳು **ನಿರುಪಾಧಿಕಗಳು,** ಯಾವಕಾರಣವೂ ಇಲ್ಲದೆ ಚೇತನ ವಿಷಯದಲ್ಲಿ ಪ್ರಸರಿಸತಕ್ಕವು, ಭಗವಂತನ ವ್ಯಾಪಾರವು **ಸಹಕಾರಿ**ಯನ್ನು ಎದುರು ನೋಡುವುದಿಲ್ಲ. ಸೃಷ್ಟಿ ವ್ಯಾಪಾರ ಮೊದಲುಗೊಂಡು ಚೇತನೋದ್ಧಾರಣ ಪರ್ಯಂತ ವ್ಯಾಪಾರಗಳಿಗೆ ಬೇರೆ ಸಹಕಾರಿಯು ಬೇಕಿಲ್ಲದಿರುವುದು, **ತಣ್ಣಿಯರಾನ** ಇತ್ಯಾದಿ ಅತ್ಯಂತ ನೀಚನಾದ ಇತರನ, (ಜೀವನ) ಲಾಭವೇ ತನಗೆ ಲಾಭವೆಂದು ತಿಳಿದಿರುವುದು,' ಎಂಬವು **ಇವ್ವಿಶೇಷಂಗಳಂಚಾಲುಮ್–ಮರುಕ್ಕಒಣ್ಣಾಮೈ –** ಇತ್ಯಾದಿ

೧) ಸರ್ವಜ್ಞನಾಯ್ ಸರ್ವ ಶಕ್ತಿಯಾಯಿರುನ್ದಾನೇಯಾಹಿಲುಮ್, ಮರುಕ್ಕವೊಣ್ಣಾದ ಪುರುಷಕಾರ ವಿಶೇಷತ್ತಾಲೇ, ಅಂತಃಪುರ ಪರಿಜನ ವಿಷಯಿತ್ತಿರ್ಪ್ಪೋಲೇ ಅಭಿಗಂತವ್ಯತಾ ವಿರೋಧಿಹಳಾನ ಅಪರಾಧಙ್ಗಳೈಯೆಲ್ಲಾಮ್ ಕ್ಷಮಿತ್ತು, ಇವತ್ತಿಲ್ ೧) "ಅವಿಜ್ಞಾತಾ" ಎನ್ರುಪ್ಪಡಿ ನಿನ್ರು ಅಭಿಗಂತವ್ಯನಾಮ್

೨) ಕರ್ಮಾನುರೂಪ ಫಲಪ್ರದನೇ ಯಾಹಿಲುಮ್, ಇಪ್ಪ್ರಪತ್ತಿರೂಪ ವ್ಯಾಜತ್ತಾಲೇ ಪ್ರಸನ್ನನಾಯ್, ಸ್ವಾಮಿತ್ವ ದಾಸತ್ವ ಸಂಬಂಧೋಪಾಧಿಕನಾಯ್, ದಾಯಮ್‌ಪೋಲೇ ಸ್ವತಃ ಪ್ರಾಪ್ತಮಾನ ವಳವಿಲ್ಲಾದ ಫಲತ್ತೈಯುಮ್ ತರುಮ್.

೩) ಅವಾಪ್ತ ಸಮಸ್ತ ಕಾಮತ್ತೈಯಾಲೇ ಸರ್ವೋಪಕಾರ ನಿರಪೇಕ್ಷನೇಯಾಗಿಲುಮ್, ಅಲ್ಪ

ಐದು ವಿಶೇಷಗಳಿಂದ ಶಂಕಾ ಪರಿಹಾರವು ಆ ಂಟಾಗುವ ರೀತಿಯು ಹೇಗೆ ಎಂದರೆ, ಅದನ್ನು ಆಚಾರ್ಯರು **ಸರ್ವಜ್ಞನಾಯ್** ಇತ್ಯಾದಿ ವಾಕ್ಯಗಳಿಂದ ವಿವರಿಸುತ್ತಾರೆ ೧) ಭಗವಂತನು ಸರ್ವಜ್ಞನಾದ್ದರಿಂದ ಆಶ್ರಿತನಾಗಿ ಬರುವ ಚೇತನನ ಅನಂತಾಪರಾಧಗಳನ್ನು ತಿಳಿದಿರುತ್ತಾನೆ ಸರ್ವಶಕ್ತನಾದ್ದರಿಂದ, ಈ ಚೇತನನಿಗೆ ತಕ್ಕ ಶಿಕ್ಷೆಯನ್ನು ಕೊಡಲು ಶಕ್ತನು. ಹಾಗಿದ್ದರೂ ಮಹಾಲಕ್ಷ್ಮಿಯ ಪುರುಷಕಾರದಿಂದ (ಶಿಫಾರಿಸ್) ಆಶ್ರಿಸಲು ಬಂದ ಜೀವನನ್ನು ಅಂಗೀಕರಿಸುತ್ತಾನೆ. ಮಹಾಲಕ್ಷ್ಮಿಯು "ಈ ಚೇತನನು ನನ್ನನ್ನು ಆಶ್ರಯಿಸಿದ್ದಾನೆ. ನಿಮ್ಮಲ್ಲಿ ಶಿಫಾರಿಸ್ ಮಾಡುವಂತೆ ಕೇಳಿಕೊಂಡಿದ್ದಾನೆ ಲೋಕದಲ್ಲಿ ತಪ್ಪುಮಾಡದವರು ಯಾರಿದ್ದಾರೆ ಎಲ್ಲರೂ ತಪ್ಪಿತಸ್ಥರೇ. ಆದ್ದರಿಂದ ನಿಮ್ಮ ಮುಖವನ್ನು ತಿರುಗಿಸಿಕೊಳ್ಳದೆ ಚೇತನನನ್ನು ಅಂಗೀಕರಿಸಿ, ಎಂದು ತನ್ನ ವಲ್ಲಭನನ್ನು ಪ್ರಾರ್ಥಿಸುತ್ತಾಳೆ. ಭಗವಂತನು ಅವಳ ಪುರುಷಕಾರವನ್ನು ಅಂಗೀಕರಿಸದೆ ಇರಲಾರನು ಇದಕ್ಕೆ ದೃಷ್ಟಾಂತವನ್ನು **ಅಂತಃಪುರ ಪರಿಜನ ವಿಷಯತ್ತಿರ್ ಪೋಲೇ** ಎಂದು ಅನುಗ್ರಹಿಸುತ್ತಾರೆ ಅದಾಗಿ ರಾಜನನ್ನು ಇತರ ಜನರು ಸುಲಭವಾಗಿ ಬಂದ ನೋಡಲು ಶಕ್ಯವಲ್ಲವಾಗಿದ್ದರೂ ಅಂತಪ್ಪುರದಲ್ಲಿರುವ ಪಟ್ಟಮಹಿಷಿಯ ಕಡೆಯವರಿಗೆ ಸುಲಭವಾಗಿ ಬಂದು ನೋಡಲು ಶಕ್ಯನು. ಆ ರೀತಿಯಲ್ಲಿ ಲಕ್ಷ್ಮೀ ಪುರುಷಕಾರದಿಂದ ಮಹಾಪರಾಧಗಳನ್ನು ಮಾಡಿದ್ದಾಗ್ಯೂ **ಅಭಿಗಂತವ್ಯತಾ ವಿರೋಧಿಹಳಾನ ಅಪರಾಧಂಗಳೈ** ಇತ್ಯಾದಿ ಉಪಾಯ ವಿರೋಧಿ ಪಾಪಗಳನ್ನು ಕ್ಷಮಿಸಿ ತನ್ನಲ್ಲಿಗೆ ಜೀವನು ಬರುವುದಕ್ಕೆ ಅವಕಾಶವನ್ನು ಕೊಟ್ಟು **ಇವಟ್ರಿಲ್ ಅವಿಜ್ಞಾತಾ** ಇತ್ಯಾದಿ - ಜೀವನ ಪಾಪಗಳನ್ನು ತಿಳಿಯದವನ ಹಾಗೆ ಇದ್ದು ಇವನಿಗೆ ಅಭಿಗಂತ್ಯನಾಗುತ್ತಾನೆ – ತನ್ನಲ್ಲಿಗೆ ಬರುವಂತೆ ಅವಕಾಶವನ್ನು ಕೊಡುತ್ತಾನೆಂದರ್ಥ.

೨) **ಕರ್ಮಾನುರೂಪ ಫಲಪ್ರದನೇ ಯಾಹಿಲುಮ್** ಇತ್ಯಾದಿ ಭಗವಂತನು ಇತರ ಫಲಗಳನ್ನು ಕೊಡುವಾಗ ಸ್ವತಃ ಪ್ರವರ್ತಿಸದೆ, ಕರ್ಮಾನುರೂಪ ಫಲವನ್ನು ಕೊಡುತ್ತಾನೆ. ಹಾಗಿದ್ದರೂ **ಪ್ರಪತ್ತಿ ರೂಪ ವ್ಯಾಜತ್ತಾಲೇ** ಇತ್ಯಾದಿ ಪ್ರಪತ್ತಿರೂಪವಾದ ವ್ಯಾಜದಿಂದ ಪ್ರಸನ್ನನಾಗಿ ತಾನು ಸ್ವಾಮಿ, ಜೀವನು ದಾಸ ಎಂಬ ಸಂಬಂಧವೇ ಕಾರಣವಾಗಿ ದಾಯ ಧನದ ಹಾಗೆ ಸ್ವತಃ ಪ್ರಾಪ್ತವಾದ **ಅಳವಿಲ್ಲಾದ ಫಲತ್ತೈ** – ಮೋಕ್ಷಾಂತ ಐಶ್ವರ್ಯವನ್ನು ಕೊಡುತ್ತಾನೆ. ಅಂದರೆ ಪ್ರಾಪ್ತಿವಿರೋಧಿ ಪಾಪವನ್ನು ಪ್ರಪತ್ತಿಯೆಂಬ ವ್ಯಾಜದಿಂದ ಕ್ಷಮಿಸಿ ಮೋಕ್ಷಾಂತ ಐಶ್ವರ್ಯವನ್ನೂ ಕೊಡುತಾನೆಂಬುದು ತಾತ್ಪರ್ಯ

೩) **ಅವಾಪ್ತ ಸಮಸ್ತ ಕಾಮತ್ತೈಯಾಲೇ** ಇತ್ಯಾದಿ. ಭಗವಂತನು ಪರಿಪೂರ್ಣನು, ಅವನಿಗೆ ಬೇಕಾದದು ಯಾವುದೂ ಲಭಿಸದೇ ಇಲ್ಲ. ಆದ್ದರಿಂದ ನಾವು ಮಾಡುವ ಮಹೋಪಕಾರಗಳಿಂದ, ಅವನಿಗೆ ಏನೂ ಪ್ರಯೋಜನವಿಲ್ಲ. ಹಾಗಿರುವಾಗ ಅತ್ಯಲ್ಪ ವ್ಯಾಜವಾದ ಪ್ರಪತ್ತಿಗೆ ಫಲವನ್ನು ಕೊಡುತ್ತಾನೆಯೇ, ಎಂಬುದು ಶಂಕೆ. ಲೋಕದಲ್ಲಿ ಒಳ್ಳೆಯ ಸಾರ್ವಭೌಮನನ್ನು ನೋಡಲು ಬಂದವನು, "ರಿಕ್ತಹಸ್ತಸ್ತು ನೋಪೇಯಾತ್ ರಾಜಾನಂ ದೈವತಂ ಗುರುಮ್"

ವ್ಯಾಜತ್ತಾಲೇ ವಶೀಕಾರ್ಯನಾನ ಸುಜನಸಾರ್ವಭೌಮನೈಪ್ಪೋಲೇ ತನ್ನಿರುಪಾಧಿಕ ಕಾರುಣ್ಯಾದಿಹಳಾಲೇ ಇವನ್ ಶೆಯ್‌ಹಿರ ಶಿಲ್ಪಾನವ್ಯಾಪಾರತ್ತೈ ತನಕ್ಕು ಪರಮೋಪಕಾರಮಾಹ ಆದರಿತ್ತುಕ್ಕೊಣ್ಡು ಕೃತಜ್ಞನಾಯ್‌ಕಾರ್ಯಮ್ ಶೆಯ್‌ಯುಮ್

೪) ಕ್ಷುದ್ರ ದೇವತೈಹಳೈಪ್ಪೋಲೇ ಕ್ಷಿಪ್ರಕಾರಿಯನ್ರಾಹಿಲುಮ್. ಮತ್ತುಳ್ಳ ಶಾಸ್ತ್ರಾರ್ಥಙ್ಗಳುಕ್ಕು ವಿಳಮ್ಬಿತ್ತು ಫಲಮ್ ಕೊಡುತ್ತಾನೇಯಾಹಿಲುಮ್, ಅನನ್ಯ ಶರಣನುಡೈಯ ಪ್ರಪತ್ತಿಕ್ಕು ಔದಾರ್ಯಾದಿ ಗುಣ ಸಹಿತಮಾಯ್ ಸಹಕಾರ್ಯಂತರ ನಿರಪೇಕ್ಷಮಾನ ತ್ತ ಸಙ್ಕಲ್ಪಮಾತ್ರತ್ತಾಲೇ ಕಾಕ ವಿಭೀಷಣಾದಿಹಳುಕ್ಕು ಪ್ಪೋಲೇ ಇವನ್ನೋಲಿನ ಕಾಲತ್ತಿಲ್ ಅಪೇಕ್ಷಿತಮ್ ಕೊಡುಕ್ಕುಮ್.

೫) ಸಮಾಧಿಕ ದರಿದ್ರನೇಯಾಹಿಲುಮ್ ಸ್ವಾತಂತ್ರ್ಯಾದಿ ಗುಣವಿಶಿಷ್ಟನಾಯ್ ತ್ತ ಪ್ರಯೋಜನಮಾಹ ವಾಶ್ರಿತರ್ಕಪೇಕ್ಷಿತಂ ಶೆಯ್‌ಹಿರಾನಾಹೈಯಾಲ್, ಕೋಸಲ ಜನಪದತ್ತಿಲ್ ಜನ್ತುಕ್ಕಳುಕ್ಕು

ಎಂಬ ವಚನದಂತೆ ಬರೀ ಕೈಯಲ್ಲಿ ಹೋಗದೆ ಒಂದು ನಿಂಬೇ ಹಣ್ಣನ್ನು ಕೈಯಲ್ಲಿ ಉಪಹಾರವಾಗಿ ತಂದು ರಾಜನಿಗೆ ಸಮರ್ಪಿಸಿ, ಪರಮೋದಾರನಾದ ಅವನ ಪರಿಪೂರ್ಣ ಕೃಪೆಗೆ ಪಾತ್ರನಾಗುವುದನ್ನು ಕಂಡಿದ್ದೇವೆ **ಸುಜನಸಾರ್ವಭೌಮನೈಪ್ಪೋಲೇ–** ಆ ಸುಜನಸಾರ್ವಭೌಮನ ಹಾಗೆ, ಭಗವಂತನು ತನ್ನ **ನಿರುಪಾಧಿಕ–** ನಿಷ್ಕಾರಣವಾದ **ಕಾರುಣ್ಯಾದಿಹಳಾಲೇ–** ಕೃಪೆ ಆದಿಶಬ್ದದಿಂದ, ಔದಾರ್ಯ, ಸೌಲಭ್ಯ, ಸೌಶೀಲ್ಯ, ವಾತ್ಸಲ್ಯಾದಿ ಗುಣಗಳಿಂದ **ಇವನ್‌ಶೆಯ್‌ಹಿರ**–ಇತ್ಯಾದಿ– ಈ ಜೀವನು ಮಾಡುವ ಅತ್ಯಲ್ಪವಾದ, ಅಂಜಲಿ, ಪ್ರಪತ್ತಿರೂಪ ವ್ಯಾಪಾರಗಳನ್ನು, ತನಗೆ ಪರಮೋಪಕಾರವಾಗಿ ಆದರಿಸಿ ಅಂದರೆ ತನಗೆ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಬಾರದ ಹಾಗೆ, ಉಪಕಾರ ಮಾಡಿದುದಾಗಿ ಭಾವಿಸಿ, ಕೃತಜ್ಞತೆಯಿಂದ ಮೋಕ್ಷ ರೂಪ ಫಲವನ್ನು ಸ್ವಕೈಂಕರ್ಯ ಪರ್ಯಂತ ಕೊಟ್ಟು ಉಪಕರಿಸುತ್ತಾನೆ.

೪) **ಕ್ಷುದ್ರದೇವತೆ**–ಇತ್ಯಾದಿ. ಕ್ಷುದ್ರ ದೇವತೆಗಳು ಶೀಘ್ರವಾಗಿ ಪ್ರಸನ್ನರಾಗಿ ತಮ್ಮನ್ನು ಆಶ್ರಯಿಸಿದವರಿಗೆ ಫಲವನ್ನು ಕೊಡುತ್ತವೆ. ಭಗವಂತನು ಹಾಗಲ್ಲ, ಐಶ್ವರ್ಯ ಕೈವಲ್ಯಾದಿ ಪುರುಷಾರ್ಥಗಳನ್ನು ವಿಳಂಬಿಸಿಕೊಡುತ್ತಾನೆ ಭಕ್ತಿಯೋಗದಿಂದಲೂ ಫಲವು ಕರ್ಮಾವಸಾನದಲ್ಲಿ ಲಭಿಸುತ್ತದೆ. ಹೀಗೆ ಇತರ ಶಾಸ್ತ್ರಾರ್ಥಗಳಿಗೆ ವಿಳಂಬಿಸಿ ಫಲವನ್ನು ಕೊಟ್ಟರೂ, **ಅನನ್ಯ ಶರಣನಾದ** ಬೇರೆ ಗತಿಯಿಲ್ಲದೆ ಭಗವಂತನನ್ನೇ ಆಶ್ರಯಿಸಿರುವವನ. ಪ್ರಪತ್ತಿಗೆ ವಶೀಕೃತನಾಗಿ, ತನ್ನ ಔದಾರ್ಯಾದಿ ಗುಣಗಳಿಂದ ಕೂಡಿದವನಾಗಿ, ಸಹ ಕಾರ್ಯಂತರವನ್ನು ಅಪೇಕ್ಷಿಸದೆ ತನ್ನ ಸಂಕಲ್ಪಮಾತ್ರದಿಂದ, ಕಾಕ ವಿಭೀಷಣಾದಿಗಳಿಗೆ ಹೇಗೋ ಹಾಗೆ, ಈ ಜೀವನು ಅಪೇಕ್ಷಿಸಿದ ಕಾಲದಲ್ಲಿ ಫಲವನ್ನು ಕೊಡುತ್ತಾನ, ವಿಳಂಬಿಸುವುದಿಲ್ಲವೆಂದರ್ಥ. ಕಾಕಾಸುರನಿಗೂ, ವಿಭೀಷಣನಿಗೂ ಒಡನೇ ಫಲವು ಲಭಿಸಿತು, ಕಾಕಾಸುರನಿಗೆ ಪ್ರಾಣರಕ್ಷಣೆ, ವಿಭೀಷಣರಿಗೆ ಮೋಕ್ಷಾರ್ಥವಾದ ಶರಣಾಗತಿಯಿಂದ ಆತ್ಮರಕ್ಷಣೆ, ಒಡನೇ ಭಗವತ್ಕೈಂಕರ್ಯ ಸಾಮ್ರಾಜ್ಯ ಲಾಭ ಲಂಕಾರಾಜ್ಯದಲ್ಲಿ ಪಟ್ಟಾಭಿಷಿಕ್ತನಾದದ್ದು ಆನುಷಂಗಿಕ ಫಲ

೫) **ಸಮಾಧಿಕ ದರಿದ್ರನೇ ಯಾಹಿಲುಮ್** ಇತ್ಯಾದಿ, ಭಗವಂತನಿಗೆ ಸಮರೂ, ಅಧಿಕರೂ ಯಾರೂ ಇಲ್ಲ, ಇದರಿಂದ ಸ್ವತಂತ್ರನು. ಅವನ ಸ್ವಾತಂತ್ರ್ಯವನ್ನೂ ಈಶ್ವರ ಸ್ವಭಾವವನ್ನೂ–ಸರ್ವರನ್ನೂ ನಿಯಮಿಸುವ ಸ್ವಭಾವವನ್ನೂ, ಯಾರೂ ಪ್ರಶ್ನಿಸಲಾರರು. "ಸ್ವಾತಂತ್ರ್ಯಮೈಶ್ವರಮಪರ್ಯನುಯೋಜ್ಯ ಮಾಹುಃ" ಎಂಬುದು. ಪರಾಶರ್ಭಟ್ಟರ ಶ್ರೀ ಸೂಕ್ತಿ. ಆದ್ದರಿಂದ **ಸ್ವಾತಂತ್ರ್ಯಾದಿ ಗುಣ ವಿಶಿಷ್ಟನಾಯ್**–ಸ್ವಾತಂತ್ರ್ಯ, ಆದಿಶಬ್ದದಿಂದ, ದಯಾ, ವಾತ್ಸಲ್ಯ ಮೊದಲಾದ ಗುಣಗಳಿಂದ ಕೂಡಿದವನಾಗಿ, **ತನ್ ಪ್ರಯೋಜನಮಾಹ** ಇತ್ಯಾದಿ–ಇತರರ ಪ್ರಯೋಜನಕ್ಕೆ

ಪ್ಪೋಲೇ ಕುಮಾರನೋಡೊಕ್ಕತ್ತಿರ್ಯಕ್ಕಾನ ಕಿಳಿಕ್ಕು ಪಾಲೂಟ್ಟುವರ್ ಕಣಕ್ಕಿಲೇ ತರಂಪಾರಾದೇ ಕೊಡುಕ್ಕುವರ್ ; ಇಪ್ಪಡಿ ಯಥಾ ಲೋಕಂ ಪಿರನ್ದ ಶಂಕೈಹಳುಕ್ಕು ಯಥಾಲೋಕಂ ಪರಿಹಾರ ಮುಂಡಾಹೈಯಾಲೇ ಯಥಾಶಾಸ್ತ್ರಂ ಪ್ರಪತ್ತಿ ಅಪೇಕ್ಷಿತ ಸಾಧನ ಮಾಹಕ್ಕುರೈಯಿಲ್ಲೈ

ಮಹಾ ವಿಶ್ವಾಸಾವಿರ್ಭಾವಸ್ಯ ದುಸ್ತರತ್ವಂ

ಇನ್ನಿಶಿಷ್ಟಮಾನ ಪುರುಷಕಾರಾದಿಹಳೈನ್ದ್ವಯುಮ್ ಸದಾಚಾರ್ಯ ಕಟಾಕ್ಷ ವಿಶೇಷತ್ತಾಲೇ ತೆಳಿನ್ದವನುಕ್ಕಲ್ಲದು ಮಹಾ ವಿಶ್ವಾಸಂ ಪಿರವಾದು.

ಎಂದು ನೆನೆದರೆ ತಾರತಮ್ಯಭಾವವು ಉಂಟಾಗುತ್ತದೆ ತನ್ನ ಪ್ರಯೋಜನಕ್ಕಾಗಿ ಮಾಡುವ ಕಾರ್ಯಗಳಲ್ಲಿ ತಾರತಮ್ಯವಿರುವುದಿಲ್ಲ ಆಶ್ರಿತರಿಗೆ ಅವರ ಅಪೇಕ್ಷಿತವನ್ನು ಕೊಡುವುದು, ತನ್ನ ಪ್ರಯೋಜನಕ್ಕಾಗಿಯಾದ್ದರಿಂದ **ತರಂಪಾರದೇ**—ವ್ಯತ್ಯಾಸವಿಲ್ಲದೆ—ವ್ಯತ್ಯಾಸವನ್ನು ನೋಡದೆ ಎಂದರ್ಥ, ಕೊಡುತ್ತಾನೆ ಇದಕ್ಕೆ ಎರಡು ದೃಷ್ಟಾಂತ. **ಕೋಸಲ ಜನಪದತ್ತಿಲ್** ಇತ್ಯಾದಿ—ಕೋಸಲ ದೇಶದ ಪ್ರಾಣಿಗಳನ್ನು "ನರ್ಪಾಲಯೋದ್ದಿಯಿಲ್ ವಾಳ್ರುಮ್ ಚರಾಚರಂ ಮುಟ್ರವುಮ್ ನರ್ಪಾಲುಕ್ಕುಯ್ತ್ತನನ್" ಆಯೋಧ್ಯೆಯಲ್ಲಿ ವಾಸಮಾಡುತ್ತಿದ್ದ ಸ್ಥಾವರ ಜಂಗಮಾತ್ಮಕವಾದ ಸಕಲ ಪ್ರಾಣಿಗಳನ್ನೂ ಭಗವಂತನು ಸಾಂತಾನಿಕ ಲೋಕಕ್ಕೆ ಕರದೊಯ್ದು ಅಲ್ಲಿ ಭಕ್ತಿಯೋಗವಲ್ಲಿ ಅಧಿಕರಿಸಿ ಅನಂತರ ಮೋಕ್ಷಕ್ಕೆ ಕರೆದೊಯ್ದನು ಇದಕ್ಕೆ ಕೋಸಲ ದೇಶವಾಸವೇ ಕಾರಣ "ವಿಷಯ ವಾಸಮೇಪಟ್ರಾಶಾಹ" ಎಂದು ಆಚಾರ್ಯರು ಅಭಯ ಪ್ರದಾನ ಸಾರದಲ್ಲಿ ಅನುಗ್ರಹಿಸಿರುತ್ತಾರೆ. ನಿರ್ಹೇತುಕ ಕೃಪೆಯಿಂದಲ್ಲ ಸ್ಥಾವರ ಜಂಗಮಗಳೆಲ್ಲರಿಗೂ ತಾರತಮ್ಯವನ್ನು ನೋಡದೆ ಸುಗತಿಯನ್ನು ತನ್ನ ಸ್ವಾತಂತ್ರ್ಯ ವಿಶಿಷ್ಟ ಕರುಣೆಯಿಂದ ಕೊಡುತ್ತಾನೆ, ಎಂಬುದಕ್ಕೆ ಪ್ರಥಮ ದೃಷ್ಟಾಂತ. **ಕುಮಾರನೋಡೊಕ್ಕ** ಇತ್ಯಾದಿ. ಅದಾಗಿ ತನಗೆ ಅತ್ಯಂತ ಲಾಲನೀಯನಾದ ಮತ್ತು ಅಂತರಂಗನಾದ ಮಗುವಿಗೆ ಹಾಲನ್ನು ಕುಡಿಸುತ್ತಾ, ಆ ಕುಮಾರನಿಗೆ ಸಮಾನವಾಗಿ **ತಿರ್ಯಕ್ಕಾನ ಕಿಳಿಕ್ಕು**—ಭಿನ್ನ ಜಾತೀಯವಾದ ಗಿಣಿಗೂ ಹಾಲನ್ನು ಕೊಡುವುದು ಲೀಲಾರಸ ಜನಕವಾದ್ದರಿಂದ ತನ್ನ ಪ್ರಯೋಜನಕ್ಕಾಗಿಯೇ ಕೊಡುತ್ತಾನೆಯಲ್ಲವೇ, ಅದರ ಪ್ರಯೋಜನಕ್ಕಾಗಿ ಕೊಟ್ಟರೆ ಹಾಲಿನಲ್ಲಿ ವ್ಯತ್ಯಾಸವಿರುತ್ತದೆ. ಹಾಗೆಯೇ ಭಗವಂತನು ಪ್ರಪನ್ನನ ವಿಷಯದಲ್ಲಿ ತಾರತಮ್ಯವನ್ನು ನೋಡದೆ ಮೋಕ್ಷಾಂತವಾದ ಐಶ್ವರ್ಯವನ್ನು ಕೊಡುತ್ತಾನೆಂಬುದು ಎರಡನೆ ದೃಷ್ಟಾಂತ ತಾತ್ಪರ್ಯ

ಇಪ್ಪಡಿ ಯಥಾ ಲೋಕವರ್ ಇತ್ಯಾದಿ ಹೀಗೆ ಲೋಕದೃಷ್ಟಾಂತ ರೀತಿಯಲ್ಲಿ ಉಂಟಾದ ಸಂದೇಹಗಳಿಗೆ ಲೋಕ ದೃಷ್ಟಾಂತ ರೀತಿಯಾಗಿಯೇ ಅಂದರೆ ಅಂತಃಪುರ ಪರಿಜನರ ವಿಷಯದಲ್ಲಿ ರಾಜನು ಅಭಿಗಂತಾವಾಗಿರುವ ರೀತಿಯಲ್ಲಿಯೂ ಸಜ್ಜನ ಸಾರ್ವಭೌಮನು ತನ್ನ ಔದಾರ್ಯದಿಂದ ನಡೆದುಕೊಳ್ಳುವ ರೀತಿಯಲ್ಲಿಯೂ, ಕಾಕ ವಿಭೀಷಣಾದಿಗಳಿಗೆ ತಕ್ಷಣವೇ ರಕ್ಷಣವನ್ನು ಶರಣಾಗತಿಯಿಂದ ಪ್ರೀತನಾದ ಭಗವಂತನು ದಯಪಾಲಿಸಿದ ರೀತಿಯಲ್ಲಿಯೂ ಪರಿಹಾರವು ಉಂಟಾಗುವುದರಿಂದ, ಶಾಸ್ತ್ರವನ್ನು ಅನುಸರಿಸಿ ಪ್ರಪತ್ತಿಯು ಅಪೇಕ್ಷಿತವಾದ ಫಲವನ್ನು ಕೊಡುವುದರಲ್ಲಿ ಯಾವ ವಿರೋಧವೂ ಇಲ್ಲ. ಶಾಸ್ತ್ರಾಂತರ ವಿರೋಧವೂ, ಪ್ರತ್ಯಕ್ಷ ವಿರೋಧವೂ, ಮೇಲೆ ಶಂಕಿಸಲ್ಪಟ್ಟ ಲೌಕಿಕ ವಿರೋಧವೂ ಯಾವುದೂ ಇಲ್ಲವೆಂದರ್ಥ.

ಸದಾಚಾರ್ಯ ಕಟಾಕ್ಷದಿಂದ ತಿಳುವು ಉಂಟಾದವನಿಗೇ ಮಹಾ ವಿಶ್ವಾಸವು ಉಂಟಾಗುತ್ತದೆ.

ಅನಂತರ, ಈ ಸಂದೇಹಗಳೆಲ್ಲಾ ಮೇಲೆ ಹೇಳಿದ ರೀತಿಯಲ್ಲಿ ನಿವೃತ್ತವಾಗಿ, ಒಬ್ಬನಿಗೆ ಮಹಾ ವಿಶ್ವಾಸವು ಉಂಟಾಗುವುದಕ್ಕೆ ಸದಾಚಾರ್ಯ ಕಟಾಕ್ಷವೇ ಕಾರಣವೆಂದು **ಇನ್ನಿಶಿಷ್ಟಮಾನ** ಎಂದಾರಂಭಿಸಿ ಆಚಾರ್ಯ ಸಾರ್ವ

ಎಙ್ಗನೇ ಎನ್ನಿಲ್ :– **ಈಶ್ವರನಭಿಮುಖನಲ್ಲಾಮೈಯಾಲೇ** ಕರ್ಮಯೋಗಾದಿಹಳುಕ್ಕು ಅನರ್ಹನಾಮ್ಪಡಿಯಾನ ಮಹಾಪರಾಧಙ್ಗಳೈಯುಡೈಯನಾಯ್, 1) "ಧಿಗಶುಚಿಮವಿನೀತಮ್" ಎನ್ಗಿರ ಶ್ಲೋಕತ್ತಿನ್‌ಪಡಿಯೇ ಎಟ್ಟವರಿಯ ಫಲತ್ತೈಕ್ಕಣಿಶಿಕ್ಕುಮ್ ಪಡಿಯಾನ ಚಾಪಲತ್ತೈ ಯುಡೈಯನಾಯ್, ಇಪ್ಫಲತ್ತುಕ್ಕು ಅನುಷ್ಠಿಕ್ಕಪ್ಪುಹುಗಿರ ಉಪಾಯಮ್, ಕಾಯಕ್ಲೇಶಾರ್ಥವ್ಯಯ ಕಾಲ ದೈರ್ಘ್ಯಾದಿಗಳೊನ್ರುಮ್ ವೇಣ್ಡಾದದೊರು ಸಕೃದನು ಸನ್ಧಾನ ಮಾದಲ್, ಸಮುದಾಯ ಜ್ಞಾನಪೂರ್ವಕ ಸಕೃದುಕ್ತಿ ಮಾತ್ರ ಮಾದಲಾಯ್, ಇನ್ದ ಲಘುತರಮಾನ ಉಪಾಯತ್ತೈ ಕ್ಕೊಣ್ಡು ಅನ್ದ ಗುರುತರಮಾನ ಫಲತ್ತೈತ್ತಾನ್ ಕೋಲಿನ ಕಾಲತ್ತಿಲೇ ಪೆರ ಆಶೈಪಟ್ಟು, ಇಪ್ಫಲತ್ತುಕ್ಕು 2) "ಶುನಾಮಿವ ಪುರೋಡಾಶಃ" ಎನ್ಗಿರಪಡಿಯೇ ಜನ್ಮವೃತ್ತಾದಿಹಳಾಲೇ ತಾನನರ್ಹನಾಯ್‌ವೈತ್ತು, ತನ್ನನುಬಂಧಿಹಳೈಯುಮ್

ಭಾಮರು ಅನುಗ್ರಹಿಸುತ್ತಾರೆ ಅದಾಗಿ ಮರುಕ್ಕಣ್ಣಾಮೈ– ತಿರಸ್ಕರಿಸಬಾಗದಿರುವುದು, ಒಗ್ರಿಕ್ಕ ಬಗ್ರಿಯಾಮೈ ಬಿಡಲಾಗದ ಸಂಬಂಧ, ಮೊದಲಾದ ಐದು ವಿಷಯಗಳನ್ನು **ಸದಾಚಾರ್ಯ ಕಟಾಕ್ಷ** ವಿಶೇಷದಿಂದ ಶಂಕಾ ನಿವೃತ್ತಿ ಪೂರ್ವಕ ವಿಶದವಾಗಿ ತಿಳಿದವನಿಗಲ್ಲದೆ, ಬೇರೆ ಯಾರಿಗೂ ಮಹಾವಿಶ್ವಾಸವು ಉಂಟಾಗುವುದಿಲ್ಲ. **ಸದಾಚಾರ್ಯ ಕಟಾಕ್ಷ ವಿಶೇಷ**ವು ಯಾವುದೆಂದರೆ, ಸರ್ವ ಕಾಲದಲ್ಲಿಯೂ ಇವನು ಸಂದೇಹಗಳಿಲ್ಲದವನಾಗಿರಲಿ ಎಂಬ ಪರಮಾನುಗ್ರಹ ಇದು, ಇವನಿಗೆ ಶಾಸ್ತ್ರಾರ್ಥ ಜ್ಞಾನವುಂಟಾಗಲಿ ಎಂಬ ಆಚಾರ್ಯನ ಸಾಮಾನ್ಯ ಕಟಾಕ್ಷಕ್ಕಿಂತಲೂ ವಿಲಕ್ಷಣವಾದದ್ದು. **ಮಹಾ ವಿಶ್ವಾಸ**– ಸಂದೇಹಬೀಜಗಳನ್ನು ಬೇರಿನಿಂದ ಕಿತ್ತೆಸೆಯುವ ಶಕ್ತಿ ವಿಶೇಷ ವಿಶಿಷ್ಟವಾದ ವಿಶ್ವಾಸ ಈ ಶಕ್ತಿಯು ಸದಾಚಾರ್ಯ ಕಟಾಕ್ಷ ವಿಶೇಷದಿಂದ ಉಂಟಾಗುತ್ತದೆ ಇಂಥಹ ಸದಾಚಾರ್ಯ ಪರಮಾನುಗ್ರಹವು ಪ್ರಕೃಷ್ಟವಾದ ಸುಕೃತ ವಿಶೇಷದಿಂದ ಕೆಲವರಿಗೆ ಮಾತ್ರ ಉಂಟಾಗುತ್ತದೆ. ಇದು ಅನುಭವ ಸಿದ್ಧ. ಶಾಸ್ತ್ರಜ್ಞಾನವು ಪೂರ್ಣವಾಗಿದ್ದರೂ ಕೆಲವರಿಗೆ ಪ್ರಪತ್ತಿಯು ಅಪೇಕ್ಷಿತಕಾಲದಲ್ಲಿ ಫಲವನ್ನು ಕೊಡುತ್ತದೆ ಎಂಬುದರಲ್ಲಿ ಸಂದೇಹ ಸಾಮಾನ್ಯ ಶಾಸ್ತ್ರ ಜ್ಞಾನವುಳ್ಳವರಾಗಿ ಸತ್ಸಂಪ್ರದಾಯಾಗತ ಸಮೀಚೀನ ಶಾಸ್ತ್ರಜ್ಞಾನವನ್ನು ಹೊಂದಿದ ಮಹಾ ಭಾಗ್ಯಶಾಲಿಗಳಿಗೆ ಸದಾಚಾರ್ಯ ಕಟಾಕ್ಷ ವಿಶೇಷದಿಂದ ಪ್ರಪತ್ತಿ ಶಾಸ್ತ್ರಾರ್ಥದಲ್ಲಿ ಪರಿಪೂರ್ಣ ವಿಶ್ವಾಸವಿದೆ ಎಂಬುದು ಭಾವ

ಮಹಾವಿಶ್ವಾಸವು ದುರ್ಲಭವೆಂಬುದನ್ನು **ಎಂಗನೇಯೆನ್ನಿಲ್** ಎಂದಾರಂಭಿಸಿ ಆಚಾರ್ಯರು **ಪ್ರಕಾರಾಂತರದಿಂದ** ನಿರೂಪಿಸುತ್ತಾರೆ. ಅದಾಗಿ, ಮಹಾವಿಶ್ವಾಸ ದೌರ್ಲಭ್ಯವು ಹೇಗೆಂದರೆ, **ಈಶ್ವರನಭಿಮುಖನಲ್ಲಾಮೈಯಾಲೇ** ಇತ್ಯಾದಿ ಭಗವಂತನು ಚೇತನನಿಗೆ ಅಭಿಮುಖನಲ್ಲದೆ ಇರುವುದರಿಂದ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಗಳನ್ನು ಅನುಷ್ಠಿಸಲು ಅರ್ಹತೆಯಿಲ್ಲದ ಮಹಾಪರಾಧಗಳನ್ನುಳ್ಳವನಾಗಿ, (1) **ಧಿಗಶುಚಿಮವಿನೀತಂ,** ಎಂಬ ಶ್ಲೋಕದಲ್ಲಿ ಹೇಳಿರುವಂತೆ ಚತುರ್ಮುಖ ಬ್ರಹ್ಮ, ರುದ್ರ, ಸನಕಾದಿಗಳಿಗೆ ಕೂಡ ಧ್ಯಾನಕ್ಕೆ, ವಿಷಯವಾಗದೆ ಬಹುದೂರದಲ್ಲಿದ್ದು ತನಗೆ ಎಟುಕಿಸದೆ ಇರುವ ಫಲವನ್ನು ಆಸೆಪಡುವ ಚಾಪಲ್ಯವುಳ್ಳವನಾಗಿರುವನು ಪ್ರಪಿತ್ಸು. ಇವನು ಈ ಫಲವನ್ನು ಹೊಂದಬೇಕೆಂದು ಅನುಷ್ಠಿಸಲು ಆರಂಭಿಸುವ ಉಪಾಯವು, ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಾದಿಗಳ ಹಾಗೆ, ಶರೀರಕ್ಲೇಶ, ಅರ್ಥವ್ಯಯ, ಕಾಲವಿಳಂಬಗಳೊಂದೂ ಇಲ್ಲದೆ ಲಘುವಾದದ್ದು. ಅದು ಯಾವುದೆಂದರೆ ಸಕೃದನುಸಂಧಾನ ರೂಪವಾದ, (ಸ್ವನಿಷ್ಠ) ಅಥವಾ ಸಮುದಾಯ ಜ್ಞಾನ ಪೂರ್ವಕ ಸಕೃದುಕ್ತಿ ಮಾತ್ರ ರೂಪ (ಉಕ್ತಿನಿಷ್ಠ) ವಾದ **ಪ್ರಪತ್ತಿ**. ಈ ಲಘುತರವಾದ ಉಪಾಯದಿಂದ ಆ ಗುರುತರವಾದ ಫಲವನ್ನು ತಾನು ಅಪೇಕ್ಷಿಸುವ ಕಾಲದಲ್ಲಿ ಹೊಂದಲು ಆಸೆಪಡುವುದು ಹೇಗಿದೆಯೆಂದರೆ, (2) **ಶುನಾಮಿವ ಪುರೋಡಾಶಃ** –ನಾಯಿಯು ದೇವತೆಗಳಿಗೆ ಯೋಗ್ಯವಾದ ಯಾಗಹವಿಸ್ಸನ್ನು ಆಸೆಪಡುವಂತೆ ಇದು. ಹೀಗಿರುವಾಗ

---

1), 2) ಸ್ತು. ತಿ ಸ್ತೋ,

ಕೊಣ್ಡಿಪ್ಪೇರು ಪೆರುವದಾಹ ಒರುತ್ತನಕ್ಕು ಮಹಾ ವಿಶ್ವಾಸಮ್ ಪಿರಕ್ಕೈಯಿಲರುಮೈಯ್ಯೈ ನಿನೈತ್ತು "ಕಲಎಳ್‌ಕ್ಕಟ್ಟುಪ್ಪೋಯ್‌ಕ್ಕಲ ಎಣ್ಣೈಯಾಯಿತ್ತು" ಎನ್ರು ಎಮ್ಬಾರ್ ಅರುಳಿಚ್ಚೆಯ್ದಾರಿರೇ.

ಇವ್ವಿಡತ್ತಿಲ್ ಸರ್ವೇಶ್ವರನುಡೈಯ ಪರತ್ವಮಾತ್ರತ್ತೈ ಯರಿನ್ದಹಲುಗೈಯಾಲೇ "ನರಾಧಮರ್" ಎನ್ರುಪೇರ್ ಪೆತ್ತ ಪಿರನ್ದ ಕೆಟ್ಟಾನಿರ್ ಕಾಟ್ಟಿಲ್, ಇಡೈಚ್ಚಿಹಳೈಪ್ಪೋಲೇ ವಿವೇಕವಿಲ್ಲೈಯೋಯಾಹಿ ಲುಮ್, ಸೌಲಭ್ಯತ್ತೈಯರಿನ್ದು "ಅನ್ನಲನುಡೈಯೊರುವನ್ಯೈ ಸಣುಹುಮವನೇ" ಪರಮಾಸ್ತಿಕ ನೆನ್ರು ಅಪ್ಪುಳ್ಳಾರರುಳಿಚ್ಚೆಯ್ದ ಪಾಶುರಮ್.

ಜನ್ಮ, ವೃತ್ತ (ನಡತೆ) ಮೊದಲಾದವುಗಳಿಂದ ನೀಚನಾಗಿ ಅನರ್ಹನಾಗಿದ್ದು ಕೊಂಡು ತನ್ನನ್ನು **ಅನುಬಂಧಿ** – ಆಶ್ರಯಿಸಿದವರನ್ನೂ ಸೇರಿಸಿಕೊಂಡು, **ಇಪ್ಪೇರುಪೆರುವದಾಹ**–ಈ ಪುರುಷಾರ್ಥವನ್ನು ಹೊಂದುವುದಾಗಿ ಒಬ್ಬನಿಗೆ ಮಹಾವಿಶ್ವಾಸವು ಉಂಟಾಗುವುದನ್ನು ನೆನೆಸಿಕೊಂಡು, **ಕಲಎಳ್‌ಕಟ್ಟುಪ್ಪೋಯ್, ಕಲಎಣ್ಣೈಯಾಯಿಟ್ರು** ಎಂಬಂತಿದೆ ಎಂದು ಎಂಬಾರವರು ಅನುಗಹಿಸಿದ್ದಾರೆ. ಆದಾಗಿ ಗುರುವಾದ ಭಕ್ತಿಯೋಗವನ್ನು ಮಾಡಲಾಗದೆ ಹೆದರಿದ ಅಧಿಕಾರಿಗೆ, "ಶರಣಂವ್ರಜ" ಎಂಬ ಲಘುವಾದ ಉಪಾಯವನ್ನು, ಅತ್ಯಂತ ದುಶ್ಶಕವಾದ ಮಹಾ ವಿಶ್ವಾಸದಿಂದ ಮಾಡಬೇಕಾಗಿಬಂತು ಎಂಬುದು ಒಂದು **ಕಲ** – ಕ್ವಿಂಟಾಲ್ ತೂಕದ ಎಳ್ಳು ಕಟ್ಟನ್ನು ಕೊಡ ಲಾಗದೆ ಬೇಡಿದವನಿಗೆ, **ಕಲ**–ಒಂದು ಕ್ವಿಂಟಾಲ್ ತೂಕದ ಎಣ್ಣೆಯನ್ನು ಕೊಡಬೇಕಾಗಿ **ನಿರ್ಬಂಧಿಸಿದಂತಿದೆ** ಎಂದು ದೃಷ್ಟಾಂತ ಪೂರ್ವಕ ಎಂಬಾರವರು ನಿರೂಪಿಸಿರುತ್ತಾರೆ. ಅಂದರೆ ಈ ಲಘುವಾದ **ಉಪಾಯದಿಂದ** ಮೋಕ್ಷವು ಅವಶ್ಯಲಭಿಸುತ್ತದೆ, ಎಂಬುದರಲ್ಲಿ ಒಬ್ಬನಿಗೆ ಮಹಾವಿಶ್ವಾಸವು ಉಂಟಾಗುವುದು ದುಶ್ಶಕವೆಂಬುದು ತಾತ್ಪರ್ಯ

ನರಾಧಮನು ಯಾರು–ಪರಮಾಸ್ತಿಕನು ಯಾರು, ಎಂಬುದರ ವಿವರ.

ಹೀಗೆ ಭಗವಂತನ ಸರ್ವಸ್ವಾತ್ಪರತ್ವವನ್ನೂ, ತನ್ನ ಅತ್ಯಂತ ನೈಚ್ಯವನ್ನೂ ಅನುಸಂಧಾನ ಮಾಡಿದರೆ, ಭಗವಂತನು ನಮ್ಮನ್ನು ರಕ್ಷಿಸುತ್ತಾನೆಯೋ ಇಲ್ಲವೋ, ಅವನನ್ನಾಶ್ರಯಿಸದೇ ಇರುವುದೇ ಮೇಲು ಎಂಬ ಶಂಕೆಗೆ **ಇವ್ವಿಡತ್ತಿಲ್ ಸರ್ವೇಶ್ವರನುಡೈಯ** ಎಂದಾರಂಭಿಸಿ ಸಮಾಧಾನವನ್ನು ಆಚಾರ್ಯರು ನಿರೂಪಿಸುತ್ತಾರೆ. ಅದಾಗಿ **ಇವ್ವಿಡತ್ತಿಲ್**–ಮೇಲೆ ಹೇಳಿದಂತೆ ಸಂದೇಹವುಂಟಾದ ಈ ಸಂದರ್ಭದಲ್ಲಿ, ಸರ್ವೇಶ್ವರನ ಪರತ್ವವನ್ನು ಮಾತ್ರ

---

1) ಧಿಗಶುಚಿಮವಿನೀತಂ ನಿರ್ದಯಂ ಮಾಮಲಜ್ಜಂ
ಪರಮ ಪುರುಷಯೋಽಹಂ ಯೋಗಿವರ್ಯಾಗ್ರಗಣ್ಯೈಃ।
ವಿಧಿಶಿವಸನಕಾದ್ಯೈ ರ್ಧ್ಯಾತುಮತ್ಯಂತ ದೂರಂ
ತವಪರಿಜನ ಭಾವಂ ಕಾಮಯೇ ಕಾಮವೃತ್ತಃ ॥ ಆಳ. ಸ್ತೋತ್ರ 47

ನಾನು ಅಶುದ್ಧನು, ಅವಿನೀತ ಸ್ವಭಾವನು, ದಯೆಯಿಲ್ಲದವನು ಲಜ್ಜೆಯಿಲ್ಲದವನು. ಇಂಥಹ ನಾನು ಎಲೈ ಪರಮಪುರುಷನೇ, ಯೋಗಿಗಳಲ್ಲಿ ಅತ್ಯಂತ ಶ್ರೇಷ್ಠರಾದ ಬ್ರಹ್ಮ, ಶಿವ, ಸನಕಾದಿಗಳಿಗೂ ಧ್ಯಾನ ವಿಷಯವಾಗಲಾರದ ನಿನ್ನನ್ನು ಆಸೆಪಟ್ಟು, ನಿನ್ನ ಕೈಂಕರ್ಯವನ್ನು ಮಾಡಲು ಆಸಪಡುತ್ತೇನೆ. ನನಗೆ ಧಿಕ್ಕಾರ. ಇದು ತನ್ನ ನೈಚ್ಯಾನುಸಂಧಾನ.

2) ವ್ರತೋಪವಾಸ ತುಲಿತೆ ಮಶನಂ ತಸ್ಯಪಾವನಮ್ ।
ಶುನಾಮಿವಪುರೋಡಾಶಃ ನನೀಚೇಷು ತದಿಷ್ಯತೇ ॥

ಭಗವಂತನಿಗೆ ನಿವೇದ ಮಾಡಲ್ಪಟ್ಟ ಅನ್ನವು ಪರಿಶುದ್ಧವಾದದ್ದು. ವ್ರತೋಪವಾಸಗಳಿಗೆ ಸಮಾನವಾದ ಶುದ್ಧಿಯನ್ನುಂಟು ಮಾಡುತ್ತದೆ. ದೇವತೆಗಳಿಗೆ ಯೋಗ್ಯವಾದ ಪುರೋಡಾಶವನ್ನು ನಾಯಿಗೆ ಕೊಡಬಾರದ ಹಾಗೆ ನೀಚರಿಗೆ ಭಗವನ್ನಿವೇದಿತ ಅನ್ನವನ್ನು ಕೊಡಬಾರದು. ಅಕ್ಕಿ ಹಿಟ್ಟಿನಿಂದ ಮಾಡಿದ ಹವಿಸ್ಸಿಗೆ ಪುರೋಡಾಶವೆಂದು ಹೆಸರು

ದ್ವಯೇ ಮಹಾವಿಶ್ವಾಸ ಕಾರ್ಪಣ್ಯಗೋಪ್ತೃತ್ವವರಣಾನುಸನ್ಧಾನ ಸ್ಥಲ ಪ್ರದರ್ಶನಮ್.

ಇಪ್ಪಡಿ ಪುರುಷಕಾರಾದಿ ಜ್ಞಾನತ್ತಾಲೇ ಪಿರನ್ದ ವಿಶ್ವಾಸಮಹತ್ವಮುಂಮ್, ವಿಶ್ವಾಸ ಸ್ವರೂಪಮುಂಮ್, ಕಾರ್ಪಣ್ಯಮುಂಮ್ "ಪ್ರಪದ್ಯೇ" ಎನ್ಗಿರ ಕ್ರಿಯಾಪದತ್ತಿಲು ಪಸರ್ಗತ್ತಿಲುಮ್, ಶರಣಶಬ್ದೋಪಶ್ಲಿಷ್ಟಮಾನ ಧಾತುವಿಲುಮ್, ಉತ್ತಮನಿಲಂಮನು ಸನ್ಧೇಯಙ್ಗಳ್. ಇದಿಲ್ ಉತ್ತಮನಿಲ್ ವಿವಕ್ಷಿತತ್ತೈ "ಅನನ್ಯ ಶರಣಃ" ಎನ್ರು ಗದ್ಯತ್ತಿಲೇ ವಾಖ್ಯಾನಂ ಪಣ್ಣಿನಾರ್. ಇವ್ವಿಡತ್ತಿಲ್ ಉಪಾಯತ್ವಾಧ್ಯವಸಾಯ ವಾಚಕ ಶಬ್ದತ್ತಿಲೇ ಗೋಪ್ತೃತ್ವವರಣಮನ್ತರ್ನೀತಮ್.

ತಿಳಿದು ಸೌಲಭ್ಯ ಸೌಶೀಲ್ಯಗಳನ್ನು ತಿಳಿಯದೆ, ಅವನನ್ನು ಬಿಟ್ಟು ಹೋಗವುದರಿಂದ, "ಹರೇರ್ವಿಜ್ಞಾಯ ಪಾರಮ್ಯಂ ಅಪಗಚ್ಛೇನ್ನರಾಧಮಃ" (ಭಗವಂತನ ಪಾರಮ್ಯವನ್ನು ಮಾತ್ರ ತಿಳಿದುಕೊಂಡು ಅವನನ್ನಾಶ್ರಯಿಸದೇ ಇರುವವನು ನರಾಧಮನು) ಎಂದು ಹೇಳುವಂತೆ ಈ ಮುಮುಕ್ಷುವು ನರಾಧಮನೆಂಬ ಹೆಸರನ್ನು ಪಡೆಯುತ್ತಾನೆ ಇದರಿಂದಾಗಿ ಇವನು **ಪಿರಂದು ಕೆಟ್ಟಾನ್**–ಭಗವಂತನ ಪರತ್ವ ಜ್ಞಾನವು ಉಂಟಾಗಿಯೂ ಅವನನ್ನು ಆಶ್ರಯಿಸದೆ ಇರುವುದರಿಂದ ಕೆಟ್ಟು ಹೋಗುತ್ತಾನೆ **ಕೆಟ್ಟಾನಿರ್ಕ್ಕಾಟ್ಟಿಲುಮ್**–ಹೀಗೆ ಕೆಟ್ಟು ಹೋಗುವವನಿಗಿಂತ, ಗೋಪಿಗಳ ಹಾಗೆ **ವಿವೇಕಮಿಲ್ಲೈಯೇಯಾಹಿಲುಮ್**–ಭಗವಂತನ ವಸ್ತು ತನ್ನ ಉಚ್ಚನೀಚರೂಪ ಯಾಥಾರ್ಥ್ಯ ಜ್ಞಾನ ವಿಲ್ಲದೆ ಇದ್ದರೂ, ಭಗವಂತನ ಸೌಲಭ್ಯ ಗುಣವನ್ನು ಅನುಸಂಧಾನ ಮಾಡಿ, ಅಂಥವ ಸೌಲಭ್ಯಾದಿ ಕಲ್ಯಾಣ ಗುಣಗಳಿಂದ ಕೂಡಿದ ಭಗವಂತನನ್ನು ಆಶ್ರಯಿಸುವವನೇ ಪರಮಾಸ್ತಿಕನೆಂದು "ಅಪ್ಪುಳ್ಳಾರ್" ಅವರು ಅನುಗ್ರಹಿಸಿದ ಮಾತು "ಸೌಲಭ್ಯವೇದೀ ಭಜತೇ ಕಶ್ಚಿತ್ತಂ ಪರಮಾಸ್ತಿಕಃ", "ಅನ್ನಲಸುಡೈಯಾರುವನ್ನೈ ನಣುಹಿನಮ್ ನಾಮೇ" (ತಿರವಾಯ್ 1–1–3) ಎಂಬ ಶ್ರೀ ಸೂಕ್ತಿಗಳ ಪ್ರಕಾರ ಭಗವಂತನ ಸೌಲಭ್ಯವನ್ನು ಅನುಸಂಧಾನ ಮಾಡಿದರೆ ಮಹಾವಿಶ್ವಾಸವು ಉಂಟಾಗಿ ಭಗವಂತನನ್ನು ಆಶ್ರಯಿಸಲು ಶಕ್ಯವಾಗುತ್ತದೆ. "ಸೌಲಭ್ಯವೇದೀ ಭಜತೇ" ಎಂಬ ವಚನದಿಂದ ಸೌಲಭ್ಯವನ್ನು ತಿಳಿಯದೆ ಕೇವಲ ಪರತ್ವವನ್ನು ಮಾತ್ರ ತಿಳಿದುಕೊಂಡವನಿಗೆ ಮಹಾವಿಶ್ವಾಸವು ಉಂಟಾಗುವುದು ಕಷ್ಟವೆಂಬುದು ಎಂಬಾರವರ ಶ್ರೀ ಸೂಕ್ತಿಗೆ ತಾತ್ಪರ್ಯ.

ದ್ವಯ ಮಂತ್ರದಲ್ಲಿ ಮಹಾವಿಶ್ವಾಸ ಕಾರ್ಪಣ್ಯ ಗೋಪ್ತೃತ್ವ ವರಣಾನುಸನ್ಧಾನಸ್ಥಲ

ದ್ವಯ ಮಂತ್ರದಲ್ಲಿ ಮಹಾವಿಶ್ವಾಸ, ಕಾರ್ಪಣ್ಯ ಗೋಪ್ತೃತ್ವ ವರಣಾದಿಗಳನ್ನು ಅನುಸಂಧಾನ ಮಾಡಬೇಕಾದ ಸ್ಥಲಗಳನ್ನು **ಇಪ್ಪಡಿ ಪುರುಷಕಾರಾದಿ** ಎಂದಾರಂಭಿಸಿ ಅನುಗ್ರಹಿಸುತ್ತಾರೆ. ಅದಾಗಿ ಹೀಗೆ ಪುರುಷಕಾರ ಸಂಬಂಧ ಗುಣ ವ್ಯಾಪಾರ ಪ್ರಯೋಜನಗಳಿಂದ ಉಂಟಾದ ವಿಶ್ವಾಸದ ಮಹತ್ವವು ಪ್ರ ಎಂಬ ಉಪಸರ್ಗದಲ್ಲಿಯೂ, ಪದಲ್‌ಗತೌ ಎಂಬ ಧಾತುವಿನಲ್ಲಿ ಗತ್ಯರ್ಥವು ಬುದ್ಧ್ಯರ್ಥ ಬೋಧಕವಾದ್ದರಿಂದ, ಶರಣ ಶಬ್ಧದಿಂದ ಕೂಡಿದ ರಕ್ಷಕತ್ವದ ಅಧ್ಯವಸಾಯ ರೂಪವಾದ ವಿಶ್ವಾಸ ಸ್ವರೂಪವು, ಅನುಸಂಧೇಯ. ಅಂದರೆ "ಶರಣಂ ಪ್ರಪದ್ಯೇ ಎಂಬ ಕ್ರಿಯಾ ಪದದ ಉತ್ತಮ ಪುರುಷದಲ್ಲಿ ಆಕಿಂಚನನಾದ ನಾನು ಶರಣ ಹೊಂದುತ್ತೇನೆ, ಎಂದು ಅನುಸಂಧಾನ ಮಾಡುವಾಗ ಕಾರ್ಪಣ್ಯವೂ ವಿವಕ್ಷಿತ. ಈ ಧಾತುವಿನ ಉತ್ತಮ ಪುರುಷದಲ್ಲಿ ವಿವಕ್ಷಿತವಾದದನ್ನು (1) "ಅನನ್ಯ ಶರಣಃ" ಎಂದು ಗದ್ಯದಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ. **ಇವ್ವಿಡತ್ತಿಲ್** – ಉಪಾಯತ್ವಾಧ್ಯವಸಾಯ ವಾಚಕವಾದ "ಶರಣಂ ಪ್ರಪದ್ಯೇ" ಎಂಬ ಶಬ್ದದಲ್ಲಿ, ಗೋಪ್ತೃತ್ವವರಣವೂ ಅನುಸಂಧೇಯ. ನಿರಪೇಕ್ಷ ರಕ್ಷಕನಾಗು ಎಂಬುದು ಉಪಾಯತ್ವ ಪ್ರಾರ್ಥನೆ ಅದರಲ್ಲಿ "ರಕ್ಷಕನಾಗಿರು" ಎಂಬ ಗೋಪ್ತೃತ್ವವರಣವು ಅಂತರ್ಗತ

ಇಲ್ಲಿ ಕೆಲವರು, "ಉಪಾಯತ್ವಾಧ್ಯವಸಾಯವಾಚಕ" ಶಬ್ದಕ್ಕೆ, ಅಧ್ಯವಸಾಯ –ಮಹಾವಿಶ್ವಾಸಃ, ನಿನ್ನನು ಉಪಾಯವಾಗಿ ಅಧ್ಯವಸಾನ ಮಾಡುತ್ತೇನೆ. ಎಂಬ ಮಹಾವಿಶ್ವಾಸವು ನೀನು ನನಗೆ ಅಭಿಮತ ಫಲವನ್ನು

(೧) "ಅಹಮಸ್ಮ್ಯಪರಾಧಾನಾಮಾಲಯೋऽಕಿಞ್ಚನೋऽಗತಿಃ । (೨) ತ್ವಮೇವೋಪಾಯ ಭೂತೋಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿರಿತ್ಯುಕ್ತಾ ಸಾದೇವೇಸ್ಮಿನ್ ಪ್ರಯುಜ್ಯತಾಂ ।" ಎನ್ರುಮ್ (೩) "ಉಪಾಯೇಗೃಹ ರಕ್ಷಿತ್ರೋ ಶ್ಶಬ್ದಶ್ಶರಣಮಿತ್ಯಯಂ । ವರ್ತತೇ ಸಾಂಪ್ರತಂ ತ್ವೇಷ ಉಪಾಯಾರ್ಥೈಕ ವಾಚಕಃ ।"ಎನ್ರುಮ್ ಶೊಲ್ಲುಹಿರ ಪಡಿಯೇ ಉಪಾಯಾನ್ತರಾಶಕ್ತನುಕ್ಕು ಸರ್ವೇಶ್ವರನ್ ಸರ್ವ ಶಾಸ್ತ್ರಾರ್ಥ ಸಾಧಾರಣಮಾನ ರಕ್ಷಕತ್ವ ಮಾತ್ರತ್ತಿಲೇ ನಿರ್ಕ್ಕೈಯನ್ರಿಕ್ಕೇ ಸ್ವೀಕೃತ ಭರನಾಯ್ ಕ್ಕೊಣ್ಡು ಉಪಾಯಾನ್ತರ ಸ್ಥಾನತ್ತಿಲೇ ನಿವೇಶಿಕ್ಕೈಯಾಲುಮ್, ನ್ಯಸ್ತಭರನಾನ ಇವ್ವಧಿಕಾರಿಕ್ಕು ಪಿನ್ಪು ಅನನ್ಯೋಪಾಯತ್ವಮ್ ನಿಲೈನಿರ್ಕ್ಕೈಕ್ಕಾಹವುಮ್ ಉಪಾಯತ್ವಾಧ್ಯವಸಾಯಮ್ ಇವ್ವಿಡತ್ತಿಲೇ ವಿವಕ್ಷಿತಮಾಯಿற்று.

ಕೊಡಬೇಕು, ಎಂಬ ಗೋಪ್ತೃತ್ವವರಣಕ್ಕೆ ಅವ್ಯವಹಿತ ಕಾರಣವಾದ್ದರಿಂದ, ಮಹಾವಿಶ್ವಾಸ ವಾಚಕ ಶಬ್ದದಲ್ಲಿ ಗೋಪ್ತೃತ್ವವರಣವು ಅಂತರ್ಗತವೆನ್ನುತ್ತಾರೆ ಇದು ಸರಿಯಲ್ಲ. "ಪ್ರಪದ್ಯೇ" ಎಂಬ ಶಬ್ದಕ್ಕೆ ಎರಡು ಶಕ್ತಿಗಳಿವೆ ಒಂದು ಮಹಾವಿಶ್ವಾಸ. ಮತ್ತೊಂದು ನಿರಪೇಕ್ಷೋಪಾಯತ್ವ ಪ್ರಾರ್ಥನೆ ಇದೇ ಉಪಾಯಾಂತರವಾದ ಭಕ್ತಿಯೋಗವನ್ನು ಅಪೇಕ್ಷಿಸದೆ ಅಕಿಂಚನಾಧಿಕಾರಿ ವಿಷಯದಲ್ಲಿ ಫಲವನ್ನು ಕೊಡುತ್ತದೆ ನಿರಪೇಕ್ಷೋಪಾಯತ್ವ ಪ್ರಾರ್ಥನೆ-ಅಂದರೆ ನಿರಪೇಕ್ಷ ರಕ್ಷಕೋಭವ ಎಂಬ ಪ್ರಾರ್ಥನೆಯಲ್ಲಿ, ರಕ್ಷಕೋಭವ ಎಂಬ ಗೋಪ್ತೃತ್ವವರಣ ರೂಪ ಸಾಮಾನ್ಯ ಪ್ರಾರ್ಥನೆಯೂ ಅಡಗಿದೆ. ಆದ್ದರಿಂದ ಶರಣಂ ಪ್ರಪದ್ಯೇ ಎಂಬ ಪದಗಳಲ್ಲಿ ಗೋಪ್ತೃತ್ವವರಣವೂ ಆರ್ಥಿಕವಾಗಿ ಅನುಸಂಧೇಯ ಗೋಪ್ತೃತ್ವವರಣವು ಬೇರೆ ಉಪಾಯತ್ವ ಪ್ರಾರ್ಥನೆ ಬೇರೆ

ಅನಂತರ ಉಪಾಯತ್ವ ಪ್ರಾರ್ಥನಾ ಪೂರ್ವಕ ಭರಸಮರ್ಪಣವೂ "ಶರಣಂ ಪ್ರಪದ್ಯೇ" ಎಂಬ ಪದಗಳಲ್ಲಿ ಅನುಸಂಧೇಯ, ಎಂಬುದನ್ನು (1) **ಅಹಮಸ್ಮ್ಯ ಪರಾಧಾನಾಂ** ಎಂದಾರಂಭಿಸಿ ನಿರೂಪಿಸುತ್ತಾರೆ. ಎಲೈ ಭಗವಂತನೇ ನಾನು ಅಪರಾಧಗಳಿಗೆಲ್ಲಾ ಆಶ್ರಯಭೂತನು. ಅಕಿಂಚನನು ಗತಿಯಿಲ್ಲದವನು. (2) **ತ್ವಮೇವೋಪಾಯ ಭೂತೋಮೇಭವ**–ನೀನೇ ನನಗೆ ಉಪಾಯವಾಗಿರು. ಉಪಾಯವಾಗಿ ವರಿಸಲ್ಪಡುವವನು ಚೇತನನಾದ್ದರಿಂದ, ಸಾಮಾನ್ಯವಾದ ಉಪಾಯತ್ವವು, ಚೇತನೈಕಾಂತವಾದ ರಕ್ಷಕತ್ವದಲ್ಲಿ ಪರ್ಯವಸಿಸುವುದರಿಂದ, ಇಲ್ಲಿ ನಿರಪೇಕ್ಷ ರಕ್ಷಕನಾಗು ಎಂಬುದು ತಾತ್ಪರ್ಯ **ಇತಿಪ್ರಾರ್ಥನಾಮತಿಃ**–"ಉಪಾಯಾಂತರ ನಿರಪೇಕ್ಷ ರಕ್ಷಕೋಭವ" ಎಂಬ ಪ್ರಾರ್ಥನಾ ಬುದ್ಧಿಯು **ಶರಣಾಗತಿರಿತ್ಯುಕ್ತಾ**–"ಯಾಂಚಾನ್ವಿತಮಭಿವದಂತಿ ಪ್ರಪದನಂ" ಎಂದು ಮುಂದೆ ಹೇಳುವುದರಿಂದ, ಶರಣಾಗತಿ ರೂಪ ಅಂಗಿ ವಿಶೇಷಣ "ಶರಣಾಗತಿ ಶಬ್ಧಶಕ್ಯತಾವಚ್ಛೇದಿಕಾ" **ಸಾ**–ಆ ಉಪಾಯಾಂತರ ನಿರಪೇಕ್ಷ ರಕ್ಷಕತ್ವ ಪ್ರಾರ್ಥನೆಯು **ದೇವೇऽಸ್ಮಿನ್ ಪ್ರಯುಜ್ಯತಾಂ**–ಭಗವಂತನಲ್ಲಿ ಕರ್ತವ್ಯವೆಂದು (3) **ಉಪಾಯೇಗೃಹ ರಕ್ಷಿತ್ರೋಃ**–ಉಪಾಯ, ಮನೆ, ರಕ್ಷಕ, ಈ ಮೂರು ಅರ್ಥಗಳಲ್ಲಿ **ಶಬ್ದಶ್ಶರಣ ವಿತ್ಯಯಂ**–"ಶರಣ"ವೆಂಬ ಶಬ್ದವು **ವರ್ತತೇ**–ಪ್ರಯೋಗಿಸಲ್ಪಡುತ್ತದೆ **ಸಾಂಪ್ರತಂತ್ವೇಷಃ** – ಈ ಪ್ರಕರಣದಲ್ಲಿ ಈ ಶರಣ ಶಬ್ದವು, **ಉಪಾಯಾರ್ಥೈಕವಾಚಕಃ** – ಉಪಾಯವೆಂಬ ಅರ್ಥವನ್ನು ಮಾತ್ರ ಬೋಧಿಸುತ್ತದೆ ಎಂದೂ ಹೇಳುವಂತೆ, ಉಪಾಯಾಂತರಾ ಶಕ್ತನಿಗ **ಸರ್ವಶಾಸ್ತ್ರಾರ್ಥ ಸಾಧಾರಣಮಾನ**–ಅಂದರೆ ಭಕ್ತಿ ಪ್ರಪತ್ತಿಗಳಿಗೆ ಸಾಧಾರಣವಾದ, **ರಕ್ಷಕತ್ವ ಮಾತ್ರತ್ತಿಲೇ ನಿರ್ಕ್ಕೈಯನ್ರಿಕ್ಕೇ**–ಸಾಧಾರಣ ರಕ್ಷಕನಲ್ಲದೆ,**ಸ್ವೀಕೃತಭರನಾಯ್ ಕೊಂಡು**-ನನ್ನಿಂದ ಭಕ್ತಿಯೋಗವನ್ನು ಅನುಷ್ಠಿಸಲಾಗುವುದಿಲ್ಲ. ಆ ಭಕ್ತಿರೂಪೋಪಾಯ ಸ್ಥಾನದಲ್ಲಿ ನೀನೇ ಇದು ರಕ್ಷಿಸಬೇಕು.ಅಂದರೆ ಭಕ್ತಿರೂಪವಾದ ಭರವನ್ನು ನೀನೇ ವಹಿಸಿಕೊಂಡು ರಕ್ಷಿಸಬೇಕು.ಆ ರಕ್ಷಣ ಭರವು ನಿನ್ನದೇ,ಎಂದ

---

1), 2) ಅಹಿರ್ಬುಧ್ನ್ಯ ಸಂಹಿತೆ 37-30-31, 3) ಅಹಿ ಸಂ 7-29

ಉಪಾಯಮೆನ್ರಾಲೊರು ವಿರಹೆನ್ನ ಮಾತ್ರಮಾಹೈಯಾಲೇ ಇವ್ವುಪಾಯತ್ವಂ ಚೇತನಾಚೇತನ ಸಾಧಾರಣ ಮಾಯಿರುಕ್ಕೈಯಾಲುಮ್ (1) **"ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವ ವರಣಂ ತಥಾ" ಎನ್ರುಮ್,** (2) **ಸರ್ವಜ್ಞೋಽಪಿಹಿ ವಿಶ್ವೇಶಸ್ಸದಾ ಕಾರುಣಿಕೋಽಪಿಸರ್ । ಸಂಸಾರ ತನ್ತ್ರ ವಾಹಿತ್ವಾದ್ರಕ್ಷಾಪೇಕ್ಷಾಂ ಪ್ರತೀಕ್ಷತೇ" ಎನ್ರುಮ್. ಶೊಲ್ಲುಹಿರಪಡಿಯೇ ಚೇತನೈಕಾನ್ತಮಾನ ಗೋಪ್ತೃತ್ವ ವರಣಂ ಅನುಸನ್ಧೇಯ ಮಾಹೈಯಾಲುಮ್, ಗೋಪ್ತೃತ್ವವರಣ ಮಿಙ್ಗೇವಿವಕ್ಷಿತಮ್.**

ಬರ ಸಮರ್ಪಣವನ್ನು ಮಾಡುವ ಪ್ರಪನ್ನನ ವಿಷಯದಲ್ಲಿ, ಆ ಭರವನ್ನು ಸ್ವೀಕರಿಸಿದವನಾಗಿ, **ಉಪಾಯಾಂತರ ಸ್ಥಾನತ್ತಿಲೇ ನಿವೇಶಿಕ್ಕೈಯಾಲುಮ್**–ಭಕ್ತಿರೂಪೋಪಾಯ ಸ್ಥಾನದಲ್ಲಿ ಭಗವಂತನೇ ಇದ್ದುಕೊಂಡು, ಅಂದರೆ ಭಕ್ತಿರೂಪವಾದ ಉಪಾಯವನ್ನು ಅನುಷ್ಠಿಸಿದರೆ, ಕೊಡುವ ಫಲವನ್ನೇ, ತಾದೃಶ ಭಕ್ತಿರೂಪೋಪಾಯವನ್ನು ಅಪೇಕ್ಷಿಸದೆ, ಭಕ್ತಿರೂಪವಾದ ಭರವನ್ನು ತಾನೇ ವಹಿಸಿ, ರಕ್ಷಣೆಗೆ ಉಪಾಯವಾಗುತ್ತಾನೆಂದರ್ಥ. **ನ್ಯಸ್ತ ಭರನಾನ ಇವ್ವಧಿಕಾರಿಕ್ಕು** – ಸಮರ್ಪಿತ ಭರನಾದ ಈ ಆಕಿಂಚನಾಧಿಕಾರಿಗೆ, **ಪಿನ್ಬು** – ಭರಸಮರ್ಪಣಾನಂತರ, **ಅನನ್ಯೋಪಾಯತ್ವಂ ನಿಲೈನಿಕ್ಕೈಕ್ಕಾಹವುಮ್**–ಬೇರೆ ಉಪಾಯಗಳನ್ನು ಅನುಷ್ಠಿಸಬೇಕಿಲ್ಲದ ನಿಷ್ಠೆಯು ಸ್ಥಿರ ಪ್ರತಿಷ್ಠಿತವಾಗಿರಲೂ, **ಉಪಾಯತ್ವಾಧ್ಯವಸಾಯಂ, ಇವ್ವಿಡತ್ತಿಲೇ ವಿವಕ್ಷಿತ ಮಾಯಿಟ್ರು**– ಮಹಾವಿಶ್ವಾಸ ಪರ್ಯವಸಾನವಾದ ನಿರಪೇಕ್ಷ ರಕ್ಷಕತ್ವಾಧ್ಯವಸಾಯವು "ಶರಣಂ ಪ್ರಪದ್ಯೇ" ಎಂಬ ಪದಗಳಲ್ಲಿ ವಿವಕ್ಷಿತವು. **ಉಪಾಯಮೆನ್ರಾಲ್** ಇತ್ಯಾದಿ ಉಪಾಯವೆಂದರೆ ಒಂದು ಕಾರಣ ಎಂಬುದು ಮಾತ್ರವಾದ್ದರಿಂದ, ಈ ಉಪಾಯತ್ವವು ಚೇತನನಾದ ಭಗವಂತನಿಗೂ ಅಚೇತನವಾದ ಭಕ್ತಿಗೂ ಅನ್ವಯಿಸುವುದರಿಂದ, (1) **ರಕ್ಷಿಷ್ಯತೀತಿ** ರಕ್ಷಿಸುತ್ತಾನೆಂಬ ವಿಶ್ವಾಸವೂ, ಗೋಪ್ತೃತ್ವವರಣವೂ (2) **ಸರ್ವಜ್ಞೋಽಪಿಹಿ** ಇತ್ಯಾದಿ, ಪ್ರಪಂಚಕ್ಕೆ ನಿಯಂತಾವಾದ ಸರ್ವೇಶ್ವರನು ಯಾವಾಗಲೂ ಕಾರುಣಿಕನಾಗಿದ್ದರೂ, ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಬಾರದೆ ಸಂಸಾರ ತಂತ್ರವನ್ನು ನಡೆಸಬೇಕಾದ್ದರಿಂದ, ನೀನು ನನ್ನನ್ನು ರಕ್ಷಿಸು, ಗೋಪ್ತಾವಾಗಿರು, ಎಂಬ ಪ್ರಾರ್ಥನೆಯನ್ನು ಎದುರು ನೋಡುತ್ತಾನೆ ನಾವು ಪ್ರಾರ್ಥಿಸದೆ ರಕ್ಷಿಸುವುದಿಲ್ಲವೆಂದು ತಾತ್ಪರ್ಯ. ಹೀಗೆ ಶಾಸ್ತ್ರಗಳು ಹೇಳುವ ರೀತಿಯಲ್ಲಿ ಚೇತನ ಮಾತ್ರ ನಿಷ್ಠವಾದ **ಗೋಪ್ತೃತ್ವವರಣವೂ ಇಂಗೇ**-"ಶರಣಂ ಪ್ರಪದ್ಯೇ" ಎಂಬ ಪದಗಳಲ್ಲಿ ಅನುಸಂಧೇಯವು ಹಾಗಾದರೆ ಒಂದು ಪ್ರಯೋಗದಲ್ಲಿ, "ಸಕೃದುಚ್ಚಾರಿತ ಶಬ್ದಸ್ಸಕೃದೇವಾರ್ಥಂಗಮಯತಿ" ಎಂಬ ನ್ಯಾಯವನ್ನನುಸರಿಸಿ, ಒಂದು ಸಲ ಮಾಡಿದ ಶಬ್ದೋಚ್ಚಾರಣವು ಒಂದೇ ಅರ್ಥವನ್ನು ಬೋಧಿಸುವುದರಿಂದ, "ಶರಣಂ ಪ್ರಪದ್ಯೇ" ಎಂಬ ಪ್ರಯೋಗದಲ್ಲಿ ನಿರಪೇಕ್ಷ ರಕ್ಷಕತ್ವ ಪ್ರಾರ್ಥನೆಯನ್ನೂ, ಗೋಪ್ತೃತ್ವ ವರಣವನ್ನೂ ಹೇಗೆ ಅನುಸಂಧಾನ ಮಾಡುವುದು ಎಂಬ ಸಂದೇಹಕ್ಕೆ **'ಅದಿಲ್‌ಶರಣಶಬ್ದಮ್'** ಎಂದಾರಂಭಿಸಿ ಸಮಾಧಾನವನ್ನು ಹೇಳುತ್ತಾರೆ. **ಶರಣಂ ಪ್ರಪದ್ಯೇ,** ಎಂಬಲ್ಲಿರುವ ಶರಣ ಶಬ್ದವು ಒಂದು ಪ್ರಯೋಗದಲ್ಲಿ ಎರಡು ಅರ್ಥವನ್ನು ಹೇಳುವುದಿಲ್ಲವಾದ್ದರಿಂದ, ಈ ಆಕಿಂಚನಾಧಿಕಾರಿಗೆ ಅಸಾಧಾರಣವಾದ ನಿರಪೇಕ್ಷಕ ರಕ್ಷಕತ್ವಾಧ್ಯವಸಾಯವು ಶರಣಂ ಪ್ರಪದ್ಯೇ ಎಂಬಲ್ಲಿ ಶಾಬ್ದವಾಗಿ ಸರ್ವಾಧಿಕಾರ ಸಾಧಾರಣವಾದ ಗೋಪ್ತೃತ್ವವರಣವು ಅರ್ಥವಾಗಿ– ಅರ್ಥಾಲ್ಲಬ್ಧವಾಗಿದೆ. ಆದ್ದರಿಂದ ಗೋಪ್ತೃತ್ವವರಣವನ್ನೂ ಅನುಸಂಧಾನಮಾಡಿ ನಿರಪೇಕ್ಷ ರಕ್ಷಕತ್ವ ಪ್ರಾರ್ಥನಾತ್ಮಕವಾದ ಉಪಾಯತ್ವ ಪ್ರಾರ್ಥನೆಯನ್ನೂ ಅನುಸಂಧಾನ ಮಾಡಬೇಕು. ಮೊದಲನೆಯದು–ಗೋಪ್ತೃತ್ವವರಣವು ಅಂಗಗಳಲ್ಲೊಂದು. ಉಪಾಯತ್ವ ಪ್ರಾರ್ಥನೆಯು, ಪ್ರಾರ್ಥನಾನ್ವಿತ ಭರಸಮರ್ಪಣ ರೂಪ ಅಂಗಿ ವಿಶೇಷಣ

---

1) ಅಹಿ. ಸಂ 37-18 2) ಲಕ್ಷ್ಮೀತಂತ್ರ 17-78

ಅದಿಲ್ ಶರಣಶಬ್ದಮೊರು ಪ್ರಯೋಗತ್ತಿಲೇಯಿರಣ್ಡರ್ಥತ್ತೈಯು ಭಿಧಾನ ಮ್ಪಣ್ಣಮಾಟ್ಟಾಮ್ಯೆ ಯಾಲೇ ಇವ್ವಧಿಕಾರಿಕ್ಕ ಸಾಧಾರಣಮಾನ ಉಪಾಯತ್ವಾಧ್ಯವಸಾಯಮುಮ್ ಇವ್ವಿಡತ್ತಿಲೇ ಶಾಬ್ದಮಾಯ್ ಸರ್ವಾಧಿಕಾರಿ ಸಾಧಾರಣಮಾನ ಗೋಪ್ತೃತ್ವವರಣಂ ಅರ್ಥಮಾಹಕ್ಕಡವದು.

ಅರಿವಿತ್ತನ ರನ್ಬರೈಯಮ್ ಪರೈಯುಂ ಮುಪಾಯಮಿಲ್ಲಾ ।
ತ್ತುರವಿತ್ತು ನಿಯಿಱ್ಱಣೈಯಾಮ್ ಪರನೈ ವರಿಕ್ಕುಮ್ ವಹೈ ।
ಉರುವಿತ್ತನೈಯಿನ್ರಿ ಯೊತ್ತಾರೆನ ನಿನ್ರವುಮ್ಬರೈನಾಮ್ ।
ಪಿರವಿತ್ತುಯರ್ ಶೆಹುವೀರೆನ್ರಿರಕ್ಕುಮ್ ಪಿೞೈಯರವೇ ॥೧೮॥

ಪ್ರಖ್ಯಾತಃ ಪಂಚಷಾಂಗಸ್ಸಕೃದಿತಿ ಭಗವಚ್ಛಾಸನೈ ರೇಷಯೋಗ ।
ಸ್ತತ್ರ ದ್ವಾಭ್ಯಾಮುಪಾಯಾದ್ವಿರತಿ ರನಿತರೋಪಾಯ ತೈಕೇನ ಬೋಧ್ಯಾ ।
ಏಕೇನ ಸ್ವಾಂತದಾರ್ಢ್ಯಂ ನಿಜಭರ ವಿಷಯೇನ್ಯೇನ ತತ್ಸಾಧ್ಯತೇಚ್ಛಾ
ತತ್ವಜ್ಞಾನ ಪ್ರಯುಕ್ತಾತ್ವಿಹ ಸಪರಿಕರೇ ತಾದಧೀನ್ಯಾದಿ ಬುದ್ಧಿಃ ॥೨೭॥

ಇತಿ ಕವಿ ತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ, ಶ್ರೀ ಮದ್ವೇಂಕಟನಾಥಸ್ಯ
ವೇದಾಂತಾ ಚಾರ್ಯಸ್ಯ ಕೃತಿಷು ಶ್ರೀ ಮದ್ರಹಸ್ಯತ್ರಯಸಾರೇ
ಪರಿಕರ ವಿಭಾಗಾಧಿಕಾರಃ ಏಕಾದಶಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಈ ಅರ್ಥಗಳನ್ನು ನಮಗೆ ಆಚಾರ್ಯರುಗಳು ಉಪದೇಶಿಸಿದ್ದಾರೆಂದು **ಅರಿವಿತ್ತನರ್ ಅನ್ಬರ್** ಎಂಬ ಪಾಶುರದಲ್ಲಿ ನಿರೂಪಿಸುತ್ತಾರೆ **ಅನ್ಬರ್**–ಪ್ರೀತಿಯಿಂದ ಕೂಡಿದ ಆಚಾರ್ಯರುಗಳು, **ಐಯಮ್**–ಸಂಶಯವನ್ನು **ಪರೈಯುಮ್** – ಹೇಳುವ – ಈ ಉಪಾಯವನ್ನು ನಾವು ಅನುಷ್ಠಿಸಿ ಫಲವನ್ನು ಪಡೆಯುತ್ತೇವೆಯೋ, ಎಂಬ ಸಂಶಯವನ್ನು ಉಂಟುಮಾಡುವ ಅಂದರೆ ದುಷ್ಕರವಾದ ಎಂಬುದು ತಾತ್ಪರ್ಯ, **ಉಪಾಯಮ್**–ಭಕ್ತಿಯೋಗಾದಿಗಳು, **ಇಲ್ಲಾತ್ತುರವಿ**-ಇವುಗಳಿಲ್ಲದ ಆಕಿಂಚನ್ಯವೆಂಬ **ತುನಿಯಿಲ್**–ದುಃಖಾವಸ್ಥೆಯಲ್ಲಿ, **ತುಣೈಯಾಮ್**–ಸಹಾಯಭೂತನಾದ, ಅಂದರೆ ಅಭಿಮತ ಫಲವನ್ನು ಸಂಪಾದಿಸಿ ಕೊಡುವ ಸ್ವಭಾವನಾದ, **ಪರನೈ**–ಉತ್ಕೃಷ್ಟನಾದ ಭಗವಂತನನ್ನು, **ವರಿಕ್ಕುಂವಹೈ**–ಶರಣವಾಗಿ ವರಣ ಮಾಡುವ ಪ್ರಕಾರವನ್ನು, ಭಗವಂತನ ಪರತ್ವವನ್ನು ಮಾತ್ರ ನೋಡಿ ಹೆದರದೆ, ಪುರುಷಕಾರ, ಸಂಬಂಧ ಗುಣ ವ್ಯಾಪಾರ ಪ್ರಯೋಜನಗಳಿಂದ ಅವನ ಸೌಲಭ್ಯಾದಿ ಗುಣಗಳನ್ನು ಅನುಸಂಧಾನ ಮಾಡಿ, ಮಹಾವಿಶ್ವಾಸವನ್ನು ಹೊಂದಿ, ಅವನನ್ನು ಉಪಾಯಾಂತರ ಸ್ಥಾನದಲ್ಲಿರಿಸುವ ಪ್ರಕಾರವನ್ನು ತಿಳಿದು, **ಉರವಿತ್ತನೈಯಿನ್ರಿ**–ಸ್ವಲ್ಪವೂ ಸಂಬಂಧವಿಲ್ಲದ, **ಒತ್ತಾರೆನನಿನ್ರ**–ಕರ್ಮವಶ್ಯತೆಯಿಂದ ನಮಗೆ ಸಮಾನರಾಗಿರುವ **ಉಂಬರೈ**– ದೇವತೆಗಳನ್ನು **ನಾಮ್** – ಮುಮುಕ್ಷುಗಳಾದ ನಾವು, **ಪಿರವಿತ್ತುಯರ್**–ಸಂಸಾರ ದುಃಖವನ್ನು, **ಶೆಹುವೀರ್**-ಹೋಗಲಾಡಿಸಿರಿ, **ಎನ್ರು**–ಎಂದು, **ಇರಕ್ಕುಮ್**–ಯಾಚಿಸುವ **ಪಿೞೈ**–ತಪ್ಪು, **ಅರವೇ**–ಹೋಗುವಂತೆ, **ಅರಿವಿತ್ತನರ್**–ನಮಗೆ ಜ್ಞಾನೋಪದೇಶ ಮಾಡಿದರು ಆಚಾರ್ಯರುಗಳು ಪುರುಹಕಾರಾದಿ ಸಂಬಂಧವೇ ಮೊದಲಾದವುಗಳನ್ನು ಉಪದೇಶಿಸಿ, ಮಹಾವಿಶ್ವಾಸವನ್ನುಂಟು ಮಾಡಿ ಭಗವಂತನ ಸೌಲಭ್ಯಾದಿ ಗುಣಗಳನ್ನು ತಿಳಿವು ಪಡಿಸಿ, ಭಗವಂತನನ್ನು ಆಶ್ರಯಿಸಿ ಮೋಕ್ಷವನ್ನು ಪಡೆಯಬಹುದು ಎಂಬ ತತ್ವವನ್ನು ತಿಳಿಸದೆ ಇದ್ದರೆ, ದೇವತಾಂತರಗಳನ್ನು ಕ್ಷಿಪ್ರ ಕಾರಿತ್ವ ಜ್ಞಾನ ಮಾತ್ರದಿಂದ ಮೋಕ್ಷಕ್ಕೋಸ್ಕರ ಆಶ್ರಯಿಸುವ ಮಹಾಪಾಪವು ನಮಗೆ ಸಂಭವಿಸುತ್ತಿತ್ತು. ಅಂಥಹ ದುರ್ದಶೆಯು ಬರದಂತೆ ನಮಗೆ ಆಚಾರ್ಯರುಗಳು ಪರಮೋಪಕಾರ ಮಾಡಿರುತ್ತಾರೆಂಬುದು ತಾತ್ಪರ್ಯ.

ಅನಂತರ ಐದು ಅಂಗಗಳ ಸಕೃತ್ಕರ್ತವ್ಯತೆಯನ್ನು ಅದರಿಂದ ಉಂಟಾಗುವ ಫಲವನ್ನೂ **ಪ್ರಖ್ಯಾತಃ ಪಂಚಷಾಂಗಃ** ಎಂಬ ಶ್ಲೋಕದಿಂದ ನಿರೂಪಿಸುತ್ತಾರೆ. **ವಿಷಃಯೋಗಃ**–ಈ ನ್ಯಾಸ ರೂಪವಾದ ಉಪಾಯವು, **ಭಗವಚ್ಛಾಸನೈಃ** – ಲಕ್ಷ್ಮೀತಂತ್ರಾಹಿರ್ಬುಧ್ನ್ಯಸಂಹಿತಾದಿ ರೂಪ ಭಗವಚ್ಛಾಸ್ತ್ರಗಳಿಂದ, **ಪಂಚ ಷಾಂಗಃ,** ಐದು ಅಥವಾ ಆರು ಅಂಗಗಳಿಂದ ಕೂಡಿದುದಾಗಿ, ಪಂಚವಾಷಡ್ವಾ ಅಂಗಾನಿಯಸ್ಯಸಃ ಪಂಚಷಾಂಗಃ ಎಂದು ಸಮಾಸ ಕಾಮ್ಯ ಪ್ರಪತ್ತಿಯಲ್ಲಿ ಫಲತ್ಯಾಗ ರೂಪವಾದ ಅಂಗವಿಲ್ಲದುದರಿಂದ ಐದು ಅಂಗಗಳು ಮಾತ್ರ. ಮೋಕ್ಷಾರ್ಥ ಪ್ರಪತ್ತಿಯಲ್ಲಿ ಫಲತ್ಯಾಗ ರೂಪವಾದ ಅಂಗವಿರುವುದರಿಂದ ಷಡಂಗವೆಂಬ ವ್ಯವಸ್ಥೆ. ಆದ್ದರಿಂದ, "ನ್ಯಾಸಃ ಪಂಚಾಂಗ ಸಂಯುತಃ" ಎಂಬ ವಚನಕ್ಕೆ ವಿರೋಧವಿಲ್ಲ **ಸಕೃದಿತಜ ಪ್ರಖ್ಯಾತಃ** – "ಸಕೃದೇವಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯೇನ್ನರವ್" ಇತ್ಯಾದಿ ವಚನಗಳ ಪ್ರಕಾರ, ಬಂದ ಫಲಕ್ಕೆ ಒಂದೇ ಸಲ ಅನುಷ್ಠಿಸಲ್ಪಡತಕ್ಕದ್ದು ಎಂಬುದು ಪ್ರಖ್ಯಾತ. ಸಾಂಗಭರನ್ಯಾಸ ರೂಪವಾದ ಷಡಂಗ ಯೋಗಕ್ಕೆ ಸಕೃತ್ವವು ಹೇಳಲ್ಪಡುವುದರಿಂದ, ಅಂಗಿಯ ಹಾಗೆ ಅಂಗಕ್ಕೂ ಸಕೃದನುಷ್ಠಾನವು ಹೇಳಲ್ಪಟ್ಟಿತು **ತತ್ರ** ಆ ಅಂಗಗಳ ಮಧ್ಯ, **ದ್ವಾಭ್ಯಾಂ**-ಆನುಕೂಲ್ಯ ಸಂಕಲ್ಪ ಪ್ರಾತಿಕೂಲ್ಯ ವರ್ಜನಗಳಿಂದ **ಅಪಾಯಯಾದ್ವಿರತಿಃ**-ಆಜ್ಞಾತಿಲಂಘನ ರೂಪವಾದ ಅಪಾಯದಿಂದ ಅದಾಗಿ ಪಾಪದಿಂದ, ನಿವೃತ್ತಿಯು (ತಿಳಿಯತಕ್ಕದ್ದು) **ಏಕೇನ** – ಕಾರ್ಪಣ್ಯ ರೂಪಾಂಗದಿಂದ **ಅನಿತರೋಪಾಯತಾ** ಪ್ರಪತ್ತ್ಯುತ್ತರ ಕಾಲದಲ್ಲಿ ಅನನ್ಯೋಪಾಯತ್ವವು **ಬೋಧ್ಯಾ**–ಪ್ರಯೋಜನ ವಾಗಿ ತಿಳಿಯತಕ್ಕದ್ದು **ಏಕೇನ**–ಮಹಾವಿಶ್ವಾಸ ರೂಪವಾದ ಅಂಗದಿಂದ, **ನಿಜಭರವಿಷಯೇ**-ತನ್ನ ಭರವನ್ನು ಭಗವಂತನು ಅಂಗೀಕರಿಸಿ ಫಲಪ್ರದಾನ ಮಾಡುತ್ತಾನೆಂಬುದರಲ್ಲಿ, **ಸ್ವಾಂತದಾರ್ಢ್ಯಂ**–"ಸ್ವಾಂತಂ ಹೃಸ್ವಾನಸಂ ಮನಃ" ಎಂದು ಅಮರಕೋಶ. ಮನಸ್ಸಿನ ಧೃಢತ್ವವು ರಕ್ಷಿಸುತ್ತಾನೆಯೋ ಇಲ್ಲವೋ ಎಂಬ ಶಂಕೆಯಿಲ್ಲದ ಮಹಾ ವಿಶ್ವಾಸವು, ಎಂದರ್ಥ **ಅನ್ಯೇನ**-ಗೋಪ್ತೃತ್ವವರಣದಿಂದ. "ನಿಜಭರವಿಷಯೇ" ಎಂಬುದನ್ನು ಇಲ್ಲಿಯೂ ವ ಧ್ಯವ ಮಣಿನ್ಯಾಯವನ್ನನುಸರಿಸಿ, ಅನ್ವಯಿಸಿಕೊಳ್ಳಬೇಕು **ತತ್ಸಾಧ್ಯತೇಚ್ಛಾ**–ತಸ್ಯ ಆ ಭಗವಂತನಿಗೆ, **ಸಾಧ್ಯ ತೇಚ್ಛಾ**–ಈ ಫಲವನ್ನು ಇವನಿಗೆ ಸಾಧಿಸಿ ಕೊಡಬೇಕೆಂಬ ಇಚ್ಛೆಯು **ಉಂಟಾಗುತ್ತದೆ. "ತತ್ತದಿಷ್ಟ** ಪ್ರದಿತ್ಸಾತಾ ಪ್ರೀತಿರೇವ ಪ್ರಸಾಧ್ಯತೇ" ಎಂಬ ಫಲ ಪ್ರದಾನೇಚ್ಛೆ **ತತ್ವಜ್ಞಾನಪ್ರಯುಕ್ತಾ**–ಶಾಸ್ತ್ರ ಜನ್ಯವಾದ ತತ್ವಜ್ಞಾನ ದಿಂದ, ಉಂಟಾದ, **ತಾದರ್ಥ್ಯೇನ್ಯಾದಿಬುದ್ಧಿಸ್ತು**. ಭಗವಂತನಿಗೆ ಅಧೀನ ಕರ್ತೃಕತ್ವವು, ಆದಿ ಶಬ್ದದಿಂದ, ಭಗವ ಚ್ಛೇಷತ್ವವೂ, ಫಲವು ಅವನದೇ ಎಂಬುವೂ ಗ್ರಹಿಸಲ್ಪಡುತ್ತವೆ. ತೇಷಾಂಬುದ್ಧಿಃ–ಕರ್ತೃತ್ವ ತ್ಯಾಗ ಮಮತಾ ತ್ಯಾಗ, ಫಲತ್ಯಾಗಗಳು ಹೇಳಲ್ಪಟ್ಟವು ಇಲ್ಲ **"ತು" ಎಂಬ** ಪದದಿಂದ ವೈಲಕ್ಷಣ್ಯವು ದ್ಯೋತಿತವಾಗುತ್ತದೆ ಇದನ್ನು ವಿವರಿಸುತ್ತಾರೆ–**ಇಹ–ಸಪರಿಕರೇ**–ಅನುಷ್ಠಿಸಲ್ಪಡುವ ಈ ಪ್ರಪತ್ತಿ ಶಾಸ್ತ್ರದ, ಐದು ಅಂಗಗಳಿಂದ ಕೂಡಿದ ಅಂಗಿಯಲ್ಲಿ **ಭವತಿ**–ಅಂಗವಾಗಿದೆ. ಅದಾಗಿ ಈ ಸಾತ್ವಿಕ ತ್ಯಾಗವು ಐದು ಅಂಗಗಳಿಗೂ ಅಂಗಿಗೂ ಅಂಗವು.

ಶ್ರೀ ಮದ್ರಹಸ್ಯತ್ರಯಸಾರದ ಪರಿಕರವಿಭಾಗಾಧಿಕಾರಕ್ಕೆ **"ಸಾರಚಂದ್ರಿಕಾ"** ವ್ಯಾಖ್ಯಾನವು ಸಮಾಪ್ತ.

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
6	1	ಪಾಡು	ಪಾಡುಂ
17	4	ಶ್ರೈತಿರುವರಯ್‌ವೊೞಿ	ತಿರುವಾಯ್ಮೊೞಿ
	"	ಶ್ರೈಂಗೋಗದಶ್ರೈ	ಂಗೋಗದ'ಶ್ರೈ
20	10	ಹಳ್ಳಿಲಿ	ಹಳ್ಳಿ
22	3	ಗಳ್ಳಿಧ್ರಕಾಶಿ	ಗಳ್ಳಿಪ್ರಕಾಶಿ
42	2	ಯಣತ್ರಿ	ಯುಣತ್ರಿ
62	8	ಅನ್ವರ್ಥತ್ತ್ರೈ	ಇನ್ವರ್ಥತ್ತ್ರೈ
63	9	ವಸುವುವ್	ವಸ್ತುವುವ್
64	10	ವ್ವಭಜವ್	ಮಭಜವ್
70	4	ತೆಳಿನು	ತೆಳಿನ್ದು
99	1	ಯಕ್ತನು	ಯುಕ್ತನು
101	9	ಬ್ರಹಾ	ಬ್ರಹ್ಮಾ
106	8	ಕೃತರ್ತ್ರರಾಹ	ಕೃತಾರ್ಥರಾಹ
109	7	ಪಸಿದ್ಧಿ	ಫಲಸಿದ್ಧಿ
150	5	ವಿಱಶೇಷ	ವಿಶೇಷ
158	7	ಸಧು	ಸಾಧು
197	6	ಶಕ್ಯಾ	ಶಕ್ತಾ
198	4	ಆನುಷಙ್ಗಕ	ಆನುಷಙ್ಗಿಕ
"	5	ಅನುಷಙಿ	ಅನುಷಙ್ಗ
201	7	ತೆಳಿನ್ದೊೞಿಂರ	ತೆಳಿನ್ದೊೞಿಂದ
211	2	ವ್ಯಾವೃತ್ತ	ವ್ಯಾವೃತ್ತಿ
222	2	ನ್ಯಾಲಾ	ನ್ಯಾವಲಾ
226	3	ಯೋಗ	ಯೋಗ್ಯ

ಶುಭಮಸ್ತು

ಪುಸ್ತಕ ದೊರೆಯುವ ಸ್ಥಳ :

1. ಶ್ರೀ ವೈಷ್ಣವ ಸಭಾ (ರಿ)
ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ
3ನೇ ಮೈನ್ ಪ್ರಕಾಶನಗರ ಬೆಂಗಳೂರು-560 021
ದೂರವಾಣಿ 325111

2. ಸ. ಮಾ. ಕೃಷ್ಣಮಾಚಾರ್ಯ
ನಂ 51/ಎನ್ 1 ಎ ಮೈನ್ ರಾಜಾಜಿನಗರ
ಬೆಂಗಳೂರು-560 010 ದೂರವಾಣಿ 321323

3. ವೇದಾಂತ ಬುಕ್ ಹೌಸ್
ನಂ 92, 6ನೇ ಮುಖ್ಯರಸ್ತೆ ಚಾಮರಾಜಪೇಟೆ
ಬೆಂಗಳೂರು - 560 018. ದೂರವಾಣಿ 607590

4. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ ಪುಸ್ತಕ ವ್ಯಾಪಾರಿಗಳು
ಬೆಂಗಳೂರು.

5. ಗೀತಾ ಏಜನ್ಸೀಸ್, ಬಳೇಪೇಟೆ, ಬೆಂಗಳೂರು

6. ಸಂಸ್ಕೃತಿ ಬುಕ್ ಸೆಲ್ಲರ್ಸ್
35. 5ನೇ ಮೈನ್ ರೋಡ್ ಚಾಮರಾಜಪೇಟೆ,
ಬೆಂಗಳೂರು-560 018

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳು

1. ಪೂರ್ವ ಪ್ರಯೋಗ	—	ರೂ.	25-00	(ಅಂಚೆವೆಚ್ಚ ಬೇರೆ)
2. ಅಪರ ಪ್ರಯೋಗ	—	ರೂ.	15-00	"
3. ವೈಷ್ಣವ ದಿನಚರಿ	—	ರೂ.	15-00	"
4. ಶ್ರಾದ್ಧ ಪ್ರಯೋಗ	—	ರೂ.	12-50	"

1000 Copies 1000 ಪ್ರತಿಗಳು

ಮುದ್ರಕರು :
ಅವಿನಾಶ್ ಪ್ರಿಂಟರ್ಸ್
71/2, ಕಾಮಾಕ್ಷಿ ಲೇ ಔಟ್ ಬೆಂಗಳೂರು - 560 079
ಫೋನ್ : 352225